ARS 34 APP 82

NAVAYUGA KANNADA WEEKLY

FIRST VOLUME FROM 3-9-1936

ARS 34 APP 82

NAVAYUGA
KANNADA WEEKLY

FIRST VOLUME FROM
3-9-1936

ARS 34 APP 82

NAVAYUGA KANNADA WEEKLY

FIRST VOLUME FROM 3-9-1936

ನವಯುಗ

ಸಂಪುಟ ೩೯

೧೯೫೬-೫೭

ನವಯುಗ

ಸಂಪುಟ ೩೬

೧೯೪೬-೪೭

ವಾರ್ಷಿಕ ಚಂದಾ
ಸ್ಥಳೀಯ
ರೂ ೨—೮—೦

ಪರಸ್ಥಳೀಯ
ರೂ. ೩—೪—೦.

ನವಯುಗ

ವಿ. ಪಿ. ಮೂಲಕ
ರೂ. ೩—೯—೦.

ಮಾದರಿ ಸಂಚಿಕೆಗೆ
ಬರೆಯಿರಿ.

ವಾರಪತ್ರಿಕೆ

ಮೂಡಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ಸಂಪಾದಕ:
ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ,

ಸಂಪುಟ ೧೬ | ೧೯೩೬ನೇ ಇಸವಿ ಸಪ್ಟಂಬರ ತಾ. ೩ ಗುರುವಾರ | ಸಂಚಿಕೆ ೧

STATETEMENT OF AFFAIRS OF
THE CANARA INDUSTRIAL & BANKING SYNDICATE LIMITED.
AS ON 31st JULY 1936.

LIABILITIES.					ASSETS.				
Share Capital	Rs. 2,17,500	0	0		LOANS ON:				
Reserve Fund	.. 52,500	0	0		Valuable Securities	Rs 6,55,764	1	0	
Deposits	,, 17,40,460	6	8		Land Mortgages	2,10,201	6	9	
Bills for Collection	,, 1,67,900	1	6		Bills of Exchange, Pro-notes and Hundies	.. 6,50,971	0	10	
Due to Bankers	28,304	1	10		INVESTSMENTS ON:				
Sundries	.. 1,82,733	8	9		Companies Shares	.. 57,802	0	0	
					Landed Properties.	.. 18,929	3	7	
					Govt. Securities	.. 2,89,856	11	0	
					Bils for Collection (as per contra)	,, 1,67,900	1	6	
					Sundries	.. 1,92,189	0	0	
					Cash in hand and at Bankers	,, 1,45,724	5	1	
Total Rs.	**23,89,398**	**2**	**9**		**Total Rs.**	**23,89,398**	**2**	**9**	

All kinds of Comercial Banking Service Rendered on Reasnoable Terms.

IT WILL PAY YOU TO CONSULT US BEFORE YOU GO, ELSEWHERE

Any further information will be Supplied on application to

Head Office

Or

Branches at

UDIPI, MANGALORE, COONDAPOOR, CANNANORE, HUBLI, HONAVAR BRAHMAVAR, KUMTA, HUNGARCUTTA, SIRSI, ANKOLA, BELGAUM PAYYANUR, KANANGHAD, BHATKAL, KARWAR, BANGALORE CITY ADONI, HOSPET, BELLARY, GADAG & KARKALA.

THE BOMBAY LIFE ASSURANCE Co., LTD.
ESTD. 1908
Church Gate Street Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,
Madras Branch Secretaries.

BRANCHES AT:		
P. B. 337 Mount Road, Madras.	Visveswarapuram Circle, Bangalore City	Soumyalayam Puthiyara, Calicut.
Car Street, Mangalore	Udipi, S India.	Charni Road, Bombay No. 4

—EVIDENCE— OF SECURITY & STABILITY
FIGURES THAT SPEAK FOR THEMSELVES

TOTAL ASSETS **Rs. 80,66,600**

SUMMARY OF 1935 ACCOUNTS	
Total Assets Over	Rs. 80,00,000
Life Funds Over	Rs 68,00,000
Premium Income Over ..	Rs. 22,54,000
Interest Income	Rs. 3,16,000
Claims Paid	Rs. 5,75,000
Total Claims paid over	Rs. 38,50,000
Total Business in Force Over	Rs. 4,42,51,200

TOTAL BUSINESS IN FORCE **Rs. 4,42,51,200**

Registered No. 1564



ವಾರ್ಷಿಕ ಚಂದಾ
ಸ್ಥಳೀಯ
ರೂ ೨—೮—೦

ಪರಸ್ಥಳೀಯ
ರೂ. ೩—೪—೦.

ವಿ. ಪಿ. ಮೂಲಕ
ರೂ. ೩—೯—೦.

ಮಾದರಿ ಸಂಚಿಕೆಗೆ
ಬರೆಯಿರಿ.

ವಾರಪತ್ರಿಕೆ

ಮೂಡಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ಸಂಪಾದಕ:
ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬ | ೧೯೩೬ನೇ ಇಸವಿ ಸಪ್ಟಂಬರ ತಾ. ೩ ಗುರುವಾರ | ಸಂಚಿಕೆ ೧

STATETEMENT OF AFFAIRS OF
THE CANARA INDUSTRIAL & BANKING SYNDICATE LIMITED.
AS ON 31st JULY 1936.

LIABILITIES.				
Share Capital	Rs.	2,17,500	0	0
Reserve Fund	„	52,500	0	0
Deposits	„	17 40.460	6	8
Bills for Collection	„	1,67,900	1	6
Due to Bankers	„	28,304	1	10
Sundries	„	1,82,733	8	9
Total Rs.		23,89,398	2	9

ASSETS.				
LOANS ON:				
Valuable Securities	Rs	6,55,764	1	0
Land Mortgage		2,[illegible]	[illegible]	9
Bills of Exchange, Pro notes and Hundies	..	6,50,971	0	10
INVESTSMENTS ON:				
Companies Shares	„	57,802	0	0
Landed Properties.	„	18,929	3	7
Govt. Securities	„	2,89,856	14	0
Bills for Collection (as per contra)	.,	1,67,900	1	6
Sundries	.,	1,92,189	0	0
Cash in hand and at Bankers	„	1,45,724	5	1
Total Rs.		23,89,398	2	9

All kinds of Comercial Banking Service Rendered on Reasnoable Terms.

IT WILL PAY YOU TO CONSULT US BEFORE YOU GO, ELSEWHERE

Any further information will be Supplied on application to

Head Office

Or

Branches at

UDIPI. MANGALORE. COONDAPOOR. CANNANORE. HUBLI. HONAVAR BRAHMAVAR. KUMTA. HUNGARCUTTA. SIRSI. ANKOLA. BELGAUM. PAYYANUR, KANANGHAD. BHATKAL. KARWAR. BANGALORE CITY ADONI. HOSPET. BELLARY, GADAG & KARKALA

THE BOMBAY LIFE ASSURANCE Co., LTD.
ESTD 1908
Church Gate Street Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,
Madras Branch Secretaries.

BRANCHES AT:		
P B. 337 Mount Road, Madras	Visveswarapuram Circle, Bangalore City	Soumyalayam Puthiyara, Calicut
Car Street, Mangalore.	Udipi, S India	Charni Road, Bombay No 4

—EVIDENCE— OF SECURITY & STABILITY
FIGURES THAT SPEAK FOR THEMSELVES

TOTAL ASSETS Rs. 80,66,600

SUMMARY OF 1935 ACCOUNTS

Total Assets Over	Rs. 80 00.000
Life Funds Over	Rs. 68.00.000
Premium Income Over .	Rs 22,54,000
Interest Income . . .	Rs 3,16,000
Claims Paid	Rs 5,75,000
Total Claims paid over	Rs. 58,50,000
Total Business in Force Over	Rs. 4,42,51,200

TOTAL BUSINESS IN FORCE Rs. 4,42,51,200



ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೇಳು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೆರೆ ಕೊಡಲಿಕ್ಕೂ, ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ಸಾಹುಕಾರಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರಪಟ್ಟಿಗಾಗಿ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರವ್ಯಾಪಾರಿ, ರಥಬೀದಿ ಉಡುಪಿ

The MAN behind the RUPEE

Is a power to be reckoned within every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK
LIMITED.

THE **BEST** YOU CAN GET For YOUR MONEY IS A

LIFE POLICY
OF
EAST & WEST
INSURANCE CO., LTD., (Estd. 1913)
EAST & WEST BUILDING
Apollo Street, Fort BOMBAY.

2½% Result of valuation premiums paid out	UNIQUE PRIVILEGES to POLICYHOLDERS Last Valuation BONUS Rs. 15	PER THOUSAND per annum both Whole life and Endowment Policies

For prospectus, etc Apply to

PADUBIDRI BROS.
Chief Agents
KARNATAKA MAHARASHTRA

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ	ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)	ಹಣ ಮರಳ

ಈ ಚೂರ್ಣವು ಕಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತಕಾಲದಿಂದ ಮುಟ್ಟಾಗುವಿಕೆ, ಕ್ಷೇತ್ರ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯ ದಲ್ಲಿರುವದೋಷ ಗರ್ಭವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್‌ಸ್ಪೆಕ್ಟರ ಬೆಳಗಾಂವ — ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೧ ಟಿ. ಪಿ. ಖರ್ಚ, ೮

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

ಬಹಳಸಾರಿ ಹಡಿಯುವದರಿಂದ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಕೇಳಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಮು. ಕೊಳವಾ ಮೊಹಿಮಾ ಪ ರಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿಗೆ ೪ರೂ ವಿ. ಪಿ. ಖರ್ಚ ಆಣೆ ೮,

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ನವಯುಗದ ನವಜೀವನ

ಪ್ರಥಮ ಸಂಚಿಕೆಯ ಉದ್ಘಾಟನ ಸಮಾರಂಭ

ಪಂಡಿತ ಜವಾಹಿರಲಾಲರ ಸಂದೇಶ

Aranda Bhavan,
Allahabad

All Good wishes to the 'NAVAYUGA' in its new career.

JAWAHARLAL NEHRU

August 21,1936



ಆನಂದ ಭವನ,
ಅಲಹಾಬಾದು

ನವಯುಗದ ನವಜೀವನವು ಎಲ್ಲಾ ಪರಿಸ್ಥಿತಿಯಲ್ಲಿಯೂ ಜಯಪ್ರದವಾಗಲಿ.

ಜವಾಹಿರಲಾಲ ನೆಹರು.

ಆಗೋಸ್ಟು **21,1936**

ದೇಶದ ಇಂದಿನ ಪರಿಸ್ಥಿತಿಯಲ್ಲಿ ತೇಜಸ್ವೀಪತ್ರಿಕೋದ್ಯಮದ ಆವಶ್ಯಕತೆ ಬಹಳವಿದೆ. ನವಯುಗದ ಈ ಹೊಸ ಸಾಹಸವು ದೀರ್ಘಕಾಲದಿಂದ ಹಾರೈಸಲ್ಪಟ್ಟಿರುವ ಈ ಅಭಾವವನ್ನು ಪೂರೈಸುವುದೆಂದು ಆಶಿಸುತ್ತೇನೆ,

ನಿಮಗೆ ಸರ್ವಮಂಗಳವಾಗಲಿ

ಕೆ. ಎಫ್. ನರಿಮನ್
ಕಾಂಗ್ರೆಸ್ ಹೌಸ್, ಬೊಂಬಾಯಿ

ಕರ್ನಾಟಕ ಪತ್ರಿಕಾ ಪ್ರಪಂಚದಲ್ಲಿ ನಮುತವಾದಿ ಸಾಪ್ತಾಹಿಕವೊಂದು [illegible] ಜನ್ಮತಾಳುವುದೆಂಬುದನ್ನು ಕೇಳಿ ತುಂಬಾ ಸಂತೋಷಪಡುತ್ತೇನೆ. ಈ ಹೊಸ ಸಾಹಸವು ಯಾವತ್ತೂ [illegible] ವಿಜಯ ಹೊಂದಲೆಂದು ಹಾರೈಸುತ್ತೇನೆ.

ಎಸ್. ಎ. ಬ್ರೇಲ್ವಿ,
ಸಂಪಾದಕ, ಬೊಂಬಾಯಿ ಕ್ರೊನಿಕಲ್

ಕನ್ನಡದಲ್ಲಿ ಹೊಸ [illegible] ಪತ್ರಿಕೆಯೊಂದು ನವಜೀವನತಾಳುವುದೆಂದು ತಿಳಿಯಲು ನಾನು ಆನಂದಗೊಳ್ಳುತ್ತೇನೆ. ದೀನ ದಲಿತ ಜನರ ಹೋರಾಟವನ್ನು ಬಲಗೊಳಿಸುವುದರಲ್ಲಿ ಈ ಪತ್ರಿಕೆಯು ಸಹಾಯವಾಗುವುದೆಂದು ನನ್ನ ಆಶೆ. ಈ ಸಾಪ್ತಾಹಿಕವು ಸಫಲವಾಗಲೆಂದು ಹಾರೈಸುತ್ತೇನೆ

ಮಣಿಬೆನ್ ಕಾರಾ,
ಜನರಲ್ ಸೆಕ್ರೆಟರಿ,
ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್

ನವಯುಗದ ಪುನರುಜ್ಜೀವನದ ಸಂದರ್ಭದಲ್ಲಿ ಅದಕ್ಕೆ ನಾನು ಅತ್ಯಾನಂದದಿಂದ ಸುಸ್ವಾಗತವನ್ನು ಬಯಸುತ್ತೇನೆ. ತೀವ್ರಗಾಮಿ ಮನೋವೃತ್ತಿಯನ್ನು ಪ್ರೋತ್ಸಾಹಿಸುವ ಹಾಗೂ ಪರಿಪೋಷಿಸುವ ಉತ್ತಮ ಸಾಧನವೆಂದರೆ ಪತ್ರಿಕೆಗಳು. ಆದುದರಿಂದ ಲೋಕದ ಪ್ರಗತಿಯ ರಚನೆಯಲ್ಲಿ ಪತ್ರಿಕೆಯು ಅಮೂಲ್ಯವಿದೆ. ಭಾರತಕ್ಕೆ ಈಗ ನವಯುಗವು ಆಕಾಂಕ್ಷಿಸುವಂತಹ ತೀವ್ರಗಾಮಿ ಪತ್ರಿಕೆಯ ಆವಶ್ಯಕತೆಯು ಬಹಳವಾಗಿದೆ. ಈ ಪ್ರಯುಕ್ತ [illegible] ಈ ಸಾಹಸವನ್ನು [illegible] ಸ್ವಾಗತೀಕರಿಸಿದಿರಾ

ನವಯುಗಕ್ಕೆ [illegible] ಜಯವಾಗಲಿ

ಕಮಲಾದೇವಿ,
21-8-36 [illegible]

ಇಂದಿನ [illegible] ಪ್ರಾಮುಖ್ಯ ಮತವಾಗಿ [illegible] ನಮ್ಮ [illegible] ಗೆ ಇದಿರಿಸುತ್ತಿರುವ [illegible] ವಿಲಕ್ಷಣವಾಗಿ ಬೆಳೆಯುತ್ತಿರುವ ನಿರುದ್ಯೋಗ ಮತ್ತು ಜೀವನಪ್ರಶ್ನೆ [illegible] ಹಾಗೂ ವಿವಿಧ [illegible] ಪ್ರತಿಕೂಲವಾಗಿಯೂ [illegible] ಅವರ ಸಮುದಾಯವು ನನಗೆ [illegible] ಅನುಸರಿಸತಕ್ಕ ಒಂದು ಮಾರ್ಗವಾಗಿ [illegible] ಪ್ರಗತಿಯ [illegible] ಮುಂದಿನ ತರದಿಯ [illegible] ಗಿದೆ. ಹಿಂದೂದೇಶದಲ್ಲ [illegible] ಪ್ರಾಮುಖ್ಯತೆಯುಳ್ಳ [illegible] ದಾರಿದ್ರ್ಯ ಮತ್ತು [illegible] ದೇಶದಲ್ಲಿರುವವನ್ನು [illegible] ಪ್ರಜಾ [illegible] ಪ್ರಯತ್ನಿಸ [illegible] ಮತ್ತು [illegible] ಅವರ [illegible] ಸ್ವಾತಂತ್ರ್ಯ [illegible] ಪತ್ರಿಕಾ ವ್ಯವಸಾಯ ಪ್ರಪಂಚಕ್ಕೆ [illegible] ವಾದಿ ಪತ್ರಿಕೆಯೊಂದು [illegible] ರುವಂತಾಗುವುದು [illegible] ನವಯುಗವು [illegible] ಗಿದೆ. ಮತ್ತು ನವಯುಗ [illegible] ವಲ್ಲಿ ಹುಟ್ಟುವ ಈ [illegible] ನಾನು ಉತ್ಸಾಹದಿಂದ [illegible] ತ್ತೇನೆ [illegible] ಯಿಂದ [illegible] ನವಯುಗವನ್ನು [illegible]

ಯೂಸುಫ್ [illegible]

ನನ್ನ ಪ್ರಿಯ ಮಿತ್ರರೆ,

[illegible] ಮಂಗಳೂರಿನಿಂದ ನವಯುಗವನ್ನು ಕ್ರಮವಾಗಿ ಓದುವವನಾಗಿದ್ದೇನೆ. [illegible] ವಿದ್ಯಾರ್ಥಿ [illegible] ಪತ್ರಿಕೆಯನ್ನು [illegible] ಪಡೆದಿ [illegible] ಹಿಂದಿನ [illegible] ಸ್ವತಂತ್ರ [illegible] ರಾಗಿ [illegible] ಪತ್ರಿಕಾ [illegible] ನಮ್ಮ [illegible] ನವಯುಗದ [illegible] ನವಯುಗವು [illegible] ಮುಂದೆ [illegible] ನವಯುಗವು [illegible] ಸಂಪಾದಕ [illegible]

[illegible] ನವಯುಗವು [illegible]

[illegible]
[illegible]
ಸಂಪಾದಕ [illegible]

ಒಂದು ಪತ್ರಿಕೆ [illegible] ಗುರು [illegible] ಜನರ [illegible] ವಿಚಾರ [illegible] ಪತ್ರಿಕೆ [illegible] ಇಂದು [illegible] ಅವರ [illegible] ಶಕ್ತಿ [illegible] ರಕ್ಷಿಸುವ [illegible] ಪತ್ರಿಕೆ [illegible] ನವಯುಗವು [illegible] ಮುಂದೆ [illegible] ನನ್ನ [illegible] ಪ್ರಾರ್ಥನೆಯು [illegible]

ಎಸ್. ಎಸ್. ಹರ್ಡಿಕರ್

[illegible] ನಡೆಸು [illegible]

ಎಂ. ಎಸ್. ಕಾಮತ್,
[illegible]



ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೇಳು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೆರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರವ್ಯಾಪಾರಿ, ರಥಬೀದಿ ಉಡುಪಿ.

The MAN behind the RUPEE

Is a power to be reckoned within every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK
LIMITED.

THE BEST YOU CAN GET For YOUR MONEY IS A

LIFE POLICY
OF

EAST & WEST
INSURANCE CO., LTD, (Estd. 1913)

EAST & WEST BUILDING,
Apollo Street, Fort BOMBAY.

2½% Rebate allowed on premiums paid yearly	UNIQUE PRIVILEGES to POLICYHOLDERS, Last Valuation BONUS Rs. 15	PER THOUSAND per annum both Whole life and Endowment Policies,

For prospectus, etc. Apply to

PADUBIDRI BROS.
Chief Agents.
KARNATAK & MAHARASHTRA.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶೆರಗಿಗೆ ಶತ್ರುವಾಗಿರುವುದು. ಅನಿಯಮಿತಪಣದಿಂದ ಮುಟ್ಟಾಗುವಿಕೆ, ಕ್ಲೇಶ ವ್ಯೆಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯ ದಲ್ಲಿರುವದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್ ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷ ವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು, ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶೆರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ. ಖ. ಆಣೆ, ೮.

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತರಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟಪ್ಪಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು॥ ಕೇಳವಾ ಮಾಹಿಮಾ ಜಿ. ರಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭದಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿಗೆ ರೂ. ೩ ವಿ. ಪಿ. ಖರ್ಚ ಆಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ನವಯುಗದ ನವಜೀವನ

ಪ್ರಥಮ ಸಂಚಿಕೆಯ ಉದ್ಘಾಟನ ಸಮಾರಂಭ

ಪಂಡಿತ ಜವಾಹಿರಲಾಲರ ಸಂದೇಶ

Ananda Bhavan,
Allahabad.

All Good wishes to the 'NAVAYUGA' in its new career.

JAWAHARLAL NEHRU

August 21,1936

ಆನಂದ ಭವನ,
ಅಲಹಾಬಾದು.

ನವಯುಗದ ನವಜೀವನವು ಎಲ್ಲಾ ಪರಿಸ್ಥಿತಿಯಲ್ಲಿಯೂ ಜಯಪ್ರದವಾಗಲಿ.

ಜವಾಹಿರಲಾಲ ನೆಹರು.

ಆಗೋಸ್ಟ **21,1936**

ದೇಶದ ಇಂದಿನ ಪರಿಸ್ಥಿತಿಯಲ್ಲಿ ತೇಜಸ್ವೀಪತ್ರಿಕೋದ್ಯಮದ ಆವಶ್ಯಕತೆ ಬಹಳವಿದೆ. ನವಯುಗದ ಈ ಹೊಸ ಸಾಹಸವು, ದೀರ್ಘಕಾಲದಿಂದ ಹಾರೈಸಲ್ಪಟ್ಟಿರುವ ಈ ಅಭಾವವನ್ನು ಪೂರೈಸುವುದೆಂದು ಆಶಿಸುತ್ತೇನೆ,

ನಿಮಗೆ ಸರ್ವಮಂಗಲವಾಗಲಿ.

ಕೆ. ಎಫ್. ನರಿಮನ್
ಕಾಂಗ್ರೆಸ್ ಹೌಸ್, ಬೊಂಬಾಯಿ

ಕರ್ನಾಟಕ ಪತ್ರಿಕಾ ಪ್ರಪಂಚದಲ್ಲಿ ಸಮತಾವಾದಿ ಸಾಪ್ತಾಹಿಕವೊಂದು ನವಜನ್ಮತಾಳುವುದೆಂಬುದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇನೆ ಈ ಹೊಸ ಸಾಹಸವು ಯಾವತ್ತೂ ರೀತಿಗಳಲ್ಲಿ ವಿಜಯ ಹೊಂದಲೆಂದು ಹರಸುತ್ತೇನೆ.

ಎಸ್. ಎ. ಬ್ರೆಲ್ವಿ,
ಸಂಪಾದಕ, ಬೊಂಬಾಯಿ ಕ್ರೊನಿಕಲ್.

ಕನ್ನಡದಲ್ಲಿ ಹೊಸ ತೀವ್ರಗಾಮಿ ಪತ್ರಿಕೆಯೊಂದು ನವಜೀವನತಾಳುವುದೆಂದು ತಿಳಿಯಲು ನಾನು ಆನಂದಗೊಳ್ಳುತ್ತೇನೆ. ದೀನ ದಲಿತ ಜನರ ಹೋರಾಟವನ್ನು ಬಲಗೊಳಿಸುವುದರಲ್ಲಿ ಈ ಪತ್ರಿಕೆಯು ಸಹಾಯವಾಗುವುದೆಂದು ನನ್ನ ಆಶೆ ಈ ಸಾಪ್ತಾಹಿಕವು ಸಫಲಹೊಂದಲೆಂದು ಹಾರೈಸುತ್ತೇನೆ.

ಮಣಿಬೆನ್ ಕಾರಾ,
ಜನರಲ್ ಸೆಕ್ರೆಟರಿ,
ಆಲ್ ಇಂಡಿಯಾ ಟ್ರೇಡ್ ಯೂನಿಯನ್
ಕಾಂಗ್ರೆಸ್.

ನವಯುಗದ ಪುನರುಜ್ಜೀವನದ ಸಂದರ್ಭದಲ್ಲಿ ಅದಕ್ಕೆ ನಾನು ಅತ್ಯಾನಂದದಿಂದ ಸುಸ್ವಾಗತವನ್ನು ಬಯಸುತ್ತೇನೆ. ತೀವ್ರಗಾಮಿ ಮನೋವೃತ್ತಿಯನ್ನು ಪ್ರೋತ್ಸಾಹಿಸುವ ಹಾಗೂ ಪರಿಪೋಷಿಸುವ ಉತ್ತಮ ಸಾಧನವೆಂದರೆ ಪತ್ರಿಕೆಗಳು. ಆದುದರಿಂದ ಲೋಕದ ಪ್ರಗತಿಯ ರಚನೆಯಲ್ಲಿ ಪತ್ರಿಕೆಯು ಅಮೂಲ್ಯವಿದೆ. ಭಾರತಕ್ಕೆ ಈಗ ನವಯುಗವು ಆಕಾಂಕ್ಷಿಸುವಂತಹ ತೀವ್ರಗಾಮಿ ಪತ್ರಿಕೆಯ ಆವಶ್ಯಕತೆಯು ಬಹಳವಾಗಿದೆ. ಈ ಪ್ರಯುಕ್ತ ಪ್ರಗತಿಗಾಮಿಗಳೆಲ್ಲರೂ ಈ ಸಾಹಸವನ್ನು ಅತ್ಯಾನಂದದಿಂದ ಸ್ವಾಗತೀಕರಿಸದಿರರು.

ನವಯುಗಕ್ಕೆ ಸರ್ವವಿಧದಲ್ಲಿಯೂ ಜಯವಾಗಲಿ.

ಕಮಲಾದೇವಿ,
21-8-36 ಬೊಂಬಾಯಿ.

ಇಂದಿನ ಸಮತಾವಾದವು ಲೋಕದ ಪ್ರಾಮುಖ್ಯ ಮತವಾಗಿ ನಿಂತಿದೆ. ನಮ್ಮನ್ನೀಗ ಇದಿರಿಸುತ್ತಿರುವ ದಾರಿದ್ರ್ಯದ ಸಮಸ್ಯೆ ವಿಲಕ್ಷಣವಾಗಿ ಬೆಳೆಯುತ್ತಿರುವ ನಿರುದ್ಯೋಗ ಮತ್ತು ಜೀವನಕ್ರಮದ ಅಸಮಾನತೆಯೇ ಮೊದಲಾದ ಬಹು ಕ್ಲಿಷ್ಟವಾದ ಹಾಗೂ ವಿವಿಧ ಪ್ರಶ್ನೆಗಳನ್ನು ಸಮತಾವಾದದಿಂದ ಮಾತ್ರವೇ ಸಂಪೂರ್ಣವಾಗಿಯೂ ತೃಪ್ತಿಕರವಾಗಿಯೂ ಬಿಡಿಸಲು ಸಾಧ್ಯವಿದೆ. ಆದರೆ ಸಮತಾವಾದವು ನನಗೆ ಬರಿಯ ವೇದಾಂತವೇ ಆಗಿರದೆ ಜೀವನದಲ್ಲಿ ಅನುಸರಿಸತಕ್ಕ ಒಂದು ಮಾರ್ಗವಾಗಿದೆ. ಅದೊಂದು ಸಂಕುಚಿತ ಮತವಾಗಿರದೆ ಪ್ರಗತಿಯ ಅಪಾರ ದಿಗಂತವನ್ನೇ ನಮ್ಮ ಮುಂದೆ ತೆರೆದಿಡುವ ಜ್ಞಾನದ ಗನಿಯಾಗಿದೆ. ಹಿಂದೂದೇಶದಲ್ಲಿ ಸಮತಾವಾದವು ಪ್ರಾಮುಖ್ಯತೆಯುಳ್ಳದ್ದಾಗಿದೆ. ಏಕೆಂದರೆ ದಾರಿದ್ರ್ಯ ಮತ್ತು ದುಃಖವು ಹಿಂದು ದೇಶದಲ್ಲಿರುವಷ್ಟು ಮತ್ತೆಲ್ಲಿದೆ? ನಾವೆಲ್ಲರೂ ಅವಿರತವಾಗಿ ಎಲ್ಲವರೂ ಒಮ್ಮನಾಗಿ ಪ್ರೀತಿಸುವ ಹಿಂದೀರಾಷ್ಟ್ರೀಯ ಸಭೆಯನ್ನು ಪ್ರಭಾವಭರಿತ ಸಂಸ್ಥೆಯನ್ನಾಗಿ ಮಾಡಲು ಪ್ರಯತ್ನಿಸುವ! ಅದು ನಮ್ಮ ದೇಶದ ಬೇಸಾಯಗಾರರ ಮತ್ತು ಮಜೂರರನ್ನು ಅವರ ಕಡೆಗೆ ಆಕರ್ಷಿಸಿ ನಮ್ಮ ಸ್ವಾತಂತ್ರ್ಯ ಸಮರದಲ್ಲಿ ವಿಜಯಶಾಲಿಗಳಾಗುವ ಹಿಂದೀ ಪತ್ರಿಕಾ ವ್ಯವಸಾಯ ಪ್ರಪಂಚಕ್ಕೆ ಸಮತಾವಾದಿ ಪತ್ರಿಕೆಯೊಂದು ಹೊಸತಾಗಿ ಸೇರುವಂತಾಗುವುದು ಮಹತ್ವದ ಸಂಗತಿಯಾಗಿದೆ. ಮತ್ತು ನವಯುಗವು ಹೊಸ ರೂಪದಲ್ಲಿ ಹುಟ್ಟುವ ಈ ಸಮಾರಂಭವನ್ನು ನಾನು ಅತ್ಯುತ್ಸಾಹದಿಂದ ಸ್ವಾಗತೀಕರಿಸುತ್ತೇನೆ. ಒಂದು ವಿಚಾರ, ಕ್ರಾಂತಿಕಾರಕ ಲೇಖನಗಳಿಂದ ಕರ್ನಾಟಕ ಪತ್ರಿಕೋದ್ಯಮದಲ್ಲಿ ನವಸ್ಫೂರ್ತಿಯ ಉಪಕರಣವಾಗುವುದೆಂದು ಆಶಿಸುತ್ತೇನೆ.

ಯೂಸೂಫ್ ಮೆಹರಾಲಿ,
ಬೊಂಬಾಯಿ.

ನನ್ನ ಪ್ರಿಯ ಮಿತ್ರರೆ,

ನಾನು ಮಂಗಳೂರಿಗೆ ಬಂದು ನೆಲಸಿದಂದಿನಿಂದ ನವಯುಗವನ್ನು ಕ್ರಮವಾಗಿ ಓದುವವನಾಗಿರುವೆನು. ವಿಶೇಷವಾಗಿ ನನ್ನ ವಿದ್ಯಾಭಿವರ್ಧಿನಿ ಪತ್ರಿಕೆಯನ್ನು ಸ್ಥಾಪಿಸಿದಂದಿನಿಂದ ನಿಮ್ಮೊಂದಿಗೆ ಒಬ್ಬೊಂದು ಬಗೆಯ ಬಂಧುಭಾವವುಳ್ಳವನಾಗಿ, ನಿಮ್ಮನ್ನು ನನ್ನ ಅಮೂಲ್ಯ ಸ್ನೇಹಿತರಲ್ಲೊಬ್ಬರಾಗಿ ಪರಿಗಣಿಸಿರುವೆನು. ಪತ್ರಿಕಾ ಸಂಚಾಲಕತ್ವದಲ್ಲಿ ನಿಮ್ಮ ಸೂಚನೆಗಳು ನನಗೆ ಬಹಳ ಸಹಾಯಕವಾಗಿರುವವು. ನಮ್ಮ ರಾಷ್ಟ್ರದ ಜೀವನದಲ್ಲಿ ಸಾವಿದಿರಿಸುವ ಕೆಲವು ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಬಿಡಿಸುವದರಲ್ಲಿ ನನ್ನ ಮತ್ತು ನಿಮ್ಮ ಭಾವನಾ ವಿಧಾನಗಳೊಳಗೆ ಹೆಚ್ಚಿನ ಹೊಂದಿಕೆಯಿರುವುದೆಂದು ನನ್ನ ಮನವರಿಕೆ. ಆದುದರಿಂದ **ನವಯುಗವು** ಇನ್ನು ಮುಂದೆ ಉಡುಪಿಯಲ್ಲಿ ಪ್ರಕಟವಾಗಲಿರುವುದೆಂಬುದು ವ್ಯಕ್ತಿಪರವಾಗಿ ಮಾತಾಡುವುದಾದರೆ ನನಗೆ ದೊಡ್ಡ ನಷ್ಟವೆಂದು ಭಾವಿಸುತ್ತೇನೆ. ಯಾಕೆಂದರೆ ನನಗೆ ಇನ್ನು ಮುಂದೆ ನಿಮ್ಮಂಥವರೊಡನೆ ಹಿಂದಿನಂತಹ ಸಂಪರ್ಕವಿರುವುದರ ಸಾಧ್ಯವಿಲ್ಲ. ನವಯುಗವು ತನ್ನ ಹೊಸ ಕ್ಷೇತ್ರದಲ್ಲಿ ಮೊದಲಿಗಿಂತಲೂ ಉಜ್ವಲ ಭವಿಷ್ಯವುಳ್ಳದಾಗಿ ತನ್ನ ಉಪಯುಕ್ತತೆಯನ್ನು ಇನ್ನೂ ವ್ಯಾಪಿಸುವಂತಾಗಲೆಂದೇ ನನ್ನ ಆಶೆ. ವಿಶೇಷವಾಗಿ ಉಡುಪಿಯು ಶ್ರೀಗಳ ಮುನಿಸಿಪಾಲಿಟಿಯಾಗಿರುವದರಿಂದ ಪಟ್ಟಣಿಗರು ತಮ್ಮ ನಾಗರೀಕ ಮತ್ತು ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವಂತೆ ಅವರಲ್ಲಿ ಜಾಗೃತಿಯನ್ನುಂಟುಮಾಡಲು ನಿಮಗೆ ಹೆಚ್ಚಿನ ಸಂದರ್ಭಗಳಿವೆ. ನಿಮ್ಮ ಸಮರ್ಥ ಸಂಪಾದಕತ್ವದಲ್ಲಿ ನವಯುಗವನ್ನು ಜನಜಾಗೃತಿಯ ಪರಸ್ಪರ ಉಪಕರಣವಾಗಿ ಮಾಡುವ ನಿಮ್ಮ ಪ್ರಯತ್ನವು ಸರ್ವತೋಮುಖವಾದ ಜಯಹೊಂದಲೆಂದು ಹರಸುತ್ತೇನೆ. ನಿಮಗೆ ಸದಾ ಸೇವಾ ಸಫಲವಿರಲಿ.

ನಿಮ್ಮ ಗೃಹ ಸ್ನೇಹಾಭಿಲಾಷಿ,
ಬಿ. ಸುಬ್ಬು ಕೃಷ್ಣಯ್ಯ,
ಸಂಪಾದಕ, ವಿದ್ಯಾಭಿವರ್ಧಿನಿ.

ಒಂದು ಪತ್ರಿಕೆಯಲ್ಲಿ ಪ್ರಕಟವಾಗುವ ಪ್ರತಿಯೊಂದು ಶಬ್ದವು, ಅದರ ವಾಚಕರ ಮನಸ್ಸಿನಲ್ಲಿ ಯಾವುದಾದರೊಂದು ವಿಚಾರವನ್ನೆಬ್ಬಿಸುವುದಾಗಬೇಕು. ಆ ವಿಚಾರವಾದರೋ, ರಾಷ್ಟ್ರವನ್ನು ಸಹಜ ಮತ್ತು ಮಾನವಂತ ರೀತಿಯಲ್ಲಿ ರಚಿಸಲು ಸಹಾಯಕವಾಗಬೇಕು. ಹಿಂದುದೇಶವು ಯಾವುದನ್ನು ಆಕಾಂಕ್ಷಿಸುವುದೋ ಅದನ್ನದು ಸಾಧಿಸುವಲ್ಲಿ ನೆರವಾಗಿ, ಅವರ ಗೌರವ ಮತ್ತು ಪ್ರತಿಷ್ಠೆಯನ್ನು ರಕ್ಷಿಸುವುದು ನಮ್ಮ ದೇಶದ ಪ್ರತಿಯೊಂದು ಪತ್ರಿಕೆಯ ಗುರಿಯಾಗಿರಬೇಕು. ನವಯುಗವು ಇದನ್ನು ಮರೆಯದೆ, ಅದು ಕಳೆದ ಹಲವು ವರ್ಷಗಳಿಂದ ನಡಿಸುತ್ತಿದ್ದ ಒಳ್ಳೇ ಕೆಲಸವನ್ನು ಮುಂದುವರಿಸುವುದೆಂದು ನನ್ನ ಆಶೆಯೂ ಪ್ರಾರ್ಥನೆಯೂ ಆಗಿದೆ.

ಎನ್. ಎಸ್. ಹರ್ಡೀಕರ್,
ಹುಬ್ಬಳ್ಳಿ.

ಜನತೆಗೆ ಹಿತಕರವಾಗುವ ವಿಷಯಗಳನ್ನು ನಿಷ್ಪಕ್ಷವಾಗಿ ಚರ್ಚಿಸುತ್ತಾ ಆಧುನಿಕ ಉತ್ತಮ ಜೀವನ ಕ್ರಮಗಳನ್ನೂ ವಿದ್ಯಮಾನಗಳನ್ನೂ ಗ್ರಾಮಾಂತರಗಳಲ್ಲಿರುವ ನಿರಕ್ಷರರಿಗಾದರೂ ತಿಳಿಯುವಂತೆ ಸುಲಭವಾದ ರೀತಿಯಲ್ಲಿ ಪ್ರಚಾರಗೊಳಿಸುವುದಕ್ಕೆ 'ನವಯುಗ'ವು ತನ್ನ ಹದಿನೈದು ವರ್ಷಗಳ ಅನುಭವವನ್ನು ವಿನಿಯೋಗಿಸಿ ಗ್ರಾಮಾಭ್ಯುದಯವನ್ನೂ ಜನಾಭ್ಯುದಯವನ್ನೂ ಮಾಡುತ್ತಿರಲೆಂದು ಆಶಿಸುತ್ತೇವೆ.

ಎಂ. ಎನ್. ಕಾಮತ್,
ಮಂಗಳೂರು.

ಸ್ವಾಮಿಾ;

ನವಯುಗದ ಹೊಸ ಆಫೀಸನ್ನು ಉಡುಪಿಯಲ್ಲಿ ತೆರೆಯುವ ಸಮಾರಂಭದ ನಿಮ್ಮ ಕೃಪಾಪೂರ್ಣವಾದ ಆಮಂತ್ರಣಕ್ಕೆ ನಾನು ಆಭಾರಿಯಿರುವೆನು.

ನಮ್ಮ ಪ್ರಾಮುಖ್ಯ ಪಟ್ಟಣದಲ್ಲಿ ಸ್ಥಳೀಯ ಪತ್ರಿಕೆಯೊಂದಿರಬೇಕೆಂದು ಸದಾ ಹಾತೊರೆಯುತ್ತಿದ್ದ ನನಗೆ ಈ ಸಂದರ್ಭದಲ್ಲುಂಟಾಗಿರುವ ಆನಂದವನ್ನು ನಿಮಗೆ ತಿಳಿಸಲೆಡೆಗೊಡಿರಿ.

ನಿಷ್ಪಕ್ಷಪಾತ ಮನೋವೃತ್ತಿಯಿಂದ, ರಾಜಕೀಯ, ಸಾಂಪತ್ತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಆಚಾರ ಮತ್ತು ವಿಚಾರಗಳ ಕುರಿತು ಜನಜಾಗ್ರತಿಯನ್ನುಂಟುಮಾಡುವ ಏಕಮಾತ್ರ ಉದ್ದೇಶವುಳ್ಳ ಯೋಗ್ಯ ರೀತಿಯಲ್ಲಿ ನಡೆಸಲ್ಪಡುವ ವಾರ್ತಾ ಪತ್ರಿಕೆಗೆ ಪ್ರಾಮುಖ್ಯ ಮತ್ತು ಉಪಯೋಗಕರ ಜೀವನವಿರುತ್ತದೆ. ಮತ್ತು ಈ ಕೆಲವು ವರ್ಷಗಳ ನಿಮ್ಮ ಪತ್ರಿಕೆಯ ಸಂಚಾಲಕತ್ವದ ರೀತಿಯಿಂದ, ನಿಮಗೆ ನಿಮ್ಮ ನಿರೀಕ್ಷೆಗಿಂತಲೂ ಹೆಚ್ಚಿನ ಪ್ರೋತ್ಸಾಹ ದೊರೆಯುವುದೆಂಬುದರಲ್ಲಿ ನನಗೆ ಸಂದೇಹವೇ ಇಲ್ಲ.

ನಿಮ್ಮ ಅಭಿಪ್ರಾಯಗಳನ್ನು ನೀವು ಸದಾ ಯಾವ ಪಕ್ಷ, ಸಮಾಜ, ಮತ್ತು ಅಂತಹ ಮತ್ಸರಭಾವರಹಿತವಾಗಿ ಇರಿಸಬೇಕೆಂದೇ ನನ್ನೀ ಪ್ರಾರ್ಥನೆ.

ನಿಮ್ಮ ಸ್ನೇಹಾಭಿಲಾಷಿ,

ಡಾಕ್ಟರ್ ಟಿ. ಮಾಧವ ಪೈ,

ಎಮ್. ಬಿ., ಬಿ ಎಸ್., ಉಡುಪಿ.

ಪ್ರಿಯ ಸಂಪಾದಕ ಮಹಾಶಯರೇ,

ನಿಮ್ಮ ಪತ್ರಿಕೆಯು ಕಾರಣಾಂತರದಿಂದ ಮಂಗಳೂರು ಬಿಟ್ಟು ಇತಿಹಾಸ ಪ್ರಸಿದ್ಧ ಕ್ಷೇತ್ರವಾದ ಉಡುಪಿಯಲ್ಲಿ ನೆಲಸಲಿಕ್ಕಿರುವ ಈ ಸುಮುಹೂರ್ತದಲ್ಲಿ ಪತ್ರಿಕೆಯು ಇನ್ನಷ್ಟು ತೇಜಸ್ವಿಯಾಗಿ ಬೆಳೆಯುತ್ತ ಬಂದು ತನ್ನ ಹೆಸರನ್ನು ಸಾರ್ಥಕಗೊಳಿಸುತ್ತ ದೀರ್ಘಾಯುವಾಗಿ ಜನತೆಯ ಪವಿತ್ರನಾದ ಒಂದು ಅಂಗವಾಗಿ ಪರಿಣಮಿಸಿ ಮೆರೆಯಲೆಂದು ಹೃತ್ಪೂರ್ವಕನಾಗಿ ಹರಸುತ್ತೇನೆ. ಉಡುಪಿಯು ರಾಷ್ಟ್ರಭಕ್ತಿಯಲ್ಲಿ ಮಂಗಳೂರಿಗೆ ಬಿಟ್ಟಿಲ್ಲ. ಅಲ್ಲಿ ಹಿಂದೆಯೂ ಇಂದೂ ಉಜ್ವಲ ರಾಷ್ಟ್ರಸೇವಾಧುರೀಣರಿದ್ದು ಬೇರೆ ಕಡೆಗಳಿಗಿಂತ ಹೆಚ್ಚಾಗಿ ಸಾರ್ವಜನಿಕ ಹಿತದ ಕಾರ್ಯಗಳು ಎಡೆಬಿಡದೆ ನಡೆಯುತ್ತಿರುವುವು. ಇವುಗಳಿಗೆಲ್ಲ ಹುರುಪುಕೊಟ್ಟು ಆಗಿಂದಾಗ್ಗೆ ಯೋಗ್ಯ ಸಲಹೆಗಳನ್ನು ಕೊಡುವುದಕ್ಕೂ, ದಾರಿ ತಪ್ಪದಂತೆ ಆಗಿಂದಾಗ್ಗೆ ಎಚ್ಚರಿಸಲಿಕ್ಕೂ ಒಂದು ಸ್ಥಳೀಯ ಪತ್ರಿಕೆಯು ಅತ್ಯಾವಶ್ಯಕವಾಗಿದ್ದಿತು. ಇದಕ್ಕಾಗಿ ನಿಮ್ಮ ಪತ್ರಿಕೆಯು ಉಡುಪಿಯನ್ನು ಸೇರಿದ್ದು ಅತ್ಯಂತ ಅಭಿನಂದನೀಯವಾಗಿದೆ. ದೊಡ್ಡ ಶಹರಿನಿಂದ ಸರಿದು ಗ್ರಾಮಾಂತರಕ್ಕೆ ಹೋದ ದೆಸೆಯಿಂದ, ಈಗೀಗ ಸರಕಾರದವರು ಕೂಡ ಎತ್ತಿಕೊಳ್ಳಬೇಕಾಗಿ ಬಂದ ಗ್ರಾಮಾಭಿವೃದ್ಧಿಯ ಮಹತ್ಕಾರ್ಯವನ್ನೇ ನಿಮ್ಮ ಪತ್ರಿಕೆಯ ಆತ್ಮದ ಗುರಿಯನ್ನಾಗಿ ಇಟ್ಟುಕೊಂಡು ಈ ದ್ವಿಜ ಮುಹೂರ್ತವನ್ನು ಸಾರ್ಥಕಗೊಳಿಸಬೇಕಾಗಿ ಆಗ್ರಹಪೂರ್ವಕವಾಗಿ ಕೇಳಿಕೊಳ್ಳುವ

ನಿಮ್ಮ ನಿರಂತರ ಕ್ಷೇಮಾಭಿಲಾಷಿ,

ಮೊಳಹಳ್ಳಿ ಶಿವರಾವ್.

(ಪರ್ಯಾಯ) ಶ್ರೀ ಪೇಜಾವರ ಮಠದ

ಶ್ರೀ ವಿಶ್ವಮಾನ್ಯತೀರ್ಥ ಶ್ರೀಪಾದಂಗಳವರ ಸಂದೇಶ

ಉದಾತ್ತ ಧ್ಯೇಯವುಳ್ಳ ಮಂಗಳೂರಿನ 'ನವಯುಗ' ವಾರ್ತಾಪತ್ರಿಕೆಯು ತಾ. 3-9-'36ರಿಂದ ಉಡುಪಿಯಿಂದ ಪ್ರಕಟವಾಗುವುದೆಂಬುದನ್ನು ಕೇಳಿ ನಾವು ಅತ್ಯಂತ ಸಂತೋಷಪಡುತ್ತೇವೆ. ಉಡುಪಿ ಪಟ್ಟಣಕ್ಕೆ ಇಂತಹದೊಂದು ವಾರಪತ್ರಿಕೆಯು ಹಲವು ವರ್ಷಗಳಿಂದ ಅಗತ್ಯ ಬೇಕಾಗಿದ್ದರೂ, ಅಂತಹ ಸಾಹಸವನ್ನು ಉಡುಪಿ ಪಟ್ಟಣಿಗರು ಯಾರೂ ಈ ವರೆಗೆ ಕೈಗೊಂಡಿಲ್ಲ. ಮಂಗಳೂರಿನ ಸದರಿ ಪತ್ರಿಕೆಯ ಸ್ಥಳಬದಲಾವಣೆಯಿಂದಲಾದರೂ ಉಡುಪಿ ಪಟ್ಟಣಕ್ಕೆ ಬೇಕಾದ ವಾರ್ತಾಪತ್ರಿಕೆಯ ಆವಶ್ಯಕತೆಯನ್ನು ಪೂರೈಸುವ ಈ ಪತ್ರಿಕೋದ್ಯೋಗಿಗಳ ಉದ್ಯಮವು ಸ್ತುತ್ಯವಾಗಿರುತ್ತದೆ. ಸದರಿ ಪತ್ರಿಕೆಯು ಸರ್ವತೋಮುಖವಾಗಿ ಹರಡಿ ತನ್ನ ಧ್ಯೇಯವನ್ನು ಜನತೆಗೆ ತಿಳಿಸಿ ಸರ್ವಾದರಣೆಯವಾಗಲೆಂದು ಹಾರೈಸುತ್ತೇವೆ.

ಶ್ರೀ. ವಿಶ್ವಮಾನ್ಯತೀರ್ಥ ಶ್ರೀಪಾದಂಗಳವರು

(ಪರ್ಯಾಯ) ಶ್ರೀ ಪೇಜಾವರ ಮಠ

ನವಯುಗವೆ, ಉಡುಪಿಗೊಂದು ಪತ್ರಿಕೆಯು ಅತ್ಯಾವಶ್ಯಕವೆಂದು ತೋರುವ ಕಾಲಕ್ಕೆ ಸರಿಯಾಗಿಯೇ ಬಂದುಬಿಟ್ಟೆ! ಸುಸ್ವಾಗತ, ಸಂತೋಷದ, ಆದರದ ಸುಸ್ವಾಗತ ನಿನಗೆ! ಇಲ್ಲಿ ಈಗತಾನೆ ತಲೆಯೆತ್ತಿರುವ ಮುನಿಸಿಪಾಲಿಟಿಗೂ ನಾಗರಿಕರಿಗೂ ನಡುವೆ ಜಿಡುಕಿನ ಪ್ರಶ್ನೆಗಳಿವೆ ನೂರಾರು. ಅವನ್ನೆಲ್ಲ ಕಿವಿಯಾರೆ ಕೇಳಿ, ಕಣ್ಣಾರೆ ಕಂಡು, ಮನವಾರೆ ತಿಳಿದು, ಪ್ರತಿಪಾದಿಸಲಿಕ್ಕೋ ಪ್ರತಿಭಟಿಸಲಿಕ್ಕೋ ಇಲ್ಲಿಂದಲೇ, ಹೊರಡುವ ಪತ್ರಿಕೆಗೆ ಅಧಿಕಾರ ಸೌಕರ್ಯ ಸೌಭಾಗ್ಯಗಳು ಹೆಚ್ಚು! ಮೇಲಾಗಿ, ನೀನು ಮ್ಯುನಿಸಿಪಾಲಿಟಿಯ ಯಾವ ನೌಕರನ, ಯಾವ ಕೌನ್ಸಿಲರನ ಯಾವ ಚೇರ್‌ಮ್ಯಾನನ ಕುಣಿತಕ್ಕೆ ತಕ್ಕ ತಾಳಹಾಕುವವನಾಗಲಾರೆ ಎಂದು ನನ್ನ ನಂಬಿಗೆ. ನಿನ್ನ ದೇವರೆಂದರೆ ಜನತೆ; ನಿನ್ನ ಈಶ್ವರ ಸೇವೆಯೆಂದರೆ ಜನತಾಸೇವೆ; ನಿನ್ನ ಮತವೆಂದರೆ ಮಾನವ ಭ್ರಾತೃತ್ವ. ಜನತೆಯಹಿತಕ್ಕಾಗಿ ಅನೀತಿಯ ನೇತ್ರಾಗ್ನಿಯ ಉರಿಯನ್ನು ಹೊಗುವ ನೈತಿಕಧೈರ್ಯವಿದೆ ನಿನ್ನಲ್ಲಿ. ಅದು ಕಾರಣ ನೀನು ಸಾಮಾಜಿಕ ರಾಜಕೀಯ ವಿಷಯಗಳಲ್ಲಿ ಉಗ್ರಸುಧಾರಕನಾಗಿರುವೆ. ಇಂದಿನ ಪರಿಸ್ಥಿತಿಯನ್ನು ವಿವರಿಸಬೇಕಾಗಿಲ್ಲ. ಮಂದಿಯು ತನ್ನ ಉದ್ಧಾರವು ಇತರರಿಂದಾಗಬೇಕೆಂದು ಕಾಯುತ್ತಲಿದ್ದಂತೆಯೇ ಅದರ ರಕ್ತವು ಹೀರಲ್ಪಡುತ್ತಾ ಇದೆ- ಅದು ತನ್ನ ಅದೃಷ್ಟವೆಂದು, ಧರ್ಮವೆಂದು, ಪೂರ್ವಾಚಾರವೆಂದು, ಸಂಪ್ರದಾಯವೆಂದು, ನಂಬಿಗೆಯೆಂದು, ರೂಢಿಯೆಂದು, ಕಟ್ಟುಕಟ್ಟಲೆಗಳೆಂದು, ರಾಜಕಾರಣಗಳೆಂದು, ಶಾಸನಗಳೆಂದು ನಿರ್ವಿಚಾರಿಯಾಗಿ ಎಲ್ಲಕ್ಕೂ ಅತಿ ದೀನತೆಯ ದೌರ್ಬಲ್ಯದಿಂದ ತಲೆವಾಗುತ್ತ, ತನ್ನ ಬಾಳನ್ನೇ ಬಲಿಗೊಡುತ್ತಾ ಇದೆ. ಯಾವುದೋ ಒಂದು ಕಾಲದಲ್ಲಿ, ಯಾವುದೋ ಒಂದು ಪರಿಸ್ಥಿತಿಯಲ್ಲಿ ಜನತೆಯ ಹಿತಸಾಧನೆಗಾಗಿ ಕಲ್ಪಿಸಿಕೊಳ್ಳಲ್ಪಟ್ಟ ಅವುಗಳು ಕಾಲಪರಿಸ್ಥಿತಿಗಳ ಪರಿವರ್ತನೆಯಿಂದ ಅನರ್ಥಕಾರಿಯಾಗಿ ಪರಿಣಮಿಸಿದರೆ, ಅವನ್ನು ಪರಿವರ್ತಿತಸ್ಥಿತಿಗೆ ಸರಿಹೋಗುವಂತೆ ಸುಧಾರಿಸಿಕೊಳ್ಳಲಿಕ್ಕೆ ಜನತೆಗೆ ಆಜನ್ಮ ಹಕ್ಕು ಇದ್ದೇ ಇದೆ. ಮೊದಲಾಗಿ ಬಾಳಬೇಕು; ಬಾಳಿನ ಸಾರ್ಥಕ್ಯಕ್ಕಾಗಿ ಧರ್ಮಗಳೂ ಶಾಸನಗಳೂ ಬೇಕು. ಅಲ್ಲದೆ ಅವುಗಳಿಗಾಗಿ ಬಾಳುವುದಲ್ಲ; ಬಾಳನ್ನು ಬಲಿಗೊಡುವುದೂ ಅಲ್ಲ. ಎಲ್ಲರೂ ಆ ದೇವನ ಮಕ್ಕಳು; ಎಲ್ಲರೂ ಈ ಪೃಥ್ವೀಪುತ್ರರು; ಅದು ಕಾರಣ ಎಲ್ಲರೂ ಸೋದರರು. ಈ ವಿಶ್ವಭ್ರಾತೃತ್ವವೇ ಸರ್ವಮತಗಳ ಪರಮಸಾರತತ್ವ. ಜನತೆಯಲ್ಲಿ ದೇವರನ್ನು ಕಾಣಬೇಕು; ಜನತಾಸೇವೆಯಿಂದಾಗಬೇಕು ಈಶ್ವರಸೇವೆ. ಜನಹಿತವೇ ಮತ್ತು ಅದೇ ಧರ್ಮ, ಅದೇ ಪುಣ್ಯ. ಜನಪೀಡೆಯೇ ಅಧರ್ಮ, ಅದೇ ಪಾಪ. ಮೊದಲನೆಯದರಿಂದಾಗುವುದು ವಿಶ್ವಕಲ್ಯಾಣ; ಕೊನೆಯದರಿಂದ ವಿಶ್ವ ವಿನಾಶ. ಈ ನೋಟವಿಟ್ಟು ನೋಡಿದಾಗ, ಬಾಳಿಗೆ ಸರಿಹೋಗದ ವಿಚಾರಕ್ಕೆ ವಿರುದ್ಧವಾದ ವಿಷಯಗಳೇನಿವೆಯೋ ಅವೆಲ್ಲ ಪೀಡಾತ್ಮಕವಾಗುವುಗಳು; ಜನತಾ ಜನಾರ್ದನನ ದೃಷ್ಟಿಯಲ್ಲಿ ಅವೆಲ್ಲ ಪಾಪಾಚರಣೆಗಳು. ಅವುಗಳ ಪೊಳ್ಳನ್ನು ಹೊರತೋರಿ, ಜಳ್ಳನ್ನು ತೂರಿ, ಕಾಳನ್ನು ಮಾತ್ರ ಹೆಕ್ಕುವ ವಿಚಾರಬುದ್ಧಿಯನ್ನು ಮಂದಿಯಲ್ಲಿ ಜಾಗ್ರತಗೊಳಿಸುವ ಎಡೆಗಾರಿಕೆಯು ನಿನ್ನಲ್ಲಿದೆ. ವಿಜ್ಞಾನ ಯುಗದ ಈ ವಿಚಾರಬುದ್ಧಿಯು, ನವಯುಗದ ಈ ಸ್ಫೂರ್ತಿಯು, ಲೋಕಶಾಂತಿದಾಯಕವಾದ ಈ ವಿಶ್ವಭ್ರಾತೃತ್ವದ ಹಕ್ಕು ಬಾಧ್ಯತೆಗಳ ತಿಳಿವು, ಇವನ್ನೆಲ್ಲ ಮಂದಿಯ ಮನದಲ್ಲಿ ಮೂಡಿಸಿ, ಅದು ತನ್ನನ್ನು ತಾನರಿತು ತಾನಾಗಿ ನಿಂತು ತಾನಾಗಿ ಬಾಳುವಂತೆ ಬೋಧಿಸುವುದೇ, ಪ್ರೇರೇಪಿಸುವುದೇ ಪ್ರೋತ್ಸಾಹಿಸುವುದೇ ನಿನ್ನಲ್ಲಿ ನಾನು ಕಂಡಿರುವ ನಿನ್ನ ನಿಶ್ಚಲವಾದ ಧೋರಣೆ. ಮುಂದೆಯೂ ಅದು ನಿನ್ನ ಪುಟಗಳಲ್ಲಿ ವಿರಾಜಿಸುತ್ತಿರಲಿ! ಈ ಧ್ಯೇಯಧೋರಣೆಗಳನ್ನು ಜನತೆಯು ಮನಗಂಡು ನಿನ್ನನ್ನು ಆದರಿಸಿ ಪ್ರೋತ್ಸಾಹಿಸಿ ಬೆಂಬಲವಿತ್ತು ಕೃತಾರ್ಥರಾಗಲಿ! ಅಂತಾಗುವಂತೆ ನೀನು ಚಿರಕಾಲ ನಿರ್ಭೀತನಾಗಿ ಪ್ರಬಲನಾಗಿ ಯಶಸ್ವಿಯಾಗಿ ಬಾಳು! ತಥಾಸ್ತು!

ಕೊರಡ್ಕಲ್ ಶ್ರೀನಿವಾಸರಾವ್,

'ಆನಂದಗ್ರಂಥಮಾಲಾ' ಕರ್ತೃ,

ಉಡುಪಿ.

ನವಯುಗವು ಉಡುಪಿಯಲ್ಲಿ ತನ್ನ ಹೊಸ ಆಫೀಸನ್ನು ತೆರೆಯುವ ಈ ಶುಭ ಮುಹೂರ್ತದಲ್ಲಿ ಅದಕ್ಕೆ ನನಗೀ ಸಂದೇಶವನ್ನು ಕಳುಹಿಸುವರೆ ಬಹಳ ಆನಂದವೆನಿಸುತ್ತದೆ. ನವಯುಗವು ಇನ್ನು ಮುಂದೆ ತನ್ನ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ಹುಲುಸುಗೊಳಿಸಲಿರುವ ಉಡುಪಿಯು ನನ್ನ ಹುಟ್ಟೂರಾಗಿರುವುದರಿಂದ ನನ್ನ ಆನಂದವು ಮತ್ತೂ ಹೆಚ್ಚಾಗಿರುತ್ತದೆ. ನವಯುಗವು ಇಷ್ಟರವರೆಗೆ ಕರ್ನಾಟಕದ ಉನ್ನತಿ ಮತ್ತು ಅಭಿವೃದ್ಧಿಗಾಗಿ ಹೆಚ್ಚಿನ ಕೆಲಸ ಮಾಡಿರುತ್ತದೆ. ಇನ್ನು ಮುಂದೆಯೂ ಅದು ದಿನೇ ಹೆಚ್ಚುಹೆಚ್ಚು ಬಲಗೊಂಡು ಬೆಳೆದು ತನ್ನ ಕೀರ್ತಿ ಮತ್ತು ಪ್ರಭಾವವನ್ನು ಹೆಚ್ಚಿಸುತ್ತಾ ನಡೆಯಲೆಂದೇ ನನ್ನ ಪ್ರೇಮಪೂರ್ವಕವಾದ ಹಾರೈಕೆ.

ಡಾಕ್ಟರ್. ಯು. ರಾಮರಾವ್,

ಮದ್ರಾಸು.

ಪ್ರಿಯಮಹಾಶಯರೇ,

ಉಡುಪಿಯಲ್ಲಿ ಜರಗತಕ್ಕ ತಮ್ಮ "ನವಯುಗ" ಪತ್ರಿಕೆಯ ಉದ್ಘಾಟನ ಸಮಾರಂಭಕ್ಕೆ ತಾ. 3-9-36ನೇ ದಿವಸ ಹಾಜರಾಗಬೇಕಾಗಿ ಕಳುಹಿಸಿಕೊಟ್ಟ ಆಮಂತ್ರಣ ಪತ್ರಿಕೆಯನ್ನು ಅತ್ಯಾದರದಿಂದ ಸ್ವೀಕರಿಸಿರುವೆವು. ಕಳೆದ 15 ವರ್ಷಗಳಿಂದ ಮಂಗಳೂರಿನಲ್ಲಿ ಕ್ರಮವಾಗಿ ಪ್ರಕಟವಾಗಿ ಜನತಾ ಸೇವೆಯಲ್ಲಿ ನಿರತವಾದ "ನವಯುಗ"ವು ತನ್ನ 16ನೇ ವಯಸ್ಸಿನ ಜನ್ಮೋತ್ಸವವನ್ನು ಉಡುಪಿಯಲ್ಲಿ ಆಚರಿಸಿ, ಉಡುಪಿಯಲ್ಲಿಯೇ ಸ್ಥಿರವಾಗಿ ನೆಲಸಿ ತನ್ನ ಕಾರ್ಯವನ್ನು ಮುಂದರಿಸಲು ಯೋಚಿಸಿರುವುದಕ್ಕೆ ಸಂತೋಷಪಡುತ್ತಿರುವೆವಲ್ಲದೆ, ಕಾರ್ಯಕ್ಷೇತ್ರದಲ್ಲಿ ನುರಿತ ತನ್ನ ಹಿರಿಯ ಸಹೋದ್ಯೋಗಿ ಬಂಧುವಾದ "ನವಯುಗ"ವನ್ನು "ವರ್ತಕಧುರೀಣ"ನು ಹೃತ್ಪೂರ್ವಕವಾಗಿ ಅಭಿನಂದಿಸಿ, ಪತ್ರಿಕಾ ವ್ಯವಸಾಯವು ಬಹುವಿಧ ಕಷ್ಟಗಳಿಗೀಡಾಗಿರುವ ಈ ಕಾಲದಲ್ಲಿ, ಉಡುಪಿಯ ಮಹಾಜನರು ಗುಣಗ್ರಾಹಕತೆಯಿಂದ "ನವಯುಗ" ಪತ್ರಿಕೆಗೆ ವಿಶೇಷ ಪ್ರೋತ್ಸಾಹ ಕೊಟ್ಟು "ನವಯುಗ"ವು ನವಜೀತನದಿಂದ ಚಿರಕಾಲ ಮೆರೆದು ಉಡುಪಿಯ ಮಹಾಜನರ ಸಹಕಾರಿಯಾಗಿ, ಉಡುಪಿಗೆ ವಿಶೇಷ ಕೀರ್ತಿಯನ್ನುಂಟುಮಾಡುವಷ್ಟು ಯಶಸ್ಸನ್ನು ಪಡೆಯಲೆಂದು "ವರ್ತಕಧುರೀಣ"ನ ಕೋರಿಕೆಯಾಗಿರುವುದು. ಮಹಾಜನರ ಪರಿಚಿತರಾದ ಉಡುಪಿಯ ಶ್ರೀಯುತ ಕೆ. ಹೊನ್ನಯ್ಯ ಶೆಟ್ಟರು, "ನವಯುಗ"ದ ಪ್ರಕಾಶಕರಾಗಿರುವರೆಂಬುದನ್ನೂ, ತಿಳಿಯಲು ಸಂತೋಷಪಡುವೆವು.

ಆರ್. ಎಸ್. ಶೆಣೈ,

ಸಂಪಾದಕ, ವರ್ತಕ ಧುರೀಣ, ಉಡುಪಿ

ನಮಗೆ ಬಂದ ಸಂದೇಶಗಳು.

ಸವಿನಯ ವಂದನೆಗಳು.

ಮಹನೀಯ!

ತಮ್ಮ ಔತ್ತರದ ಒಲೆ ಪ್ರ್ಸೆ ಆನಂದವಾಯಿತು. ಮಂಗಳೂರಿನಲ್ಲಿಯೆ ಆರೇಳು ಕನ್ನಡ ಪತ್ರಿಕೆಗಳು ಕಾರ್ಯಮಾಡುವುದಕ್ಕಿಂತ ಬೇರೆ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಸಂತ ಕೆಲಸಮಾಡುವುದೆಂದರೆ ಕನ್ನಡ ಸಂಸ್ಕೃತಿ ಸಾಹಿತ್ಯಗಳ ಪ್ರಚಾರಕ್ಕೆ– ಜನಸಾಮಾನ್ಯರ ಜೀವನವನ್ನು ಮೇಲಕ್ಕೆತ್ತಲಿಕ್ಕೆ ಹೆಚ್ಚು ಅನುಕೂಲ. ಇದರಿಂದ ನಮ್ಮ ಕನ್ನಡಮಾತೆಯ ಆರೋಗ್ಯವರ್ಧನೆಯು ಚೆನ್ನಾಗಿ ಆದೀತು. ಕಿತ್ತು ಮತ್ತೊಂದೆಡೆಯಲ್ಲಿ ನೆಟ್ಟ ಸಸಿಯು ಅಲ್ಲಿಯ ಪೋಷಕ ಸತ್ತ್ವಗಳಿಂದ ಹುಲುಸಾಗಿ ಬೆಳೆದು ಬಾಳುವುದಂತೆ. ಮಂಗಳೂರಿನಿಂದ ಉಡುಪಿಗೆ ಬರುತ್ತಿರುವ "ನವಯುಗ"ವೂ ಹಾಗೆಯೇ ಬಳೆದು ಬಾಳುತ್ತಿರಲೆಂದು ಹಾರಯಿಕೆ ಯಾವ ಕನ್ನಡಿಗನದಿರಲಿಕ್ಕಿಲ್ಲ! ನವಯುಗದಿಂದ ಉಡುಪಿಯೂ ಉಡುಪಿಯಿಂದ ಅಖಿಲ ಕರ್ಣಾಟಕವೂ ತೊಳಗಿ ಬೆಳಗಲಿ.

ತಮ್ಮ ಬಂಧು

ಬೆಳಗಾಂವಿ ರಾಮಚಂದ್ರರಾಯ, ಬಿ. ಎ.

ಸಂಪಾದಕ, 'ಜಯಕರ್ನಾಟಕ.'

ಧಾರವಾಡ.

ಭಾರತಭೂಮಿಯ ಹಾಗೂ ಹಿಂದೂ ಧರ್ಮದ ಈಗಣ ದುರವಸ್ಥೆಯನ್ನು ಅರಿತೂ ಹಿಂದುಗಳಾಗಿ ತಾವಿಲ್ಲಿ ಹುಟ್ಟಿರುವ ಬಗ್ಗೆ ಮರುಗದೆ, ಆ ಸಲುವಾಗಿ ಹಿಗ್ಗಿ ತಮ್ಮ ಮಾತೃಧರ್ಮಕ್ಕೆ ಹೊಸ ಹರೆಯವನ್ನೂ ಅದರ ನೆರವಿಂದ ಮಾತೃಭೂಮಿಯ ಬಿಡುಗಡೆಯನ್ನೂ ಒದವಿಸಲಿಕ್ಕೆ ವೇಚಾಡುತ್ತಿರುವ ಈ ಹೊತ್ತಿನಲ್ಲಿ ಒಬ್ಬರಿಗೊಬ್ಬರು ಭ್ರಾತೃಭಾವದಿಂದ ಕೊಡತಕ್ಕ ಸಂದೇಶವೆಂದರೆ ಮೊತ್ತಮೊದಲಾಗಿ ಇಷ್ಟೇ–ಹಿಂದೂಧರ್ಮದ ಕಲ್ಪವೃಕ್ಷದಲ್ಲಿ ದಟ್ಟವಾಗಿ ಬೆಳೆದಿರುವೀ ಜಾತಿಭೇದವೆಂಬ ಪಷವಲ್ಲಿಯನ್ನು ಸಮೂಲವಾಗಿ ಕಿತ್ತೆಸೆದು ಅದರ ಭಾರದಿಂದ ಜಗ್ಗಿ ಈಗಲೇ ಬಾಡತೊಡಗಿರುವ ನಮ್ಮ ಧರ್ಮಕ್ಕೆ ಅಭೇದ್ಯವಾದ ಅವಿಕಲವಾದ ಸರ್ವಾಂಗೀನ ಐಕ್ಯದ ನವಜೀವನವನ್ನು ದೊರಕೊಟ್ಟು ಅದನ್ನು ಚಿರಕಾಲಕ್ಕೆ ಉಳಿಸಿಕೊಳ್ಳಬೇಕೆಂಬುದೇ. ಅದೆಷ್ಟೋ ಹಿಂದಣ ಕಾಲದಲ್ಲಿ ಜಾತಿಭೇದಕ್ಕೆ ಆಗಣ ಸಾಮಾಜಿಕ ಅಥವಾ ಔದ್ಯೋಗಿಕ ಆವಶ್ಯಕತೆಯ ಕಾರಣದಿಂದ ತಕ್ಕಷ್ಟು ಸಮರ್ಪಕವಾದ ಅರ್ಥವು ಇದ್ದಿತಾದರೂ ಆ ಆವಶ್ಯಕತೆ ಇಂದಿನನಕಾ ಸರ್ವಥಾ ಬಾಳದು, ಆತಏವ ಅದರ ಅರ್ಥವು ಇನ್ನೂ ಇನ್ನೂ ಎಂದಿಗೂ ಬಾಳದು. ಐತಿಹಾಸಿಕದೃಷ್ಟಿಯಿಂದ ಜಾತಿಭೇದದ ಮೂಲವನ್ನು ಶೋಧಿಸಿದರೆ, ಅದೊಂದು ಆ ಪೂರ್ವಕಾಲದ ತಾತ್ಕಾಲಿಕ ಕಂಚಿಕೆ ಎಂದೇ ತೋರುತ್ತದಲ್ಲದೆ, ಸಾರ್ವಕಾಲಿಕವಾದ ನಿಯಮವೆನಿಸುವದಿಲ್ಲ. ಮುಸಲ್ಮಾನರು ಇಲ್ಲಿ ಕಾಲೂರಿದಂದಿನಿಂದಲೇ ಜಾತಿಭೇದವು ಅಳಿಯತೊಡಗಿ ಈಗ ಅದರ ಕೊಳೆತು ನಾರುವ ಹೆಣವನ್ನಷ್ಟೇ ಕಟ್ಟಿಕ್ಕೊಂಡು ಅದನ್ನಿನ್ನೂ ಸುಟ್ಟುಹಾಕಲೊಲ್ಲೆವೆಂದು ತಾನೇ ನಾವಿಂದು ನಮ್ಮೊಳಗೆ ಬಡಿದಾಡಿಕೊಳ್ಳುತ್ತಿದ್ದೇವೆ. ಜನ್ಮಾಂತರವಾದದಿಂದ ತರ್ಕಿಸಿದರೂ ಆ ಜನ್ಮಗೆ ತಾನೇ ಪುನರ್ಜನ್ಮವಲ್ಲದೆ ವಾಡಿಕೆಗಳಿಗೂ ಅಲ್ಲ, ಕಟ್ಟಳೆಗಳಿಗೂ ಅಲ್ಲ. ಶ್ರೀರಾಮನ ಅಥವಾ ಶ್ರೀಕೃಷ್ಣನ ಕಾಲವೇ ಆ ಕಾಲದ ಆ ಸಂಸ್ಕೃತಿಯೇ ಕಾಲಚಕ್ರದಲ್ಲಿ ಇನ್ನೆಂದಿಗೂ ಮರಳುವುದುಂಟೇ? ಯಾವ ಧರ್ಮವಾದರೂ ಮೊತ್ತಮೊದಲಲ್ಲಿ ಇದ್ದಕ್ಕಿದ್ದಂತೆಯೇ ಯಾವಂದಿಗೂ ಒಂದೇ ರೀತಿಯಾಗಿ ಸಾರ್ವಕಾಲಿಕವೂ ಅಲ್ಲ, ಶಾಶ್ವತಿಕವೂ ಅಲ್ಲ. ಆಯಾ ಧರ್ಮದಲ್ಲಿ ಗೌಣವಾಗಿರುವ ವಾಡಿಕೆಗಳೂ ಕಟ್ಟಳೆಗಳೂ ಹಾವಿನ ಹೆಡೆಗಳಂತೆ ಆಗ್ಗಾಗ್ಗೆ ಮಾರ್ಪಡುತ್ತಲೇ ಇರಬೇಕು, ಹಾಗಿದ್ದರ ಮಾತ್ರ ಆ ಧರ್ಮಕ್ಕೂ ಆ ಧರ್ಮದ ಜನತೆಗೂ ಈ ಲೋಕದಲ್ಲಿ ತನ್ನದೇ ಎಂಬ ನಿತ್ಯವಾದ ಸ್ಥಾನವಿದೆ. ಕಾಲಧರ್ಮಕ್ಕೆ ಅನುಸಾರವಾಗಿ ಜನಧರ್ಮವೂ ಮಾರ್ಪಡುತ್ತಿದ್ದರೆ ಮಾತ್ರ ಅದರ ಹಳೆಯ ಬೇರುಗಳು ಇನ್ನೂ ಬಲವತ್ತರವಾಗಿ ಅವಲ್ಲಿಯೇ ಅದು ನವನವೀನವಾಗಿ ವಿಸ್ತಾರವಾಗಿ ಬೆಳೆದು ತಾನೂ ಚಿರಕಾಲ ಉಳಿಯಬಲ್ಲದು; ಸಮಾಜವನ್ನೂ ಚಿರಕಾಲ ಉಳಿಸಬಲ್ಲದು. ವೇದಕಾಲದ ಧರ್ಮವು ಈಗ ಇದೆಯೇ? ವೇದದ ಪ್ರಧಾನ ದೇವತೆಗಳಾದ ಇಂದ್ರ ವರುಣರನ್ನು ಯಾವ ಮೂಲೆಗಳ ಕಾವಲಿಗ ಒತ್ತಿ ಶತಮಾನಗಳೆಷ್ಟೋ ಆಗಿಹೋದವು. ಜಾತಿಭೇದವೆಂಬುದೇನೂ ನಮ್ಮ ಸನಾತನ ಧರ್ಮದ್ದೊಂದು ತಾಯ್ಬೇರಲ್ಲ. ಅದೊಮ್ಮೆ ಇದಕ್ಕೆ ಗತ್ಯಂತರವಿಲ್ಲದೆ ಇಕ್ಕಿದ ಕುರುಚೆಯ ಹಸುರು ಸೊಪ್ಪಂತಿದ್ದು ಈಗಲಾದರೋ ಇದರ ಜೀವನಸಾರವನ್ನೇ ಹೀರುವ ನಂಜಿನ ಬಂದಣಿಗೆಯಾಗಿದೆ. ಕಾಲಕ್ಕೆ ತಕ್ಕಂತೆ ವೇದದ ದೇವತೆಗಳನ್ನು ಕೂಡ ಎಲ್ಲಿಂದೆಲ್ಲಿಗೆ ತಳ್ಳಿದ ಋಷಿಗಳ ಸಂತಾನರಾದ ನಾವು ಈ ಗೆದ್ದಲನ್ನು ಮಾತ್ರ ಜಾಡಿಸಿಬಿಡಲಾರೆವೇ? ಜಾತಿಭೇದವು ನಿರ್ಮೂಲವಾಗುವ ತನಕ ಹಿಂದೂಧರ್ಮಕ್ಕೆ ಏಳಿಗೆ ಇಲ್ಲ; ಹಿಂದೂಧರ್ಮವು ಒಮ್ಮೆಯ್ಯಾಗುವ ವರೆಗೆ ಹಿಂದುಗಳಿಗೆ ಬಿಡುಗಡೆಯೂ ಇಲ್ಲ. ತನ್ನೊಡಲ ರೋಗವು ತನ್ನನ್ನೇ ಕಡಿಸುವಂತೆ, ಜಾತಿಭೇದವೇ ಹಿಂದೂಧರ್ಮವೆಂದು ನಚ್ಚಿ ನಮ್ಮ ಇತರಥಾ ಶ್ರೇಯಸ್ಕರವಾದ ಪವಿತ್ರ ಧರ್ಮವನ್ನೂ ಅದರೊಂದಿಗೆ ನಮ್ಮ ಧರ್ಮದ ಏಕಮಾತ್ರ ಸಂಶ್ರಯವಾಗಿರುವ ನಮ್ಮ ಮಾತೃಭೂಮಿಯ ಅಭ್ಯುದಯವನ್ನೂ ಹೋಗಲಾಡಿಸಿಕೊಳ್ಳುವೆವೇ? ಹಾಗೆನಗಲೊಲ್ಲೆವಾದರೆ, ಜಾತಿಭೇದದ ಪ್ರಥಮ ಲಕ್ಷಣವಾಗಿರುವ ನಾಚಿಕೆಯ ಗಿಡಮೋಪಾದಿಯ ಮುಟ್ಟುಮುರುಟುತನವಷ್ಟನ್ನೇ ನೀಗಿ ಸುಮ್ಮನಿದ್ದರೆ ಸಾಲದು. ಅದೀಗ ತನಗೆ ತಾನೇ ಸವೆದುಹೋಗುತ್ತಿದೆ. ಜಾತಿಭೇದದ ನಿರರ್ಥಕ ವರ್ಣಮಾಲೆಯಲ್ಲಿ ತಾನು ಮೇಲೆಂಬ ಹಾರುವನಿಂದ ಕೀಳೆನ್ನಲ್ಪಡುವ ಹೊಲೆಯನವರೆಗೆ ಎಲ್ಲವರೂ ಒಂದೇ ಜಾತಿಯಾಗಬೇಕು, ಊಟಕೂಟಗಳಲ್ಲಿ ಒಂದಾಗಬೇಕು ಆಚಾರ ವಿಚಾರಗಳಲ್ಲಿ ಒಂದಾಗಬೇಕು: ಕನಿಷ್ಠರನ್ನು ಶ್ರೇಷ್ಠತೆಗೆತ್ತಿ ಹಿಂದುವೆಂದರೆ ಅಭಿನ್ನವಾದ ಅಭೇದ್ಯವಾದ ಸರಿಸಮಾನವಾದ ಒಂದೇ ಜಾತಿ, ಒಂದೇ ಉದಾತ್ತ ಜನತೆ ಎಂದಾಗಬೇಕು. ಮಾತೃಭೂಮಿಯನ್ನೂ ಮಾತೃಧರ್ಮವನ್ನೂ ಕಾಪಾಡತಕ್ಕ ಈ ಮಹಾ ಯೋಧದಲ್ಲಿ ನಮ್ಮ ಯುವಕರು ಅನನ್ಯಥಾ ವೃತ್ತಿಯಿಂದ ಒಮ್ಮೆ ಉದ್ಯುಕ್ತರಾದರೆ, ಅವರ ಹಿಮ್ಮೆಟ್ಟದ ಸಾಧನೆಗೆ ಇದು ಅಚಿರೇಣ ಕೈಯ್ಗೂಡಲೇಬೇಕು.

ಗೋವಿಂದ ಪೈ, ಬಿ. ಎ.

ಮಂಜೇಶ್ವರ.

ಪ್ರಿಯ ಸಂಪಾದಕರೇ,

ನಮ್ಮ ನವಯುಗವು ಇನ್ನು ಮೇಲೆ ಉಡುಪಿಯಿಂದ ಪ್ರಕಟವಾಗುವುದೆಂದು ಕೇಳಿ ನನಗೆ ಬಹಳ ಸಂತೋಷವಾಯಿತು. ವಿಶ್ವಾಸಿಗಳ ರಾಜಧಾನಿಯಂತಿರುವ ಉಡುಪಿಯನ್ನು ಸ್ವತಂತ್ರವಿಚಾರದ ಮಹತ್ವವನ್ನು ಜನರಿಗೆ ಬೋಧಿಸುವ ನವಯುಗದಂತಹ ಪತ್ರಿಕೆಯೊಂದಿರುವುದು ಅವಶ್ಯವೇ ಸರಿ. ವಿಚಾರರಹಿತ ಅಂಧ ವಿಶ್ವಾಸಿಗಳಿಂದ ತುಂಬಿರುವ ನಮ್ಮ ರಾಷ್ಟ್ರದಲ್ಲಿ ಉಜ್ವಲಸುಧಾರಕ ಮನೋವೃತ್ತಿಯ ನವಯುಗದಂತಹ ಪತ್ರಿಕೆಗಳು ಎಷ್ಟು ಇದ್ದರೂ ಸಾಲದು. ಜನರಲ್ಲಿ ನಿಜವಾದ ಜ್ಞಾನವನ್ನು ವೃದ್ಧಿಸಿ ಅವರನ್ನು ನಿರ್ಭೀತರೂ ಸ್ವತಂತ್ರ ವಿಚಾರಿಗಳೂ ಆಗಿರುವಂತೆ ಮಾಡುವುದೇ ಪತ್ರಿಕೆಗಳ ಧ್ಯೇಯವಾಗಿರಬೇಕು. ಆದರೆ ನಮ್ಮಲ್ಲಿಯ ಪತ್ರಿಕೆಗಳಿಗೆ ಈ ರೀತಿಯ ನಿಶ್ಚಿತ ಧ್ಯೇಯ ಯಾವುದೂ ಇಲ್ಲವೆನ್ನಬಹುದು. ಏಕೆಂದರೆ ನಮ್ಮಲ್ಲಿರುವ ಪತ್ರಿಕೆಗಳು ಭೂಲೋಕದ ಅನೇಕ ಪ್ರಾಮುಖ್ಯ ವಿಷಯಗಳನ್ನು ಬಹಳ ಸೂಕ್ಷ್ಮದಲ್ಲಿ ಮುಗಿಸಿಬಿಟ್ಟು ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ವಿನೋದಕ್ಕಾಗಿ ಮೂಲೆ ಮೂಲೆಗಳಲ್ಲಿ ಕೊಟ್ಟಿರುವ ಸಂಶಯದ ವಾರ್ತೆಗಳಿಗೇನೇ ಪ್ರಾಮುಖ್ಯತೆ ಕೊಡುತ್ತಿವೆ. ಪ್ರಕೃತಿಯ ನಿಯಮಗಳಿಗೆ ವಿರೋಧವಾದ 'ಕೋಣ ಮಾತಾಡಿತು, ಕಡಿದು ಹಾಕಿದ ಮರವು ಎದ್ದು ನಿಂತಿತು, ತೆಂಗಿನಕಾಯಿಗಳು ತತ್ತಿಗಳನ್ನು ಇಟ್ಟವು' ಎಂಬೀ ಮೊದಲಾದ ಚಿಕ್ಕಮಕ್ಕಳೂ ನಂಬಲಾರದ ಸುಳ್ಳುವರ್ತಮಾನಗಳೇ ನಮ್ಮ ಪತ್ರಿಕೆಗಳಲ್ಲಿ ಯಥೇಷ್ಟವಾಗಿವೆ. ಭೂತಪ್ರೇತಾದಿಗಳ ಇರುವಿಕೆಯನ್ನು ರುಜುಪಡಿಸಲೆತ್ನಿಸುವ ನಾವಿಧ ಸುಳ್ಳು ಕತೆಗಳು ಕೆಲವು ದೇವರುಗಳ ಸಾಧುಗಳ ಮತ್ತು ಸ್ಥಳಗಳ ಕಾರ್ಣಿಕವನ್ನು ರುಜುಪಡಿಸಲೆತ್ನಿಸುವ ಇನ್ನಷ್ಟು ಸುಳ್ಳುವಾರ್ತೆಗಳು ಇವುಗಳಿಂದಲೇ ಪತ್ರಿಕೆಗಳನ್ನು ತುಂಬಿಸಿ ಅಜ್ಞರನ್ನು ಮತ್ತಷ್ಟು ಮರುಳುಗೊಳಿಸುವ ಪ್ರಯತ್ನವೇ! ನಮ್ಮಲ್ಲಿಯ ಹೆಚ್ಚಿನ ಪತ್ರಿಕೆಗಳದ್ದು. ಭೂಲೋಕದ ಅನೇಕ ಪತ್ರಿಕೆಗಳಲ್ಲಿರುವ ಅನೇಕ ಮುಖ್ಯ ವಿಷಯಗಳನ್ನು ಜಾಗ್ರತೆಯಿಂದ ಹೆಕ್ಕಿತೆಗೆದು ಅವುಗಳ ಯೋಗ್ಯತಾನುಸಾರವಾಗಿ ಅವುಗಳಿಗೆ ಪ್ರಾಮುಖ್ಯತೆ ಕೊಟ್ಟು ವಾಚಕರ ಜ್ಞಾನವನ್ನು ವೃದ್ಧಿಸಿ ಅವರಿಗೆ ಸರಿಯಾದ ತಿಳುವಳಿಕೆಯನ್ನು ಕೊಡುವ ಪತ್ರಿಕೆಯೆಂದರೆ ಇದು ನನ್ನ ಜಿಲ್ಲೆಯಲ್ಲಿ ನವಯುಗವೊಂದೇ ಎಂದು ಧೈರ್ಯವಾಗಿ ಹೇಳಬಹುದು. ನವಯುಗದ ಈ ಧೋರಣೆಯಿಂದಾಗಿ ಇದು ವಿದ್ಯಾವಂತ ವಿಚಾರಿಗಳ ಪತ್ರಿಕೆಯೆಂದು ಹೆಸರುಗೊಂಡಿದೆ. ಕೇವಲ ಪರಿಶ್ರಮದಿಂದ ಅಸಾಧ್ಯವಾದುದನ್ನು ಸಾಧ್ಯಮಾಡತಕ್ಕವರು ನೀವು. ಉತ್ಸಾಹಿಸುಧಾರಕರಾದ ಶ್ರೀ ಪಣಿಯಾಡಿಯವರ ಮತ್ತು ಶ್ರೀ. ಹೊನ್ನಯ್ಯ ಶೆಟ್ಟರ ಬೆಂಬಲವೂ ಈಗ ನಿಮಗೆ ದೊರೆತುದರಿಂದ ನಿಮ್ಮ- ಅಲ್ಲ ನಮ್ಮ ನವಯುಗವು ಇನ್ನಷ್ಟು ಯಶಸ್ವಿಯಾಗಿ ನಡೆದೀತು ಎಂಬುದರಲ್ಲಿ ಸಂದೇಹವಿಲ್ಲ. ಕರ್ಣಾಟಕದ ವಿದ್ಯಾವಂತರಲ್ಲರೂ ನವಯುಗವು ತಮ್ಮ ಪತ್ರಿಕೆಯೇ ಎಂದೆಣಿಸಿ ಅದಕ್ಕೆ ಎಲ್ಲಾ ರೀತಿಯಿಂದಲೂ ಸಹಾಯಮಾಡುವರೆಂದು ನನಗೆ ಭರವಸೆಯಿದೆ. ಇದೇ ನವಯುಗದ ನವಯುಗಕ್ಕೆ ನನ್ನ ಸಂದೇಶ.

ಪಿ. ವಾಸುದೇವ ಉಪಾಧ್ಯಾಯ,

ವಕೀಲ್, ಕಾರ್ಕಳ.

ಮಹಾಶಯರೇ,

ಮಂಗಳೂರಿನ ವಾರಪತ್ರಿಕೆಯಾಗಿದ್ದ ನವಯುಗವನ್ನು ಉಡುಪಿಯಿಂದ ಹೊರಡಿಸಬೇಕೆಂದು ತಾವು ಸಂಕಲ್ಪಿಸಿರುವ ಈ ಸಂದರ್ಭದಲ್ಲಿ, ಹಲ ಮಹನೀಯರ ಶ್ರೇಯಃ ಕಾಂಕ್ಷೆಯೊಡನೆ ನನ್ನದನ್ನೂ ಮೇಳಕೂಡಿಸುವುದರಲ್ಲಿ ಅತ್ಯಂತ ಸಂತೋಷವಿದೆ. ತುಳುಭಾಷಾ ಭಾಷಿಗಳಲ್ಲಿ ಕನ್ನಡದ ಅಭಿಮಾನವನ್ನು ಉದ್ಬೋಧಿಸಿದ ಕೀರ್ತಿ ನಿಮ್ಮ ಪತ್ರಿಕೆಗೆ ಸೇರಿದುದಾಗಿದೆ. ದೇಶದ ಹಲವು ಸಮಸ್ಯೆಗಳಲ್ಲಿ ಸ್ವತಂತ್ರವಾದ ಅಭಿಪ್ರಾಯವನ್ನು ಪ್ರಕಟಿಸುವ ಧೈರ್ಯ ಕೆಲವೇ ಪತ್ರಿಕೆಗಳಿಗಿದೆ. ಅಂತಹ ಪತ್ರಿಕೆಗಳಲ್ಲಿ ನವಯುಗಕ್ಕೆ ಗಣನೀಯಸ್ಥಾನವಿದೆಯೆಂಬುದರಲ್ಲಿ ಸಂದೇಹವಿಲ್ಲ. ತಮ್ಮ ಪತ್ರಿಕೆಯು ಸ್ಥಿರಾಯುವನ್ನು ಹೊಂದಿ ಕನ್ನಡನಾಡಿನ ಮತ್ತು ಭಾರತವರ್ಷದ ಸೇವೆಯನ್ನು ಮಾಡಲೆಂದು ನನ್ನ ಹಾರೈಕೆ.

ಇಂತೀ ಸಹೋದರ,

ಕೆ. ಶಂಕರ ಭಟ್ಟ,

ಸಂಪಾದಕ, 'ರಾಷ್ಟ್ರಬಂಧು'

ತನ್ನ ನವನವಾಕಾಂಕ್ಷೆ, ವಿಚಾರಗಳನ್ನು ಸರ್ವಜನಕ್ಕೆ ವಿದಿತಪಡಿಸಬೇಕೆನ್ನುವ, ತಿದ್ದುವ, ಮೇಲೆತ್ತಬೇಕೆನ್ನುವ, ನವಯುಗಕೂಪ್ಪುವ ಅಭಿಮಾನದ ಮಹಾಕಾಂಕ್ಷ, ಅಭಿಲಾಷೆಗಳಿಂದ ಪ್ರೇರಿತವಾಗಿ, ಮಂಗಳೂರಿನಿಂದ ಹೊರಡುತ್ತಿದ್ದ "ನವಯುಗ"ವು ತನ್ನ ಇನಿದಾದ ಕೊಳಲುಲಿಯಿಂದ ಗೋವಳರ ಬಡತನದ ಒಣಬಾಳಿನಲ್ಲಿ, ಸುಧೆಸುರಿದ, ಕಡೆಗೂ ಅರ್ಜುನನಂತಹ ಮಹಾ ರಥಿಕನನ್ನು ತನ್ನ ಅನ್ಯತಮಾಣೆಯಿಂದ ಸರಿದಾರಿಗೆ ಹಚ್ಚಿದ ಇಂದಿಗೂ ಸರ್ವಲೋಕಪೂಜ್ಯನಾದ, ಮಹಾತ್ಮನಾದ, ಯುಗಪುರುಷನಾದ ಶ್ರೀಕೃಷ್ಣ ಭಗವಾನನ ಸತ್ಸನ್ನಿಧಾನದಲ್ಲಿ, ಇದೀಗ ವೇಧಿಸಲ್ಪಟ್ಟು, ನವಜೀವನವನ್ನು ತಾಳಿದುದು ಸಯುಕ್ತಿಕವೂ ಆವಶ್ಯಕವೂ ಆಗಿದೆ. ಶ್ರೀಕೃಷ್ಣದೇವನ ಮಹದನುಗ್ರಹದಿಂದ.

...ನ್ನ ದಿವ್ಯವಾಣಿಯ ಮೇಲೋಗರವನ್ನು ...ಧಿಕಾಧಿಕವಾಗಿ ಈ ನವಯುಗವು ಸಕ...ರಿಗೂ ಉಣಿಸಿ, ಸಮೃದ್ಧವೂ ಆಯು...ಷ್ಯವೂ ಆಗಿ ಬಾಳಲೆಂದು ಬಯಸುತ್ತೇನೆ.

ದೇವೇಂದ್ರ ಶೆಟ್ಟಿ, ಚೆಂಡಿಯೆ.

ಪ್ರಿಯ ನವಯುಗ ಸಂಪಾದಕ ಮಹಾಶಯರೇ,

ತಮ್ಮ 'ನವಯುಗ' ಪತ್ರಿಕೆಯ ಸ್ಥಾನವು ಇನ್ನು ಮುಂದಕ್ಕೆ ಇಲ್ಲಿಂದ ಉಡುಪಿಗೆ ಒಯ್ಯಲ್ಪಡುವುದೆಂದು ತಿಳಿದು ನನ್ನೊಳಗೆ ವಿಷಾದವೂ, ಸಂತೋಷವೂ ಏಕಕಾಲದಲ್ಲಿ ಉಂಟಾದುವು. ನಮ್ಮ ದಕ್ಷಿಣ ಕನ್ನಡಕ್ಕೆ ಕೇಂದ್ರಸ್ಥಾನವಾದ ಮಂಗಳೂರಿನ ಕನ್ನಡಿಗರಾದ ನಮ್ಮೆಲ್ಲರ ಸೇವೆಯನ್ನು ಸೌಮ್ಯವಾಗಿ ಇದು ...ನಕ ಮಾಡಿ, ಈಗ ನಮ್ಮೂರನ್ನು ಬಿಟ್ಟ ...ಲುವಲ್ಲಿ ನಮ್ಮೆಲ್ಲರಿಗೂ ವ್ಯಸನವಾಗುವುದೆಂದರೆ ಯಾರೂ ಅಲ್ಲಗಳೆಯರು. ನಮ್ಮಾ ಇಪ್ಪತ್ತನೇ ಶತಮಾನದ ತಮ್ಮ ನವಯುಗವು ಇಷ್ಟು ಕಾಲ ಇಲ್ಲಿದ್ದುಕೊಂಡು ನಮ್ಮೆಲ್ಲರ ಪ್ರೇಮಕ್ಕೆ ಒಳಪಟ್ಟು ನಮ್ಮಿಂದ ಈಗ ಸ್ವಲ್ಪ ದೂರ ಸರಿದರೆ ನಮಗೆ ಅಗತ್ಯವಾಗಿಯೂ ವ್ಯಸನವಾಗಬೇಕ್ಕೇ ಬೇಕು. ಆದರೆ ನವಯುಗದ ಚದರ ಸಂಪಾದಕರ ಉದ್ದೇಶವು ಏನಾಗಿರಬಹುದೆಂದು ನಾವು ಪರ್ಯಾಲೋಚಿಸಿ ಸ್ಥಳಬದಲಾವಣೆಯಿಂದ ನಮ್ಮ ಜಿಲ್ಲೆಗೆ ಹಿತಕರವಾಗುವುದೆಂಬುದನ್ನು ಮನವರಿಕೆ ನಾವಾದರೂ ಸಂತೋಷಹೊಂದಬೇಕಾಗಿಯದೆ ನಮ್ಮ ದಕ್ಷಿಣ ದೇಶದಲ್ಲಿ ದಾಕ್ಷಿಣ್ಯದಿಂದ ಶ್ರೀಕೃಷ್ಣ ಪರಮಾತ್ಮನು ಬಂದು ನೆಲಸಿದ ಊರೇ ಉಡುಪಿಯು. 'ಯತ್ಕರೋಷಿ ಯದಶ್ನಾಸಿ' ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿರುವಂತೆ ನವಯುಗದ ನವಚೈತನ್ಯವನ್ನು ಹುರುಪುಗೊಳಿಸುವುದಕ್ಕೆ ಭಗವಾನ್ ಕೃಷ್ಣನ ಪವಿತ್ರ ಸಾನ್ನಿಧ್ಯವೇ ಅನುಕೂಲವಾದುದೆಂದರೆ ತಪ್ಪಾಗನು. ಮತತ್ರಯಗಳೊಳಗೊಂದಾದ ಮಧ್ವಮತಸ್ಥಾಪನಾಚಾರ್ಯರ ಜನ್ಮಸ್ಥಾನವಾಗಿ ಅಷ್ಟ ಮಠಾಧಿ ಕೃಷ್ಣಾಲಯಗಳಿಂದ ಕಂಗೊಳಿಸುತ್ತಿರುವ ಉಡುಪಿ ಕ್ಷೇತ್ರದಲ್ಲಿ ನವಯುಗದ ನವಹುರುಪವನ್ನುಂಟುಮಾಡುವ ಬಹು ಭಾರವು ಶ್ರೀಕೃಷ್ಣನದಾದರೂ, ನವಯುಗದ ಅನುಭವಭರಿತವಾದ ಸಹಾಯ ಸಹಕಾರಗಳಿಂದ ಅಲ್ಲಿಯ ಹೊಸ ಮುನಿಸಿಪಾಲಿಟಿಯು ರೂಪಹೊಂದಿ ಚೆನ್ನಾಗಿಯೇ ನಡೆದು ಬಂದು ಪಟ್ಟಣದ ಉನ್ನತಿಗೆ ಅನುಕೂಲವಾದೀತೆಂದು ನಾನು ನಂಬುತ್ತೇನೆ. ಜಾತಿಭೇದವನ್ನರಿಯದ ಭಕ್ತ ಕನಕನನ್ನು ಅನುಗ್ರಹಿಸಿದ ಆ ಸ್ವಾಮಿಯ ಆಶೀರ್ವಾದವನ್ನು ಈ ಸುಸಂದರ್ಭದಲ್ಲಿ ತಮ್ಮ ಪತ್ರಿಕೆಯು ಹೊಂದಿಕೊಂಡು ತಾನಾಗಿಯೇ ಆಯ್ದುಕೊಂಡ ಹೊಸ ಸ್ಥಳದ ಮೇಲ್ಮೆಯನ್ನು ದೃಷ್ಟಿಪಥದಲ್ಲಿಟ್ಟು ನಮ್ಮಾ ಕನ್ನಡ ಮಾತೆಯು ಆಕೆಯ ಪುತ್ರ ಪುತ್ರಿಯರ ಸೇವೆಯಲ್ಲಿ ಹಿಂದಿನಂತೆ ಮುಂದಕ್ಕೂ ನಿರತ ನೆರವಾಗಿ ನವಯುಗವು ನವಚೈತನ್ಯದಿಂದೊಡಗೂಡಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಚಿರಕಾಲ ನವಹೊಳಪಿನಿಂದ ಬಾಳಲೆಂದು ಪರಮಾತ್ಮನನ್ನು ಪ್ರಾರ್ಥಿಸಿ ಈ ಸಂದೇಶವನ್ನು ತಮ್ಮ ಪತ್ರಕ್ಕೆ ಕಳುಹಿಸಿರುವೆನು.

ತಮ್ಮ ಸ್ನೇಹ ಭಿಮಾನಿ,
ಜೋರ್ಜ ಸರ್ಬರ್ಟ್, ಮಂಗಳೂರು.

“ಹಿಂದೂ ದೇಶದ ಜನಸಂಖ್ಯೆಯಲ್ಲಿ ಅಧಿಕಾಂಶದವರು ಹಳ್ಳಿಯ ಬಡ ಕೃಷಿಕರು. ಆದುದರಿಂದ ನವಯುಗವು ತನ್ನ ನವಜೀವನದಲ್ಲಿ ಕೇವಲ ಹಳ್ಳಿಯ ಕೃಷಿಕರ ಉದ್ಧಾರಕ್ಕೆ ಯತ್ನಿಸುವ ಮೂಲಕ ದೇಶಸೇವೆಯನ್ನು ಮಾಡಲೆಂದು ಹಾರೈಸುತ್ತೇನೆ. ಹಳ್ಳಿಯ ಹಿತಸಾಧನೆಯೇ ನವಯುಗದ ಧ್ಯೇಯವಾಗಿರಲಿ!”

ಹಲ್ಸನಾಡ್ ಸೂರಪ್ಪಯ್ಯ,
ಶಂಕರನಾರಾಯಣ.

ಪ್ರಿಯ ಸಂಪಾದಕ ಮಹಾಶಯರೇ,

ನವಯುಗವು ಕರ್ನಾಟಕ ಮಾತೆಯ ಸೇವೆಯನ್ನು ಮಾಡಲಾರಂಭಿಸಿ ಅನೇಕ ವರ್ಷಗಳಾದವು; ಅದರ ಧ್ಯೇಯವೂ ಉದ್ದೇಶವೂ ದೇಶಕ್ಕೂ, ನಾಡಿಗೂ, ಸಮಾಜಕ್ಕೂ ಹಿತವನ್ನೇ ಬಯಸುವ ಸಿದ್ಧಾಂತವನ್ನೊಳಗೊಂಡು ಹೊಸ ಹುರುಪನ್ನೂ ಹೊಸ ತತ್ವವನ್ನೂ ಸಾರುತ್ತಲಿವೆ. ಇನ್ನೂ ನವಚೈತನ್ಯವೂ, ನವಉತ್ತೇಜನವೂ, ನವಪ್ರೋತ್ಸಾಹವೂ ಬೆಳೆದು ಬಂದು ನವಯುಗವು ಕನ್ನಡನಾಡಿನಲ್ಲಿ ನವಯುಗವನ್ನೇ ಉಂಟುಮಾಡಿ ಕರ್ನಾಟಕಮಾತೆಯ ಹೆಸರನ್ನು ಬೆಳಗಿ ಸರ್ವಜನರ ಆದರಕ್ಕೆ ಪಾತ್ರವಾಗಲೆಂದು ಕೋರುತ್ತೇವೆ.

ಬಿ. ವಿ. ರಮಣ, ಬಿ. ಎ. ಎಲ್. ಟಿ.
ಪುತ್ತೂರು

“ನವಯುಗವು” ಮಂಗಳೂರನ್ನು ಬಿಟ್ಟುದರಿಂದ ಮಂಗಳೂರಿನ ಪತ್ರಿಕಾ ಪ್ರಪಂಚಕ್ಕೇನೆ ಒಂದು ನಷ್ಟವಾದಂತಾಗಿದೆ. ಮಂಗಳೂರಿನ ನಷ್ಟವು ಉಡುಪಿಯ ಆದಾಯವಾಗಿ ಪರಿಣಮಿಸಿದೆ. 'ನವಯುಗವು' ತನ್ನ ನವಕಾರ್ಯಕ್ಷೇತ್ರದಲ್ಲಿ ನವಚೇತನದಿಂದ ಜನತಾಸೇವೆಯನ್ನು ಮಾಡಿ 'ಜನರಲ್ಲಿ ನವಹುರುಪನ್ನೂ ನವದೇಶವಾತ್ಸಲ್ಯವನ್ನೂ ಉಂಟುಮಾಡಲೆಂದೂ ಈ ಮಹತ್ಕಾರ್ಯಕ್ಕೆ ಶ್ರೀಕೃಷ್ಣಪರಮಾತ್ಮನು ಸಂಪೂರ್ಣ ಅನುಗ್ರಹವನ್ನು ಕರುಣಿಸಲೆಂದೂ ಬಯಸುತ್ತೇನೆ.

ಕೆ. ಕೃಷ್ಣರಾವ್, ಬಿ. ಎ.,
ಉಪಸಂಪಾದಕ, ರಾಷ್ಟ್ರಬಂಧು

'ಈ ಹೊಸಕೇಂದ್ರದಲ್ಲಿ ನಿಮ್ಮ ಪತ್ರಿಕೆಯು ಮೊದಲಿಗಿಂತಲೂ ಶ್ರೇಷ್ಠವಾಗಿ ಹೊರಟು ಜನಸೇವೆಯನ್ನು ಮಾಡಲೆಂದು ನಾನು ಹಾರೈಸುವೆನು.

ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳನ್ನು ಚೆನ್ನಾಗಿ ಜನರ ಮುಂದಿಟ್ಟು ಸ್ವಾತಂತ್ರ್ಯದ ಪಥದಲ್ಲಿ ಅವರನ್ನು ಹೆಚ್ಚು ಪ್ರವೃತ್ತಮಾಡಲು ನಿಮ್ಮ ಪತ್ರಿಕೆಯು ಸಹಾಯವಾಗುವುದೆಂದು ನಾನು ನಂಬಿದ್ದೇನೆ.'

ರಂಗನಾಥ ದಿವಾಕರ,
ಕಾರ್ಯದರ್ಶಿ,
ಕ. ಪ್ರಾ. ಕಾಂಗ್ರೆಸ್ ಕಮಿಟಿ ಧಾರವಾಡ.

ಪ್ರಿಯ ಸಂಪಾದಕ ಮಹಾಶಯ,

ಈ ವಾರ ಮೊದಲುಗೊಂಡು ನವಯುಗವು ಉಡುಪಿಯಿಂದ ಪ್ರಕಟವಾಗುವದೆಂದು ತಮ್ಮ ಪತ್ರದಿಂದ ತಿಳಿದು ಅತೀವ ಆನಂದವಾಯಿತು. ತಾನು ಜನನಕ್ಕೆ ಬಂದ ಮಂಗಳೂರಿನಲ್ಲಿ ಬಾಲ್ಯವನ್ನು ಕಳೆದಾದ ಮೇಲೆ, ಭವಿಷ್ಯಜೀವನವನ್ನು ಶ್ರದ್ಧಾಳುಗಳ ದೊಡ್ಡ ಕೇಂದ್ರವೆನಿಸುವ ಉಡುಪಿಯಂಥ ಪ್ರಸಿದ್ಧ ಊರುಗಳಲ್ಲಿ ಕಳೆಯುವದರಿಂದ ತನಗೆ ಜನ್ಮವನ್ನು ಕೊಟ್ಟು ಸಾಕಿ ಸಲಹಿದವರ ಧ್ಯೇಯೋದ್ದೇಶಗಳನ್ನು ನವಯುಗವು ಅತ್ಯಂತ ಶೀಘ್ರದಲ್ಲಿಯೇ ಸಾಧಿಸಬಹುದೆಂಬ ವಿಚಾರವು ನಮ್ಮಲ್ಲಿ ಕೆಲವರಿಗೆ ಮೊದಲಿನಿಂದಲೂ ಇತ್ತು. ಧಾರ್ಮಿಕ, ಸಾಮಾಜಿಕ, ರಾಜಕೀಯ ಮೊದಲಾದ ವಿಷಯಗಳಲ್ಲಿ ನವಯುಗವು ಎಂಥ ಪ್ರಕೃತಿಪರಧೋರಣೆಯನ್ನಿಟ್ಟು ಕೊಂಡಿದೆ, ಆ ಧೋರಣೆಗೆ ತಕ್ಕಂತೆ ಹೇಗೆ ಕೆಲಸಮಾಡುತ್ತ ಬಂದಿದೆ ಎಂಬೀ ಸಂಗತಿಗಳು ಜನಜನಿತವಾಗಿರುವುವು. ನಾಡಿನ ನವಯುವಕರ ಮನೋಭಾವನೆ ಆಶೆ ಪ್ರತ್ಯಾಶೆ, ವೃತ್ತಿ ಪ್ರವೃತ್ತಿ, ಪ್ರಯಾಸ ಪ್ರಯತ್ನಗಳ ಪ್ರತಿಚಿತ್ರವು ನವಯುಗವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಉಡುಪಿಯಲ್ಲಿದ್ದುಕೊಂಡು ಸಂಪ್ರದಾಯವಾದಿಗಳ ದುರ್ಭೇದ್ಯ ಕೋಟೆಯನ್ನು ಕೂಡ ಲೇಖನಿಯ ಶರಸನ್ನಾಹದಿಂದ ಮುರಿದು ಅವರ ಪೋಪಲೀಲೆಗಳನ್ನು ಬಯಲಿಗೆಳೆಯುತ್ತ ಜನತೆಯಲ್ಲಿ ವಿಚಾರಕ್ರಾಂತಿಯನ್ನುಂಟುಮಾಡಿ ಸಮಾಜವನ್ನು ಸರ್ವತೋಮುಖವಾದ ಉನ್ನತಿ ಅಭಿವೃದ್ಧಿಗಳ ಅತ್ಯುಚ್ಚ ಶಿಖರದ ಕಡೆಗೆ ಮುನ್ನಡೆಯಿಸಿಕೊಂಡು ಹೋಗಬೇಕೆಂಬ ನವಯುಗದ ಹಂಬಲ ಸಾಹಸ ಉದ್ಯಮಗಳು ನಿಜವಾಗಿ ಅನುಕರಣೀಯವೂ ಪ್ರಶಂಸನೀಯವೂ ಚಿರಸ್ಮರಣೀಯವೂ ಆಗಿರುವುವು. ಹೀಗಿರುವದರಿಂದ ನವಯುಗದ ನವಜೀವನವು ಸಂಪೂರ್ಣ ಸಫಲವಾಗಲೆಂದು ನಾವೆಲ್ಲರೂ ಬಯಸುತ್ತಿರುವೆವು.

ಕಟಪಾಡಿ ಶ್ರೀನಿವಾಸ ಶೆಟ್ಟಿ,
ಕಾರ್ಕಳ.

ದೇವರು, ಧರ್ಮ, ನೀತಿ ಮತ್ತು ನ್ಯಾಯದ ಹೆಸರಿನಲ್ಲಿ ಆಗುವ ಅತ್ಯಾಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಬಯಲಿಗೆ ತಂದು, ಈಗಾಗಲೇ “ನವಯುಗ”ವು ಅಖಿಳ ಕರ್ನಾಟಕದಲ್ಲಿ ಅದ್ವಿತೀಯವಾದ ಪ್ರಖ್ಯಾತಿಯನ್ನು ಹೊಂದಿದೆ. ಪವಿತ್ರ ಕ್ಷೇತ್ರವೆಂದು ಎಣಿಸಲ್ಪಟ್ಟ ಉಡುಪಿಯಲ್ಲಿ ಇಂಥಾ ಸೇವೆಗೆ ಇರುವಷ್ಟು ಆಸ್ಪದವು ಕರ್ನಾಟಕದಲ್ಲಿ ಬೇರೆ ಎಲ್ಲಿಯೂ ಇಲ್ಲವೆಂದು ತೋರುತ್ತದೆ. ಜನತೆಯ ಸಹಜ ಅಜ್ಞಾನ, ಅಂಧಶ್ರದ್ಧೆ ಮತ್ತು ಅಸ್ಪೃಶ್ಯದಿಂದ ಎಚ್ಚರಿಸುವಂತೆ ಮಾಡಿದರೆ, “ನವಯುಗ”ವು ತನ್ನ ಕೀರ್ತಿಯನ್ನು ಮಾತ್ರ ವೃದ್ಧಿಗೊಳಿಸುವುದಲ್ಲದೆ, ಆರ್ಥಿಕ ವಿಚಾರದಲ್ಲಿಯೂ ವಿಶೇಷವಾದ ಜಯವನ್ನು ಹೊಂದುವದು ಎಂದು ಹೇಳುವುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ.

ಬಿ. ನಾರಾಯಣ ರಾವ್
ಸಂಪಾದಕ Financia Expertus,
ಉಡುಪಿ.

ನವೀನ ರಂಗದಲ್ಲಿಳಿದ “ನವಯುಗ”ವು ನವಭಾರತದ ನಿರ್ಮಾಣದಲ್ಲಿ ನವೋತ್ಸಾಹದಿಂದ ನೆರವಾಗುವುದೆಂದು ನಂಬಿದ್ದೇನೆ.

ಹನುಮಂತರಾವ್
ಮಾಂಜರೇಕರ, ಬಿ. ಎ.
ಸುಂಕೇರಿ.

ತಮ್ಮ ಪತ್ರ ಮುಟ್ಟಿತು. 'ನವಯುಗದ ಸಂದೇಶವು ಉಡುಪಿಯಲ್ಲಿ ಇನ್ನು ಮೇಲಿಂದ ಕೇಳಿ ಬರುವದೆಂಬದನ್ನು ತಿಳಿದು ಸಂತೋಷವಾಯಿತು. ತನ್ನ ಧ್ಯೇಯಗಳನ್ನು ಸಾಧಿಸಿ ಕನ್ನಡ ಜನತೆಯ ಸೇವೆಯನ್ನು ಪರಿಪೂರ್ಣವಾಗಿಸುವ ಶಕ್ತಿಯನ್ನು 'ನವಯುಗ'ವು ಪಡೆಯಲೆಂದು ನಾನು ಮನಃಪೂರ್ವಕವಾಗಿ ಹಾರೈಸುತ್ತೇನೆ.

ವಿ. ಕೃ. ಗೋಕಾಕ್,
ಪ್ರೊಫೆಸರ್, ಫರ್ಗ್ಯೂಸನ ಕಾಲೇಜ್ ಪೂನಾ

ಸಂಪಾದಕ ಮಹಾಶಯರಿಗೆ

ನವಯುಗವು ಮಂಗಳೂರಿನಿಂದ ಹೊರಡುತ್ತಿದ್ದಾಗ ಮಾಡುತ್ತಿದ್ದ ಜನತಾಸೇವೆಯು ಸ್ತುತ್ಯವಾದುದೇ. ಅಂತೆಯೇ ಮುಂದಕ್ಕೂ ಉಡುಪಿಯಲ್ಲಿ ಪ್ರಕಟವಾಗಿ ಜನತಾಸೇವೆಯನ್ನು ಇನ್ನಷ್ಟು ಹೆಚ್ಚಾಗಿ ಕೈಕೊಂಡು ಜಿಲ್ಲೆಯ ಆದರ್ಶಪತ್ರಿಕೆಯಾಗಿ, ಸರ್ವಾದರಣೀಯವಾಗಿ ಚಿರಕಾಲ ಬಾಳಲೆಂದು ಹಾರೈಕೆ.

ಸಂಪಾದಕರು,
'ಬಡವರ ಬಂಧು' ಮತ್ತು 'ವಿನೋದಭಾರತ,'
ಮಂಗಳೂರು.

ಓಂ ತತ್ಸತ್

“ಹೃದಯ ಸಾಂತ್ವನ”

ಎಂದು ಒಂದು ಕತೆಗೆ ಪ್ರಾರಂಭಗೆಯ್ಯುವ ಮುನ್ನವೆ, ತಮ್ಮ ನವಯುಗ ಕಾರ್ಯಾಲಯದ ಮುಚ್ಚೋಲೆಯೊಂದು ಕೈಸಾರ್ದುದು; ತಂದು ನೋಡಿದೆ; ಅರಿಯದ ನೋಡಿದ; ದೊಡ್ಡವರು ಅರುಹಬೇಕಾದುದು ಸಂದೇಶ. ಬಡವರು ಬರೆಯಬೇಕಾದುದು ಒಡಲೊಡೆಯನಲ್ಲಿ ಬೇಡಿಕೆ. ಭಾಗ್ಯರಿಗೂ ಬಡವರಿಗೂ ಭೇದವಿಷ್ಟೇ ಎಂದು ಬಗೆದೆ. ಮುಟ್ಟಮೊದಲು ನವಯುಗವು ನಯನಪಥವನ್ನೈದಿದಾಗ, ಜಾತೀಯತಾದೃಷ್ಟಿಯು ಜತೆಗೂಡ ನನಗೆ ಆಳವಾದ ಆನಂದವಾಗಿತ್ತು. ಇದೀಗ ಜಾತೀಯ ದೃಷ್ಟಿಯು ಜರಿವಿಟ್ಟ ಸಮಯದಲ್ಲಿಯೂ ಕೂಡ ಸಮಗ್ರ ಸಂತೋಷವಾಗಿದೆ. ನವಯುಗವು ನವಸಹನ ಸಂದೇಶಗಳನ್ನು ನವಯುಗದಲ್ಲಿ ಉತ್ತರೋತ್ತರ ನಯನಮನೋಹರವಾಗಿ ವಿಸ್ತರಿಸಲಿ ಎಂದು ನನ್ನೊಡೆಯನಲ್ಲಿ ಬೇಡಿಕೆ. ಮತ್ತೇನೆನ್ನಲಿ!

ಸ. ಪ. ಗಾಂವಕಾರ, ಬಿ. ಎ.
ಡಿ. ಸ್ಕೂಲ್ ಬೋರ್ಡು ಎಡ್ಮಿನಿಸ್ಟ್ರೇಟಿವ್ ಆಫೀಸರ್, ಹುಬ್ಬಳ್ಳಿ.

ನವಯುಗಕ್ಕೆ ಸಂದೇಶ

ಫಲಿಮಾರು, ತಾ. 27-8-1936,

ರಜತಪೀಠವಾದ ನಮ್ಮ ಉಡುಪಿಗೆ ವಾರಪತ್ರಿಕೆಯೊಂದರ ಆವಶ್ಯಕತೆಯು ಹಿಂದಿನಿಂದಲೂ ಇದ್ದಿತು. ಈ ಆವಶ್ಯಕತೆಯನ್ನು ಮಂಗಳೂರಿನ ನವಯುಗವು ಪೂರೈಸಿಕೊಟ್ಟದ್ದಕ್ಕಾಗಿ ಉಡುಪಿಯ ಜನತೆಯ ಸಂತೋಷದೊಂದಿಗೆ ನಮ್ಮ ಆನಂದವನ್ನೂ ವ್ಯಕ್ತಪಡಿಸುತ್ತೇವೆ.

ನವಯುಗವು ವಿಚಾರಕ್ರಾಂತಿಯನ್ನುಂಟುಮಾಡುವ ನಿರ್ಭೀತ ಅಭಿಪ್ರಾಯವನ್ನು ಪ್ರಕಟಿಸುವ ಉಜ್ವಲ ವಾರಪತ್ರಿಕೆಯೆಂದು ಈಗಾಗಲೇ ಪ್ರಸಿದ್ಧವಾಗಿದೆ. ಮಧ್ವಮತದ ಮೂಲಸ್ಥಾನವಾದ ಉಡುಪಿಯಲ್ಲಿ ಈ ನವಯುಗದ ಪ್ರಾರಂಭದಿಂದ ನವಯುಗವೇ ಪ್ರಾರಂಭವಾದಂತಾಗುವುದು. "ನವಯುಗವು ನಮ್ಮದಾಗಲಿ, ನಮ್ಮದು ನವಯುಗವಾಗಲಿ!" ಹೀಗಾಗಿ ನಾಡಿನ ಸೇವೆಯಾಗಲಿ.

ಶ್ರೀ ರಘುಮಾನ್ಯತೀರ್ಥ ಶ್ರೀಪಾದಂಗಳವರು,
ಫಲಿಮಾರು ಮಠ.

'ನವಯುಗ'ಕ್ಕೆ ಸಂದೇಶ

ಒಂದೇ ಸ್ಥಳದಲ್ಲಿ ಮೊಳೆತ ಹಲವು ಸಸಿಗಳಲ್ಲಿ ಕೆಲವನ್ನಾದರೂ ಕಿತ್ತು ಮತ್ತೊಂದೆಡೆಯಲ್ಲಿ ನೆಡುವುದರಿಂದ ಅವು ಹುಲುಸಾಗಿ ಬೆಳೆಯಲು ಅನುಕೂಲವಾಗುವುದು. ಹಾಗೆಯೇ ಮಂಗಳೂರಿನಂತಹ ಒಂದೇ ಕ್ಷೇತ್ರದಲ್ಲಿ ಆರೇಳು ವಾರಪತ್ರಿಕೆಗಳು ಪ್ರಕಟವಾಗುವುದಕ್ಕಿಂತ ಬೇರೆ ಬೇರೆ ಪ್ರಸಿದ್ಧ ಸ್ಥಳಗಳನ್ನು ಸೇರಿ ಕೆಲಸಮಾಡುವುದು ಯುಕ್ತವೂ ಪರಿಣಾಮಕಾರಿಯೂ ಆಗಿದೆ. ಸದ್ಯ ಮಂಗಳೂರಿನ 'ನವಯುಗ'ವು ಉಡುಪಿಗೆ ಬರಲಿರುವ ವಿಷಯವು ಸಂತೋಷಕರವೂ ಹಿತಕರವೂ ಆಗಿದೆ. ಈ ಹೊಸ ಕ್ಷೇತ್ರದಲ್ಲಿ 'ನವಯುಗ'ವು ನಿಷ್ಪಕ್ಷ ದೃಷ್ಟಿಯಿಂದ ಕಾರ್ಯಮಾಡಿ ತನ್ಮೂಲಕ ಜನತಾಸೇವೆಗೈದು ಜನಾದರಣೀಯವಾಗಲೆಂಬುದೆ ನನ್ನ ಸಂದೇಶವಾಗಿದೆ.

ಆರೂರು ಲಕ್ಷ್ಮೀನಾರಾಯಣ ರಾವ್
ಎಡ್ವೊಕೇಟ್, ಉಡುಪಿ

'ನವಯುಗ'ವು ಉಡುಪಿಗೆ ಬರುವುದೆಂಬುದನ್ನು ಕೇಳಿ ಅತ್ಯಾನಂದ ಪಡುವವರಲ್ಲಿ ನಾನೊಬ್ಬನಾಗಿದ್ದೇನೆ. ಈ ಪತ್ರಿಕೆಯು ಯಾವ ಸಂಕುಚಿತತೆಯೂ ಇಲ್ಲದೆ ಉಡುಪಿಯ ಜಿಲ್ಲೆಯ ಕನ್ನಡನಾಡಿನ ಸೇವೆಯನ್ನು ಮಾಡಿ ಸಕಲ ಜನಪ್ರಿಯವಾಗಿ ಬಾಳಲೆಂದು ಹಾರೈಸುತ್ತೇನೆ.

ಎಂ. ವಿಟ್ಠಲ ಕಾಮತ್,
ವಕೀಲ್, ಉಡುಪಿ.

'ಸಂದೇಶ'ಕಾರರ ಸಂದೇಶ

ಉಡುಪಿಯಲ್ಲಿ ವಾರಪತ್ರಿಕೆಯಿದ್ದಿಲ್ಲವೆಂಬ ಕೊರತೆಯೊಂದನ್ನು 'ನವಯುಗ' ಸಂಪಾದಕರು ನೀಗಿಸಿದಂತಾಯಿತು. ಅದೂ, ಉಡುಪಿ ಕ್ಷೇತ್ರವು ತನ್ನ ಜೀವಮಾನದಲ್ಲೇ ಅಪೂರ್ವವಾಗಿ ಇಂದು ಮುನ್ಸಿಪಾಲಿಟಿಯ ಮಡಿಲೊಳಗೆ ಆತ್ಮಾರ್ಪಣೆಯನ್ನು ಮಾಡಲು ಸಿದ್ಧವಾಗಿರುವ ಈ ಸಂದರ್ಭದಲ್ಲೇ ನವಯುಗದಂತಹ ನಿದಾಕ್ಷಿಣ್ಯ ವಾಚಾಲನೊಬ್ಬನ ಆಗಮನವು ಮುನ್ಸಿಪಲ್ ಪ್ರಜೆಗಳಿಗೂ ಪ್ರಯೋಜನಕಾರಿಯಾಗದಿರದು.

ಇನ್ನು 'ನವಯುಗ'ದ ಜೀವನದಲ್ಲೂ ಇದೊಂದು ಪ್ರಗತಿಯಾಗಿದೆ. ದೇಶ-ಕಾಲ-ಸಹವಾಸಗಳ ಬದಲಾವಣೆಯಿಂದ ಮನುಷ್ಯನ ರೀತಿ-ನೀತಿಗಳು ಬದಲಾಗುವಂತೆ ಪತ್ರಿಕೆಗಳಲ್ಲಾದರೂ ಆಗಬಹುದು. ತೀಕ್ಷ್ಣವಾದ ಪ್ರಗತಿಯು, ಪತ್ರಿಕೆಗಳು ಬಳಸುವ ನೂರಾರು ಲೌಕಿಕ ವಿಷಯಗಳಿಗೆ ಒತ್ತುವಂತೆ ಆರ್ಷೇಯ ಧರ್ಮತತ್ವಗಳಿಗೆ ಹತ್ತುವುದಿಲ್ಲವಾದುದರಿಂದ ನವಯುಗವು ತನ್ನೀ ಪ್ರವಾಸ ಇಂತಹ ಕ್ಷೇತ್ರವಾಸ, 'ಸಂದೇಶ'ದಂತಹವುಗಳ ಸಹವಾಸಗಳಿಂದಾಗಿ ಮುಂದೆ ಆರ್ಷೇಯ ಧರ್ಮಸಂಪ್ರದಾಯ ವಿಚಾರಗಳಲ್ಲಿ ಉದಾರಭಾವವನ್ನು ವಹಿಸಬಹುದೆಂದು ನಮ್ಮ ನಿರೀಕ್ಷೆ.

ಅಂತೂ ನಿದಾಕ್ಷಿಣ್ಯವಾದ ಧಾರ್ಮಿಕ ಟೀಕೆಯಲ್ಲಿ ನವಯುಗವು ಖ್ಯಾತಿಗೊಂಡಿದ್ದರೂ ಇನ್ನು ಮುಂದೆ ಸ್ವಲ್ಪ ದಯಾ-ದಾಕ್ಷಿಣ್ಯವನ್ನು ವಹಿಸಿ ಸರ್ವಾದರಣೀಯವಾಗಿ ಬಾಳಲೆಂಬುದೇ ನಮ್ಮ 'ಸಂದೇಶ'

ಮುದ್ರಾಡಿ ಜನಾರ್ದನಾಚಾರ್ಯ,
ಸಂಪಾದಕ, ಶ್ರೀಕೃಷ್ಣ ಸಂದೇಶ.

ನಮಸ್ಕಾರ, ತಮ್ಮ ಆಹ್ವಾನಪತ್ರಿಕೆಗಾಗಿ ಕೃತಜ್ಞತೆಗಳು. ತಮ್ಮ ನವಯುಗ ಪತ್ರಿಕೆ ಕನ್ನಡ ಪತ್ರಿಕೆಗಳ ಸಾಲಿನಲ್ಲಿ ಉತ್ತಮ ಪಂಕ್ತಿಗೆ ಸೇರಲೆಂದು ಹಾರೈಸುತ್ತೇನೆ. ಕನ್ನಡನಾಡು ಒಂದಾಗಿ, ಕನ್ನಡನುಡಿ ಕನ್ನಡಿಗರ ಬಾಳಿಕೆಯ ಮೇಲ್ಮೆಗೂ ಚೆಲುವಿಗೂ ಬೆಳಕು ಬೀರುವಂತೆ ಮೊದಲು ಅವನ್ನು ಕೊಚ್ಚಿಹೋಗದಂತೆ ಉಳಿಸಿ, ಬೆಳಸಿ, ಹೆಮ್ಮೆಗೊಳಿಸುವುದು ನಮ್ಮೆಲ್ಲರ ಹೊತ್ತ ಸಾಲ. ತಾವು ಈ ಕಾರ್ಯದಲ್ಲಿ ಯಶಸ್ವಿಗಳಾಗಿ ಎಂದು ಬೇಡುತ್ತೇನೆ.

ತಮ್ಮ ಅಡಿಯಾಳು,
ಬಿ. ಎಂ. ಶ್ರೀಕಂಠಯ್ಯ,
ಬಸವನಗುಡಿ, ಬೆಂಗಳೂರು.

ತಮ್ಮ ಉಡುಪಿಯ ಸುಖದ ನೆನಪುಗಳು ನನ್ನೆದೆಯಲ್ಲಿ ಮಿಡಿಯುತ್ತಿವೆ.

ಶ್ರೀ.

ರಾ. ಎ. ಬಿ. ಶೆಟ್ಟಿ, ಎಮ್. ಎಲ್. ಸಿ. ಯವರು

ಇವರು 1921ರಲ್ಲಿ 'ನವಯುಗ'ವನ್ನು ಸ್ಥಾಪಿಸಿ, ಅದರ ಕಷ್ಟ-ನಷ್ಟಗಳನ್ನು ವಹಿಸಿ 15 ವರ್ಷಗಳ ವರೆಗೆ ಅದನ್ನು ನಡೆಸಿಕೊಂಡು ಬಂದು, ಆ ಮೂಲಕ ನಿಃಸ್ವಾರ್ಥ ಜನಸೇವೆ ಮಾಡಿರುವರು. 1932ರ ವರೆಗೆ ನವಯುಗದ ಸಂಪಾದಕರಾಗಿದ್ದು ತಾನು ಡಿಸ್ಟ್ರಿಕ್ಟ್ ಬೋರ್ಡು ಪ್ರಸಿಡೆಂಟರಾದ ಮೇಲೆ, ತನ್ನ ಸಂಪಾದಕತನವನ್ನು ಆ ವರೆಗೆ ಉಪಸಂಪಾದಕರಾಗಿದ್ದ ಶ್ರೀ. ಕೆ. ಕೆ. ಶೆಟ್ರಿಗೆ ಬಿಟ್ಟುಕೊಟ್ಟರು. ಆ ಮೇಲೆ, ಈಗ ನವಯುಗವನ್ನು ನಡೆಸುವ ಸರ್ವ ಜವಾಬ್ದಾರಿಯನ್ನೂ ಉದಾರ ಬುದ್ಧಿಯಿಂದ ಶ್ರೀ. ಕೆ. ಕೆ. ಶೆಟ್ರಿಗೇನೇ ವಹಿಸಿಕೊಟ್ಟಿರುವರು. ನವಯುಗದ ಪುರೋವೃದ್ಧಿಯಲ್ಲಿ ಯಥಾಪ್ರಕಾರವಾದ ಆಸಕ್ತಿಯುಳ್ಳವರಾಗಿ ಸದಾ ಅದರ ಹಿತಚಿಂತಕರಾಗಿರುವರು. ಶ್ರೀಯುತರು ಮದ್ರಾಸಿನಿಂದ ಬರೆದು ಕಳುಹಿಸಿದ ಸಂದೇಶವನ್ನು ಕೆಳಗೆ ಕೊಡಲಾಗಿದೆ.

ಕೊಸ್ಮೊಪೊಲಿಟನ್ ಕ್ಲಬ್, ಮದ್ರಾಸು
ತಾ. 20—8—36.

ಸಪ್ಟಂಬರ ತಾ. 3ಕ್ಕೆ ನಡೆಯಲಿರುವ, ನವಯುಗವು ಉಡುಪಿಯಲ್ಲಿ ಪ್ರಕಟವಾಗುವ ಸಮಾರಂಭದಲ್ಲಿ ಭಾಗಿಯಾಗುವ ಸಂತೋಷವನ್ನು ನಾನು ಕಳಕೊಳ್ಳಬೇಕಾದುದಕ್ಕಾಗಿ ವಿಷಾದಿಸುತ್ತೇನೆ. ನಿಮ್ಮ ಈ ಹೊಸ ಸಾಹಸವು ಜಯಶೀಲವಾಗಲೆಂದು ನಾನು ಅದೆಷ್ಟು ಹೃತ್ಪೂರ್ವಕವಾಗಿ ಹಾರೈಸುವೆನೆಂಬುದನ್ನು ಹೇಳಬೇಕಾಗಿಲ್ಲ. ತನ್ನ ಹೆಸರಿಗನುಸಾರವಾಗಿ ನವಯುಗ ರಚನವಾದಿಯಾಗಿರುವ ನವಯುಗದ ಧ್ವಜವನ್ನು ನೀವು ಯಥಾಪ್ರಕಾರ ಎತ್ತಿಹಿಡಿಯುವಿರೆಂಬ ಭರವಸೆಯು ನನಗಿದೆ. ನವಯುಗವು ತನ್ನ ಅಭಿಪ್ರಾಯಗಳಲ್ಲಿ ಸದಾ ಪ್ರಗತಿಪರವಾಗಿರುವುದು ಮಾತ್ರವಲ್ಲದೆ, ರಾಜಕೀಯ ಸಮಾಜಸುಧಾರಣೆಯೇ ಮೊದಲಾದ ಪ್ರಕೃತದ ಪ್ರಾಮುಖ್ಯ ವಿಷಯಗಳ ಕುರಿತು ಸಾಹಸಪರ ಭಾವನೆಗಳನ್ನು ಪ್ರಚಾರಮಾಡಿರುವುದು. ಅಧಿಕಾರಿಗಳನ್ನು ನಿರ್ಭಯವಾಗಿ ಖಂಡಿಸಿರುವುದು. ಪ್ರಭಾವಶಾಲಿಗಳನ್ನು ಕೆಣಕಿ ಅವರ ಸಿಟ್ಟಿಗೀಡಾಗಿರುವುದು. ಅದು ಯಾವ ಭೀತಿಕಟಾಕ್ಷಗಳಿಗೂ ಒಳಗಾಗದೆ ತನ್ನ ಕರ್ತವ್ಯವನ್ನು ನೆರವೇರಿಸಿ ಸಾರ್ವಜನಿಕ ಪತ್ರಿಕೆಯಾಗಿ ದೀರ್ಘಕಾಲ ಬಾಳಿ ಬೆಳೆಯಲೆಂದೇ ನನ್ನ ಯಥಾರ್ಥವಾದ ಅಪೇಕ್ಷೆ ಮತ್ತು ಹಾರೈಕೆ.

ಎ. ಬಿ. ಶೆಟ್ಟಿ.

...ಷಾ ಸೇವೆಯೊಂದಿಗೆ ದೇಶದ ಸೇವೆಯನ್ನೂ ಮಾಡುತ್ತ, ಜಾತಿ ನೀತಿಮತಗಳ ವಿಷಮತೆಯನ್ನು ತೊರೆದು, ಅಖಿಲ ಕರ್ನಾಟಕದ ಏಕೀಕರಣಕ್ಕೆ ಸರ್ವಪ್ರಕಾರದಿಂದಲೂ ಸಹಕಾರಿಯಾಗಿ, ಸರಳವಾದ ಸರ್ವಸಮವಾದ ನಿರ್ಭೀತವಾದ ತನ್ನ ಭಾವೀ ವರ್ತನದಿಂದ "ನವಯುಗವು" ಚಿರಕಾಲ ನಡೆಯುತ್ತ, ಬದುಕಿ ಬಾಳಲೆಂದು ಹರಸಿ ಹಾರಯ್ಸುವನೀಗ "ಶ್ರೀಕೃಷ್ಣಸೂಕ್ತಿ"ಯ ಶ್ರೀ ರಾಜಗೋಪಾಲಕೃಷ್ಣರಾಯ

ಎಸ್. ರಾಜಗೋಪಾಲಕೃಷ್ಣ ರಾವ್.
ಕಡೇಕಾರು, ಉಡುಪಿ.

ಉಡುಪಿಯಲ್ಲಿ ನೂತನವಾಗಿ ನಗರಸಭಾ ನಿರ್ಮಾಣವಾಗುವ ಈ ಸುಸಮಯದಲ್ಲೇ ಕಳೆದ ಹದಿನೈದು ವರುಷಗಳಿಂದ ಕರ್ನಾಟಕಾಂಬೆಯ ಸೇವೆಯ ಪುಣ್ಯಭಾಗಿಯಾದ ನೀನು ಆಗಮಿಸುವುದೆಂದರೆ ಉಡುಪಿಯ ಪುರನಿವಾಸಿಗರಿಗೆ ಅದೊಂದು ಅನಂದೋತ್ಸವವೇ ಆಗಿರುವುದು. ಜಿಲ್ಲೆಯಲ್ಲಿ ಎರಡನೆಯ ನಗರವೆಂದೆನಿಸಿಕೊಂಡಿದ್ದರೂ ವಾರಪತ್ರಿಕೆಯೊಂದಾದರೂ ಇಲ್ಲವೆಂಬ ಹಾಸ್ಯಾಸ್ಪದ ಅಭಾವವನ್ನು ನೀಗಲಾಡಿಸಲೆಂದೂ ನವನಾಗರಿಕತೆಯ ಸೋಪಾನವನ್ನೇರಲಾರಂಭಿಸಿರುವ ನಮ್ಮ ನಗರವಾಸಿಗಳಿಗೆ 'ನವಯುಗ'ದ ಸ್ಥಿತಿಗತಿಗಳನ್ನೆಲ್ಲ ನಿಷ್ಪಕ್ಷತೆಯಿಂದ ಅರುಪಿ, ಜನಜಾಗ್ರತಿಯನ್ನುಂಟುಮಾಡಬೇಕೆನ್ನುವ ಗುರಿಯಿಂದಲೂ 'ಬಡವರಮನೆಗೆ ಭಾಗೀರಥಿ ಬಂದಂತೆ' ನೀನು ನಮ್ಮಲ್ಲಿ ಒಲಿದು ಬಂದುದು ನಮ್ಮೆಲ್ಲರ ಪೂರ್ವ ಪುಣ್ಯವೆಂದರೆ ಅತಿಶಯೋಕ್ತಿಯಾಗಲಾರದು. ರಜತಪುರಾಧೀಶನಾದ ಶ್ರೀಕೃಷ್ಣ ಪರಮಾತ್ಮನು ನಿನ್ನನ್ನು ಚಿರಾಯುವನ್ನಾಗಿ ಮಾಡಿ ಹಿಂದಿಗಿಂತಲೂ ಮೇಲಾಗಿ ಜನತಾಸೇವೆಗೈಯುವ ಶಕ್ತಿಯನ್ನಿತ್ತು ನಿನ್ನನ್ನು ಹರಸಲೆಂದೇ ಅತನ ಅಡಿದಾವರೆಗಳಲ್ಲಿ ನನ್ನ ವಿನಯಪೂರ್ವಕ ಪ್ರಾರ್ಥನೆ.

ರಾಮಚಂದ್ರ ಶೆಣೈ, ಕೆ.
ಸಂಪಾದಕ, 'ಬಾಲಚಂದ್ರ' ಉಡುಪಿ

ಡಾ! ಕೆ. ವಿಠಲಶೆಟ್ಟ್ರಿ ಭಾಷಣ

(ನವಯುಗದ ಉದ್ಘಾಟನಾ ಸಮಾರಂಭದ ಅಧ್ಯಕ್ಷರಾದ, ಮಂಗಳೂರು ಮುನಿಸಿಪಲ್ ಚೇಯರ್‌ಮೆನರಾದ ಡಾಕ್ಟರ್ ಕೆ. ವಿಠಲಶೆಟ್ಟ್ರಿ ಮಾಡಿದ ಭಾಷಣ)

ಇಂದಿನ ಸಂಜೆಯ ಈ ಸಮಾರಂಭಕ್ಕೆ ಇತರರೆಲ್ಲರನ್ನು ಬಿಟ್ಟು ನನ್ನನ್ನೇ ಯಾಕೆ ಆರಿಸಿದುದೆಂದು ನಾನು ನನ್ನೊಳಗೇನೇ ಆಶ್ಚರ್ಯಪಡುತ್ತಿದ್ದೆನು. ನಾನೊಬ್ಬ ಪತ್ರ ವ್ಯವಸಾಯಿಯಂತೂ ಅಲ್ಲ. ಆದರೆ ನಾನು ಪತ್ರಿಕಾ ವ್ಯವಸಾಯಿಗಳ ಯಥಾರ್ಥ ಮಿತ್ರನೆಂಬುದನ್ನು ಮನಗಂಡು ನನ್ನನ್ನು ಇಂದಿನ ಈ ಕೆಲಸಕ್ಕಾಗಿ ನವಯುಗದ ಉತ್ಸಾಹಪರ ಸಂಪಾದಕರಾದ ನನ್ನ ಮಿತ್ರ ಶ್ರೀ। ಕೆ. ಕೆ. ಶೆಟ್ಟಿ ನಿಶ್ಚೈಸಿರಬೇಕೆಂಬೊಂದು ಭಾವನೆಯು ನನಗೆ ಹೊಳೆಯಿತು. ಪತ್ರಿಕೆಗಳ ಪ್ರಾಮುಖ್ಯತೆಯನ್ನೂ ಪ್ರಭಾವವನ್ನೂ ಚೆನ್ನಾಗಿ ತಿಳಿದು ಆ ವೃತ್ತಿಯವರನ್ನು ಸದಾ ಗೌರವಪೂರ್ವಕವಾಗಿ ಕಾಣುವವರಲ್ಲಿ ನಾನೊಬ್ಬ. ಅದು ಹೇಗೂ ಇರಲಿ; ಇಂದಿನ ಈ ಉತ್ಸವದಲ್ಲಿ ಭಾಗಿಯಾಗಲು ನನಗೆ ಸಂದರ್ಭವನ್ನು ಒದಗಿಸಿ ಕೊಟ್ಟುದಕ್ಕಾಗಿ ನಾನು ಶ್ರೀ. ಕೆ. ಕೆ. ಶೆಟ್ಟರಿಗೆ ಹೃತ್ಪೂರ್ವಕ ವಂದನೆಯನ್ನರ್ಪಿಸುವೆನು.

"ಪತ್ರಿಕಾ ವ್ಯವಸಾಯದಲ್ಲಿರುವುದಕ್ಕಿಂತ ಹೆಚ್ಚಿನ ಆಕರ್ಷಕತೆ, ವಿವಿಧತೆ, ಮತ್ತು ಆಸಕ್ತಿಯು ಜೀವನದಲ್ಲಿ ಇನ್ನಾವ ವೃತ್ತಿಯಲ್ಲಿಯೂ ಇರುವುದೆಂದು ನಾನೆಣಿಸುವುದಿಲ್ಲ. ಪ್ರತಿ ದಿನ ಕೂತುಕೊಂಡು ಜನರಿಗೆ ತನ್ನ ಮನಸ್ಸಿನ ವಿಚಾರಗಳನ್ನು ತಿಳಿಸಿ, ಅವರು ತಮ್ಮ ಖಾಸಗಿ ಮತ್ತು ಸಾರ್ವಜನಿಕ ಜೀವನದ ಎಲ್ಲಾ ವಿಷಯಗಳ ಕುರಿತು ಹೇಗೆ ನಡೆದುಕೊಳ್ಳಬೇಕೆಂದು ಬೋಧಿಸಿ, ಅವರಲ್ಲಿ ಜಾಗ್ರುತೆಯನ್ನುಂಟುಮಾಡುವ, ಅವರ ಮನೋರಂಜನೆ ಮಾಡುವ, ಅಗತ್ಯ ಬಿದ್ದಲ್ಲಿ ಅವರನ್ನು ಎಚ್ಚರಿಸುವ, ತುಸು ಉಪೇಕ್ಷಿಸುವ ಕೆಲಸವು ವಿಚಿತ್ರವಾದುದೇ ಸರಿ ಇಲ್ಲಿ ನೀವು ನನಗಿಂತ ಮೇಲಾಗಿರುವಿರಿ." ಲೋಕದ ಅತ್ಯಂತ ಪ್ರಸಿದ್ಧ ಶೋಧನಕಾರರೂ ಅತ್ಯುಚ್ಚ ಗೌರವವನ್ನು ಪಡೆದವರೂ, ಅಪ್ರತಿಮ ಲೋಕೋಪಕಾರಿಗಳೂ ಆದ ಎಡಿಸನರು ಪತ್ರಿಕಾ ವ್ಯವಸಾಯದ ಕುರಿತು ಹೇಳಿದ ಮಾತುಗಳಿವು. ಅವರು ನಿಜವಾಗಿಯೂ ಪತ್ರಿಕಾ ವೃತ್ತಿಯ ಕಡೆಗೆ ಆಕರ್ಷಿತರಾಗಿ ತಾನು ಆ ವೃತ್ತಿಯನ್ನು ಕೈಕೊಳ್ಳದುದಕ್ಕಾಗಿ ಪಶ್ಚಾತ್ತಾಪ ಪಡುತ್ತಿದ್ದರು. ಇದರಿಂದ ಪತ್ರಿಕಾ ವ್ಯವಸಾಯವು ಅದೆಷ್ಟು ಮೋಹಕತೆ ಉಳ್ಳದ್ದೆಂಬುದು ಸ್ಪಷ್ಟವಾಗುವುದು. ಆ ಮಹಾ ವ್ಯಕ್ತಿಯೇ ತಾನೊಬ್ಬ ಪತ್ರಿಕಾ ವ್ಯವಸಾಯಿಯಾಗದಿದುದಕ್ಕಾಗಿ ಪಶ್ಚಾತ್ತಾಪಪಟ್ಟಿರುವನೆಂದ ಮೇಲೆ ನಮ್ಮಂಥವರು ಈ ವಿಷಯದಲ್ಲಿ ಏನು ಹೇಳಬೇಕು?

ಲೋಕದ ಕಣ್ಣು ಮತ್ತು ಕಿವಿಗಳಂತಾಗಿ ಅದಕ್ಕಾಗಿ ಅತ್ಯಾಸಕ್ತಿಯ ವಿಷಯಗಳನ್ನೆಲ್ಲಾ ನೋಡಿ ಮತ್ತು ಕೇಳಿ, ಮಾನವ ಕೋಟಿಯ ಜೀವನ ರಚನೆಯಲ್ಲಿ ನಡೆಯುವ ದಿನ ದಿನದ ವಿದ್ಯಮಾನಗಳನ್ನೆಲ್ಲಾ ಬರೆದು ಪ್ರಕಟಿಸಿ, ತನ್ನ ಮಾನವ ಸಹೋದರ ಸಹೋದರಿಯರ ಹೃದಯ ಮನಸ್ಸುಗಳನ್ನು ತನ್ನ ಕಡೆಗೆಳೆದು, ಜನಮತವನ್ನು ಜಾಗ್ರತಗೊಳಿಸಿ ಸರಿಯಾದ ಹಾದಿ ಹಿಡಿಸುತ್ತಲೂ ಅದನ್ನು ಪ್ರತಿಬಿಂಬಿಸುತ್ತಲೂ ಇರುವ ವೃತ್ತಿಯಷ್ಟು ಮಹತ್ತಾದುದು ನಿಜವಾಗಿಯೂ ಲೋಕದಲ್ಲಿ ಇನ್ನೊಂದಿರಲಾರದು. ಸಾರ್ವಜನಿಕ ಸೇವೆಯ ಅತ್ಯುತ್ತಮ ಮಾರ್ಗವೆಂದರೆ ಪತ್ರಿಕಾ ವೃತ್ತಿ. ಇಂಥಹ ವೃತ್ತಿಯನ್ನು ನನ್ನ ಮಿತ್ರರಾದ ಶ್ರೀ. ಕೆ. ಕೆ. ಶೆಟ್ಟರು ಕಳೆದ ಸುಮಾರು ಹತ್ತು ವರ್ಷಗಳಿಂದ ನಡಿಸಿಕೊಂಡು ಬಂದು ದೊರೆತ ಅನುಭವದಿಂದ ಈಗ ಸ್ವತಂತ್ರವಾಗಿ ನವಯುಗಪತ್ರಿಕೆಯನ್ನು ನಡೆಸುವ ಸಾಹಸಕ್ಕೆ ಕೈಯಿಕ್ಕಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಅದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

"ಇನ್ನು ಮುಂದೆ ಹಿಂದೂದೇಶದಲ್ಲಿ ಪತ್ರಿಕೆಗಳ ಶಕ್ತಿಯು ಹೆಚ್ಚುವುದೆಂದು ನಾನು ನಂಬುತ್ತೇನೆ. ಹಿಂದೂದೇಶವು ಸ್ವರಾಜ್ಯಮಾರ್ಗದಲ್ಲಿ ಮುಂದುವರಿದಂತೆ ವಿವೇಕಪರವಾಗಿಯೂ ಉತ್ಸಾಹಪೂರ್ಣವಾಗಿಯೂ ಯೋಗ್ಯ ತತ್ವಗಳ ಆಧಾರದಿಂದಲೂ ಅತ್ಯಾಧುನಿಕ ಕ್ರಮದಿಂದಲೂ ನಡೆಸಲ್ಪಡುವ ಪತ್ರಿಕೆಗಳು ಹೆಚ್ಚೆಚ್ಚಾಗಿ ಬೇಕಾಗದಿರಲಾರವು" ಎಂದು ನಮ್ಮ ಮಾಜಿ ಸ್ಟೇಟ್ಸ್ ಸೆಕ್ರೆಟರಿಗಳಾದ ಸರ್ ಸಾಮುವೇಲ್ ಹೋರರವರು ಹೇಳಿರುವ ಮಾತು ಅಕ್ಷರಶಃ ನಿಜವಿದೆ. ತರುಣೋತ್ಸಾಹಿಯೂ ಆದರ್ಶವಾದಿಯೂ ಆದ ನವಯುಗದ ಸಂಪಾದಕರಿಗೆ, ಪ್ರಬಲ ಪರಿಶುದ್ಧ ನಿಷ್ಪಕ್ಷಪಾತ ಮತ್ತು ಜವಾಬ್ದಾರೀ ಪೂರ್ಣ ಪತ್ರಿಕೆಯ ಬೆಳವಣಿಗೆಗೆ ಸಹಾಯಕವಾಗುವುದಕ್ಕಿಂತ ಉತ್ತಮವಾದ ದೇಶಸೇವೆಯ ಮಾರ್ಗವು ನಿಜವಾಗಿಯೂ ಇನ್ನೊಂದು ಇರಲಾರದು.

"ಸದಾ ಮುಂದೆ ದೃಷ್ಟಿಯುಳ್ಳವನಾಗಿದ್ದುದೇ ನನ್ನ ವಿಜಯಕ್ಕೆ ಕಾರಣ" ಎಂದು ಇಂಗ್ಲಾಂಡಿನ ಪತ್ರಿಕಾ ವ್ಯವಸಾಯದ ಇತಿಹಾಸದಲ್ಲಿ ಅತ್ಯಂತ ಗಣನೀಯ ವ್ಯಕ್ತಿಯಾದ ಲೋರ್ಡ್ ನೋರ್ತ್ ಕ್ಲಿಫರು ಹೇಳಿದ್ದರು. ಈಗ ಹಿಂದೀ ಪತ್ರಿಕಾ ವ್ಯವಸಾಯಿಗಳ ಮುಂದಿರುವುದಾದರೂ ಏನು? ಜನ ಸಾಮಾನ್ಯರಲ್ಲಿ ಅಕ್ಷರ ಜ್ಞಾನವು ಬೆಳೆಯುತ್ತಾ ಹೋದಂತೆ ಹೆಚ್ಚೆಚ್ಚು ಮತ್ತು ಉತ್ತಮೋತ್ತಮ ಪತ್ರಿಕೆಗಳ ಆವಶ್ಯಕತೆಯು ನಿರಂತರವಾಗಿಯೂ' ಹೆಚ್ಚುತ್ತಾ ಹೋಗಲೇಬೇಕು. ಯಾಕಂದರೆ ಪತ್ರಿಕೆಗಳ ಸ್ಥಾನವನ್ನು ಸಿನೆಮಾವಾಗಲೀ ಬ್ರೋಡ್ ಕಾಸ್ಟಿಂಗ್ ಆಗಲೀ ಎಂದಿಗೂ ಆಕ್ರಮಿಸಲಾರವು ಪತ್ರಿಕೆಯ ಸ್ಥಾನವೂ ಕಾರ್ಯಕ್ಷೇತ್ರವೂ ಅದರದ್ದೇ ಆಗಿದ್ದು ಅದರಲ್ಲಿ ಇನ್ನಾವುದಕ್ಕೂ ಎಡೆ ಸಿಗಲಾರದು. ಇಂದೀಗ ಹಿಂದೀ ಜೀವನದಲ್ಲ ಪತ್ರಿಕೆಯು ಅದೊಂದು ಅನು ನಿತ್ಯದ ಆವಶ್ಯಕತೆಯಾಗುತ್ತಾ ಬರಹತ್ತಿದೆ. ವಿದ್ಯೆಯು ಹಬ್ಬಿದಂತೆ ಜನತೆಯಲ್ಲಿ ಸಾಮಾಜಿಕ ಜಾಗ್ರತೆಯು ಉದಯವಾಗ ಹತ್ತಿದಂತೆ ಅವರೂ ತಮ್ಮ ಹಳ್ಳಿ ಮತ್ತು ಜಿಲ್ಲೆಯ ಹೊರಗಣ ದೃಷ್ಟಿಯುಳ್ಳವರಾಗಿ ತಮ್ಮ ದೇಶದಲ್ಲಿಯೂ ಇಡೀ ಲೋಕದಲ್ಲಿಯೂ ಏನೆಲ್ಲಾ ನಡೆಯುತ್ತಿರುವುದೆಂಬುದನ್ನು ತಿಳಿಯುವ ಆತುರವು ಅವರಲ್ಲಿ ಹೆಚ್ಚಿದಂತೆ ಅವರ ಜೀವನದಲ್ಲ ಪತ್ರಿಕೆಯ ಸ್ಥಾನಮಾನವೂ ಇನ್ನೂ ಹೆಚ್ಚಾಗದಿರಲಾರದು. ನಮ್ಮ ದೇಶದ ರಾಜಕೀಯ ಪ್ರಗತಿಯ ಈ ಕಾಲದಲ್ಲಿ ಪತ್ರಿಕೆಗಳ ಆವಶ್ಯಕತೆಯು ಅದೆಷ್ಟೆಂದು ಹೇಳಿತೀರದು. ಹೊಸ ರಾಜ್ಯಾಂಗ ರಚನೆಯ ಪ್ರಕಾರ ಏಳು ಮಿಲ್ಯವಾಗಿದ್ದ ವೋಟರರ ಸಂಖ್ಯೆಯು ಇಂದೀಗ ಮೂವತ್ತೈದು ಮಿಲ್ಯಕ್ಕೇರಿದೆ. ಇನ್ನು ಮುಂದೆ ಇದು ಮುನ್ನೂರೈವತ್ತಕ್ಕೇರಬೇಕಾಗಿದೆ. ಜನರಲ್ಲೆಲ್ಲಾ ವಿದ್ಯಾಪ್ರಚಾರವಾಗಿ ಅವರು ತಮ್ಮ ಓಟಿನ ಬೆಲೆಯನ್ನು ಸರಿಯಾಗಿ ತಿಳಿದುಕೊಳ್ಳುವಂತಾಗದಿದ್ದರೆ ಪ್ರಜಾಸತ್ತೆಯು ಫಲಕಾರಿಯಾಗದ, ಅದೊಂದು ನಕಲಿಯಂತಾಗುವುದು. ಈ ವಿಷಯದಲ್ಲಿ ಪತ್ರಿಕೆಗಳು ಮಾಡತಕ್ಕ ಕಾರ್ಯವೂ ಅತಿ ಹೆಚ್ಚಿನದಿದೆ. ವಸ್ತುತಃ ಹಿಂದೂ ದೇಶದ ಪ್ರಗತಿಯೂ ಹಿಂದೀ ಪತ್ರಿಕೆಗಳ ಅಭಿವೃದ್ಧಿಯೂ ಒಂದನ್ನೊಂದು ಹೊಂದಿಕೊಂಡಿರುತ್ತವೆ. ಒಂದಕ್ಕೊಂದು ಸಹಾಯಕವಾಗಬೇಕಾಗಿದೆ. ಆದುದರಿಂದ ಹಿಂದೂ ದೇಶದ ಅಭಿವೃದ್ಧಿಯಲ್ಲಿ ಆಸಕ್ತಿಯಿರುವ ಪ್ರತಿ ಒಬ್ಬ ಭಾರತೀಯನು ಹಿಂದೀ ಪತ್ರಿಕಾ ವ್ಯವಸಾಯಾಭಿವೃದ್ಧಿಯಲ್ಲಯೂ ಆಸಕ್ತನಿರಲೇ ಬೇಕು.

ನಮ್ಮ ದೇಶದಲ್ಲಿ ಪತ್ರಿಕಾ ವ್ಯವಸಾಯವು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದೆ. ಸುಮಾರು ಎರಡು ಸಾವಿರ ಪತ್ರಿಕೆಗಳೂ ಮೂರು ಸಾವಿರ ಮಾಸಿಕಗಳೂ ನಮ್ಮ ದೇಶದಲ್ಲಿ ಈಗ ಇರುವವೆಂದು ಲೆಕ್ಕ ಹಾಕಲಾಗಿದೆ. ಆದರೆ ಇವುಗಳಲ್ಲಿ ಶೇಕಡಾ ೯೦ರಷ್ಟು ನಿರ್ಜೀವಾವಸ್ಥೆಯಲ್ಲಿಯೇ ಇರುವವೆಂದು ಹೇಳಬಹುದು. ನಮ್ಮ ಕರ್ನಾಟಕದ ಪತ್ರಿಕೆಗಳ ಅವಸ್ಥೆಯನ್ನಂತೂ ಹೇಳಿತೀರದು. ಕರ್ನಾಟಕ ಪ್ರಾಂತ ರಚನೆಯಾಗಿ ಕನ್ನಡಿಗರೆಲ್ಲರೂ ಒಂದಾಗಿ ಒಂದೇ ಆಡಳಿತ ಒಂದೇ ವಿಧದ ಭಾಷೆಯುಳ್ಳವರಾಗುವ ವರೆಗೆ ಕನ್ನಡ ಪತ್ರಿಕೆಗಳಿಗೇ ಉಜ್ವಲ ಭವಿಷ್ಯವಿದೆಯೆಂದು ಹೇಳಲಾಗುವುದಿಲ್ಲ. ಆದುದರಿಂದ ಕರ್ನಾಟಕದ ಏಕೀಕರಣ ಮತ್ತು ಪ್ರಾಂತ ರಚನೆಗಾಗಿ ಪ್ರಬಲವಾಗಿ ಚಳವಳಿಸುವುದು ಪ್ರತಿಯೊಂದು ಕರ್ನಾಟಕ ಪತ್ರಿಕೆಯ ಮುಖ್ಯ ಕರ್ತವ್ಯವಿರುತ್ತದೆ.

ಪಂಡಿತ ಜವಾಹಿರಲಾಲ ನೆಹರುಗಳು ಬೊಂಬಾಯಿಯ ಪತ್ರಿಕಾ ವ್ಯವಸಾಯಿಗಳ ಸಂಘದವರಿಂದ ಆಮಂತ್ರಿಸಲ್ಪಟ್ಟಾಗ ಹೇಳಿದ ಕೆಲವು ವಿಷಯಗಳನ್ನು ನಾನೀ ಈ ಸಂದರ್ಭದಲ್ಲ ಎತ್ತಿ ಹೇಳುವುದು ಆವಶ್ಯವೆಂದು ಭಾವಿಸುತ್ತೇನೆ ಇಂದಿನ ಸಾರ್ವಜನಿಕ ಜೀವನದಲ್ಲಿ ಪತ್ರಿಕೆಗಳು ಅತಿ ಪ್ರಾಮುಖ್ಯ ಸ್ಥಾನ ಪಡೆದಿವೆಯೆಂಬುದನ್ನು ಪಂಡಿತರು ಒತ್ತಿ ಹೇಳಿ, ಸರಕಾರದವರಿಂದ ಅಥವಾ ಖಾಸಗಿ ಮ್ಯಾಲಿಕರಿಂದ ಇಲ್ಲವೆ ಜಾಹೀರಾತುದಾರರ ಪ್ರೇರೇಪಣೆಯಿಂದ ವಾಸ್ತವಿಕ ಸಂಗತಿಗಳು ಮುಚ್ಚಿಡಲ್ಪಡುವ ಕುರಿತು ಪ್ರಸ್ತಾಪಿಸಿದರು. ಕೆಲವೊಂದು ಸಮಾಚಾರಗಳಿಗೆ ಪತ್ರಿಕೆಗಳು ವಿಶೇಷ ಪ್ರಾಮುಖ್ಯತೆ ಕೊಡ-ವದಕ್ಕವರ ಆಕ್ಷೇಪವಿಲ್ಲ. ಆದರೆ, ಸಮಾಚಾರಗಳನ್ನೇ ಪ್ರಕಟಿಸದೆ ಮುಚ್ಚಿಡುವುದರಿಂದ, ಜನತೆಯು ಲೋಕದ ವಿದ್ಯಮಾನಗಳ ಕುರಿತು ಸರಿಯಾದ ಅಭಿಪ್ರಾಯಮಾಡಿಕೊಳ್ಳುವ ಏಕಮಾತ್ರವಾದ ಸಾಧನದಿಂದ ಅವರನ್ನು ವಂಚಿತರನ್ನಾಗಿ ಮಾಡಿದಂತಾಗುವುದು. ಪತ್ರಿಕಾ ವ್ಯವಸಾಯಿಗಳು ಸಮಾಚಾರವನ್ನು ಪ್ರಕಟಿಸುವ ಕುರಿತಾದ ಇಂತಹ ತಡೆಯನ್ನು ವಿರೋಧಿಸಿ, ಆ ಶಕ್ತಿಯನ್ನು ತಮ್ಮ ಕೈಯಲ್ಲೇ ಇಟ್ಟುಕೊಳ್ಳಬೇಕೆಂದು ಪಂಡಿತರು ಆಗ್ರಹ ಪೂರ್ವಕವಾಗಿ ಕೇಳಿಕೊಂಡರು. ಪತ್ರಿಕಾ ಕರ್ತರು ಸ್ವಾಗತೀಕರಿಸಲ್ಪಡುವ ಸ್ಥಳನೇ ಇರಬಾರದೆಂಬುದನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಆದರೆ ಯಾವ ತರದ ಆಗ್ರಹ ಅನುಗ್ರಹಗಳಿಗೂ ಒಳಗಾಗದ ನಿಷ್ಪಕ್ಷಪಾತ ಬುದ್ಧಿಯು ಪತ್ರಿಕಾ ಕರ್ತರುಗಳ ಜೀವನದ ಆಡಿಗಲ್ಲಾಗಿರಬೇಕು. ಹೀಗಾದರೆ ಮಾತ್ರನೇ ಪತ್ರಿಕಾಕರ್ತರುಗಳಿಗೆ ಎಲ್ಲೆಲ್ಲಿಯೂ ಪ್ರಾಮುಖ್ಯತೆಯೂ ಮಾನ್ಯತೆಯೂ ದೊರೆಯದಿರಲಾರದು

ನನ್ನ ಸನ್ಮಾನ್ಯ ಮಿತ್ರರಾದ ಶ್ರೀಮಾನ್ ಎ. ಬಿ. ಶೆಟ್ಟರು ನವಯುಗವನ್ನು ಪ್ರಥಮವಾಗಿ ಹುಟ್ಟಿಸಿ ಕಳೆದ ಹದಿನೈದು

ವರ್ಷಗಳಿಂದ ಅದರ ಕಷ್ಟನಷ್ಟಗಳನ್ನೆಲ್ಲಾ ವಹಿಸಿ ಆ ಮೂಲಕ ತನ್ನಿಂದ ಕೂಡಿದಷ್ಟು ಜನತೆಯ ಸೇವೆ ಮಾಡಿರುವುದಕ್ಕಾಗಿ ಅವರಿಗೆ ಕನ್ನಡಿಗರೆಲ್ಲರೂ ಆಭಾರಿಯಾಗಿರಲೇಬೇಕು. ಅವರು ನವಯುಗವನ್ನು ಸದಾ ಸಾರ್ವಜನಿಕ ಸೇವೆಯ ವಾಹನವನ್ನಾಗಿ ಮಾಡಿಕೊಂಡು ಕನ್ನಡಿಗರ ಸಲುವಾಗಿ ಸಲಿಸಿದ ನಿಸ್ವಾರ್ಥ ಸೇವೆಗಾಗಿ ವಂದನೀಯರೂ ಸ್ಮರಣೀಯರೂ ಇರುತ್ತಾರೆ. ಆರಂಭದಲ್ಲಿ ಬಹುತೇಕವಾಗಿ ಸಾಮಾಜಿಕ ಸೇವೆಗೆಂದು ಹೊರಟಿದ್ದ ನವಯುಗವು ಕ್ರಮಕ್ರಮವಾಗಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಇಂದೀಗ ಕರ್ನಾಟಕದ ಉಜ್ವಲ ರಾಷ್ಟ್ರೀಯ ಪತ್ರಿಕೆಗಳಲ್ಲೊಂದಾಗಿದೆ. ನಿರ್ಭಯವಾಗಿ ಸಾಮಾಜಿಕ ಮತ್ತು ರಾಜಕೀಯ ಪ್ರಗತಿಯನ್ನು ಪ್ರತಿಪಾದಿಸುತ್ತಿದೆ.

ಇದೀಗ ನವಯುಗದ ಇದೊಂದು ಬಗೆಯ ಅವಸ್ಥಾಂತರದ ಸಮಾರಂಭವೆನ್ನಬಹುದು. ಅದು ಎನ್ನಷ್ಟು ಹೆಚ್ಚಿನ ಉತ್ಸಾಹದಿಂದ ಕಾರ್ಯಕ್ಕೆ ತೊಡಗಿ ಜನಸೇವೆ ಮಾಡಿ ಕೃತಾರ್ಥವಾಗಲೆಂದು ನನ್ನ ಹಾರೈಕೆ. ಕಳೆದ ಏಳೆಂಟು ವರ್ಷಗಳಿಂದ ನಾನು ಶ್ರೀಯುತ ಕೆ. ಕೆ. ಸೆಟ್ಟರನ್ನು ಬಲ್ಲೆನು ಅವರಲ್ಲಿ ಉದಾತ್ತ ಉದ್ದೇಶವಿದೆ. ಹಿರಿದಾದ ಉತ್ಸಾಹವಿದೆ. ನಿಸ್ವಾರ್ಥಬುದ್ಧಿ ಇದೆ, ಸೇವಾ ನಿಷ್ಠೆಯಿದೆ ಅವರೂ ನವಯುಗವನ್ನು ಜನತೆಯ ಮತ್ತು ರಾಷ್ಟ್ರದ ಸೇವೆಯ ವಾಹನವಾಗಿಯೇ ನಡಿಸದಿರರೆಂಬ ಭರವಸೆಯು ನನ್ನಲ್ಲಿದೆ.

ಪ್ರಕೃತದ ಆರ್ಥಿಕ ದುಃಸ್ಥಿತಿಯಲ್ಲಿ ಕನ್ನಡನಾಡಿನ ಅತ್ಯಂತ ನಿರುತ್ಸಾಹಪರ ಪರಿಸ್ಥಿತಿಯಲ್ಲಿ ಪತ್ರಿಕೆಯೊಂದನ್ನು ನಡಿಸುವ ಜವಾಬ್ದಾರಿಯನ್ನು ಹೊರುವುದೆಂದರೆ, ಅದೊಂದು ಸಾಹಸವೇ ಸರಿ. ಆದರೆ ಸಾಹಸವಿಲ್ಲದೆ ಯಾವ ಕಾರ್ಯವೂ ಸಾಧ್ಯವಾಗದು. ತಡೆ ಎಡರುಗಳನ್ನು ಕಡೆಹಾಯ್ದು ಪಡೆಯುವ ವಿಜಯವೇ ಮಾನ್ಯವಾದುದು ಆದುದರಿಂದ ಮುಖ್ಯತಃ ಸಾರ್ವಜನಿಕ ಸೇವಾ ದೃಷ್ಟಿಯಿಂದ ಪತ್ರಿಕೆಯೊಂದನ್ನು ನಡೆಸುವ ಹಿರಿಯ ಜವಾಬ್ದಾರಿಯನ್ನು ಹೊತ್ತಿರುವ ನಮ್ಮ ತರುಣ ಮಿತ್ರರಿಗೆ ನಾವೆಲ್ಲರೂ ಸಾಧ್ಯವಾದಷ್ಟು ನೆರವಾಗುವುದು ನಮ್ಮ ಕರ್ತವ್ಯವಿರುತ್ತದೆ. ಸಾಹಸವೂ ಉತ್ಸಾಹವೂ ಇರುವಲ್ಲಿ ತಕ್ಕ ಪ್ರೋತ್ಸಾಹವು ದೊರೆಯದಿರಲಾರದೆಂದು ನನ್ನ ಅಭಿಮತ. ಅಂತೆಯೇ ಶ್ರೀಯುತ ಕೆ. ಕೆ. ಸೆಟ್ಟರು ಜನತೆಯಿಂದ ಸಾಕಷ್ಟು ಪ್ರೋತ್ಸಾಹ ಪಡೆದು ನವಯುಗ ಪತ್ರಿಕೆಯು ಉತ್ತರೋತ್ತರ ಅಭಿವೃದ್ಧಿ ಹೊಂದಿ ದಕ್ಷಿಣ ಕನ್ನಡಾ ಜಿಲ್ಲೆಯಲ್ಲ ಹಾಗೂ ಅಖಿಲ ಕರ್ನಾಟಕದಲ್ಲಿ ಪ್ರಮುಖ ಸ್ಥಾನಮಾನ ಪಡೆದು ಚಿರಕಾಲ ಬಾಳಿ ಬೆಳೆಯಲೆಂದು ನಾನು ಮನಃಪೂರ್ವಕವಾಗಿ ಹರಸಿ ಸುಪ್ರಸಿದ್ಧ ಪುಣ್ಯಕ್ಷೇತ್ರವಾದ ಉಡುಪಿಯಲ್ಲಿ ನವಯುಗದ ಪ್ರಥಮ ಸಂಚಿಕೆಯನ್ನು ಪ್ರಕಟಗೊಳಿಸುವೆನು.

|| **ಶುಭಂ ಭವತು** ||

ನಮಗೆ ಬಂದ ಕೆಲವು ಸಂದೇಶಗಳು

ನವಯುಗದ
ನವಸ್ಫೂರ್ತಿಯುಳ್ಳ ತರುಣ ತರುಣಿಯರಿಗೆ
ಜನ್ಮಸ್ಥಾನವಾದ ಉಡುಪಿಗೆ
ನವಯುಗದ
ಆಗಮನವನ್ನು ಮನಃಪೂರ್ವಕವಾಗಿ
ಅಭಿನಂದಿಸುತ್ತೇನೆ,
ಮತ್ತು ಜಯವನ್ನು ಬಯಸುತ್ತೇನೆ.
ನವಯುಗದ
ಉದ್ದೇಶಗಳನ್ನು ಸಫಲಗೊಳಿಸುವಂತೆ
ಉಡುಪಿ ಜನತೆಯು ಸಂಪೂರ್ಣ
ಬೆಂಬಲ ಕೊಡುವದೆಂದು ನಂಬಿದ್ದೇನೆ.
ನವಯುಗದಲ್ಲಿ
ನಮಗೂ ನಮ್ಮ ಪಟ್ಟಣಕ್ಕೂ ಒಂದು
ಸ್ಥಾನ ಸಿಕ್ಕುವಂತೆ
ತನ್ನ ಕಾರ್ಯಕ್ಷೇತ್ರದಲ್ಲಿ
ಮಾಡುವ ಪ್ರಯತ್ನಗಳಲ್ಲಿ
ನವಯುಗವು
ಯಶಸ್ವಿಯಾಗಲಿ!

S. U. Paniady

ನವಯುಗವು ನವ ಚೇತನದಿಂದ ಸರ್ವಾದರಣೀಯವಾಗಿ ಶೋಭಿಸಲಿ!

ಮಂಗಳಾಪುರದಲ್ಲೇ ಹುಟ್ಟಿ ಬೆಳೆದ ನವಯುಗವು ತನ್ನ ಷೋಡಶ ವಯಸ್ಸಿನಲ್ಲಿ, ಸ್ವೀಕೃತ ಜನಕರದಿಂದ ಪೋಷಿಸಲ್ಪಡುವ ಸಲುವಾಗಿ ಉಡುಪಿ ಕ್ಷೇತ್ರನೇ ತನ್ನ ನೆಲೆವೀಡಾಗಿ ಮಾಡಿರುವ ಸಂಗತಿಯನ್ನು ಕೇಳಿ ಸಂತೋಷಪಡುತ್ತೇನೆ.

ಈ ನವ ಯುವತಿಯು ತನ್ನ ಶೀಲ ಗುಣ ಸಚ್ಚರಿತೆಗಳಿಂದ ಉಭಯಕುಲಕ್ಕೂ ಕೀರ್ತಿಯನ್ನು ತರಲೆಂದು ಆಶಿಸುತ್ತೇವೆ.

ಹೊಸ ಊರು, ಹೊಸಮನೆ, ಹೊಸ ಆಡಳಿತ ಇವುಗಳಿಂದ ನವಯುಗವು ನವಸ್ಫೂರ್ತಿ, ನವವಿಚಾರಗಳಿಂದ ಕನ್ನಡಿಗರಲ್ಲಿ ನವೀನ ಕಲ್ಪನೆ, ಭಾವನೆಗಳನ್ನು ಹುಟ್ಟಿಸಿ, ಅಖಿಲ ಕರ್ನಾಟಕದ ಸೇವೆಯನ್ನು ಮಾಡಿ ಚಿರಾಯುವಾಗಿ ಬಾಳಲೆಂದೇ ನಮ್ಮ ಪ್ರಾರ್ಥನೆ.

ಕರ್ನಾಟಕ ಸಾಹಿತ್ಯಸಂಘ.
ಕುಂದಾಪುರ.

ಅಯ್ಯಾ,

ಉಡುಪಿಯಲ್ಲಿ ಜರಗಲಿರುವ ನಮ್ಮ ನವಯುಗದ ಉದ್ಘಾಟನ ಸಮಾರಂಭದ ಆಮಂತ್ರಣಪತ್ರವು ಸಕಾಲದಲ್ಲಿ ನನ್ನ ಕೈ ಸೇರಿರುತ್ತದೆ.

ಅಂದು ಅಲ್ಲಿ ಬರಲು ಒಂದೆರಡು ಕಾರಣಗಳಿಂದ ಅನಾನುಕೂಲವೆಂಬುವನ್ನು ತಿಳಿಸಲು ವ್ಯಸನಪಡುತ್ತೇನೆ.

ನವಯುಗದ ಆಡಳಿತೆಯಲ್ಲಿ ಬದಲಾವಣೆ ಹೊಂದಿರಲಿ. ಅದು ಒಂದು ಊರಿಂದ ಇನ್ನೊಂದು ಊರಿಗೆ ಬರಲಿ. ಹೇಗೂ ಅದು ಮಾಡುತ್ತಿರುವ ದೇಶಸೇವೆ ಭಾಷಾಸೇವೆಯೇ ಮೊದಲಾದ ಅದರ ಉಚ್ಚ ಧೋರಣೆಯನ್ನು ತಿಳಿದ ಪ್ರತಿಯೊಬ್ಬ ಕನ್ನಡಿಗನೂ ಆಶ್ರಯ ಪ್ರೋತ್ಸಾಹಗಳನ್ನು ಕೊಡದಿರಲಾರನೆಂದು ನಂಬುವೆನು. ಅದು ಹುಟ್ಟಿದಂದಿನಿಂದ ಕೈಲಾದ ಸೇವೆಯನ್ನು ಮಾಡುತ್ತಲಿದ್ದ ನಾನಂತೂ ಅವಶ್ಯವುಳ್ಳ ಸಹಕಾರವನ್ನು ಯಥಾವತ್ತಾಗಿ ಮಾಡುತ್ತಿರುವೆನೆಂದು ಪುನಃ ತಮ್ಮೊಡನೆ ನಿವೇದಿಸುವೆನು.

ಉದ್ಘಾಟನ ಸಮಾರಂಭವು ಜಯಶೀಲವಾಗಿ ನೆರವೇರಲಿ. ನವಯುಗವು ದಿನೇ ದಿನೇ ಅಭಿವೃದ್ಧಿಯನ್ನು ಹೊಂದಿ ನಮ್ಮ ಕನ್ನಡನುಡಿಯ ವಾರ್ತಾಪತ್ರಿಕೆಗಳ ಸಾಲಿನಲ್ಲಿ ಸರ್ವಾಲಂಕಾರ ಭೂಷಿತವಾಗಿ ಶೋಭಿಸಲಿ. ಅದು ಚಿರಾಯುವಾಗಿ ಬಾಳಲೆಂದೇ ಪ್ರೀತಿನೊಡನೆ ನನ್ನ ಪ್ರಾರ್ಥನೆಯು.

ಎಚ್. ಕೋಟ್ಯಣ್ಣಶೆಟ್ಟಿ,
ಕುಂದಾಪುರ.

ನವಯುಗದ ಆಡಳಿತವು ಶ್ರೀಕೃಷ್ಣ ಸನ್ನಿಧಿಯಲ್ಲಿ ಗೀತಾತತ್ವವನ್ನು ಮರೆಯುವ ಕರ್ಮಯೋಗಿಯಾದ ಧನಂಜಯನಂತೆ ಲೋಕಸೇವೆಯಲ್ಲಿಯೂ ಭಾಷಾಸೇವೆಯಲ್ಲಿಯೂ ಏಕೇಶ್ವರತ್ವವನ್ನು ಪಡೆಯಲೆಂದೇ ಉದಯಾದ್ರಿಸ್ವಾಮಿಯೊಡನೆ ಸ್ವಕೀಯ ಮಿತ್ರಮಂಡಳಿಯವರ ಪ್ರಾರ್ಥನೆ.

ಪಿ. ನಾರಾಯಣರಾವ್,
ಉದಯಾದ್ರಿ ಸುಜ್ಞಾನಪ್ರದೀಪ ವಾಚನಾಮಂದಿರ, ನಡುಬಿದ್ರೆ.

ಉಡುಪಿಗೊಂದು ತೆರಿಗೆದಾರರ ಸಂಘ

ಉಡುಪಿ ಮುನಿಸಿಪಾಲಿಟಿಯ ತೆರಿಗೆದಾರರ ಸಭೆಯೊಂದು ಕಳೆದ ಆಗೋಸ್ತು ತಾ. 30ರಲ್ಲಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವಕೀಲ್ ಟಿ. ಗಣಪಯ್ಯಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ತನ್ನ ಪ್ರಸ್ತಾವಿಕ ಭಾಷಣದಲ್ಲಿ ಮುನಿಸಿಪಾಲಿಟಿಯ ಸ್ಪೆಶಲ್ ಆಫೀಸರರು ಕರ ವಿಧಿಸಿದ ರೀತಿಯನ್ನು ಖಂಡಿಸಿ ಏಕ್ದೆಗೆ 3,000ದ ಅಂದಾಜಿನಲ್ಲಿ ಕ್ರಯಹಿಡಿದು ಕರಹೊರಿಸಿದುದು ಅನ್ಯಾಯವೆಂಬುದನ್ನು ವಿವರಿಸಿದರು. ಡಾ॥ ಪಿ. ಜಿ. ಆಚಾರ್ಯರು, ಮುನಿಸಿಪಾಲಿಟಿಯು ಬಂದುದರಿಂದ ಉಡುಪಿಗಾದ ನಷ್ಟವನ್ನು ಎತ್ತಿ ತೋರಿಸಿ, ವರುಷಕ್ಕೆ ಸುಮಾರು 50,000 ರೂಪಾಯಿಗಳನ್ನು ಪಟ್ಟಣಿಗರಿಂದ ಪಡೆಯುವ ಮುನಿಸಿಪಾಲಿಟಿಯು, ನೌಕರರ ಸಂಬಳವನ್ನೆಲ್ಲಾ ತೆತ್ತು, ಬರೇ 18,000ದ ವರೆಗೆ ಮಾತ್ರ ನಗರಾಭಿವೃದ್ಧಿಗೆ ವ್ಯಯಿಸಲು ಸಾಧ್ಯವಿದೆಯೆಂದೂ, ಯಾವ ಪ್ರತ್ಯೇಕ ತೆರಿಗೆಯನ್ನೂ ಹೊರಿಸದ ಹಿಂದಿನ ಬೋರ್ಡುಗಳೂ ಉಡುಪಿಗಾಗಿ ಅಷ್ಟೇ ವ್ಯಯಿಸುತ್ತಿದ್ದವೆಂದೂ ತಿಳಿಸಿದರು. ತಾನು ಮುನಿಸಿಪಾಲಿಟಿಯ ದ್ವಿತೀಯ ಸಭೆಯಲ್ಲಿ ತರಲಿರುವ ಮುನಿಸಿಪಾಲಿಟಿಯನ್ನು ತೆಗೆದು ಪಂಚಾಯತ ಬೋರ್ಡು ಮಾಡಬೇಕೆಂಬ ಠರಾವಿಗೆ ಬೆಂಬಲಕೊಡಬೇಕೆಂದು ಕೇಳಿಕೊಂಡರು! ಅಧ್ಯಕ್ಷರು ಸಭೆಯ ಮುಂದಿರಿಸಿದ ಡಾ॥ ಆಚಾರ್ಯರ ಠರಾವಿಗೆ ಸಮ್ಮತಿಕೊಡುವ ಸೂಚನೆಯು ಸರ್ವಾನುಮತದಿಂದ ಮಂಜೂರಾಯಿತು. ಆ ಮೇಲೆ, ಈಗ ನಿರ್ಣೈಸಿರುವ ತೆರಿಗೆಯ ಕ್ರಮವನ್ನು ಖಂಡಿಸಿ, ಸರಿಯಾದ ರೀತಿಯಿಂದ ನಿರ್ಣೈಸುವಂತೆ ಮುನಿಸಿಪಾಲಿಟಿಯನ್ನು ಕೇಳಿಕೊಳ್ಳುವ ಠರಾವೂ, ಪ್ರತಿಯೊಬ್ಬ ತೆರಿಗೆದಾರನಿಗೂ, ತೆರಿಗೆಯ ಅಂಕೆ ಸಂಖ್ಯೆ, ವಿಧಾನವನ್ನು ನಮೂದಿಸಿರುವ ನೋಟೀಸನ್ನು ಕೊಟ್ಟು ಆಕ್ಷೇಪಣೆಗೆ ಎರಡು ತಿಂಗಳ ವಾಯಿದೆ ಕೊಡಬೇಕೆನ್ನುವ, ಮೊದಲು ಉಡುಪಿಗೆ ಸೇರದ ಅಸುಪಾಸಿನ ಭಾಗಗಳನ್ನು ಸೇರಿಸಿ ಪೇಟೆಗಿಂತಲೂ ಹೆಚ್ಚಿನ ತೀರ್ವೆ ವಿಧಿಸಿದುದನ್ನು ಖಂಡಿಸಿ ಆ ಭಾಗದಲ್ಲಿ ವಿನಾಯತಿ ಮಾಡಬೇಕೆನ್ನುವ ಮತ್ತು ಮುನಿಸಿಪಾಲಿಟಿಯೊಳಗಿನ ಸಾಗುವಳಿ ಗದ್ದೆಗಳಿಗೂ ತೆರಿಗೆಯನ್ನು ವಿನಾಯತಿ ಪಡಿಸಬೇಕೆನ್ನುವ ಠರಾವುಗಳೂ ಮಂಜೂರಾದ ಮೇಲೆ ಉಡುಪಿಯ ತೆರಿಗೆದಾರರ ಸಂಘವೊಂದನ್ನು ಸ್ಥಾಪಿಸಿ ಕೆಲಸಮಾಡುವರೆ ಕಮಿಟಿಯೊಂದನ್ನು ನೇಮಿಸಲಾಯಿತು. ಶ್ರೀಗಳಾದ ಎನ್. ರಾಜಗೋಪಾಲಕೃಷ್ಣರಾವ್, ಕೆ. ಜೆ. ಬಲ್ಲಾಳ್, ಆದಮ್ ದಾವೂದ್ ಸಾಹೇಬ್, ಎಮ್. ವಿಠಲ ಕಾಮತ್, ಆರ್. ಎನ್. ಅಂದ್ರಾದೆ, ಡಾ॥ ಕೆ. ಎಲ್. ಐತಾಳ, ಟಿ. ಎನ್ ಕೇಳುನಂಬಿಯಾರ್, ಲೇಮುವೇಲ್ ಕರ್ಕಡ, ಕಲ್ಸಂಕ ಮಂಜುನಾಥ ಪೈ, ಎಮ್ ವೆಂಕೋಬಾಚಾರ್, ಕೆ. ಆರ್. ಪೈ, ಎಸ್ ಸುಂದರರಾವ್, ಕೆ. ರಾಮಕೃಷ್ಣಯ್ಯ, ಸಿ. ರಾಯ ಬಲ್ಲಾಳ್, ಮೋಸೆಸ್ ರೋಬರ್ಟ್ಸ್, ಯು. ವಾಸುದೇವ ಪೈ, ಮಹಮ್ಮದ್ ಉಸ್ಮಾನ್, ನಾರಾಯಣ ಬಲ್ಲಾಳ್ ಮತ್ತು ಸಾಮುವೇಲ್ ಸೋನ್ಸರು ಕಮಿಟಿ ಮೆಂಬರರಾಗಿ ಆರಿಸಲ್ಪಟ್ಟರು. ಈ ಸಭೆಯ ನಿರ್ಣಯಗಳನ್ನು ಸಂಬಂಧಪಟ್ಟವರಿಗೆಲ್ಲಾ ಕಳುಹಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡಲಾಯಿತು. ಬರುವ ಸಭೆಯು ತಾ. ೨೭–೯–೩೬ಕ್ಕೆ ಜರಗಬೇಕಾಗಿ ನಿರ್ಣಯಿಸಿ ಸಭೆಯು ಚದರಿತು.

ಚಂದಾದಾರರಲ್ಲಿ ವಿನಂತಿ.

ಈ ಮೊದಲಿನ ನವಯುಗದ ಎಲ್ಲಾ ಚಂದಾದಾರರಿಗೂ ಯಥಾ ಪ್ರಕಾರವಾಗಿ ಪತ್ರಿಕೆಯನ್ನು ಕಳುಹಿಸಿರುವೆವು. ನವಯುಗದ ಈ ನವ ಜೀವನ ಕಾಲದಲ್ಲಿ ಅವರೆಲ್ಲರೂ ಪ್ರೋತ್ಸಾಹಿಸುವರೆಂದು ದೃಢವಾಗಿ ನಂಬಿರುವೆವು. ತಮಗೆ ಪತ್ರಿಕೆಯು ಬೇಡವಾದವರು ದಯವಿಟ್ಟು ನಮಗದನ್ನು ತಿಳಿಸಬೇಕು. ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು ಆದಷ್ಟು ಬೇಗನೆ ದಯವಿಟ್ಟು ಕಳುಹಿಸಿ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.

ವಾಚಕರಲ್ಲಿ

ಈ ಸಲ ನವಯುಗದ ನವಜೀವನಾರಂಭದ ಸಂದೇಶಗಳನ್ನು ಪ್ರಕಟಿಸಬೇಕಾಗಿ ಬಂದುದರಿಂದ ದೇಶ, ವಿದೇಶ, ಹಾಗೂ ದಕ್ಷಿಣ ಕನ್ನಡದ ಹೆಚ್ಚಿನ ವಾರ್ತೆಗಳನ್ನು ಇತರ ಲೇಖನಗಳನ್ನೂ ಪ್ರಕಟಿಸಲು ಅನಾನುಕೂಲವಾದುದಕ್ಕಾಗಿ ವಿಷಾದಿಸುತ್ತೇವೆ.

ಮೆನೇಜರ್, ನವಯುಗ,
ಉಡುಪಿ.

ಸ್ವೀಕಾರ.

ಶ್ರೀ ಸತ್ಯಮಿತ್ರ ಬಂಗೇರರು ಪ್ರಕಟಿಸಿರುವ ಹೇಮಾಪ್ರ ಪತ್ರ ಎಂಬ ಪುಸ್ತಕವು ನಮ್ಮ ಕೈಸೇರಿದೆ. ಶ್ರೀಯುತರು ತನ್ನ ಪ್ರೀತಿಯ ಪುತ್ರಿಯು ಸಮಾಜದ ಕ್ರೂರ ನಿಯಮಗಳಿಗೆ ಬಲಿಯಾದ ಮರ್ಮಕರ ಘಟನೆಯನ್ನು ಚಿತ್ರಿಸಿರುವರಲ್ಲದೆ ತನ್ನ ವೃತ್ತಾಂತಗಳನ್ನೂ ಅದರಲ್ಲಿ ಸೇರಿಸಿರುವರು.

ಉಡುಪಿ, ತಾ. ೩-೯-೩೬ನೆ ಗುರುವಾರ

ಸ್ವವಿಷಯ

ನವಯುಗವು ತನ್ನ ಹದಿನೈದು ವರುಷಗಳನ್ನು ಕಳೆದು ಇದೀಗ ಹದಿನಾರರ ಗಡಿಯಲ್ಲಿ ಕಾಲಿಟ್ಟಿದೆ. ಬಾಲ್ಯದೆಸೆಯನ್ನು ದಾಟಿ ಯವ್ವನದ ಹೊಸ್ತಿಲಲ್ಲಿ ನಿಂತಿದೆ. ಜತೆಯಲ್ಲಿ ತನ್ನ ಭವಿಷ್ಯ ಜೀವನವನ್ನು ರೂಪಿಸಿಕೊಳ್ಳುವ ಪ್ರಬಲ ಜವಾಬ್ದಾರಿಯನ್ನೂ ಹೊತ್ತಿದೆ. ಹದಿನಾರರ ಆರಂಭವು ಮಾನವ ಜೀವನದಲ್ಲಿ ಹೊಣೆ ಹೊರುವ ಕಾಲ; ನಮಗೂ ಈ ಪ್ರಕೃತಿ ಸಿದ್ಧಾಂತವು ಅನ್ವಯಿಸಿದುದನ್ನು ನೋಡುವಾಗ ನಮ್ಮ ಕರ್ತವ್ಯವನ್ನು ಪ್ರಕೃತಿಯು ಹರಸೀತೆಂದು ತಿಳಿಯುತ್ತೇವೆ. ಪರಿಸ್ಥಿತಿಯು ನಮಗೆ ಸ್ವಾತಂತ್ರ್ಯದ ಕರೆಯನ್ನೀಯಲು ಮುಂದಾಗಿರುವಾಗ ನಾವೂ ಅದನ್ನು ಹಿಂಜರಿಯದೆ ಶಿರಸಾ ವಹಿಸುವ ಎದೆಗಾರರಾಗಿರುವೆವು.

ಕಳೆದ ೧೫ ವರ್ಷಗಳ ಸೇವೆಯ ಅಂತರಂಗ ಮತ್ತು ಬಹಿರಂಗ ಪರಿಣಾಮಗಳನ್ನು ಈ ಸಂದರ್ಭದಲ್ಲಿ ನಾವು ಒಂದಿಷ್ಟು ನೆನಸಿಕೊಳ್ಳುವೆವು, ಹಿಂದುಸ್ಥಾನದಂತಹ ಬಡ ದೇಶದಲ್ಲಿ ಜ್ಞಾನಪ್ರಸಾರದ ಕಡೆಗೆ ಲಕ್ಷ್ಯ ಕೊಡುವದು ಸುಲಭವಲ್ಲ. ಜನ ಸಾಮಾನ್ಯರ ಸಕಲಸಾಧನೆಗಳೂ ಉದರಾಗ್ನಿಯ ಶಮನದಲ್ಲಿಯೇ ಲೀನವಾಗುತ್ತಿರುವದು ಕಂಡು ಬರುತ್ತಿದೆ. ಇಂಥಾ ದುರ್ದೈವಿ ದೇಶದಲ್ಲಿ ಅದೂ ಕರಿಹಂಚಾಗಿರುವ ಕನ್ನಡನಾಡಿನಲ್ಲಿ ಪತ್ರಿಕಾ ಕಾರ್ಯವು ಅದೆಷ್ಟು ಪ್ರಯಾಸವಾದುದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಅಡಿಗಡಿಗೆ ತಡೆತೊಡರುಗಳೊಡನೆ ಹೋರಾಡಿ, ಎತ್ತಿ ತೋರಿಸುವಂತಹ ಪ್ರತ್ಯಕ್ಷ ರೂಪದ ಪರಿಣಾಮವೇನಾದರೂ ಇಲ್ಲದೆ ನಿರಾಶೆಯ ಸುಯ್ಲನ್ನೇ ಬಿಡುತ್ತಿರುವ ದುರ್ದೈವವು ಹೆಚ್ಚಿನ ಕನ್ನಡ ಪತ್ರಿಕೆಗಳನ್ನು ಕಾಡುತ್ತಿದೆ. ನವಯುಗದ ಅನುಭವವಾದರೂ ಇದನ್ನು ಬಿಟ್ಟಿಲ್ಲ. ಅಜ್ಞಾನ, ದಾರಿದ್ರ್ಯ, ಅಂಧಾನುಕರಣೆಯಿಂದ ಮಬ್ಬಾಗಿರುವ ವಾತಾವರಣದಲ್ಲಿ, ಸುಜ್ಞಾನ ಸುವಿಚಾರ, ನವಚೇತನವನ್ನುಂಟುಮಾಡುವ ಪತ್ರಿಕೆಗಳ ಕೆಲಸದ ಸತ್ಪರಿಣಾಮವು ಪ್ರತ್ಯಕ್ಷ ತೋರಿ ಬರುವಂತಿಲ್ಲ. ಆದರೆ ಆ ಕಾರ್ಯವು ಮಾತ್ರ ಪ್ರಾಮುಖ್ಯವಾದುದೆನ್ನುವದರಲ್ಲಿ ಸಂದೇಹವಿಲ್ಲ. ನವಯುಗವು ಈ ವರೆಗಿನ ಹದಿನೈದು ವರ್ಷಗಳಲ್ಲಿಯೂ ಇಂತಹ ಕಾರ್ಯದಲ್ಲಿ ನಿರತವಾಗಿದ್ದು, ಅಷ್ಟರಮಟ್ಟಿನ ಜನ ಸೇವೆ ಮಾಡಿರುವದೆಂದಿಷ್ಟೇ ಹೇಳಬಲ್ಲೆವು.

ನಾವು ಮಾಡಿರುವ ಜನತಾ ಸೇವೆಯ ವಿಧಾನದಲ್ಲಿ ನಮಗೇನೇ ಒಂದು ಬಗೆಯ ಸಮಾಧಾನವಿದೆ. ಯಾಕೆಂದರೆ ಅದರಲ್ಲಿ ಸ್ವಾರ್ಥವಿರಲಿಲ್ಲ, ಸಂಕುಚಿತತೆಯಿದ್ದಿಲ್ಲ. ಮುಂದಾದರೂ ನಮ್ಮ ಸೇವಾ ದೃಷ್ಟಿಯು ಕಾಲಸ್ಥಿತಿಗತಿಗಳ ಪರಿಶೀಲನೆಯಿಂದ ಉಜ್ವಲಗೊಳ್ಳುವದೆಂದು ನಾವು ಜನತೆಗೆ ಆಶ್ವಾಸನೆ ಕೊಡಬಲ್ಲೆವು. ನವಯುಗವು ನಿರ್ದಾಕ್ಷಿಣ್ಯ ನಿಷ್ಠುರತೆಯಿಂದ ನ್ಯಾಯವನ್ನು ಪ್ರತಿಪಾದಿಸಹೋಗಿ ಕಹಿಯಾದ ಅನುಭವವನ್ನು ತುಂಬಾ ಪಡೆದಿರುವದೆನ್ನಬಹುದು. ಆದರೂ ರಾಜಕೀಯವಾಗಿ, ಸಾಮಾಜಿಕವಾಗಿ—ಕೆಲವರ ಸ್ವಾರ್ಥದಿಂದ ಮೂಗಳಲ್ಪಟ್ಟ ಸಾರ್ವಜನಿಕ ಹಿತಚಿಂತನೆಯನ್ನು ಎತ್ತಿ ಹಿಡಿಯುವವರಲ್ಲಿರುವ ಸ್ವಾನಂದವು ನಮಗೆ ಹುರುಪಾಗಿ ನಿಂತಿದೆ. ಈ ಹುರುಪಿಗೆ ಈ ಸೇವೆಯ ಆತುರಕ್ಕೆ ತಕ್ಕ ವಾತಾವರಣವು ದೊರಕಲಾರದೆ? ಜನತೆಯು ಅದನ್ನು ಒದಗಿಸಿ ಕೊಡಲಾರದೆ? ನಾವೀಗ ನಮ್ಮ ಜನ ಬಾಂಧವರಲ್ಲಿ ಇಷ್ಟೇ ವಿನಂತಿಯನ್ನು ಮಾಡಿಕೊಳ್ಳುವೆವು. "ಸಾರ್ವಜನಿಕ ಹಿತಸಾಧನೆಯು ನಿಸ್ವಾರ್ಥ ಸೇವೆಯಿಂದಲೇ ಸಾಧ್ಯ; ಅಂತಹ ಸೇವಾ ಕಾರ್ಯಕ್ಕೆ, ಅದನ್ನಾಚರಿಸುವವರೂ, ಕೈಕೊಳ್ಳುವವರೂ ಹೊಣೆಗಾರರು. ನಾವೀಗ ಸೇವೆಯ ಆತುರದಿಂದ ಮುಂದೆ ಬಂದಿರುವೆವು; ನೀವದನ್ನು ಕೈಕೊಳ್ಳಲಾರಿರಾ?" ಈ ಪ್ರಶ್ನೆಗೆ ಕರ್ನಾಟಕದ ನಾಲ್ಕೂ ಕಡೆಗಳಿಂದ ಸದುತ್ತರವೇ ದೊರಕುವದೆಂದು ನಮಗೆ ದೃಢವಾದ ನಂಬಿಕೆಯಿದೆ. ಜನತೆಯ, ನಮ್ಮ ಬಂಧುಭಗಿನಿಯರ ಸಹಕಾರ ಬುದ್ಧಿಯ ಮೇಲೆ ಅವಿಶ್ವಾಸವಿಡುವವರು ನಾವಲ್ಲ. ನಮ್ಮ ಸೇವೆಯು ಯಥಾರ್ಥವಾದುದು; ಅದರ ಹಿಂಬದಿಯ ಬುದ್ಧಿಯು ನಿರ್ಮಲವಾದುದು; ಅವುಗಳ ಪರಿಣಾಮವಂತೂ ಕೇವಲ ಸಾರ್ವಜನಿಕವಾದುದು. ಹೀಗಿರುವಾಗ ನಮ್ಮ ಕೆಲಸದ ಮಧ್ಯದಲ್ಲಿ ದಿಗಂತದಲ್ಲೆಲ್ಲಿಯಾದರೂ ನಿರಾಶೆಯನ್ನಾಗಲೀ ಕಳಂಕವನ್ನಾಗಲೀ ನಾವೇಕೆ ಕಾಣಬೇಕು? ಜನತೆಯ ಶಕ್ತಿಯು ಕಾಲಸ್ಫೂರ್ತಿಯು ಅಧಿಕಾಧಿಕ ಆಹಾರವನ್ನು ಸ್ವೀಕರಿಸಿಯೇ ಬೆಳೆಯ ಬೇಕಾಗಿದೆ; ಅಂಥ ಆಹಾರವನ್ನು ಒದಗಿಸಿ ಕೊಡುವ ನವಯುಗಕ್ಕೆ ಸೋಲಿನ ಭಯವಿಲ್ಲ; ನಿರಾಶೆಯ ನಿರ್ಮಾಣವಿಲ್ಲ. ನವಯುಗವು ಮಾಡುವ ಜನ ಸಮೂಹದ ಹಾಗೂ ಕನ್ನಡನಾಡಿನ ಸೇವೆಯು ಪಕ್ವವದೆಂಬುದರಲ್ಲಿ ನಮಗಾವ ಸಂದೇಹವೂ ಇಲ್ಲ.

ಪತ್ರಿಕೆಯು ಹೊರಡುವ ಸ್ಥಳದ ಬದಲಾವಣೆಯ ಕುರಿತು ಎರಡು ಮಾತು. ಜನತಾ ಸೇವೆಯ ಧ್ಯೇಯವನ್ನಿಟ್ಟುಕೊಂಡಿರುವ ಪತ್ರಿಕೆಯೊಂದರ ಸ್ಥಳ ಬದಲಾವಣೆಯೆಂಬುದು ತೀರಾ ಅಪ್ರಾಮುಖ್ಯ ವಿಷಯ. ಆದರೂ ನಮ್ಮ ಕರ್ತವ್ಯದಲ್ಲಾಗುವ ಪರಿಣಾಮದ ದೃಷ್ಟಿಯಿಂದ ಇದೂ ಆಶೆಯನ್ನೇ ಹುಟ್ಟಿಸುತ್ತಿದೆ. ಉಡುಪಿಯು ಇಡೀ ದೇಶದಲ್ಲೇ ಪ್ರಸಿದ್ಧಿ ಪಡೆದಿರುವ ಪುಣ್ಯಕ್ಷೇತ್ರ. ಧಾರ್ಮಿಕ ಸಾಮಾಜಿಕ ಮತ್ತು ರಾಜಕೀಯ ಮಹಾಕ್ರಾಂತಿಯನ್ನೇ ಮಾಡಿ ನವ ಸಂದೇಶವಿತ್ತು ನವ ರಚನೆಯನ್ನೇ ಉಂಟುಮಾಡಿದ ಶ್ರೀ ಕೃಷ್ಣಮೂರ್ತಿಯಿರುವ ಪವಿತ್ರ ಸ್ಥಳ. ನವ ಸಿದ್ಧಾಂತಕಾರರಾಗಿ ನವೀನ ಮಧ್ವಮತವನ್ನೇ ಸ್ಥಾಪಿಸಿದ ಶ್ರೀಮಧ್ವಾಚಾರ್ಯರ ಕರ್ಮಕ್ಷೇತ್ರ. ಇದು ಹೊರತು ನಮ್ಮ ಜಿಲ್ಲೆಯ ಪಟ್ಟಣಗಳಲ್ಲಿ ಉಡುಪಿಗೆ ಎರಡನೇ ಸ್ಥಾನವಿದೆ. ಮೊದಲನೆಯದಾದ ಮಂಗಳೂರಿನಲ್ಲಿ ಹಲವು ವಾರ ಪತ್ರಿಕೆಗಳಿರುವಾಗ ಉಡುಪಿಯಲ್ಲಿ ಅಂತಹ ಒಂದೂ ಪತ್ರಿಕೆಯು ಇಲ್ಲದಿರುವ ಕೊರತೆಯನ್ನು ನವಯುಗವಿಂದು ನಿವಾರಿಸಿರುವದು. ಉಡುಪಿಯು ಇತ್ತೀಚೆಗೆ ಎಲ್ಲಾ ವಿಭಾಗಗಳಲ್ಲಿಯೂ ಅಭಿವೃದ್ಧಿಯನ್ನು ತೋರಿಸುತ್ತಾ ಬಂದಿರುವದು. ವಿದ್ಯಾವಂತರ, ಶಕ್ತಿವಂತರ, ತೇಜಸ್ವಿಗಳ, ಉದಾರಿಗಳ, ದೇಶಾಭಿಮಾನಿಗಳ ವ್ಯವಹಾರವಿದ್ದಲ್ಲಿ ಆಗಿಯೇ ಆಗುವ ಬೆಳವಣಿಗೆಯಿದು. ಈ ಅಭಿವೃದ್ಧಿಯಲ್ಲಿ ಹುಟ್ಟಿದೊಂದು ಅಪೇಕ್ಷೆಯೇ ಕರೆಯಾಗಿ ನಮ್ಮನ್ನಿಲ್ಲಿಗೆ ಕರೆಯಿತೆಂದು ನಮಗನ್ನಿಸುತ್ತದೆ. ನಾವು ಉಡುಪಿಯ ಒಂದು ಅಭಾವವನ್ನು ನಿವಾರಿಸಿರುವೆವೆಂಬ ಆತ್ಮಾನಂದದಿಂದಿರುವೆವು. ಹಾಗಾದುದು ಹೌದೆಂದು ನಮ್ಮ ಉಡುಪಿಯ ಬಂಧುಭಗಿನಿಯರು ಒಪ್ಪುವರಾದರೆ ನಮ್ಮ ಸೇವೆಯನ್ನು ಜಯಶೀಲವಾಗಿ ಸ್ವೀಕರಿಸುವ ಕೃಪೆ ಮಾಡುವರೆಂದು ನಂಬಿರುವೆವು.

ನಮ್ಮ ಧ್ಯೇಯ.

ನವಯುಗದ ಧ್ಯೇಯವು ಸ್ಪಷ್ಟವಿದೆ. 'ಜನಸೇವೆ'ಯೆಂಬ ಹೆಸರಿನಿಂದ ಜನತೆಯ ಅಜ್ಞಾನ ಅವಿಚಾರಗಳ ಸಂವರ್ಧನವನ್ನಿಟ್ಟುಕೊಂಡು ಮಧುರವಾಗಿ ನರ್ತಿಸಿ, ಸ್ವಕೀಯ ವಿಪತ್ತಿನಿಂದ ಪಾರಾಗಿ ಬಾಳುವ ವಂಚಿಕೆಯವರು ನಾವಲ್ಲ "ಬರಿಯ ಕಲ್ಪನೆಗಳಿಂದ ಮುಚ್ಚಿ ಹೋಗಿರುವ ಸಮೂಹದ ಶಕ್ತಿಯನ್ನು ಸ್ಫುಟಗೊಳಿಸಬೇಕು; ಜನತೆಗೆ ಬೇಕಾಗಿರುವ ಜ್ಞಾನವನ್ನು ಒದಗಿಸಿ ಕೊಡಬೇಕು; ಎಲ್ಲೆಲ್ಲಿಯೂ ವಂಚಿಸಲ್ಪಡುತ್ತಿರುವ ಜನ ಸಾಮಾನ್ಯರ ಹಕ್ಕು ರಕ್ಷಣೆಯ ನಿರ್ದಾಕ್ಷಿಣ್ಯ ವಾದಿಗಳಾಗಬೇಕು." ಎಂಬುದೇ ನಮ್ಮ ಸ್ಪಷ್ಟ ಧ್ಯೇಯ. ನಮ್ಮಾ ಧ್ಯೇಯವು ಸುಲಭದಲ್ಲಿ ಸಾಧಿಸಲ್ಪಡುವಂತಹುದಲ್ಲ. ಸಾಧನೆಗೆ ಪ್ರಬಲವಾದ ತೊಡಕುಗಳಿರಬಹುದು. ಆ ತೊಡಕುಗಳು, ಹಕ್ಕು, ತ್ರಾಣ ಇವೆರಡೂ ಇರುವದರಿಂದಲೇ ಬರಬಹುದು. ನಾವೂ ಹಕ್ಕು ತ್ರಾಣವಿದ್ದಲ್ಲಿ ಆರಾಧನೆಯ ಪುಷ್ಪಫಲಗಳನ್ನರ್ಪಿಸಿ ನೆಮ್ಮದಿಯಿಂದಿರಬಹುದು. ಆದರೆ ಅವುಗಳನ್ನು ಅಜ್ಞಾನದಿಂದ ಒಪ್ಪಿಸಿಕೊಟ್ಟು ಕೊರಗುತ್ತಿರುವ ಸಮೂಹವನ್ನು ಮರೆಯುವದೆಂದರೆ ಹೇಗದು? ನ್ಯಾಯವನ್ನೇ ಮರೆತಂತಾಗುವದಿಲ್ಲವೇನು? ಆದ್ದರಿಂದ ಇಷ್ಟೊಂದು ಖಂಡಿತ; ದೀನ ದಲಿತ ಜನಾಂಗದ ಶಕ್ತಿನಿರ್ಮಾಣವೇ ನಮ್ಮ ನಿಶ್ಚಲವಾದ ಗುರಿ ಈ ನಿರ್ಮಾಣದ ಪ್ರಬಲವಾದ ತೊಡಕುಗಳನ್ನು ಇದಿರಿಸುವಾಗ ನಮಗುಂಟಾಗುವ ಧಕ್ಕೆಯನ್ನು ಹೇಗೆ ನಿವಾರಿಸಬಹುದು? ನಾವು ಕಳಕೊಳ್ಳುವ ಶಕ್ತಿಯ ಅಂಶವನ್ನು ಹೇಗೆ ಸಂಪಾದಿಸಬಲ್ಲೆವು? ನಿಜವಾಗಿಯೂ ಸಾಧ್ಯವಿದೆ. ನಾವು ಆರಾಧಿಸುವ ಜನ ಸಾಮಾನ್ಯರೇ ಲೋಕದ ಎಲ್ಲಾ ಶಕ್ತಿಗಳ ಜನ್ಮದಾತರು. ಹಾಗಿದ್ದೂ ತಮ್ಮನ್ನು ತಾವು ಅರಿತುಕೊಳ್ಳಲಿಲ್ಲವಲ್ಲಾ ಎಂದೇ ನಮ್ಮ ಸಂತಾಪ. ನಮ್ಮ ಹೃದಯವು ಹೀಗಿರುವಾಗ ಸರ್ವಶಕ್ತಿಯ ಪರವಾಗಿ ನಾವು ಕೆಲಸ ಮಾಡುವಾಗ, ನಮ್ಮಲ್ಲೊಂದು ಶಕ್ತಿಯು ತುಂಬಿ ಬರುವದರಲ್ಲಿಯೂ ಸಂದೇಹವೇ? ಎಂದೂ ಇಲ್ಲ. ನಾವು ಆ ಸಂದೇಹ, ನಿರಾಶೆ, ಭಯಗಳ ಮಬ್ಬಿನ ಕಲ್ಪನೆಯೂ ಇಲ್ಲದೆ, ಕನ್ನಡ ನಾಡಿನ ಜನತೆಯಲ್ಲಿ ಮಾಡಿಕೊಳ್ಳುವ ವಿನಂತಿಯಿದು. ನವಯುಗವು ಜನ ಸಮೂಹದ ನವಕಾಲದ ನವರಚನೆಯ ಒಂದು ಆಯುಧ ಮನೆದು, ಅದನ್ನು ತಮ್ಮದಾಗಿ ಉಪಯೋಗಿಸಿಕೊಳ್ಳುವ ಕರ್ತವ್ಯವು ಸಾರ್ವಜನಿಕರದ್ದು. ಅದನ್ನು ಸಿದ್ಧಗೊಳಿಸಿ ಕೊಡುವ ಚಾಕರಿಯೊಂದೇ ನಮ್ಮದು. ಅಷ್ಟನ್ನು ನಮ್ಮ ಶಕ್ತಿ ಮೀರಿಯೂ ಸಾಧಿಸುವೆವು. ಪ್ರಯೋಗಕ್ಕೆಹಚ್ಚುವ ತಮ್ಮ ಹೊಣೆಗಾರಿಕೆಯನ್ನು ಮಾತ್ರ ಸಾರ್ವಜನಿಕರು ಮರೆಯುವರೋ ಎಂದು ನಾವು ಸಂದೇಹ ಪಡಬೇಕೆ? ಎಂದೂ ಕೂಡದು. ಅವರು ನಮಗಿತ್ತ ಸ್ಫೂರ್ತಿಯೇ ನಮ್ಮನ್ನಿಲ್ಲಿವರೆಗೆ ನಡೆಯಿಸಿಕೊಂಡು ಬಂದಿರುವಾಗ ಅವರ ಪರಿಸ್ಥಿತಿಯ ಜ್ಞಾನವೇ ರೂಪುಗೊಂಡು ನವಯುಗಕ್ಕೀ ಧ್ಯೇಯವನ್ನು ನಿರ್ಮಿಸಿರುವಾಗ ಇನ್ನು ಮುಂದಿನ ಪ್ರೋತ್ಸಾಹದ ಕುರಿತು ಸಂದೇಹ ಕಟ್ಟಿಕೊಳ್ಳುವಷ್ಟು ಚಂಚಲಿಗಳು ನಾವಲ್ಲ. ಸಾರ್ವಜನಿಕರು ನಮ್ಮನ್ನು ಹರಸಿಯೇ ಹರಸುವರು.

ಲೇಖಕರಲ್ಲಿ ಮತ್ತು ಬಾತ್ಮಿದಾರರಲ್ಲಿ.

ನವಯುಗವು ವಾಚಕರ ಸೇವೆಯನ್ನು ಇನ್ನಷ್ಟು ಸುಧಾರಿತ ರೀತಿಯಿಂದ ಮಾಡಬೇಕೆಂದು ನಿರ್ಧರಿಸಿರುವಾಗ ನಮ್ಮ ಎಲ್ಲಾ ಲೇಖಕರ ಮತ್ತು ಬಾತ್ಮೀದಾರರ ಈ ವರೆಗಿನ ಸಹಕಾರಕ್ಕಾಗಿ ಕೃತಜ್ಞತೆಯನ್ನು ತೋರಿಸಿ, ಅವರು ಇನ್ನು ಮುಂದೆಯೂ ನಮ್ಮ ಕರ್ತವ್ಯದಲ್ಲಿ ಪಾಲುಪಡೆಯುವರೆಂದು ದೃಢವಾಗಿ ನಂಬಿರುವೆವು. ನಮಗೆ ಬರತಕ್ಕ ಲೇಖನಗಳೂ ಬಾತ್ಮಿಗಳೂ, ನಿಷ್ಪಕ್ಷವಾಗಿದ್ದು, ಆದಷ್ಟು ಚುಟುಕಿನಲ್ಲಿರಬೇಕೆಂದು ನಮ್ಮ ಅಪೇಕ್ಷೆ. ಲೇಖಕರೂ ಬಾತ್ಮೀದಾರರೂ ನಮ್ಮಾ ಸೂಚನೆಯ ಕಡೆಗೆ ಗಮನವೀಯಬೇಕಾಗಿ ವಿನಂತಿ.

ಚಂದಾದಾರರಲ್ಲಿ.

ನವಯುಗವಿಂದು ತನ್ನ ಹದಿನೈದು ವರುಷಗಳ ಅನುಭವವನ್ನು ಉಪಯೋಗಿಸಿ ವಾಚಕರ ಸೇವೆಯನ್ನು ಇನ್ನಷ್ಟು ಹುರುಪಿನಿಂದ ಮಾಡಬೇಕೆಂದು ನಿರ್ಧರಿಸಿರುವದು. ಈ ಸಂದರ್ಭದಲ್ಲಿ ಈ ತನಕ ಪ್ರೋತ್ಸಾಹಿಸಿರುವ ಚಂದಾದಾರರೆಲ್ಲರ ಉಪಕಾರವನ್ನು ಸ್ಮರಿಸುವೆವು. ಇನ್ನು ಮುಂದಕ್ಕೂ ಅವರು ನಮ್ಮನ್ನು ಪ್ರೋತ್ಸಾಹಿಸುವದಲ್ಲದೆ, ಪ್ರತಿಯೊಬ್ಬ ಚಂದಾದಾರನೂ ಒಬ್ಬ ಚಂದಾದಾರನಂತೆ ಹೆಚ್ಚು ಸೇರಿಸಿ, ನವಯುಗವು ಸರ್ವಾಂಗ ಸಂಪೂರ್ಣತೆಯಿಂದ ಕನ್ನಡಿಗರ ಸೇವೆಮಾಡಲು ಅನುಕೂಲಮಾಡಿಕೊಡಬೇಕೆಂದು ಆಗ್ರಹಪೂರ್ವಕ ವಿನಂತಿ ಮಾಡಿಕೊಳ್ಳುವೆವು.

ಜಾಹೀರಾತುದಾರರಲ್ಲಿ.

ದೇಶದ ಆರ್ಥಿಕ ದುಸ್ಥಿತಿ, ಕನ್ನಡ ನಾಡಿನ ಭಿನ್ನ ಭಿನ್ನ ಆಡಳಿತೆ ಇವುಗಳಿಂದಾಗಿ ಕನ್ನಡ ಪತ್ರಿಕೆಗಳ ಅವಸ್ಥೆಯು ಶೋಚನೀಯವೇ ಸರಿ. ಇಂತಹ ಸಂದರ್ಭದಲ್ಲಿ ಜಾಹೀರಾತುದಾರರ ಸಹಕಾರವು ಅತ್ಯಂತ ಗಣನೀಯವಾದುದು. ಪಾಶ್ಚಿಮಾತ್ಯ ದೇಶಗಳಲ್ಲಿ ಜಾಹೀರಾತೆಂಬುದು ವ್ಯಾಪಾರಿಗಳ ಅಗತ್ಯ ಕರ್ತವ್ಯಗಳಲ್ಲೊಂದಾಗಿ ನಿಂತಿದೆ. ಕನ್ನಡ ನಾಡಿನಲ್ಲಿ ಈ ತರಹ ಹೆಚ್ಚಿನ ಜಾಗ್ರತಿಯುಂಟಾಗುವದು ಅಗತ್ಯ. ಜಾಹೀರಾತುದಾರರು ತಮ್ಮ ಕಾರ್ಯ ಸಾಧನೆ ಹಾಗೂ ಜನತಾ ಸೇವೆ ಇವೆರಡನ್ನೂ ಒಮ್ಮೆಗೇ ಮಾಡಿದಂತಾಗುವದೆಂಬುದನ್ನು ಮರೆಯಬಾರದು.

ನಮ್ಮನ್ನು ಈ ತನಕ ಪ್ರೋತ್ಸಾಹಿಸಿದ ಎಲ್ಲಾ ಜಾಹೀರಾತುದಾರರಿಗೂ, ಈ ಸಂದರ್ಭದಲ್ಲಿ ನಮ್ಮ ಹೃತ್ಪೂರ್ವಕ ಧನ್ಯವಾದಗಳಿವೆ. ಇನ್ನು ಮುಂದೆಯೂ ನಮಗೆ ಬೆಂಬಲವನ್ನಿತ್ತು ನಮ್ಮ ಕೃತಜ್ಞತೆಗೆ ಪಾತ್ರರಾಗಬೇಕಾಗಿ ಪ್ರಾರ್ಥಿಸುತ್ತೇವೆ.

ಉಡುಪಿ ಮುನ್ಸಿಪಲ್ ಚೆಯರ್ ಮೆನರ ಚುನಾವಣೆ.

ಆಗೋಸ್ತು ತಾ. 31ರಲ್ಲು ನಡೆದ ಉಡುಪಿ ಮುನಿಸಿಪಾಲಿಟಿಯ ಪ್ರಥಮ ಸಭೆಯಲ್ಲಿ ಶ್ರೀ. ಎಡ್ವಕೇಟ್ ಆರೂರು ಲಕ್ಷ್ಮೀನಾರಾಯಣರಾಯರು ಸರ್ವಸಮ್ಮತಿಯಿಂದ ಚೇಯರ್ ಮೆನರಾಗಿ ಆರಿಸಲ್ಪಟ್ಟಿರುವುದು ಅಭಿನಂದನೀಯವಿದೆ ಶ್ರೀ ರಾಯರು ಉಡುಪಿಯ ಅಗ್ರಗಣ್ಯ ವಕೀಲರಲ್ಲೊಬ್ಬರು, ಹಿಂದೆ ತಾಲೂಕು ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿದ್ದವರು, ಶಂಕರ್ ವಿಟ್ಠಲ್ ಬಸ್ ಕಂಪೆನಿಯ ಮ್ಯಾನೇಜರು, ಸಾರ್ವಜನಿಕ ಕಾರ್ಯದಲ್ಲಿ ಸಾಕಷ್ಟು ನುರಿತವರು, ಉಡುಪಿಯ ಜನತೆಯ ಸಂಕಷ್ಟ, ಕೊರತೆಗಳನ್ನೆಲ್ಲಾ ಚೆನ್ನಾಗಿ ಬಲ್ಲವರು. ಆದುದರಿಂದ ತನ್ನ ಪರಿಪಕ್ವ ಅನುಭವದ ಸಹಾಯದಿಂದ ಉಡುಪಿ ಮುನಿಸಿಪಾಲಿಟಿಯ ಆಡಳಿತವನ್ನು ಯಶಸ್ವಿಯಾಗಿ ನಡಿಸಿ, ಪಟ್ಟಣಿಗರ ಅನುಕೂಲತೆಗಳನ್ನು ಹೆಚ್ಚಿಸಿ ಉಡುಪಿಯು ಸರ್ವಾಂಗ ಸುಂದರ ಪಟ್ಟಣವಾಗುವಂತೆ ಪ್ರಯತ್ನಿಸುವಂತಾಗಲೆಂದು ಹಾರೈಸುತ್ತೇವೆ.

ಉಡುಪಿ ಮುನಿಸಿಪಲ್ ಚುನಾವಣೆಯು ವೈಯಕ್ತಿಕವಾಗಿ ಹೋರಾಡಲ್ಪಟ್ಟರೂ ಆರಂಭದಲ್ಲಿ ಜಾತೀಯತೆಯ ಭೂತದ ಚೇಷ್ಟೆ ಸ್ವಲ್ಪ ವಿದ್ದಿತೆನ್ನಬಹುದು. ಆದರೆ ಅದು ಆರಂಭದಲ್ಲೇ ಉಚ್ಚಾಟನೆಯಾದಂತೆ ತೋರುವುದು. ಅನಂತರ ಈಗ ಮುನಿಸಿಪಲ್ ಚೇಯರ್ ಮೆನರ ಚುನಾವಣೆಯಲ್ಲಿ ಜಾತೀಯತೆಗೆ ಸ್ವಲ್ಪವೂ ಆಸ್ಪದವಿರದ ಸಕಲ ಜಾತಿಗಳವರ ವಿಶ್ವಾಸಕ್ಕೆ ಪಾತ್ರರಾದವರೆ ಆರಿಸಿ ಬಂದಿರುವರೆಂಬುದು ನಮಗೆ ಅತ್ಯಂತ ಸಂತೋಷ ವಿಷಯವಿದೆ. ಚೇಯರ್‌ಮೆನ ಚುನಾವಣೆಯ ಮೊದಲು ಮೂರು ಮಂದಿ ಮೆಂಬರರು ಸಭೆ ಬಿಟ್ಟು ಹೋಗಿರುವ ಶೋಚನೀಯ ವಿದ್ಯಮಾನ ನಡೆದಿರುವುದಾದರೂ ಅದಕ್ಕೂ ಚೇಯರ್‌ಮೆನರ ಚುನಾವಣೆಗೂ ಯಾವ ಸಂಬಂಧವೂ ಇದ್ದಂತೆ ತೋರುವುದಿಲ್ಲ. ಸಾರ್ವಜನಿಕ ಕಾರ್ಯಕ್ಷೇತ್ರವನ್ನು ವ್ಯಕ್ತಿ, ಜಾತಿದ್ವೇಷ ಸಂಕುಚಿತತೆಗಳಿಂದ ಎಂದೂ ಕಳಂಕಿತಗೊಳಿಸಬಾರದು. ಆದರಿಂದ ತೋರುವಿಕೆಗೆ ಸ್ವಲ್ಪ ಪ್ರಯೋಜನವಾದಂತಾದರೂ ಕಟ್ಟಕಡೆಗೆ ಪರಿಣಾಮವು ಎಂದೂ ನೆಟ್ಟಗಾಗಲಾರದು. ಆದುದರಿಂದ ಉಡುಪಿ ಮುನಿಸಿಪಾಲಿಟಿಯ ಮೆಂಬರರು ಚುನಾವಣೆಯ ತಿಕ್ಕಾಟದಿಂದಾಗಲಿ ಅಥವಾ ಇನ್ನಾವ ಕಾರಣದಿಂದಾಗಲಿ, ತಮ್ಮಲ್ಲಿ ಏನಾದರೂ ದ್ವೇಷಾಸೂಯೆ ಉಂಟಾಗಿದ್ದರೆ ಅವನ್ನೆಲ್ಲಾ ಇಡೀ ಪಟ್ಟಣ ಹಿತದ ವ್ಯಾಪಕ ದೃಷ್ಟಿಯಿಂದ ಮೂಲೆಗೊತ್ತಿ ನಗರದಾಡಳಿತವು ಸುಗಮವಾಗಿಯೂ, ಸಸೂತ್ರವಾಗಿಯೂ, ಅಭಿವೃದ್ಧಿಕರವಾಗಿಯೂ ನಡೆಸಲ್ಪಡುವಂತೆ ಪ್ರಯತ್ನಿಸುವರಾಗಿ ನಂಬುತ್ತೇವೆ.

ಅಡಿಕೆ ತೋಟಗಳಿಗೆ ಮಹಾಲಿ ರೋಗ ಹಾವಳಿ

ಕಾಸರಗೋಡು, ಪುತ್ತೂರು ತಾಲೂಕುಗಳ ಮುಖ್ಯ ಬೆಳೆಗಳಲ್ಲೊಂದಾದ ಅಡಿಕೆಗೆ ಈ ವರ್ಷ ಮಹಾಲಿ ರೋಗ ತಗಲಿ ತೋಟ ತೋಟಗಳೇ ಹಾಳಾಗಿರುತ್ತವೆ. ಇದರಿಂದ ಅಡಿಕೆ ವ್ಯವಸಾಯಗಾರರು ತಮ್ಮ ಸರ್ವಸ್ವವನ್ನೂ ಕಳಕೊಳ್ಳುವಂತಾಗಿದೆಯೆಂದರೂ ಅತಿಶಯೋಕ್ತಿಯಾಗದು. ಕೆಲವರು ತೋಟಗಳನ್ನೇ ಬಿಟ್ಟು ಹೋಗಿರುವರೆಂದು ತಿಳಿದು ಬರುತ್ತದೆ. ಚಿಕ್ಕ ಚಿಕ್ಕ ತೋಟಗಳ ಮಾಲಕರು ಮುಂದಿನ ಜೀವನೋಪಾಯವೇ ತೋರದೆ ನಿರಾಶೆಯ ನಿಟ್ಟುಸಿರಿನಿಂದಲೇ ದಿನ ದೂಡಬೇಕಾಗಿದೆ ಎಲ್ಲೆಲ್ಲಿಯೂ ಜನರ ಗೋಳಿದ್ದಿದೆ. ಇಂತಹ ಪರಿಸ್ಥಿತಿಯಲ್ಲಿ ಸರಕಾರವು ಈ ಅಡಿಕೆ ತೋಟಗಳಿಗೆ ಸಹಾಯಕ್ಕೆ ಬಾರದಿದ್ದಲ್ಲಿ ಅಡಿಕೆ ವ್ಯವಸಾಯವೇ ನಾಮಾವಶೇಷವಾಗಬಹುದು. ಶ್ರೀ ಎ. ಬಿ. ಶೆಟ್ಟಿ ಎಮ್. ಎಲ್. ಸಿ. ಯವರು ಈ ಹಾವಳಿಯನ್ನು ಸ್ವತಃ ನೋಡಿ ವಿಚಾರಿಸಿ ತಿಳಕೊಂಡಿದ್ದರು. ಅವರೂ, ಶ್ರೀಗಳಾದ ಮೊಳಹಳ್ಳಿ ಶಿವರಾವ್, ಖಂಡಿಗೆ ಮಹಾಲಿಂಗಭಟ್, ಯು. ಸಿ. ಸುಬ್ರಹ್ಮಣ್ಯ ಭಟ್, ಎಮ್. ಎಸ್. ಕೃಷ್ಣ ಮತ್ತು ಮಹಮ್ಮದ್ ಶಮ್ನಾಡರು ಆಗೋಸ್ತು ತಾ. 27ರಲ್ಲು ಮಾನ್ಯ ರೆವಿನ್ಯೂ ಮೆಂಬರರನ್ನು ಕಂಡು, ಅಡಿಕೆ ತೋಟಗಳಿಗುಂಟಾಗಿರುವ ಪ್ರಬಲ ಹಾವಳಿಯನ್ನವರಿಗೆ ತಿಳಿಸಿ, ಕಂದಾಯದ ತೀರ್ವೆ ಮಾಫಿಮಾಡಬೇಕೆಂದು ಕೇಳಿಕೊಂಡರು. ಮಾನ್ಯ ರೆವಿನ್ಯೂ ಮೆಂಬರರಾದ ಸೂಟರ್ ಧೊರೆಗಳು ಇದೇ ಸಪ್ಟೆಂಬರ ತಿಂಗಳಲ್ಲಿ ತಾನು ಸ್ವತಃ ಅಡಿಕೆ ತೋಟಗಳನ್ನು ನೋಡಿ ಈ ವಿಷಯದಲ್ಲಿ ತನ್ನಿಂದ ಸಾಧ್ಯವಾದುದನ್ನು ಮಾಡುವೆನೆಂದು ಭರವಸೆ ಕೊಟ್ಟರು. ಆ ಮೇಲೆ ಶ್ರೀ. ಎ. ಬಿ. ಶೆಟ್ರೇ ಮೊದಲಾದವರು, ಪಬ್ಲಿಕ್ ವರ್ಕ್ಸ್ ಖಾತೆಯ ಮಂತ್ರಿಗಳಾದ ಮಾನ್ಯ ಪಿ. ಟಿ. ರಾಜನವರನ್ನು ಕಂಡು ಮಾತಾಡಿದಾಗ ಅವರು ಹಾವಳಿಯ ಸ್ಥಳಕ್ಕೆ ಕೂಡಲೇ ಕೃಷಿ ಇಲಾಖೆಯ ಡೈರೆಕ್ಟರರನ್ನು ಕಳುಹಿಸುವೆನೆಂದರು. ಕೌನ್ಸಿಲಿನಲ್ಲಿ ಶ್ರೀ. ಎ. ಬಿ. ಶೆಟ್ರ ಪ್ರಶ್ನೆಗಳಿಗೆ ದೊರೆತ ಉತ್ತರದಿಂದ, ಈ ಮಹಾಲಿ ರೋಗವು ಕಳೆದ 20 ವರ್ಷಗಳಿಂದ ದಕ್ಷಿಣ ಕನ್ನಡದ ಅಡಿಕೆ ತೋಟಗಳಿಗೆ ಹಾವಳಿಮಾಡುತ್ತಿದೆ ಎಂದು ತಿಳಿದು ಬರುತ್ತದೆ. ಆದರೂ ಸರಕಾರವು ಕಂದಾಯವನ್ನು ಮಾತ್ರ ಹೆಚ್ಚಿಸಿ, ಈ ರೋಗದ ಹಾವಳಿಯನ್ನು ನಿರ್ಮೂಲಿಸಲು ಪ್ರಬಲ ಪ್ರಯತ್ನವನ್ನೇನೂ ನಡಿಸಿರುವಂತಿಲ್ಲ. ಈ ರೋಗ ತಗಲಿದೊಡನೆಯೇ 'ಬೋರ್ಡೋ ಮಿಕ್ಸ್ಚರ್' ಎಂಬ ದ್ರಾವಕವನ್ನು ಚಿಮುಕಿಸುವ ಕೆಲಸವು ಮಳೆಗಾಲದಲ್ಲಿ ಪ್ರಯೋಜನವಿಲ್ಲ ಮತ್ತು ಅದು ಹೊಟ್ಟೆಪಾಡಿಗೆನೇ ಸಾಕಷ್ಟು ಅನುಕೂಲತೆಯಿಲ್ಲದ ಬಡ ರೈತರಿಗೆ ಅದಕ್ಕೆ ಹಣ ವ್ಯಯಿಸಲು ಸಾಧ್ಯವಿಲ್ಲ ಸರಕಾರವೇ ಪ್ರಯತ್ನಪಟ್ಟು ಈ ರೋಗವನ್ನು ನಿರ್ಮೂಲಿಸುವಂತೆ ನೋಡಬೇಕು ಮತ್ತು ಹಾವಳಿಗೊಳಗಾಗಿ ಬಹಳ ನಷ್ಟಪಟ್ಟವರಿಗೆಲ್ಲಾ ಕಂದಾಯ ಮಾಫಿ ಮಾಡಲೇ ಬೇಕು.

ಅತಿ ಕಡಿಮೆಯ ಟೆಂಡರುಗಳನ್ನೇ ಸ್ವೀಕರಿಸಬೇಕು.

ಟೆಂಡರುಗಳನ್ನು ಸ್ವೀಕರಿಸುವ ಕುರಿತು ಸರಕಾರವು ಮಾಡಿರುವ ನಿಯಮಗಳನ್ನು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರುಗಳು ಆಗಾಗ್ಗೆ ಉಲ್ಲಂಘಿಸಿ ನಡೆಯುವರೆಂದು ದೂರು ಬಂದಿರುವುದರಿಂದ ಸರಕಾರ ಆ ಕುರಿತು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರುಗಳನ್ನು ವಿಚಾರಿಸಿ ಕೆಲವು ಸೂಚನೆಗಳನ್ನಿತ್ತಿರುವುದು. ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ಸರ್ವ ಸಾಧಾರಣವಾಗಿ ಅತಿ ಕಡಿಮೆಯ ಟೆಂಡರುಗಳನ್ನೇ ಸ್ವೀಕರಿಸತಕ್ಕದ್ದು. ಅತಿ ಕಡಿಮೆಯ ಟೆಂಡರು ಸ್ವೀಕರಿಸುವುದು ಸರಿಯಲ್ಲವಾದಲ್ಲಿ ಅದಕ್ಕೆ ಸ್ಪಷ್ಟವಾದ ಕಾರಣಗಳನ್ನಿತ್ತು ಅವನ್ನು ಬರೆದಿಟ್ಟುಕೊಳ್ಳಬೇಕು. ಅತ್ಯಂತ ಕಡಿಮೆಯ ಟೆಂಡರುಗಳನ್ನು ನಿರಾಕರಿಸಿದ ಮೇಲೆ ಎರಡನೇದಾಗಿ ಅತಿ ಕಡಿಮೆಯ ಟೆಂಡರನ್ನು ಸ್ವೀಕರಿಸತಕ್ಕದ್ದು. ಹೆಚ್ಚಿಗೆ ಟೆಂಡರು ಕೊಟ್ಟವನನ್ನು ಕಡಿಮೆ ಟೆಂಡರು ಸ್ವೀಕರಿಸ ಹೇಳುವ ಪದ್ಧತಿಯು, ಟೆಂಡರಿನ ಕ್ರಮಕ್ಕೇನೇ ವಿರೋಧವಾದುದರಿಂದ ಅದನ್ನು ನಿಲ್ಲಿಸಿಯೇ ಬಿಡಬೇಕು. ಸರ್ವ ಸಾಧಾರಣವಾಗಿ ಟೆಂಡರುಗಳನ್ನು ತೆರೆದ ಒಂದು ಹಪ್ತೆಯೊಳಗೆ ತೀರ್ಮಾನಿಸಬೇಕು. ಯಾವ ಸಂದರ್ಭದಲ್ಲೂ ಒಂದು ತಿಂಗಳು ಮೀರಬಾರದು. ಇನ್ನು ಮುಂದೆ ಹೆಚ್ಚು ಟೆಂಡರು ಕೊಟ್ಟವನನ್ನು ಕಡಿಮೆ ಟೆಂಡರು ಕೊಟ್ಟವನ ರೇಟಿನಲ್ಲಿಯೇ ಮಾಡಿಕೊಡ ಹೇಳುವ ಕ್ರಮವು ಅಧಿಕಾರದ ದುರುಪಯೋಗವೆಂದು ಪರಿಗಣಿಸಲ್ಪಟ್ಟು ಅದಕ್ಕಾಗಿ 1920ನೇ ಮದ್ರಾಸ ಲೋಕಲ್ ಬೋರ್ಡ್ ಆಕ್ಟಿನ ಸೆಕ್ಷನ್ 43 ಪ್ರಕಾರ ಪ್ರೆಸಿಡೆಂಟರು ತೆಗೆದು ಹಾಕಲ್ಪಡುವ ಶಿಕ್ಷೆಗೆ ಗುರಿಮಾಡಲ್ಪಡಬಹುದು. ಇದಲ್ಲದೆ ಸರಕಾರದವರು ಹಣ ಸಹಾಯ ನೀಡುವ ಕೆಲಸಗಳ ಕಂಟ್ರಾಕ್ಟುಗಳ ವಿಷಯದಲ್ಲಿ ಸರಕಾರದವರ ಹುಕೂಮತ್ತು ಪಡೆಯಬೇಕು. ಸರಕಾರವು ಟೆಂಡರುಗಳ ವಿಷಯದಲ್ಲಿ ಕೊಟ್ಟಿರುವ ನಿಯಮಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರುಗಳು ತಪ್ಪದೆ ಪಾಲಿಸತಕ್ಕದ್ದು.

ದುಃಖಕರ ಮರಣ:— ಕೊಳಲು, ಮುರ್ಲಿ, ನಾಗಸ್ವರ ಮೊದಲಾದ ಸಂಗೀತ ಕಲೆಯಲ್ಲಿ ಅತ್ಯಂತ ನಿಪುಣರಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲೂ, ಹೊರಗೂ ಹೆಸರು ಪಡೆದಿದ್ದ ಶ್ರೀಯುತ ಓಬುಸೇರಿಗಾರರು ಕಳೆದ ತಾ ೨೬ರಲ್ಲು ನಿಧನ ಹೊಂದಿರುವುದು ಅತ್ಯಂತ ಶೋಚನೀಯವಿದೆ ದಿವಂಗತರು ಪರಪ್ರಾಂತ್ಯಗಳಲ್ಲೂ ತನ್ನ ನೈಪುಣ್ಯದಿಂದ ಮೆಚ್ಚುಗೆಗೆ ಪಾತ್ರರಾಗಿ ಉಡುಪಿಗೆ ಕೀರ್ತಿಯನ್ನು ತಂದವರಿದ್ದು. ಅವರ ನಿಧನವು ಸ್ಥಳೀಕ ಸಂಗೀತ ಕಲೆಗೊಂದು ದೊಡ್ಡ ಧಕ್ಕೆಯನ್ನುವವದಲ್ಲಿ ಸಂದೇಹವಿಲ್ಲ.

ಉಡುಪಿ ಶ್ರೀಕೃಷ್ಣದೇವಸ್ಥಾನದಲ್ಲಿ ಕಾಯಿಹರಕೆಯ ಸಮಯ ಅರ್ಚಕರು ಒಡೆದ ಕಾಯಿಗೊಂದು ಮುಕ್ಕಾಲಿನಂತೆ ಪಡಕೊಳ್ಳುವ ರೂಢಿಯಿದೆ. ಇದರಿಂದ ಬಡವರಿಗೆ ದೇವಾರಾಧನೆಗೆ ಅನಾನುಕೂಲವಾದುದರಿಂದ ಬರುವ ಅಷ್ಟಮಿಯ ಸಮಯದಲ್ಲಾದರೂ ಅದನ್ನು ಬಿಟ್ಟುಬಿಟ್ಟರೆ ಉಪಕಾರವಿತ್ತು, ಎಂದೊಂದು ಬಾತ್ಮಿ.

ದಕ್ಷಿಣಕನ್ನಡ

ಉಡುಪಿ

ಉಡುಪಿ ಮುನಿಸಿಪಲ್ ಸ್ಪೆಶ್ಯಲ್ ಆಫೀಸರರ ಹೇಳಿಕೆ.

ನಮ್ಮ ಪ್ರತಿನಿಧಿಯು ಕಳೆದ ತಾ. 31—9—'36ರಲ್ಲು ಉಡುಪಿ ಮುನಿಸಿಪಾಲಿಟಿಯ ಸ್ಪೆಶ್ಯಲ್ ಆಫೀಸರರನ್ನು ಸಂಧಿಸಿ, ತೆರಿಗೆದಾರರ ಸಂಘದ ನಿರ್ಣಯಗಳ ಕುರಿತು ಅಭಿಪ್ರಾಯ ಕೇಳಿದಾಗ ಅವರಿತ್ತ ಹೇಳಿಕೆ—

"ಕರವಿಧಿಸುವಾಗ ಎಕ್ರೆಗೆ ೬೦೦ರಿಂದ ಹಿಡಿದು. ಅತ್ಯಂತ ಲಾಭದಾಯಕ ಸ್ಥಳಗಳಿಗೆ ಹೆಚ್ಚೆಂದರೆ ೨,೦೦೦ದ ವರೆಗೆ ಮಾತ್ರ ಅಂದಾಜು ಕ್ರಮದಲ್ಲಿ ಕರವಿಧಿಸಿರುವೆವು. ಮಹಾಜನರಿಗೆ ಯಾವ ಅನ್ಯಾಯವೂ ಆಗಬಾರದೆಂದು ನಮ್ಮ ಇಚ್ಛೆ. ಆದರೆ ನಾವು ಅಂದಾಜು ನಿರ್ಣಯಕ್ಕಾಗಿ ಸ್ವತಃ ತಿರುಗಿದಾಗ ಜನರು ನಮ್ಮೊಡನೆ ಸಾಕಷ್ಟು ಸಹಕರಿಸದೆ ನಿಜವಾದ ಪರಿಸ್ಥಿತಿಯ ಅನುಭವ ಮಾಡಿಕೊಳ್ಳಲು ಬಹು ಪ್ರಯಾಸವಾಯಿತು. ಈಗ ಸಾಮೂಹಿಕವಾಗಿ ಚಳವಳಿ ನಡೆಸುವವರು ಆ ಸಮಯದಲ್ಲಿ ನಮ್ಮೊಡನೆ ಸಹಕರಿಸುತ್ತಿದ್ದರೆ ಹೆಚ್ಚಿನ ಕೊರತೆಗಳನ್ನು ನಿವಾರಿಸಲು ಸಾಧ್ಯವಿತ್ತು. ನಮ್ಮ ಗಣನೆಯಲ್ಲಿ ತಪ್ಪು ನಡೆದಿಲ್ಲವೆಂದು ನಾನು ಹೇಳಲಾರೆ. ನಮ್ಮ ತೀರ್ಮಾನಗಳೆಲ್ಲವೂ ತಹಸೀಲಿನ ನಿರ್ಣಯಕ್ಕೊಳಪಟ್ಟೇ ವಿಧಿಸಲ್ಪಟ್ಟಿವೆ" ಕಟ್ಟೋಣಗಳಿಗೆ ಕರವಿಧಿಸುವಾಗ, ಸ್ಥಳವಾರು ಹೆಚ್ಚು ಕಡಿಮೆಯಾಗಲು ಕಾರಣವೇನೆಂದು ಪ್ರಶ್ನಿಸಲ್ಪಟ್ಟಾಗ ಆಯಾಯಾ ಸ್ಥಳದ ಕಟ್ಟಡಗಳಿಗೆ ದೊರೆಕುವ ಬಾಡಿಗೆ ಯಾ ಇತರ ಉತ್ಪತ್ತಿಯ ಏರಿಳಿತದ ಮೇಲೆಯೇ ಕರವಿಧಿಸಲ್ಪಟ್ಟು ಹೆಚ್ಚು ಕಡಿಮೆಯಾಗಿದೆ ಎಂದರು. ಹಿಂದೆ ಉಡುಪಿ ಪಟ್ಟಣಕ್ಕೆ ಸೇರದೆ ಮುನಿಸಿಪಾಲಿಟಿಯೊಳಗಿನ ಹಳ್ಳಿ ಪ್ರದೇಶಗಳಲ್ಲಿ ಇನ್ನೂ ಪಾಡಿಯಂತಹ ಲೈನು ಮುಂದಕ್ಕೆ ಒತ್ತಾಗಿ ಹೋಗುವಂತಹ ಸ್ಥಿತಿಯಲ್ಲಿರುವದರಿಂದಲೂ, ಈಗಲೂ ಅಲ್ಲಿ ಹೆಚ್ಚಿನ ಉತ್ಪತ್ತಿಯಿರುವದರಿಂದಲೂ ಅಂತಹ ಸ್ಥಳಗಳಿಗೆ ಪಟ್ಟಣದ ಕೆಲವು ಪ್ರದೇಶಗಳಿಗಿಂತ ಹೆಚ್ಚಿನ ಕರ ಬಿದ್ದಿದೆಂದು ಆಫೀಸರರ ಅಭಿಪ್ರಾಯ. ಮುನ್ಸಿಪಾಲಿಟಿಯೊಳಗಿನ ಜಮೀನಿಗೆ ಪ್ರತ್ಯೇಕ ಕರಹೊರಿಸುವದು ಮುನ್ಸಿಪಲ್ ನಿಯಮಕ್ಕೊಳಪಟ್ಟಿರುವದು ಸಾಗುವಳಿಯ ಉತ್ಪತ್ತಿಯ ಆದಾಯದಿಂದ ಮುನ್ಸಿಪಲ್ ರಸ್ತೆಯೇ ಮೊದಲಾದುವು ಉಪಯೋಗಕ್ಕೆ ಬೀಳುವದರಿಂದ ಅದು ನ್ಯಾಯವೇ ಇದೆ. ಅಂತೂ ಇಡೀ ಪಟ್ಟಣದ ಸ್ಥಿತಿಗತಿಗಳ ಪರಿಶೀಲನೆಯಂಥಾ ಅತ್ಯಂತ ಕಷ್ಟದ ಕೆಲಸದಲ್ಲಿ ನಾನೂ ನನ್ನ ಸಿಬ್ಬಂದಿಯೂ ಸಾಧ್ಯವಿದ್ದಷ್ಟು ಮೆಹನತ್ತಿನಿಂದ ಜನರಿಗೆ ಅನ್ಯಾಯವಾಗದಂತೆ ನೋಡಿದ್ದೇವೆ. ಎಲ್ಲಿಯಾದರೂ ತಪ್ಪುಗಳಾಗಿರುವದಾದರೆ ಅಂಥವರು ಇದೇ ತಾ 7ರೊಳಗೆ ಅಪೀಲುಮಾಡಿಕೊಳ್ಳಬೇಕಲ್ಲದೆ ಸಾಮೂಹಿಕವಾಗಿ ಚಳವಳಿಸುವವರಲ್ಲಿ ಅರ್ಥವಿಲ್ಲವೆಂದು ಆಫೀಸರರ ಅಭಿ

ಪ್ರಾಯ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡನೆಯದಾದ ಉಡುಪಿಯ ಅನುಕೂಲತೆಗಳನ್ನು ಪಂಚಾಯತ್ ಬೋರ್ಡಿನಿಂದ ಪೂರೈಸಲು ಸಾಧ್ಯವಿಲ್ಲವೆಂದೂ, ಮುನಿಸಿಪಾಲಿಟಿಯೇ ಅಗತ್ಯವೆಂದೂ ಅವರು ಸೂಚಿಸಿದರು.

ಉಡುಪಿಯ ಮಿತ್ರಮಂಡಳಿಯ ಸ್ಥಾಪನಾಕರ್ತರಾದ ಶ್ರೀ. ಕೆ. ಗೋಪಾಲಕೃಷ್ಣ ಕಾಮತರು ಕಳೆದ ಆಗೋಸ್ತು ತಾ. ೨೫ರಲ್ಲಿ ಮೈಸೂರು ಗವರ್ನಮೆಂಟ್ ಸೆನಿಟೋರಿಯಮಿನಲ್ಲಿ ದಿವಂಗತರಾಗಿರುವರೆಂಬುದು ಶೋಚನೀಯವಿದೆ.

ದಿ ಬೊಂಬಾಯಿ ಲೈಫ್ ಇನ್ಶೂರೆನ್ಸ್ ಕಂಪೆನಿಯ ಏಜಂಟರೂ ಈ ಬಾರಿಯ ಮುನಿಸಿಪಲ್ ಚುನಾವಣೆಯಲ್ಲಿ ಕಾಡಬೆಟ್ಟು ವಾರ್ಡಿನಲ್ಲಿ ವಿಜಯಿಗಳಾಗಿ ಮುನಿಸಿಪಲ್ ಕೌನ್ಸಿಲರಾದವರೂ ಆದ ಶ್ರೀ ಮಲ್ಪೆ ವಾಮನ ಭಟ್ಟರು ತಾ. ೨೮-೮-'36 ರಲ್ಲಿ ಕಾಡಬೆಟ್ಟು ವಾರ್ಡಿನ ಕೊರಗರ ಮತ್ತು ಹೊಲೆಯರ ಕೊಲೊನಿಯ ಸಮೀಪಕ್ಕೊಂದು ಮತ್ತು ಅದೇ ವಾರ್ಡಿನ ಮೂರು ರಸ್ತೆ ಕೂಡುವಲ್ಲಿ ಅವರ ಮನೆಯ ಸಮೀಪಕ್ಕೊಂದು ಹೀಗೆ ಎರಡು ಪೆಟ್ರೋಮೇಕ್ಸ್ ದೀಪಗಳನ್ನು ಕಂಬ ಸಹಿತ ದಾನಮಾಡಿರುತ್ತಾರೆ. ಇದರಿಂದ ಶ್ರೀಯುತರ ಉದಾರಬುದ್ಧಿಯು ಸ್ತುತ್ಯವೂ ಅನುಕರಣೀಯವೂ ಇದೆ.

ಮೋಟಾರು ಅಪಘಾತ.

ಕಳೆದ ತಾರೀಕು ೨೫ನೇ ಮಂಗಳವಾರ ಬೆಳಗ್ಗೆ 10 ಘಂಟೆಯ ಸಮಯ ಮಂಗಳೂರಿನಿಂದ ಬರುತ್ತಿದ್ದ ಮೈಲು ಬಸ್ಸು ಉಡುಪಿಯ ಸಮೀಪ ಕುಂಜಿಬೆಟ್ಟಿನಲ್ಲಿ ಸ್ಟೀಯರಿಂಗಿನ ದೋಷದಿಂದ ರಸ್ತೆಯಿಂದ ಕೆಳಗುರುಳಿ ಮೂವರಿಗೆ ಪೆಟ್ಟಾಗಿರುವದಲ್ಲದೆ, ಒಬ್ಬನು ಮೃತಪಟ್ಟಿರುವನು.

ಗುತ್ತೆ ಏಲಂ.

ಕಳೆದ ಸಲ ಕಡಿಮೆ ದರದಲ್ಲಿ ಹೋಗಿದ್ದ 16 ಗುತ್ತೆ ಅಂಗಡಿಗಳು ಗ್ರಾಹಕರ ಅಪೇಕ್ಷೆಯಂತೆ ಕಳೆದ ತಾ. ೨೫ರಲ್ಲಿ ಪುನಃ ಏಲಂ ಮಾಡಲ್ಪಟ್ಟು ಆ ಮೂಲಕ ೨,400 ರೂಪಾಯಿ ಹೆಚ್ಚಿನ ಉತ್ಪತ್ತಿ ಎಕ್ಸೈಜ್ ಖಾತೆಗೆ ದೊರೆತಿರುವದು.

ಉಡುಪಿ ಮುನಿಸಿಪಾಲಿಟಿ ಅಧ್ಯಕ್ಷರ ಚುನಾವಣೆ.

ಉಡುಪಿಯ ಮುನಿಸಿಪಾಲಿಟಿಯ ಪ್ರಥಮ ಅಧ್ಯಕ್ಷರ ಚುನಾವಣೆಯು ಕಳೆದ ತಾ. 31-8-36ರಲ್ಲಿ ಸ್ಪೆಶ್ಯಲ್ ಆಫೀಸರರ ಅಧ್ಯಕ್ಷತೆಯಲ್ಲಿ ಅಪರಾಹ್ನ ಘಂಟೆ ೨-೩0ಕ್ಕೆ ಸರಿಯಾಗಿ ಮುನಿಸಿಪಲ್ ಆಫೀಸಿನಲ್ಲಿ ನಡೆಯಿತು. ಊರಿನ ಹೆಚ್ಚಿನ ಪ್ರಮುಖ ನಾಗರೀಕರು ಹಾಜರಿದ್ದರು. ಪ್ರಥಮತಃ ಅಧ್ಯಕ್ಷರು ಮೆಂಬರರನ್ನು ಪ್ರತಿಜ್ಞಾಸ್ವೀಕಾರಕ್ಕೆ ಸೂಚಿದಾಗ, ಡಾ। ಪಿ. ಜಿ. ಆಚಾರ್ಯರು, ಆಫೀಸರರು ಮೆಂಬರರಿಗೆ ಕೊಟ್ಟ ನೋಟೀಸಿನಲ್ಲಿ ಅಧ್ಯಕ್ಷರ ಚುನಾವಣೆಯ ಸಂಬಂಧವಾದ ಸ್ಪೆಶ್ಯಲ್ ಮಿಟಿಂಗ್" ಎಂದಿಷ್ಟೇ ನಮೂದಿಸಿರುವದರಿಂದ ಎಜಂಡದಲ್ಲಿಲ್ಲದ ಪ್ರತಿಜ್ಞಾಸ್ವೀಕಾರಕ್ಕೆ ಆಕ್ಷೇಪ ಸೂಚಿಸಿದರು. ಅಧ್ಯಕ್ಷರವನ್ನು ನಿಯಮವಿರುದ್ಧವೆಂದು ತೆಗೆದು ಹಾಕಿದ ಮೇಲೆ ಪ್ರತಿಜ್ಞಾಸ್ವೀಕಾರವಾಯಿತು. ಶ್ರೀಗಳಾದ ಡಾ। ಪಿ ಜಿ. ಆಚಾರ್, ಪಿ. ಎನ್ ಮಾಧವರಾವ್, ವಕೀಲ್. ಮತ್ತು ಶ್ರೀ ಶಂಭುಸೆಟ್ಟರ ಸಹಿಯುಳ್ಳ ಎರಡು ಆಕ್ಷೇಪಣಾ ಅರ್ಜಿಗಳು ಅಧ್ಯಕ್ಷರಿಗೊಪ್ಪಿಸಲ್ಪಟ್ಟವು. ಅವುಗಳ ಸಾರಾಂಶವಿದು — ಮದ್ರಾಸ್ ಮುನಿಸಿಪಲ್ ಆಕ್ಟಿನ 49 (2) ೧ನೇ ಕಲಮಿನ ಮೇರೆಗೆ ತರಗತಿಯಲ್ಲಿ ಹೆಚ್ಚುಕಡಿಮೆಯಿರುವ ಒಂದೇ ಸಂಸ್ಥೆಯ ಉದ್ಯೋಗಸ್ಥರು ಏಕಕಾಲದಲ್ಲಿ ಮೆಂಬರರಾಗಿರುವದು ಸಲ್ಲದು. ನಗರಸಭೆಗೆ ಚುನಾಯಿಸಲ್ಪಟ್ಟಿರುವ ಶ್ರೀಗಳಾದ ಯು ಸುಂದರ ಕಾಮತ್ ಮತ್ತು ಯು. ಕೇಶವ ಪ್ರಭುಗಳು ಉಡುಪಿ ಬೇಂಕಿನ ಡೈರೆಕ್ಟರರಾಗಿರುವಾಗ, ಇನ್ನೊಬ್ಬ ಮೆಂಬರ್ ಶ್ರೀ. ಎಲ್. ಎಸ್. ನಾಯಕರು ಸದ್ರಿ ಬೇಂಕಿನ ಸಂಬಳ ಪಡೆಯುವ ಮೆನೇಜರಾಗಿದ್ದರು. ಕಾನೂನಿನ ತೊಂದರೆಯಿಂದ ಪಾರಾಗುವದಕ್ಕಾಗಿ ಎಂಬಂತೆ, ಉಡುಪಿ ಬೇಂಕಿನ ಡೈರೆಕ್ಟರರ ಸಭೆಯನ್ನು ತಾ.17-8-36ರಲ್ಲು ಬೆಳಿಗ್ಗೆ 8½ ಘಂಟೆಗೂ, ವಿಶೇಷ ಸಭೆಯನ್ನು ೯½ ಗಂಟೆಗೂ ಕರೆದು ಮಧ್ಯೆ ಹದಿನೈದು ದಿನಗಳ ಬಿಡುವಿರಬೇಕೆಂಬ ನಿಯಮವನ್ನು ಉಲ್ಲಂಘಿಸಿ ಶ್ರೀ. ಎಲ್. ಎಸ್. ನಾಯಕನ್ನು ಮೆನೇಜಿಂಗ್ ಡೈರೆಕ್ಟರರಾಗಿ ನಿರ್ಮಿಸಿದುದು ಸಿಂಧುವಾಗತಕ್ಕದ್ದಲ್ಲ ಈ ಸಂಗತಿಯನ್ನು ತಿಳಿದೇ ಸದ್ರಿ ನಿರ್ಣಯವನ್ನು ಮಂಜೂರುಮಾಡುವದಕ್ಕಾಗಿ, ಉಡುಪಿ ಬೇಂಕಿನವರು ತಾ 13-9-36ಕ್ಕೆ ಇನ್ನೊಂದು ವಿಶೇಷ ಸಭೆಯನ್ನು ಕರೆದಿರುವದರಿಂದ, ಚುನಾವಣೆಯ ಫಲಿತಾಂಶವು ಪ್ರಕಟವಾದ ರೀತಿಗನುಸರಿಸಿ, ಶ್ರೀ. ಯು. ಸುಂದರ ಕಾಮತರೇ ಮೊದಲಾದವರು ಆರಿಸಿ ಬಂದ ಮೇಲೆ ಶ್ರೀಯುತ ಎಲ್. ಎಸ್ ನಾಯಕರಿಗೆ ಮೆಂಬರರಾಗುವ ಹಕ್ಕಿಲ್ಲ. ಹಾಗೆಯೇ ಶ್ರೀ. ಯು ಎಸ್. ನಾಯಕರೂ ಶ್ರೀ. ಕೆ. ಅನಂತ ಸೆಟ್ಟರೂ ಒಂದೇ ಬಸ್ಸು ಕಂಪೆನಿಯ, ಪ್ರತ್ಯೇಕ ತರಗತಿಯ ಅಧಿಕಾರಿಗಳಾಗಿರುವರು. ಇದನ್ನು ಸಂಬಂಧಪಟ್ಟ ಇದಿರುವಾದಿಗಳು ಅಲ್ಲಗಳೆದುದರಿಂದ ಅಧ್ಯಕ್ಷರು ಚುನಾವಣೆಯನ್ನು ನಡೆಸಿದರು. ಶ್ರೀಗಳಾದ ಡಾ। ಆಚಾರ್, ಬಿ. ವಾಸುದೇವರಾವ್, ಪಿ. ಎನ್. ಮಾಧವರಾಯರು ಇದರ ನಿಷೇಧಾರ್ಥವಾಗಿ ಸಭೆಬಿಟ್ಟು ನಡೆದರು ಆ ಮೇಲೆ ಇಬ್ರಾಹಿಮ್ ಸಾಹೇಬರ ಸೂಚನೆ, ಶ್ರೀ. ಯು. ಕೇಶವ ಪ್ರಭುಗಳ ಅನುಮೋದನೆ, ಶ್ರೀಯುತ ಸುಬ್ಬನವರ ಪುಷ್ಟೀಕರಣೆಯಿಂದ ವಕೀಲ್ ಶ್ರೀಯುತ. ಆರೂರು ಲಕ್ಷ್ಮೀನಾರಾಯಣರಾಯರು ವಿರೋಧವಿಲ್ಲದೆ ಚುನಾಯಿಸಲ್ಪಟ್ಟರು ಅವರು ಎಲ್ಲರ ಉಪಕಾರವನ್ನು ಸ್ಮರಿಸುತ್ತಾ "ನೀವೆಲ್ಲರೂ ನನ್ನನ್ನು ಏಕಮತದಿಂದ ಚುನಾಯಿಸಿದ್ದಕ್ಕಾಗಿ ತುಂಬಾ ಆಭಾರಿಯಿರುವೆನು. ನಮ್ಮಲ್ಲಿ ಸ್ವಾಭಾವಿಕವಾಗಿ ಕೆಲವು ಭಿನ್ನಾಭಿಪ್ರಾಯಗಳಿವೆ. ಆದರೆ ಅವು ದೇಶದ ಹಿತಚಿಂತನೆಗೆ ತೊಡಕಾಗಬಾರದು. ಹೊರಗೆ ಹೋದ ನನ್ನ ಮಿತ್ರರು ತಮ್ಮ ಅಭಿಪ್ರಾಯ ಭೇದವನ್ನೂ ಉದಾರತೆಯಿಂದ ಸಹಿಸಿಕೊಂಡು ನನ್ನೊಡನೆ ಸಹಕರಿಸುವರೆಂದು ನಂಬುತ್ತೇನೆ"ಂದು ಹೇಳಿ ಪಾಶ್ಚಿಮಾತ್ಯ ದೇಶಗಳಲ್ಲಿ ಪಾರ್ಟಿಗಳಿದ್ದರೂ ಅವು ಹೇಗೆ ದೇಶಹಿತವನ್ನು ಅಲಕ್ಷ್ಯಿಸುವುದಿಲ್ಲವೆಂಬುದನ್ನು ತಿಳಿಸಿ, ಹೊರಗಿನ ನಾಗರೀಕರ ಸಹಕಾರವನ್ನು ಬಯಸಿ, ಮುನಿಸಿಪಲ್ ಕರದಲ್ಲಿ ಇಳಿತವಾಗುವಂತೆ ಪ್ರಯತ್ನಿಸುವೆನಾಗಿ ಆಶ್ವಾಸನೆಯಿತ್ತು, ಸಭಿಕರ ಕರತಾಡನವನ್ನು ಪಡೆದರು. ಸ್ಪೆಶ್ಯಲ್ ಆಫೀಸರರು ತನ್ನ ಮತ್ತು ತನ್ನ ಕೈಕೆಳಗಿನ ನೌಕರರ ಪರವಾಗಿ ಪಟ್ಟಣಿಗರಿಗೆ ಧನ್ಯವಾದಗಳನ್ನಿತ್ತು' ಎಲ್ಲರೂ ಉಡುಪಿಯ ಅಭಿವೃದ್ಧಿಯನ್ನು ಹಾರೈಸಬೇಕೆಂದು ವಿನಂತಿಸಿ ಹೊಸ ಅಧ್ಯಕ್ಷರಿಗೆ ತನ್ನ ಸ್ಥಾನವನ್ನು ಬಿಟ್ಟುಕೊಟ್ಟ ಮೇಲೆ ಪರಸ್ಪರ ಹಸ್ತಲಾಘವಗಳು ನಡೆದು ವಕೀಲ್, ಶ್ರೀ ವಿಠಲ ಕಾಮತ್ ಮತ್ತು ಶ್ರೀ. ಕೆ. ಪದ್ಮನಾಭ ಪೈಗಳ ಪುಷ್ಪಹಾರ ಸಮರ್ಪಣೆಯಾಗಿ, ಅಧ್ಯಕ್ಷರು ಸ್ಪೆಶ್ಯಲ್ ಆಫೀಸರರ ಕೆಲಸಗಳನ್ನು ಶ್ಲಾಘಿಸಿ ಭಾಷಣವಿತ್ತರು. ಹೊರಹೋದ ಮೆಂಬರರು 'ಪೀಪಲ್ಸ್ ಪಾರ್ಟಿ' ಎಂಬ ಪಕ್ಷವನ್ನು ಸ್ಥಾಪಿಸಿ ಕೆಲಸಮಾಡಲಿರುವರೆಂದು ತಿಳಿದುಬರುತ್ತದೆ.

ಮೆಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರು ಸರ್. ಲಲ್ಲುಭಾಯಿ ಸಾಮಲದಾಸ್ ಇವರ ಹೆಸರಿನಿಂದ ಅಜ್ಜರಕಾಡಿನಲ್ಲಿ ನಾಲ್ಕು ದೀಪಗಳನ್ನೂ ಸುಬ್ರಾಯ ಪೈಗಳ ಹೆಸರಿನಿಂದ ಟ್ರಾವೆಲರ್ಸ್ ಬಂಗ್ಲೆಯ ಹತ್ತಿರ ಒಂದು ದೀಪವನ್ನೂ ದಾನವಾಗಿ ಕೊಟ್ಟಿರುವರು. ಸದ್ರಿ ದಾನಸಮಾರಂಭವು ಉಡುಪಿ ಮುನಿಸಿಪಲ್ ಚೆಯರ್‌ಮೇನರಾದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಬೊಂಬೇ ಲೈಫಿನ ಹೊಸ ಕಟ್ಟಡದಲ್ಲಿ ಜರಗಿತು. ಸದರಿ ಸಮಾರಂಭದಲ್ಲಿ ಅನೇಕ ಪುರ ಪ್ರಮುಖರು ಭಾಗಿಗಳಾಗಿದ್ದರಲ್ಲದೆ ಪ್ರಕೃತದಲ್ಲಿ ಉಡುಪಿ ಪಟ್ಟಣಿಗರ ಕರ್ತವ್ಯದ ಕುರಿತಾಗಿಯೂ ಮುನ್ಸಿಪಾಲ್ಟಿ ಸದಸ್ಯರ ಕರ್ತವ್ಯಗಳ ವಿಷಯವಾಗಿಯೂ ರಾ| ಗಳಾದ ಡಿಸ್ಟ್ರಿಕ್ ಮುನ್ಸಿಫರಾದ ಕುಲಾಸೊ S. U. ಪಣಿಯಾಡಿ ಮತ್ತು ಡಾಕ್ಟರ್ ಮಾಧವ ಪೈಗಳು ಭಾಷಣ ಕೊಟ್ಟರು.

ಮಂಗಳೂರು

ಇದೇ ತಾ. 12ನೇ ಶನಿವಾರ ಮಂಗಳೂರಿನ ಗಣಪತಿ ಹೈಸ್ಕೂಲಿನ ಸರಸ್ವತಿ ಸದನದಲ್ಲಿ ವಿದ್ಯುದ್ದೀಪಗಳಿಂದಲಂಕರಿಸಲ್ಪಟ್ಟ, ಹೊಸ ಪರದೆಗಳಿಂದ ಜೋಡಿಸಲ್ಪಟ್ಟ ನವನವೀನ ಉಪಕರಣಗಳಿಂದಾವರಿಸಲ್ಪಟ್ಟ ರಂಗಭೂಮಿ (ಸ್ಟೇಜಿ) ಯಲ್ಲಿ ಮಂಗಳೂರಿನ ಶ್ರೀಜಗದಂಬಾ ಕರ್ನಾಟಕ ನಾಟಕ ಮಂಡಳಿಯವರು, ಸುರಸ ಸಾಹಿತಿಗಳೂ, ಅಭಿನಯ ಕುಶಲರೂ, ಸಂಗೀತ ವಿದ್ವಾಂಸರೂ, ಇವರೇ ಮೊದಲಾದ ನಾಟ್ಯಕಲಾ ಪ್ರವೀಣರೊಡನೆ, ಶ್ರೀ ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟ 'ವ್ಯಭಿಚಾರಿಣಿ ಯಾರು?' ಎಂಬ ವಿಚಾರ ಪ್ರಚೋದಕವಾದ ಸಾಮಾಜಿಕ ನಾಟಕವನ್ನು ಆಡಲಿರುವರು. ಸರ್ವರೂ ಪ್ರೋತ್ಸಾಹಿಸಬೇಕಾಗಿ ಬಿನ್ನಹ.

ಧಾರ್ಮಿಕ ಉಪನ್ಯಾಸ

ನಿನ್ನೆಯ ದಿವಸ ಬೆಳಿಗ್ಗೆ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಶ್ರೀ ಕೋಟ ಶಿವರಾಮಕಾರಂತರು ಶ್ರೀರಾಮಕೃಷ್ಣ ಪರಮಹಂಸರ ಸಂದೇಶಗಳನ್ನು ಕುರಿತು ಅರ್ಥಗರ್ಭಿತ ಭಾಷಣವನ್ನಿತ್ತರು. ಶ್ರೀ ರಾಮಕೃಷ್ಣರ ಜೀವನ ಚರಿತ್ರೆಯಿಂದ ಅನೇಕ ಉದಾಹರಣೆಗಳನ್ನು ನಿರೂಪಿಸಿ ತಮ್ಮ ಭಾಷಣವನ್ನು ಸಮರ್ಥಿಸಿದರು.

DEFEND YOUR OWN INTEREST

BY BANKING WITH THE

UDIPI BANK, Ltd.

UDIPI

ALL KINDS OF BANKING BUSINESS UNDERTAKEN

ESTD: 1925

ನವಯುಗದ ನವಜೀವನಾಕಾಂಕ್ಷೆಗಳು.

ಮನುಷ್ಯನು ಸರ್ವದಾ ಆಶಾವಾದಿಯು. ಅನೇಕಾನೇಕ ಧರ್ಮ ಸಂಸ್ಕೃತಿಗಳು ಆಗಾಗ ಆಳಿ ಆಳಿ, ಅಳಿದುಹೋಗುತ್ತಿದ್ದುದರ ಗುಟ್ಟೊ ಇದುವೇ, ಇಂದಿಗೆ ಪ್ರಪಂಚದಲ್ಲಿ ವಿಹರಿಸುವ ಆತ್ಮಕ್ಕೆ ಹೆಚ್ಚು ಸುಖಿಯಾಗಬೇಕು. ಜೀವನದಲ್ಲಿ ಹೆಚ್ಚಿನ ನಿಶ್ಚಯ, ಉಲ್ಲಾಸ, ಉತ್ಸಾಹ, ಆಸೆ ಕಾರ್ಯ ತತ್ಪರತೆಗಳು ಮೂಡಿಬರಬೇಕು. ತೃಪ್ತಿಪಡಬೇಕು ಎಂದೇ ತೋರುತ್ತದೆ. ಆದರೆ ಹಿಂದಿನವರ ಜೀವನಕ್ಕಿಂತ ಈಗಿನವರದರಲ್ಲಿ ಇವುಗಳ ಹೆಚ್ಚಿನ ಪ್ರಾದುರ್ಭೂತತೆ ಇದೆಯೇ?

ಬುದ್ಧಿ ಪ್ರಗಲ್ಭತೆಯೇ ಜೀವನದ ಕಾಮಧೇನುವೆಂದು ಅಂದಿಗೂ ಇಂದಿಗೂ ಭಾವಿಸಲಾಗಿದ್ದರೂ ಇಂದು, ಅನೇಕಾನೇಕ ಹೊಸ ನಿಟ್ಟಿನ ಜ್ಞಾನ ಭಾಂಡಾರವು ಕೈಗೆ ನಿಲುಕಹತ್ತಿದಂತೆ ಜೀವನದ ಬುನಾದಿಯೇ ಸಡಿಲವಾಗುತ್ತಿದ್ದ ದುಃಖಾಂತ ದೃಶ್ಯವನ್ನು ಕಾಣಬೇಕಾಗಿದೆ. ಇಡೀ ವಿಶ್ವದಲ್ಲಿ ಎಲ್ಲಿ ನೋಡಿದರೂ ಶಾಶ್ವತವಾದ ಸುಖ, ಅಚಲವಾದ ವಿಶ್ವಾಸ, ದೃಢವಾದ ಆಸೆಗಳ ಸಾಕ್ಷಾತ್ಕಾರವು ಯಾರೊಬ್ಬರ ಕೈಗೆ ಸಿಲುಕಿದ್ದುದರ ಸಾಕ್ಷಿಯೊಂದೂ ಇಲ್ಲ. ಇದೆಲ್ಲದರ ಬದಲು ಹೆಚ್ಚಿನ ದ್ವೇಷ, ಅಸಂತೋಷ, ಹಿಂಸೆ, ಸ್ವಾರ್ಥಗಳೇ ತೋರತೊಡಗಿವೆ.

ನಮ್ಮ ಪೂರ್ವಿಕರು ಅಖಂಡ ಶಾಂತಿಪ್ರದಗಳೆಂದು ಭಾವಿಸಿ, ನಿಯಮಿಸಿಕೊಟ್ಟ ಅನೇಕಾನೇಕ ರೂಢಿಮಾರ್ಗಗಳು ಅಪೌರುಷಗಳೆಂದೂ, ನಿರರ್ಥಕ ಮತ್ತು ಬಂಧನಕಾರಿಗಳೆಂದೂ ಇಂದಿನ ಭೌತಿಕ ಮತ್ತು ವಿಜ್ಞಾನದ ಹೊಸಹೊಸ ಶೋಧಗಳಿಂದ ಹೆಚ್ಚು ದೃಢವಾಗಿ ಸಮರ್ಥಿಸಲ್ಪಡುತ್ತಿವೆ.

ಹೃತ್ಸಮ್ಮತವಲ್ಲೆಂದು ಮೊದಲಿನವನ್ನು ದೂಡಿಯಾಯಿತು. ಸಮ್ಮತವಿರಬಹುದಾದ ಅಖಂಡ ತೃಪ್ತಿಯ ಇಚ್ಛಾವಸ್ತುವು ಕೈಗೆ ಬರುವ ಬದಲು ಬೇಡವಾದ ಯಾವುದೋ ಒಂದು ಪದಾರ್ಥವು ಕೈಗೆ ಬಂದಂತಿದೆ. ಅಮೃತಪ್ರಾಪ್ತಿಗಾಗಿ ಮಾಡಿದ ಸಮುದ್ರಮಥನದಲ್ಲಿ ಬೇಡವೆಂದರೂ ತಾನಾಗಿ ಎದ್ದುಬಂದ ಹಾಲಾಹಲದಂತೆ ನಿರುತ್ಸಾಹದ ಭೀಕರಸುಳಿಯೊಂದು ತಾನೇ ಬೀರಿ ನಿಂತಿದೆ. "ಬಾಳುವದು ಏತಕ್ಕೆ?" ಮತ್ತು "ಬಾಳಿ ಮಾಡಬೇಕಾದುದು ಯಾವುದು?" ಎಂಬ ವಿಕೃತ ಪ್ರಶ್ನೆಗಳು ಉಪಸ್ಥಿತವಾಗಿವೆ. ಅವಕ್ಕೆ ಉತ್ತರವಿಲ್ಲ. ಈ ಹಾಲಾಹಲವನ್ನು ನುಂಗುವ ನೀಲಕಂಠನೊಬ್ಬನು ಬೇಕು.

ಬಾಳಿ ಬೇಸತ್ತು ವೈರಾಗ್ಯದಿಂದ ಮಾಡಿಕೊಳ್ಳುವ ಆತ್ಮಹತ್ಯೆಗಳ ಪ್ರಮಾಣವು ಹೇಗೆ ಹೆಚ್ಚುತ್ತದೆ, ಎಂಬುದನ್ನು ನಿಂಗ್ಯತ ಕಾಲಿಕಗಳು ಸಾರಿ ತಿಳುಹುತ್ತಿವೆ. ಈ ನರ ಯಜ್ಞಕ್ಕೆ ನಿರುದ್ಯೋಗದ ರಾಕ್ಷಸನೊಬ್ಬನೇ ಕಾರಣನಲ್ಲ. ಪ್ರಾಮುಖ್ಯವಾಗಿ ಸೃಷ್ಟಿಗತ ಮನೋಕಾಂಕ್ಷೆಯ ಸಾರ್ವತ್ರಿಕ ನಿರಾಶೆ ನಿರುತ್ಸಾಹಗಳ ಉದ್ರೇಕವೇ ಇದಕ್ಕೆ ಕಾರಣವಾಗಿದೆ.

ಇಂದಿನ ಪರಿಸ್ಥಿತಿಯ (ವಿಪ್ಲವ) ಗದ್ದಲದಲ್ಲಿ ವ್ಯಕ್ತಿಯ ಆಕಾಂಕ್ಷೆ ಆಶಯಗಳಿಗೆ ಬೆಲೆ ಇಲ್ಲವಾಗಿದೆ. ವ್ಯವಹಾರಕ್ಕೊಂದು ಧ್ಯೇಯವಿಲ್ಲವಾಗಿದೆ. ಬದುಕಿಗೊಂದು ದೃಷ್ಟಿ ಇಲ್ಲವಾಗಿದೆ. ದುಡಿಮೆಯಲ್ಲಿ ಉತ್ಸಾಹವಿಲ್ಲವಾಗಿದೆ, ಇವೆಲ್ಲವುಗಳ ಸಮಸ್ಯೆಯು ಏನಾಗಬೇಕು?

ಉತ್ಕಟವಾದ ಇಚ್ಛೆ ಮತ್ತು ತಜ್ಜನ್ಯವಾದ ಆಸಿಂದ ಶ್ರದ್ಧೆ ಇವುಗಳ ವಿನಃ ಮಹತ್ಕಾರ್ಯಗಳ ಪ್ರವೃತ್ತಿಯು ಎಂದೂ ಹುಟ್ಟಲಾರದು. ಪೂರ್ವಿಕರು ತೋರಿಕೊಟ್ಟ ಅಂದಿನ ಪರಿಸ್ಥಿತಿಗೊಪ್ಪಿದ ಧ್ಯೇಯಾಕಾಂಕ್ಷೆಗಳು ಇಂದಿನ ಮಾನಸ್ಯತೆಗೆ ಸಮ್ಮತವಿಲ್ಲ. ಇಷ್ಟೇ ಅಲ್ಲ, ಇಂದಿನವರ ಆಕಾಂಕ್ಷಾ ರೀತಿ ನೀತಿಗಳೇ ಭಿನ್ನವಾಗಿವೆ, ಉತ್ಸಾಹವರ್ಧಕಗಳಾಗಿವೆ. ಆದರೆ ಬಹು ಮಟ್ಟಿಗೆ ಇನ್ನೂ ಅಜ್ಞಾತವಾಗಿಯೇ ಇವೆ, ಎಂದರೆ ಹೆಚ್ಚು ತಪ್ಪಾಗಲಿಕ್ಕಿಲ್ಲ.

ಇದು ಜಾಗ್ರತಿಕ ಪರಿಸ್ಥಿತಿಯಾಯಿತು. ನಮ್ಮ ಭರತ ಖಂಡದ ಮಟ್ಟಿಗಂತೂ ನಾವು ಅದಕ್ಕೂ ಒಂದೆರಡು ಶತಮಾನದ ಹಿಂದೆಯೇ ಇರುತ್ತೇವೆ. ನಮ್ಮ ಸಮಾಜದಲ್ಲಿ ಸಮಷ್ಟಿ ಜೀವನವು ಇನ್ನೂ ಬರಬೇಕಾಗಿದೆ. ಸಾಮಾಜಿಕ ಸಮಾನ್ಯದಿಂದ ಶಿಸ್ತು, ಸಹಕಾರ್ಯ, ಸ್ವಾಭಿಮಾನ, ಆತ್ಮ ವಿಶ್ವಾಸ, ಸಂಘಟನೆಗಳು ಬೆಳೆದು ಬರಬೇಕು. ಏಕರೂಪತೆಯಾಗಬೇಕು, ಸಾರ್ವಜನಿಕ ಏಕೀಕರಣವಾಗಬೇಕು.

ಇವೆಲ್ಲ ಕಲ್ಪನಾ ಸಾಮ್ರಾಜ್ಯದ ಕತೆಯಾಯಿತು. ನಿಂತುಕೊಳ್ಳಲು ಬಾರದವನು ನಡೆಯುವ ಕ್ರಮಗಳ ವ್ಯಾಸಂಗ ಮಾಡುತ್ತಿದ್ದರೆ ಬಂದುದೇನು, ಎಂದಾಗದೆ? ನಮಗೊಂದು ದೃಷ್ಟಿ, ಸಕಲ ಆಕಾಂಕ್ಷೆಗಳ ಕೇಂದ್ರವಾದ ಒಂದು ಧ್ಯೇಯ ಬೇಕಷ್ಟೇ! ಇನ್ನಿತರ ರಾಷ್ಟ್ರಗಳೊಡನೆ ನಾವೂ ಚಿರಕಾಲ ಬಾಳಬೇಕು ಎನ್ನುವ ಆಸೆ ಹುಟ್ಟಬೇಕಷ್ಟೆ!

ಇದಲ್ಲವಕ್ಕೆ ಒಂದೇ ಒಂದು ಧ್ಯೇಯ, ಅದು ಜನಾಂಗ—ರಾಷ್ಟ್ರಕ್ಕಾಗಿ ವ್ಯಕ್ತಿಯ ಬಾಳು; ರಾಷ್ಟ್ರಕ್ಕಾಗಿ ದುಡಿಮೆ!! ರಾಷ್ಟ್ರಕ್ಕಾಗಿ ಸರ್ವಸ್ವ!!!

ಇದೊಂದೇ ಭಾವನೆಯು ಎಂತಹ ಶುಷ್ಕನಲ್ಲಿಯೂ ನವಜೀವನವನ್ನು ತುಂಬುವಷ್ಟು ಶಕ್ತಿಯುತವೂ ಆವೇಶವೂ ಆಗಿದೆ.

ಇದುವೇ ಉದ್ವೇಗಿಗಳ ಕೈದೀಪವಾಗಿರಲಿ.

ದೇವೇಂದ್ರ ಶೆಟ್ಟಿ
ಚೆಂಡಿಯೆ.

ಮಹನೀಯರೇ,

ತಮ್ಮ ಆಮಂತ್ರಣವನ್ನು ಆದರದಿಂದ ಸ್ವೀಕರಿಸಿರುವೆವು. ಉಡುಪಿಯಲ್ಲಿ ಉದ್ಘಾಟನವಾಗಲಿರುವ ತಮ್ಮ ಉಜ್ವಲ ವಾರ ಪತ್ರಿಕೆಗೆ ಯಾವ ಸಂದೇಶವನ್ನು ಕಳುಹಬೇಕೋ ತಿಳಿಯದು. ಅಂತೂ ದುಷ್ಟರಾಜರ ಪಲ್ಲಾಳಿಕೆಯನ್ನು ಹುಟ್ಟಡಗಿಸಿದ ಶ್ರೀಕೃಷ್ಣನ ಪಾಂಚಜನ್ಯದಂತೆ ಪಾರತಂತ್ರ್ಯವನ್ನು ನೆಲೆಗೆಡಿಸುವುದರಲ್ಲಿ ಈ ಪತ್ರಿಕೆಯು ಸಮರ್ಥವಾಗಲಿ!

ಪಿ. ಎಸ್. ನಿಂಜೂರು, ಬಿ. ಎ.
ಪ್ರೆಸಿಡೆಂಟ್, ಎಸ್. ವಿ. ಸಂಘ, ನಿಂಜೂರು

ಶುಭ ಸಂದೇಶ

ನೆಲಿಸಲ್ಲಿ! ಜನಮನದ ನವವನವೆ।
ಯುಗಳಿಗಳಿಂ ಕನ್ನಡದಿ ನವಯುಗ।
ನಳಿನನಾಭನ ವರವ ಪಡೆಯುತ ಮೆರೆಯಲ್ಲಿ ಬೇಗ॥
ನಲಿಸಲ್ಲಿ ಸತ್ಕೀರ್ತಿ ಬುಧಜನ।
ಗಳ ಶುಭಾಶೀರ್ವಚನ ಗಂಗೆಯು।
ಗಳಿಸಲ್ಲಿ ಬಿಂದುಗಳ ಯುತ ಬಾಳೆಂದು ವರಮತನ॥ ೧॥

ಎಳೆಯನಾಗಿ ಪ್ರತಾಪಿಯೆನಿಸುತ-।
ಲಿಳೆಯ ಪೂರ್ವಾಚಾರ ಕಲ್ಮಶ।
ಕಳೆಯ ಬೇಹುದು ಮಾಸ್ಥಿತಿಯ ನೀ ಸುಜನಹಿತನಾಗಿ॥
ನಳಿನ ಧರ್ಮದ ರಥವ ನಡಿಸುತ।
ಬೆಳೆಯು ತೇಜದಿ ನವ್ಯಭಾವದಿ।
ತಿಳಸುವುದು ಆಚಾರ ಸೂಕ್ಷ್ಮ ಸುಧಾರಣೆಯ ಮುಂದು॥ ೨॥

ವೇದಚೋರನ ವಧಿಸುತಾ ಕ್ಷೀ-।
ರೋದಧಿಯ ಮಥನದಲಿ ಮಂಧರ।
ಗೋಧರದ ಪೃಥ್ವಂಧ ಕಚ್ಛಪ ಕ್ರೋಡ ನರಸಿಂಹ॥
ನಾದ ವಾಮನ ಭಾರ್ಗವಾಯೋ-।
ಧ್ಯಾಧಿಪತಿ ವರ ಪಾರ್ಥಸಾರಥಿ।
ಮಾಧವನು ಗೋವಿಂದ ರಕ್ಷಿಸ ನವಯುಗವ ಸತತ॥ ೩॥

ಕಾಪು ಮಂಜುನಾಥ ಶೆಟ್ಟಿ.

ತುಂಬಿದ ಹೃದಯಾನಂದಧಾರೆ.

ಷೋಡಶ ವರ್ಷದಾ ಷೋಡಶ ಕಳೆಗಳಿಂ ಶೋಭಿಪ ನಯನಮನೋಹರವೂ, ಮನಮುಗ್ಧಕರವೂ, ಅತುಲಾನಂದದಾಯಕವೂ ಆದ ನವಯುಗದ ನವಜೌವ್ವನದ ನವವಧುವೇ, ನವತಾರುಣ್ಯಪೂರ್ಣ ಮನದಾ ನವವಿಚಾರ ತಂತುವಂ ಕರ್ಣಕುಹರಾನಂದಕರವಾಗಿ ಮೀಂಟುವ ದೈವಿಕಶಕ್ತಿಯ ಗಾಂಧರ್ವಕನ್ಯೆಯೇ, ವಿಶ್ವವ್ಯಾಪಿ ನವಯುಗದ ನವ ಜನನಿಯೇ, ನೀ ಧನ್ಯೆ! ಧನ್ಯೆ!! ನವಕರ್ಣಾಟಕದ ನವಚೇತನಾಕಾಶದಲ್ಲಿ ನವಸಾಸಿರ ನವಕಿರಣಗಳಿಂಮೊಪ್ಪಿ ಪ್ರಜ್ವಲಿಸುವ ಬಾಳರವಿಯೇ, ಕರ್ಣಾಟಕಾಂಬೆಯ ನವತರುಣರ ಹೃದಯಾಂತರಾಳದೊಳ್ ನವಯುಗದ ಅಲೆಗಳಂ ಒಂದೊಂದಾಗಿ ಹೊರಡಿಸುವ ಶಶಿಮಣಿಯೇ, ಗುರುವಾರದೊಳ್ ಹೊರಪೊರಡುವ ನವವಿಚಾರಿಗಳ ಗುರುವೇ, ಅಧೋಗತಿಗಿಳಿದು ದಾತರಿಲ್ಲದೆ ಕಾತರವಂ ಪಡುವ ಹಲವನ್ನು ಮಾನವ ಸಮಾಜಗಳ ಜಗದೈಕ ಭಾಗ್ಯ ವಿಧಾತನೇ, ನವಯುಗದ ನವಚೈತನ್ಯ ಜ್ಯೋತಿಯಂ ಭುವಿಯೊಳೆಲ್ಲೆಲ್ಲಿಯೂ ಬೀರುವಾ ಭುವನೈಕಜ್ಯೋತಿಯೇ, ನೀ ಧನ್ಯ! ಧನ್ಯ!!

ತುಳುನಾಡ ರಾಣಿಯೊಳ್ ಜನ್ಮವಂ ತಳೆದು, ಬಾಲಮನ (ನಿಷ್ಕಪಟಹೃದಯಿ) ಬಾಲಕೃಷ್ಣನಡಿಯೊಳ್ ಬಾಲ್ಯವಂ ತಳೆದು, ಕೆಚ್ಚೆದೆಯ ಕಾಂತಪ್ಪನಾರೈಕೆಯೊಳ್ ಕೌಮಾರ್ಯವಂ ತಳೆದು ತಾರುಣ್ಯವಂ ಪಡೆದು, ಪದಿನೈದು ಅಬ್ದದೊಳ್ ನವ ವಿಶ್ವದ ಸೇವೆಯಂ ಅವಿರಾಮವಾಗಿಗೈದೂ ಮನ ದಣಿಯದೆ, ತೃಪ್ತಿಯಂ ಪಡೆಯದೆ, ದ್ವಿಪದ ನವಸ್ಫೂರ್ತಿ ನವಚೈತನ್ಯಗಳಿಂ ಸೇವೆಯಂ ಅರ್ಪಿಸಲ್ ನವನೀತ ಪ್ರಿಯನೂರತ್ತ ಸಾಗಿದೆಯಾ? ಒಳಿತಾಯಿತು; ಒಳಿತಾಯಿತು!

ಹಿಂದಿನಂತೆ ಮುಂದಕ್ಕೂ, ನವಯುಗದ ಸೇವೆಯೇ ನಿನ್ನ ಜೀವನೋದ್ದೇಶವಾಗಲಿ! ನವಸ್ಫೂರ್ತಿ ನವಚೈತನ್ಯಗಳೇ ನಿನ್ನ ಪ್ರಾಣವಾಯುವಾಗಲಿ!! ನವಕರ್ಣಾಟಕಾಂಬೆಯ ನವತರುಣರ ನವಚೈತನ್ಯಪೂರ್ಣ ಏಳಿಗೆಯೇ ನಿನ್ನ ಧ್ಯೇಯವಾಗಲಿ!!! ತುಳುನಾಡ ಕ್ಷೀರವೋಳ್ ಹೊನ್ನಯ್ಯ, ಪಣಿಯಾಡಿಯರ ಎಡಬಲದ ನೆರವಿನಿಂ, ಕಾವ್ಯಕಲಾ ಮಂದಿರದ ಅಧಿದೇವ ಶ್ರೀನಿವಾಸನಾ ಒಲವಿನಿಂ ಇನ್ನಿತರ ಸದ್ವಿದ್ವನ್ಮಣಿಗಳಾ ಆಸರದೊಳ್ ನವಯುಗದ ನವಯುಗಾಚಾರ್ಯನಾಗಿ, ಕರ್ಣಾಟಕದ ಪತ್ರಿಕಾಪ್ರಪಂಚಾಕಾಶದ ತೇಜೋರವಿಯಾಗಿ, ಕನ್ನಡವಾಗ್ದೇವಿಯ ಭಾವೀ ಚೇತನಕೆಯ ಆಶಾತಂತುವಾಗಿ ಅಕಲಂಕ ಅವಿನಾಶ ಯಶೋಜ್ಯೋತಿಯಿಂ ಚಿರಕಾಲ ಬೆಳಗಿ ಬಾಳಪ್ಪಾ! ಬಾಳಿ ಬೆಳಗಪ್ಪಾ!!

"ನವಯುಗಾ!!!" ಇತಿ

ಬ್ರಹ್ಮಾನಂದ,
ಗೌರವ ಕಾರ್ಯದರ್ಶಿ,
ಶ್ರೀ ಪದ್ಮಸಾಲಿ ವೈಶ್ಯ ಸಮಾಜ ಸೇವಾ
ಯುವಕ ಸಂಘ, ಕಾರ್ಕಳ

ಮಾನ್ಯ ನವಯುಗ ಸಂಪಾದಕರಿಗೆ,

ಆರ್ಥಿಕ ದುಃಸ್ಥಿತಿಯು ಅಖಿಲ ಪ್ರಪಂಚಕ್ಕೆ ತಗಲಿಕೊಂಡಿರುವಂತೆ ನವಯುಗಕ್ಕೂ ತಗಲಿದ್ದು ಹೆಚ್ಚಲ್ಲ. ನವಯುಗಕ್ಕೆ ಸರಿಯಾದ ಸೇವೆಯನ್ನು ಮಾಡುತ್ತಿರುವ 'ನವಯುಗ'ವು ಕಣ್ಮರೆಯಾಗುತ್ತದೋ ಎಂಬ ಸಂಶಯವು ಇತ್ತು. ಸಾಹಿತ್ಯದಲ್ಲಿ ನುರಿತವರೂ, ತರುಣರೂ ಆದ, ಶ್ರೀ ಕೆ. ಕಾಂತಪ್ಪ ಶೆಟ್ರ ಸಂಚಾಲಕತ್ವದಲ್ಲಿ ಅದೇ ನವಯುಗವು ಉಡುಪಿ ಕ್ಷೇತ್ರದಿಂದ ಹೊರಟು ಜನತಾಸೇವೆಯನ್ನು ಮಾಡುತ್ತದೆಂಬುದನ್ನು ಕೇಳಿ ಆದಾವನು ಸಂತುಷ್ಟನಾಗಲಿಕ್ಕಿಲ್ಲ? ನಿಜವಾಗಿ ಶ್ರೀ ಕೆ. ಕಾಂತಪ್ಪ ಶೆಟ್ರ ಶ್ರಮವು ಶ್ಲಾಘನೀಯವೇ ಸರಿ. ಅವರ ಭಾವೀ ಉದ್ಯಮದಲ್ಲಿ ಸಕಲ ಕಾರ್ಯವೂ ಸಫಲತೆಯನ್ನು ಹೊಂದಿ 'ಶ್ರೀಕೃಷ್ಣ'ನ ದಯೆಯಿಂದ "ನವಯುಗ"ವು ಉತ್ತರೋತ್ತರವಾಗಿ ಬಾಳಲೆಂದೇ ವಿನಯ ಪೂರ್ವಕ ವಾದ ಬೇಡಿಕೆ. ತಥಾಸ್ತು.

ಯಂ. ಬಿ. ನರಸಪ್ಪ, ಮೂಲ್ಕಿ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಧಾರವಾಡ. ಮಹಾಜನಗಳಲ್ಲಿ ವಿಜ್ಞಾಪನೆ—

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಈಗ ಕರ್ನಾಟಕದಲ್ಲಿ ಕಾರ್ಯ ಮಾಡಲಾರಂಭಿಸಿ ೧೬ ವರ್ಷಗಳಾದವು. ಕರ್ನಾಟಕಪ್ರಾಂತದಲ್ಲಿಯ ಎಲ್ಲ ಕಾಂಗ್ರೆಸ್ ಕಮಿಟಿಗಳನ್ನು ಸುವ್ಯವಸ್ಥಿತವಾಗಿ ನಡೆಸುತ್ತಲಿರುವುದೇ ಈ ಸಂಸ್ಥೆಯ ಮುಖ್ಯ ಕಾರ್ಯವಾಗಿದೆ. ಈ ಕಾರ್ಯವನ್ನು ಮಾಡಲು ಈ ಸಂಸ್ಥೆಗೆ ಯಾವಾಗಲೂ ಜನಧನಗಳ ಸಹಾಯವು ಬೇಕಾಗುತ್ತಿದೆ.

ಆಯಾ ಭಾಗಗಳಲ್ಲಿ ಆಯಾ ಕಾಂಗ್ರೆಸ್ ಕಮಿಟಿಗಳು ಕಾರ್ಯಗಳನ್ನು ಮಾಡುತ್ತಿರುವುದರಿಂದ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಪ್ರತ್ಯಕ್ಷ ಸಂಬಂಧವು ಜನತೆಯೊಡನೆ ಬರುವುದು ಕಡಿಮೆ. ಆದರೆ ಈ ಸಂಬಂಧವು ಹೆಚ್ಚೆಚ್ಚು ಬರುವುದು ಅವಶ್ಯವು. ಹಾಗೂ ಜನರ ಕಡೆಯಿಂದ ಈ ಕಮಿಟಿಗೆ ಹೆಚ್ಚು ಸಹಾಯವು ದೊರೆಯುವದು ಅವಶ್ಯವು.

ಈ ಉದ್ದೇಶದಿಂದ ಈಗ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಮಂಡಳದವರು ಪ್ರಾಂ. ಕಾಂ. ಕಮಿಟಿಯ ಸಹಾಯಕರು ಎಂಬ ಒಂದು ವರ್ಗವನ್ನು ನಿರ್ಮಿಸಬೇಕೆಂದು ನಿರ್ಣಯ ಮಾಡಿರುವರು.

ಸಹಾಯಕರು ವರುಷಕ್ಕೆ ಕನಿಷ್ಟ ೨ ರೂಪಾಯಿಗಳನ್ನು ಈ ಕಮಿಟಿಗೆ ಸಲ್ಲಿಸತಕ್ಕದು. ಅವರಿಗೆ ಪ್ರಾಂ. ಕಾಂ. ಕಮಿಟಿಯಿಂದ ಕಾಲಕಾಲಕ್ಕೆ ಹೊರಡುವ ಪತ್ರಿಕೆಗಳೂ ವಾರ್ಷಿಕವರದಿ ಲೆಕ್ಕ ಇವು ಮುಟ್ಟಿಸಲಾಗುವುವು. ಅಂದರೆ ಅವರೊಡನೆ ಈ ಕಮಿಟಿಯ ಪ್ರತ್ಯಕ್ಷ ಸಂಬಂಧವು ಬರುವದು. ಹಾಗೂ ಕಮಿಟಿಗೆ ಧನಸಹಾಯವೂ ಆಗುವದು. ಈ ಪ್ರಕಾರದಿಂದ ಕಮಿಟಿಗೆ ಜನರು ಹೆಚ್ಚು ಹೆಚ್ಚು ಸಹಾಯ ಮಾಡಿ ಸಹಾನುಭೂತಿಯನ್ನು ತೋರಿಸಿ ಅದರ ಕಾರ್ಯದಲ್ಲಿ ಭಾಗಿಗಳಾಗುವರೆಂದು ನಂಬಿದ್ದೇನೆ.

ರಂಗನಾಥ ದಿವಾಕರ
ಗೌ. ಕಾರ್ಯದರ್ಶಿ.

ಸುಖನಿವಾಸ
(ತಾಲೂಕು ಕಚೇರಿಯ ಎದುರುಗಡೆ)
ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸ್ವಾಸ್ಥ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ಎಗ್ಯೆರೆ ನಮ್ಮ ಸ್ವಂತ ದೇಖರೇಖಿಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿರಿ.

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಭಿಸಿದೆ.

ವ್ಯವಸ್ಥಾಪಕರು:
ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಎಂಕ್ಸ್ಪ್ರೆಸ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-15	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-35	ಬೆಳಿಗ್ಗೆ 9-20

ಪ್ರಾಮುಖ್ಯ ಪ್ರಕಟಣೆ
ಅಮೃತಾಂಜನ
ಡಿಪೋವಿನ ರಿಂಗ್‌ವರ್ಮ್ ಮುಲಾಮು.

ಇತ್ತೀಚೆಗೆ ಸನ್ಮಾನ್ಯ ವಿಲಿಯಮ್ಸ್ ಎಂಡ್ ಕೋರವರ ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮಿನ, ಈಗ ಈ ಕೆಳಗಣಂತೆ ವ್ಯತ್ಯಾಸ ನಡೆದಾಗಿದೆ.

ಅಮೃತಾಂಜ ಡಿಪೋವಿನ ತ್ರಿವರ್ಣದ
'ರೈಸಿಂಗ್ ಸನ್'

ಈ ಮೇಲಿನ ಹೆಸರು ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ,
ಬೊಂಬಾಯಿ-ಮದ್ರಾಸು-ಕಲ್ಕತ್ತ.

ನಮ್ಮ ಜರಿ ಪಿತಾಂಬ್ರ ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

THIS MAN
WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀಕ್ಷೇತ್ರ 1, ವಿಶ್ವೇಶ್ವರ ಪಟ 1, ಈ ಸಾಮಾನುಗಳು 1 ಅಣೆ ಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುತ್ತವೆ. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾವ್ಡಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಉಲ್ಲನ್ ಚಾಳ, ಧವಳ, ನಮದಾ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸ ನಮೂನೆಯ ಮಡಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55. ಮಡಲು ಸಾದಾ 16ಮೊಳದ ಶೀರೆ 1ಕ್ಕೆ ರೂ. 16 ರಿಂದ ರೂ. ೨೫ರ ವರೆಗೆ, ಜರಿ ಕಡಮೆ 16ಮೊಳ ಕ್ಲಾವರ್ ಅಂಚು ರೂ. 10½ಯಿಂದ ರೂ. 16. ಖಣ 1ಕ್ಕೆ ರೂ. 1¼ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶೀ

ಮಲಯಾಳದ ಸ್ತ್ರೀ
ಸ್ತನೋಸ್ತೇಧಃ
ರಹಸ್ಯಗಳು

THE MALAYALA STHANO STHEDAH OUSHADHA CO.,
Post-CHALAPURAM, MALABAR

ಇದೀಗ ತಿಳಿದು ಬಂದಿದೆ. ಪ್ರಾಯಶಃ ನ್ಯಾಯದ ಆಕರ್ಷಣೆ ಮಲಯಾಳದ ಸ್ತ್ರೀಯರಿಗೆ ಒಲ್ಲದು. ತೀವ್ರ ಪುರುಷನೊಬ್ಬ ನನ್ನನ್ನು ವೀಕ್ಷಿಸಿ ನಸುನಕ್ಕಲ್ಲಿ, ಆತನ ಕಣ್ಣುಗಳು ಸ್ತ್ರೀಯ ಮುಖದಿಂದ ಕೆಳಗೆ ಕುಚಸ್ಥಳಕ್ಕೆ ಚಲಿಸಿ ಕುಚಗಳು ಉನ್ನತವಾಗಿ, ದುಂಡಗೆ ಯೌವನಯುಕ್ತವಾಗಿ ಆಕರ್ಷಕವಾಗಿರುವವೋ ಎಂದು ನೋಡುವವು.

48 ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ಥೆಡ:— ಅಲ್ಪತ್ವ, ಚಿಂತೆ, ಪ್ರಾಯ ಆಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷಣೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಅಥವಾ ಜೋತುಬಿದ್ದಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರವಾದರೆ

ದಿ ಮಲಯಾಳ ಔಷಧ ಕಂಪೆನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದ ವಿರೂಪವಾಗಿ ಚಪ್ಪಟೆಯಾಗಿ ಇದ್ದ ಕುಚಗಳು ಸರಿಯಾಗಿ ಬೆಳೆಸಲ್ಪಡುವುವು, ಟೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವುವು, ಸಡಿಲಾಗಿರುವ ಮಾಂಸವು ಸ್ಥಿರವಾಗುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವು. ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಪೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು.

ಸ್ತನಸ್ಥೆಡ ನಂಬ್ರ 20.—ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. 3. ನಂಬ್ರ 21. ಹೊರಗಣ ಉಪಯೋಗಕ್ಕೆ ರೂ. 3. ಧರ್ಮಾರ್ಥ ಕೆಟಲಾಗಿಗೆ ದಯಮಾಡಿ ಬರೆಯಿರಿ.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ

ಮುಖ ಮೊಡವೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ.

ಸುಧಾರಕರು ಅಧರ್ಮಿಗಳೆ?

(ಲೇಖಕ:— ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ)

ಎಷ್ಟೋ ಕಾಲದಿಂದ ಉಂಡು ತಿಂದು ನಿಶ್ಚಿಂತರಾಗಿ ನಿದ್ರಿಸಿ ಸುಖವಾಗಿದ್ದ ರೂಢಿವಾದಿಗಳು, ಅಂಧವಿಶ್ವಾಸಿಗಳು, ಸಮಾಜಸುಧಾರಕರೆನ್ನಿಸಿಕೊಳ್ಳುವವರ ಭಾವನೆ ಮತ್ತು ಲೇಖನಭಾಷಣ, ಕಾರ್ಯಗಳಿಂದ ಒಂದು ತುತ್ತು ಅನ್ನ ತಿಂದಿರಲಿಕ್ಕೂ ಒಂದುಸಿರೆಳೆದುಬಿಡಲಿಕ್ಕೂ ಉಪಾಯ ಕಾಣದವರಾದರೆಂದರೆ, ನಿಜವಾಗಿಯೂ ಅದೆಂತಹ ಕಲಿಕಾಲ ಬಂತಪ್ಪ! 'ನಾಸ್ತಿಕರ, ಅಧರ್ಮಿಗಳ, ಧರ್ಮದ್ರೋಹಿಗಳ ಈ ರಾಜ್ಯದಲ್ಲಿ ನಾವು ಹುಟ್ಟಿದುದೇ ತಪ್ಪಾಯಿತು, ನಾರಾಯಣ ನಾರಾಯಣ! ವಿಧವಾವಿವಾಹ, ಅಸ್ಪೃಶ್ಯತಾ ನಿವಾರಣೆ, ನಾರಾಯಣ ನಾರಾಯಣ! ಜಾತಿ ಹೋಯಿತು, ಧರ್ಮ ಹೋಯಿತು, ನಾರಾಯಣ ನಾರಾಯಣ! ಇನ್ನು ಪ್ರಳಯವಾಗುವದು ಮಾತ್ರ ಉಳಿದಿದೆ. ನಾರಾಯಣ ನಾರಾಯಣ!' ಎಂದು ಕೂಗೆಬ್ಬಿಸುವವರ ತಂಡವೊಂದು ಪ್ರತಿಯೊಂದು ಕಡೆಯಲ್ಲಿಯೂ ತೋರಿಬರುತ್ತದೆ. ಇವರ ಈ ಮಾತಿನಲ್ಲಿ ಏನಾದರೂ ಹುರುಳಿದೆಯೆ? ಸುಧಾರಕರು ನಿಜವಾಗಿಯೂ ಅಧರ್ಮಿಗಳೇ?

ಧರ್ಮಾಧರ್ಮದ ಸ್ವರೂಪವನ್ನು ತಿಳಿಯುವದು ತಮಗೆ ಕೂಡ ಕಠಿನವಾಗಿ ತೋರುತ್ತದೆಂದು ಪ್ರಾಜ್ಞರು ಹೇಳುತ್ತಿರುವಾಗ, 'ಧರ್ಮ ಹಾಳಾಯಿತು, ಧರ್ಮವು ಉಳಿಗಿತು' ಎಂದು ಕೆಲವರು ಹೇಳುವ ಮಾತಿಗೆ ಯಾವ ಅರ್ಥವೂ ಇರುವದಿಲ್ಲ. 'ಯತೋಽಭ್ಯುದಯನಿಃಶ್ರೇಯಸಸಿದ್ಧಿಃ ಸ ಧರ್ಮಃ'— ಯಾವ ಯಾವ ಆಚರಣೆಗಳಿಂದ ದೇಶ, ಜನಾಂಗ, ಸಮಾಜದ ಉನ್ನತಿಯು ಸಾಧ್ಯವೋ, ಯಾವ ಯಾವ ವ್ಯವಹಾರಗಳಿಂದ ಬಹುಜನರಿಗೆ ಸುಖ ಒದಗಿಬರುತ್ತದೋ, ಅದೇ ನಿಜವಾದ ಧರ್ಮ' ಎಂದು ಪ್ರಸಿದ್ಧವಾಗಿದೆ. ಆದರೆ— ಜೀವನ ಪರಿಯಂತ ಅನುಸರಿಸುವ ವೃತ್ತಿ, ಪ್ರಕೃತಿ, ಸ್ವಭಾವ, ನಿತ್ಯನಿಯಮ, ಸ್ವರ್ಗ ಅಥವಾ ಉತ್ತಮ ಲೋಕದ ಪ್ರಾಪ್ತಿಯನ್ನುಂಟು ಮಾಡುವ ಕೃತ್ಯ ಅಥವಾ ವಿಧಾನ, ಜಾತಿ ಕುಲ ವರ್ಗ ಮೊದಲಾದವುಗಳಿಗಾಗಿ ಉಚಿತವೆಂದು ನಿರ್ಣಯಿಸಲ್ಪಟ್ಟ ವ್ಯವಸಾಯ ಅಥವಾ ವ್ಯವಹಾರ, ಕರ್ತವ್ಯ, ಸುಕೃತ, ಸದಾಚಾರ, ಶ್ರೇಯಸ್ಸು, ಪುಣ್ಯ, ಸತ್ಕರ್ಮ ಇವುಗಳೆಲ್ಲ ಧರ್ಮವೆಂದೂ ಇವುಗಳಿಗೆ ವಿರುದ್ಧವಾದದ್ದು ಅಧರ್ಮವೆಂದೂ ಇನ್ನೊಂದೆಡೆ ಬರೆಯಲ್ಪಟ್ಟಿದೆ.

ಸಮಾಜವು ದುಃಸ್ಥಿತಿಯಲ್ಲಿರುವದಕ್ಕೆ ನಾವು ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಧರ್ಮವೆಂಬುದು ಮೇಲೆ ಹೇಳಿದ ಪ್ರಕಾರವೇ ಇರುವದೆಂಬುದು ನಿಜವಾದರೆ, ಈಗ ಅಂಥ ಸಮಾಜದ ದುಃಸ್ಥಿತಿಯ ಕಾರಣಗಳನ್ನೂ ಅದರ ಪರಿಹಾರೋಪಾಯಗಳನ್ನೂ ಚಿಂತಿಸುವದು ಅಧರ್ಮವೆಂದೂ ಆಗಲಾರದು. ಸಮಾಜದ ಸಂಘಟನೆ ಮತ್ತು ಸುಖಾಭಿವೃದ್ಧಿಗಾಗಿ ಸುಧಾರಣೆಯ ಪ್ರಯತ್ನಗಳನ್ನು ಮಾಡುವದೂ ಅಧರ್ಮವಾಗಲಾರದು. ಆದ್ದರಿಂದ ಸುಧಾರಕರು ಧರ್ಮದ್ರೋಹಿಗಳು ಅಧರ್ಮಿಗಳು ಅಲ್ಲವೇ ಅಲ್ಲ. ಅವರು ನಾಸ್ತಿಕರೆನ್ನುವದೂ ಮೂರ್ಖತನ. ದೇವ ಧರ್ಮಸ್ವರೂಪವನ್ನು ಮಾತ್ರ ಅವರು ರೂಢಿವಾದಿಗಳಂತೆ ತಿಳಿಯದೆ ಬೇರೆಯಾಗಿ ತಿಳಿಯುವರು. ಸುಧಾರಕರಿಗೂ ಉಳಿದವರಿಗೂ ಇರುವ ಭೇದ ಇಷ್ಟೆ!

ವೇದ, ಸ್ಮೃತಿ, ಸದಾಚಾರ, ಆತ್ಮಕ್ಕೆ ಪ್ರಿಯಕರವಾದ ವರ್ತನೆ—ಇವು ಧರ್ಮದ ನಾಲ್ಕು ಲಕ್ಷಣಗಳೆಂದು ಇನ್ನೊಂದೆಡೆ ಹೇಳಲ್ಪಡುವದು. ವೇದಗಳ ವಿಷಯದಲ್ಲಿ ಎಲ್ಲರಿಗೂ ಪೂಜ್ಯಭಾವನೆಯಿರಬಹುದು; ಆದರ ಭಕ್ತಿಗಳಿರಬಹುದು. ಅವು ಅತ್ಯಂತ ಪ್ರಾಚೀನವಾದವುಗಳು ಮಾತ್ರವಲ್ಲ, ಅವುಗಳಿಗೆ ಐತಿಹಾಸಿಕ ಮಹತ್ವವಿದೆ ಎಂಬುದನ್ನು ಎಲ್ಲರೂ ಒಪ್ಪುವರು. ಪ್ರಾಚೀನ ಭಾರತದ ಸಂಸ್ಕೃತಿ ನಾಗರಿಕತೆಗಳ ಕಲ್ಪನೆಯು ಅವುಗಳಿಂದಲೇ ಆಗಬೇಕೆಂಬುದು ಕೂಡ ನಿಜವೆ. ಈ ವೇದಗಳಿಂದಲೂ ಧರ್ಮ ಸ್ವರೂಪದ ಜ್ಞಾನ ಪ್ರಾಪ್ತಿಯಾಗುವದೆಂದು ಕೆಲವರನ್ನುವ ವಿಷಯವನ್ನು ಮೇಲೆ ಹೇಳಿಯೇ ಇರುವೆವು. ಆದರೆ ವೇದಗಳ ಯಾವತ್ತು ಜ್ಞಾನವು ಸಾಮಾನ್ಯ ಜನತೆಗಿರುವದಿಲ್ಲ. ಅವು ಅವರಿಗೆ ಗ್ರಾಹ್ಯವಾಗಿಯೂ ಇರುವದಿಲ್ಲ. ವೇದಗಳನ್ನು ತಿಳಿದವರೆನ್ನಿಸಿಕೊಳ್ಳುವ 'ಆ ಕೆಲವರ ಅಭಿಪ್ರಾಯಗಳು ಕೂಡ ಒಂದಾಗಿರುವದಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಾಗಿ ಅರ್ಥಮಾಡಿಕೊಳ್ಳುತ್ತಾರೆ. ಈ ಕ್ರಮವು ಬಹು ಪುರಾತನ ಕಾಲದಿಂದಲೂ ನಡೆದು ಬಂದಿದೆ. ವಿದ್ವಾಂಸರ ಸಂಖ್ಯೆಯು ಹೆಚ್ಚುತ್ತ ಬಂದ ಹಾಗೆ ಅರ್ಥ ಭೇದವೂ ಹೆಚ್ಚಾಗುತ್ತ ಬಂದಿದೆ ಆದರೂ ಇವರೆಲ್ಲರಿಗೂ ತಮ್ಮ ತಮ್ಮ ಅರ್ಥವೇ ಸಂಪೂರ್ಣ ಸತ್ಯವೆಂಬ ಭಾವನೆಯಿರುತ್ತದೆ.

ಸ್ಮೃತಿಗಳ ಮಾತೂ ಹಾಗೆಯೇ. ಒಂದೇ ವಿಷಯವನ್ನು ಒಬ್ಬೊಬ್ಬ ಸ್ಮೃತಿಕಾರನು ಒಂದೊಂದು ರೀತಿಯಾಗಿ ಪ್ರತಿಪಾದಿಸಿರುವನೆಂದು ಹೇಳಲ್ಪಡುತ್ತದೆ. ಬೇರೆ ಬೇರೆ ಸ್ಮೃತಿವಚನಗಳಲ್ಲಿ ಪರಸ್ಪರ ವಿರೋಧವಿರುವ ಹಾಗೂ ಕಂಡು ಬರುತ್ತದಂತೆ. ಹಾಗಾದರೆ ಸಾಮಾನ್ಯ ಜನರು ಸತ್ಯವನ್ನು ತಿಳಿದು ಧರ್ಮಸ್ವರೂಪದ ಜ್ಞಾನ ಪ್ರಾಪ್ತಿ ಮಾಡಿಕೊಳ್ಳುವದು ದುಸ್ಸಾಧ್ಯವಾಗಿದೆ. ಮಾತ್ರವಲ್ಲ ಇವುಗಳಿಂದ ತಾನೇ ಹಿಂದೂ ಧರ್ಮಾನುಯಾಯಿಗಳು ವಿಚಾರಿಗಳಾಗುವದರ ಬದಲು ಕೇವಲ ವಿಶ್ವಾಸಿಗಳಾದುದರಿಂದ ಹಿಂದೂ ಸಮಾಜದಲ್ಲಿ ಅಗಣಿತ ಮತ ಪಂಗಡಗಳಾಗಿ ಅದು ಹರಿದು ಹಂಚಿ ಹೋಯಿತೆಂದು ಕೆಲವರ ಅಭಿಪ್ರಾಯವುಂಟು. ಪ್ರತಿಯೊಬ್ಬ ಹಿಂದುವು ತನ್ನ ವ್ಯಕ್ತಿ ತಾನು ಬೇರೆ ಎಂಬ ಭಾವನೆಯನ್ನು ಇಟ್ಟುಕೊಂಡುದರಿಂದಲೇ ಹಿಂದೂ ಸಮಾಜದ ಸರ್ವಸಂಪತ್ತು ವಿದೇಶಿಯರ ಆಕ್ರಮಣಗಳಿಗೆ ಬಲಿಯಾಯಿತು. ಹಿಂದೂ ಸಮಾಜದ ಹಿಂದೂ ದೇಶವು ವಿದೇಶೀಯ ವಿಧರ್ಮಿಗಳ ಲೀಲಾ ವಿನೋದಗಳ ರಂಗಸ್ಥಳವಾಯಿತು.

ಇನ್ನು ಸದಾಚಾರ ವಿಷಯ—ವೇದ ಸ್ಮೃತಿಗಳಂತೆ ಸದಾಚಾರ ನಿರೂಪಣೆಯಿಂದಲೂ ಧರ್ಮಾಧರ್ಮವನ್ನು ತಿಳಕೊಳ್ಳುವದು ಕಷ್ಟ. ಭಿನ್ನಭಿನ್ನ ಕಾಲಪರಿಸ್ಥಿತಿಗಳಲ್ಲಿ ಸದಾಚಾರವೆಂಬುದು ಭಿನ್ನಭಿನ್ನವಾಗಿದ್ದಂತೆ ಕಂಡುಬರುತ್ತದೆ. ಒಂದೇ ಕಾಲ ಒಂದೇ ಪರಿಸ್ಥಿತಿಯಲ್ಲಾದರೂ ಅದು ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿದೆ. ಪರಮ ಧಾರ್ಮಿಕನಾದ ಶ್ರೀ ರಾಮನು ತಪೋನಿಷ್ಠನಾದ ಶೂದ್ರಕ ರಾಜನನ್ನು ಕೊಂದುದು, ಅವನು ಒಬ್ಬ ಅಗಸನ ಮಾತನ್ನು ಕೇಳಿ ಸಾಧ್ವಿಮಣಿಯಾದ ಪೂರ್ಣ ತಿಂಗಳು ತುಂಬಿದ ಗರ್ಭಿಣಿ ಸೀತೆಯನ್ನು ಅಡವಿಪಾಲು ಮಾಡಿದ್ದು, ಮೂಲೆಯಲ್ಲಿ ನಿಂತು ನಿರಪರಾಧಿಯಾದ ವಾಲಿಯನ್ನು ಕೊಂದದ್ದು, ಭಾರತಯುದ್ಧ ನಡೆಯುತ್ತಿರುವಾಗ ಧರ್ಮರಾಜನೇ 'ಅಶ್ವತ್ಥಾಮೋ ಹತಃ' ಎಂದು ಗುರುವರ್ಯರಾದ ದ್ರೋಣಾಚಾರ್ಯರನ್ನೇ ವಂಚಿಸಿದ್ದು, ಭಗವದವತಾರಿಯಾದ ಶ್ರೀ ಕೃಷ್ಣನು ಕರ್ಣನನ್ನು ವಂಚಿಸಿ ಕರ್ಣಕುಂಡಲಗಳನ್ನು ತೆಗೆದು ಕೊಂಡದ್ದು ಇತ್ಯಾದಿ ಪ್ರಸಂಗಗಳು ಸದಾಚಾರಗಳೇ, ದುರಾಚಾರಗಳೇ? ಎಂಬ ಕುರಿತು ಪಂಡಿತೋತ್ತಮರಲ್ಲಿಯೂ ಭಿನ್ನಾಭಿಪ್ರಾಯಗಳಿರುತ್ತವೆ. ಈ ತರಹದ ಸಂದೇಹವು ಬಹುಕಾಲದಿಂದಲೂ ಬರುತಿದ್ದುದರಿಂದ ಒಬ್ಬ ನೀತಿಶಾಸ್ತ್ರಕಾರನು—'ಶ್ರುತಿಸ್ಮೃತಿಗಳು ಬೇರೆಬೇರೆಯಾಗಿದ್ದು ಪರಸ್ಪರ ವಿರೋಧ ಅಭಿಪ್ರಾಯವನ್ನು ಕೊಡುತ್ತವೆ. ಬೇರೆ ಬೇರೆ ಋಷಿಗಳೂ ಏಕಾಭಿಪ್ರಾಯವುಳ್ಳವರಲ್ಲವಾದ್ದರಿಂದ ಅವರ ಮಾತೂ ಪ್ರಮಾಣವಾಗಲಾರದು ಧರ್ಮತತ್ವವನ್ನು ತಿಳಿಯುವದು ಬಹಳ ಕಠಿಣವಾದ್ದು. ಆದ ಕಾರಣ ಮಹಾಜನರ ಉಕ್ತಿಯೇ ಸರ್ವ ಸಾಧಾರಣರ ಧರ್ಮವಾಗಿರಬೇಕು' ಎಂದಿದ್ದಾನೆ.

ಪರಂತು ಇಲ್ಲಿಯೂ ಒಂದು ಕಷ್ಟವು ಅನುಭವಕ್ಕೆ ಬರುತ್ತದೆ. ಮಹಾಜನರು ಯಾರು? ಅವರ ಲಕ್ಷಣಗಳೇನು? ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಶ್ರೇಷ್ಠಪುರುಷರು, ಸಾಧುಗಳು, ಶ್ರೀಮಂತರು—ಇವರು ಮಹಾಜನರೆಂಬುದು ಸರ್ವಸಾಧಾರಣ ಅಭಿಪ್ರಾಯವು! ಈ ಮಹಾಜನರು ಯಾವಾಗಲೂ ಏಕಾಭಿಪ್ರಾಯವುಳ್ಳವರಾಗಿರುವುದಿಲ್ಲ. ಮಹಾತ್ಮಾ ಜಿ, ಮಾಲವೀಯಜಿ, ಠಾಗೋರಜಿ—ಇವರು ಭಾರತೀಯ ಪರಿಸ್ಥಿತಿಯ ವರ್ತಮಾನ ಕಾಲದ ಮೂವರು ಪ್ರತಿನಿಧಿಗಳಾಗಿರುವರೆಂದು ಸಾಮಾನ್ಯ ಜನರ ಮಾತ್ರವಲ್ಲ, ವಿದ್ವಾಂಸರ ಕೂಡ ಸ್ಪಷ್ಟ ಅಭಿಪ್ರಾಯವಿರುತ್ತದೆ ಮಹಾಜನರೆನ್ನುವರಾದರೆ ನಿಜವಾಗಿಯೂ ಇವರನ್ನೇ ಮಹಾಜನರೆನ್ನಬೇಕು. ಆದರೂ ಧಾರ್ಮಿಕ ಸಾಮಾಜಿಕ ವಿಷಯಗಳಲ್ಲಿ ಇವರೊಳಗೆ ಎಷ್ಟು ಭಿನ್ನಾಭಿಪ್ರಾಯಗಳಿರುವದಿಲ್ಲ? ಯಾರನ್ನು ಅನುಸರಿಸುವದು ಧರ್ಮವಾಗಿದೆ?—ಇದೂ ಒಂದು ಸಹಜವಾಗಿ ಬಿಡಿಸಲಿಕ್ಕಾಗದ ಒಂದು ಸಮಸ್ಯೆಯಾಗಿರುತ್ತದೆ.

ಧರ್ಮಾಧರ್ಮ ಸ್ವರೂಪವನ್ನು ತಿಳಕೊಳ್ಳಲಿಕ್ಕಿರುವ ಒಂದೇ ಒಂದು ಮಾರ್ಗವೆಂದರೆ—ಆತ್ಮಕ್ಕೆ ಪ್ರಿಯಕರವಾದ ವರ್ತನೆ, ಅದೇ ಧರ್ಮ. ಉಳಿದುದೆಲ್ಲವೂ ಅಧರ್ಮ. ಆತ್ಮಸ್ವರೂಪವು ಎಲ್ಲರಲ್ಲಿಯೂ ಏಕಪ್ರಕಾರವಾಗಿರುವಂಥಾದ್ದು. "ಸಮಪಾತಾ. ಸಮಭ್ಯಾತಾತ್ಮಾ, ಆತ್ಮವತ್ ಸರ್ವಭೂತಾನಿ" ಎಂಬ ಮಾತುಗಳು ಅಜರಾಮರವಾಗಿ ಇರುವವು. ಕಳ್ಳತನ ಮಾಡುವದು, ಕಳ್ಳರ ಸಮಾಜದಲ್ಲಿ ಸದಾಚಾರವೆನ್ನಿಸಬಹುದು ಆದರೆ ಅದೇ ಕಳ್ಳತನವನ್ನು ತನ್ನ ಮನೆಯಲ್ಲಿ ಕಳ್ಳನಾದವನು ಕೂಡ ಮಾಡಬಿಡಲಾರನು. ಯಾಕೆಂದರೆ ಅಂಥ ಕಳ್ಳತನದಿಂದ ಅವನಿಗೆ ಬಹಳ ದುಃಖವಾಗುತ್ತದೆ. ಆದ್ದರಿಂದ ಕಳ್ಳತನ ಮಾಡುವದು ಅಧರ್ಮ, ತ್ಯಾಜ್ಯ. ಹೀಗೆಯೇ ಎಲ್ಲರನ್ನೂ ತನ್ನಂತೆ, ತನ್ನನ್ನು ಎಲ್ಲರಂತೆ ತಿಳಕೊಳ್ಳುವದೇ ನಿಜವಾದ ಧರ್ಮವು. ಸುಧಾರಕರು ಕೂಡ ಇದೇ ದೃಷ್ಟಿಯಿಂದ ಕೆಲಸ ಮಾಡುತ್ತಿರುತ್ತಾರೆ. ಹಾಗಾದ ಮೇಲೆ ಅವರು ಅಧರ್ಮಿಗಳು, ಧರ್ಮದ್ರೋಹಿಗಳು ಹೇಗಾಗುವರು?

ಸಮಾಜದಲ್ಲಿ ಪ್ರಚಲಿತವಾಗಿರುವ ಎಷ್ಟೋ ಪದ್ಧತಿಗಳು ದುಷ್ಟವಾಗಿರುವವೆಂದೂ, ಸಮಾಜದ ಸಾಮೂಹಿಕ ಸುಖಕ್ಕವು ಹಾನಿಕಾರಕವಾಗಿರುವವೆಂದೂ ಎಲ್ಲರೂ ಅನುಭವಕ್ಕೆ ತರುತ್ತಿದ್ದಾರೆ. ಅಂಥ ಪದ್ಧತಿಗಳ ಸಮೂಲ ನಾಶ ಮಾಡುವದು ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ. ವಾಸ್ತವ ದಾಂಪತ್ಯ ಸುಖದಿಂದ ವಂಚಿಸಲ್ಪಟ್ಟ ಬಾಲೆಯ ದೃಷ್ಟಿಯಿಂದ ಆಲೋಚಿಸಿದಾಗ ಬಾಲ್ಯ ವಿವಾಹವು ಕೆಟ್ಟದೆಂದು ತೋರಿ ಬರುವದು. ಇಂದ್ರಿಯ ನಿಗ್ರಹ ಮಾಡಲಾರದೆ ಪತಿತಳಾಗುವ ಬಾಲ ವಿಧವೆಯ ದೃಷ್ಟಿಯಿಂದ ಆಲೋಚಿಸಿದಾಗ ವಿಧವಾ ವಿವಾಹವನ್ನು ಪ್ರೋತ್ಸಾಹಿಸಬೇಕೆಂದು ತೋರಿಬರುವದು. ಮೇಲ್ಜಾತಿಯವರ ತಿರಸ್ಕಾರ ತಾತ್ಸಾರಗಳಿಗೆ ಗುರಿಯಾಗಿ ಅಸಹನೀಯ ಕಷ್ಟಗಳನ್ನು ಅನುಭವಿಸುತ್ತಿರುವ ಕೀಳ್ಜಾತಿಯವರ ದೃಷ್ಟಿಯಿಂದ ಆಲೋಚಿಸಿದಾಗ ಉಚ್ಚನೀಚ ಭಾವನೆಯನ್ನುಂಟುಮಾಡುವ ಜಾತಿ ಪದ್ಧತಿಯನ್ನು ನಾಶಮಾಡಬೇಕೆಂದು ತೋರಿಬರುವದು. ಅರೆ ಹೊಟ್ಟೆ ಅನ್ನಕ್ಕೂ ಗತಿಯಿಲ್ಲದೆ ಕಂಗಾಲಾಗಿ ದಾರಿಯ ಮೇಲೆ ಬಿದ್ದು ನರಳುತ್ತಿರುವ ದೀನ ದರಿದ್ರರ ದೃಷ್ಟಿಯಿಂದ ಆಲೋಚಿಸಿದಾಗ ಮದುವೆ ಮುಂಜಿ ಜಾತ್ರೆ ಉತ್ಸವ ಭೂರಿಭೋಜನ ದಾನದಕ್ಷಿಣೆಗಳಿಗೆ ಮಾಡುವ ವಿಪರೀತ ಖರ್ಚು ದುರ್ವ್ಯಯವೆಂದು ತೋರಿಬರುವದು. ಹೀಗೆ ಎಷ್ಟೋ ಉದಾಹರಣೆಗಳನ್ನು ಕೊಡುತ್ತ ಹೋಗಬಹುದು. ಈ ಎಲ್ಲ ಪದ್ಧತಿಗಳು ಆತ್ಮಕ್ಕೆ ಪ್ರಿಯಕರವಾದ ವರ್ತನೆಗಳೆನ್ನ ಬಹುದೇ? ಕೂಡದು. ಇಂಥ ದುಷ್ಟ ಪದ್ಧತಿಗಳ ನಾಶವಾಗಬೇಕೆಂದೇ ಸುಧಾರಕರು ನಾನಾ ಉಪಾಯಗಳಿಂದ ಪ್ರಯತ್ನಿಸುತ್ತಿರುತ್ತಾರೆ. ಈ ಕಾರಣದಿಂದ ಅವರೆಂದೂ ಅಧರ್ಮಿಗಳೆನ್ನಿಸಿಕೊಳ್ಳಲಾರರು.

ಮುಖ್ಯವಾಗಿ ಸ್ವಾರ್ಥ, ದ್ವೇಷ, ಅಸೂಯೆ, ಕ್ರೋಧ ಮೊದಲಾದ ದುಷ್ಟ

(೧೫ನೇ ಪುಟಕ್ಕೆ ಮುಂದರಿಯುವುದು)

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

(1907ರಲ್ಲಿ ಸ್ಥಾಪಿತವಾದದ್ದು.)

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ   ವಿಮಾ ಹಣ ಪಾವತಿ ರೂ. **37** ಲಕ್ಷ ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು.

ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು, ವಂಶಪಾರಂಪರ್ಯವಾದ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ.

ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಕೊಳ್ಳಿರಿ.

P. D. BHARGOVA,
General Manager, ***AJMER,***
Or SUPERINTENDENT, 278, Linga Chetty Street, MADRAS.

Or Chief Agent:—
BELLARY· MADURA: TRICHINOPOLY: VELLORE.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ೩೦೦೦ರತನಕ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ೫೦೦ದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಶಕ್ಕರ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ಬುಂದಲ್ಲಿ ಯಾವಾಗಲೂ ಹಣ್ಣು ಇರುವದು. ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. ೧-೮-೦ ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಟಾಡ ಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋಸ್ಟೋರದಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು. ದ. ಕನ್ನಡ.

PANGAL NAYAK BANK LTD.

ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: **ಉಡುಪಿ.**   [ಸ್ಥಾಪಿತವಾದ್ದು 1920.]   ಶಾಖೆ: **ಚರ್ಚ್‌ರೋಡ್, ಮಂಗಳೂರು.**

ತೆತ್ತ ಮೂಲಧನ ರೂ **1,75,000.** ರಿಜರ್ವ ವ ಇತರ ಫಂಡುಗಳು ರೂ **2,00,000.**

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ಸ್ಥಿರಾಸ್ತಿಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯದರಗಳಲ್ಲಿ ಸಾಲಗಳೂ ಓವರ್ ಡ್ರಾಫ್ಟ್‌ಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲ್ಲುಗಳು, ದರ್ಶನಿಹುಂಡಿಗಳು ಚಕ್ಕುಗಳು ವಗೈರೆ ಅತೀ ಕಡಿಮೆ ಕಮಿಶನ್ ಮೇಲೆ ವಟಾಯಿಸಲ್ಪಡುವವು.

ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮ್ಯುಲೇಟಿವ್ ಠೇವಾಣಾತಿಗಳು ಅಂಗೀಕರಿಸಲ್ಪಡುವವು. ಇವುಗಳ ಚಾಲ್ತಿ ದರಗಳನ್ನು ಬರೆದು ತಿಳಕೊಳ್ಳಬಹುದು.

ಒಂದು ವರ್ಷದ ಯಾ ಎರಡು ವರ್ಷದ ಕಾಯಂ ಠೇವಣಾತಿಗಳಿಗೆ ಸಾ| ಶೇ| **4½** ರಂತೆಯೂ, ಮೂರು ಯಾ ನಾಲ್ಕು ವರ್ಷದ ಠೇವಣಾತಿಗಳಿಗೆ ಸಾ| ಶೇ| **5** ರಂತೆಯೂ, ಪ್ರತಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು.

ಬೇಂಕಿನ ಇತರ ಸಕಲ ವಿಧದ ವಹಿವಾಟುಗಳು ಸಹಾ ನಡಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು.

P. Laxman Nayak.
Secretary.

ಉಡುಪಿ ತಾ. 2-2-1935.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಕೆಯಿಂದಲೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0

ಎಮ್. ವಿ. ಶಾಸ್ತ್ರಿ,
ಆಯುರ್ವೇದ ಭೂಷಣ ಮಂಗಳೂರು, ದ. ಕ.

☞ ಏಜಂಟರು:—ಮೆಸರ್ಸ್ ಒರಿಯಂಟ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂತಿಗೆ ರಸ್ತೆ ಮಲ್ಲೇಶ್ವರಮ್, (ಬೆಂಗಳೂರ ಸಿಟಿ)

FOR INSURANCE, PLEASE CONSULT

THE ASIAN ASSURANCE CO. LTD., BOMBAY.

Completes the 25th year of its HUMANITARIAN service.

Watch! 'Silver Jubilee' Valuation

at the end of December 1935

WANTED Organizers for North Kanara and Coorg and agents in other unrepresented areas of South Kanara, Only reliable persons need apply.

J. A. PUTHRAN.
Branch Manager
THE ASIAN ASSURANCE Co., Ltd., Mangalore.

(೧೯ನೇ ಪುಟದಿಂದ ಮುಂದುವರಿದುದು)

ನೋವ್ಯಕ್ತಿಗಳಿಗೆ ಉತ್ತೇಜನ ಕೊಟ್ಟು ಸ್ಕೃಲ್ಮಠ ಬುದ್ಧಿಗಿಂತ ಪೂರ್ವವನ್ನು ಧಿಸುವಲ್ಲಿ ಧರ್ಮದ ನ್ಯಾಯ ಭಾವ ಯುಳ್ಳವರಿಗೆ ಸ್ವಾರ್ಥಿಗಳು, ಮೂಢಭಕ್ತಿ ನ ಕಾರ್ಯಗಳ ಸಮಾಲೋಚನೆ ಮಾ ವದೇ ಧರ್ಮವು ಇಗ ಸಂಬಂಧ ಸರ್ವ ರ ಮೇಲೆ ದುರ್ಬಲರ ಮೇಲಿನ ಅನಾ ರ, ಅತ್ಯಾಚಾರಗಳು, ಧರ್ಮದ ಹೆಸರಿ ಲ್ಲಾಗುವ ದುಷ್ಟ ಪ್ರವೃತ್ತಿಗಳು, ಇವುಗ ಲ್ಲ ತ್ಯಾಜ್ಯವಾಗಬೇಕೆಂದು ಸುಧಾರಕ ಲ್ಲದವರಿಗೂ ಗೊತ್ತಾಗಬಹುದು. ಬಾಲ್ಯ ವಾಹ ನಿರೋಧ, ಶೀಘ್ರ ವಿವಾಹ ಪ್ರೋ ತ್ಸಾಹ, ವಿಧವಾ ವಿವಾಹ ಸಮ್ಮಾನ, ಜಾತಿ ಭೇದ ನಿರ್ಮೂಲ ಪ್ರಯತ್ನ, ಸ್ತ್ರೀಪುರು ಷೋಚಿತ ಶಿಕ್ಷಣ ವ್ಯವಸ್ಥೆ, ಹರಿಜನೋ ದ್ಧಾರ, ಅಸ್ಪೃಶ್ಯತಾ ನಿವಾರಣೆ ಮೊದಲಾದ ಕಾರ್ಯಗಳ ಮೂಲಕ ಸಮಾಜದ ಸಂಘ ಟನೆ ಮತ್ತು ಅಭಿವೃದ್ಧಿಯನ್ನು ಮಾಡೋ ಣ ಎಂದು ಸುಧಾರಕರ ವಿರೋಧಿಗಳಿಗೂ ನ್ನಿಸಬಹುದು.

ಹೀಗೆ ಕೃಪ್ತಾಳುಗಳಿಗೆ ತೋರದಿದ್ದರೆ ಗ ಅವರೇ ಹೇಳುವಂತೆ ಪ್ರಳಯವಾಗು ದೇನೋ ನಿಶ್ಚಯವೇ. ಪರಂತು ಪ್ರಳಯ ವೆಂದರ ಬೇರೇನೂ ಅಲ್ಲ. ಬರೇ ಸಾಮಾ ಜಿಕ ಕ್ರಾಂತಿ ಮಾತ್ರ ಎಂದು ನಮ್ಮಭಿಪ್ರಾ ಯ. ಅಸ್ಪೃಶ್ಯರು, ಅಂತ್ಯಜರು, ಆರ್ತ ರು, ದುಃಖಿಗಳು, ನಿರ್ಬಲರು, ಪರಿತಾಪ ಸಂತಾಪಗಳನ್ನು ಸಹಿಸಲಾರದೆ ಸುರಿಸಿದ ದುಃಖಾಶ್ರುಗಳ ಸಾಗರಕ್ಕೆ ಸಾಗರವೇ ಮೇಲೆ ಹರಿದು ಬಂದು ಪ್ರಳಯವಾಗು ವದು. ಸಾಮಾಜಿಕ ಕ್ರಾಂತಿ, ರಾಜಕೀಯ ಕ್ರಾಂತಿಗಳು ಒಂದೇ ತಾಯಿಯ ಅವಳಿ ಜವಳಿ ಮಕ್ಕಳು. ಅರಸನ ಅತ್ಯಾಚಾರ ಗಳಿಂದ ನೊಂದು ಬೆಂದ ಪ್ರಜೆಗಳು ರಾಜ ಕೀಯ ಕ್ರಾಂತಿಯನ್ನೆಬ್ಬಿಸುವ ಪ್ರಕಾರ ಸಾಮಾಜಿಕ ಅತ್ಯಾಚಾರಗಳಿಂದ ಸಮಾಜ ದಲ್ಲಿ ಸಾಮಾಜಿಕ ಕ್ರಾಂತಿಯೂ ಆಗು ವದು. ಆರೋಗ್ಯ ನಿಯಮಗಳನ್ನು ಮನು ಷ್ಯನು ತಾನಾಗಿ ಪಾಲಿಸದಿದ್ದರೆ ಪ್ರಕೃತಿ ಯೇ ಪ್ರಕೃತೋಚಿತವಾದ ಉಪಾಯಗ ಳನ್ನು ಕೈಕೊಂಡು ರೋಗ ಕಾರಣಗಳಾದ ಕೊಳೆಮೈಲಿಗೆಗಳನ್ನು ದೂರಮಾಡುವ ಪ್ರಕಾರ ಸ್ವಾರ್ಥಿಗಳು, ಸಬಲರು, ಧರ್ಮ ದ ಹೆಸರಿನಿಂದ ಮಾಡುವ ಅತ್ಯಾಚಾರ ಅನಾಚಾರಗಳನ್ನು ತಾವಾಗಿ ನಿಲ್ಲಿಸದಿದ್ದರೆ ಪ್ರಕೃತಿಯು ತನ್ನದೇ ಆದ ಉಚಿತ ಶಮ ನೋಪಾಯಗಳನ್ನು ಕೈಕೊಳ್ಳುವದು ಸ್ವಾ ಭಾವಿಕ. ಹಾಗೆ ಕ್ರಾಂತಿಯು, ಅದನ್ನು ಪ್ರಳಯವೆಂದೇ ಕರೆಯಿರಿ, ಆಗೇ ಆಗು ವದು. ಅಂಥ ವಿಷಮ ಪರಿಸ್ಥಿತಿಯು ಬರುವ ಮೊದಲೇ ಪ್ರತಿಯೊಬ್ಬರು ಯಾರನ್ನೂ ಮಿಥ್ಯಾ ನಿಂದೆಗೆ ಗುರಿ ಮಾಡದವರು ಉದಾರ ಹೃದಯದಿಂದ ಪ್ರತಿಯೊಂದು ವಿಷಯವನ್ನು ಸಮಾಲೋಚಿಸಿ ಯೋಗ್ಯ ನಿರ್ಣಯ ಮಾಡುವವರೂ, ಅನಂತರ ತಮ್ಮ ನಿರ್ಣಯಕ್ಕನುಕೂಲವಾದ ಉಚಿತ ಕಾರ್ಯಗಳಲ್ಲಿ ತೊಡಗುವವರೂ ಆಗು ವದು ಕ್ಷೇಮಕರವಾಗಿದೆ. ಉನ್ನತಿಯ ಮಾರ್ಗವು ಇದರಲ್ಲಿಯೇ ಅಡಕವಾಗಿರು ತ್ತದೆ.

ಸಾಹಸದ ಕಾರ್ಯಶಕ್ತಿ

(ಲೇಖಕ: ...)

ಮನುಷ್ಯ ಸಮಾಜಕ್ಕೆ ... ಗದ ಕೆಲಸವು ... ದನ್ನು ಪ್ರಚಲಿತ ಪ್ರಪಂಚದ ... ಗಳನ್ನು ಪರಿಶೀಲಿಸಿದರೆ ... ತ್ತದೆ. ಸಾಹಸ ... ಸರ್ವ ಕಾರ್ಯ ... ಸಮರ್ಥ ... ಅಂತಹ ಸಾಹಸಿಗರ ... ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

ಸೋಮಾರಿಗಳು ತಮ್ಮ ಆಲಸ್ಯದಿಂದ ... ಇರುವರು. ಅವರು ಸ್ವಪ್ನದಲ್ಲಿ ಕೂಡಾ ಅದೇ ತರದ ಮಂಡಿಗೆ ಗಳನ್ನು ತಿನ್ನುತ್ತಿರುವರು. ಆದರೆ ಸಾಹ ಸಿಗಳು ತಮ್ಮ ಕಾರ್ಯದಲ್ಲಿ ಸಫಲತೆ ಯನ್ನು ಹೊಂದುವರು. ಸಾಹಸವಿಲ್ಲದ ಯೋಗ್ಯತೆಯು ಯಾವ ಪ್ರಯೋಜನಕ್ಕೂ ಬರಲಾರದು. ಕಾರ್ಯಶಕ್ತಿಯ ಜೊತೆ ಯಲ್ಲಿಯೇ ಸಫಲತೆಯು ಬೆನ್ನಟ್ಟಿಕೊಂಡು ಬರುವುದು. ಆಲಸ್ಯವುಳ್ಳವರು ನೆನೆ ನೆನೆದು ಕನಸಿನ ಮಂಡಿಗೆಯನ್ನು ತಿನ್ನುತ್ತಾ ಸಮಯ ಹಾಳು ಮಾಡುತ್ತಿರುವಾಗ್ಯೆ ಕಾರ್ಯ ಕುಶಲರು ತಮ್ಮ ಕರ್ತವ್ಯವನ್ನು ಪೂರೈಸಿ ಸಫಲತೆಯನ್ನು ಹೊಂದುವರು. ಹಾಗೂ ಮನ್ನಣೆಗೆ ಪಾತ್ರರಾಗುವರು.

ಯಾರು ಕಾರ್ಯಶಕ್ತಿಯನ್ನು ಅಸಡ್ಡೆಯಿಂದ ಉಪಯೋಗಿಸದೆ ಬಿಟ್ಟು ಬಿಡುವರೋ ಆಗಲೇ ಸಫಲತೆಯು ಕೈ ಬಿಟ್ಟು ಹೋಗುವುದು. ಅಂತಹ ಆಲಸಿ ಗಳು ಕಾರ್ಯಕುಶಲತೆಯಲ್ಲಿ ಧೈರ್ಯ ವಿಲ್ಲದೆ ಕರ್ತವ್ಯಹೀನರಾಗುವರಲ್ಲದೆ ದೇಶಕ್ಕೆ ಒಂದು ಹೊರೆಯಂತಿರುವರು. ಅವರ ಶರೀರದಲ್ಲಿ ಅಬಲತ್ವದ ರಕ್ತವು ಸದಾ ಹರಿಯುತ್ತಿದ್ದು ನಿರ್ಬಲರಾಗುವರು. ಸಾಹಸಿಗಳ ರಕ್ತವು ಯಾವಾಗಲೂ ಸ್ಫುರಣ ಹೊಂದಿ ಚೇತರಿಸಿಕೊಳ್ಳುತ್ತದೆ ಅಂತಹರು ಉತ್ಸಾಹದಿಂದ ಹೊಸ ಜೀವನದೊಡನೆ ಸಾಹಸ ಕಾರ್ಯವನ್ನು ನಿಶ್ಚಿತ ಸಮಯಕ್ಕೆ ಪೂರ್ತಿಗೊಳಿಸುವರು. ಸಾಹಸವಿಲ್ಲದ ದೊಡ್ಡಸ್ಥಿಕೆಯು ಪ್ರಯೋಜನವಿಲ್ಲ.

ಇಡೀ ಪ್ರಪಂಚವೇ ಸಾಹಸೀ ಸ್ತ್ರೀ ಪುರುಷರುಗಳ ಚರಿತ್ರೆಗಳಿಂದ ಆವರಿಸಿದೆ. ಕ್ರಮೇಣ ಅಂತಹ ಆದರ್ಶ ಸ್ತ್ರೀ-ಪುರುಷರ ಪಥವನ್ನು ಅನುಸರಿಸುವ ಪ್ರಯತ್ನವು ನಡೆಯುತ್ತಿರುವುದು. ಬರೇ ಯುದ್ಧ ಭೂಮಿಯಲ್ಲಿ ತಮ್ಮ ತಮ್ಮ ಭುಜಬಲ ಪರಾಕ್ರಮವನ್ನು ತೋರಿಸಿದ್ದ ಮಾತ್ರಕ್ಕೆ ಅವರು ಸಾಹಸಿಗರೆಂದು ಕರೆಯಲ್ಪಡುವ ದಿಲ್ಲ. ತಮ್ಮ ತಮ್ಮ ನಿತ್ಯ ಜೀವನದಲ್ಲೂ ಸಮಾಜಕ್ಕೆ ಬೇಕಾದ ಸಾಹಸದ ಕಾರ್ಯ ವನ್ನು ಕೂಡಾ ಮಾಡಿ ಪ್ರಸಿದ್ಧಿಹೊಂದಿ ರುವರು. ಸಾಹಸಿಗಳು ಯಾವಾಗಲೂ ಕಠಿಣ ಕಾರ್ಯಗಳನ್ನೇ ಮಾಡಲು ಪ್ರಯ ತ್ನಪಡುತ್ತಾರೆ. ಅಂತಹ ಕಾರ್ಯವನ್ನು ಮಾಡುವಾಗ್ಯೆ ಸಂತೋಷ ಚಿತ್ತನಲ್ಲೀ ತಲ್ಲೀನರಾಗಿ ಅದರಿಂದ ಬರಬಹುದಾದ ಎಡರು ತೊಡರುಗಳಿಗೆ ಎದೆಯನ್ನು ತೋರಿ ಸಿಯೇ ಜಯಪ್ರದರಾಗುವರು. ಹಾಗೂ ಅವರ ಪರೀಕ್ಷೆಯು ಜಗತ್ತಿಗೆ ತೋರಿಸಲ್ಪ ಡುತ ದೆ.

ನಿಶ್ಚಿತ ಕಾರ್ಯವನ್ನು ಮಾಡಲು ... ಕೆಲಸಗಳು ಬಗದಾಯಿಸುತ್ತವೆ. ಸಾಹಸಿಗೆ ವಿಷಯ ತಾನು ಈಗ ನಿಶ್ಚಯ ಮಾಡಲಿಲ್ಲ. ನಿಶ್ಚಯ ಮಾಡಿದರೆ ಅದ ರಿಂದ ತೊಂದ್ರೆಗಳು ಸಂಭವಿಸಬಹುದೋ" ಎಂಬ ಅನುಮಾನವು ಬಂದು ಬಿಡುತ್ತದೆ. ಅಂತಹರಿಂದ ಯಾವ ಕೆಲಸವೂ ನಡೆಯು ವುದಿಲ್ಲ. ಬದಲಾಗಿ ಇತರರ ಕೆಲಸಕ್ಕೂ ತೊಂದರೆಯಾಗಿ (ತಡೆಯಾಗಿ) ತಮ್ಮ ಹಾಗೂ ಇತರರ ಜೀವನವನ್ನು ಹಾಳು ಬಗೆದಂತಾಗುತ್ತದೆ.

ಯಾರು ಸಾಹಸಿಯಾಗಿರುತ್ತಾನೋ ಅವನು ಹೇಳಿ ಗಳಿಗೆಯನ್ನು ನೋಡುವು ದಿಲ್ಲ. ಎಂತಹ ಎಡರುಗಳು ಬಂದಾಗ್ಯೂ ತನ್ನ ನಿಶ್ಚಿತ ಕೆಲಸದಲ್ಲ ವಿಮುಖನಾಗಲಾ ರನು. ಆ ಸಮಯ ನಾಲ್ಕೂ ಕಡೆಗಳಿಂದ ಲೂ ತಡೆಗಳು ಬಂದಾಗ್ಯೂ ಧೈರ್ಯ ಗುಂದಲಾರನು. ತಾನು ಪ್ರಾರಂಭ ಮಾ ಡಿದ ಸಮಯವೇ ಸುಸಮಯವೆಂದು ತಿಳಿ ಯುತ್ತಾನೆ. ತನ್ನ ಕೆಲಸವು ಬೇಗನೇ ಪೂರೈಸಬಹುದೆಂಬ ಒಂದೇ ಆಶೆಯಿರುವುದ ರಿಂದ ಮನಃಪೂರ್ವಕವಾಗಿ ತನ್ನ ಕೆಲಸದ ಕೊನೆಯನ್ನು ಬಹು ಬೇಗನೇ ವಿಚಿತ್ರ ರೀತಿಯಲ್ಲಿ ಪೂರೈಸಿ ಬಿಡುತ್ತಾನೆ. ಸಾಹಸಿ ಗನು ಕೆಲಸ ಪ್ರಾರಂಭಿಸುವಾಗ್ಯೆ ಜನತೆಯು ತಮಾಷೆ ಮಾಡುತ್ತದೆ, ದೂಷಿಸುತ್ತದೆ, ಅವಹೇಳನ ಮಾಡುತ್ತದೆ. ಆದರೆ ಸಾಹ ಸದ ಕೆಲಸವು ಪೂರೈಸಿದ ನಂತರ ಮೌನ ರಾಗಿ ನಾಚಿಕೊಳ್ಳುತ್ತಾರೆ. ನಂತರ ಅಂತಹ ಅಪ್ರತಿಮ ವೀರರನ್ನು ಕಂಡು ಪೂಜಿಸು ತ್ತಾರೆ. ಆದುದರಿಂದ ಸಾಹಸಿಗರಾದವರು ತಮ್ಮ ತಮ್ಮ ಕಾರ್ಯಗಳನ್ನು ಮುಂದೂ ಡುವುದರಲ್ಲಿ ಏನೂ ಅನುಮಾನವಿರ ಲಾರದು.

ಸಾಹಸಿಗನಲ್ಲಿ ಯಾವಾಗಲೂ ಇಚ್ಛಾಶಕ್ತಿಯು ಇದ್ದೇ ಇರುವುದು. ಅವನು ತನ್ನ ಇಚ್ಛಾಶಕ್ತಿಯಿಂದ ತಾನು ಎಣಿಸಿದ ಕಾರ್ಯವನ್ನು ಮಾಡಲು ಸಮ ರ್ಥನಾಗುವನು. ಆಗ ಅವನಲ್ಲಿ ಸ್ವಶಕ್ತಿ ಯೊಡನೆ ಆತ್ಮಶಕ್ತಿಯು ಸಹಾಯಕವಾಗು ತ್ತದೆ. ಆದುದರಿಂದ ತಾನು ಎಂದೂ ಪರಾ ಜಯ ಹೊಂದಲಾರನು. ಮನುಷ್ಯನು ತಾನು ಒಬ್ಬ ಆಲೋಚಿಸುವ ಸಾಧನವಾಗಿ ರುತ್ತಾನೆ. ಹೇಗೆ ಆಲೋಚಿಸುತ್ತಾನೋ ಹಾಗೆಯೇ ಕಾರ್ಯಗಳನ್ನು ಸಾಗಿಸುತ್ತಲೇ ಇರುತ್ತಾನೆ. ಯಾವ ಕಠಿಣ ಕಾರ್ಯವನ್ನು ಮಾಡ್ಯೇನು ಎಂದು ಕಾರ್ಯಪ್ರವರ್ತ ನಾಗುವನೋ ಆಗಲೇ ತಾನು ಅರ್ಧ ಕೆಲಸ ಮಾಡಿ ಬಿಟ್ಟೆನೆಂದು ತೋರಿಸಲ್ಪಡುತ್ತಾನೆ. ಬಾಕಿ ಅರ್ಧ ಕೆಲಸವನ್ನು, ಪ್ರಾರಂಭಿಸಿ ದೊಡನೆ ಪೂರೈಸಿ ಬಿಡುತ್ತೇನೆಂಬ ಭರವಸೆ ಹೊಂದಿ ಆ ರೀತಿ ಕಾರ್ಯದಲ್ಲಿ ಜಯ ಹೊಂದುವನು.

ಇಂತಹ ಕೆಲಸವನ್ನು ನಾನು ಮಾಡ ಲಾರೆ, ಆ ರೀತಿ ಕೆಲಸ ಪೂರೈಸಲು ನನ್ನಿಂದ ಸಾಧ್ಯವಾಗಲಾರದು ಎಂಬುದನ್ನು ಸಾಹ ಸಿಯು ಎಣಿಸುವುದೇ ಇಲ್ಲ. ನಿಶ್ಚಿತ ಕಾರ್ಯದಲ್ಲಿ ತನ್ನ ಮನಸ್ಸಿನಲ್ಲಿರುವ ಸಂಕೋಚವನ್ನು ದೂರ ಬಿಸಾಡಿ, ನಿರಾಶಾ ಎಂಬ ಪಿಶಾಚಿಯನ್ನು ಕಡಿದು ಬಿಡುತ್ತಾನೆ ತನ್ನ ಕಾರ್ಯದ ಸಫಲತೆಯು ತನ್ನ ಆತ್ಮ ವಿಶ್ವಾಸದ ಮೇಲೆ ಹೊಂದಿಕೊಂಡಿದೆ ಎಂಬುದನ್ನು ತಿಳಿಯುತ್ತಾನೆ. ದೇವರ ದಯವೂ ತನ್ನಲ್ಲಿದೆಯೆಂಬ ದೃಢತೆಯು ವುಂಟಾಗುತ್ತದೆ. ತನ್ನಲ್ಲಿ ತನಗೆ ಎಷ್ಟು ವಿಶ್ವಾಸವಿದೆಯೋ ಅಷ್ಟನ್ನು ಉಪಯೋ ಗಿಸಿ ಶಕ್ತಿಯೊಡನೆ ತನ್ನ ಕಾರ್ಯವನ್ನು ಮಾಡಿ ಪೂರೈಸುವನು. ತನ್ನ ಕಾರ್ಯದ ಸಫಲತೆಯಲ್ಲಿ ಸ್ಥಿರ ವಿಶ್ವಾಸವನ್ನು ಹೊಂದಿ ಕೊಂಡಿರುವನು.

ಸಾಹಸಿಗನು ಹಗಲು, ರಾತ್ರಿ, ಮಳೆ ಗಾಳಿಯೆನ್ನದೆ, ಇರುವಾಗಲೂ, ನಡೆಯು ತ್ತಿರುವಾಗಲೂ ಪ್ರಸಂಗದ ಪ್ರತಿ ಸಮ ಯದಲ್ಲೂ ತನ್ನ ನಿಶ್ಚಿತ ಕಾರ್ಯದಲ್ಲಿ ಕಾ ಶಕ್ತಿಯನ್ನು ಪ್ರದರ್ಶಿಸುತ್ತಾನೆ. ತಾ ಹಿಡಿದ ಕಾರ್ಯವನ್ನು ಮಾಡಿಯೇ ತೀ ಬೇಕೆಂಬ ಪ್ರತಿಜ್ಞೆಯನ್ನು ಹೊಂದಿಕೊ ರುತ್ತಾನೆ. ಮನಸ್ಸಿನಲ್ಲಿ ಭಯವಾಗ ಶಂಕೆಯಾಗಲೀ ಇರುವುದಿಲ್ಲ. ತನ್ನ ಹೊಗಳಿಸಿಕೊಳ್ಳಬೇಕೆಂತಾಗಲೀ, ಪುರ ಸ್ಕಾರ ಹೊಂದಬೇಕೆಂತಾಗ (ಕಾರ್ಯ ಮರೆಂಧರರಿಗೆ) ಇಚ್ಛೆ ಇರು ದಿಲ್ಲ. ಏಕದೃಷ್ಟಿಯಿಂದ ತನ್ನ ಕಾರ್ಯ ವನ್ನು ಹೊಂದಂತೆ ಅದಕ್ಕೆ ತಕ್ಕುದಾ ಪ್ರತಿಫಲವು ತಾನಾಗಿಯೇ ಬಂದು ಸೇ ವುದು ಸೃಷ್ಟಿ ನಿಯಮವಾಗಿರುತ್ತ ಸಾಹಸಿಗನ ಕಾರ್ಯವು ಪೂರೈಸಿ ಲೋಕೆ ಪಕಾರವಾಗುವಾಗ್ಯೆ ಇಡೀ ಪ್ರಪಂಚ ಅವನಿಗೆ ಶಿರಬಾಗುವುದು. ಅಂ ಭಾರತೀಯರಿಗೆ ಬಹುಬೇಗನೇ ಮೊ ಲೆಂದೇ ಹಾರೈಕೆ! ತಥಾಸ್ತು.

(ಬಂದು ...)

ESTD 1926

THE CROWN RUBBER STAMP Co.,

Balmatta Road, MANGALORE.

Manufacturers of Air Cushion Rubber Stamps, Revolving Date Stamps. Brass, Glass & Wood Sign boards, Badges, Belts. Wax Seals. Blocks Painters, Designers & Engravers on Marble Wood. Etc

Thumb Impression Sets & Facsimile Stamps a Speciality.

ALL ENQUIRIES TO BE MADE DIRECT AT OUR BALMATTA OFFICE, MANGALORE, AS WE HAVE NO BRANCHES OR AGENTS.

— ನಾಯಕ್ ಬ್ರದರ್ಸರ —

ಶ್ರೀ ಮಧ್ವುವನೇಂದ್ರ ಮಹೌಷಧಾಲಯ,

ಪಾರಂಪರ್ಯದ ಅನುಭವ ಸಿದ್ಧೌಷದಗಳು!

ಕಟಪಾಡಿ, ದ. ಕನ್ನಡ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!!

ವೃಶ್ಚಿಕಾಸವ (ಸಿತ್ರ್ಯಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಚಂದ್ರಮುಖ್ (ವಾಂತಿಭೇದಿಗೆ ಅನುಭವಸಿದ್ಧ ಔಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮಧ್ವನೇಂದ್ರ ಮಹೌಷಧಾಲಯ,
ಕಟಪಾಡಿ, ದಕ್ಷಿಣ ಕನ್ನಡಾ ಜಿಲ್ಲೆ.

JAYA LAXMI BANK LIMITED

HEAD OFFICE MANGALORE.   BRANCH OFFICES, PUTTUR. KASARAGOD

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್

ಹೆಡ್ ಆಫೀಸು: — ಮಂಗಳೂರು.
ಬ್ರೇಂಚು ಆಫೀಸುಗಳು, ಪುತ್ತೂರು, ಕಾಸರಗೋಡು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ಕೆಲಸಗಳು ಅಂದರೆ ಭಂಗಾರದ ತಡು ಪ್ರೊ. ನೋಟು ವಗೈರೆ ಮೇಲೆ ಸಾಲಕೊಡುವದು, ವಟ್ಟಾಯಿಸುವದು. ವಸ್ತುವಿನ ವಸ್ತುಗಳನ್ನು ಭದ್ರವಾಗಿ ಇಡುವದು ಮತ್ತು ಗೂಡ್ಸು ಯಾ ಸರಕಿನ ಮೇಲೆ ಹಣಗಳನ್ನು ಸಾಲವಾಗಿ ಕೊಡಲ್ಪಡುವದು. ಹೆಚ್ಚಿನ ಅನುಭವ ಸೆಕ್ರೆಟರಿಯಿಂದ ತಿಳಿಯುವದು.

M. GANESH RAO,
ಸೆಕ್ರೆಟರಿ.

ಪಕ್ಷವಾತ ಸಂಹಾರಿ.

ಯೆಂಬ ದಿವ್ಯ ಔಷಧಿಯು ನಮ್ಮ ವಂಶಪಾರಂಪರ್ಯದಿಂದ ಅನುಭವ ಸಿದ್ಧವಾದ ಔಷಧಿಗಳಲ್ಲಿ ಇದೊಂದು. ಸ್ವರ್ಗದ ಪ್ರಯೋಗವು ಉತ್ತಮ ಸ್ಥಾನವನ್ನು ಪಡೆದಿರುತ್ತದೆಂದು ನಿಸ್ಸಂದೇಹವಾಗಿ ಹೇಳಬಲ್ಲೆವು. ಪಕ್ಷವಾತವೆಂಬ ಆ ಕ್ರೂರವ್ಯಾಧಿಯಿಂದ ನರಳುತ್ತಿದ್ದ ಸಾವಿರಾರು ಜನರು ಅಮೃತತುಲ್ಯವಾದ ಈ ದಿವ್ಯಔಷಧಿಯ ಸೇವನೆಯಿಂದ ಅವಯವಗಳು ಕಳಕೊಂಡ ಶಕ್ತಿಯನ್ನು ಪುನಹ ಪಡೆದು ಆರೋಗ್ಯವಂತರಾಗಿ ಸಂಸಾರದ ಸುಖ ಬಂಧ ಆನಂದ ಪಡುತ್ತಿದ್ದಾರೆ. ಆ ದುಷ್ಟ ವ್ಯಾಧಿಗೆ ತುತ್ತಾಗಿರುವ ಬಾಲಕರಿಗೂ ವೃದ್ಧರಿಗೂ ಕೂಡಾ ಇದು ಪ್ರಯೋಜನಕಾರಿಯಾಗುತ್ತದೆ. ಈ ರೋಗದ ವೇದನೆಯು ಶುರುವಾದೊಡನೆಯೇ ಈ ಔಷಧಿಯನ್ನು ಸೇವಿಸಿದ ಮೂರು ದಿನಗಳಲ್ಲಿಯೇ ಇದರ ಗುಣಾಂಶವು ಖಾತ್ರಿಯಾಗಿ ಅನುಭವಕ್ಕೆ ಬರುತ್ತದೆ. ಮತ್ತು ಕೆಲವು ದಿವಸಗಳಲ್ಲಿ ಸಂಪೂರ್ಣ ಗುಣಹೊಂದಬಹುದು. ಪಕ್ಷವಾತ ರೋಗದಿಂದ ಬಳಲುವ ರೋಗಿಗಳಿಗೆ, ಪಕ್ಷವಾತ ಸಂಹಾರಿಯೆಂಬ ಈ ದಿವ್ಯ ಔಷಧಿಯು ಸಂಜೀವನಪ್ರಾಯವೆಂದು ನನ್ನ ಪೂರ್ಣ ಭರವಸವಿದೆ.

ಕೆ. ಬಾಬು ವೈದ್ಯ,
ಶ್ರೀ ಮಂಜುನಾಥ ವೈದ್ಯಾಶ್ರಮ,
ಹಂಪನ ಕಟ್ಟೆ, ಮಂಗಳೂರು.

THE
MOOLKY BANK LTD, MOOLKY.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು"

ಕಾಯಂ ಠೇವಣಾತಿಗಳು
ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸು ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದು ಕೊಳ್ಳಿರಿ

M. R. Punja,
ಯಂ. ಆರ್. ಪೂಂಜ,
President & Manager,
ಪ್ರೆಸಿಡೆಂಟು ಮತ್ತು ಮೇನೇಜರ್

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. Pai, Bros.
ಪಿ. ಎ. ಪೈ. ಬ್ರದರ್ಸ್.
ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd., MANGALORE.

Head Office: Mangalore.   Branch Office Court Road, Udipi.

ದಿ ವಿಜಯ ಬೇಂಕ್ ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು: ಮಂಗಳೂರು.   ಶಾಖೆ: ಕೋರ್ಟು ರಸ್ತೆ ಉಡುಪಿ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½. ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4½. 1 ವರ್ಷದ ಬಾಬ್ತು ಸಾ. ಶೆ. 5½ 2 ವರ್ಷ ವ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ —
ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ರೂ. 100 ಅಥವಾ ಅದರ ಮೇಲಿನ ಐವೇಜಿಗೆ ಸಾ. ಶೆ 8 ವ ಸ್ತು ಅದಕ್ಕಿಂತ ಕೆಳಗಣದು ಸಾ. ಶೆ. ೯ರ ದರದ ಬಡ್ಡಿಯಲ್ಲಿಯೂ ಸಾಲ ದೊರೆವುದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಸಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty,   ವಿಜಯ ಬ್ಯಾಂಕ್, ಲಿಮಿಟೆಡ್   K. Gopalkrishna Shetty.
ಚೆಯರ್‌ಮೇನ್   ಕಾರ್‌ರೋಡ್, ಮಂಗಳೂರು.   ಸೆಕ್ರೆಟರಿ.

ನಿಮಗೇನು ಬೇಕಾಗಿದೆ?

ಎಕ್ಸರ್‌ಸೈಜ್ ಪುಸ್ತಕ, ಪಠ್ಯಪುಸ್ತಕ, ಫೌಂಟೆನ್ ಪೆನ್, ಕಂಪಾಸ್ ಬಾಕ್ಸ್, ಕಲರ್ ಬಾಕ್ಸ್ ವಗೈರೆ ಯಾವತ್ತೂ ಶಾಲೋಪಕರಣಗಳು ಬೇಕೆ? ಎಲ್ಲಾ ತರದ ಅಪ್ ಟು ಡೇಟ್ ಫ್ಯಾಶನಿನ ಸ್ಟೇಶನರಿ, ಕಟ್ಲೇರಿ ವಗೈರೆ ನಿತ್ಯೋಪಯೋಗದ ಸಾಮಾನುಗಳು ಬೇಕೆ? ಹಾಗಿದ್ದರೆ ನಮ್ಮಲ್ಲಿಗೆ ಬನ್ನಿರಿ. ದರವೂ ಕಡಿಮೆ, ಬೇಕಾದ ಸಾಮಾನುಗಳನ್ನು ಮುಂದಾಗಿ ತಿಳಿಸಿದ್ದಲ್ಲಿ ತರಿಸಿಯೂ ಕೊಡಲಾಗುವುದು.

ಎಸ್. ಅನಂತರಾಮಾಚಾರ್ಯ,
ಪುಸ್ತಕ ಮತ್ತು ಕಟ್ಲೇರಿ ವ್ಯಾಪಾರಿ,
ಕಡೇರಿ ಬಳಿ, ಉಡುಪಿ.

ಮಧುವನ

ಕರ್ಣಾಟಕದೊಳಗಿನ
ಬೇರೆ ಬೇರೆ ೨೫ ಕತೆಗಾರರು
ಬರೆದ ೨೫ ಸಣ್ಣ ಕತೆಗಳ ಸಂಗ್ರಹವೇ

ಮಧುವನ

'ಕಿರಿಯರ ಪ್ರಪಂಚ'ದ ಹೊಸ ಪ್ರಕಟಣೆ.
ಕತೆಗಾರರ ಭಾವಚಿತ್ರ, ಪರಿಚಯವನ್ನೊಳಗೊಂಡ
ಆದರ್ಶ ಗ್ರಂಥ.
ಬೆಲೆ 1—8—0

ಕಿರಿಯರ ಪ್ರಪಂಚ

ಪ್ರೇಮ ವಿದ್ಯಾಪೀಠ

ತುಂಗಭದ್ರಾ (ಬಳ್ಳಾರಿ ಜಿಲ್ಲಾ)

ಇದರ ಹೊಸ ವರ್ಷವು ಜೂಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್, ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪ್ ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| ಸುಮತಿಬಾಯಿ,
ಬಿ. ಎ. ಎಲ್. ಟಿ., ಎಫ್. ಪಿ. ಎಮ್. ಎಸ್., ಭಿಷಗ್ರತ್ನ, ರಿಜಿಸ್ಟ್ರಾರ್.

ಇದೇ 1936ನೇ ಫ್ಯಾಶನಿನ ಉಡಿಗೆತೊಡಿಗೆಗಳು ಎಲ್ಲಿ ಸಿಗುತ್ತವೆ?
ಬನ್ನಿರಿ! ನೋಡಿರಿ!! ಕೊಂಡುಕೊಳ್ಳಿರಿ!!!

ಮೆಸರ್ಸ್ ಬೆಳ್ಮಣ್ಣಕಾರ್ ಮತ್ತು ಕಟೀಲ್‌ಕಾರ್

ಜವುಳಿ ಅಂಗಡಿ ಕುಂದಾಪುರ ಇವರಲ್ಲಿ.

ಇವೀಗಲೇ ಬಂದಿರುವ ನೂತನವಾದ ನಾಜೂಕು ತರದ ಹಾಗೂ ಅಂದವಾದ ಬಣ್ಣಗಳಿಂದ ಶೋಭಿಸುವ ಹೊಸ ಹೊಸ ನಮೂನೆಯಲ್ಲಿ ಚುನಾಯಿಸಿ ತರಿಸಿರುವ ಬೊಂಬೈ, ಬನಾರಿಸ್, ಅಹಮ್ಮದಾಬಾದು, ಕಾಶ್ಮೀರ, ಪೂನಾ, ಮದ್ರಾಸು, ಸೇಲಂ, ಕೊಯಮುತ್ತೂರು, ತಿರ್ಪೂರ ಮಧುರೆ, ತಿರುಚಿನಾಪಳ್ಳಿ ಮೊದಲಾದ ಪ್ರಸಿದ್ಧ ಊರುಗಳ ಸೀರೆಗಳೂ ದೋತಿಗಳೂ, ಕಣಗಳೂ, ಕೋಟಿಂಗ್, ಶರ್ಟಿಂಗ್ ಬಟ್ಟೆಗಳೂ, ಜರಿ ಶಾಲುಗಳೂ ಮಿತವಾದ ಕ್ರಯಕ್ಕೆ ದೊರೆಯುತ್ತವೆ.

ಶುದ್ಧ ಕೈಮಗ್ಗದ ಖಾದಿ ಶರ್ಟಿಂಗ್, ಕೋಟಿಂಗ್ ವಗೈರೆ ಅಚ್ಚ ಸ್ವದೇಶಿ ಬಟ್ಟೆಬರೆಗಳೂ ಸದಾ ದೊರೆಯುತ್ತವೆ. ನಿತ್ಯ ಉಪಯೋಗದ ಶುಭ ಶೋಭನದ ಹಾಗೂ ಉಡುಗೊರೆ ಉಚಿತಗಳಿಗೆ ಹೇಳಿಸಿದ ತರ ತರದ ಜವುಳಿಯು ಸುಲಭದರದಲ್ಲಿ ರಖಂ ಆಗಿಯೂ ಚಿಲ್ಲರೆಯಾಗಿಯೂ ಕೊಂಡುಕೊಳ್ಳಬಹುದು.

ಒಮ್ಮೆ ಬಂದು ನೋಡಿ ಸಮಾಧಾನ ಮಾಡಿಕೊಳ್ಳಿರಿ.

THE
Commonwealth Assurance Co. Ltd.
(ESTD 1929)
Chairman, Mr. N. C. Kelkar, Ex. M. L. A.

Head Office: POONA CITY.
Chief Agency Office: HAMPANKATTA, MANGALORE.

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.
1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೋಲಿಸಿದಾರರಿಗೆ ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.
ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಯಿರಿ.
ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್.
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ವಿದ್ಯಾ ಸಂಸ್ಥೆಗೆ ಸಹಾಯಮಾಡಿರಿ! ಸತ್ಕಾರ್ಯಕ್ಕೆ ಪ್ರೋತ್ಸಾಹಕೊಡಿಸಿರಿ!!

ದಿ ಮೂಲ್ಕಿ ಗ್ರೇಂಡ್ ರೇಫ಼್ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)
ಯೋಗ್ಯ ಕಮ್ಮಿಟಿಯವರಿಂದ ನಡಿಸಲ್ಪಡುವುದು.

ಎ. ಬಿ. ಶೆಟ್ಟಿ, ಎಸ್ಕ್ವಾಯರ್, ಎಂ. ಎಲ್. ಸಿ. ಪ್ರೆಸಿಡೆಂಟ್.
ಡಾ| ಎಂ. ಆರ್. ಕಾಮತ್, ಎಲ್. ಎಂ. ಸಿ. ವೈಸ್ ಪ್ರೆಸಿಡೆಂಟ್.

ರೂ. 20,000/-ವು 1,789 ಇನಾಮುಗಳಾಗಿ ಹಂಚಲ್ಪಡುವುದು.
ಪ್ರಥಮ ಬಹುಮಾನ ರೂ. 5,000 ದ್ವಿತೀಯ ಬಹುಮಾನ ರೂ. 2,000
ತೃತೀಯ ಬಹುಮಾನ ರೂ. 1,000
ಟಿಕೇಟು ಒಂದರ ಕ್ರಯ ಆಣೆ ನಾಲ್ಕು ಮಾತ್ರ.

ಟಿಕ್ಕು ಅಚ್ಚುಡು ತಾರೀಕು 25—1—1937] [ಸೋಡ್ತಿ ತೆಗೆಯುವ ತಾರೀಕು 31—1—1937

20 ಟಿಕೇಟುಗಳಿರುವ ಪುಸ್ತಕಕ್ಕೆ ರೂ. 5 ಮಾತ್ರ. ಟಿಕೇಟು ಪುಸ್ತಕಗಳು ನಗದಿಯಾಗಿ ವಿಕ್ರಯಿಸಲ್ಪಡುವವು. ಟಿಕೇಟು ಮಾರಿ ರೂ. 250 ಕ್ಕೂ ಹೆಚ್ಚು ಹಣ ಹಿಂಕೊಟ್ಟವರೊಳಗೆ ರೂ. 200/-ರ ಒಂದು, ರೂ. 100/-ರ ಎರಡು ಮತ್ತು ರೂ. 50 ರ 14 ಇನಾಮುಗಳು ಹಂಚಲ್ಪಡುವವು.

ಟಿಕೇಟು ವಿಕ್ರಿತದಿಂದ ರೂ. 25/. ಮತ್ತು ಹೆಚ್ಚು ಮಾಡಿಕೊಟ್ಟವರಿಗೆ ಶೇಕಡಾ 6¼ರಂತೆ ಕಮಿಷನ್ ಕೊಡಲಾಗುವುದು.

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಈ ಕೆಳಗಿನವರಿಗೆ ಬರಮಾಡಿಕೊಳ್ಳಿ.—

ಸೆಕ್ರೆಟರಿ,
ದಿ ಮೂಲ್ಕಿ ಗ್ರೇಂಡ್ ರೇಫ಼್ಲ್
(ಹೈಸ್ಕೂಲ್ ಸಹಾಯಾರ್ಥ)

ಮೂಲ್ಕಿ, ದ. ಕನ್ನಡ
3—9—1936

THE
RADHA BANK, LTD
MANGALORE. *(Branch)*
'TEMPLE VIEW' GANAPATI TEMPLE ST., WEST.

ದಿ ರಾಧಾ ಬೇಂಕ್ ಲಿಮಿಟೆಡ್.
ಮಂಗಳೂರು. (ಬ್ರಾಂಚ್) 'ಟೆಂಪಲ್ ವ್ಯೂ' ಗಣಪತಿ ಟೆಂಪಲ್ ರಸ್ತೆ

ಚಾಲ್ತಿ ಠೇವಣಾತಿಗಳು ಸಾ| ಶೇ| 2½.
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ| ಶೇ| 4.
ಕಾಯಂ ಠೇವಣಾತಿಗಳು.
3 ತಿಂಗಳ ಬಾಬ್ತು ಸಾ| ಶೇ| 3. 6 ತಿಂಗಳ ಬಾಬ್ತು ಸಾ| ಶೇ| 4½. 12 ತಿಂಗಳ ಬಾಬ್ತು ಯಾ ಅದರ ಮೇಲೆ ಸಾಲಿಯಾನ್ ಶೇಕಡ 6 ವರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುತ್ತದೆ.
ಚಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೊಡುತ್ತದೆ.

U. B. SOMESH RAO,
Managing Director.

LAXMI BRAND COFFEE POWDER.

Pure & Superior quality, will lost long without looosing its flavour and colour

TRADE MARK

Use always this LAXMI BRAND COFFEE POWDER prepared from the best & choicst coffee Beans. of Nilgiris. (Hills)

WANTED AGENTS in Southern India (samples avilable)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Fire Risistance Steel Iron Safes. latest pattern.

ನಮ್ಮಲ್ಲಿ ಕಬ್ಬಿಣದ ಪೆಟ್ಟಿಗೆಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ, ತಿಂಗಳುಗಟ್ಟಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI, S. K

Sold also by Instalments:

ನಿಮಗೆ ಅಂದವಾದ ಅಚ್ಚಿನಿಂದ ಸೊಗಸಾದ ಛಾಪಾ ಕೆಲಸವಾಗಬೇಕೇ?

ಮಹಾಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್.

ಮಹಾಲಕ್ಷ್ಮಿ ಬಿಲ್ಡಿಂಗ್ ಕುಂದಾಪುರ.

ಈ ಛಾಪಖಾನೆಯಲ್ಲಿ ಕೆಲಸಗಳನ್ನು ಮಾಡಿಸಿರಿ

ಬೇರೆ ಬೇರೆ ಊರುಗಳಲ್ಲಿ ಬಹಳ ವರ್ಷಗಳಿಂದ ಕೆಲಸ ಕಲಿತು ಮಾಹಿತಿಯುದ್ದವರಿಂದ ಹೊಸದಾದ ಅಂದವಾದ ನೂರಾರು ತರದ ಅಚ್ಚುಗಳಿಂದ ತರತರದ ಬಣ್ಣಗಳಿಂದ ನಾಜೂಕಿನಿಂದ ಅತೀ ಸುಲಭ ದರದಲ್ಲಿ ಇಂಗ್ಲಿಷ್, ಕನ್ನಡ, ಮರಾಠಿ ವಗೈರೆ ಭಾಷೆಗಳಲ್ಲಿ ಕೆಲಸಗಳನ್ನು ಮಾಡಿಸಿಕೊಡಲಾದೀತು.

ಇಲ್ಲಿ ಎಲ್ಲಾ ತರದ ಫೋರ್ಮುಗಳೂ ಲೆಟರ್‌ಹೆಡ್ಡುಗಳೂ ಕವರುಗಳೂ ಕಂಪೆನಿಯಂತಹ ಸಂಸ್ಥೆಗಳಿಗೆ ಅಗತ್ಯ ಇರುವ ವರ್ಗ ಊಳಿಗ ಪುಸ್ತಕಗಳೂ ಎಲ್ಲಾ ತರದ ಛಾಪಾ ಕೆಲಸಗಳೂ ಬೇಕಾದ ಮಾದರಿಯಲ್ಲಿ ತಯಾರಿಸಿಕೊಡಲ್ಪಡುವುವು.

For nice printing and punctuality look to—

Mahalaxmi Printing Works, Limited.

Mahalaxmi Buildings, Coondapoor.

K RAMAKRISHNA SHENOY, GENERAL MANAGER

DIAMONDS! DIAMONDSS!!

K. Ramachandra Krishna Shet

near Mission High School, *Mangalore.*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected) ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತದೆ. ಕೊಂಡುಕೊಳ್ಳುವವರಿಗೆ ಒಜಾರ ದಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪೆಯೊಂದನ್ನು ಗವರ್ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,

ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಯು. ಪಿ. ಮೇಸ್ತ, ಉದ್ಯಾವರ, ದ. ಕ.

(ಬಾಣಂತಿ ರೋಗದ ಸ್ಪೆಶ್ಯಲಿಷ್ಟರು)

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಔಷಧಗಳು ದೊರೆಯುತ್ತವೆ.

U. P. Mesta,

Gold Medalled Physician,

UDIAWAR, S. K.

ಆನಂದದ ಸಂಪೂರ್ಣ ಅನುಭವವನ್ನು ಪಡೆಯಲೆಳಸುವಿರಾದರೆ

"ಸುವಾಸಿನೀ"

ಅಗರ್ ಬತ್ತಿಗಳನ್ನೇ

(ರಿಜಿಸ್ಟರ್ಡ್)

ಉಪಯೋಗಿಸಿರಿ.

ಎಲ್ಲೆಲ್ಲಿಯೂ ದೊರೆಯುತ್ತದೆ.

ಶ್ರೀ ಭಾರತ ವಸ್ತು ಮಂದಿರ

ಉಡುಪಿ, ದಕ್ಷಿಣ ಭಾರತ.

Printed by P VENKATARAMANACHARYA for & on behalf of SUPPLY AGENCY LTD., at THULUNAD PRESS UDIPI and Published by K. H. SHETTY at "NAVAYUGA" OFFICE, UDIPI.

Registered No. 1564

ನವಯುಗ

ವಾರ್ಷಿಕ ಚಂದಾ
ಸ್ಥಳೀಯ
ರೂ ೨—೮—೦.

ಪರಸ್ಥಳೀಯ
ರೂ. ೩—೪—೦.

ವಿ. ಪಿ. ಮೂಲಕ
ರೂ. ೩—೯—೦,

ಮಾದರಿ ಸಂಚಿಕೆಗೆ
ಬರೆಯಿರಿ.

ವಾರಪತ್ರಿಕೆ

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿಹ ತುಮುಲನಾದ;

ಸಂಪಾದಕ:
ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳನ ಮೊಗಪಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬ | ೧೯೩೬ನೇ ಇಸವಿ ಸಪ್ಟಂಬರ ತಾ. ೧೦ ಗುರುವಾರ | ಸಂಚಿಕೆ ೨

STATEMENT OF AFFAIRS OF
THE CANARA INDUSTRIAL & BANKING SYNDICATE LIMITED.
AS ON 31st AUGUST 1936.

LIABILITIES.

Share Capital	Rs.	2,17,700	0	0
Reserve Fund	„	52,500	0	0
Deposits	„	18,61,496	14	6
Bills for Collection	„	1,40,203	13	8
Due to Bankers	„	1,35,823	6	10
Sundries	.	1,53,054	2	3
Total Rs.		25,60,778	5	3

ASSETS.

LOANS ON:				
Valuable Securities	Rs	7,05,863	0	9
Land Mortgages		2,22,305	13	8
Bills of Exchange				
Hundies and Pro-notes	„	5,37,936	0	6
INVESTSMENTS ON				
Companies Shares	.	57,802	0	0
Landed Properties	.	18,929	3	7
Govt. Securities	..	1,46,715	10	7
Bills for Collection (as per contra)	„	1,40,203	13	8
Sundries	..	2,71,453	1	6
Cash in hand and at Bankers	„	1,59,536	9	0
Total Rs.		25,60,778	5	3

ANNOUNCEMENT

WE HAVE GREAT PLEASURE IN ANNOUNCING THAT A BRANCH OF THE SYNDICATE WILL BE [illegible] AT UPPINANGADI (SOUTH [illegible]) ON MONDAY the 21st INST. [illegible] THERE ALL KINDS OF BANKING BUSINESS WILL BE TRANSACTED. THE PUBLIC ARE REQUESTED TO TAKE ADVANTAGE OF THE NUMEROUS FACILITIES OFFERED BY US.

BRANCHES

UDIPI. MANGALORE. COONDAPOOR. CANNANORE. HUBLI. HONAVAR. BRAHMAVAR. KUMTA. HUNGARCUTTA. SIRSI. ANKOLA. BELGAUM. PAYYANUR. KANANGHAD. BHATKAL. KARWAR. BANGALORE CITY. ADONI. HOSPET. BELLARY, GADAG & KARKALA

THE BOMBAY LIFE ASSURANCE Co., LTD.
ESTD 1908
Church Gate Street, Fort . BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

[illegible]

BRANCHES AT [illegible]

P. B. 337 Mount Road, Madras

Car Street Mangalore

——EVIDENCE——
OF
SECURITY & STABILITY
FIGURES THAT SPEAK FOR THEMSELVES

TOTAL ASSETS Rs. 80,66,600

SUMMARY OF 1935 ACCOUNTS

Total Assets Over	Rs 80,00,000
Life Funds Over	Rs 68,00,000
Premium Income Over	Rs 22,54,000
Interest Income	Rs 3,16,000
Claims Paid	Rs 5,75,000

Total Claims paid over Rs. 38,50,000
Total Business in Force Over Rs. 4,42,51,200

TOTAL BUSINESS IN FORCE Rs. 4,42,51,200

DEFEND YOUR OWN INTEREST

BY BANKING WITH THE

UDIPI BANK, Ltd.

UDIPI

ALL KINDS OF BANKING BUSINESS UNDERTAKEN

ESTD: 1925

The MAN behind the RUPEE

Is a power to be reckoned within every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK

LIMITED.

THE

BEST YOU CAN GET For YOUR MONEY IS A

LIFE POLICY

OF

EAST & WEST

INSURANCE CO., LTD, (Estd. 1913)

EAST & WEST BUILDING,

Apollo Street, Fort BOMBAY.

2¼% Rebate allowed on premiums paid yearly.	UNIQUE PRIVILEGES to POLICYHOLDERS, Last Valuation BONUS Rs. 15	PER THOUSAND per annum both Whole life and Endowment Policies.

For prospectus, etc Apply to

PADUBIDRI BROS.

Chief Agents,

KARNATAK & MAHARASHTRA.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು

ಗುಣ ಬಾರದಿದ್ದರೆ	ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)	ಹಣ ಮರಳಿ

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತಪನದಿಂದ ಮುಟ್ಟಾಗುವಿಕೆ, ಕ್ಲೇಶ ಪ್ರಯುಕ್ತ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩ ಟ. ಖ. ಆಣೆ, ೮.

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

ಬಹಳಸಾರಿ ಹಡಿಯುವದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುಪಿರುವದು ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವದು ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಮು। ಕೇಳವಾ ಮಾಹಿಮಾ ಜ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿಗೆ ಆರೂ ವಿ. ಪಿ. ಖರ್ಚ ಆಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಸ್ಪೈನಿನ ಬಂಡಾಯಗಾರರಿಗೆ ಹೊರಗಣ ಸಹಾಯ.

ಸ್ಪೈನಿನ ಪರಿಸ್ಥಿತಿಯಾದರೂ ಅತ್ಯಂತ ಶೋಚನೀಯವಿದೆ. ಮಾನವನು ಎಷ್ಟೊಂದು ನಾಗರೀಕನಾದರೂ ಪ್ರತಿಕಾರೋನ್ಮತ್ತನಾದರೆ ನರಪಿಶಾಚಿಯೋ ಆಗಿರುವನೆಂಬದಕ್ಕೆ ಸ್ಪೈನಿನಲ್ಲಿ ಈಗ ನಡೆಯುವ ಭೀಷಣ ಅತ್ಯಾಚಾರಗಳೇ ಸಾಕ್ಷಿ. ಬಂಡಾಯಗಾರರು ದಿನೇ ದಿನೇ ಪ್ರಬಲಹೊಂದುತ್ತಿದ್ದಾರೆ. ಅವರ ಯುದ್ಧೋಪಕರಣ ಸಿದ್ಧತೆಯೂ ಹೆಚ್ಚುತ್ತಿದೆ. ಇದರಿಂದ ಅವರಿಗೆ ಸ್ಪೈನ್ ಸರಕಾರಕ್ಕಿಂತಲೂ ಹೆಚ್ಚಿಗೆಯಾಗಿ ಹೊರಗಣ ಸಹಾಯವು ಸಿಗುತ್ತಿರುವುದೆಂಬುದು ಸ್ಪಷ್ಟವಿದೆ. ಸ್ಪೈನಿನ ನೆರೆಯ ಪೋರ್ಚುಗೀಸ್ ದೇಶವು ಬಂಡಾಯಗಾರರಿಗೆ ಅನುಕೂಲವಾಗಿದೆ. ಆ ಮೂಲಕ ಬಂಡಾಯಗಾರರಿಗೆ ಯುದ್ಧ ಸಾಮಾನುಗಳು ಹೊರಗಿನಿಂದ ಧಾರಾಳರಾಗಿ ಬರುತ್ತಿವೆ.

ಅಬಿಸೀನಿಯರ ಹೃದ್ರಾವಕ ಅವಸ್ಥೆ

ಬ್ರಿಟಿಷರ ಕುಟಿಲ ನೀತಿಯು ಎಲ್ಲೆಲ್ಲಿಯೂ ಅಪಜಯ ಅಪಹಾಸ್ಯಗೀಡಾಗಿರುವುದು. ಇಡೀ ಲೋಕದಲ್ಲೇ ಪ್ರಬಲ ರಾಜ್ಯವಾದ ಇಂಗ್ಲೇಡಿನ ದೌರ್ಬಲ್ಯದಿಂದಾಗಿ ಮುಸಲೋನಿ, ಹಿಟ್ಲರರು ತನ್ನಿಚ್ಛಾನುಸಾರ ನಡೆದು ಲೋಕಶಾಂತಿಗೇನೇ ವಿಘ್ನಕಾರಿಗಳಾಗಿ ಮುಂದೊತ್ತುತ್ತಿದ್ದಾರೆ. ಇಂಗ್ಲೆಂಡು ಅಬಿಸೀನಿಯವನ್ನು, ಆಸೆತೋರಿಸಿ ಬಿಟ್ಟು ಹಾಕಿತು. ಈಗ ಅದು ಇಟಲಿಯ ಪಕ್ಷವನ್ನೇ ಸ್ಪಷ್ಟವಾಗಿ ಹಿಡಿದಿರುವಂತಿದೆ. ಇಟಲಿಯು 1,40,000 ಚಚ್ಚೌಕ ಮೈಲುಗಳಷ್ಟರ ಪಶ್ಚಿಮ ಅಬಿಸೀನಿಯವನ್ನು ಇನ್ನೂ ಗೆದ್ದಿಲ್ಲ. ಅಲ್ಲಿ ಗೋರ್ ಎಂಬಲ್ಲಿ ಅಬಿಸೀನಿಯ ಚಕ್ರವರ್ತಿಗಳಾದ ನೆಗಸರ ಪರವಾದ ಸರಕಾರವಿದೆ ಅಲ್ಲಿಯ ಪ್ರಬಲ ಪಂಗಡಿಗರು ಈ ಸರಕಾರದೊಡನೆ ಮೈತ್ರಿಯಿಂದಿರುತ್ತಾರೆ. ಈ ಸರಕಾರದವರಿಗೆ ಬೇಕಾದ ಯುದ್ಧ ಸಾಮಗ್ರಿಗಳನ್ನು ಬ್ರಿಟಿಷರ ಅಧೀನವಿರುವ ಸುಡಾನಿನ ಮೂಲಕ ಕಳುಹಿಸಲು ಬ್ರಿಟಿಷರು ಬಿಡುವುದಿಲ್ಲ. ಇಷ್ಟು ಮಾತ್ರವಲ್ಲದೆ, ನೆಗಸರ ಪ್ರತಿನಿಧಿಗಳನ್ನು ಗೋರಿಗೆ ಹೋಗಲು ಕೂಡಾ ಬಿಡುವುದಿಲ್ಲ. ತಾನು ಸ್ವತಹ ಹೋಗಿ ಇಟಲಿಯಾನರನ್ನೆದುರಿಸಬೇಕೆಂಬ ಇಚ್ಛೆಯು ನೆಗಸರಿಗಿದೆ. ಆದರೆ, ಬ್ರಿಟಿಷ್ ಸರಕಾರದ ಆತಂಕವು ಬಹಳ ಕೊಡಕಾಗಿದೆ. ಇದರಿಂದ ಗಾಳಿ ಎತ್ತ ಬೀಸುವುದೆಂಬುದು ಸ್ಪಷ್ಟವಿದೆ. ಲೀಗ್ ಆಫ್ ನೇಶನ್ಸಿಗೆ ಸೇರಿದ ರಾಷ್ಟ್ರವಾಗಿ, ಲೀಗಿಗೇನೇ ಸೇರಿದ ಇನ್ನೊಂದು ಪ್ರಬಲ ರಾಷ್ಟ್ರದ ಅನ್ಯಾಯವಾದ ಆಕ್ರಮಣ, ಮತ್ತು ಧಾಳಿಗೊಳಗಾಗಿ ಪರಾಜಿತವಾದ ದುರ್ಬಲ ಅಬಿಸೀನಿಯಕ್ಕೆ ಕೈಕೊಡುವವರಿಲ್ಲ. ತೀರಾ ಅನ್ಯಾಯದ ಬಲಾತ್ಕಾರದಿಂದಾದ ವಿಜಯ ಹೊಂದಿರುವ ಪ್ರಬಲ ಇಟಲಿಗೇನೇ ಎಲ್ಲವರ ಅಪ್ರತ್ಯಕ್ಷ ಸಹಾಯ! ಬಲವೇ ನ್ಯಾಯ; ಇಷ್ಟೊಂದು ನಾಗರೀಕತೆಯ ಶಿಖರವನ್ನೇರಿರುವ ಲೋಕದಲ್ಲಿ ನ್ಯಾಯವೇ ಬಲವೆಂದಿಲ್ಲ.

ವಾರದ ವಿಚಾರ

ಹಿಟ್ಲರ್ ಮುಸಲೋನಿಗಳ ಕುತಂತ್ರ.

ಫ್ರಾನ್ಸ್ ಮತ್ತು ಇಂಗ್ಲೆಂಡು ದೇಶಗಳು, ಸ್ಪೈನಿನ ಅಂತಃಕಲಹದಲ್ಲಿ ಯಾರೂ ಕೈ ಹಾಕಬಾರದೆಂದು ಎಲ್ಲರೂ ತಟಸ್ಥವಾಗಿರುವಂತೆ ಪ್ರಯತ್ನಿಸುತ್ತಾ, ಕಾಲಹರಣ ಮಾಡುತ್ತಿರುವಾಗ, ಹಿಟ್ಲರರೂ ಮುಸಲೋನಿಯವರೂ ಒಳಗಿಂದೊಳಗೆ ತಮ್ಮ ಕಾರ್ಯಸಾಧನೆಯ ಕುತಂತ್ರ ನಡಿಸಿಯೇ ಬಿಟ್ಟಿದ್ದಾರೆ. ಇಟಲಿಯಿಂದ ಹಲವು ವಿಮಾನಗಳು ಬಂಡಾಯಗಾರರ ಸಹಾಯಾರ್ಥವಾಗಿ ಕಳುಹಿಸಲ್ಪಟ್ಟಿವೆ. ಎಂಬುದಕ್ಕೆ ಯಾವ ಸಂದೇಹವೂ ಇಲ್ಲ. ಇಲ್ಲವಾದರೆ ಬಂಡಾಯಗಾರರಲ್ಲಿ ಅಷ್ಟೊಂದು ದೊಡ್ಡ ವಿಮಾನ ಪಡೆಯಿರಲು ಸಾಧ್ಯವಿಲ್ಲ ಹಿಟ್ಲರರು ಗುಪ್ತವಾಗಿ ಬಂಡಾಯಗಾರರಿಗೆ ಬೇಕಾದ ಜಲಸೇನೆಯ ಸಹಾಯವಿತ್ತಿರುವರೆಂದೂ, ಅದಕ್ಕೆ ಪ್ರತಿಫಲವಾಗಿ ಬಂಡಾಯಗಾರ ನಾಯಕರು, ಸ್ಪೈನಿನ ಅಧೀನವಿರುವ ವಸಾಹತೊಂದನ್ನು ಜರ್ಮನಿಗೆ ಬಿಟ್ಟುಕೊಡುವ ಮಾತುಕೊಟ್ಟಿರುವರೆಂದೂ ಸುದ್ದಿಯುಂಟಾಗಿದೆ ಇಂಗ್ಲೆಂಡ್ ಕೂಡಾ ಬಂಡಾಯಗಾರರೊಡನೆಯೇ ಸಹಾನುಭೂತಿಯುಳ್ಳದ್ದಿದೆ. ಸ್ಪನಿಷ್ ಸರಕಾರಕ್ಕೆ ಸಹಾಯಮಾಡಬೇಕಾದ ಫ್ರಾನ್ಸು ಕೈಕಟ್ಟಿ ಸುಮ್ಮನಿದೆ. ಇದರಿಂದ ಹಿಟ್ಲರ್ ಮುಸಲೋನಿಗಳು ತಮ್ಮಾಟವನ್ನು ನಿರಾತಂಕರಾಗಿ ನಡೆಸಬಹುದಾಗಿದೆ. ಇಂಗ್ಲೆಂಡ್ ಫ್ರಾನ್ಸ್‌ಗಳು ಏನುಮಾಡುವುದೆಂದು ಆಲೋಚಿಸುತ್ತಿರುವಾಗಲೇ ಅವರು ತಮ್ಮ ಕಾರ್ಯವನ್ನು ಗುಪ್ತವಾಗಿ ಸಾಧಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸ್ಪೈನಿನ ಪ್ರಜಾ ಪಕ್ಷವು, ಜನಬೆಂಬಲ ಪಡೆದು ನ್ಯಾಯವಾಗಿ ಸ್ಥಾಪಿತವಾಗಿರುವ ಸರಕಾರವು, ಸಹಾಯಮಾಡುವವರಿಲ್ಲದೆ, ಕಂಗೆಡುವಂತಾಗಿದೆ ಸ್ಪೈನಿನಲ್ಲಿ ಮುಸಲೋನಿ ಹಿಟ್ಲರರಂತಹ ಏಕತಂತ್ರಾಧಿಕಾರವೇ ಸ್ಥಾಪಿಸಲ್ಪಡುವುದೋ ಎಂಬ ಭಯವುಂಟಾಗಿದೆ.

ತಾ 13ರನ್ನು ರಾಜಕೀಯ ಕೈದಿಗಳ ದಿನವಾಗಿ ಆಚರಿಸಬೇಕು.

7 ವರ್ಷಗಳ ಮೊದಲು ಶ್ರೀ ಜತಿನ್ ದಾಸರೆಂಬ ತರುಣರು ಲಾಹೋರಿನ ಜೈಲಿನಲ್ಲಿ, ರಾಜಕೀಯ ಕೈದಿಗಳ ಸಂಕಷ್ಟ ನಿವಾರಣಾರ್ಥವಾಗಿ 61 ದಿವಸಗಳ ಉಪವಾಸ ದೀಕ್ಷೆ ಹಿಡಿದು, ಅದಕ್ಕಾಗಿ ಪ್ರಾಣಬಲಿಯಿತ್ತಿರುವರು. ಅದರಿಂದಾಗಿ ಆಗ ಇಡೀ ದೇಶದಲ್ಲೇ ಉದ್ವೇಗವುಂಟಾಯಿತು ಅನಂತರ ಸ್ವಾತಂತ್ರ್ಯದ ಸೈನಿಕರಾಗಿ ಕಾರಾಗೃಹಗಳಲ್ಲಿ ನಾನಾ ಸಂಕಷ್ಟಗಳಿಗೊಳಗಾಗಿ ಕೊಳೆಯುತ್ತಿರುವ ಈ ರಾಜಕೀಯ ಕೈದಿಗಳ ಸಂಕಷ್ಟ ನಿವಾರಣೆಗಾಗಿ ಯಾವ ಕೆಲಸವೂ ನಡೆಸಲ್ಪಟ್ಟಿರುವುದಿಲ್ಲ. ಇತ್ತಲಾಗಿ ಜೋಗೇಶ ಛಟರ್ಜಿಯವರು ಇದಕ್ಕಾಗಿ ಉಪವಾಸ ದೀಕ್ಷೆ ಹಿಡಿದಾಗ, ರಾಜಕೀಯ ಕೈದಿಗಳ ಸಂಕಷ್ಟ ನಿವಾರಣೆಗಾಗಿ ಬೇಕಾದ ಪ್ರಯತ್ನವೆಲ್ಲಾ ನಡೆಸಲ್ಪಡುವುದೆಂಬ ಆಶ್ವಾಸನೆಯಿತ್ತು ನಿಲ್ಲಿಸಲಾಯಿತು. ಅಖಿಲ ಭಾರತ ರಾಜಕೀಯ ಕೈದಿಗಳ ಸಂಘದ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ರಾಜಕೀಯ ಕೈದಿಗಳ ಸಂಕಷ್ಟಗಳ ಕುರಿತು ವಿಚಾರಿಸಿ ಅವುಗಳ ನಿವಾರಣೋಪಾಯಗಳನ್ನು ಸೂಚಿಸಿರುವರು. ಆ ಕುರಿತು ಜನಜಾಗ್ರತಿಯನ್ನುಂಟುಮಾಡಲು ಇದೇ ತಾ. 13ನ್ನು ಅಖಿಲ ಭಾರತ ಕೈದಿಗಳ ದಿನವಾಗಿ ಆಚರಿಸಬೇಕಾಗಿ ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ಜವಾಹಿರಲಾಲರು ವಿನಂತಿ ಮಾಡಿಕೊಂಡಿರುವರು.

ಎಸೆಂಬ್ಲಿ ಅಧಿವೇಶನ.

ಈ ಸಲದ ಎಸೆಂಬ್ಲಿ ಅಧಿವೇಶನದ ಆರಂಭದಲ್ಲಿಯೇ ಸರಕಾರವು ಅಪಜಯದ ಬಹುಮಾನ ಪಡೆದಿರುವುದು. ಇಷ್ಟರವರೆಗೆ ಇಂಗ್ಲೆಂಡಿನಲ್ಲಿ ಐ. ಸಿ ಎಸ್ ಪರೀಕ್ಷೆಯಲ್ಲಿ ಪಾಸಾದವರನ್ನು ಮಾತ್ರವೆ ನೌಕರಿಗೆ ಆರಿಸುವ ಕ್ರಮವಿದೆಯಷ್ಟೆ. ಈಗ ಅದಕ್ಕೂ ಕೆಲವರನ್ನು ನೋಮಿನೇಶನ್ ಮಾಡಿ ನೇಮಿಸುವ ಕ್ರಮವನ್ನು ಸರಕಾರವು ಸೂಚಿಸಿರುತ್ತದೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರನ್ನು ನೆಟ್ಟಗೆ ಆರಿಸುವ ಬದಲಿಗೆ ನೋಮಿನೇಶನಿನ ಹಿಂಬಾಗಿಲಿಂದ ತರುವ ಆವಶ್ಯಕತೆಯು ಸರಕಾರಕ್ಕೆ ಈಗ ತೋರಿ ಬರಲು ಕಾರಣವೇನೋ ತಿಳಿಯದು ಪರೀಕ್ಷೆಯಲ್ಲಿ ತಮಗೆ ಬೇಕಾದವರು ಆರಿಸಿ ಬರುವುದಿಲ್ಲ. ನೋಮಿನೇಶನಿನಲ್ಲಾದರೆ ತಮಗೆ ಇಷ್ಟ ಬಂದಂತೆ ಕೆಲವರನ್ನು ನೇಮಿಸಬಹುದೆಂದೋ ಏನೋ? ಹಾಗಾದರೆ ಸರಕಾರಿ ನೌಕರಿಗೆ ಯೋಗ್ಯತೆಯೊಂದೇ ಸಾಲದೆಂದಾಗುವುದಿಲ್ಲವೇ? ಇಂತಹ ಅರ್ಥರಹಿತ ಸೂಚನೆಗೆ ಎಸೆಂಬ್ಲಿಯು ಸಮ್ಮತಿ ಕೊಡದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಕಾಂಗ್ರೆಸ್ ಮೆಂಬರರ ವಾಕ್ ಔಟು

ಇದೇ ತಾ. ೭ರಲ್ಲು, ಎಸೆಂಬ್ಲಿಯ ಅಧಿಮತಕೇಳದೇನೇ ಸ್ಪೆಶ್ಯಲ್ ಟೆರಿಫ್ ಬೋರ್ಡಿನ ಸೂಚನೆಯಂತೆ ಲಂಕೆಶಾಯರಿನ ವಸ್ತ್ರದ ಮೇಲಿನ ಕರವನ್ನು ಸೇಕಡ ೫ರಷ್ಟು ಕಡಿಮೆ ಮಾಡಿದ ಕುರಿತು ಶ್ರೀ ಅವನಾಶಿಲಿಂಗ ಚೆಟ್ಟಿಯಾರರು ಸರಕಾರದ ಮೇಲೆ ಅವಿಶ್ವಾಸ ಸೂಚಿಸುವ ಸೂಚನೆ ತಂದಾಗ ಸರಕಾರಕ್ಕೆ ಸೋಲು ನಿಶ್ಚಯವಾಗಿತ್ತು. ಇದನ್ನು ತಿಳಿದಿದ್ದ ವ್ಯಾಪಾರ ಖಾತೆಯ ಮೆಂಬರರೂ ಅರ್ಥಸಚಿವರೂ ಆ ಕುರಿತು ಓಟೇ ತೆಗೆಯದಂತೆ ಕುತಂತ್ರ ನಡಿಸಿದರು. ಆರಂಭದಲ್ಲಿ ಮಾತಾಡದೆ ಸುಮ್ಮನಿದ್ದು ಸೂಚನೆಯ ಚರ್ಚೆಯ ಕಾಲಾವಧಿಯು ಸಮಾಪಿಸಿದಾಗ ಅರ್ಥಸಚಿವರು ಬೇಕೆಂದು ಎದ್ದು ನಿಂತು ತನಗೆ ಮಾತಾಡಲಿಕ್ಕಿದೆಯೆಂದರು. ಪ್ರತಿಪಕ್ಷದ ನಾಯಕರಾದ ಶ್ರೀ ಭೂಲ ಭಾಯಿ ದೇಸಾಯಿಯವರು "ಇದು ಸರಿಯಲ್ಲ; ಪ್ರೆಸಿಡೆಂಟರು ಅವರಿಗೆ ಮಾತಾಡಲು ಸಮ್ಮತಿ ಕೊಡಬಾರದು. ಓಟು ತೆಗೆಯದಂತೆ ಮಾಡಲು ಹೂಡುವ ಕುಟಿಲತನವಿದು. ಇದರಿಂದ ನ್ಯಾಯ್ಯವಾಗಿ ಓಟು ತೆಗೆಯುವಂಥಾದ್ದು ತೆಗೆಯದಂತಾಗುತ್ತದೆಂದು ವಿರೋಧಿಸಿದರು. ಹೆಚ್ಚಿನ ಮೆಂಬರರು ಉದ್ವೇಗಗೊಂಡಿದ್ದರು ಆದರೆ ಪ್ರೆಸಿಡೆಂಟರು ಅರ್ಥಸಚಿವರ ವರ್ತನೆಯ ಅನುಚಿತತೆಯನ್ನು ಎತ್ತಿ ಹೇಳಿದರೂ ಅವರಿಗೆ ಮಾತಾಡಲು ಸಮ್ಮತಿಯಿತ್ತರು. ಆಗ ಕಾಂಗ್ರೆಸ್ ಮತ್ತು ನೇಶನಲಿಸ್ಟ ಪಕ್ಷೀಯರೂ ಇನ್ನು ಕೆಲವು ಮೆಂಬರರೂ ಪ್ರೆಸಿಡೆಂಟರ ವರ್ತನೆಯ ನಿಷೇಧಾರ್ಥವಾಗಿ ಎಸೆಂಬ್ಲಿಯ ಸಭಾಸದನದಿಂದ ಹೊರ ನಡೆದುಬಿಟ್ಟರು. ಆ ಮೇಲಾದರೂ ಪ್ರೆಸಿಡೆಂಟರು, ಇಡೀ ಸಭೆಯನ್ನೇ ಮುಂದುವರಿಸಬಹುದಿತ್ತು. ಅವರು ಅದೇನೂ ಮಾಡದೆ ಸರಕಾರದ ಕುತಂತ್ರಕ್ಕೆ ಅಪ್ರತ್ಯಕ್ಷವಾಗಿ ಪ್ರೋತ್ಸಾಹವೀಯುವ ಧೋರಣೆ ವಹಿಸಿದರು.

ಯಾರ ಹಿತಕ್ಕಾಗಿ ಕರ ಇಳಿಸಿದುದು?

ಕಾಂಗ್ರೆಸ್ ಮೆಂಬರರೆಲ್ಲಾ ಹೊರ ಹೋದ ಮೇಲೆ ಸರ್‌ಜೇಮ್ಸ್ ಗ್ರಿಗ್ಗರಿಗೆ ಸೌಖ್ಯವಾಯಿತು. ಅವರು ಕಾಂಗ್ರೆಸ್ ಪಕ್ಷೀಯರು, ಒಂದೊಮ್ಮೆ ಮುಜೂರ ಹಿತಸಾಧಕರು, ಮತ್ತೊಮ್ಮೆ ಶ್ರೀಮಂತರ ಪಕ್ಷಪಾತಿಗಳೆಂದು ಟೀಕಿಸಿ ಲಂಕೆಶಾಯರಿನ ವಸ್ತ್ರದ ಮೇಲಿನ ಕರ ಇಳಿಸಿದರೆ ಹಿಂದೀ ಜನಸಾಮಾನ್ಯರಿಗೆ ಅಗ್ಗವಾಗಿ ವಸ್ತ್ರ ದೊರೆಯುವಂತಾಗುವದೆಂದೆಲ್ಲಾ ಜನ ಹಿತಸಾಧನೆಯ ತತ್ವ ಹಿಡಿದು ದೊಡ್ಡ ದೊಡ್ಡ ಮಾತಾಡಿದರು. ಅರ್ಥಸಚಿವರು, ಜನರಿಗೆ ವಸ್ತ್ರ ಅಗ್ಗವಾಗಿ ದೊರೆಯುವುದೆಂದೇ ಲಂಕೆಶಾಯರಿನ ವಸ್ತ್ರದ ಮೇಲಿನ ಕರವನ್ನು ಸೇಕಡಾ ೫ರಷ್ಟಿಳಿಸಿರುವುದಾದರೆ, ಜಪಾನ ವಸ್ತ್ರದ ಮೇಲೆ ವಿಪರೀತವಾಗಿ ಹೊರಿಸಿರುವ ಸೇಕಡ 50ರಷ್ಟರ ಕರವನ್ನು 20ಕ್ಕಿಳಿಸಿದರೆ ವಸ್ತ್ರವು ಮತ್ತೂ ಅಗ್ಗವಾಗಿ ಹಿಂದೀಯರಿಗೆ ದೊರೆಯುವಂತಾಗುವದಿಲ್ಲವೇ?

NOTICE,

Sealed tenders will be received up to 1st October 1936 for "Reconstructing the bridge at Baddakatta in the 17th mile of Mangalore Mysore Trunk Road No. A 22, with granite masonry abutments and R. C. Deck and R. S. beams (Approximate value Rs. 21,000/-).

Tender documents, plans etc., can be seen in the Engineer's Office during office hours and can be had on payment of Rs. 15/- per set.

Alternative quotations for the same with R. C. Superstructure is also invited.

Dt. Bd. Engineer's Office, S Kanara, Mangalore 2—9—1936

(Sd). U. Srinivas Rao,
District Board Engineer.

ನವಯುಗದ ಉದ್ಘಾಟನಾ ಸಮಾರಂಭ.

ಉಡುಪಿಯ ಮಹಾಜನರ ಉತ್ಸಾಹಪರ ಸ್ವಾಗತ.

ಜನಮುಖಂಡರ ಒಮ್ಮತದ ಪ್ರೋತ್ಸಾಹ!

ಕಳದ ತಾ. 3ನೇ ಸಂಜೆ ಘಂಟೆ 6ಕ್ಕೆ ಉಡುಪಿಯಲ್ಲಿ ನವಯುಗವನ್ನು ಪ್ರಕಟಿಸುವ ಸಮಾರಂಭವವು ಶ್ರೀ ರಾಮಕೃಷ್ಣ ಥಿಯೇಟರನಲ್ಲಿ ಅತ್ಯಂತ ಜಯಶೀಲವಾಗಿ ನಡೆಯಿತು. ಮಂಗಳೂರಿನ ಮುನಿಸಿಪಲ್ ಚೇಯರ್‌ಮೆನರಾದ ಡಾಕ್ಟರ್ ಕೆ. ವಿಠಲ ಶೆಟ್ರು ಅಧ್ಯಕ್ಷರಾಗಿದ್ದರು. ಡಾಕ್ಟರ್ ಶೆಟ್ರು ಮುಂಚಿನ ಸಂಜೆಯೇ ದಯಮಾಡಿಸಿದ್ದರು. ಅವರು ಉಡುಪಿಗೆ ಬಂದೊಡನೆಯೇ ಇಲ್ಲಿಯ ಮುಖಂಡರು ಕೆಲವರು ಅವರನ್ನು ಸ್ಥಳೀಯ ಕ್ಲಬ್ಬಿಗೆ ಕರದೊಯ್ದು ಸ್ವಾಗತೀಕರಿಸಿ, ಉಡುಪಿ ಮುನಿಸಿಪಾಲಿಟಿಯಲ್ಲಿ ಜನತೆಯ ಮೇಲೆ ವಿಪರೀತವಾಗಿ ಕರ ಹೊರಿಸಲ್ಪಟ್ಟಿರುವ ಕುರಿತು ಅವರೊಡನೆ ಚರ್ಚಿಸಿದರು. ಡಾಕ್ಟರ್ ಶೆಟ್ರು, ಅಪೀಲಿನಲ್ಲಿ ಅನ್ಯಾಯವಾದಲ್ಲಿ ನ್ಯಾಯ ಮಾಡಲು ಯಾವ ಆತಂಕವೂ ಇಲ್ಲೆಂದೂ, ಮುನಿಸಿಪಾಲಿಟಿಯವರು ಯುಕ್ತ ತೋರಿದಲ್ಲಿ ಸೇಕಡಾ 70—80ರಷ್ಟರ ಮಟ್ಟಿಗೆ ಕೂಡಾ ಕರಇಳಿಸಬಹುದೆಂದೂ, ಮಂಗಳೂರು ಮುನಿಸಿಪಾಲಿಟಿಯವರುಹಾಗೆಮಾಡಿದುದಿದೆಯೆಂದೂ ಅಭಿಪ್ರಾಯವಿತ್ತರು.

ಮಣಿಪಾಲದ ಸಂದರ್ಶನ

ಡಾಕ್ಟರ್ ವಿಠಲ ಶೆಟ್ರು ಮರುದಿನ ಬೆಳಿಗ್ಗೆ, ಉಡುಪಿಯಿಂದ ಸುಮಾರು 3 ಮೈಲು ಪೂರ್ವದಲ್ಲಿರುವ, ಪ್ರಕೃತಿಯ ಸೊಬಗಿನ ನೆಲೆಯನ್ನು ಮಾನವ ಉದ್ಯಮದ ಕಲೆಯು ಮತ್ತಷ್ಟು ಮನೋಹರವಾಗಿಯೂ ಪ್ರೇಕ್ಷಣೀಯವಾಗಿಯೂ ಮಾಡಿರುವ ಮಣಿಪಾಲಕ್ಕೆ ಶ್ರೀ ಟಿ. ಎ. ಉಪೇಂದ್ರ ಪೈಗಳಿಂದ ಆಮಂತ್ರಿಸಲ್ಪಟ್ಟು ಹೋದರು. ಉಪೇಂದ್ರ ಪೈಗಳ ಭವ್ಯ ನಿವಾಸದಲ್ಲಿ ಟೀಪಾರ್ಟಿ ಸತ್ಕಾರ ನಡೆಯಿತು. ಈ ಸಂದರ್ಭದಲ್ಲಿ ಉಡುಪಿಯ ಮುನ್ಸಿಪಲ್ ಚೇಯರ್‌ಮೇನರಾದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರೂ, ಮುನಿಸಿಪಲ್ ಮೆಂಬರರೂ ಆಮಂತ್ರಿಸಲ್ಪಟ್ಟಿದ್ದರು. ಟೀ ಪಾರ್ಟಿಯಾದಬಳಿಕ ಮಂಗಳೂರಿನ ಮತ್ತು ಉಡುಪಿ ಚೇಯರ್‌ಮೆನರಿಬ್ಬರನ್ನೂ ಡಾಕ್ಟರ್ ಟಿ. ಮಾಧವ ಪೈಗಳು ಹೂಮಾಲೆ ಹಾಕಿ ಬಹುಮಾನಿಸಿ, ಜನ ನಿಬಿಡತೆಯ ಪಟ್ಟಣಪೂಲಗೇನೇ ಮತ್ತೂ ಮತ್ತೂ ಹೋಗಿ ವಾಸಿಸುವುದಕ್ಕಿಂತ, ಅನುಕೂಲವಂತರು, ಪಟ್ಟಣಗಳ ಸರಿಕರೆಯ ಸುಂದರ ಸ್ಥಳಗಳಲ್ಲಿ ನೆಲಸಿ ಅವುಗಳನ್ನು ಪ್ರೇಕ್ಷಣೀಯ ಸ್ಥಳಗಳಾಗಿ ಮಾಡಿ ತಾವೂ ಪ್ರಯೋಜನ ಪಡೆದು ಹಳ್ಳಿಗರಿಗೂ ಪ್ರಯೋಜನ ಉಂಟು ಮಾಡಬೇಕು. ಪ್ರತಿಯೊಂದು ಪಟ್ಟಣದ ಸುತ್ತುಮುತ್ತಲೂ ಪ್ರೇಕ್ಷಣೀಯ ಸೊಬಗಿನ ನೆಲೆಗಳನ್ನು ರಚಿಸುವ ಕುರಿತು ಮುನಿಸಿಪಲ್ ಚೇಯರ್‌ಮೆನರು ಹೆಚ್ಚಿನ ಗಮನ ಕೊಡಬೇಕೆಂದು ವಿನಂತಿಮಾಡಿಕೊಂಡು ಉಡುಪಿಯಂತಹ ಪುಣ್ಯಕ್ಷೇತ್ರದ ಬಳಿ ಮಣಿಪಾಲದಂತಹ ಪ್ರೇಕ್ಷಣೀಯ ಸೃಷ್ಟಿ ಸೊಬಗಿನ ನೆಲೆಗಳಿರುವ ಆವಶ್ಯಕತೆಯನ್ನೆತ್ತಿ ಹೇಳಿದರು. ಆ ಮೇಲೆ ಉಡುಪಿ ಪಟ್ಟಣಕ್ಕೆ ವಿದ್ಯುತ್ತನ್ನೊದಗಿಸುವ ಯೋಜನೆಯನ್ನು ರೂ. 50 ಯಾ 60 ಸಾವಿರ ಖರ್ಚಿನೊಳಗೆ ಹೇಗೆ ಕೈಕೊಳ್ಳಬಹುದೆಂದು ಮಣಿಪಾಲದ ವಿದ್ಯುತ್ ಯೋಜನೆಯ ಉದಾಹರಣೆಯನ್ನೆತ್ತಿ ಹೇಳಿ ಸಿದ್ಧಪಡಿಸಿದರು. ಡಾಕ್ಟರ್ ವಿಠಲ ಶೆಟ್ರು, ಡಾಕ್ಟರ್ ಪೈಗಳ ಬುದ್ಧಿಶಕ್ತಿ, ಉದ್ಯಮ, ಸಾಹಸ, ಮತ್ತು ದೂರದೃಷ್ಟಿಯನ್ನು ಪ್ರಶಂಸಿಸಿ, ಮಣಿಪಾಲದ ಮನಸೂರೆಗೊಳಿಸುವ ಪ್ರಾಕೃತಿಕ ಸೊಬಗಿನ ಸ್ಥಳವು ಇಡೀ ಜಿಲ್ಲೆಗೇನೇ ಭೂಷಣ ಪ್ರಾಯವಾಗಿರುವುದೆಂದು ತನ್ನ ಮೆಚ್ಚಿಗೆ ತೋರಿಸಿ ತನ್ನನ್ನು ಸತ್ಕರಿಸಿದುದಕ್ಕಾಗಿ ಶ್ರೀಗಳಾದ ಪಿ. ಎ. ಪೈ ಸಹೋದರರಿಗೆ ಆಭಾರ ಸೂಚಿಸಿದರು. ಆ ಮೇಲೆ ಶ್ರೀ ಆರೂರರು, ಡಾಕ್ಟರ್ ಪೈಗಳಿಗೆ ವಂದನೆಯನ್ನರ್ಪಿಸಿ ಅವರ ಉದ್ಯಮವು ಉತ್ತರೋತ್ತರ ಜಯಶೀಲ ಹೊಂದಲೆಂದು ಹಾರೈಸಿದರು. ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳು, ಡಾಕ್ಟರ್ ಪೈಗಳ ದೂರದೃಷ್ಟಿಯ ಕುರಿತು ಪ್ರಸ್ತಾಪಿಸಿ ಅಭಿನಂದಿಸಿದರು. ಡಾಕ್ಟರ್ ಪೈಗಳು ಡಾಕ್ಟರ್ ಶೆಟ್ರಿಗೆ ಮಣಿಪಾಲದ ಹಂಚಿನ ಕಾರ್ಖಾನೆ, ಸೆನಿಟೋರಿಯಮ್ ಮೊದಲಾದುವನ್ನು ತೋರಿಸಿದ ಮೇಲೆ ಗ್ರೂಪ್ ಫೋಟೋ ತೆಗೆಯಲಾಯಿತು.

ಡಾಕ್ಟರ್ ವಿಠಲ ಶೆಟ್ರುಮಧ್ಯಾಹ್ನದ ಮೇಲೆ ಇಲ್ಲಿಯ ಬೋರ್ಡ್ ಹೈಸ್ಕೂಲನ್ನು ಸಂದರ್ಶಿಸಿದರು. ಆ ಮೇಲೆ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ಬೊಂಬೇ ಲೈಫ್ ಇನ್ಶೂರೆನ್ಸ್ ಕಂಪೆನಿಯ ಆಫೀಸಾದ,ಇಡೀ ಜಿಲ್ಲೆಯಲ್ಲೇ ನೂತನ ರೀತಿಯ ಕಟ್ಟಡವನ್ನು ನೋಡಲು ಆಮಂತ್ರಿತರಾಗಿ ಅಲ್ಲಿಗೆ ಹೋಗಿ ಆ ಮನೋಹರ ಕಟ್ಟಡವನ್ನು ಕಂಡು ಅತ್ಯಂತ ಆನಂದಗೊಂಡು ನವಯುಗ ಆಫೀಸಿಗೆ ಬಂದು ಟೀಪಾರ್ಟಿ ಸತ್ಕಾರ ಪಡೆದರು. ಅಲ್ಲಿಂದ ಎಲ್ಲರೂ ಶ್ರೀ ರಾಮಕೃಷ್ಣ ಥಿಯೇಟರಿಗೆ ತೆರಳಿ ನವಯುಗದ ಉದ್ಘಾಟನಾ ಸಮಾರಂಭ ನಡಿಸಿದರು.

ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಉಡುಪಿಯ ಶಿಕ್ಷಿತವರ್ಗವೆಲ್ಲವೂ ನೆರೆದು ಬಂದಿತ್ತೆನ್ನಬಹುದು. ಆರಂಭದಲ್ಲಿ ಉಡುಪಿ ಮುನಿಸಿಪಲ್ ನೊರ್ತ್ ಶಾಲೆಯ ಹುಡುಗಿಯರು ಪ್ರಾರ್ಥನೆ ಮತ್ತು ಲೇಜಿಮ್ ನರ್ತನ ನಡಿಸಿ ಸಭಿಕರ ಮೆಚ್ಚಿಗೆಗೆ ಪಾತ್ರರಾದರು. ಆ ಮೇಲೆ ನವಯುಗದ ಸಂಪಾದಕರಾದ ಶ್ರೀ ಕೆ. ಕೆ. ಶೆಟ್ರು ನವಯುಗವನ್ನು ಮಂಗಳೂರಿನಿಂದ ಉಡುಪಿಗೆ ತಂದ ಕುರಿತು ಕೆಲವು ಮುಮ್ಮಾತುಗಳನ್ನಾಡಿದರು. ಅದರ ಸಾರಾಂಶವಿದು:—

ಸಮಾರಂಭದ ಅಧ್ಯಕ್ಷರಿಗೆ ಎಲ್ಲೆಲ್ಲಿಯೂ ಸ್ವಾಗತ!!

ಬಂಧು-ಭಗಿನಿಯರೇ,

ನಾನು ಸಾರ್ವಜನಿಕ ಜೀವನದ ಶ್ರೀಗಣ ಕಲಿತುದು ಉಡುಪಿಯಲ್ಲಿ. ನನಗೆ ರಾಷ್ಟ್ರೀಯಾಭಿಮಾನದ ಮೊಲೆಹಾಲುಣಿಸಿದುದು ಉಡುಪಿ. ಆದುದರಿಂದ ಉಡುಪಿಯೇ ನನ್ನ ಹುಟ್ಟೂರೆಂಬ ಪ್ರೇಮವೂ ಅಭಿಮಾನವೂ ನನ್ನಲ್ಲಿ ಸದಾ ನೆರೆ ನಿಂತಿದ್ದಿತು. ತನ್ನ ಹುಟ್ಟೂರನ್ನೇ ಕಾರ್ಯರಂಗವಾಗಿ ಮಾಡಿ, ತನ್ನ ಎಳೆಹರೆಯದ ಬಂಧುಮಿತ್ರರ ಸಹಾನುಭೂತಿ ಸಹಕಾರ ಪಡೆದು, ಜೀವನದ ಸುಖ-ದುಃಖ, ಆಶೆ ಆಕಾಂಕ್ಷೆಗಳಲ್ಲೆಲ್ಲಾ ಅವರೊಡನೆ ಪಾಲು ಪಡೆದು ಬಾಳು ನಡಿಸುವ ಆ ಕಲ್ಪನೆಯಾದರೂ ಅದೆಷ್ಟು ಮಧುರವಾದುದು! ಅದು ನನ್ನ ಅಂತರಾಳದಲ್ಲಿ ಸದಾ ಅಡಗಿಕೊಂಡಿದ್ದು ಅನುಕೂಲ ಸಂದರ್ಭ ದೊರೆತೊಡನೆಯೇ ತಲೆಯೆತ್ತಿ ಕರೆಯುತ್ತಿತ್ತು. ಈ ಕರೆಯು ನನ್ನಲ್ಲಿ ಬಲವಾಗಲು, ಇಲ್ಲಿಯ ನನ್ನ ಕೆಲವು ಗೆಳೆಯರ ಪ್ರೋತ್ಸಾಹವೂ ದೊರೆಯಲು, ನಾನು ಆ ಮನೋಹರ ಮಂಗಳೂರಿನ ಮೋಹಕ ಜೀವನವನ್ನು ಬಿಟ್ಟು, ಹತ್ತು ವರ್ಷಗಳಲ್ಲಿ ಅಲ್ಲಿ ಬಲವಾಗಿ ಹಬ್ಬಿದ್ದ ಅನುರಾಗ ಆಸಕ್ತಿಗಳ ಬೇರನ್ನು ಕಿತ್ತು ನವಯುಗವನ್ನು ಉಡುಪಿಗೆ ತರುವ ಸಾಹಸ ಮಾಡಿರುವೆನು. ನಾನು ಹಿಂದೊಮ್ಮೆ ಬೇಜವಾಬ್ದಾರಿ ಕಾಂಗ್ರೆಸ್ ಸ್ವಯಂಸೇವಕನಾಗಿ ಉಡುಪಿಯ ಸೇವೆ ಮಾಡಿ ಅದನ್ನು ಬಿಟ್ಟುಹೋಗಿದ್ದೆನು. ಇಂದೀಗ ಜವಾಬ್ದಾರಿ ಸಂಪಾದಕನಾಗಿ ಪುನಃ ಉಡುಪಿಯ ಸೇವೆಮಾಡ ಬಂದಿರುವೆನು. ಇಂದು ನಾನು ಪತ್ರಿಕೆಯೊಂದರ ಸಂಪಾದಕನಾದರೂ ಹಿಂದಿನ ಆ ಸ್ವಯಂಸೇವಕ ಹೃದಯವೂ ಮನಸ್ಸೂ ಒಂದಿಷ್ಟು ಬದಲಾಗಿಲ್ಲೆಂದು ದೃಢವಾಗಿ ಹೇಳಬಲ್ಲೆನು.

ಜನತೆಯಲ್ಲಿ ರಾಜಕೀಯ ಮತ್ತು ಸಾಮಾಜಿಕ ಪ್ರಗತಿಯನ್ನುಂಟುಮಾಡಿ, ಜನಸೇವೆ ಮಾಡಲು ಪತ್ರಿಕೆಗಿಂತ ಉತ್ಕೃಷ್ಟ ಸಾಧನವು ಇನ್ನೊಂದಿಲ್ಲೆಂದು ಶ್ರೀ| ಎ. ಬಿ. ಶೆಟ್ರು ಮನಗಂಡು, 1921 ರಲ್ಲಿ ದೇಶವು ಮೋಂಟ್‌ಫೋರ್ಡ್ ಸುಧಾರಣೆಯನ್ನು ಪಡೆಯುವ ಸಂಧಿಕಾಲದಲ್ಲಿ ನವಯುಗವನ್ನು ಸ್ಥಾಪಿಸಿ, ಅದೆಷ್ಟೋ ಕಷ್ಟನಷ್ಟಗಳಿಂದ ಈವರೆಗದನ್ನು ನಡಿಸಿ ಇಂದೀಗ ಅದರ 16ನೇ ವಯಸ್ಸಿನಲ್ಲಿ ಅದನ್ನು ಸ್ವತಂತ್ರವಾಗಿ ತನ್ನ ಜೀವನಾರ್ಜನೆ ಮಾಡಬಿಟ್ಟಿರುವರು. ಯೌವನದ ಹೊಸ್ತಿಲನ್ನೇರಿದ ಮೇಲೂ ಜನಕನ ಆಶ್ರಯದಲ್ಲೇ ಇರುವುದರಲ್ಲಿ ಪೌರುಷವಿಲ್ಲೆಂದು ನವಯುಗವು ಇಂದೀಗ ಸ್ವಪ್ರಯತ್ನದ, ಸ್ವಾವಲಂಬನೆಯ ಕಠಿಣ ಮಾರ್ಗ ಹಿಡಿದಿರುವುದು.

ಏನಾದರೊಂದು ಉದ್ಯಮವು ಜಯಶೀಲವಾಯಿತೆಂದರೆ ಅದನ್ನೆತ್ತಿ ಕೊಂಡಾಡುವವರು, ಅದರಿಂದ ಸ್ವಪ್ರಯೋಜನ ಪಡೆಯಲು ಹಾತೊರೆದು ಬರುವವರು ನಮ್ಮಲ್ಲಿ ಬಹಳ. ವಿಜಯದ ಬೆನ್ನು ಚಪ್ಪರಿಸುವ ಮನೋವೃತ್ತಿ ನಮ್ಮದು. ಮುಂದೆ ಬಂದವನಿಗೆ ಸಂಭ್ರಮದ ಸ್ವಾಗತ. ಹಿಂದೆ ಬಿದ್ದವನಿಗೆ ಕೈ ಕೊಡುವ, ಅವನನ್ನು ಕಣ್ಣೆತ್ತಿಯಾದರೂ ನೋಡುವ ಉದಾರ ಬುದ್ಧಿ ನಮ್ಮಲ್ಲೆಷ್ಟು ಮಂದಿಗಿರುವುದು? "ಮತ್ತೆ ಅವನಿಗೇಗೆ ಬೇಕಿತ್ತಾ ಕೆಲಸ?" ಎಂಬ ಅಪಹಾಸ್ಯವೇ ಅಪಜಯಕ್ಕೆ ದೊರೆಯುವಗತಿ. ನವಯುಗವನ್ನು ಉಡುಪಿಯಲ್ಲಿ ನಡಿಸುವ ಪ್ರಬಲ ಜವಾಬ್ದಾರಿಹೊತ್ತಿರುವ ನಾವು ಇದನ್ನೆಲ್ಲಾ ಚೆನ್ನಾಗಿ ಯೋಚಿಸಿಕೊಂಡಿರುವೆವು. ನಮ್ಮಿಂದ ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡಿ ಅದನ್ನಳಿಯಗೊಡದೆ ಉಳಿಸಿ ಬೆಳೆಸಿಕೊಂಡು ಹೋಗುವ ದೃಢ ನಿರ್ಧಾರ ಮಾಡಿರುವೆವು. ನವಯುಗದಂತಹ ಪತ್ರಿಕೆಗೆ ಹೆಚ್ಚಾಗಿ ನವ ಜನಾಂಗವಾಗಿರುವ ತರುಣರು ತಮ್ಮಿಂದ ಸಾಧ್ಯವಾದ ಸಹಾಯಮಾಡಿ ನೆರವಾಗುವರೆಂದು ನೆರೆ ನಂಬಿರುವೆವು.

ಉಡುಪಿಯು ಬುದ್ಧಿವಂತಿಕೆಯಲ್ಲಿ, ಸಾಹಸದಲ್ಲಿ, ಕಾರ್ಯಶಕ್ತಿಯಲ್ಲಿ, ದೇಶಾಭಿಮಾನದಲ್ಲಿ ಇಡೀ ಜಿಲ್ಲೆಯಲ್ಲೇ ಮುಂದಾಗಿ ನಿಂತಿರುವುದೆಂದರೆ ಅದೊಂದು ಬರಿಯ ಹೆಗ್ಗಳಿಕೆಯಾಗಲಾರದು. ಇಡೀ ಜಿಲ್ಲೆಗೇನೇ ಕೀರ್ತಿಪ್ರಾಯವಾಗಿರುವ ದೊಡ್ಡ ದೊಡ್ಡ ಉದ್ಯಮಗಳನ್ನು ನಡಿಸುವ ಬುದ್ಧಿಶಕ್ತಿಯನ್ನು ಉಡುಪಿಯು ಒದಗಿಸಿಕೊಟ್ಟಿರುವುದೆಂದು ಅಭಿಮಾನದಿಂದ ಹೇಳಬಹುದು. ಅಂತಹ ಉಡುಪಿಯಲ್ಲಿ ನಮ್ಮ ಸಾಹಸಕ್ಕೆ ತಕ್ಕ ಪ್ರೋತ್ಸಾಹವು ದೊರೆಯದೇ? ಇಷ್ಟರೊಳಗೇನೇ ನಮಗೆ ದೊರೆತ ಸಹಾಯವೂ ಪ್ರೋತ್ಸಾಹವೂ ನಮ್ಮ ಭವಿಷ್ಯದ ಕುರಿತು ನಮ್ಮಲ್ಲಿ ಆಶಾಮನಮನ್ನುಂಟುಮಾಡಿರುವುದು. ನಾವು ಹಿಂಜರಿಯದೆ ಧೈರ್ಯದಿಂದ ಮುಂದೊತ್ತುವಂತೆ ಬೆಂಬಲವಾಗಿ ನಿಂತಿರುವುದು. ಉಡುಪಿಯ ಮಹಾಜನರು 'ನವಯುಗವು ನಮ್ಮ ಉಡುಪಿಯ ಪತ್ರಿಕೆ' ಎಂಬ ವಾತ್ಸಲ್ಯದಿಂದ, ಅಭಿಮಾನದಿಂದ, ಉಡುಪಿಯಲ್ಲಿ ಅದರ ಸರಿಯಾದ ವ್ಯವಸ್ಥೆಯಾಗುವ ತನಕ ಅದರಲ್ಲುಂಟಾಗುವ ದೋಷಗಳನ್ನು ಕಡೆಗಣಿಸಿ, ಅದಕ್ಕೆ ತಕ್ಕ

ಪ್ರೋತ್ಸಾಹವಿತ್ತು, ಅದು ಸರ್ವಾಂಗಸುಂದರವಾಗಿ ಬೆಳೆಯುವಂತೆ ಪೋಷಿಸಿ, ಅದರಿಂದ ಹೆಚ್ಚೆಚ್ಚು ಸೇವೆ ಕೈಕೊಳ್ಳಬೇಕೆಂದು ಕರ ಜೋಡಿಸಿ ಬೇಡಿಕೊಳ್ಳುವೆನು.

ನಮಗೆ ಬಂದಿರುವ ಹೆಚ್ಚಿನ ಸಂದೇಶಗಳಲ್ಲಿ, ನವಯುಗವು ನಿಷ್ಪಕ್ಷಪಾತಿಯಾಗಬೇಕು; ನಿರ್ದಾಕ್ಷಿಣ್ಯದಿಂದ ನಿರ್ಭಯವಾಗಿ ಜನಸೇವೆ ಮಾಡಬೇಕೆಂದೆಲ್ಲಾ ಪ್ರಾರ್ಥಿಸಲಾಗಿದೆ. ಆದರೆ ಇದು ಎಷ್ಟರ ಮಟ್ಟಿಗೆ ಸಾಧ್ಯ? ಒಂದಲ್ಲೊಂದು ರೀತಿಯಿಂದ ಪರಾಶಯಕ್ಕೆ ಕತ್ತು ನೀಡಿಕೊಂಡು ಪರಾವಲಂಬಿಯಾಗಿರದ ಪತ್ರಿಕೆಗಳೇ ಕರ್ನಾಟಕದಲ್ಲಿ ಅತಿವಿರಳ. ಹೆಚ್ಚಿನ ಪತ್ರಿಕೆಗಳ ಮ್ಹಾಲಿಕರು ಬೇರೆ, ಸಂಪಾದಕರು ಬೇರೆ. ಜಾಹೀರಾತುದಾರರು, ಧನರಾಶಿಯ ಆಶ್ರಯವಿಲ್ಲದ ಕರ್ನಾಟಕದಲ್ಲಿ ಪತ್ರಿಕೆಗಳನ್ನು ನಡಿಸುವುದೇ ಅಸಾಧ್ಯವಾಗಿದೆ. ಈ ಆಶಯದೊಂದಿಗೆ ಒಂದಲ್ಲೊಂದು ವಿಧದ ಹಂಗು ಬಂದೇ ಬರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸ್ವತಂತ್ರವೂ ಸಮುಜ್ವಲವೂ ಆದ ಪತ್ರಿಕಾವ್ಯವಸಾಯವೇ ಕರ್ನಾಟಕದಲ್ಲಿ ಅಸಾಧ್ಯವೆಂಬಂತಾಗಿದೆ.

ನವಯುಗವನ್ನು ನಿಷ್ಪಕ್ಷಪಾತವನ್ನಾಗಿಯೂ, ನಿರ್ಭೀತವನ್ನಾಗಿಯೂ ಮಾಡುವ ಜವಾಬ್ದಾರಿಯು ಉಡುಪಿಯ ಮತ್ತು ಅಖಿಲ ಕರ್ನಾಟಕದ ಜನತೆಯದು. ಅದಕ್ಕೆ ಸಾಕಷ್ಟು ಜನತೆಯ ಪ್ರೋತ್ಸಾಹ ದೊರೆತಲ್ಲಿ ಅದು ಯಾವ ಹಂಗು ದಾಕ್ಷಿಣ್ಯಕ್ಕೂ ಒಳಗಾಗದೆ, ನಿರ್ಭಯವಾಗಿ ನಡೆಯುವ ಪತ್ರಿಕೆಯೆಂದು ಇಷ್ಟರಲ್ಲೇ ನಮ್ಮ ವಾಚಕರಲ್ಲಿ ಹಲವರಿಗೆ ವಿದಿತವಾಗಿರಬೇಕು ಇನ್ನು ಮುಂದೆಯೂ ಅದು ಸಾಧ್ಯವಾದ ಮಟ್ಟಿಗೆ ಯಾವ ವ್ಯಕ್ತಿ, ಜಾತಿ, ಪಕ್ಷಾಭಿಮಾನಕ್ಕೂ ಕಟ್ಟುಬೀಳದೆ ಯಾವ ತರದ ಸಂಕುಚಿತತೆಯೂ ಇಲ್ಲದೆ ಕೆಲಸ ಮಾಡುವುದೆಂದು ಭರವಸ ಕೊಡುವೆವು. ಜನತೆಯೇ ತನ್ನ ದೇವರು, ಜನಸೇವೆಯೇ ತನ್ನ ಧರ್ಮ, ಜನತೆಯ ಉದ್ಧಾರವೇ ತನ್ನ ಉದ್ಧಾರವೆಂಬ ಉದಾತ್ತ ಉದ್ದೇಶದಿಂದ ತನ್ನ ಕರ್ತವ್ಯವನ್ನು ನೆರವೇರಿಸುವ ದೀಕ್ಷೆಯನ್ನು ನವಯುಗವು ಇಂದೀಗ ವಹಿಸಿ, ಕರ್ನಾಟಕದ ಮಹಾಜನರ ಆಶೀರ್ವಾದ, ಆಶಯಕ್ಕೆ ತಲೆಯೊಡ್ಡಿ ನಿಂತಿರುವುದು.

ಅನಂತರ ಶ್ರೀ ಕೆ. ಕೆ. ಶೆಟ್ರು ಅಧ್ಯಕ್ಷರಾದ ಶ್ರೀ ಡಾಕ್ಟರ್ ವಿಠಲ ಶೆಟ್ರ ಪರಿಚಯವನ್ನು ಮಾಡಿಕೊಡುತ್ತಾ, ಅವರಷ್ಟು ಎಳೆವಯಸ್ಸಿನಲ್ಲಿ ಸಾರ್ವಜನಿಕ ಜೀವನದಲ್ಲಿ ಪ್ರಮುಖ ಸ್ಥಾನಮಾನ ಪಡೆದವರು ವಿರಳ. ಸ್ವಪ್ರಯತ್ನ ಮತ್ತು ಬುದ್ಧಿಶಕ್ತಿಯಿಂದ ಅವರು ಸಾಕಷ್ಟು ಸಂಪತ್ತು ಮತ್ತು ಮಂಗಳೂರಿನ ಸಾರ್ವಜನಿಕ ಜೀವನದಲ್ಲಿ ಪ್ರಮುಖ ಸ್ಥಾನ ಪಡೆದಿರುವರಾದರೂ, ಒಂದಿಷ್ಟು ಸ್ವಪ್ರತಿಷ್ಠೆಯುಳ್ಳವರಿರುವುದಿಲ್ಲ ಸದಾ ಜನ ಪಕ್ಷಪಾತಿ ತನ್ನ ಸರ್ವಾಂಗ ಪ್ರಗತಿಪರ ಮತ್ತು ಬಲು ದಕ್ಷ ಮುನಿಸಿಪಲ್ ಆಡಳಿತದಿಂದ ಸರ್ವಾದರಣೀಯರಾಗಿರುವರು. ಅಧಿಕಾರ ದರ್ಪಕ್ಕೆ ಎಂದೂ ಮಣಿಯದ ಸ್ವಾಭಿಮಾನಿ ಜನಹಿತವನ್ನು ಎಂದೂ ಬಿಟ್ಟುಹಾಕದೆ ನಿರ್ಭಯವಾಗಿ ಎತ್ತಿ ಹಿಡಿವ ಜನಾಭಿಮಾನಿ. ಸರಕಾರದ ಬಾಲಹಿಡಿಯ ಹೋಗದೆ ಅನುತನಗಿತ್ತ ರಾವ್ ಬಹದೂರು ಬಿರುದನ್ನು ನಿರಾಕರಿಸಿ ಬಿಟ್ಟಿರುವ ದೇಶಾಭಿಮಾನಿ. ಅಧಿಕಾರಿಗಳ ನಿರಂಕುಶ ವರ್ತನೆಯನ್ನು ಧೈರ್ಯದಿಂದ ವಿರೋಧಿಸಿದವರು. ಎಲ್ಲಕ್ಕಿಂತಲೂ ಮೇಲಾಗಿ ಹಳೆಯ ಜನಾಂಗಕ್ಕೆ ಸೇರಿದವರಲ್ಲ ಇಂದಿನ ನವ ಜನಾಂಗದ ನವ ಮನೋವೃತ್ತಿಯವರು. ಆದುದರಿಂದಲೇ ಅವರನ್ನು ಉಡುಪಿಯಲ್ಲಿ ನವಯುಗದ ಈ ಉದ್ಘಾಟನಾ ಸಮಾರಂಭಕ್ಕೆ ಅಧ್ಯಕ್ಷರನ್ನಾಗಿ ಆರಿಸಲು ಕಾರಣವೆಂದು ಹೇಳಿ ಅವರನ್ನು ಅಧ್ಯಕ್ಷತನವನ್ನು ಸ್ವೀಕರಿಸುವಂತೆ ಕೇಳಿಕೊಂಡರು.

ಡಾಕ್ಟರ್ ವಿಠಲ ಶೆಟ್ರು ಅಧ್ಯಕ್ಷತನ ವಹಿಸಿದ ಮೇಲೆ ಶ್ರೀ ಕೆ. ಕೆ ಶೆಟ್ಟರು, ವಿ. ಎಸ್. ಶಿಬ್ರಿಕರ್ಕಾರ್ ಬೊಂಬಾಯಿ ಎಜ್. ಸಂಜೀವ ಶೆಟ್ಟಿ B. A. L. T. ಪುತ್ತೂರು, ಕಂದಿರದ ಆಫೀಸು ಹುದ್ದೆ ಭೀಮರಾವ್, ಕಂಜನಾಡಿ ಗೋಪಾಲಕೃಷ್ಣಯ್ಯ, ಎಂ. ಎನ್ ಜಾಟ, ಬಿ ಎ ಬಿ. ಎಲ್, ಮಂಗಳೂರು ಮೊದಲಾದವರಿಂದ ಬಂದ ತಂತಿಗಳನ್ನೂ ವಿಳಂಬವಾಗಿ ಬಂದ ಸಂದೇಶಗಳನ್ನೂ ಓದಿದರು ಬಳಿಕ ಉಡುಪಿಯ ಮುನಿಸಿಪಲ್ ಚೆಯರ್‌ಮೆನರಾದ ಶ್ರೀ ವಕೀಲ್ ಆರೂರು ಲಕ್ಷ್ಮೀನಾರಾಯಣ ರಾಯರು, "ಉಡುಪಿಗೊಂದು ಪತ್ರಿಕೆಯು ಅತ್ಯಗತ್ಯ, ನವಯುಗದಂತಹ ಪತ್ರಿಕೆಯು ಮಂಗಳೂರಿಂದ ಉಡುಪಿಗೆ ಬಂದುದು ಅತ್ಯಂತ ಸಂತೋಷದ ವಿಷಯ. ಅದಕ್ಕೆ ನಾನು ಆತ್ಯಾನಂದದಿಂದ ಸುಸ್ವಾಗತವೀಯುತ್ತೇನೆ ಮತ್ತು ಅದು ಉಡುಪಿ ಶ್ರೀಕೃಷ್ಣನ ದಯೆಯಿಂದ ಉತ್ತರೋತ್ತರ ಅಭಿವೃದ್ಧಿ ಹೊಂದಿ, ಜನಸೇವೆ ಮಾಡುವಂತಾಗಲೆಂದು ಪ್ರಾರ್ಥಿಸಿಕೊಳ್ಳುತ್ತೇನೆ"ಂದು ನವಯುಗವನ್ನು ಹರಸಿದರು.

ಶ್ರೀ ಕೊಚ್ಚಿಕಾಲ್ ಪದ್ಮನಾಭ ಪೈಗಳು 'ನವಯುಗ ಸಂಪಾದಕರಾದ ಶ್ರೀ ಕೆ. ಕೆ. ಶೆಟ್ರು ಅಸಹಕಾರದ ಸಮಯದಲ್ಲಿ ಶಾಲೆ ಬಿಟ್ಟು, ಹೊರಬಿದ್ದವರಲ್ಲೊಬ್ಬರು. ಹೀಗೆ ಶಾಲೆಬಿಟ್ಟ ತರುಣರೀಗ ಒಂದಲ್ಲೊಂದು ವ್ಯಾಪ್ತಿಗಳಲ್ಲಿ ತೊಡಗಿರುತ್ತಾರೆ ಇವರ ಲ್ಲೊಬ್ಬರಾದ ಶ್ರೀ ಕೆ. ಅಣ್ಣಪ್ಪ ಬಾಳಿಗರು ಎಫ್. ಆರ್. ಸಿ. ಎಸ್. ಪರೀಕ್ಷೆಯಲ್ಲಿ ಪಾಸಾಗಿ ಬೊಂಬಾಯಿಯ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯ ಒನರರಿ ಆಸಿಸ್ಟಾಂಟ್ ಸರ್ಜನರಾಗಿ ನೇಮಿಸಲ್ಪಟ್ಟದ್ದು ಇಡೀ ಜಿಲ್ಲೆಗೇನೇ ಗೌರವವಾಗಿದೆ. ಶ್ರೀ ಕೆ. ಕೆ. ಶೆಟ್ರು ಶಾಂತಿನಿಕೇತನಕ್ಕೆ ಹೋಗಿ, ಅಲ್ಲಿಂದ ನವಯುಗದ ಸಂಪಾದಕತ್ವವಹಿಸಿ ಈಗ ಉಡುಪಿಯಲ್ಲಿ ನವಯುಗವನ್ನು ನಡಿಸುವ ಜವಾಬ್ದಾರಿ ವಹಿಸಿರುವರು. ನವಯುಗವು ಉಡುಪಿಗೆ ಸಕಾಲದಲ್ಲಿಯೇ ಬಂದಿರುವುದು. ಉಡುಪಿಗೊಂದು ಪತ್ರಿಕೆಯು ಅತ್ಯಗತ್ಯ ಮಂಗಳೂರಿನ ನವಯುಗ ತರುಣರು ಉಡುಪಿಯನ್ನು ವರಿಸಬಂದಿರುವರು. ಅವರನ್ನು ಸ್ವಾಗತೀಕರಿಸಿ ನಡಿಸಿಕೊಂಡು ಬರುವುದು ಉಡುಪಿಯ ಜನರ ಕರ್ತವ್ಯ ನಮ್ಮೀ ತರುಣ ಮಿತ್ರರ ಸಾಹಸವು ಜಯಶೀಲವಾಗಲೆಂದು ಹಾರೈಸುತ್ತೇನೆ" ಎಂದು ನವಯುಗವನ್ನು ಉಡುಪಿಗೆ ತಂದ ಕುರಿತು ಆತ್ಯಾನಂದ ಸೂಚಿಸಿ ಅದನ್ನು ಆಶೀರ್ವದಿಸಿದರು

ಪರಿಯಾಯ ಮಠವಾದ ಪೇಜಾವರ ಮಠದ ಜನರಲ್ ಏಜಂಟರಾದ ಶ್ರೀ ವಿಠ್ಯಾಳ ನರಸಿಂಹಾಚಾರ್ಯರು ನವಯುಗವನ್ನು ಹೃತ್ಪೂರ್ವಕವಾಗಿ ಸ್ವಾಗತೀಕರಿಸಿ, ಅದು ನಿರ್ಭಯವಾದ ಅಭಿಪ್ರಾಯವನ್ನಿ

ಯುತ್ತಾ ಬಂದಿರುವುದು ಉಡುಪಿಗೆ ಮುನ್ಸಿಪಾಲಿಟಿ ಬರುವಾಗಲೆ ನವಯುಗವೂ ಬಂದುದು ಅತ್ಯಂತ ಸಂದರ್ಭೋಚಿತವಿರುವುದೆಂದರು.

ಶ್ರೀ. ಎನ್. ಎಸ್. ಕಿಲ್ಲೆಯವರು

ದೇಶದ ಪ್ರಕೃತದ ಪರಿಸ್ಥಿತಿಯನ್ನು ಹೃದಯಂಗಮವಾಗಿಯೂ, ಸ್ಫೂರ್ತಿಯುಕ್ತವಾಗಿಯೂ ವಿವರಿಸಿ, ಜನತೆಯ ಶೋಚನೀಯ ಅವಸ್ಥೆಯ ಕುರಿತು ವಿಷಾದ ಸೂಚಿಸಿ, ಜನತೆಯಲ್ಲಿ ಜಾಗೃತಿಯನ್ನೂ, ಸ್ವದೇಶಾಭಿಮಾನವನ್ನೂ ಉಂಟುಮಾಡಲು ಪತ್ರಿಕೆಗಳ ಆವಶ್ಯಕತೆಯನ್ನು ಮನಗಾಣಿಸಿದರು. ಮತ್ತು 15 ವರ್ಷಗಳಿಂದ ಬಹಳ ಕಷ್ಟನಷ್ಟ ವಹಿಸಿ, ನವಯುಗವನ್ನು ನಡಿಸಿ ಜನಸೇವೆ ಮಾಡಿದ ಶ್ರೀ ಎ ಬಿ ಶೆಟ್ರನ್ನು ಕೊಂಡಾಡಿ, ಅವರಂತಹ ನಿಃಸ್ವಾರ್ಥ ಜನಸೇವಕರು, ಸಾತ್ವಿಕ ಪುರುಷರು, ಒಂಟಿಳ ಯಾನೆ ನಾಡವರ ಸಮಾಜದಲ್ಲಿ ಇನ್ನೊಬ್ಬರು ಇರಲಾರರೆಂದು ಹೇಳಿ, ಶ್ರೀ ಶೆಟ್ರಂತಹ ದಾನಿಯ ಉದಾರಬುದ್ಧಿಯಿಂದ ಕೊಟ್ಟ ದಾನವು ಶ್ರೀ ಕೆ. ಕೆ ಶೆಟ್ರಂತಹ ಸತ್ಪಾತ್ರವನ್ನೇ ಸೇರಿರುವುದು. ಇವರು ನವಯುಗವನ್ನು ನಡಿಸಲು ಸಮರ್ಥರೂ ಯೋಗ್ಯರೂ ಇರುವರು. ಶ್ರೀ ಎ. ಬಿ ಶೆಟ್ರು ನವಯುಗ ಕನ್ಯೆಯನ್ನು ಬಹಳ ಕಷ್ಟದಿಂದ 16 ವರ್ಷಗಳ ವರೆಗೆ ಬೆಳಸಿ, ಪ್ರೌಢೆಯನ್ನಾಗಿ ಮಾಡಿ, ಉಡುಪಿಯವರನ್ನು ಧಾರೆಯೆರೆದು ಕೊಟ್ಟಿರುವರು ಅವಳನ್ನು ಸ್ವಾಗತೀಕರಿಸಿ ಯೋಗ್ಯ ರೀತಿಯಲ್ಲಿ ನಡಿಸುವುದು ಉಡುಪಿಯವರ ಕರ್ತವ್ಯವಿರುವುದೆಂದು ಹೇಳಿ, ನವಯುಗವು ದಿನೇ ದಿನೇ ಅಭಿವೃದ್ಧಿಗೊಂಡು ಬೆಳೆದು ಬೆಳಗಲೆಂದು ಹಾರೈಸಿದರು.

ಡಾಕ್ಟರ್ ಟಿ. ಮಾಧವಪೈಗಳು

'ಉಡುಪಿಗೊಂದು ಪತ್ರಿಕೆಯು ಅತ್ಯಾವಶ್ಯಕ, ನವಯುಗವು ಉಡುಪಿಗೆ ಬರುವುದಾದರೆ ಬಹಳ ಒಳ್ಳೇದೆಂದು ಶ್ರೀ ಕೆ. ಕೆ. ಶೆಟ್ರನ್ನು ಪ್ರೋತ್ಸಾಹಿಸಿದವರಲ್ಲಿ ನಾನೊಬ್ಬ. ಯಾಕೆಂದರೆ ಹೊರಗಿನ ಪತ್ರಿಕೆಗಳಲ್ಲಿ ಉಡುಪಿಯ ಕಾರ್ಯಕಲಾಪಗಳಿಗ ಯೋಗ್ಯ ಸ್ಥಾನ ದೊರೆಯದು ಇದು ಹೊರತು ಉಡುಪಿಯ ಸಮಾಚಾರಗಳು ಮಂಗಳೂರಿಗೋ ಮದ್ರಾಸಿಗೋ ಹೋಗಿ ಪ್ರಕಟವಾಗುವಾಗ ಅವು 10-15 ದಿವಸಗಳ ಹಿಂದಿನದಾಗುವುವು. ಆದುದರಿಂದ ಉಡುಪಿಗೊಂದು ಪತ್ರಿಕೆಯು ಅತ್ಯವಶ್ಯ ಆದರ ಶ್ರೀ ಕೆ ಕೆ. ಶೆಟ್ರು ಮಂಗಳೂರಿನಂತಹ ಸ್ಥಳವನ್ನು ಬಿಟ್ಟು ಉಡುಪಿಗೆ ನವಯುಗವನ್ನು ತರುವರೋ ಇಲ್ಲವೋ ಎಂಬ ಸಂದೇಹವು ನನಗೆ ಆಗ ಇತ್ತು ಈಗ ಅವರು ನವಯುಗವನ್ನು ಉಡುಪಿಗೆ ತಂದುದು ನನಗೆ ಬಹಳ ಸಂತೋಷದ ಸಂಗತಿ. ನಾನು ನನ್ನ ಸಂದೇಶದಲ್ಲಿ ತಿಳಿಸಿದಂತೆ ನವಯುಗವನ್ನವರು ಜಾತಿ, ವ್ಯಕ್ತಿ ಮತ್ತು ಪಕ್ಷಗಳ ಸಂಕುಚಿತತೆಯಿಂದ ದೂರವಿರಿಸಬೇಕು. ನವಯುಗದಂತಹ ಪತ್ರಿಕೆಯು ಉಡುಪಿಯಲ್ಲಿ ಜಯಶೀಲವಾಗದಿರದು ಅದಕ್ಕೆ ತಕ್ಕ ಸಹಾಯವಿತ್ತು ಅದನ್ನು ಬೆಳೆಸುವುದು ನಮ್ಮೆಲ್ಲರ ಕರ್ತವ್ಯ"ವೆಂದು ನವಯುಗಕ್ಕೆ ಶುಭಾಶಯವನ್ನಿತ್ತು ಮಾತಾಡಿದರು.

ಶ್ರೀ ಕೊರ್ಡಕಲ್ ಶ್ರೀನಿವಾಸರಾಯರು

"ನವಯುಗದ ಕುರಿತು ನನ್ನ ಅಭಿಪ್ರಾಯಗಳನ್ನು ಪ್ರತ್ಯೇಕವಾಗಿ ನಾನು ನನ್ನ ಸಂದೇಶದಲ್ಲಿ ಕೊಟ್ಟಿರುತ್ತೇನೆ. ಜ್ವರ ಬರುವಾಗ ವೈದ್ಯನು ತಾನಾಗಿ ಬಂದಂತೆ, ಖಿನ್ನಿಯಾದಾಗ ವಕೀಲನೆದುರು ಬಂದಂತೆ ಉಡುಪಿಗೆ ಬಂದಿದೆ. ನಿರ್ಭಯವಾಗಿ ಹೊಸಹೊಸ ವಿಚಾರಗಳನ್ನು ವಾಚಕರ ಮುಂದಿಡುತ್ತಾ ಬಂದಿರುವ ಪತ್ರಿಕೆಯೆಂದರೆ ನವಯುಗ ಯಾವ ಸಂಕುಚಿತ ಮನೋವೃತ್ತಿಯೂ ಅದಕ್ಕಿರುವುದಿಲ್ಲ. ಅದು ಗರತಿಯಂತಿದ್ದು ಅದರಲ್ಲಿ ಬಾಹ್ಯ ಥಳಕಿಲ್ಲ, ಅಂತರ್ಯದ ತಿರುಳಿದೆ. ಜನತೆಯೋ ಅದರ ದೇವರು ಜನಸೇವೆಯೋ ಅದರ ಧರ್ಮ. ಉದಾತ್ತ ಉದ್ದೇಶದಿಂದ ನಿರ್ದಿಷ್ಟ ಗುರಿಯಿಂದ ಕೆಲಸ

ಮಾಡುವ ಪತ್ರಿಕೆಯದು. ಅದಕ್ಕೆ ಉಡುಪಿಯ ಜನರೆಲ್ಲರೂ ತಕ್ಕ ಸಹಾಯವಿತ್ತು ಪ್ರೋತ್ಸಾಹಿಸಬೇಕೆಂ"ದು ಕೇಳಿಕೊಂಡರು.

ಶ್ರೀ. ಎಸ್. ಯು. ಪಣಿಯಾಡಿಯವರು

ಉಡುಪಿಯಲ್ಲಿ 45 ವರ್ಷಗಳ ಮೊದಲು ಬೈಲೂರು ರಾಮರಾಯರು ಹಿಂದು ಪ್ರೆಸ್ಸನ್ನು ಪ್ರಕಟಿಸಿ, ಸುದರ್ಶನ ಪತ್ರಿಕೆಯನ್ನು ಸ್ಥಾಪಿಸಿ ಶ್ರೀ ಕಡೆಕಾರು ರಾಜಗೋಪಾಲ ಕೃಷ್ಣರಾಯರ ಸಹಕಾರದಿಂದ ಹೊರಡಿಸಿದ ಶ್ರೀ ಕೃಷ್ಣಸೂಕ್ತಿಯಿಂದಾರಭ್ಯ ನವಯುಗವು ಉಡುಪಿಗೆ ಬರುವವರೆಗಣ, ಉಡುಪಿಯಲ್ಲಿ ಪತ್ರಿಕೆ ನಡಿಸಲು ನಡೆದಿರುವ ಪ್ರಯತ್ನವನ್ನೆಲ್ಲಾ ವಿವರಿಸಿ ಹೇಳಿದರು. ಶ್ರೀಗಳಾದ ಎಚ್. ರಾಮರಾಯ ಮಲ್ಯ, ಎಚ್. ನಾರಾಯಣರಾವ್ ಮತ್ತು ಶಾಂತಾರಾಮರಾಯರು ನಡಿಸಿದ ಸತ್ಯಾಗ್ರಹಿ ಪತ್ರಿಕೆಯು ನಿಂತು ಹೋದ ಮೇಲೆ ಸದ್ರಿ ಪ್ರೆಸ್ಸನ್ನು ಹಿಂದು ಪ್ರೆಸ್ಸಿನ ಕೆಲವು ಸಾಮಾನುಗಳನ್ನು ಪಡೆದು ತಾನು ತುಳುನಾಡ್ ಪ್ರೆಸ್ ಸ್ಥಾಪಿಸಿ ನಡಿಸಿಕೊಂಡು ಬರುವುದನ್ನೂ ಈಗ ಅಲ್ಲಿಂದ ವರ್ತಕ ಧುರೀಣ, ಫೈನಾನ್ಸಿಯ ಎಕ್ಸ್‌ಪರ್ಟಿಸ್, ಶ್ರೀ ಕೃಷ್ಣ ಸಂದೇಶಗಳು ಪ್ರಕಟವಾಗುವುದನ್ನೂ ತಿಳಿಸಿದರು. ಇದು ಹೊರತು ಶ್ರೀ ವಾಮನ ಕುಡುವರು ನಡಿಸಿದ ಸಾರಸ್ವತ ಮತ್ತು ಈಗ ನಡೆಯುತ್ತಿರುವ ಬಾಲಚಂದ್ರದ ಪ್ರಸ್ತಾಪವನ್ನು ಕೂಡ ಮಾಡಿದರು ಆ ಮೇಲೆ ದೈನಿಕವೊಂದನ್ನು ಮಂಗಳೂರಲ್ಲಿ ಸ್ಥಾಪಿಸುವ ತನ್ನ ಆಕಾಂಕ್ಷೆ, ಅದಕ್ಕುಂಟಾದ ವಿಘ್ನ, ವಾರ ಪತ್ರಿಕೆಯೊಂದನ್ನು ತನಗೆ ನಡಿಸಬೇಕೆಂದಿದ್ದ ಮಹದಿಚ್ಛೆಯ ಸಂಗತಿಯನ್ನೆಲ್ಲಾ ಹೇಳಿ, ನವಯುಗವು ಉಡುಪಿಗೆ ಬರುವಂತೆ ಪ್ರೋತ್ಸಾಹವಿತ್ತವರಲ್ಲಿ ತಾನೊಬ್ಬ. ಉಡುಪಿಗೊಂದು ವಾರ ಪತ್ರಿಕೆಯ ಆವಶ್ಯಕತೆಯು ಬಹುಕಾಲದಿಂದಿದ್ದಿತು. ಸರಿಯಾದ ಅನುಕೂಲತೆಯಿಲ್ಲದೆ ತಾನಾಗಿ ಅದನ್ನು ಸ್ಥಾಪಿಸಲಿಲ್ಲ. ಇಂತಹ ಸಂದರ್ಭದಲ್ಲಿ ನವಯುಗವು ಬಂದುದು ಬಹಳ ಸಂತೋಷ. ನವಯುಗವು ಮಂಗಳೂರಿಗೆ ಬೇಡವಾಗಿ ಇಲ್ಲಿಗೆ ಬಂದಿಲ್ಲ. ಅದಕ್ಕೆ ಶ್ರೀಗಳಾದ ಎ ಬಿ. ಶೆಟ್ಟಿ ಮತ್ತು ಡಾಕ್ಟರ್ ವಿಟ್ಠಲ ಶೆಟ್ರಿಂಥವರ ಬೆಂಬಲವು ಇದ್ದೇ ಇದೆ. ಅದು ನಮಗೆ ಬೇಡವಾದರೆ ಮಂಗಳೂರಿಗೆ ಹೋಗಿಯೇ ಹೋಗುವುದು. ಅದು ಒಂದೇ ಕಡೆ ಹಲವು ಪತ್ರಿಕೆಗಳಿದ್ದು ಮೇಲಾಟದ ತಿಕ್ಕಾಟಕ್ಕೊಳಗಾಗಿರುವುದರಿಂದ ಯಾವ ಪತ್ರಿಕೆಯೂ ಇರದ ಮತ್ತು ಸಂಪಾದಕರ ಊರಾದ ಉಡುಪಿಗೆ ಬಂದು ಹೊಸ ಕ್ಷೇತ್ರದಲ್ಲಿ ಹೊಸ ಹುರುಪಿನಿಂದ ಉಡುಪಿಯವರ ಸೇವೆಗೆ ಸಿದ್ಧವಾಗಿದೆ. ಅದಕ್ಕೆ ಬೇಕಾದ ಪ್ರೋತ್ಸಾಹವಿತ್ತು ಅದು ಉಡುಪಿಯಲ್ಲಿಯೇ ಸ್ಥಿರವಾಗಿ ನಿಂತು ಅಭಿವೃದ್ಧಿ ಹೊಂದಿ ಇನ್ನು ಕೆಲವೇ ವರ್ಷಗಳಲ್ಲಿ ದೈನಿಕ ಪತ್ರಿಕೆಯಾಗುವಂತಾಗಲೆಂದು ಹಾರೈಸಿದರು.

ರೆವೆರೆಂಡ್ ಇ. ಸುಬ್ಬುಕೃಷ್ಣಯ್ಯನವರು

(ಮಂಗಳೂರಿನ ವಿಚಾರಭಿವರ್ಧಿನಿ ಎಂಬ ಪಾಕ್ಷಿಕ ಪತ್ರಿಕೆಯ ಸಂಪಾದಕರು)

ನವಯುಗ ಪತ್ರಿಕಾಕರ್ತರಾದ ಶ್ರೀ ಕೆ ಕೆ ಶೆಟ್ರಿ ಅದೆಷ್ಟು ಉದಾತ್ತ ಉದ್ದೇಶವುಳ್ಳವರೆಂಬುದನ್ನು ನಾನು ಚೆನ್ನಾಗಿ ಬಲ್ಲ. ಮನಸ್ಸಿನಿಂದ ಎಡೆಬಿಡದೆ ಪ್ರಯತ್ನಿಸುತ್ತಾ ಉಚ್ಚ ಉದ್ದೇಶಪ್ರೇರಣೆಯಿಂದ ಏಕಾಗ್ರರಾದರೆ ಎಂತಹ ಕಾರ್ಯವನ್ನಾದರೂ ಸಾಧಿಸಬಹುದು. ಶ್ರೀ ಕೆ. ಕೆ. ಶೆಟ್ರಿ ಈ ಹೊಸ ಸಾಹಸವು ಜಯಶೀಲವಾಗುವುದೆಂಬ ಭರವಸೆಯು ನನ್ನಲ್ಲಿದೆ. ಉಡುಪಿಯ ಮಹಾಜನರು ಅವರಿಗೆ ಬೇಕಾದ ಸಹಾಯ ಮಾಡುವುದು ಅವರ ಕರ್ತವ್ಯವಿದೆಯೆಂದರು.

ಶ್ರೀ ಕೆ. ಈಶ್ವರನವರು

(ಡಿಸ್ಟ್ರಿಕ್ಟ್ ಬೋರ್ಡು ಮೆಂಬರರು)

ನವಯುಗದ ಸಂಚಾಲಕರಾಗಿದ್ದ ಶ್ರೀ ಎ. ಬಿ. ಶೆಟ್ರಿ ನವಯುಗದ ಮೂಲಕವೂ, ಖಾಸಗಿಯಾಗಿಯೂ ಹರಿಜನರಿಗೆ ಮಾಡಿದ ಸಹಾಯವನ್ನೆಲ್ಲಾ ವಿವರಿಸಿ ಹೇಳಿ, ನವಯುಗವು ಹರಿಜನರ ತಾಯಿಯಂತಿದ್ದಿತು. ಅದೀಗ ಮಂಗಳೂರಿಂದ ಹೋಗುವುದರಿಂದ ನಮಗೆ ದೊಡ್ಡ ನಷ್ಟವಾಗಿದೆ. ನವಯುಗದ ಸಂಪಾದಕರಾದ ಶ್ರೀ ಕೆ. ಕೆ. ಶೆಟ್ರಿ, ಹರಿಜನರಾದ ನಾವು ಏನು ಕೊಟ್ಟರೂ ಅದರಿಂದ ಪ್ರಕಟಿಸಿ, ಸಹಾಯಮಾಡುತ್ತಿದ್ದರು. ಇನ್ನು ಮುಂದೆಯೂ ಹಾಗೆಯೇ ಮಾಡುವರೆಂದು ನಂಬುತ್ತೇನೆ ಎಂದರು.

ಶ್ರೀ ಎಚ್. ಕೋಟ್ಯಣ್ಣ ಶೆಟ್ಟರು

ಉಡುಪಿಯು ಕಡು ಸುಧಾರಕರು ಮತ್ತು ಸನಾತನಿಗಳಿರುವ ಪಟ್ಟಣ ಇಂಥವರ ನಡುವೆ ನವಯುಗದಂತಹ ಪತ್ರಿಕೆಯೊಂದು ಬಹಳ ಆವಶ್ಯವಾಗಿದ್ದಿತು. ನವಯುಗವು ಇವರಿಬ್ಬರನ್ನೂ ಒಟ್ಟುಗೂಡಿಸಿ ಉಡುಪಿಯ ಹಿತಸಾಧನೆ ಮಾಡಿ, ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಹಾರೈಸಿದರು.

ಕೊನೆಯಲ್ಲಿ ಅಧ್ಯಕ್ಷರು ಮೊದಲೇ ಪ್ರಕಟಿಸಲ್ಪಟ್ಟಿರುವ ತನ್ನ ಭಾಷಣದ ಕೊನೆಯ ಭಾಗವನ್ನೋದಿ ನವಯುಗವು ಜಯಶೀಲವಾಗಿ ಬಹಳ ದಿನ ಬಾಳಲೆಂದು ಹಾರೈಸಿದರು. ಆ ಮೇಲೆ ಮಂಗಳೂರಿನ ಶ್ರೀ ಜಗದಂಬಾ ಎಮೆಚೂರು ನಾಟಕ ಸಂಘದ ಮಾಸ್ಟರ್ ಶ್ರೀ. ಬಿ. ಎಸ್ ಆನಂದರಾಯರು, ಸದ್ರಿ ನಾಟಕ ಸಂಘದ ಶ್ರೀ. ಎಮ್ ಎ ದೇವಡಿಗರ ಮನೋಹರ ಹಾರ್ಮೋನಿಯಮ್ ವಾದನ ಕೆ. ನಾರಾಯಣ ಪೈಯವರ ತಬ್ಲಾ ಜೊಂದಿಗೆ ಸುಶ್ರಾವ್ಯವಾಗಿ ಹಾಡಿ ಜನಮನರಂಜನೆಗೊಳಿಸಿದರು.

ಕೊನೆಯಲ್ಲಿ ನವಯುಗದ ಮೆನೇಜರರೂ ಪ್ರಕಾಶಕರೂ ಆದ ಶ್ರೀ. ಕೆ ಎಚ್. ಶೆಟ್ರಿ, ತಮ್ಮ ಶಾಲಾ ಬಾಲಕಿಯರಿಂದ ಪ್ರಾರ್ಥನೆ ಮತ್ತು ಲೇಜಿಮ್ ನಡೆಸಿದುದಕ್ಕಾಗಿ ಮುನಿಸಿಪಲ್ ನೋರ್ತ್ ಸ್ಕೂಲಿನ ಮುಖ್ಯ ಅಧ್ಯಾಪಕರಾದ ಶ್ರೀ. ಕಜ್ಜೆ ಕೇಶವ ಕಾಮತರಿಗೂ, ಅಧ್ಯಕ್ಷರಿಗೂ, ಭಾಷಣವಿತ್ತವರಿಗೂ, ಶ್ರೀ ರಾಮಕೃಷ್ಣ ಡಿಯೋಟರನ್ನು ಉದಾರವಾಗಿ ಕೊಟ್ಟ ಶ್ರೀ. ಟಿ. ಎ. ಉಪೇಂದ್ರ ಪೈಗಳಿಗೂ, ಸಭಿಕರಿಗೂ ವಂದನೆಯನ್ನರ್ಪಿಸಲು ಸಮಾರಂಭವು ಕೊನೆಗೊಂಡಿತು. ಇದಾದ ಮೇಲೆ ಸಭಾಧ್ಯಕ್ಷರಾದ ಡಾಕ್ಟರ್ ವಿಠಲಶೆಟ್ರಿನ್ನು ಪೇಜಾವರ ಮಠದ ಶ್ರೀಪಾದಂಗಳವರು ತಮ್ಮ ಮಠಕ್ಕೆ ಆಮಂತ್ರಿಸಿ, ಗಂಧಪ್ರಸಾದವಿತ್ತು, ಹರಸಿದರು.

ವಿದೇಶ ವಾರ್ತೆ

ಸ್ಪೈನಿನಲ್ಲಿ ಭೀಷಣ ಕಲಹ

ಉತ್ತರದಲ್ಲಿ ಪ್ರಚಂಡ ಹೋರಾಟ

ಪೈಶಾಚಿಕ ಕೊಲೆ ಮತ್ತು ಹಿಂಸೆ

ಸ್ಪೈನಿನ ಬಂಡಾಯಗಾರರು, ಉತ್ತರದಲ್ಲಿ ಫ್ರಾನ್ಸು ಮತ್ತು ಸ್ಪೈನಿನ ಮಾರ್ಗದಲ್ಲಿನ ಇರುನ್ ಎಂಬ ಪ್ರಾಮುಖ್ಯ ಪಟ್ಟಣವನ್ನು ವಶಪಡಿಸಿಕೊಳ್ಳಲು ಎಡೆಬಿಡದೆ ಭೀಷಣವಾಗಿ ಹೋರಾಡಿ ವಶಮಾಡಿಕೊಂಡಿರುವರು ಬಂಡಾಯಗಾರರು ಪ್ರಬಲ ವಿಮಾನ ಧಾಳಿ ನಡಿಸಿ ಹಾವಳಿ ಮಾಡಿ ಜಯ ಹೊಂದುತ್ತಿರುವರು. ವಿಜಯದ ಸಮಯ ಸಮೀಪಿಸಿರುವುದಾದರೂ ಯುದ್ಧವು ಚಳಿಗಾಲದ ವರೆಗೆ ಮುಂದುವರಿಯುವುದೆಂದು ಬಂಡಾಯಗಾರ ಸೇನಾನಾಯಕರಾದ ಜನರಲ್ ಮೋಲಾಲವರ ಹೇಳಿಕೆ. ಇರುನ್ ಪಟ್ಟಣದ ಮೇಲೆ ಬಂಡಾಯಗಾರರು ವಿಮಾನ ಮೂಲಕ ಧಾಳಿ ನಡಿಸಿ ಕಟ್ಟಡಗಳಿಗೆಲ್ಲಾ ಬಹಳ ಹಾನಿ ಮಾಡಿರುವರು. ಸರಕಾರದ ಕಡೆಯವರು ಪ್ರಬಲವಾಗಿ ಹೋರಾಡಿದರೂ, ಬಂಡಾಯಗಾರರ ಸಂಖ್ಯೆಯೂ ಯುದ್ಧ ಸಿದ್ಧತೆಯೂ ಅವರಿಗಿಂತ ಎಷ್ಟೋ ಹೆಚ್ಚಿನದಾದುದರಿಂದ ಪ್ರಯೋಜನವಾಗಲಿಲ್ಲ.

ಬಂಡಾಯಗಾರರ ಕೇಂದ್ರ ಸ್ಥಳವಾದ ಬರ್ಗೋಸಿನ ಮೇಲೆ ಸರಕಾರಿ ವಿಮಾನವೊಂದು ಬೋಂಬೆಸೆದು ಅನೇಕ ಪ್ರಾಣ ಹಾನಿಯಾಗಿರುವುದು. ಸರಕಾರಿ ಕಡೆಯ ವೈಮಾನಿಕರು ಬಂಡಾಯಗಾರರ ಎರಡು ವಿಮಾನಗಳನ್ನು ನೆಲಕ್ಕೆ ಕೆಡಹಿರುವರೆಂದು ತಿಳಿದು ಬರುತ್ತದೆ. ಇದೇ ತಾ 1ರಲ್ಲು ಬಂಡಾಯಗಾರರು ಸ್ಪೈನಿನ ಮುಖ್ಯ ಪಟ್ಟಣವಾದ ಮೋದ್ರಿದಿನ ಮೇಲೆ ಪುನಹ ವಿಮಾನ ಧಾಳಿ ನಡಿಸಿ 300 ಮಂದಿ ಕೊಲ್ಲಲ್ಪಟ್ಟಿರುವರೆಂದು ತಿಳಿದು ಬಂದಿದೆ.

ಇದೇ ತಾ. 2ರಲ್ಲು ಪ್ರಚಂಡ ಹೋರಾಟ ನಡೆದು ಬಹೋಬಿಯ ಎಂಬ ಪಟ್ಟಣವು ಬಂಡಾಯಗಾರರ ವಶವಾಗಿರುವುದು. ಬಂಡಾಯಗಾರರ ಕಡೆಯ ಮೊರೊಕ್ಕೋವಿನ ಸೈನಿಕರು ಪಟ್ಟಣವನ್ನೆಲ್ಲಾ ಲೂಟಿಯಿಸುತ್ತಿರುವರು. ಸರಕಾರಿ ಕಡೆಯ ಸೈನಿಕರು ಸೋತು ಫ್ರಾನ್ಸಿಗೆ ಓಡಿ ಹೋಗುತ್ತಿರುವರು ಮಲಾಗ ಎಂಬ ಸಮುದ್ರ ಬದಿಯ ಪಟ್ಟಣವೂ ಬಂಡಾಯಗಾರರ ವಶವಾಗುವುದು ನಿಶ್ಚಯವೆಂಬಂತಾಗಿರುವುದು. 3 ಕಡೆಗಳಿಂದಲೂ ಅದನ್ನವರು ಆವರಿಸಿರುವರು.

ಬಂಡಾಯಗಾರರ ಅಧೀನವಿರುವ ಸರಗೋಸ ಎಂಬ ಪ್ರಾಮುಖ್ಯ ಪಟ್ಟಣದ ಸಮುಕಟ್ಟಿನ ಸ್ಥಳವಾದ ಹೂಸ್ಕಾ ಎಂಬುದನ್ನು ಸರಕಾರಿ ಕಡೆಯವರು ಗೆದ್ದಿರುವರೆಂದು ತಿಳಿದುಬಂದಿದೆ. ಮೋದ್ರಿದಿನ ಈಶಾನ್ಯದಲ್ಲಿರುವ ಸರಕಾರದ ವೈಮಾನಿಕ ಕಾರ್ಖಾನೆಗೆ ಬಂಡಾಯಗಾರರ ವಿಮಾನ ಧಾಳಿಯಿಂದಾಗಿ ಬೆಂಕಿಹಿಡಿದು ಸುಟ್ಟುಹೋಗಿರುವುದೆಂದು ಬಂಡಾಯಗಾರರ ಕಡೆಯ ಸುದ್ದಿ. ಉತ್ತರದಲ್ಲಿ ಸಮುದ್ರ ಕರಾವಳಿಯಲ್ಲಿ ಗಸ್ತು ನಡಿಸುತ್ತಿರುವ ಬಂಡಾಯಗಾರರ ಯುದ್ಧ ಹಡಗುಗಳನ್ನು ಒಡೆದು ಹಾಕಲು ಸರಕಾರಿ ಕಡೆಯ 3 ಜಲಾಂತರ್ಗಾಮಿ ನಾವೆಗಳು ಹೋಗಿವೆ.

ಬಂಡಾಯಗಾರರ ಉದ್ದೇಶವು, ಸ್ಪೈನಿನಲ್ಲಿ, ಜರ್ಮನಿ ಮತ್ತು ಇಟಲಿಯಂತಹ ಸರ್ವಾಧಿಕಾರವನ್ನು ಸ್ಥಾಪಿಸಿ, ಜನತೆಯು ಸ್ವಾತಂತ್ರ್ಯವನ್ನೆಲ್ಲಾ ಅಪಹರಿಸಿ ಏಕತಂತ್ರ ರಾಜ್ಯ ಭಾರ ನಡಿಸುವುದಾಗಿದೆ. ಅವರು ಮಜೂರ ಸಂಘಗಳನ್ನೂ ಸೋಸಿಯಲಿಸ್ಟ ಮತ್ತು ಕಮ್ಯೂನಿಸ್ಟ ಪಕ್ಷೀಯರನ್ನೂ ಸಂಪೂರ್ಣ ಅಣಗಿಸಬೇಕೆಂದಿದ್ದಾರೆ. ಪಾರ್ಲಿಮೆಂಟನ್ನು ರದ್ದುಪಡಿಸಿ ತಮ್ಮ ಕೆಲವರ ಅಧಿಕಾರ ಸ್ಥಾಪಿಸಬೇಕೆಂದಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಮಜೂರ ಮತ್ತು ಸೋಸಿಯಲಿಸ್ಟರೇ ಮೊದಲಾದ, ಜನ ಪಕ್ಷೀಯರ ಅಧಿಕಾರವನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸಿ ಹಿಂದಿನಂತೆ ಶ್ರೀಮಂತರ ಮತ್ತು ಸೇನಾನಾಯಕರ ನಿರಂಕುಶ ರಾಜ್ಯಭಾರ ಸ್ಥಾಪಿಸಿ, ಸಾಧ್ಯವಾದರೆ, ಸ್ಪೈನಿನಿಂದ ಗಡಿಪಾರು ಮಾಡಲ್ಪಟ್ಟಿರುವ ಅರಸರನ್ನೂ ಹಿಂದೆ ತರಬೇಕೆಂಬುದೇ ಬಂಡಾಯಗಾರರ ಉದ್ದೇಶವಾಗಿದ.

ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ತಟಸ್ಥವಾಗಿದ್ದು, ಸ್ಪೈನಿನ ಅಂತಃಕಲಹದಲ್ಲಿ ಯಾರೂ ಕೈಹಾಕಬಾರದೆಂಬ ಪ್ರಯತ್ನದಲ್ಲಿರುವಾಗ ಹಿಟ್ಲರರೂ ಮುಸಲೋನಿಯವರೂ ಒಳಗಿಂದೊಳಗೆ ಬಂಡಾಯಗಾರರಿಗೆ ಬೇಕಾದ ಸಹಾಯವೀಯುತ್ತಿದ್ದಾರೆ. ಬಂಡಾಯಗಾರರ ಸಹಾಯಕ್ಕಾಗಿ ಪೀನೋ ಎಂಬಲ್ಲಿಗೆ ಹೊಸತಾಗಿ 24 ಇಟಲಿಯಾನ ವಿಮಾನಗಳು ಬಂದಿವೆಯೆಂದು ಸ್ಪೈನ್ ಸರಕಾರವು ಫ್ರಾನ್ಸ್, ಇಂಗ್ಲೆಂಡೇ ಮೊದಲಾದ ಸರಕಾರಗಳಿಗೆ ತಿಳಿಸಿರುವುದು.

ಅಬಿಸೀನಿಯದ ಪರಿಸ್ಥಿತಿ

ಕಾಡು ಪ್ರಾಣಿಗಳಂತೆ ಅಬಿಸೀನಿಯರ ವಧೆ!

ಅಬಿಸೀನಿಯದ ಚಕ್ರವರ್ತಿಗಳಾದ ನೆಗಸರು ಲಂಡನಿನಲ್ಲೀಗ ಚಿಕಿತ್ಸೆಗೊಳಗಾಗಿರುವರು. ಅಗೋಸ್ತು ತಾ. 25ರಲ್ಲು ಲಂಡನಿನ ಮುಸಲ್ಮಾನರೆಲ್ಲಾ ಒಟ್ಟು ಕೂಡಿ ಅವರನ್ನು ಸ್ವಾಗತೀಕರಿಸಿ ಮಾನಪತ್ರವಿತ್ತು ಸತ್ಕರಿಸಿದರು. ಇಸ್ಲಾಮ್ ಧರ್ಮದ ಆರಂಭದಲ್ಲಿ ಅದರ ಅನುಯಾಯಿಗಳು ಕೆಲವರು, ತಮಗೆ ಕೊಡಲ್ಪಟ್ಟ ಪೀಡೆ ತಾಳಲಾರದೆ ಅಬಸೀನಿಯಕ್ಕೆ ಓಡಿ ಹೋಗಿ ಅಲ್ಲಿಯ ಆಗಿನ ನೆಗಸರ ಆಶ್ರಯ ಪಡೆದಿದ್ದರೆಂದ ತಿಳಿಸಿ ಅಬಸೀನಿಯವು ಸದಾ ಇಸ್ಲಾಮಿಗೆ ಆಶ್ರಯವಾಗಿತ್ತೆಂದರು. ನೆಗಸರು ಇಸ್ಲಾಮಿನ ಕುರಿತು ತಾನು ಅತಿ ಹೆಚ್ಚಿನ ಗೌರವವುಳ್ಳವನಿರುವೆನೆಂದರು. ನೆಗಸರ

ಪುತ್ರ ರಾಜಕುವರಿ ಟ್ಸೆಹೈಯುವರು ಲಂಡನಿನ ಆಸ್ಪತ್ರೆಯೊಂದರಲ್ಲಿ 'ನರ್ಸಾ'ಗಿ ತರಬೇತಿ ಹೊಂದುತ್ತಿರುವರು.

ಅಬಿಸೀನಿಯದ ಪಶ್ಚಿಮದ ಅತಿ ವಿಶಾಲ ಪ್ರದೇಶಕ್ಕೆ ಇನ್ನೂ ಇಟೆಲಿಯಾನರು ಪ್ರವೇಶಿಸಿರುವುದಿಲ್ಲ. ಇಲ್ಲಿ ಗೋರ್ ಎಂಬಲ್ಲಿ ನೆಗಸರ ಪ್ರತಿನಿಧಿಗಳಾದ ಬಿಟ್ವಾಟೆಡ್ ಟಾಡಿಕ್ ಮತ್ತು ರಾಸ್ ಇಮ್ರುರವರೇ ಮೊದಲಾದವರು ರಾಜ್ಯಭಾರ ನಡಿಸುತ್ತಿದ್ದಾರೆ. ಇವರಿಗೂ ನೆಗಸರಿಗೂ ತಂತಿ ಟಪ್ಪಾಲು ಮೂಲಕ ಪತ್ರ ವ್ಯವಹಾರ ನಡಿಯುತ್ತಲೇ ಇದೆ. ಈ ಭಾಗದ ಪ್ರಬಲ ಪಂಗಡಿಗರಾದ ಗಾಲ್ಲಾಸರು ಗೋರಿನ ಸರಕಾರದೊಡನೆ ಮೈತ್ರಿಯಿಂದಿರುತ್ತಾರೆ. ಬ್ರಿಟಿಷ್ ಸರಕಾರನೇ ಸುಧಾನಿನ ಮೂಲಕ ಗೋರ್ ಸರಕಾರದೊಡನೆ ಸಂಬಂಧ ಬೆಳೆಸಲು ಆತಂಕ ಮಾಡಿರುವುದು. ನೆಗಸರು ಕಳುಹಿಸಿರುವ ಪ್ರತಿನಿಧಿಗಳು ಪಶ್ಚಿಮ ಅಬಿಸೀನಿಯಕ್ಕೆ ಹೋಗದಂತೆ ತಡೆ ಮಾಡಿರುವುದು. ಸುಧಾನಿನ ಮೂಲಕ ಯುದ್ಧ ಸಾಮಾಗ್ರಿಗಳನ್ನು ಕಳುಹಿಸುವುದಕ್ಕೆ ಸಂಪೂರ್ಣ ತಡೆ ಹಾಕಿರುವುದೆಂದು ಲಂಡನಿನ ಅಬಿಸೀನಿಯರ ಸಂಘದವರು ಪ್ರಕಟಿಸಿರುತ್ತಾರೆ. ಪಶ್ಚಿಮ ಅಬಿಸೀನಿಯದ 50,000 ಚಚ್ಚೌಕ ಮೈಲಿನಷ್ಟು ಪ್ರದೇಶವನ್ನು ಬ್ರಿಟಿಷರು ಸ್ವಾಧೀನಪಡಿಸಿಕೊಳ್ಳಬೇಕೆಂದು ಅಲ್ಲಿಯ ಗಾಲ್ಲಾಸ್ ಪಂಗಡಿಗರು ಬ್ರಿಟಿಷ್ ಸರಕಾರದೊಡನೆ ಕೇಳಿಕೊಂಡಿರುವರಂತೆ.

"ಇಟೆಲಿಯನರು ನಮ್ಮ ಜನರನ್ನು ನಾಶಮಾಡುವ ದೃಢ ನಿರ್ಧಾರದಿಂದಿರುವಂತಿದೆ. ಅವರು ನಿರ್ಘೃಣವಾಗಿ ನಮ್ಮ ಗಂಡಸರು, ಹೆಂಗಸರು ಮಕ್ಕಳನ್ನೆಲ್ಲಾ ಕೊಂದುಹಾಕುತ್ತಿದ್ದಾರೆ. ಅಬಿಸೀನಿಯನರು ಸಾಕಿರುವ ಪ್ರಾಣಿಗಳ ಮೇಲೆ ಕೂಡ ವಿಷವಾಯುವಿನ ಮಳೆ ಸುರಿಸಿ ಕೊಲ್ಲುತ್ತಿದ್ದಾರೆ' ಎಂದು ಲಂಡನಿನಲ್ಲಿರುವ ಅಬಿಸೀನಿಯದ ಮಂತ್ರಿಗಳಾದ ಡಾಕ್ಟರ್ ವರ್ತನರು ಪ್ರಕಟಿಸಿರುತ್ತಾರೆ. ಪ್ರತೀಕಾರ ಮಾಡುವುದೇ ಇಟೆಲಿಯಾನರ ಮೊದಲನೇ ಉದ್ದೇಶ. ಎರಡನೇ ಉದ್ದೇಶವೆಂದರೆ—ಉನ್ನತ ಭಾಗಗಳಿಂದೆಲ್ಲಾ ಅಬಿಸೀನಿಯರನ್ನೋಡಿಸಿಬಿಟ್ಟು ತಾವು ನೆಲಸುವುದಾಗಿದೆ. ನಮ್ಮ ಜನರ ಹಾಡು ಹೃದಯದ್ರಾವಕವಿದೆ. ಗಂಡಸರನ್ನು ಕಾಡುಪ್ರಾಣಿಗಳಂತೆ ಬೇಟೆ ಮಾಡಲಾಗುತ್ತದೆ. ಇಟೆಲಿಯಾನರೀಗ ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಜಡಿಮಳೆ ಬರುವುದರಿಂದ ಅವರ ವಿಮಾನ, ಟಾಂಕಿ, ಮಿಶನ್ ತೋಪುಗಳಿಂದೇನೂ ಫಲವಿಲ್ಲ. ಫ್ರೆಂಚ್ ರೈಲ್ವೆಯಿಲ್ಲದಿರುತ್ತಿದ್ದರೆ ಅವರೆಲ್ಲಾ ಉಪವಾಸ ಬಿದ್ದು ಸಾಯಬೇಕಿತ್ತು. ಬೇರೆಬೇರೆ ಕಡೆಗಳಲ್ಲಿರಿಸಲ್ಪಟ್ಟಿರುವ ಇಟೆಲಿಯಾನ ಸೈನಿಕರು, ಸಹಾಯ ದೊರೆಯಲಾಸ್ಪದವಿಲ್ಲದೆ ದುರ್ಬಲರಾಗಿದ್ದಾರೆ. ನಮ್ಮ ಜನರು ಯಾವಾಗಲೂ ಅವರ ಮೇಲೆ ಧಾಳಿ ನಡೆಸುತ್ತಿದ್ದಾರೆ. ಬಹಳ ಮಂದಿ ಗಾಯಗೊಂಡ ಇಟೆಲಿಯಾನ ಸೈನಿಕರು ಜಿಬೂತಿಯಿಂದ ಕಳುಹಿಸಲ್ಪಡುವುದೇ ಇದಕ್ಕೆ ಸಾಕ್ಷಿಯೆಂದು ಡಾಕ್ಟರ್ ಮಾರ್ಟಿನರ ಹೇಳಿಕೆ.

ಅಡ್ಡಿಸ್ ಅಬಾಬದ ವೈಸರಾಯರಾದ ಜನರಲ್ ಗ್ರೇಜಿಯಾನಿಯವರು 1921ರಲ್ಲಿ ಲೀಬಿಯ ಎಂಬ ಇಟೆಲಿಯನರ ಚಿಕ್ಕ ಅಧೀನ ರಾಜ್ಯದಲ್ಲಿ ಸ್ವಾಭಿಮಾನಿಗಳಾದ ಪಂಗಡಿಗರನ್ನೆಲ್ಲಾ ನಿರ್ನಾಮಗೊಳಿಸಿ ಶಾಂತಿಸ್ಥಾಪಿಸಿದ ಮಹಾಕ್ರೂರಿಯು. ಅದೇ ಕ್ರಮವನ್ನೀಗ ಅವರು ಅಬಿಸೀನಿಯದಲ್ಲಿಯೂ ಅನುಸರಿಸುತ್ತಿದ್ದಾರೆ. ಆದರೆ, 10 ಮಿಲ್ಯ ಅಬಿಸೀನಿಯರನ್ನೆಲ್ಲಾ ನಿರ್ನಾಮಗೊಳಿಸಲೂ, ಗುಡ್ಡ ಪ್ರದೇಶದಿಂದ ಸಮುದ್ರಭಾಗಕ್ಕೊಯ್ದು ಹಾಕುವುದಕ್ಕೂ ಎಷ್ಟರ ಮಟ್ಟಿಗೆ ಸಾಧ್ಯವೋ ತಿಳಿಯದು. ಆದರೂ ಜನರಲ್ ಗ್ರೇಜಿಯಾನಿಯವರು ತನ್ನೀ ಪ್ಲೇನನ್ನು ಭರದಿಂದ ಮುಂದೊತ್ತುತ್ತಿದ್ದಾರೆ.

ತಮ್ಮಿಚ್ಛೆಯ ಗಂಡಂದಿರನ್ನು ವರಿಸಬಿಡಲಿಲ್ಲೆಂದು ಆತ್ಮಹತ್ಯೆ!

ಚೀನದ ಫ್ಯೂಕ್ಯೆನ್ ಎಂಬಲ್ಲಿ 16ರಿಂದ 19 ವರ್ಷ ಪ್ರಾಯದ 9 ಹುಡುಗಿಯರು ತಮ್ಮ ತಂದೆ-ತಾಯಿಗಳು ತಮಗೆ ಇಚ್ಛೆ ತೋರಿದ ಗಂಡಂದಿರನ್ನು ಆರಿಸಲು ಆತಂಕ ಮಾಡಿದರೆಂದು ಎಲ್ಲರೂ ಆತ್ಮಹತ್ಯೆ ಮಾಡಿಕೊಳ್ಳುವ ಒಡಂಬಡಿಕೆ ಮಾಡಿಕೊಂಡರು. ಮೊದಲು ಅವರೆಲ್ಲರ ಫೋಟೋತೆಗಿಸಿದರು ಆ ಮೇಲೆ ಎಲ್ಲರೂ ತಮ್ಮ ಲೀಡರ್ ಹುಡುಗಿಯ ಮನೆಯಲ್ಲಿ ಒಟ್ಟು ನೇರಿ ಒಂದೇ ಸಮಯದಲ್ಲಿ ಅಫೀಮನ್ನೂ ವ್ರಾನನ್ನೂ ಬೆರಸಿ ಕುಡಿದರು ಕೆಲವು ಘಂಟೆಗಳ ನಂತರ ಸೇವಕನೊಬ್ಬನು ಕೋಣೆಗೆ ಪ್ರವೇಶಿಸುವಾಗ ಎಲ್ಲಾ ಹುಡುಗಿಯರೂ ಬೋಧ ತಪ್ಪಿ ಬಿದ್ದಿದ್ದರು. ಕೂಡಲೆ ಅವರನ್ನೆಲ್ಲಾ ಆಸ್ಪತ್ರೆಗೊಯ್ದು ಚಿಕಿತ್ಸೆ ನಡಿಸಿ ಮರುದಿನ ಎಲ್ಲರ ಪ್ರಾಣಕ್ಕೂ ಅಪಾಯವಿಲ್ಲದಂತಾಯಿತು. ೨ ವರ್ಷಗಳ ಮೊದಲು ಇದೇ ಸ್ಥಳದಲ್ಲಿ 11 ಮಂದಿ ಹುಡುಗಿಯರು ತಮಗೆ ತಮ್ಮಿಚ್ಛೆಯ ಗಂಡಂದಿರನ್ನು ಮದುವೆ ಮಾಡಿಲ್ಲೆಂದು ಎಲ್ಲರೂ ಒಟ್ಟಾಗಿ ಒಬ್ಬರನ್ನೊಬ್ಬರಿಗೆ ಕಟ್ಟಿಕೊಂಡು, ನದಿಯೊಂದಕ್ಕೆ ಹಾರಿ ಮುಳುಗಿ ಹೋಗಿದ್ದರು.

ಅಡ್ಡಿಸ್ ಅಬಾಬದ ಮೇಲೆ ಧಾಳಿ

ಆಗೋಸ್ತು ತಾ 27ರಲ್ಲು 1200 ಮಂದಿ ಅಬಿಸೀನಿಯನ್ ಯೋಧರು ಅಡ್ಡಿಸ್‌ಅಬಾಬದ ಮೇಲೆ ಧಾಳಿ ನಡಿಸಿ ಭೀಷಣ ಕದನವಾಗಿ 200 ಮಂದಿ ಕೊಲ್ಲಲ್ಪಟ್ಟು, ಹಿಂದಕ್ಕೋಡಿರುವರೆಂದೂ, ಇಟಲಿಯಾನರ ಸೇನೆಯಲ್ಲಿ 15 ಮಂದಿ ಕೊಲ್ಲಲ್ಪಟ್ಟು, 40 ಮಂದಿ ಗಾಯಗೊಂಡಿರುವರೆಂದೂ ರೋಮಿನಿಂದ ಸುದ್ದಿ ಬಂದಿದೆ.

ಸ್ವದೇಶ ವಾರ್ತೆ

ಜಿಲ್ಲಾ ಕೌನ್ಸಿಲಿನ ನೌಕರರೆಲ್ಲಾ ಕಾಂಗ್ರೆಸ್ಸಿಗೆ ಸೇರಬಹುದು.

ಕಾಂಗ್ರೆಸೀಗ ಜೇಕಾಯಿದೆವಿರ ಸಂಸ್ಥೆಯಲ್ಲ. ಇದು ಹೊರತು ಕಾಂಗ್ರೆಸ್ ಮೆಂಬರರೊಬ್ಬರು ಜಿಲ್ಲಾ ಕೌನ್ಸಿಲಿನ ಅಧಿಕಾರಿಯಾಗಿರುವಾಗ ಕೌನ್ಸಿಲಿನ ಇತರ ನೌಕರರಿಗೆ ಕಾಂಗ್ರೆಸ್ಸಿಗೆ ಸೇರಲು ಯಾವ ಆತಂಕವೂ ಇಲ್ಲ. ಆದುದರಿಂದ ಜಿಲ್ಲಾ ಕೌನ್ಸಿಲಿನ ನೌಕರರಲ್ಲಾ ಕಾಂಗ್ರೆಸ್ಸಿಗೆ ಸೇರಬಹುದು. ಮತ್ತು ಇತರರನ್ನು ಸೇರಿಸಬಹುದೆಂದು ಜಬ್ಬಲಪುರ ಡಿಸ್ಟ್ರಿಕ್ಟ್ ಕೌನ್ಸಿಲಿನ ವೈಸ್‌ಚೆಯರ್‌ಮೆನರು ಸರ್ಕ್ಯುಲರ್ ಹೊರಡಿಸಿರುವರು.

18 ತಿಂಗಳು ಕಠಿಣ ಶಿಕ್ಷೆ.

ಸಂಯುಕ್ತ ಪ್ರಾಂತದ ಝಾನ್ಸಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಗಳಾದ ಪಂಡಿತ ಕೃಷ್ಣಚಂದ್ರ ಪಂಗೋರಿಯ ಎಂಬವರು, ಚುನಾವಣೆಯ ಸಂಬಂಧವಾಗಿ ರಾಜದ್ರೋಹಕರ ಭಾಷಣ ವಿತ್ತರೆಂದು ಖಟ್ಲೆಗೊಳಗಾಗಿ 18 ತಿಂಗಳ ಕಠಿಣ ಶಿಕ್ಷೆಗೀಡಾಗಿರುವರು.

ಆಮರಣ ಉಪವಾಸ ದೀಕ್ಷೆ.

ಪಂಡಿತ ರಾಮಚಂದ್ರ ಶರ್ಮರೆಂಬವರು, ಕಲ್ಕತ್ತದ ಕಾಳಿಘಾಟಿನಲ್ಲಿ ಪ್ರಾಣಿಬಲಿ ನಿಲ್ಲಿಸದಿದ್ದರೆ ಆಮರಣ ಉಪವಾಸ ದೀಕ್ಷೆ ಹಿಡಿಯುವೆನೆಂದು ಆಗೋಸ್ತು ತಾ. 30ರಿಂದ ಉಪವಾಸವನ್ನಾರಂಭಿಸಿರುತ್ತಾರೆ. ಈ ಮೊದಲೊಮ್ಮೆ ಇವರು ಇದೇ ರೀತಿ ಹಲವು ದಿನಗಳ ಉಪವಾಸ ದೀಕ್ಷೆ ಹಿಡಿದಿದ್ದರು.

ರಾಷ್ಟ್ರೀಯ ಧ್ವಜವೇ ಸರಕಾರದ ಧ್ವಜವಾಗಬೇಕು.

ಒಂದು ಮೂಲೆಯಲ್ಲಿ ಯೂನಿಯನ್ ಜಾಕಿರುವ ತ್ರೈವರ್ಣದ ರಾಷ್ಟ್ರೀಯ ಧ್ವಜವೇ 1937ನೇ ಎಪ್ರಿಲ್ ತಾ. 1ರಿಂದ ಸರಕಾರದ ಧ್ವಜವಾಗಬೇಕೆಂದು ವೈಸರಾಯರು ಇಸ್ತಿಹಾರು ಕೊಡಬೇಕೆಂದು ಕೇಳಿಕೊಳ್ಳುವ ಸೂಚನೆಯೊಂದನ್ನು ಸರ್ದಾರ್ ಮಂಗಲ ಸಿಂಗರು ಬರುವ ಎಸೆಂಬ್ಲಿ ಅಧಿವೇಶನದಲ್ಲಿ ತರಲಿರುವರು.

ಸರ್ ಕವಾಜ್ಜಿ ಜಹಾಂಗೀರರ ಮೇಲೆ ಕೊಳೆತ ತತ್ತಿಗಳ ಎಸೆತ.

ಆಗೋಸ್ತು ತಾ. 29ರಲ್ಲು ಪೂನದಲ್ಲಿ ಲಿಬರಲ್ ಪಕ್ಷೀಯರು ತಮ್ಮ ಚುನಾವಣೆಯ ಚಳವಳವನ್ನಾರಂಭಿಸಿದರು. ಆಗ ಬೊಂಬಾಯಿಯ ಸರ್ ಕವಾಸ್ಜೀ ಜಹಾಂಗೀರರು ಕಾಂಗ್ರೆಸ್ಸಿನ ಚುನಾವಣೆಯ ಪ್ರಸಿದ್ಧಿಪತ್ರಿಕೆಯನ್ನು ಟೀಕಿಸಿ, ಕಾಂಗ್ರೆಸ್ ಪ್ರಸಿಡೆಂಟರನ್ನು ಅತಿ ಸಲುಗೆಯಿಂದ ಕೆಡಿಸಲ್ಪಟ್ಟಿರುವ ಮಗುವಿಗೆ ಹೋಲಿಸಿ ಅವರಿಂದಾಗಿ ದೇಶದಲ್ಲಿ ದುಃಖ ಅನಾಹುತಗಳು ಮತ್ತಷ್ಟು ಹೆಚ್ಚದಿರವೆಂದರು. ಆಗ ಅವರ ಮೇಲೆ ಕೊಳತ ತತ್ತಿ, ಕಾಗದದ ಚೆಂಡುಗಳೆಲ್ಲಾ ಬಿಸಾಡಲ್ಪಟ್ಟು ದೊಡ್ಡ ಗಲಾಟೆಯೆದ್ದಿತು. ಯಾರೋ ಸಭಾಸದನದ ವಿದ್ಯುಚ್ಛಕ್ತಿಯ ಬೆಳಕನ್ನೇ ನಂದಿಸಿ ಬಿಟ್ಟರು. ಹೀಗಾಗಿ ಸಭೆಯು ಅರ್ಧದಲ್ಲೇ ನಿಂತು ಹೋಯಿತು.

ಲಕ್ನೊದಲ್ಲಿ 100ಕ್ಕಿಂತಲೂ ಮಿಕ್ಕಿದ ಮುಸಲ್ಮಾನರ ದಸ್ತಗಿರಿ.

ಮುಸಲ್ಮಾನರಲ್ಲಿ ಶ್ರೀಯಪಂಗಡಿಗರಿಗೆ ಆಕ್ಷೇಪಕರವಾದ ಮಧ ಸಹಾಬಿ ಎಂಬ ಶ್ಲೋಕವೊಂದನ್ನು ಸುನ್ನಿ ಪಂಗಡಿಗರು ಸಾರ್ವಜನಿಕವಾಗಿ ಹಾಡಬಾರದೆಂದು ಲಕ್ನೊ ಪಟ್ಟಣದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ನಿಷೇಧಿಸಿ 144 ಸೆಕ್ಸನ್ ಜ್ಯಾರಿಮಾಡಿದ್ದರು. ಈ ಹುಕುಮನ್ನುಲ್ಲಂಘಿಸುವ ಚಳವಳ ನಡೆದು 100ಕ್ಕಿಂತಲೂ ಮಿಕ್ಕಿದವರು ಕೈದುಮಾಡಲ್ಪಟ್ಟಿರುವರು.

ಶ್ರೀ ಸುಭಾಸಚಂದ್ರ ಭೋಸರು

ಶ್ರೀ. ಭೋಸರ ಆರೋಗ್ಯದ ಕುರಿತು ಶ್ರೀ. ವಿ. ವಿ. ಗಿರಿಯವರು ಎಸೆಂಬ್ಲಿಯಲ್ಲಿ ಇದೇ ತಾ.3ರಲ್ಲು ಎಜರ್ನ್‌ಮೆಂಟ್ ಸೂಚನೆಯೊಂದನ್ನು ತಂದಾಗ, ಲಾ ಮೆಂಬರರಾದ ಸರ್. ಎನ್. ಎನ್. ಸರ್ಕಾರರು, ಶ್ರೀ. ಭೋಸರನ್ನು ಅವರ ಅಪೇಕ್ಷೆಯಂತೆ ಡಾಕ್ಟರ್ ನೀಲಕಾಂತ ಸರಕಾರರಿಂದ ಪರೀಕ್ಷೆಮಾಡಿಸಬೇಕೆಂದು ತಾನು ಬಂಗಾಳ ಸರಕಾರಕ್ಕೆ ತಿಳಿಸಿರುವೆನೆಂದು ಹೇಳಿದುದರಿಂದ ಅದನ್ನು ಹಿಂತೆಗೆಯಲಾಯಿತು.

ಶ್ರೀ ಎಮ್. ಆರ್. ಮಸಾನಿಯವರ ದಸ್ತಗಿರಿ.

ಅಖಿಲ ಭಾರತ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಜನರಲ್ ಸೆಕ್ರೆಟರಿಗಳು ಪಂಜಾಬಿನಲ್ಲಿ ಸೋಶಿಯಲಿಷ್ಟರಿಗೂ ರೈತರಿಗೂ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ನಿವಾರಿಸುವರೆ ಪಂಜಾಬಿಗೆ ಹೋದ್ದಾಗ, ಅವರು 24 ಘಂಟೆಗಳೊಳಗೆ ಪಂಜಾಬು ಬಿಟ್ಟುಹೋಗಬೇಕೆಂದು ಪಂಜಾಬ ಸರಕಾರದವರು ಇದೇ ತಾ. 4ರಲ್ಲು ಕಟಾಜ್ಞೆಯಿತ್ತರು. ಆದರೆ ಶ್ರೀ ಮಸಾನಿಯವರು ಸದ್ರಿ ಆಜ್ಞೆಯಂತೆ ಪಂಜಾಬು ಬಿಟ್ಟುಹೋಗದುದರಿಂದ ಇದೇ ತಾ. ೬ರಲ್ಲು ದಸ್ತಗಿರಿ ಮಾಡಲ್ಪಟ್ಟಿರುವರು.

ಕೊಲೇರಾ ಹಾವಳಿ

ಬೊಂಬಾಯಿ ಪ್ರಾಂತ್ಯದಲ್ಲಿ ಕೊಲೇರಾ ರೋಗವು ಹೆಚ್ಚಾಗಿ ಹಬ್ಬಹತ್ತಿರುವುದು. ಕರ್ನಾಟಕದ ಧಾರವಾಡ ಮತ್ತು ಬೆಳ್ಗಾಂ ಜಿಲ್ಲೆಗಳಲ್ಲಿ ಹೆಚ್ಚಿರುವುದು.

ಗಾಂಧಿ ಸಪ್ತಾಹದಲ್ಲಿ ಏನು ಓದುವಿರಿ!

ಪ್ರತಿ ವರುಷದಂತೆ ಅಕ್ಟೋಬರದ ಮೊದಲನೇ ವಾರದಲ್ಲಿ ಗಾಂಧೀ ಜಯಂತೀ ಉತ್ಸವವು ಜರಗುವದು. ಆಗ್ಗೆ ಎಲ್ಲರೂ ಕೆಳಗಿನ ಪುಸ್ತಕಗಳನ್ನು ಅವಶ್ಯವಾಗಿ ಓದಲೇ ಬೇಕು.

(೧)	ಗಾಂಧಿ ವಿಚಾರ ದೋಹನ ಪುಟ ೩೩೦ (ಎಲ್ಲ ವಿಷಯಗಳ ಬಗ್ಗೆ ಗಾಂಧಿಜಿಯವರ ವಿಚಾರ ಸಂಗ್ರಹವು) ಬೆಲೆ	೧—೨—೦
(೨)	ಮಕ್ಕಳ ಮಹಾತ್ಮಾಗಾಂಧಿ	೦—೪—೦
(೩)	ಗ್ರಾಮೋದ್ಯೋಗ	೦—೧—೦
(೪)	ರಾಷ್ಟ್ರಧರ್ಮ (೧ ರೂಪಾಯಿಗೆ ನಾಲ್ವತ್ತು ಪುಟಗಳು) ...	೦—೦—೬
(೫)	ರಾಷ್ಟ್ರಧ್ವಜ	೦—೩—೦
(೬)	ಕಾಂಗ್ರೆಸಿನ ಕಥೆ	೧—೦—೦

ಈ ಎಲ್ಲ ಪುಸ್ತಕಗಳನ್ನು ತರಿಸುವವರಿಗೆ ಅಂಚೇ ವೆಚ್ಚವಿಲ್ಲದೆ ಕಳಿಸಲಾಗುವದು.

ಸೆಕ್ರೆಟರಿ,
ಕರ್ನಾಟಕ ಶಿಕ್ಷಣ ಸಮಿತಿ, ಧಾರವಾಡ.

ಕಸ್ತೂರಿ ಮಿಶ್ರಣ ದಶಮೂಲವೆಂಬ
ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚಸ್ನು ಹೊರಗೆಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಕೆಬಗ್ಯೆಯೂ, ಪ್ರಸವವೇದನಾ ಬಗ್ಯೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ ಶಾಸ್ತ್ರಿ,
ಆಯುರ್ವೇದ ಭೂಷಣ ಮಂಗಳೂರು ದ. ಕ.

ಏಜಂಟರು:— ಮೆಸರ್ಸ್ ಓರಿಯಂಟಲ್‌ಡ್ರಗ್ಸ್‌ಎಂಡ್ ಜನರಲ್ ಏಜನ್ಸಿ, ಸಂಪಿಗೆ ರಸ್ತೆ ಮಲ್ಲೇಶ್ವರಮ್, (ಬೆಂಗಳೂರು ಸಿಟಿ.)

ESTD. 1926.
THE CROWN RUBBER STAMP Co.,
Balmatta Road, MANGALORE.

Manufacturers of Air Cushion Rubber Stamps, Revolving Date Stamps, Brass Glass & Wood Sign-boards, Badges, Belts, Wax Seals, Blocks Painters, Designers & Engravers on Marble Wood Etc.

Thumb Impression Sets & Facsimile Stamps a Speciality.

ALL ENQUIRIES TO BE MADE DIRECT TO OUR BALMATTA OFFICE, MANGALORE. AS WE HAVE NO BRANCHES OR AGENTS.

'ನವಯುಗ'ದಲ್ಲಿ
ಬರುವ ವಾರ ಪ್ರಕಟವಾಗುವ ಚಕ್ರಬಂಧ ಒಗಟನ್ನು ನಿರೀಕ್ಷಿಸಿರಿ.

ಜನರಲ್ ಎಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್.
(1907ರಲ್ಲಿ ಸ್ಥಾಪಿತವಾದದ್ದು.)

ವೇಲ್ಯುವೇಶನ್ ವರ್ಷ **1936.**

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ   ವಿಮಾ ಹಣ ಪಾವತಿ ರೂ. **37** ಲಕ್ಷ ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು.

ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು, ವಂಶಪಾರಂಪರ್ಯವಾದ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ.

ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ.

P. D. BHARGOVA,
General Manager, ***AJMER,***
Or SUPERINTENDENT. 278, Linga Chetty Street, MADRAS

Or Chief Agent. —
BELLARY: MADURA: TRICHINOPOLY VELLORE.

ಕಿರಿಯರ ಪ್ರಪಂಚ

೧. ನಾಡಕಥೆ	೦	೩	೦
೨. ಮುಂದಿನ ದೇವರು	೦	೨	೦
೩. ಸ್ವತಂತ್ರ ಜೀವನೋಪಾಯ	೦	೨	೬
೪. ಕುಶಲವ	೦	೪	೦
೫. ಸಂಶಯ ಪಿಶಾಚಿ	೦	೬	೦
೬. ಕಾವ್ಯಸಾಮ್ರಾಜ್ಯ	೦	೧೨	೦
೭. ಮಧುಪ	೧	೮	೦
೮. ವ್ಯಭಿಚಾರಿಣಿ ಯಾರು (ಅಚ್ಚಿನಲ್ಲಿದೆ).	೦	೮	೦

ಕಿರಿಯರ ಪ್ರಪಂಚ,
ಉಡುಪಿ, ದ. ಕ.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. Pai, Bros.
ಪಿ. ಎ. ಪೈ. ಬ್ರದರ್ಸ್.
ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd.,
MANGALORE
Head Office: Mangalore.   Branch Office: Court Road, Udipi.

ದಿ ವಿಜಯ ಬೇಂಕ್ ಲಿಮಿಟೆಡ್, ಮಂಗಳೂರು.

ಹೆಡ್ ಆಫೀಸು: **ಮಂಗಳೂರು.**   ಶಾಖೆ: **ಕೋರ್ಟು ರಸ್ತೆ ಉಡುಪಿ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½. ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4½. 1 ವರ್ಷದ ಬಾಬ್ತು ಸಾ. ಶೆ. 5½ 2 ವರ್ಷ ವ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ರೂ. 100 ಅಥವಾ ಅದರ ಮೇಲಿನ ಐವೇಜಿಗೆ ಸಾ. ಶೆ 8 ಮತ್ತು ಅದಕ್ಕಿಂತ ಕೆಳಗಣದು ಸಾ. ಶೆ. 9ರ ದರದ ಬಡ್ಡಿಯಲ್ಲಿಯೂ ಸಾಲ ದೊರೆವುದು. ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty,   ವಿಜಯ ಬ್ಯಾಂಕ್, ಲಿಮಿಟೆಡ್   **K. Gopalkrishna Shetty.**
ಚೆಯರ್‌ಮೇನ್   ಕದ್ರಿರೋಡ್, ಮಂಗಳೂರು,   ಸೆಕ್ರಟರಿ.

ಕಸಿಗಿಡಗಳು.
ಸಪ್ಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಕಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ಸೃಷ್ಟಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕೆಯಟ್ಲೊಗ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ವಾದೇಶೀ ಸ್ಟೋರ್ಸ್, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಮೋನ್‌ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

ಸಮಾಚಾರ ಸಂಗ್ರಹ

ಪೋಲೀಸರ ಗೋಳೀಬಾರು.

ನೀಲಗಿರಿಯ ಎಲ್ಲುಂಡ ಗ್ರಾಮದಲ್ಲಿ ಮದುವೆ ಮೆರವಣಿಗೆಯೊಂದನ್ನು ವಾದ್ಯದೊಂದಿಗೊಯ್ಯಬೇಕೆಂದು ಒಂದು ಪಂಗಡದ ಮುಸಲ್ಮಾನರೂ, ಅದು ಕೂಡದೆಂದು ಇನ್ನೊಂದು ಪಂಗಡದವರೂ ಹಠ ಕಟ್ಟಿ ಜಗಳವಾಗುವುದರಲ್ಲಿರಲು, ಅಲ್ಲಿಯ ಜೈಂಟ್ ಮೆಜಿಸ್ಟ್ರೇಟರು ಮೆರವಣಿಗೆಯನ್ನು ನಿಷೇಧಿಸಿ, ಹುಕುಮುಕೊಟ್ಟಿದ್ದರು. ಆ ಮೇಲೆ ಪುನಹ, ವಾದ್ಯದಿಂದ ಮೆರವಣಿಗೆ ನಡಿಸಬೇಕೆಂಬವರ ಕೇಳಿಕೆ ಮೇರಿಗೆ ತನ್ನ ಹುಕುಮನ್ನು ರದ್ದು ಮಾಡಿದರು. ಆ ಪ್ರಕಾರ ಮೆರವಣಿಗೆ ನಡೆಯಲು, ಎದುರು ಕಡೆಯವರು ತಡೆದು, ಒಬ್ಬರೊಬ್ಬರ ಮೇಲೆ ಕಲ್ಲೆಸೆದು ಗಲಾಟೆಯಾಗಲು ಪೋಲೀಸರು ಗುಂಡೆಸೆದು ಇಬ್ಬರು ಕೊಲ್ಲಲ್ಪಟ್ಟು 3 ಮಂದಿಗೆ ಪೆಟ್ಟಾಗಿರುವುದು.

18 ಎತ್ತುಗಳು ಸುಟ್ಟುಹೋದವು.

ತಮಿಳು ನಾಡಿನ ಸಿರುವೆಳ್ ಎಂಬ ಹಳ್ಳಿಯಲ್ಲಿ ಒಂದು ಹಟ್ಟಿಗೆ ಬೆಂಕಿತಾಗಿ ಇಡೀ ಹಟ್ಟಿಯು ಸುಟ್ಟು ಭಸ್ಮವಾಗಿರುವುದು. ಅದರೊಳಗೆ ಸಬ್ಬಿಣದ ಸರಪಳಿಯಿಂದ ಕಟ್ಟಲ್ಪಟ್ಟಿದ್ದ 9 ಜತೆ ಎತ್ತುಗಳು ಸಜೀವವಾಗಿ ಸುಟ್ಟು ಕೊಲ್ಲಲ್ಪಟ್ಟವು! ಎರಡು ಮಾತ್ರ ಬದುಕಿವೆ.

ಚೀಟು ತೆಗೆದು ನೇಮಕ

ಮನಾರ್ಗುಡಿಯ ಡಿವಿಜನಲ್ ಆಫೀಸರರಾದ ಶ್ರೀ ರಾಜಮ್ ಐಯ್ಯರರು ಪಟೇಲ್ಗಿರಿಕೆಯೊಂದರ ನೇಮಕದ ವಿಷಯದಲ್ಲಿ ನೂತನವಿಧಾನವೊಂದನ್ನನುಸರಿಸಿರುವರು. ಸದ್ರಿ ಪಟೇಲ್ಗಿರಿಕೆಗೆ 22 ಮಂದಿ ಉಮೇದ್ವಾರಿಗಳಿದ್ದರು. 22 ಮಂದಿಯೂ ಸರಿಯಾದ ಯೋಗ್ಯತೆ ಇದ್ದವರೇ-ಆ ಉಮೇದ್ವಾರಿಗಳೆಲ್ಲರ ಸಮ್ಮತಿಯಂತೆಯೇ ಚೀಟು ತೆಗೆಯಲಾಯಿತು. ಆಗ ಶ್ರೀ ಕೃಷ್ಣಮೂರ್ತಿ ಐಯ್ಯರೆಂಬವರ ಹೆಸರಿಗೆ ಚೀಟೆದ್ದು ಅವರೇ ಪಟೇಲರಾಗಿ ನೇಮಿಸಲ್ಪಟ್ಟರು.

ಅಬ್ದುಲ್ಲ ಗಾಂಧಿಯವರು.

ಮಹಾತ್ಮ ಗಾಂಧಿಯವರ ಹಿರಿಯ ಮಗನೇ ಆಗ ಶ್ರೀ ಹೀರಾಲಾಲ್ ಗಾಂಧಿಯವರು ಮೊದಲಿಂದಲೂ ತಂದೆಯ ಮಾತಿನಂತೆ ಕೇಳದೆ ಮೊದಲೊಮ್ಮೆ ಕ್ರೈಸ್ತಮತಕ್ಕೆ ಸೇರಿದರು. ಇತ್ತಲಾಗಿ ಮುಸಲ್ಮಾನ ಧರ್ಮ ಸ್ವೀಕರಿಸಿ ಅಬ್ದುಲ್ಲಾ ಗಾಂಧಿ ಎಂಬ ಹೆಸರು ಪಡೆದಿರುವರಷ್ಟೆ. ಅವರೀಗ ಉತ್ತರದ ಇನ್ನು ಕೆಲವು ಮುಸಲ್ಮಾನ ಪ್ರಮುಖರೊಂದಿಗೆ ಮಲಬಾರಿಗೆ ಬಂದು ಇಸ್ಲಾಮ್ ಧರ್ಮ ಪ್ರಚಾರಾರ್ಥವಾಗಿ ಸಂಚರಿಸುತ್ತಾ ಎಲ್ಲೆಲ್ಲಿಯೂ ಮುಸಲ್ಮಾನರಿಂದ ಸಂಭ್ರಮದ ಸ್ವಾಗತ ಪಡೆಯುತ್ತಿರುವರು. ಕೊಚ್ಚಿಯಲ್ಲಿ ಡಾಕ್ಟರ್ ರಾಯುಲ್ ಮತ್ತು ಇತರ 60 ಮಂದಿಯನ್ನು ಮುಸಲ್ಮಾನ ಮತಕ್ಕೆ ಸೇರಿಸುವ ಸಮಾರಂಭದಲ್ಲಿ ಭಾಗಿಯಾಗಿದ್ದರು.

ಪೆಲಸ್ಟೈನಿನ ದಂಗೆ.

ಪೆಲೆಸ್ಟೈನಿನ ದಂಗೆಯು ಪ್ರಬಲವಾಗುತ್ತಾ ನಡೆದಿದೆ. ಇಷ್ಟರ ತನಕ ಇರಲು ಕೆಲವಂದಿ ಅರಬರಿಗೂ ಬ್ರಿಟಿಷ್ ಸೈನಿಕರಿಗೂ ನಡೆದ ಹೋರಾಟದಲ್ಲಿ 3 ಮಂದಿ ಬ್ರಿಟಿಷ್ ಸೈನ್ಯಾಧಿಕಾರಿಗಳು ಕೊಲ್ಲಲ್ಪಟ್ಟು 5 ಮಂದಿ ಗಾಯಗೊಂಡಿರುವರು. ಹಲವು ಮಂದಿ ಅರಬರೂ ಕೊಲ್ಲಲ್ಪಟ್ಟಿರುವರು. ಬ್ರಿಟಿಷ್ ಸರಕಾರವು ಮಾರ್ಶಲ್ ಲೋ ಜಾರಿಗೆ ತರುವ ಆಲೋಚನೆಯಲ್ಲಿದೆ. ಇದಕ್ಕಾಗಿ ಇಂಗ್ಲೆಂಡಿನಿಂದ 10,000 ಸೈನಿಕರು ಪೆಲೆಸ್ಟೈನಿಗೆ ಹೋಗಲಿದ್ದಾರೆ.

ತಾಟಸ್ಥ್ಯದ ಒಪ್ಪಂದ.

ಸ್ಪೈನಿನಲ್ಲಿ ಅಂತಃಕಲಹದ ಹೊರಗಿನವರಾರೂ ಕೈಹಾಕಬಾರದು. ಆ ಕುರಿತು ಒಡಂಬಡಿಕೆ ಮಾಡಿಕೊಳ್ಳಬೇಕು. ಇತ್ತಂಡದವರಿಗೂ ಯಾರಾದರೂ ಸಹಾಯ ಮಾಡದಂತೆ ನೋಡಲು ಒಂದು ಕಮಿಟಿಯು ನೇಮಿಸಬೇಕೆಂಬ ಇಂಗ್ಲೇಂಡ್ ಮತ್ತು ಫ್ರಾನ್ಸುಗಳ ಸೂಚನೆಗೆ ಜರ್ಮನಿಯೂ, ಪೋರ್ಚುಗಲ್ಲೂ ಇಷ್ಟರ ವರೆಗೆ ಉತ್ತರ ಕೊಟ್ಟಿಲ್ಲ. ಪೋರ್ಟುಗೀಸ್ ಸರಕಾರವು ಬಂಡಾಯಗಾರರಿಗೆ ಪ್ರತ್ಯಕ್ಷವಾಗಿ ಸಹಾಯ ಮಾಡುತ್ತಿರುವದೆಂದು ಪ್ರಕಟವಾಗಿದೆ. ಇಟೆಲಿಯಿಂದ ಬಂಡಾಯಗಾರರ ಪಕ್ಷಕ್ಕೆ 34 ವಿಮಾನಗಳು ಕಳುಹಿಸಲ್ಪಟ್ಟಿರುವ ಸಂಗತಿಯು ನಿಜವೆಂದು ತಿಳಿದು ಬಂದಿದೆ.

ಸ್ಪೈನಿಷ್ ಸರಕಾರದ ಬದಲಾವಣೆ.

ಸ್ಪೈನಿನ ಪ್ರಸ್ತುತದ ಮಂತ್ರಿಮಂಡಲ ರಾಜಿನಾಮೆಯಿತ್ತಿದೆ. ಸೋಸಿಯಲಿಸ್ಟ್ ಪಕ್ಷದ ನಾಯಕರಾದ ಡೋನ್ ಕ್ಯಾಬಲ್ಲೆರೋ ಹೊಸ ಮಂತ್ರಿ ಮಂಡಲವನ್ನೇರ್ಪಡಿಸಿರುವರು ಇನ್ನು ಮುಂದೆ ಬಂಡಾಯಗಾರರ ವಿರೋಧವು ಇನ್ನಷ್ಟು ಪ್ರಬಲವಾಗುವುದು. ಕೊನೆಯತನಕ ಹೋರಾಟವು ನಿರ್ಭಯವಾಗಿ ನಡಿಸಲ್ಪಡುವುದು. ಹೊಸ ಪ್ರಧಾನ ಮಂತ್ರಿಗಳು ಸ್ಪೈನಿನ ಅತಿ ಪ್ರಾಮುಖ್ಯ ಮಜೂರ ಪ್ರಮುಖರು. ಅವರು 1917ರಲ್ಲಿ, ರಾಜಶಾಹಿಯನ್ನು ವಿರೋಧಿಸಿ ಆ ಜನ್ಮ ಶಿಕ್ಷೆಗೆ ಗುರಿಯಾಗಿದ್ದರು.

ರುಸವೆಲ್ಟರನ್ನು ಕೊಲ್ಲುವ ಸಂಚು.

ಅಮೇರಿಕದ ಪ್ರೆಸಿಡೆಂಟರಾದ ರುಸವೆಲ್ಟರನ್ನು ಕೊಲ್ಲುವ ಸಂಚೊಂದನ್ನು ಲೋಂಗ್ ಐಲೇಂಡ್ ಎಂಬಲ್ಲಿಯ ಪೋಲೀಸರು ಕಂಡುಹಿಡಿದಿರುವರು. 70 ವರ್ಷದ ಮುದುಕ ಜೋಸೆಫ್ ಕುನ್ನೆಸಲ್ ಎಂಬವನು ಈ ಸಂಬಂಧವಾಗಿ ಕೈದುಮಾಡಲ್ಪಟ್ಟಿರುವನು. ಈತನ ಮನೆಯಲ್ಲಿ ಸಿಡಿಮದ್ದು ಸಂಗ್ರಹವಾಗಿತ್ತು. ಈತನು ಪ್ರೆಸಿಡೆಂಟರನ್ನು ಕೊಲ್ಲುವುದಕ್ಕಾಗಿ ತನ್ನ ಪ್ರಾಣಕೊಡಲು ಸಿದ್ಧನಿದ್ದನು

ಪಂಜಾಬಿನಲ್ಲಿ ನೆರೆಹಾವಳಿ.

ಇತ್ತಲಾಗಿ ಪಂಜಾಬಿನಲ್ಲುಂಟಾದ ನೆರೆಯಿಂದ 32 ಹಳ್ಳಿಗಳಿಗೆ ಹಾವಳಿಯಾಗಿದೆ. ಲಾಹೋರಿನಲ್ಲಿ 602 ಮನೆಗಳು ಬಿದ್ದುಹೋಗಿವೆ. 60 ಜಾನುವಾರು ಕೊಲ್ಲಲ್ಪಟ್ಟಿವೆ. ರೂ 80,000 ಬೆಲೆಯ ಸೊತ್ತು ನಷ್ಟವಾಗಿದೆ

ಇರುನಿನಲ್ಲಿ ಭೀಕರ ಹೋರಾಟ.

ಉತ್ತರ ಸ್ಪೈನಿನ ಇರುನ್ ಪಟ್ಟಣದಲ್ಲಿ ಬಂಡಾಯಗಾರರಿಗೂ ಸರಕಾರಿ ಪಕ್ಷೀಯರಿಗೂ ಭೀಕರ ಹೋರಾಟ ನಡೆದಿರುವದು. ಇನ್ನೂ ಅದರ ಸಂಪೂರ್ಣ ಭಾಗವು ಬಂಡಾಯಗಾರರ ಸ್ವಾಧೀನವಾಗಲಿಲ್ಲ. ಸರಕಾರೀ ಸೈನಿಕರು ತಮ್ಮಲ್ಲಿರುವ ಮದ್ದು ಗುಂಡೆಲ್ಲಾ ಮುಗಿಯುವ ವರೆಗೂ ಎಡೆಬಿಡದೆ ಗುಂಡು ಹಾರಿಸುತ್ತಲೇ ಇದ್ದರು. ಇರುನಿನಲ್ಲಿರುವ ಕಟ್ಟಡಗಳನ್ನೆಲ್ಲಾ ಸುಟ್ಟು ಹಾಕಲಾಗಿದೆ. ಬಂಡಾಯಗಾರರೀಗ ಸಾನ್ ಸೆಬಾಸ್ಟಿಯನ್ ಪಟ್ಟಣದ ಮೇಲೇರಿ ಹೋಗುವ ಸಿದ್ಧತೆಯಲ್ಲಿದ್ದಾರೆ. ಗೊಡಲೂಪ್ ಕೋಟೆಯಲ್ಲಿ ಬಂಧನದಲ್ಲಿರಿಸಲ್ಪಟ್ಟಿರುವ ಆರ್ಮಿ ಬಿಷೋಪ್‌ರವರ ಪೊಲದಲೇ ಮೊದಲ ದಿನದನ್ನು ಪಾಳಿಗೆ ಗುರಿಪಡಿಸಲಾಗುವುದೆಂದು ತಿಳಿದು ಬರುತ್ತದೆ. ಸರಕಾರಿ ಸೈನಿಕರು ಇರುನನ್ನು ಬಿಟ್ಟು ಹೋಗುವಾಗ ಅನೇಕ ಮನೆಗಳಿಗೆ ಬೆಂಕಿ ಕೊಟ್ಟು ಇನ್ನು ಕೆಲವು ಮನೆಗಳು ಸ್ಫೋಟವಾಗುವಂತೆ ಸಿಡಿಮದ್ದಿಟ್ಟು ಹೋಗಿ ಯಾವ ವಸ್ತುಗಳೂ ಬಂಡಾಯಗಾರರಿಗೆ ಸಿಗದಂತೆ ನಾಶಮಾಡಿದ್ದಾರೆ. ಇರುನಿನಿಂದ ಸಾವಿರಾರು ಜನರು ಫ್ರಾನ್ಸಿಗೆ ಓಡಿಹೋಗಿ ಆಶ್ರಯ ಪಡೆಯುತ್ತಿದ್ದಾರೆ

ಪ್ರಾಚೀನ ಕಾಲದ ಶೂದ್ರರು ಹೇಗಿದ್ದರು?

ಲೇಖಕ: ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಶೂದ್ರರು ಬರೇ ಊಳಿಗ ವೃತ್ತಿಗೋಸ್ಕರವೆ ಹುಟ್ಟಿದವರು ಹೊರತು ವಿದ್ಯಾಧ್ಯಯನ ಅಥವಾ ಇತರ ಯಾವ ಕಾರ್ಯದಲ್ಲಿಯೂ ಭಾಗವಹಿಸಲನರ್ಹರು. ಬ್ರಾಹ್ಮಣರೇ ಸಮಾಜದ ಸರ್ವಾಧಿಕಾರಿಗಳಾಗಿರುತ್ತಾರ ಎಂಬ ಭಾವನೆಯು ಈಗಿನ ಹಿಂದೂ ಸಾಂಪ್ರದಾಯಿಗಳಲ್ಲಿ ತುಂಬಿ ಹೋಗಿದೆ. ಇಂದಿಗೂ ನಮ್ಮಲ್ಲಿನ ಅನೇಕ ಬ್ರಾಹ್ಮಣರು ಶೂದ್ರರನ್ನು ಬಹಳ ಹೀನಸ್ಥಿತಿಗೆ ತಳ್ಳಿಬಿಟ್ಟಿರುವರು. ಹಿಂದೂಸ್ಥಾನದ ಮಧ್ಯಕಾಲೀನ ಇತಿಹಾಸವನ್ನು ಪರಿಶೀಲಿಸಿದಲ್ಲಿ ರಾಜ ನಿಯಮ ಮತ್ತು ಸಮಾಜ ನಿಯಮಗಳ ಮುಖಾಂತರವೂ ಶೂದ್ರರನ್ನು ವಿದ್ಯಾಧ್ಯಯನದ ಅಧಿಕಾರದಿಂದ ವಂಚಿಸಿದಂತಾಯಿತು. "ಸ್ತ್ರೀಶೂದ್ರೌ ನಾಧೀಯಾತಾಮ್" ಎಂಬ ವಚನವನ್ನು ಪ್ರಚಾರಕ್ಕೆ ತಂದು ಶೂದ್ರ ಹಾಗೂ ಮಹಿಳಾ ಸಮಾಜದ ವಿಕಾಸವನ್ನೇ ತಡೆಗಟ್ಟಲಾಯಿತು. ಪರಂತು ಪ್ರಾಚೀನ ಕಾಲದ ಇತಿಹಾಸ ಹಾಗೂ ಸಾಮಾಜಿಕ ಪರಿಸ್ಥಿತಿಗಳನ್ನು ಕುರಿತು ನಾವು ಚೆನ್ನಾಗಿ ಪರಿಶೋಧನೆಮಾಡಿ ನೋಡಿದರೆ ಆಗಿನ ಕಾಲದಲ್ಲಿ ಸ್ತ್ರೀಯರು ಹಾಗೂ ಶೂದ್ರರಿಗೆ ದ್ವಿಜರಂತೆ ಎಲ್ಲ ವಿದ್ಯೆಗಳನ್ನು ಪಡೆಯುವ ಅಧಿಕಾರವಿತ್ತೆಂಬುದು ಗೊತ್ತಾಗುತ್ತದೆ. ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಶಿಕ್ಷಣವನ್ನೀಯಬೇಕೆಂದು ಧರ್ಮಶಾಸ್ತ್ರಗಳು ನಿರೂಪಿಸುತ್ತವೆ ಹೊರತು, ಬ್ರಾಹ್ಮಣ ಶೂದ್ರರೆಂಬ ಭೇದ ಮಾಡಿರುವುದಿಲ್ಲ. "ಉತ್ತಮೋತ್ತಮವಾದ ವಿದ್ಯೆಗಳು ಶೂದ್ರನಲ್ಲಿದ್ದರೆ ಬ್ರಾಹ್ಮಣರು ಸಹ ಆತನಿಂದ ಅವುಗಳನ್ನು ಅಭ್ಯಾಸಿಸಬಹುದು. ಬ್ರಾಹ್ಮಣ ಗುರುವಿನಲ್ಲಿಯೂ ಸಿಕ್ಕದಿದ್ದಲ್ಲಿ ವಿದ್ಯಾವಂತನಾದ ಶೂದ್ರನನ್ನಾದರೂ ತನ್ನ ಗುರುವಾಗಿ ಸ್ವೀಕರಿಸಿ ವಿದ್ಯೆಯನ್ನು ಸಂಪಾದಿಸಬೇಕು" ಎಂದು ಮನುಸ್ಮೃತಿಯು ಹೇಳುತ್ತದೆ. ಶೂದ್ರರಿಗೆ ವಿದ್ಯೆಯನ್ನು ಕೊಡಬಾರದೆಂದಿರುವುದಾದರೆ ಅಂಥವರಿಗೆ ಗುರುಪದವಿಯನ್ನು ಕೊಡಬೇಕೆಂದು ಮನುವು ಹೇಗೆ ನಿರೂಪಿಸುತ್ತಿದ್ದನು? ನಿರಕ್ಷರರೂ, ಅವಿದ್ಯಾವಂತರೂ ಎಲ್ಲಿಯಾದರೂ ಅಧ್ಯಾಪಕರಾಗುವುದುಂಟೆ?

ಪುರಾಣಗಳಲ್ಲಿ ಬ್ರಹ್ಮ ಪುರಾಣವು ಎಲ್ಲವುಗಳಿಗಿಂತ ಮೊದಲಿನದ್ದಾಗಿರುತ್ತದೆ. ಅದರಲ್ಲಿ 'ಒಬ್ಬ ಶೂದ್ರನು ತನ್ನ ಜಾತಿಯ ಕೆಲಸಗಳನ್ನು ಮಾಡುತಿದ್ದರೂ ಧರ್ಮಶಾಸ್ತ್ರದಲ್ಲಿ ಪ್ರವೀಣನಾಗಿದ್ದಲ್ಲಿ ಆತನು ದ್ವಿಜರಷ್ಟೇ ಪೂಜ್ಯನಾಗಿರುತ್ತಾನೆ' ಎಂದು ಉಲ್ಲೇಖಿಸಿಯದೆ. 'ವೇದವ್ಯಾಸರೇ ಪುರಾಣಸಂಹಿತೆಯನ್ನು ಬರೆದವರು. ಅದನ್ನವರು ರೋಮಹರ್ಷಣನೆಂಬ ಒಬ್ಬ ಶೂದ್ರನಿಗೆ ಕಲಿಸಿದರು. ಆತನದನ್ನು ತನ್ನ ಆರು ಮಂದಿ ಶಿಷ್ಯರಿಗೆ ಬೋಧಿಸಿದನು. ಇವರಲ್ಲಿ ೩ ಮಂದಿ ಶೂದ್ರರಾಗಿದ್ದರು. ಈ ಮೂವರಲ್ಲಿ ಪ್ರತಿಯೊಬ್ಬನೂ ಒಂದೊಂದು ಪುರಾಣವನ್ನು ರಚಿಸಿದನು. ಈ ಮೂರು ಪುರಾಣಗಳನ್ನೂ ವೇದವ್ಯಾಸವಿರಚಿತ ಪುರಾಣಸಂಹಿತೆಯೊಂದಿಗೆ ಸೇರಿಸಿ ವಿಷ್ಣು ಪುರಾಣದ ರಚನೆಯಾಯಿತು. ಆ ಕಾಲದಲ್ಲಿ ಶೂದ್ರರು ವಿದ್ಯಾಧ್ಯಯನ ಮಾಡುತ್ತಾ ಇತರರಿಗೆ ಬೋಧಿಸುತಿದ್ದುದು ಮಾತ್ರವಲ್ಲದೆ, ಪುರಾಣಗಳನ್ನು ಸಹ ರಚಿಸುತಿದ್ದರೆಂಬುದಕ್ಕೆ ಮೇಲಿನ ಉದಾಹರಣೆಗಳೇ ಯಥೇಷ್ಟವಾಗಿವೆ.

ಮಹಾತ್ಮ ವಿದುರನ ಕುರಿತು ಸ್ವಲ್ಪ ಆಲೋಚಿಸೋಣ—ಈತನು ದಾಸೀಪುತ್ರನಾಗಿದ್ದನು. ಕ್ಷೇತ್ರದ ಕುರಿತು ನೋಡುವುದಾದರೆ ಇವನು ಶೂದ್ರವಂಶಕ್ಕೆ ಸೇರಿದವನು. ಪರಂತು ಸಾಹಿತ್ಯ, ರಾಜನೀತಿ, ದರ್ಶನ ಶಾಸ್ತ್ರಗಳಲ್ಲಿ ಮಾತ್ರ ನಿಪುಣನಾಗಿದ್ದುದಲ್ಲದೆ, ವಿದೇಶಿ ಭಾಷೆಗಳನ್ನು ಸಹ ಅಭ್ಯಾಸಿಸಿದ್ದನು. ಧರ್ಮವ್ಯಾಧನ ಕಥೆಯು ಇದೇ ರೀತಿಯಲ್ಲಿದೆ. ಈತನು ಒಬ್ಬ ವ್ಯಾಧನಾಗಿದ್ದರೂ ತನ್ನ ಪುತ್ರಿಯಾದ ಅರ್ಜುನಿಕಾ ಎಂಬವಳನ್ನು ಮಾತಂಗ ಋಷಿಗೆ ವಿವಾಹ ಮಾಡಿಕೊಟ್ಟನು ಒಮ್ಮೆ ಇವನಿಗೂ ಮಾತಂಗ ಋಷಿಗೂ ವಾದವಿವಾದಗಳುಂಟಾದಾಗ ಧರ್ಮವ್ಯಾಧನು ವೇದಗಳಿಂದ ಅನೇಕ ಪ್ರಮಾಣಗಳನ್ನು ಕೊಟ್ಟನು. ಇದೇ ಪ್ರಕಾರ ದಾಸೀ ಪುತ್ರರಾಗಿದ್ದ ಕವಷ ಐಲೂಷರೇ ಮುಂತಾದವರು ಋಷಿ ಪದವಿಯನ್ನು ಹೊಂದಿದ್ದರು.

ಈ ಪ್ರಕಾರ ಪ್ರಾಚೀನ ಕಾಲದ ಭಾರತೀಯ ಜನಾಂಗದಲ್ಲಿ ಶೂದ್ರರಿಗೂ ಧರ್ಮಶಾಸ್ತ್ರ ಮತ್ತು ಇತರ ಎಲ್ಲಾ ವಿದ್ಯೆಗಳನ್ನು ಪಡೆಯುವ ಸಂಪೂರ್ಣ ಅಧಿಕಾರವಿತ್ತೆಂಬುದಕ್ಕೆ ಮೇಲೆ ವಿವರಿಸಿದಂತಹ ಸಾವಿರಾರು ದೃಷ್ಟಾಂತಗಳು ನಮ್ಮ ಪ್ರಾಚೀನ ಗ್ರಂಥಗಳಲ್ಲಿಯೂ ದೊರೆಯುತ್ತವೆ. ಹಿಂದುಗಳ ಇಂದಿನ ದುರವಸ್ಥೆಯ ಕಡೆಗೆ ಲಕ್ಷ್ಯವಿಟ್ಟು ಹಿಂದೂ ಜನರಿಗೆ ಇನ್ನಾದರೂ ತನ್ನೊಂದಿಗೆ ಸರಿಯಾದ ನ್ಯಾಯಸಮಾನಗಳನ್ನಿತ್ತು ವೇದಾದಿ ಸತ್ಯ ಶಾಸ್ತ್ರಗಳ ಬೋಧನೆಯನ್ನು ಕೊಟ್ಟು ವಿದ್ಯಾವಂತ ಹಾಗೂ ಧಾರ್ಮಿಕರನ್ನಾಗಿಮಾಡಿ ಹಿಂದೂ ಸಮಾಜವನ್ನು ಸುಸಂಘಟಿತವನ್ನಾಗಿರಿಸಬೇಕಾಗಿದೆ.

BUSINESS NOTICE

'ನವಯುಗ'ದಲ್ಲಿ
ಉಮೇದ್ವಾರಿಕೆಯ ಹೆಸರಿನ ಪ್ರಕಟಣೆಗೆ
(4 ಚದರ್ ಇಂಚಿಗೆ ಮಿಕ್ಕದ್ದು)
ಒಂದು ಬಾರಿಗೆ ರೂ. 2—0—0.

ಮೆನಿಫೆಸ್ಟೋ ಪ್ರಕಟಣೆಗೆ
(ಚದರ್ ಇಂಚಿಗೆ)
ಒಂದು ಬಾರಿಗೆ 0—1—0.

ಮೆನೇಜರ್,
ನವಯುಗ, ಉಡುಪಿ.

ಉಡುಪಿ, ತಾ. ೧೦-೯-೩೬ನೆ ಗುರುವಾರ

ಬರುವ ಚುನಾವಣೆಯೂ ಜಿಲ್ಲಾ ಕಾಂಗ್ರೆಸ್ ಕಮಿಟಿಯೂ

ರಾಷ್ಟ್ರೀಯ ಮಹಾಸಭೆಯು ಕೌನ್ಸಿಲು ಪ್ರವೇಶದ ಕಾರ್ಯಕ್ರಮವನ್ನು ಕೈಕೊಂಡು ಹೊಸ ರಾಜ್ಯಾಂಗ ರಚನೆಯನ್ನು ವಿರೋಧಿಸುವ ಸಂಕಲ್ಪ ಮಾಡಿದೆ. ಸರದಾರ್ ಪಟೇಲರ ಅಧ್ಯಕ್ಷತೆ, ಬಾಬು ರಾಜೇಂದ್ರಪ್ರಸಾದರ ಕಾರ್ಯದರ್ಶಿತ್ವದಿಂದ ಸ್ಥಾಪಿಸಲ್ಪಟ್ಟ ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಚುನಾವಣೆಯ ಭೇರಿಯನ್ನು ಹೊಡೆಯಹತ್ತಿದೆ. ಚುನಾವಣೆಯ ಜಾಹೀರುನಾಮೆಯೂ ಪ್ರಸಿದ್ಧಿಮಾಡಲ್ಪಟ್ಟು, ಬಹುಮಟ್ಟಿಗೆ ಎಲ್ಲಾ ವರ್ಗದವರೂ ಅದಕ್ಕೆ ಸ್ವಾಗತವನ್ನಿತ್ತಿದ್ದಾರೆ. ಸಂಯುಕ್ತಪ್ರಾಂತ್ಯ, ತಮಿಳುನಾಡೇ ಮೊದಲಾದ ಹಲವು ಪ್ರಾಂತಗಳಲ್ಲಿ ಎಡೆಬಿಡದೆ ಸಭೆ ಸಮ್ಮಿಲನಗಳು ಜರಗಿ ಚುನಾವಣೆಯ ಕಾರ್ಯವನ್ನು ಭರದಿಂದ ಮುಂದೊತ್ತುವಂತಾಗಿದೆ. ದೇಶದಲ್ಲೆಲ್ಲಾ ನವಸ್ಫೂರ್ತಿಯ, ಹೊಸ ಹುರುಪಿನ ಸಂಚಾರವಾಗಹತ್ತಿದೆ. ಈ ಸಮಯದಲ್ಲಿ ನಮ್ಮ ದಕ್ಷಿಣಕನ್ನಡ ಜಿಲ್ಲಾ ಕೊಂಗ್ರೆಸ್ ಕಮಿಟಿಯು ಗಾಢ ನಿದ್ರೆಯಲ್ಲಿರುವಂತೆ ತೋರುತ್ತದೆ. ಚುನಾವಣೆಯ ರಂಗಸ್ಥಳದ ಯಾವ ಸನ್ನಾಹವೂ ಇಲ್ಲಿ ಕಂಡು ಬರುವದಿಲ್ಲ. ಜಿಲ್ಲೆಯ ಕೊಂಗ್ರೆಸ್ ಕಾರ್ಯಕರ್ತರಲ್ಲಿ, ಚುನಾವಣೆಯಲ್ಲಿ ಜಯಶೀಲವಾಗಿ ಹೋರಾಡಬೇಕೆಂಬ ಆಕಾಂಕ್ಷೆಯಿರಬಹುದು. ಆದರೆ ಅಂತಹ ಸೂಚನೆ ಯಾವುದೂ ಕಾರ್ಯರೂಪೇಣ ಕಂಡುಬರುವದಿಲ್ಲ, ಕೊಂಗ್ರೆಸ್ ರಂಗವು ಬರಿದಾಗಿಯೇ ಉಳಿದಿದೆ. ಚುನಾವಣೆಯ ಕಲಸಕ್ಕಿಳಿಯುವವರಿಗೆ, ಕೆಲಸ ಮಾಡಲು ಸಮಯವಾಗಲಿಲ್ಲವೆಂದಲ್ಲ. ರಾಷ್ಟ್ರಸಭೆಯ ಇದಿರಾಳಿಗಳು ಇಷ್ಟರಲ್ಲೇ ಗುಪ್ತಗಾಮಿ ಚಳವಳದಲ್ಲಿ ತೊಡಗಿರುವರು. ನಾನಾವಿಧದ ಸಂಚುಹಂಚಿಕೆಗಳಿಂದ ಮತದಾರರನ್ನು ಒಲಿಸಿಕೊಳ್ಳಲಾಗುವ ಪೂರ್ವಸಿದ್ಧತೆಗಳನ್ನು ನಡಿಸುತ್ತಿರುವರು. ಕೊಂಗ್ರೆಸಿನ ಕಾರ್ಯಕ್ರಮವು, ಸಂಚು ಹಂಚಿಕೆಗಳಿಂದ ಕೂಡಿಲ್ಲ, ಅದು ಸ್ಪಷ್ಟವಾದ ಧ್ಯೇಯವನ್ನಿಟ್ಟುಕೊಂಡಿದೆ. ಅದಕ್ಕನುಗುಣವಾಗಿ ವಿಶಾಲವಾದ ಕಾರ್ಯಕ್ಷೇತ್ರದಲ್ಲೇ ತಿರುಗಾಡಬೇಕಾಗಿದೆ. ನಮ್ಮ ಜಿಲ್ಲಾ ಕಮಿಟಿಯು ಮಾತ್ರ ಇನ್ನೂ ಎಚ್ಚತ್ತ ಲಕ್ಷಣಗಳನ್ನು ತೋರಿಸುವದಿಲ್ಲ. ಕೊಂಗ್ರೆಸಿನ ಆಜ್ಞೆ, ನಿಯಮಗಳನ್ನು ಅರಿತವರು ನಮ್ಮಲ್ಲಿಯೂ ಇದ್ದಾರೆ, ಅವುಗಳನ್ನು ಕಟ್ಟುಕಟ್ಟಳೆಯಂತೆ ನೆರವೇರಿಸಿ, ಕೊಂಗ್ರೆಸಿನವರೆಂಬ ನಾಮಧೇಯವನ್ನು ಉಳಿಸಿಕೊಳ್ಳುವ ಒಂದೇ ಜಾಗ್ರತೆಯನ್ನಿಟ್ಟುಕೊಂಡರಾಗದು! ಕೊಂಗ್ರೆಸು ಜಯಶೀಲವಾಗಬೇಕೆ? ಕೆಲಸವೂ ಆಗಬೇಕು!

— ಹಿಂದಿನ ಪಾಠ —

ನಮ್ಮ ಜಿಲ್ಲಾ ಕಮಿಟಿಗೆ ಸಾಕಷ್ಟು ಪಾಠವು ದೊರೆತಿದೆ. ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಚುನಾವಣೆಯಲ್ಲಿ ಅದು ಕಲಿಯದುಳಿದುದೇನೂ ಇಲ್ಲ. ತನ್ನ ಕಡೆಯಿಂದ ಉಮೇದ್ವಾರರನ್ನು ನಿಲ್ಲಿಸಿತು, ಅವರು ಬಹುಸಂಖ್ಯಾಕರಾಗಿಯೇ ಆರಿಸಿ ಬಂದರು. ಅಧ್ಯಕ್ಷಪದವಿಗೂ ಉಮೇದುವಾರಿಯನ್ನು ಆರಿಸಿತು—ಅವರು ಸೋತು ಹೋದರು! ತನ್ನ ಕರ್ತವ್ಯವನ್ನು ಮಾಡಿ ಮುಗಿಸಿದರೂ ಕೊನೆ ಮುಟ್ಟಲಿಲ್ಲವೆಂಬುದೇ ಈ ವಿದ್ಯಮಾನದ ಅರ್ಥವಾದರೆ ಜಿಲ್ಲಾ ಕೊಂಗ್ರೆಸ್ ಕಮಿಟಿಯನ್ನು ದೂರಲಿಕ್ಕಿಲ್ಲ. ತನ್ನವರೆಂದು ಯಾರನ್ನು ಕಾಂಗ್ರೆಸ್ ಕರೆಯಿತೋ ಅವರೇ ಕೊಂಗ್ರೆಸನ್ನು ಹಾಗೆ ಭಾವಿಸಲಿಲ್ಲ, ತನ್ನವರು—ಪರಕೀಯರು ಎಂಬ ಪರಿಚಯವನ್ನು ಮಾಡಿಕೊಳ್ಳಲು ಕಲಿಯದ ದೆಸೆಯಿಂದ ಕೊಂಗ್ರೆಸು ತಾತ್ಸಾರಕ್ಕೊಳಗಾಗಬೇಕಾಯಿತು! ಆ ಪರಿಣಾಮವಂತೂ ಜಿಲ್ಲೆಯ ಕೊಂಗ್ರೆಸಿನ ಪ್ರತಿಷ್ಠೆಯಲ್ಲೊಂದು ಅಗಲವಾದ ಬಿರುಕಾಗಿ ಈಗಲೂ ನಿಂತಿದೆ. ಈ ತಪ್ಪು ನಡೆದುದು ಹೇಗೆ? ಉದಾಸೀನತೆಯಿಂದಲೇ, ಅಜಾಗ್ರತೆಯಿಂದಲೇ! ಹಾಗಾದರೆ, ಇಂದೂ ಅವೇ ಅವಗುಣಗಳನ್ನು ಹೊತ್ತುಕೊಂಡು ಜಿಲ್ಲಾ ಕಮಿಟಿಯೇಕೆ ನಿಂತಿರುವದೋ ತಿಳಿಯದು. ಇಂದು ಅದರ ಜವಾಬ್ದಾರಿಯು ಎರಡುಪಟ್ಟು ಅಧಿಕವಾಗಿದೆ. ಕೊಂಗ್ರೆಸ್ ವಾತಾವರಣವು ನಮ್ಮ ಜಿಲ್ಲೆಯಲ್ಲಿ ಬಹು ತೀಕ್ಷ್ಣವಾಗಿ ಕೆಟ್ಟುಹೋಗಿದೆ. ಮೊದಲು ಜಸ್ಟಿಸ್ ಪಾರ್ಟಿಯನ್ನು ಅಂತರಂಗದಲ್ಲೇ ಹರಸುವವರಿದ್ದರು. ಬಹಿರಂಗವಾಗಿ ಆ ಕಡೆ ಸೇರುವ ಎದೆಗಾರರಿದ್ದಿಲ್ಲ. ಸಾರ್ವಜನಿಕವಾದ ಸಾಧನಗಳಿಲ್ಲದ, ಉಚ್ಚ ಧ್ಯೇಯವಿಲ್ಲದ ಒಂದು ಪಕ್ಷವನ್ನು ಕಟ್ಟಿಕೊಂಡು ಮತದಾರರ ಇದಿರು ನಿಲ್ಲುವವರಲ್ಲಿ ಸ್ವಾಭಾವಿಕವಾಗಿ ಶಂಕೆಯೇಳುತ್ತಿತ್ತು. ಅದನ್ನು ಕಳೆದ ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯು ನಿವಾರಿಸಿರುವುದು. 'ಕೊಂಗ್ರೆಸಿನವರಲ್ಲಿಯೂ ಇರುವುದು ಇಷ್ಟೇ' ಎಂಬ ಭಾವನೆಯು ಕೆಲವರ ಸ್ವಾರ್ಥದಿಂದಾಗಿ ಒಮ್ಮೆಗೇ ಹರಡುವಂತಾಯಿತು. ಜಸ್ಟಿಸ್ ಪಾರ್ಟಿಯು ಹೆಸರನ್ನಿಟ್ಟುಕೊಂಡೇ ಕೆಲವರು ಮುಂದೆ ಬರುವಂತಾಯಿತು. ಅದನ್ನಿಂದು ಕೊಂಗ್ರೆಸ್ ಕಾರ್ಯಕರ್ತರು ತಮ್ಮ ತೇಜಸ್ವೀ ಕೆಲಸಗಳಿಂದ ಗತಿಗೆಡಿಸಬೇಕಾಗಿದೆ. ಕೊಂಗ್ರೆಸಿಗೆ ಮಹತ್ತಾದ ಧ್ಯೇಯವಿದೆ, ಸಾರ್ವಜನಿಕರ ಹಿತ ಸಾಧಿಸುವುದಕ್ಕಾಗಿಯೇ ಅದು ನಿಂತಿದೆ ಎಂಬುದನ್ನು ಸಪ್ರಮಾಣವಾಗಿ ತೋರಿಸಿಕೊಡಬೇಕು. ಕೆಲವೇ ಮಂದಿ ಕುಹಕಿಗಳು ಸೇರಿ ಗುಂಪಿಗೇ ತಮ್ಮ ಹೆಸರು ಬೀಳುವಂತೆ ಮಾಡಿದ ಶೋಚನೀಯ ವಿದ್ಯಮಾನವನ್ನು ತಿದ್ದುವ ಸಂದರ್ಭವೆಂದರೆ ಇದೇ! ಮುಂದೆ ನೆರವೇರಿಸಬೇಕಾದ ಕೆಲಸದ ಜತೆಯಲ್ಲಿ ಹಿಂದೆ ಆಗಿಹೋದ ಕೊರತೆಯ ನಿವಾರಣೆಯ ಜವಾಬ್ದಾರಿಯೂ ಬಿದ್ದಿದೆ ಜಿಲ್ಲಾ ಕಾರ್ಯಕರ್ತರ ಹೆಗಲ ಮೇಲೆ. ಇವುಗಳನ್ನು ಸರಿಯಾಗಿ ನಿರ್ವಹಿಸಿ ದಕ್ಷಿಣಕನ್ನಡಿಗರಲ್ಲಿ ಸ್ವಾಭಿಮಾನವಿದೆ, ರಾಷ್ಟ್ರಪ್ರೇಮವಿದೆ ಎಂಬುದನ್ನು ತೋರಿಸಿಕೊಡುವ ಹೆಗ್ಗಳಿಕೆ ಬೇಕಾದರೆ, ಜಿ. ಬೋರ್ಡು ಅಧ್ಯಕ್ಷರ ಚುನಾವಣೆಯ ನಾಚಿಕೆಕರ ವಿದ್ಯಮಾನವು ಕೆಲವು ಸ್ವಾರ್ಥಸಾಧಕರ ಪಿಕಲಾಟವಷ್ಟೇ ಹೊರತು, ರಾಷ್ಟ್ರಸಭೆಗೆ ತಗಲಿದ ಕೀಟವಲ್ಲವೆಂಬುದನ್ನು ರುಜುಗೊಳಿಸಬೇಕಾದರೆ, ದಕ್ಷಿಣಕನ್ನಡ ಜಿಲ್ಲಾ ಕೊಂಗ್ರೆಸ್ ಕಮಿಟಿಯು ಹೀಗೆ ನಿದ್ರಿಸಿದರಾಗದು! ಅದು ಎದ್ದು ಕಾರ್ಯಕ್ಕೆ ಕೈಯಿಕ್ಕಲೇಬೇಕು.

ಮತದಾರರಲ್ಲಿ ಬಿನ್ನಹ

ದಕ್ಷಿಣ ಕನ್ನಡದಲ್ಲಿ ಕೊಂಗ್ರೆಸಿಗೆ ದ್ರೋಹವನ್ನು ಬಗೆದವರು ದುರಭಿಮಾನಿಯ ಧುರೀಣರಲ್ಲದೆ ಜನಸಾಮಾನ್ಯರಲ್ಲ. ಕೊಂಗ್ರೆಸೆಂದರೆ ಬಡವರಿಗಾಗಿ ರೈತರಿಗಾಗಿ, ಮಜೂರರಿಗಾಗಿ ಹೋರಾಡಿದ ಮತ್ತು ಹೋರಾಡುವ ಸಂಸ್ಥೆ. ಆ ಕೆಲಸಗಳೆಲ್ಲಾ ಸಾರ್ವಜನಿಕರ ಸಂಬಂಧವನ್ನಿಟ್ಟುಕೊಂಡೇ ಸಾಧಿಸಲ್ಪಡುವಂಥವುಗಳು. ಹೀಗಾಗಿ ಇಂದು ಭಾರತೀಯರ ನಿಜವಾದ ಹಿತಸಾಧಕ ಸಂಸ್ಥೆಯೊಂದಿರುವುದಾದರೆ ಅದು ರಾಷ್ಟ್ರೀಯ ಮಹಾಸಭೆಯೇ ಸರಿ. ಅದು ಬಡವರಿಗಾಗಿ ಕಷ್ಟವನ್ನನುಭವಿಸಬೇಕಾಗಿ ಬಂದಾಗ ಧೈರ್ಯದಿಂದ ಅನುಭವಿಸಿದೆ. ಸಾವಿರಾರು ಭಾರತೀಯರನ್ನು ಕಷ್ಟನಷ್ಟಗಳಿಗೆ ಗುರಿಪಡಿಸಿಯಾದರೂ ಇಡೀ ರಾಷ್ಟ್ರದ ಹಿತವಾಗಲೆಂದು ಪ್ರಯತ್ನಪೂರ್ವಕವಾಗಿ ಸಾಧಿಸಿದೆ. ಕಾಲಸ್ಥಿತಿಯು ಇಂದು ಪ್ರತ್ಯೇಕವಾದೊಂದು ಹಾದಿಯನ್ನು ತೋರಿಸಿಕೊಟ್ಟಿತು. ಅದಕ್ಕನುಸರಿಸಿ ಇಂದು ಕೊಂಗ್ರೆಸು ಕೌನ್ಸಿಲು ಕಾರ್ಯಕ್ರಮವನ್ನು ಕೈಕೊಂಡಿತು. ಅಂದಿನ ಧ್ಯೇಯ, ಆ ಸಾರ್ವಜನಿಕ ಹಿತಾಕಾಂಕ್ಷೆ—ಇವುಗಳನ್ನು ಕಟ್ಟಿಕೊಂಡೇ ರಾಷ್ಟ್ರಸಭೆಯು ಸಾಧನೆಯಲ್ಲಿ ಮಾತ್ರ ಈ ಬದಲಾವಣೆಯನ್ನು ಮಾಡಿದೆ. ಮತದಾರರು ಅಂತಹ ಪವಿತ್ರ ಧ್ಯೇಯವುಳ್ಳ ಸಂಸ್ಥೆಯನ್ನು ಬಿಟ್ಟುಹಾಕಬಾರದ. ವ್ಯಕ್ತಿ, ಮತ, ಹಂಗು, ದಾಕ್ಷಿಣ್ಯಗಳು ಮತದಂತಹ ಮಹತ್ವದ ಸಂಗತಿಯಲ್ಲಿ ಪರಿಗಣಿಸಲ್ಪಡಬಾರದು. ನಮಗೆ ದೊರೆತಿರುವ 'ಓಟು' ಎಂಬುದು ರಾಷ್ಟ್ರೀಯ ಸಂಬಂಧದ ಒಂದು ಚಿಹ್ನೆ, ಅದು ಖಾಸಗೀ ಸಂಬಂಧದಂತಹ ಅಲ್ಪಬೆಲೆಗೆ ವಿಕ್ರಯವಾಗಿ ಹೋಗದಿರಲಿ! ಇಡೀ ರಾಷ್ಟ್ರದ ಸರ್ವತೋಮುಖವಾದ ಅಭಿವೃದ್ಧಿಯನ್ನು ಹಾರೈಸುತ್ತಿರುವ ಕೊಂಗ್ರೆಸೇ ಆ ಮತವನ್ನು ಹೊಂದುವ ಯೋಗ್ಯತೆಯುಳ್ಳದು. ಓಟಿಗಾಗಿ ನಮ್ಮ ಕಣ್ಣ ಮುಂದೆ ಸುಳಿದಾಡುವವರು ಹಲವರಿರಬಹುದು. ನಮ್ಮ ಜಿಲ್ಲೆಯಲ್ಲಿಯೂ, ಈ ವರೆಗಿರದ ಜಸ್ಟೀಸ್ ಪಕ್ಷವು ಅವತಾರ ಹೊಂದುವ ಲಕ್ಷಣಗಳು ಕಂಡುಬರುತ್ತಿವೆ. ಇಂತಹ ಸಂದರ್ಭದಲ್ಲಿ ಓಟರರೆಲ್ಲರೂ ಅತಿಜಾಗರೂಕತೆಯಿಂದಿರಬೇಕು. ನಮ್ಮ ಓಟನ್ನಿತ್ತು, ಜನತೆಯಲ್ಲಿ ಜಾತೀಯ ವಿಷವೃಕ್ಷವನ್ನು ನೆಡುವ ಜಸ್ಟಿಸ್ ಪಕ್ಷದಂತಹವರ ಕೈಯನ್ನೂ ಬಲಗೊಳಿಸಿದೆವಾದರೆ, ಅದರ ದುಷ್ಪರಿಣಾಮವನ್ನುಣ್ಣುವ ಸಂದರ್ಭವು ದೂರವಿರಲಾರದು.

ರಾಷ್ಟ್ರಸಭೆಯನ್ನೇ ಬಲಗೊಳಿಸಿರಿ.

ರಾಷ್ಟ್ರಸಭೆಯೊಂದನ್ನು ಬಿಟ್ಟರೆ ದೇಶದ ಇತರ ಪಕ್ಷ ಪಂಗಡಗಳಿಗೆಲ್ಲಾ ಹೆಚ್ಚಿನ ಅರ್ಥವಿರುವುದಿಲ್ಲ. ಅವುಗಳ ಶಕ್ತಿಯು ತಮ್ಮ ಸ್ವಂತ ಇರಸ್ತಿಕೆಗೇನೇ ಸಾಕಾಗದೆ, ಕೃತಕ ಜೀವನವನ್ನು ನಡಿಸಬೇಕಾಗಿ ಬಂದಿದೆ. ಜಸ್ಟಿಸ್ ಪಕ್ಷವೇ ಮೊದಲಾದ ಎಲ್ಲಾ ಜಾತಿ, ಮತ ಪಕ್ಷಪಾತಿಗಳ ಅವಸ್ಥೆಯೂ ಇದೇ. ಇಂಥವುಗಳಿಂದ ನಮಗೇನಾದರೂ ಬರಬಹುದೆಂದು ನಿರೀಕ್ಷಿಸುವುದೆಂದರೆ ತೀರಾ ಹಾಸ್ಯಾಸ್ಪದ ಸಂಗತಿ. ನಮ್ಮ 'ಮತ' ವೀಯುವುದೆಂದರೆ ಆ ಪಕ್ಷಗಳಿಗೊಂದು ಪೋಷಣೆಯಾಯುವುದು. ಬದಲಾಗಿ ಅದೇ ಸಂಕುಚಿತ ದ್ವೇಷ, ಮತ್ಸರಪೂರ್ಣ ಕಾರ್ಯಕ್ರಮಗಳನ್ನು ಅಂಗೀಕರಿಸುವುದು. ಇಂತಹ ಪರಿಸ್ಥಿತಿಯು ಅಪೇಕ್ಷಣೀಯವೆ? ಹಿಂದೂದೇಶದ ಸ್ವಾತಂತ್ರ್ಯವಿಂದು ಬಹುದೂರದಲ್ಲಿದೆ. ಅದಕ್ಕಾಗಿ ಎಲ್ಲರ ಲಕ್ಷ್ಯವೂ ಕೇಂದ್ರೀಕರಿಸಲ್ಪಡಬೇಕಾಗಿದೆ. ಆದ್ದರಿಂದ ನಾವೆಲ್ಲರೂ ದೇಶದ ಏಕ ಮಾತ್ರ ಹಿತಾಭಿಲಾಷಿ ಸಂಸ್ಥೆಯಾದ ರಾಷ್ಟ್ರಸಭೆಯನ್ನೇ ಬಲಗೊಳಿಸಬೇಡವೇ? ಅದು ಕಾಲ ಪರಿಸ್ಥಿತಿಗನುಸಾರವಾಗಿ ಬೇರೆ ಬೇರೆ ವಿಧದ ಕಾರ್ಯಕ್ರಮಗಳನ್ನು ಅಂಗೀಕರಿಸಬಹುದು. ಆದರೆ, ಯಾವಾಗಲೂ ದೇಶದ ಸಂಕಷ್ಟ ನಿವಾರಣೆಯ ನಿಶ್ಚಲವಾದ ಧ್ಯೇಯವನ್ನು ಕಟ್ಟಿಕೊಂಡೇ ಅದಿರುವದೆಂಬುದನ್ನು ನೆನಪಿನಲ್ಲಿಡಬೇಕು. ರಾಷ್ಟ್ರೀಯ ಪಕ್ಷವೊಂದೇ ನಮಗಾಗಿ ಇರುವ ಪಕ್ಷ, ಜಸ್ಟಿಸ್ ಪಕ್ಷದಂಥವುಗಳು ತಮಗಾಗಿ ನಮ್ಮನ್ನು ಕರೆಯುತ್ತಿವೆ. ಆದ್ದರಿಂದ ಈ ಸ್ಪಷ್ಟವಾದ ಭೇದವನ್ನು ಲಕ್ಷ್ಯದಲ್ಲಿಟ್ಟುಕೊಂಡು ಮತದಾರರೆಲ್ಲರೂ ಕೊಂಗ್ರೆಸಿನ ಕಡೆಯವರಿಗೇನೆ ಮತವೀಯಬೇಕೆಂಬ ದೃಢ ಸಂಕಲ್ಪ ಮಾಡಿಕೊಳ್ಳುವರೆಂದು ನಂಬುತ್ತೇವೆ.

ಉಡುಪಿ ನಗರ ಸಭೆಯು ತೆರಿಗೆದಾರರ ಮೊರೆ

ಉಡುಪಿಗೆ ಮುನಿಸಿಪಾಲಿಟಿಯೇ ಬೇಡವೆಂದು ಉಡುಪಿಯ ಸಾರ್ವತ್ರಿಕ ಅಭಿಪ್ರಾಯವಿತ್ತು. ಅದಕ್ಕಾಗಿ ಪಟ್ಟಣಿಗರು ಸಾಕಷ್ಟು ಚಳವಳಿಸಿದ್ದರು. ಈಗ ಅದರ ಸ್ಥಾಪನೆಯಂತೂ ಆಗಿಹೋಯಿತು. ಜತೆಯಲ್ಲಿಯೇ ಪಟ್ಟಣಿಗರು ಊಹಿಸಿದ್ದ ಸಂಕಷ್ಟವೂ ಪ್ರತ್ಯಕ್ಷವಾಗಿ ಅನುಭವಿಸಸಿಕ್ಕಿತು. ತೆರಿಗೆಯನ್ನು ವಿಧಿಸಿದ ಕ್ರಮವು ತಪ್ಪೆಂದೂ, ವಿಪರೀತಕರ ಹೊರಿಸಲ್ಪಟ್ಟಿರುವದೆಂದೂ, ಜನತೆಯಲ್ಲಿ ತೀವ್ರ ಅತೃಪ್ತಿಯೆದ್ದಿದೆ. ಎಲ್ಲೆಲ್ಲಿಂದಲೂ ಆ ಮೊರೆಯೇ ಕೇಳಬರುತ್ತಿದೆ. ಇದನ್ನು ಮುನ್ಸಿಪಲ್ ಆಫೀಸರರೂ ಮನಗಂಡಂತಿದೆ. "ಜನಗಳು ಸಾಕಷ್ಟು ಸಹಕರಿಸದ ದೆಸೆಯಿಂದ ತಪ್ಪುಗಳಾಗಿರಬಹುದು." ಎಂದು ಆಫೀಸರರೂ ಒಪ್ಪಿಕೊಳ್ಳುತ್ತಾರೆ. ತಮ್ಮ ಹಿತಕ್ಕಾಗಿ ತಾವು ಸಹಕರಿಸುವದನ್ನೂ ಜನರು ಅರಿತಿಲ್ಲವಾದರೆ ಅದು ಯಾರ ಮೇಲಿನ ದ್ವೇಷದಿಂದಲೂ ಅಲ್ಲ. ಜನರಲ್ಲಿ ಆ ಕುರಿತು ಜಾಗ್ರತಿಯುಂಟಾಗಿರಲಿಲ್ಲ, ಅದನ್ನುಂಟು

ಮಾಡುವ ಧುರೀಣರಿದ್ದಿಲ್ಲ. ಆದರೆ ಆ ಸ್ಥಿಗೊಂದು ಶಿಕ್ಷೆಯು ಬೇಕೆಂದು ಯಾ ರೂ ಬಗೆಯು ಬಾರದು. ನಗರ ಹಿತಕ್ಕಾಗಿ ಇರುವ ನಗರ ಸಭೆಗೆ ಜನತೆಯು ಅತೃಪ್ತಿ ಯೇ ಅಸ್ತಿವಾರವಾಗುವದು ಒಳ್ಳೆತಲ್ಲ. ಈಗ ಮಿಶನರರಾಗಿ ನೇಮಕ ಹೊಂದಿರುವ ಮುನಿಸಿಪಲ್ ಆಫೀಸರರು ಅಫೀಲಿನಲ್ಲಿ ಸೇಕಡಾ 30ರ ವರೆಗೆ, ಹೆಚ್ಚಿನವರ ತೆರಿಗೆ ಯನ್ನು ಕಡಿಮೆ ಮಾಡಿರುವರೆಂಬುದು ಪ್ರತ್ಯವಿದೆ. ಅದಕ್ಕಾಗಿ ನಾವವರನ್ನು ಅಭಿನಂದಿಸುವಾಗ ಮುಂದಕ್ಕೂ ತೆರಿಗೆದಾ ರರ ಕಷ್ಟ ನಿವಾರಣೆಯ ಕಡೆಗೆ ಹೆಚ್ಚಿನ ಲಕ್ಷ್ಯವೀಯುವರೆಂದೂ, ತೆರಿಗೆದಾರರಾ ದರೂ ಎಲ್ಲಾ ಪರಿಸ್ಥಿತಿಯಲ್ಲಿಯೂ ಮುಷ್ಟ ವನ್ನೇ ಪ್ರದರ್ಶಿಸದೆ ತಮ್ಮ ಹಿತಸಾಧನೆ ಯಡೆಯಿದ್ದಲ್ಲಿ ಯೋಗ್ಯರೀತಿಯಿಂದ ಸಹಕ ರಿಸಿ ಉಡುಪಿಯ ಅಭಿವೃದ್ಧಿಯನ್ನು ಸಾಧಿ ಸುವರೆಂದೂ ಹಾರೈಸುತ್ತೇವೆ.

ವಂದನೆ

ಉಡುಪಿಯಿಂದ, ದಕ್ಷಿಣ ಕನ್ನಡ ಜಿಲ್ಲೆಯಿಂದ, ಹಾಗೂ ಕರ್ನಾಟಕದ ಬೇರೆ ಬೇರೆ ಕಡೆಗಳಿಂದ ನಮ್ಮ ಹೊಸ ಸಾಹ ಸಕ್ಕೆ ದೊರೆತ ಪ್ರೋತ್ಸಾಹವು ನಮ್ಮ ನಿರೀ ಕ್ಷೆಗೂ ಮಿಕ್ಕಿದುದು. ವಿಶೇಷವಾಗಿ ಉಡುಪಿ ಯ ಮಹಾ ಜನರು ನಮ್ಮನ್ನು ಉತ್ಸಾಹ ಪೂರ್ವಕವಾಗಿ ಸ್ವಾಗತೀಕರಿಸಿ, ಸಹಕಾರ ವನ್ನಿತ್ತು ಹರಸಿರುವದು, ಉಡುಪಿಗೊಂ ದು ಪತ್ರಿಕೆಯುಅತ್ಯಗತ್ಯವಿದೆ ಎಂಬು ದನ್ನು ಸ್ಪಷ್ಟಪಡಿಸುತ್ತದೆ. ಇದಕ್ಕಾಗಿನಾವು ಎಲ್ಲರಿಗೂ ತುಂಬಾ ಕೃತಜ್ಞರಿರುತ್ತೇವೆ. ಅವರು ಪತ್ರಿಕೆಯ ಪೋಷಣೆಗೆ ಅಗತ್ಯವಾದ ಸಹಕಾರವನ್ನು ಕೊಟ್ಟು ನಮ್ಮನ್ನು ಮುನ್ನ ಡಿಸುವರೆಂಬ ಭರವಸೆಯು ಮೂಡುತ್ತದೆ. ನಮ್ಮ ನವ ಸಂಚಿಕೆಯ ಉದ್ಘಾಟನ ಸಮಾರಂಭಕ್ಕೆ ಪತ್ರ ಮತ್ತು ತಂತೀ ಮೂಲಕ ಸಂದೇಶಗಳನ್ನು ಕಳುಹಿದವರಿ ಗೆಲ್ಲಾ ನಾವು ಈ ಸಮಯದಲ್ಲಿ ಕೃತಜ್ಞತಾ ಪೂರ್ವಕ ವಂದನೆಯನ್ನರ್ಪಿಸುತ್ತೇವೆ.

ವಿನಂತಿ

ನವಯುಗದ ಧ್ಯೇಯ, ಸಾಧನೆಗಳ ಪರಿಚಯವನ್ನು ನಾವು ಕಳೆದ ಸಂಚಿಕೆ ಯಲ್ಲಿ ಮಾಡಿಕೊಟ್ಟಿದ್ದೇವೆ. ಪತ್ರಿಕೆಯು ಸ್ವತಂತ್ರವಾಗಿ ಜನಸೇವೆ ಮಾಡುವಂತೆ ನಮಗೆ ಬೇಕಾಗುವ ಎಲ್ಲಾ ಸಹಾಯಗ ಳನ್ನು ಒದಗಿಸಿ ಕೊಡುವದು ಕನ್ನಡಿಗ ರನ್ನು ಕೂಡಿದೆ. ಅವರ ಕಣ್ಣ ಮುಂದೆ ಶೃಂಗಾರವಾಗಿ ನಲಿಯುವದಕ್ಕೋಸ್ಕರ ನವ ಯುಗವಿಂದು ತನ್ನ ಬಂಧು-ಬಾಂಧವ ರಿಂದ ಬಳುವಳಿಯನ್ನಪೇಕ್ಷಿಸುತ್ತದೆ. ಅದ್ದ ರಿಂದ ಕನ್ನಡಿಗರೆಲ್ಲರೂ ಕೂಡಲೆ ಚಂದಾ ದಾರರಾಗಿಯೂ, ಜಾಹೀರಾತಿನ ಮೂಲಕ ವೂ, ನವಯುಗಕ್ಕೆ ಕೈಕೊಡಬೇಕಾಗಿ ನಮ್ಮ ಆಗ್ರಹ ಪೂರ್ವಕ ವಿನಂತಿ.

ಉ ಡು ಪಿ

ಮಠಾಧಿಪತಿಗಳ ಮಾನಪತ್ರ.

ಉಡುಪಿ ಮುನಿಸಿಪಾಲಿಟಿಗೆ ಸರ್ವ ಸಮ್ಮತಿಯಿಂದ ಚೇಯರ್‌ಮೇನರಾಗಿ ಆರಿ ಸಲ್ಪಟ್ಟ ಶ್ರೀ. ಎಡ್ವಕೇಟ್ ಆರೂರು ಲಕ್ಷ್ಮೀ ನಾರಾಯಣರಾಯರಿಗೆ, ಆದಿತ್ಯವಾರ ಸಂಜೆ ಶ್ರೀಕೃಷ್ಣ ದೇವಸ್ಥಾನದ ಭೋಜನಶಾಲೆಯ ಮಾಳಿಗೆಯಲ್ಲಿ ಅಷ್ಟ ಮಠಾಧಿಪತಿಗಳು ಇಲ್ಲಿಯ ಸಬ್ ಮೆಜಿಸ್ಟ್ರೇಟರಾದ ಶ್ರೀ ಸುಂದ ರೇಶಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಮಾನಪತ್ರ ವಿತ್ತು ಸತ್ಕರಿಸಿದರು ಈ ಸಂದರ್ಭದಲ್ಲಿ ಸುಮಾರು 200 ಮಂದಿ ಮಹನೀಯರು ಹಾಜರಿದ್ದರು. ಪ್ರಥಮದಲ್ಲಿ ಎಲ್ಲರಿಗೂ ಟೀಪಾರ್ಟಿ ಸತ್ಕಾರವು ಪರಿಷ್ಕಾರವಾಗಿ ನಡೆ ಯಿತು. ಆ ಮೇಲೆ ಪ್ರಾರ್ಥನೆ ನಡೆದು

ದಕ್ಷಿಣಕನ್ನಡ

ಪರಿಯಾಯ ಮಠದ ಏಜೆಂಟರಾದ ಶ್ರೀ ವಿಸಾಯಾಳ ನರಸಿಂಹಾಚಾರ್ಯರು, ಸಭೆ ಸೇರಿದ ಉದ್ದೇಶವನ್ನು ವಿವರಿಸಿ ಹೇಳಿ, ಅಷ್ಟಮಠಗಳವರೆಲ್ಲರ ಸಹಿ ಇರುವ ಛಾಪಿತ ಮಾನಪತ್ರವನ್ನು ಓದಿಹೇಳಿದರು. ಅದರಲ್ಲಿ ಶ್ರೀ ಆರೂರವರ ಯೋಗ್ಯತೆ, ಜನಪ್ರಿಯತೆ ಉದಾರತೆಯೇ ಮೊದಲಾದ ಗುಣಗಳನ್ನು ಪ್ರಶಂಸಿಸಿ, ಅವರು ತನ್ನ ಕರ್ತವ್ಯದಲ್ಲಿ ಜಯಶೀಲರಾಗುವಂತೆ ಹರಸಲಾಗಿತ್ತು. ಅಧ್ಯಕ್ಷರು ಮಾನಪತ್ರವನ್ನು ಶ್ರೀ ಆರೂರ ವರಿಗೊಪ್ಪಿಸಿದರು ಅನಂತರ ಉಡುಪಿ ಮಿಶನ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ವೆಂಕಟ್ರಮಣಾಚಾರ್ಯರು, ಶ್ರೀ ಆರೂರರ ಸೌಮ್ಯಗುಣದ ಕುರಿತು ಪ್ರಸ್ತಾ ಪಿಸಿ, ಈಗ ಉಡುಪಿಯ ನಾಗರಿಕರನ್ನಿದಿ ರಿಸಿರುವಂತಹ ವಿಪರೀತ ತೆರಿಗೆಯ ವಿಶ್ವ ರೂಪದ ಭೀಕರತೆಯನ್ನು ಕಡಿಮೆ ಮಾಡು ವರೆ ಶ್ರೀ ಆರೂರರಂತಹ ಸೌಮ್ಯ ಗುಣ ದವರಿಂದಲೇ ಸಾಧ್ಯವೆಂದರು. ಶ್ರೀ ವಕೀಲ ರಾಮನಾಥಪೈಗಳು ಶ್ರೀ ಆರೂರರ ಜನಪ್ರಿಯತೆ, ವಿನಯಪರತೆ, ಎಲ್ಲರನ್ನೂ ಒಲಿಸಬೇಕೆಂಬ ಕಾಂಕ್ಷೆಯೇ ಮೊದಲಾದ ಗುಣಗಳನ್ನೆತ್ತಿಹೇಳಿ, ಅವರೇ ಚೇರ್ಮೆನರ ಪದವಿಗೆ ಅರ್ಹರಾದವರೆಂದೂ, ಅವರು ತನ್ನ ಹೊಸ ಹುದ್ದೆಯನ್ನು ಜಯ ಶೀಲವಾಗಿ ನಡಿಸಿ, ಅಧಿಕಾಧಿಕವಾಗಿ ಜನ ಪ್ರಿಯರಾಗಲೆಂದು ತಾನು ಶ್ರೀಕೃಷ್ಣನೊ ಡನೆ ಪ್ರಾರ್ಥಿಸುವೆನೆಂದೂ ಹೇಳಿದರು. ಶ್ರೀ ವಕೀಲ್ ವಿಠಲ ಕಾಮತರು ಉಡುಪಿ ಯವರನ್ನು ವಿಶ್ವರೂಪವು ಇದಿರಿಸಿದೆ ಎಂಬ ಶ್ರೀ ವೆಂಕಟ್ರಮಣಾಚಾರ್ಯರ ಮಾತು ನಿಜ. ಅಂತಹ ಸ್ವರೂಪದ ಉಗ್ರತೆಯನ್ನು ಪ್ರತಿ ಉಗ್ರತೆಯಿಂದಲೇ ನಿರೋಧಿಸಿದರೆ ವಿಪರೀತ ಪರಿಣಾಮವಾಗಬಹುದು. ಆ ಉಗ್ರತೆಯನ್ನು ಶಮನಿಸಲು ಶ್ರೀ ಆರೂ ರವರಂತಹ ಶಾಂತಗುಣವೇ ಬೇಕಾದುದು. ಆದರೆ ಆರೂರವರಲ್ಲಿ ಒಂದು ದೋಷವಿದೆ. ಅವರು ಅಧಿಕಾರಿಗಳ ಆರಾಧಕರು. ಅದ ನ್ನವರು ಬಿಡಬೇಕು. ನಿಶ್ಚಿತ ಧೋರಣೆ ಯಿಂದ ಜನಹಿತ ಸಾಧನೆ ಮಾಡಬೇಕೆಂ ದರು. ಶ್ರೀ ಆರೂರವರು, ತನಗೆ ಮಾನ ಪತ್ರವಿತ್ತು ಗೌರವಿಸಿದ ಅಷ್ಟಮಠೀಯರಿ ಗೂ, ಉಡುಪಿಯ ಜನರಿಗೂ ಹೃತ್ಪೂರ್ವಕ ವಂದನೆಯನ್ನರ್ಪಿಸಿದರು. ಮತ್ತು ತಾನು ತನ್ನಿಂದ ಕೂಡಿದ ಮಟ್ಟಿಗೆ ಮನಃಪೂರ್ವ ಕವಾಗಿ ಉಡುಪಿಯ ಜನಹಿತಸಾಧನೆ ಮಾ ಡಿ, ಈಗ ಹೆಚ್ಚಿಗೆ ಹೊರಿಸಲ್ಪಡುವುದೆಂದಿ ರುವ ತೆರಿಗೆಯನ್ನಿಳಿಸಲೆತ್ನಿಸುವೆನು. ಇದ ರಲ್ಲಿ ಈಗ ಕಮಿಶನರಾಗಿ ನೇಮಿಸಲ್ಪಟ್ಟಿ ರುವ ನಮ್ಮ ಸ್ಪೆಶ್ಯಲ್ ಆಫೀಸರರೂ ತನ್ನ ಸಂಗಡ ಸಹಕರಿಸದಿರಲಾರರು. ಯಾರಿಗೂ ಮುನಿಸಿಪಲ್ ಮೆಂಬರಿಕೆಯಾಗಲೀ, ಚೇ ಯರ್‌ಮೆನ್ ಪದವಿಯಾಗಲೀ ಗೌರವ ಕ್ಕಾಗಿ ಬೇಕಾಗಿಲ್ಲ. ಮುನಿಸಿಪಾಲಿಟಿಯಾ ಗವಂತೆ ಯಾದಾಗಲೂ ಮಾಡುವುದಿದ್ದರೆ, ತಾವೆಲ್ಲರೂ ತಮ್ಮ ಮೆಂಬರಿಕೆಗೆ ರಾಜಿ ನಾಮೆ ಕೊಡಲು ಸಿದ್ಧರಿರುವೆವು ನಾವೇ ಮುನಿಸಿಪಾಲಿಟಿ ಬೇಡವೆಂದು ಪ್ರಯತ್ನಿಸಿ

ಇದೇ ಬರುವ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿ ಚುನಾವಣೆಯಲ್ಲಿ

S. U. PANIADY
Managing Director:—
SUPPLY AGENCY, LTD.
Director:— The Canara Land Investments, Ltd.
Director:— The Canara Mutual Assurance Co., Ltd.
Ex-Secretary — Udipi Taluk Congress Committee.
Ex-Member Karnataka Provincial Congress Committee & All India Congress Committee.
1st Dictator of the Satyagraha Movement at Udipi in 1930.

ಕುಂದಾಪುರ ಡಿವಿಜನಿಗಿರುವ

ಒಂದು ಜನರಲ್ ಸೀಟಿಗೆ

ಅನೇಕ ಮತದಾರರ ಅಪೇಕ್ಷೆ ಮೇರೆಗೆ

ನಾನು ಉಮೇದುವಾರನಾಗಿ ನಿಲ್ಲುವದೆಂದು

ನಿಶ್ಚಯಿಸಿದ್ದೇನೆ.

ಕುಂದಾಪುರ ಡಿವಿಜನಿನ ಮತದಾರರ ಹಿತದ ದೃಷ್ಟಿಯಿಂದಲೂ ಕೇವಲ ಮತದಾರರ ಪ್ರೋತ್ಸಾಹದಿಂದಲೂ ನಿಲ್ಲುವುದರಿಂದ ಯಾವ ಪಾರ್ಟಿಯ ಪರವಾಗಿಯೂ ನಿಲ್ಲದೆ ಕೇವಲ ಸ್ವತಂತ್ರನಾಗಿಯೇ ಉಮೇದುವಾರನಾಗಿ ನಿಲ್ಲುವೆನು.

ಆದುದರಿಂದ ಕುಂದಾಪುರ ಡಿವಿಜನಿನ

ಎಲ್ಲ ಮತದಾರರು ತಮ್ಮ ಸಹಕಾರವನ್ನು

ನನಗೆ ಕೊಡಬೇಕಾಗಿ ವಿನಂತಿ.

ಉಡುಪಿ,
5—9—1936 } ಎಸ್. ಯು. ಪಣಿಯಾಡಿ.

ದವರು, ಆದರೆ ಈಗ ಅದು ಅನಿವಾರ್ಯವಾಗಿ ಬಂದಿರುವಾಗ ಅದನ್ನು ಸ್ವೀಕರಿಸಿ, ಅದರಿಂದಾಗುವ ಕೆಡುಕುಗಳನ್ನು ಆದಷ್ಟು ಕಡಿಮೆ ಮಾಡಲೆತ್ನಿಸುವುದು ಒಳ್ಳೇದು. ತಾನು ಯಾವಾಗಲೂ ಜನರಸಂಕಷ್ಟವನ್ನು ತಿಳಕೊಂಡು ಅವನ್ನು ನಿವಾರಿಸಲು ಸಿದ್ಧನಿರುವೆನು. ಜನಸೇವೆಗಾಗಿಯೇ ತಾನೀ ಹುದ್ದೆಯನ್ನು ವಹಿಸಿರುವುದಲ್ಲದೆ ಗೌರವಕ್ಕಲ್ಲೆಂದು ದೀರ್ಘಭಾಷಣವಿತ್ತರು. ಕಡೆಗೆ ಅಧ್ಯಕ್ಷರು, ಶ್ರೀ ಆರೂರುರವರ ವಿನಯ ಔದಾರ್ಯಾದಿಗುಣಗಳನ್ನು ಪ್ರಶಂಸಿಸಿ, ಕರವು ಹೆಚ್ಚಿಗೆಯಾಗಿರುವುದು ನಿಜವೆಂಬುದನ್ನು ತಿಳಿಸಿ, ಅವನ್ನಿಳಿಸಿ, ಉಡುಪಿಯು ನಾಗರೀಕ ಸೌಕರ್ಯಗಳನ್ನೆಲ್ಲಾ ಪಡೆಯುವಂತೆ ಚೇಯರ್‌ಮೇನರು ಪ್ರಯತ್ನಿಸಿ ಜಯಶೀಲರಾಗಲೆಂದು ಹಾರೈಸಿದರು. ಕೊನೆಯಲ್ಲಿ ಶ್ರೀ ಕೊಟ್ಟಿಕಾರ್ ಪದ್ಮನಾಭಯ್ಯಗಳು, ಜನತೆಯ ಪರವಾಗಿ, ಮಠಾಧಿಪತಿಗಳನ್ನು ವಂದಿಸಿ, ಕರ ಇಳಿಸುವ ವಿಷಯದಲ್ಲಿ ಮೊದಲು ಸ್ಪೆಶ್ಯಲ್ ಆಫೀಸರರಾಗಿದ್ದು ಈಗ ಕಮಿಶನರಾಗಿರುವ ಶ್ರೀ ನಾಯ್ಕರು ಹೆಚ್ಚಿನ ಉದಾರತೆ ತೋರಿಸದಿರಲಾರರೆಂದರು. ಸಂಸ್ಕೃತ ಕೋಲೇಜಿನ ಅಧ್ಯಾಪಕರಾದ ಶ್ರೀ ಶ್ರೀನಿವಾಸ ಭಟ್ಟರು ಸರ್ವರಿಗೂ ವಂದನೆಯನ್ನರ್ಪಿಸಿದರು. ಮಠಾಧಿಪತಿಗಳು ಈ ರೀತಿ ಜನಮುಖಂಡರನ್ನು ಗೌರವಿಸಿದುದು. ಇದೇ ಪ್ರಥಮಸಲವೆನ್ನಬಹುದು ಜನತೆಯನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಅವರ ಸಹಾನುಭೂತಿ ಸಹಕಾರದಿಂದ ಕೆಲಸ ಮಾಡುವುದರಲ್ಲಿ ಈಗಿನ ಪರಿಯಾಯ ಮಠದವರೇ ಮೊದಲಾದವರ ಪ್ರಯತ್ನವು ಸ್ತುತ್ಯವಿದೆ

ತಿದ್ದುಪಡಿ

ಕಳೆದವಾರ ಮಿತ್ರಮಂಡಲಿಯ ಸ್ಥಾಪನಾಕರ್ತರಾದ ಶ್ರೀ. ಕೆ ಗೋಪಾಲಕೃಷ್ಣ ಕಾಮತರು ದಿವಂಗತರಾದರೆಂದು ಪ್ರಕಟಿಸಲಾಗಿತ್ತು ಮೃತರ ಹೆಸರು 'ಗೋಪಾಲಕೃಷ್ಣ ಕಾಮತ್' ಎಂದಲ್ಲ; ಕೆ. ಬಾಲಕೃಷ್ಣ ಕಾಮತ್ ಎಂದಾಗಬೇಕಾಗಿದೆ.

ಕಳೆದ ಸಂಚಿಕೆಯಲ್ಲಿ ಉಡುಪಿ ಮುನಿಸಿಪಾಲಿಟಿ ಅಧ್ಯಕ್ಷರ ಚುನಾವಣೆ' ಎಂಬ ಶಿರೋನಾಮದ ಕೆಳಗೆ, ಆಕ್ಷೇಪಣಾ ಅರ್ಜಿ ಕೊಟ್ಟವರ ಹೆಸರುಗಳಲ್ಲಿ ಶ್ರೀಯುತ ಬೈಲೂರು ವಾಸುದೇವರಾಯರ ಹೆಸರು ಬಿಟ್ಟು ಹೋಗಿಯದೆ ಮತ್ತು ಕಳೆದ ಸಂಚಿಕೆಯನ್ನು ಅತ್ಯವಸರದಿಂದ ಮುದ್ರಿಸ ಬೇಕಾಗಿ ಬಂದುದರಿಂದ ಮುದ್ರಣ ದೋಷದಿಂದಾಗಿ ಕೆಲವು ಅಕ್ಷರ ಲೋಪಗಳೇ ಮೊದಲಾದ ತಪ್ಪುಗಳಾಗಿರುವದರಿಂದ ವಾಚಕರು ಮನ್ನಿಸಬೇಕಾಗಿ ವಿನಂತಿ. **ಸಂ. ನ**

ಉಡುಪಿ ಮುನಿಸಿಪಾಲಿಟಿಯ ಸ್ಪೆಶ್ಯಲ್ ಆಫೀಸರರಾಗಿದ್ದ ಶ್ರೀ. ಎಸ್. ಯು ಕೃಷ್ಣನಾಯಕರು, ಸದ್ರಿ ಮುನಿಸಿಪಾಲಿಟಿಯ ಕಮಿಶನರರಾಗಿ ಸೇವಕ ಹೊಂದಿರುವರು.

ಅಧ್ಯಾಪಕರ ಸಭೆ.

ಉಡುಪಿ ಸರ್ಕಲಿನ ಅಧ್ಯಾಪಕರ ಸಭೆಯು ಇದೇ ತಾ 6-9-36ರಲ್ಲಿ ಘಂಟೆ 2ಕ್ಕೆ ಸರಿಯಾಗಿ ಮೊಡರ್ನ್ ಶಾಲಾಧ್ಯಾಪಕರಾದ ಶ್ರೀಯುತ ಆನಂದರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಯುತ ಲಕ್ಷ್ಮಣನಾಯ್ಕರ ಗಣಿತ ಪಾಠ, ಶ್ರೀ ಟಿ ಮಹಾಲಿಂಗ ಹೆಗ್ಗಡೆಯರ ಪದ್ಯಪಾಠ, ಈ ಎರಡು ಮಾದರಿ ಪಾಠಗಳು ಕೊಡಲ್ಪಟ್ಟವು. ಶ್ರೀ ಕಾರ್ಕಳ ನಾರಾಯಣ ಶೆಟ್ಟರು ಗೋಪಾಲನೆಯ ಕುರಿತು ಭಾಷಣವಿತ್ತರು.

ಸ್ಥಳಾಭಾವದಿಂದ ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರರ ಸಂಘದ ಮಹಾ ಸಭೆಯ ಪ್ರೊಸಿಡಿಂಗ್ಸ್, ದಕ್ಷಿಣ ಕನ್ನಡ ಜಿಲ್ಲೆ ವರ್ಗದಾರರ ಸಂಘದ ಶಾಖೆಯಾದ ನಿಡ್ಲೆ ಗ್ರಾಮದ ಭೂಸ್ವಾಮಿಕರ ಸಂಘದ ಮಹಾಸಭೆಯ ಪ್ರೊಸಿಡಿಂಗ್ಸ್, ರೈತರಿಗೆ ಸರಕಾರದವರು ಕೊಡುವ ರಿಯಾಯತಿಗಳು ಮತ್ತು ರೈತರ ಪಾಡು, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಪ್ರಕಟಣ ಮೊದಲಾದುವನ್ನು ಈ ಸಲ ಪ್ರಕಟಿಸಲು ಅನಾನುಕೂಲವಾದುದಕ್ಕಾಗಿ ವಿಷಾದಿಸುತ್ತೇವೆ.

ಶಿರ್ವ—ಎಲ್ಲಾ ಸಮಾಜಗಳ ಪ್ರತಿನಿಧಿಗಳನ್ನೊಳಗೊಂಡು, ರಾಜಿಯಿಂದ ರಚಿಸಲ್ಪಟ್ಟ ಶಿರ್ವ ಪಂಚಾಯತ್ ಬೋರ್ಡಿಗೆ ಇಲ್ಲಿಯ ತರುಣ ವಕೀಲರಾದ ಶ್ರೀ ಎಸ್. ಅಣ್ಣಯ ಹೆಗ್ಗಡೆಯರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು

ಫಲಿಮಾರು— ಸ್ಥಳೀಕ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ರಾಮಾಂಜನೇಯ ನಾಟಕ ಸಂಘದವರು ತಾ 16-8-36ರನೇ ವಿಪಾರ, ಐದನೇ ಜೋರ್ಜ ಸಾರ್ವಭೌಮರಸ್ಮಾರಕ ಫಂಡಿನಸಹಾಯಾರ್ಥವಾಗಿ ಗೃಹಲಕ್ಷ್ಮಿಯೆಂಬ ಸಾಮಾಜಿಕ ನಾಟಕವನ್ನು ಕುಂದಾಪುರ ಡಿವಿಜನಿನ ಸಬ್‌ಕಲೆಕ್ಟರ್ ದೊರೆಗಳವರ ಅಧ್ಯಕ್ಷತೆಯಲ್ಲಿ ಕಾರ್ಕಳ ಶಾಲೆಯಲ್ಲಿ ಆಡಿ ಸುಮಾರು ಯಿನ್ನೂರು ರೂಪಾಯಿಗಳನ್ನು ಶೇಖರಿಸಿ ಸದ್ರಿ ಫಂಡಿಗೆ ಅರ್ಪಿಸಿರುತ್ತಾರೆ.

ಫಲಿಮಾರಿನ ಶಾಲಾ ಮೈದಾನು ಹೆಚ್ಚಿನ ಪಾಳು ಸ್ಥಿತಿಯಲ್ಲಿದ್ದುದರಿಂದ ಗ್ರಾಮಸ್ಥರೆಲ್ಲಾ ಸಭೆಸೇರಿ ಬಿಟ್ಟಿ ಕೆಲಸದಿಂದ ಸದ್ರಿ ಮೈದಾನನ್ನು ದುರಸ್ತಿ ಪಡಿಸುತ್ತಲೂ, ಗಾಳಿ ಸಸಿಗಳನ್ನು ನಟ್ಟು ಒಳ್ಳೆಯ ಶೋಭಾಯಮಾನವಾಗಿ ಮಾಡಿರುತ್ತಾರ ಕಂಟ್ರ್ಯಾಕ್ಟರರ ಮೂಲಕ ಸದ್ರಿ ಶಾಲಾಸ್ಥಳವನ್ನು ದುರಸ್ತಿ ಪಡಿಸುವದಾದರೆ ರೂಪಾಯಿ ಇನ್ನೂರಕ್ಕೂ ಮಿಕ್ಕಿದ ಖರ್ಚು ಬೇಕಾಗುತ್ತಿತ್ತು. ಊರ ಮಹನೀಯರ ಪೈಕಿ ಶ್ರೀ ಫಲಿಮಾರು ಮಠದ ಕೊಟ್ಯಾರಿಗಳೂ, ಪಂಚಾಯತ ಬೋರ್ಡಿನ ಪ್ರೆಸಿಡೆಂಟರಾದ ಶ್ರೀಯುತ ನರಸಿಂಹ ಪ್ರಭುಗಳೂ, ಪ್ರಮುಖ ವರ್ಗದಾರರಲ್ಲೊಬ್ಬರಾದ ಶ್ರೀಯುತ ಮನ್ನೋಣಿ ರಂಗರಾಯರೂ ತುಂಬಾ ಪರಿಶ್ರಮ ಪಟ್ಟು ಸರ್ವರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ.

ಮಂಗಳೂರು

(ನಮ್ಮ ಸ್ವಂತ ಬಾತ್ಮಿದಾರರಿಂದ)

ತಾ. 7-9-'36

ಸಾರ್ವಭೌಮರ ಸ್ಮಾರಕನಿಧಿ

ಕಳೆದ ತಾ. 5ನೇ ಶನಿವಾರ ದಿನ ಸಾಯಂಕಾಲ ಸ್ಥಳೀಯ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಇಂಗ್ಲಿಷ್ ಮತ್ತು ಕನ್ನಡ ನಾಟಕಗಳೂ, ಪ್ರಹಸನಗಳೂ, ವಿವಿಧ ವಿನೋದಾವಳಿಗಳೂ, ನಡೆದುವು. ಜಿಲ್ಲಾ ಕಲೆಕ್ಟರ್ ಧೊರೆಗಳಾದ ಖಾನ್ ಬಹದ್ದೂರು ಮುಹಮ್ಮದ್ ಹುಮಾಯೂನ್ ಸಾಹೇಬ್ ಬಹದ್ದೂರವರು ಅಗ್ರಾಸನ ವಹಿಸಿದ್ದರು ಆ ದಿನದ ಟಿಕೇಟು ಮಾರಾಟದಿಂದ ಬಂದ ಹಣವು ಜಾರ್ಜ್ ಸಾರ್ವಭೌಮರ ಸ್ಮಾರಕನಿಧಿಗೆ ಕೊಡಲ್ಪಟ್ಟಿತು.

ಎತ್ತಿನ ಗಾಡಿಯವರು ಮುಷ್ಕರ ಹಿಡಿದರು

ಮೊನ್ನೆಯದಿನ ಮಂಗಳೂರ. ನಗರದ ಗಾಡಿಯಾಳುಗಳು ನಗರ ಸಭೆಯ ವರೆಗೆ ಗುಂಪು ಕಟ್ಟಿಕೊಂಡು ಹೋಗಿ ತಮಗೆ ಗಾಡಿಗಳನ್ನು ನಿಲ್ಲಿಸುವುದಕ್ಕೆ ನಿಲಾಣಗಳಿಲ್ಲದ್ದರಿಂದ ತಮಗಾಗುವ ಕಷ್ಟನಷ್ಟಗಳನ್ನು ವಿವರಿಸಿದರು, ಮುನಿಸಿಪಲ್ ಕಮಿಶನರು ಅವರ ಹೇಳಿಕೆಗಳನ್ನು ಕೇಳಿ ಅವರ ಕಷ್ಟ ಪರಿಹಾರವಾಗಬೇಕಾದರೆ ಕಲೆಕ್ಟರ್ ದೊರೆಗಳಿಗೆ ಅರಿಕೆಮಾಡಬೇಕೆಂದರು. ಗಾಡಿಯವರು ಕಲೆಕ್ಟರ್ ಧೊರೆಗಳವರಿಗೆ ತಮ್ಮ ಕಷ್ಟಗಳನ್ನು ಬಿನ್ನೈಸಿಕೊಳ್ಳಲಾಗಿ ಅವರು ಅಲ್ಪವಾದ ತಪ್ಪುಗಳಿಗೆ ಗಾಡಿಯವರಿಗೆ ದಂಡನೆಯಾಗದಂತೆ ಹುಕುಮು ಕೊಡುವುದಾಗಿ ಅಭಯವಿತ್ತರು. ಗಾಡಿಯವರು ಸಂತುಷ್ಟರಾಗಿ ಹಿಂತಿರುಗಿದರು.

ಫಲಪುಷ್ಪ ಪ್ರದರ್ಶನ

ಜಿಲ್ಲಾ ಎಡ್ವಾನ್ಸ್‌ಮೆಂಟ್ ಅಸೋಸಿಯೇಶನಿನವರು ಜರಗಿಸಲಿರುವ ಫಲಪುಷ್ಪ ಪ್ರದರ್ಶನದಲ್ಲಿ ಭಾಗವಹಿಸುವವರು ಇದೇ ತಾ 30ರೊಳಗೆ ಅರ್ಜಿ ಬರೆದುಕೊಳ್ಳಬೇಕಾಗಿಯೂ, ಆ ಮೇಲೆ ತಾರೀಕು 21ರೊಳಗೆ ಅರ್ಜಿ ಬರಕೊಳ್ಳುವವರು ಒಂದೂವರೆಯಷ್ಟು ಫೀಸನ್ನು ಕೊಡಬೇಕೆಂದೂ ಜಿಲ್ಲಾ ಕಲೆಕ್ಟರ್ ಧೊರೆಗಳ ಬಂಗ್ಲೆಯಲ್ಲಿ ಸೇರಿದ ಪ್ರದರ್ಶನ ಉಪಸಮಿತಿಯ ಸಭೆಯಲ್ಲಿ ನಿರ್ಧಾರವಾಯಿತು.

ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ,

ಮಂಗಳೂರು

ಜನತೆಯ ಅವಗಾಹನೆಗೆ:

ಸ್ಥಳೀಕ ಪರಿಸ್ಥಿತಿಯಿಂದಲೂ, ವಾರ್ತಾಪತ್ರಿಕೆಗಳಿಂದಲೂ ತಿಳಿದು ಬರುವಂತೆ ಮಳೆಯ ದೆಸೆಯಿಂದಾಗಿಯೂ, ಅಡಿಕೆ ಭತ್ತ ಮೊದಲಾದುವುಗಳಿಗೆ ಸಂಭವಿಸಿರುವ ರೋಗಗಳಿಂದಲೂ, ಈ ವರ್ಷದ ಪೈರಿಗೆ ವಿಶೇಷ ಹಾನಿಯೂ, ಹಾವಳಿಯೂ ತಗಲಿರುವುದೆಂದು ತಿಳಿದು ಬರುತ್ತದೆ: ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಜನತೆಯ ಕಷ್ಟನಷ್ಟಗಳನ್ನು ಪ್ರಚುರಗೊಳಿಸಿ, ಅದರ ನಿವಾರಣೆಗಾಗಿ ಚಳವಳವನ್ನು ಹೂಡಿ, ಭೂಕಂದಾಯ ಮಾಫಿ ಮತ್ತು ಇನ್ನಿತರ ಕಷ್ಟನಿವಾರಣೆಗಾಗಿ ಹೆಚ್ಚಿನ ಪ್ರಯತ್ನ ಮಾಡಬೇಕಾಗಿದೆ ಇಂತಹ ವಿಧಾನವನ್ನನುಸರಿಸಬೇಕಾದರೆ ಎಲ್ಲೆಲ್ಲ ಹೆಚ್ಚಿನ ಮಳೆಯಿಂದಾಗಿ ಬೆಳೆಗೆ ಹಾನಿಯುಂಟಾಗಿದೆ, ಅಡಿಕೆ, ಭತ್ತ ಮುಂತಾದ ಪೈರುಗಳ ರೋಗದ ದೆಸೆಯಿಂದ ಎಷ್ಟು ನಷ್ಟವುಂಟಾಗಿದೆ ಎಂಬಿವೇ ಮೊದಲಾದ ವಿಷಯಗಳನ್ನು ವಿಶದವಾಗಿ ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಗಾಗಲಿ, ಸಮ್ಮಂಧಪಟ್ಟ ತಾಲೂಕು ಕಾಂಗ್ರೆಸ್ ಕಮಿಟಿಗಾಗಲೀ ಕೂಡಲೇ ತಿಳಿಸಬೇಕು ಅಗತ್ಯವಿರುವಲ್ಲಿ ಕಾಂಗ್ರೆಸಿನ ಅಧಿಕಾರಿಗಳು ಸ್ಥಳ ತನಿಕಿಗೆ ಬರಲು ಸಿದ್ಧರಿರುವರು ಆದುದರಿಂದ ಮೇಲೆ ಹೇಳಿದ ಕಷ್ಟ ನಷ್ಟಗಳಿಗೊಳಗಾದವರು ಮತ್ತು ರಾಷ್ಟ್ರೀಯ ಹಿತೈಷಿಗಳು ಕೂಡಾ ಈ ವಿಚಾರವನ್ನು ಆದಷ್ಟು ತ್ವರ್ಯದಲ್ಲಿ ನಮ್ಮ ಗೋಚರಕ್ಕೆ ತರಬೇಕಾಗಿ ವಿನಂತಿ.

ಭೋಜರಾವ್, ಬೋಳಾರ್,
ಕಾರ್ಯದರ್ಶಿ,
ಜಿಲ್ಲಾ ಕಾಂಗ್ರೆಸ್ ಕಮಿಟಿ, ಮಂಗಳೂರು.
2-9-1936.

ದಕ್ಷಿಣಕನ್ನಡ ಜಿಲ್ಲಾ ಭೂಸ್ವಾಮಿಕರ ಸಂಘ

ಇದೇ ತಿಂಗಳ ತಾ. ೩೦ರಲ್ಲಿ ಕೂಡಿದ ನಮ್ಮ ಜಿಲ್ಲಾ ರೈತರ ಸಂಘದ ಕಾರ್ಯನಿರ್ವಾಹಕ ಸಭೆಯಲ್ಲಾದ ನಿರ್ಣಯದ ಮೇರೆಗೆ ಕೊಳೆರೋಗದಿಂದ ಅಡಿಕೆ ತೋಟಗಳಿಗೆ ಮುಖ್ಯವಾಗಿ ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳಲ್ಲಿ ಉಂಟಾದ ಹಾವಳಿಯಿಂದ ಸಂಭವಿಸಿದ ಸಂಕಷ್ಟಗಳನ್ನು ನಿವೇದಿಸಿಕೊಳ್ಳುವರೆ ನೇಮಕವಾದ ಮಂಡಲದವರು ಇದೇ ತಿಂಗಳ ತಾ. ೨೩ನೇ ಶುಕ್ರವಾರ ಮಧ್ಯಾಹ್ನ ೨ ಘಂಟೆಗೆ ಮದರಾಸಿನಲ್ಲಿ ಮಾನ್ಯ ರೆವಿನ್ಯೂ ಮೆಂಬರರಾದ (ಮುಂಚೆ ಈ ಜಿಲ್ಲೆಯ ಕಲೆಕ್ಟರರಾಗಿದ್ದ) ಸರ್ ಚಾರ್ಲ್ಸ್‌ಸೂಟರ್ ಧೊರೆಗಳ ಮುಂದೆ ಹಾಜರಾಗಿ ಸಂಕಷ್ಟಗಳ ಕುರಿತು ಒಂದು ಬಿನ್ನಹ ಪತ್ರವನ್ನು ಒಪ್ಪಿಸಿ ಬಾಯಿದೆರೆಯಿಂದ ಕೂಡ ಹೇಳಿಕೊಂಡಲ್ಲಿ ಧೊರೆಗಳವರು ಹಾವಳಿಗೆ ತುತ್ತಾದ ಕೆಲವು ಪ್ರದೇಶಗಳನ್ನು ಸ್ವತಹಾ ಸಂದರ್ಶಿಸುವರೆ ಇದೇ ಬರುವ ಸಪ್ಟಂಬರ ತಿಂಗಳಿನ ಕಡೆಯ ಹಪ್ತೆಯಲ್ಲಿ ನಮ್ಮ ಜಿಲ್ಲೆಗೆ ಬರುವದಾಗಿಯೂ, ಅದುವರೆಗೆ ಆ ಕುರಿತು ತನಿಖೆಯನ್ನು ನಡಿಸಲು ಜಿಲ್ಲಾ ಕಲೆಕ್ಟರರವರಿಗೆ ಹುಕುಂ ಕೊಡುವುದಾಗಿಯೂ ಭರವಸೆಯನ್ನಿತ್ತ ಆಶಾಜನಕವಾದ ಸಂತೋಷದ ವಾರ್ತೆಯನ್ನು ಈ ಮೂಲಕ ಸಮ್ಮಂಧ ಪಟ್ಟ ಎಲ್ಲರಿಗೂ ತಿಳಿಸಿಯದೆ.

ಈ ಭಯಂಕರವಾದ ರೋಗವು ಬಾರದಂತೆ ಅಗತ್ಯವಿರುವ ಏರ್ಪಾಡುಗಳನ್ನು ಮಾಡುವರೆ ರೈತರು ತಾವಾಗಿ

ಬಾತ್ಮೀದಾರರಿಗೆ ಮತ್ತು ಲೇಖಕರಿಗೆ ಸೂಚನೆ.

ನಮ್ಮ ಪತ್ರಿಕೆಯ ಪ್ರಕಟಣೆಗಾಗಿ ಬರುವ ಬಾತ್ಮಿಗಳೂ ಲೇಖನಗಳೂ ಕಾಗದದ ಒಂದೇ ಮಗ್ಗುಲಲ್ಲಿ ಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಟ್ಟಿರಬೇಕು. ಸೋಮವಾರದ ಒಳಗೆ ನಮ್ಮ ಕೈಸೇರುವಂತಿದ್ದರೇನೆ ಆ ವಾರದ ಸಂಚಿಕೆಯಲ್ಲಿ ಪ್ರಕಟಿಸಲು ಸಾಧ್ಯ. ಬಾತ್ಮಿಗಳು ಆದಷ್ಟು ಸಂಕ್ಷೇಪವಾಗಿದ್ದು ನಿಷ್ಪಕ್ಷ, ಹಾಗೂ ಅನಾವಶ್ಯಕವಾದ ಟೀಕಾ ವಿರಹಿತವಾಗಿರಬೇಕೆಂದು ಕೋರುತ್ತೇವೆ. ಲೇಖನಗಳು ಹೆಚ್ಚೆಂದರೆ ನವಯುಗದ ನೈಜಿನ ಒಂದು ಪುಟದೊಳಗಿರಬೇಕು. ಪ್ರಕಟಿಸಲ್ಪಡದ ಲೇಖನಗಳಾಗಲೀ ಬಾತ್ಮಿಗಳಾಗಲೀ ಮರುಪತಿಯಾಗ ಬೇಕೆಂದಿಚ್ಛಿಸುವವರು ಅಂಚೆ ಚೀಟನ್ನು ಕಳುಹಿಸಬೇಕಾಗಿದೆ.

ತೀರಾ ಅಸಮರ್ಥರಾಗಿರುವುದರಿಂದ ಆ ಕುರಿತು ಸರಕಾರದವರೇ ಏರ್ಪಾಡುಗಳನ್ನು ಮಾಡುವುದು ಅತೀ ಅಗತ್ಯವಾಗಿದೆಯೆಂದೂ ಆ ಕುರಿತು ಆ ರೋಗ ತಗಲಿದ ಪ್ರದೇಶಗಳನ್ನೆಲ್ಲಾ ಸಂಚರಿಸಿ ಎಲ್ಲೆಲ್ಲಿ ಯಾವ ಯಾವ ತರದ ಏರ್ಪಾಡುಗಳನ್ನು ಮಾಡಬೇಕೆಂದು ನಿರ್ಧರಿಸಬೇಕೆಂತಲೂ ಕೂಡಲೇ ನಿರ್ಧರಿಸುವುದು ಅತ್ಯಾವಶ್ಯಕವೆಂದು ಮೇಲೆ ಕಾಣಿಸಿದ ಮಂಡಲದವರು ಕೃಷಿಖಾತೆಯ ಮಂತ್ರಿವರ್ಯರ ಕೂಡೆ, ಹೇಳಿಕೊಂಡಲ್ಲಿ ಅವರು ಆ ಕುರಿತು ಜಿಲ್ಲೆಯನ್ನು ಕೂಡಲೇ ಸಂದರ್ಶಿಸಿ ರಿಪೋರ್ಟು ಕಳುಹಿಸಬೇಕೆಂದೂ ಕೂಡಲೆ ಕೃಷಿಖಾತೆಯ ಡೈರೆಕ್ಟರಿಗೆ ಟೆಲಿಫೋನ್ ಮೂಲಕ ಸ್ವತಃ ಹುಕುಂ ಕೊಟ್ಟು ಹೆಚ್ಚಿಗೆ ಸಂಗತಿಗಳನ್ನು ಡೈರೆಕ್ಟರರ ಕೂಡೆ ಬಿನ್ನವಿಸಿಕೊಳ್ಳಬೇಕಾಗಿ ಅಪ್ಪಣೆ ಕೊಡಿಸಿದ ಮೇರೆಗೆ ಅದೇ ದಿನ ಮೂರು ಗಂಟೆಗೆ ಮಂಡಲದವರು ಡೈರೆಕ್ಟರರನ್ನು ಕಂಡು ಹೇಳಿಕೊಂಡಲ್ಲಿ ಇದೇ ಸಪ್ಟಂಬರ ತಿಂಗಳ ತಾ. 14ಕ್ಕೆ ಇಲ್ಲಿಗೆ ಖಂಡಿತವಾಗಿ ತಾನು ಬಂದು ಕೆಲವು ಸಮಯ ಸಂಚರಿಸಿ ಈ ಸಂಕಷ್ಟದಿಂದ ಪಾರಾಗುವರೆ ಏನೆಲ್ಲಾ ಏರ್ಪಾಡುಗಳು ಮಾಡಲಿಕ್ಕೆ ಸಾಧ್ಯವಿದೆ ಮತ್ತು ಸರಕಾರದವರು ಆ ಕುರಿತು ಏನೆಲ್ಲಾ ಸಹಾಯವನ್ನು ಮಾಡಲು ಸಾಧ್ಯ ಮತ್ತು ಅವಶ್ಯವಿದೆಯೆಂಬುದನ್ನು ಗೊತ್ತು ಮಾಡಿಕೊಂಡು ಮಂತ್ರಿಗಳಿಗೆ ರಿಪೋರ್ಟುಮಾಡುವೆನೆಂದು ಭರವಸೆಯನ್ನಿತ್ತಿರುತ್ತಾರೆ.

ಮೇಲೆ ಕಾಣಿಸಿದಂತೆ ತನ್ನಿಗೆ ಬರುವ ಮುಂಚೆ ನಾವು ಆ ತನ್ನಿಗೆ ಸಹಾಯವಾಗುವಂತೆ ಏನೆಲ್ಲಾ ಮಾಡಬೇಕೆಂದು ನಿಶ್ಚೈಸುವರೆ ಇದೇ ಬರುವ ಸಪ್ಟಂಬರ ತಾ. ೬ನೇ ಆದಿತ್ಯವಾರ ಸಾಯಂಕಾಲ 4 ಘಂಟೆಗೆ ಪುತ್ತೂರು ರೂರಲ್ ಕ್ರೆಡಿಟ್ ಸೊಸೈಟಿಯ ಕಟ್ಟಡದಲ್ಲಿ ಸಭೆ ಸೇರುವದೆಂತ ನಿರ್ಣಯಿಸಿಯದೆ. ಆ ಸಭೆಗೆ ಕಾಸರಗೋಡು ಮತ್ತು ಪುತ್ತೂರು ತಾಲೂಕಿನ ಎಲ್ಲಾ ಪ್ರಾಂತ್ಯಗಳಿಂದಲೂ ಪ್ರಮುಖ ಅಡಿಕೆ ತೋಟಗಳ ಮಾಲಿಕರು ತಪ್ಪದೆ ಬರಬೇಕಾಗಿ ಅಪೇಕ್ಷಿಸುತ್ತೇನೆ.

ಕೋಟಿ ರಾಮಕೃಷ್ಣ ಕಾರಂತ
ಕಾರ್ಯದರ್ಶಿ,
ಜಿಲ್ಲಾ ಭೂಮ್ಯಾಲಿಕರ ಸಂ.

ಮಂಗಳೂರು ನಗರ ಸಭೆ
ವೆಲೆನ್ಸಿಯಾ ಇಗರ್ಜಿ ಸಂಬಂಧ ನಿರ್ಧಾರ
ಬಿಷೋಪರ ಕಡೆಗೆ ಜಯ

(ನಮ್ಮ ವಿಶೇಷ ಬಾತ್ಮಿದಾರರಿಂದ)
ತಾ. 8-9-36

ಅನೇಕ ಸಮಯದಿಂದಲೂ ಕಂಕನಾಡಿ ವೆಲೆನ್ಸಿಯಾ ಇಗರ್ಜಿಯ ಸಂಬಂಧವಾದ ಚರ್ಚೆಯು ಮಂಗಳೂರು ನಗರ ಸಭೆಯವರ ಮುಂದಿದ್ದಿತಷ್ಟೆ. ಈ ಪ್ರಶ್ನೆಯನ್ನು ತೀರ್ಮಾನಿಸುವ ಉದ್ದೇಶದಿಂದ ನಿನ್ನೆ ದಿನ ಸಾಯಂಕಾಲ ನಗರ ಸಭೆಯ ಒಂದು ವಿಶೇಷ ಸಭೆಯು ನಗರ ಸಭಾಧ್ಯಕ್ಷರಾದ ಮಾನ್ಯ ಡಾ। ಪಿಟ್ಟಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಬಿಷೋಪರ ಕಡೆಯಿಂದಲೂ, ಅರ್ಜಿದಾರರ ಕಡೆಯಿಂದಲೂ ವಕೀಲರುಗಳು ಬಂದಿದ್ದರು. ವಕೀಲ್ ಶ್ರೀ. ಡಬ್ಲ್ಯು ಸಿಕ್ವೇರರು ಅರ್ಜಿದಾರರ ಕಡೆಯಿಂದ ಮಾತಾಡಿದರು. ಅವರು ಹೇಳಿದ್ದೇನೆಂದರೆ (1) ನಗರ ಸಭೆಯವರು ಬಿಷೋಪರಿಗೆ ಸ್ಮಶಾನದ ಸ್ಥಳವನ್ನು ಕೊಡುವಾಗ ಹಾಕಿದ್ದ ಶರತುಗಳನ್ನು ಬಿಶೋಪರು ಮುರಿದಿದ್ದಾರೆ. (2) ಸ್ಮಶಾನದಲ್ಲಿ ಹೂಳಲು ಬಂದವರಿಂದ ಫೀಸು ಪಡೆಯುತ್ತಾರೆ. ಇದು ನ್ಯಾಯ ವಿರುದ್ಧ. ನಗರ ಸಭೆಯವರಿಗೆ ಇದು ನ್ಯಾಯವಾಗಿರುವ ಹಕ್ಕು. (3) ಸ್ಮಶಾನವು ಮಂಗಳೂರಿನ ಕಥೋಲಿಕರ ಒಗ್ಗೆ ಇರತಕ್ಕದ್ದಾದ್ದರಿಂದ ಅದರಲ್ಲಿ ಬೇರೆ ಬೇರೆ ವಿಭಾಗಗಳನ್ನು ಮಾಡಿದುದು ತಪ್ಪು. (4) ಪೋರ್ಚುಗೀಸ್ ಚೇಪಲನ್ನು ಪೆರಿಷ್ ಇಗರ್ಜಿಯಾಗಿ ಮಾಡಿರುವುದು ತಪ್ಪು. ಆದ್ದರಿಂದ ನಗರ ಸಭೆಯವರು ಈ ಸ್ಥಳವನ್ನು ಹಿಂದಕ್ಕೆ ಪಡೆದು ಬಡಜನರ ಹಿತಕ್ಕೆ ಅನುಕೂಲವಾಗುವಂತೆ ಅದನ್ನು ಉಪಯೋಗಿಸಬೇಕು ಮತ್ತು ಬಿಶೋಪರು ಲೆಕ್ಕ ಕೊಡದಿರುವುದು ಸರಿಯಲ್ಲ.

ಬಿಶೋಪರ ಕಡೆಯಿಂದ ಅಡ್ವೊಕೇಟ್ ಡಿ'ಸೋಜರು ಈ ರೀತಿ ಉತ್ತರ ಕೊಟ್ಟರು:(1)ನಗರ ಸಭೆಯವರು ಆರೋಗ್ಯವಿಚಾರದಲ್ಲಿಯೂ, ಸ್ಮಶಾನದ ಸುತ್ತಲೂ ಗೋಡೆ ಹಾಕಿಸುವ ವಿಷಯದಲ್ಲಿಯೂ ಹಾಕಿದ ಶರತುಗಳನ್ನು ಬಿಶೋಪರು ಪಾಲಿಸಿದ್ದಾರೆ. (2) ಧರ್ಮಾರ್ಥವಾಗಿ ಸಮಾಧಿ ಮಾಡಬೇಕೆಂದು ಶರತು ಹಾಕಿಲ್ಲ. ಆ ರೀತಿಯಾಗಿ ಏನಾದರೂ ನಗರ ಸಭೆಯ ವಾಗ್ದಾನಗಳು ಇದ್ದರೆ ಅದನ್ನು ಮುಂದಕ್ಕೆ ತರಬಹುದು. (3)ಕೆಲವಂಶವನ್ನು ಪ್ರತ್ಯೇಕ ಇಡತಕ್ಕದ್ದು ನ್ಯಾಯವಿರುದ್ಧವಲ್ಲ. (4) ಬಡವರನ್ನು ಧರ್ಮಾರ್ಥವಾಗಿ ಸಮಾಧಿ ಮಾಡುತ್ತಾರೆ. (5) ಬಿಶೋಪರು ಟ್ರಸ್ಟಿಗಳ ಸ್ಥಾನದಲ್ಲಿರುವುದರಿಂದ ಅವರನ್ನು ಲೆಕ್ಕಪತ್ರ ಮಾಡಬೇಕೆಂದು ಕೇಳುವ ಅಧಿಕಾರವು ನಗರ ಸಭೆಗಿಲ್ಲ. ಆದ್ದರಿಂದ ಅರ್ಜಿದಾರರ ಆಕ್ಷೇಪಣೆಯು ಮಂಜೂರಾಗಕ್ಕದ್ದಲ್ಲ ಎಂದರು. ಇಕ್ಕಡೆಯ ವಕೀಲರೂ ಸಿವಿಲ್ ಮತ್ತು ಕೆನನ್ ಲಾಪುಸ್ತಕಗಳಿಂದ ಆಧಾರವನ್ನು ಕೊಟ್ಟರು.

ಶ್ರೀಗಳಾದ ಸಿ. ಎಲ್. ಲೋಬೋ, ಕೆ. ಯಂ. ಎಸ್. ಶ್ರೀಷ್ಟ, ಯಂ. ಮಾಧವ ರಾವ್, ಇವರುಗಳು ಬಿಶೋಪರ ಕಡೆಗೆ ಅನುಕೂಲವಾಗಿ ಮಾತಾಡಿದರು.

ಶ್ರೀ। ಕಾರಂತರು ತಮ್ಮ ಅಭಿಪ್ರಾಯವನ್ನು ಸಭೆಯಮುಂದಿದ್ದ ಠರಾವಿನ ಪರವಾಗಿ ಸೂಚಿಸುತ್ತಾ ಹೀಗೆಂದರು:(1)ಬಿಶೋಪರು ಪೋರ್ಚುಗೀಸ್ ಚೇಪಲನ್ನು ಇಗರ್ಜಿಯಾಗಿ ಉಪಯೋಗಿಸಿದ್ದಾರೆಂಬುದಕ್ಕೆ ನಿದರ್ಶನಗಳಿವೆ. ಆದ್ದರಿಂದ ಅದು ಶರತ್ತಿಗೆ ವಿರುದ್ಧ (2) ಹುಗಿಯಲು ಬಂದವರಿಂದ ಫೀಸು ವಸೂಲು ಮಾಡತಕ್ಕದ್ದು ನಗರ ಸಭೆ ಕೆಲಸವಾಗಿದೆ. ಆದ್ದರಿಂದ ಆ ಅಧಿಕಾರವನ್ನು ನಗರ ಸಭೆಯೇ ಹಿಂದಕ್ಕೆ ಪಡೆಯಬಹುದು. (3) ಬಿಶೋಪರು ಮ್ಯಾನೇಜರರ ಸ್ಥಾನದಲ್ಲಿರುವುದರಿಂದ ಅವರ ಲೆಕ್ಕಪತ್ರ ಹಾಜರು ಪಡಿಸುವುದು ನ್ಯಾಯ. (4) ಬಿಶೋಪರು ಆ ಸ್ಥಳದ ಮೇಲ್ವಿಚಾರಣೆಯನ್ನು ಬೇರೆ ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಅದು ಸಹ ನ್ಯಾಯವಲ್ಲ, ಎಂದು ಅನೇಕ ಕಾರಣಕೊಟ್ಟು ಭಾಷಣ ಮಾಡಿದರು.

ಇಷ್ಟರಲ್ಲಿ ರಾತ್ರಿ 9 ಗಂಟೆಯಾಯ್ತು. ಶ್ರೀ। ವೆಂಕಟರಾಯ ಬಾಳಿಗರ ಠರಾವಿನ ಮೇಲೆ ಮತ ತೆಗೆದುಕೊಳ್ಳಲಾಗಿ (ಈ ಠರಾವು ಹಿಂದಿನ ಸಭೆಯಲ್ಲಿ ಬಂದಿತ್ತು) 9 ಮಂದಿ ಠರಾವಿನ ಪರವಾಗಿಯೂ 14 ಮಂದಿ ವಿರೋಧವಾಗಿಯೂ ಮತ ಕೊಟ್ಟರು. ಬಿಷೋಪರ ಕಡೆಯವರು ಗೆದ್ದರು. ಅರ್ಜಿದಾರರ ಆಕ್ಷೇಪಣೆಯು ನಿರಾಕರಿಸಲ್ಪಟ್ಟಿತು.

ಕುಂದಾಪುರ

ಇಲ್ಲಿಯ ಕರ್ನಾಟಕ ಸಾಹಿತ್ಯಸಂಘದ 5ನೇ ವಿಶೇಷ ಸಭೆಯು ತಾರೀಕು 29-8-36ನೇ ಶನಿವಾರ ಅ.ಪ. ಘಂ. 5ಕ್ಕೆ ಕ್ಲಬ ಹೋಲಿನಲ್ಲಿ ಇಲೆಕ್ಷನ್ ಆಫಿಸರರಾದ ಮ. ರಾ ಬಿ. ಗಣೇಶ ಬಿ ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಜನಸಂದಣಿ ಕಿಕ್ಕಿರಿದಿತ್ತು. ಸಾಹಿತ್ಯ ಸಂಸ್ಥೆಯವರ ಆಮಂತ್ರಣದ ಮೇರೆಗೆ ಚಿತ್ತೈಸಿರುವ ನಮ್ಮ ಜಿಲ್ಲೆಯ ನುರಿತ ಕನ್ನಡಿಗರೂ ಕವಿಗಳೂ ಕೆನರಾ ಹ್ಯಾಸ್ಕೂಲಿನ ಅಧ್ಯಾಪಕರೂ ಆಗಿರುವ ಶ್ರೀ. ಎಮ್. ಎನ್. ಕಾಮತರವರು ಕನ್ನಡದ ಏಳಿಗೆ ಎಂಬ ವಿಷಯದಲ್ಲಿ ಬೋಧಪರವಾದ ಭಾಷಣವನ್ನಿತ್ತರು. ಶ್ರೀ। ವೇಣುಗೋಪಾಲ ಶೆಟ್ರು ಮಾತನಾಡಿದರು. ಉಡುಪಿ ಶ್ರೀಕೃಷ್ಣ ಸಂದೇಶದ ಸಂಪಾದಕರಾದ ಶ್ರೀ। ಮು. ಜನಾರ್ಧನಾಚಾರ್ಯರು ಸಮಯೋಚಿತ ಮಾತುಗಳನ್ನಾಡಿದರು. ಶ್ರೀ। ಅಣ್ಣಪ್ಪ ಕಾರಂತರೂ ಮಾತನಾಡಿದರು. ಮರುದಿನ ಸ್ಥಳೀಯ ಹಿಂದೀ ಪಾಠಶಾಲೆಯಲ್ಲಿ ಕರ್ನಾಟಕ ಸಾಹಿತ್ಯಸಂಘದ ಆಶ್ರಯದಲ್ಲಿ ಶ್ರೀ। ಎಮ್. ಎನ್. ಕಾಮತರವರ ಇನ್ನೊಂದು ಭಾಷಣವಿದ್ದಿತ್ತು.

ಬಸ್ರೂರು—ಸ್ಥಳೀಕ ಪಂಚ್ಯಾತಿ ಕೋರ್ಟಿನಲ್ಲಿ ಅವಧಿ ಕೊನೆಗಂಡಿದ್ದ ೩ ಜನ ಮೆಂಬರರ ಹೊಸ ಚುನಾವಣೆಯು ಇದೇ ತಾ, ೨೯-೮-೩೬ರಲ್ಲಿ ಕುಂದಾಪುರ ತಾಲೂಕಿನ ತಹಶೀಲ್ದಾರರ ನೇತೃತ್ವದಲ್ಲಿ ಜರಗಿತು.

ಕಾ ರ್ಕ ಳ

ಶ್ರೀಪದ್ಮಸಾಲಿ ವೈಶ್ಯ ಸಮಾಜ ಸೇವಾ ಯುವಕ ಸಂಘದ ತ್ರೈಮಾಸಿಕ ಸಭೆಯು ತಾ. 29-8-36ರಲ್ಲು ಶ್ರೀ ಕೆ. ಮಂಜುನಾಥ ಶೆಟ್ಟಿಗಾರರ ಉದಾರ ಕರ್ತೃತ್ವದಲ್ಲಿ ಸಂಘದ ಅಧ್ಯಕ್ಷ ಶ್ರೀ. ಕೆ. ಮುತ್ತಯ್ಯ ಶೆಟ್ಟಿಗಾರರ ಸಭಾಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಈ ಸಭೆಗೆ ಭ್ರಾತೃಸಂಘಗಳಾದ ಮುಂಬಾಯಿ, ತೀರ್ಥಳ್ಳಿ, ಸಾಣೂರಾದಿ ಹಲವು ಸಂಘಗಳಿಂದ ಯಶಸ್ಸನ್ನು ಕೋರಿಯೂ, ಹಿತಸೂಕ್ತಿಗಳನ್ನು ಸೂಚಿಸಿಯೂ ಸಂದೇಶ ಪತ್ರಗಳು ಬಂದಿದ್ದುವಲ್ಲದೆ ಸಾಣೂರು, ಮಿಜಾರು ಸಂಘಗಳ ಹಲವು ಪ್ರತಿನಿಧಿಗಳೂ ಚಿತ್ತಯಿಸಿದ್ದರು.

FOR INSURANCE, PLEASE CONSULT
THE ASIAN ASSURANCE CO. LTD., BOMBAY.
Completes the 25th year of its HUMANITARIAN service.
Watch! 'Silver Jubilee' Valuation
at the end of December 1935
WANTED Organizers for North Kanara and Coorg and agents in other unrepresented areas of South Kanara. Only reliable persons need apply.

J. A. PUTHRAN.
Branch Manager
THE ASIAN ASSURANCE Co., Ltd., Mangalore.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{134}{36}$

ವಾದಿ— ಕೃಷ್ಣಪ್ಪ ಸೆಟ್ಟಿ, ರಾವ್ ಬಹದೂರ ಅಣ್ಣಪ್ಪಸೆಟ್ರ ಅಳಿಯ ಕುಂದಾಪುರ ತಾಲ್ಲೂಕು ಯಡ್ತರೆ ಗ್ರಾಮದಲ್ಲಿರುವ ಅರ್ಜಿದಾರ.

ಪ್ರತಿವಾದಿ ವೆಂಕಪ್ಪಸೆಟ್ಟಿ ಸೊನಗಾರ ಬಟ್ಟಳ ಮಂಜಪ್ಪಸೆಟ್ರಮಗ ಕುಂದಾಪುರ ತಾಲ್ಲೂಕು ಯಡ್ತರೆ ಗ್ರಾಮದಲ್ಲಿರುವವ ಎದ್ರಿ.

ಸದ್ರಿ ವಾದಿಯು ಸದ್ರಿ ಪ್ರತಿವಾದಿಮೇಲೆ ಪ್ರಜೋತ್ರತಿ ಸಂರದ ಲಾಗ್ಯಾತು ಯುವ ಸಂರದ ವರೇಗಿನ ಮೂಲಗೇಣಿ ಬಾಕಿ ರೂ ೨೧—೭—೦ನ್ನು ಬರ ಮಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 15–9–36ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ಕಿಗ ಯಿಡೋಣಾಗಿರುತ್ತದೆ. ಆ ಕುರಿತು ಆಕ್ಷೇಪಗಳಿದ್ದರೆ ಸದ್ರಿ ದಿವ್ಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡತಕ್ಕದ್ದು ತಪ್ಪಿದ್ರೆ ನಿಮ್ಮನ್ನು ಎಕ್ಸಪಾರ್ಟಿಮಾಡಿ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ಸಂಬ್ರವನ್ನು ತೀರ್ಮಾನಿಸೋಣಾದೀತೆಂತ ಈ ಮೂಲಕ ತಿಳಿಸಿರುತ್ತದೆ.

ಕುಂದಾಪುರ
ತಾ. 31–8–1936.

B Narayana,
Advocate for Plaintiff.

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕ ವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖ ರೇಖೆಯಿಂದ ತಯಾರಿಸಿ ಸದಾ ಕಾಲದ ಲ್ಲಿಯೂ ಅನಾಯಾಸವಾಗಿ ದೊರೆಯುವುವು ಒಮ್ಮೆ ಬಂದು ಪರೀಕ್ಷಿಸಿರಿ.

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಭಿಸಿದೆ

ವ್ಯವಸ್ಥಾಪಕರು:

ಎಚ್ ವಾಸುದೇವ ನಾಯಕ್ ಎಂಡ್ ಬ್ರದರ್.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.		ತಲಪುವ ಘಂಟೆ.	
ಮಿಕ್ಸೆಡ್	ಬೆಳಿಗ್ಗೆ	6-55	ರಾತ್ರಿ	8 55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಿಗ್ಗೆ	8-25	ಮಧ್ಯಾಹ್ನ	1-20
ಮೈಲ್	ಬೆಳಿಗ್ಗೆ	9-50	ಸಂಜೆ	4-20
ಫಾಸ್ಟ್ ಪಸೆಂಜರ್	ಮಧ್ಯಾಹ್ನ	12-15	ಮಧ್ಯಾಹ್ನ	3-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ	3-20	ಸಂಜೆ	6-15
ಮೈಲ್	ಸಂಜೆ	5-25	ಬೆಳಿಗ್ಗೆ	9-20

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

ಡಿಪ್ರೋವಿನ ರಿಂಗ್‌ಸರ್ನ್ ಮುಲಾಮು.

ಇಷ್ಟರವರೆಗಣ ನಮ್ಮ ಪಿಲಿಯನ್ ಎಂಪ್ ಕೋರವರ ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್ ವರ್ಮ್ ಮುಲಾಮು, ಈಗ ಈ ಕೆಳಗಣದಂತೆ ವ್ಯತ್ಯಾಸಪಡಲಾಗಿದೆ.

ಅಮೃತಾಂಜ ಡಿಪ್ರೋವಿನ ತ್ರಿವರ್ಣದ

'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರಲ್ಲರೂ ಗಮನಿಸಿಕೊಳ್ಳಬೇಕಾದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೀವೆ.

ಅಮೃತಾಂಜನ ಡಿಪ್ರೋ,

ಬೊಂಬಾಯಿ-ಮದ್ರಾಸು-ಕಲ್ಕತ್ತ

ನಮ್ಮ ಜರಿ ಪಿತಾಂಬ್ರ ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆ ಸ್ಟಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವವು ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾಮ್ಸಿ, ಪೇಟಾ, ಕೋಟಿಂಗ್, ಶರ್ಟಿಂಗ್ ಪಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಳಿ, ನಾಮಾಳಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ ಈಗಿನ ಹೊಸ ನಮೂನೆಯ ಪಡಲು ಬುಟ್ಟಿ ಹಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ, ರೂ 20ರಿಂದ 55. ಪಡಲು ಸಾದಾ 16ಮೊಳದ ಸೀರೆ 1ಕ್ಕೆ ರೂ 16 ರಿಂದ ರೂ 35ರ ವರೆಗೆ, ಅರೆ ಕಡಮೆ 16ಮೊಳ ಕ್ಷವರ್ ಅಂಚು ರೂ. 10½ ಯಿಂದ ರೂ. 16 ಖಣ 1ಕ್ಕೆ ರೂ. 1½ರಿಂದ ರೂ 10ರ ವರೆಗೆ, ಪೋಸ್ಟು ಖರ್ಚು ಪ್ರತ್ಯೇಕ ಆರ್ಡರಿಸಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶೀ



ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಯಾಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೇಳು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೆರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಯಾಂಜೆ ವ್ಯಾಸಾಚಾರ್ಯ,

ತಾಮ್ರವ್ಯಾಪಾರಿ, ರಥಬೀದಿ ಉಡುಪಿ.

ಸ್ತ್ರೀ ಸಮಾಜ

ಸ್ತ್ರೀಯರು ಪಂಜರದ ಗಿಳಿಯಂತಿರಬೇಕೆ?

ಹಿಂದೂ ದೇಶದ ಅವನತಿಗೆ ರಾಜಕೀಯ ದಾಸ್ಯವೊಂದೇ ಕಾರಣವಲ್ಲ ಸಾಮಾಜಿಕವಾಗಿ ಅದನ್ನಾವರಿಸಿರುವ ಹಲವು ಕೊರತೆಗಳ ನಿವಾರಣೆಯಾಗದೆ ದೇಶವು ಉನ್ನತಿ ಹೊಂದೀತೆನ್ನಲಾಗುವುದಿಲ್ಲ. ರಾಜಕೀಯ ಸ್ವಾತಂತ್ರ್ಯವು ಸಂಪತ್ತನ್ನು ತುಂಬಿಸಬಲ್ಲುದು, ಆದರೆ ಸಂಪತ್ತಿದ್ದವರೆಲ್ಲಾ ಯೋಗ್ಯರೆನ್ನಿಸುವದಿಲ್ಲವಷ್ಟೆ. ಈ ನ್ಯಾಯವು ದೇಶಗಳಿಗೂ ಅನ್ವಯಿಸುತ್ತದ. ಸರಿಯಾದ ನಡತೆಯಿಲ್ಲದೆ ಸಂಪತ್ತು ಮಾತ್ರ ತುಂಬಿದಷ್ಟಕ್ಕೆ ದೇಶದ ಘನತೆ ತುಂಬಲಾರದು. ಈ ನಡತೆಯೇ ಸಾಮಾಜಿಕ ವಿಷಯವು ಭಾರತಭೂಮಿಯು ಈ ಭಾಗದಲ್ಲಿ ಬಹು ಹಿಂದೆ ಬಿದ್ದಿದೆ. ಮುಖ್ಯವಾಗಿ ಸ್ತ್ರೀಯರ ವಿಚಾರ. ಇಂದು ದೇಶದ ಯಾವ ಸಮಸ್ಯೆಯೇ ಮುಂದೆಬರಲಿ, ಅದನ್ನು ಬಿಡಿಸುವ ಸಕಲ ಜವಾಬ್ದಾರಿಯೂ ಪುರುಷರದೆಂದೇ ನಮಗೆ ಗೊತ್ತು. ಹೀಗಾಗಿ ದೇಶದ ಸರೀ ಅರ್ಧಪಾಲು ಜನತೆಯು ಮರೆಯಲ್ಲೇ ವ್ಯವಹರಿಸುವಂತಾಗಿದೆ. ಆ ವ್ಯವಹಾರವೆಂದರೆ ದೇಹದ ಪೋಷಣೆ ಅಥವಾ ಕಾಮಲಾಲಸೆಯ ತೃಪ್ತಿ! ಸ್ತ್ರೀಯರ ಕರ್ತವ್ಯವು ಅದಕ್ಕಿಂತ ಹೆಚ್ಚಿಗೇನೂ ಇಲ್ಲವೆಂದೇ ನಮ್ಮ ನಿರ್ಧಾರ. ಹೀಗಾಗಿ, ಸ್ತ್ರೀಯರ ಮಾನುಷತ್ವವು ತನ್ನಂತೆ ಮುರುಟುಗಟ್ಟಿದೆ, ವಿಶಾಲ ಕ್ಷೇತ್ರವನ್ನು ಆವರಿಸಿಕೊಳ್ಳಲಾರದೆ ಹಾಗಾಗಿದೆ. ಈ ಪದ್ಧತಿಯ ಪುರಸ್ಕರ್ತರನ್ನು ವಿಚಾರಿಸಿದರೆ ಅವರು ಬೇರೆಯೇ ಹೇಳುವರು. "ಸ್ತ್ರೀಯರ ದೈಹಿಕ ಮತ್ತು ಮಾನಸಿಕಸ್ಥಿತಿಗತಿಯು ಅಷ್ಟಕ್ಕೇ ಅನುಕೂಲವಾಗಿದೆ, ಹೊರತು ದೊಡ್ಡದೊಡ್ಡ ಸಮಸ್ಯೆಗಳನ್ನು ಬಿಡಿಸುವಷ್ಟು ವಿಪುಲವಾಗಿಲ್ಲ" ನಮ್ಮಲ್ಲ ಹಾಗೆ ಆಗಿರಬಹುದು. ಕಾರಣವಿಷ್ಟೆ, ನಾವು ಅವರ ಅಂತರಂಗ ಮತ್ತು ಬಹಿರಂಗಶಕ್ತಿಯನ್ನು ಬೆಳೆಯಲು ಬಿಡುವದಿಲ್ಲ ಆದರೆ ಹಾಗಾಗಲು ಎಡೆದೊರೆತ ಪಾಶ್ಚಿಮಾತ್ಯ ಸ್ತ್ರೀಯರನ್ನು ನೋಡಿರಿ. ಅವರು ಯಾವುದರಲ್ಲಿಯೂ ಪುರುಷರನ್ನು ಬಿಟ್ಟುಕೊಡುವದಿಲ್ಲ. ಆಟಪಾಠಗಳಲ್ಲಿ ಹಿಡಿದು ಪೋಲೀಸ್, ಸೈನಿಕ ನೌಕರಿಯಂತಹ ಸಣ್ಣ ಹಾಗೂ ದೊಡ್ಡ ಹುದ್ದೆಗಳವರೆಗೂ ಅವರು ಇದ್ದೇ ಇದ್ದಾರೆ ಪುರುಷರ ಸರಿಮಿಗಿಲೆನಿಸಿಕೊಂಡು! ನಮ್ಮ ಹಿಂದೂದೇಶದ ಸ್ಥಿತಿಯೊ? ಅದು ಪ್ರತ್ಯೇಕವೆ! ಉತ್ತರ ಹಿಂದುಸ್ಥಾನದಲ್ಲಿ ಇಂದಿಗೂ ಸ್ತ್ರೀಯರಿಗೆ ಪರದೆಯಿದೆ. ಪರಕೀಯರನ್ನು ದಿಟ್ಟಿಸಿ ಭ್ರಷ್ಟರಾಗಬಾರದೆಂಬ ಒಂದೇ ಅರ್ಥ ಹೊಳೆಯುತ್ತದೆ ಇದರಲ್ಲಿ. ಆ ಒಂದರ್ಥವಲ್ಲದೆ ಮತ್ತೇನು ಇದೀ ಸ್ತ್ರೀಸಮಾಜವೇ ಯಾವುದೋ ಒಂದು ಭಯಂಕರ ತಪ್ಪನ್ನು ಮಾಡಿ, ವಂಶ ಪಾರಂಪರ್ಯವಾಗಿ ಈ ಶಿಕ್ಷೆಯನ್ನು ಅನುಭವಿಸಿಕೊಂಡು ಬರುವದೆಂದು ನೆನಸುವದೆ? ಇನ್ನೊಬ್ಬರನ್ನು ಕಂಡೊಡನೆಯೇ ಸ್ತ್ರೀತನವು ಕೆಡುವದೆಂಬಷ್ಟು ಹೆಡ್ಡ ಪಾಪವನ್ನು ಸಮಾಜವು ಕಟ್ಟಳೆಯಾಗಿ ಆಚರಿಸಿಕೊಂಡು ಬರುವಷ್ಟು ಕಾಲವೂ ನಾವು ಸುಧಾರಿಸಲ್ಪಡಲಾಗೆವು. ಇತ್ತೀಚಿಗೆ ಅಲ್ಲಿ ಘರದಾ ಪದ್ಧತಿಯನ್ನು ವಿರೋಧಿಸಿ ಸ್ತ್ರೀಯರೇ ಚಳವಳಿಸಹತ್ತಿದ್ದಾರೆ. ಇದು ಉತ್ತರ ಹಿಂದುಸ್ಥಾನದ ಮಾತಾಯಿತು. ನಮ್ಮ ಜಿಲ್ಲೆಯಲ್ಲಿ ಮಹಮ್ಮದೀಯರನ್ನು ಬಿಟ್ಟರೆ ಈ ಪರದಾಸಿಸ್ಟರು ಬೇರೆ ಇಲ್ಲವೆನ್ನಬಹುದು. ಆದರೆ ಇದರಿಂದ 'ಮುಖಕ್ಕಿಲ್ಲ ಮರೆ' ಎಂಬ ಒಂದೇ ಸಮಾಧಾನವಲ್ಲದೆ ಸ್ತ್ರೀ ಸ್ವಾತಂತ್ರ್ಯದ ಮಾತಿಗೆ ಸರಿಯಾದ ಉತ್ತರವು ಇಲ್ಲಿಯೂ ಇಲ್ಲ

ನಿರ್ಬಂಧವೇ ಉತ್ತೇಜನ

ಸ್ತ್ರೀಯರನ್ನು ಬಂಧಿಸಿಟ್ಟು ಪವಿತ್ರಗೊಳಿಸುವೆವೆಂಬ ಭಾವನೆಯು ಹಿಂದೀಯರ ಹುಟ್ಟುಗುಣವಾಗಿದೆ. ಹೆಚ್ಚಾಗಿ ಪುರುಷರೆಲ್ಲರೂ 'ತಮ್ಮ ಸ್ತ್ರೀಯರ ಮಾನ' ಎಂಬ ಕಲ್ಪನೆಯ ಹುದ್ದೆಯೊಂದನ್ನು ನಿರ್ಮಿಸಿಕೊಂಡು ಅದನ್ನು ಅತಿ ಜಾಗರೂಕತೆಯಿಂದ ಕಾಯುತ್ತಿದ್ದಾರೆ ಈ ಮಾನವೆಂದರೆ ಅತ್ಯಮೂಲ್ಯ ವಸ್ತು; ಆದರೆ ಅದರ ವಿನಾಶವು ಅತಿ ಸುಲಭವೆಂಬಂತಾಗಿದೆ—ಇಂದಿನ ವ್ಯವಹಾರ ಜಗತ್ತಿನಲ್ಲ ಪರಕೀಯರನ್ನು ಕಂಡರೆ, ಮಾತಾಡಿದರೆ (ಮಾನುಷತ್ವದ ಸ್ಪಷ್ಟ ಲಕ್ಷಣಗಳೇ ಇವು) ಒಡನೆಯೇ ಕೆಟ್ಟು ಹೋಗುವ ಮಾನವಿದು. ಇವರಿಂದಲೇ ಆ ಮಾನಕ್ಕೆ ಅರ್ಥವಿಲ್ಲವೆಂದು ಸ್ಪಷ್ಟವಾಗುವದಿಲ್ಲವೇನು? ಇಷ್ಟು ಸುಲಭವಾಗಿ ಹಾಳಾಗುವ ಮಾನವನ್ನು ಅಂದಿನಿಂದ ಇಂದಿನ ವರೆಗೂ ರಕ್ಷಿಸಿಕೊಂಡು ಬರಬೇಕಾದರೆ ಮಾನವಶಕ್ತಿಯು ಎಷ್ಟೊಂದು ವ್ಯಯವಾಗಿರಬೇಕೆಂಬುದನ್ನು ಊಹಿಸಿದರೆ, ಇದು ಜನತೆಗಾದ ಮಹತ್ತಾದ ನಷ್ಟವೆಂದು ಕೂಡಲೇ ತಿಳಿದು ಬರುವುದು ಈ ಶಕ್ತಿಯನ್ನು ಬೇರೆ ಕೆಲಸಗಳಿಗೆ ವಿನಿಯೋಗಿಸುತ್ತಿದ್ದರೆ ಎಷ್ಟೋ ಜನಹಿತವಾಗಿ ಹೋಗುತ್ತಿತ್ತು, ದೇಶದ ನಿಜವಾದ ಅಭಿವೃದ್ಧಿಗಾಗಿ ಅದು ವ್ಯಯವಾದಂತಾಗುತ್ತಿತ್ತು. ಹಿಂದುದೇಶದ ಮಾನವ್ಯವು ಅಂದಿನಿಂದ ಇದುವರೆಗೂ ಇಂಥಾ ಅಲ್ಪ ವಿಚಾರಗಳನ್ನು ಮಹತ್ತಾದ ಪ್ರಪಂಚದಲ್ಲಿ ರಕ್ಷಿಸಿಕೊಂಡು ಬರುವದರಲ್ಲಿಯೇ ದಕ್ಷತೆಯನ್ನು ವಹಿಸಿದ್ದುದರಿಂದ, ದಾಸ್ಯನೊಗವು ಹೆಗಲ ಮೇಲೆ ಇಷ್ಟೇ ಇರುವಂತಾಯಿತು. ನಾವು ಕಲ್ಪಿಸಿಕೊಂಡಿರುವ ಮಾನದ ವಿಚಾರವನ್ನು ಮತ್ತೊಂದು ಬದಿಯಿಂದಲೂ ವಿಮರ್ಶಿಸೋಣ—ಸ್ತ್ರೀಯರನ್ನು ಮನೆಯೊಳಗೆ ನಿರ್ಬಂಧಿಸಿ, ಪರದೆಯಿಂದ ಮರೆಮಾಡಿ, ಅವರಲ್ಲಿ ಹುಟ್ಟುವ ಪ್ರಾಪಂಚಿಕ ದುರಭಿಲಾಷೆಗಳನ್ನು ತಡೆಗಟ್ಟಬೇಕೆಂದೇ ನಮ್ಮ ಸಂಕಲ್ಪವಷ್ಟೆ! ಇದನ್ನೇ ಅವಿಚಾರವೆಂದು ಕರೆಯಬೇಕಾಗಿದೆ ಎಲ್ಲಿ ನಿರ್ಬಂಧವಿರುವದೋ ಅಲ್ಲಿ ಪ್ರಕೃತಿಯ ಉತ್ತೇಜನವು ಬಹಳ! ಯಾವುದಾದರೊಂದು ದುರಭಿಲಾಷೆಯು, ಲಾಲಸೆಯು, ಹೊರಗಿನ ನಿರ್ಮಾಣವಲ್ಲ ಕೆಲಸವಿಲ್ಲದ ಮನಸ್ಸು ತಾನಾಗಿ ಸ್ವಾಗತೀಕರಿಸಿಕೊಂಡು ಮಾಡುವ ಕೆಲಸಗಳವು. ಒಂದಲ್ಲೊಂದು ಕಾರ್ಯದಲ್ಲಿ ಮಗ್ನವಾದ ಹೃದಯಕ್ಕೆ ಅನ್ಯಥಾ ಚಿಂತೆಯು ಅಸಾಧ್ಯ. ನಮ್ಮ ಸ್ತ್ರೀಯರು ಮನೆಯೊಳಗೆನೇ ಇದ್ದುಕೊಂಡು ಮನಸ್ಸಿಗೆ ಇತರ ಯಾವ ಕೆಲಸವನ್ನು ಕೊಡಬಲ್ಲರು? ಗಂಡನ ನಾಮಸ್ಮರಣಮಾಡಿಕೊಂಡಿರಲಿ ಎಂದೇ ಶ್ರದ್ಧಾಳುಗಳು ಹೇಳುವರೋ ಏನೊ!

ಮಂಗಳೂರಿನ ಕೆಥೋಲಿಕ ಸ್ತ್ರೀಯರ ಮಾದರಿ

ಮತ್ತೊಂದು ವಿಚಾರ-ದೂರದಲ್ಲಿದ್ದವುಗಳಲ್ಲಿ ಪರಸ್ಪರ ಆಕರ್ಷಣವುಂಟಾಗುವುದು ಹೆಚ್ಚಿಗೆ; ಸಲಿಗೆಯಿಂದಲೇ, ಹೊಕ್ಕು ಬಳಕೆಯಿಂದಲೇ ಈ ಆಕರ್ಷಣವು ಹೋಗಬೇಕಾಗಿದೆ ಆದರೆ ನಮಗೆ ಆ ವಿಶಾಲ ಧರ್ಮವನ್ನು ಅಂಗೀಕರಿಸುವ ಧೈರ್ಯವಿಲ್ಲ. ನಮ್ಮಲ್ಲಿ ಸ್ತ್ರೀ ಸ್ವಾತಂತ್ರ್ಯದಲ್ಲಿ ಒಂದಿಷ್ಟು ಮುಂದುವರಿದಿರುವ ಕಥೋಲಿಕ ಸಮಾಜವನ್ನೇ ದೃಷ್ಟಾಂತವಾಗಿ ತೆಗೆದುಕೊಳ್ಳೋಣ. ಮಂಗಳೂರಿನಲ್ಲಿ ಅವರು ತಮ್ಮ ಪುರುಷರೊಡನೆ ಸಲಿಗೆಯಿಂದ ಪೇಟೆಯಲ್ಲಿ ತಿರುಗಾಡುವರು; ತಮ್ಮ ಅವಶ್ಯಕತೆಗಳಿಗಾಗಿ ಬೇಕಾದಲ್ಲಿ ಹೋಗುವರು! ಈ ಸ್ವಾತಂತ್ರ್ಯದಿಂದಾಗಿ ಆ ಸಮಾಜಕ್ಕಾದ ಹಾನಿಯೇನು? ಅವರ ದಾಂಪತ್ಯ ಜೀವನವು ಸಮಾಜವಾರು ಹೇಳುವದಾದರೆ ಮಿಕ್ಕವರಿಗಿಂತ ಎಷ್ಟೋ ಸುಖಕರವಾಗಿದೆ ಕಾರಣವಿಷ್ಟೆ-ದಾಂಪತ್ಯಸುಖವು ಕೇವಲ ರಾತ್ರಿಯ ಸಮ್ಮಿಲನದಿಂದಲೇ ಪೂರೈಸಲ್ಪಡುವಂತಹದಲ್ಲ, ದಂಪತಿಗಳು ತಮ್ಮ ನಿತ್ಯಜೀವನದ ಎಲ್ಲಾ ಬಯಕೆಗಳನ್ನು ಜತೆಗೂಡಿ ಪೂರೈಸಿಕೊಳ್ಳುವದರಲ್ಲಿಯೇ ಇದೆ ಜೀವನದ ಮಾಧುರ್ಯ! ಆದರೆ ಈ ಸುಖವನ್ನು-ಈ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡ ದಂಪತಿಗಳೆಷ್ಟಿದ್ದಾರೆ ನಮ್ಮಲ್ಲಿ? ತಮ್ಮ ಮನೆಯ ಪುರುಷರ ಮುಖಗಳನ್ನು ಕಾಣದೆ, ಕೆಲವು ತಿಂಗಳುಗಳನ್ನು ಕಳೆದ ಸ್ತ್ರೀಯರೆಷ್ಟೋ ಮಂದಿ ನಮ್ಮೀ ಸಮಾಜದಲ್ಲಿ ಇರಬಹುದು! ಇವುಗಳಿಂದೆಲ್ಲಾ ದೇಶಕ್ಕೆ, ಸಮಾಜಕ್ಕೆ ಆಗುವ ಹಾನಿಯು ಅಷ್ಟಿಷ್ಟಲ್ಲ. ಮೊದಲನೆಯದಾಗಿ ಈ ಕಟ್ಟುಕಟ್ಟಳೆಗಳು ಕೇವಲ ಕೃತಕವಿದ್ದುದರಿಂದ, ಬಲಶಾಲಿ ಪ್ರಪಂಚದಲ್ಲಿ ಅವುಗಳ ರಕ್ಷಣೆಗಾಗಿ ವ್ಯಯವಾಗುವ ಶಕ್ತಿಯ ನಷ್ಟ ಎರಡನೆದಾಗಿ ದೇಶದ ಅರೆಪಾಲು ಜನತೆಯೇ ಒಂದು ವಿಧವಾದ ಬಂಧನದಲ್ಲಿರುವಾಗ ಸರ್ವತೋಮುಖವಾದ ಅಭಿವೃದ್ಧಿಯ ಅಸಾಧ್ಯತೆ, ಮೂರನೆಯದಾಗಿ ನಿರ್ಬಂಧದಿಂದ ಹುಟ್ಟಿದ ಉತ್ತೇಜನದ ಹಾಗೂ ಮಬ್ಬಾದ ಮನಸ್ಸಿನ ಪರಿಣಾಮದಿಂದ ಉಂಟಾಗುವ ಆತ್ಮಹತ್ಯೆ, ಭ್ರೂಣಹತ್ಯೆಯೆ ಮೊದಲಾದ ಅನಾಚಾರಗಳು— ಇವೆಲ್ಲಾ ಹಿಂದೂದೇಶದ ಮಹತ್ತಾದ ಶಕ್ತಿಯಸುಲಿಗೆಗಳು, ಆದ್ದರಿಂದ ಸ್ತ್ರೀಯರಿಗೆ ಯೋಗ್ಯ ಸ್ವಾತಂತ್ರ್ಯವು ಅತ್ಯಗತ್ಯವಲ್ಲವೆ?

ಇ॰ ನಿಮ್ಮ

'ಸಹೋದರಿ'

THE
PANGAL NAYAK BANK
LIMITED.
ESTABLISHED 1920.
Head Office: UDIPI [Branch: Church Road, MANGALORE.
Fixed loans and Overdraft advances are granted on favourable terms on the pledge of gold articles, on the mortgage of immovable properties and on the personal security of approved constituents.
Genuine trade bills, cheques, drafts etc., are discounted at a nominal charge.
Current, Savings Bank and Cumulative deposits are accepted at moderate rates of interest.
Fixed Deposits are received and interest allowed at 1½% on 1 or 2 years and at 5% 3 or 4 years deposits.
Every other description of upto date Banking business is also undertaken.

ಬೆಲೆ ಸುಲಭ! ಒಂದೇ ದರ!! ಖಾತ್ರಿವ್ಯಾಪಾರ!!!
ಎಲ್ಲಿ?
ಎಸ್. ಅನಂತ್ರಾಮಾಚಾರ್
ಸ್ಟೇಶನರಿ, ಕಟ್ಲೇರಿ ಮತ್ತು ಶಾಲೋಪಕರಣಗಳ ವ್ಯಾಪಾರಿ.
ತಾಲೂಕು ಕಚೇರಿಬಳಿ, ಉಡುಪಿ.

ಅರ್ಥವಿಲ್ಲದ ಮಾತು ಬರೇ ಸದ್ದು.

ವಾದ, ವಕ್ತೃತ್ವಸಂಘಗಳು ಹೇಗೆ ನಡೆಸಲ್ಪಡಬೇಕು?

(ಪ್ರೇಮಾಯತನ ಆಶ್ರಮದ ವಿದ್ಯಾರ್ಥಿಗಳು ತಮ್ಮ "ರ್ಹಿಟೋರಿಕ್ ಸೊಸೈಟಿಯನ್ನು (ವಕ್ತೃತ್ವ ವ್ಯವಸಾಯ ಸಂಘ) ಪ್ರಾರಂಭಿಸಬೇಕೆಂದು ನಿಶ್ಚೈಸಿ, ಆರಂಭದ ಭಾಷಣವನ್ನು ಮಾಡುವಂತೆ ಪಂಡಿತ ತಾರಾನಾಥರನ್ನು ಕೇಳಿಕೊಂಡರು. ಅದರಂತೆ ಕಳೆದ ಆದಿತ್ಯವಾರ ಸಭೆಸೇರಿ ಸೆಕ್ರೆಟರಿಗಳಾದ ಮಿ. ಸಿ. ಯಸ್. ನಾಯರ್‌ರವರು "ಕಳೆದ ವರ್ಷವೂ ಇದೇ ರೀತಿ ಸಭೆಯೊಂದನ್ನು ಮಾಡಿಕೊಂಡಿದ್ದೆವು, ಆದರೆ, ಅದು ಅಷ್ಟು ಯಶಸ್ವಿಯಾಗಿ ಸಾಗಲಿಲ್ಲೆಂದು ನನಗನ್ನಿಸುತ್ತದೆ. ಈ ವರ್ಷವೂ ಹೀಗಾಗಲಿಕ್ಕಿಲ್ಲವೆಂದು ನಾನು ನಂಬಿದ್ದೇನೆ." ಎಂದು ಹೇಳಿ ಪಂಡಿತರನ್ನು ಮಾತಾಡಲು ಬಿನ್ನಯಿಸಿಕೊಂಡರು. ಪಂಡಿತರು ಹೇಳಿದುದರ ಸಾರಾಂಶವು—)

ಮಿತ್ರರೇ!

ಈ ಸೊಸೈಟಿಯ ಸೆಕ್ರೆಟರಿಗಳಾದ ಮಿ. ನಾಯರರು ಹೇಳಿದಂತೆ ಕಳೆದ ವರ್ಷದ ಸ್ಥಿತಿಯಿತ್ತೆಂದು ನನಗನ್ನಿಸುವದಿಲ್ಲ. ಏಕೆಂದರೆ, ಯೇಲ್ ಯುನಿವರ್ಸಿಟಿಯ ಡಾಕ್ಟರರಾದ ಮಿ. ಶಾಲ್‌ರವರು (ಇವರು ಬರ್ಲಿನ್, ಲಂಡನ್ ಯುನಿವರ್ಸಿಟಿಗಳ ಗ್ರ್ಯಾಜುಯೇಟರೂ ಇದ್ದಾರೆ) ಸಿಲೋನಿನಿಂದ ಬಂದ ಯೂನಿವರ್ಸಿಟಿ ಪ್ರೊಫೆಸರರೊಬ್ಬರು, ಜಪಾನ್ ಮೊದಲಾದ ದೇಶಗಳಲ್ಲಿ ಸಂಚರಿಸಿ ಬಂದಿದ್ದ ಮಿ. ವೆಂಕಟಾಚಲಂರವರು ಇವರೇ ಮುಂತಾದ ಅನೇಕ ಮಹನೀಯರು ಇಲ್ಲಿಗೆ ಬಂದು ತಮ್ಮ ಅನುಭವಗಳನ್ನು ಕುರಿತು ಹೇಳಿದ್ದಾರೆ. ಇದೇನು ಸಣ್ಣ ಲಾಭವಲ್ಲ. ಕೆಲಸ ಇನ್ನೂ ಹೆಚ್ಚಾಗುತ್ತಿದ್ದರೆ ಚನ್ನಾಗಿತ್ತು; ಆದರೂ ಆದ ಕೆಲಸವು ಅಷ್ಟೇನೂ ಗೌಣವಲ್ಲ ಎಂದೂ ಹೇಳಬೇಕಾಗುತ್ತದೆ.

ಈ ವರ್ಷವೂ ಸೊಸೈಟಿಯ ಕಾರ್ಯವು ಇನ್ನೂ ಚನ್ನಾಗಿ ಸಾಗಲೆಂದು ನನ್ನ ಹಾರೈಕೆ. ಪ್ರಾರಂಭವು ನನ್ನಿಂದಾಗಬೇಕೆಂದು ಕೇಳಿದ್ದೀರಿ. ಹೋದ ವರ್ಷದ ಕೊರತೆಗಳು ನಿಮ್ಮ ತಪ್ಪುಗಳೇ ಎಂದು ನೀವು ತಿಳಿದುಕೊಂಡಿದ್ದರೆ, ಮಾಡಿದ ತಪ್ಪನ್ನು ಪುನಃ ಮಾಡಲು ಹೆದರಿಕೆಯನ್ನು ಹಾಕುವ ಕಾರ್ಯವು ನನ್ನದಾಗದಿರಲಿ! ಹಾಗಾಗದಂತೆ ನೋಡಿಕೊಳ್ಳುವುದು ನಿಮ್ಮ ಕೈಯ್ಯಲ್ಲಿದೆ. ಒಂದು ಕಾರ್ಯವನ್ನು ಮಾಡಿಯೇ ತೀರಬೇಕೆಂಬ ಮನಸ್ಸಿದ್ದರೆ, ಯಾವುದೂ ಅಸಾಧ್ಯವಲ್ಲ. ಶ್ರೇಷ್ಠಜ್ಞಾನವು ಯಾವಾಗಲೂ ಅದನ್ನು ತಿಳಿದುಕೊಳ್ಳಬೇಕೆಂಬ ಪ್ರಬಲವಾದ ಇಚ್ಛೆಯ ಫಲವು.

ಸಾಮಾನ್ಯವಾಗಿ ಡಿಬೇಟಿಂಗ್ ಸೊಸೈಟಿಗಳಲ್ಲಾಗುವಂತೆ, ನಿಮ್ಮದು ಒಂದು ನಾಲ್ಕು ಮಾತುಗಳನ್ನು ಬಡಬಡ ಆಡುವ ಸಂಘವಾಗದಿರಲಿ! ಅದು ಪರಸ್ಪರ ಸಹಕಾರ, ವಿಚಾರ, ವಿನಿಮಯವನ್ನು ಬೆಳಸಿ ಮಾನವ್ಯವನ್ನು ಜಾಗ್ರತಗೊಳಿಸುವುದಾಗಿರಲಿ. ಮನುಷ್ಯನು ಸುಸಂಬದ್ಧನಾಗಿ ಮಾತಾಡಬಲ್ಲನೆಂದೇ ಅವನು ಇತರ ಪ್ರಾಣಿಗಳಿಂತ ಶ್ರೇಷ್ಠನಾಗಿದ್ದಾನೆ. ತನ್ನ ಆಕಾಂಕ್ಷೆ ಅನುಭವಗಳನ್ನು ಅವನು ಪ್ರಕಟಿಸಬಲ್ಲನು. ಇದ್ದದ್ದನ್ನು ಇದ್ದಂತೇ ಸ್ವೀಕರಿಸುವುದು ಮನುಷ್ಯನಿಗೆ ಒಗ್ಗದ ಮಾತ್ರವುದಿಂದ ಹೆಚ್ಚು ಫಲವನ್ನು ಪಡೆಯಲಿಚ್ಛಿಸುವುದೇ ಎಲ್ಲಾ ಜೀವಿಗಳ ಸಹಜಸ್ವಭಾವವಾಗಿದೆ!

ನಾವು ಹುಟ್ಟಿದ್ದೇ ನಮ್ಮನ್ನು-ನಮ್ಮ ವಿಚಾರಗಳನ್ನು ಪ್ರಕಟಿಸಲಿಕ್ಕಾಗಿ, ನಮ್ಮೊಳಗಿರುವ ಶಕ್ತಿಯು ಅಗಾಧವಾದುದು, ಉದ್ದುದ್ದ ಮಾತಾಡಿಬಿಟ್ಟರೆ, ನಮ್ಮ ವಿಚಾರ ಪ್ರಕಟಣೆಯಾಯಿತು ಎನ್ನಲಾಗುವುದಿಲ್ಲ. ಪ್ರತಿಯೊಂದು ಶಬ್ದಕ್ಕೂ ಒಂದು ಅರ್ಥ, ಒಂದು ಉದ್ದೇಶವಿರಬೇಕು. ಅದರಲ್ಲಿ ಸ್ವತಃ ತನ್ನ ಅನುಭವವೇ ಒಡೆದು ಕಾಣಬೇಕು. ಅದರಲ್ಲಿ ನಾವೀನ್ಯವಿರಬೇಕು; ತಮ್ಮದೇ ಆದ ಒಂದು ವಿಚಾರವಿರಬೇಕು; ಹೇಳುವ ರೀತಿ ಅಪೂರ್ವವಾಗಿರಬೇಕು; ಆವಾಗಲೇ ಆಡಿದ್ದು ಸಾರ್ಥಕ; ಈ ಲಕ್ಷಣಗಳಿಲ್ಲದೆ ಹೋದರೆ ಆಡಿದ್ದೆಲ್ಲವೂ ಬರೇ ಸದ್ದು. ಈ ಲಕ್ಷಣಗಳಿಂದ ಕೂಡಿದ ಮಾತುಗಳೇ ಆತ್ಮವಿಕಾಸದ ಸಾಧನ-ಪ್ರಮಾಣಗಳು. ಹಾಗೆ ಆಡಿದುದರಲ್ಲೆಲ್ಲ ಕಾವ್ಯವಿದೆ. ನಾಲ್ಕು ಶಬ್ದಗಳನ್ನು ಜೋಡಿಸಿ ಪ್ರಾಸಬದ್ಧವನ್ನಾಗಿ ಮಾಡಿಬಿಟ್ಟಷ್ಟಕ್ಕೇ ಅದು ಕಾವ್ಯವಾಗದು. ಆ ಶಬ್ದಗಳೂ ಆ ಪ್ರಾಸವೂ ಆ ಜೋಡಣೆಯ ಪದ್ಧತಿಯೂ, ಮೊದಲಿನಿಂದಲೂ ಇದ್ದವೇ! ಅದರಲ್ಲಿ ಹೊಸದೇನು ಬಂತು? ತನ್ನದಾದ ಹೊಸತೇನನ್ನಾದರೂ ಹೇಳಿದರೇನೇ ಅದು ಕಾವ್ಯವಾಗಬಹುದು. ಆಗ ಅದರಲ್ಲಿ ಜೀವರಸವು ಹರಿದಾಡುವುದು.

ಇಲ್ಲೊಂದು ಉದಾಹರಣೆಯನ್ನು ಕೊಡೋಣ, "ನದಿಯ ನೀರನ್ನು ಒಂದು ಕೊಡದಲ್ಲಿ ತುಂಬಿಸಿ ತಲೆಯಮೇಲಿಟ್ಟುಕೊಂಡು ಮನೆಗೆ ಹೋದರೆ ಕತ್ತು ನೋಯುವದು! ಅದೇ ನದಿಯಲ್ಲಿ ಮುಳುಗಿ ಸ್ನಾನಮಾಡುವಾಗ, ಕುಡಿಯುವಾಗ, ತಲೆಯ ಮೇಲೆ ಸಾವಿರಾರು ಕೊಡಗಳ ನೀರಿದ್ದರೂ ನೋವೆನಿಸುವುದಿಲ್ಲ. ಅದೇಕೆ? ಸಂಪತ್ತನ್ನು ಅದರ ಸ್ವಸ್ಥಾನದಿಂದ ಕೊಂಡೊಯ್ದಾಗಲೇ ತೋರುವುದು ನೋವು" ಎಂದು ಕವಿ ರವೀಂದ್ರರು ಹೇಳಿದ್ದಾರೆ. ಈ ಮೊದಲು ಎಷ್ಟೋ ಜನ ನದಿಯಿಂದ ನೀರನ್ನು ಹೊತ್ತಿದ್ದರೂ, ಎಷ್ಟೋ ಮಂದಿ ಸ್ನಾನಮಾಡಿದ್ದರೂ, ಯಾರಿಗೂ ಈ ವಿಚಾರ ಹೊಳೆದಿರಲಿಲ್ಲ ಅದು ರವೀಂದ್ರರಿಗೆ ಕಂಡಿತು. ಅವರು ಆಡಿದುದು ಹೊಸವಿಚಾರ; ಹೊಸ ಅನುಭವ; ಹೊಸ ರೀತಿ; ಆದ್ದರಿಂದ ...

ಹೀಗೆ ತನ್ನದೇ ಆದ ಒಂದು ವೈಶಿಷ್ಟ್ಯವಿರದಿದ್ದರೆ ಆಡಿದ ಮಾತು ಬರೇ ಸದ್ದು ನಿಮ್ಮ ಸಂಘವು ಸದ್ದುಮಾಡುವ ಗುಂಪಾಗದಿರಲಿ, ಅದರಲ್ಲಿ ನಿಮ್ಮ ಹೃದಯದ ಅನುಭವವು ಹೊಸ ಹೊಸ ವಿಚಾರಗಳು ಬೆಳಕಿಗೆ ಬರಲಿ! ಹಾಗಾಗುವಂತೆ ಮಾಡಲು ಪ್ರಯತ್ನಿಸುವುದೇ ನಿಮ್ಮ ಉದ್ದೇಶವಾಗಿರಲಿ.

ನಾರದನ ತಂಬೂರಿ

ನರ ನಾರಾಯಣ! ನರ ನಾರಾಯಣ!! ಹಿಂದಿನ ಯುಗಗಳಲ್ಲಿ 'ನಾರಾಯಣ, ನಾರಾಯಣ' ಎಂಬ ಶಬ್ದ ಕಿವಿಗೆ ಬಿದ್ದರೆ ಸರಿ. ರಾಜರಾದರೂ ಎದ್ದು ತಮ್ಮ ಆಸನ ನನಗೆ ಬಿಟ್ಟುಕೊಡುತ್ತಿದ್ದರು ನೋಡಿ—ಅಬ್ಬಬ್ಬ ಕಲಿಯುಗದ ಪ್ರಭಾವವೆ! ನಾರಾಯಣ ನಾಮ ಹೇಳುವವರೂ ಇಲ್ಲ—ನನ್ನಂಥವರು ಹೇಳಿದರೆ ಕೇಳುವವರೂ ಇಲ್ಲವಲ್ಲ! ದೊಡ್ಡ ಫಜೀತಿಯಾಯಿತಲ್ಲಾ! ಇನ್ನು ಮುಂದೆ ಹೀಗಾದರೂ ಹೇಳುತ್ತೇನೆ—ನರ ನಾರಾಯಣ! ನರ ನಾರಾಯಣ!!

* * * *

ನಾನು ಇರುವದು, ಬರುವದು ಗೊತ್ತಾಗಬೇಕಲ್ಲಾ...ಅದಕ್ಕೊಂದು ತಂಬೂರಿ ಹಿಡಿದಿದ್ದೇನೆ, ಟುಂಯಿ ಟುಂಯಿ ಡುಂಯಿ!...ನಾಮವು! ಸಾಲದೇ! ಗೋವಿಂದನ ...." ಓಹೋ! ಇದು ಹಿಂದಿನ ಕಾಲದ ಪದ. ಅದನ್ನೇ ಈ ಕಾಲದಲ್ಲಿ ಹೇಳಿದರೆ, ನನಗೆ ಮೂರು ನಾಮವೇ ಸರಿ—ಆ ಒಂದೇ ನಾಮದ ಬಡ್ಡಿಗೆ ಬಡ್ಡಿ ಕೂಡಿಸಿಕೊಟ್ಟಾರು ಇಂದಿನವರು! ಆದ್ದರಿಂದ ಉಡುಪಿ ಶ್ರೀ ಕೃಷ್ಣನೊಡನೆ "ಇದೇನು ಕಾಲ ಹೀಗಾಯಿತು" ಎಂದು ವಿಚಾರಿಸೋಣ ಎಂದು ಮೊನ್ನೆ ಅಲ್ಲಿಗೆ ಹೋಗುವಾಗ ರಸ್ತೆಯಲ್ಲೆಲ್ಲಾ ಕೇಳಿಬಂದ ಹಾಡನ್ನೇ ಹಾಡುತ್ತೇನೆ. "ಒಂದೇ ನಾಮವು ಸಾಲದೇ! ಮುನ್ಸಿಪಾಲ್ಟಿಯ ! ...." ಟುಂಯಿ. ಟುಂಯಿ. ಡುಂಯೊ!

* * * *

ನೋಡಿ ಸ್ವಾಮಿ, ಶ್ರೀ ಕೃಷ್ಣ ಪರಮಾತ್ಮನೊಡನೆ ವಿಚಾರಿಸಿದೆ. ಅವ ಹೇಳಿದ—"ನಾರದಾ! ನಿನಗೆ ಜಗಳ ಮಾಡಿಸುವದರಲ್ಲಿ ಪ್ರೀತಿ ಹೆಚ್ಚು. ಆದರೆ ಆ ಬುದ್ಧಿ ಈ ಕಾಲದಲ್ಲಿ ಇಲ್ಲಿ ನಡೆಯಲಿಕ್ಕಿಲ್ಲ. ಜಾಗ್ರತೆ ಇಟ್ಟುಕೋ." ಆಯ್ತು ಸ್ವಾಮಿ! ಎಂದು ಹೂಂ ಗುಟ್ಟಿದೆ. ನೋಡೋಣ ಎಂದು ತಿರುಗಾಡುತ್ತೇನೆ—ಎಲ್ಲಾ ಕಡೆಗಳಲ್ಲಿಯೂ ಕೃಷ್ಣ ಹೇಳಿದಹಾಗೆಯೇ ಆಗಬೇಕೇ? ನರ ನಾರಾಯಣ! ನರ ನಾರಾಯಣ!!

* * * *

ಬಾಕಿ ಎಲ್ಲಾ ಬಿಡಿ! ಜಗಳ ಮಾಡಿಸುವ ಪಂಚಾತಿಕೆ ಸುಡಿ!! ಬೇಕು—ಬೇಡ ಎಂಬ ಎರಡು ಸಂಗತಿಗಳಿದ್ದಾವಲ್ಲಾ—ಅವುಗಳನ್ನು ನಿಂಗಡಿಸಲಿಕ್ಕೆ ನನ್ನಿಂದಾಗಲಿಲ್ಲ! ನೋಡಿ, ಮೊನ್ನೆ ಉಡುಪಿಯ ಪ್ರಥಮ ಮುನಿಸಿಪಾಲಿಟಿಯ ತೆರಿಗೆದಾರರ ಸಭೆಗೆ ದಯಮಾಡಿಸಿದ್ದೆ. ಅಲ್ಲಿ ಡಾಕ್ಟರ್ ಆಚಾರ್ಯರು ಹೇಳಿದರು—"ನಾನು ಮುನಿಸಿಪಾಲಿಟಿಯ ಸಭೆಯಲ್ಲಿ ಮುನಿಸಿಪಾಲಿಟಿಯೇ ಬೇಡವೆಂಬ ಠರಾವು ತರುತ್ತೇನೆ." ಏನಪ್ಪಾ ಇದು! ಮುನಿಸಿಪಲ್ ಮೆಂಬರಿಕೆ ಬೇಕು, ಮುನಿಸಿಪಾಲಿಟಿ ಬೇಡ!! ನರ ನಾರಾಯಣ!

* * * *

ಕೇಳಿ ರಾಯರೆ! ಹಿಂದೊಮ್ಮೆ ಡಿಸ್ಟ್ರಿಕ್ಟ್‌ಬೋರ್ಡು ಸಭೆಯಲ್ಲಿ ಶ್ರೀ! ಮೊಳಹಳ್ಳಿ ಶಿವರಾಯರು ಉಡುಪಿಗೊಂದು ಪ್ರಮುಖ ಪಂಚಾಯತ್ ಬೋರ್ಡು ಮಾಡಬೇಕೆಂದು ವಾದಿಸಿದಾಗ ಡಾ। ಪಿ. ಜಿ. ಆಚಾರ್ಯರೇ ಕೂಡದೆಂದು ಪ್ರತಿಭಟಿಸಿದ್ದರಲ್ಲ! ಅದೇ ಪಂಚಾಯತ್ ಬೋರ್ಡು ಆಗಬೇಕೆಂದು ಡಾ। ಆಚಾರ್ಯರು ಮುನಿಸಿಪಲ್ ಮೀಟಿಂಗಿನಲ್ಲಿ ಸೂಚನೆ ತರುವರಂತೆ! ಆಗ 'ಬೇಡ!' ಈಗ 'ಬೇಕು!' ನರ ನಾರಾಯಣ! ನರ ನಾರಾಯಣ!!

* * * *

ಮತ್ತೂ ಕೇಳಿ ಸ್ವಾಮಿ! ಡಾ। ಆಚಾರ್ಯರು ಜಿಲ್ಲಾಬೋರ್ಡಿನ ಕಾಂಗ್ರೆಸ್ ಮೆಂಬರರು; ಅವರಿಗೆ ಕಾಂಗ್ರೆಸ್ ಆಜ್ಞೆ ಬೇಡವಾಯಿತೆಂದು ಆ ಪಾರ್ಟಿಯಿಂದ ತೆಗೆದಿದ್ದಾರಂತೆ; ಕಾಂಗ್ರೆಸ್ ಮೆಂಬರಿಕೆ ಬೇಕು; ಕಾಂಗ್ರೆಸ್ ಶಿಸ್ತು ಬೇಡ! ಅಬ್ಬಬ್ಬಾ! ಆ ಶ್ರೀಕೃಷ್ಣನ ಮಹಾತ್ಮೆಯೆ! ಅವನ ಬುದ್ಧಿವಾದವೇ ಸತ್ಯವಾಯಿತು ಸ್ವಾಮಿ! ಹಿಂದಿನ ಯುಗಗಳಲ್ಲಾದರೆ ಸ್ನೇಹಿತರೊಳಗಾದರೂ ಜಗಳ ಗಂಟುಹಾಕುತ್ತಿದ್ದೆನು ಈ ಕಾಲದಲ್ಲಿ 'ಬೇಕು-ಬೇಡ'ದಂಥಾ ವೈರಿಗಳನ್ನೂ ಪ್ರತ್ಯೇಕಿಸಲಿಕ್ಕಾಗುವುದಿಲ್ಲ. ನರ ನಾರಾಯಣ! ನರ ನಾರಾಯಣ!!

* * * *

ಉಡುಪಿಯ ಜನರು ತೆರಿಗೆ ಹೆಚ್ಚಾಯಿತೆಂದು, ಬಹಳ ರೇಗಿದ್ದಾರೆ ಸ್ವಾಮಿ! ಅವಕ್ಕೆ ನಮ್ಮ ಸ್ಪೆಶ್ಯಲ್ ಆಫೀಸರರು ಹೇಳಿದ್ದು ಗೊತ್ತುಂಟೆ? "ನಮ್ಮಿಂದ ತಪ್ಪಾಗಿರಬಹುದು; ಜನರು ಅಪೀಲುಮಾಡಿಕೊಳ್ಳಲಿ" ನನ್ನ ಹಿಂದಿನ ಯುಗಗಳಲ್ಲಾದರೆ, ತಪ್ಪುಮಾಡಿದವರೇ ತಿದ್ದಿಕೊಳ್ಳಬೇಕೆಂಬ ಕ್ರಮವಿತ್ತು. ಈ ಯುಗದಲ್ಲಿ ಆ ಕಾನೂನು ಕೂಡಾ ತಪ್ಪಿಹೋಗಿದೆ! ನರ ನಾರಾಯಣ!

* * * *

ಅಯ್ಯಪ್ಪಾ! ಅಪೀಲಾದರೂ ಒಂದು ಉಂಟಲ್ಲಾ ಎಂದು ಯೋಚಿಸಿದರೆ, ಅದರ ತನಿಖೆಯ ಸಮಯವು ಒಂದೊಂದು ವಾರ್ಡಿಗೆ ಎರಡೆರಡೇ ಘಂಟೆ ಸಿಕ್ಕಿದೆ ಸ್ವಾಮಿ! ನೂರಾರು ಅರ್ಜಿಗಳ ತನಿಖೆಯನ್ನು ಎರಡೇ ಘಂಟೆಗಳೊಳಗೆ ಮುಗಿಸುವದು ಹೇಗೆನ್ನುವಿರಾ? ಆಗುತ್ತದೆ ನೋಡಿ, ಎರಡು ಘಂಟೆಗಳಲ್ಲಿ ಕರಾಚಿಯಿಂದ ಬೊಂಬಾಯಿಗೆ ಹಾರುವವರಿದ್ದಾರೆ. ಅಂದ ಮೇಲೆ ಎರಡು ಘಂಟೆಯಲ್ಲಿ ಒಂದು ವಾರ್ಡನ್ನು ಮುಗಿಸುವದು ಕಷ್ಟವಲ್ಲವೆನ್ನಿ! ಅಂತೂ ಮಹಾತ್ಮರಪ್ಪಾ ಈ ಕಾಲದವರು! ನರ ನಾರಾಯಣ!!

* * * *

ಸದ್ಯಕ್ಕೆ ಹೋಗುತ್ತೇನೆ ರಾಯರೆ! ಒಂದೊಂದು ವಾರ್ಡುಗಳಲ್ಲಿ ಹೆಚ್ಚಿಗೆ ಸಿಲ್ಲಬಾರದೆಂಬ ನಿಯಮವೇ ಉಂಟೋ ಏನೊ ಮುನಿಸಿಪಾಲಿಟಿಯಲ್ಲಿ! ಇಲ್ಲವಾದರೆ ಅಷ್ಟು ದೊಡ್ಡ ಕೆಲಸಕ್ಕೆ ಇಷ್ಟು ಕಡಿಮೆ ಸಮಯ ಕೊಡುತ್ತಿರಲಿಲ್ಲ. ಆದ್ದರಿಂದ ನಾನು ಒಂದೂ ಸಮಯವಾಯಿತಲ್ಲಾ,! ಘಂಟೆ ಎರಡಾಯಿತೋ ನೋಡಿಬಿಡಿ-.ಆಗಿದ್ದರೆ ಹೇಳಬೇಡಿ! ಈಗ ಹೋಗುತ್ತೇನೆ. ಬರುವ ವಾರ ಬರುತ್ತೇನೆ ಸ್ವಾಮಿ! ಟುಂಯಿ, ಟುಂಯಿ, ಡುಂಯೊ.

ನಾರದ.

— ನಾಯಕ್ ಬ್ರದರ್ಸರ —

ಶ್ರೀ ಮಧ್ವುವನೇಂದ್ರ ಮಹೌಷಧಾಲಯ,

ಪಾರಂಪರ್ಯದ ಅನುಭವ ಸಿದ್ಧೌಷದಗಳು!

ಕಟಪಾಡಿ, ದ. ಕನ್ನಡ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!!

ವೃದ್ಧಿಕಾಸವ (ನಿಶ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷತೈಲ್ಯ (ಪಕ್ಷಪಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಚಂದ್ರಮುಸ್ (ವಾಂತಿಭೇದಿಗೆ ಅನುಭವಸಿದ್ಧ ಔಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮಧ್ವವನೇಂದ್ರ ಮಹೌಷಧಾಲಯ,
ಕಟಪಾಡಿ, ದಕ್ಷಿಣ ಕನ್ನಡಾ ಜಿಲ್ಲೆ.

JAYA LAXMI BANK LIMITED

HEAD OFFICE, MANGALORE. BRANCH OFFICES, PUTTUR, KASARAGOD.

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್

ಹೆಡ್ ಆಫೀಸು: — ಮಂಗಳೂರು.
ಬ್ರೆಂಚು ಆಫೀಸುಗಳು, ಪುತ್ತೂರು, ಕಾಸರಗೋಡು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ಕೆಲಸಗಳು ಅಂದರೆ ಭಂಗಾರದ ಈಡು ಪ್ರೊ. ನೋಟು ವಗೈರೆ ಮೇಲೆ ಸಾಲಕೊಡುವದು, ವಟ್ಯಾಸುವದು, ಮೌಲ್ಯದ ವಸ್ತುಗಳನ್ನು ಭದ್ರವಾಗಿ ಇಡುವದು ಮತ್ತು ಗೂಡ್ಸ ಯಾ ಸರಕಿನ ಮೇಲೆ ಹಣಗಳನ್ನು ಸಾಲವಾಗಿ ಕೊಡಲ್ಪಡುವದು. ಹೆಚ್ಚಿನ ಅನುಭವ ಸೆಕ್ರೆಟರಿಯಿಂದ ತಿಳಿಯುವದು.

M. GANESH RAO,
ಸೆಕ್ರೆಟರಿ.

ಪಕ್ಷವಾತ ಸಂಹಾರಿ.

ಯೆಂಬ ದಿವ್ಯ ಔಷಧಿಯು, ನಮ್ಮ ವಂಶಪಾರಂಪರ್ಯದಿಂದ ಅನುಭವ ಸಿದ್ಧವಾದ ಔಷಧಿಗಳಲ್ಲಿ ಇದೊಂದು ಕೈಕೊಂಡ ಪ್ರಯೋಗವು ಉತ್ತಮ ಸ್ಥಾನವನ್ನು ಪಡೆದಿರುತ್ತದೆಂದು ನಿಸ್ಸಂದೇಹವಾಗಿ ಹೇಳಬಲ್ಲೆ. ಪಕ್ಷವಾತವೆಂಬ ಆ ಕ್ರೂರವ್ಯಾಧಿಯಿಂದ ನರಳುತ್ತಿದ್ದ ಸಾವಿರಾರು ಜನರು ಅಮೃತತುಲ್ಯವಾದ ಈ ದಿವ್ಯೌಷಧಿಯ ಸೇವನೆಯಿಂದ ಅವಯವಗಳು ಕಳಕೊಂಡ ಶಕ್ತಿಯನ್ನು ಪುನಃ ಪಡೆದು ಆರೋಗ್ಯವಂತರಾಗಿ ಸಂಸಾರದ ಸುಖದಿಂದ ಆನಂದ ಪಡುತ್ತಿದ್ದಾರೆ. ಆ ದುಷ್ಟ ವ್ಯಾಧಿಗೆ ತುತ್ತಾಗಿರುವ ಬಾಲಕರಿಗೂ ವೃದ್ಧರಿಗೂ ಕೂಡಾ ಇದು ಪ್ರಯೋಜನಕಾರಿಯಾಗುತ್ತದೆ. ಈ ರೋಗದ ವೇದನೆಯು ಶುರುವಾದೊಡನೆಯೇ ಈ ಔಷಧಿಯನ್ನು ಸೇವಿಸಿದ ಮೂರು ದಿನಗಳಲ್ಲಿಯೇ ಇದರ ಗುಣಾಂಶವು ಖಾತ್ರಿಯಾಗಿ ಅನುಭವಕ್ಕೆ ಬರುತ್ತದೆ. ಮತ್ತು ಕೆಲವು ದಿವಸಗಳಲ್ಲಿ ಸಂಪೂರ್ಣ ಗುಣಹೊಂದಬಹುದು. ಪಕ್ಷವಾತ ರೋಗದಿಂದ ಬಳಲುವ ರೋಗಿಗಳಿಗೆ, **ಪಕ್ಷವಾತ ಸಂಹಾರಿ**ಯೆಂಬ ಈ ದಿವ್ಯ ಔಷಧಿಯು ಸಂಜೀವನಪ್ರಾಯವೆಂದು ನನ್ನ ಪೂರ್ಣ ಭರವಸವಿದೆ.

ಕೆ. ಬಾಬು ವೈದ್ಯ,
ಶ್ರೀ ಮಂಜುನಾಥ ವೈದ್ಯಾಶ್ರಮ,
ಹಂಪನ ಕಟ್ಟೆ, ಮಂಗಳೂರು

THE MOOLKY BANK LTD, MOOLKY.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರದ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು"

ಕಾಯಂ ಠೇವಣಾತಿಗಳು

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸು ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದು ಕೊಳ್ಳಿರಿ

M. R. Punja,
ಯಂ. ಆರ್. ಪೂಂಜ,
President & Manager,
ಪ್ರೆಸಿಡೆಂಟು ಮತ್ತು ಮೆನೇಜರ್.

ಸ್ತ್ರೀ ಮಲಯಾಳದ

ಸ್ತನೋಸ್ತೇಧಃ

THE MALAYALA STHANO STHEDAH OUSHADHA CO., Post-CHALAPURAM, MALABAR

ರಹಸ್ಯಗಳು

ಇದೀಗತಿಳಿದು ಬಂದಿದೆ, ಪುರುಷರನ್ನಾವುದು ಆಕರ್ಷಿಸುತ್ತವೆಂಬುದನ್ನು ಸ್ತ್ರೀಯರೀಗ ಬಲ್ಲರು. ನೀವು ಪುರುಷನೊಬ್ಬನನ್ನು ವೀಕ್ಷಿಸಿ ನೋಡಿದ್ದಲ್ಲಿ, ಆತನ ಕಣ್ಣುಗಳು ಸ್ತ್ರೀಯ
01 ಮುಖದಿಂದ ಕೆಳಗೆ ಕುಚಸ್ಥಳಕ್ಕೆ ಇಳಿಸಿ ಕುಚಗಳು ಉನ್ನತವಾಗಿ, ದುಂಡಗ ಯೌವನಯುಕ್ತವಾಗಿ ಆಕರ್ಷಕವಾಗಿರುವವೋ ಎಂದು ನೋಡುವವು.

48 ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ಥನಸ್ಥೇದ:—ಅಸ್ವಸ್ಥ, ಚಿಂತೆ, ಪ್ರಾಯ ಆಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷತೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಚಿಕ್ಕದಾಗಿ ಅಥವಾ ಏರು ತಗ್ಗಾಗಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರವಾದರೆ

ದಿ ಮಲಯಾಳ ಔಷಧ ಕಂಪನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದ ವಿರೂಪ, ಆಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವುವು, ಟೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವುವ. ಸಡಿಲಾಗಿರುವ ಮಾಂಸವು ಸ್ಥಿರವಾಗುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವುವು. ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಹೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವೆ

ಸ್ಥನಸ್ಥೇಡ ನಂಬ್ರ 20.—ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. 3. ನಂಬ್ರ 21 ಹೊರಗಣ ಉಪಯೋಗಕ್ಕೆ ರೂ. 3. ಧರ್ಮಾರ್ಥ ಕಳುಹಿಸಲ್ಪಡುವ ಕೆಟಲಾಗಿಗೆ ದಯಮಾಡಿ ಬರಕೊಳ್ಳಿ.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ

ಋತುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ ಲಿಂಗವೃದ್ಧಿ ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಗಳಿಗೆ ಕ್ಷೀರಬಲ

ಆರೋಗ್ಯವೂ ಅದರ ಸಾಧನೆಯೂ

[ಓದಲು ಪುರಾಣ, ತಿನ್ನಲು ಬದನೇಕಾಯಿಯಂತಾಚರಿಸಬಾರದು. ಯಾವುದನ್ನೂ ಅದೃಷ್ಟಕ್ಕೆ ಬಿಡಬಾರದು. ಹಿಂದಿನ ಹಾಳನ್ನು ಕನವರಿಸಿ ಮುಂದೆ ಗೋಳನ್ನುಂಟುಮಾಡಬಾರದು. ಶಕ್ತಿಗೆ ತಕ್ಕ ಸಾಹಸಮಾಡಬೇಕು.]

(ತಾ. 30—8—36ನೇ ದಿವಸ ಪಂಡಿತ ತಾರಾನಾಥರು ತಮ್ಮ ವಿದ್ಯಾರ್ಥಿಗಳೆದುರಿನಲ್ಲಿ 'ಆರೋಗ್ಯವೂ ಅದರ ಸಾಧನೆಯೂ' ಎಂಬ ವಿಷಯದ ಮೇಲೆ ಮಾತನಾಡಿದರು. ಅವರು ಹೇಳಿದ್ದರ ಸಾರಾಂಶ:—)



ಮಿತ್ರರೇ,

ನಿಮ್ಮಲ್ಲನೇಕರು ಇಲ್ಲಿಗೆ ಬಂದ ಬಳಿಕ ಜ್ವರದಿಂದ ಬಳಲಿದ್ದೀರಿ, ಬಳಲುತ್ತಿದ್ದೀರಿ. ನೀವು ಹೇಳಬಹುದು, ಅದು ಇಲ್ಲಿಯ ಹವೆಯ ಗುಣ, ಋತುಮಾನಕ್ಕನುಸರಿಸಿ ಈಗಿನ ಸಮಯದಲ್ಲಿ ಜ್ವರ ಬಂದಿರುವದು ವಿಶೇಷವಲ್ಲವೆಂದು ಆಯುರ್ವೇದದ ಗ್ರಂಥಗಳಲ್ಲಿ ಬೇರೆ ಬೇರೆ ಋತುಗಳಲ್ಲಿ ಬೇರೆಬೇರೆ ಕಾಯಿಲೆಗಳು ಬರುವವೆಂದು ಹೇಳಿರುವದಾದರೂ, ಅವು ಬರದಂತೆ ನೋಡಿಕೊಳ್ಳುವ ಉಪಾಯವೂ ಅಲ್ಲಿ ಸೂಚಿಸಲ್ಪಟ್ಟಿರುವುದರಿಂದ, ಆ ಉಪಾಯಗಳನ್ನು ದುರ್ಲಕ್ಷಿಸಿ ನಮ್ಮ ಕಾಯಿಲೆ ಮಾತ್ರ ಸ್ವಾಭಾವಿಕವಾದದ್ದೆಂದು ಗ್ರಂಥಾಧಾರಗಳನ್ನು ಕೊಟ್ಟು ಸಮರ್ಥಿಸಿಕೊಳ್ಳುವದೆಂದರೆ ಮಹಾತ್ಮರಾದ ಆ ಗ್ರಂಥಕರ್ತರಿಗೆ ಕುಂದನ್ನು ತರುವದಲ್ಲದೆ ಅನ್ಯಥಾ ಇಲ್ಲ. ಹೀಗೆ ಹೇಳುವದು ಮನುಷ್ಯತ್ವಕ್ಕೆ ವಿವೇಕಕ್ಕೆ ಒಂದು ಲೋಪ. ಕೊಂದ ಪಾಪ ತಿಂದು ಪರಿಹಾರವೆಂದು ಹೇಳಿಕೊಂಡಂತೆ.

ಆಯುರ್ವೇದವು ರೋಗ ನಿವಾರಣೆಯ ಉಪಾಯಗಳನ್ನು ವಿಪುಲವಾಗಿ ಸಂಗ್ರಹಿಸಿ ಬೋಧಿಸಿರುವದಾದರೂ ಅದು ಅದಕ್ಕಿಂತಲೂ ಹೆಚ್ಚಿನ ಮಹತ್ತ್ವವನ್ನು ರೋಗ ಪ್ರತಿಬಂಧಕ ವಿಚಾರಗಳಿಗೆ ಕೊಟ್ಟಿದೆ. 'Prevention in better than cure" ಎಂಬದೇ ಆದರ ತತ್ವ; ಅದರ ಮಂತ್ರ. ಆರೋಗ್ಯದಿಂದಿರಲು ಬೇಕಾದ ಸಕಲೋಪಾಯಗಳನ್ನೂ ಅದು ವಿವರಿಸಿದೆ. ಅದಕ್ಕಾಗಿ ಅದು "ದಿನಚರ್ಯೆ" ಅಂದರೆ ನಿತ್ಯದ ನಮ್ಮ ಆಹಾರ ವಿಹಾರಗಳಲ್ಲಿ ನಾವು ಪಾಲಿಸಬೇಕಾದ ನಿಯಮಗಳನ್ನು ಯೋಚಿಸಿ ನಿರ್ಧರಿಸಿ ಹಾಕಿಕೊಟ್ಟಿದೆ. ನಮ್ಮಲ್ಲಿ ಅದು ಒಣ ತತ್ವವೇ ಮಾತ್ರ ಆಗಿರದೆ ಆಚರಣವೂ ಆಗಿರಕೂಡದೆ? ಆಯುರ್ವೇದ ಗ್ರಂಥಕರ್ತರು ಪಟ್ಟ ಕಷ್ಟಕ್ಕೆ ನೀವು ಕೊಡುವ ಪ್ರತಿಫಲವು ನಾವು ತೋರಿಸುವ ಕೃತಜ್ಞತೆಯು 'ಓದಲು ಪುರಾಣ, ತಿನ್ನಲು ಬದನೇ ಕಾಯಿ' ಎಂಬಂತಿರಬೇಕೆ?

ಕಲಿತದ್ದನ್ನು ಆಚರಣದಲ್ಲಿ ತರದೆ ಹೋದರೆ ನಾವು ಬರೇ ಗ್ರಾಮಫೋನುಗಳಿದ್ದಂತೆ; ಅವುಗಳಂತೆ ನಾವು ಬರೇ ಹೇಳಿದ್ದನ್ನು ತಿರುಗಿ ಉಚ್ಚರಿಸುವ ಯಂತ್ರಗಳೇ, ಹಾಗಾಗುವದು ಬುದ್ಧಿ ಗೊತ್ತಿದ್ದ ಮಾತೋ? ಬುದ್ಧಿಯ ಕೆಲಸವು, ಅಷ್ಟು ಮಾತ್ರವೇ ಆದರೆ ಮಾನವನನ್ನು ಇತರ ಜೀವಜಂತುಗಳಿಗಿಂತ ಶ್ರೇಷ್ಠನು ಎಂದು ಹೇಳಿಕೊಳ್ಳುವದರಲ್ಲಿ ಪಡುವ ಅಭಿಮಾನದಲ್ಲಿ ಹಿರಿಯತನವೇನು?

ನಾಳೆ ಇಂದಿನ ಪರಿಣಾಮ, ಅಂದರೆ ಇಂದಿನ ಕೃತಿಯ ರೂಪು ನಾಳಿನ ಜೀವನದಲ್ಲಿ ಬೀಳುವದು. ಇಂದೊಂದು ತಪ್ಪನ್ನಾಚರಿಸಿದರೆ ನಾಳೆ ಅದರ ಪರಿಣಾಮವಾಗದು ಎಂದು ಭಾವಿಸುವದು ಅವಿವೇಕ. ಆದ ತಪ್ಪುಗಳನ್ನು ತಿದ್ದಿಕೊಂಡು ಮುಂದೆ ತಪ್ಪುಗಳಾಗದಂತೆ- ಆಗುವ ತಪ್ಪುಗಳು ಕಡಿಮೆಯಾಗುವಂತೆ ಸತತ ಪ್ರಯತ್ನಿಸುವದೇ ಜೀವನ. ಹುಳಿತದ್ದು ಎಂದು ಗೊತ್ತಾದೊಡನೆಯೇ ಆದನ್ನು ಆಳಿಸಿಬಿಡಬೇಕು. ಆಗಲೇ ಬೆಳವಣಿಗೆಗೆ ದಾರಿ ದೊರೆಯುವುದು. ಆದ ತಪ್ಪಿಗಾಗಿ ಬರೇ ಮರುಗುತ್ತ ಅದನ್ನು ಸುಧಾರಿಸಿಕೊಳ್ಳುವ ಯೋಚನೆಯನ್ನು ಮಾಡದಿದ್ದರೆ ಪ್ರಗತಿ ಹೇಗಾಗಬೇಕು? ತಪ್ಪುವದು ಸ್ವಭಾವ; ಹಾಗೆಂದು ತಪ್ಪನ್ನು ಸುಧಾರಿಸಲೆತ್ನಿಸದಿರುವದು ಅವಿವೇಕ. ಇಂದಿನ ಹಾಳನ್ನೇ ಕಲವರಿಸುತ್ತ ಕೂಡ್ರುವದು ಮುಂದಿನ ಗೋಳಿಗೆ ಆಮಂತ್ರಣ. ಆದದ್ದಾಯಿತು ಮುಂದ ಇಂಥ ತಪ್ಪು ಆಗಕೂಡದು ಎಂಬ ದೃಢನಿಶ್ಚಯದಿಂದ, ಆದ ತಪ್ಪಿಗಾಗಿ ಗೋಳಿಡದೆ ಮುಂದಕ್ಕೆ ಹೆಜ್ಜೆ ಹಾಕುವದರಲ್ಲಿ ಪುರುಷಾರ್ಥವಿದೆ. ಅದನ್ನೇ ಜೀವನ್ಮುಕ್ತಸ್ಥಿತಿಗೆ ಹಾದಿ ಎಂದು ಹೇಳಬಹುದು. ಇಂದಿನ ಕೃತ್ಯಗಳ ವಿವೇಚನೆಯನ್ನು ಮಾಡಿ ತಪ್ಪು-ಒಪ್ಪುಗಳನ್ನು ನಿರ್ಧರಿಸಿ ಜೀವಿತದ ಮುಂದಿನ ರೀತಿಯನ್ನು ಹಾಕಿಕೊಳ್ಳುವುದೇ ನಾಳಿನ ಜೀವನವನ್ನು ಯಶಸ್ವಿಯನ್ನಾಗಿ ಮಾಡಿಕೊಳ್ಳುವ ಮಾರ್ಗ. "ನಾಳೆ ಎನ್ನುವವನ ಮನೆ ಹಾಳು" ಎಂಬಂತೆ ಇಂದೇ ಮಾಡಬೇಕಾದ, ಮಾಡಬಹುದಾದ ಕೆಲಸವನ್ನು ನಾಳೆಗೆ ಹಾಕುವದೇ ಅಧೋಗತಿಯ ಹಾದಿ. ಅದೃಷ್ಟವು—ಅದೃಷ್ಟವೇ. ಅದೆಂತಿದೆಯೋ ತಿಳಿಯದು. ಆದರೆ ಮಾನವನು ಯಾವದನ್ನೂ ಅದೃಷ್ಟಕ್ಕೆ (accident) ಬಿಡದೆ ಸ್ವಶಕ್ತಿಯನ್ನವಲಂಬಿಸಿ ನಡೆಯುವದೇ ಜಾಣತನದ ಕುರುಹು. ಈ ಅರ್ಥದಲ್ಲಿ- ಅಂದರೆ ಜೀವಿತದ ಸಾರವು ಪ್ರಗತಿಯಲ್ಲಿರಬೇಕಾದದ್ದು ನ್ಯಾಯವೆಂಬ ದೃಷ್ಟಿಯಲ್ಲಿ- ಜೀವಿತವು ಸುಲಭವಲ್ಲ. ಪ್ರಗತಿಯ ಮಾರ್ಗದಲ್ಲಿ ಸಾರಾಸಾರ ವಿಚಾರಬುದ್ಧಿಗೆ ಹೆಜ್ಜೆ ಹೆಜ್ಜೆಗೂ ಕಾರ್ಯವಿದ್ದೇ ಇದೆ. ತನ್ನ ಜೀವಿತದಲ್ಲಿಯೇ ಉತ್ಸಾಹವಿಲ್ಲದನು ಇತರರ ಜೀವಿತದಲ್ಲಿ ಅದನ್ನು ಹೇಗೆ ತುಂಬಬಲ್ಲನು?

ಜೀವಿತವು ನಮಗೊಂದು ಪ್ರಸಾದ. ಆಹಾರ, ನಿದ್ರೆ, ಭಯ ಮೈಥುನಗಳು ಜೀವಿತ ಮಾತ್ರಕ್ಕೆ ಸಹಜವಾದುದೇಯೆಂದು ಜೀವಿತವನ್ನೆಲ್ಲ ನಿಸರ್ಗಕ್ಕೆ ಯಂತ್ರವತ್ ಗಿಡ, ಮರ, ಪಶುಗಳಂತೆ ಒಪ್ಪಿಸಿ ಬಿಡುವದಾದರೆ ಮಾನವರಿಗೂ ಅವುಗಳಿಗೂ ಭೇದವಿರಲಾರದು. ಈ ವಿಷಯವಾಗಿ ಸಾಧು ಕಬೀರರು "ಆದಮಿಕಾ ಆದಮಿ ಸಬಕೊಯಿ ಕಹತೆ- ಆದಮಿಕಾ ಬಡಾ ಸುಕಾಲ ಹೈ, ಮಗರ್ ಜಿಸ್ ಆದಮೀಮೇ ಆದಮಿಯತ ಹೈ, ಉಸ್ಕ ಬಡಾ ದುಕಾಲ ಹೈ" ಎಂದು ಹೇಳಿದ್ದಾರೆ. (ಎಲ್ಲಿ ನೋಡಿದರೂ ಮನುಷ್ಯರ ಸುಕಾಲ! ಆದರೆ ಮನುಷ್ಯತ್ವವನ್ನಿಟ್ಟುಕೊಂಡ ಮನುಷ್ಯರದು ಮಾತ್ರ ಬರಗಾಲ. ದೇಹರಚನೆಯು ಮನುಷ್ಯನಂತಿದ್ದ ಮಾತ್ರಕ್ಕೆ ಅವ ನಲ್ಲ ಮಾನವನ್ನೆನಿಸಿಯೆಂದಲ್ಲ. ಜೀವಿತವು ಸದುಪಯೋಗಕ್ಕಾಗಿ ಎಂದು ಭಾವಿಸದೆ ಹೋದರೆ ಅದು ನಿಷ್ಪ್ರಯೋಜಕವಾಗುವದು. ಅಂಥ ಜೀವಿತಕ್ಕೆ ಅಪಯಶಸ್ಸೇ ಕಟ್ಟಿಟ್ಟ ಬುತ್ತಿ. ಸಾಮಾನ್ಯ ಮನುಷ್ಯನು ತನ್ನ ತಪ್ಪಿಗಾಗಿ ಒಂದು ಸಮಾಧಾನವನ್ನು ಹುಡುಕಿಕೊಳ್ಳುವನು. ಅಂದರೆ ತನ್ನ ಕೃತಿಯನ್ನು ಯಾರಾದರೂ ಹೇಳಿಕೆಯನ್ನು ಮುಂದಿಟ್ಟು ಸಮರ್ಥಿಸಿ ಸಲವಳಿಸಿಕೊಳ್ಳುವನು. ಬೇಕಷ್ಟಕ್ಕಿಂತಲೂ ಹೆಚ್ಚಿಗೆ ತಿಂದು ಅಜೀರ್ಣವಾಗಿ ಜ್ವರ ಬಂದರೂ ಅದು ಋತುವಿನ ದೋಷ, ವಾಗ್ಭಟಾಚಾರ್ಯರು ಈ ಋತುವಿನಲ್ಲಿ ಜ್ವರಬರಬಹುದೆಂದು ಹೇಳಿದ್ದಾರೆ ಎಂದು ತನ್ನ ಮನಸ್ಸನ್ನೂ ಇತರರ ಕುತೂಹಲವನ್ನೂ ಸಮಾಧಾನಪಡಿಸಿ ದೊಡ್ಡ ಮನುಷ್ಯನಾಗಲೆತ್ನಿಸುವನು. ಆದರೆ ಇದು ಸತ್ಯವಾಗಬಹುದೋ? ಸತ್ಯವು ಸ್ವಪರ ವಂಚಕರು ಹುಡುಕಿಕೊಳ್ಳುವ ಸಮಾಧಾನದಲ್ಲಿಲ್ಲ. ತತ್ವಶೋಧನೆಯಲ್ಲಿಯೇ ಇದೆ ಅದು. ಮಾನವ್ಯವನ್ನು ಹೊಂದುವದೇ ಜೀವಿತದ ಗುರಿ ಎಂಬ ನಿಶ್ಚಯವು ನಮ್ಮದಾದಾಗ ಅದರ ಸಂಪಾದನೆಯೇ ನಮ್ಮ ಕರ್ತವ್ಯವಾಗುವದಲ್ಲವೇ?

ಈ ಕರ್ತವ್ಯ ಪಾಲನೆಯಲ್ಲಿ ಅನೇಕಾನೇಕ ಎಡರು ತೊಡರುಗಳು ಬರುವವು. ಅವುಗಳಲ್ಲಿ ಧರ್ಮ, ರೂಢಿ, ಸಂಪ್ರದಾಯಗಳ ಮೂಲಕವಾಗಿ ಬರುವವೇ ಹೆಚ್ಚಿನವು ಮತ್ತು ಬಲವಾದವು. ಇವುಗಳ ಕಟ್ಟಿನಲ್ಲಿ ಸಿಲುಕಿ ಅನ್ಯಾಯವನ್ನು ನ್ಯಾಯವೆಂದು ನಾವು ತಿಳಿಯುತ್ತೇವೆ. ಅದರಂತೆಯೇ ಆಚರಿಸುತ್ತೇವೆ. ಇವುಗಳ ವಿಷಯವಾಗಿ ನಾನು ಎಷ್ಟೋ ಸಲ ನಿಮಗೆ ಹೇಳಿದ್ದೇನೆ. ಪುನಃ ಅವುಗಳನ್ನು ಇಲ್ಲಿ ಹೇಳುವ ಕಾರಣವಿಲ್ಲ. ಸಾರಾಂಶವಿಷ್ಟೇ- ಉತ್ತಮ: ಯೋಗ್ಯ ಮಾತನ್ನು ಕೃತಿಯಲ್ಲಿ ತರುವಾಗ ರೂಢಿ, ಸಂಪ್ರದಾಯ ಇತ್ಯಾದಿಗಳನ್ನು ಗಣನೆಗೆ ತಾರದೆ ಇರುವದೇ ಧೈರ್ಯ. ರೂಢಿ ಸಂಪ್ರದಾಯಗಳು ಕರ್ತವ್ಯಕ್ಕೆ ಚ್ಯುತಿಯನ್ನುಂಟುಮಾಡಬಾರದು.

ಒಟ್ಟಿನಲ್ಲಿ ಮೂರು ವಿಷಯಗಳನ್ನು ಹೇಳಿದಂತಾಯಿತು. (೧) ಯಾವದನ್ನೂ ಅದೃಷ್ಟಕ್ಕೆ ಬಿಡಬಾರದು (೨) ಹಿಂದಿನ ಹಾಳನ್ನು ಕಲವರಿಸಿ ಮುಂದೆ ಗೋಳನ್ನುಂಟುಮಾಡಿಕೊಳ್ಳಬಾರದು. (೩) ಶಕ್ತಿಗೆ ತಕ್ಕ ಸಾಹಸಮಾಡಲೇ ಬೇಕು.

ಇಷ್ಟೆಲ್ಲಾ ಮಾಡಿದರೂ ತಪ್ಪುಗಳಾಗಬಹುದು, ಆದರೆ ಅವಾಗ ಆಗುವ ತಪ್ಪುಗಳು ತೀರ ಕಡಿಮೆಯಾಗಿರುವವು. ಅದಲ್ಲದೆ ವಿಚಾರಶೀಲ ಸಾಹಸಿಗಳಿಗೆ ಅವುಗಳಿಂದ ಅಷ್ಟು ಚಿಂತೆಯುಂಟಾಗುವದಿಲ್ಲ. ತಪ್ಪು ಕಡಿಮೆಯಾಗಿ ಒಪ್ಪು ಹೆಚ್ಚಾಗುವಂತೆ ಪ್ರಯತ್ನಿಸುವದೇ ಮಾನವ್ಯದ ಲಕ್ಷಣವೆಂಬುದೂ ಮಾನವನ ಧರ್ಮವೆಂಬದೂ ನೆನಪಿನಲ್ಲಿರಲಿ.

(ವರುಂದುವರಿಯುವುದು)

ಗಂಗಾಧರ ಗೋಪಾಲಕೃಷ್ಣ ಹೆಗಡೆ,
ಪತ್ರಿಕೋದ್ಯಮ ಶಾಲಾ, ವಿದ್ಯಾರ್ಥಿ,
ತುಂಗಭದ್ರ.

ನೋಟೀಸು.

ದಿ ಕರ್ನಾಟಕ ಬೇಂಕ್ ಲಿಮಿಟೆಡ್, ಉಡುಪಿ..

ಈ ಮೂಲಕ ಸರ್ವರಿಗೂ ತಿಳಿಸುವದೇನಂದರೆ, ಈ ಕೆಳಗೆ ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡದ ಸಾಲಗಳ ಮೊಬಲಗನ್ನಾಗಲಿ ವ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದಿದ್ದುದರಿಂದ ಸದರಿಯವರಿಗೆ ಕೊಟ್ಟ ರಿಜಿಸ್ಟ್ರಿ ನೋಟೀಸುಗಳ ಪೈಕಿ 1ನೇ ಯವರು ಮೃತಪಟ್ಟಿರುತ್ತಾರಂತಲೂ ಮತ್ತು 2ನೆಯವರು ನೋಟೀಸು ಜ್ಯಾರಿಗೆ ತಪ್ಪಿಸುತ್ತಾರೆಂತಲೂ ತಿಳಿದು ಬಂದ ಪ್ರಯುಕ್ತ ಬೇಂಕಿಗೆ ಬರತಕ್ಕ ಅಸಲು ಬಡ್ಡಿ ಐವೇಜು ಮತ್ತು ಖರ್ಚು ವಗೈರೆಯನ್ನು ಇದೇ ಇಸವಿ ಸಪ್ಟಂಬರ ತಾರೀಕು 16ನೇ ಬುಧವಾರ ಮಧ್ಯಾಹ್ನ 3 ಗಂಟೆ ಒಳಗೆ ಬೇಂಕಿಗೆ ಸದರಿ ಲೋನುಗಳ ಆಸ್ಸಾಮಿಗಳೂ ಮತ್ತು ಮೃತರವಾರೀಸುದಾರರೂ ಅವರವ ಹಕ್ಕುಗಳನ್ನು ಧೃಢಪಡಿಸಿ ವ ಸ್ಥಾಪಿಸಿ ತಂದು ಕೊಟ್ಟು, ಅವರವರ ಲೋನುಗಳನ್ನು ಬಿಡಿಸಿಕೊಂಡು ಹೋಗದಿದ್ದರೆ, ಸದರಿ ಲೋನುಗಳ ಬಾಬ್ತು ಎಲ್ಲಾ ನಗಗಳನ್ನು ಇದೇ ತಿಂಗಳ ತಾರೀಕು 18ನೇ ಶುಕ್ರವಾರ ಮಧ್ಯಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ತಿಳಿದಿರುವುದು.

ಅಂಕಿ ನಂಬ್ರ	ಸಾಲದ ನಂಬ್ರ	ಅಸ್ಸಾಮಿಗಳ ವಿವರ	ಸಾಲದ ಮೊಬಲಗು ರೂ
1	873/35	ಸಂತೆಕಟ್ಟೆಯಲ್ಲಿರುವ ನಾಗಮ್ಮನ ಮಗಳು ಮತ್ತು ಮೋಟಾರ್ ಡ್ರೈವರ್ ಕೃಷ್ಣಪ್ಪನ ಸೊಸೆಯು. ಸರಸ್ವತಿ ಕಾಡಬೆಟ್ಟು ಉಡುಪಿ. ...	326 0
2	147/34	ಉಡುಪಿ ಕಸ್ಬೆಯಲ್ಲಿರುವ ಶ್ರೀನಿವಾಸ ಭಂಡಾರ್‌ಕಾರ್‌ನ ಮಗ ನರಸಿಂಗ ಭಂಡಾರ್‌ಕಾರ್ ಉಡುಪಿ.	105 0

ಬೇಂಕಿನ ಆಫೀಸು
ತೆಂಕಪೇಟೆ, ಉಡುಪಿ,
ತಾ. 10—9—1936.

AGENT.

ಮಧುವನ

ಕರ್ನಾಟಕದೊಳಗಿನ

ಬೇರೆ ಬೇರೆ ೨೫ ಕತೆಗಾರರು

ಬರೆದ ೨೫ ಸಣ್ಣ ಕತೆಗಳ ಸಂಗ್ರಹವೇ

ಮಧುವನ

'ಕಿರಿಯರ ಪ್ರಪಂಚ'ದ ಹೊಸ ಪ್ರಕಟಣೆ.

ಕತೆಗಾರರ ಭಾವಚಿತ್ರ, ಪರಿಚಯವನ್ನೊಳಗೊಂಡ

ಆದರ್ಶ ಗ್ರಂಥ.

ಬೆಲೆ 1—8—0

ಕಿರಿಯರ ಪ್ರಪಂಚ

ಪ್ರೇಮ ವಿದ್ಯಾಪೀಠ

ತುಂಗಭದ್ರಾ (ಬಳ್ಳಾರಿ ಜಿಲ್ಲಾ)

ಇದರ ಹೊಸ ವರ್ಷವು ಜೂಲ್ಯಾಯಲ್ಲಿ ಮೊದಲಾಗುತ್ತದೆ ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲ ಶಿಕ್ಷಣವನ್ನು ಪಡೆಯಿರಿ ಮುಲ್ಕಿ, ಅಪ್ಪರ್ ಸೆಕೆಂಡರಿ ಮೆಟ್ರಿಕ್, ಸ್ಕೂಲ್ ಫ್ಯಾನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ ಪ್ರೋಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟ್ಯಾಂಪ್ ಇಟ್ಟು ಬರೆಯಿರಿ

ಮಹೋಪಾಧ್ಯಾಯಾ ಡಾ| **ಸುಮತಿಬಾಯಿ,**

ಬಿ ಎ ಎಲ್ ಟಿ, ಎಫ್ ೭ ಎಸ್ ಎಸ್ ಭಿಷಗ್ರತ್ನ, ರಿಜಿಸ್ಟ್ರಾರ್.

ಇದೇ 1936ನೇ ಫ್ಯಾಶನಿನ ಉಡಿಗೆತೊಡಿಗೆಗಳು ಎಲ್ಲಿ ಸಿಗುತ್ತವೆ?

ಬನ್ನಿರಿ! ನೋಡಿರಿ!! ಕೊಂಡುಕೊಳ್ಳಿರಿ!!!

ಮೆಸರ್ಸ್ ಬೆಳ್ಳಣ್ಣ ಕಾರ್ ಮತ್ತು ಕಟೀಲ್‌ಕಾರ್

ಜವುಳಿ ಅಂಗಡಿ ಕುಂದಾಪುರ ಇವರಲ್ಲಿ.

ಇದೀಗಲೇ ಬಂದಿರುವ ನೂತನವಾದ ನಾಜೂಕು ತರಹ ಹಾಗೂ ಅಂದವಾದ ಬಣ್ಣಗಳಿಂದ ಶೋಭಿಸುವ ಹೊಸ ಹೊಸ ನಮೂನೆಯಲ್ಲಿ ಆರಿಸಿ ತರಿಸಿರುವ ಬೊಂಬಾಯಿ, ಬನಾರಿಸ್, ಅಹಮ್ಮದಾಬಾದು, ಕಾಶ್ಮೀರ, ಪೂನಾ, ಮದ್ರಾಸು, ಸೇಲಂ, ಕೊಯಮುತ್ತೂರು, ತಿಪ್ಪೂರ ಮಧುರ, ತಿರುಚಿನಾಪಳ್ಳಿ ಮೊದಲಾದ ಪ್ರಸಿದ್ಧ ಊರುಗಳ ಸೀರೆಗಳೂ ದೋತಿಗಳೂ, ಕಣಗಳೂ, ಕೋಟಿಂಗ್, ಶರ್ಟಿಂಗ್ ಬಟ್ಟೆಗಳೂ, ಜರಿ ಶಾಲುಗಳೂ ಮಿತವಾದ ಕ್ರಯಕ್ಕೆ ದೊರೆಯುತ್ತವೆ

ಶುದ್ಧ ಕೈನೂಲಿನ ಖಾದಿ ಶರ್ಟಿಂಗ್, ಕೋಟಿಂಗ್ ವಗೈರೆ ಅಚ್ಚ ಸ್ವದೇಶಿ ಬಟ್ಟೆಬರೆಗಳೂ ಸದಾ ದೊರಕುತ್ತವೆ ನಿತ್ಯ ಉಪಯೋಗದ ಶುಭ ಶೋಭನದ ಹಾಗೂ ಉಡುಗೊರೆ ಉಚಿತಗಳಿಗೆ ಬೇಕಾದ ತರ ತರದ ಜವುಳಿಯು ಸುಲಭದರದಲ್ಲಿ ರಖಂ ಆಗಿಯೂ ಚಿಲ್ಲರೆಯಾಗಿಯೂ ಕೊಂಡುಕೊಳ್ಳಬಹುದು

ಒಮ್ಮೆ ಬಂದು ನೋಡಿ ಸಮಾಧಾನ ಮಾಡಿಕೊಳ್ಳಿರಿ

THE

Commonwealth Assurance Co. Ltd.

(ESTD 1923)

Chairman, Mr N C Kelkar Ex M L A

Head Office	Chief Agency Office
POONA CITY.	**HAMPANKATTA, MANGALORE.**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೋಲಿಸಿದಾರರಿಗೆ ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಯಿರಿ

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್

ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು

ವಿದ್ಯಾ ಸಂಸ್ಥೆಗೆ ಸಹಾಯಮಾಡಿರಿ ! ಸತ್ಕಾರ್ಯಕ್ಕೆ ಪ್ರೋತ್ಸಾಹಕೊಡಿಸಿರಿ"

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಯೋಗ್ಯ ಕಮಿಟಿಯವರಿಂದ ನಡಿಸಲ್ಪಡುವುದು.

ಎ. ಬಿ. ಶೆಟ್ಟಿ, ಎಸ್ಕ್ವಾಯರ್, ಎಂ. ಎಲ್. ಸಿ ಪ್ರೆಸಿಡೆಂಟ್.	ಡಾ| ಎಂ. ಆರ್ ಕಾಮತ್, ಎಲ್ ಎ ಸಿ ವ್ಯಾಯಿಸ್ ಪ್ರೆಸಿಡೆಂಟ್.

ರೂ. **20,000**/ ವು **1,789** ಇನಾಮುಗಳಾಗಿ ಹಂಚಲ್ಪಡುವುದು.

ಪ್ರಥಮ ಬಹುಮಾನ ರೂ. **5,000**/ ದ್ವಿತೀಯ ಬಹುಮಾನ ರೂ **2,000**/-

ತೃತೀಯ ಬಹುಮಾನ ರೂ **1,000**/-

ಟಿಕೇಟು ಒಂದರ ಕ್ರಯ ಆಣೆ ನಾಲ್ಕು ಮಾತ್ರ.

ಚೀಟು ಆಖೈರು ತಾರೀಕು 25—1—1937] [ಸೋಡ್ತಿ ತೆಗೆಯುವ ತಾರೀಕು 31—1—1937

30 ಟಿಕೇಟುಗಳಿರುವ ಪುಸ್ತಕಕ್ಕೆ ರೂ 5 ಮಾತ್ರ ಟಿಕೇಟು ಪುಸ್ತಕಗಳು ನಗದಿಯಾಗಿ ವಿಕ್ರಯಿಸಲ್ಪಡುವವು. ಟಿಕೇಟು ಮಾರಿ ರೂ. 350/ ಕ್ಕೂ ಹೆಚ್ಚು ಸಂಗ್ರಹಿಸಿಕೊಟ್ಟವರೊಳಗ ರೂ. 200/ ರ ಒಂದು ರೂ 100/-ರ ಎರಡು ಮತ್ತು ರೂ 50/ ರ 84 ಇನಾಮುಗಳು ಹಂಚಲ್ಪಡುವವು

ಟಿಕೇಟು ವಿಕ್ರಿತದಿಂದ ರೂ. 35/ ಮತ್ತು ಹೆಚ್ಚು ಮಾಡಿಕೊಟ್ಟವರಿಗೆ ಶೇಕಡಾ 6¼ರಂತೆ ಕಮಿಶನ್ ಕೊಡಲಾಗುವುದು

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಈ ಕೆಳಗಿನವರಿಗೆ ಬರದುಕೊಳ್ಳಿರಿ—

ಸೆಕ್ರೆಟರಿ,

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಹೈಸ್ಕೂಲ್ ಸಹಾಯಾರ್ಥ)

ಮೂಲ್ಕಿ, ದ. ಕನ್ನಡ
3—9—1936

THE

RADHA BANK, LTD

MANGALORE. *(Branch)*

TEMPLE VIEW GANAPATI TEMPLE ST WEST

ದಿ ರಾಧಾ ಬೇಂಕ್ ಲಿಮಿಟೆಡ್.

ಮಂಗಳೂರು. (ಬ್ರಾಂಚ್) 'ಟೆಂಪಲ್ ವ್ಯೂ' ಗಣಪತಿ ಟೆಂಪಲ್ ರಸ್ತೆ

ಚಾಲ್ತಿ ಠೇವಣಾತಿಗಳು ಸಾ| ಶೇ| 2½

ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ| ಶೇ| 4

ಕಾಲಿಕ ಠೇವಣಾತಿಗಳು,

1 ತಿಂಗಳ ಬಾಬ್ತು ಸಾ| ಶೇ| 3 6 ತಿಂಗಳ ಬಾಬ್ತು ಸಾ| ಶೇ| 4½ 12 ತಿಂಗಳ ಬಾಬ್ತು ಯಾ ಅದರ ಮೇಲೆ ಸಾಲಿಯಾನ ಶೇಕಡ 6

ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುತ್ತದೆ

ಚಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೊಡುತ್ತದೆ

U. B. SOMESH RAO,

Managing Director

ಆರೋಗ್ಯವೂ ಅದರ ಸಾಧನೆಯೂ

[ಓದಲು ಪುರಾಣ, ತಿನ್ನಲು ಬದನೇಕಾಯಿಯಂತಾಚರಿಸಬಾರದು. ಯಾವುದನ್ನೂ ಅದೃಷ್ಟಕ್ಕೆ ಬಿಡಬಾರದು. ಹಿಂದಿನ ಹಾಳನ್ನು ಕೆದವರಿಸಿ ಮುಂದೆ ಗೋಳನ್ನುಂಟುಮಾಡಬಾರದು. ಶಕ್ತಿಗೆ ತಕ್ಕ ಸಾಹಸಮಾಡಬೇಕು.]

(ತಾ. ೩೦—೮—೩೬ನೇ ದಿವಸ ಪಂಡಿತ ತಾರಾನಾಥರು ತಮ್ಮ ವಿದ್ಯಾರ್ಥಿಗಳೆದುರಿನಲ್ಲಿ 'ಆರೋಗ್ಯವೂ ಅದರ ಸಾಧನೆಯೂ' ಎಂಬ ವಿಷಯದ ಮೇಲೆ ಮಾತನಾಡಿದರು. ಅವರು ಹೇಳಿದ್ದರ ಸಾರಾಂಶ:—)

ಮಿತ್ರರೇ,

ನಿಮ್ಮಲ್ಲನೇಕರು ಇಲ್ಲಿಗೆ ಬಂದ ಬಳಿಕ ಜ್ವರದಿಂದ ಬಳಲಿದ್ದೀರಿ, ಬಳಲುತಿದ್ದೀರಿ. ನೀವು ಹೇಳಬಹುದು, ಅದು ಇಲ್ಲಿಯ ಹವೆಯ ಗುಣ, ಋತುಮಾಸಕ್ಕನುಸರಿಸಿ ಈಗಿನ ಸಮಯದಲ್ಲಿ ಜ್ವರ ಬಂದಿರುವದು ವಿಶೇಷವಲ್ಲವೆಂದು. ಆಯುರ್ವೇದದ ಗ್ರಂಥಗಳಲ್ಲಿ ಬೇರೆ ಬೇರೆ ಋತುಗಳಲ್ಲಿ ಬೇರೆಬೇರೆ ಕಾಯಿಲೆಗಳು ಬರುವವೆಂದು ಹೇಳಿರುವದಾದರೂ, ಅವು ಬರದಂತೆ ನೋಡಿಕೊಳ್ಳುವ ಉಪಾಯವೂ ಅಲ್ಲಿ ಸೂಚಿಸಲ್ಪಟ್ಟಿರುವುದರಿಂದ, ಆ ಉಪಾಯಗಳನ್ನು ದುರ್ಲಕ್ಷಿಸಿ ನಮ್ಮ ಕಾಯಿಲೆ ಮಾತ್ರ ಸ್ವಾಭಾವಿಕವಾದದ್ದೆಂದು ಗ್ರಂಥಾಧಾರಗಳನ್ನು ಕೊಟ್ಟು ಸಮರ್ಥಿಸಿಕೊಳ್ಳುವದೆಂದರೆ ಮಹಾತ್ಮರಾದ ಆ ಗ್ರಂಥಕರ್ತರಿಗೆ ಕುಂದನ್ನು ತರುವದಲ್ಲದೆ ಅನ್ಯಥಾ ಇಲ್ಲ. ಹೀಗೆ ಹೇಳುವದು ಮನುಷ್ಯತ್ವಕ್ಕೆ ವಿವೇಕಕ್ಕೆ ಒಂದು ಲೋಪ. ಕೊಂದ ಪಾಪ ತಿಂದು ಪರಿಹಾರವೆಂದು ಹೇಳಿಕೊಂಡಂತೆ.

ಆಯುರ್ವೇದವು ರೋಗ ನಿವಾರಣೆಯ ಉಪಾಯಗಳನ್ನು ವಿಪುಲವಾಗಿ ಸಂಗ್ರಹಿಸಿ ಬೋಧಿಸಿರುವದಾದರೂ ಅದು ಅದಕ್ಕಿಂತಲೂ ಹೆಚ್ಚಿನ ಮಹತ್ವವನ್ನು ರೋಗ ಪ್ರತಿಬಂಧಕ ವಿಚಾರಗಳಿಗೆ ಕೊಟ್ಟಿದೆ. "Prevention in better than cure" ಎಂಬದೇ ಅದರ ತತ್ವ; ಅದರ ಮಂತ್ರ. ಆರೋಗ್ಯದಿಂದಿರಲು ಬೇಕಾದ ಸಕಲೋಪಾಯಗಳನ್ನೂ ಅದು ವಿವರಿಸಿದೆ. ಅದಕ್ಕಾಗಿ ಅದು "ದಿನಚರ್ಯೆ" ಅಂದರೆ ನಿತ್ಯದ ನಮ್ಮ ಆಹಾರ ವಿಹಾರಗಳಲ್ಲಿ ನಾವು ಪಾಲಿಸಬೇಕಾದ ನಿಯಮಗಳನ್ನು ಯೋಚಿಸಿ ನಿರ್ಧರಿಸಿ ಹಾಕಿಕೊಟ್ಟಿದೆ. ನಮ್ಮಲ್ಲಿ ಅದು ಒಣ ತತ್ವವೇ ಮಾತ್ರ ಆಗಿರದೆ ಆಚರಣವೂ ಆಗಿರಕೂಡದೆ? ಆಯುರ್ವೇದ ಗ್ರಂಥಕರ್ತರು ಪಟ್ಟ ಕಷ್ಟಕ್ಕೆ ನೀವು ಕೊಡುವ ಪ್ರತಿಫಲವು ನಾವು ತೋರಿಸುವ ಕೃತಜ್ಞತೆಯು 'ಓದಲು ಪುರಾಣ, ತಿನ್ನಲು ಬದನೇಕಾಯಿ' ಎಂಬಂತಿರಬೇಕೆ?

ಕಲಿತದ್ದನ್ನು ಆಚರಣದಲ್ಲಿ ತರದೆ ಹೋದರೆ ನಾವು ಬರೇ ಗ್ರಾಮಫೋನುಗಳಿದ್ದಂತೆ; ಅವುಗಳಂತೆ ನಾವು ಬರೇ ಹೇಳಿದ್ದನ್ನು ತಿರುಗಿ ಉಚ್ಚರಿಸುವ ಯಂತ್ರಗಳೇ, ಹಾಗಾಗುವದು ಬುದ್ಧಿಗೊಪ್ಪಿದ ಮಾತೋ? ಬುದ್ಧಿಯ ಕೆಲಸವು, ಅಷ್ಟು ಮಾತ್ರವೇ ಆದರೆ ಮಾನವನನ್ನು ಇತರ ಜೀವಜಂತುಗಳಿಗಿಂತ ಶ್ರೇಷ್ಠನು ಎಂದು ಹೇಳಿಕೊಳ್ಳುವದರಲ್ಲಿ ಪಡುವ ಅಭಿಮಾನದಲ್ಲಿ ಹಿರಿಯತನವೇನು?

ನಾಳೆ ಇಂದಿನ ಪರಿಣಾಮ, ಅಂದರೆ ಇಂದಿನ ಕೃತಿಯು ರೂಪು ನಾಳಿನ ಜೀವನದಲ್ಲಿ ಬೀಳುವದು. ಇಂದೊಂದು ತಪ್ಪನ್ನಾಚರಿಸಿದರೆ ನಾಳೆ ಅದರ ಪರಿಣಾಮವಾಗದು ಎಂದು ಭಾವಿಸುವದು ಅವಿವೇಕ. ಆದ ತಪ್ಪುಗಳನ್ನು ತಿದ್ದಿಕೊಂಡು ಮುಂದೆ ತಪ್ಪುಗಳಾಗದಂತೆ– ಆಗುವ ತಪ್ಪುಗಳು ಕಡಿಮೆಯಾಗುವಂತೆ ಸತತ ಪ್ರಯತ್ನಿಸುವದೇ ಜೀವನ. ಹುಳಿತದ್ದು ಎಂದು ಗೊತ್ತಾದೊಡನೆಯೇ ಅದನ್ನು ಅಳಿಸಿಬಿಡಬೇಕು. ಆಗಲೇ ಬೆಳವಣಿಗೆಗೆ ದಾರಿ ದೊರೆಯುವುದು. ಆದ ತಪ್ಪಿಗಾಗಿ ಬರೇ ಮರುಗುತ್ತ ಅದನ್ನು ಸುಧಾರಿಸಿಕೊಳ್ಳುವ ಯೋಚನೆಯನ್ನು ಮಾಡದಿದ್ದರೆ ಪ್ರಗತಿ ಹೇಗಾಗಬೇಕು? ತಪ್ಪುವದು ಸ್ವಭಾವ; ಹಾಗೆಂದು ತಪ್ಪನ್ನು ಸುಧಾರಿಸಲೆತ್ನಿಸದಿರುವದು ಅವಿವೇಕ. ಇಂದಿನ ಹಾಳನ್ನೇ ಕಲವರಿಸುತ್ತ ಕೂಡ್ರುವದು ಮುಂದಿನ ಗೋಳಿಗೆ ಆಮಂತ್ರಣ. ಆದದ್ದಾಯಿತು ಮುಂದೆ ಇಂಥ ತಪ್ಪು ಆಗಕೂಡದು ಎಂಬ ದೃಢನಿಶ್ಚಯದಿಂದ, ಆದ ತಪ್ಪಿಗಾಗಿ ಗೋಳಿಡದೆ ಮುಂದಕ್ಕೆ ಹೆಜ್ಜೆ ಹಾಕುವದರಲ್ಲಿ ಪುರುಷಾರ್ಥವಿದೆ. ಅದನ್ನೇ ಜೀವನ್ಮುಕ್ತಸ್ಥಿತಿಗ ಹಾದಿ ಎಂದು ಹೇಳಬಹುದು. ಇಂದಿನ ಕೃತ್ಯಗಳ ವಿವೇಚನೆಯನ್ನು ಮಾಡಿ ತಪ್ಪು-ಒಪ್ಪುಗಳನ್ನು ನಿರ್ಧರಿಸಿ ಜೀವಿತದ ಮುಂದಿನ ರೀತಿಯನ್ನು ಹಾಕಿಕೊಳ್ಳುವುದೇ ನಾಳಿನ ಜೀವನವನ್ನು ಯಶಸ್ವಿಯನ್ನಾಗಿ ಮಾಡಿಕೊಳ್ಳುವ ಮಾರ್ಗ. "ನಾಳೆ ಎನ್ನುವವನ ಮನೆ ಹಾಳು" ಎಂಬಂತೆ ಇಂದೇ ಮಾಡಬೇಕಾದ, ಮಾಡಬಹುದಾದ ಕೆಲಸವನ್ನು ನಾಳೆಗೆ ಹಾಕುವದೇ ಅಧೋಗತಿಯ ಹಾದಿ. ಅದೃಷ್ಟವು—ಅದೃಷ್ಟವೇ. ಅದೆಂತಿದೆಯೋ ತಿಳಿಯದು. ಆದರೆ ಮಾನವನು ಯಾವದನ್ನೂ ಅದೃಷ್ಟಕ್ಕೆ (accident) ಬಿಡದೆ ಸ್ವಶಕ್ತಿಯನ್ನವಲಂಬಿಸಿ ನಡೆಯುವದೇ ಜಾಣತನದ ಕುರುಹು. ಈ ಅರ್ಥದಲ್ಲಿ- ಅಂದರೆ ಜೀವಿತವ ಸಾರವು ಪ್ರಗತಿಯಲ್ಲಿರಬೇಕಾದದ್ದು ನ್ಯಾಯವೆಂಬ ದೃಷ್ಟಿಯಲ್ಲಿ- ಜೀವಿತವು ಸುಲಭವಲ್ಲ ಪ್ರಗತಿಯ ಮಾರ್ಗದಲ್ಲಿ ಸಾರಾಸಾರ ವಿಚಾರಬುದ್ಧಿಗೆ ಹೆಜ್ಜೆ ಹೆಜ್ಜೆಗೂ ಕಾರ್ಯವಿದ್ದೇ ಇದೆ. ತನ್ನ ಜೀವಿತದಲ್ಲಿಯೇ ಉತ್ಸಾಹವಿಲ್ಲದನು ಇತರರ ಜೀವಿತದಲ್ಲಿ ಅದನ್ನು ಹೇಗೆ ತುಂಬಬಲ್ಲನು?

ಜೀವಿತವು ನಮಗೊಂದು ಪ್ರಸಾದ. ಆಹಾರ, ನಿದ್ರಾ, ಭಯ ಮೈಥುನಗಳು ಜೀವಿತ ಮಾತ್ರಕ್ಕೆ ಸಹಜವಾದುದೇಯೆಂದು ಜೀವಿತವನ್ನೆಲ್ಲ ನಿಸರ್ಗಕ್ಕೆ ಯಂತ್ರವತ್ ಗಿಡ, ಮರ, ಪಶುಗಳಂತೆ ಒಪ್ಪಿಸಿಬಿಡುವದಾದರೆ ಮಾನವರಿಗೂ ಅವುಗಳಿಗೂ ಭೇದವಿರಲಾರದು. ಈ ವಿಷಯವಾಗಿ ಸಾಧು ಕಬೀರರು "ಆದಮಿಾ ಆದಮಿಾ ಸಬಕೂಯಿ ಕಹತೆ- ಆದಮಿಾಕಾ ಬಡಾ ಸುಕಾಲ ಹೈ, ಮಗರ್ ಜಿಸ್ ಆದಮಿಾಮೇ ಆದಮಿಾತನ ಹೈ, ಉಸ್ಕ ಬಡಾ ದುಕಾಲ ಹೈ" ಎಂದು ಹೇಳಿದ್ದಾರೆ. (ಎಲ್ಲಿ ನೋಡಿದರೂ ಮನುಷ್ಯರ ಸುಕಾಲ! ಆದರೆ ಮನುಷತ್ವವನ್ನಿಟ್ಟುಕೊಂಡ ಮನುಷ್ಯರದು ಮಾತ್ರ ಬರಗಾಲ. ದೇಹರಚನೆಯು ಮನುಷ್ಯನಂತಿದ್ದ ಮಾತ್ರಕ್ಕೆ ಅವನಲ್ಲಿ ಮಾನವ್ಯವಿದೆಯೆಂದಲ್ಲ. ಜೀವಿತವು ಸದುಪಯೋಗಕ್ಕಾಗಿ ಎಂದು ಭಾವಿಸದೆ ಹೋದರೆ ಅದು ನಿಷ್ಪ್ರಯೋಜಕನಾಗುವನು. ಅಂಥ ಜೀವಿತಕ್ಕೆ ಅಪಯಶಸ್ಸೇ ಕಟ್ಟಿಟ್ಟ ಬುತ್ತಿ. ಸಾಮಾನ್ಯ ಮನುಷ್ಯನು ತನ್ನ ತಪ್ಪಿಗಾಗಿ ಒಂದು ಸಮಾಧಾನವನ್ನು ಹುಡುಕಿಕೊಳ್ಳುವನು. ಅಂದರೆ ತನ್ನ ಕೃತಿಯನ್ನು ಯಾರಾದರೂ ಹೇಳಿಕೆಯನ್ನು ಮುಂದಿಟ್ಟು ಸಮರ್ಥಿಸಿ ಸಲವಳಿಸಿಕೊಳ್ಳುವನು. ಬೇಕಷ್ಟಕ್ಕಿಂತಲೂ ಹೆಚ್ಚಿಗೆ ತಿಂದು ಅಜೀರ್ಣವಾಗಿ ಜ್ವರ ಬಂದರೂ ಅದು ಋತುವಿನ ದೋಷ, ವಾಗ್ಭಟಾಚಾರ್ಯರು ಈ ಋತುವಿನಲ್ಲಿ ಜ್ವರಬರಬಹುದೆಂದು ಹೇಳಿದ್ದಾರೆ ಎಂದು ತನ್ನ ಮನಸ್ಸನ್ನೂ ಇತರರ ಕುತೂಹಲವನ್ನೂ ಸಮಾಧಾನಪಡಿಸಿ ದೊಡ್ಡ ಮನುಷ್ಯನಾಗಲೆತ್ನಿಸುವನು. ಆದರೆ ಇದು ಸತ್ಯವಾಗಬಹುದೋ? ಸತ್ಯವು ಸ್ವಪರ ವಂಚಕರು ಹುಡುಕಿಕೊಳ್ಳುವ ಸಮಾಧಾನದಲ್ಲಿಲ್ಲ. ತತ್ವಶೋಧನೆಯಲ್ಲಿಯೇ ಇದೆ ಅದು. ಮಾನವ್ಯವನ್ನು ಹೊಂದುವದೇ ಜೀವಿತದ ಗುರಿ ಎಂಬ ನಿಶ್ಚಯವು ನಮ್ಮದಾದರೆ ಅದರ ಸಂಪಾದನೆಯೇ ನಮ್ಮ ಕರ್ತವ್ಯವಾಗುವದಲ್ಲವೇ?

ಈ ಕರ್ತವ್ಯ ಪಾಲನೆಯಲ್ಲಿ ಅನೇಕಾನೇಕ ಎಡರು ತೊಡರುಗಳು ಬರುವವು. ಅವುಗಳಲ್ಲಿ ಧರ್ಮ, ರೂಢಿ, ಸಂಪ್ರದಾಯಗಳ ಮೂಲಕವಾಗಿ ಬರುವವೇ ಹೆಚ್ಚಿನವು ಮತ್ತು ಬಲವಾದವು. ಇವುಗಳ ಕಟ್ಟಿನಲ್ಲಿ ಸಿಲುಕಿ ಅನ್ಯಾಯವನ್ನು ನ್ಯಾಯವೆಂದು ನಾವು ತಿಳಿಯುತ್ತೇವೆ. ಆದರಂತೆಯೇ ಆಚರಿಸುತ್ತೇವೆ. ಇವುಗಳ ವಿಷಯವಾಗಿ ನಾನು ಎಷ್ಟೋ ಸಲ ನಿಮಗೆ ಹೇಳಿದ್ದೇನೆ. ಪುನಃ ಅವುಗಳನ್ನು ಇಲ್ಲಿ ಹೇಳುವ ಕಾರಣವಿಲ್ಲ. ಸಾರಾಂಶವಿಷ್ಟೇ- ಉತ್ತಮ ಯೋಗ್ಯ ಮಾತನ್ನು ಕೃತಿಯಲ್ಲಿ ತರುವಾಗ ರೂಢಿ, ಸಂಪ್ರದಾಯ ಇತ್ಯಾದಿಗಳನ್ನು ಗಣನೆಗೆ ತಾರದೆ ಇರುವದೇ ಧೈರ್ಯ. ರೂಢಿ ಸಂಪ್ರದಾಯಗಳು ಕರ್ತವ್ಯಕ್ಕೆ ಚ್ಯುತಿಯನ್ನುಂಟುಮಾಡಬಾರದು.

ಒಟ್ಟಿನಲ್ಲಿ ಮೂರು ವಿಷಯಗಳನ್ನು ಹೇಳಿದಂತಾಯಿತು. (೧) ಯಾವದನ್ನೂ ಅದೃಷ್ಟಕ್ಕೆ ಬಿಡಬಾರದು (೨) ಹಿಂದಿನ ಹಾಳನ್ನು ಕಲವರಿಸಿ ಮುಂದೆ ಗೋಳನ್ನುಂಟುಮಾಡಿಕೊಳ್ಳಬಾರದು. (೩) ಶಕ್ತಿಗೆ ತಕ್ಕ ಸಾಹಸಮಾಡಲೇ ಬೇಕು.

ಇಷ್ಟೆಲ್ಲಾ ಮಾಡಿದರೂ ತಪ್ಪುಗಳಾಗಬಹುದು, ಆದರೆ ಆವಾಗ ಆಗುವ ತಪ್ಪುಗಳು ತೀರ ಕಡಿಮೆಯಾಗಿರುವವು. ಅದಲ್ಲದೆ ವಿಚಾರಶೀಲ ಸಾಹಸಿಗಳಿಗೆ ಅವುಗಳಿಂದಷ್ಟು ಚಿಂತೆಯುಂಟಾಗುವದಿಲ್ಲ. ತಪ್ಪು ಕಡಿಮೆಯಾಗಿ ಒಪ್ಪು ಹೆಚ್ಚಾಗುವಂತೆ ಪ್ರಯತ್ನಿಸುವದೇ ಮಾನವ್ಯದ ಲಕ್ಷಣವೆಂಬದೂ ಮಾನವನ ಧರ್ಮವೆಂಬದೂ ನೆನಪಿನಲ್ಲಿರಲಿ.

(ಮುಂದುವರಿಯುವುದು)

ಗಂಗಾಧರ ಗೋಪಾಲಕೃಷ್ಣ ಹೆಗಡೆ,
ಪತ್ರಿಕೋದ್ಯಮ ಶಾಲಾ, ವಿದ್ಯಾರ್ಥಿ,
ತುಂಗಭದ್ರ.

ನೋಟೀಸು.

ದಿ ಕರ್ನಾಟಕ ಬೇಂಕ್ ಲಿಮಿಟೆಡ್, ಉಡುಪಿ..

ಈ ಮೂಲಕ ಸರ್ವರಿಗೂ ತಿಳಿಸುವದೇನಂದರೆ, ಈ ಕೆಳಗೆ ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳ ಮೊಬಲಗನ್ನಾಗಲೀ ವ ಬಡ್ಡಿಯನ್ನಾಗಲೀ ಹಾಯಿದೆಗೆ ಕೊಡದಿದ್ದುದರಿಂದ ಸದರಿಯವರಿಗೆ ಕೊಟ್ಟ ರಿಜಿಸ್ಟ್ರಿ ನೋಟೀಸುಗಳ ಪೈಕಿ 1ನೇ ಯವರು ಮೃತಪಟ್ಟಿರುತ್ತಾರೆಂತಲೂ ಮತ್ತು 2ನೇ ಯವರು ನೋಟೀಸು ಜ್ಯಾರಿಗೆ ತಪ್ಪಿಸುತ್ತಾರೆಂತಲೂ ತಿಳಿದು ಬಂದ ಪ್ರಯುಕ್ತ ಬೇಂಕಿಗೆ ಬರತಕ್ಕ ಅಸಲು ಬಡ್ಡಿ ಐವೇಜು ಮತ್ತು ಖರ್ಚು ವಗೈರೆಯನ್ನು ಇದೇ ಇಸವಿ ಸಪ್ಟಂಬರ ತಾರೀಕು 16ನೇ ಬುಧವಾರ ಮಧ್ಯಾಹ್ನ 3 ಗಂಟೆ ಒಳಗೆ ಬೇಂಕಿಗೆ ಸದರಿ ಲೋನುಗಳ ಅಸ್ಸಾಮಿಗಳೂ ಮತ್ತು ಮೃತರವಾರೀಸುದಾರರೂ ಅವರವರ ಹಕ್ಕುಗಳನ್ನು ಧೃಢಪಡಿಸಿ ವ ಸ್ಥಾಪಿಸಿ ತಂದು ಕೊಟ್ಟು, ಅವರವರ ಲೋನುಗಳನ್ನು ಬಿಡಿಸಿಕೊಂಡು ಹೋಗದಿದ್ದರೆ, ಸದರಿ ಲೋನುಗಳ ಬಾಬ್ತು ಎಲ್ಲಾ ನಗಗಳನ್ನು ಇದೇ ತಿಂಗಳ ತಾರೀಕು 18ನೇ ಶುಕ್ರವಾರ ಮಧ್ಯಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ತಿಳಿದಿರುವುದು.

ಒಂದ್ಮ ನಂಬ್ರ	ಸಾಲದ ನಂಬ್ರ	ಅಸ್ಸಾಮಿಗಳ ವಿವರ	ಸಾಲದ ಮೊಬಲಗು ರೂ
1	673/35	ಸಂತೆಕಟ್ಟೆಯಲ್ಲಿರುವ ನಾಗಮ್ಮನ ಮಗಳು ಮತ್ತು ಮೋಟಾರ್ ಡ್ರ್ಯೈವರ್ ಕೃಷ್ಣಪ್ಪನ ಸೊಸೆಯು. ಸರಸ್ವತಿ ಕಾಡಬೆಟ್ಟು ಉಡುಪಿ. ...	325 0 0
2	147/34	ಉಡ್ಪಿ ಕಸ್ಬೆಯಲ್ಲಿರುವ ಶ್ರೀನಿವಾಸ ಭಂಡಾರ್ಕಾರ್‌ನ ಮಗ ನರಸಿಂಗ ಭಂಡಾರ್ಕಾರ್ ಉಡ್ಪಿ.	105 0 0

ಬೇಂಕಿನ ಆಫೀಸು
ತೆಂಕಪೇಟೆ, ಉಡುಪಿ,
ತಾ. 10—9—1936,

AGENT.

ಮಧುವನ

ಕರ್ಣಾಟಕದೊಳಗಿನ

ಬೇರೆ ಬೇರೆ ೨೫ ಕತೆಗಾರರು

ಬರೆದ ೨೫ ಸಣ್ಣ ಕತೆಗಳ ಸಂಗ್ರಹವೇ

ಮಧುವನ

'ಕಿರಿಯರ ಪ್ರಪಂಚ'ದ ಹೊಸ ಪ್ರಕಟಣೆ.

ಕತೆಗಾರರ ಭಾವಚಿತ್ರ, ಪರಿಚಯವನ್ನೊಳಗೊಂಡ

ಆದರ್ಶ ಗ್ರಂಥ.

ಬೆಲೆ 1—8—0

ಕಿರಿಯರ ಪ್ರಪಂಚ

ಪ್ರೇಮ ವಿದ್ಯಾಪೀಠ

ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸ ವರ್ಷವು ಜೂಲೈಯಲ್ಲಿ ಮೊದಲಾಗುತ್ತದೆ ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್, ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ ಪ್ರೊಸ್ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪ್ ಇಟ್ಟು ಬರೆಯಿರಿ

ಮುಖ್ಯೋಪಾಧ್ಯಾಯಾ **ಡಾ। ಸುಮತಿಬಾಯಿ,**

ಬಿ ಎ ಎಲ್ ಟಿ, ಎಫ್ ಓ ಎಸ್ ಎಸ್ ಭಟಗ್ರಸ್ತ, ರಿಜಿಸ್ಟ್ರಾರ್.

ಇದೇ 1936ನೇ ಫ್ಯಾಶನಿನ ಉಡಿಗೆತೊಡಿಗೆಗಳು ಎಲ್ಲಿ ಸಿಗುತ್ತವೆ?

ಬನ್ನಿರಿ! ನೋಡಿರಿ!! ಕೊಂಡುಕೊಳ್ಳಿರಿ!!!

ಮೆಸರ್ಸ್ ಬೆಳ್ಳಣ್ಣ ಶಾರ್ ಮತ್ತು ಕಟೇಲ್‌ಕಾರ್

ಜವುಳಿ ಅಂಗಡಿ ಕುಂದಾಪುರ ಇವರಲ್ಲಿ.

ಇದೀಗಲೇ ಬಂದಿರುವ ನೂತನವಾದ ನಾಜೂಕು ತರದ ಹಾಗೂ ಅಂದವಾದ ಬಣ್ಣಗಳಿಂದ ಶೋಭಿಸುವ ಹೊಸ ಹೊಸ ನಮೂನೆಯಲ್ಲಿ ಚುನಾಯಿಸಿ ತರಿಸಿರುವ ಬೊಂಬೈ, ಬನಾರಿಸ್, ಅಹಮ್ಮದಾಬಾದು, ಕಾಶ್ಮೀರ, ಪೂನಾ, ಮದ್ರಾಸು, ಸೇಲಂ, ಕೊಯಮುತ್ತೂರು, ತಿರ್ಪೂರ ಮಧುರ, ತಿರುಚಿನಾಪಳ್ಳಿ ಮೊದಲಾದ ಪ್ರಸಿದ್ಧ ಊರುಗಳ ಸೀರೆಗಳೂ ದೋತಿಗಳೂ, ಕಣಗಳೂ, ಕೋಟಿಂಗ್, ಶರ್ಟಿಂಗ್ ಬಟ್ಟೆಗಳೂ, ಜರಿ ಶಾಲುಗಳೂ ಮಿತವಾದ ಕ್ರಯಕ್ಕೆ ದೊರೆಯುತ್ತವೆ

ಶುದ್ಧ ಕೈನೂಲಿನ ಖಾದಿ ಶರ್ಟಿಂಗ್, ಕೋಟಿಂಗ್ ವಸ್ತ್ರ ಅಚ್ಚ ಸ್ವದೇಶಿ ಬಟ್ಟೆಬರೆಗಳೂ ಸದಾ ದೊರಕುತ್ತವೆ ನಿತ್ಯ ಉಪಯೋಗದ ಶುಭ ಶೋಭನದ ಹಾಗೂ ಉಡುಗೊರೆ ಉಚಿತಗಳಿಗೆ ಬೇಕಿಸುವ ತರ ತರದ ಜವುಳಿಯು ಸುಲಭದರದಲ್ಲಿ ರಖಂ ಆಗಿಯೂ ಚಿಲ್ಲರೆಯಾಗಿಯೂ ಕೊಂಡುಕೊಳ್ಳಬಹುದು

ಒಮ್ಮೆ ಬಂದು ನೋಡಿ ಸಮಾಧಾನ ಮಾಡಿಕೊಳ್ಳಿರಿ

THE

Commonwealth Assurance Co. Ltd.

(ESTD 19..)

Chairman Mr N C Kelkar Ex M L A

Head Office	Chief Agency Office
POONA CITY.	**HAMPANKATTA, MANGALORE.**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೋಲಿಸಿದಾರರಿಗೆ ಈ ಕಂಪೆನಿಯು 1000ಕ್ಕೆ ರೂ 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಕೊಳ್ಳಿರಿ

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್

ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು

ವಿದ್ಯಾ ಸಂಸ್ಥೆಗೆ ಸಹಾಯಮಾಡಿರಿ ! ಸತ್ಕಾರ್ಯಕ್ಕೆ ಪ್ರೋತ್ಸಾಹಕೊಡಿಸಿರಿ !!

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಯೋಗ್ಯ ಕಮಿಟಿಯವರಿಂದ ನಡಿಸಲ್ಪಡುವುದು

ಎ. ಬಿ. ಶೆಟ್ಟಿ, ಎಸ್ಕ್ವಾಯರ್, ಎಂ. ಎಲ್. ಸಿ ಪ್ರೆಸಿಡೆಂಟ್.	**ಡಾ। ಎಂ. ಆರ್ ಕಾಮತ್,** ಎಲ್ ಎಂ ಪಿ ವೈಸ್ ಪ್ರೆಸಿಡೆಂಟ್.

ರೂ. 20,000/ ವು 1,789 ಇನಾಮುಗಳಾಗಿ ಹಂಚಲ್ಪಡುವುದು.

ಪ್ರಥಮ ಬಹುಮಾನ ರೂ **5,000/-** ದ್ವಿತೀಯ ಬಹುಮಾನ ರೂ **2,000 -**

ತೃತೀಯ ಬಹುಮಾನ ರೂ **1,000/-**

ಟಿಕೇಟು ಒಂದರ ಕ್ರಯ ಆಣೆ ನಾಲ್ಕು ಮಾತ್ರ.

ಲೆಖ್ಖ ಅಖೈರು ತಾರೀಕು 2. — 1 — 1937] [ಸೊಡ್ತಿ ತೆಗೆಯುವ ತಾರೀಕು 3. — 1 — 1937

30 ಟಿಕೇಟುಗಳಿರುವ ಪುಸ್ತಕಕ್ಕೆ ರೂ . ಮಾತ್ರ ಟಿಕೇಟು ಪುಸ್ತಕಗಳು ನಗದಿಯಾಗಿ ವಿಕ್ರಯಿಸಲ್ಪಡುವವು. ಟಿಕೇಟು ಮಾರಿ ರೂ 250/ ಕ್ಕೂ ಹೆಚ್ಚು ಸಂಗ್ರಹಿಸಿಕೊಟ್ಟವರೊಳಗೆ ರೂ 200/-ರ ಒಂದು, ರೂ 100/-ರ ಎರಡು ಮತ್ತು ರೂ 50/-ರ ಆ ಇನಾಮುಗಳು ಹಂಚಲ್ಪಡುವವು

ಟಿಕೇಟು ವಿಕ್ರಯಿಸಿದ ರೂ 25/ ಮತ್ತು ಹೆಚ್ಚು ಮಾಡಿಕೊಟ್ಟವರಿಗೆ ನೇಕಡಾ 1½ರಂತೆ ಕಮಿಶನ್ ಕೊಡಲಾಗುವುದು

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಈ ಕೆಳಗಿನವರಿಗೆ ಬರೆಯಬೇಕು—

ಸೆಕ್ರೆಟರಿ,

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಹೈಸ್ಕೂಲ್ ಸಹಾಯಾರ್ಥ)

ಮೂಲ್ಕಿ, ದ. ಕನ್ನಡ

3—9—1936

THE

RADHA BANK, LTD

MANGALORE. *(Branch)*

TEMPLE VIEW GANAPATI TEMPLE ST WEST

ದಿ ರಾಧಾ ಬೇಂಕ್ ಲಿಮಿಟೆಡ್.

ಮಂಗಳೂರು. (ಬ್ರಾಂಚ್) "ಟೆಂಪಲ್ ವ್ಯೂ" ಗಣಪತಿ ಟೆಂಪಲ್ ರಸ್ತೆ

ಚಾಲ್ತಿ ಠೇವಣಾತಿಗಳು ಸಾ। ಶೇ। 2½.

ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ। ಶೇ। 1

ಕಾಯಂ ಠೇವಣಾತಿಗಳು.

3 ತಿಂಗಳ ಬಾಬ್ತು ಸಾ। ಶೇ। 3 6 ತಿಂಗಳ ಬಾಬ್ತು ಸಾ। ಶೇ। 1½ 12 ತಿಂಗಳ ಬಾಬ್ತು ಯಾ ಅದರ ಮೇಲೆ ಸಾಲಿಯಾನ್ ನೇಕಡ 6

ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುತ್ತದೆ

ಚಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೊಡುತ್ತದೆ

U. B. SOMESH RAO,

Managing Director

LAXMI BRAND COFFEE POWDER.

Pure & Superior quality, will last long without loosing its flavour and colour

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

TRADE MARK

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಪ್ರಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE



Fire Risistance Steel Iron Safes. latest pattern.

ನಮ್ಮಲ್ಲಿ ಕಬ್ಬಿಣದ ಪೆಟ್ಟಿಗೆಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ ತಿಂಗಳುಗಳ್ಳಿ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI S K

Sold also by Instalments

ನಿಮಗೆ ಅಂದವಾದ ಅಚ್ಚಿನಿಂದ ಸೊಗಸಾದ ಛಾಪಾ ಕೆಲಸವಾಗಬೇಕೇ?

ಮಹಾಲಕ್ಷ್ಮಿಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್.

ಮಹಾಲಕ್ಷ್ಮಿ ಬಿಲ್ಡಿಂಗ್, ಕುಂದಾಪುರ.

ಈ ಛಾಪಖಾನೆಯಲ್ಲಿ ಕೆಲಸಗಳನ್ನು ಮಾಡಿಸಿರಿ

ಬೇರೆ ಬೇರೆ ಊರುಗಳಲ್ಲಿ ಬಹಳ ವರ್ಷಗಳಿಂದ ಕೆಲಸ ಕಲಿತು ಮಾಹಿತಿಯಿದ್ದವರಿಂದ ಹೊಸದಾದ ಅಂದವಾದ ನೂರಾರು ತರದ ಅಚ್ಚುಗಳಿಂದ ತರತರದ ಬ್ಲಾಕುಗಳಿಂದ ನಾಜೂಕಿನಿಂದ ಅತೀ ಸುಲಭ ದರದಲ್ಲಿ ಇಂಗ್ಲಿಷ್, ಕನ್ನಡ, ಮರಾಠಿ ವಗೈರೆ ಭಾಷಗಳಲ್ಲಿ ಕೆಲಸಗಳನ್ನು ಮಾಡಿಸಿಕೊಡಲಾದೀತು.

ಇಲ್ಲಿ ಎಲ್ಲಾ ತರದ ಫೋರ್ಮುಗಳೂ ಲೆಟರ್‌ಹೆಡ್ಡುಗಳೂ ಕವರುಗಳೂ ಕಂಪೆನಿಯಂತಹ ಸಂಸ್ಥೆಗಳಿಗೆ ಅಗತ್ಯ ಇರುವ ವರ್ಗ ಊಳಿಗ ಪುಸ್ತಕಗಳೂ ಎಲ್ಲಾ ತರದ ಛಾಪಾ ಕೆಲಸಗಳೂ ಬೇಕಾದ ಮಾದರಿಯಲ್ಲಿ ತಯಾರಿಸಿಕೊಡಲ್ಪಡುವುವು.

For nice printing and punctuality look to—

Mahalaxmi Printing Works, Limited,

Mahalaxmi Buildings, Coondapoor.

K RAMAKRISHNA SHENOY,

GENERAL MANAGER.

ಯು. ಪಿ. ಮೇಸ್ತ, ಉದ್ಯಾವರ, ದ. ಕ.

(ಬಾಣಂತಿ ರೋಗದ ಸ್ಪೆಶ್ಯಲಿಷ್ಟರು)

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಔಷಧಗಳು ದೊರೆಯುತ್ತವೆ.

U. P. Mesta,

Gold Medalled Physicion,

UDIAWAR, S. K.

DIAMONDS! DIAMONDS!!

K. Ramachandra Krishna Shet

Near Mission High School, *Mangalore.*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತದ. ಕೊಂಡುಕೊಳ್ಳುವವರಿಗೆ ಬಜಾರ ದಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪಿಯೊಂದನ್ನು ಗವರ್ನ್‌ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,

ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಅಮರವಾದ ಪ್ರಾಪಂಚಿಕ ಸುಖವನ್ನು ಬಯಸುವವರಿಗೆ

ಗೀತೆಯ ಕೈಗನ್ನಡಿ

(ಶ್ರೀ ಹೊಸಕೆರೆ ಚಿದಂಬರಯ್ಯನವರಿಂದ)

ಪ್ರಪಂಚದಲ್ಲೆಲ್ಲಾ ಅಸದೃಶವಾದ

ಭಗವದ್ಗೀತೆಯ

ಸರಳ ಸಮೂಲ ಭಾಷಾಂತರ.

ಮೂರನೇ ಸಂಸ್ಕರಣದ ೫,೦೦೦ ಪ್ರತಿಗಳಲ್ಲಿ

—— ಕೆಲವೇ ಉಳಿದಿವೆ ——

ಸುಂದರವಾದ ಅಚ್ಚುಕಟ್ಟಾದ ೪೦೦ ಪುಟಗಳ

ಪುಸ್ತಕದ ಬೆಲೆ: ೦ ೪ ೦.

ಇಂಗ್ಲಿಷು ಭಾಷೆಯ

ವ್ಯಾಪಕತೆ, ಅವಶ್ಯಕತೆ, ಗೌರವಗಳನ್ನು ಯಾರೂ ಅರಿಯದಿರಲಾರರು.

ಇಂಗ್ಲಿಷನ್ನು ಶಾಲೆಗೆ ಹೋಗಿ ಕಲಿಯುವ ಸೌಭಾಗ್ಯದಿಂದ ವಂಚಿತರಾದವರಿಗೆ

"ಒಂದೇ ತಿಂಗಳಲ್ಲಿ ಇಂಗ್ಲಿಷ್"

ಶ್ರೀ ಪಾದೂರು ವಾಸುದೇವ ಉಪಾಧ್ಯಾಯ

ಬಿ. ಎ., ಎಲ್ ಎಲ್ ಬಿ. ಇವರಿಂದ

ಎಂಬ ಪುಸ್ತಕವೇ

ಹೆದ್ದಾರಿ

ಅತ್ಯಲ್ಪ ಕಾಲದಲ್ಲಿ ಪ್ರಥಮ ಮುದ್ರಣದ ಪ್ರತಿಗಳು ಮುಗಿದು ಹೋಗಿ, ದ್ವಿತೀಯಾವೃತ್ತಿಯು ಹೊರಟಿದೆ.

ಬೆಲೆ: 0 8 0.

ತುಳುನಾಡ್ ಪ್ರೆಸ್, ಉಡುಪಿ.

Printed by P. VENKATARAMANACHARYA for & on behalf of SUPPLY AGENCY LTD, at THULUNAD PRESS UDIPI and Published by K H SHETTY at "NAVAYUGA" OFFICE UDIPI.

Registered No. 1564

ನವಯುಗ

ಈ ಸಂಚಿಕೆಯಲ್ಲಿ ಪ್ರಕಟವಾದ ಒಗಟನ್ನು ಬಿಡಿಸಿ ಬೆಳ್ಳಿಯ ಪದಕವನ್ನು ಪಡೆಯಿರಿ.

ಆಧುನಿಕ ಕವಿಶ್ರೇಷ್ಠರ ಕವನ ಸಂಗ್ರಹವಾದ ಕಾವ್ಯಸಾಮ್ರಾಜ್ಯದ ದ್ವಿತೀಯಾವೃತ್ತಿ ತಯಾರಾಗಿದೆ [illegible] ಪ್ರಪಂಚ

ವಾರಪತ್ರಿಕೆ

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಪೊಳೆಗುತಿಪ ತುಮುಲನಾದ;

ಸಂಪಾದಕ:
ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗನಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ

ಸಂಪುಟ ೧೭ | ಉಡುಪಿ, ಗುರುವಾರ ಸಪ್ಟೆಂಬರ ೧೭, ೧೯೩೬ | ಸಂಚಿಕೆ ೩

STATEMENT OF AFFAIRS OF
THE CANARA INDUSTRIAL & BANKING SYNDICATE LIMITED.
AS ON 31st AUGUST 1936

LIABILITIES.				ASSETS.			
Share Capital	Rs. 2,17,700	0	0	LOANS ON.			
Reserve Fund	52,500	0	0	Valuable Securities	Rs. 7,65,[illegible]	0	9
Deposits	18,61,496	11	6	Land Mortgages	2,22,[illegible]	13	8
Bills for Collection	1,40,203	13	8	Bills of Exchange,			
Due to Bankers	1,35,824	6	10	Hundies and Pro notes	[illegible]7,936	0	6
Sundries	1,53,054	2	3	INVESTSMENTS ON.			
				Companies Shares	57,802	0	0
				Landed Properties	18,929	3	7
				Govt. Securities	1,36,715	10	7
				Bills for Collection (as per contra)	1,40,203	13	8
				Sundries	2,71,153	1	6
				Cash in hand and at Bankers	1,59,536	9	0
Total Rs.	**25,60,778**	**5**	**3**	**Total Rs.**	**25,60,778**	**5**	**3**

ANNOUNCEMENT

WE HAVE GREAT PLEASURE IN ANNOUNCING THAT A BRANCH OF THE SYNDICATE WILL BE OPENED AT UPPINANGADI (SOUTH KANARA) ON MONDAY THE 21ST INSTANT WHERE ALL KINDS OF BANKING BUSINESS WILL BE TRANSACTED. THE PUBLIC ARE REQUESTED TO TAKE ADVANTAGE OF THE NUMEROUS FACILITIES OFFERED BY US.

BRANCHES

UDIPI MANGALORE COONDAPOOR CANNANORE, HUBLI, HONAVAR, BRAHMAVAR, KUMTA, HUNGARCUTTA, SIRSI, ANKOLA, BELGAUM, PAYYANUR, KANNAGHAD, BHATKAL, KARWAR, BANGALORE CITY, ADONI, HOSPET, BELLARY, GADAG & KARKALA

THE BOMBAY LIFE ASSURANCE Co., LTD.
ESTD. 1908
Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,
Madras Branch Secretaries

BRANCHES AT:

P. B. 337 Mount Road Madras	Visvesvarapuram Circle, Bangalore City	Soumyalayam Pathyara Calicut
Car Street, Mangalore	Udipi, S. India	Charni Road Bombay No. 4

—EVIDENCE—
OF
SECURITY & STABILITY
FIGURES THAT SPEAK FOR THEMSELVES

TOTAL ASSETS **Rs. 80,66,600**

SUMMARY OF 1935 ACCOUNTS

Total Assets Over	Rs. 80,00,000
Life Funds Over	Rs. 68,00,000
Premium Income Over	Rs. 22,51,000
Interest Income	Rs. 3,16,000
Claims Paid	Rs. 5,75,000

Total Claims paid over Rs. 38,50,000
Total Business in Force Over Rs. 4,12,51,200

TOTAL BUSINESS IN FORCE **Rs. 4,42,51,200**

FOR INSURANCE, PLEASE CONSULT

THE ASIAN ASSURANCE CO. LTD., BOMBAY.

Completes the 25th year of its HUMANITARIAN service.

See! 'Silver Jubilee' Valuation

at the end of December 1935

WANTED Organizers for North Kanara and Coorg and agents in other unrepresented areas of South Kanara, Only reliable persons need apply.

J. A. PUTHRAN.

Branch Manager

THE ASIAN ASSURANCE Co., Ltd., Mangalore.

The MAN behind the RUPEE

Is a power to be reckoned within every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK

LIMITED.

THE

PANGAL NAYAK BANK

LIMITED.

ESTABLISHED 1920.

Head Office: UDIPI] [Branch: Church Road, MANGALORE.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4½% on 1 or 2 years and at 5% on 3 or 4 years deposits.

Every other description of upto date Banking business is also undertaken.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು

ಗುಣ ಬಾರದಿದ್ದರೆ	ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಜಿಸ್ಟರ್)	ಹಣ ಪರತ

ಈ ಚೂರ್ಣವು ಕೆಂಪು ಬಿಳೆ ಸೆರಗಿಗೆ ಶತ್ರುವಾಗಿರುವುದು. ಅನಿಯಮಿತತೆಯಿಂದ ಮುಟ್ಟಾಗುವಿಕೆ, ಶ್ವೇತ ವ್ಯಯುಕ್ಷ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯ ಸ್ಥಿರವ ದೋಷ ಗರ್ಭಧಾರಣವಾಗದಿರೋಣ್ಯ ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವದಿಲ್ಲೆಂದು ಎಂದಿಗೂ ಲಗ್ನವಾದಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ, ರಾ ಎ. ಎಮ್ ಇನ್ಸ್‌ಪೆಕ್ಟರ ಬೇಗಾರ:—ಈ ಚೂರ್ಣದಿಂದ ನನ್ನ ಕೂಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ. ಖ. ಆಣೆ, ೮.

ಸಂತತಿ ಪ್ರತಿಬಂಧಕ ಚೂರ್ಣ. (ರಜಿಸ್ಟರ್)

ಬಹಳಸಾರಿ ಹಡೆಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇವ ದಂತೆ ಆಗುವಿರುವದು, ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸ.ರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮುಖ ಕೇಳವಾ ಮಹಿಮಾ ಜ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭದಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿಗೆ ಆರೂ ಪಿ ಪಿ ಖರ್ಚ ಆಣೆ ೮,

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ಜಗತ್ತಿನ ಪ್ರಚಂಡ ಯುದ್ಧಸನ್ನಾಹ!

ಯುದ್ಧವು ಇಂದೋ ನಾಳೆಯೋ ಎಂಬ ಭೀಕರ ಪರಿಸ್ಥಿತಿ!!

ರಷ್ಯಾ, ಜಪಾನ್, ಜರ್ಮನಿ, ಬ್ರಿಟನ್ನುಗಳ ಸೇನಾಸಿದ್ಧತೆ!!!

ಈ ಸಂಜೆಯೋ, ನಾಳೆಯೋ ಯುದ್ಧವು ಮೇಲೆ ಬೀಳುತ್ತದೆ ಎನ್ನುವಂತೆ ಪ್ರತಿ ರಾಜ್ಯದವರೂ ತೀವ್ರವಾದ ಸಮರ ಸನ್ನಾಹಗಳನ್ನು ಮಾಡುತ್ತಿದ್ದಾರೆ. ಯುದ್ಧ ಸನ್ನಾಹಗಳೆಂದರೆ ಕೇವಲ ಸೈನಿಕ ಶಿಕ್ಷಣಗಳೇ ಅಲ್ಲ. ಕೇವಲ ಯುದ್ಧಸಾಮಗ್ರಿಗಳ ನಿರ್ಮಾಣವೇ ಅಲ್ಲ. ಯುದ್ಧರಂಗಗಳನ್ನು ಸಿದ್ಧಪಡಿಸಿಕೊಂಡು ತದನುಗುಣವಾದ ಸೈನ್ಯವಿನ್ಯಾಸಗಳನ್ನೂ, ವ್ಯೂಹಗಳನ್ನೂ ಏರ್ಪಾಡು ಮಾಡಿಕೊಳ್ಳುತ್ತಿದ್ದಾರೆ. ಇಂತಹ ಪ್ರಚಂಡ ಪ್ರಯತ್ನಗಳನ್ನು ಪ್ರಪಂಚವು ಇದುವರೆಗೆ ಕಂಡು ಕೇಳಿ ಅರಿಯದು. ಮೂರು ಲೋಕಗಳನ್ನೂ ಒಂದು ಮುಹೂರ್ತ ಕಾಲದೊಳಗಾಗಿ ಮುಳುಗಿಸಿಬಿಡಬಲ್ಲ ಸಾಹಸಗಳವು.

ರಣಸನ್ನಾಹ ಸ್ಪರ್ಧೆ.

ಒಂದು ರಾಜ್ಯವನ್ನು ಮೀರಿಸಿ ಇನ್ನೊಂದು ರಾಜ್ಯದೊಡನೆ ಸ್ಪರ್ಧಿಸಿ, ಯುದ್ಧಕ್ಕೆ ಇಳಿಯುವಂತೆ ತೋರುತ್ತಿವೆ ಈ ಸನ್ನಾಹಗಳು. ಪ್ರತಿದಿಕ್ಕಿನಲ್ಲೂ ಆತ್ಮರಕ್ಷಣೆ ಆತ್ಮರಕ್ಷಣವೆಂಬ ಆಕ್ರಂದನ ಧ್ವನಿಯೇ ಪ್ರತಿಧ್ವನಿ ಮಾಡುತ್ತಿದೆ. ಈಗ ಜಪಾನು ಮಾಡುತ್ತಿರುವ ಕೆಲಸವೂ ಆತ್ಮರಕ್ಷಣೆಗಾಗಿಯೇ, ರಷ್ಯಾ ಕೈಗೊಂಡಿರುವ ಕೆಲಸಗಳೂ ಆತ್ಮರಕ್ಷಣೆಗಾಗಿಯೇ, ಎಲ್ಲರು ಮಾಡುತ್ತಿರುವುದೂ ಆತ್ಮ ರಕ್ಷಣೆಗಾಗಿಯೇ. ಸಾಧಾರಣವಾಗಿ ಸದಾಕಾಲದಲ್ಲೂ ತನ್ನ ಚಿತ್ತವನ್ನು ಸ್ತಿಮಿತವಾಗಿಯೇ ಇಟ್ಟುಕೊಂಡಿರುತ್ತಿದ್ದ ಇಂಗ್ಲೆಂಡು ಸಹಾ ಈಗ ಈ ರಣಕೋಲಾಹಲದಲ್ಲಿ ಮುಳುಗಿಹೋಗಿದೆ. ಆದರೆ ಬ್ರಿಟನ್ನಿನ ಮೇಲೆ ಧ್ವಜವನ್ನೆತ್ತಬಲ್ಲ ಸಾಹಸಿಗಳಾರು? ಹೀಗಿದ್ದಾಗ್ಯೂ, ಇಂಗ್ಲೆಂಡಿನ ವೈಖರಿ ಬೇರೊಂದು ಪರಿ. ತಾನು ಸೈನ್ಯಗಳನ್ನು ಹೆಚ್ಚಿಸುತ್ತಿರುವುದು ಕೇವಲ ಆತ್ಮರಕ್ಷಣೆಗೆಂದು ಇಂಗ್ಲೆಂಡು ಇದುವರೆಗೆ ಹೇಳಿಲ್ಲ. ಕೇವಲ ಸಾಮೂಹಿಕ ರಕ್ಷಣೆ (Collective Security) ಎಂಬ ಪದವನ್ನು ಪ್ರಯೋಗಿಸುತ್ತಿದೆ. ಲೋಕಭದ್ರತೆಗಂತ ಇವರ ಸಿದ್ಧತೆ. ಇಂಗ್ಲೆಂಡು ಭೂಮಧ್ಯಸಮುದ್ರವನ್ನು ಶಾಸಿಸಬಲ್ಲಷ್ಟು ಬಲವನ್ನು ಉಳ್ಳದ್ದೇ ಆಗಿದ್ದಲ್ಲಿ ಇಟಲಿಯು ಲೀಗನ್ನು ಧಿಕ್ಕರಿಸಿ, ಅಬಿಸೀನಿಯಾದ ಮೇಲೆ ಧಾಳಿ ನಡೆಸುತ್ತಿತ್ತೇ? ಎಂಬುದಾಗಿ ತರ್ಕಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಇಂಗ್ಲೆಂಡಿನ ದೌರ್ಬಲ್ಯವನ್ನು ನೋಡಿಕೊಂಡೇ ಇಟಲಿಯು ತನ್ನ ಕೋರೆ ಹಲ್ಲುಗಳನ್ನು ತೋರಿಸಿತು ಎಂಬುದಾಗಿ ಹೇಳಿದಲ್ಲಿ ಅತಿಶಯೋಕ್ತಿಯೇನೂ ಇಲ್ಲ.

ಯುರೋಪಿನ ಪರಿಸ್ಥಿತಿ

ಯೂರೋಪಿನ ಪರಿಸ್ಥಿತಿ ನೋಡಿದಲ್ಲಿ ಮುಂದಾಗುವ ಯುದ್ಧದಲ್ಲಿ ಶಕ್ತಿಪ್ರತಿಶಕ್ತಿಗಳು ಯಾರಾಗಿರಬಹುದೆಂದು ಸೂಕ್ಷ್ಮವಾಗಿ ಹೇಳಲು ಸಾಧ್ಯವಿದೆ. ಆ ಸೂಚನೆಗಳು ಸ್ವಲ್ಪ ಮಟ್ಟಿಗೆ ಸ್ಪೇನಿನ ಅಂತಃಕಲಹಗಳಿಂದ ಬಯಲಿಗೆ ಬಂದಿವೆ. ಸೋಷಲಿಸ್ಟ್ ರಾಷ್ಟ್ರಗಳು ಒಂದು ಪಕ್ಷದಲ್ಲಿ; ಫ್ಯಾಸಿಸ್ಟ್ ರಾಷ್ಟ್ರಗಳು ಎದುರು ಪಕ್ಷದಲ್ಲಿ ಎಂಬುದಾಗಿ ಸುಲಭವಾಗಿ ಊಹಿಸಬಹುದಾಗಿದೆ. ಫ್ರಾನ್ಸ್, ಬೆಲ್ಜಿಯಂ ರಾಷ್ಟ್ರಗಳು ಸೋಶಿಯಲಿಸ್ಟ್ ಪಕ್ಷದವು. ಇವು ರಷ್ಯಾ ಸಂಗಡ ಸೇರಿದರೂ ಸೇರಬಹುದು. ನಾರ್ವೇ-ಸ್ವೀಡನ್ನುಗಳನ್ನು ಸಹಾ ಇದೇ ಪಕ್ಷಕ್ಕೇ ಸೇರಿಸಬಹುದು. ಬ್ರಿಟನ್ನು ಫ್ರಾನ್ಸಿಗೆ ಸಹಾಯ ಮಾಡದೆ ಇರುವಂತಿಲ್ಲ. ಜರ್ಮನಿ, ಇಟಲಿ, ಆಸ್ಟ್ರಿಯಾ, ಹಂಗೇರಿ ಈಗಾಗಲೇ ಒಂದಾಗಿ ಸೇರಿವೆ. ರಷ್ಯಾದೊಡನೆ ಸಹಜವಾದ ವೈರವಿರುವುದರಿಂದ ಜಪಾನ್ ಜರ್ಮನಿಯ ಕೂಟದಲ್ಲಿ ಕೂಡಿಕೊಳ್ಳಬಹುದು. ಪರ್ಷಿಯಾ, ತುರ್ಕಿ, ಅಫಘಾನಿಸ್ಥಾನಗಳು ರಷ್ಯಾ ಸಂಗಡ ಕರಾರುಗಳನ್ನು ಮಾಡಿಕೊಂಡಿವೆ. ಚೀನಾದಲ್ಲಿ ರಷ್ಯಾದ ಮಾತುಕತೆಗಳಿಗೆ ಪ್ರಾಮುಖ್ಯತೆಯು ಕ್ರಮವಾಗಿ ಬೆಳೆಯುತ್ತಿದೆ. ಜಪಾನಿನ ಮೇಲೆ ಇರುವ ದ್ವೇಷವು ಸಹಾ ಇದಕ್ಕೆ ಬೆಂಬಲ ಕೊಡುತ್ತದೆ. ಈ ಪ್ರಕಾರವಾಗಿ ಮೇಲಣ ಸಂದರ್ಭಗಳನ್ನು ಚೆನ್ನಾಗಿ ಪರಿಶೀಲಿಸಿ ನೋಡಿದರೆ ಮುಂದೆ ಬರುವ ಯುದ್ಧವು ಪೂರ್ವ ಪಶ್ಚಿಮ ಖಂಡಗಳನ್ನು ಸಂಪೂರ್ಣವಾಗಿ ಆವರಿಸಿ, ಇದೇನು ಪ್ರಳಯವೋ ಎಂಬಂತೆ ತಾಂಡವನೃತ್ಯ ಮಾಡುವದರಲ್ಲಿ ಸಂದೇಹವಿಲ್ಲ.

ರಷ್ಯಾದ ಸಿದ್ಧತೆಗಳು

ರಷ್ಯಾದಲ್ಲಿ ಇದುವರೆಗೂ ೨೧ ವರ್ಷದೊಳಗಿದ್ದ ಯುವಕರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಈಗ ಆ ಪ್ರಾಯದ ಪರಿಮಿತಿಯು ೧೯ ವರ್ಷಕ್ಕೆ ಇಳಿಸಲ್ಪಟ್ಟಿದೆ. ಇನ್ನು ಕೆಲವು ತಿಂಗಳುಗಳೊಳಗಾಗಿ ಹೊಸದಾಗಿ ಹತ್ತು ಲಕ್ಷ ಸೈನ್ಯವನ್ನು ಜಮಾಯಿಸಲಾಗುವುದಂತೆ! ಈಗಾಗಲೇ ೨೦ ಲಕ್ಷ ಸೈನ್ಯವಿದೆ. ಪಶ್ಚಿಮ ಪ್ರಾಂತಗಳಲ್ಲಿ ೧೦ ಲಕ್ಷ ಸೈನ್ಯಗಳನ್ನು ಇಡಲು ಹೊಸ ಸೈನಿಕ ನಿವಾಸಗಳನ್ನೂ ಕಟ್ಟಿದ್ದಾರೆ. ಆಕಾಶಯಾನ ನಿರ್ಮಾಣಕ್ಕಂತೂ ಒಂದು ಪರಿಮಿತಿಯೆನ್ನುವುದೇ ಇಲ್ಲವೆನ್ನಬೇಕಾಗಿದೆ. ಕಳೆದ ಸಂವತ್ಸರಕ್ಕಿಂತ ಈ ವರ್ಷ ಇವುಗಳ ಸಂಖ್ಯೆ ೧೦೦ಕ್ಕೆ ೭೫ರಂತೆ ಹೆಚ್ಚಿದೆ. ಪೂರ್ವ ಸೈಬೀರಿಯಾ ಪ್ರಾಂತದಲ್ಲಿ ಸೈನ್ಯಗಳನ್ನು ಒಂದರ ಹಿಂದೆ ಒಂದನ್ನು ಕಳುಹಿಸಲು ಅನುಕೂಲಿಸುವಂತ ಎಷ್ಟೋ ರೈಲುಗಳು ನಿರ್ಮಿತವಾಗಿವೆ. ಜಪಾನವೂ ರಷ್ಯಾದ ಮೇಲೆ ತಿರುಗಿಬಿದ್ದರೂ, ಅವರು ತಿರುಗಿ ಶಾಶ್ವತವಾಗಿ ಮೇಲಕ್ಕೆ ಏಳದಂತ ದುರ್ಬಲರನ್ನಾಗಿ ಮಾಡಬಲ್ಲೆವೆಂದು ರಷ್ಯನ್ ಸೇನಾಪತಿಗಳು ಹೂಂಕೃತಿಗಳನ್ನು ತೋರುತ್ತಿದ್ದಾರೆ. ಸೋವಿಯಟ್ ಪ್ರಭುತ್ವವು ಎಂದಿಗೂ ಅಜೇಯವೇ ಎಂಬುದಾಗಿ ಅವರ ಬಲವಾದ ನಂಬಿಕೆ.

ಜಪಾನಿನ ಸಿದ್ಧತೆಗಳು.

ಜಪಾನಿನವರ ಅಹಂಕಾರವು ಮಿತಿ ಮೀರಿದೆ. ಯುದ್ಧದಲ್ಲಿ ಸೈನ್ಯ ನಿವಾಸಿಗಳು ಎಲ್ಲೆಲ್ಲಿ ಹೇಗೆಹೇಗೆ ಇರಬೇಕೋ ಆ ರಣರಂಗ ವಿನ್ಯಾಸಗಳನ್ನೆಲ್ಲ ಜಪಾನರು ಈಗಾಗಲೇ ತಯಾರು ಮಾಡಿಟ್ಟುಕೊಂಡಿದ್ದಾರೆ. ದೇಶದಲ್ಲಿನ ಕಾರ್ಖಾನೆಗಳೆಲ್ಲವೂ ಆಜ್ಞೆಯಾದೊಡನೆಯೇ ರಣಸಾಮಗ್ರಿಗಳನ್ನು ಮಾಡುವಂತ ತಕ್ಕ ಏರ್ಪಾಟುಗಳು ಜರಗುತ್ತಿವೆ. ೧೮ ವರ್ಷದ ಬಾಲಕರನ್ನು ಸಹಾ ತಮ್ಮ ಪಟಾಲಂಗಳಲ್ಲಿ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಯುದ್ಧನಿಧಿಗಾಗಿ ೫೦ ಕೋಟಿ ಡಾಲರುಗಳನ್ನು ಶೇಖರಿಸಿಟ್ಟಿದ್ದಾರೆ. ಹೊಸ ಸಾಲಗಳನ್ನು ತೆಗೆಯುತ್ತಿದ್ದಾರೆ, ಸುಂಕ, ತೆರಿಗೆಗಳನ್ನು ಹೆಚ್ಚಿಸುತ್ತಿದ್ದಾರೆ, ೧೮ ಕೋಟಿ ಪೌಂಡುಗಳಿಂದ ಹೊಸ ಸೈನ್ಯದ ಏರ್ಪಾಟು ಮಾಡುತ್ತಿದ್ದಾರೆ. ಕಳೆದ ಐದು ವರ್ಷಗಳಿಂದಲೂ ಸಂವತ್ಸರ ಒಂದಕ್ಕೆ ಆರು ಕೋಟಿ ಪೌಂಡುಗಳಂತೆ ಸೇನಾ ವೆಚ್ಚದ ಅಂದಾಜನ್ನು ತಯಾರು ಮಾಡುತ್ತಿದ್ದಾರೆ. ಜಪಾನ್ ವಿಶ್ವ ವಿದ್ಯಾಲಯಗಳಲ್ಲಿ ರಣವಿದ್ಯೆಯು ಪ್ರತ್ಯೇಕವಾಗಿ ನಡೆಯುತ್ತಿದೆ. ನೂತನ ವರ್ಷದ ಬಜೆಟ್ಟಿನಲ್ಲಿ ಸೈನ್ಯದ ಖರ್ಚನ್ನು ೧೩ ಕೋಟಿ ಪೌಂಡುಗಳಿಂದ ೧೮ ಕೋಟಿ ಪೌಂಡುಗಳಿಗೆ ಹೆಚ್ಚಿಸಿದ್ದಾರೆ.

ಜರ್ಮನಿಯ ಸಿದ್ಧತೆಗಳು.

ಜರ್ಮನಿ ಸಹ ೧೯ ವರ್ಷದ ಬಾಲಕರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲು ಮೊದಲು ಮಾಡಿದೆ. ಈ ಸಂವತ್ಸರಾಂತ್ಯದೊಳಗಾಗಿ ೨೦ ಲಕ್ಷ ಸೈನ್ಯವನ್ನು ಪತ್ತೆ ಮಾಡುವುದಾಗಿ ಹೇಳಲಾಗಿದೆ. ಇಟೆಲಿಯ ಯುದ್ಧಸಿದ್ಧತೆ ಯಾಗ ಪರಮಾವಧಿಗೆ ಮುಟ್ಟಿದೆ. ಅಮೇರಿಕಕ್ಕೂ ಈ ಅಂಟು ರೋಗವು ಹಬ್ಬಿದೆ.

ಬ್ರಿಟನ್ನಿನ ಸಿದ್ಧತೆಗಳು.

ಬ್ರಿಟಿಷರು ಈ ವರ್ಷ ಹೊಸದಾಗಿ ೨೦೦೦ ಮಂದಿ ವೈಮಾನಿಕರನ್ನು ತಯಾರು ಮಾಡುತ್ತಾರಂತೆ, ೧೯೩೭ನೆ ಸಂವತ್ಸರವು ಮುಗಿಯುವ ಹೊತ್ತಿಗೆ ೨೨೦೦೦ ಮಂದಿ ವೈಮಾನಿಕರು ಸುಶಿಕ್ಷಿತರಾಗಿ ಸಿದ್ಧರಾಗಿರಬೇಕೆಂದು ಬ್ರಿಟನ್ನಿನ ಸಂಕಲ್ಪ. ರಾಯಲ್ ನೇವಿ ಟೆರಿಟೋರಿಯಲ್ ಆರ್ಮಿ ವರ್ಗಗಳಲ್ಲೂ ವೃದ್ಧಿಯಾಗುತ್ತಿದೆ. ರಗ್ಯುಲರ್ ಆರ್ಮಿಗೆ ಮಾತ್ರ ಬ್ರಿಟನ್ನಿನಲ್ಲಿ ತಕ್ಕಷ್ಟು ಮಂದಿಯನ್ನು ಸೇರಿಸಲಾಗುತ್ತಿಲ್ಲವೆಂದು ಹೇಳಲಾಗಿದೆ. ಈ ಸಂವತ್ಸರದೊಳಗಾಗಿ ೧೦೦೦೦ ಮಂದಿ ಈ ಸೈನ್ಯಕ್ಕೆ ಹೊಸದಾಗಿ ಸೇರಬೇಕಂತೆ.

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೋಟೆಲು ಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವುದು. ಒಮ್ಮೆ ಬಂದು ಪರೀಕ್ಷಿಸಿರಿ.

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ.

ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

ಗಾಂಧಿ ಸಪ್ತಾಹದಲ್ಲಿ ಏನು ಓದುವಿರಿ!

ಪ್ರತಿ ವರುಷದಂತೆ ಅಕ್ಟೋಬರದ ಮೊದಲನೇ ವಾರದಲ್ಲಿ ಗಾಂಧೀ ಜಯಂತೀ ಉತ್ಸವವು ಜರಗುವದು ಆಗ್ಗೆ ಎಲ್ಲರೂ ಕೆಳಗಿನ ಪುಸ್ತಕಗಳನ್ನು ಅವಶ್ಯವಾಗಿ ಓದಲೇ ಬೇಕು.

(೧)	ಗಾಂಧಿ ವಿಚಾರ ದೋಹನ ಪುಟ ೩೫೦ (ಎಲ್ಲ ವಿಷಯಗಳ ಬಗ್ಗೆ ಗಾಂಧಿಜಿಯವರ ವಿಚಾರ ಸಂಗ್ರಹವು) ಬೆಲೆ	೧-೦-೦
(೨)	ಮಕ್ಕಳ ಮಹಾತ್ಮಾಗಾಂಧಿ ...	೦-೪-೦
(೩)	ಗ್ರಾಮೋದ್ಯೋಗ ...	೦-೧-೦
(೪)	ರಾಷ್ಟ್ರಗಾನ (೧ ರೂಪಾಯಿಗೆ ಸಾಲ್ವತ್ತು ಪುಸ್ತಕಗಳು)	೦-೦-೬
(೫)	ರಾಷ್ಟ್ರಧ್ವಜ ...	೦-೨-೦
(೬)	ಕಾಂಗ್ರೆಸಿನ ಕಥೆ ...	೧-೦-೦

ಈ ಎಲ್ಲ ಪುಸ್ತಕಗಳನ್ನು ಕರಿಸುವವರಿಗೆ ಅಂಚೆ ವೆಚ್ಚವಿಲ್ಲದೆ ಕಳಿಸಲಾಗುವದು.

ಸಕ್ರೆಟರಿ,

ಕರ್ನಾಟಕ ಶಿಕ್ಷಣ ಸಮಿತಿ, ಧಾರವಾಡ.

ಆರೋಗ್ಯ ವಿಚಾರ

ಮಹಾರ್ಬುದಕ್ಕೆ ಚಿಕಿತ್ಸೋಪಾಯ

'ನಾಗಬಲಿ' ಮೂಲಿಕೆಯ ವಿಶೇಷಗುಣ

ಮಹಾರ್ಬುದ ರೋಗದಿಂದ ಉಂಟಾಗುವ ತೊಂದರೆಗಳನ್ನೂ, ದುಷ್ಪರಿಣಾಮಗಳನ್ನೂ ಹೇಗೆ ನಿವಾರಿಸಿಕೊಳ್ಳಬೇಕೆಂಬ ವಿಷಯದಲ್ಲಿ ಅನೇಕ ಡಾಕ್ಟರ್ ಜನರೂ, ಜನಸಾಮಾನ್ಯರೂ ಕೂಡಿಯೇ ಪ್ರಯತ್ನ ಮಾಡುತ್ತಿದ್ದಾರೆ. ಈ ರೋಗದ ವಿಷಯದಲ್ಲಿ ನಡೆಸಿದ ಶೋಧಗಳ ಮೇಲಿಂದ ಆಹಾರದಲ್ಲಿಯ ದೋಷಮೂಲಕವಾಗಿ ಕರುಳುಗಳಲ್ಲಿ ಉಂಟಾಗುವ ವಿಷದಿಂದಲೇ ಮಹಾರ್ಬುದವು (Cancer) ಉಂಟಾಗುವದು. ಒಮ್ಮೆ ಪ್ರಾರಂಭವಾದರೆ ಇದರ ಬೆಳವಣಿಗೆಯನ್ನು ನಿಲ್ಲಿಸುವದು ಕಷ್ಟಸಾಧ್ಯ. ಶಸ್ತ್ರ ಚಿಕಿತ್ಸೆಯಿಂದ ಒಂದುಸಲ ಬೆಳವಣಿಗೆಯನ್ನು ನಿಲ್ಲಿಸಬಹುದು ಅಷ್ಟೇ. ಆದರೆ ಅದು ಕೂಡಲೆ ಪುನಃ ಬೆಳೆದುಬರುವದು. ಇದರ ಮೂಲಕಾರಣವು ರಕ್ತ ಮತ್ತು ಕರುಳಿನಲ್ಲಿರುವದರಿಂದ, ಎಷ್ಟೇಸಲ ಅದರ ಬೆಳವಣಿಗೆಯನ್ನೂ, ಅದರ ಪರಿಣಾಮವನ್ನೂ ಹಿಂದಾಗಿಸಿದರೂ, ರೋಗವು ನಿರ್ಮೂಲವಾಗುವದಿಲ್ಲ. ಕೊನೆಗೆ ಮರಣವು ಸಂಭವಿಸುವದು.

ಮಹಾರ್ಬುದದ ವಿಷಯವಾಗಿ ಮೇಲಿನ ವಿವರವು ನಿಜವಾದರೆ (ಅದು ನಿಜವೆಂದು ನನ್ನ ನಂಬಿಕೆ) ಬಹು ಸಂಖ್ಯಾತರಲ್ಲಿ ಈ ರೋಗವನ್ನು ಗುಣಮಾಡಬಹುದೆಂದು ನನಗನ್ನಿಸುತ್ತದೆ. ರೋಗವು ಬಲಿತು ನಿರಾಶೆಯಾದಾಗ ಸಹ ನಾಗಬಲಿ ಎಂಬ ಮೂಲಿಕೆಯನ್ನು ಉಪಯೋಗಿಸುವದು ಹಿತಕರವಾಗಿದೆ. ಇದು ವಿಷಘಾತಕ, ನಿರುತ್ತೇಜಕ, ನಿರುಪದ್ರವಿ ಆಗಿದ್ದು, ಕ್ರಿಸ್ತ ಪೂರ್ವದಲ್ಲಿ ೧೦೦೦ ವರ್ಷಗಳ ಮೊದಲು ಬರೆದ ಒಂದು ಬಿಂದು ವೈದ್ಯ ಗ್ರಂಥದಲ್ಲಿ ಇದರ ಉಲ್ಲೇಖವಿದೆ. ಇದರ ವಿಷಯವಾಗಿ ಕ್ರಿ. ಪೂ. ೫೦೦ ವರ್ಷಗಳ ಹಿಂದಿನ ಒಂದು ಸಂಸ್ಕೃತ ಗ್ರಂಥದಲ್ಲಿ (ಅದು ಈಗ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕೆಯ ವಸ್ತು ಸಂಗ್ರಹಾಲಯದಲ್ಲಿದೆ) ಈ ಮೂಲಿಕೆಯ ಮಹತ್ವವನ್ನು ಕುರಿತು ಬರೆದಿದ್ದಾರೆ. ಆರೆಬಿಯನರ ಪ್ರಖ್ಯಾತವಾದ ವೈದ್ಯ ಗ್ರಂಥಗಳಲ್ಲಿ ೧ ನಾಗಬಲಿ ಮೂಲಿಕೆಯನ್ನು ಮಹಾರ್ಬುದದ ಚಿಕಿತ್ಸೆಗಾಗಿ ಹೇಳಿದ್ದಾರೆ. ಗ್ರೀಕ್ ಭಾಷೆಯಿಂದ ಭಾಷಾಂತರಿಸಲ್ಪಟ್ಟ 'ಸೆವೆನ್ ಬುಕ್ಸ್ ಒಫ್ ಪೋಲಿಸ್ ಅಜೆನಿಟ್' ಎಂಬ ಪುಸ್ತಕದಲ್ಲಿಯೂ ಈ ಮೂಲಿಕೆಯ ಗುಣದ ವಿಚಾರವಾಗಿ ಬರೆದಿದೆ. ಜೋನ್ ಪಾರ್ಕಿನ್ ಅವರು ಬರೆದ 'ಥಿಯೆಟರಮ್ ಬೊಟನಿಕಮ್' ಎಂಬ ಪುಸ್ತಕದಲ್ಲಿ ಈ ಮೂಲಿಕೆಯ ಉಲ್ಲೇಖವಿದ್ದು ಅದರ ಗುಣವರ್ಣನೆಯೂ ಇದೆ. ಹಣ್ಣಿನ ರಸದಲ್ಲಿ ದಿನಕ್ಕೆ ನಾಲ್ಕು ಸಲ ಒಂದು ಚಹಾ ಚಂಚೆಯಷ್ಟು ಈ ಮೂಲಿಕೆಯ ರಸವನ್ನು ಕುಡಿಯಬೇಕು. ಮೊದಲಿನ ಮೂರು ದಿನಗಳಲ್ಲಿ ಸ್ವಚ್ಛನೀರುವಿನಹ ಬೇರೆ ಏನೂ ಆಹಾರ ಕೊಡಕೂಡದು.

ಸ್ಥಳದ ಅಭಾವದ ಮೂಲಕ ಇಲ್ಲ ಇನ್ನು ಹೆಚ್ಚಿನ ವಿವರವನ್ನು ಕೊಡಲು ಸಾಧ್ಯವಿಲ್ಲ. ಯಾರಾದರೂ ಆ ವಿಷಯವಾಗಿ ತಿಳಿಯಲಪೇಕ್ಷಿಸಿದರೆ ನನಗೆ ಬರೆದುಕೊಳ್ಳಬಹುದು

ಪಿ. ಎಸ್. ಒ ನೇಲ್,
C/o ಫೈಬರ್ ಎಕ್ಸ್‌ಪರ್ಟ್, ದೇವಘರ
ಸಂತಾಲ್ ಪರ್ಗನಾಸ್, ಬಿಹಾರ್.

(ಪ್ರೇಮ ಪತ್ರಿಕೋದ್ಯಮ ಶಾಖೆಯಿಂದ, ತುಂಗಭದ್ರಾ. ಬೊಂಬಾಯಿ ಕ್ರಾನಿಕಲ್ ಪತ್ರಿಕೆಯಿಂದ ಅನುವಾದ.)

ವಿದ್ಯುಚ್ಛಕ್ತಿಯ ಅಪಾಯ ನಿವಾರಣೆ

ವಿದ್ಯುಚ್ಛಕ್ತಿಯಿಂದ ಪ್ರಾಣಕ್ಕೂ ಪದಾರ್ಥಗಳಿಗೂ ಅಪಾಯ ಉಂಟಾಗದಂತೆ ಎಚ್ಚರಿಕೆಯಿಂದಲು, ಅನುಸರಿಸಬೇಕಾದ ಈ ಕೆಳಗೆ ಕಂಡ ನಿಬಂಧನೆಗಳನ್ನು ಜನರ ತಿಳುವಳಿಕೆಗಾಗಿ ಕೊಡಲಾಗಿದೆ

(1) ವಿದ್ಯುಚ್ಛಕ್ತಿಯ ತಂತಿಗಳಿರುವ ಕಂಬಗಳನ್ನು ಮುಟ್ಟಕೂಡದು ಮತ್ತು ಒರಗಿಕೊಳ್ಳಕೂಡದು. (2) ದನಕರುಗಳನ್ನೂ ಕುದುರೆಗಳನ್ನೂ ಅಥವಾ ಇತರ ಯಾವ ಜಾನುವಾರುಗಳನ್ನೇ ಆಗಲಿ ವಿದ್ಯುಚ್ಛಕ್ತಿಯ ಕಂಬಗಳಿಗೆ ಕಟ್ಟಕೂಡದು. (3) ವಿದ್ಯುಚ್ಛಕ್ತಿಯ ತಂತಿಗಳ ಕೆಳಗೆ ನಡೆಯಕೂಡದು. ಅವುಗಳ ಕೆಳಗಡೆ ಹೋಗಬೇಕಾದ ಸಂದರ್ಭ ಒದಗಿದಾಗ ಸಾಧ್ಯವಾದಷ್ಟು ಬೇಗನೆ ಆ ಸ್ಥಳವನ್ನು ದಾಟಿ ಮುಂದಕ್ಕೆ ಹೋಗಬೇಕು (4) ನೆಲದ ಮೇಲೆ ಬಿದ್ದಿರಬಹುದಾದ ವಿದ್ಯುಚ್ಛಕ್ತಿಯ ತಂತಿಗಳನ್ನು ಎಂದಿಗೂ ಮುಟ್ಟಕೂಡದು, ಏಕೆಂದರೆ, ಅವುಗಳಲ್ಲಿ ಕೆಲವು ವೇಳೆ ವಿದ್ಯುಚ್ಛಕ್ತಿ ಇದ್ದರೂ ಇದ್ದೀತು. (5) ವಿದ್ಯುಚ್ಛಕ್ತಿಯಿಂದ ಅಪಾಯಕ್ಕೀಡಾಗಿರುವ ಮನುಷ್ಯರನ್ನಾಗಲಿ ಅಥವಾ ಪ್ರಾಣಿಗಳನ್ನಾಗಲಿ ಕಾಪಾಡುವ ಉದ್ದೇಶದಿಂದ ಮುಂದೆ ನುಗ್ಗಿ ಯಾರೂ ತಮ್ಮ ಕೈಗಳಿಂದ ಮುಟ್ಟಕೂಡದು ಹಾಗೆ ಮಾಡುವದು ಪ್ರಾಣಕ್ಕೆ ಅತ್ಯಂತ ಅಪಾಯಕರ. (6) ವಿದ್ಯುಚ್ಛಕ್ತಿಯ ತಂತಿಗಳ ಕೆಳಗೆ ಬೆಂಕಿಉರಿಯುತ್ತಿರುವದು ಕಂಡು ಬಂದಾಗ ಸುತ್ತಮುತ್ತಲು ವಿದ್ಯುಚ್ಛಕ್ತಿಯ ತಂತಿಗಳು ಬಿದ್ದಿಲ್ಲವೆಂಬುದನ್ನು ನಿಸ್ಸಂಶಯವಾಗಿ ತಿಳಿಯದೆ, ಆ ಬೆಂಕಿಯನ್ನು ಆರಿಸಲು ಆತುರಪಟ್ಟು ನುಗ್ಗಕೂಡದು. (7) ವಿದ್ಯುಚ್ಛಕ್ತಿಯ ತಂತಿಗಳ ಕೆಳಗಡೆ ಆ ತಂತಿಗಳಿಂದ ಹತ್ತು ಅಡಿಗಳಿಗಿಂತ ಸಮೀಪದಲ್ಲಿರುವಂತೆ ಪೈರುಗಳು ಬೆಳೆಯಲು ಅವಕಾಶ ಕೊಡಕೂಡದು (8) ವಿದ್ಯುಚ್ಛಕ್ತಿಯ ತಂತಿಗಳ ಸಮೀಪದಲ್ಲಿರುವ ಮರಗಳನ್ನು ಹತ್ತಕೂಡದು (9) ವಿದ್ಯುಚ್ಛಕ್ತಿಯ ತಂತಿಗಳ ಮೇಲೆ ಚಾಚಿಕೊಂಡಿರುವ ಮರದ ಕೊಂಬೆಗಳನ್ನು ಕತ್ತರಿಸಲು ಪ್ರಯತ್ನಿಸಕೂಡದು. (10) ವಿದ್ಯುಚ್ಛಕ್ತಿಯ ತಂತಿಗಳ ಕೆಳಭಾಗದಲ್ಲಿ ತಿರುಗಾಡುವ ಗಾಡಿಗಳ ಕಮಾನಿನ ಮೇಲಾಗಲಿ ಅಥವಾ ಭರ್ತಿ ಮಾಡಿರುವ ಸಾಮಾನುಗಳ ಮೇಲಾಗಲಿ ಕುಳಿತುಕೊಂಡು ಹೋಗಕೂಡದು. (11) ವಿದ್ಯುಚ್ಛಕ್ತಿಯ ತಂತಿಗಳಿಗೆ ದಾರ, ಹುರಿ, ಮುಂತಾದವುಗಳನ್ನು ಎಸೆಯಲು ಅಥವಾ ವಿದ್ಯುಚ್ಛಕ್ತಿಯ ತಂತಿಗಳು ಇರುವ ಅಕ್ಕಪಕ್ಕ ಪ್ರದೇಶಗಳಲ್ಲಿ ಪಟಗಳನ್ನು ಆಡಿಸಲು ಹುಡುಗರಿಗೆ ಅವಕಾಶ ಕೊಡಕೂಡದು.

ಕೊಳೆ ರೋಗದ ಹಾವಳಿ.

(ವಾತ್ಮಿದಾರರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ. ಸಂ. ಪ.)

ಸಾಧಾರಣ ಅಡಿಕೆ ಖಂಡಿ ನೂರೈವತ್ತಕ್ಕೆ ಮಿಕ್ಕಿದ ನಮ್ಮ ನಿಡ್ಲೆ ಗ್ರಾಮದಲ್ಲಿ 1926ನೇ ಇಸ್ವಿ ಮೊದಲ್ಗೊಂಡು 1935 ನೇ ಇಸ್ವಿಯವರೆಗೆ ಶೇಕಡಾ ಇಪ್ಪತ್ತೈದು ಖಂಡಿಯಂತೆ ಕೊಳೆರೋಗದಿಂದ ಅಡಿಕೆ ಫಸಲಿಯು ಉದುರುತ್ತಿತ್ತು. ಆದರೆ ಈ ವರ್ಷ ಇದೇ ಕೊಳೆರೋಗದಿಂದಾಗಿ ಶೇಕಡಾ ನೂರರಂತೆಯೇ ಅಡಿಕೆ ಫಸಲಿಯು ಬಿದ್ದದ್ದಲ್ಲದೆ ತೆಂಗಿನಮರಕ್ಕೂ ಕೂಡಾ ಪ್ರಾರಂಭವಾಗಿ ಬಾಗಾಯ್ತು ಕೃಷಿಕರನ್ನು ತುಂಬಾ ಹೀನ ಸ್ಥಿತಿಗೆ ತಂದಿಳಿಸಿಯದೆ ಸಾಲದ ಹೊರೆಯಿಂದಲೂ, ಆರ್ಥಿಕ ದುಸ್ಥಿತಿಯಿಂದಲೂ, ದವಸ ಧಾನ್ಯಗಳ ಬೆಲೆಗಳ ವಿಲಕ್ಷಣದಿಂದಲೂ ಭೂಕಂದಾಯವನ್ನು ಕೊಟ್ಟು ಜೀವನ ನಡಿಸಲು ಕೂಡ ಕಷ್ಟತರವಾಗಿರುವ ಇಂಥಾ ಸಮಯದಲ್ಲಿಯೇ ಅಕಸ್ಮಾತ್ತಾಗಿ ಇಂಥಾ ಹಾವಳಿಯು ಬಂದುದು ರೈತರ ಒಂದು ದುರ್ಭಾಗ್ಯವೇ ಸರಿ. ಇಲ್ಲಿಯ ವರ್ಗದಾರರೆಂದರೆ ಅಡಿಕೆ ಬಾಗಾಯ್ತು ಕೃಷಿಕರೇ ಹೆಚ್ಚಾಗಿದ್ದು ಅಲ್ಪ ಸ್ವಲ್ಪ ಮಂದಿಗೆ ಮಾತ್ರವೇ ಕೆಲವಂಶ ಭತ್ತದ ಜಮೀನಿರುವದು. ಬರೇ ಅಡಿಕೆ ವ್ಯವಸಾಯದಿಂದಲೇ ಜೀವನ ನಡಿಸುವ ರೈತರು ಭೂಕಂದಾಯವನ್ನು ಕೊಟ್ಟು ಸಾಲದ ಬಡ್ಡಿ ಪಾವತಿ ಮಾಡಿ ತಮ್ಮ ಕುಟುಂಬ ಪೋಷಣೆಯನ್ನು ನಡಿಸುವ ಬಗೆಯಾದರೂ ಹೇಗೆ! ಕೆಲವಂಶದಿಂದ ಭತ್ತದ ಜಮೀನು ಇದ್ದವರ ವಿಷಯವೆಂದರೆ ಇವರಲ್ಲಿ ಕೆಲವರು ತಮ್ಮ ವರ್ಷಾವಧಿ ಭೂಕಂದಾಯವನ್ನಾದರೂ ಕೊಡುವ ಚೈತನ್ಯವಿರುವದಷ್ಟೆ ವಿನಹ ಸಂಸಾರ ಪೋಷಣೆಯನ್ನು ನಡೆಸುವ ಆಶೆಯಿರುವದಿಲ್ಲ. ಇನ್ನು ಉಳಿದವರೆಂದರೆ ಗೇಣಿಗೆ ವಹಿಸಿಕೊಂಡು ಭತ್ತದ ವ್ಯವಸಾಯ ನಡಿಸುವ ಬಡ ಒಕ್ಕಲಿಗರು. ಇವರ ಸ್ಥಿತಿಯಂತೂ ಈ ಮೇಲಿನವರಿಗಿಂತಲೂ ಹೀನಸ್ಥಿತಿಗಿಳಿದಿರುವದು. ಪ್ರಕೃತ ನಾಲ್ಕೈದು ವರ್ಷಗಳಿಂದಲೂ ಭತ್ತದ ವ್ಯವಸಾಯಕ್ಕೆ ಬೇಕಾಗುವ ಹವಾಮಾನವು ಸಮಯಕ್ಕೆ ತಕ್ಕಂತೆ ಸರಿಯಾಗಿರದೆ ಪೈರು ಹಾಳಾಗಿ ಆಯಾಯ ವರ್ಷದ ಗೇಣಿಯನ್ನು ಕೂಡಾ ಧನಿಗೆ ತೆರಲು ಕಷ್ಟವಾಗಿ ಗೇಣಿಯು ಸಾಲರೂಪವಾಗಿ ಬಿದ್ದು ಆಯಾಯ ಒಕ್ಕಲುಗಳು ತಮ್ಮ ತಮ್ಮ ಧನಿಗಳಲ್ಲಿಗೇನೇ ಬೇಸಾಯದ ಕೆಲಸಗಳು ಮುಗಿದೊಡನೆಯೆ ಕೂಲಿಕೆಲಸಕ್ಕೆ ಹೋಗಿ ತಮ್ಮ ಜೀವನವನ್ನು ನಡಿಸುತ್ತಿದ್ದರು. ಈ ಹಾವಳಿಯಿಂದಾಗಿ ವರ್ಗದಾರರಲ್ಲಿ ಕೂಲಿ ಕೆಲಸವು ಕೂಡಾ ಸಿಕ್ಕದೆ ಕೊಳ್ಳದೆ ನರಳುವ ಸಮಯವು ಸಮೀಪಿಸಿರುವದು. ಕೂಲಿ ಕೆಲಸದಿಂದಲೇ ಜೀವಿಸುವ ಕೂಲಿಕಾರರ ಸ್ಥಿತಿಯನ್ನು ಇನ್ನು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ. ಕಾಡಿನಲ್ಲಿರುವ ಗೆಡ್ಡೆ ಗೆಣಸುಗಳನ್ನು ತಂದು ಬೇಯಿಸಿ ತಿನ್ನಲು ಪ್ರಾರಂಭಿಸಿ ಕೆಲವು ಸಮಯಗಳಾದುವು. ಇಂಥಾ ದುಃಸ್ಥಿತಿಯು ಈ ಗ್ರಾಮದಲ್ಲಿ ಮಾತ್ರವಲ್ಲದೆ ಆಸುಪಾಸಿನ ಗ್ರಾಮಗಳಾದ ಹತ್ಯಡ್ಕ, ಸಿಸಿಲ, ಶಿಬಾಜೆ ಮುಂತಾದ ಗ್ರಾಮಗಳಲ್ಲಿಯೂ ಕೂಡಾ ಉಂಟೆಂತ ತಿಳಿದು ಬರುವದು. ಆಸುಪಾಸಿನ ಗ್ರಾಮಗಳ ಹಲವು ಬಡಕುಟುಂಬಗಳು ಈಗಾಗಲೇ ತಮ್ಮ ತಮ್ಮ ಮನೆಮಾಗುಗಳನ್ನು ಬಿಟ್ಟು ಹೊಟ್ಟೆಯ ಪಾಡಿಗಾಗಿ ಅಲ್ಲಲ್ಲಿ ಅಂಡಲೆಯುತ್ತಿರುವದು ಕಾಣಲ್ಪಡುವದು. ಮಾನ್ಯ ಜಿಲ್ಲಾಧಿಕಾರಿಗಳೇ! ಮತ್ತು ನಮ್ಮ ಜಿಲ್ಲೆಯ ರೈತವರ್ಗದ ಮುಖಂಡರುಗಳೇ! ನಮ್ಮ ಈ ಮೂಡು ಪ್ರಾಂತ್ಯಕ್ಕೂ ಕೂಡಾ ಸಂದರ್ಶನೆಯನ್ನಿತ್ತು ಯೋಗ್ಯ ತನಿಕೆ ನಡಿಸಿ ಕೊಳೆರೋಗದ ಹಾವಳಿಯಿಂದ ನಷ್ಟ ಹೊಂದಿದ ರೈತರ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡಿ ಈ ಆರ್ಥಿಕ ಸಂಕಷ್ಟದಿಂದ ರಕ್ಷಿಸಲಾರರೇ?

ನೋಟೀಸು

ಉಪ್ಪಿನಂಗಡಿ ತಾಲೂಕು ಕೋಟಮಾಗಣೆ ಐರೋಡಿ ಗ್ರಾಮದಲ್ಲಿರುವ ಯಡಬೆಟ್ಟು ನಾಗಪ್ಪ ಹೊಳ್ಳರ ವಿಧವೆ ನರಸಮ್ಮನು ಈ ಮೂಲಕ ತಿಳಿಯಪಡಿಸುವದೇನೆಂದ್ರೆ:–

ನನಗೆ ಐರೋಡಿ ಗ್ರಾಮದಲ್ಲಿರುವ ವೆಂಕಟ್ರಾಯ ಅಲಶೇರ್ರ ಮಗ ಸುಬ್ರಾಯ ಅಲಶೇರ್ರು ರೂಪಾಯಿ 400/ ನಾನೂರಕ್ಕೆ ಬರ್ಸಿಕೊಟ್ಟ ಡಿಮಾಂಡ್ ನೋಟನ್ನು ನನ್ನ ತಮ್ಮ ನರಸಿಂಹ ತುಂಗನು ನಿನ್ನೆ ದಿವಸ ಬಲಾತ್ಕಾರದಿಂದ ಅಕ್ರಮಲಾಭ ಹೊಂದುವ ದುರಾಲೋಚನೆಯಿಂದ ಸ್ವಾಧೀನಮಾಡಿಕೊಂಡು ಸದ್ರಿ ನೋಟಿನಲ್ಲಿ ತನಗೆ ಯಿಷ್ಟಬಂದ ರೀತಿ ರಿಕಾರ್ಡು ಮಾಡುವ ಉದ್ದೇಶ್ಯ ನನ್ನ ಬಲಗೈಹೆಬ್ಬೆಟ್ಟಿ ಮೊಹರು ಬಲಾತ್ಕಾರದಿಂದ ಪಡಕೊಂಡಿರುತ್ತಾನೆ. ಆದ್ದರಿಂದ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದ್ರೆ:—

ಆತ ನನ್ನ ಒಪ್ಪಿಗೆ ಯಿಲ್ಲದೆ ಪಡಕೊಂಡ ಹೆಬ್ಬೆಟ್ಟು ಮೊಹರದಿಂದ ಮಾಡಬಹುದಾದ ಯಾವತರದ ರಿಕಾರ್ಡು ನನಗೆ ಬಾಧಿಸತಕ್ಕದ್ದಲ್ಲ. ಸದ್ರಿ ನೋಟಿನ ಅಸಲು ವ ಯಿದೇ ಯಿಸವಿ ಜುಲೈ ತಾರೀಕು 26ರ ನಂತ್ರದ ಬಡ್ಡಿಯನ್ನು ಪೂರ್ಣ ವಸೂಲುಮಾಡಲಿಕ್ಕೆ ನಾನು ಸಂಪೂರ್ಣ ಹಕ್ಕುದಾರಳಾಗಿರುತ್ತೇನೆ.

ಈ ಗೆರೆ ನರಸಮ್ಮನ ರುಜು.
9—9—1936.

ಕೃಷ್ಣಾಷ್ಟಮಿ

ಮಹಾ ಪುರುಷರ ಜನ್ಮ ದಿನವನ್ನು ಆಚರಿಸುವ ಕ್ರಮವು ಭೂಲೋಕದಲ್ಲಿ ಎಲ್ಲೆಲ್ಲಿಯೂ ಪ್ರಚಾರದಲ್ಲಿದೆ. ಒಬ್ಬ ಮಹಾ ಪುರುಷನ ಜನ್ಮದಿನದಲ್ಲಿ ಅವನ ಸದ್ಗುಣಗಳನ್ನೂ ಅವನು ಮಾಡಿದ ಮಹತ್ಕಾರ್ಯಗಳನ್ನೂ ತಿಳಿದು ಮತ್ತು ಇತರರಿಗೆ ವಿವರಿಸಿ ಹೇಳಿ ಎಲ್ಲರೂ ಅವನ ಜೀವನ ಕ್ರಮವನ್ನೆ ಅನುಸರಿಸುವಂತೆ ಬೋಧಿಸುವ ಕ್ರಮವಿರುತ್ತದೆ.

ಕೃಷ್ಣನೂ ಒಬ್ಬ ಆದರ್ಶನೀಯ ಮಹಾಪುರುಷನು. ಅವನ ಧೈರ್ಯ, ಸಾಹಸ ಜ್ಞಾನ, ಚತುರತೆ ಈ ಸದ್ಗುಣಗಳಿಗಾಗಿ ಅವನು ಪ್ರಸಿದ್ಧನಾಗಿರುತ್ತಾನೆ. ಪಾಂಡವರಿಗೆ ಸಿಕ್ಕತಕ್ಕ ರಾಜ್ಯವನ್ನು ಅವರಿಗೆ ಬಿಟ್ಟು ಕೊಡೆಂದು ಕೌರವನಿಗೆ ಎಷ್ಟು ಬುದ್ಧಿ ಹೇಳಿದರೂ ಕೌರವನು ಅದನ್ನು ಮದಹಂಕಾರದಿಂದ ನಿರ್ಲಕ್ಷಿಸಿದುದರಿಂದ ಕೃಷ್ಣನು ಪಾಂಡವರಿಗೆ ಬೆಂಬಲ ಮತ್ತು ಪ್ರೋತ್ಸಾಹ ಕೊಟ್ಟು ಅವರು ಯುದ್ಧದಲ್ಲಿ ಜಯಶೀಲರಾಗುವಂತೆ ಮಾಡಿದುದು, ತಾನು ದೊಡ್ಡ ರಾಜನೆಂದು ಎಣಿಸದೆ ಪಾಂಡವರ ಸಾರಥಿಯಾಗಿ ಅವರ ಕಡೆಯಿಂದ ನಿರ್ಭೀತಿಯಿಂದ ಹೋರಾಡಿದುದು, ಅರ್ಜುನನು ತನ್ನ ಸಂಬಂಧಿಕರನ್ನೂ ಗುರು ಹಿರಿಯರನ್ನೂ ಹೇಗೆ ಕೊಲ್ಲಲೆಂದು ವೈರಾಗ್ಯ ತಾಳಿದಾಗ ನಿರ್ದಾಕ್ಷಿಣ್ಯದಿಂದ ಯುದ್ಧ ಮಾಡುವುದೇ ಆತನ ಕರ್ತವ್ಯವೆಂದು ಅವನಿಗೆ ಬೋಧಿಸಿ ಅವನನ್ನು ಶೂರನನ್ನಾಗಿ ಮಾಡಿದುದು ಇವೇ ಮೊದಲಾದ ಕಾರ್ಯಗಳಿಂದ ಕೃಷ್ಣನು ಮಹಾಪುರುಷನೆಂದು ಎಣಿಸಿಕೊಳ್ಳುವನು. ಕೃಷ್ಣನ ಜನ್ಮ ದಿನವನ್ನು ನಾವು ಆಚರಿಸುವುದಾದರೆ ಆ ದಿನ ಅವನ ಸದ್ಗುಣಗಳನ್ನೂ ಮಹತ್ಕಾರ್ಯಗಳನ್ನೂ ನಾವು ತಿಳಿಯಲೆತ್ನಿಸಬೇಕು ಮತ್ತು ಇತರರಿಗೆ ತಿಳಿಸಲೆತ್ನಿಸಬೇಕು. ಜನ್ಮ ದಿನಾಚರಣೆಯ ಉದ್ದೇಶವು ಇನ್ನೇ ಇರಬೇಕಲ್ಲದೆ ಇನ್ನೊಂದಿರಕೂಡದು.

ಆದರೆ ನಾವು ಈಗ ಕೃಷ್ಣಾಷ್ಟಮಿಯನ್ನು ಹೇಗೆ ಆಚರಿಸುತ್ತಿದ್ದೇವೆಂದು ವಿಚಾರಿಸುವ. ನಾವೆಲ್ಲರೂ ಕೃಷ್ಣನಂತೆ ಆಗಬೇಕೆಂದು ಇಚ್ಛಿಸಬೇಕಾದರೆ ಅವನು ನಮ್ಮಂತೆಯೇ ಒಬ್ಬ ಮನುಷ್ಯನೆಂಬುದನ್ನು ಪ್ರಥಮತಃ ತಿಳಿದುಕೊಳ್ಳಬೇಕು. ನಾವು ಕೃಷ್ಣನನ್ನು ನಮ್ಮಂತೆಯೇ ಒಬ್ಬ ಮನುಷ್ಯನೆಂದು ತಿಳಿಯದೆ ಅವನು ದೇವರ ಅವತಾರವೆಂದೂ ಅವನಲ್ಲಿದ್ದ ಜ್ಞಾನ, ಶಕ್ತಿ ಶೌರ್ಯವೆಲ್ಲವೂ ಮನುಷ್ಯನಿಗೆ ಪಡೆಯಲು ಅಸಾಧ್ಯವೆಂದೂ ಎಣಿಸಿದರೆ ಕೃಷ್ಣನ ಜೀವನ ಚರಿತ್ರೆಯ ಪ್ರಾಮುಖ್ಯತೆಯನ್ನೇ ನಾವು ಹಾಳುಮಾಡಿದಂತಾಗುವುದು. ಕೃಷ್ಣನು ಸಾಮಾನ್ಯ ಮನುಷ್ಯನಾಗಿರುವುದರಿಂದಲೇ ಅವನು ಬಾಲ್ಯದಲ್ಲಿ ಇತರ ಮಕ್ಕಳಂತೆಯೇ ತುಂಟನಾಗಿಯೂ ಕಳ್ಳನಾಗಿಯೂ ಇರುತ್ತಿದ್ದನು ಎಂದು ತಿಳಿಯದ ಆತನ ಜನ್ಮದಿನದಲ್ಲಿ ಆತನು ಮೊಸರಿನ ಪಾತ್ರೆಯನ್ನು ಒಡೆದವ, ಬೆಣ್ಣೆ ಕದ್ದವನೆಂದು ಮೊದಲಾಗಿ ಅರ್ಥವಿಲ್ಲದೆ ಅವನನ್ನು ಸ್ತುತಿಸುತ್ತಿದ್ದೇವೆ. ನವಯೌವನದಲ್ಲಿ ಕೃಷ್ಣನು ಸ್ತ್ರೀಯರ ಮೋಹಕ್ಕೆ ಒಳಕಿ ಅನೇಕ ಸ್ತ್ರೀಯರ ಪಾತಿವ್ರತ್ಯವನ್ನೂ ಕೆಡಿಸಿದನು ಎಂಬುದು ಆತನ ಜನ್ಮ ದಿನದಲ್ಲಿ ಜನರಿಗ ವಿಶೇಷವಾಗಿ ವಿವರಿಸತಕ್ಕ ವಿಷಯವಲ್ಲವಾದರೂ ದೇವರ ಅವತಾರವೆಂದು ಪ್ರಸಿದ್ಧಿ ಹೊಂದಿದವನಿಗೆ ವ್ಯಭಿಚಾರ ಇತ್ಯಾದಿ ದುರ್ಗುಣಗಳು ಇರುವುದು ಯೋಗ್ಯವಲ್ಲವೆಂದೆಣಿಸಿ ನಾವು ಅವನ ಈ ರೀತಿಯ ವರ್ತನೆಗಳಿಗೆಲ್ಲಾ ಹೊಸಹೊಸ ಅರ್ಥಗಳನ್ನು ಕಲ್ಪಿಸಿ ಅವುಗಳನ್ನು ಸಮರ್ಥಿಸುತ್ತಿದ್ದೇವೆ. ಯುದ್ಧ ಕಾಲದಲ್ಲಿ ಅವನು ತೋರಿಸಿದ ಧೈರ್ಯ ಸಾಹಸಗಳಿಗೆ ನಾವು ಅವನನ್ನು ಸ್ತುತಿಸುವ ಬದಲಾಗಿ ಅವೆಲ್ಲವೂ ಅವನ ಅವತಾರಕ್ಕೆ ಸಂಬಂಧಿಸಿದ ವಿಚಾರವೆಂದು ಹೇಳುತ್ತಿದ್ದೇವೆ ಮತ್ತು ಅವನು ದೇವರ ಅವತಾರವೆಂದು ರುಜು ಪಡಿಸಲಿಕ್ಕಾಗಿ ಅವನು ಸರ್ವವನ್ನು ತುಳಿದುಕೊಂಡನು, ಬಾಯಿಯಲ್ಲಿ ಬ್ರಹ್ಮಾಂಡವನ್ನು ತೋರಿಸಿದನು, ಪರ್ವತವನ್ನು ಎತ್ತಿದನು, ಸೂರ್ಯನನ್ನು ಅಡ್ಡ ತಡೆದನು. ತನ್ನಲ್ಲಿ ವಿಶ್ವರೂಪವನ್ನು ತೋರಿಸಿದನು ಎಂಬೀ ಮೊದಲಾದ ಅಸ್ವಾಭಾವಿಕವಾದ ನಂಬಲಾರದ ಕಥೆಗಳನ್ನು ಹೇಳುತ್ತಿದ್ದೇವೆ. ಸರ್ವಶಕ್ತನಾದ ದೇವರು ಸಾಮಾನ್ಯ ಮನುಷ್ಯರನ್ನು ಬೆರಗುಗೊಳಿಸುವ ಕೆಲವು ಅದ್ಭುತ ಕಾರ್ಯಗಳನ್ನು ಮಾಡಬಲ್ಲನೆನ್ನುವುದರಲ್ಲಿ ಏನು ಸಾರ್ಥಕ್ಯವಿದೆಯೋ ತಿಳಿಯದು. ಸರ್ವ ಸಾಮಾನ್ಯರಿಗಿರುವುದಕ್ಕಿಂತ ಹೆಚ್ಚಿನ ಜ್ಞಾನ ಶಕ್ತಿ ಮತ್ತು ಧೈರ್ಯವುಳ್ಳವರೆಲ್ಲರೂ ದೇವರ ಅವತಾರವೆಂದು ಹೇಳುವ ಕ್ರಮವು ನಮ್ಮಲ್ಲಿ ಹಿಂದಿನಿಂದಲೂ ನಡೆದು ಬಂದಿದೆ. ಹೀಗಾಗಿ ಅಂತವರು ಮಾಡಿದ್ದೆಲ್ಲಾ ಸರಿಯೆಂದು ನಾವು ಸಮರ್ಥಿಸ ಬೇಕಾಗಿದೆ. ಇದರಿಂದಲೇ ನಾವು ಕೃಷ್ಣನ ಜನ್ಮದಿನದಲ್ಲಿ ಅವನ ಗುಣಕಥನಮಾಡುವುದರ ಬದಲಾಗಿ ಅವನ ಪ್ರತಿಮೆಯನ್ನು ಅಲಂಕರಿಸಿ ವಿಧ ವಿಧದ ಭಕ್ಷ್ಯಗಳನ್ನು ಅದಕ್ಕೆ ಸಮರ್ಪಿಸಿ ಅರ್ಘ್ಯಾದಿಗಳನ್ನು ಕೊಟ್ಟು ಪೂಜಿಸಿ ಮರುದಿನ ಕೃಷ್ಣನು ಬಾಲ್ಯದಲ್ಲಿ ಹುಡುಗಾಟಿಕೆಯಿಂದ ಮಾಡಿದ ಚೇಷ್ಟೆಗಳನ್ನು ಮಾಡಿ ತೋರಿಸಿ ಈ ಅರ್ಥವಿಲ್ಲದ ಕಾರ್ಯಗಳಲ್ಲಿ ನಮ್ಮ ಸಮಯವನ್ನು ಕಷ್ಟಾರ್ಜಿತ ದ್ರವ್ಯವನ್ನು ವ್ಯಯಮಾಡುತ್ತಿದ್ದೇವೆ. ನಾವು ಆಧುನಿಕ ಮಹಾಪುರುಷರ ಜನ್ಮದಿನವನ್ನು ಆಚರಿಸುವಂತೆಯೇ ಕೃಷ್ಣನ ಜನ್ಮದಿನವನ್ನು ಆಚರಿಸುವುದಾದರೆ ಎಷ್ಟು ಯೋಗ್ಯವಿತ್ತು! ನಮ್ಮ ಜನರು ಈ ಕಡೆ ಸ್ವಲ್ಪ ಗಮನಿಸುವರೇ?

—ವಿಚಾರಿ.

ಬೆಲೆ ಸುಲಭ! ಒಂದೇ ದರ!! ಖಾತ್ರಿವ್ಯಾಲು!!!

ಎಲ್ಲಿ ?

ಎಸ್. ಅನಂತ್ರಾಮಾಚಾರ್

ಸ್ಟೇಶನರಿ, ಕಟ್ಲೇರಿ ಮತ್ತು ಶಾಲೋಪಕರಣಗಳ ವ್ಯಾಪಾರಿ.

ತಾಲೂಕು ಕಚೇರಿಬಳಿ, ಉಡುಪಿ.

ಚಕ್ರ ಬಂಧ ಸ್ಪರ್ಧೆ (ಸಂಖ್ಯೆ ೧)

ಸರಿಯಾಗಿ ಬಿಡಿಸಿದವರಿಗೆ ಬೆಳ್ಳಿಯ ಪದಕ ಇನಾಂ!



ಎಡದಿಂದ ಬಲಕ್ಕೆ:—

1. ಕಾಳಗ
3. ಒಂದು ಸಂಖ್ಯೆ
6. ಕ್ರಯ
12. ಹುಟ್ಟುವಿಕೆ
14. ಸುತ
15. ಮಂತ್ರ
16. ಪಾಂಡು ಪುತ್ರರಲ್ಲೊಬ್ಬ
23. ವಿದ್ಯಾರ್ಥಿಗಳ ವಿರಾಮದಿನ
25. ಸರ
26. ನಭ
27. ವ್ಯಾಕರಣ ಸಂಧಿಗಳಲ್ಲೊಂದು

ಮೇಲಿಂದ ಕೆಳಕ್ಕೆ:—

1. ವಸತಿ
2. ವೃಕ್ಷ
4. ಕನ್ಯೆ
5. ಪ್ರೀತಿ
10. ಪ್ರತಿಯೊಬ್ಬನೂ ಅಪೇಕ್ಷಿಸುವಂಥಾದ್ದು
12. ಜೋಕೆ
13. ಎಡಗಿಂದ ಬಲದ 16ನೇದ್ದು
17. ದರ್ಭೆ
19. ಹಾವು
22. ಕೊನೆ
24. ಸ್ಥಳ
25. ತೂಕಗಳಲ್ಲೊಂದು

ಹೆಚ್ಚಿನ ಸಲಹೆಗಳು.

1, 7, 9, 12 = ತಾವರೆ. 6, 29, 11, 13 = ಒಂದು ಪ್ರಸಿದ್ಧ ಕಥಾ ಸಂಗ್ರಹ. 28, 25, 21, 18 = ಈಶ್ವರ. 26, 24, 20, 16 = ಗಣಪತಿ. 8, 29 = ಜೇನು.

ನಿಯಮಗಳು:—ಪ್ರತಿ ಉತ್ತರದೊಡನೆ ಒಂದಾಣೆಯ ಟಪ್ಪಾಲುಚೀಟನ್ನು ಇಡಬೇಕು. ಅದನ್ನು ಯಾವಕಾರಣದಿಂದಲೂ ತಿರುಗಿ ಕೊಡಲಾಗುವದಿಲ್ಲ ಅಥವಾ ಬೇರೊಂದು ಸ್ಪರ್ಧೆಗ ಜಮೆ ಹಿಡಿಯುವಂತೆಯೂ ಇಲ್ಲ. ೨. ಒಬ್ಬರೇ ಅನೇಕ ಉತ್ತರಗಳನ್ನು ಕಳುಹಿಸಬಹುದು. ಮೊದಲನೆಯದನ್ನು ಮೇಲಿನ ಚಕ್ರಬಂಧ ದಲ್ಲಿಯೂ ಮಿಕ್ಕವುಗಳನ್ನು ಬೇರೆ ಕಾಗದಗಳಲ್ಲಿಯೂ ಬರೆದು ಕಳುಹಿಸಬಹುದು. ಸ್ಪರ್ಧೆಯ ಎಲ್ಲಾ ವಿಷಯಗಳಲ್ಲಿಯೂ ಚಕ್ರಬಂಧ ಸ್ಪರ್ಧೆಯ ಸಂಪಾದಕರ ತೀರ್ಮಾನವೇ ಕೊನೆಯದಾಗಿರುತ್ತದೆ. ೪. ಈ ಸ್ಪರ್ಧೆಗೆ ಸಂಬಂಧಪಟ್ಟ ಪತ್ರವ್ಯವಹಾರಗಳನ್ನು ಎಷ್ಟು ಮಾತ್ರವೂ ಮಾಡಲಿಕ್ಕಿಲ್ಲ; ಅದಕ್ಕಾಗಿ ಮಾತುಕಥೆಯೂ ಅನಗತ್ಯವಿದೆ. ೫. ನಿಯಮಗಳನ್ನು ಪಾಲಿಸದಿರುವ ಉತ್ತರಗಳು ಅಸ್ವೀಕೃತವಾಗುವವು. ೬. ನವಯುಗದ ಸಂಪಾದಕರ ಬಳಿ ಮೊಹರು ಮಾಡಿಟ್ಟ ಉತ್ತರಕ್ಕೆ ಹೊಂದಿಕೆಯಾಗುವ ಉತ್ತರವೇ ಸಂಪೂರ್ಣ ಸಮರ್ಪಕ ಉತ್ತರ. ಒಂದಕ್ಕಿಂತ ಹೆಚ್ಚು ಸಂಪೂರ್ಣ ಉತ್ತರಗಳು ಬಂದರೆ ಇನಾಮನ್ನು ಚೀಟಿ ಹಾಕಿ ಕೊಡಲಾಗುವುದು, ಆದರೆ ಎಲ್ಲರ ಹೆಸರುಗಳನ್ನೂ ಪ್ರಕಟಿಸಲಾಗುವುದು. ಉತ್ತರವನ್ನು ತಾ 5-10-38ರ ತನಕ ಸ್ವೀಕರಿಸಿ ತಾ 8-10 38ಕ್ಕೆ ಪ್ರಕಟಿಸಲಾಗುವುದು. ಉತ್ತರವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

'ನವಯುಗ' ಚಕ್ರಬಂಧ ಸ್ಪರ್ಧೆ (ಸಂಖ್ಯೆ ೧)
'ನವಯುಗ' ಆಫೀಸು, ಉಡುಪಿ.

ಹೊಸ ಮಾದರಿಯ ನವೀನ ಒಗಟುಗಳನ್ನು ಸ್ವೀಕರಿಸಿ ನಮ್ಮಯಾನು ಸಾರವಾಗಿ ಪ್ರಕಟಿಸಲಾಗುವುದು.

ಸ್ಪರ್ಧೆ

ಸಣ್ಣ ಕತೆ

ಬರೆದವ — ಬಿ ಶಂಕರ ಭಟ್ಟ, ವಿದ್ವಾನ್, ಮಂಗಳೂರು

ಶರತ್ಕಾಲದ ಕಗ್ಗತ್ತಲೆಯ ಇರುಳು ಆ ವೃದ್ಧ ವ್ಯಾಪಾರಿಯು ತನ ಕೋಣೆಯೊಳಗೆ ಇತ್ತಿಂದತ್ತ ಹೆಜ್ಜೆ ಹಾಕುತ್ತಾ ಹನ್ನೆರಡು ವರ್ಷಗಳ ಹಿಂದಿನ ಆ ವಿನೋದಕೂಟವನ್ನು ನೆನೆಸುತ್ತಿದ್ದಾನೆ ಆ ಪ್ರೀತಿ ಭೋಜನಕ್ಕೆ ಅನೇಕಮಂದಿ ಚತುರ ವ್ಯಕ್ತಿಗಳು ಬಂದಿದ್ದರು, ಮತ್ತು ಮನೋರಂಜಕವಾದ ಅನೇಕ ಮಾತು ಕಥೆಗಳು ನಡೆದಿದ್ದವು ಆ ಮಧ್ಯೆ ಫಾಶಿಶಿಕ್ಷೆ ಪದವಾಗಿ ಚರ್ಚೆ ಬಂತು ಊಟಕ್ಕೆ ಬಂದವರಲ್ಲಿ ಹೆಚ್ಚಿನವರು ಫಾಶಿಶಿಕ್ಷೆಗೆ ವಿರೋಧವಾಗಿ ಮಾತಾಡಿದರು ಅವರ ಅಭಿಪ್ರಾಯ ಪ್ರಕಾರ ಮೃತ್ಯುದಂಡವು ಧರ್ಮ ವಿರುದ್ಧವೂ ನಾಗರಿಕತೆಗೆ ಅಯೋಗ್ಯವೂ ಆಗಿದ್ದುದಲ್ಲದೆ ಒಂದು ಸೃಷ್ಟಿಯನ್ನ ಸರಕಾರವು ಮಾಡಬಾರದ ಪಾಪಕಾರ್ಯವಾಗಿತ್ತು ಕೆಲವರು ಫಾಶಿಶಿಕ್ಷೆಗೆ ಬದಲಾಗಿ ಜನ್ಮ ಬಾಪುಸಾಕೆಂದು ಅಭಿಪ್ರಾಯಪಟ್ಟರು

ನಾಸಿದಕ್ಕೆ ಒಪ್ಪುವುದಿಲ್ಲ ನನಗೆ ಫಾಶಿಶಿಕ್ಷೆಯ ಅನುಭವವಾಗಲಿ, ಅಜನ್ಮ ಶಿಕ್ಷೆಯ ಅನುಭವವಾಗಲಿ ಇಲ್ಲ ಆದರೂ ವಿಚಾರಿಸಿ ನೋಡಿದರೆ ಜನ್ಮವಾಸಿಗಿಂತ ಮೃತ್ಯುದಂಡವೇ ಒಳ್ಳೆದು ಒಂದೇ ಕ್ಷಣದಲ್ಲಿ ಪ್ರಾಣ ತೆಗೆಯುವವನಿಗೆ ದಯೆ ಹೆಚ್ಚೋ? ವರ್ಷಗಟ್ಟಲೆ ಗುದ್ದಿ ಗುದ್ದಿ ಕೊಲ್ಲುವವನಿಗೆ ದಯೆ ಹೆಚ್ಚೋ? ನೀವೇ ಹೇಳಿ" ಎಂದು ವ್ಯಾಪಾರಿಯು ಮಾತಾಡಿದನು

ಒಂದವರಲ್ಲೊಬ್ಬನು "ಇಬ್ಬರೂ ಪ್ರಾಣ ತೆಗೆಯುವವರಾದುದರಿಂದ ಇಬ್ಬರೂ ಅನ್ಯಾಯಿಗಳು, ರಾಜ್ಯವೇನೂ ದೇವರಲ್ಲ ಒಂದು ವಸ್ತುವನ್ನು ಹಿಂದಕೊಡಲು ಶಕ್ತಿಯುಲ್ಲವೆಂದಾದರೆ ಅದನ್ನು ತೆಗೆದುಕೊಳುವ ಅಧಿಕಾರವೂ ಅದಕ್ಕಿಲ್ಲ"

ಗುಂಪಿನಲ್ಲಿದ್ದ ಇಪ್ಪತ್ತೈದು ವರ್ಷದ ವಕೀಲನೊಬ್ಬನು ತನ್ನ ಅಭಿಪ್ರಾಯವನ್ನು ಹೇಳತೊಡಗಿದನು "ಅಜನ್ಮ ಶಿಕ್ಷೆ ಮತ್ತು ಮರಣದಂಡನೆಗಳೆರಡರಲ್ಲಿ ಅನ್ಯೋನ್ಯ ನರಮಾನತೆಯಿದ್ದ ಹಾಗಿದ್ದರೂ ನ್ಯಾಯಪರೂ ನನ್ನಾದೆನ ಲಕ್ಷ್ಯಯಾದೀತು ಎಂದು ಕೇಳಿದರೆ ನಾನು ಆ ಜನ್ಮ ಶಿಕ್ಷೆಯನ್ನೇ ಆರಿಸಿಕೊಂಡೇನು. ನಾಯುವುದಕ್ಕಿಂತ ಕಷ್ಟವಿದ್ದರೂ ಜೀವಿಸುವುದು ಒಳ್ಳೆಯದು

ವಿವಾದವು ವೃದ್ಧಿಯಾಯಿತು. ಆ ಸಮಯಕ್ಕೆ ವ್ಯಾಪಾರಿಯು ತಾನು ಧೈರ್ಯವಂತನಾದರೂ ಮೇಜಿಗೆ ಕೈ ಬಡಿದು ಆ ವಕೀಲನ ಕಡೆಗೆ ನೋಡಿ ಕೋಪದಿಂದ — 'ಎಲ್ಲ ಸುಳ್ಳು ಆಜನ್ಮ ಶಿಕ್ಷೆ ಬೇಡ, ಐದು ವರ್ಷದವರೆಗೆ ನೀನು ಒಂದು ಕೋಣೆಯೊಳಗೆ ವಾಸಿಸುವೆಯಾದರೆ ನಾನು ಇಪ್ಪತ್ತು ಲಕ್ಷರೂಪಾಯಿಗಳ ಪಂಥ ಕಟ್ಟುತ್ತೇನೆ' ಎಂದನು

ನನಗೆ ಅಷ್ಟು ಛಲವಿದ್ದರೆ ಐದು ವರ್ಷವಲ್ಲ ಹದಿನೈದು ವರ್ಷದವರೆಗೆ ಒಂದೇ ಕೋಣೆಯಲ್ಲಿರಬಲ್ಲೆನು ವಕೀಲನೆಂದನು

ಹದಿನೈದು ವರುಷವು ನಿಶ್ಚಯ ನಾನು ಖಂಡಿತ ಇಪ್ಪತ್ತು ಲಕ್ಷರೂಪಾಯಿ ಕೊಡುತ್ತೇನೆ ಇದಕ್ಕೆ ಇಲ್ಲಿ ಒಂದಿರುವ ಅತಿಥಿಗಳೇ ಸಾಕ್ಷಿ' ವ್ಯಾಪಾರಿಯೆಂದನು.

'ಒಪ್ಪಿತು. ನೀನು ಇಪ್ಪತ್ತು ಲಕ್ಷದ ಪಂಥಕಟ್ಟಿದೆ ನಾನು ನನ್ನ ಸ್ವಾತಂತ್ರ್ಯವನ್ನು ಸ್ಪರ್ಧೆಗಿಟ್ಟಿದ್ದೇನೆ' ವಕೀಲನು ಒಪ್ಪಿಕೊಂಡನು.

ಕೂಡಲೇ ಮಾತಾಡಿದ್ದು ಗೊಂದಲವಾಯಿತು ಆದರೇನು? ವ್ಯಾಪಾರಿಯು ಲಕ್ಷಾಂತರ ರೂಪಾಯಿಗಳ ಧನಿಕನಾಗಿದ್ದನು. ಅವನು ವಕೀಲನೊಡನೆ ನಗುತ್ತಾ — "ವಕೀಲ ಮಹಾಶಯರಿಗೆ ಬುದ್ಧಿ ಸರಿಯಿದೆಯಷ್ಟೆ? ನನಗೆ ಇಪ್ಪತ್ತು ಲಕ್ಷರೂಪಾಯಿಯೇನೂ ದೊಡ್ಡ ಮಾತಲ್ಲ ಆದರೆ ನೀವು ನಿಮ್ಮ ಜೀವನದ ಬಹು ಅಮೂಲ್ಯವಾದ ನಾಲ್ಕೈದು ವರ್ಷಗಳನ್ನು ಮಣ್ಣುಪಾಲು ಮಾಡುತ್ತೀರಿ ನಾಲ್ಕೈದು ವರ್ಷಕ್ಕಿಂತ ಹೆಚ್ಚು ನೀವು ಒಂದೇ ಕೋಣೆಯೊಳಗೆ ತಡೆದಿರಲಾರಿರಿ ನನಗೆ ನಿಮ್ಮ ವಿಷಯವಾಗಿ ಕರುಣೆ ಹುಟ್ಟುತ್ತದೆ ಎಲ್ಲವನ್ನೂ ವಿಚಾರಿಸಿ ಕೊಳ್ಳಿ' ಎಂದನು

ಇದೇ ವಿಷಯವನ್ನು ಯೋಚಿಸುತ್ತಾ ವ್ಯಾಪಾರಿಯು ಕೋಣೆಯೊಳಗೆ ಇತ್ತಿಂದಿತ್ತ ಹೆಜ್ಜೆ ಹಾಕುತ್ತಿದ್ದನು ನಾನು ಇಂತಹ ಸ್ಪರ್ಧೆ ಹೂಡಿದುದೇಕೆ? ಏನು ಲಾಭವಾಯಿತು? ಆ ಕಾನೂನುಕಾರ ಯುವಕನು ತನ್ನ ಆಯುಷ್ಯದ ಹನ್ನೆರಡು ವರ್ಷಗಳನ್ನು ಮಣ್ಣುಪಾಲು ಮಾಡಿದನಷ್ಟೆ, ಆದರೆ ನಾನು ಪಂಥಕಟ್ಟಿ 20 ಲಕ್ಷ ರೂಪಾಯಿಗಳನ್ನು ಕಳಕೊಂಡೆನಲ್ಲಾ. ಇದರಿಂದ ಫಾಶಿಶಿಕ್ಷೆ ಯಾವುದರ ಅಜನ್ಮಕೈದು ಒಳ್ಳೆದೋ ಎಂಬುದೇನಾದರೂ ನಿಶ್ಚಯವಾಗುತ್ತದೋ? ಏನೂ ಇಲ್ಲ! ನಿಜಾಗಿಯೂ ಸ್ಪರ್ಧೆ ನನಗೆ ಹಣದ ಮದವಿತ್ತು ಆ ಯುವಕನಿಗೆ ಐಶ್ವರ್ಯದ ಲಕ್ಷ್ಯದ ಹುಚ್ಚು

ಆ ದಿನದ ಪ್ರೀತಿಭೋಜನಾನಂತರದ ಘಟನೆಗಳು ಒಂದೊಂದಾಗಿ ಆತನ ಕಣ್ಣ ಮುಂದಿನಲ್ಲಿ ಕುಣಿಯತೊಡಗಿದವು ಆ ದಿನವೇ ವ್ಯಾಪಾರಿಯ ತೋಟದಲ್ಲಿರುವ ಒಂದು ಕೈದಿ ಮನೆಯನ್ನು ಪಡೆದ ವಕೀಲನು ಅನಿರ್ದಿಷ್ಟ ಕಠಿಣವಾದ ಕಾವಲಲ್ಲಿ ವರ್ಷಗಳನ್ನೆಣಿಸುವನೆಂದು ನಿಶ್ಚಯವಾಯಿತು. ಪ್ರತಿಜ್ಞೆಗಿಂತ ಆತನು ಹೊರಬರಬಾರದೆಂದೂ ಇತರರೊಡನೆ ಮಾತಾಡಬಾರದೆಂದೂ ಇತರರ ಮಾತು ಕೇಳಬಾರದೆಂದೂ ಸಮಾಚಾರಪತ್ರಗಳು ದೊರಕಲಾರವೆಂದೂ ಮತ್ತು ಹಾಡಲಿಕ್ಕೂ ಪುಸ್ತಕಗಳನ್ನೋದಲಿಕ್ಕೂ ಲೇಖನಗಳನ್ನು ಬರೆಯಲಿಕ್ಕೂ ಮದ್ಯಪಾನ ಧೂಮ್ರಪಾನಗಳಿಗೂ ಅಧಿಕಾರವುಂಟೆಂದು ನಿಶ್ಚಯಿಸಿದರು ಆತನು ಕೇವಲ ಒಂದು ಸಣ್ಣ ಕಿಟಿಕಿಯಿಂದಮಾತ್ರ ಬಾಹ್ಯ ಜಗತ್ತನ್ನು ನೋಡಬಹುದಾಗಿತ್ತು. 1870ನೇ ನವಂಬರ 14ರಿಂದ 1885ನೇ ನವಂಬರ 14ರ ವರೆಗೆ ಕೈದಿನಲ್ಲಿರಬೇಕಾಗಿತ್ತು ಕೈದಿನೊಳಗೆ ನಿಯಮ ಭಂಗ ಮಾಡಲು ಯತ್ನಿಸಿದರೆ ಅಥವಾ ನಿಶ್ಚಿತ ಸಮಯಕ್ಕಿಂತ ಮೊದಲೇ ಹೊರಗೆ ಬಂದರೆ 20 ಲಕ್ಷ ಆ ಪ್ರಶ್ನವು ದೊರಕಬಾರದು ಇಂಥಷ್ಟು ನಿಯಮಗಳಿಂದ ಕರಾರಾಯಿತು

ಆ ಬಂಧನದ ಮೊದಲನೇ ವರ್ಷ ವಕೀಲನಿಗೆ ಏಕಾಂತವಾಸದಿಂದಲೂ, ಮೌನದಿಂದಲೂ ಸ್ವಲ್ಪ ಕಷ್ಟವಾಯಿತು. ಆತನಿಗೆ ಕೇವಲ 'ಪಿಯಾನೋ'ದ ಸ್ವರ ಮಾತ್ರ ಕೇಳುತ್ತಿತ್ತು. ಮದ್ಯಪಾನ ಧೂಮ್ರಪಾನಗಳನ್ನು ಆತನು ಬಿಟ್ಟುಬಿಟ್ಟನು. ಶರಾಬಿನ ವಿಷಯವಾಗಿ ಆತನ ಡೈರಿಯಲ್ಲಿ ಈ ರೀತಿ ಬರೆದಿದೆ — ಶರಾಬು ಮೋಹ, ವಾಸನೆಗಳನ್ನು ಉತ್ತೇಜನಗೊಳಿಸುತ್ತದೆ ಕೈದಿಗೆ ಮೋಹ ವಾಸನೆಗಳು ಭಯಂಕರ ಶತ್ರುಗಳು ಹೊಗೆಸೊಪ್ಪು ಸೇದುವುದರಿಂದ ಒಳಗೆ ವಿಷಮಿಶ್ರಿತ ಹೊಗೆಯಿಂದ ಆತನ ವಾತಾವರಣವು ಕೆಡುತ್ತಿತ್ತು ಮೊದಲನೇ ವರ್ಷ 'ಪ್ರೇಮದಘಾತ, ಪ್ರತಿಘಾತಗಳಿಂದ ಪೂರ್ಣವಾದ ಉಪನ್ಯಾಸಗಳೂ, ಚೋರ ಜಾರರ ಕಥೆಗಳೂ, ಸುಖಾಂತನಾಟಕಗಳೂ ಆತನಿಗೆ ಓದಲಿಕ್ಕೆ ದೊರಕಿದವು'

ಎರಡನೇ ವರ್ಷ ಪಿಯಾನೋ"ದ ಶಬ್ದವು ಕೇಳಿಸುವುದು ಬಂದಾಯಿತು. ಆ ವರ್ಷ ವಕೀಲನು ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನೇ ಅಪೇಕ್ಷಿಸುತ್ತಿದ್ದನು ಐದನೇ ವರ್ಷ ಗಾನ ವಾದ್ಯಗಳು ಕೇಳಿಸತೊಡಗಿದವು ಆತನು ಆ ವರ್ಷವನ್ನು ತಿಂದು ಉಂಡು ಹಾಸಿಗೆಯಲ್ಲಿ ಹೊರಳಿ ಕಳೆದನು. ಪುಸ್ತಕ ಮುಟ್ಟಲಿಲ್ಲ ರಾತ್ರಿಯಲ್ಲಿ ಬರಹದ ಕೆಲಸವನ್ನು ಮಾಡಿದನು ಬಳಿಕ ಅದನ್ನು ಸುಮ್ಮಗೆ ಒಗೆಯುತ್ತಿದ್ದನು.

ಆರನೇ ವರ್ಷದಲ್ಲಿ ಆತನಲ್ಲಿ ಹೊಸ ಮರುಷ್ಯ ಹುಟ್ಟಿತು. ಆತನು ಪರಭಾಷೆಗಳನ್ನು ತತ್ವಜ್ಞಾನವನ್ನು ಇತಿಹಾಸವನ್ನೂ ಅಭ್ಯಸಿಸಲಾರಂಭಿಸತೊಡಗಿದನು ಆತನಿಗೆ ಪುಸ್ತಕಗಳನ್ನು ಕೊಟ್ಟು ಕೊಟ್ಟು ವ್ಯಾಪಾರಿಯು ಬೇಸತ್ತು ಹೋದನು ನಾಲ್ಕು ವರ್ಷಗಳಲ್ಲಿ ಸುಮಾರು ಆರುನೂರು ಪುಸ್ತಕಗಳನ್ನು ತರಿಸಿದನು. ಕೈದಿಯು ಈ ಹುರುಪಿನ ಕಾಲದಲ್ಲಿ ವ್ಯಾಪಾರಿಗೆ ಈ ಕೆಳಗಿನ ಪತ್ರವನ್ನು ಬರೆದನು ಒಂಬಿಲಿಯನ್ಸ ನನ್ನ ಪ್ರಿಯ ಯಜಮಾನರೇ, ನಾನು ಈ ಮಾತುಗಳನ್ನು ಆರು ಭಾಷೆಗಳಲ್ಲಿ ಬರೆದಿದ್ದೇನೆ. ವಿದ್ವಾಂಸರಿಗೆ ಇದನ್ನು ತೋರಿಸಬೇಕು, ಪರೀಕ್ಷೆ ಮಾಡಿಸಬೇಕು ಅದರಲ್ಲಿ ಏನೂ ತಪ್ಪಿಲ್ಲವಿದ್ದರೆ ನನ್ನ ಪರಿಶ್ರಮವು ವ್ಯರ್ಥವಾಗಲಿಲ್ಲವೆಂದು ನನಗೆ ತಿಳಿಯುವುದಕ್ಕಾಗಿ ಕೈಲಿನ ತೋಟದಲ್ಲೊಮ್ಮೆ ಬಂದೂಕು ಹಾರಿಸಬೇಕೆಂದು ಪ್ರಾರ್ಥಿಸುತ್ತೇನೆ. ಎಲ್ಲಾ ದೇಶಗಳಲ್ಲೂ, ಎಲ್ಲಾ ಕಾಲಗಳಲ್ಲೂ ಗುಣಜ್ಞರಾದ ವಿದ್ವಾಂಸರು ವಿಭಿನ್ನ ಭಾಷೆಗಳಲ್ಲಿ ತಮ್ಮ ಮನೋಭಾವವನ್ನು ಪ್ರಕಟಮಾಡಿದ್ದಾರೆ ಅವರ ಎಲ್ಲರಲ್ಲಿಯೂ ಒಂದೇ ಒಂದು ಅಗ್ನಿಯು ಪ್ರಜ್ವಲಿಸುತ್ತದೆ ಇದನ್ನು ಕೇಳಿ ನಿನಗೆ ನನ್ನ ಸ್ವರ್ಗೀಯ ಆನಂದವು ಗೊತ್ತಾಗಬಹುದು ಇತಿ ಕೈದಿಯ ಅಪೇಕ್ಷೆಯಂತೆ ವಿದ್ವಾಂಸರಿಗೆ ಪತ್ರವನ್ನು ತೋರಿಸಿ ವ್ಯಾಪಾರಿಯು ಆಜ್ಞೆ ಪ್ರಕಾರ ಕೈದಿಗೆ ಕೇಳಿಸುವಂತೆ ತೋಟದಲ್ಲಿ ಗುಂಡುಹಾರಿಸಿದರು.

ಆ ಮೇಲೆ ಹತ್ತು ವರ್ಷಗಳಾಗಿ ಸುಮ್ಮಗೆ ಕುಳಿತುಕೊಂಡು ಅವಿಚಲಭಾವದಿಂದ 'ನ್ಯೂಟೆಸ್ಟಾಮೆಂಟನ್ನು' ಓದತೊಡಗಿದನು. ನಾಲ್ಕು ವರ್ಷಗಳಲ್ಲಿ ಜಟಿಲವಾದ ವಿವಿಧ ವಿಷಯಗಳ ಆರುನೂರು ಪುಸ್ತಕಗಳನ್ನು ಓದಿಹಾಕಿದ ವಕೀಲನಿಗೆ ಸಣ್ಣದೂ, ಸುಲಭವೂ ಆದ 'ನ್ಯೂಟೆಸ್ಟಾಮೆಂಟ"ನ್ನೋದಲು ಒಂದು ವರ್ಷ ಬೇಕಾಯಿತೆಂದು ಕೇಳಿದ ವ್ಯಾಪಾರಿಗೆ ಬಹಳ ಆಶ್ಚರ್ಯವಾಯಿತು ನ್ಯೂಟೆಸ್ಟಾಮೆಂಟನ್ನೋದಿಯಾದ ಮೇಲೆ ಧಾರ್ಮಿಕ ಇತಿಹಾಸಗಳನ್ನೂ, ವೇದಾಂತ ಗ್ರಂಥಗಳನ್ನೂ ಓದ ತೊಡಗಿದನು.

ವಕೀಲನ ಬಂದೀ ಜೀವನದ ಕಡೆಯ ಎರಡು ವರ್ಷಗಳಲ್ಲಿ ಸಾಹಿತ್ಯ, ಅಧ್ಯಾತ್ಮ, ಇತಿಹಾಸ, ಭೂಗೋಲ, ರಾಸಾಯನ ಶಾಸ್ತ್ರಗಳಿಗೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ವಿಚಿತ್ರ ರೀತಿಯಿಂದ ಓದಿ ಹಾಕಿದನು.

ವ್ಯಾಪಾರಿಯ ಸ್ಮೃತಿಯಲ್ಲಿ ಮೇಲಿನ ವಿಷಯಗಳೆಲ್ಲಾ ಬೇರೂರಿದ್ದವು ಆತನು ಆಲೋಚನಾಪರನಾದನು. "ನಾಳೆ ಹನ್ನೆರಡು ಗಂಟೆಗೆ ಅವನು ಸ್ವತಂತ್ರನಾಗುತ್ತಾನೆ ಕರಾರಿನ ಪ್ರಕಾರ ನಾನು 20 ಲಕ್ಷ ರೂಪಾಯಿ ಕೊಡಬೇಕು, ಹೀಗಾದಮೇಲೆ ಏನೂ ಆಶೆಯಿಲ್ಲ

ಹದಿನೈದು ವರ್ಷಗಳ ಮೊದಲು ವ್ಯಾಪಾರಿಯ ಹತ್ತಿರ ಬೇಕಾದಷ್ಟು ಪ್ರವ್ಯವಿತ್ತು. ಆದರೆ ಈಗ ಅವನ ಹಣದ ಭಾರಕ್ಕಿಂತ ಸಾಲದ ಭಾರವೇ ಹೆಚ್ಚಾಗಿತ್ತು. ಹಿಂದಿನ ಆ ಅತ್ಯುತ್ಸಾಹಿಯಾದ ವ್ಯಾಪಾರಿಯು ಬಂದು ನಾಲ್ಕಾರು ಹಾನಿಗಳ ಏರುತಗ್ಗುಗಳಲ್ಲಿ ಸಾಮಾನ್ಯ ವ್ಯಾಪಾರಿಗಳಂತೆ ಸಂಚರಿಸತೊಡಗಿದ್ದಾನೆ

"ಹಾಸ್ಪರ್ಧೆ! ಆ ಮನುಷ್ಯನು ಆ ಕೋಣೆಯಿಂದ ಹೊರಬರುವುದು. ನನ್ನ ಹಣವನ್ನು ಸೆಳೆದು ಸುಖವಾಗಿ ಜೀವಿಸಲಪೇಕ್ಷಿಸುತ್ತಾನೆ ನನ್ನನ್ನು ನೋಡಿ ಹಂಗಿಸುವನು ನಾನು ನಿಮಗೆ ಋಣಿಯಾಗಿದ್ದೇನೆ ನನ್ನಿಂದ ಆಗ ಬೇಕಾದ ಉಪಕಾರವೇನಾದರೂ ಇದೆಯೇ? ಎಂದು ನನ್ನನ್ನು ಅಪಹಾಸಿಸಿಯಾನು. ಈ ಅಪಮಾನ ಮತ್ತು ಸರ್ವಸ್ವನಾಶದಿಂದ ಬದುಕಲಿಕ್ಕೆ ಒಂದೇ ಉಪಾಯವಿದೆ ಅವನನ್ನು ಕಡಗಾಣಿಸುವುದು".

ಗಡಿಯಾರದಲ್ಲಿ ಮೂರು ಬಡಿಯಿತು ಮನೆಯವರೆಲ್ಲರೂ ನಿದ್ರಾವಶರಾಗಿದ್ದರು. ಸದ್ದು ಮಾಡದೆ ತಿಜೋರಿಯಿಂದ ಹದಿನೈದು ವರ್ಷಗಳ ಹಿಂದಿಟ್ಟಿದ್ದ ಕೈಲುಖಾನೆಯ ಬೀಗದ ಕೈಯನ್ನು ಹೊರತೆಗೆದನು. ವಸ್ತ್ರ ಬಿಟ್ಟುಕೊಂಡು ಮನೆಯಿಂದ ಹೊರಬಂದನು ಉದ್ಯಾನದಲ್ಲಿ ಸರ್ವತ್ರ ಅಂಧಕಾರ. ಚಳಿಯನ್ನು ತಡೆಯಲಾಗುತ್ತಿದ್ದಿಲ್ಲ ಸ್ವಲ್ಪಸ್ವಲ್ಪ ಮಳೆಯೂ ಸುರಿಯುತ್ತಿತ್ತು ಶೀತಗಾಳಿಯು ಬೀಸುತ್ತಿತ್ತು. ವ್ಯಾಪಾರಿಯು ಹೊರಗಿಳಿದನು. ಕತ್ತಲಲ್ಲೇ ಉದ್ಯಾನಕ್ಕೆ ಹೋದನು. ಚೌಕೀದಾರನನ್ನು ಕರೆದನು. ಉತ್ತರವಿಲ್ಲ. ಪಾಪ ಚೌಕೀದಾರನು ಚಳಿಯನ್ನು ತಡೆಯಲಿಕ್ಕಾಗಿ ಅಡಿಗೆ ಕೋಣೆಯ ಮೂಲೆಯಲಿ ಬಿದ್ದಿರಬಹುದು

"ನನ್ನ ಇಚ್ಛೆಯನ್ನು ಪೂರ್ಣ ಮಾಡಲು ಧೈರ್ಯತಂದೆನಾದರೆ ಮೊದಲು ಚೌಕೀದಾರನ ಮೇಲೆ ಸಂಶಯ ಬಂದೀತು" ವ್ಯಾಪಾರಿಯ ವಿಚಾರ.

ವ್ಯಾಪಾರಿಯು ಕತ್ತಲೆಯಲ್ಲೇ ಬಂದೀಗೃಹದ ಜಗಲಿಗೆ ಬಂದನು. ಬೆಂಕಿ ಕಡ್ಡಿ ಉರಿಸಿದನು; ಚಾಪೆಯಿಲ್ಲದ ಒಂದು ಮಂಚ ಮಾತ್ರ ಅಲ್ಲಿತ್ತು. ಮನುಷ್ಯರಾರೂ ಇರಲಿಲ್ಲ. ಜೈಲಬಾಗಿಲ ಮುದ್ರೆಯು ಹದಿನೈದು ವರ್ಷಗಳ ಹಿಂದಿನಂತೆಯೇ ಇತ್ತು.

ವ್ಯಾಪಾರಿಯು ಕಿಟಿಕಿಯ ಮೂಲಕ ಒಳಗಡೆಗೆ ಬಗ್ಗಿ ನೋಡಿದನು. ಮಾಸಿದ ದೀಪವೊಂದು ಉರಿಯುತ್ತಿತ್ತು. ಬಂದಿಯು ಮೇಜಿನ ಹತ್ತಿರ ಕುಳಿತಿದ್ದನು. ಆತನ ಬೆನ್ನೂ, ಉದ್ದವಾದ ಕೂದಲುಗಳೂ, ಕೈಗಳೂ ಮಾತ್ರ ಕಾಣುತ್ತಿದ್ದವು. ಮೇಜಿನ ಮೇಲೆ, ಕುರ್ಚಿಗಳ ಮೇಲೆ, ನೆಲದ ಮೇಲೆ ಎಲ್ಲಾ ಕಡೆಗೂ ಪುಸ್ತಕಗಳ ರಾಶಿ ಬಿದ್ದಿತ್ತು.

ಐದು ಮಿನಿಟು ಕಳೆಯಿತು, ಕೈದಿಯು ಕೂತಲ್ಲಿಂದ ಕದಲಲಿಲ್ಲ. ಹದಿನೈದು ವರ್ಷಗಳ ಬಂದೀಜೀವನವು ಈ ರೀತಿಯಾಗಿ ಗತಿವಿಹೀನನಾಗಿ ಕೂತುಕೊಳ್ಳಲು ಕಲಿಸಿತ್ತು. ವ್ಯಾಪಾರಿಯು 2–3 ಬಾರಿ ಕಿಟಿಕಿಯ ಬಾಗಿಲನ್ನು ಕಟಕಟ ಮಾಡಿದನು. ಬಂದಿಯು ಮಾತ್ರ ಕೂತಲ್ಲಿಂದ ಕದಲಲಿಲ್ಲ. ಆಗ ವ್ಯಾಪಾರಿಯು ಜಾಗ್ರತೆಯಿಂದ ಬೀಗದ ಮೋಹರನ್ನು ಒಡೆದು ಬಾಗಿಲು ತೆರೆದನು. ಎಷ್ಟೋ ಸಮಯ ಬಂದಾಗಿದ್ದುದರಿಂದ ಬಾಗಿಲು ತೆರೆಯುವಾಗ ಮರಮರ ಶಬ್ದವಾಯಿತು. 2–3 ಮಿನಿಟು ಕಳೆಯಿತು. ಈಗಲೂ ಮೊದಲಿನಂತೆಯೇ ಶಾಂತಿ. ವ್ಯಾಪಾರಿಯು ಒಳಹೊಗಲು ನಿಶ್ಚಯಮಾಡಿದನು.

ಮೇಜಿನ ಸಹಾಯದಿಂದ ಕೈದಿಯು ವಿಚಿತ್ರ ರೀತಿಯಾಗಿ ಕುಳಿತಿದ್ದನು. ಕೇವಲ ಅಸ್ಥಿಪಂಜರ, ಚರ್ಮವು ಸುಕ್ಕುಗಟ್ಟಿದೆ, ತಲೆಕೂದಲು ಜಡೆಕಟ್ಟಿದೆ, ಮುನಿಯಂತೆ ಗಡ್ಡ ಬೆಳೆದಿದೆ, ಮುಖವು ಬಿಳಿಚಿಹೋಗಿದೆ. ಕೈಮೇಲೆ ತಲೆಯಿಟ್ಟು ಕೂತ ಆತನನ್ನು ನೋಡಿದಾಗ ಎಂತಹ ಕಲುಷಹೃದಯದವನಿಗೂ ಕಣ್ಣೀರು ಬರುವಂತಿತ್ತು. ಆತನ ಆ ಅಕಾಲ ಜರೆಯನ್ನು ನೋಡಿ ಯಾರಾದರೂ ಅವನು 40 ವರ್ಷ ಪ್ರಾಯದವನೆಂದು ಹೇಳಬಲ್ಲವರಾಗಿದ್ದಿಲ್ಲ. ಆತನ ಎದುರಿನ ಮೇಲೆ ಏನನ್ನೋ ಬರೆದ ಒಂದು ಕಾಗದವು ಬಿದ್ದಿತ್ತು.

"ಪಾಪ, ನಿದ್ರಿಸಿರಬಹುದು. ಲಕ್ಷ ರೂಪಾಯಿಗಳ ಕನಸು ಕಾಣುತ್ತಿರಬಹುದು. ಈ ಎಲುಬು ಗೂಡನ್ನು ಮೆಲ್ಲಗೆ ಚಾಪೆಯ ಮೇಲೆ ಮಲಗಿಸಿ ದಿಂಬಿನಿಂದ ಒಂದೇಟು ಕೊಟ್ಟರೆ ಸಾಕು. ಎಲ್ಲವೂ ಮುಗಿದೀತು. ಇವನ ಮರಣದ ವಿಷಯವಾಗಿ ಯಾರಿಗೂ ಸಂದೇಹವು ಕೂಡ ಬರಲಾರದು. ಸ್ವಲ್ಪ ಈ ಕಾಗದವನ್ನೋದಿ ಏನು ಬರೆದಿದೆಯೆಂದು ನೋಡುತ್ತೇನೆ"

ವ್ಯಾಪಾರಿಯು ಕಾಗದವನ್ನು ತೆಗೆದು ಓದಿದನು—

"ನಾಳೆ ಮಧ್ಯರಾತ್ರಿಗೆ ಸ್ವಾತಂತ್ರ್ಯವನ್ನೂ ಜನಸಮುದಾಯದೊಂದಿಗೆ ಸಮ್ಮಿಲಿತವಾಗುವ ಅಧಿಕಾರವನ್ನೂ ಹೊಂದುವೆನು. ಆದರೆ ಅದಕ್ಕೆ ಮೊದಲೇ ಈ ಬಂದೀಗೃಹದಿಂದ ಹೊರಟು ಸೂರ್ಯದರ್ಶನ ಮಾಡುತ್ತೇನೆ. ನಿನಗೆ ಎರಡು ಮಾತುಗಳನ್ನು ಹೇಳಬೇಕೆಂದು ಮನಸ್ಸು ಬಯಸುತ್ತದೆ. ವಿಶುದ್ಧ ಮನಸ್ಸಿನಿಂದ ನನ್ನ ಎಲ್ಲಾ ಕರ್ಮಗಳನ್ನೂ ನೋಡುತ್ತಿರುವ ಆ ಪರಮಾತ್ಮನ ಸಾಕ್ಷಿಪೂರ್ವಕ ನಾನು ಹೇಳುವುದೇನೆಂದರೆ ಸ್ವಾತಂತ್ರ್ಯ, ಜೀವನ, ಸ್ವಾಸ್ಥ್ಯ—ಇವುಗಳು ನಿನ್ನ ಈ ಪುಸ್ತಕಗಳ ಮತಾನುಸಾರ ಈ ಜಗತ್ತಿಗೆ ಅನುಗ್ರಹಸ್ವರೂಪಗಳಾಗಿವೆಯೋ, ಅವೆಲ್ಲವನ್ನೂ ನಾನು ತಿರಸ್ಕಾರ ದೃಷ್ಟಿಯಿಂದ ನೋಡತೊಡಗಿರುವೆನು."

'ಹದಿನೈದು ವರ್ಷಗಳಿಂದ ಪ್ರಯತ್ನಪೂರ್ವಕ ಸಾಂಸಾರಿಕ ಜೀವನವನ್ನು ಅಧ್ಯಯನ ಮಾಡಿದ್ದೇನೆ. ನಾನು ಈ ಹದಿನೈದು ವರ್ಷಗಳಲ್ಲಿ ಈ ಮನುಷ್ಯ ಲೋಕವನ್ನೇ ನೋಡದಿದ್ದರೂ ನೀನು ಕೊಟ್ಟ ಪುಸ್ತಕಗಳ ಮೂಲಕ ಸುಗಂಧಿತ ಸುರಾಪಾನವನ್ನು ಮಾಡಿದೆನು, ಗೀತ ಹಾಡಿದೆನು. ಭಯಂಕರ ಅರಣ್ಯಗಳಲ್ಲಿ ಹುಲಿ, ಜಿಂಕೆ ಮೊದಲಾದವುಗಳನ್ನು ಬೇಟೆಯಾಡಿದೆನು, ಹರಿಣನೇತ್ರೆಯರಾದ ರಮಣಿಯರನ್ನು ಪ್ರೀತಿಸಿದೆನು. ನಭಚಾರಿಗಳಾದ ಮೇಘಗಳಂತಿರುವ ಕವಿಗಳ ಅದ್ಭುತ ಚಾತುರ್ಯದಿಂದ ನಿರ್ಮಿತವಾದ ಆ ರೂಪವತಿಯರಾದ ರಮಣಿಯರು ರಾತ್ರಿಕಾಲದಲ್ಲಿ ನನ್ನ ಸಮೀಪಕ್ಕೆ ಬಂದು ಮನಮುಗ್ಧಕರಗಳಾದ ಕಥೆಗಳನ್ನು ಹೇಳಿ ನನ್ನನ್ನು ಮದವಿಹ್ವಲನನ್ನಾಗಿ ಮಾಡುವರು. ನಿನ್ನ ಪುಸ್ತಕಗಳೊಂದಿಗೆ ಎಲ್‌ಬ್ರುಜ್ ಮತ್ತು ಮೌಂಟಬ್ಲೇಂಕ್ ಪರ್ವತಗಳ ಶಿಖರಕ್ಕೆ ಏರಿ ಸೂರ್ಯೋದಯ ಸೂರ್ಯಾಸ್ತಕಾಲಗಳ ಸ್ವರ್ಣವರ್ಣದಿಂದ ರಂಜಿತವಾದ ಆಕಾಶ, ಸಮುದ್ರ ಮತ್ತು ಪರ್ವತಶಿಖರಗಳನ್ನು ನೋಡಿದೆನು. ಕೈಯಲ್ಲಿ ಹಿಡಿಯಲಿಕ್ಕೆ ಬರುವಷ್ಟು ಸಮೀಪದಿಂದ ಮೋಡಗಳನ್ನೂ ಮಿಂಚುಗಳನ್ನೂ ನೋಡಿದೆನು. ಹಸುರಾದ ವನೋಪವನಗಳನ್ನೂ ನದೀನಾವೆಗಳನ್ನೂ ದೊಡ್ಡದೊಡ್ಡ ನಗರಗಳನ್ನೂ ನೋಡಿದೆನು. ಕಲಕಂಠಿಯರ ಮುಗ್ಧ ಕೋಕಿಲ ಗಾನವನ್ನೂ ವೇಣುವಾದ್ಯಗಳ ಮೃದುಮಧುರ ಸ್ವರವನ್ನೂ ಕೇಳಿದೆನು. ದೇವರ ಸಂದೇಶವನ್ನು ತಿಳಿಸಲು ನನ್ನ ಸಮೀಪಕ್ಕೆ ಬಂದ ದೇವತೆಗಳ ಮೃದುವಾದ ರೆಕ್ಕೆಗಳ ಸ್ಪರ್ಶ ಮಾಡಿದೆನು. ನಿನ್ನ ಪುಸ್ತಕಗಳು ನನ್ನನ್ನು ಅಗಾಧ ಸಾಗರದಲ್ಲಿ ಮುಳುಗಿಸಿದುವು. ಪರ್ವತಗಳ ಮೇಲೆ ಏರಿಸಿದುವು. ಆಕಾಶದಲ್ಲಿ ಹಾರಾಡಿಸಿದುವು. ಹೊಸಹೊಸ ಧರ್ಮಗಳನ್ನು ಉಪದೇಶಿಸಿರುವವು. ಸಮಸ್ತ ಲೋಕವನ್ನೂ ಜಯಿಸಿದೆನು ... ...'

"ನಿನ್ನ ಪುಸ್ತಕಗಳು ನನಗೆ ಬುದ್ಧಿದಾನ ಮಾಡಿದುವು. ಅನೇಕ ಶತಮಾನಗಳಿಂದ ಮಾನವಬುದ್ಧಿ ವಿಕಾಸದ ಪ್ರಸ್ಫುಟ ವಿಷಯಗಳೆಲ್ಲಾ ನನ್ನ ಈ ಸಣ್ಣ ಕೋಣೆಯೊಳಗೆ ತುಂಬಿವೆ. ನಾನು ನಿಮ್ಮೆಲ್ಲರಿಗಿಂತಲೂ ಚತುರನೆಂಬ ಅನುಭವ ಬರತೊಡಗಿದೆ."

"ಮತ್ತೆ ನಾನೀಗ ಈ ಪುಸ್ತಕಗಳನ್ನು ಕೂಡ ಅನಾದರಿಸತೊಡಗಿದ್ದೇನೆ. ಸಂಸಾರದ ಸಮಸ್ತ ಸುಖಗಳನ್ನೂ ಮಾನವರ ಬುದ್ಧಿವೈಚಿತ್ರ್ಯಗಳನ್ನೂ ತಿರಸ್ಕಾರ ದೃಷ್ಟಿಯಿಂದ ನೋಡತೊಡಗಿರುವೆನು. ಇವೆಲ್ಲಾ ವಿಷಯಗಳೂ ನಿರರ್ಥ ಸ್ವಪ್ನದಂತೆ, ಮೃಗತೃಷ್ಣೆಯಂತೆ, ಮಾಯೆಯಂತೆ. ನೀನು ಅಭಿಮಾನಿಯಾಗಿರಬಹುದು, ಸುಂದರನಾಗಿರಬಹುದು, ಧಾರ್ಮಿಕನಾಗಿರಬಹುದು. ಆದರೆ ಒಂದುದಿನ ಮೃತ್ಯುವು ಸಾಮಾನ್ಯ ಪ್ರಾಣಿಯೊಂದನ್ನು ಕೊಂಡೊಯ್ಯುವಂತೆ ನಿನ್ನನ್ನು ನಾಶಮಾಡದೆ ಬಿಡಲಾರದು. ನಿನ್ನ ಗೌರವ, ನಿನ್ನ ಇತಿಹಾಸ, ನಿನ್ನ ಗುಣಗಳು ಇವೆಲ್ಲಾ ಮಣ್ಣುಪಾಲಾದಾವು. ಈ ಪಾರ್ಥಿವ ಬ್ರಹ್ಮಾಂಡದಲ್ಲಿ ಮುಳುಗಿಹೋದಾವು."

"ನೀನು ಹುಚ್ಚನು ತಪ್ಪುದಾರಿಯ ಪಾಂಥ. ನೀನು ಅಸತ್ಯವನ್ನು ಸತ್ಯವಾಗಿಯೂ, ಅಸುಂದರವನ್ನು ಸುಂದರವಾಗಿಯೂ ನೋಡುತ್ತಿ. ಗುಲಾಬಿ ಹೂವಿನಲ್ಲಿ ಕುದುರೆಯ ಬೆವರಿನ ವಾಸನೆ ಬಂದರೆ ನೀನು ಹೇಗೆ ಆಶ್ಚರ್ಯದಲ್ಲಿ ಮುಳುಗುವೆಯೋ, ನಾನು ಕೂಡ ಜನರ ವಿಷಯವಾಗಿ ಅದೇ ರೀತಿಯ ಆಶ್ಚರ್ಯದಲ್ಲಿದ್ದೇನೆ. ನೀವು ಸ್ವರ್ಗಲೋಕ ಮೃತ್ಯುಲೋಕಗಳನ್ನು ಬದಲಿಸಿಬಿಟ್ಟಿದ್ದೀರಿ. ನನಗೆ ನಿಮ್ಮ ವಿಷಯವಾಗಿ ಯೋಚಿಸಬೇಕೆಂದು ಕೂಡ ಕಾಣುವುದಿಲ್ಲ."

"ಯಾವ ವಸ್ತುವಿನ ಮೇಲೆ ನಿಮ್ಮ ಜೀವನವು ಆಧರಿಸಿಕೊಂಡಿದೆಯೋ, ಆ ವಸ್ತುವಿನ ವಿಷಯವಾಗಿ ನನ್ನ ತಿರಸ್ಕಾರವನ್ನು ಕಾರ್ಯರೂಪದಿಂದ ತೋರಿಸಲಿಕ್ಕಾಗಿ ನಾನು ಆ ಇಪ್ಪತ್ತು ಲಕ್ಷ ರೂಪಾಯಿಗಳಿಗೆ ತಿಲಾಂಜಲಿ ಕೊಡುತ್ತೇನೆ. ಸ್ವರ್ಗಸುಖದಂತೆ ಭಾವಿಸುತ್ತಿದ್ದ ಆ ವಸ್ತುವನ್ನು ತುಚ್ಛ ಮತ್ತು ಹೇಯವನ್ನಾಗಿ ತಿಳಿಯುತ್ತೇನೆ. ಅತುಲ ಸಂಪತ್ಪ್ರಾಪ್ತಿಯ ಅಧಿಕಾರವನ್ನು ಕಳೆದುಕೊಳ್ಳಲಿಕ್ಕಾಗಿ ನಾನು 5 ಮಿನಿಟುಗಳ ಮೊದಲೇ ಸೆರೆಮನೆಯಿಂದ ಹೊರ ಬಂದು ಕರಾರನ್ನು ಮುರಿದುಬಿಡುವೆನು."

ಪತ್ರವನ್ನೋದಿ ಮೊದಲಿನಂತೆಯೇ ಮೇಜಿನ ಮೇಲಿಟ್ಟು ಸಜಲನಯನನಾಗಿ ಆ ಕೈದಿಯ ತಲೆಯನ್ನು ಮೂಸಿ ವ್ಯಾಪಾರಿಯು ಮೆಲ್ಲಗೆ ಹೊರ ಬಂದನು. ವ್ಯಾಪಾರಿಯು ಮಾರ್ಕೆಟಿನಲ್ಲಿ ಈ ಮೊದಲು ಅನೇಕಬಾರಿ ಸೋತಿದ್ದನು. ಆದರೂ ಈ ದಿನದ ಸೋಲಿನಲ್ಲಿ ತನ್ನ ಮೇಲೆ ತಿರಸ್ಕಾರ ಬಂದಷ್ಟು ಬೇರೆ ಯಾವಾಗಲೂ ಬರಲಿಲ್ಲ. ಮನೆಗೆ ಬಂದು ಹಾಸಿಗೆಯಲ್ಲಿ ಬಿದ್ದುಕೊಂಡನು. ಮನಸ್ಸಿನ ಚಂಚಲತೆಯಿಂದಾಗಿ ನಿದ್ರೆಯೇ ಹತ್ತಲಿಲ್ಲ.

ಮರುದಿನ ಬೆಳಗ್ಗೆ ಚೌಕೀದಾರನು ಗಾಬರಿಯಿಂದ ಓಡಿಬಂದು ಬಂದಿಯು ಜೈಲಿನಿಂದ ತಪ್ಪಿಸಿಕೊಂಡು ಹೋಗಿದ್ದಾನೆಂದು ನಡುಗುವ ಸ್ವರದಿಂದ ಹೇಳಿದನು. ವ್ಯಾಪಾರಿಯು ಹೋಗಿ ನೋಡಿದನು. ಆ ಕಾಗದವು ಮೊದಲಿನಂತೆಯೇ ಮೇಜಿನ ಮೇಲಿತ್ತು. ಕೈದಿಯು ಮೇಲಾಗಲೀ ತನ್ನ ಮೇಲಾಗಲೀ ನಿರರ್ಥಕವಾದ ಅಪವಾದಗಳು ಬರಬಾರದೆಂದು ಆ ತ್ಯಾಗಪತ್ರವನ್ನು ಕೊಂಡುಹೋಗಿ ತನ್ನ ತಿಜೋರಿಯಲ್ಲಿ ಭದ್ರವಾಗಿಟ್ಟುಕೊಂಡನು.

(ರಷ್ಯ ಎಂಟನ್ ಚೇಕಲ್)

ನೋಟೀಸು

ಉಡುಪಿ ತಾಲೂಕು ಮೂಡುತೋನ್ಸೆ ಗ್ರಾಮದಲ್ಲಿರುವ ವಾಸ್ಕೆಲ್ ಫೆರ್ನಾಂದಿಸರ ಮಗ ಜುವಾಂ ಫೆರ್ನಾಂದಿಸನು ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ. ಯಿದೇ ಆಗೋಸ್ತು ತಾ. ೩೪ರಲ್ಲು ನನ್ನನ್ನು ಮೋಸಗೊಳಿಸಿ ನನಗೆ ಯಾವ ತರದ ಪ್ರತಿಫಲ ಕೊಡದೆ ಸದ್ರಿ ಮೂಡುತೋನ್ಸೆ ಗ್ರಾಮದಲ್ಲಿರುವ ಪೇದ್ರು ಜೋರ್ಜ ರೆಬೆಲ್ಲರ ಮಗಳು ಎಡ್ಡಿಮೇರಿ ರೆಬೆಲೋ ಬಾಯಿ ರೂ. ೭೫/- ಎಪ್ಪತ್ತೈದಕ್ಕೆ ಒಂದು ಡಿಮಾಂಡು ಪ್ರೋಮೆಸರಿ ನೋಟನ್ನು ಬರ್ಸಿಕೊಂಡಿರುತ್ತಾರೆ. ಸದ್ರಿ ನೋಟು ಪ್ರತಿಫಲವಿಲ್ಲದ್ದಾಗಿರುವುದರಿಂದ ಅದ್ರಲ್ಲಿ ತೋರುವ ಐವೇಜನ್ನು ತರುವರೆ ನಾನು ಬದ್ಧನಲ್ಲ ಅದನ್ನು ಯಾರೂ ಟ್ರಾನ್ಸ್‌ಫರ್ ತೆಗೆದುಕೊಳ್ಳಕೂಡದಾಗಿರುತ್ತದೆ.

John Fernandes.

ನಮ್ಮ ಜರಿ ಪಿತಾಂಬ್ರ ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ನೂರು ಇನಾಮುಗಳು.

THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಶಾಲುಗಳ ಕಟಿಬಾಗು 1, ಕಾಶೀಗಳ್ಳ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆ ಸ್ಟ್ಯಾಂಪ್ ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುದು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಪಾಟಿ, ಕೆದಪಾಮ್ಸ್, ಪೇಟಾ, ಕೋಟಿಂಗ್, ಶರ್ಟಿಂಗ್ ತಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಜಾಲ್ಸನ್ ಚೌಕ, ಧಾವಳಿ, ನಾಮುಂಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕಟಿಬಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪದಲು ಬುಟ್ಟಿ ಹಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55. ಪದಲು ಸಾದಾ 16 ಮೊಳದ ಸೀರೆ 1ಕ್ಕೆ ರೂ. 16ರಿಂದ ರೂ. 30ರ ವರೆಗೆ. ಅರೆ ಕಡಮೆ 16 ಮೊಳ ಕ್ರೇಪ್ ಅಂಚು ರೂ. 10½ ಯಿಂದ ರೂ 16. ಖಣ 1ಕ್ಕೆ ರೂ. 1½ರಿಂದ ರೂ 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಪರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶೀ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚನ್ನು ಹೊರಗೆಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಕೆಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III **ಸುಖಸೇವನ**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ಸದಾಸ್ರಾವ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲ 1ಕ್ಕೆ ರೂ 2-0-0

ಎಮ್. ವಿ. ಶಾಸ್ತ್ರಿ,

ಆಯುರ್ವೇದ ಭೂಷಣ ಮಂಗಳೂರು ದ. ಕ.

ಬ್ರಾಂಚ್ ಏಜಂಟರು:—ಮೆಸರ್ಸ್ ಓರಿಯಂಟಲ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರಸ್ತೆ, ಮಲ್ಲೇಶ್ವರಮ್, (ಬೆಂಗಳೂರು ಸಿಟಿ)

ESTD. 1926.

THE CROWN RUBBER STAMP Co.,

Balmatta Road. MANGALORE.

Manufacturers of Air Cushion Rubber Stamps, Revolving Date Stamps, Brass Glass & Wood Sign-boards, Badges, Belts, Wax Seals, Blocks, Painters, Designers & Engravers on Marble Wood. Etc.



Thumb Impression Seals & Facsimile Stamps a Speciality.

ALL ENQUIRIES TO BE MADE DIRECT TO OUR BALMATTA OFFICE, MANGALORE, AS WE HAVE NO BRANCHES OR AGENTS.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲುಪುವ ಘಂಟೆ
ಮಿಕ್ಸೆಡ್	ಬೆಳಗ್ಗೆ 5-55	ರಾತ್ರಿ 8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಗ್ಗೆ 9-50	ಸಂಜೆ 4-20
ಫಾಸ್ಟ್ ಪಸೆಂಜರ್	ಮಧ್ಯಾಹ್ನ 12 15	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

(1907ರಲ್ಲಿ ಸ್ಥಾಪಿತವಾದದ್ದು)

ವೇಲ್ಯುವೇಶನ್ ವರ್ಷ **1936.**

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಜೀರ ಜೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ ವಿಮಾ ಹಣ ವಾಪತಿ ರೂ. **37** ಲಕ್ಷ ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು.

ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು:—ಅತ್ಯಧಿಕ ನಫೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ.

ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಯಿರಿ.

P. D. BHARGOVA.

General Manager, ***AJMER,***

Or SUPERINTENDENT, 278, Lingu Chetty Street, MADRAS

Or Chief Agent.—

BELLARY MADURA TRICHINOPOLY VELLORE.

ಕಿರಿಯರ ಪ್ರಪಂಚದ ಪುಸ್ತಕಗಳು.

೧.	ನಾಡಕಥೆ	೦	೨	೦
೨.	ಮುಂದಿನ ದೇವರು	೦	೨	೦
೩.	ಸ್ವತಂತ್ರ ಜೀವನಸೋಪಾನ	೦	೨	೬
೪.	ಕುರಲವ	೦	೪	೦
೫.	ಸಂಶಯ ಪಿಶಾಚ	೦	೬	೦
೬.	ಕಾವ್ಯಸಾಮ್ರಾಜ್ಯ	೦	೧೦	೦
೭.	ಪ್ರವಾಸ	೧	೮	೦
೮.	ವ್ಯಭಿಚಾರಿಣಿ ಯಾರು (ಅಚ್ಚಿನಲ್ಲಿದೆ)			

ನಮ್ಮಲ್ಲಿ ಅಖಿಲ ಕರ್ನಾಟಕದ ಆಧುನಿಕ ಕನ್ನಡ ಗ್ರಂಥಗಳು ದೊರೆಯುತ್ತವೆ.

ಕಿರಿಯರ ಪ್ರಪಂಚ,

ಉಡುಪಿ, ದ. ಕ.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. Pai, Bros.

ಪಿ. ಎ. ಪೈ. ಬ್ರದರ್ಸ್.

ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd.,

Head Office MANGALORE **Branch Office Court Road, UDIPI.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ ಉಡುಪಿ.**

ಚಾಲ್ತಿ ಠೇವಣಾತಿಗಳು ಶಾ. ಶೆ. 2 ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½. ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4½. 1 ವರ್ಷದ ಬಾಬ್ತು ಸಾ. ಶೆ. 5½ 3 ವರ್ಷ ವ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ರೂ. 100 ಅಥವಾ ಅದರ ಮೇಲಿನ ಐವೇಜಿಗೆ ಸಾ. ಶೆ. 8 ಮತ್ತು ಅದಕ್ಕಿಂತ ಕೆಳಗಣದು ಸಾ ಶೆ. 9ರ ದರದ ಬಡ್ಡಿಯಲ್ಲಿಯೂ ಸಾಲ ದೊರೆವದು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಶಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ವಿಜಯ ಬ್ಯಾಂಕ್, ಲಿಮಿಟೆಡ್ **K. Gopalkrishna Shetty.**

ಚೆ ಮನ್ ಮೇನ್ ಕದ್ರಿರೋಡ್, ಮಂಗಳೂರು, ಸೆಕ್ರೆಟರಿ.

ಕಸಿಗಿಡಗಳು.

ಸಪೋಟಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ನೆಟ್ಟ ವರ್ಷದಲ್ಲಿಯೇ ಹಣ್ಣನ್ನು ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಕಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1-6-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕೆಯಟಲಾಗಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಯಾಂಡ್ ಶೋ ಕಾಫು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೋ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋಸ್ಟೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ ಕೆನರಾ ನರ್ಸರಿ,

ಪೋಸ್ಟ್ ಕಾಪು, ದ. ಕನ್ನಡ.

ವಾರದ ವಿಚಾರ

ಬಂಡಾಯಗಾರರ ವಿಜಯ

ಈ ಹಪ್ತೆಯಲ್ಲಿ ಸ್ಪೈಯಿನಿನ ಅಂತಃಕಲಹದಲ್ಲಿ ಬಂಡಾಯಗಾರರ ಕೈಯೇ ಮೇಲಾಗಿರುವುದು. ಉತ್ತರ ಗಡಿಯ ಸಾನ್ ಸೆಬಾಸ್ಟಿಯನ್ ಎಂಬ ಪ್ರಾಮುಖ್ಯ ಪಟ್ಟಣವನ್ನು ಯಾವ ಹೋರಾಟವೂ ಇಲ್ಲದೆ ಬಂಡಾಯಗಾರರಿಗೆ ಕೊಡಲಾಗಿದೆ. ಅದನ್ನು ಬಂಡಾಯಗಾರ ಸೇನಾನಾಯಕರಾದ ಜನರಲ್ ಮೋಲಾರವರು ವಿಜಯ ಮಬ್ಬಿನ ಸಂಭ್ರಮದಿಂದ ಪ್ರವೇಶಿಸಿರುವರು. ಬಂಡಾಯಗಾರರು 3 ಕಡೆಗಳಿಂದ ಸ್ಪೈಯಿನಿನ ಮುಖ್ಯಪಟ್ಟಣವಾದ ಮಾದ್ರಿದಿನ ಮೇಲೆ ಧಾಳಿನಡಿಸುವ ಹಂಚಿಕೆಯಲ್ಲಿದ್ದಾರೆ. ಮಾದ್ರಿದಿಗೆ ಹೋಗುವ ದಾರಿಯ ಬಲನೇರ್ ಎಂಬಲ್ಲಿ ಸರಕಾರದ ಕಡೆಯ ಸೈನಿಕರು ಪರಾಜಿತರಾಗಿ ಹಿಂದೆ ಸರಿದಿರುತ್ತಾರೆ. ಅಲ್ಲಿಗೆ ಪುನಹ ಪ್ರಬಲ ಸೇನೆಯನ್ನು ಕಳುಹಿಸಲಾಗಿದೆ. ಬಂಡಾಯಗಾರರು, ಮಿಶನ್ ತೋಪು, ಯುದ್ಧ ವಿಮಾನ, ಸಿಡಿಮದ್ದು ಮೊದಲಾದ ಯುದ್ಧ ಸಾಮಗ್ರಿಗಳಿಂದ ಒಳ್ಳೇ ಸಿದ್ಧತೆಯುಳ್ಳವರಿದ್ದಾರೆ. ಇಲ್ಲಿಯ ಯುದ್ಧವು ಪ್ರಾಮುಖ್ಯವಾಗಿರುವುದು. ವಿಷವಾಯು ಮೊದಲಾದುವನ್ನು ಉಪಯೋಗಿಸದೆ ಯುದ್ಧವು ಸಾಧ್ಯವಾದಷ್ಟು ಮಾನವೀಯವಾಗಿ ನಡೆಸಲ್ಪಡುವಂತೆ ಮಾಡುವ ಇಂಗ್ಲೆಂಡ್ ಮತ್ತು ಫ್ರಾನ್ಸ್ ಮೊದಲಾದ ದೇಶಗಳ ಪ್ರಯತ್ನವು ನಿಷ್ಫಲವಾಗಿರುವುದು. ಬಂಡಾಯಗಾರರಿಗೆ ಪೋರ್ಚುಗೀಸ್ ದೇಶದಿಂದ ಬೇಕಾದ ಸಹಾಯವು ದೊರೆಯುವಂತಿದೆ. ಇದರಿಂದ ರೇಗಿಬಿದ್ದ ಸರಕಾರಿ ಕಡೆಯ ಸೈನಿಕರು ಕೆಲವರು ಮಾದ್ರಿದಿನಲ್ಲಿರುವ ಪೋರ್ಚುಗೀಸರ ರಾಯಭಾರಿ ನಿವಾಸದ ಮೇಲೆ ಬಲಾತ್ಕಾರದಿಂದ ಧಾಳಿ ನಡಿಸಿರುವರೆಂದು ತಿಳಿದುಬರುತ್ತದೆ. ಹೊಸ ಪ್ರಧಾನ ಮಂತ್ರಿಗಳಾದ ಸೀನರ್ ಕೆಬಿಲೆರೋ ಎಂಬ ಸುಪ್ರಸಿದ್ಧ ಮಜೂರ ಮುಖಂಡರು ಬಂಡಾಯಗಾರರನ್ನು ಪ್ರಬಲವಾಗಿ ವಿರೋಧಿಸುವ ಏರ್ಪಾಡು ನಡಿಸುತ್ತಿದ್ದಾರೆ.

ಇಟೆಲಿಯ ಯುದ್ಧೋತ್ಸಾಹ

ಇಟಲಿಯಲ್ಲಿ ಪುನಃ ಯುದ್ಧದ ಸ್ಫೂರ್ತಿಯೆದ್ದಂತಿದೆ. ಸರಕಾರವು ಇಟೆಲಿಯ ಸೇನೆಯನ್ನು ಆಧುನಿಕೋಪಕರಣಗಳಿಂದ ಸಿದ್ಧಪಡಿಸಲು ಅಪಾರ ಹಣ ವ್ಯಯಮಾಡುವ ನಿರ್ಧಾರಮಾಡಿದೆ. ಇಟೆಲಿಯು ತನ್ನ ಜನಸಂಖ್ಯೆಯನ್ನು ಆದಷ್ಟು ಶೀಘ್ರವಾಗಿ ಹೆಚ್ಚಿಸುವ ಪ್ರಯತ್ನ ಮಾಡುತ್ತಿದೆ. ಮುಸಲೋನಿಯವರು ಒಂದೇಒಂದು ಶಬ್ದವೆತ್ತಿದರೆ ಕೂಡಲೇ 8 ಮಿಲಿಯ ಮಂದಿ ಯುದ್ಧಕ್ಕೇಳಬಲ್ಲರಂತೆ! ದೊಡ್ಡ ಕುಟುಂಬವನ್ನುಂಟುಮಾಡುವವರಿಗೂ, ಒಮ್ಮೆಯೇ ಎರಡು ಮೂರರಂತೆ ಮಕ್ಕಳನ್ನು ಹೆರುವವರಿಗೂ ಇನಾಮು ಕೊಟ್ಟು ಪ್ರೋತ್ಸಾಹಿಸುವ ಏರ್ಪಾಡು ಮಾಡಲಾಗಿದೆ. ಅವಿವಾಹಿತರೂ ಬಹಳ ತಿರಸ್ಕಾರಕ್ಕೊಳಗಾಗಿದ್ದಾರೆ. ಸೇನೆಯನ್ನು ಆದಷ್ಟು ಹೆಚ್ಚಿಸಲಾಗಿದೆ. ಯುರೋಪಿನಲ್ಲೆಲ್ಲಾ 1914ರ ಘೋರ ಯುದ್ಧ ಪ್ರಾರಂಭವಾಗುವದಕ್ಕಿಂತಲೂ ಭೀಕರ ಪರಿಸ್ಥಿತಿಯುಂಟಾಗಿದೆ.

ಮಾತೃತ್ವವೇ ಸ್ತ್ರೀಯ ಮುಖ್ಯ ಕೆಲಸ

ತಮ್ಮ ಸ್ತ್ರೀಯರು ಹೇಗಿರಬೇಕೆಂಬ ವಿಷಯದಲ್ಲಿ ಜರ್ಮನಿಯ ನಾಜಿಗಳ ಮತ್ತು ಇಟೆಲಿಯ ಫೇಸಿಸ್ಟರ ಅಭಿಪ್ರಾಯಗಳು ಏಕರೀತಿಯವಾಗಿವೆ. ಜನಾಂಗದ ಮಾತೆಯರಾಗುವುದೇ ಸ್ತ್ರೀಯರ ಪ್ರಾಥಮಿಕ ಕೆಲಸವೆಂದು ಹರ್ ಹಿಟ್ಲರರು ವ್ಯಕ್ತಪಡಿಸಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಸ್ತ್ರೀಯರನ್ನು ಪುರುಷಸಮಾನರಾಗಿ ಕಂಡು ಸೇನೆಗೂ ಅವರನ್ನು ಸೇರಿಸಿಕೊಳ್ಳುವ ರಷ್ಯದ ಕ್ರಮಕ್ಕೆ ಅವರು ಬದ್ಧ ವಿರೋಧಿಯಿದ್ದಾರೆ. ರಷ್ಯದ ಕುರಿತು ಅವರು ಹಲ್ಲು ಮಸೆಯಹತ್ತಿದ್ದಾರೆ. ಸಂದರ್ಭ ದೊರತಾಗಲೆಲ್ಲಾ ರಷ್ಯದ ಕುರಿತು ತಿರಸ್ಕಾರ ಸೂಚಿಸಿ ಉರಿ ಕಾರಹತ್ತಿದ್ದಾರೆ.

ಬಿಹಾರಿನಲ್ಲಿ ನೆರೆಹಾವಳಿ

ಬಿಹಾರ ಪ್ರಾಂತವು ಪ್ರಕೃತಿಯ ಭೀಷಣ ಕೋಪಕ್ಕೊಳಗಾಗಿರುವಂತಿದೆ. ಭೂಕಂಪವಾದ ಮೇಲೆ ಆಗಾಗ ಅಲ್ಲಿ ನೆರಹಾವಳಿಯು ತಪ್ಪಲಿಕ್ಕೆ ಇಲ್ಲವೆಂಬಂತಾಗಿದೆ. ಕಳೆದ ವಾರದ ಅಂತ್ಯದಲ್ಲಿ ದಕ್ಷಿಣ ಬಿಹಾರಿನಲ್ಲಿ ಎಡೆಬಿಡದೆ 15 ಇಂಚುಗಳಷ್ಟರ ಮಳೆ ಸುರಿದು ಗಂಗಾ, ಸೋನೆ ಮತ್ತು ದಾಮೋದರ ನದಿಗಳಲ್ಲೆಲ್ಲಾ ಪ್ರಚಂಡ ನೆರೆ ಬಂದು ಹಾವಳಿಯಾಗಿದೆ. ರಸ್ತೆಗಳೆಲ್ಲಾ ಕಡಿದು ಹೋಗಿವೆ. ರೈಲ್ವೇ ಲೈನುಗಳು ಮುಳುಗಿ ಹೋಗಿವೆ ಗಯಾಪಟ್ಟಣದ ಅರ್ಧಭಾಗ ಮುಳುಗಿಹೋಗಿದೆ ವಾಹನಸಂಚಾರವೆಲ್ಲಾ ನಿಲ್ಲಿಸಲ್ಪಟ್ಟಿದೆ. ನದಿಗಳಲ್ಲಿ ನೆರೆಯು ಇನ್ನೂ ಏರಹತ್ತಿದೆ.

ಸ್ವದೇಶ ವಾರ್ತೆ.

ಪಾಟ್ನವು ನೀರಡಿಯಲ್ಲಿ. ಜನರಲ್ಲೆಲ್ಲಾ ದಿಗಿಲು.

ಇದೇ ತಾ. 12ರಿಂದ ಪಾಟ್ನ ಪಟ್ಟಣವು ನೀರಿನಿಂದ ಆವರಿತವಾಗಿ ಮುಖ್ಯ ಮುಖ್ಯಭಾಗಗಳೆಲ್ಲಾ ನೀರಡಿಯಲ್ಲಿರುವವು. ನೀರು ಇನ್ನೂ ಏರುತ್ತಿರುವುದು. ಇಡೀ ಪಟ್ಟಣವನ್ನು ಕಗ್ಗತ್ತಲೆಯು ಮುಸುಕಿರುವುದು. ಪಾಟ್ನ, ಗುಲ್ಜಾರ್, ಬಾರ್ಗ್ ನದಿ ದಂಡೆಯು ಒಡೆದು ಪಾಟ್ನವನ್ನು ನೀರಿನ ಪ್ರವಾಹವು ಆವರಿಸಿರುವುದು. ತಾ. 13ನೇ ರಾತ್ರಿ ರೈಲ್ವೇ ಲೈನಿನ ಉತ್ತರದ ಜನರೆಲ್ಲಾ ದಿಗಿಲುಗೊಂಡು ತಮ್ಮ ಸೊತ್ತು ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಉತ್ತರ ಪ್ರದೇಶಕ್ಕೋಡುವ ದೃಶ್ಯವು ಅವರ್ಣನೀಯವಾಗಿತ್ತು. ಇದೇ ರೀತಿ ಚಪ್ರ ಎಂಬ ಮುಖ್ಯ ಪಟ್ಟಣವು ನೂಂಟದಷ್ಟು ನೀರಿನಿಂದ ಆವರಿತವಾಗಿರುವುದು. ಗಯ ಮತ್ತು ಸಾರಗ ಜಿಲ್ಲೆಗಳಲ್ಲಿ ಬಹಳ ಹಾವಳಿಯಾಗಿರುವುದು.

ಸಮಾಜದ ಆಸೂರಿ ಕೃತ್ಯಗಳಿಗೆ ಹೆದರಿ ಬಾಯಿಬಿಡುವಿರೇಕೆ? ಅದನ್ನು ನಿವಾರಿಸಲು ಉಪಾಯವೇನು?

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಲೇಖ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವುದು

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,

ಅಳಕೆ ರಸ್ತೆ, ಮಂಗಳೂರು

ಕಾಂಗ್ರೆಸ್ ಪ್ರಮುಖರ ದಸ್ತಗಿರಿ

ಕಲ್ಕತ್ತದ ಪ್ರಾಮುಖ್ಯ ಕಾಂಗ್ರೆಸ್ ಮತ್ತು ಮಜೂರರ ನಾಯಕರಾದ ಡಾಕ್ಟರ್ ಸುರೇಶಚಂದ್ರ ಬೆನರ್ಜಿಯವರು ಇದೇ ತಾ. 13ರಲ್ಲು ರಾಜದ್ರೋಹದ ಆರೋಪಕ್ಕಾಗಿ ಕೈದು ಮಾಡಲ್ಪಟ್ಟು ರೂ. 500ರ ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು. ಇದೇ ತಾ. 21ಕ್ಕೆ ಇವರ ವಿಚಾರಣೆ ನಡೆಯಲಿರುವುದು. ಇವರಿಗೆ ಜ್ವರ ಬರುತ್ತಿದೆ.

ವಿದೇಶ ವಾರ್ತೆ.

ಚೈನದ ವಿಷಮ ಪರಿಸ್ಥಿತಿ.

ಪಾಕ್ಹ್ಯೋ ಎಂಬಲ್ಲಿ ನಕಾನೋ ಎಂಬ ಜಾಪಾನೀಯನು ಕೊಲ್ಲಲ್ಪಟ್ಟ ಕುರಿತು ವಿಚಾರಿಸಲು ಅಲ್ಲಿಗೆ ಬಂದ ಜಾಪಾನೀಯ ಅಧಿಕಾರಿಗಳನ್ನು ಸೈನಿಕರು ಸೂಗಾ ಎಂಬ ಹಡಗದಿಂದ ಕೆಳಗಿಳಿಯ ಬಿಡಲಿಲ್ಲ. ಚೀನಿಯ ಅಧಿಕಾರಿಗಳ ಮಾತಿಗೂ ಸೈನಿಕರು ಗಮನ ಕೊಡಲಿಲ್ಲ. ಇದರಿಂದ ರೇಗಿಬಿದ್ದ ಜಾಪಾನು ಏನು ಮಾಡುವುದೋ ಹೇಳಬರುವುದಿಲ್ಲ. ಅಂತೂ ಪರಿಸ್ಥಿತಿಯು ವಿಷಮವಾಗಿದೆ.

25 ಜನರು ಕೊಲ್ಲಲ್ಪಟ್ಟರು.

ಪೂರ್ವ ಮಂಚೂರಿಯದಲ್ಲಿ ಜಾಪಾನರ ಸೈನಿಕ ಟ್ರೈನೊಂದು ಚಲಿಸುತ್ತಿದ್ದಾಗ ಕೊರಿಯದ ಪುಂಡುಗಾರರು ಅದನ್ನು ತಡೆದು ಹೋರಾಟ ನಡೆದು 25 ಮಂದಿ ಜಾಪಾನೀಯ ಸೈನ್ಯಾಧಿಕಾರಿಗಳೂ ಇತರ ಸೈನಿಕರೂ ಕೊಲ್ಲಲ್ಪಟ್ಟು 65 ಮಂದಿಗೆ ಪೆಟ್ಟಾಗಿರುವುದು.

ಸ್ಪೈನಿನ ಯುದ್ಧ.

ಇದೇ ತಾ. 12ರಲ್ಲು ಬಂಡಾಯಗಾರರು ಸಾನ್‌ಸೆ ಬಾಸ್ಟಿಯನ್ ಪಟ್ಟಣವನ್ನೂ ವಶಮಾಡಿಕೊಂಡಿರುವರು. ಆದರೆ ಅವರು ಪ್ರವೇಶಿಸುವಷ್ಟರಲ್ಲೇ ಸ್ಪೈನಿನ ಅನಾರ್ಕಿಸ್ಟರೆಂಬ ವಿನಾಶವಾದಿಗಳು, ಮುಖ್ಯಮುಖ್ಯ ಪಟ್ಟಣಗಳಿಗೆಲ್ಲಾ ಬೆಂಕಿ ಕೊಟ್ಟು ಸುಟ್ಟು ಹಾಕಿದರು.

ಹಿಮ ಬಂಡೆ ಬಿದ್ದು ಹಾವಳಿ

ನೋರ್ವೆಯ ನೋರ್ಥ್ ಫ್ರೋರ್ಡ್ ಎಂಬ ಜಿಲ್ಲೆಯಲ್ಲಿ ಹಿಮ ಬಂಡೆ ಉರುಳಿ ಬಿದ್ದು ಎರಡು ಚಿಕ್ಕ ಹಳ್ಳಿಗಳೇ ನಾಶವಾಗಿವೆ. 74 ಮಂದಿ ಕೊಲ್ಲಲ್ಪಟ್ಟಿದ್ದಾರೆ. ಇವರಲ್ಲಿ 30ಮಂದಿ ಮಕ್ಕಳು.

ಉಡ್ಪಿ ಮೂಡನಿಡಂಬೂರು ಪಂಚಾಯ್ತ ಕೋರ್ಟಿನಲ್ಲಿ.

ಶಿ. ವ್ಯಾ. ನಂಬ್ರ ೬೧೩೬

ವಾದಿಳು:— ಬಾಗಿ ಸೆಡ್ತಿ, ತುಂಗಿ ಸೆಡ್ತಿರ ಮಗಳು, ಉಡ್ಪಿತಾಲ್ಲೂಕು ಮೂಡನಿಡಂಬೂರು ಗ್ರಾಮದ ಬನ್ನಂಜೆಯಲ್ಲಿರುವವಳು.

ಪ್ರತಿವಾದಿ:—ಅಂತಯ್ಯ ಸೆಟ್ಟಿ, ಹೆರ್ಗ ಗ್ರಾಮದ ಮುರತಕಡಿ ಕೇಸಣ್ಣ ಸೆಟ್ರ ಅಳಿಯ ಉಡುಪಿತಾಲ್ಲೂಕು ಮೂಡನಿಡಂಬೂರು ಗ್ರಾಮದಲ್ಲಿರುವವ.

ಈ ವ್ಯಾಜ್ಯದ 1ನೇ ಪ್ರತಿವಾದಿ ಅಂತಯ್ಯ ಸಟ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ ವಾದಿಳು ನಿಮ್ಮ ಮೇಲೆ ಈ ಕೋರ್ಟಿನಲ್ಲಿ ದಾಕಲು ಮಾಡಿದ ಮೇಲಣ ವ್ಯಾಜ್ಯದಲ್ಲಿ ನೋಟೀಸಿಗೆ ನೀವು ತಪ್ಪಿಸಿಕೊಳ್ಳುತ್ತೀರಾಗಿ ತಿಳಿದು ಬರುವದ್ರಿಂದ ಸದ್ರಿ ನಂಬ್ರವನ್ನು ತಾ. 5-10-36ಕ್ಕೆ ಆಖೈರು ತನ್ಕಿಗೆ ಇಟ್ಟಿದೆ. ಆ ತಾರೀಕಿಗೆ ಹಗಲು 2 ಗಂಟೆಗೆ ನೀವು ತಪ್ಪದೆ ಈ ಕೋರ್ಟಿಗೆ ಸ್ವತಹ ಹಾಜರು ಆಗತಕ್ಕದ್ದು. ತಪ್ಪಿದ್ರೆ ನಿಮ್ಮ ಉಜೂರು ಶಿವಾಯ್ ನಂಬ್ರವನ್ನು ತೀರ್ಮಾನಿಸಲಾದೀತು.

ಮೂಡನಿಡಂಬೂರು ಪಂಚಾಯ್ತಕೋರ್ಟು. — **R. M. Karnad,** *President.*

ತಾ. 14-9-1936.

THE

MOOLKY BANK, LTD., MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

ಎಲ್ಲಾ ತರದ ಬ್ಯಾಂಗ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕ- ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯುಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪೂಂಜ,

President & Manager, ಪ್ರಸಿಡೆಂಟು ಮತ್ತು ಮೆನೇಜರ್.

ನವಯುಗ

ಉಡುಪಿ, ತಾ. ೧೭-೯-'೩೬, ಗುರುವಾರ

ಲೋಕದ ಭವಿಷ್ಯ.

ಇಂದು ಲೋಕದ ಪ್ರತಿಯೊಂದು ರಾಷ್ಟ್ರಕ್ಕೂ ಒಂದಲ್ಲೊಂದು ಪಂಥ ಯಾ ತತ್ವವನ್ನವಲಂಬಿಸುವ ಅಗತ್ಯ ಬಿದ್ದಿದೆ. ನಾಳೆ ಯುದ್ಧವಾಗುವಾಗ ಅವಕ್ಕೊಂದು ಹೆಸರಿಲ್ಲದೆ ಹೋಗದು. ಕಳೆದ ಮಹಾಯುದ್ಧದಲ್ಲಿ ಸೇರಿಕೊಂಡ ಎಲ್ಲಾ ರಾಷ್ಟ್ರಗಳೂ ತಮ್ಮತಮ್ಮ ದೇಶದ ಹೆಸರಿನಿಂದಲೇ ಹೋರಾಡಿದ್ದವು. ಆ ಯುದ್ಧದ ಪರಿಣಾಮವು ಪ್ರಪಂಚವು ಆ ಕಾಲದಲ್ಲಿ ಊಹಿಸಿದ್ದಂತಾಗಲಿಲ್ಲ. ಯಾರನ್ನು ತಾವು ಗೆದ್ದಂತಾಯಿತು, ಸದೆಬಡಿದಂತಾಯಿತು ಎಂದು ವಿಜೇತ ರಾಷ್ಟ್ರಗಳು ಭಾವಿಸಿದ್ದವೋ, ಅವರೇ ಇಂದು 'ತಾವು ಮಿಕ್ಕವರಿಗಿಂತ ಬಲಶಾಲಿಗ'ಳೆಂಬ ಹೆಮ್ಮೆಯಿಂದಿದ್ದಾರೆ. ಸೋತ ದೇಶಗಳು ತಮ್ಮ ಶಕ್ತಿಯನ್ನು ಹೊಸ ವಿಧಾನದಿಂದ ತುಂಬಿಸಿಕೊಂಡವು. ಜರ್ಮನಿಯಲ್ಲಿ ನಾಝಿ ಅಧಿಕಾರವು ಮೊದಲಾಯಿತು. ರಶ್ಯವು ಬೊಲ್ಷೆವಿಝಮನ್ನು ಅಂಗೀಕರಿಸಿತು, ಇಟಲಿಯು ಫೆಸಿಸ್ಟ ಕವಚವನ್ನು ತೊಟ್ಟಿತು, ಟರ್ಕಿಯು ಕೆಮಲ್ ಪಾಶಾನನ್ನನುಸರಿಸಿತು— ಇವುಗಳೆಲ್ಲಾ ಒಂದೊಂದು ಪಂಥವನ್ನಂಗೀಕರಿಸಿ ಬಲಗೊಂಡವು; ನವೀನ ಸ್ಫೂರ್ತಿ, ಶಕ್ತಿಯನ್ನು ಸಂಪಾದಿಸಿಕೊಂಡವು. ಹೀಗಾಗಿ ಕಳೆದ ಮಹಾಯುದ್ಧದಲ್ಲಿ ಪೆಟ್ಟು ತಿಂದವರು ಈಗಲೂ ನರಳಿಕೊಂಡೇ ಇಲ್ಲ; ಅವರಲ್ಲಿ ಹೆಚ್ಚಿನವರು ರಣ ಗರ್ಜನೆಯನ್ನು ಮಾಡುತ್ತಿದ್ದಾರೆ ಹಿಂದೆ ತಾವು ಕಳಕೊಂಡ ಭಾಗವನ್ನು ಪುನಃ ಪಡೆಯುವ ಆತುರವನ್ನು ತೋರಿಸುತ್ತಿದ್ದಾರೆ. ಅಂತೂ ಅಳಿಯುಳಿದ ಆ ಯುದ್ಧದ ರೋಗಾಣುಗಳೇ ಪ್ರಪಂಚಕ್ಕೊಂದು ಮಹಾಬೇನೆಯನ್ನು ನಿರ್ಮಿಸಿದರೂ ನಿರ್ಮಿಸಬಹುದು- ಲೋಕದ ಭವಿಷ್ಯವು ಹೇಗೆ ನಿಂತೀತು ಎಂದು ನಿರ್ಧರಿಸಲು ಬರುವುದಿಲ್ಲ. ಆದರೆ ಇಷ್ಟನ್ನೊಮ್ಮೆ ಊಹಿಸಬಹುದು —"ಭಾವೀ ಪ್ರಳಯವು ಲೋಕವನ್ನೆಲ್ಲಾ ಒಂದೇ ಕಟ್ಟಿನಲ್ಲಿ ಬಿಗಿಯುವದು; ಒಂದೇ ಪಂಥವನ್ನು ಪ್ರಪಂಚಕ್ಕೇ ನಿರ್ಮಿಸುವದು." ಈ ಲಕ್ಷಣಗಳು ಈಗಾಗಲೇ ರಾಜಕೀಯ ಜಗತ್ತಿನಲ್ಲಿ ಗೋಚರಿಸಹತ್ತಿವೆ. ಕಳೆದ ಮಹಾಯುದ್ಧದಲ್ಲಿ ಪ್ರತಿಯೊಂದು ದೇಶವೂ ರಾಷ್ಟ್ರಾಭಿಮಾನವೊಂದನ್ನೇ ಕಟ್ಟಿಕೊಂಡಿತ್ತು. ಅದರ ಪರಿಣಾಮವೂ ಹಾಗೆಯೇ ಆಯಿತು. 1914ರ ಯುದ್ಧದಂತಹ ಲೋಕದ ಮಹಾ ತ್ಯಾಗದ ಪರಿಣಾಮವು ಕೆಲವು ಸಂಧಿ ಕರಾರುಗಳ ನಿರ್ಮಾಣವಷ್ಟೆ ಎಂದು ಭಾವಿಸುವದು ತಪ್ಪು, ಮುಖ್ಯ ಪ್ರತಿಫಲವೆಂದರೆ ಪ್ರತಿಯೊಂದು ದೇಶದಲ್ಲಿಯೂ ಜಾಗೃತಿ ಮತ್ತು ಪಂಥನಿರ್ಮಾಣ. ಇನ್ನು ಮುಂದಕ್ಕಾಗಲಿರುವ ಯುದ್ಧವಂತೂ ಅತಿ ಭಯಂಕರ ಹಾಗೂ ವಿಶ್ವವ್ಯಾಪಿಯೆಂದು ಊಹಿಸಲ್ಪಟ್ಟಿದೆ. ಅದರ ಪರಿಣಾಮವೂ ತದನುಗುಣವಾಗಿಯೇ ಇರಬೇಕು; ಲೋಕವ್ಯಾಪಿಯಾದ ಪಂಥವೊಂದನ್ನು ನ್ಯಾಯ ಪ್ರಕಾರವಾಗಿ ಅದು ನಿರ್ಮಿಸಲೇಬೇಕು.

ಬರುವ ಯುದ್ಧಕ್ಕೆ ಪಂಥಪ್ರತಿಪಾದನೆಯೇ ಹೇತುವಾಗುವ ಲಕ್ಷಣಗಳು ಕಂಡು ಬರುತ್ತಿವೆ. ಆದ್ದರಿಂದ ಪ್ರಪಂಚಾವರಿತವಾಗುವ ಒಂದು ಪಂಥವು ಯುದ್ಧದ ಪರಿಣಾಮವಾಗಿ ಸ್ಥಾಪಿಸಲ್ಪಡುವದೆಂಬುದು ನಿರ್ವಿವಾದ! ಭವಿಷ್ಯತ್ಕಾಲದಲ್ಲಿ ಲೋಕವನ್ನು ಆಳುವವರಾರೆಂಬುದನ್ನು ಊಹಿಸುವದು ಬೇಡ—ಅವುಗಳಲ್ಲಿರುವ ನ್ಯಾಯದ ಕಡೆಗೆ ದೃಷ್ಟಿ ಹರಿಸೋಣ. ಈಗ ಪ್ರಾಪಂಚಿಕ ಜನವರ್ಗದ ಅಭಿರುಚಿಯು ಮೂರು ಕವಲುಗಳಾಗಿ ವಿಂಗಡಿಸಲ್ಪಟ್ಟಿದೆ. ಸಾಮ್ರಾಜ್ಯವಾದ, ಏಕತಂತ್ರವಾದ; ಸಮತಾವಾದ. ಈ ಮೂರರಲ್ಲಿ ಯಾವುದಾದರೊಂದು ಭಾವೀ ಪ್ರಪಂಚವನ್ನಾಳಬೇಕಾಗಿದೆ ಬ್ರಿಟಿಷರು, ಜಪಾನರು, ಹಾಗೂ ಅಮೇರಿಕದವರು ಸಾಮ್ರಾಜ್ಯವಾದಿಗಳು; ಅಥವಾ ಧನಸತ್ತಾವಾದಿಗಳು. ಜರ್ಮನಿ, ಇಟೆಲಿಯೇ ಮೊದಲಾದ ಫೆಸಿಸ್ಟ್ ರಾಷ್ಟ್ರಗಳು ಏಕತಂತ್ರರಾಜ್ಯಭಾರವನ್ನೇ ಮುಂದೊತ್ತುತ್ತಿವೆ; ರಶ್ಯವು ಸಮತಾವಾದವನ್ನು ಅಂಗೀಕರಿಸಿದೆ ಮುಕ್ಕರಾಷ್ಟ್ರಗಳ ಪಂಥಗಳು ಒಂದಲ್ಲೊಂದು ರೀತಿಯಿಂದ ಈ ಮೂರು ರೀತಿಗಳಲ್ಲೊಂದಕ್ಕೆ ಹೊಂದಿಕೊಂಡೇ ಇವೆ. ಪ್ರಪಂಚವು ಯುದ್ಧದ ಕಡೆಗೆ ತೀವ್ರವಾಗಿ ಧಾವಿಸುತ್ತಿರುವುದರಿಂದ ಸದ್ಯದಲ್ಲೇ ತೀರ್ಮಾನವನ್ನು ಹೊಂದಬಹುದೆಂಬ ನಿರೀಕ್ಷೆಯಿಂದ ಈ ಮೂರು ಪಂಥಗಳೂ ಜಗತ್ತಿನಲ್ಲಿ ಬಾಳಿಕೊಂಡಿವೆ; ಅಥವಾ ಇವು ಮೂರೂ ಬಾಳಿಕೊಂಡಿರುವುದರಿಂದಲೇ ಪ್ರಪಂಚವು ಯುದ್ಧದ ಕಡೆಗೆ ಧಾವಿಸುತ್ತಿದೆ—ಅಂತೂ ಇವು ಮೂರಕ್ಕೂ ಏಕಕಾಲದಲ್ಲಿ ಶಾಶ್ವತ ಸ್ಥಾನವುಂಟೆಂಬುದು ಸುಳ್ಳು. ಅವುಗಳಲ್ಲಿ ಸಾಮ್ರಾಜ್ಯವಾದವು ತೀರಾ ಹಳೆಯದು; ಇಂದಿನ ಪರಿಸ್ಥಿತಿಯಲ್ಲಿ ಅದನ್ನು ಪ್ರತಿಷ್ಠಿಸುವದು ಸಾಧ್ಯವಿಲ್ಲದ ಮಾತು. ಅದೀಗ ಶಾಂತಿಗಾಗಿ ತೋರಿಸುತ್ತಿರುವ ದೌರ್ಬಲ್ಯವೇ ಇದಕ್ಕೊಂದು ದೃಷ್ಟಾಂತ. ಮುಂದೆ ಯುದ್ಧವಾದಲ್ಲಿ ಸಾಮ್ರಾಜ್ಯವಾದವು ನಿರ್ನಾಮ ಹೊಂದಲೇ ಬೇಕೆಂಬುದಂತೂ ಸ್ಪಷ್ಟ ಇನ್ನುಳಿಯುವದು ಏಕತಂತ್ರವಾದ (ಫೆಸಿಸ್‌ಮ್) ಮತ್ತು ಸಮತಾವಾದ. ಇವುಗಳಲ್ಲಿ ಯಾವುದು ಭಾವೀ ಪ್ರಪಂಚವನ್ನಾಳಬಹುದು? ಯಾವುದರಿಂದ ಲೋಕಕಲ್ಯಾಣವಾದೀತು?

ಏಕತಂತ್ರವಾದವು, ದರ್ಪವೇ ಮುಖ್ಯ, ನಿರಂಕುಶ ಅಧಿಕಾರವೇ ಪ್ರಧಾನವೆನ್ನುತ್ತಿದೆ; ಬಲವೇ ಜಯವೆನ್ನುತ್ತಿದೆ. ತದನುಗುಣವಾಗಿ ಬಲಶಾಲಿಗಳನ್ನೂ, ಧನಿಕರನ್ನೂ ಆರಾಧಿಸುತ್ತಿದೆ; ಲೋಕವು ಅಧಿಕಾರ, ಅಹಂಕಾರದಿಂದಲೇ ತಲೆಯೆತ್ತಿ ನಿಲ್ಲಲು ಸಾಧ್ಯವೆಂಬುದು ಫೇಸಿಸಮ್ ತತ್ವ! ಸಮತಾವಾದವು ಸಮೂಹದ ಹಿತವನ್ನು ಕೋರುತ್ತದೆ. ಸುಖವನ್ನುಣ್ಣುವಷ್ಟು ಬಲವಿಲ್ಲದವರು ಮಾನವವರ್ಗದಲ್ಲೇ ಇಲ್ಲ. ಸುಖವನ್ನನುಭವಿಸುವದರಲ್ಲಿ ಬಲವನ್ನು ಹೊಂದುವದರಲ್ಲಿ ಮಾನವರಿಗೆಲ್ಲಾ ಸಮಾನವಾದ ಯೋಗ್ಯತೆಯಿದೆ; ಧನಿಕರು, ಬಡವರು ಎಂಬ ಭೇದವು ಇಂದಿನ ಸಾಮಾಜಿಕ ಅವ್ಯವಸ್ಥೆಯಿಂದಾದುದು, ಆದ್ದರಿಂದ ಅದನ್ನು ಸರಿಗೊಳಿಸುವ ಮೂಲಕವೇ ಲೋಕಕಲ್ಯಾಣವು ಸಾಧ್ಯವೆನ್ನುತ್ತಿದೆ ಸಮತಾವಾದ! ಹಾಗೂ ಇಷ್ಟನ್ನು ನಾವೂ ಊಹಿಸಬಹುದು. ಬಲವೇ ಮುಖ್ಯವಾಗಿದ್ದರೆ ಕಳೆದ ಮಹಾಯುದ್ಧದ ಬೆನ್ನ ಹಿಂದೆಯೇ ಇನ್ನೊಂದು ಯುದ್ಧವು ಓಡಿಬರುವ ಭಯವಿದ್ದಿಲ್ಲ. ಬಲದಿಂದ ಬಗ್ಗು ಬಡೆಯಲ್ಪಟ್ಟವರು ಮೂಲೆ ಹಿಡಿಯಲೇ ಬೇಕಿತ್ತು. ಈಗ ಗರ್ಜಿಸುತ್ತಿರುವ ಜರ್ಮನಿಯು ಸೋತ ರಾಷ್ಟ್ರ, ಆ ಸೋಲು ಕೈಸರರಿಗಾಯಿತೇ ಹೊರತು ಜರ್ಮನಿಗಾಗಲಿಲ್ಲ. ಜರ್ಮನಿಯ ಜನತೆಗೆ ಬೇರೊಂದು ಹಾದಿಯನ್ನು ಹಿಡಿದು ಸೋಲನ್ನು ತಳ್ಳಿಗಳೆಯಲು ತಿಳಿಯಿತು. ಜನತೆಯ ಅಭಿಲಾಷೆಯು ತಣಿಸಲ್ಪಡದಿದ್ದರೆ, ಅದು ಸಾಧನೆಯ ರೂಪಕ್ಕೆ ಬರುತ್ತದೆಂಬುದಕ್ಕೆ ಇದೇ ಒಂದು ನಿದರ್ಶನ. ಈ ನ್ಯಾಯವು ಇಡೀ ಪ್ರಪಂಚಕ್ಕೆ ಅನ್ವಯಿಸುತ್ತದೆ. ಜಗತ್ತಿನ ಬಹುಸಂಖ್ಯಾಕರನ್ನು ತೃಪ್ತಿಪಡಿಸುವ ಪಂಥದ ಹೊರತು ಮಿಕ್ಕವುಗಳಿಗೆ ಶಾಶ್ವತ ಸ್ಥಾನ ಸಿಗುವಂತಿಲ್ಲ. ಸಮೂಹವು ಅಜ್ಞಾನದಲ್ಲಿರುವವರೆಗೆ, ದರ್ಪ ಅಹಂಕಾರಗಳು ಸಾಗಬಹುದು. ಪರಕೀಯರಾಗಲಿ, ತಮ್ಮವರೇ ಆಗಲಿ ಜನತೆಯನ್ನು ಬಹುಕಾಲ ವಂಚಿಸಲು ಬರುವದಿಲ್ಲ. ಆ ವಂಚನೆಯು ಕೊಡುವ ನೋವು ಸಮೂಹವನ್ನು ಜಾಗೃತಿಗೊಳಿಸುವಾಗ ಅಧಿಕಾರವು ಪಲಾಯನಮಾಡಬೇಕಾಗುವದು. ಆದ್ದರಿಂದ ಮಾನವಸಮೂಹದ ಅಭಿಲಾಷೆಯನ್ನರಿತು ಸಮಾನ ಸುಖವನ್ನೀಯುವ ವ್ಯವಸ್ಥೆಯೇ ಶಾಶ್ವತವಾದುದು; ಅದನ್ನನುಸರಿಸಬಲ್ಲ ಪಂಥವೇ ಬೇಕಾದುದು. ಲೋಕಶಾಂತಿಗೆ ಮಾರ್ಗವೂ ಅದೇ!

ಪೆಲಸ್ಟೈನಿನಲ್ಲಿ ದಂಡುಕಾನೂನು

ಬ್ರಿಟಿಷ್ ಸರಕಾರವು ಪೆಲಸ್ಟೈನಿನಲ್ಲಿ ದಂಡುಕಾನೂನನ್ನು (ಮಾರ್ಶಲ್ ಲೋ) ಜಾರಿಗೆ ತಂದು ಅರಬರ ತಂಟೆಯನ್ನಡಗಿಸಬೇಕೆಂದು ನಿರ್ಧರಿಸಿರುವದು. ಅರಬರು ಮಾಡುತ್ತಿರುವದು ತಂಟೆಯೇ ಆಗಿರಬಹುದು; ಅದರಿಂದಾಗಿ ರಕ್ತವು ಹರಿದು ಪೆಲಸ್ಟೈನು ಕೆಸರಾಯಿತೆಂಬುದು ನಿಜ! ಈ ರೀತಿ ಗೊಂದಲವು ಬೆಳೆದಾಗ ಸರಕಾರವು ದಂಡುಕಾನೂನನ್ನು ಜಾರಿಗೆ ತಂದು ಉಪದ್ರವವನ್ನು ಉಪದ್ರವದಿಂದಲೇ ಅಡಗಿಸುವ ಗಂಡಸುತನವನ್ನು ತೋರಿಸುವ ಪದ್ಧತಿ. ಸರಕಾರವು ನ್ಯಾಯಪರಿಪಾಲನೆಗಾಗಿಯೇ ಹಾಗೆ ಮಾಡಬೇಕಾಗುವದೆನ್ನುತ್ತಿದೆ; ಸರಿ. ಅರಬರಿಗೆ ತಮ್ಮದೇ ಆದ ಪೆಲಸ್ಟೈನಿನಲ್ಲಿ ಬಾಳುವದು ಕಷ್ಟವಾದಾಗ ಅವರು ಇತರರನ್ನು ಕಷ್ಟಕ್ಕೀಡುಮಾಡಿದರು. ಈ ವಾದವು ಸರಕಾರವು ದಂಡುಕಾನೂನನ್ನು ಜ್ಯಾರಿಗೆ ತರುವಾಗ ಹೂಡುವ ವಾದಕ್ಕಿಂತ ಭಿನ್ನವಾಗಿಲ್ಲ. ಇದರರ್ಥವಿಷ್ಟೆ. ಯೆಹೂದ್ಯರು ಅನ್ಯಾಯ ಮಾಡಿದರೆಂದು ಅರಬರು ಅನ್ಯಾಯಮಾಡಿದರು, ಅರಬರು ಅನ್ಯಾಯ ಮಾಡಿದರೆಂದು, ಸರಕಾರವು ದಂಡುಕಾನೂನನ್ನು ಜ್ಯಾರಿಗೆ ತರುವದು! ಅತಿರೇಕವು ಮುಂದರಿಯುತ್ತಾ ಹೋಯಿತಲ್ಲದೆ, ಪೆಲಸ್ಟೈನಿಗೆ ನ್ಯಾಯವು ದೊರೆಯಲಿಲ್ಲ; ಅರಬರಿಗೆ ಮೂಲದಲ್ಲೇ ಉಂಟಾದ ಅನ್ಯಾಯವು ನಿವಾರಣೆ ಹೊಂದಲಿಲ್ಲ. ಶಾಂತಿಸ್ಥಾಪನೆಯ, ನ್ಯಾಯ ಪರಿಪಾಲನೆಯ ರೀತಿಯು ಹೀಗೆಯೇ ಇರುವದೇನು?

ದಕ್ಷಿಣಕನ್ನಡ

ಉಡುಪಿ

ಸ್ಥಳಾಭಾವದಿಂದ ಪಂಗಿತ ತಾರಾನಾಥರ ಆರೋಗ್ಯವೂ ಅದರ ಸಾಧನೆಯೂ ರಾ. ಹಿ. ರಾಮರಾಯ ಮಲ್ಯರ ಬೈರಂಪಳ್ಳಿ, ಗ್ರಾಮದ ಮಾಹಿತಿ ಸಂಗ್ರಹ ಮೊದಲಾದ ಲೇಖನಗಳನ್ನು ಈ ಸಲ ಪ್ರಕಟಿಸಲಾಗಲಿಲ್ಲ.

ಅಭಾರ ಸೂಚನೆ

ನಾನು ಉಡುಪಿ ಮುನಿಸಿಪಲ್ ಚೇಯರ್‌ಮೆನನಾಗಿ ಆರಿಸಿ ಬಂದುದಕ್ಕಾಗಿ ನನ್ನನ್ನು ಆದರಪೂರ್ವಕವಾಗಿ ಅಭಿನಂದಿಸಿ ಹಲವರು ನನಗೆ ಪತ್ರ ಬರೆದಿರುವರು. ಅವನ್ನೆಲ್ಲಾ ಪ್ರತ್ಯಪ್ರತ್ಯೇಕವಾಗಿ ಸ್ವೀಕರಿಸಿ ಆಭಾರ ಸೂಚಿಸಲು ನನಗೆ ಅಸಾಧ್ಯವಾಗಿರುವುದರಿಂದ ಈ ಮೂಲಕ ಎಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಯನ್ನ ಸಿಸುತ್ತೇನೆ

ಆರೂರು ಲಕ್ಷ್ಮೀನಾರಾಯಣ ರಾವ್.

ಉಡುಪಿ, ತಾ. 14—9—36

ದಿವಂಗತ ಜೋರ್ಜ್ ಚಕ್ರವರ್ತಿಗಳ ಸ್ಮಾರಕ ಫಂಡಿನ ಸಹಾಯಾರ್ಥವಾಗಿ ಸ್ಥಳೀಕ ಬೋರ್ಡ್ ಹೈಸ್ಕೂಲಿನ ಯುವಕರಿಂದ "ಸಾವಿನ ಸಮಸ್ಯೆ" ಎಂಬ ಹಾಸ್ಯಪ್ರದ ನಾಟಕವು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಕಳೆದ ತಾ. 12—9 36ರಲ್ಲಿ ಅಭಿನಯಿಸಲ್ಪಟ್ಟಿತು. ಬೋರ್ಡ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಎಚ್. ದೇವರಾಯರ ಡೆನಾಕ್ಟರ್ ರಾಮಕೃಷ್ಣನ ಪಾತ್ರವೂ, ಹೈಸ್ಕೂಲು ವಿದ್ಯಾರ್ಥಿ ಶ್ರೀ ರಂಗನವರ ಗೌರಿಯ ಪಾತ್ರವೂ ಉತ್ತಮವಿದ್ದವು. ರಾಮಕೃಷ್ಣನ ಪಾತ್ರವು, ಚಟುವಟಿಕೆಯಿಂದಲೇ ಅಭಿನಯಿಸಲ್ಪಟ್ಟಿದ್ದಿತು. ನಾಟಕಾಂತ್ಯದಲ್ಲಿ ಡಾಕ್ಟರ್ ಪಚ್ಚಕೋ, ಮತ್ತು ಡಾ| ಟಿ. ಮಾಧವ ಪೈಗಳು, ನಾಟಕದ ಹಣ ಸಂಗ್ರಾಹಕರ ಪರಿಶ್ರಮ, ಅದರ ಧ್ಯೇಯ ಮತ್ತು ಮುಂದೆ ಅದು ವಿನಿಯೋಗವಾಗುವ ರೀತಿಯನ್ನು ವಿವರಿಸಿ ಭಾಷಣವಿತ್ತರು. ಗೌರಿಯ ಪಾತ್ರವನ್ನು ಧರಿಸಿದ್ದ ವಿದ್ಯಾರ್ಥಿ ಶ್ರೀ ರಂಗನವರಿಗೆ ಇಲ್ಲಿಯ ಕಲಾಪ್ರೇಮಿಗಳಾದ ಡಾ. ಯು. ಸುಂದರರಾಮ ಪೈಗಳು ಭಂಗಾರದ ನಡುಕಟ್ಟುಳ್ಳ ರಜತ ಪದಕವೊಂದನ್ನು ಬಹುಮಾನವಿತ್ತದ್ದು ಅನುಸರಣೀಯವಿದೆ. ನಾಟಕದಿಂದ ಸುಮಾರು ರೂ. 600 ರ ವರೆಗೆ ಜಮೆಯಾಗಿರುವದೆಂದು ತಿಳಿದು ಬರುತ್ತದೆ.

ಉಡುಪಿ ಮುನಿಸಿಪಲ್ ಕಮಿಶನರರಾದ ಶ್ರೀಯುತ ಎಸ್. ಯು. ಕೃಷ್ಣ ನಾಯಕರು ತೆರಿಗೆಯ ಪುನರ್ವಿಮರ್ಶೆಗಾಗಿ ಮಾಡಿಕೊಂಡ ಅರ್ಜಿಗಳನ್ನೆಲ್ಲಾ ತಾಳ್ಮೆಯಿಂದ ಪರಿಶೀಲಿಸಿ ಸೇಕಡಾ 40-50ರಂತೆ ತೆರಿಗೆಯನ್ನು ಇಳಿಸಿ ಪಟ್ಟಣಿಗರಲ್ಲಿ ಸಮಾಧಾನವನ್ನುಂಟುಮಾಡಿರುವರೆಂದೂ ಈ ಸಂದರ್ಭಗಳಲ್ಲಿ ಶ್ರೀ ಪಿ. ಮಂಜುನಾಥ ನಾಯಕರು ಧರ್ಮಾರ್ಥವಾಗಿ ಅರ್ಜಿಫೋರ್ಮುಗಳನ್ನೊದಗಿಸಿ ಕೊಟ್ಟು, ಬೇಕಾದ ಮಾಹಿತಿಯನ್ನಿತ್ತು ತೆರಿಗೆದಾರರಿಗೆ ಸಹಾಯಮಾಡಿರುವರೆಂದೂ ತಿಳಿಯುತ್ತೇವೆ.

ಉಡುಪಿಯಲ್ಲಿ ವಾಡಿಕೆಯಂತೆ ಜರುಗುವ ವಿಟ್ಲಪಿಂಡಿ ಮಹೋತ್ಸವವು ಕಳೆದ ತಾ 9-9-36ನೇ ಬುಧವಾರ ವಿಜ್ರಂಭಣೆಯಿಂದ ಜರಗಿತು ವೇಷಗಳ ಸಂಖ್ಯೆಯು ಸಾಧಾರಣವಿದ್ದರೂ ಜನರು ವಿಶೇಷವಾಗಿ ಸೇರಿದ್ದರು. ರಥವು ರಾಷ್ಟ್ರಧ್ವಜದಿಂದ ಅಲಂಕೃತವಾಗಿತ್ತು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಶಾಖೆಯೊಂದು ಇದೇ ತಾ 21ಕ್ಕೆ ಉಪ್ಪಿನಂಗಡಿಯಲ್ಲಿ ತೆರೆಯಲ್ಪಡುವದೆಂದು ತಿಳಿದುಬರುತ್ತದೆ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ 11—9—36

ವ್ಯಾಯಾಮಮಂಡಲದ ನೂತನಭವನ

ಸ್ಥಳೀಯ ಶ್ರೀ ವೀರಮಾರುತಿ ವ್ಯಾಯಾಮ ಮಂಡಲದ ನೂತನ ಭವನದ ಪ್ರವೇಶೋತ್ಸವವು ಕಳೆದ ತಾ. 9ರಲ್ಲಿ ಮಹಾ ವೈಭವದಿಂದ ನೆರವೇರಿತು. ಸಾಹುಕಾರ್ ಯಂ. ರಾಘವೇಂದ್ರ ಪೈಗಳವರು ಅಧ್ಯಕ್ಷಸ್ಥಾನ ವಹಿಸಿದ್ದರು 'ಬ್ರಹ್ಮಚರ್ಯ' ವ್ಯಾಯಾಮದ ಪ್ರಯೋಜನಗಳ ಕುರಿತು ಭಾಷಣಗಳಾದುವು ಅತಿಥಿಗಳಿಗೆ ಫಲಾಹಾರಾದಿ ಸತ್ಕಾರಗಳಾಗಿ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭವು ಕೊನೆಗೊಂಡಿತು

ಜಿಲ್ಲಾ ಬೋರ್ಡಿನ ಸಭೆ:—ದ ಕ ಜಿಲ್ಲಾ ಬೋರ್ಡು ಸಭೆಯು ಬರುವ ತಾ 22ರಲ್ಲಿ ಜರಗುವುದು ಗತವರ್ಷದ ವರದಿಯು ಸಭೆಯ ಮುಂದಿರಿಸಲ್ಪಡುವದು

ಆಗಮನ:—ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರು ಕಳೆದ ಶನಿವಾರ ತಾ. 12ರಲ್ಲಿ) ಮಂಗಳೂರಿಗೆ ಬಂದಿದ್ದು ನಿನ್ನೆಯ ದಿನ 12-30ಕ್ಕೆ ಮಲಬಾರಿಗೆ ಪ್ರಯಾಣಬೆಳೆಸಿದರು ಅಬ್ದುಲ್ಲಾ ಗಾಂದಿ ಮೊದಲಾದವರು ಕೇರಳದಲ್ಲಿ ಮುಸಲ್ಮಾನ ಧರ್ಮಕ್ಕೆ ಹಿಂದುಗಳನ್ನು ಸೇರಿಸುವುದಿಕ್ಕೆ ಯತ್ನಿಸುತ್ತಿದ್ದಾರಷ್ಟೆ ಹಿಂದೂ ಧರ್ಮದ ಪರವಾಗಿ ಚಳವಳ ಹೂಡಿ ಜನರನ್ನು ಹಿಂದೂ ಧರ್ಮದಲ್ಲಿಯೇ ಇರುವಂತೆ ಮಾಡುವುದಕ್ಕೆ ಪಂಡಿತಜೀಯವರು ಯತ್ನಿಸುವರಾಗಿ ತಿಳಿದು ಬರುತ್ತದೆ.

ಸ್ಮಾರಕ ನಿಧಿ:—ಜಾರ್ಜ್ ಸಾರ್ವಭೌಮರ ಸ್ಮಾರಕ ನಿಧಿಗೆ ಕಳೆದ ತಾ 28ರ ವರೆಗೆ ಸೇರಿದರೂ 8956—5—3 ಎಂದು ಗೊತ್ತಾಗಿದೆ

ವೈದ್ಯಕೀಯ ಸಭೆ:—ಜಿಲ್ಲಾ ವೈದ್ಯಕೀಯ ಸಂಘದ (ಮೆಡಿಕಲ್ ಅಸೋಸಿಯೇಶನ್) ವಾರ್ಷಿಕ ಸಭೆಯು ವೆನ್‌ಲಾಕ್ ಆಸ್ಪತ್ರೆಯ ವಠಾರದಲ್ಲಿ ಬರುವ ಶನಿವಾರ (ತಾ 19ರಲ್ಲಿ) ಜರಗಲಿರುವುದು

ರಾಜಕೀಯ ಕೈದಿಗಳ ದಿನಾಚರಣೆ:—ರಾಷ್ಟ್ರಪತಿ ಪಂ ಜವಹರಲಾಲ ನೆಹರುಗಳವರು ಆಜ್ಞೆಕೊಡಿಸಿರುವ ಮೇರೆಗೆ ಅಖಿಲ ಭಾರತದಲ್ಲಿ ರಾಜಕೀಯ ಕೈದಿಗಳ ದಿನಾಚರಣೆಯು ಆಚರಿಸಲ್ಪಟ್ಟಂತೆಯೇ ಮಂಗಳೂರಲ್ಲಿಯೂ ನಡೆಯಿತು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯಿನಿಯರ ಮೈದಾನದಲ್ಲಿ ನಡೆದ ಮಹಾಸಭೆಯಲ್ಲಿ ಅಗ್ರಾಸನ ವಹಿಸಿದ್ದರು ಶ್ರೀಮಾನ್ ಕೆ. ಹೈದರರವರು ಆ ದಿನದ ಪ್ರಾಮುಖ್ಯತೆಯನ್ನು ವಿವರಿಸಿ ಹಿಂದೂಸ್ಥಾನದಲ್ಲಿ ರಾಜಕೀಯ ಕೈದಿಗಳು ಅನುಭವಿಸುವ ಸಂಕಷ್ಟಗಳಲ್ಲಿ ಹಲವನ್ನು ನಿದರ್ಶನರೂಪವಾಗಿ ಹೇಳಿ, ಹಿಂದೀಯರೆಲ್ಲರೂ ಚಳವಳ ಹೂಡಿ ರಾಜಕೀಯ ಕೈದಿಗಳಿಗೆ ಕೊಡತಕ್ಕ ಕಷ್ಟಗಳನ್ನು ನೀಗಿಸುವುದಕ್ಕೆ ಯತ್ನಿಸಬೇಕೆಂದು ಹೇಳಿ ಸಭೆಯ ಮುಂದೆ ಕೆಲವು ಮುಖ್ಯ ಠರಾವುಗಳನ್ನು ಓದಿದರು. ಶ್ರೀ ತಿಂಗಳಾಯರು ಅವುಗಳನ್ನು ಅನುಮೋದಿಸಿದರು ಈ ಸಂದರ್ಭದಲ್ಲಿ ಶ್ರೀ ಗಳಾದ ಕೆ ಕೃಷ್ಣರಾಯರೂ, ಬಿ ಲಕ್ಷ್ಮಣದೇವ ವಿದ್ಯಾರ್ಥಿಯವರೂ ಮತ್ತು ಅಪ್ಪಾಜಿ ಸುವರ್ಣರೂ ಸಮಯೋಚಿತ ಭಾಷಣವಿತ್ತರು ಅಧ್ಯಕ್ಷಿಣಿಯರಾದ ಶ್ರೀಮತಿ ಕಮಲಾದೇವಿಯವರು, ನಮ್ಮ ಅಖಿಲ ಭರತ ಖಂಡವೇ ಒಂದು ದೊಡ್ಡ ಜೈಲಾಗಿದೆಯೆಂದೂ, ಅದರೊಳಗೆ ಸಣ್ಣ ಸಣ್ಣ ಜೈಲುಗಳು ಅನೇಕ ಇವೆಯೆಂದೂ ಹೇಳಿ ಜತೀಂದ್ರನಾಥ ದಾಸರು ತಮ್ಮ ಸ್ವಾರ್ಥಕ್ಕಾಗಿ ಪ್ರಾಣತ್ಯಾಗ ಮಾಡಿಲ್ಲವೆಂದೂ, ರಾಜಕೀಯ ಕೈದಿಗಳಿಗೆ ಸರಿಯಾದ ರೀತಿಯ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಸರಕಾರಕ್ಕೆ ತಿಳಿಸುವ ಉದ್ದೇಶದಿಂದ 61 ದಿನಗಳ ನಿರಶನ ವ್ರತವನ್ನಾಚರಿಸಿ ದೇಹತ್ಯಾಗ ಮಾಡಿದರೆಂದೂ ಆದಕಾರಣ ಅವರ ಸ್ಮರಣೆ ಮಾಡುವ ಸಂದರ್ಭದಲ್ಲಿ ಈ ತೆರನಾದ ಸಂಕಷ್ಟಕ್ಕೆ ಕೈದಿಗಳು ಬೀಳದಂತೆ ಮಾಡಲು ನಾವೆಲ್ಲರೂ ಯತ್ನಿಸಬೇಕೆಂದು ತಿಳಿಸಿದರು. ಕೈದಿಗಳನ್ನು ಒಂದೊಂದು ತರಗತಿಗೆ ಸೇರಿಸುವುದು ಸರಿಯಲ್ಲವೆಂದೂ, ಎಲ್ಲರನ್ನೂ ಒಂದೇ ತರಗತಿಗೆ ಸೇರಿಸಬೇಕೆಂದೂ, ಕೈದಿಗಳಿಗೆ ಪತ್ರಿಕೆಗಳನ್ನು (ಅವರಿಗೆ ಇಷ್ಟವಿರುವ) ಕೊಡಿಸಬೇಕೆಂದೂ, ಅವರ ಸ್ನೇಹಿತರೊಡನೆ ಸಂಭಾಷಣೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದೂ, ಅಂಡಮಾನ ದ್ವೀಪಗಳಿಗೆ ಕಳುಹಿಸುವುದು ತಪ್ಪೆಂದೂ ಇವೇ ಮೊದಲಾದ ಠರಾವುಗಳು ಮಂಜೂರಾದವು ಕೊನೆಗೆ ಡಾ। ಸುಂದರ್ ಲೇಂಡರ ನಿಧನಕ್ಕಾಗಿ ದುಃಖ ಪ್ರದರ್ಶಿಸುವ ಠರಾವೂ ಮಂಜೂರಾಯಿತು ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು

ಸುರತ್ಕಲ್:—ಇಲ್ಲಿಯ "ಹಿಂದು ವಿದ್ಯಾದಾಯಿನೀ ಸಂಘ"ದವರು ಒಂದು "ಅನಾಥಾಲಯ"ವನ್ನು ತೆರೆಯುವ ಪ್ರಕೃತ ದಿನಾಚಾನದ ಕಷ್ಟಕ್ಕೀಡಾಗಿರುವ ಶಾಲೆಯ ಸಹಾಯಾರ್ಥವಾಗಿ ರೂಪ್ಯಾ 50,000/- ಒಂದು ಲೋಟರಿಯನ್ನು ಏರ್ಪಡಿಸಿರುತ್ತಾರೆ. ಆ ಲೋಟರಿಯು ಇದೇ ಬರುವ ತಾರೀಕು 17-1-1937ಕ್ಕೆ ತೆಗೆಯಲ್ಪಡುವುದು ಉದಾರಿಗಳೂ ವಿದ್ಯಾಭಿಮಾನಿಗಳೂ ಆದ ಮಹನೀಯರೆಲ್ಲರೂ ಈ ಉದ್ಯಮಕ್ಕೆ ತಮ್ಮ ಕೊಡುಗೈಯ ಬೆಂಬಲವನ್ನಿತ್ತು ವಿದ್ಯೆಯ ಹಾಗೂ ದೀನ ಜನರ ಸತ್ಕಾರ್ಯವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ ಇದೆ

ಹೇರೂರು:—(ಬ್ರಹ್ಮಾವರ) ಇಲ್ಲಿನ ಬೋರ್ಡು ಎಲಿಮೆಂಟರಿ ಶಾಲಾ ಹೊಸ ಕಟ್ಟೋಣ ಪ್ರವೇಶ ಸಮಾರಂಭವು ತಾ. 31-8-1936ರಲ್ಲಿ, ಗ್ರಾಮ ಪಟೇಲ್ ಶ್ರೀಯುತ ಅಚ್ಚಣ್ಣ ಸಟ್ರಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು ಬಾಲಕರ ಪ್ರಾರ್ಥನಾನಂತರ, ದಾ ಬಿ ಶೀನಪ್ಪ ಶೆಟ್ರು, ಗ್ರಾಮ ಸಂಘಟನೆ, ಹಳ್ಳಿಯಶಾಲೆಗಳ ಅಭಿವೃದ್ಧಿ, ವಿದ್ಯೆಯ ಮಹತ್ವಿಕೆ ಎಂಬೀ ವಿಷಯಗಳ ಕುರಿತೂ ಅಧ್ಯಕ್ಷರು ಶಾಲೆಗೆ ಯೋಗ್ಯವಾದ ಕಟ್ಟೋಣವಿಲ್ಲದೆ ಅದರ ಅಭಿವೃದ್ಧಿಗೆ ಕೊರತೆಯುಂಟಾಗಿರುವ, ಇನ್ನು ಮುಂದಾದರೂ ಗ್ರಾಮಸ್ಥರು ವಿದ್ಯೆಯ ಕಡೆಗೆ ಲಕ್ಷ್ಯವಿಡಬೇಕೆನ್ನುವ ಕುರಿತೂ ಭಾಷಣವಿತ್ತರು ಮುಖ್ಯೋಪಾಧ್ಯಾಯರ ಧನ್ಯವಾದ ಆದ ನಂತರ ಫಲಾಹಾರ ಸತ್ಕಾರಾದಿಗಳಿಂದ ಸಭೆಯು ವಿಸರ್ಜಿಸಲಾಯ್ತು.

ಸಂಪಾಜೆ:—ಕಳೆದ ತಾ 28 8-36 ರಲ್ಲಿ ಉತ್ತರ ಕೊಡಗು ತಾಲೂಕು ಭಾಗಮಂಡ್ಲನಾಡು ಸಂಪಾಜೆನಾಡು ಊರುಬೈಲು ಚೆಂಬುಗ್ರಾಮದ ಗ್ರಾಮಸ್ಥರ

S. U. PANIADY
Managing Director
SUPPLY AGENCY LTD.
Director — The Canara Land Investments, Ltd
Director — The Canara Mutual Assurance Co Ltd
Ex Secretary — Udipi Taluk Congress Committee
Ex Member Karnataka Provincial Congress Committee
& All India Congress Committee
1st Dictator of the Satyagraha Movement
at Udipi in 1930.

ಇದೇ ಬರುವ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿ ಚುನಾವಣೆಯಲ್ಲಿ

ಕುಂದಾಪುರ ಡಿವಿಜನಿಗಿರುವ

ಒಂದು ಜನರಲ್ ಸೀಟಿಗೆ

ಅನೇಕ ಮತದಾರರ ಅಪೇಕ್ಷೆ ಮೇರೆಗೆ

ನಾನು ಉಮೇದುವಾರನಾಗಿ ನಿಲ್ಲುವದೆಂದು

ನಿಶ್ಚಯಿಸಿದ್ದೇನೆ.

ಕುಂದಾಪುರ ಡಿವಿಜನಿನ ಮತದಾರರ ಹಿತದ ದೃಷ್ಟಿಯಿಂದಲೂ ಕೇವಲ ಮತದಾರರ ಪ್ರೋತ್ಸಾಹದಿಂದಲೂ ನಿಲ್ಲುವುದರಿಂದ ಯಾವ ಪಾರ್ಟಿಯ ಪರವಾಗಿಯೂ ನಿಲ್ಲದೆ ಕೇವಲ ಸ್ವತಂತ್ರನಾಗಿಯೇ ಉಮೇದುವಾರನಾಗಿ ನಿಲ್ಲುವೆನು.

ಆದುದರಿಂದ ಕುಂದಾಪುರ ಡಿವಿಜನಿನ

ಎಲ್ಲಾ ಮತದಾರರು ತಮ್ಮ ಸಹಕಾರವನ್ನು

ನನಗೆ ಕೊಡಬೇಕಾಗಿ ವಿನಂತಿ.

ಉಡುಪಿ, 5—9—1936 } ಎಸ್. ಯು. ಪಣಿಯಾಡಿ.

ಒಂದು ಸಭೆಯು ಸಂಪಾಜೆ ಶೀನಪ್ಪ ರೈ ದೇಶ ಕೋಡಿಕಾರರವರ ಮಗ ಸಂಪಾಜೆ ಮುಂಡಪ್ಪರೈ ದೇಶ ಕೋಡಿಕಾರರ ಅಧ್ಯಕ್ಷತೆಯಲ್ಲಿ ಸ್ಥಳಿಕ ಶಾಲಾ ಕಟ್ಟೋಣದಲ್ಲಿ ಜರಗಿತು. ಸುಮಾರು ಇನ್ನೂರು ಜನಕ್ಕೂ ಮಿಕ್ಕಿ ಹಾಜರಿದ್ದರು. ವಿದ್ಯೆಯ ಮಹತ್ವ ಗ್ರಾಮಾಭಿವೃದ್ಧಿಗಳ ಕುರಿತು ಬೈಮನೆ ಪೊನ್ನಪ್ಪ, ಕೀಲಾರು ಬಾಲಕೃಷ್ಣ, ಹೊಸೂರು ಲಿಂಗಪ್ಪಗೌಡ ಮೊದಲಾದವರು ಭಾಷಣವಿತ್ತರು.

ಮೂಲ್ಕಿ:—1935ರಲ್ಲಿ ಜರಗಿದ 'ದಿ ಮೂಲ್ಕಿ ಯೂನಿಯನ್ ಕ್ಲಬ್ಬಿನ ವಾರ್ಷಿಕ ಸಭೆಯಲ್ಲಿ ನಿರ್ಧರಿಸಿದಂತೆ, 13ವರ್ಷಗಳಿಂದಲೂ ನಿಸ್ವಾರ್ಥತೆಯಿಂದ ಗೌ. ಕಾರ್ಯದರ್ಶಿ ಕೆಲಸವನ್ನು ನಿರ್ವಹಿಸುತ್ತಿದ್ದ ಶ್ರೀ ಭೋಜರಾಯರಿಗೆ ಗೌರವಾರ್ಥವಾಗಿ ರೂ. 101ನ್ನು ಕೊಟ್ಟುದನ್ನು ಶ್ರೀಯುತರು ಸ್ವೀಕರಿಸದೆ, ಕ್ಲಬ್ಬಿಗೆ ತನ್ನ ಹೆಸರಲ್ಲಿ ಬರಹ ಮೂಲಕ ದಾನವಿತ್ತಿರುವದು ಅಭಿನಂದನೀಯವಿದೆ. ಕ್ಲಬ್ ಕಮಿಟಿಯು ಅವರ ಉದಾರ ದಾನವನ್ನು ಆದರಪೂರ್ವಕ ಸ್ವೀಕರಿಸಿ, ಶ್ರೀ ಭೋಜರಾಯರನ್ನು ಕ್ಲಬ್ಬಿನ ಆಜನ್ಮ ಸಭಾಸದರಾಗಿಯೂ, ಪೋಷಕರಾಗಿಯೂ ನೇಮಿಸಿಕೊಂಡಿತು.

ತಾ. 13-8-36ರಲ್ಲಿ ಹುಲಿಯನ್ನು ಕುಡುಗೋಲಿನಿಂದ ತಿವಿದು ಕೊಂದ ಶ್ರೀ ಮುತ್ತಯ ಶೆಟ್ರಿಗೆ ರೂ. 20 ಬಹುಮಾನವು ಸರಕಾರದಿಂದ ದೊರೆತಿರುವದೆಂದು ತಿಳಿದು ಬರುತ್ತದೆ

ತಾ. 20-8-36ರಲ್ಲು ಮೂಲ್ಕಿ ಹೊಳೆಯಲ್ಲಿ ಮುಳುಗುತ್ತಿದ್ದು ರಕ್ಷಿಸಲ್ಪಟ್ಟ ಹೆಂಗಸಿನ ವಿಚಾರಣೆನಡೆದು ಆತ್ಮಹತ್ಯೆಯ ಪ್ರಯತ್ನವಲ್ಲವೆಂದು ಬಿಡುಗಡೆಯಾಗಿದೆ.

ಬ್ರಹ್ಮಾವರ:—ಇಲ್ಲಿ ಜುಗಾರಾಟ, ಕಳವು, ಖೂನಿ ಮೊದಲಾದವು ಹೆಚ್ಚುತ್ತಿವೆ ಯೆಂದೂ ಅಧಿಕಾರಿಗಳು ಈ ಕಡೆಗೆ ಹೆಚ್ಚಿನ ಗಮನಕೊಡುವುದು ಆಗತ್ಯವೆಂದೂ ಒಂದು ವಾರ್ತೆ

ಕಾಸರಗೋಡಿಗೆ ಅಬ್ದುಲ್ಲಾ ಗಾಂಧಿಯವರ ಆಗಮನ.

ಮಹಾತ್ಮಾಗಾಂಧಿಯವರ ಮಗ ಅಬ್ದುಲ್ಲಾ ಗಾಂಧಿಯವರು ಕಳೆದ ಆದಿತ್ಯವಾರ ಮುಸಲ್ಮಾನರ ಆಮಂತ್ರಣದ ಮೇರೆಗೆ ಕಾಸರಗೋಡಿಗೆ ಬಂದಿದ್ದರು.

ನಾರದನ ತಂಬೂರಿ

ನರ ನಾರಾಯಣ, ನರ ನಾರಾಯಣ! ನರ ನಾರಾಯಣ ಎನು ಮನವೆ!! ಟುಂ, ಟುಂಯಿ ಡುಂಯಿೂ!! ನರ ನಾರಾಯಣ! ನರ ನಾರಾಯಣ!! ಕಳೆದ ವಾರ ಬರುತ್ತೇನೆಂದು ಹೇಳಿ ಹೋಗಿದ್ದೆ ನಲ್ಲ-ಬಂದೇಬಿಟ್ಟೆ. ಇನ್ನು ಮುಂದೆ 'ನಾರದ ಸುಳ್ಳುಗಾರ'ಎಂದು ಯಾರಾದರೂ ಹೇಳಿದರೆ ನಂಬಬೇಡಿ; ನರ ನಾರಾಯಣ!

* * * * * *

ಏನಾದರೂ ವರ್ತಮಾನ ಸಿಕ್ಕುವದೋ ಎಂದು ತಿರುಗುತ್ತಿದ್ದಾಗ ನವಯುಗದ ಆಫೀಸಿನಲ್ಲೊಂದು ನ್ಯೂಸ್ ಸಿಕ್ಕಿತು ರಾಯರೆ! ನಾನು ಹೋದ ಸಲ ಮರುಗಿದ್ದೆನಲ್ಲಾ-"ಈ ಕಲಿಕಾಲದಲ್ಲಿ ನಾನು ಹೇಳಿದಂತೆ ಹೇಳುವವರಿಲ್ಲ" ಎಂದು. ಯಾರೂ ಇಲ್ಲವೆಂದು ನೆನಸಬೇಡಿ. ಡಾ. ಆಚಾರ್ಯರು ನಾನು ಹೇಳಿದಂತೆಯೇ ಹೇಳುತ್ತಾರೆ ಸ್ವಾಮಿೂ! ಸಂತೋಷವಾಯಿತು-ಟುಂಯಿೂ, ಟುಂಯಿೂ, ನರ ನಾರಾಯಣ!

* * * * * *

ನೋಡಿ ರಾಯರೆ! ನಾನು ಹೇಳಿದ್ದು ಇಷ್ಟೆ. ಡಾ. ಆಚಾರ್ಯರಿಗೆ "ಮುನಿಸಿಪಾಲಿಟಿ ಬೇಡ-ಅದರ ಮೆಂಬರಿಕೆ ಬೇಕು" ಅವರು ಹೇಳುವದೂ ಅದನ್ನೆ "ಮುನಿಸಿಪಾಲಿಟಿ ಬೇಡ; ಅದು ಇದ್ದರೆ ಮೆಂಬರಿಕೆ ಬೇಕು"! ನರನಾರಾಯಣ! ನರ ನಾರಾಯಣ!!

* * * * * *

ಉಡುಪಿಗೆಪಂಚಾಯತ್ ಬೋರ್ಡು ಮಾಡುವ ಸೂಚನೆಯನ್ನು ರಾ। ಮೊಳಹಳ್ಳಿಯವರು ಜಿಲ್ಲಾ ಬೋರ್ಡಿನಲ್ಲಿ ತಂದಾಗ ಮ। ರಾ। ರಾ। ಆಚಾರ್ಯರು ವಿರೋಧಿಸಿದ್ದರೆಂದು ಹೇಳಿದ್ದೆನಲ್ಲ. ಅದನ್ನೂ ಅವರೊಪ್ಪುತ್ತಾರೆ ಸ್ವಾಮಿೂ! 'ಆಗಬೇಡ! ಈಗಬೇಕು'! ಆದರೆ ಒಂದು ವಿಶೇಷ ಉಂಟು ನೋಡಿ-ನನಗೆ ಆ 'ಬೇಡ'-ಬೇಕೆ'ನ ಕಾರಣ ಗೊತ್ತಿರಲಿಲ್ಲ. ಆ ರೋಗದ ಕಾರಣ ಡಾಕ್ಟರರಿಗೆ ಗೊತ್ತುಂಟು-ಕೇಳಿಬಿಡಿ ಸ್ವಾಮಿೂ!

* * * * * *

ಡಾ। ಆಚಾರ್ಯರ ಹೇಳಿಕೆಯಿಂದ ಅರ್ಥವಾಗುತ್ತದೆ-ಪಂಚಾಯತ್‌ಬೋರ್ಡು ಬೇಡವೆಂಬುದಕ್ಕೆ ಉಡುಪಿಯ ಇತರ ಮೆಂಬರರೂ ಸಮ್ಮತಿಸಿದ್ದಾರೆಂದು. ಜಿಲ್ಲಾ ಬೋರ್ಡಿನ ಆಡಳಿತೆಯಲ್ಲೇ ಇವರಿಗೆಲ್ಲಾ ತೃಪ್ತಿಯಿತ್ತಂತೆ! ಇರಲಪ್ಪಾ!! ಕೊನೆಗೆ ಈ ಮಹಾ ತೃಪ್ತಿಯನ್ನು ಭಂಗಿಸಿದ ವಿದ್ಯಮಾನದ ವಿಚಿತ್ರವನ್ನೂ ಕೇಳಿ ಮಹಾಜನರೆ! ನರ ನಾರಾಯಣ! ನರ ನಾರಾಯಣ!!

* * * * * *

ಒಂದೂವರೆ ವರ್ಷದ ವರೆಗೆ(ನಮ್ಮ ದೇವಲೋಕದಲ್ಲಾದರೆ ಕಣ್ಣು ಮುಚ್ಚಿ ತೆರೆಯುವ ಕಾಲ) ಉಡುಪಿ ಸೆನಿಟರಿ ಖಾತೆಯ ವಿಚಾರಣೆಯ ಅಧಿಕಾರವನ್ನು ಜಿಲ್ಲಾ ಬೋರ್ಡಿನವರು ಡಾ। ಆಚಾರ್ಯರಿಗೆ ಕೊಟ್ಟಿದ್ದರಲ್ಲ-ಆ ಅನುಭವದಿಂದ ಗೊತ್ತಾಯಿತಂತೆ 'ಉಡುಪಿಗೊಂದು ಪಂಚಾಯತ್ ಬೋರ್ಡು ಬೇಕು' ಎಂದು. ಹೀಗೆ ಅಭಿಪ್ರಾಯ ಬದಲಾವಣೆ ಮಾಡುವದು ತಪ್ಪಲ್ಲವೆನ್ನುತ್ತಾರೆ ಅವರು; ಅದು ಸರಿಯೆಂದು ನಾನೂ ಒಪ್ಪುತ್ತೇನಯ್ಯ! ನನ್ನ ಮಾತನ್ನು ಅವರೂ ಅವರ ಮಾತನ್ನು ನಾನೂ ಈವರೆಗೂ ಒಪ್ಪಿಕೊಂಡೇ ಬಂದಂತಾಯಿತಲ್ಲ; ಇನ್ನು ಕೇಳಿ. ನರ ನಾರಾಯಣ!

ಪ್ರಥಮತಃ ಪಂಚಾಯತ ಬೋರ್ಡು ಬೇಡ ಎಂದವರು ಒಂದೂವರೆವರ್ಷದ ಅನುಭವದ ನಂತರ ಈಗ ಬೇಕೆನ್ನುತ್ತಿದ್ದಾರಲ್ಲಾ ಹೇಗೆ ಮತದಾರರೆ? ಮುನಿಸಿಪಾಲಿಟಿಯು ಪ್ರಾರಂಭವಾದ ಈ ಕಾಲದಲ್ಲಿ ಅದು ಬೇಡವೆನ್ನುತ್ತಿದ್ದಾರಲ್ಲಾ ಡಾ। ಆಚಾರ್ಯರು; ನಿಮ್ಮ ಅಭಿಪ್ರಾಯ ಹೇಗೆ-ಇನ್ನು ಒಂದುವರೆ ವರ್ಷ ಕಾದು ನೋಡೋಣವೇ?

ಜಗಳಮಾಡಿಸುವ, ಮಾಡುವ-ಎರಡು ದುರಭ್ಯಾಸಗಳನ್ನೂ ಹಿಂದಿನ ಯುಗಗಳಲ್ಲೇ ಬಿಟ್ಟದ್ದೇನೆ ಸ್ವಾಮಿೂ! ಡಾ। ಆಚಾರರಲ್ಲಿ ವೈಯಕ್ತಿಕವಾಗಿ ನನಗೇನೂ ನೋವಿಲ್ಲ ನೋಡಿ! ಆದರೆ......ಹೇಳಿಬಿಡಲೇ? ಆ ಕಾಲದಲ್ಲಿ ರಾ। ಮೊಳಹಳ್ಳಿ ಶಿವರಾಯರ ಠರಾವಿಗೆ ಬೆಂಬಲವೀಯುತ್ತಿದ್ದರೆ ಉಡುಪಿಗೊಂದು ಪಂಚಾಯತ್ ಬೋರ್ಡು ಆಗಿ ಹೋಗುತ್ತಿತ್ತು ನೋಡಿ. ಬೇಕಾದುದನ್ನು ಬೇಡವೆಂದು ಬಿಟ್ಟರೆ ಆ ಮೇಲೆ ಬೇಡವಾದುದೇ ಬರಬೇಕಲ್ಲ! ನಾರದನ ಮಾತು ಹೌದೋ ನೋಡಿ! ನರ ನಾರಾಯಣ! ನರ ನಾರಾಯಣ!!

* * * * * *

ನಮ್ಮ ದಿವಂಗತ ಜೋರ್ಜ್ ಚಕ್ರವರ್ತಿಗಳ ಸ್ಮಾರಕನಿಧಿಗಾಗಿ 'ಸಾವಿನ ಸಮಸ್ಯೆ' ಎಂಬ ನಾಟಕವು, ನಮ್ಮ ಜಿಲ್ಲೆಯ ಬಡಬಗ್ಗರ ಸಾವಿನ ಸಮಸ್ಯೆಯನ್ನು ಬಿಡಿಸುವ ಫಂಡಿನ ಸಹಾಯಾರ್ಥವಾಗಿ ಸ್ಥಳೀಕ ಬೋರ್ಡು ಹೈಸ್ಕೂಲಿನವರಿಂದ ಮೊನ್ನೆ ತಾ. 12ರಲ್ಲಿ ನಮ್ಮ ರಾಮಕೃಷ್ಣ ಥಿಯೇಟರಿನಲ್ಲಿ ಅಭಿನಯಿಸಲ್ಪಟ್ಟಿತಯ್ಯ! ಹೊಟ್ಟೆಪಾಡಿಗಾಗಿ ಅರಸನಿಂದ ಹಣ ಪಡೆಯಲು ತೆನ್ನಾಲ ದಂಪತಿಗಳು ಸತ್ತು ಬದುಕಿದ ನಾಟಕವದು! ಈ ಕಾಲದಲ್ಲಿ ಹೊಟ್ಟೆಗಾಗಿ ಹೀಗೆ ಸಾಯುವವರನ್ನು ನಾನು ಎಲ್ಲಾ ಕಡೆಗಳಲ್ಲಿಯೂ ಕಾಣುತ್ತಿದ್ದೇನೆ. ಆದ್ದರಿಂದ ಆದರಲ್ಲೇನೂ ವಿಚಿತ್ರವಿಲ್ಲವೆನ್ನಿ! ನರ ನಾರಾಯಣ! —ನಾರದ.

ಶ್ರೀ ರಾಮಾರೆಸ್ಟೋರೆಂಟ್

ಉಡುಪಿ.

ಊಟ ಉಪಹಾರಗಳ ರುಚಿ! ಸ್ಥಳ ಆಸನಗಳ ಶುಚಿ !!

ಶಾಲಾ ವಿದ್ಯಾರ್ಥಿಗಳ ಅನುಕೂಲತೆ, ಪ್ರವಾಸಿಕರಿಗೆ ಅತ್ಯುತ್ತಮ ಸೌಕರ್ಯ ಇವೆಲ್ಲಾ ಇರುವ ಒಂದೇ ಒಂದು ವಿಶ್ರಾಂತಿಗೃಹವೆಂದರೆ ಶ್ರೀ ರಾಮಾರೆಸ್ಟೋರೆಂಟ್! ಸುಲಭ ದರದಲ್ಲಿ ಅತ್ಯುತ್ತಮ ತಿಂಡಿ ಪಾನೀಯಗಳು; ಆತ್ಯಾರೋಗ್ಯಕರ ಊಟ ಇವುಗಳಿಗೆ ನಮ್ಮ ಅನುಭವಪೂರ್ಣ ಮೇಲ್ವಿಚಾರಣೆ. ಹೀಗಾಗಿ ನಿಮಗೆಲ್ಲಾ ಸುಖವೇ ಸುಖ! ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡ್ ಮತ್ತು ಕೋಳದಪೇಟೆ ರೋಡ್ ಮಿಲನವಾದಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಿಸಿರುವ ದಿವ್ಯವಾದ ಮಂದಿರದಲ್ಲಿರುವ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿನೋಡಿರಿ.

ಎಚ್. ಗೋಪಾಲ ನಾಯರ್,

ಪ್ರೊಪ್ರೈಟರ್.

DEFEND YOUR OWN INTEREST

BY BANKING WITH THE

UDIPI BANK, Ltd.

UDIPI

ALL KINDS OF BANKING BUSINESS UNDERTAKEN

ESTD: 1925

ನಾನು ಸನಾತನಿಯಲ್ಲವೇ?

ಮೊನ್ನೆ ಏನೋ ಮರವೋಹಿಯಿಂದ ಏಕಾದಶಿ ದಿನದಲ್ಲಿ ಅಕ್ಷತೆ ಹಾಕಿಬಿಟ್ಟೆ. ಇದನ್ನು ರಾಮಾಚಾರ್ಯರು ನೋಡಿ ನನ್ನನ್ನು ಸುಧಾರಕನೆಂದುಬಿಟ್ಟರು. ನನಗೆಷ್ಟು ದುಃಖವಾಗಲಿಕ್ಕಿಲ್ಲ ನೀವೇ ಯೋಚಿಸಿರಿ. ಮರವೋಹಿಯಿಂದ ಹಾಗಾಗಿ ಹೋಯಿತು. ಇಲ್ಲದಿದ್ದರೆ ಏಕಾದಶಿ ದಿನ ಅಕ್ಷತೆ ಹಾಕಬಾರದೆಂದು ನನಗೆ ತಿಳಿಯದೆ? ನಾನೇನು ಅಷ್ಟು ಅಜ್ಞಾನಿಯೊ? ಸನಾತನ ಧರ್ಮವೇನೆಂದು ರಾಮಾಚಾರ್ಯರಷ್ಟೇ ನನಗೂ ಗೊತ್ತಿದೆ. ಪಂಚಮರನ್ನು ಸ್ಪರ್ಶಿಸಬಾರದೆಂದು ನಾನೂ ಭಾಷಣಕೊಟ್ಟಿದ್ದೆ. ಅವರು ದೇವಸ್ಥಾನದೊಳಗೆ ಪ್ರವೇಶಿಸಬೇಕೆಂಬ ಚಳವಳಿ ಪ್ರಾರಂಭವಾದಾಗ ಅದಕ್ಕೆ ವಿರುದ್ಧವಾಗಿ ಮಾಡಿದ ಭಜನೆಗೆ ನಾನೂ ಸೇರಿದ್ದೆ. ಹರಿವಿಲಾಸರ ಬಾಲ್ಯವಿವಾಹವನ್ನು ನಿರ್ಬಂಧಿಸುವ ಕಾನೂನಿಗೆ ವಿರೋಧವಾಗಿ ನಾನೂ ದಸ್ಕತು ಕೊಟ್ಟಿದ್ದೆ. ಅಷ್ಟೇ ಏಕೆ? ಆ ಕಾನೂನು ಜಾರಿಯಲ್ಲಿರುವಾಗಲೇ ನನ್ನ ಎಂಟು ವರುಷದ ಮಗಳಿಗೆ ಮದುವೆ ಮಾಡಿದ್ದೆ. ವಿಧವಾ ವಿವಾಹವನ್ನು ನಾನೂ ಆಕ್ಷೇಪಿಸಿದ್ದೆ. ಮತಗಳನ್ನು ಸುಧಾರಿಸಬೇಕೆಂಬ ಚಳವಳಿಕ್ಕೆ ನಾನೂ ಎದುರಾಗಿದ್ದೆ. ಸಂದೇಶ ಪತ್ರಿಕೆಯನ್ನು ನಾನೂ ತರಿಸುತ್ತಿದ್ದೇನೆ. ಇಷ್ಟಿದ್ದರೂ ನಾನು ಸನಾತನಿಯಲ್ಲವೆಂತಾದರೆ ಇನ್ನು ಸನಾತನಿ ಯಾರು?

ನನ್ನನ್ನು ಸುಧಾರಕನನ್ನಲಿಕ್ಕೆ ನಾನೇನು ತಲೆ ಕ್ರಾಪು ಮಾಡಿಸಿದ್ದೇನೋ? ವಾರಕ್ಕೊಮ್ಮೆ ಮುಖಕ್ಷೌರ ಮಾಡಿಸುತ್ತಿದ್ದೇನೋ? ಊರಲ್ಲಿ ತಿರುಗುವಾಗಲೂ ಶರ್ಟು ಹಾಕಿಕೊಳ್ಳುತ್ತೇನೋ? ದಿನಕ್ಕೆರಡು ಸಲ ಕಾಫಿ ಕುಡಿಯುತ್ತೇನೋ? ಸೋಡ ಕುಡಿಯುತ್ತೇನೋ? ನಾಟಕ ಸಿನಿಮಾಗಳಿಗೆ ಹೋಗುತ್ತೇನೋ? ಸಿಗರೇಟು ಎಳೆಯುತ್ತೇನೋ? ಪೇಪರ್ ಓದುತ್ತೇನೋ? ಬಸ್ಸಿನಲ್ಲಿ ತಿರುಗಾಡುತ್ತೇನೋ? ಮತ್ತೆ ನಾನು ಸುಧಾರಕನೆಂದು ರಾಮಾಚಾರ್ಯರು ಹೇಗೆ ಹೇಳಿಬಿಟ್ಟರು? ಅದೇನು ಸುಧಾರಕರು ಏಕಾದಶಿ ದಿನ ಅಕ್ಷತೆ ಹಾಕಿಕೊಳ್ಳುತ್ತಾರೆಯೋ? ಸುಧಾರಕರಿಗೆ ಏಕಾದಶಿ ದ್ವಾದಶಿಯೆಂಬ ಭೇದವಿಲ್ಲವೋ? ಏನನ್ಯಾಯದ ಮಾತು ಸ್ವಾಮಿ.

ನಮ್ಮ ಸನಾತನಿಗಳಲ್ಲಿ ಇದೇ ಒಂದು ದೊಡ್ಡ ತಪ್ಪು ನೋಡಿ. ಒಬ್ಬನಿಗೊಬ್ಬನು ಸಣ್ಣ ಸಣ್ಣ ವಿಚಾರಗಳಲ್ಲಿಯೂ ಹೀಯಾಳಿಸುತ್ತಾರೆ. ಸನಾತನಿಗಳಲ್ಲಿ ಐಕ್ಯವಿಲ್ಲವೆಯ್ಯಾ ಐಕ್ಯವಿಲ್ಲ. ಪರಸ್ಪರ ಸ್ನೇಹವಿಲ್ಲ. ನಮ್ಮ ದೇವರುಗಳಲ್ಲಿರುವಂತೆಯೂ ನಮ್ಮಲ್ಲಿಯೂ ಯಥೇಷ್ಟವಿದೆ ತಾರತಮ್ಯ! ಸುಧಾರಕರಲ್ಲಾದರೆ ನೋಡಿ ಎಷ್ಟು ಸ್ನೇಹ, ಎಷ್ಟು ಐಕ್ಯವಿದೆ. ಒಬ್ಬೊಬ್ಬರೇ ಕಾಫಿ ಹೋಟೆಲಿಗೆ ಹೋಗುವುದಿಲ್ಲ, ತನ್ನೊಟ್ಟಿಗೆ ಇರುವವರೆಲ್ಲರೂ ತನ್ನ ಒಟ್ಟಿಗೆ ಬರಬೇಕು. ಅವರಲ್ಲಿ ಸುರುವಿಗೆ ಹೊರಗೆ ಬರುವವನೇ ಎಲ್ಲರ ಬಿಲ್ಲೂ ಕೊಟ್ಟು ಬಿಟ್ಟ. ತಾನೊಬ್ಬನೇ ಒಂದು ಬೀಡಾ ತರಿಸಿ ತಿನ್ನಲಿಕ್ಕಿಲ್ಲ. ತನ್ನೊಟ್ಟಿಗೆ ಇರುವ ಎಲ್ಲರಿಗೂ ಕೊಟ್ಟುಬಿಡುತ್ತಾನೆ. ಬೀಡವಾದರೂ ಬಿಡಿ ಒಂದು ಸ್ವಯ ವಿಲೆವಾರಿಯನ್ನಿ, ದುಡ್ಡು ಅರ್ಧಾಣೆಯ ಸಿಗರೇಟಾದರೂ ಕೂಡಾ ಹಾಗೆಯೇ ತನ್ನೊಟ್ಟಿಗಿರುವ ಪ್ರತಿಯೊಬ್ಬನೂ ಸಿಗರೇಟು ತನ್ನಂತೆಯೇ ಸೇದಬೇಕೆಂಬ ಬಂಧುಪ್ರೇಮ. ನಮ್ಮಂತೆ ಅವರು ತಾರತಮ್ಯ ಸ್ತೋತ್ರ ಪಾರ ಮಾಡಿದವರಲ್ಲ. ಒಬ್ಬನು ಅಕ್ಷತೆ ಹಾಕಿದವ, ಇನ್ನೊಬ್ಬ ನಾಮ ಹಾಕಿದವನೆಂಬ ಭೇದವಿಲ್ಲ ಅವರೊಳಗೆ. ನಮ್ಮಲ್ಲಿ ಈ ಬಂಧು ಪ್ರೇಮವಿಲ್ಲ. ಆದುದರಿಂದಲೇ ನಮ್ಮ ಅವಸ್ಥೆ ಹೀಗಾಗಿದೆ ಮತ್ತೇನು ಹೇಳಬೇಕು? ಈ ರಾಮಾಚಾರ್ಯರಂತವರಿಗೆ?

ಸನಾತನಿ

ಕಾಂಗ್ರೆಸ್ಸಿಗೇ ಮತಕೊಡಿ
ಮಿಕ್ಕವರಿಗೆ ವಚನ ಕೊಡಬೇಡಿರಿ
ಸಪ್ಟಂಬರ ೩೦ನೇ ತಾರೀಖು

೧೯೩೭ನೇ ಇಸವಿಯ ಫೆಬ್ರುವರಿ ತಿಂಗಳಲ್ಲಿ ಆಗತಕ್ಕ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಹೋರಾಡತಕ್ಕದ್ದೆಂಬುದು ಜಗಜ್ಜಾಹೀರವಾಗಿದೆ. ಕಾಂಗ್ರೆಸ್ಸಿನ ಹುರಿಯಾಳುಗಳು ಅರ್ಜಿಗಳನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಕಡೆಗೆ ಮಾಡತಕ್ಕ ಕೊನೆಯ ತಾರೀಖು ಸಪ್ಟಂಬರ ೩೦ ಇರುವದು. ಮುಂದೆ ಅಕ್ಟೋಬರ ೧೫ರ ಒಳಗಾಗಿ ಯಾವ ಹುರಿಯಾಳುಗಳಿಗೆ ಯಾವ ಮತದಾರರ ಸಂಘಕ್ಕೆ ಅವರು ಆರಿಸಿರುವರು ಎಂಬುದು ತಿಳಿಯುವದು. ಅಲ್ಲಿಯ ವರೆಗೆ ಅವಶ್ಯವಿದ್ದು ಹಲಕೆಲವು ಹುರಿಯಾಳುಗಳ ಹೆಸರುಗಳನ್ನು ಮಾತ್ರ ಅವರು ಪ್ರಸಿದ್ಧಪಡಿಸುವರು. ಆದುದರಿಂದ ಅಕ್ಟೋಬರ ೧೫ರ ವಳಗೆ ಎಲ್ಲ ಹುರಿಯಾಳುಗಳ ಹೆಸರುಗಳು ತಿಳಿಯುವದು ಸಾಧ್ಯವಾಗಲಿಕ್ಕಿಲ್ಲ.

ಕಾಂಗ್ರೆಸ್ಸಿಗೆ ಮೋಸಲು

ಅವರೆ ಹೀಗೆ ಪ್ರತ್ಯಕ್ಷ ಹುರಿಯಾಳುಗಳ ಹೆಸರುಗಳು ತಿಳಿಯುವದು ಸಾಧ್ಯವಿರದಿದ್ದರೂ ಕಾಂಗ್ರೆಸ್ಸಿನವರು ಎಲ್ಲ ವಿಚಾರ ಮಾಡಿ ಯಾವ ಹುರಿಯಾಳುಗಳನ್ನು ನಿಲ್ಲಿಸುವರೋ ಅವರ ಸಲುವಾಗಿ ತಮ್ಮ ಮತಗಳನ್ನು ಕಾಯ್ದಿರಿಸುವದು ಜನರ ಕರ್ತವ್ಯ. ಸರದಾರ ವಲ್ಲಭಭಾಯಿ, ರಾಜೇಂದ್ರ ಪ್ರಸಾದರ ಮೊದಲಾದವರು ಮಧ್ಯವರ್ತಿ ಕಮಿಟಿಯಲ್ಲಿರುವರು. ಆ ಕಮಿಟಿಯಲ್ಲಿ ಕರ್ನಾಟಕದ ಪರವಾಗಿ ನಾನು ಇದ್ದೇನೆ. ಎಲ್ಲ ವಿಚಾರವಮಾಡಿ ಈ ಕಮಿಟಿಯವರು ಆರಿಸಿದ ಹುರಿಯಾಳುಗಳಿಗೇ ನಮ್ಮೆಲ್ಲರ ಮತಗಳನ್ನು ನೀವು ಕೊಡಬೇಕೆಂದು ಕರ್ನಾಟಕದ ಮಹಾ ಜನಗಳಲ್ಲಿ ನನ್ನ ವಿಜ್ಞಾಪನೆ ಇರುವದು.

ಹೊಸಮನೆ ಸಿದ್ದಪ್ಪ,
ಅಧ್ಯಕ್ಷ,
ಕರ್ನಾಟಕ ಕಾ. ಪ್ರಾಂ. ಕಮಿಟಿ.

ದಕ್ಷಿಣಕನ್ನಡ ಜಿಲ್ಲಾ ಒಕ್ಕಲಿಗರ
ಸಹಕಾರ ಸಮಿತಿ

ಕಾರ್ಕಳ ತಾಲೂಕು ಪಾಲಡ್ಕ ಪುತ್ತಿಗೆ ಬೆಳುವಾಯಿ ಗ್ರಾಮಗಳ ಈ ಸಮಿತಿಯ ವಾರ್ಷಿಕ ಸಭೆಯು ಈ ದಿನ ಕೊಡ್ಯಡ್ಕದಲ್ಲಿ ನೆರವೇರಿತು. ಮೊಡುಬಿದಿರೆ ಪಟ್ಟಣಕ್ಕೆ ಸೇರಿದ ಕೃಷಿ ಇಲಾಖಾ ಡಿಮೋನ್‌ಸ್ಟ್ರೇಟರರಾದ ಮ. ರಾ. ರಾ. ಕೆ. ರಾಮಣ್ಣ ರೈಗಳು ಸಮಿತಿಯ ಮುಖ್ಯ ಚಾಲಕರ ಅಪೇಕ್ಷೆಯ ಮೇರೆಗೆ ಅಧ್ಯಕ್ಷ ಸ್ಥಾನವನ್ನು ವಹಿಸಿದ ನಂತರ ಶ್ರೀ ಬಿ. ಟಿ. ರೈಗಳು ಸಭಿಕರಿಗೆ ಅಧ್ಯಕ್ಷರ ಪರಿಚಯ ಸೂಚನೆಯೊಂದಿಗೆ ಲೋಕದ ಯಾವತ್ತು ವ್ಯವಹಾರಗಳಲ್ಲಿ ಕೃಷಿಯೇ ಪ್ರಮುಖ್ಯವಾದದೆಂದೂ ಈ ವೃತ್ತಿಯಿಂದ ಅತೀ ಬಡವನೆಂದೆಣಿಸಿಕೊಳ್ಳುವವರಿಗೂ ತಮ್ಮ ಜೀವನವನ್ನು ನಡಿಸಲಿಕ್ಕೆ ಇದರ ಹೊರತು ಬೇರೆಯಾವದೊಂದು ಸುಲಭ ಮಾರ್ಗವಿಲ್ಲದೆಂಬುದಾಗಿಯೂ ಎಲ್ಲರೂ ಈ ವೃತ್ತಿಯಲ್ಲಿ ಹೆಚ್ಚಿನ ಆಸಕ್ತಿಯನ್ನಿಡಬೇಕೆಂದೂ ಸೂಚಿಸಿದರು. ಮತ್ತು ಈಗಿನ ಇಂಗ್ಲೀಷ ವಿದ್ಯೆಯಲ್ಲಿ ಪ್ರವೇಶಿಸಿರುವ ಹಲಕೆಲವು ಹಳ್ಳಿಯ ವ್ಯವಸಾಯಗಾರರ ಶ್ರೀಮಂತರ ಮಕ್ಕಳು ತಮ್ಮ ಕುಲವೃತ್ತಿಗೆ ವಕ್ರದೃಷ್ಟಿಯನ್ನು ತೋರಿಸಿರುವದರಿಂದ ಬಡವರಲ್ಲೂ ಈ ಕೃಷಿಯ ವ್ಯವಸಾಯದಲ್ಲಿ ಅಸಡ್ಡೆಯುಂಟಾಗುತ್ತಿರುವದರಿಂದ ತಮ್ಮ ದೇಶದ ಸಂಪತ್ತಿಗೇನೇ ಕೊಡಲಿಯೆಸ್ಸಿಕ್ಕಿದಂತಾಗುತ್ತದೆಂಬ ಯೋಚನೀಯ ವಿಷಯವನ್ನು ಸಭಿಕರಿಗೆ ವಿವರಿಸಿ ಹೇಳಿದರು. ನಂತರ ಅಧ್ಯಕ್ಷರು ನಮ್ಮ ಮದ್ರಾಸು ಅಧಿಪತ್ಯದ ಕೃಷಿಕರ ಶ್ರೇಯೋಭಿವೃದ್ಧಿಗಾಗಿ 18 ಲಕ್ಷ ರೂಪಾಯನ್ನು ಕೃಷಿಯ ಶೋಧನಾರ್ಥವಾಗಿಯೂ ಇಲಾಖೆಯ ಏಳಿಗೆಗಾಗಿಯೂ ವೆಚ್ಚಮಾಡುತ್ತದೆಂದು ಹೇಳಿ ನಮ್ಮ ದೇಶದ ಸಾಗುವಳಿಯಲ್ಲಿ ಹೊಸ ಮಾದರಿಯನ್ನು ಎಲ್ಲರೂ ಸ್ವೀಕರಿಸಬೇಕೆಂತಲೂ, ಇಲಾಖೆಯು ಹಲವು ತರದ ಬೀಜಗಳನ್ನು ವ್ಯವಸಾಯಗಾರರಲ್ಲಿ ಪ್ರಚಾರ ಮಾಡುವುದರಲ್ಲಿ ಈ ತರದ ಸಹಕಾರ ಸಮಿತಿಗಳು ಬಹಳ ಅವಶ್ಯವೆಂದರು. ನಂತರ ಬಿ. ಟಿ. ರೈಗಳು ಸಭಿಕರ ಪರವಾಗಿ ಅಧ್ಯಕ್ಷರಿಗೆ ಧನ್ಯವಾದಗನ್ನರ್ಪಿಸಿದ ನಂತರ ಈ ಸಮಿತಿಯ ಸದಸ್ಯರೊಳಗೆ ಕೃಷಿಯ ಬಗ್ಗೆ ಉಮೇದು ಉಂಟಾಗುವ ಗೋಸ್ಕರ ತರಕಾರಿಯ ಒಂದು ವಸ್ತು ಪ್ರದರ್ಶನವನ್ನು ಬರುವ ಮಾರ್ಚ ಎಪ್ರಿಲ್ ತಿಂಗಳುಗಳಲ್ಲಿ ಈ ಸಮಿತಿಯ ಕಡೆಯವರಿಂದ ಜರಗಿಸಲ್ಪಡುವದೆಂದೂ, ಆ ಪ್ರದರ್ಶನದಲ್ಲಿ ಎಲ್ಲರಿಗಿಂತಲೂ ಹೆಚ್ಚಿನ ಸಾಮಾನುಗಳನ್ನು ಒದಗಿಸುವವರಿಗೆ ಐದು ರೂಪಾಯಿ ನಗದಿಯ ಬಹುಮಾನ ಕೊಡಲ್ಪಡುವದೆಂದೂ ಪ್ರಕಟಿಸಲಾಗಿ ಸಭೆಯು ಮುಕ್ತಾಯವಾಯಿತು.

ಬಿ. ಟಿ. ರೈ,
ವ ಸಚ್ಚಾವಳ.

ಕರ್ಮಕಾರನೋಲ್ಮೆಯ ಕರೆ

೧

ಕರ್ಮಕಾರ ಶಾಲೆಯಲ್ಲಿ ಬೊಂಗ ಕೊಂಬು ಕೂಗಿದೆ
ಕರ್ಮಚಾರಿ ಕಾರ್ಯಕಾಗಿ ಕಾರ್ಯರಂಗ ಕೀಳಿದಿದೆ
ಕರ್ಮಮಾರ್ಗ ಮಾರ್ಗಯಾಗಿ ಕರ್ಮಚಾರಿ ನಡೆಸಿದ
ಕರ್ಮಭೂಮಿ ಧರ್ಮಕಾರ್ಯ ಧರೆಯೊಳೊರೆದು ಮೆರೆದಿದ

೨

ಗಾನತರಲ ತಾನ ಮೃದುಲ ತಾನಗಾನವೇನಿದು?
ಗಾನಶಯನ ನಾದಮುದಿತ ನಾದ ಹೃದಯವೇನಿದು?
ಧ್ಯಾನ ದೀಪ ದೀಪ್ತಿ, ಧೂಪವಾಸ ವಸತಿಯೇನಿದು?
ಜ್ಞಾನ ದಾನ ಮಾನ ಮುದಿತ, ರೋಮ ಹರ್ಷವೇನಿದು?

೩

ಅಂತರಾತ್ಮಗಂತೊ ಕಾಣೆ ಚಿಂತೆ ತಪ್ಪದಿಂದದೂ
ಸಂತಸುಜನ ಸದ್ವಿವೇಕ ಸಖ್ಯವಾಗದಿಂದಿದೂ
ಎಂತೊ ಕರ್ಮಕಿಂದ ನೊಲ್ಮೆ ಕರುಣಿಸ್ಸಿದು ಕರೆದಿದೆ
ಸಂತಸ ಶಾಂತ ಕರ್ಮ ಭೂಮಿ ಧರ್ಮಶಾಲೆಯಾಗಿದೆ.

ಸ. ಶ. ಗಾಂವಕಾರ. ಬಿ. ಎ
ಹುಬ್ಬಳ್ಳಿ.

DIAMONDS! DIAMONDS!!

K. Ramachandra Krishna Shet

Near Mission High School. *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ದಾರಣೆಗಿಂತ 5 ಪರ್ಸಂಟಿನ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪು ಯೂಂವನ್ನು ಗವರ್ನಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಶ್ರೀ ಕಾಶಿಮಠದ ಚರಿತ್ರೆಯ ವಿಚಾರ

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ನ)

ಶ್ರೀಮತ್ ಪರಮಹಂಸ ಇತ್ಯಾದಿ ಯಥೋಕ್ತ ಬಿರುದಾಂಕಿತ ಶ್ರೀಮತ್ ಕಾಶೀ ಮಠಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರ ದಿವ್ಯ ಚರಣಾರವಿಂದಗಳಿಗೆ.

ಶಿಷ್ಯಾನು ಶಿಷ್ಯ ಮಂಜೇಶ್ವರ ವೈಕುಂಠ ಭಕ್ತನು ಮಾಡುವ ಅನಂತಾನಂತ ಬಿನ್ನಹಂಗಳು.

ಶ್ರೀಸ್ವಾಮಿ, ಈಗ ಕೆಲವು ಸಮಯದಿಂದ ಶ್ರೀ ಕಾಶಿ ಮಠ ಸಂಸ್ಥಾನದ ಚರಿತ್ರೆ ಇತ್ಯಾದಿ ಶಿರೋನಾಮೆಗಳಿಂದ ಶ್ರೀಮಠದ ಪರಂಪರೆ ಇತ್ಯಾದಿಗಳನ್ನು ಪ್ರಕಟಿಸುತ್ತಿರುವದು ಸನ್ನಿಧಾನಕ್ಕೆ ಅರಿಕೆಯಾಗಿರುವ ಸಂಗತಿಯಾಗಿರುತ್ತದೆ. ಅವುಗಳಲ್ಲಿ ಅನೇಕಾನೇಕ ವಿಷಯಗಳು ನಿರಾಧಾರವಾಗಿಯೂ ಕೆಲವು ಸಂಗತಿಗಳು ಅಸ್ತವ್ಯಸ್ತ ರೀತಿಯಿಂದಿರುವದೂ ಸನ್ನಿಧಾನಕ್ಕೆ ಸಮಾಧಾನವಿರಬಹುದು. ಈ ಕುರಿತು ಶ್ರೀ ಸಂಸ್ಥಾನದಿಂದ ಏನೊಂದೂ ಅಪ್ಪಣೆಯಾಗದಿದ್ದುದನ್ನೂ ಶ್ರೀ ಸಂಸ್ಥಾನದ ಮತ್ತು ನಮ್ಮ ಸಮಾಜೋನ್ನತಿಗೆ ಅನೇಕ ವಿಧದಿಂದ ಪ್ರಯತ್ನಿಸುತ್ತಿರುವ ಮಹಾನುಭಾವರಿಂದ ಈ ಕುರಿತು ಏನೊಂದೂ ಪ್ರಯತ್ನಗಳಾಗದೆ ಇರುವದನ್ನೂ ನೋಡಿ, ಈಗ ಪ್ರಕಟವಾದವುಗಳನ್ನು ಸರಿಪಡಿಸದ ಹಾಗೇ ಇರಗೊಡಿಸಿದರೆ, ನಮ್ಮ ಶ್ರೀ ಸಂಸ್ಥಾನದ ಕುರಿತಾದ ನಿಜವಾದ ವಿವರಗಳು ನಮ್ಮ ವೃಂದಕ್ಕೆ ತಿಳಿಯದಿದ್ದು ಮುಂದೆ ಕಾಲಾನುಭಾಗದಲ್ಲಿ ಇವುಗಳು ಪ್ರಮಾಣ-ವಾಗಿ ಗಣಿಸಲ್ಪಡಲಿಕ್ಕೆ ಅನುಕೂಲವಾಗಿ ಸತ್ಯದ ಸಂಗತಿಗಳು ಮರೆಯಾಗಿ ಹೋಗುವವೆಂದು ನನ್ನ ಅಲ್ಪ ಬುದ್ಧಿಗೆ ತೋರಿ ತತ್ಕಾಲಕ್ಕೆ ಶ್ರೀ ಸಂಸ್ಥಾನಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಯಥಾಯೋಗ್ಯರೀತಿಯಿಂದ ಪ್ರಕಟಿಸಲಿಕ್ಕೆ ಆಲೋಚಿಸಿ ಆಗನ್ಯವುಳ್ಳ ಹಳೇ ಅನುಭವಗಳ ಸಂಗ್ರಹಕ್ಕೆ ಪ್ರಾರಂಭಿಸಿರುತ್ತೇನೆ. ತತ್ಕಾಲ ನನ್ನ ಕೂಡೆ ಇದ್ದ ಪುರಾವೆಗಳ ಆಧಾರದಿಂದ ಬರವಣಿಗೆ ಕಾರ್ಯವನ್ನು ಪ್ರಾರಂಭಿಸಿರುತ್ತೇನೆ. ಶ್ರೀ ಸಂಸ್ಥಾನದಿಂದ ಈ ಕುರಿತು ಅಭಿಪ್ರಾಯವಿದ್ದು ಸರಿಯಾದ ಚರಿತ್ರೆಯನ್ನು ಪ್ರಕಟಿಸುವ ಆಲೋಚನೆ ಇಲ್ಲದಿರಲು ಕಾರಣವಿಲ್ಲವೆಂಬದಾಗಿ ಮನಗಂಡು ಈ ಬಿನ್ನಹ ಪತ್ರ ಬರಕೊಂಡಿರುತ್ತೇನೆ. ಶ್ರೀ ಸ್ವಾಮಿ, ಮಠದಿಂದ ಹಾಗೆ ಪ್ರಕಟಿಸುವ ಚಿತ್ತವಿರುವದಾದರೆ ನಾನು ಈಗ ಈ ಕುರಿತು ಮಾಡುವ ಪ್ರಯತ್ನಗಳು ನ್ಯಾಯವಿರುದ್ಧವಾಗಬಹುದು. ಆದ್ದರಿಂದ ಶಿಷ್ಯಾನುಶಿಷ್ಯನ ಮೇಲೆ ಪೂರ್ಣ ದಯವಿಟ್ಟು ಈ ಕುರಿತು ಅಪ್ಪಣೆ ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇನೆ. ಹಾಗಲ್ಲದೆ, ಶ್ರೀಸಂಸ್ಥಾನಕ್ಕೆ ಸಮಾಜೋನ್ನತಿಯ ಕುರಿತು ಈಗ ಕೈಕೊಂಡ ಕಾರ್ಯದಿಂದ ಈ ವಿಷಯಕ್ಕೆ ತಾತ್ಪರ್ಯ ಕೊಡಲು ಅಸಂದರ್ಭ ತೋರುವುದಾದರೆ ನಾನು ಈ ಕುರಿತು ಮುಂದರಿಸಲಿಕ್ಕೆ ಅಪ್ಪಣೆ ಕೊಡಬೇಕಾಗಿಯೂ ಈ ಬಗ್ಗೆ ಶ್ರೀ ಸಂಸ್ಥಾನದಲ್ಲಿರುವ ತಾಮ್ರ ಶಾಸನಗಳ ಮತ್ತು ಕಳ್ಳದಲ್ಲಾದ ವ್ಯವಹಾರದ ತೀರ್ಪು ಇತ್ಯಾದಿ ರಿಕಾರ್ಡುಗಳ ನಕ್ಕಲುಗಳನ್ನು ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇನೆ. ನಕ್ಕಲು ತೆಗಿಸಲಿಕ್ಕೆ ಶ್ರೀ ಸಂಸ್ಥಾನದಲ್ಲಿ ಈಗ ಅನುಕೂಲತೆ ತೋರುವುದಿಲ್ಲವಾದರೆ ಆ ಕೆಲಸಕ್ಕೆ ತಕ್ಕ ಜನರನ್ನು ಇಲ್ಲಿಂದ ಕಳುಹಿಸಲಿಕ್ಕೂ ತಯಾರಿರುತ್ತೇನೆ. ಆದ್ದರಿಂದ ಈ ಎಲ್ಲಾ ಸಂಗತಿಗಳನ್ನು ದಿವ್ಯಚಿತ್ತಕ್ಕೆ ತಂದು ತ್ವರ್ಯದಲ್ಲಿ ಅಪ್ಪಣೆ ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇಂತಿ ಅನಂತಾನಂತ ಬಿನ್ನಹಂಗಳು

ವಿ. ಸೂ. ಈ ಬಿನ್ನಹ ಪತ್ರದ ಕುರಿತಾಗಿ ಶ್ರೀಯವರ ಅಪ್ಪಣೆಯ ದಾಯವನ್ನು ಕ್ಷಣ ಕ್ಷಣಕ್ಕೆ ನಿರೀಕ್ಷಿಸುತ್ತಲಿದ್ದೇನೆ. ಆದುದರಿಂದ ಗೌಡ ಸಾರಸ್ವತ ಬ್ರಾಹ್ಮಣ ವಿದ್ವದ್ವ್ಯಕ್ತ ಗ್ರಹಸ್ಥರಿತ್ಯಾದಿ ಜ್ಞಾತಿಬಂಧುಗಳು, ನಾನು ಮೇಲೆ ಬರಕೊಂಡ ಬಿನ್ನಹ ಪತ್ರದಲ್ಲಿ ವಿವರಿಸಿದ ನ್ಯಾಯಗಳು ಧರ್ಮಸಮ್ಮತವಾದವುಗಳೆಂತ ಅಭಿಪ್ರಾಯಪಡುವಲ್ಲಿ ಪ್ರತಿ ಒಬ್ಬರೂ ತಮ ತಮಗೆ ತಿಳಿದಿರುವ ವಿವರಗಳ ಕುರಿತು ನನಗೆ ಎಚ್ಚರ ಕೊಟ್ಟು ಈ ಕಾರ್ಯವು ಸಾಂಗವಾಗಿ ನೆರವೇರುವಂತೆ ದಯವಿಡಬೇಕಾಗಿ ಸಾದರದಿಂದ ಅಪೇಕ್ಷಿಸುತ್ತೇನೆ. ಈ ಕಾರ್ಯವನ್ನು ಸ್ವಜಾತಿ ಬಾಂಧವರಲ್ಲಿ ಬೇರೆ ಯಾರಾದರೂ ಕೈಕೊಳ್ಳುವುದಾದರೆ ನನ್ನಲ್ಲಿರುವ ವಿವರಗಳನ್ನು ಅಂಥವರಿಗೆ ಕೊಡಲು ಸಿದ್ಧನಿರುತ್ತೇನೆ.

ಮಂಜೇಶ್ವರ ವೈಕುಂಠ ಭಕ್ತ.

8—9—1936

ನವಯುಗದ ತಾ. 10—9—'36ರ, ಸಂಚಿಕೆಯ

ನಾರದನ 'ನಾರದ ತಂಬೂರಿ' ಎಂಬ ಲೇಖನಕ್ಕೆ ಉತ್ತರ.

ಅಯ್ಯಾ!

ಮೇಲಿನ ಲೇಖಕರು ಯಾರೇ ಆಗಿರಲಿ, ನಾನು ಮುನಿಸಿಪಾಲಿಟಿಯನ್ನು ವಿರೋಧಿಸುವವನೆಂದೂ, ಆದರೆ, ಅದು ಅಸ್ತಿತ್ವದಲ್ಲಿದ್ದರೆ ನನ್ನಿಂದಾದಷ್ಟು ತೆರಿಗೆದಾರರಹಿತ ಸಾಧಿಸುವ ಬಗ್ಗೆ ಅದರ ಮೆಂಬರನಾಗಲಿಚ್ಛಿಸುವವನೆಂದೂ ತಿಳಿಸುತ್ತೇನೆ. ಈ ಪಟ್ಟಣದ ಸರ್ವ ಸಾಮಾನ್ಯವಾದ ಬಡತನ ಮತ್ತು ಆರ್ಥಿಕ ದುರವಸ್ಥೆಯ ಪರಿಸ್ಥಿತಿಯಲ್ಲಿ ಮುನಿಸಿಪಾಲಿಟಿಯ ರಚನೆಯನ್ನು ಬಲವಾಗಿ ವಿರೋಧಿಸುವವರಲ್ಲಿ ನಾನೊಬ್ಬನಾಗಿದ್ದೇನೆ. ಉಡುಪಿಗೆ ಪಂಚಾಯತ್ ಬೋರ್ಡುಮಾಡಬೇಕೆಂದು ಶ್ರೀ ಮೊಳಹಳ್ಳಿ ಶಿವರಾಯರು ತಂದ ಠರಾವನ್ನು (ಇದಾಗಿ ಎರಡು ವರ್ಷಗಳೂ ವಿಕ್ರಿಪೆ, ತಾಲೂಕು ಬೋರ್ಡುಗಳು ತೆಗೆದು ಹಾಕಲ್ಪಟ್ಟ ಕೂಡಲೇ ನಡೆದ ವಿದ್ಯಮಾನವಿದು.) ನಾನು ವಿರೋಧಿಸಿದ್ದೆನೆಂದು ಹೇಳಲಾಗಿದೆ. ಜಿಲ್ಲಾ ಬೋರ್ಡಿನ ಆಡಳಿತೆಯೊಳಗೆನೇ ನಾವು ತೃಪ್ತರಾಗಿದ್ದೇವೆಂದು ನಾನು ಆಗ ಹೇಳಿದ ಮಾತು, ಮತ್ತು ನನ್ನ ಈ ಸೂಚನೆಗೆ ಸ್ಥಳೀಕ ಮೆಂಬರರೆಲ್ಲರೂ ಒಪ್ಪಿಗೆಯನ್ನಿತ್ತಿದ್ದರು– ಅಥವಾ ವಿರೋಧಿಸದಾವರೂ ಇದ್ದರು. ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷರು ಉಡುಪಿ ಸೆನಿಟರಿ ಖಾತೆಯ ಮೇಲ್ವಿಚಾರಣೆಯ ಅಧಿಕಾರವನ್ನು ನನಗಿತ್ತಾಗ, ಆ ಒಂದೂವರೆ ವರ್ಷದ ಅನುಭವದಿಂದ ಉಡುಪಿಗೆ ಪಂಚಾಯತ್ ಬೋರ್ಡಿನಂತಹ ಸ್ಥಳೀಕ ಸಂಸ್ಥೆಯೊಂದು ಪ್ರಯೋಜನಕಾರಿಯೆಂದು ನನಗೆ ತಿಳಿಯಿತು. ಯಾವನಾದರೂಬ್ಬನು, ತನ್ನ ಅನುಭವದ ಮೇಲಿಂದ ಅಭಿಪ್ರಾಯಗಳನ್ನು ಬದಲಿಸುವದು ತಪ್ಪಲ್ಲವೆಂದು ನಾನು ಭಾವಿಸುತ್ತೇನೆ.

ಉಡುಪಿಗೆ ಮುನಿಸಿಪಾಲಿಟಿ ಬೇಡವೆಂದು ವಿರೋಧಿಸುವ ಹಾಗೂ ಅದನ್ನು ಸರಕಾರಕ್ಕೆ ವಿನಂತಿಸುವ ಠರಾವುಗಳನ್ನು ನಾನು ಎರಡು ಸಲ ಜಿಲ್ಲಾ ಬೋರ್ಡಿನಲ್ಲಿ ತಂದಿದ್ದೆನು. ಎರಡು ಸಲವೂ ಈ ಠರಾವುಗಳು ಬಲವಾಗಿ ಅನುಮೋದಿಸಲ್ಪಟ್ಟಿದ್ದವು. ಒಂದು ಠರಾವಿನಲ್ಲಿ ಮುನಿಸಿಪಾಲಿಟಿಯ ಬದಲಿಗೆ ಪಂಚಾಯತ್ ಬೋರ್ಡು ಮಾಡಬೇಕೆಂಬ ಸೂಚನೆಯೂ ಅಡಕವಾಗಿತ್ತೆಂದು ನನ್ನ ನೆನಪು.

ಈಗ ಮುನಿಸಿಪಾಲಿಟಿಯನ್ನು ತೆಗೆದುಹಾಕಿ ಪಂಚಾಯತ್ ಬೋರ್ಡು ಸ್ಥಾಪಿಸಬೇಕೆಂದು ಸರಕಾರವನ್ನು ವಿನಂತಿಸುವ ಠರಾವನ್ನು ತರುವೆನಾಗಿ ನೋಟೀಸು ಕೊಟ್ಟಿರುವೆನು. ಸಾರ್ವಜನಿಕರ ಅಭಿಮತವು ಇದಕ್ಕೆ ಪೂರ್ಣ ಅನುಕೂಲವಾಗಿಯೇ ಇದೆ ಎಂದು ನಾನು ನಂಬುತ್ತೇನೆ. ಯಾರಾವರೂ ಮುನಿಸಿಪಾಲಿಟಿಯಿರಬೇಕೆಂಬ ಆತುರದಿಂದಿರುವರಾದರೆ, ಅವರು ತಮ್ಮ ಮತವನ್ನು ಮುಂದೊತ್ತಬಹುದು ಮತ್ತು ಅದು ನ್ಯಾಯವೆಂದು ನನಗೆ ಮನವರಿಕೆಯಾದರೆ ನಾನು ಖಂಡಿತವಾಗಿಯೂ ನನ್ನ ಅಭಿಪ್ರಾಯವನ್ನು ಬದಲಾಯಿಸುವೆನು. ಮುನಿಸಿಪಾಲಿಟಿ ಬೇಡವೆಂಬ ನನ್ನ ಠರಾವನ್ನು ಮಂಜೂರು ಮಾಡಿಸುವದರಲ್ಲಿ ಜಯಶೀಲನಾಗಿ ಸರಕಾರವು ಇಲ್ಲಿಯ ಪರಿಸ್ಥಿತಿಯನ್ನು ತಿಳಿದು ಮುನಿಸಿಪಾಲಿಟಿಯನ್ನು ತೆಗೆದು ಹಾಕುವಂತಾದರೆ ನಾನು ಉಡುಪಿಯ ಜನತೆಗೊಂದು ಒಳ್ಳೆ ಕೆಲಸಮಾಡಿದಂತಾಗುವುದು. ಬದಲಾಗಿ ನಾನದರಲ್ಲಿ ಸೋತು ಹೋದರೆ, ನನ್ನನ್ನು ಬಹುಮತದಿಂದ ಆರಿಸಿ ಕಳುಹಿ ನನ್ನಲ್ಲಿ ನಂಬಿಗೆ ತೋರಿಸಿದ್ದ ತೆರಿಗೆದಾರರ ಹಿತದೃಷ್ಟಿಯಿಂದ ನಾನು ಮೆಂಬರನಾಗಿಯೇ ಇದ್ದುಕೊಂಡು, ಸಾಧ್ಯವಿದ್ದಷ್ಟು ಪ್ರಯತ್ನಿಸುವೆನಾಗಿ ಎಲ್ಲರಿಗೂ ಈ ಮೂಲಕ ತಿಳಿಸುತ್ತೇನೆ.

ತಮ್ಮ ವಿಶ್ವಾಸ ಪಾತ್ರ,

ಸಿ. ಜಿ. ಆಚಾರ್

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

ಡಿಪೋವಿನ ರಿಂಗ್‌ವರ್ಮ್ ಮುಲಾಮು.

ಇಷ್ಟರವರಗಣ ನಮ್ಮ ವಿಲಿಯಮ್ ಎಂಡ್ ಕೋರವರ ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು, ಈಗ ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜ ಡಿಪೋವಿನ ತ್ರಿವರ್ಣದ

'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ,

ಬೊಂಬಾಯಿ-ಮದ್ರಾಸು-ಕಲ್ಕತ್ತ.

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು ಆರ್ಥಿಕ ರಾಜಕೀಯ ವಿಚಾರಗಳು-ವೈಜ್ಞಾನಿಕ ವಿಷಯಗಳು-ಪರಂಪ್ಯಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳ ನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ.

ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ. ಪ್ರತಿ ತಿಂಗಳ ಮೊದಲನೆಯ ತಾರೀಕಿಗೆ ತಪ್ಪದೆ ಹೊರಡುವ ೬೦ ಪುಟಗಳ ಮಾಸಪತ್ರಿಕೆ.

ಬೇಗನೇ ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ ೩—೨—0.

ಪ್ರವಾಸಿ ಕಾರ್ಯಾಲಯ,

ಕಾಸರಗೋಡು, ದಕ್ಷಿಣ ಕನ್ನಡ

— ನಾಯಕ್ ಬ್ರದರ್ಸರ —

ಶ್ರೀ ಮಧ್ವವನೇಂದ್ರ ಮಹೌಷಧಾಲಯ,

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ಕಟಪಾಡಿ, ದ. ಕನ್ನಡ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!!

ವೃದ್ಧಿಶಾಸನ (ಸಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗ ಉತ್ತಮ)
ಹಿಮಸಾಗರ ತೈಲ (ಸಿದಾನಾಶಕ್ಕೆ ಬಲು ಉಪಯುಕ್ತ)
ಮಹಾಮಾಷತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಚಂದ್ರಮಸ್ (ವಾಂತಿ, ಭೇದಿಗ ಅನುಭವಸಿದ್ಧ ಔಷಧ)
ಗುಡ ಪಿಪ್ಪಲಿ (ಉಬ್ಬಸ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಹೆಚ್ಚಿನ ವಿವರಗಳಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮಧ್ವವನೇಂದ್ರ ಮಹೌಷಧಾಲಯ,
ಕಟಪಾಡಿ, ದಕ್ಷಿಣ ಕನ್ನಡಾ ಜಿಲ್ಲೆ.



ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೇಳು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೆರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನವೀನಯ ಸಾಮಾನುಗಳನ್ನು ಮಾರಾಟಮಾಡುವ ವಿಚಾರದಲ್ಲಿ ತಕ್ಕ ಕಾಲದಲ್ಲಿ ಸಾಮಾನುಗಳನ್ನು ತಯಾರುಮಾಡಲು ಯಾವತ್ತೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರಪಟ್ಟಿಗಾಗಿ ಬರೆಯಿರಿ

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರೆವ್ಯಾಪಾರಿ, ರಥಬೀದಿ ಉಡುಪಿ

ಶ್ರೀ ಮಲಯಾಳದ

ಸ್ತನೋತ್ಸೇಧಃ

THE MALAYALA OUSHADHA CO.
Post-CHALAPURAM MALABAR
STHANOTSTHEDAH

ರಹಸ್ಯಗಳು

ಇದೀಗ ಹೊರ ಬಂದಿದೆ ಪುರುಷರನ್ನು ಆಕರ್ಷಿಸುವಂಥದ್ದು ಸ್ತ್ರೀಯರಿಗೆ ಒಳ್ಳೆಯ ತೀವ್ರ ಪುರುಷನೊಬ್ಬನನ್ನು ಹಿಡಿಯಲು ನೋಡಿದ್ದಲ್ಲಿ, ಅವನ ಕಣ್ಣುಗಳು ಸ್ತ್ರೀಯ ಮುಖದಿಂದ ಕೆಳಗೆ ಕುಚಸ್ಥಳಕ್ಕೆ ಚಲಿಸಿ ಕುಚಗಳು ಉನ್ನತವಾಗಿ, ದೃಢವಾಗಿ ಯೌವನಯುಕ್ತವಾಗಿ ಆಕರ್ಷಕವಾಗಿರುವವೋ ಎಂದು ನೋಡುವನು



48 ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ಥೈರ್ಯ:—ಅದಕ್ಕೆ ಜಾತಿ, ಪ್ರಾಯ [illegible] ಸ್ತ್ರೀಯರ ಎದೆಯ ಆಕರ್ಷಣೆಯು ನಷ್ಟವಾಗಿದ್ದರೆ, [illegible] ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡರೆ, ಟೊಳ್ಳಾಗಿ ಅಥವಾ [illegible] ಕುಚಗಳಿಗ್ಗೆ ಸ್ಥಿರವಾಗಿ [illegible]

ದಿ ಮಲಯಾಳ ಔಷಧ ಕಂಪನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದ [illegible] ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವವು [illegible] ಸ್ಥಿರವಾಗುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ [illegible] ತಮ್ಮ [illegible] ಪ್ರಸಿದ್ಧ [illegible] ದೇಶದ ಸ್ತ್ರೀಯರು ಅನಾದಿಕಾಲದಿಂದ [illegible] ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವ

ಸ್ಥವಸ್ಥಿತ ನಂಬ್ರ 20 [illegible] ನಂಬ್ರ 21 ಹೊರಗಣ ಉಪಯೋಗಕ್ಕೆ ರೂ. 3 [illegible]

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗ ನಮ್ಮಲ್ಲಿ ಸಿದ್ಧೌಷಧಗಳಿವೆ

ಮಧುಮೇಹಗಳು, ಸಂಧಿ [illegible], [illegible] ರೋಗಗಳು, [illegible], ಪಾಶ್ವಿಯೋಗಕ್ಕಾಗಿ ಕ್ಷೀರಬಲ

ಸ್ತ್ರೀ ವಿಭಾಗ

ಇಂದಿನ ಸ್ತ್ರೀಯರ ನವಮನೋವೃತ್ತಿ.

ಸ್ಪೈನಿನ ಸ್ತ್ರೀಯರ ದೇಶಭಕ್ತಿ, ವೀರ ಸೈನಿಕರಾಗಿ ಹೋರಾಡುವ ಸಿಂಹಿಣಿಯರವರು.

ಸ್ತ್ರೀಯರು ತಮ್ಮ ದೇಶಕ್ಕಾಗಿ ಅಂತಃಪುರವನ್ನು ತ್ಯಜಿಸಿ ರಣರಂಗವನ್ನು ಹೊಕ್ಕಿರುವ ವಿಷಯಗಳು ಸಾಮಾನ್ಯವಾಗಿ ಎಲ್ಲಾ ದೇಶಗಳ ಇತಿಹಾಸದಲ್ಲೂ ದೊರಕುತ್ತವೆ. ಆದರೆ ಈ ರೀತಿಯಾಗಿ ಇತಿಹಾಸಾಕಾಶದಲ್ಲಿ ಹೊಳೆಯುತ್ತಿರುವ ಇಂತಹ ನಕ್ಷತ್ರಗಳು ಬಹು ವಿರಳ. ಯಾವ ದೇಶವನ್ನು ತೆಗೆದುಕೊಂಡಾಗ್ಯೂ ಬೆರಳುಗಳ ಕೊನೆಗಳಲ್ಲಿ ಎಣಿಸಿಬಿಡುವಷ್ಟು ಮಂದಿ ಮಾತ್ರ. ಇಂದೀಗ ಹಾಗಿಲ್ಲ. ಜಗತ್ತಿನ ಎಲ್ಲಾ ದೇಶಗಳಲ್ಲೂ ಒಂದು ನವಮನೋಭಾವವು ಉದಿತವಾಗಿದೆ. ಸ್ತ್ರೀಯರ ಸ್ಥಳವಿರುವುದು ಕೇವಲ ಗೃಹಗಳಲ್ಲಿ ಮಾತ್ರ ಎಂಬ ಪುರಾತನ ಭಾವವು ಅಳಿಸಿಹೋಗಿದೆ. ಆ ಹಿಂದಿನ ಎಲ್ಲೆಗಳು ಮಾಯವಾಗಿ ಗಂಡಸರು ಯಾವಯಾವ ರಂಗಗಳನ್ನು ಹೊಗಬಹುದೋ, ಅಲ್ಲಿಗೆಲ್ಲ ಸ್ತ್ರೀಯರೂ ಹೊಗಬಹುದೆಂಬ ಭಾವನೆಯು ಮೂಡಿ ದಿನದಿನಕ್ಕೆ ಬಲವಾಗುತ್ತದೆ. ಇದುವರೆಗೂ ಕೇವಲ ಪುರುಷರ ಸ್ವತ್ತೇ ಆಗಿದ್ದ ರಾಜಕೀಯ ರಂಗ, ರಣರಂಗಗಳಲ್ಲಿ ಸಹ ಈಗ ಸ್ತ್ರೀಯರು ಪುರುಷರೊಡನೆ ಸಮಾನಸ್ಕಂಧರಂತೆ ವರ್ತಿಸುತ್ತಿದ್ದಾರೆ.

ಸ್ತ್ರೀಯರು ಈ ರೀತಿಯಾಗಿ ರಾಜಕೀಯ ಮತ್ತು ರಣರಂಗಗಳಲ್ಲಿ ಪಾತ್ರವಹಿಸುವುದನ್ನು ನಾವು ನಮ್ಮ ಭರತಖಂಡದಲ್ಲೇ ಕಂಡಿದ್ದೇವೆ. ಆದರೆ ಪಾಶ್ಚಾತ್ಯ ಸ್ತ್ರೀಯರಿಗೂ ನಮ್ಮ ಸ್ತ್ರೀಯರಿಗೂ ಇರುವ ವ್ಯತ್ಯಾಸವೇನೆಂದರೆ ಅಲ್ಲಿಯವರು ಶಸ್ತ್ರಾಸ್ತ್ರಗಳನ್ನು ಹಿಡಿದು, ರಣರಂಗದಲ್ಲೂ ಪ್ರುಷ ಸೈನಿಕರ ಎದುರಿನಲ್ಲಿ ಭುಜಕ್ಕೆ ಭುಜ ಕೊಟ್ಟು ನಿಂತು ಯುದ್ಧ ಮಾಡಬಲ್ಲವರಾಗಿದ್ದಾರೆ. ಇದಿಷ್ಟೂ ನವ ಜಾಗೃತಿಯ ಫಲ. ಹಿಂದಿದ್ದ ಕೂಪಕೂರ್ಮ ನ್ಯಾಯವನ್ನು ವರ್ಜಿಸಿರುವುದರ ಫಲಿತಾಂಶವು. ಸ್ವದೇಶಪ್ರೇಮಕ್ಕೆ ಲಿಂಗಭೇದವಿಲ್ಲವೆಂಬುದರ ಚಿಹ್ನೆ.

ಸ್ಪೈನಿನಲ್ಲಿ ಗಂಡಸರ ದಳಗಳಿರುವಂತೆಯೆ ತರಬೇತಾದ ಕ್ರಮವರಿತ ಶಿಸ್ತಿನ ಸ್ತ್ರೀ ಸೈನ್ಯದಳಗಳಿವೆ. ಇವರು ಕತ್ತುಗಳನ್ನೆತ್ತಿ ಆಯುಧಗಳನ್ನು ಹೊತ್ತು, ಹೋಗುತ್ತಿದ್ದಾರೆ. ಪುರುಷ ಸೈನಿಕರಿಗಿಂತಲೂ ಸ್ತ್ರೀ ಸೈನಿಕರೇ ಹೆಚ್ಚು ದರ್ಪದಿಂದ ಕಾಣುತ್ತಾರೆ. ಸ್ಪೇನಿನಲ್ಲಿ ಹೆಂಗಸರು ಓಡುಬರಹಗಳನ್ನು ಸಹ ಕಾಣರು. ಹಾಗೇನಾದರೂ ಓದಿದರೆ ಅವರ ಪಠ್ಯಪುಸ್ತಕಗಳನ್ನಲ್ಲದೆ ಬೇರೆ ಓದಲು ಅಪ್ಪಣೆಯಿರಲಿಲ್ಲ. ಕೊನೆಗೆ ನಮ್ಮ ಗಾಂಧಿಜಿಯವರು ಭರತಖಂಡದ ಸ್ತ್ರೀಯರನ್ನು 'ಪರದೆಯ ಹಿಂದಿನಿಂದ ಮುಂದೆ ಬಂದು ಜ್ವಲಿಗ ಹೊರಡಲು ಸಿದ್ಧವಾಗಿ' ಎಂದು ೧೯೩೦ರಲ್ಲಿ ಹೇಳಿದರಂತೆ, ಈಗ್ಗೆ ೬-೭ ವರ್ಷಗಳಿಂದೀಚೆಗೆ ಸ್ಪೈನಿನಲ್ಲಿ ಮಹತ್ತಾದ ಬದಲಾವಣೆಯಾಗಿದೆ. ಈಗಾಗಲೇ ಎಷ್ಟೋ ಮಂದಿ ಸ್ತ್ರೀಯರು ತಮ್ಮ ಧೈರ್ಯ ಸಾಹಸಾದಿಗಳಿಗಾಗಿ ಕೀರ್ತಿ ಗಳಿಸಿದ್ದಾರೆ.

೧೯೩೪ರಲ್ಲಿ ಓವಿಯೋಡೋದಲ್ಲಿ ಗಣಿಗಳ ಕೆಲಸಗಾರರಿಗೂ ವಿದೇಶೀಯರಿಗೂ ಜಗಳಗಳಾದಾಗ ಸೂಸಿ ಯೆಂಬುವಳು ಅಸಾಧಾರಣ ಧೈರ್ಯ ತೋರಿ ಕೀರ್ತಿಕಾಯಳಾದಳು. ಆಗ ಮೈನರುಗಳು ಸೋತು ಅನೇಕರು ಸೆರೆ ಸಿಕ್ಕಿದರು. ಸೂಸಿಯೆಂಬವಳು ವಿದೇಶೀಯರೊಡನೆ ಹೋರಾಡುವಾಗ ತೋರಿದ ರಣಚಾತುರ್ಯವನ್ನು ಕಂಡು ವಿದೇಶೀಯರು "ನೀನು ಶರಣಾಗತಳಾದರೆ ನಾವು ನಿನ್ನ ಪ್ರಾಣ ಉಳಿಸುತ್ತೇವೆ. ನಿನಗೆ ತಕ್ಕಂತೆ ಗೌರವಿಸುತ್ತೇವೆ." ಎಂದು ಹೇಳಿದರು. ಅದಕ್ಕೆ ಅವಳು ಆಗ ಯಾವ ರೀತಿ ಉತ್ತರ ಕೊಟ್ಟಳು ಬಲ್ಲಿರಾ? ಮೆಷೀನ್‌ಗನ್ ಮೂಲಕ. ಇವಳ ಪ್ರಳಯಮೂರ್ತಿಯನ್ನು ಕಂಡು, ಅವರು ಹೆದರಿ, ಪ್ರಾಣಗಳನ್ನು ರಕ್ಷಿಸಿಕೊಳ್ಳಲೋಸುಗ ಇವಳ ಮೇಲೆ ಗುಂಡು ಹಾರಿಸಬೇಕಾಯಿತು. ಕೊನೆಗೆ ಇವಳು, ದೇಹದಲ್ಲಿ ನೂರಾರು ಗುಂಡುಗಳು ಮನೆ ಮಾಡಿಕೊಂಡ ಮೇಲೆ ರಣಶಯನ ಮಾಡಿದಳು.

ಮತ್ತೊಬ್ಬಳು ಲಾ ಲಿಬರ್ಟೇರಿಯಾ ಎಂಬವಳು. ಮೇಲೆ ಹೇಳಿದ ಓವಿಯೆಡಾ ಯುದ್ಧದಲ್ಲಿ ತಮ್ಮವರಿಗೆ ಸಹಾಯ ಮಾಡಲು ಮೈರೇಸ್ ಎಂಬ ಊರಿನಲ್ಲಿದ್ದ ಗಂಡಸರೆಲ್ಲರೂ ಹೊರಟುಹೋಗಿದ್ದರು. ಊರಿನಲ್ಲಿ ಉಳಿದಿದ್ದವರು ಕೇವಲ ಸ್ತ್ರೀಯರು. ಆಗ ಈ ಲಾ ಲಿಬರ್ಟೇರಿಯಾ ಎಂಬ ಹೆಂಗುಸು ಊರಿನಲ್ಲಿದ್ದ ಸ್ತ್ರೀಯರನ್ನೇ ಸೇರಿಸಿ ಒಂದು ದಳವನ್ನು ನಿರ್ಮಿಸಿ, ಊರನ್ನು ರಕ್ಷಿಸಿದಳು. ಆದುದರಿಂದ ೧೯೩೬ರಲ್ಲಿ ಸ್ಪೇನಿನ ಸ್ತ್ರೀಯರು ಗಂಡಸರ ಸಂಗಡ ನಿಂತು ಯುದ್ಧ ಮಾಡುತ್ತಿದ್ದಾರೆಂದರೆ ಏನೇನೂ ಆಶ್ಚರ್ಯವಿಲ್ಲ. ಆಗಿನಿಂದ ಈ ವೀರವನಿತೆಯರು ನಾನಾ ರೀತಿಯಲ್ಲಿ ಡ್ರಿಲ್ ಮಾಡುತ್ತಿದ್ದಾರೆ; ವ್ಯಾಯಾಮಗಳನ್ನು ಮಾಡುತ್ತಿದ್ದಾರೆ; ಕಾಯ ಕಷ್ಟಗಳನ್ನು ನಿರ್ಲಕ್ಷ್ಯದಿಂದ ನೋಡುತ್ತಿದ್ದಾರೆ.

ಅಷ್ಟೇಕೆ? ಈಗ ಸ್ಪೇನಿನ ಪುರುಷರು —ವಿಪ್ಲವ ಪಕ್ಷದವರು— ತಮ್ಮ ವಿಜಯವು ತಮ್ಮ ಸ್ತ್ರೀಯರ ಕೈಲಿದೆ ಎಂದು ಭಾವಿಸಿದ್ದಾರೆ. ಯಾಕೆಂದರೆ ಈ ಸ್ತ್ರೀಯರು ಯುದ್ಧ ಶಿಕ್ಷಣವನ್ನೂ ಪಡೆದಿದ್ದಾರೆ; ಗೂಢಚಾರರಾಗಿಯೂ ಕೆಲಸ ಮಾಡಬಲ್ಲರು.

ಆದರೆ ಒಂದು ವಿಚಾರ. ಸ್ಪೇನಿನಲ್ಲಿ ಯಾವ ಸ್ತ್ರೀಯರು ಬೇಕಾದರೂ ಆಯುಧಗಳನ್ನು ಧರಿಸಬಹುದು. ವ್ಯಭಿಚಾರಿಣಿಯರು ಮಾತ್ರ ಸೈನ್ಯಕ್ಕೆ ಸೇರಲು ಅವಕಾಶವಿರುವುದಿಲ್ಲ. ಯುದ್ಧರಂಗದಲ್ಲಿ ಗಂಡುಹೆಣ್ಣುಗಳಿಬ್ಬರೂ ಭುಜಕ್ಕೆ ಭುಜ ಕೊಟ್ಟು ನಿಂತು ಯುದ್ಧ ಮಾಡುತ್ತಿರುವಾಗ ಯಾವನಾದರೂ ಗಂಡಸರು ಸತ್ತರೆ, ಮಗ್ಗುಲಲ್ಲಿದ್ದ ಸ್ತ್ರೀ ಅವನ ಸ್ಥಳದಲ್ಲಿ ನಿಲ್ಲುತ್ತಾಳೆ. ಸಿಂಹಿಣಿಯಂತೆ ಯುದ್ಧ ಮಾಡುತ್ತಾಳೆ. ಕೈಗೆ ಸಿಕ್ಕಿದ ಆಯುಧವನ್ನೇ ಪ್ರಯೋಗಿಸುತ್ತಾಳೆ. ಈ ಹೆಂಗಸರು ಈ ರೀತಿ ದೇಶಪ್ರೇಮೋದ್ದೀಪಿತರಾಗಿ ಯುದ್ಧ ಮಾಡುತ್ತಿರುವ ಕಾರಣದಿಂದ ಎದುರು ಪಕ್ಷದವರು ಇವರು ಗಂಡಸರು, ಇವರು ಸ್ತ್ರೀಯರು ಎಂಬ ಭೇದವಿಲ್ಲದೆ ವರ್ತಿಸತೊಡಗಿದ್ದಾರೆ. ಗಂಡಸರಿಗೆ ಯಾವ ಶಿಕ್ಷೆಗಳೋ, ಹೆಂಗಸರಿಗೂ ಅವೇ. ಆದುದರಿಂದ ಸ್ಪೇನಿನಲ್ಲಿ ಈಗಿನ ಜಗಳಗಳು ಕೊನೆಗಂಡ ಮೇಲೆ ಅಲ್ಲಿಯ ಸ್ತ್ರೀಯರ ಸ್ಥಾನಮಾನಗಳು ಪುರುಷರಿಗೆ ಸರಿಸಮಾನವಾಗಿರುತ್ತವೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಸಭೆ.

ನಿನ್ನೆ (೬-೯-೩೬) ಸಾಯಂಕಾಲ ಧಾರವಾಡದಲ್ಲಿ ಮೇಲೆ ಕಾಣಿಸಿದ ಸಭೆಯು ಕೂಡಿತ್ತು; ಕರ್ನಾಟಕದ ಎಲ್ಲಾ ಜಿಲ್ಲೆಗಳ ಪ್ರತಿನಿಧಿಗಳು ಸಭೆಗೆ ಹಾಜರಿದ್ದರು. ಹುರಿಯಾಳುಗಳನ್ನು ಆರಿಸುವ ಬಗ್ಗೆ ಮತ್ತೂ ಮುಸಲ್ಮಾನ ಹಾಗೂ ಹರಿಜನ ಸ್ಥಾನಗಳ ಬಗ್ಗೆ ಮೇಲಿನ ಕಮಿಟಿಯವರಿಂದ ಬಂದ ಸೂಚನೆಗಳ ವಿಚಾರಮಾಡಲಾಯಿತು. ಆದಷ್ಟು ಬೇಗನೆ ಎಲ್ಲಾ ಸ್ಥಾನಗಳ ಬಗ್ಗೆಯೂ ಹುರಿಯಾಳುಗಳನ್ನು ನಿಲ್ಲಿಸಬೇಕೆಂದು ಗೊತ್ತಾಯಿತು.

ಇಂಡಿಯಾ ಆಕ್ಟಿನ ೭ನೇ ಕಲಮಿನ ಪ್ರಕಾರ ಯಾವ ಹುರಿಯಾಳಿಗೆ ನಿಲ್ಲಲು ಬರುವದಿಲ್ಲ; ಅಂಥವರು ಸರಕಾರಕ್ಕೆ ಅರ್ಜಿಮಾಡುವ ಬಗ್ಗೆ ವಿಚಾರವಾಗಿ ಅರ್ಜಿಗಳ ನಮೂನೆಯನ್ನು ತಯಾರಿಸಿ ಎಲ್ಲಾ ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿಗೆ ಕಳಿಸಬೇಕೆಂದು ಗೊತ್ತಾಯಿತು.

ಕರ್ನಾಟಕಕ್ಕೆ ಮುಂಬೈ ಕೌನ್ಸಿಲಿನಲ್ಲಿ ದೊರೆತಿಳ ಸ್ಥಳಗಳ ಬಗ್ಗೆ ಹುರಿಯಾಳುಗಳನ್ನು ನಿಲ್ಲಿಸುವ ಕೆಲಸವನ್ನು ಮುಂದೆ ಹಾಕಬಾರದೆಂದು ಬಂದ ಸೂಚನೆಯ ವಿಚಾರವಾಗಿ ಇದೇ ೨೦ನೇ ತಾರೀಖಿನೊಳಗಾಗಿ ಅರ್ಜಿ ತರಿಸಿ ೩೦ನೇ ತಾರೀಖಿನ ವಳಗಾಗಿ ಅವುಗಳ ಕೊನೆಯ ನಿರ್ಣಯ ಮಾಡಬೇಕೆಂದು ಗೊತ್ತಾಯಿತು.

ಮುಂಬೈ ಇಲಾಖೆಯ ವತಿಯಿಂದ ಹೊರಡುವ ಉದ್ದೇಶ ಪತ್ರಿಕೆಯಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಯಾವ ವಿಷಯಗಳನ್ನು ಸೇರಿಸಬೇಕೆಂಬ ಬಗ್ಗೆ ಬಹಳ ಹೊತ್ತು ಚರ್ಚೆಯಾಗಿ ಕರ್ನಾಟಕ ಏಕೀಕರಣ, ಕರ್ನಾಟಕ ಯುನಿವರಸಿಟಿ, ಸ್ವತಂತ್ರ ಒಂದರ ಔದ್ಯೋಗಿಕ ಉನ್ನತಿ, ಜಂಗಲದಿಂದಾಗುವ ರೈತರ ಕಷ್ಟ ನಿವಾರಣೆ, ಮುಂತಾದ ವಿಷಯಗಳನ್ನು ಸೇರಿಸಬೇಕೆಂದು ಗೊತ್ತಾಯಿತು. ಈ ವಿಷಯಗಳು ಮತ್ತೂ ನಮಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಸೇರಿಸಿ ನಮ್ಮ ಪ್ರಾಂತ್ಯದ ಪರವಾಗಿ ಉದ್ದೇಶಪತ್ರಿಕೆಯನ್ನು ತಯಾರಿಸಬೇಕೆಂದು ನಿರ್ಣಯವಾಗಿ ಆ ಕೆಲಸವು ಶ್ರೀಯುತ ದಿವಾಕರ, ಹುಕ್ಕೇರಿಕರ, ಪಾಟೀಲ ವೀರನಗೌಡರು ಮತ್ತು ಕರಮಕರ ಇವರ ಕಡೆಗೆ ಒಪ್ಪಿಸಲಾಯಿತು. ಆ ಮೇಲೆ ಎಲ್ಲಾ ಪ್ರತಿನಿಧಿಗಳು ತಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ಸಭೆಯ ಮುಂದ ಇಟ್ಟರು. ಸಭೆಯ ಕೆಲಸ ಮುಗಿದ ನಂತರ ಬಿಜಾಪುರ ಜಿಲ್ಲೆಯ ಬರಗಾಲದ ಬಗ್ಗೆ ಯಾವ ರೀತಿಯಿಂದ ಕೆಲಸವಾಗಬೇಕೆಂಬ ಬಗ್ಗೆ ಚರ್ಚೆಯಾಯಿತು.

ಫೈಜಪೂರ ಕಾಂಗ್ರೆಸ್ಸಿಗೆ ಪ್ರತಿನಿಧಿ ಕಳಿಸಿರಿ.

೩೦ನೇ ಸಪ್ಟಂಬರ ವರೆಗೆ ಕಾಂಗ್ರೆಸ್ ಸಭಾಸದರಾಗಿರಿ!

ಫೈಜಪೂರ ಕಾಂಗ್ರೆಸ್ಸು— ಈ ಕಾಂಗ್ರೆಸ್ಸು, ಹಳ್ಳಿಗರ ಕಾಂಗ್ರೆಸ್ಸು, ಒಕ್ಕಲಿಗರ ಕಾಂಗ್ರೆಸ್ಸು. ರೈತರ ಕಾಂಗ್ರೆಸ್ಸು ಆಗುವದು. ಅದು ಮಹಾರಾಷ್ಟ್ರದ ಒಂದು ಹಳ್ಳಿಯಲ್ಲಿ ನೆರೆಯುವದು. ಅದು ಕರ್ನಾಟಕಕ್ಕೆ ಬಹಳ ಸಮೀಪವಿದೆ. ಆದುದರಿಂದ ಕರ್ನಾಟಕದವರು ಆದಷ್ಟು ಹೆಚ್ಚು ಜನರನ್ನು ಪ್ರತಿನಿಧಿಗಳನ್ನಾಗಿ ಕಳುಹಿಸುವುದು ಅವಶ್ಯವು.

೨೫೦ ಸಭಾಸದರು—೨೫೦ ಜನ ಕಾಂಗ್ರೆಸ್ ಸಭಾಸದರು ಒಬ್ಬೊಬ್ಬ ಪ್ರತಿನಿಧಿಯನ್ನು ಆರಿಸಿ ಆ ಕಾಂಗ್ರೆಸ್ಸಿಗೆ ಕಳಿಸಲು ಬರುವದು. ಈ ಸಂಖ್ಯೆಯು ಅಷ್ಟು ದೊಡ್ಡದಲ್ಲ. ಬೆಳಗಾವಿ ಜಿಲ್ಲೆಯ ಶೇಡಬಾಳದಂಥ ಹಳ್ಳಿಯಲ್ಲಿ ಸಹ ೨೫೦ ಸಭಾಸದರಾಗಿದ್ದಾರೆ. ಅದು ಓರ್ವ ಪ್ರತಿನಿಧಿಯನ್ನು ಗಳಿಸುತ್ತದೆ. ಅಂಥ ಬಳಿಕ ದೊಡ್ಡ ದೊಡ್ಡ ಹಳ್ಳಿಯವರು ಕೈಲಾಗದಂತೆ ಕೂಡ್ರುವದು ಅಳುಬುರುಕತನವು.

೩೦ನೇ ಸಪ್ಟಂಬರ ವರೆಗೆ

ಸಭಾಸದರಾಗುವ ಕೊನೆಯ ತಾರೀಖನ್ನು ಪಂ. ಜವಾಹರಲಾಲನೆಹರು ಇವರು ಬೇಕೆಂದು ಮುಂದರಿಸಿದ್ದಾರೆ. ಆದಷ್ಟು ಹೆಚ್ಚು ಜನರು ಕಾಂಗ್ರೆಸ್ ಸಭಾಸದರಾಗಬೇಕು ಹಾಗೂ ಕಾಂಗ್ರೆಸ್ಸಿಗೆ ಬರಬೇಕೆಂಬುದೇ ಅವರ ಉದ್ದೇಶವು.

ಕೂಡಲೇ ಸಭಾಸದರಾಗಿರಿ.

ಕಾರಣ ಕರ್ನಾಟಕಸ್ಥರೇ ಕೂಡಲೇ ಕಾಂಗ್ರೆಸ್ ಸಭಾಸದರಾಗಿರಿ. ನಮಗೆ ಪೂರ್ಣ ಸ್ವರಾಜ್ಯವು ಬೇಕೆಂದು ಸಾರಿರಿ.

ರಂಗನಾಥ ದಿವಾಕರ,

ಗೌ. ಕಾರ್ಯದರ್ಶಿ,

ಕರ್ನಾಟಕ ಪ್ರಾ. ಕಾ. ಕ.

ದಕ್ಷಿಣಕನ್ನಡ ಜಿಲ್ಲಾ ಟೀಚರ್ ಮೆನೇಜರರ ಸಂಘದ ಮಹಾಸಭೆ

ತಾರೀಕು 30-8-36ರಲ್ಲು ಮಂಗಳೂರು ಸೆಂಟ್ರಲ್ ಕೋ-ಓಪರೇಟಿವ್ ಬ್ಯಾಂಕಿನ ಕಟ್ಟಡದಲ್ಲಿ ಸಂಘದ ಅಧ್ಯಕ್ಷರಾದ ರಾ। ಗಣಪಯ್ಯಸೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಗೆ ಎಲ್ಲಾ ತಾಲೂಕುಗಳ ಪ್ರತಿನಿಧಿಗಳು ಹಾಜರಿದ್ದರಲ್ಲದೆ, ರಾ। ಮೊಳಹಳ್ಳಿ ಶಿವರಾಯರವರೂ, ರಾ। ಉಳ್ಳಾಲ ಮಂಗೇಶರಾಯರವರೂ ದಯಮಾಡಿಸಿದ್ದರು.

ಸದ್ರಿ ಸಭೆಯಲ್ಲಿ ಪಾಸಾದ ನಿರ್ಣಯ

1 ಮೆ। ಡ್ಯಾರೆಕ್ಟರ್ ಧೊರೆಗಳವರು ಇದೇ ಸಪ್ಟಂಬ್ರ ತಿಂಗಳಲ್ಲಿ ಈ ಜಿಲ್ಲೆಯನ್ನು ಸಂದರ್ಶಿಸಲಿಕ್ಕಿದ್ದಾರೆಂಬ ವರ್ತಮಾನವು, ಇಲ್ಲಿ ಇತ್ತೀಚೆಗೆ ಅನುಮಾನಕರವೆಂಬದಾಗಿ ಹೊಸ ವರ್ತಮಾನ ಹಬ್ಬಿರುವದರಿಂದ ಈ ಸಭೆಯು ತಮ್ಮ ಮನವಿಯನ್ನು ಅರ್ಪಿಸುವುದಕ್ಕಾಗಿ ಮೆ। ಡ್ಯಾರೆಕ್ಟರ್ ಧೊರೆಗಳವರನ್ನು ಈ ಬರುವ ಸಪ್ಟಂಬರ ತಿಂಗಳಲ್ಲಿ ಈ ಜಿಲ್ಲೆಗೆ ಚಿತ್ತೈಸುವಂತೆ ಅವರಿಗೆ ಆಗ್ರಹಪೂರ್ವಕ ಪ್ರಾರ್ಥಿಸಿಕೊಳ್ಳಬೇಕಾಗಿಯೂ

2 ಎೈಡೆಡ್ ಶಾಲೆಗಳಿಗೆ ಕೊಡತಕ್ಕ ಗ್ರೇಂಟಿನ ದರವು ಬಹಳ ಕಡಿಮೆಯಾಗಿದ್ದು ಶಾಲೆಗಳನ್ನು ನಡೆಯಿಸಲು ಬಹಳ ಕಷ್ಟಸಾಧ್ಯವಾದುದರಿಂದ ಈ ಕೆಳಗಿನ ದರದಲ್ಲಿ ಗ್ರೇಂಟಿನ ಸ್ಕೇಲನ್ನು ಏರಿಸಿಕೊಡಬೇಕಾಗಿಯೂ

(a) ಲೋವರ್‌ಗ್ರೇಡ್ ತಿಂಗಳಿಗೆ ಅನ್‌ಟ್ರೈನ್ಡ್ ರೂಪಾಯಿ 8—0—0 ಟ್ರೈನ್ಡ್ ರೂಪಾಯಿ 12—0—0. (b) ಹಯರ್‌ಗ್ರೇಡ್ ತಿಂಗಳಿಗೆ ಅನ್‌ಟ್ರೈನ್ಡ್ ರೂಪಾಯಿ 12—0—0 ಟ್ರೈನ್ಡ್ ರೂ. 16-0-0 (c) ಸೆಕೆಂಡರೀಗ್ರೇಡ್ ತಿಂಗಳಿಗೆ ಅನ್‌ಟ್ರೈನ್ಡ್ ರೂ. 16-0-0 ಟ್ರೈನ್ಡ್ ರೂ. 20—0—0

3 ಉತ್ತಮವಾದ ಎೈಡೆಡ್ ಶಾಲೆಗಳಿಗೆ ಉತ್ತೇಜನ ಕೊಡುವುದಕ್ಕಾಗಿ ಶೇಕಡ ಕೂಡಿಸಿ ಕೊಡುತ್ತಿದ್ದ ಟೀಚಿಂಗ್ ಗ್ರೇಂಟನ್ನು ಇತ್ತೀಚಗೆ ನಿಲ್ಲಿಸಿಬಿಟ್ಟದರಿಂದ ಸ್ಕೂಲ್‌ಫೀಸ್ ಏನೂ ವಸೂಲಾಗದ ಹಳ್ಳಿ ಶಾಲೆಗಳಿಗೂ ಹಿಂದುಳಿದ ಜಾತಿಯ ಮಕ್ಕಳಿರುವ ಶಾಲೆಗಳಿಗೂ ಮುಖ್ಯವಾಗಿ ಹಯರ್ ಎಲಮೆಂಟರೀ ಶಾಲೆಗಳಿಗೂ ಬಹಳ ಗಂಡಾಂತರ ಉಂಟಾಗಿದೆ. ಆದ್ದರಿಂದ ಉತ್ತಮವಾದ ಎೈಡೆಡ್ ಶಾಲೆಗಳಿಗೆ ಶೇಕಡ 50ರ ವರೇಗೆ ಅಭಿವೃದ್ಧಿ ಗ್ರೇಂಟನ್ನು ಕೊಡಿಸಿಕೊಡುವಂತೆ ಇನ್ಸ್‌ಪೆಕ್ಟಿಂಗ್ ಆಫೀಸರರೀಗೆ ತಿಳಿಸಬೇಕಾಗಿಯೂ

4 ಸ್ಕೂಲು ಸಲಕರಣೆ ಸಾಹಿತ್ಯ ಸಾಮಗ್ರಿಗಳು ಸಾಕಷ್ಟು ಇಲ್ಲವೆಂಬ ಕಾರಣದಿಂದ ಇನ್ಸ್‌ಪೆಕ್ಟಿಂಗ್ ಆಫೀಸರರು ಟೀಚಿಂಗ್ ಗ್ರಾಂಟನ್ನು ತಗ್ಗಿಸುವುದರಿಂದಲೂ ಸರಕಾರವು ಈ ಜಿಲ್ಲೆಗೆ ಬಿಲ್ಡಿಂಗ್ ವ ಫರ್ನೀಚರು ಗ್ರಾಂಟನ್ನು ಕೆಲವು ವರ್ಷಗಳಿಂದ ಕೊಡದಿರುವ ನಿಮಿತ್ತದಿಂದಲೂ ಖಾಸಗಿ ಶಾಲಾ ಮೆನೆಜರರೀಗೆ ಬಹಳ ತೊಂದ್ರೆ ಉಂಟಾದ್ದರಿಂದ ಈ ವರ್ಷ ಈ ಜಿಲ್ಲೆಗೆ ಬಿಲ್ಡಿಂಗ್ ವ, ಫರ್ನೀಚರು ಗ್ರಾಂಟು ಕೊಡಿಸುವಂತೆ ಕೇಳಿಕೊಳ್ಳಬೇಕಾಗಿಯೂ

5 ಬೇಕ್ ವರ್ಡ್ ಅಲ್ಲದ ಬಡ ಹುಡುಗಿಯರ ವಿದ್ಯಾಭ್ಯಾಸಕ್ಕೆ ಸರಕಾರವು ಈ ಜಿಲ್ಲೆಗೆ ಕೊಡತಕ್ಕ ಕಂಸೆಷನ್‌ಸೆನ್ಸ್ ಗ್ರಾಂಟು ಏನೇನೂ ಸಾಕಾಗದೆ ಅವರಲ್ಲಿಯೂ ವಿಶೇಷ ಶೇಕಡ ಕಡಿತವಾಗುತ್ತಿರುವುದರಿಂದ ಸದರೀ ಗ್ರೇಂಟನ್ನು ಈ ಜಿಲ್ಲೆಗೆ ಬೇಕಾಗುವಷ್ಟು ಕೊಡಿಸಬೇಕಾಗಿಯೂ

6 ಸರಕಾರವು ಈ ಜಿಲ್ಲೆಗೆ ಕೊಡುವ ಟೀಚಿಂಗ್ ಗ್ರೇಂಟು ಕೆಲವು ವರ್ಷಗಳ ಲಾಗಾಯಿತು ಸ್ಕೇಲ್ ಗ್ರೇಂಟಿಗಿಂತಲೂ, ಕಡಿಮೆಯಾಗುತ್ತಿರುವುದರಿಂದ ಏಡೆಡ್ ಶಾಲೆಗಳನ್ನು ನಡಿಸಲಿಕ್ಕೆ ಬಹಳ ಕಷ್ಟಕರವಾಗಿದೆ. ಆದ್ದರಿಂದ ಚಾಲ್ತಿ ವರ್ಷದಲ್ಲಿ ಈ ಜಿಲ್ಲೆಗೆ ಬೇಕಾದ ಸ್ಕೇಲ್ ಗ್ರೇಂಟಿನಷ್ಟಾದರೂ ಟೀಚಿಂಗ್‌ಗ್ರೇಂಟನ್ನು ಸೆಂಕ್ಶನ್ ಮಾಡಬೇಕಾಗಿಯೂ

7 ಸರಕಾರದವರು ಮದ್ರಾಸ್ ಸಂಸ್ಥಾನದ ಎಲ್ಲಾ ಜಿಲ್ಲೆಗಳಿಗೆ ಟೀಚಿಂಗ್ ಗ್ರೇಂಟನ್ನು ಸೆಂಕ್ಶನ್ ಮಾಡಿದ ಹುಕುಂಮನ್ನು ನೋಡುವಾಗ್ಯೆ 1930ನೇ ಇಸವಿಯಲ್ಲಿ ಇತರ 18 ಜಿಲ್ಲೆಗಳಲ್ಲಿ 2,93,160 ರೂ, 1931ನೇ ಇಸವಿಯಲ್ಲಿ ಇತರ 14 ಜಿಲ್ಲೆಗಳಲ್ಲಿ ರೂ, 56,948 1932ರಲ್ಲಿ 13 ಜಿಲ್ಲೆಗಳಲ್ಲಿ 29,529 ರೂ, 1934ರಲ್ಲಿ 14 ಜಿಲ್ಲೆಗಳಲ್ಲಿ 19,769 ರೂ,1935ರಲ್ಲಿ 15 ಜಿಲ್ಲೆಗಳಲ್ಲಿ ರೂ, 16,236 ಖರ್ಚಾಗದೆ ಹೆಚ್ಚಿಗೆ ಉಳಿತಾಯವಾಗಿರುವಾಗ್ಯೆ ನಮ್ಮ ಜಿಲ್ಲೆಯಲ್ಲಿ ಈ ಯಾವ ವರ್ಷಗಳಲ್ಲಿ ಈ ರೀತಿಯ ಉಳಿತಾಯ ಇಲ್ಲದಿರುವದು ಮಾತ್ರವಲ್ಲದೆ 1931ನೇ ಇಸವಿಯಲ್ಲಿ ಶೇಕಡಾ 5ರಂತೆಯೂ, 1932ನೇ ಇಸವಿಯಲ್ಲಿ ಶೇಕಡಾ 20ರಂತೆಯೂ, 1933ರಲ್ಲಿ ಶೇಕಡಾ 23½ರಂತೆಯೂ, 1934ರಲ್ಲಿ ಶೇಕಡಾ 18½ರಂತೆಯೂ. 1935ರಲ್ಲಿ ಶೇಕಡಾ 25ರಂತೆಯೂ, 1936ರಲ್ಲಿ ಶೇಕಡಾ 12½ರಂತೆಯೂ ಪ್ರತಿ ಶಾಲೆಯ ಟೀಚಿಂಗ್ ಗ್ರೇಂಟಿನಲ್ಲಿ ಕಡಿತ ಮಾಡಲ್ಪಟ್ಟಿತು. ಬೇರೆ ಜಿಲ್ಲೆಗಳಲ್ಲಿ ಹೀಗೆ ಅನಾವಶ್ಯಕವಾಗಿ ಹಣ ಉಳಿತಾಯವಿದ್ದರೂ ಈ ಜಿಲ್ಲೆಯಲ್ಲಿ ವರ್ಷಂಪ್ರತಿ ಕಡಿತ ಬೀಳುವುದರಿಂದ ಸದ್ರಿ ಉಳಿತಾಯದ ಹಣವನ್ನು ಕಡಿತ ಬಿದ್ದ ಜಿಲ್ಲೆಗಳಿಗೆ ಹಂಚಿ ಕೊಡುವಂತೆಯೂ

8 ಇನ್ಸ್‌ಪೆಕ್ಟಿಂಗ್ ಆಫೀಸರರು ಪ್ರತಿಶಾಲೆಗೆ ಶಿಫಾರಸುಮಾಡಿದ ಟೀಚಿಂಗ್ ಗ್ರೇಂಟಿನಲ್ಲಿ ಡಿ. ಇ. ಓ. ರವರು ಇಂಕ್ರೀಸ್ ಯಾ ಡಿಕ್ರೀಸ್ ಮಾಡಿ ವ್ಯತ್ಯಾಸಪಡಿಸುವುದಾಗಿದ್ದರೆ, ಅದಕ್ಕೆ ಬಲವಾದ ಕಾರಣಗಳನ್ನು ಕೊಡಬೇಕೆಂತಲೂ, ಕಾರಣಗಳನ್ನು ಕೊಡದ ಯಾ ಶಾಲೆಗಳನ್ನು ಸಂದರ್ಶಿಸದೆ ಗ್ರೇಂಟಿನಲ್ಲಿ ಯಾವ ವ್ಯತ್ಯಾಸವನ್ನು ಮಾಡಬಾರದೆಂತಲೂ ಡಿ. ಇ. ಓ.ರವರಿಗೆ ಸೂಚಿಸಬೇಕಾಗಿಯೂ

9 ಕೆಲಸ ಮಾಡಿದ ಉಪಾಧ್ಯಾಯರ ಸ್ಕೇಲ್ ಗ್ರೇಂಟನ್ನು ಡಿಸ್‌ಎಲೌ ಮಾಡುವ ಸಂದರ್ಭದಲ್ಲಿ ಸದ್ರಿ ಕಡಿತದ ವಿಷಯವನ್ನು ವರ್ಷಾವಧಿ ಪರೀಕ್ಷೆ ಮಾಡಿದೊಡನೆ ಆಯಾಯ ಮೆನೇಜುಮೆಂಟಿಗೆ ಬರಹ ಮೂಲಕ ತಿಳಿಸಬೇಕೆಂಬ ರೂಲ್ ಇದ್ದರೂ (ಸೆಕ್ಷನ್ 42-2) ಹಾಗೆ ತಿಳಿಸದೆ ಇದ್ದು ಮರುವರ್ಷ ಗ್ರೇಂಟು ಸಿಕ್ಕುವ ಕಾಲದಲ್ಲಿ ಮೆನೇಜರರಿಗೆ ತಿಳಿದುಬರುವುದರಿಂದ ಈ ವರೆಗೆ ಹೆಚ್ಚು ಕಡಿಮೆ ಸುಮಾರು 2 ವರ್ಷಗಳಲ್ಲಿ ಆ ಉಪಾಧ್ಯಾಯರಿಗೆ ಅನಾವಶ್ಯಕ ಸಂಬಳ ತೆರುವ ನಷ್ಟವು ಮೆನೇಜ್‌ಮೆಂಟಿಗೆ ಉಂಟಾಗುತ್ತದೆ. ಆದ್ದರಿಂದ ಅಂಥಾ ಕಡಿತದ ಪ್ರಶ್ನೆಯನ್ನು ವರ್ಷಾವಧಿ ಪರೀಕ್ಷೆಯಾದ ಕೂಡಲೆ ಆಯಾಯ ಮೆನೇಜುಮೆಂಟಿಗೆ ಇನ್ಸ್‌ಪೆಕ್ಟಿಂಗ್ ಆಫೀಸರರು ತಿಳಿಸುವಂತೆ ಡಿ. ಇ. ಓ. ರವರಿಗೆ ಹುಕುಂ ಕೊಡಬೇಕಾಗಿಯೂ

10 ಬೋರ್ಡು ಶಾಲೆಗಳಲ್ಲಿ 3ನೇ ಕ್ಲಾಸ್ ವರೆಗೆ ಸ್ಕೂಲ್‌ಫೀಸು ಮಾಫಿ ಇರುವಂತ ಎೈಡೆಡ್ ಶಾಲೆಗಳಲ್ಲಿಯೂ ಲೋವರ್ ಎಲಿಮೆಂಟರಿ ಕ್ಲಾಸುಗಳ ವಿದ್ಯಾರ್ಥಿಗಳಿಗೆ ಸ್ಕೂಲ್ ಫೀಸು ಮಾಫಿ ಮಾಡುವಂತೆಯೂ ಹಾಗೆ ಫೀಸು ಮಾಫಿಯಿಂದ ಮೆನೇಜರರಿಗೆ ಉಂಟಾದ ನಷ್ಟವನ್ನು ಸರಕಾರದಿಂದ ಕಂಪೆನ್‌ಸೇಶನ್ ಗ್ರಾಂಟಾಗಿ ಕೊಡಿಸುವಂತೆಯೂ.

11 ಈ ಜಿಲ್ಲೆಯಲ್ಲಿ ನಾಕಷ್ಟು ಶಾಲೆಗಳು ಪ್ರಚಾರಕ್ಕೆ ಬಂದುದರಿಂದ ಲೋವರ್ ಎಲಿಮೆಂಟರಿ ಕ್ಲಾಸುಗಳಲ್ಲಿರುವ ವಿದ್ಯಾರ್ಥಿಗಳಿಗೆ ಖಡ್ಡಾಯ ಮತ್ತು ಮಾಫಿ ಶಿಕ್ಷಣ ಕೊಡಿಸುವಂತೆ ಸರಕಾರಕ್ಕೆ ಸೂಚಿಸಬೇಕಾಗಿಯೂ

12 ಈ ಜಿಲ್ಲೆಯಲ್ಲಿ ಟೀಚರ್ ಮೆನೇಜರರ ಶಾಲೆಗಳು 165ಕ್ಕೆ ಮೇಲ್ಪಟ್ಟಿದ್ದರೂ ಅವರ ಪ್ರತಿನಿಧಿ ಮೆಂಬರರಾಗಿ ಡಿ ಇ. ಕೌನ್ಸಿಲಿನಲ್ಲಿ 2 ಸ್ಥಾನಗಳು ಮಾತ್ರ ಇರುವುದರಿಂದ ಇದು ಏನೂ ಸಾಕಾಗದ ಕಾರಣ ತಾಲೂಕಿಗೆ ಒಂದರಂತೆ 6 ಸ್ಥಾನಗಳನ್ನು ಡಿ. ಇ. ಕೌನ್ಸಿಲಿನಲ್ಲಿ ಕೊಡಿಸುವಂತೆಯೂ

13 1235-36ನೇ ಇಸವಿಯ ಟೀಚಿಂಗ್ ಗ್ರಾಂಟನ್ನು ಡಿ. ಇ. ಓ.ರವರು ಕೌನ್ಸಿಲಿಗೆ ಶಿಫಾರಸು ಮಾಡುವಾಗ್ಯೆ ಒಂದೊಂದು ತಾಲೂಕಿಗೆ ಒಂದೊಂದು ವಿಧ, ಹಿಂದೂ ಮತ್ತು ಕ್ರೈಸ್ತ ಶಾಲೆಗಳಿಗೆ ಒಂದೊಂದು ವಿಧ, ಜೂನಿಯರ ಮತ್ತು ಸೀನಿಯರ್ ಡಿಪ್ಟಿ ಇನ್ಸ್‌ಪೆಕ್ಟರರು ಪರೀಕ್ಷೆ ಮಾಡಿದ ಶಾಲೆಗಳಿಗೆ ಒಂದೊಂದು ವಿಧ, ಹುಡುಗರ ಮತ್ತು ಹುಡುಗಿಯರ ಶಾಲೆಗಳಿಗ ಒಂದೊಂದು ವಿಧ. ಈ ರೀತಿ ಯಾವ ತರದ ನ್ಯಾಯವಾದ ಅಳತೆ ಮಾನವನ್ನೂ ಇಟ್ಟುಕೊಳ್ಳದೆ ಗ್ರಾಂಟಿನಲ್ಲಿ ವ್ಯತ್ಯಾಸ ಮಾಡಿದ್ದರಿಂದ ಈ ಜಿಲ್ಲೆಯಲ್ಲಿ ಅನ್ಯಾಯ ಹೊಂದಿದ ಶಾಲೆಗಳ ಮೆನೇಜರರು ತುಂಬಾ ಕೋಲಾಹಲವನ್ನು ಎಬ್ಬಿಸಲು, ಡಿ. ಇ. ಕೌನ್ಸಿಲಿನವರು ಗ್ರಾಂಟು ಮೀಟಿಂಗನ್ನು ಮಾರ್ಚಿಯಿಂದ ಎಪ್ರಿಲ್ ವರೆಗೆ 4ಸರ್ತಿ ಜರಗಿಸಿದರೂ ಸಂಪೂರ್ಣ ಸರಿಪಡಿಸಲಿಕ್ಕೆ ಸಾಧ್ಯವಾಗಲಿಲ್ಲ ಆದ್ದರಿಂದ ಡಿ. ಇ. ಓ. ರವರು ಈ ರೀತಿ ಹಲವು ತರದ ವ್ಯತ್ಯಾಸಗಳಿಂದ ಗ್ರಾಂಟನ್ನು ಶಿಫಾರಸು ಮಾಡದಂತೆ ಡಿ. ಇ. ಓ.ರವರಿಗೆ ಸೂಚಿಸಬೇಕಾಗಿಯೂ

14 ಟೀಚರ್ ಮೆನೇಜರರ ವ ಹಿಂದೂ ಶಾಲೆಗಳ ಮತ್ತು ಇತರ ಪಬ್ಲಿಕ್ ಶಾಲೆಗಳ ಎದುರಿಗೆ ಕೆಥೋಲಿಕ್ ಶಾಲೆಗಳನ್ನು ತೆರೆಯಲ್ಪಡುವುದೂ ಒಂದು ಹಾಯರ್ ಎಲಿಮೆಂಟರಿ ಶಾಲೆ ಇರುವಲ್ಲಿ ಮತ್ತೊಂದು ಕೆಥೋಲಿಕ್ ಹಾಯರ್ ಎಲಿಮೆಂಟರಿ ಶಾಲೆಯನ್ನು ಸ್ಥಾಪಿಸುವುದೂ ಈ ಜಿಲ್ಲೆಯಲ್ಲಿ ಇತ್ತೀಚೆಗೆ ವಿಶೇಷವಾಗುತ್ತಾ ಬಂದು, ಇದಕ್ಕೆ ಈಗಿನ ಕೆಥೋಲಿಕ್ ಶಾಲೆಗಳ ಸ್ಪರ್ಧೆಯಲ್ಲಿ ಉತ್ಸಾಹ ಪೂರ್ವಕವಾಗಿ ಭಾಗ ವಹಿಸಿ ನ್ಯಾಯಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಿರುವುದರಿಂದ ಈ ಜಿಲ್ಲೆಯಲ್ಲಿ ಹಿಂದೂ ಕೆಥೋಲಿಕ್ ಶಾಲೆಗಳ ಜಗಳವು ಪರಮಾವಧಿಗೆ ಮುಟ್ಟಲಿಕ್ಕೆ ಕಾರಣವಾಗಿರುದೆ. ಆದ್ದರಿಂದ ಒಂದು ಜನರಲ್ ಶಾಲೆಯು ನಡೆಯುತ್ತಿರುವಲ್ಲಿ ಅವರ ಸಮೀಪವಾಗಿ ಕೆಥೋಲಿಕ್ ಶಾಲೆಯು ತೆರೆಯಲ್ಪಟ್ಟರೆ ಅದಕ್ಕೆ ಮಂಜೂರಾತಿಯನ್ನು ಕೊಡದಂತೆಯೂ, ಕಥೋಲಿಕ್ ಇನ್ಸ್‌ಪೆಕ್ಟಿಂಗ್ ಆಫೀಸರರೂ ಡಿ. ಇ. ಓ.ರವರೂ ಈ ಜಗಳವನ್ನು ಬೆಳೆಸಿ ಕೆಥೋಲಿಕ ಶಾಲೆಗಳ ಪರವಾಗಿ ಕೆಲಸಮಾಡದಂತೆಯೂ ಅವರಿಗೆ ಎಚ್ಚರಿಸಬೇಕಾಗಿ ಮೆ। ಡ್ರೈರೆಕ್ಟರ್ ಧೊರೆಗಳವರನ್ನು ಪ್ರಾರ್ಥಿಸಿ ಕೊಳ್ಳುವುದಾಗಿಯೂ ನಿರ್ಣಯಿಸಲಾಯಿತು.

15 ಈ ನಿರ್ಣಯಗಳ ಮನವಿಯನ್ನು ಮೆ। ಡೈರೆಕ್ಟರ್ ಧೊರೆಗಳವರಿಗೆ ಕಳುಹಿಸುವುದಲ್ಲದೆ, ಡೆಪ್ಯುಟೇಶನಿನ ಪ್ರತಿನಿಧಿಗಳಾದ ಕೆ. ಗಣಪಯ್ಯ ಶೆಟ್ಟಿ ಕೆ. ಸುಬ್ಬಣ್ಣಯ್ಯ ಜ. ಅನಂತಯ್ಯ, ಎಸ್. ದೂಮಣ್ಣ ನ್ಯಾಕ, ಪಿ ವೆಂಕಟ್ರಮಣ ಭಟ್ಟ, ಡಿ. ವಿಷ್ಣು ಮೂರ್ತಿ ಹೊಳ್ಳ, ಇವರನ್ನೂ ಡೆಪ್ಯುಟೇಶನಿನ ಲೀಡರರಾಗಿ ರಾ. ಮೊಳಹಳ್ಳಿ ಶಿವರಾಯರನ್ನೂ, ರಾ. ನಡುಂಪಳ್ಳಿ ರಾಮರಾಯರನ್ನೂ, ರಾ. ಉಳ್ಳಾಲ ಮಂಗೇಶ ರಾಯರನ್ನೂ ಆರಿಸಲಾಯಿತು.

16 ಮೆ। ಡೈರೆಕ್ಟರ್ ಧೊರೆಗಳವರಿಗೆ ಡೆಪ್ಯುಟೇಶನ್ ಕೊಂಡು ಹೋಗುವ ಒಸ್ಸೆ ಪ್ರೋಗ್ರಾಮಿನಲ್ಲಿ ಸೇರಿಸಬೇಕಾಗಿ ಈ ಸಂಘದ ಪ್ರೆಸಿಡೆಂಟರು ವ. ಕಾರ್ಯದರ್ಶಿಯವರು ಡಿ. ಇ. ಓ.ರವರಿಗೆ ಬರೆಕೊಂಡ ಕಾಗದಕ್ಕೆ ಉತ್ತರವಾಗಿ ಡಿ. ಇ. ಓ.ರವರಿಂದ ಬಂದ ನಂಬ್ರ R. C $\frac{4}{36}$ ನೇ ಕಾಗದವನ್ನು ಓದಲಾಯಿತು. ಅದಕ್ಕೆ ಉತ್ತರದಾಗಿ ಈ ಸಭೆಯಲ್ಲಿ ಪಾಸಾದ ನಿರ್ಣಯದ ಕೋಪಿಯನ್ನು ಕಳುಹಿಸ ಬೇಕಾಗಿ ನಿರ್ಣಯಿಸಲಾಯಿತು.

17 ಈ ಸಂಘಕ್ಕೆ ಜಾಲ್ತಿಯಲ್ಲಿರುವ ರೂಲನ್ನು ಛಾಪಿಸುವ ಬಗ್ಗೆ ಆವಶ್ಯಕ ತಿದ್ದುಪಡಿಗಳನ್ನು ಸೇರಿಸಿ ಬರುವ ಮಹಾ ಸಭೆಯು ಮುಂದಿಡುವ ಬಗ್ಗೆ ರಾ। ಕೆ. ಗಣಪಯ್ಯ ಶೆಟ್ರು, ಕೆ. ಸುಬ್ಬಣ್ಣಯ್ಯ ಜ. ಅನಂತಯ್ಯ, ಪಿ. ವೆಂಕಟ್ರಮಣ ಭಟ್ಟ, ಎಸ್. ದೂಮಣ್ಣ ನ್ಯಾಕ ಇವರಿಂದ ಕೂಡಿದ ಕಮಿಟಿಯನ್ನು ಏರ್ಪಡಿಸಲಾಯಿತು.

ಕುರುಕಾಲು ಗಣಪಯ್ಯ ಶೆಟ್ಟಿ,

ಪ್ರೆಸಿಡೆಂಟ್.

ರೈತರಿಗೆ ಸರಕಾರದವರು ಕೊಡುವ ಮುಬಾದಿಲೆಗಳು.

ವ್ಯವಸಾಯದ ಸಂಬಂಧವಾಗಿ ಏನಾದರೂ ಕೃತಗಳನ್ನು ಮಾಡಲಿಕ್ಕಾಗಲಿ–ಬೆಂಕಿಯಿಂದ, ನೆರೆ ನೀರಿನಿಂದ ಯಾ ಬಿರುಗಾಳಿಯಿಂದ ನಾಶವಾದ ಮನೆಗಳನ್ನು ತಿರಿಗಿ ಕಟ್ಟಿಸುವುದಕ್ಕಾಗಲಿ–ಸಂಕಷ್ಟ ನಿವೃತ್ತಿಗಾಗಲಿ,–ಬೀಜ ಯಾ ಜಾನುವಾರುಗಳನ್ನು ಕ್ರಯಕ್ಕೆ ಪಡೆಯುವದಕ್ಕಾಗಲಿ–ನೀರನ್ನು ಮೊಗೆಯುಲಿಕ್ಕೆ ಬೇಕಾದ ಸಾಧನಗಳನ್ನು ಕಟ್ಟಿಸಲಿಕ್ಕಾಗಲಿ ಬಾವಿಗಳನ್ನು ತೋಡಿಸಲಿಕ್ಕಾಗಲಿ-ವ್ಯವಸಾಯಕ್ಕೆ ಬೇಕಾದ ಯಂತ್ರ, ಸಾಮುಗ್ರಿಗಳನ್ನು ಕ್ರಯಕ್ಕೆ ಪಡಕೊಳ್ಳಲಿಕ್ಕಾಗಲಿ–ಯಾ ವ್ಯವಸಾಯಕ್ಕೆ ಸಂಬಂಧಪಟ್ಟ ಇತರ ಉದ್ದಿಶ್ಯಗಳಿಗಾಗಲಿ–ರೈತರಿಗೆ ಸರಕಾರದವರು ಮುಬಾದಿಲೆಗಳನ್ನು ಕೊಡುತ್ತಾರೆ ಹೀಗೆ ಮುಬಾದಿಲೆಗಳನ್ನು ಕೊಡುವದು ಈ ಆಧಿಪತ್ಯದ ಭೂಕಂದಾಯ ಕ್ರಮದ ಮುಖ್ಯ ಲಕ್ಷಣಗಳಲ್ಲೊಂದಾಗಿದೆ ಸಂಕಷ್ಟಕಾಲಗಳಲ್ಲಿ ಈ ಮುಬಾದಿಲೆಗಳ ಕಂತುಗಳ ವಸೂಲಿಯನ್ನು ಸರಕಾರದವರು ಬಾಕಿ ಇಡುವರು. ಒಟ್ಟಾರೆ ಮೇಲೆ ಈ ಆಧಿಪತ್ಯದಲ್ಲಿ ಸರಾಸರಿಯಾಗಿ ಸರಕಾರದವರು ರೈತರಿಗೆ ಪ್ರತಿ ವರ್ಷವೂ ಸುಮಾರು 10 ಲಕ್ಷ ರೂಪಾಯಿ ಮುಬಾದಿಲೆಯಾಗಿ ಕೊಡುತ್ತಾರೆ

ವ್ಯವಸಾಯಗಾರರ ಮುಬಾದಿಲೆಗಳ ಆಕ್ಟಿನ ವ ಜಮೀನು ಆಬಾದಿನ ಮುಬಾದಿಲೆಗಳ ಆಕ್ಟಿನ ಮೇರೆಗೆ ಮುಬಾದಿಲೆಗಳನ್ನು ರೆವೆನ್ಯು ಇಲಾಖೆಯ ಅಧಿಕಾರಿಗಳು ಕೊಡುತ್ತಾರೆ. ನೀರು ಮೊಗೆಯುವ ಸಾಧನಗಳಿಗೂ ವ್ಯವಸಾಯ ಸಾಮುಗ್ರಿಗಳನ್ನು ಕ್ರಯಕ್ಕೆ ಪಡೆಯಲಿಕ್ಕೂ ಬೇಕಾದ ಮುಬಾದಿಲೆಗಳನ್ನು ಕೈಗಾರಿಕೆಗಳ ಡೈರೆಕ್ಟರರೂ ವ್ಯವಸಾಯ ಇಲಾಖೆಯ ಡೆಪ್ಯುಟಿ ಡೈರೆಕ್ಟರರೂ ಕೊಡುತ್ತಾರೆ. ಮುಬಾದಿಲೆಗಳ ಬಗ್ಗೆ ಬಂದ ಅರ್ಜಿಗಳ ಕುರಿತು ಜಾಗ್ರತೆಯಾಗಿ, ರೈತರೊಡನೆ ಸಹಾನುಭೂತಿಯಿಂದ ತನಿಖೆ ನಡಿಸಬೇಕಾಗಿ ಸರಕಾರದವರು ಎಲ್ಲಾ ಅಧಿಕಾರಿಗಳಿಗೆ ತಿಳಿಸಿರುವರು.

ತನ್ನ ಜಮೀನನ್ನಾಗಲಿ ತನಗೆ ವ್ಯವಸಾಯಕ್ಕೆ ಬೇಕಾದ ಸಾಮಾನು ಸಾಮುಗ್ರಿಗಳನ್ನಾಗಲಿ ದೂಷಿತಪಡಿಸಬೇಕೆಂದು ಅಪೇಕ್ಷಿಸುವ ಯಾವ ರೈತನಿಗಾದರೂ ಸರಕಾರದವರು ಆತನ ಜಮೀನಿನ ಜವಾಬ್ದಾರಿಯಿಂದ ಕಡಿಮೆ ದರದ ಬಡ್ಡಿಯಲ್ಲಿ ಮುಬಾದಿಲೆಗಳನ್ನು ಕೊಡುತ್ತಾರೆ. ಈ ಮುಬಾದಿಲೆಗಳನ್ನು ಅವರು ಸುಲಭವಾದ ವಾರ್ಷಿಕ ಕಂತುಗಳಿಂದ ಪಾವತಿಮಾಡಬಹುದು.

ಈ ಮುಬಾದಿಲೆಗಳಿಂದ ರೈತರು ಪ್ರಯೋಜನಪಡಿಯಬೇಕೆಂದು ಅವುಗಳ ಕುರಿತು ಮಾಡಿದ ಕ್ರಮಗಳನ್ನು ಉದಾರರೀತಿಯಲ್ಲಿ ಎಲ್ಲಾ ಕಡೆಗಳಲ್ಲಿ ಜ್ಯಾರಿಗೆ ತರಬೇಕಾಗಿ ಸರಕಾರದವರ ಅಪೇಕ್ಷೆಯಾಗಿರುತ್ತದೆ.

ತಮ್ಮ ಸಾಲ ಪರಿಹಾರಕ್ಕೆ ಕೂಡಾ ವ್ಯವಸಾಯಗಾರರು ಮುಬಾದಿಲೆಗಳನ್ನು ಪಡಿಯಲಿಕ್ಕೆ ಅನುಕೂಲವಾಗುವಂತೆ ಇತ್ತೀಚೆಗೆ 1884ನೇ ಇಸವಿಯ ವ್ಯವಸಾಯಗಾರರ ಮುಬಾದಿಲೆಗಳ ಆಕ್ಟನ್ನು ತಿದ್ದುಪಡಿಸಿಯದೆ 1936ನೇ ಇಸವಿಯ ಜೂನು ತಿಂಗಳಲ್ಲಿ ಇದನ್ನು ಈ ಜಿಲ್ಲೆಯ ಮಂಗಳೂರು, ಪಾಣೆಮಂಗಳೂರು, ಪುತ್ತೂರು ಮತ್ತು ವಿಟ್ಲ ಫಿರ್ಕೆಗಳಲ್ಲಿ ಜ್ಯಾರಿಗೆ ತಂದಿರುತ್ತದೆ. ಈ ಫಿರ್ಕೆಗಳಲ್ಲಿ ಈಗ ಸ್ಪೆಶಲ್ ಲೋನ್ಸ್ ಆಫೀಸರರು ಕೆಲಸವನ್ನು ಆರಂಭಿಸಿ, ಅರ್ಜಿಗಳನ್ನು ಸ್ವೀಕರಿಸಿ ತನಿಖೆ ನಡಿಸುತ್ತಿದ್ದಾರೆ ರೈತರಿಗೆ ಮುಬಾದಿಲೆಗಳನ್ನು ಕೊಡುವ ಬಗ್ಗೆ ಸರಕಾರದವರು ಅವರ ವಶ ಒಂದು ಲಕ್ಷ ಐವತ್ತು ಸಾವಿರ ರೂಪಾಯಿ ಇಟ್ಟಿರುವರು.

ರೈತರ ಕಾಡು

ಕೃಷಿಗಾರರಿಗೆ ತಮ್ಮ ನಿತ್ಯದ ಉಪಯೋಗದ ಬಗ್ಗೆ ಕಟ್ಟಿಗ ವಗೈರ ಕಾಡಿನಿಂದ ತರಬೇಕಾಗುತ್ತದೆ. ತಮ್ಮ ಜಾನುವಾರುಗಳನ್ನು ಮೇವಿನ ಬಗ್ಗೆ ಕಾಡುಗಳಲ್ಲಿರುವ ಒಳ್ಳೇ ಮೇವಿನ ಜಾಗಗಳಿಗೆ ಕಳುಹಿಸಬೇಕಾಗುತ್ತದೆ. ಸುರಕ್ಷಿತ ಪಡಿಸಿದ ಕಾಡುಗಳು ಸರಕಾರಿ ಆಡಳಿತೆಯಲ್ಲಿರುವಲ್ಲಿ ಜಂಗ್ಲಿ ಇಲಾಖೆಯ ಕೀಳು ನೌಕರರಿಗೂ ಹಳ್ಳಿ ವಾಸಿಗಳಾದ ಜನರಿಗೂ ಈ ಸಂಬಂಧವಾಗಿ ಯಾವಾಗಲೂ ಕ್ಲೇಶ ಕಲಹಗಳು ಹುಟ್ಟುತ್ತವೆ. ಇದನ್ನು ತಪ್ಪಿಸಬೇಕಾಗಿ ಸರಕಾರದವರು ಒಂದು ಹೊಸ ಏರ್ಪಾಡನ್ನು ಮಾಡಿರುವರು. ರೈತರಿಗೆ ಬೇಕಾದ ಕಟ್ಟಿಗೆ ಮತ್ತು ಮೇವು ಮಾತ್ರ ಹೆಚ್ಚಾಗಿ ತುಂಬಿರುವ ಸುರಕ್ಷಿತ ಕಾಡುಗಳನ್ನು ಸರಕಾರದವರು ಈ ಏರ್ಪಾಡಿನ ಮೇರೆಗೆ ಗ್ರಾಮಸ್ಥರೇ ಮೇಲ್ವಿಚಾರ ನೋಡುವಂತೆ ಫೋರೆಸ್ಟ್ ಪಂಚಾಯತುಗಳೆಂಬ ಸಮಿತಿಗಳ ಆಡಳಿತೆಗೆ ಬಿಟ್ಟುಕೊಡುತ್ತಾರೆ. ಒಂದು ಸುರಕ್ಷಿತ ಕಾಡು ಯಾವ ಗ್ರಾಮಗಳಿಗೆಲ್ಲಾ ಸಂಬಂಧಪಡುತ್ತದೋ ಆ ಗ್ರಾಮಗಳಲ್ಲಿರುವ ಜಾನುವಾರುಗಳ ಮ್ಹಾಲೀಕರು ಕೂಡಿ ತಮ್ಮೊಳಗೆ ಪ್ರತಿನಿಧಿಗಳನ್ನು ಆರಿಸುತ್ತಾರೆ. ಅಂಥಾ ಆರಿಸಿದ ಪ್ರತಿನಿಧಿಗಳು ಒಂದಾಗಿ ಕೂಡಿ ಈ ಸಮಿತಿಗಳು ಉಂಟಾಗುತ್ತವೆ. ತಮ್ಮ ಅಧಿಕಾರಕ್ಕೊಳಪಟ್ಟ ಕಾಡಿನಲ್ಲಿ ರೈತರು ಮೇವಿನ ಬಗ್ಗೆ ಜಾನುವಾರುಗಳನ್ನು ಕಳುಹಿಸಲಿಕ್ಕೂ ಚಿಲ್ಲರೆ ಕಾಡು ಉತ್ಪತ್ತಿಯನ್ನು ಕೈಕೊಂಡು ಉಪಯೋಗಿಸಲಿಕ್ಕೂ ಪರ್ಮಿಟುಗಳನ್ನು ಕೊಡುವ ಅಧಿಕಾರವು ಈ ಸಮಿತಿಗಳಿಗಿರುತ್ತದೆ. 1934-35ನೇ ವರ್ಷದ ಅಂತ್ಯಕ್ಕೆ ನಮ್ಮ ಈ ಮದ್ರಾಸು ಅಧಿಪತ್ಯದಲ್ಲಿ ಇಂತಹ ಫೋರೆಸ್ಟ್ ಪಂಚಾಯತುಗಳು 963 ಇದ್ದವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ 11 ಕಾಡುಗಳಿವೆ. ಅವುಗಳ ಪೈಕಿ 8 ಉಡುಪಿ ತಾಲೂಕಿನಲ್ಲಿಯೂ, 2 ಕಾರ್ಕಳ ತಾಲೂಕಿನಲ್ಲಿಯೂ, 1 ಮಂಗಳೂರು ತಾಲೂಕಿನಲ್ಲಿಯೂ ಇವೆ ಇಂಥಾ ಕಾಡುಗಳನ್ನು ಈ ಜಿಲ್ಲೆಯಲ್ಲಿ (ಮುಖ್ಯವಾಗಿ ಕುಂದಾಪುರ ತಾಲೂಕಿನಲ್ಲಿ) ಇನ್ನೂ ಹೆಚ್ಚಿಸಬೇಕೆಂದು ಆಲೋಚನೆ ಇದೆ, ನಿಶ್ಚಯವಾಗಲಿಲ್ಲ.

ಈ ಇಡೀ ಆಧಿಪತ್ಯದಲ್ಲಿ ಈಗ 1,325 ಚದರಮೈಲುಗಳಿಗೆ ವಿಸ್ತಾರದ ವಿಸ್ತೀರ್ಣವು ಫೋರೆಸ್ಟ್ ಪಂಚಾಯತುಗಳ ಅಧಿಕಾರದೊಳಗಿರುತ್ತದೆ. ಈ ಜಿಲ್ಲೆಯಲ್ಲಿ ಫೋರೆಸ್ಟ್ ಪಂಚಾಯತುಗಳಿಗೆ ಹೆಚ್ಚಿನ ರಿಯಾಯತಿಯೇನೆಂದರೆ, ಅವುಗಳಿಂದ ಸರಕಾರದವರೇನಾದರೂ ಗೇಣಿಯನ್ನು ವಸೂಲುಮಾಡುವುದಿಲ್ಲ. ಈ ಜಿಲ್ಲೆಯ ಕೃಷಿಗಾರರಿಗೆ ತಮ್ಮ ಜಮೀನುಗಳಿಗೆ ತಾಗಿರುವ ಖಾಲಿ ಸ್ಥಳಗಳ ಮೇಲೆ ಕುಮ್ಕಿ ಹಕ್ಕನ್ನು ಕೊಟ್ಟಿರುವದು ಈ ಜಿಲ್ಲೆಗೆ ಸರಕಾರದವರು ಕೊಟ್ಟ ವಿಶೇಷ ರಿಯಾಯತಿಯಾಗಿರುವದು. ಇದಲ್ಲದೆ ಸುರಕ್ಷಿತಪಡಿಸಿದ ಕಾಡುಗಳಲ್ಲಿ ಕೂಡ ಒಣಗಿದ ಎಲೆ ವಗೈರೆ ಉಪಯೋಗಿಸುವ ಕುರಿತು ಹೆಚ್ಚಿನ ರಿಯಾಯತಿಗಳನ್ನು ರೈತರಿಗೆ ಸರಕಾರದವರು ಈ ಜಿಲ್ಲೆಯೊಳಗೆ ಕೊಟ್ಟಿರುತ್ತಾರೆ.

(ಮದ್ರಾಸು ಸರಕಾರದವರಿಂದ ಪ್ರಕಟಿಸಲ್ಪಟ್ಟದ್ದು.)

ಭೂಮ್ಹಾಲಿಕ ಸಂಘದ ಕಾರ್ಯನಿರ್ವಾಹಕ ಕಮಿಟಿಯ ಸಭೆ.

ಈಗಿನ 4 ಕಿಸ್ತುಗಳನ್ನು ತೆಗೆದು ಹಾಕಬೇಕು.

ಆಗೋಸ್ತು ತಾ. 23ರಲ್ಲಿ ದಕ್ಷಿಣ ಕನ್ನಡ ಭೂಮ್ಹಾಲಿಕ ಸಂಘದ ಕಾರ್ಯನಿರ್ವಾಹಕ ಕಮಿಟಿಯ ಸಭೆಯು ಸಂಘದ ಕಾಯಮ್ ಅಧ್ಯಕ್ಷರಾದ ಶ್ರೀ ಎ. ಬಿ. ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆದು ಮಂಜೂರಾದ ಪ್ರಾಮುಖ್ಯ ಠರಾವುಗಳನ್ನು ಈ ಕೆಳಗೆ ಕೊಡಲಾಗಿದೆ. ತೀರ್ವೆ ವಸೂಲಿಯ ಕಿಸ್ತುಗಳನ್ನು ನಾಲ್ಕುಮಾಡಿ ಫೆಬ್ರುವರಿ ತಿಂಗಳಿಂದಲೇ ತೀರ್ವೆ ವಸೂಲುಮಾಡುವ ಈಗಣ ಕ್ರಮದಿಂದ ರೈತರಿಗೆ ಬಹಳ ಕಷ್ಟಕ್ಕೆ ಕಾರಣವಾಗಿದೆ. ಆದುದರಿಂದ ಫೆಬ್ರುವರಿ ತಿಂಗಳಲ್ಲಿ ಕಿಸ್ತು ವಸೂಲು ಮಾಡಲೇ ಬಾರದು. ಸಮವಾದ 3 ಕಿಸ್ತುಗಳಿಂದ ತೀರ್ವೆ ವಸೂಲು ಮಾಡಬೇಕು, ಅದು ಸಾಧ್ಯವಿಲ್ಲದಿದ್ದರೆ ಮೊದಲಿನ ಕ್ರಮದಲ್ಲಿಯೇ ಅರೆವಾಸಿ ಒಂದನೇ ಕಿಸ್ತಿನಲ್ಲಿ ಮತ್ತು ಉಳಿದ ಅರೆವಾಸಿಯನ್ನು ಇನ್ನೆರಡು ಕಂತುಗಳಲ್ಲಿ ವಸೂಲುಮಾಡಬೇಕು ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂದರ್ಶಿಸಿ, ಇಲ್ಲಿಯ ರಿಸರ್ವ್ ಕಾಡುಗಳಲ್ಲಿ ಕೆಲ ಮಟ್ಟಿನ ರಿಯಾಯಿತಿಗಳನ್ನಿತ್ತುದಕ್ಕಾಗಿ ಮಾನ್ಯ ಲೋ ಮೆಂಬರರಿಗೆ ವಂದನೆಯನ್ನರ್ಪಿಸಲಾಯಿತು. ಇದರಿಂದ ರಿಸರ್ವ್ ಕಾಡುಗಳ ರಿಯಾಯಿತಿಯ ಪ್ರಶ್ನೆಯು ಸಂಪೂರ್ಣ ಇತ್ಯರ್ಥವಾಗಲಾರದಾದರೂ, ರೈತರು ಈಗ ತಮಗೆ ಬಹಳ ಪ್ರಯತ್ನಪಟ್ಟು ದೊರೆತಿರುವ ರಿಯಾಯಿತಿಗಳನ್ನು ದುರುಪಯೋಗಗೊಳಿಸಬಾರದೆಂದೂ, ರಿಯಾಯಿತಿ ರದ್ದು ಮಾಡಲ್ಪಡದ ರಿಸರ್ವ್ ಕಾಡುಗಳವರು ಕೂಡಾ ಅವನ್ನು ದುರುಪಯೋಗಗೊಳಿಸಬಾರದೆಂದೂ ಕಮಿಟಿಯವರು ಕೇಳಿಕೊಳ್ಳುತ್ತಾರೆ.

ಸಂಘದ ವ್ಯವಸ್ಥೆಯ ವಿಚಾರ

ಸಂಘವನ್ನು ಇನ್ನು ಮುಂದೆ ನಡಿಸುವ ಕುರಿತು ವಿಚಾರಿಸಲಾಯಿತು. ಸಂಘವು ಇಡೀ ಜಿಲ್ಲೆಯಪರವಾಗಿ ಕೆಲಸ ಮಾಡುತ್ತಿರುವುದಾದರೂ, ಪುತ್ತೂರು ತಾಲೂಕೊಂದೇ ಅದಕ್ಕೆ ಹೆಚ್ಚಿನ ಹಣ ಸಹಾಯಮಾಡುವುದು. ಇತರತಾಲೂಕುಗಳಿಂದ ಪ್ರೋತ್ಸಾಹವಾಗಲಿ ಧನ ಸಹಾಯವಾಗಲಿ ಸಾಕಷ್ಟು ದೊರೆಯುವದಿಲ್ಲದಿರುವುದು ಶೋಚನೀಯ. ಆದುದರಿಂದ ಬೇರೆ ತಾಲೂಕುಗಳವರು, ವಿಶೇಷವಾಗಿ ತಾಲೂಕು ಸಂಘಗಳ ಅಧಿಕಾರಿಗಳು ಆದಷ್ಟು ಮೆಂಬರರನ್ನು ಸಂಘಕ್ಕೆ ಸೇರಿಸಿ ಧನ ಸಹಾಯಮಾಡಬೇಕಾಗಿ ಕಮಿಟಿಯು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತವೆ.

ಜಾನುವಾರು ಅಭಿವೃದ್ಧಿ

ಜಾನುವಾರುಗಳನ್ನು ಅಭಿವೃದ್ಧಿಗೊಳಿಸುವ ಕುರಿತು ಪೆಸರಾಯರ ಮತ್ತು ದಕ್ಷಿಣ ಕನ್ನಡದಲ್ಲಿ ಕಲೆಕ್ಟರರು ನಡೆಸುತ್ತಿರುವ ಪ್ರಯತ್ನವು ಸ್ತುತ್ಯವಿದೆ. ಆದರೆ ಹಳ್ಳಿಗಳಲ್ಲಿ ರೈತರಿಗೆ ಗೋಚರಾವಿಗೆ ಬೇಕಷ್ಟು ಸ್ಥಳವನ್ನೊದಗಿಸಿಕೊಡುವ ಪ್ರಶ್ನೆಯು ಸರಿಯಾಗಿ ಬಿಡಿಸಲ್ಪಡುವನಕ ಜಾನುವಾರು ಅಭಿವೃದ್ಧಿ ಕೆಲಸವು ಜಯಶೀಲವಾಗಿ ನಡೆಯಲಾರದು. ಆದುದರಿಂದ ಅನಾದಿಕಾಲದಿಂದ ಗೋಚರಾವಿಗೆಂದಿಟ್ಟಿರುವ ಸ್ಥಳವನ್ನು ಕೂಡಾ ಸರಕಾರದವರು ದರ್ಖಾಸ್ತಿಗೆ ಕೊಟ್ಟಿರುವುದು ಶೋಚನೀಯವಿದೆ. ಸರಕಾರವು ಕೂಡಲೇ ತನ್ನೀ ಧೋರಣೆಯನ್ನು ಮಾರ್ಪಡಿಸಿ ಇನ್ನಾದರೂ ಪ್ರತಿ ಹಳ್ಳಿಗೆ ಗೋಚರಾವಿಗೆ ಸಾಕಷ್ಟು ಸ್ಥಳವನ್ನೊದಗಿಸಿ ಕೊಡುವ ಏರ್ಪಾಡು ಮಾಡತಕ್ಕದ್ದು. ಈ ಸಂದರ್ಭದಲ್ಲಿ, ಹೇರೂರು ಗ್ರಾಮದಲ್ಲಿರುವ ಸುಮಾರು 25 ಎಕ್ರೆಗಳಷ್ಟರ ಪರಂಬೋಕು ಸ್ಥಳವು, ಬ್ರಹ್ಮಾವರದ ನೂರಾರು ಜಾನುವಾರು ಮೇಯುವಂಥಾದಾಗಿದ್ದು ಅವನ್ನೀಗ ಖಾಸಗಿ ವ್ಯಕ್ತಿಗಳಿಗೆ ದರ್ಖಾಸ್ತಿಗೆಕೊಡುವ ಕುರಿತು ಕಮಿಟಿಯು ತನ್ನ ನಿಷೇಧ ಸೂಚಿಸುತ್ತದೆ. ಮತ್ತು ಈ ಕುರಿತು ಕಲೆಕ್ಟರರು ವಿಚಾರಿಸಬೇಕೆಂದು ಕೇಳಿಕೊಳ್ಳಲಾಗುತ್ತದೆ.

ರೈತರ ಸ್ಥಿತಿಯು ಮತ್ತೂ ಕೆಟ್ಟಿದೆ

ಸಾಂಪತ್ತಿಕ ಮುಗ್ಗಟ್ಟಿನ ಪರಮಾವಧಿಯು ಮುಟ್ಟಿ ಈಗ ಪರಿಸ್ಥಿತಿಯು ಸುಧಾರಿಸ ಹತ್ತಿದೆಯೆಂಬ ಕೆಲವರ ಹೇಳಿಕೆಗಳು ಸರಿಯಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿಯು ಮತ್ತೂ ಕೆಟ್ಟುಹೋಗಿದೆ. ಅಕ್ಕಿ ಮತ್ತು ಭತ್ತದ ಬೆಲೆಯು ಕಳೆದ ವರ್ಷಕ್ಕಿಂತಲೂ ಕಡಿಮೆಯಾಗಿದೆ. ಉತ್ತರದ ತಾಲೂಕಿನಲ್ಲಿ ಅಕ್ಕಿ ಬೆಲೆಯು ಮುಡಿಯೊಂದರ ರೂ 3—8—0, 3-10-0 ಮಾತ್ರನಾಗಿದೆ. ಕಳೆದ ವರ್ಷ ಇದೇ ತಿಂಗಳಲ್ಲಿ ಅದು ರೂ 3—0—0, 3—2—0 ಆಗಿದ್ದಿತು. ಮುಡಿಯೊಂದರ ಆಣೆ 1ರಿಂದ 3ರವರೆಗೆ ಬೆಲೆಬಿದ್ದಿದೆ. ಇಂತಹ ಪರಿಸ್ಥಿತಿಯಲ್ಲಿ ಸರಕಾರವು ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಕಂದಾಯ ರಿಯಾಯಿತಿ ತೋರಿಸಬೇಕೆಂದು ಕಮಿಟಿಯವರ ಆಗ್ರಹದ ಹೇಳಿಕೆಯಿದೆ.

ಮಹಾಲಿರೋಗ ಹಾವಳಿ.

ಕಮಿಟಿಯವರು ಕಾಸರಗೋಡು ಮತ್ತು ಪುತ್ತೂರು ತಾಲೂಕುಗಳ ಅಡಿಕೆ ತೋಟಗಳ ಪ್ರತಿನಿಧಿಗಳೊಡನೆ ಮಾತಾಡಿರುತ್ತಾರೆ. ಈ ಎರಡು ತಾಲೂಕುಗಳ ಹೆಚ್ಚಿನ ಅಡಿಕೆ ತೋಟಗಳಿಗೆ ಮಹಾಲಿರೋಗ ತಗಲಿ ಭಯಂಕರ ಹಾವಳಿಯಾಗಿ ತೋಟಗಾರರ ಪರಿಸ್ಥಿತಿಯು ನಿರಾಶಾ ಪೂರ್ಣವಾಗಿದೆ. ಆದುದರಿಂದ ರವಿನ್ಯೂ ಮೆಂಬರರು ಸ್ವತಹ ಬಂದು ಹಾವಳಿ ಸ್ಥಳವನ್ನು ಸಂದರ್ಶಿಸುವ ಅವಶ್ಯವಿದೆ.

ಗಣಪತಿ ವಿಲಾಸ

ಕೋರ್ಟ್ ರಸ್ತೆ, --- ಉಡುಪಿ.

ಭೋಜನ—ಉಪಹಾರ—ವಿಶ್ರಾಂತಿ ಇವುಗಳಿಗೆ ಆದರ್ಶ ಗೃಹ.

ಆರೋಗ್ಯವೂ, ಹಿತಕರವೂ ಆದ ಭೋಜನ!

ಸ್ನಾನ-ವಸತಿಗಳಿಗೆ ಯೋಗ್ಯ ಸೌಕರ್ಯ !!

ಟೀಪಾರ್ಟಿ ಇತ್ಯಾದಿಗಳಿಗೆ ಉತ್ಕೃಷ್ಟ ಸಿದ್ಧತೆಗಳು !!!

ಮುನ್ಸಿಫ್ ಕೋರ್ಟು, ಆಫೀಸು ಮತ್ತು ಶಾಲೆಗಳಿಗೆ ಸಮೀಪವ ಕೇಂದ್ರದಲ್ಲಿದ್ದು ಸರ್ವರಿಗೂ ಅತ್ಯಂತ ಅನುಕೂಲಕರವಾಗಿರುತ್ತದೆ. ವಿದ್ಯಾರ್ಥಿಗಳಿಗೆ ರಿಯಾಯತಿ ದರದಲ್ಲಿ ಉತ್ತಮ ತರದ ವಿಶ್ರಾಂತಿ ವ್ಯವಸ್ಥೆ ಮಾಡಲಾಗುವುದು.

ಕೆ. ಮಂಜುನಾಥಯ್ಯ,
ಪ್ರೊಪ್ರೈಟರ್.

ಬೊಂಬೇ ಲೋಂಡ್ರಿ

ಹೊಸ್ಪಿಟಲ್ ರೋಡ್,——ಉಡುಪಿ.

ತಕ್ಕ ಕಾಲದಲ್ಲಿ——ಚೊಕ್ಕ ರೀತಿಯಲ್ಲಿ

ಉತ್ತಮವಾದ ಮಡಿ!

ರಂಗು ಹಾಕುವುದೂ ಡ್ರೈಕ್ಲೀನಿಂಗೂ ನಮ್ಮ ವೈಶಿಷ್ಟ್ಯ!

ಜರಿಸೀರೆ ಬನಾರಸ್ ಸೀರೆ ಮುಂತಾದುವನ್ನು ಜವಾಬ್ದಾರಿಯಿಂದ ನಾಜೂಕಾಗಿ ಮಡಿಮಾಡಿ ಕೊಡಲಾಗುವುದು.

ಎಂ. ಎಸ್. ಭಟ್ಕಳ್,
ಪ್ರೊಪ್ರೈಟರ್.

ADVERTISE IN

NAVAYUGA

A. Nationalist Kanarese Weekly

with the widest Circulation throughout Karnatak.

ವಿದ್ಯಾ ಸಂಸ್ಥೆಗೆ ಸಹಾಯಮಾಡಿರಿ ! ಸತ್ಕಾರ್ಯಕ್ಕೆ ಪ್ರೋತ್ಸಾಹಕೊಡಿಸಿರಿ !!

ದಿ ಮೂಲ್ಕಿ ಗ್ರೇಂಡ್ ರೇಫ಼್ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಯೋಗ್ಯ ಕಮ್ಮಿಟಿಯವರಿಂದ ನಡಿಸಲ್ಪಡುವುದು.

ಎ. ಬಿ. ಶೆಟ್ಟಿ, ಎಸ್ಕ್ವಾಯರ್, ಎಂ. ಎಲ್. ಸಿ. ಪ್ರೆಸಿಡೆಂಟ್. **ಡಾ! ಎಂ. ಆರ್. ಕಾಮತ್**, ಎಲ್. ಎಂ. ಪಿ. ವೈಸ್ ಪ್ರೆಸಿಡೆಂಟ್.

ರೂ. 20,000/-ವು 1,789 ಇನಾಮುಗಳಾಗಿ ಹಂಚಲ್ಪಡುವುದು.

ಪ್ರಥಮ ಬಹುಮಾನ ರೂ. 5,000/- ದ್ವಿತೀಯ ಬಹುಮಾನ ರೂ. 2,000/-
ತೃತೀಯ ಬಹುಮಾನ ರೂ. 1,000/-

ಟಿಕೇಟು ಒಂದರ ಕ್ರಯ ಆಣೆ ನಾಲ್ಕು ಮಾತ್ರ.

ಲಿಪ್ಪು ಅಚ್ಚಿಗೆ ತಾರೀಕು 25—1—1937] [ನೇಲ್ಮಿ ತೆಗೆಯುವ ತಾರೀಕು 31—1—937

30 ಟಿಕೇಟುಗಳಿರುವ ಪುಸ್ತಕಕ್ಕೆ ರೂ. 5 ಮಾತ್ರ. ಟಿಕೇಟು ಪುಸ್ತಕಗಳು ನಗದಿಯಾಗಿ ವಿಕ್ರಯಿಸಲ್ಪಡುವವು. ಟಿಕೇಟು ಮಾರಿ ರೂ 250/-ಕ್ಕೂ ಹೆಚ್ಚು ಸಂಗ್ರಹಿಸಿಕೊಟ್ಟವರೊಳಗೆ ರೂ. 200/-ರ ಒಂದು, ರೂ. 100/-ರ ಎರಡು ಮತ್ತು ರೂ. 50/-ರ 81 ಇನಾಮುಗಳು ಹಂಚಲ್ಪಡುವವು.

ಟಿಕೇಟು ವಿಕ್ರಯದಿಂದ ರೂ. 25/. ಮತ್ತು ಹೆಚ್ಚು ಮಾಡಿಕೊಟ್ಟವರಿಗೆ ಶೇಕಡಾ 6¼ರಂತೆ ಕಮಿಷನ್ ಕೊಡಲಾಗುವುದು.

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ—

ಸೆಕ್ರೆಟರಿ,
ದಿ ಮೂಲ್ಕಿ ಗ್ರೇಂಡ್ ರೇಫ಼್ಲ್
(ಹೈಸ್ಕೂಲ್ ಸಹಾಯಾರ್ಥ)

ಮೂಲ್ಕಿ, ದ. ಕನ್ನಡ
3—9—1936

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ಪ್ರೇಮ ವಿದ್ಯಾಪೀಠ

ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸ ವರ್ಷವು ಜೂಲ್ಯಾಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್, ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‍ಗಳಿವೆ. ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪ್ ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ! ಸುಮತಿಬಾಯಿ,
ಬಿ. ಎ. ಎಲ್. ಟಿ., ಎಫ್. ಸಿ. ಎಮ್. ಎಸ್. ಭಪಗೃಕ್ಕೆ. ರಿಜಿಸ್ಟ್ರಾರ್

ಇದೇ 1936ನೇ ಫ್ಯಾಶನಿನ ಉಡಿಗೆತೊಡಿಗೆಗಳು ಎಲ್ಲಿ ಸಿಗುತ್ತವೆ?
ಬನ್ನಿರಿ! ನೋಡಿರಿ!! ಕೊಂಡುಕೊಳ್ಳಿರಿ!!!

ಮೆಸರ್ಸ್ ಬೆಳ್ಮಣ್ಣ ಕಾರ್ ಮತ್ತು ಕಟೀಲ್ ಕಾರ್

ಜವುಳಿ ಅಂಗಡಿ ಕುಂದಾಪುರ ಇವರಲ್ಲಿ.

ಇದೀಗಲೇ ಬಂದಿರುವ ನೂತನ ಚ ನ ಜಾತಿ ತರದ ಹಾಗೂ ಅಂದ ಚದ ಬಣ್ಣಗಳಿಂದ ಶೋಭಿಸುವ ಹೊಸ ಹೊಸ ನಮೂನೆಯಲ್ಲಿ ಬರಾಯಿಸಿ ತಂದಿರುವ ಚೋಂಟ್ಸ್, ಬನಾರಸ್, ಅಹಮ್ಮದಾಬಾದು, ಕಾಶ್ಮೀರ, ಪೂನಾ, ಮದ್ರಾಸು, ಸೇಲಂ, ಕೊಯಮುತ್ತೂರು, ತಿರುಪುರ ಮಧುರ, ತಿರುಚನಾಪಳ್ಳಿ ಮೊದಲಾದ ಪ್ರಸಿದ್ಧ ಊರುಗಳ ಶೀರೆಗಳೂ ದೋತಿಗಳೂ, ಕಣಗಳೂ, ಕೋಟಿಂಗ್, ಶರ್ಟಿಂಗ್ ಬಟ್ಟೆಗಳೂ, ಇದಿ ಶಾಲುಗಳೂ ಮಿತದರದ ಕ್ರಯಕ್ಕೆ ದೊರೆಯುತ್ತವೆ.

ಶುದ್ಧ ಕೈನೂಲಿನ ಖಾದಿ ಶರ್ಟಿಂಗ್, ಕೋಟಿಂಗ್ ವಗೈರೆ ಅಚ್ಚ ಸ್ವದೇಶಿ ಬಟ್ಟೆಬರೆಗಳೂ ಸದಾ ದೊರೆಯುತ್ತವೆ. ನಿತ್ಯ ಉಪಯೋಗದ ಶುಭ ಶೋಭನದ ಹಾಗೂ ಉಡುಗೊರೆ ಉಚಿತಗಳಿಗೆ ಹೇಳಿಸಿದ ತರ ತರದ ಜವುಳಿಯು ಸುಲಭದರದಲ್ಲಿ ರಖಂ ಆಗಿಯೂ ಚಿಲ್ಲರೆಯಾಗಿಯೂ ಕೊಂಡುಕೊಳ್ಳಬಹುದು.

ಒಮ್ಮೆ ಬಂದು ನೋಡಿ ಸಮಾಧಾನ ಮಾಡಿಕೊಳ್ಳಿರಿ.

THE

Commonwealth Assurance Co. Ltd.

(ESTD 1913)

Chairman, Mr N C. Kelkar, Ex M. L. A.

Head Office: **POONA CITY.**
Chief Agency Office: **HAMPANKATTA, MANGALORE.**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ ರೂ. 57 ಲಕ್ಷಗಳಷ್ಟರ ವಹಿವಾಟು ಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟೆಯು ಳ್ಳಿದ್ದ ಎಲ್ಲಾ ಪೋಲಿಸಿದಾರರಿಗೆ ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಯಿರಿ.

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್.
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು

THE

RADHA BANK, LTD

MANGALORE. *(Branch)*

"TEMPLE VIEW" GANAPATI TEMPLE ST, WEST

ದಿ ರಾಧಾ ಬೇಂಕ್ ಲಿಮಿಟೆಡ್.

ಮಂಗಳೂರು. (ಬ್ರಾಂಚ್) 'ಟೆಂಪಲ್ ವ್ಯೂ' ಗಣಪತಿ ಟೆಂಪಲ್ ರಸ್ತೆ

ಚಾಲ್ತಿ ಠೇವಣಾತಿಗಳು ಸಾ| ಶೇ| 2½.

ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ| ಶೇ| 4

ಕಾಯಂ ಠೇವಣಾತಿಗಳು.

3 ತಿಂಗಳ ಬಾಬ್ತು ಸಾ| ಶೇ| 3. 6 ತಿಂಗಳ ಬಾಬ್ತು ಸಾ| ಶೇ| 4½. 12 ತಿಂಗಳ ಬಾಬ್ತು ಯಾ ಅದರ ಮೇಲೆ ಸಾಲಿಯಾನ್ ಶೇಕಡ 6

ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುತ್ತದೆ.

ಚಿನ್ನಾಭರಣಗಳ ಈಡಿನ ಮೇಲೆ ಸಾಲಗಳನ್ನು ಕೊಡುತ್ತದೆ.

U. B. SOMESH RAO,
Managing Director.

LAXMI BRAND COFFEE POWDER.

Pure & Superior quality, will last long without loosing its flavour and colour

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

TRADE MRK

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

FOR SALE

Fire Resistance Steel Iron Safes. latest pattern.

ನಮ್ಮಲ್ಲಿ ಕಬ್ಬಿಣದ ಪೆಟ್ಟಿಗೆಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಳ್ಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI, S. K.

Sold also by Instalments

ನಿಮಗೆ ಅಂದವಾದ ಅಚ್ಚಿನಿಂದ ಸೊಗಸಾದ ಛಾಪಾ ಕೆಲಸವಾಗಬೇಕೇ?

ಮಹಾಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್.

ಮಹಾಲಕ್ಷ್ಮಿ ಬಿಲ್ಡಿಂಗ್, ಕುಂದಾಪುರ.

ಈ ಛಾಪಖಾನೆಯಲ್ಲಿ ಕೆಲಸಗಳನ್ನು ಮಾಡಿಸಿರಿ.

ಬೇರೆ ಬೇರೆ ಊರುಗಳಲ್ಲಿ ಬಹಳ ವರ್ಷಗಳಿಂದ ಕೆಲಸ ಕಲಿತು ಮಾಹಿತಿಯಿದ್ದವರಿಂದ ಹೊಸದಾದ ಅಂದವಾದ ನೂರಾರು ತರದ ಅಚ್ಚುಗಳಿಂದ ತರತರದ ಬಣ್ಣಗಳಿಂದ ನಾಜೂಕಿನಿಂದ ಅತೀ ಸುಲಭ ದರದಲ್ಲಿ ಇಂಗ್ಲಿಷ್, ಕನ್ನಡ, ಮರಾಠಿ ವಗೈರೆ ಭಾಷೆಗಳಲ್ಲಿ ಕೆಲಸಗಳನ್ನು ಮಾಡಿಸಿಕೊಡಲಾದೀತು.

ಇಲ್ಲಿ ಎಲ್ಲಾ ತರದ ಫೋರ್ಮುಗಳೂ ಲೆಟರ್‌ಹೆಡ್ಡುಗಳೂ ಕವರುಗಳೂ ಕಂಪೆನಿಯಂತಹ ಸಂಸ್ಥೆಗಳಿಗೆ ಅಗತ್ಯ ಇರುವ ವರ್ಗ ಊಳಿಗ ಪುಸ್ತಕಗಳೂ ಎಲ್ಲಾ ತರದ ಛಾಪಾ ಕೆಲಸಗಳೂ ಬೇಕಾದ ಮಾದರಿಯಲ್ಲಿ ತಯಾರಿಸಿಕೊಡಲ್ಪಡುವವು.

For nice printing and punctuality look to—

Mahalaxmi Printing Works, Limited,

Mahalaxmi Buildings, Coondapoor.

K. RAMAKRISHNA SHENOY,
GENERAL MANAGER.

ನವಯುಗದ ಬಿಡಿ ಸಂಚಿಕೆಗಳನ್ನು ವಿಕ್ರಯಿಸಲು
ಕರ್ನಾಟಕದ ಮುಖ್ಯ ಕೇಂದ್ರಗಳಲ್ಲಿ
ಏಜಂಟರು ಬೇಕಾಗಿದ್ದಾರೆ.

ಯು. ಪಿ. ಮೇಸ್ತ, ಉದ್ಯಾವರ, ದ. ಕ.

(ಬಾಣಂತಿ ರೋಗದ ಸ್ಪೆಶ್ಯಲಿಸ್ಟರು)

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಔಷಧಗಳು ದೊರೆಯುತ್ತವೆ.

U. P. Mesta,
Gold Medalled Physicion,
UDIAWAR, S. K.

ADVERTISE IN
THULUNAD TILAKA PANCHANGA

for 1937-'38 ಈಶ್ವರ ಸಂವತ್ಸರದ

ತುಳುನಾಡ್ ತಿಲಕ ಪಂಚಾಂಗದಲ್ಲಿ
ಜಾಹಿರಾತು ಮಾಡಿರಿ!

— ಹಾಗೆಂದರೆ ಪ್ರತಿನಿತ್ಯವೂ —
ನಿಮ್ಮ ಜಾಹಿರಾತಿನಮೇಲೆ 10,000ಕ್ಕೂ ಮೀರಿದಷ್ಟು ಜನರ ಗಮನವು ಬೀಳುವುದು.

ಮೆನೇಜರ್— ತುಳುನಾಡ್ ಛಾಪಖಾನೆ, ಉಡುಪಿ.

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS UDIPI and Published by K. H. SHETTY at "NAVAYUGA" OFFICE, UDIPI.

Registered No. 1564

‘ನವಯುಗ’ವು ಕರ್ನಾಟಕದಲ್ಲೆಲ್ಲಾ ಸಂಚರಿಸುವುದರಿಂದ ಜಾಹೀರಾತುಗಳಿಗೆ ಉತ್ತಮ ಮಾಧ್ಯಮ.

ನವಯುಗ

ಆಧುನಿಕ ಕವಿಶ್ರೇಷ್ಠರ ಕವನ ಸಂಗ್ರಹವಾದ ಕಾವ್ಯಸಾಮ್ರಾಜ್ಯದ ದ್ವಿತೀಯಾವೃತ್ತಿ ತಯಾರಾಗಿದೆ. ಕಿರಿಯರ ಪ್ರಪಂಚ, ಉಡುಪಿ.

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಜನದ ನಾಡೊಳು ಮೊಳಗುತಿದ ತುಮುಲನಾದ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
‘ನವಯುಗ’ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬ | ಉಡುಪಿ, ಗುರುವಾರ, ಸಪ್ಟೆಂಬರ ೨೪, ೧೯೩೬ | ಸಂಚಿಕೆ ೪

STATEMENT OF AFFAIRS OF
THE CANARA INDUSTRIAL & BANKING SYNDICATE LIMITED.
AS ON 31st AUGUST 1936.

LIABILITIES.

Share Capital	Rs.	2,17,700	0	0
Reserve Fund	„	52 500	0	0
Deposits	„	18,61,496	14	6
Bills for Collection	..	1,40,203	13	8
Due to Bankers	„	1,35,823	6	10
Sundries	..	1,53,054	2	3
Total Rs.		25,60,778	5	3

ASSETS.

LOANS ON:				
Valuable Securities	Rs.	7,05,863	0	9
Land Mortgages		2,22 308	13	8
Bills of Exchange, Sundries and Pro-notes	„	5,37,936	0	6
INVESTSMENTS ON:				
Companies Shares	..	37,802	0	0
Landed Properties	„	18 920	3	7
Govt Securities	..	1,46,745	10	7
Bills for Collection (as per contra)	„	1 40,203	13	8
Sundries	.	2,71,153	1	6
Cash in hand and at Bankers	„	1,59,536	9	0
Total Rs.		25,60.778	5	3

ANNOUNCEMENT

WE HAVE GREAT PLEASURE IN ANNOUNCING THAT A BRANCH OF THE SYNDICATE WAS OPENED AT UPPINANGADI (SOUTH KANARA) ON MONDAY the 21st INSTANT WHERE ALL KINDS OF BANKING BUSINESS WILL BE TRANSACTED THE PUBLIC ARE REQUESTED TO TAKE ADVANTAGE OF THE NUMEROUS FACILITIES OFFERED BY US.

BRANCHES.

UDIPI, MANGALORE, COONDAPOOR, CANNANORE, HUBLI, HONAVAR, BRAHMAVAR, KUMTA, HUNGARCUTTA, SIRSI, ANKOLA, BELGAUM, PAYYANUR, KANNAGHAD, BHATKAL, KARWAR, BANGALORE CITY, ADONI HOSPET, **BELLARY, GADAG & KARKALA**

THE BOMBAY LIFE ASSURANCE Co., LTD.
ESTD. 1908
Church Gate Street, Fort - - BOMBAY

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,
Madras Branch Secretaries.

BRANCHES AT:

P. B 337 Mount Road, Madras	Visveswarapuram Circle, Bangalore City	Soumyalivam Puthiyara, Calicut
Car Street, Mangalore	Udipi, S India	Charni Road, Bombay No 4

EVIDENCE OF SECURITY & STABILITY
FIGURES THAT SPEAK FOR THEMSELVES

TOTAL ASSETS **Rs. 80,66,600**

SUMMARY OF 1935 ACCOUNTS

Total Assets Over	Rs. 80.00.000
Life Funds Over	Rs 68 00,000
Premium Income Over	Rs. 22.54.000
Interest Income	Rs 3,16,000
Claims Paid	Rs 5,75 000
Total Claims paid over	Rs. 38,50,000
Total Business in Force Over	Rs. 4,42,51,200

TOTAL BUSINESS IN FORCE **Rs. 4,42,51,200**

ಗಣಪತಿ ವಿಲಾಸ

ಕೋರ್ಟು ರಸ್ತೆ, -·- ಉಡುಪಿ.

ಭೋಜನ—ಉಪಹಾರ—ವಿಶ್ರಾಂತಿ ಇವುಗಳಿಗೆ ಆದರ್ಶ ಗೃಹ.

ಆರೋಗ್ಯವೂ, ಹಿತಕರವೂ ಆದ ಭೋಜನ !

ಸ್ನಾನ-ವಸತಿಗಳಿಗೆ ಯೋಗ್ಯ ಸೌಕರ್ಯ !!

ಟೀಪಾರ್ಟಿ ಇತ್ಯಾದಿಗಳಿಗೆ ಉತ್ಕೃಷ್ಟ ಸಿದ್ಧತೆಗಳು !!!

ಮುನ್ಸಿಫ್ ಕೋರ್ಟು, ಕಚೇರಿ ಮತ್ತು ಶಾಲೆಗಳಿಗೆ ಸಮೀಪದ ಕೇಂದ್ರದಲ್ಲಿದ್ದು ಸರ್ವರಿಗೂ ಅತ್ಯಂತ ಅನುಕೂಲವಾಗಿರುತ್ತದೆ. ವಿದ್ಯಾರ್ಥಿಗಳಿಗೆ ರಿಯಾಯತಿ ದರದಲ್ಲಿ ಉತ್ತಮ ತರದ ಏರ್ಪಾಡು ಮಾಡಲಾಗುವುದು.

ಕೆ. ಮಂಜುನಾಥಯ್ಯ,
ಪ್ರೊಪ್ರೈಟರ್.

ಬೊಂಬೇ ಲೋಂಡ್ರಿ

ಹೊಸ್ಪಿಟಲ್ ರೋಡ್,——ಉಡುಪಿ.

ತಕ್ಕ ಕಾಲದಲ್ಲಿ——ಚೊಕ್ಕ ರೀತಿಯಲ್ಲಿ

ಉತ್ತಮವಾದ ಮಡಿ!

ರಂಗು ಹಾಕುವುದೂ ಡ್ರೈಕ್ಲೀನಿಂಗೂ ನಮ್ಮ ವೈಶಿಷ್ಟ್ಯ!

ಜರಿಸೀರೆ ಬನಾರಸ್ ಸೀರೆ ಮುಂತಾದುವನ್ನು ಜವಾಬ್ದಾರಿಯಿಂದ ನಾಜೂಕಾಗಿ ಮಡಿಮಾಡಿ ಕೊಡಲಾಗುವುದು.

ಎಂ. ಎಸ್. ಭಟ್ಕಳ್,
ಪ್ರೊಪ್ರೈಟರ್.

ADVERTISE IN

NAVAYUGA

Nationalist Kanarese Weekly

with the widest Circulation throughout Karnatak.

ವಿದ್ಯಾ ಸಂಸ್ಥೆಗೆ ಸಹಾಯಮಾಡಿರಿ ! **ಸತ್ಕಾರ್ಯಕ್ಕೆ ಪ್ರೋತ್ಸಾಹಕೊಡಿಸಿರಿ !!**

ದಿ ಮೂಲ್ಕಿ ಗ್ರೇಂಡ್ ರೇಫ್ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಯೋಗ್ಯ ಕಮ್ಮಿಟಿಯವರಿಂದ ನಡಿಸಲ್ಪಡುವುದು.

ಎ. ಬಿ. ಶೆಟ್ಟಿ, ಎಸ್ಕ್ವಾಯರ್, ಎಂ. ಎಲ್. ಸಿ. ಪ್ರೆಸಿಡೆಂಟ್. **ಡಾ| ಎಂ. ಆರ್. ಕಾಮತ್**, ಎಲ್. ಎಂ. ಪಿ. ವೈಸ್ ಪ್ರೆಸಿಡೆಂಟ್.

ರೂ. **20,000**/-ವು **1,789** ಇನಾಮುಗಳಾಗಿ ಹಂಚಲ್ಪಡುವುದು.

ಪ್ರಥಮ ಬಹುಮಾನ ರೂ. **5,000**/- ದ್ವಿತೀಯ ಬಹುಮಾನ ರೂ. **2,000**/-
ತೃತೀಯ ಬಹುಮಾನ ರೂ. **1,000**/-

ಚೆಬ್ಬು ಅಚ್ಚಿದು ತಾರೀಕು 25—1—1937] [ಸೋಡ್ತಿ ತೆಗೆಯುವ ತಾರೀಕು 31—1—1937

ಟಿಕೇಟು ಒಂದರ ಕ್ರಯ ಆಣೆ ನಾಲ್ಕು ಮಾತ್ರ.

20 ಟಿಕೇಟುಗಳಿರುವ ಪುಸ್ತಕಕ್ಕೆ ರೂ. 5 ಮಾತ್ರ. ಟಿಕೇಟು ಪುಸ್ತಕಗಳು ನಗದಿಯಾಗಿ ವಿಕ್ರಯಿಸಲ್ಪಡುವವು. ಟಿಕೇಟು ಮಾರಿ ರೂ. 260/-ಕ್ಕೂ ಹೆಚ್ಚು ಸಂಗ್ರಹಿಸಿಕೊಟ್ಟವರೊಳಗೆ ರೂ. 200/-ರ ಒಂದು, ರೂ. 100/-ರ ಎರಡು ಮತ್ತು ರೂ. 50/-ರ 84 ಇನಾಮುಗಳು ಹಂಚಲ್ಪಡುವವು.

ಟಿಕೇಟು ವಿಕ್ರಿತದಿಂದ ರೂ. 25/. ಮತ್ತು ಹೆಚ್ಚು ಮಾಡಿಕೊಟ್ಟವರಿಗೆ ಶೇಕಡಾ 6¼ರಂತೆ ಕಮಿಷನ್ ಕೊಡಲಾಗುವುದು

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ—

ಸೆಕ್ರೆಟರಿ,
ದಿ ಮೂಲ್ಕಿ ಗ್ರೇಂಡ್ ರೇಫ್ಲ್
(ಹೈಸ್ಕೂಲ್ ಸಹಾಯಾರ್ಥ)

ಮೂಲ್ಕಿ, ದ. ಕನ್ನಡ
3—9—1936

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

ಡಿಪೋವಿನ ರಿಂಗ್‌ವರ್ಮ್ ಮುಲಾಮು.

ಇಷ್ಟರವರೆಗಣ ನಮ್ಮ ವಿಲಿಯಮ್ ಎಂಡ್ ಕೋರವರ ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು, ಈಗ ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ
'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ,
ಬೊಂಬಾಯಿ-ಮದ್ರಾಸು-ಕಲ್ಕತ್ತ.

DIAMONDS! DIAMONDS!!

K. Ramachandra Krishna Shet

Near Mission High School, *Mangalore.*

SUPERFINE UP TO DATE CUTTING ! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತದೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 6 ಪರ್ಸಂಟಿಗೆ ಕಡಿಮೆಯಾಗಿಡಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ಪ್ರೇಮ ವಿದ್ಯಾಪೀಠ

ತುಂಗಭದ್ರಾ (ಬಳ್ಳಾರಿ ಜಿಲ್ಲಾ)

ಇದರ ಹೊಸ ವರ್ಷವು ಜೂಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್, ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ 3 ಆಣೆ ಸ್ಟಾಂಪ್ ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| **ಸುಮತಿಬಾಯಿ,**
ಬಿ. ಎ. ಎಲ್. ಟಿ., ಎಫ್. ಕೆ. ಎಮ್. ಎಸ್. ಭಿಷಗ್ರತ್ನ, ರಿಜಿಸ್ಟ್ರಾರ್.

THE

Commonwealth Assurance Co. Ltd.

(ESTD 1929)

Chairman, Mr. N. C. Kelkar, Ex M. L. A.

Head Office:	Chief Agency Office:
POONA CITY.	**HAMPANKATTA, MANGALORE.**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ ರೂ. 57 ಲಕ್ಷಗಳಷ್ಟರ ವಹಿವಾಟು ಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೋಲಿಸಿದಾರರಿಗೆ ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಯಿರಿ.

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್.
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ಹಳ್ಳಿಗಳಲ್ಲಿ ಸಾಗುವಳಿದಾರರ ಶೋಚನೀಯ ಪರಿಸ್ಥಿತಿ!

ಮಾಡಲು ಉದ್ಯೋಗ, ಉಣಲು ಅನ್ನ, ಉಡಲು ಬಟ್ಟೆ ಇಲ್ಲ!

ಸಾಗುವಳಿದಾರರ ವಾರ್ಷಿಕ ಉತ್ಪತ್ತಿ ಸರಾಸರಿ ರೂ. 8-4-0!

ದ. ಕ. ಜಿಲ್ಲಾ ಗ್ರಾಮೋದ್ಯೋಗ ಸಂಘದವರು ತಮ್ಮ ಧ್ಯೇಯಗಳನ್ನು ಸಾಧಿಸಿ ತೋರಿಸುವ ಮಾದರಿಗಾಗಿ ಉಡ್ಪಿ ತಾಲೂಕಿನ ಬೈರಂಪಳ್ಳಿ ಎಂಬ ಗ್ರಾಮವನ್ನು ಮೊದಲನೆಯಾಗಿ ಆರಿಸಿ ಕಳೆದ ಜುಲಾಯಿ 1ನೇ ತಾರೀಕಿನಿಂದ ಇಲ್ಲಿ ಕೆಲಸವನ್ನಾರಂಭಿಸಿರುವರು. ಯಾವ ಬಗೆಯ ಗ್ರಾಮಸಂಘಟನೆಯ ಕಾರ್ಯಕ್ರಮವನ್ನು ಆರಂಭಿಸಬೇಕಾದರೂ ಅಲ್ಲಿಯ ಈಗಿನ ಪರಿಸ್ಥಿತಿಯ ಕುರಿತು ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸುವುದು ಆಗತ್ಯವೆಂಬುದರಿಂದ ಗ್ರಾಮದ ಪ್ರತಿಯೊಂದು ಮನೆಯನ್ನು ಸಂದರ್ಶಿಸಿ ಅವಶ್ಯವುಳ್ಳ ಮಾಹಿತಿಯನ್ನು ಸಂಗ್ರಹಿಸಿದಾರೆ. ಈ ಪರಿಶೀಲನದ ಫಲಿತಾಂಶವು ಅತ್ಯಂತ ಗಮನೀಯವಾಗಿರುವುದರಿಂದ ಅದನ್ನು ಸಂಕ್ಷಿಪ್ತವಾಗಿ ಇಲ್ಲಿ ಕೊಡಲಾಗಿದೆ--

ಬೈರಂಪಳ್ಳಿ ಗ್ರಾಮವು ಉಡ್ಪಿಯಿಂದ 11 ಮೈಲು ಪೂರ್ವದಲ್ಲಿದೆ. ಸರಕಾರೀ ಸೆಟ್ಲಮೆಂಟಿನ ಪ್ರಕಾರ ಗ್ರಾಮದ ವಿಸ್ತೀರ್ಣವು 3330 ಎಕ್ರೆ 30 ಸೆಂಟ್ಸ್. ಈ ಪೈಕಿ 839 ಎಕ್ರೆ 60 ಸೆಂಟ್ಸ್ ಸಾಗುವಳಿ ಸ್ಥಳ, 68 ಎ. 52 ಸ. ಬಾಗಾಯತು ಮತ್ತು 360 ಎ. 7½ ಸ. ಪುಂಜ. ಹೀಗೆ ಒಟ್ಟು 1268 ಎ. 86 ಸ. ಸ್ಥಳವು ಜನರಿಂದ ಉಪಯೋಗಿಸಲ್ಪಟ್ಟು, ಉಳಿದ ಸ್ಥಳವು ಉಪಯೋಗವಿಲ್ಲದೆ ಇರುತ್ತದೆ. 1312ನೇ ಫಸಲಿಯಲ್ಲಿ ಗ್ರಾಮದ ರೆವೆನ್ಯೂ ತೀರ್ವೆಯು ರೂ. 819/- ಇದ್ದು 1313ನೇ ಫಸಲಿಯ ಸೆಟ್ಲಮೆಂಟಿನಿಂದ ಅದು ರೂ. 2937ಕ್ಕೆ ಏರಿತು. ಇತ್ತಲಾಗಿನ ರಿಸೆಟ್ಲಮೆಂಟಿನಿಂದ ತೀರ್ವೆಯು ಸುಮಾರು ರೂ. 3500 ಚಿಲ್ಲರೆಗೆ ಬಂದಿರುತ್ತದೆ.

ಕಳೆದ ಜುಲಾಯಿ ತಿಂಗಳಲ್ಲಿ ನಾವು ನೋಡಿದಂತೆ ಈ ಗ್ರಾಮದಲ್ಲಿ 231 ಮನೆಗಳಿದ್ದು ಅವುಗಳಲ್ಲಿ 237 ಕುಟುಂಬದವರು ವಾಸಿಸುತ್ತಿದ್ದಾರೆ. 657 ಗಂಡಸರು, 700 ಹೆಂಗಸರು ಹೀಗೆ ಗ್ರಾಮದ ಜುಮ್ಲಾ ಜನಸಂಖ್ಯೆ 1357. ಈ ಪೈಕಿ 5 ವರ್ಷ ಯಾ ಅದಕ್ಕಿಂತ ಕಡಮೆಯ ಮಕ್ಕಳು 187 ಮಂದಿ. 60 ವರ್ಷ ಯಾ ಅದನ್ನು ಮಿಕ್ಕಿದ ಮುದುಕರ ಸಂಖ್ಯೆ 63. 6 ರಿಂದ 14 ವರ್ಷದ ವರೆಗಿನ ಪ್ರಾಯದ ಅಂದರೆ ಸಾಮಾನ್ಯ ಹಳ್ಳಿಯಲ್ಲಿ ಶಾಲೆಗೆ ಹೋಗುವ ಪ್ರಾಯದ ಮಕ್ಕಳ ಸಂಖ್ಯೆ 264. ಗ್ರಾಮಸ್ಥರಲ್ಲಿ ಓದು-ಬರಹ ಬಲ್ಲವರ ಸಂಖ್ಯೆ 205.

(1) 129 ಕುಟುಂಬದವರು ಭೂಮಿಯನ್ನು ವರ್ಗದಾರರಿಂದ ಮೂಲಗೇಣಿ ಯಾ ಚಾಲಗೇಣಿ ಹಕ್ಕಿನಿಂದ ಪಡೆಸಿಕೊಂಡು ಸಾಗುವಳಿ ಮಾಡುವ ಗೇಣಿ ಒಕ್ಕಲುಗಳು. ಈ ಕುಟುಂಬಗಳ ಜನಸಂಖ್ಯೆ 909. (2) 68 ಕುಟುಂಬದವರು--ಜನಸಂಖ್ಯೆ 233--ಸಾಗುವಳಿ ಕೆಲಸ ಮಾಡುವ ಕೂಲಿ ಒಕ್ಕಲುಗಳು. (3) ಉಳಿದ 10 ಕುಟುಂಬದವರಲ್ಲಿ--ಜನಸಂಖ್ಯೆ 215--ವರ್ಗದಾರರು, ವ್ಯಾಪಾರ ವೈದಿಕ ಇತ್ಯಾದಿ ಕೃಷಿಗೆ ಸಂಬಂಧವಿಲ್ಲದ ಕಸಬಿನಿಂದ ಜೀವಿಸುವವರು ಮೊದಲಾಗಿ ಇರುವರು.

ಮೇಲಿನ ಪೈಕಿ ಮೊದಲ ಎರಡು ಭಾಗದವರಿಂದ (ಜನಸಂಖ್ಯೆ 1142) ಗ್ರಾಮದ ಹೆಚ್ಚಿನ ಸಾಗುವಳಿಯು ಮಾಡಲ್ಪಡುತ್ತಿದೆ. ಗ್ರಾಮದ ಜುಮ್ಲಾ ಸಾಗುವಳಿ ಸುಮಾರು 840 ಎಕ್ರೆ. ಪೈಕಿ ಸುಮಾರು 60 ಎಕ್ರೆಯ ಮಟ್ಟಿಗೆ ವರ್ಗದಾರರ ಸ್ವಂತ ಮನೆ ಸಾಗುವಳಿಯಿದ್ದು ಉಳಿದ ಪೂರ್ಣ ಸಾಗುವಳಿಯು ಈ ಜನರಿಂದಲೇ ಸಾಗುತ್ತಿದೆ. ಇವರ ಕೈಯಲ್ಲಿರುವ ಈ ಸಾಗುವಳಿ ಸ್ಥಳ ಸುಮಾರು 780 ಎಕ್ರೆ. ಪೈಕಿ ಸುಮಾರು 200 ಎಕ್ರೆಯಲ್ಲಿ ಸಾಮಾನ್ಯ ಎರಡು ಬೆಳೆಗಳೂ 580 ಎಕ್ರೆಯಲ್ಲಿ ಒಂದು ಬೆಳೆಯೂ ಆಗುತ್ತಿವೆ. ಗ್ರಾಮದಲ್ಲಿಯ 129 ಮಂದಿಯ ಗೇಣಿ ಒಕ್ಕಲುಗಳು ತಮ್ಮ ತಮ್ಮ ವರ್ಗದಾರರಿಗೆ ಕೊಡುವ ವಾರ್ಷಿಕ ಗೇಣಿ ಜುಮ್ಲಾ 1689½ ಮುಡಿ ಅಕ್ಕಿ ಮತ್ತು ನಗದಿಯಿಂದ ರೂ. 3117-10-0 ಆಗುತ್ತದೆ.

ಈ ಗ್ರಾಮದಲ್ಲಿ ಒಂದು ಎಕ್ರೆ ಕಾರ್ತಿ, ಸುಗ್ಗಿ ಹಾಗೂ ಬೆಟ್ಟು ಸಾಗುವಳಿಗಳಿಗೆ ಸಾಮಾನ್ಯ ತಗಲುವ ಖರ್ಚು ಮತ್ತು ಅದರ ಸಾಮಾನ್ಯ ಉತ್ಪತ್ತಿಯ ಅಂದಾಜನ್ನು ಈ ಕೆಳಗೆ ಕಾಣಿಸಿರುತ್ತದೆ. ಇಲ್ಲಿ ಕಾಣಿಸಿರುವ ಖರ್ಚಿನ ಅಂದಾಜನ್ನು ತಾ. 23-8-36ರಲ್ಲಿ ನಡೆದ ಗ್ರಾಮಸ್ಥರ ಸಭೆಯಲ್ಲಿ ಓದಿ ಹೇಳಿದಾಗ ಇದು ಅತಿ ಕಡಿಮೆ ದರದಲ್ಲಿ ಕಾಣಿಸಿದ ಖರ್ಚೆಂದು ಸಾಮಾನ್ಯ ಅಭಿಪ್ರಾಯವಾಗಿತ್ತು. ಇಲ್ಲಿ ಕಾಣಿಸಿದ ಖರ್ಚು ನ್ಯಾಯವಾದ ಸಾಗುವಳಿಗೆ ಸಾಲದೆಂಬುದು ನಿಜವಿದ್ದರೂ ಸಾಮಾನ್ಯ ಬಡ ಒಕ್ಕಲುಗಳು ಈಗ ವಸ್ತುತಃ ಮಾಡುತ್ತಿರುವ ಖರ್ಚು ಸರಾಸರಿ ಇಲ್ಲಿ ಕಾಣಿಸಿದ್ದಕ್ಕೆ ಬಹಳ ಹೆಚ್ಚು ಕಡಿಮೆ ಇಲ್ಲವೆಂದು ಹಲವರಿಂದ ವಿಚಾರಿಸಲ್ಪಟ್ಟು ತಿಳಿದುಬಂದಿದೆ.

ಒಂದು ಎಕ್ರೆ ಬೈಲು--ಕಾರ್ತಿ ಸಾಗುವಳಿ ಖರ್ಚು ಕೆಳಗಿನಂತಿದೆ--ನೇಜಿಗದ್ದೆ ಹೂಟ (8 ಜೋಡು ದರ 0-4-0) ರೂ. 2-0-0. ಬೀಜ ⅓ ಮುಡಿ ಕ್ರಯ 0-12-0, ಬೆಳೆಯ ಗದ್ದೆ ಹೂಟ (6 ಜೋಡು, ದರ 0-4-0) 1-8-0, ನಟ್ಟಿ (10 ಆಳು, ಮಜೂರಿ 1½ ಸೇರು ಅಕ್ಕಿ) ಅಕ್ಕಿ 15 ಸೇರು, ಗೊಬ್ಬರ ರೂ. 1-0-0, ಕೊಯ್ಲು (7 ಆಳು, ಮಜೂರಿ 3 ಸೇರು ಭತ್ತ ಮತ್ತು ½ ಸೇರು ಅಕ್ಕಿಯಂತೆ) ಅಕ್ಕಿ 11 ಸೇರು. ಹೊರುವುದು (4 ಆಳು, ಅಕ್ಕಿ 2½ ಸೇರು) ಅಕ್ಕಿ 10, ಬೈಹುಲ್ಲು (4 ಆಳು, ಒಬ್ಬೊಬ್ಬರಿಗೆ 1¼ ಸೇರು ಅಕ್ಕಿ) ಅಕ್ಕಿ 5 ಸೇರು. ಜುಮ್ಲಾ ಅಕ್ಕಿ 41 ಸೇರು, ರೂ. 5-4-0.

ಒಂದು ಎಕ್ರೆ ಬೆಟ್ಟು ಸಾಗುವಳಿ ಖರ್ಚು ಸಾಮಾನ್ಯ ಮೇಲಿನಷ್ಟೇ ಇರುತ್ತದೆ.

ಒಂದು ಎಕ್ರೆ ಬೈಲು ಸುಗ್ಗಿ ಸಾಗುವಳಿಯ ಖರ್ಚು ಈ ಕೆಳಗಿನಂತಿದೆ--ನೇಜಿಗದ್ದೆ ಹೂಟ (ದರ ಹಿಂದಿನಂತೆ) 1-4-0. ಬೀಜ 35 ಸೇರು ಕ್ರಯ 1-4-0, ಬೆಳೆಗದ್ದೆ ಹೂಟ 3-0-0, ಗೊಬ್ಬರ (150 ಹಡಿಗೆ) 2-0-0. ಜುಮ್ಲಾ ರೂ. 7-8-0. ಉಳಿದ ಖರ್ಚು ಹಿಂದಿನಂತೆ. ಅಂದರೆ 44 ಸೇರು ಅಕ್ಕಿ ತಗಲುತ್ತದೆ.

ಈ ಗ್ರಾಮದಲ್ಲಿ ಒಂದು ಎಕ್ರೆ ಬೈಲು ಕಾರ್ತಿ ಸಾಗುವಳಿ ಉತ್ಪತ್ತಿಯು ಸಾಮಾನ್ಯ 10 ಮುಡಿ ಅಕ್ಕಿ. ಸುಗ್ಗಿ ಸಾಗುವಳಿಗೆ 5 ಮುಡಿ ಅಕ್ಕಿ, ಬೆಟ್ಟು ಸಾಗುವಳಿಗೆ 5 ಮುಡಿ ಅಕ್ಕಿ. ಈ ರೀತಿ ಸಾಮಾನ್ಯ ಉತ್ಪತ್ತಿಯನ್ನು ಅಂದಾಜು ಮಾಡುತ್ತಾರೆ. ಈ ಅಂದಾಜು ಗ್ರಾಮಸ್ಥರ ಸಭೆಯಲ್ಲಿ ಸರಿಯೆಂದು ಒಪ್ಪಿಕೊಳ್ಳಲಾಗಿದೆ. ಕರಾವಳಿಯ ಗ್ರಾಮಗಳಲ್ಲಿ ಸುಮಾರು ಇದರ ಎರಡರಷ್ಟು ಕೂಡ ಉತ್ಪತ್ತಿಯಾಗುವುದುಂಟೆಂದೂ, ಅದೇ ರೀತಿ ಅಲ್ಲಿಯ ಗೇಣಿಯೂ ಜಾಸ್ತಿಯಿರುವುದಾಗಿಯೂ ತಿಳಿದುಬರುತ್ತದೆ.

ಮೇಲಿನ ಅಂದಾಜಿನಂತೆ ಗ್ರಾಮದಲ್ಲಿಯ ಗೇಣಿ ಒಕ್ಕಲು ಸಾಗುವಳಿ ಕೂಲಿ ಒಕ್ಕಲುಗಳ ಕೈಯಲ್ಲಿರುವ 200 ಎಕ್ರೆ 2 ಬೆಳೆಯ ಮತ್ತು 580 ಎಕ್ರೆ 1 ಬೆಳೆಯ ಸಾಗುವಳಿಯ ಖರ್ಚು ಮತ್ತು ಉತ್ಪತ್ತಿಯು ಈ ಕೆಳಗಿನಂತೆ ಆಗಿರುತ್ತದೆ--

200 ಎಕ್ರೆ--ಕಾರ್ತಿ

ಖರ್ಚು ಅಕ್ಕಿ	ನಗದಿ	ಉತ್ಪತ್ತಿ ಅಕ್ಕಿ
200 ಮುಡಿ	1050	2,000 ಮುಡಿ
ಸುಗ್ಗಿ		
200 ಮುಡಿ	1500	1000 ,,
580 ಎಕ್ರೆ		
580 ಮುಡಿ	3045/-	2900 ,,
980 ಮುಡಿ	5595/-	5900 ,,

ಮೇಲೆ ಕಾಣಿಸಿದ ಜುಮ್ಲಾ ಉತ್ಪತ್ತಿ ಅಕ್ಕಿ ಮುಡಿ 5900ರಲ್ಲಿ ಅಕ್ಕಿ ಖರ್ಚು 980 ಮುಡಿ ಮತ್ತು ಅಕ್ಕಿ ಗೇಣಿ 1690 ಮುಡಿ ಕೂಡಾ ಮುಡಿ 2670ನ್ನು ಕಳೆದು ಉಳಿಯುವ ಅಕ್ಕಿ ಮುಡಿ 3220. ಇದಕ್ಕೆ ನಗದಿಯಾಗಿ ತೋರಿಸಿದ ಖರ್ಚು ರೂ. 5595 ಮತ್ತು ಜುಮ್ಲಾ ನಗದಿ ಗೇಣಿ ರೂ. 3118 ಕೂಡಾ ರೂ. 9013 ಬಿಟ್ಟುಕೊಡಬೇಕಾಗಿರುತ್ತದೆ. ಇಲ್ಲಿಯ ಹಾಲಿ ಅಕ್ಕಿ ಧಾರಣೆಯು ರೂ. 2-12-0 ರಿಂದ ರೂ. 3ರ ವರೆಗೆ ಇರುತ್ತದೆ. ಬಾಕಿ ಉಳಿದ 3220 ಮುಡಿಗೆ ಕ್ರಯ ಕಟ್ಟಿದರೆ ಬೇಕಾಗುವ ರೂ. 9013ಕ್ಕೆ ಸಾಮಾನ್ಯ ಸರಿದೂಗುತ್ತದೆ. ಅಂದರೆ ಇಲ್ಲಿಯ ಸಾಗುವಳಿಯ ಖರ್ಚನ್ನು ಕಳೆದು ಉಳಿಯುವ ಉತ್ಪತ್ತಿಯನ್ನು ಗೇಣಿಯು ನುಂಗಿಬಿಡುವುದರಿಂದ ಸಾಗುವಳಿ ಮಾಡಿದವನಿಗೆ ಯಾವ ಲಾಭವೂ ಉಳಿಯುವುದಿಲ್ಲವೆಂಬುದು ಸ್ಪಷ್ಟವಿರುತ್ತದೆ.

ನಿಜವಾಗಿ ನೋಡಿದರೆ, ಸಾಗುವಳಿ ಮಾಡಿದವನಿಗೆ ಸಿಕ್ಕುವುದೆಂದರೆ ತಾನು ಸ್ವತಃ ಮಾಡಿದ ಕೆಲಸದ ಕೂಲಿ ಮಾತ್ರ. ಅಂದರೆ ಕೂಲಿಯಾದರೂ ಸಿಕ್ಕುವ ಉದ್ದೇಶದಿಂದಲೇ ಅವನು ಈಗ ಸಾಗುವಳಿ ಮಾಡುತ್ತಾನೆ. ಇದು ಸಾಮಾನ್ಯವಾಗಿ ಹಳ್ಳಿಯಲ್ಲಿ ಎಲ್ಲರಿಗೂ ಗೊತ್ತಿರುತ್ತದೆ.

ಮೇಲೆ 780 ಎಕ್ರೆ ಸಾಗುವಳಿಯ ಜುಮ್ಲಾ ಖರ್ಚು 980 ಮುಡಿ ಅಕ್ಕಿ ಮತ್ತು ರೂ. 5,595 ಎಂಬುದಾಗಿ ತೋರಿಸಿದೆ. ಇದಕ್ಕೆ ವರ್ಗದಾರರ ಸ್ವಂತ ಸಾಗುವಳಿ 60 ಎಕ್ರೆಗೆ ತಗಲುವ ಖರ್ಚನ್ನು ಸೇರಿಸಿದರೆ ಕೂಡಿಸೋಣ. ಇದು 95 ಮುಡಿ ಅಕ್ಕಿ ಮತ್ತು ರೂ. 577-8-0 ಆಗುತ್ತದೆ. ವಸ್ತುತಃ ವರ್ಗದಾರರ ಸ್ವಂತ ಸಾಗುವಳಿಯು ಬೆಟ್ಟು ಒಕ್ಕಲುಗಳಿಂದಲೇ ಸಾಗುತ್ತಿದ್ದು, ಈ ಕೆಲಸಕ್ಕೆ ಕೂಲಿ ಕೊಡುವ ವರ್ಗದಾರರು ಎಲ್ಲೋ ಸ್ವಲ್ಪ ಮಂದಿ ಮಾತ್ರ ಇರುತ್ತಾರೆ. ಇದನ್ನು ಕೂಡಿಸಿದರೂ ಗ್ರಾಮದ 840 ಎಕ್ರೆ ಸಾಗುವಳಿಯ ಒಟ್ಟು ಖರ್ಚು 1085 ಮುಡಿ ಅಕ್ಕಿ ಮತ್ತು ರೂ. 6172-8-0 ಆಗುತ್ತದೆ. ಇದು ಗೇಣಿ ವ ಸಾಗುವಳಿ ಒಕ್ಕಲುಗಳಿಗೆ ಸಂಪೂರ್ಣವಾಗಿ ಸಲ್ಲುತ್ತದೆಂದು ಇಟ್ಟುಕೊಂಡರೂ ಅಕ್ಕಿ ಮುಡಿಗೆ ರೂ. 3ರಂತೆ ಕ್ರಯವನ್ನು ನೋಡಿದರೆ ಈ ಒಟ್ಟು ಸಂಪಾದನೆಯು ರೂ. 9,400 ಆಗುತ್ತದೆ. ಇದು ಗೇಣಿ ಒಕ್ಕಲುಗಳು ಮತ್ತು ಸಾಗುವಳಿ ಕೂಲಿ ಒಕ್ಕಲುಗಳಿಗೆ ಒಟ್ಟಿಗೆ ವರ್ಷದಲ್ಲಿ ಸಾಗುವಳಿಯಿಂದ ಆಗುವ ಸಂಪಾದನೆ ಇರುತ್ತದೆ. ಈ ಜನಸಂಖ್ಯೆಯು 1,142 ಇದ್ದು ಸರಾಸರಿಯಿಂದ ನೋಡಿದರೆ ತಲಾ ಒಂದರ ವಾರ್ಷಿಕ ಉತ್ಪತ್ತಿಯು ರೂ. 8-4-0 ಮಾತ್ರ ಆಗುತ್ತದೆ.

ಮೇಲೆ ಕಾಣಿಸಿದ ಉತ್ಪತ್ತಿಯನ್ನು ಕೊಡುವ ಈ ಸಾಗುವಳಿ ಕೆಲಸವು ಇವರಿಗೆ ವರ್ಷದ ಸಾಗುವಳಿ ಸಮಯದಲ್ಲಿ ಮಾತ್ರ ಸಿಗುತ್ತದೆ. ಉಳಿದ ಸಮಯದಲ್ಲಿ ಹೊಟ್ಟೆಗೆ ಸಾಕಷ್ಟು ತಂದು ಹಾಕುವುದಕ್ಕೆ ಇವರು ತಮ್ಮ ಹೊಟ್ಟೆಪಾಡನ್ನು ನಡೆಸಬೇಕಾಗುವುದಕ್ಕೆ ಬೇರೆ ಸಾಗುವಳಿ ಕೆಲಸವಿರುವುದಿಲ್ಲ. ಇಂಥ ಬಿಡು ಸಮಯವು ವರ್ಷದಲ್ಲಿ ಸಾಮಾನ್ಯ 6 ತಿಂಗಳ ಕಡಿಮೆಯಾಗಿಲ್ಲ.

ಸಾಗುವಳಿ ಹೊರತು ಈ ಗ್ರಾಮದಲ್ಲಿರುವ ಉದ್ಯೋಗಗಳು ಕೆಳಗಿನಂತಿವೆ--

ಸುಮಾರು 10-50ರಷ್ಟು ಜನ ಘಟ್ಟಕ್ಕೆ ಅಡಿಕೆ ತೋಟದ ಕೆಲಸಕ್ಕೆ ಹೋಗಿ ಹಿಂದೆ ಬರುವಾಗ 20-25 ರೂಪಾಯಿಗಳನ್ನೂ ಘಟ್ಟದ ಜ್ವರವನ್ನೂ ಹಿಡಿದುಕೊಂಡು ಬರುತ್ತಾರೆ. 10-15 ಮಂದಿ ಸಿಕ್ಕಿದಾಗ ಮರಸಿಗೆಯ

ವ ಕೆಲಸ ಮಾಡುತ್ತಾರೆ. 10-12 ಮನೆಗಳಲ್ಲಿ ಮಡಕೆಗಳನ್ನು ಮಾಡುತ್ತಾರೆ ಗ್ರಾಮದಲ್ಲಿ ಸುಮಾರು 15 ಗಾಡಿಗಳಿದ್ದು ಇಷ್ಟು ಮಂದಿಗೆ ಗಾಡಿಕೆಲಸವಿರುತ್ತದೆ. ಗ್ರಾಮಕ್ಕೆ ಬಸ್ಸು ಅಥವಾ ಲಾರಿಗಳು ಬಾರದೆ ಇವು ಬರುವ ಸ್ಥಳದ ವರೆಗೆ ಇವುಗಳ ಚಲಾವಣೆ ಇರುತ್ತದೆ. ಗ್ರಾಮದ ಹರಿಜನರಲ್ಲಿ ಕೊರಗರು ಬೆತ್ತದಿಂದ ಹೆಡಿಗೆಗಳನ್ನು ತಯಾರಿಸಿ ಇದರಿಂದಲೇ ಸಾಧ್ಯವಿದ್ದಂತೆ ಜೀವಿಸುತ್ತಾರೆ. ಮುಗ್ಗೇರ ಹರಿಜನರೂ, ಇತರ ಕೆಲವರೂ ಈಚಲ ಚಾಪೆಗಳನ್ನೂ ಗೊರಬುಗಳನ್ನೂ ಮಾಡುತ್ತಾರೆ. ಈ ಬಗೆಯ ಕೆಲಸವು ಬಹಳ ಸ್ವಲ್ಪ ಪ್ರಮಾಣದಲ್ಲಿ ಆಗುತ್ತದೆ. ಎರಡು ಆಚಾರಿ ಕುಟುಂಬದವರು ಮೂಡಿಗೆ ಬಾನೆಗಳನ್ನು ಮಾಡುತ್ತಾರೆ. 2 ಸಲ್ಪೆಕುಟುಂಬದವರು ಒಲಿ ಕೊಡೆಗಳನ್ನು ಕಟ್ಟುತ್ತಾರೆ. 5-6 ಮನೆಯವರು ಸಿಕ್ಕಿದರ ಚಿನ್ನದ ಕೆಲಸಮಾಡುತ್ತಾರೆ. ಒಬ್ಬನು ಕಬ್ಬಿಣದ ಕೆಲಸಮಾಡುತ್ತಾನೆ. ಒಂದು ಮನೆಯವರು ಅವಲಕ್ಕಿ ಕುಟ್ಟಿ ಜೀವಿಸುತ್ತಾರೆ. ಗ್ರಾಮದಲ್ಲಿ 2 ಅಂಗಡಿಗಳಿವೆ. ಇನ್ನೊಬ್ಬನು ಮೀನು ಮಾರಾಟಮಾಡುತ್ತಾನೆ. 3-4 ಮಂದಿ ಕಾಡು ಉತ್ಪತ್ತಿ ವ್ಯಾಪಾರ ಮಾಡುತ್ತಾರೆ 8 ಮನೆಯವರು ವೈದಿಕ ಕಸಬು ಮಾಡುತ್ತಾರೆ. ಗ್ರಾಮದಲ್ಲಿ 1 ಶಿವಳ್ಳಿ, 1 ಗೌಡಸಾರಸ್ವತ ಹೀಗೆ 2 ದೇವಸ್ಥಾನಗಳಿವೆ. ಮೇಲೆ ಕಾಣಿಸಿದ ಉದ್ಯೋಗಗಳೂ ಅಲ್ಪ ಪ್ರಮಾಣದಲಿದ್ದು ಗ್ರಾಮಸ್ಥರಲ್ಲಿ ಹೆಚ್ಚಿನವರು ಹೆಚ್ಚಿನ ಸಮಯವನ್ನು ನಿರುದ್ಯೋಗದಲ್ಲೇ ಕಳೆಯುತ್ತಿದ್ದಾರೆ.

ಗ್ರಾಮದಲ್ಲಿ 149 ಜೋಡು ಎತ್ತುಗಳೂ 123 ಜೋಡು ಕೋಣಗಳೂ, 175 ದನಗಳೂ, 296 ಕರುಗಳೂ, 19 ಎಮ್ಮೆ ವ ಕರುಕೂಡಾ ಇರುತ್ತವೆ ದನಕರುಗಳ ಸಂಖ್ಯೆಯು ಇಷ್ಟಿದ್ದರೂ ಹಾಲು ಕೊಡುವ ದನಗಳು ಸ್ವಲ್ಪಮಾತ್ರವಿದ್ದು ಹೆಚ್ಚಿನವು ಹಟ್ಟಿಗೊಬ್ಬರಕ್ಕಾಗಿ ಮಾತ್ರ ಸಾಕಲ್ಪಡುತ್ತಿವೆ. ದನಕರುಗಳ ಸ್ಥಿತಿಯು ಸಾಮಾನ್ಯವಾಗಿ ಕರುಣಾಜನಕವಾಗಿರುತ್ತದೆ.

ಗ್ರಾಮದ ಆರೋಗ್ಯ ವ ಶುಚಿತ್ವದ ಸ್ಥಿತಿಯು ಈ ಕೆಳಗಿನಂತಿದೆ— ಹಟ್ಟಿಗೊಬ್ಬರವು ಅಲ್ಲಲ್ಲಿ ರಾಶಿಯಾಗಿರುತ್ತದೆ. ಅಂಗಳವು ಹಾಳಾಗದಂತೆ ಬೇಕೆಂತಲೆ ಸೊಪ್ಪು ವ ಹುಲ್ಲನ್ನು ಹಾಕಿ ಮನೆ ಬಾಗಿಲನ್ನು ಕೊಳಕು ಮಾಡುತ್ತಾರೆ. ಬಾವಿಗಳಿಗೆ ಆವರಣವಿಲ್ಲದೆ ಕೊಳಕು ನೀರು ಪುನಃ ಬಾವಿಗೆ ಹೋಗುತ್ತಿದೆ. ಮುಗ್ಗೇರ ಹರಿಜನರು ಗದ್ದೆ ಬದಿಯ ಒಂದು ಹೊಂಡವನ್ನು ಬಾಸಿಯನ್ನಾಗಿ ಉಪಯೋಗಿಸುತ್ತಿದ್ದಾರೆ. ಗ್ರಾಮದಲ್ಲಿ ಮಲೇರಿಯದ ಹಾವಳಿಯು ಬಹಳವಿರುತ್ತದೆ. ಜ್ವರವಿಲ್ಲದ ಮನೆಯಿಲ್ಲವೆಂದೂ ಹೇಳಬಹುದು ಡಾಕ್ಟರರ ಸಹಾಯವು ಬೇಕಾದರೆ ಉಡುಪಿಗೆ ಹೋಗಬೇಕಾಗುವದು. ಹೀಗಾಗಿ ಜೋರು ಜ್ವರ ಬಂದರೆ ಮಲಗುತ್ತಾರೆ; ಸ್ವಲ್ಪ ಬಿಟ್ಟರೆ ಕೆಲಸಮಾಡುತ್ತಾರೆ.

ಗ್ರಾಮದ ಸಾಲದ ಅಂದಾಜನ್ನು ತೆಗೆಯಲಿಕ್ಕೆ ಸಾಧ್ಯವಾಗಲಿಲ್ಲ. ಸಹಕಾರ ಸಂಘದಲ್ಲಿ ಈ ಗ್ರಾಮಸ್ಥರ ಸಾಲವು ಸುಮಾರು ರೂ. 2,500ರಷ್ಟು ಇದೆ. ಆಕ್ಕಿಗೆ ಕಡಧಾರಣೆ 4-8-0ಯಿಂದ 5 ರೂಪಾಯಿವರೆಗೆ ಇದೆ. ಭತ್ತವಾದರೆ 3ರಿಂದ 4 ಮುಡಿ ಕೊಡಬೇಕಾಗುತ್ತದೆ. ಅಕ್ಕಿ ಮೂಲಿ ದರ 10½ಯಿಂದ 11 ಸೇರಿನ ತನಕವಿರುತ್ತದೆ.

ಶಾಲೆಗೆ ಹೋಗುವ ಪ್ರಾಯದ 264 ಹುಡುಗರಲ್ಲಿ ಸುಮಾರು 60 ಮಂದಿ ಗ್ರಾಮದಲ್ಲಿರುವ 2 ಎಲಿಮೆಂಟ್ರಿಯ ಶಾಲೆಗಳಿಗೆ ಹೋಗುತ್ತಾರೆ. ಇವರೂ ಸರಿಯಾಗಿ ಬರುವುದಿಲ್ಲ

ದ. ಕ. ಜಿಲ್ಲಾ ಗ್ರಾಮ ಉದ್ಯೋಗ ಸಂಘದವರು ಬೈರಂಪಳ್ಳಿ, ಕೇಂದ್ರದಲ್ಲಿ ತಮ್ಮ ಕಾರ್ಯಕ್ರಮವನ್ನು ಮುಂದರಿಸಲು ಮಾಡಿಕೊಂಡಿರುವ ವ್ಯವಸ್ಥೆ ವ ಸಖ್ಯಕ್ಕೆ ಕೈಕೊಂಡಿರುವ ಕಾರ್ಯಕ್ರಮ ಇತ್ಯಾದಿಗಳ ಮಾಹಿತಿಯನ್ನು ಇನ್ನೊಮ್ಮೆ ಕೊಡಲಾಗುವುದು.

ಹಿ. ರಾಮರಾಯಮಲ್ಯ,

ಕಾರ್ಯದರ್ಶಿ, ದ. ಕ. ಜಿಲ್ಲಾ ಗ್ರಾಮ ಉದ್ಯೋಗ ಸಂಘ.

ಇದಕ್ಕೊಂದು ಉಪಾಯ ಹೇಳಿ!

(ಈಗಿನ ಸನಾತನಿಗಳ ಪರಿಸ್ಥಿತಿಯನ್ನು ಚಿತ್ರಿಸುವ ಹರಟೆಯೊಂದು.)

ಯಾವುದಕ್ಕೆಂದರೆ, ನಾವು ಸನಾತನಿಗಳು, ಕಾಫಿಹೊಟೆಲಿಗೆ ಹೊಕ್ಕು ನಮ್ಮ ಸನಾತನಿತ್ವವು ಕೆಡದಂತೆ ಹೇಗೆ ಕಾಫಿ ಕುಡಿದು ಬರಬಹುದು? ಎಂಬುದಕ್ಕೆ. "ನೀವು ಸನಾತನಿಗಳು, ಕಾಫಿ ಕುಡಿಯುವುದೇ?" ಎನ್ನುವಿರಾ? ಸನಾತನಿಗಳು ಕಾಫಿ ಕುಡಿಯಬಾರದೆಂದು ಶಾಸ್ತ್ರದಲ್ಲಿ ಎಲ್ಲಿ ಹೇಳಿದೆ? ತೋರಿಸಿಕೊಡಿರಿ. ಅದೂ ನಾವು ಕಾಫಿ ಕುಡಿಯುವುದು ಸನಾತನಿಗಳೇ ಇಟ್ಟಿರುವ ಕಾಫಿಹೋಟೆಲಿನಲ್ಲಿ. "ಏನು! ಸನಾತನಿಗಳು ಕಾಫಿಹೊಟೆಲು ಇಡುವುದೆ? ಶಾಂತಂ ಪಾಪಂ!" ಎಂದು ನೀವು ಕಿವಿಗೆ ಕೈ ಇಡುವುದಾದರೆ, "ಸನಾತನಿಗಳು ಕಾಫಿಹೊಟೆಲು ಇಡಬಾರದು" ಎಂದು ಶಾಸ್ತ್ರೋಕ್ತಿ ಇದೆಯೆ? ಇದ್ದರೆ ಎದುರು ಹಾಕಿ ಎನ್ನುತ್ತೇನೆ ನಾನು. ಮಾತ್ರವಲ್ಲ, ನಿಮಗೆ ರೂಪಾಯಿ ೧೦೦೦೦೦೦ ... ...(ಬೇಕಾದಷ್ಟು ಸೊನ್ನೆ ಹಾಕಿಕೊಳ್ಳಿ) ಬಹುಮಾನ ಕೊಡುತ್ತೇನೆ. (ಇಗೊಳ್ಳಿ, ನೋಡಿ, ಜನಿವಾರ ಹಿಡಿದು ಹೇಳುವ ಮಾತಿದು! ಕೆಲವು ಜಾಹೀರಾತುಗಳಲ್ಲಿ ಹೇಳುವಂತಹ ಟೊಳ್ಳು ಗ್ಯಾರಂಟೀಯಲ್ಲ!) ಎಂದ ಮೇಲೆ ನಾವು, ಸನಾತನಿಗಳು, ಕಾಫಿಹೊಟೆಲಿಗೆ (ಅಂದರೆ ಸನಾತನಿಗಳು ಇಟ್ಟ ಕಾಫಿಹೊಟೆಲಿಗೆ—ನೆನಪಿರಲಿ) ಹೋಗಬಹುದು; ಕಾಫಿ-ತಿಂಡಿ ಹೊಡೆಯಬಹುದು; ಇದು ಶಾಸ್ತ್ರ ವಿರುದ್ಧವಲ್ಲವೆಂದು ಸಿದ್ಧಾಂತವಾಗಲಿಲ್ಲವೆ? "ಹಾಗಾದರೆ ಹೋಗಿರಿ—ಯಥೇಚ್ಛ ಕುಡಿಯಿರಿ; ನಿಮ್ಮ ಸನಾತನತ್ವವು ನಿಮ್ಮ ಕುತ್ತಿಗೆಯಲ್ಲಿ ಇದ್ದೇ ಇದೆ; ಕೆಡುವುದೂ ಇಲ್ಲ; ಉಪಾಯವೂ ಬೇಡ." ಎನ್ನುವಿರಾ? ಆ ನಿಮ್ಮ ಅಭಿಪ್ರಾಯ ಮಾತ್ರ ತಪ್ಪು ನೋಡಿ. ನೀವು ಸರಿಯಾಗಿ ಯೋಚಿಸಿ ಉಪಾಯವನ್ನು ಹೇಳಬೇಕಾಗಿರುವುದರಿಂದ ಹೋಟೆಲಿನಲ್ಲಿಯ ಯಾವಯಾವ ವಿಧ್ಯಮಾನಗಳಿಂದ ನಮ್ಮ ಮತ್ತು ಹೊಟೆಲ್ ಇಟ್ಟವರ ಸನಾತನಿತ್ವವು ಕೆಡುವುದಿಲ್ಲವೆಂಬುದನ್ನು ಮೊದಲಾಗಿ ಸ್ಪಷ್ಟವಾಗಿ ಹೇಳಿ ಆ ಮೇಲೆ ಯಾವುದರಿಂದ ಅದು ಕೆಡುತ್ತದೆಂಬುದನ್ನೂ ಕಂಠೋಕ್ತವಾಗಿ ಹೇಳಿಬಿಟ್ಟರೆ ನೀವು ನಡುನಡುವೆ ಆಶ್ಚರ್ಯದಿಂದ ಕಣ್ಣರಳಿಸಿ ನಮಗೆ ಪ್ರಶ್ನೆ ಹಾಕುವ ಅವಶ್ಯ ಬೀಳುವುದಿಲ್ಲ. ನೀವು ಅವನ್ನೆಲ್ಲ ಸಾವಧಾನವಾಗಿ ಕೇಳಿ, ನಿಧಾನವಾಗಿ ಪರ್ಯಾಲೋಚಿಸಿ, ಉಪಾಯವೊಂದನ್ನು ಹೇಳುವ ಔದಾರ್ಯವನ್ನು ತೋರಿದರೆ, ಸುಧಾರಕರಲ್ಲದ ಸನಾತನಿಗಳಾದ ನಾವು ಸದಾ ನಿಮಗೆ ಋಣಿಗಳೇ ಮೊದಲಾಗಿ, ನಾವು ಸುಧಾರಕರಲ್ಲದ ಸನಾತನಿಗಳೆಂದ ಮೇಲೆ ಸುಧಾರಕ ಸನಾತನಿಗಳೆಂಬವರೂ ಇದ್ದಾರೆಯೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತೆ. ಇಲ್ಲಾ ಎಂದರೆ, ಅವರು ಬಿಡುವುದಿಲ್ಲಾ. ನಮ್ಮ ಹೆಸರನ್ನೇ ಅಪಹರಿಸಿ ತಮ್ಮವರೊಂದಿಗೆ ಪೋಣಿಸಿಕೊಂಡುಬಿಟ್ಟಿದ್ದಾರೆ! ಅಲ್ಲದೆ, ನಿಜವಾದ ಸನಾತನಿಗಳೆಂದರೆ ತಾವೆಂದೂ ನಾವೆಲ್ಲ ಒಂದೇ ಸನಾತನೀ ವೇಷಧಾರಿಗಳೆಂದೂ ಹೇಳುತ್ತಾರೆ. ನಾವಿದನ್ನು ಒಪ್ಪಬೇಕೋ ಬೇಡವೋ ನಮಗೇ ತಿಳಿಯದು. ಬಿಡುವಿದ್ದಾಗ ಇದನ್ನು—ಇನ್ನು ನಮ್ಮ ಕೆಲವು ಜಿದುಕಿನ ಸಮಸ್ಯೆಗಳಿವೆ.—ಅದನ್ನು ದಯಮಾಡಿ ಬಿಡಿಸಿ ಹೇಳಿದರೆ ಮಹದುಪಕಾರ.

ಈಗ ಪ್ರಸ್ತುತ ವಿಷಯ: ನನಗೆ ತಿಳಿದಿರುವಮಟ್ಟಿಗೆ ನಮ್ಮಲ್ಲಿ (ಅಂದರೆ ಹೋಟೆಲಿಗೆ ಹೋಗುವ ಸನಾತನಿಗಳಲ್ಲಿ—ಇತರೆ ಸನಾತನಿಗಳನ್ನು ಕುರಿತು ಈ ಲೇಖನವನ್ನು ನಾನು ಬರೆದಿಲ್ಲ. ಇದಕ್ಕಾಗಿ ಅವರು ನನ್ನನ್ನು ಹೊಗಳುವುದೂ ಬೇಡ). ನಮ್ಮಲ್ಲಿ ತೋರಿಕೆಗೆ ಎರಡು ತೆರದವರಿದ್ದಾರೆ: ನಂಬರ್ ೧— ಶರ್ಟುಹಾಕದಿರುವವರು; ಇವರು ಉತ್ತಮ ಸನಾತನಿಗಳು. (ಆದರೆ ದುರ್ದೈವವಶಾತ್ ಇವರ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿದೆ!) ನಂ. ೨—ಶರ್ಟು ಹಾಕುವವರು; ಇವರು ಮಧ್ಯಮ ಸನಾತನಿಗಳು (ದಿನ ಹೋದಂತೆ ಇವರ ಸಂಖ್ಯೆಯೇ ಏರುತ್ತಿದೆ!) ಕಲಿಕಾಲ! ಬೇರೆಯವರೂ ಶರ್ಟುಹಾಕುವುದರಿಂದ ಈ ಮಧ್ಯಮ ಸನಾತನಿಗಳನ್ನು ನಾವು ಹೇಗೆ ಗೊತ್ತು ಹಚ್ಚುತ್ತೇನೆಂದು ನೀವು ಕೇಳಬಹುದು. ಬಹುಶಃ ನಿಮಗೆ ಆ ಗಾಂಧೀ ಜುಬ್ಬದವರದೇ ತಲೆಯಲ್ಲಿದೆ (ಇವರು ಏಳೇಳು ಜನ್ಮಕ್ಕೂ ಸನಾತನಿಗಳಾಗಲಾರರು! ಆದುದರಿಂದ ನಿಮಗೆ ಎಚ್ಚರಿಸುತ್ತೇನೆ-ಮೊದಲಾಗಿ ನಮ್ಮವರದು ಅಂತಹ ಖದ್ದರಿನ ಶರ್ಟಲ್ಲ; ಪರೆಯದ ನಾಕು ಹುಡುಗಿಯರು ತೊಡುವ ರವಕೆಯ ಹಾಗಿನ ಮರ್ಸಿಡ್ಯಾಜಿಟ ಅಥವಾ ತದ್ವಿತರ ಹೊಳಪಿನ ಬಟ್ಟೆಯ ಶರ್ಟು ನಮ್ಮವರದು. ಎರಡನೆಯದಾಗಿ, ಅವರ ಮೇಲೆ ತುಳಸೀಮಣಿಮಾಲೆ (ಚಿನ್ನ ಯಾ ಬೆಳ್ಳಿಯಿಂದ ಕಟ್ಟಿದ್ದು ನಮ್ಮಲ್ಲಿಯ ಫ್ಯಾಶನ್!) ಇರುತ್ತದೆ. ಮೂರನೆಯದಾಗಿ, ಮೋರೆಯಮೇಲೆ ನಾಜೂಕಾದ ಅಂಗಾರಕ ಮತ್ತು ಚುಕ್ಕೆಯಕ್ಷತೆ ಚಂದಕ್ಕಾಗಿ ಇದ್ದೇ ಇರುತ್ತೆ. ನಾಲ್ಕನೇಯದಾಗಿ, ರೇಷಮಿಶಾಲು ಹೆಗಲ ಮೇಲಿದೆ. ಐದನೆಯದಾಗಿ, ಬಗೆಬಗೆಯ ಸೆಂಟ್ಸು (ಐಡೋಫೋರ್ಮಿನ ಲೇಪದ ಗುಟ್ಟು ರಟ್ಟಾಗದಂತೆ) ಉಪಯೋಗಿಸುತ್ತಾರೆ ಈ ಪಂಚಲಕ್ಷಣಗಳಲ್ಲಿ ಯಾವುದಾದರೊಂದು ಯಾ ಹೆಚ್ಚು ಇದ್ದು ಗೊತ್ತು ಹಚ್ಚುವುದು ಕಷ್ಟವಲ್ಲವೆನ್ನಿ. ಇಂತಹರನ್ನು ನಾವು ಸನಾತನಿಗಳೆಂದು ಮನಸಾ ಒಪ್ಪಲಿಕ್ಕೆ ಇಷ್ಟವಿಲ್ಲದಿದ್ದರೂ ಹಾಗೆಂದು ಬಾಯಿಬಿಟ್ಟು ಹೇಳಲಿಕ್ಕೆ ಧೈರ್ಯಸಾಲದು ನಮ್ಮಲ್ಲಿ, ಏಕೆಂದರೆ ಇವರೆಲ್ಲ ದೊಡ್ಡದೊಡ್ಡ ಮಠದೇವಸ್ಥಾನಾಧಿಪತಿಗಳ ಬಲಗೈ ಎಡಗೈ ಹಿಂಗೈ ಮುಂಗೈಯಾಗಿದ್ದಾರೆ. ನಾಳೆ ನಮಗೆ ಊಟದಕ್ಷಿಣೆಗಳಿಗೇ ತಕ್ರಾರ್‌ಹಾಕಿ ಬಿಟ್ಟರೆ ಕಾಫಿಕುಡಿಯುವುದಕ್ಕೆ ರೊಕ್ಕವಾದರೂ ಎಲ್ಲಿಂದ ಬರಬೇಕು ಹೇಳಿ! ಆದುದರಿಂದ ಅವರಿಗೂ ನಮಗೂ ಮುಟ್ಟುಚಟ್ಟು ಆದರೂ, ಒಂದೇ ಕಡೆ ಕೂತು ಕಾಫಿಕುಡಿದರೂ, ನಮ್ಮ ಸನಾತನೀ ಬಾಂಧವ್ಯವು ಬೆಳೆವುದಲ್ಲದೆ ಕುಂದಲಾರದು. ದೋಷವೆಂತೂ ಇಲ್ಲವೆನ್ನಿ. ಹಾಗೆಯೇ ನಮ್ಮ ಸನಾತನೀ ಹೋಟೆಲ್‌ಗಾರನು ಅಥವಾ ಅವನ ಸನಾತನೀ ವಟುಗಳು ಯಾವ ಜಾತಿಯವನಿಗೆ (ಹರಿಜನ ಹೊರತು!) ಕಾಫಿಕೊಟ್ಟು, ಯಾವ ಜಾತಿಯವನ (ಹರಿಜನ ಹೊರತು! ನೆನಪಿರಲಿ, ಆದರೆ ಹರಿಜನರಿಗೆ ಎಂಜಲು ಭಕ್ಷ್ಯಮಾರಿದರೆ ಯಾ ಆ ಎಂಜಲು ಭಕ್ಷದ ರುಚಿಯಮರು ತಾಸು ತಾಸು ನೊಣ ಓಡಿಸುತ್ತಾ ಹರಿಜನ ಗ್ರಾಹಕ ನಿರೀಕ್ಷಣೆಯಲ್ಲಿ ನಮ್ಮ ಉತ್ತಮ ಸನಾತನಿಗಳು—ಅಂದರೆ ಶರ್ಟಿಲ್ಲದೆ ಮೈಮೇಲಿನ ನಾಮಗಳನ್ನು ಚೆನ್ನಾಗಿ ತೋರಿಸುವವರು—ಕುಳಿತರೂ ನಮ್ಮ ಉತ್ತಮ ಸನಾತನಿತ್ವವು ಕೆಡದು) ಯಾವ ಜಾತಿಯವನ ಎಂಜಲು ಕಪ್-ಪ್ಲೇಟುಗಳನ್ನು ತೊಳೆದರೂ, ತೊಳೆದು ಬಂದು ನಮಗೆ ಕಾಫಿತಿಂಡಿ ಕೊಟ್ಟರೂ, (ಅದೇ ಕಪ್‌ಪ್ಲೇಟುಗಳಲ್ಲಾದರೂ ಚಿಂತೆಯಿಲ್ಲ.) ಅವರ ಸನಾತನಿತ್ವಕ್ಕೆ ಕುಂದಿಲ್ಲ, ನಮ್ಮದಕ್ಕೆ ಹಾನಿಯಿಲ್ಲ. ನಮ್ಮ ಹೋಟೇಲ್ ಸನಾತನಿಯು ಹೊಗೆಸೊಪ್ಪಿನ ವೀಳ್ಯದೆಲೆ ಜಗಿಯುತ್ತಾ ನಗುತ್ತ ನಮಗೆ ಕಾಫಿ ತಯಾರಿಸಿಯೂ ಕೊಡಬಹುದು. ಕಾಫಿ ಕುಡಿದ ಬಾಯಿಗೆ ಧರ್ಮಾರ್ಥವಾಗಿ ನಮಗೂ ತಾಂಬೂಲ ದಾನಮಾಡಿದರೆ (ಯಾವ ಜಾತಿಯವನು ಕಟ್ಟಿದ ಬೀಡವಾದರೂ ಚಿಂತೆಯಿಲ್ಲ. ಶಾಸ್ತ್ರದಲ್ಲಿ ಬೀಡತಿನ್ನಬಾರದೆಂದಿಲ್ಲ!) ಪರಮ ಸಂತೋಷವೇ ನಮಗೆ. ಮುಖ್ಯವಾಗಿ, ನಮ್ಮ ಸನಾತನಿ ಹೋಟೆಲ್‌ಗಾರನಾಗಲೀ ಅವನ ಸಿಬಂದಿಯಾಗಲೀ ಶರ್ಟುಹಾಕಿ ಕೂಂಡಿರಕೂಡದು. ಮತ್ತು ನಮ್ಮಂತಹ ಶರ್ಟುರಹಿತ ಸನಾತನಿಗಳು ಕಾಫಿ ಕುಡಿಯುವ ಜಾಗವಾಗಿ ತುಪ್ಪ ದೋಸ ಕಾಯಿಸುವಲ್ಲಿ ಒಂದು ಜಗಲಿ ಯಾ ನೆಲಬಟ್ಟೆರ ಬೇಕು ಆ ಜಗಲಿ ಯಾ ನೆಲದಲ್ಲಿ ಕೂತು ಶರ್ಟುರಹಿತ ಸನಾತನಿಯು ಕೊಟ್ಟ ಕಾಫಿ ಕುಡಿದರೆ ಸನಾತನಿತ್ವವು ಸುತರಾಂ ಕೆಡುವುದೇ ಇಲ್ಲ. ಬೆಂಚು ಯಾ ಕುರ್ಚಿಯಲ್ಲಿ ಕೂತು ಮೇಜಿನಮೇಲೆ ಕಾಫಿತಿಂಡಿಯನ್ನಿಟ್ಟುಕೊಂಡರೆ ಮಾತ್ರ ಸನಾತನಿತ್ವವು ಶಾಶ್ವತವಾಗಿ ನಾಶವಾಗಿಯೇ ಹೋಗುತ್ತದೆ. ಆದರೆ, ಆ ಬೆಂಚು ಮೇಜುಗಳು ನಮ್ಮ ಜಗಲಿಯ ಬಳಿಯಲ್ಲೇ ಕಾಫಿನೀರು

ಕುದಿಸುವ ಅಗ್ನಿನಾರಾಯಣದೇವರ ಸಮ ಕ್ಷದಲ್ಲಿದ್ದರೆ ಅಲ್ಲಿ ಕಾಫಿ ಕುಡಿಯುವವರಿಗೆ ಮಧ್ಯಮ ಸನಾತನಿತ್ವವು ಉಳಿಯುತ್ತದೆ. ಅದೇ ನಮ್ಮ ಶರ್ಟುಸನಾತನಿಗಳ ಜಾಗ. ಅದರಿಂದಾಚೆಗೆಲ್ಲ, ನಾರಾಯಣ! ನಾರಾಯಣ! ಏನು ಹೇಳಲಿ! ಹೇಳಿದರೆ ನಾಳೆ ಬೀದಿಯಲ್ಲಿ ತಿರುಗಬೇಕಲ್ಲ! ಆದುದರಿಂದ ನೀವೇ ಊಹಿಸಿಕೊಳ್ಳಿ. ನಮ್ಮ ಶರ್ಟು ಸನಾತನಿಗಳು ಅವರ ಆಸ್ಥಾನವನ್ನು ಬಿಟ್ಟು ನಮ್ಮ ಜಗಲಿಗೇರಿದರೂ ನೆಲಕ್ಕಿಳಿದರೂ ನಮಗೆ ಗುಣುಗುಟ್ಟುವ ಧೈರ್ಯವಿಲ್ಲ ಅವರೇಕೆ? ಬೇರೆ ಯಾರಾದರೂ ಬಂದರೂ ಹಾಗೆಯೇ. ಆದರೆ ಆ ಅವರಲ್ಲಿ ಅಲ್ಲಿಗೆ ಬರುವುದೇ ಇಲ್ಲ. ನಮ್ಮ ಸನಾತನಿತ್ವಕ್ಕೆ ಅವರು ತೋರಿಸುವ ಗೌರವವೋ ತಮ್ಮ ಮಡಿಬಟ್ಟೆಯ ಮೇಲಿನ ಪ್ರೇಮವೋ ನಾನರಿಯೆ. ಹಾಗೆಯೇ ನಮ್ಮ ಸ-ಶರ್ಟು ಸನಾತನಿಗಳೂ ಹೆಚ್ಚಾಗಿ ನಮ್ಮ ಜಗಲಿ ಹತ್ತದೆ ಕೆಳಗಿನ ಬೆಂಚಿನಲ್ಲೇ ಆಸೀನರಾಗುವುದು ನಮ್ಮ ಉತ್ತಮತರ ಸನಾತನಿತ್ವಕ್ಕೆ ಔದಾರ್ಯವನ್ನರ್ಪಿಸಬೇಕೆಂದೋ ಅವರ ಮಿಲ್ ಮಲ್ ಬಟ್ಟೆಯ ಮಡಿಕೆಡುವುದೆಂದೋ ನಾನು ನಿಶ್ಚಯ ಹೇಳಲಾರೆ ನಮ್ಮದಾದರೋ ಸದಾ ಮಡಿಬಟ್ಟೆ. ಅದು ಹೊಳಲ್ಲ. ಹೊರಳಾಡಿದರೂ ಅದು ಮಡಿಯೇ. ಶರ್ಟು ಕೋಟು ಹಾಕಿದವರನ್ನು ಮುಟ್ಟದರಲ್ಲವೇ ಮೈಲಿಗೆಯಾಗುವದು? (ಶೀರೆ ರವಕೆಗಳಿಗೆ ಮುಟ್ಟುಚಿಟ್ಟು ಇಲ್ಲ— ನೆನಪಿರಲಿ!. "ಹಾಗಾದರೆ ನಿಮ್ಮ ಸನಾತನಿತ್ವವು ಕೆಡದಂತೆ ಕಾಫಿಕುಡಿಯುವ ವ್ಯವಸ್ಥೆಯೆಲ್ಲವೂ ನಿಮಗಿದ್ದು ಉಪಾಯವೇಕೆ?" ಎಂದು ನೀವು ಕೇಳಬಹುದು 'ನೋಡಿ, ಇತ್ತೀಚೆಗೆ ಅತಿಕ್ರಮಪ್ರವೇಶವಾಗ ತೊಡಗಿದೆ ನಮ್ಮ ಹಲವು ಸನಾತನೀ ಹೊಟೆಲುಗಳಲ್ಲಿ ಈ ರೀತಿ ನಾವು ಗುತ್ತಿಗೆ (monopoly) ಮಾಡಿಟ್ಟುಕೊಂಡ ಜಾಗವೆಲ್ಲ ಅಪಹರಿಸಲ್ಪಟ್ಟಿದೆ, ಒಂದೆರಡು ಹೋಟಲುಗಳಲ್ಲಿ ಮಾತ್ರ ಉಳಿದಿದೆ ಅಲ್ಲಿಂದಲೂ ನೀವು ಓಡಿಸಲ್ಪಟ್ಟರೆ ನಮಗೇನುಗತಿ? "ಹಾಗಾಗಲಾರದು ಎನ್ನುವಿರಾ? ಮೊನ್ನೆ ಹಾಗೆ ಆಗಿಯೇ ಹೋಯಿತು! ಆದುದರಿಂದಲೇ ಒಂದು ಉಪಾಯ ಹೇಳಿ ಎಂದು ನಿಮಗೆಲ್ಲ ದಮ್ಮಯ್ಯ ಹಾಕಲಿಕ್ಕೆ ಹೊರಟಿದ್ದೇನೆ ಆದುದು ಹೇಳುತ್ತೇನೆ ಮೊನ್ನೆ ನಮ್ಮ ಶರ್ಟು ಸನಾತನಿಗಳ ಜಾಗದಲ್ಲಿ ಒಬ್ಬರು ಕೋಟು ಸನಾತನಿಗಳು (ಅಂದರೆ ಶ್ರೀಪೂರ್ಣ ಸುಧಾರಕ ಸನಾತನಿಗಳು) ಬಂದು ಕುಳಿತರು ಅವರು ಕುಳಿತರೆಂದು ನಾವು ಶರ್ಟುರಹಿತ ಯಾ ಸಹಿತ ಸನಾತನಿಗಳು ದೂರಸರಿಯುವ ಕಟ್ಟಳೆಯನ್ನಿಟ್ಟುಕೊಂಡಿಲ್ಲ ಸರಿದರೆ ನಿಮ್ಮ ಸನಾತನಿತ್ವಕ್ಕೆ ಅಲ್ಲೇ ಮಂಗಳಾರತಿಯೆತ್ತುತ್ತಾರೆಂಬುದು ನಮಗೆ ಅನುಭವದಿಂದ ಗೊತ್ತೆ ಮಾತ್ರವಲ್ಲ, ಮರುದಿನವೇ ನಮ್ಮ ಸನಾತನಿತ್ವದ ನಾತವೆಲ್ಲ ಪೇಪರುಗಳಲ್ಲಿ ಒರುತ್ತದೆಂದೂ ಗೊತ್ತು. ಅವರು ಬೇಕು ಬೇಕೆಂದು ನಮ್ಮ ಶರ್ಟು ಸನಾತನಿಗಳ ಬೆಂಚಿಗೆ ನುಗ್ಗುವದಿಲ್ಲ ಎಲ್ಲಿಯಾದರೂ ಕುಳಿತು ಕುಡಿದು ಹೋಗುತ್ತಾರೆ. ಆದರೆ ಜನತುಂಬಿ ಎಲ್ಲಿಯೂ ಜಾಗವಿಲ್ಲದಿದ್ದರೆ ಆಗ ನಮ್ಮ ಸನಾತನೀ ಬೆಂಚು ಖಾಲಿಇದ್ದರೆ ಅಲ್ಲಿಗೇ ನೆಟ್ಟಗೆ ಬಂದುಬಿಡುವರು. ಅವರು ಹೊಟೆಲಿಗೆ ಬರುವುದೇ ಕಡಮೆ (ನಮ್ಮ ಅದೃಷ್ಟ!) ಆದರೆ ಬಂದಾಗ ಅವರೊಬ್ಬರಾಗಿ ಬರುವುದೇ ಇಲ್ಲ (ನಮ್ಮ ದುರದೃಷ್ಟ!) ಮೊನ್ನೆಯೂ ಜೊತೆಗಾರರೊಬ್ಬರನ್ನು ಕಟ್ಟಿಕೊಂಡೇ ಬಂದಿದ್ದರು ಸನಾತನೀ ಬಂಚಿನಲ್ಲಿ ಯಾರೂ ಇದ್ದಿಲ್ಲ, ಅಲ್ಲಿಗೇ ಹೋಗಿ ಕುಳಿತುಬಿಟ್ಟರು ಜೊತೆಗಾರರೊಟ್ಟಿಗೆ! ನಾವು ಜಗಲೀ ಸನಾತನಿಗಳು ಅತಿಕ್ರಮ ಪ್ರವೇಶವಾಯಿತೆಂದು ಕಣ್ಣಸನ್ನೆಯಿಂದ ಹೊಟೆಲ್ ಸನಾತನಿಗೆ ವಾಯರ್‌ಲೆಸ್ ಬಿಟ್ಟೆವು ಆದರೆ ಆ ಜಾಗದ ಮೇಲ್ಗಡೆ 'ಶರ್ಟು ಸನಾತನಿಗಳಿಗೆ ರಿಜರ್ವ್‌ಡ್ ಜಾಗ" ಎಂದು ಬೋರ್ಡು ತೂಗಿಸದಿರುವಾಗ ಅಲ್ಲಿ ಕುಳಿತವರನ್ನು ಏಳಹೇಳಿ ಪಿಕಲಾಟವೆಬ್ಬಿಸಲಿಕ್ಕೆ ಅವನಿಗೆ ಮನಸ್ಸಾಗಲಿಲ್ಲ. ಆದರೂ ಸುಧಾರಕ ಸನಾತನಿಗಳು ತಿಂಡಿ ಚುನಾಯಿಸಲಿಕ್ಕೆ ಕಪಾಟಿನ ಬಳಿಗೆ ಹೋದಾಗ ಹೊಟೆಲ್ ಸನಾತನಿಯು ಇಲ್ಲದ ಧೈರ್ಯವನ್ನು ತಂದುಕೊಂಡು ಮೃದುವಾಗಿ ಅವರ ಕಿವಿಯಲ್ಲಿ "ಅವರು" ಎಂದ ಆದರೆ ಸುಧಾರಕರು ಬಿರುಗಣ್ಣಿನಿಂದ ನೋಡುತ್ತ "ತಿಂಡಿತಂದು ಇಡಿರಯ್ಯಾ ಎರಡು ಪ್ಲೇಟು!" ಎಂದರು ಹೇಳಿದ ತಿಂಡಿ ತೀರ್ಥಗಳು ಒಂದುವು ಅವನ್ನವರು ಸೇವಿಸುತ್ತಿದ್ದಾಗ ನಮ್ಮ ನಾಲ್ಕು ಶರ್ಟುಸನಾತನಿಗಳು ಬಂದರು ಅನ್ಯತ್ರ ಯತ್ನವಿಲ್ಲದೆ ಅಲ್ಲೇ ಕುಳಿತು ತಿಂಡಿ ತೀರ್ಥತೆಗೆದುಕೊಂಡರೆನ್ನಿ ಆಗ ಅಲ್ಲಿ ಜಾಗಬಿಕ್ಕಟ್ಟಾದುದರಿಂದ ಆ ಸುಧಾರಕ ಸನಾತನಿಗಳ ಜೊತೆಗಾರರು ತಮ್ಮ ತಿಂಡಿಗಳನ್ನು ನಮ್ಮ ಜಗಲಿಯ ಮೇಲಿಟ್ಟು ಕುಳಿತಲ್ಲಿಂದಲೇ ನಮ್ಮ ಸಜಗೆ ತಿರುಗಿಬಿಟ್ಟರು! ನೋಡಿ ಎಷ್ಟು ಸುಲಭದಲ್ಲಿ ಸಹಪಂಕ್ತಿಯಾಯಿತು! ಹಾಗೆಂದು ನಮ್ಮ ನೆಲ ಸನಾತನಿಗಳು ತಿನ್ನುತ್ತಿದ್ದ ಖಿಲಿದೋಸೆಯನ್ನಾದರೂ ಬಿಟ್ಟೇಳಲಿಕ್ಕಾಗುತ್ತಿಯೇ? ಆ ದೋಸೆ! ಆ ಕಾಫಿ! ಬಿಟ್ಟುಬಿಟ್ಟರೆ ನಮಗೇ ಅಪರಾಧವಾದಂತಾಯಿತಲ್ಲ? ಜುಜೂ ಎನ್ನದೆ ಅವನ್ನೆಲ್ಲಾ ಹೊಟ್ಟೆಯೊಳಗ ಹಾಕಿಕೊಂಡರೆನ್ನಿ ಹೀಗಾದರೆ ನಮ್ಮ ಉತ್ತಮ ಸನಾತನಿತ್ವವು ಎಲ್ಲಿ ಉಳಿಯುತ್ತದೆ? ನೀವೇ ಹೇಳಿ. ಅದನ್ನೇ ಕುರಿತು ನಾವು ಪಿಸಿಪಿಸಿ ಮಾತಾಡುತ್ತಿದ್ದೆವು ಆ ಜೊತೆಯವರು ತಿಂದು ಮುಗಿಸಿ ಹೊರಗೆ ಹೋದರೂ ನಮ್ಮ ಆ ಸುಧಾರಕ ಸನಾತನಿಗಳು ಮಾತ್ರ ಕಾಫಿತಣಿಸುತ್ತಾ ಇದ್ದರು (ಬಹುಶಃ ನಮ್ಮ) "ಹೀಗಾದರೆ ನಮ್ಮ ವೈದಿಕಧರ್ಮ ಎಲ್ಲಿ ಉಳಿಯಿತು?" ಎಂದು ನಮ್ಮ ಹೋಟೆಲ್ ಸನಾತನಿಗೆ ಹಗುರವಾಗಿ ಹೇಳಿದವು ಕಾಫಿತಣಿಸುತ್ತಿದ್ದವರಿಗೂ ಕೇಳಿರಬಹುದು "ಏನು ಮಾಡಲಿ ನಾನು? ನಮ್ಮವರೇ ಕರೆತಂದು ಕುಳಿರಿಸಿಕೊಳ್ಳುವಾಗ!" ಎಂದು ಅವನೂ ದೀನತೆಯಿಂದ ಮೆಲ್ಲಗೆ-ಅವರೂ ಅವರಿಗೆ ಕೇಳುವಂತೆ-ಹೇಳಿದ ಆದರೆ ಉತ್ತರ ಒದಗಲಿಲ್ಲ ನಮ್ಮಲ್ಲೊಬ್ಬ ಶರ್ಟು ಸನಾತನಿಗಳು (ಇವರು ಒಂದು ಮಾತಿನಲ್ಲಿ ನಾಲ್ಕು ಅರ್ಥವಿಟ್ಟು ಹೇಳುವುದಕ್ಕೆ ಪ್ರಖ್ಯಾತರು) ನಮ್ಮೆಲ್ಲರ ಅಸಂತೃಪ್ತಿಯನ್ನು ಅವರಿಗೆ ಉಪಾಯದಿಂದ ಸೂಚಿಸಬೇಕೆಂದು ಅವರನ್ನು ಕುರಿತು, "ರಾಯರೇ, ತಮ್ಮ ಜೊತೆಗಿದ್ದವರು ... ರರು ಅಲ್ಲವ? ಎಂದು ಆ ಜೊತೆಗಾರರ ಹೆಸರು ಖ್ಯಾತಿಯನ್ನು ಪ್ರಶಂಸಿಸುವಂತೆ (ಅದಾಗಂತರಾತ್—ತಾವು ಅವರನ್ನು ಈ ನಮ್ಮ ಬಂಚಿನಲ್ಲಿ ಕುಳ್ಳಿರಿಸಿಕೊಂಡುದು ನ್ಯಾಯವೆ? ಎಂಬ ಇಂಗಿತಾಶಯವಂತೆ) ಕೇಳಿದರು ತಕ್ಷಣ ಉತ್ತರ ಬಂತೇ ಒಂತು —"ಹೌದು, ನಿಮಗಿರುವ ಹಾಗ ಅವರಿಗೂ ಜನಿವಾರವಿದೆ! ಹೋಟಲಿಗೆ ನುಗ್ಗಿ ಕಾಫಿಕುಡಿಯುವ ನಿಮ್ಮಲ್ಲಿ ಅವರಿಗಿಂತ ಹೆಚ್ಚಿಗೆ ಏನಿದೆ?' ಎಂದು ನಗುತ್ತ ದುಡು ಕೊಟ್ಟು ಹೋಗಿಯೇ ಬಿಟ್ಟರು ಮೊನ್ನೆಯಂತೂ ಜನಿವಾರವಿದ್ದವರು ಜೊತೆಗಾರರಾಗಿದ್ದರೆಂದು ನಮ್ಮ ಸಮಾಧಾನ ಪಡೋಣ ಆದರೆ ಅವರು ಕೆಲವು ವೇಳೆ ಅದೂ ಇಲ್ಲದವರನ್ನು ಕರೆದುಕೊಂಡು ಒರುತ್ತಾರೆ ಆಗ ನಮ್ಮೆಲ್ಲರ ಹಾಗಾದರೆ ನಮ್ಮ ಗತಿಯೇನು? ನಾವೇನು ಮಾಡಬೇಕು? ನಮ್ಮ ಸನಾತನೀ ಹೋಟೆಲಿನವನಾದರೂ ಏನು ಮಾಡಬಹುದು? ಒಟ್ಟಾರೆ ಹೋಟಲಿನವನು ತನ್ನ ಸನಾತನಿತ್ವವನ್ನು ಉಳಿಸಿಕೊಂಡೇ ಹೋಟಲು ನಡೆಸುತ್ತಿರಬೇಕು, ನಾವೂ ನಮ್ಮ ಸನಾತನಿತ್ವವನ್ನು ಉಳಿಸಿಕೊಳ್ಳುವಂತೆಯೇ ಕುಡಿಯುತ್ತಿರಬೇಕು. ಇವೆರಡೂ ನಿರಾತಂಕವಾಗಿ ನಡೆಯುವಂತೆ ಒಂದು ಉಪಾಯ ಹೇಳಿ, ದಮ್ಮಯ್ಯ ನಿಮಗೆ!

ಉತ್ತಮೋತ್ತಮ ಸನಾತನಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಕಡಿನ ಮೇಲೆ ಸಾಲವನ್ನು ಕೊಡುವುದು".

ಠಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ

M. R Punja, ಎಂ. ಆರ್. ಪುಂಜ,

President & Manager, ಪ್ರೆಸಿಡೆಂಟ್ ಎಂಡ್ ಮೆನೇಜರ್.

ಪ್ರೇಮ ವಿದ್ಯಾಪೀಠದ ವಿದ್ಯಾರ್ಥಿಸಂಘ

ಪ್ರೇಮ ವಿದ್ಯಾಪೀಠದ ವಿದ್ಯಾರ್ಥಿಗಳೆಲ್ಲರೂ ವಿದ್ಯಾಪೀಠದ ರಿಜಿಸ್ಟ್ರಾರರಾದ ಶ್ರೀ ಡಾ ಸುಮತಿಬಾಯಿ ಮಹೋಪಾಧ್ಯಾಯ ಇವರ ಅಧ್ಯಕ್ಷತೆಯಲ್ಲಿ ೨ ವಾರಗಳ ಹಿಂದೆ ಸಭೆ ಸೇರಿ ವಿದ್ಯಾಪೀಠದ ಇಂದಿನ ಮತ್ತು ಹಿಂದಿನ ವಿದ್ಯಾರ್ಥಿಗಳ ಸಂಘವೊಂದನ್ನು ಏರ್ಪಡಿಸಿಕೊಳ್ಳಬೇಕೆಂದು ನಿಶ್ಚಯಿಸಿದರು ಚರ್ಚೆ ಮೊದಲಾದವುಗಳಾಗಿ ಪ್ರತಿಯೊಬ್ಬ ಸದಸ್ಯನೂ ತನ್ನ ಶಕ್ತ್ಯನುಸಾರವಾಗಿ (ಅಂದರೆ ೦ -೪—೦ ಕಮ್ಮಿ ಇಲ್ಲದಷ್ಟು) ವಾರ್ಷಿಕ ಚಂದಾವನ್ನು ಕೊಡಬೇಕೆಂದೂ ಆ ಹಣವನ್ನು ಕಾರ್ಯನಿರ್ವಾಹಕ ಸಮಿತಿಯ ಸಲಹೆಯ ಮೇರೆಗೆ ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಅದಲ್ಲ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ಬೇಕಾಗಬಹುದಾದ ಉಪಕರಣಗಳಿಗಾಗಿ ಇಲ್ಲವೆ ಇನ್ನಾವುದಾದರೂ ಯೋಗ್ಯ ಕಂಡ ವಿಷಯಕ್ಕಾಗಿ ಖರ್ಚು ಮಾಡಬೇಕೆಂದೂ ನಿಶ್ಚಯಿಸಿದರು

ಕಳೆದ ಶನಿವಾರ ವಿದ್ಯಾರ್ಥಿಗಳ ವಿನಂತಿಯ ಮೇರೆಗೆ ಪಂಡಿತ ತಾರಾನಾಥರು ಬಂಗಳೂರಿನ ಸೆಂಟ್ರಲ್ ಕಾಲೇಜಿನ ಪ್ರೊಫೆಸರರಾದ ಶ್ರೀ ಕೆ. ಎಸ್. ಕೆ. ಅಯ್ಯಂಗಾರರವರ ಅಧ್ಯಕ್ಷತೆಯಲ್ಲಿ ಸಂಘದ ಮಹತ್ವವನ್ನೂ ಪ್ರಯೋಜನವನ್ನೂ ಕುರಿತು ಬೋಧಪರವಾಗಿ ಮಾತಾಡಿದರು ಅವರು ಹೇಳಿದ್ದೇನೆಂದರೆ.—"ನೀವೊಂದು ಸಂಘವನ್ನು ಮಾಡಿಕೊಂಡಿರುವುದು ಸಂತೋಷ. ಆದರೆ ಈ ಸಂಘಮೂಲಕವಾಗಿಯೇ ನಿಮ್ಮಲ್ಲಿ ಕಾರ್ಯೋತ್ಸಾಹವಾಗಲೀ, ಒಕ್ಕಟ್ಟಾಗಲೀ ಬರಬೇಕೆಂದಲ್ಲ ಇಲ್ಲಿಯ ವಿದ್ಯಾರ್ಥಿಗಳಲ್ಲಿ ಮೊದಲಿನಿಂದಲೂ ಒಕ್ಕಟ್ಟೂ ಕಾರ್ಯೋತ್ಸಾಹವೂ ಇದೆಯೆಂದೇ ನನ್ನ ನಂಬಿಗೆ 'ವಿದ್ಯಾರ್ಥಿ' ಎಂಬ ಶಬ್ದದ ಅರ್ಥವನ್ನು ನೀವು ಅರಿತಿರುವಿರಾದರೆ, ಆ ಒಕ್ಕಟ್ಟು ನಿಮ್ಮಲ್ಲಿ ನಿಜವಾಗಿಯೂ ಇರಲೇಬೇಕು ಈ ಸಂಘವು ಪರೋಪಕಾರದ ಮರ್ಮವನ್ನರಿಯಲಿ. ಪ್ರತಿಯೊಬ್ಬನಿಗೂ ಸಮಾಜದಲ್ಲಿ ಒಂದು ಕರ್ತವ್ಯವಿದ್ದೇ ಇದೆ. ತನ್ನಿಂದಾದಷ್ಟು ಇತರರಿಗೆ ಅವನಿಂದ ಸಹಾಯವಾಗಬೇಕಾದುದೇ ಆ ಕರ್ತವ್ಯ. ಅದು ಹಿರಿದಾದ ಕರ್ತವ್ಯವೂ ಅಹುದು. ನೀವು, ನಿಮ್ಮೊಡನೆ ಹಗಲಿರುಳೂ ಇರುವ, ನಿಮ್ಮೊಡನೆ ತನ್ನ ನಿತ್ಯ ವ್ಯವಹಾರಗಳನ್ನು ಜರುಗಿಸುತ್ತಿರುವ ನಿಮ್ಮ ಸಹಾಧ್ಯಾಯಿಯಾದ ವಿದ್ಯಾರ್ಥಿಗೇ ಸಹಾಯಮಾಡಲಾರಿರಾದರೆ, ಅವನ ಕಷ್ಟನಷ್ಟಗಳಲ್ಲಿ ನಿಮಗೆ ಸಹಾನುಭೂತಿಯಿರದಿದ್ದರೆ ಮುಂದಿನ ಜೀವನದಲ್ಲಿ ನೀವು ಪರರಿಗೆ ಸಹಾಯಮಾಡುವದಾದರೂ ಹೇಗೆ? ಅದಕ್ಕಾಗಿ ನಿಮ್ಮ ಸಂಘದ ಕಾರ್ಯ ಕಲಾಪಗಳಿಂದ ನೀವು, ಹುಟ್ಟಿದ್ದು ಕೇವಲ ಸ್ವಾರ್ಥಕ್ಕಾಗಿ ಅಲ್ಲ ಎಂಬುದನ್ನು ಕಲಿತರೆ ಅದೇ ಒಂದು ದೊಡ್ಡ ಸಾಧನೆ. ನಿಮ್ಮ ಸಂಘವು ತನ್ನ ಕರ್ತವ್ಯವನ್ನು ಸರಿಯಾಗಿ ಜರುಗಿಸಲಿ ಎಂದು ಹಾರೈಸುತ್ತೇನೆ

ಆ ವೇಳೆ ವಿದ್ಯಾರ್ಥಿಗಳು ಒಂದು ಕಾರ್ಯನಿರ್ವಾಹಕ ಸಮಿತಿಯನ್ನು ಆರಿಸಬೇಕೆಂತಲೂ ಅದರಲ್ಲಿ ೧೧ ಜನ ಸದಸ್ಯರಿರಬೇಕೆಂತಲೂ ನಿಶ್ಚಯಿಸಿಕೊಂಡರು. ವೇಳೆಯು ಒಹಳವಾದ್ದರಿಂದ ಸಭೆಯನ್ನು ಅಲ್ಲಿಗೆ ಮುಗಿಸಿದರು.

(ಪ್ರೇಮ ಪತ್ರಿಕೋದ್ಯಮ ೨ ಲಿಯಿಂದ)

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಕೆಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ ಶಾಸ್ತ್ರಿ,
ಆಯುರ್ವೇದ ಭೂಷಣ ಮಂಗಳೂರು ದ. ಕ.

ಏಜಂಟರು:—ಮೆಸರ್ಸ್ ಒರಿಯಂಟಲ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ ಸಂಪಿಗೆ ರಸ್ತೆ ಮಲ್ಲೇಶ್ವರಮ್, (ಬೆಂಗಳೂರು ಸಿಟಿ)

ESTD. 1926.

THE CROWN RUBBER STAMP Co.,

Balmatta Road, MANGALORE.

Manufacturers of Air Cushion Rubber Stamps, Revolving Date Stamps, Brass Glass & Wood Sign-boards, Badges, Belts, Wax Seals, Blocks Painters, Designers & Engravers on Marble Wood, Etc.



Thumb Impression Sets & Facsimile Stamps a Speciality.

ALL ENQUIRIES TO BE MADE DIRECT TO OUR BALMATTA OFFICE, MANGALORE. AS WE HAVE NO BRANCHES OR AGENTS.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.		ತಲಪುವ ಘಂಟೆ.	
ಮಿಕ್ಸೆಡ್	ಬೆಳಗ್ಗೆ	5-55	ರಾತ್ರಿ	8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಗ್ಗೆ	8-25	ಮಧ್ಯಾಹ್ನ	1-20
ಮೈಲ್	ಬೆಳಗ್ಗೆ	9-50	ಸಂಜೆ	4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ	12-45	ಮಧ್ಯಾಹ್ನ	2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ	3-20	ಸಂಜೆ	6-15
ಶಟಲ್	ಸಂಜೆ	5-25	ಬೆಳಗ್ಗೆ	9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

(೧೯೦೭ರಲ್ಲಿ ಸ್ಥಾಪಿತವಾದದ್ದು)

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70 ಲಕ್ಷ** ಮಿಕ್ಕಿವೆ ವಿಮಾ ಹಣ ಪಾವತಿ ರೂ. **37 ಲಕ್ಷ** ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು.

ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು:—ಅತ್ಯಧಿಕ ನಫೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ.

ವಿಶೇಷ ವರ್ತಮಾನಕ್ಕಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿ.

P. D. BHARGOVA,
General Manager, ***AJMER,***
Or SUPERINTENDENT 278, Linga Chetty Street, MADRAS

Or Chief Agent.—
BELLARY. MADURA. TRICHINOPOLY. VELLORE.

ಕಿರಿಯರ ಪ್ರಪಂಚದ ಪುಸ್ತಕಗಳು.

೧. ನಾಡಕಥೆ	೦	೨	೦
೨. ಮುಂದಿನ ದೇವರು	೦	೨	೦
೩. ಸ್ವತಂತ್ರ ಜೀವನೋಪಾಯ	೦	೨	೬
೪. ಕುಶಲವ	೦	೪	೦
೫. ಸಂಶಯ ಪಿಶಾಚಿ	೦	೬	೦
೬. ಕಾವ್ಯಸಾಮ್ರಾಜ್ಯ	೦	೧೨	೦
೭. ಮಧುವನ	೧	೮	೦
೮. ವ್ಯಭಿಚಾರಿಣಿ ಯಾರು (ಅಚ್ಚಿನಲ್ಲಿದೆ)			

ನಮ್ಮಲ್ಲಿ ಅಖಿಲ ಕರ್ನಾಟಕದ ಆಧುನಿಕ ಕನ್ನಡ ಗ್ರಂಥಗಳು ದೊರೆಯುತ್ತವೆ.

ಕಿರಿಯರ ಪ್ರಪಂಚ,
ಉಡುಪಿ, ದ. ಕ.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. Pai, Bros.
ಪಿ. ಎ. ಪೈ. ಬ್ರದರ್ಸ್.
ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd.,

Head Office MANGALORE Branch Office Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ ಉಡ್ಪಿ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳು ಸಾ. ಶೆ. $3\frac{1}{2}$. ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು ಸಾ ಶೆ. $4\frac{1}{2}$. 1 ವರ್ಷದ ಬಾಬ್ತು ಸಾ. ಶೆ. $5\frac{1}{2}$ 2 ವರ್ಷ ವ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—ಅಂದರೆ—ಪ್ರೊ ನೋಟು, ಹುಂಡಿ, ಸರಕು, ಚಿನ್ನಗಳ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ರೂ 100 ಅಥವಾ ಅದರ ಮೇಲಿನ ಐವೇಜಿಗೆ ಸಾ. ಶೆ 8, ಮತ್ತು ಅದಕ್ಕಿಂತ ಕೆಳಗಣದು ಸಾ. ಶೆ. 9ರ ದರದ ಬಡ್ಡಿಯ ಪ್ರಯೂ ಸಾಲ ದೊರೆವುದು ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಲಾಕರುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty.	ವಿಜಯ ಬ್ಯಾಂಕ್, ಲಿಮಿಟೆಡ್	K. Gopalkrishna Shetty.
ಚೆಯರ್‌ಮೇನ್	ಕಾರ್ಸ್ಟ್ರೀಟ್, ಮಂಗಳೂರು.	ಸೆಕ್ರೆಟರಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಕಟ್ಟಲೆ ಹಣ್ಣಾಗುತ್ತದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕೆಯಟಲಾಗಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಟಾರ ಶೋಪ್, ಹಂಪನಕಟ್ಟೆಯಲ್ಲಿಯೂ, ಸೋಮು ಭಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋಸ್ ಸ್ಟೋರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು ದ. ಕನ್ನಡ.

ವಾರದ ವಿಚಾರ

ಪುನಃ ಹಿಟ್ಲರರ ರಣ ಘರ್ಜನೆ!

ಜರ್ಮನಿಯ ನ್ಯೂರೆಂಬರ್ಗಿನಲ್ಲಿ ಕಳೆದವಾರ ಹಿಟ್ಲರರ ನಾಜಿ ಪಂಗಡಿಗರ ಪರಿಷತ್ತುಗಳ ಸಂಭ್ರಮ! ಅದರೊಂದಿಗೆ ಪ್ರಚಂಡ ಸೇನಾಪ್ರದರ್ಶನ! ಯಾರಕುರಿತಾದರೂ ಹಲ್ಲು ಮಸೆಯಲಿಲ್ಲದೆ ಸುಮ್ಮನಿರುವುದು ಹಿಟ್ಲರರ ಸ್ವಭಾವಕ್ಕೇನೇ ಸರಿಹೋಗುವಂತಿಲ್ಲ. ಈ ಬಾರಿ ಅವರು ಪ್ರತಿ ಸಲವೂ ಮಾತಾಡುವಾಗ ಆದೇಕೋ ರಸ್ಯದ ಸೋವಿಯಟ್ ರಾಜ್ಯಭಾರದ ಮೇಲೆ ಉರಿಕಾರ ಹತ್ತಿದ್ದಾರೆ. "ಜರ್ಮನಿಯ ಘೋರ ವೈರಿಯೆಂದರೆ 'ಬೋಲ್ಶೆವಿಸ್'. ಯುರೋಪಿನ ಶಾಂತಿಗದು ದೊಡ್ಡ ತೊಡಕು. ಅದನ್ನು ವಿರೋಧಿಸುವ ಸಂದರ್ಭಬಂದಾಗ ನಾವು ಹಿಂಜರಿಯಲಾರೆವು" ಎಂದು ಹಿಟ್ಲರರು ಘರ್ಜನೆ ಬೀರಿರುವರು. ರಸ್ಯದ ಅಧೀನವಿರುವ ಉಕ್ರೈನ್ ಮತ್ತು ಸೈಬೀರಿಯದ ಮೇಲೆ ಅವರ ದೃಷ್ಟಿ ಬಿದ್ದಿರುವಂತಿದೆ. ಫ್ರಾನ್ಸನ್ನು ಬೆದರಿಸಿ ರ್‍ಹೈನ ಪ್ರದೇಶವನ್ನು ವಶಪಡಿಸಿಕೊಂಡಂತೆ ರಸ್ಯವನ್ನು ಬೆದರಿಸುವ ಅಟ್ಟಹಾಸವಿದೋ ಏನೋ? ಆದರೆ ರಸ್ಯವು ಹಿಟ್ಲರರ ದರ್ಪಕ್ಕೆ ಒಂದಿಷ್ಟು ಸೊಪ್ಪು ಹಾಕದೆ ಅಪಹಾಸ್ಯಮಾಡ ಹತ್ತಿರುವುದು. ಬೋಲ್ಶೆವಿಸ್ಸಿನ ವೈರಿಗಳು ಲೋಕದಲ್ಲಿ ಅನೇಕರಿರುವರು. ಸಂದರ್ಭ ಬಂದಾಗ ಅವರವನ್ನು ಬಗ್ಗುಬಡೆಯಲು ಹೊಂಚು ಹಾಕಿಕೊಂಡಿರುವರೆಂದು ಸೋವಿಯೆಟ್ ಸರಕಾರಕ್ಕೆ ಚೆನ್ನಾಗಿ ಗೊತ್ತು. ಅದೂ ಪ್ರಚಂಡ ಸೇನಾ ಸಿದ್ಧತೆ ಮಾಡಿ ಯಾವುದೊಂದು ರಾಷ್ಟ್ರವನ್ನಾದರೂ ಇದಿರಿಸಲು ಸಿದ್ಧವಾಗಿಯೇ ಇರುವುದು.

ಯುರೋಪಿನ ಆಶೆ ತೀರಿತು!

"ಯುರೋಪಿನ ಆಶೆ ತೀರಿತು. ಅದರ ಪತನವು ಸಮೀಪಿಸುತ್ತಿದೆ" ಎಂದು ಜನರಲ್ ಸ್ಮಟ್ಸ್ ಎಂಬ ದಕ್ಷಿಣ ಆಫ್ರಿಕದ ಸುಪ್ರಸಿದ್ಧ ಮುತ್ಸದ್ದಿಯ ಉದ್ಗಾರ. ಯುರೋಪಿನ ರಾಷ್ಟ್ರಗಳೆಲ್ಲಾ ಒಂದುಗೂಡಿ ಯಾವ ತರದ ಒಪ್ಪಂದವನ್ನೂ ಮಾಡಿಕೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ರಸ್ಯವು ಸೇರಿದ ಕೂಟಕ್ಕೆ ತಾವು ಸೇರಲಾರೆವೆಂದು ಹಿಟ್ಲರರು ಕಂಠೋಕ್ತವಾಗಿ ಹೇಳಿದ್ದಾರೆ. ಲೋಕದ ಪ್ರಬಲ ರಾಷ್ಟ್ರವಾದ ರಸ್ಯವು ಸೇರದೆ ಯಾವ ಒಡಂಬಡಿಕೆ ಕರಾರುಗಳಾದರೂ ಪ್ರಯೋಜನವಿಲ್ಲ. ನಾಜಿ ಮತ್ತು ಫೇಸಿಸ್ಟರ ದರ್ಪವು ದಿನೇ ದಿನೇ ಹೆಚ್ಚುತ್ತಿದೆ. ಅವರು ಬೋಲ್ಶೆವಿಸ್ಸನ್ನು ಸದೆ ಬಡಿಯುವ ಹಂಚಿಕೆ ನಡೆಸುತ್ತಿದ್ದಾರೆ. ಬೋಲ್ಶೆವಿಕರೂ ಸುಮ್ಮನಿಲ್ಲ. ತಮಗೆ ಅನುಕೂಲವಿರುವ ರಾಷ್ಟ್ರಗಳೊಡನೆಲ್ಲಾ ಒಡಂಬಡಿಕೆ ಮಾಡಿಕೊಂಡು ತಮ್ಮ ಸ್ಥಾನವನ್ನು ಬಲಗೊಳಿಸುತ್ತಿದ್ದಾರೆ. ಹೀಗಾಗಿ ಯುರೋಪಿನಲ್ಲಿ ಯಾವಾಗ ಕಾಡ್ಗಿಚ್ಚೇಳುವುದೆನ್ನಲಾಗುವುದಿಲ್ಲ. ಪ್ರತಿ ರಾಷ್ಟ್ರಗಳವರೂ ಇದಕ್ಕೆ ಆಹುತಿಯನ್ನು ಭರದಿಂದ ತಯಾರಿಸುತ್ತಿದ್ದಾರೆ. ಇದಲ್ಲದೆ ದಿನೇ ದಿನೇ ಪ್ರಬಲವಾಗುತ್ತಿರುವ ನಿರುದ್ಯೋಗವನ್ನು ಯುದ್ಧ ಸಾಮಗ್ರಿ ತಯಾರಿಯಿಂದ ಕಡಿಮೆ ಮಾಡುವಂತಾಗಿದೆ. ಆದುದರಿಂದ ಪ್ರತಿ ರಾಷ್ಟ್ರಗಳೂ ಯುದ್ಧೋಪಕರಣ ತಯಾರಿಯಲ್ಲಿ ನಿರತವಾಗಿವೆ. ಹೀಗೆ ಸಿಡಿ ಮದ್ದು ಮಿತಿಮೀರಿ ಸಂಗ್ರಹವಾಗುತ್ತಿರುವಾಗ ಸ್ವಲ್ಪಮಾತ್ರದ ತಿಕ್ಕಾಟದ ಬಿಸಿಯು ಭಯಂಕರ ಸ್ಫೋಟನವನ್ನುಂಟು ಮಾಡದಿರದು.

ಸ್ಪೈನಿನ ಪರಿಸ್ಥಿತಿ.

ಸ್ಪೈನಿನ ಅಂತಃಕಲಹದಲ್ಲಿ ಹೊರಗಣವರಾರೂ ಕೈಹಾಕ ಬಾರದಂತೆ ಮಾಡಬೇಕೆಂದು ಫ್ರಾನ್ಸ್ ಮತ್ತು ಬ್ರಿಟಿಷ್ ಸರಕಾರದವರು ಕರೆದ ಪರಿಷತ್ತಿನಲ್ಲಿ ಭಾಗಿಯಾಗಲು ಸ್ಪೈನಿನ ನೆರೆಯ ಪೋರ್ಚುಗೀಸ್ ಸರಕಾರವು ಒಪ್ಪಿರುವುದಿಲ್ಲ. ಬ್ರಿಟಿಷ್ ರಾಜ್ಯಭಾರಿಯು ಬಾರಿ ಬಾರಿ ಕೇಳಿಕೊಂಡರೂ ನಿರಾಕರಿಸುವ ಎದೆಯುಂಟಾಗಿರುವುದು. ದುರ್ಬಲ ಪೋರ್ಚುಗೀಸ್ ರಾಜ್ಯಕ್ಕೆ! ಇದರ ಅಂತರ್ಯವೇನೆಂಬುದು ಸ್ಪಷ್ಟ. ಬಂಡಾಯಗಾರರ ಮೂಲ ಆಶ್ರಯವೇ ಪೋರ್ಚುಗೀಸ್ ರಾಜ್ಯ. ಅಲ್ಲಿಂದಲೇ ಬಂಡಾಯಗಾರರು ಸರ್ವಸಹಾಯವನ್ನೂ ಪಡೆಯುತ್ತಿರುವುದು. ಪೋರ್ಚುಗೀಸ್ ಸರಕಾರವು ಸ್ಪೈನಿನಲ್ಲಿ ಪ್ರಬಲವಾಗಿ ಹಬ್ಬಿರುವ ಕಮ್ಯೂನಿಸ್ಮಿನ ಬದ್ಧ ವೈರಿಯು ಆದುದರಿಂದ ಅದು ಬೇಕಾದ ಸಹಾಯವನ್ನು ಒಳಗಿಂದೊಳಗೆ ಬಂಡಾಯಗಾರರಿಗಿತ್ತಿರುವುದು. ಮೊದಮೊದಲು ತಾಟಸ್ಥ್ಯದ ನಟನೆಯಿಂದಿದ್ದಿತದು ತನಂತರ ಗುಟ್ಟೆಲ್ಲಾ ಬಯಲಾಗಲು ಅದು ಪ್ರತ್ಯಕ್ಷವಾಗಿ ಬಂಡಾಯಗಾರರ ಸಹಾಯಕ್ಕೆ ನಿಲ್ಲಲು ಎದೆಗೊಂಡಿರುವದು, ಇದಕ್ಕೆ ಹಿಟ್ಲರ್ ಮತ್ತು ಮುಸಲೋನಿಗಳ ಗುಪ್ತ ಪ್ರೋತ್ಸಾಹವಿರಬೇಕು. ಅವರೂ ಪೋರ್ಚುಗೀಸ್ ಸರಕಾರದ ಮೂಲಕ ಬೇಕಾದ ಸಹಾಯವನ್ನು ಬಂಡಾಯಗಾರರಿಗೀಯುತ್ತಿರಬೇಕು. ಆದುದರಿಂದ ಸ್ಪೈನಿನ ಬಂಡಾಯಗಾರರು ಬೇಗನೆ ಸೋಲುವ ಸಂಭವ ತೋರುವುದಿಲ್ಲ. ಸ್ಪೈನ್ ಸರಕಾರಕ್ಕಂತೂ ಜನ ಸಾಮಾನ್ಯರ ಬೆಂಬಲವಿರುವುದು. ಸ್ತ್ರೀಯರು ಕೂಡಾ ಸೈನಿಕರಾಗಿ ಕಾದಾಡುತ್ತಿರುವರು. ಜನರು ತಂಡ ತಂಡವಾಗಿ ಸೈನಿಕರಾಗಿ ಸೇರಿ ಬಂಡಾಯಗಾರರೊಡನೆ ಹೋರಾಡಿ ಪ್ರಾಣ ಬಲಿಯಾಯುತ್ತಿರುವರು. ಬಂಡಾಯಗಾರರನ್ನು ಪ್ರಾಣದ ಹಂಗು ತೊರೆದು ವಿರೋಧಿಸಿಯೇ ಸಿದ್ಧವೆಂಬ ಭೀಷಣ ನಿರ್ಧಾರದಿಂದ ಅವರು ಹೋರಾಡುತ್ತಿರುವರು. ಇಂತಹ ಪರಿಸ್ಥಿತಿಯಲ್ಲಿ ಈ ಅಂತಃಕಲಹವು ಶೀಘ್ರವಾಗಿ ಕೊನೆಹೊಂದದೆ ಸ್ಪೈನಿನಲ್ಲಿ ಅದೆಷ್ಟು ಭೀಷಣ ರಕ್ತಪಾತವಾಗುವುದೋ ತಿಳಿಯದು!

ದಕ್ಷಿಣ ಆಫ್ರಿಕದ ಶಿಷ್ಟಮಂಡಲ

ವೊಂದು ಹಿಂದೂದೇಶವನ್ನು ಸಂದರ್ಶಿಸಿರುವುದು. ದಕ್ಷಿಣ ಆಫ್ರಿಕದ ಜನತೆಯ ಪ್ರೀತಿ ಮತ್ತು ವಂದನೆಯನ್ನು ಹಿಂದೀಯರಿಗೊಪ್ಪಿಸಿ, ಹಿಂದೀಯರ ಪ್ರೇಮ ಸಂಭಾವನೆಗಳನ್ನು ಹಿಂದಕ್ಕೊಯ್ಯುವುದೇ ಈ ಶಿಷ್ಟಮಂಡಲದ ಉದ್ದೇಶವಂತೆ. ಇಂತಹ ಶಿಷ್ಟಮಂಡಲವೊಂದು ಈ ಮೊದಲೊಮ್ಮೆ ಹಿಂದೂದೇಶವನ್ನು ಸಂದರ್ಶಿಸಿದ್ದಿತು. ಇದು ಹೊರತು ಕೇಪ್‌ಟೌನಿನಲ್ಲಿ ಎರಡೆರಡು ಸಲ, ಹಿಂದೀಯರ ಮತ್ತು ದಕ್ಷಿಣ ಆಫ್ರಿಕ ಸರಕಾರದ ಪ್ರತಿನಿಧಿಗಳೊಳಗೆ ಎರಡು ರೌಂಡ್ ಟೇಬ್ಲ್ ಪರಿಷತ್ತುಗಳು ಕೂಡಾ ನಡೆದಿರುವವು. ಆದರೆ ಇನ್ನಿತರಗಳಿಂದ ದಕ್ಷಿಣ ಆಫ್ರಿಕದಲ್ಲಿ, ನ್ಯಾಯವಾದ ನಾಗರಿಕ ಮತ್ತು ರಾಜಕೀಯ ಹಕ್ಕುಗಳಿಂದ ಅಪಹೃತರಾಗಿ ಬಿಳಿಜನರಿಂದ ಬಹಿಷ್ಕೃತರಂತಿರುವ ಹಿಂದೀಯರ ಅವಸ್ಥೆಯೇನೂ ಸುಧಾರಿತವಾದಂತೆ ತೋರುವುದಿಲ್ಲ. ಪ್ರಕೃತದ ಶಿಷ್ಟಮಂಡಲದ ಪ್ರಮುಖರಾದ ಮಿ. ಜೆ. ಎಚ್ ಹೋಫ್‌ಮೆಯರರು ನ್ಯಾಯಬುದ್ಧಿಯ ಸುಸಂಸ್ಕೃತ ಸದ್ಗೃಹಸ್ಥರೆಂದು ಹೆಸರು ಪಡೆದವರು. ಅವರು ಹಿಂದೂದೇಶದಲ್ಲೆಲ್ಲಾ ಸಂಭ್ರಮದ ಸ್ವಾಗತ ಪಡೆದು, ಹಿಂದೀಯರ ಕುರಿತು ದಕ್ಷಿಣ ಆಫ್ರಿಕದ ಬಿಳಿಜನರಿಗಿರುವ ದುರಭಿಪ್ರಾಯವು ತೊಲಗುವ ದಕ್ಷಿಣ ಆಫ್ರಿಕದ ಹಿಂದೀಯರ ಪರಿಸ್ಥಿತಿಯು ಸುಧಾರಿಸುವಂತಾಗುವುದೆಂದೂ, ಮುಂದೆ ಹಿಂದೂದೇಶ ಮತ್ತು ದಕ್ಷಿಣ ಆಫ್ರಿಕಗಳೊಳಗಿನ ಸಂಬಂಧವು ಹೆಚ್ಚೆಚ್ಚು ಮೈತ್ರಿಯದಾಗಿ ಬೆಳೆಯಬಹುದೆಂದೂ ನಿರೀಕ್ಷಿಸಬಹುದೇ?

ಮೂರನೇ ತರಗತಿಯ ರೈಲ್ವೇ ಪ್ರಯಾಣ

ಹಿಂದೂದೇಶದ ರೈಲ್ವೆಗಳಲ್ಲಿ 3ನೇ ಕ್ಲಾಸು ರೈಲ್ವೆಪ್ರಯಾಣವು ಅದೆಷ್ಟು ಕಷ್ಟವಿರುವುದೆಂಬುದು ಜನಜನಿತ ವಿಷಯ. ಜಾನುವಾರುಗಳಂತೆ ಜನರು ಡಬ್ಬಿಯೊಳಗೆ ನುಗ್ಗಿ ಯಾವ ಪ್ರಯಾಣಾನುಕೂಲತೆಯೂ ಇಲ್ಲದೆ ನಾಗಿಸಲ್ಪಡುತ್ತಾರೆಂದರೂ ಅತಿಶಯೋಕ್ತಿಯಾಗಲಾರದು. ಬಹು ತೇಕ ಯಾನಾಗಲೂ ಖಾಲಿಯೇ ಇರುವ ಒಂದನೇ ಎರಡನೇ ತರಗತಿಗೂ, ಮೂರನೇ ತರಗತಿಗೂ ಅರಮನೆ ಸೆರೆಮನೆಯಷ್ಟರ ಅಭ್ಯಂತರವಿರುವುದೆಂದರೂ ಅದೊಂದು ಉತ್ಪ್ರೇಕ್ಷೆಯಾಗದು. ಈ ಕುರಿತು ಪತ್ರಿಕೆಗಳಲ್ಲಿಯೂ ಸಭೆ ಭಾಷಣ ಮೂಲಕವೂ ಚಳವಳವು ನಡೆದೇ ಇರುವುದು. ಆದರೂ, ಪ್ರಯಾಣಿಕರ ಅನುಕೂಲತೆಗಳನ್ನು ಹೆಚ್ಚಿಸುವ ಕುರಿತು ಸರಕಾರಕ್ಕೂ ರೈಲ್ವೇ ಕಂಪೆನಿಗಳವರಿಗೂ ನಡೆಯುವ ಪತ್ರವ್ಯವಹಾರಕ್ಕೆ ಜನರೇನೂ ಗಮನ ಕೊಡುವುದಿಲ್ಲೆಂದೇ ರೈಲ್ವೇ ಮೇಲಧಿಕಾರರ ಭಾವನೆ. ಜನರು ಗಮನ ಕೊಡಲಿ ಕೊಡದಿರಲಿ, ಸರಕಾರವು ಎಷ್ಟು ಬೇಕಾದರೂ ಪತ್ರವ್ಯವಹಾರ ನಡೆಸಲಿ, ಅದೇನೂ ಪ್ರಾಮುಖ್ಯವಲ್ಲ. ಆದರೆ 3ನೇ ಕ್ಲಾಸು ಪ್ರಯಾಣಿಕರ ಸೌಕರ್ಯವೇನಾದರೂ ಹೆಚ್ಚಿರುವುದೇ? ಅದೇನೂ ಇಲ್ಲ. ಅವರಿಂದಲೇ ರೈಲ್ವೇಖಾತೆಯು ತನ್ನ ಹೊಟ್ಟೆ ತುಂಬಿಸಲು ಸಾಕಷ್ಟು ಆದಾಯ ಪಡೆಯುವುದಾದರೂ ಅವರಿಗೆ ಯಾವ ಅನುಕೂಲತೆಯನ್ನೂ ಒದಗಿಸಿ ಕೊಡುವುದಿಲ್ಲ. ಡಬ್ಬಿಗಳಲ್ಲಿ ಯಾವಾಗಲೂ ನೂಗ್ಗಾಟವಾಗುವಂತೆ ಜನ ಸಂದಣಿ ಕೆಲವು ವೇಳೆ ನೀಡಲು ಸಾಕಷ್ಟು ಗಾಳಿಯೂ ಸಿಗದೆ ಪೇಚಾಟ. ಬಂಡಿಯ ಗಡಬಡದ ನಿರಂತರ ನಾದದೊಂದು ಪೀಡೆ, ಇದರಿಂದಾಗಿ 3ನೇ ತರಗತಿಯ ಪ್ರಯಾಣಿಕನೊಬ್ಬನು ಪ್ರಯಾಣಾಂತ್ಯದಲ್ಲಿ ಸೋತು ಸುಣ್ಣವಾಗಿ ಹೋಗುವನು. ನಿರ್ವಾಹವಿಲ್ಲದಿದ್ದರೆ ಮಾತ್ರವೇ ರೈಲ್ವೇಪ್ರಯಾಣ ಮಾಡಬೇಕು; ಇಲ್ಲವಾದರೆ ಎಂದಿಗೂ ಮಾಡಕೂಡದೆಂಬ ನಿರ್ಧಾರವುಳ್ಳವನಾಗುವನು. ಇಂತಹ ಅವಸ್ಥೆಯು ಎಂದಿಗೆ ನಿವಾರಿತವಾಗುವುದೋ? ಸರಕಾರವು ಇದೇ ರೀತಿ ರೈಲ್ವೇ ಕಂಪೆನಿಗಳೊಡನೆ ಪತ್ರವ್ಯವಹಾರ ನಡೆಸುವುದರಲ್ಲೇ ತೃಪ್ತವಾದರೆ ಅದು ಬೇಗನೇ ಆಗುವ ಸಂಭವ ತೋರುವುದಿಲ್ಲ.

ಮಹಮುದ್ ಶೆರೂಲರೂ ಮುಂದಿನ ಎಸೆಂಬ್ಲಿ ಚುನಾವಣೆಯೂ

(ಬಾತ್ಮೀದಾರರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ. ಸಂ. ನ)

ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನ ಸದಸ್ಯರಾಗಿರುವ ಜನಾಬ್ ಮಹಮುದ್ ಶೆರೂಲರವರು ತಾ. 4—9—36ನೇ ಶುಕ್ರವಾರ ಉಪ್ಪಿನಂಗಡಿಗೆ ದಯಮಾಡಿಸಿದ್ದರು. ಅವರು ಇಲ್ಲಿಗೆ ದಯೆಮಾಡಿಸಲು ಪ್ರಮುಖ ಕಾರಣವೇ ಚುನಾವಣೆಯ ಪ್ರಚಾರ ಕಾರ್ಯವಾಗಿತ್ತು. ಅವರು ಬರುವ ಮದ್ರಾಸ್ ಎಸೆಂಬ್ಲಿಗೆ ಒಬ್ಬ ಉಮೇದ್ವಾರರೆಂದೂ, ಆ ಪ್ರಯುಕ್ತ ಅವರಿಗೇನೇ ಓಟು ಕೊಡಬೇಕು ಮಾತ್ರವಲ್ಲ—ಬೇರೆಯವರಿಂದ ಕೊಡಿಸಬೇಕೆಂದೂ ಕೇಳಿಕೊಂಡರು. ಆದರೆ ಕೆಲವೇ ದಿವಸಗಳ ಮೊದಲು ಪತ್ರಿಕೆಗಳಲ್ಲಿ ಜಿಲ್ಲಾ ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರು ಪ್ರಚುರಗೊಳಿಸಿದಂತೆ ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸ್ ಶಿಸ್ತಿಗೆ ವಿರೋಧವಾಗಿ ನಡೆದವರಲ್ಲಿ ಜನಾಬ್ ಮಹಮುದ್ ಶೆರೂಲರೂ ಒಬ್ಬರೆಂದು ನೆನಪಿಗೆ ಬಂತು. ಕೂಡಲೆ ನಾನು ಅವರೊಡನೆ—ನೀವು ಜಿಲ್ಲಾ ಬೋರ್ಡು ಕಾಂಗ್ರೆಸ್ ಪಾರ್ಟಿಗೆ ಮೋಸಮಾಡಿದವರಾದುದರಿಂದ ನಮ್ಮೊಡನೆ ಓಟು ಕೇಳುವರೆ ಅರ್ಹರಲ್ಲ—ಎಂದು ಉತ್ತರವಿತ್ತೆನು. ಆಗ ಅವರು—ಆವರ ಜಿಲ್ಲಾ ಬೋರ್ಡು ಚುನಾವಣೆಯ ಸಮಯದಲ್ಲಿ, ಶ್ರೀ ಡಾ। ವಿಠಲ್ ಭಂಡಾರಿಗಳೂ, ಶ್ರೀ ಉಮೇಶರಾಯರೂ ಮೋಸ ಮಾಡಿದರೆಂದೂ, ಸ್ವೈನ್ ಬೋರ್ಡಿನಲ್ಲಿ ವಿಠಲ ಭಂಡಾರಿಗಳ ಹೆಸರಿನ ಜೊತೆಯಲ್ಲಿದ್ದ ತನ್ನ ಹೆಸರನ್ನು ಕೂಡ ಕತ್ತರಿಸಿ ಹಾಕಿದರು. ಈ ಕಾರಣದಿಂದ ನಾನು ಕೊಂಗ್ರೆಸು ಪಾರ್ಟಿಗೆ ವಿರೋಧಿಸಿದ್ದೆಂಬ ಆರೋಪಣೆಯನ್ನು ತಂದರು. ಇದರ ನಿಜತ್ವವೂ ನನಗೆ ಗೊತ್ತಿಲ್ಲದ ಕಾರಣ ನಾನು ಮೌನವಾಗಿರಬೇಕಾಯ್ತು.

ಆದುದರಿಂದ ಶೆರೂಲರು ಇನ್ನಿತರ ಕಡೆಗಳಲ್ಲಿ ಕೂಡಾ ಪ್ರಚಾರಮಾಡಿದಂತೆಯೂ, ನನ್ನ ಮತ್ತು ಜನತೆಯ ಸಂಶಯವನ್ನು ನಿವಾರಿಸುವುದಕ್ಕಾಗಿಯೂ, ಕೂಡಲೇ ಮೇಲೆ ಹೇಳಿದ ವಿಷಯಗಳ ಕುರಿತು ಸಮಂಜಸವಾದ ವಿವರವನ್ನು ಶ್ರೀ ಡಾ। ವಿಠಲ ಭಂಡಾರಿಗಳೂ ಶ್ರೀ ಉಮೇಶರಾಯರೂ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಈ ಕುರಿತು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಕೂಡಾ ಸಂಬಂಧಪಟ್ಟವರೊಡನೆ ವಿಚಾರಿಸಿ ನಿರಪರಾಧೊಂದು ವಿವರವನ್ನು ಪ್ರಕಟಿಸಿ ಜನತೆಯ ಸಂಶಯವನ್ನು ನಿವಾರಿಸಬೇಕಾಗಿ ವಿನಂತಿ.

ಹಕೀಮ್ ಹಾಜಿ ಹಸನ್,
ಉಪ್ಪಿನಂಗಡಿ.

ಕೃಷಿಗಾರರ ಸ್ಥಿತಿಯು ಅಭಿವೃದ್ಧಿಗಾಗಿ ವ್ಯವಸಾಯದ ಇಲಾಖೆಯವರು ಐದು ಬಗೆಯ ಕೆಲಸವನ್ನು ಮಾಡುತ್ತಾರೆ. ಅವು ಯಾವುವೆಂದರೆ:—

(1) ಶೋಧನೆ, (2) ಪ್ರಚಾರ (3) ಶಿಕ್ಷಣ (4) ಮುಬಾದಿಲೆ (5) ಜೀನಸುಗಳ ವಿಕ್ರಯಕ್ಕೆ ಅನುಕೂಲತೆಗಳು.

ವ್ಯವಸಾಯ

ಶೋಧನೆ

ಶೋಧನೆಯ ಕಾರ್ಯವು ಎರಡು ತರದ್ದಾಗಿರುತ್ತದೆ. ವಿಶೇಷ ಪಾಂಡಿತ್ಯವನ್ನು ಹೊಂದಿದ ಕೆಲವು ವಿಜ್ಞಾನಿಗಳು ವ್ಯವಸಾಯಕ್ಕೆಲ್ಲಾ ಅಗತ್ಯ ಬೀಳುವ ಸಸ್ಯಾದಿಗಳ ಮೂಲ ರಹಸ್ಯಗಳನ್ನು ಶೋಧಿಸುತ್ತಾರೆ. ಈ ತರದ ಶೋಧನೆಗೆ ಗಂಟಾಗಿ ಅಲ್ಲಲ್ಲಿರುವ ಶೋಧನೆಯ ರಾಣ್ಯಗಳಲ್ಲಿ ನಿತ್ಯದ ಕೆಲಸಕ್ಕೆ ಉಪಯೋಗ ಬೀಳುವ ಶೋಧನೆಯ ಕಾರ್ಯವನ್ನು ಮಾಡುತ್ತಾರೆ. ಶೋಧನೆಯ ಕಲಾಶಾಲೆಯಲ್ಲಿ ಕಂಡು ಹಿಡಿದ ಮೂಲರಹಸ್ಯಗಳು ಸ್ಥಳೀಯ ಸ್ಥಿತಿಗತಿಗಳಿಗೆ ಹೇಗೆ ಪ್ರಯೋಜನಕ್ಕೆ ಬೀಳುವವೆಂದು ಈ ರಾಣ್ಯಗಳಲ್ಲಿ ಕಂಡು ಹಿಡಿಯುತ್ತಾರೆ. ಸ್ಥಳೀಯ ಅವಶ್ಯಕತೆಗಳ ಕುರಿತು ಆ ಅಧಿಕಾರಿಗಳು ತನಿಖಿ ಮಾಡುವುದುಂಟು. ವ್ಯವಸಾಯ ಶೋಧನೆಯ ಇಂಪೀರಿಯಲ್ ಕೌನ್ಸಿಲ್ ಮತ್ತು ಹಿಂದೂ ದೇಶದ ಕೇಂದ್ರ ಹತ್ತಿಸಮಿತಿಗಳ ಸಹಾಯದಿಂದ ಇತ್ತೀಚೆಗೆ ಈ ಇಲಾಖೆಯವರು ಭತ್ತ, ಕಬ್ಬು, ಒಣ ಪೈರುಗಳು, ಹತ್ತಿ, ಬಟಾಟೆ, ಹಣ್ಣುಗಳು ಇವೇ ಮೊದಲಾದ ಪೈರುಗಳ ಕುರಿತು ತೀಕ್ಷ್ಣವಾದ ಶೋಧನೆಯ ಕೆಲಸವನ್ನು ಆರಂಭಿಸಿರುತ್ತಾರೆ.

ಪ್ರಚಾರ.

ಶೋಧನೆಯಿಂದ ತಿಳಿದು ಬಂದ ಸಂಗತಿಗಳನ್ನೆಲ್ಲಾ ವ್ಯವಸಾಯ ಇಲಾಖೆಯವರು ತಮ್ಮ ಉಪಶಿಕ್ಷಕರ ಮೂಲಕವೂ ಪ್ರದರ್ಶನಗಳು' ಮೋಟಾರ್ ಬಂಡಿಗಳು, ಮಾಯಾಲಾಂದ್ರ ಭಾಷಣಗಳ ಮೂಲಕವೂ ರೈತರಿಗೆಲ್ಲಾ ಗೊತ್ತಾಗುವಂತೆ ಪ್ರಚಾರಗೊಳಿಸುತ್ತಾರೆ ಸಾಧಾರಣ ತರದ ರೈತರ ಅನುಕೂಲತೆಗೆ ಮಿಕ್ಕಿದ ಹಣ ಬೇಕಾಗುವಂಥಾ ಉಪಾಯಗಳನ್ನು ಪ್ರಚಾರಗೊಳಿಸುವದಿಲ್ಲ.

ಮುಖ್ಯ ಪೈರುಗಳಲ್ಲಿ ಭತ್ತ, ಕಬ್ಬು, ಹತ್ತಿ, ನೆಲಕಡಲೆ ಇವುಗಳ ವಿಷಯವೇ ಹೆಚ್ಚಾಗಿ ಅಭಿವೃದ್ಧಿಯ ಉಪಾಯಗಳನ್ನು ಕಂಡು ಹಿಡಿದದ್ದಾಗಿರುತ್ತದೆ. ಕೃಷಿಮಾಡುವ ಕ್ರಮದಲ್ಲಿ ಸುಧಾರಣೆ ಮಾತ್ರವಲ್ಲ - ಗೊಬ್ಬರದಿಂದ ಹೆಚ್ಚಿನ ಪ್ರಯೋಜನ ಸಿಕ್ಕುವಂತೆ ಅದನ್ನು ಹೇಗೆ ರಕ್ಷಣೆ ಮಾಡುವುದು-ಜಾನುವಾರುಗಳನ್ನು ಹೇಗೆ ಪಾಲಿಸುವುದು-ಒಳ್ಳೆ ಶುದ್ಧ ಬೀಜವನ್ನು ಹೇಗೆ ಒದಗಿಸಿಕೊಳ್ಳುವುದು—ಎಂಬ ಕುರಿತು ಸಹಾ ಪ್ರದರ್ಶನಗಳನ್ನು ತೋರಿಸುತ್ತಾರೆ. ರೈತರಿಗೆ ಒಳ್ಳೇ ಬೀಜಗಳನ್ನು ಒದಗಿಸಬೇಕೆಂದು ವ್ಯವಸಾಯ ಇಲಾಖೆಯವರು ತಮ್ಮ ಕೈಕೆಳಗಿರುವ ಬೀಜದ ಕೃಷಿ ತೋಟಗಳನ್ನು ಈಚೆಗೆ ಹೆಚ್ಚಿಸಿರುತ್ತಾರೆ. ಹೀಗೆ ಹೆಚ್ಚಿಸಿದ್ದು ಮುಖ್ಯವಾಗಿ ಹತ್ತಿಯ ಬೀಜದ ಕೃಷಿ ತೋಟಗಳನ್ನು. ಈ ಹತ್ತಿಯ ಬೀಜದ ಕುರಿತು ಹಿಂದೂ ದೇಶದ ಕೇಂದ್ರ ಸಮಿತಿಯವರು ಹಣಸಹಾಯವನ್ನು ಮಾಡುತ್ತಾರೆ. ನೀರು ಎತ್ತುವ ಉತ್ತಮ ತರದ ಸಾಧನಗಳನ್ನೂ ಉತ್ತಮ ತರದ ಕಬ್ಬಿಣದ ನೇಗಿಲುಗಳನ್ನೂ ರೈತರಿಗೆ ಪ್ರದರ್ಶಿಸುವದುಂಟು. ಅಲ್ಲಲ್ಲಿ ವಾಡಿಕೆಯಾಗಿರುವ ಕೃಷಿಯ ಕ್ರಮವನ್ನು ಹೇಗೆ ಊರ್ಜಿತ ಪಡಿಸಬಹುದು ಎಂಬುದು ರೈತರಿಗೆ ಗೊತ್ತಾಗುವಂತೆ ಪ್ರದರ್ಶನದ ಜಾಗಗಳನ್ನು ಪ್ರತಿಯೊಂದು ಕೇಂದ್ರದಲ್ಲಿ ಸ್ಥಾಪಿಸಿರುತ್ತಾರೆ. ಈ ಪ್ರದರ್ಶನವು ಆದಷ್ಟು ಪ್ರಯೋಜನಕ್ಕೆ ಬರಬೇಕೆಂದು ಅಲ್ಲಲ್ಲಿ ರೈತರ ಭೂಮಿಗಳಲ್ಲಿಯೇ ಇಂಥಾ ಒಳ್ಳೇ ತರದ ಕೃಷಿಯ ಕ್ರಮಗಳನ್ನು ಅವರು ಪ್ರದರ್ಶಿಸಿ ತೋರಿಸುತ್ತಾರೆ. ಮೋಟಾರ್ ಬಂಡಿಯ ಪ್ರದರ್ಶನಗಳು ಎಲ್ಲಾ ಕಡೆಗೂ ಮುಟ್ಟುವಂತೆ ಈಚೆಗೆ ಸರಕಾರದವರು ಮೋಟಾರ್ ಬಂಡಿ ಏರ್ಪಾಡು ಒಂದನ್ನು ಹೆಚ್ಚಿಸಿರುತ್ತಾರೆ. ಪಶ್ಚಿಮ ಗೋದಾವರಿ ಜಿಲ್ಲೆಯ ಮುರುತೇರು ಕೃಷಿ ತೋಟದಲ್ಲಿ ಭತ್ತವೇ ಮೊದಲಾದ ಪೈರುಗಳ ಗೊಬ್ಬರ ಕ್ರಮವನ್ನು ಒಳ್ಳೇ ಸ್ಥಿತಿಗೆ ತರಲು ಏನುಮಾಡಬಹುದೆಂದು ಕಂಡು ಹಿಡಿಯುವ ಉದ್ದಿಶ್ಯ ಈಚೆಗೆ ಸರಕಾರದವರು ವಿಸ್ತಾರವಾದ ಶೋಧನೆಯ ಕಾರ್ಯಗಳನ್ನು ಉಪಕ್ರಮಿಸಿರುತ್ತಾರೆ. ಜಾನುವಾರು, ಕುರಿ, ಆಡುಗಳನ್ನು ಹೇಗೆ ಹುಟ್ಟಿಸಿ, ರಕ್ಷಿಸಿ, ಪಾಲಿಸಿ ಬೆಳೆಸುವುದು- ಅವುಗಳಿಗೆ ಸಂಬಂಧಿಸಿದ ಚಿಲ್ಲರೆ ಕೈಗಾರಿಕೆಗಳನ್ನು ಹೇಗೆ ನಡೆಸುವದು ಎಂದು ಸಹಾ ತೋರಿಸಿಕೊಡುತ್ತಾರೆ. ಕೋಳಿ ಜಾತಿ ಪಕ್ಷಿಗಳನ್ನು ಸಾಕುವದು—ಜೇನುನೊಣ ಸಂರಕ್ಷಣ ಮಾಡುವುದು—ಇವುಗಳ ಕ್ರಮವನ್ನು ತೋರಿಸುತ್ತಾರೆ. ವ್ಯವಸಾಯ ಇಲಾಖೆಯವರು ಒಳ್ಳೇ ಬೀಜ, ಸಾಮುಗ್ರಿ ಮ ಗೊಬ್ಬರಗಳನ್ನು ದಾಸ್ತಾನು ಇಟ್ಟುಕೊಂಡು ರೈತರಿಗೆ ಮಾರುತ್ತಾರೆ. ಡಿಸ್ಟ್ರಿಕ್ಟ ಬೋರ್ಡುಗಳು ಮ್ಯುನಿಸಿಪಾಲಿಟಿಗಳು, ಸಹಕಾರಿ ಸಂಘಗಳು ಮ ಪಂಚಾಯತುಗಳು—ಇವೇ ಮೊದಲಾದ ಸಂಸ್ಥೆಗಳಿಗೆ ಸ್ಥಳೀಯ ಜಾನುವಾರುಗಳ ಜಾತಿಯನ್ನು ವೃದ್ಧಿಹೊಂದಿಸುವುದಕ್ಕಾಗಿ ವ್ಯವಸಾಯ ಇಲಾಖೆಯವರು ಒಳ್ಳೇ ಬೀಜದ ಹೋರಿಗಳನ್ನು ಪೋಷಣೆಯ ಬಗ್ಗೆ ಎರವಾಗಿ ಕೊಡುತ್ತಾರೆ. ಖಾಸಗಿ ಜನರು ಯಾರಾದರೂ ಬೀಜದ ಹೋರಿಗಳ ಪೋಷಣೆಯನ್ನು ಕೈಕೊಂಡರೆ ಅವರಿಗೆ ವ್ಯವಸಾಯ ಇಲಾಖೆಯವರು ಹಣ ಸಹಾಯ ಮಾಡುತ್ತಾರೆ.

ಶಿಕ್ಷಣ.

ಮೂರು ವರ್ಷಗಳ ತನಕ ವ್ಯವಸಾಯಕ್ಕೆ ಸಂಬಂಧಪಟ್ಟ ಎಲ್ಲಾ ಜ್ಞಾನವನ್ನು ಕಲಿತುಕೊಂಡು ಅದನ್ನು ತಿಳಿದುಕೊಳ್ಳುವಂಥಾ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡುವ ಬಗ್ಗೆ ಕೊಯಂಬತ್ತೂರಿನಲ್ಲಿ ಒಂದು ವ್ಯವಸಾಯ ಕಾಲೇಜು (ಉಚ್ಚ ವಿದ್ಯಾಶಾಲೆ) ಇರುತ್ತದೆ. ಅಲ್ಲಿ ವಿದ್ಯಾರ್ಥಿಗಳು ಮುಂದೆ ತಮ್ಮ ಜೀಸಾಯದ ಕೆಲಸವನ್ನು ತಾವೇ ಹತ್ತಿರ ನಿಂತು ಮಾಡಿಸಲಿಕ್ಕೆ ಶಕ್ತರಾಗುವಂತೆ ಬೆಟ್ಟು, ನಂಜ, ಬಾಗ್ಯಾತು ಸ್ಥಳಗಳ ಕೃಷಿಯ ಕ್ರಮಗಳನ್ನೆಲ್ಲಾ ಅವರಿಗೆ ಚೆನ್ನಾಗಿ ಮನಹಿತ್ಯವಾಗುವಂತೆ ಕಲಿಸುತ್ತಾರೆ. ಹೀಗೆ ಮೂರು ವರ್ಷಗಳ ತನಕ ಅಲ್ಲಿಯೇ ನಿಂತುಕೊಂಡು ಅಭ್ಯಾಸಿಸಲಿಕ್ಕೆ ಅನುಕೂಲವಿಲ್ಲದ— ಸ್ವಂತ ಭೂಮಿಯುಳ್ಳ ಯೌವನಸ್ಥರಿಗಾಗಿ ಅಲ್ಲಿ ಪ್ರತಿವರ್ಷವೂ ಜುಲೈಯಿಂದ ಮಾರ್ಚ ತನಕ ಒಂದು ಸಂಕ್ಷೇಪ ರೀತಿಯ ಶಿಕ್ಷಣ ಕ್ರಮವನ್ನು ಇಟ್ಟದ್ದಾರೆ. ವ್ಯವಸಾಯ ಇಲಾಖೆಯವರ ಕೈಕೆಳಗಿರುವ ಕೃಷಿ ತೋಟಗಳಲ್ಲಿ ವ್ಯವಸಾಯದ ಸಾಧಾರಣ ಸಾಧನೆಗಳ ಉಪಯೋಗವನ್ನೂ ಬೇರೆ ಬೇರೆ ಕೆಲಸಗಳ ಮಹಿತ್ಯವನ್ನೂ ಜನರು ತಿಳಿಕೊಳ್ಳಲಿಕ್ಕೆ ಅನುಕೂಲವಾಗುವಂತೆ ವ್ಯವಸಾಯ ಇಲಾಖೆಯವರು ಕೆಲವು ಕೃಷಿಗಾರರನ್ನೂ, ಮೇಸ್ತ್ರಿಗಳನ್ನೂ ಕೂಲಿಯಾಳುಗಳನ್ನೂ ಇಟ್ಟುಕೊಂಡು ತರಬೇತಿ ಮಾಡುತ್ತಾರೆ.

ಮುಬಾದಿಲೆಗಳು.

ವ್ಯವಸಾಯ ಸಾಧನಗಳನ್ನು ಪಡಕೊಳ್ಳುವ ಬಗ್ಗೆ ಪ್ರತಿಯೊಬ್ಬನಿಗೆ ರೂ. 25 ವಿಾರದ ಮುಬಾದಿಲೆಗಳನ್ನು ಕೊಡುವ ಅಧಿಕಾರವು ಆಯಾಯ ವ್ಯವಸಾಯ ಸರ್ಕಲುಗಳ ಡಿಪ್ಯುಟಿ ಡೈರೆಕ್ಟರರಿಗೆ ಇರುತ್ತದೆ. ಇದಕ್ಕಿಂತ ಹೆಚ್ಚಾದ ಮುಬಾದಿಲೆ ಬೇಕಾದ್ದಲ್ಲಿ ವ್ಯವಸಾಯ ಇಲಾಖೆಯ ಡೈರೆಕ್ಟರರು ಕೊಡುವರು. ಹೀಗೆ 1934 35ನೇ ವರ್ಷದಲ್ಲಿ ರೈತರಿಗೆ ಒಟ್ಟಾರೆ ರೂ. 15,063—12—0 ಮುಬಾದಿಲೆಯಾಗಿ ಕೊಟ್ಟಿರುತ್ತದೆ.

ಮಾರಾಟ ವಿಕ್ರಯಕ್ಕೆ ಅನುಕೂಲತೆಗಳು.

ರೈತರಿಗೆ ಮಾರಾಟ ವಿಕ್ರಯದ ಬಗ್ಗೆ ಅನುಕೂಲತೆಗಳನ್ನು ಒದಗಿಸುವ ವಿಷಯವೂ ಇತ್ತೀಚೆಗೆ ವ್ಯವಸಾಯ ಇಲಾಖೆಯವರು ಮನಸ್ಸು ಕೊಡಲಿಕ್ಕೆ ಆರಂಭಿಸಿರುತ್ತಾರೆ. ಅಕ್ಕಿ ವ್ಯಾಪಾರದ ಸ್ಥಿತಿಯನ್ನು ಚನ್ನಾಗಿ ತಿಳಿದುಕೊಳ್ಳಲು ಸ್ಪೆಶ್ಯಲ್ ಆಫೀಸರನ್ನು ನೇಮಕ್ರೂರಿ ಮಾಡಿತ್ತು. ಅವರು ಬರೆದ ರಿಪೋರ್ಟು ಈಗ ಸರಕಾರದವರೊಡನೆ ಆಲೋಚನೆಗೆ ಬಾಕಿ ಇರುತ್ತದೆ. ಇಂಡಿಯಾ ಸರಕಾರಕ್ಕೆ ವ್ಯವಸಾಯ ಸಂಬಂಧವಾಗಿ ಅವಶ್ಯವುಳ್ಳ ಮಾರಾಟ ವಿಕ್ರಯದ ಜಾಗಗಳ ಕುರಿತು ಆಲೋಚನೆಗಳನ್ನು ಕೊಡುವ "ಎಗ್ರಿಕಲ್ಚರಲ್ ಮಾರ್ಕೆಟಿಂಗ್ ಎಡ್ವೈಜರ್" ಎಂಬ ಆಫೀಸರರೊಡನೆ ಸೇರಿ ಕೆಲಸ ನಡಿಸಲಿಕ್ಕೆ ಈಗ ಪ್ರಾಂತಿಕ ಮಾರ್ಕೆಟಿಂಗ್ ಆಫೀಸರರೊಬ್ಬರನ್ನು ನೇಮಕ ಮಾಡಿರುತ್ತಾರೆ. ವ್ಯವಸಾಯ ಶೋಧನೆಯ ಇಂಪೀರಿಯಲ್ ಕೌನ್ಸಿಲಿನವರು ಕೊಟ್ಟಗ್ರಾಂಟಿನ ಸಹಾಯದಿಂದ ಮೂರು ಸಹಾಯಕ ಮಾರ್ಕೆಟಿಂಗ್ ಆಫೀಸರಿರುವ ಒಂದು ವಿಶೇಷ ಶಿಬಂದಿಯನ್ನು ನೇಮಿಸಿ ಪ್ರಾಂತಿಕ ಆಫೀಸರರ ಕೆಳಗೆ ಇಟ್ಟಿದ್ದಾರೆ. ಈಗ ಇರುವ ಮ ಮುಂದೆ ಕಲ್ಪಿಸಬಹುದಾದ ಮಾರಾಟ ವಿಕ್ರಯದ ಅನುಕೂಲತೆಯ ಸ್ಥಳ (ಮಾರ್ಕೆಟ್) ಗಳನ್ನು ಶೋಧಿಸುವ ಬಗ್ಗೆ ಪ್ರತ್ಯಪ್ರತ್ಯೇಕವಾದ ಕೆಲವು ಪೈರುಗಳ ಗುಂಪುಗಳನ್ನು ಮಾಡಿ ಒಂದೊಂದು ಗುಂಪಿನ ಶೋಧನೆಯ ಕಾರ್ಯವನ್ನು ಒಬ್ಬೊಬ್ಬ ಸಹಾಯಕ ಮಾರ್ಕೆಟಿಂಗ್ ಆಫೀಸರರಿಗೆ ಕೊಟ್ಟಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆ.

ಈ ಜಿಲ್ಲೆಯ ಆರು ತಾಲೂಕುಗಳಲ್ಲಿ ವ್ಯವಸಾಯ ಇಲಾಖೆಯ ಆರು ಉಪಶಿಕ್ಷಕರು ಜಿಲ್ಲೆಯ ಕೃಷಿಉನ್ನತಿಯ ಕಾರ್ಯಗಳನ್ನು ನಡಿಸುತ್ತಾರೆ. ಅವರು ಆಯಾ ಗ್ರಾಮಗಳಿಗ ಹೋಗಿ ರೈತರು ತಮ್ಮ ಕೃಷಿ ಕ್ರಮವನ್ನು ಹೇಗೆ ತಿದ್ದುಪಡಿಸಬಹುದೆಂದು ರೈತರಿಗೆ ಹೇಳಿಕೊಡುತ್ತಾರೆ. ರೈತರ ಜಮೀನಿನಲ್ಲಿಯೇ ಕೃಷಿಯ ನೂತನ ಕ್ರಮಗಳನ್ನು ಮಾಡಿ ತೋರಿಸುತ್ತಾರೆ. ಇದರಿಂದ ಇಲ್ಲಿ ಕಬ್ಬು, ಭತ್ತ, ಪೈರುಗಳ ಕೃಷಿ ಕ್ರಮದಲ್ಲಿಯೂ, ತೆಂಗು ಇತ್ಯಾದಿ ಫಲ ತೋಟಗಳ ಪಾಲನೆ ರಕ್ಷಾಲೆಯಲ್ಲಿಯೂ ಅನೇಕ ಸುಧಾರಣೆಗಳುಂಟಾಗಿಯವೆ.

ಕಬ್ಬು.

ಕೆಲವು ವರ್ಷಗಳ ಹಿಂದೆ ಕೆಂಪು ಮೊರಿಶಿಯಸ್, ಬಾರ್ಬೆಡೋಸ್ ಮ ಫಿಜಿ. ಬಿ. ಎಂಬ ಒಳ್ಳೆ ಜಾತಿಯ ಕಬ್ಬುಗಳನ್ನು ವ್ಯವಸಾಯ ಇಲಾಖೆಯವರು ಈ ಜಿಲ್ಲೆಗೆ ತಂದುದರಿಂದ ಮುಂಚಿನ ಕೀಳು ಜಾತಿಯ ಕಬ್ಬಿನ ಸಾಗುವಳಿಯು ಈಗ ಕಡಿಮೆಯಾಗಿರುತ್ತದೆ. ಗಾಣಗಳಲ್ಲಿ ಕಬ್ಬನ್ನು ಹಾಕಿ ರಸವನ್ನು ತೆಗೆಯುವ ಬೆಲ್ಲವನ್ನು ತಯಾರಿಸುವ ಕ್ರಮಗಳಲ್ಲಿಯೂ ತಿದ್ದುಪಾಟಗಳಾಗಿರುತ್ತವೆ. ಬೇರೆ ಸುಧಾರಣೆಗಳು ಆಲೋಚನೆಯಲ್ಲಿರುತ್ತವೆ.

ಭತ್ತ.

ಹೊಸ ಒಳ್ಳೇ ಜಾತಿಯ ಭತ್ತವನ್ನು ಇಲ್ಲಿ ಮಾಡುವ ಕುರಿತು ಪ್ರಯತ್ನಗಳು ನಡಿಯುತ್ತಿವೆ. ಈ ಭತ್ತದಿಂದ ಹೆಚ್ಚಿನ ಮತ್ತು ಉಚ್ಚ ಜಾತಿಯ ಅಕ್ಕಿಯು ಸಿಕ್ಕುವುದರಿಂದ ವರ್ಷ ಹೋಗ ತ್ತಾ ಹೋಗುತ್ತಾ ಅದನ್ನು ನೆಡುವ ವಿಸ್ತೀರ್ಣವು ಹೆಚ್ಚುತ್ತದೆ. ಇಲ್ಲಿ ವಾಡಿಕೆಯಲ್ಲಿರುವ ಅತಿಕಾಂ ಭತ್ತದ ಕುರಿತು ಪಟ್ಟಾಂಬಿಯ ವ್ಯವಸಾಯ ಶೋಧನೆಯ ರಾಣ್ಯದಲ್ಲಿ ಶೋಧನೆಗಳು ನಡದು ಈಗ ಅದೇ ಜಾತಿಯ ಒಳ್ಳೇ ತರದ ಭತ್ತವನ್ನು ಈ ಜಿಲ್ಲೆಯಲ್ಲಿ ನಡುವ ಬಗ್ಗೆ ಏರ್ಪಾಡು ಸಿದ್ಧವಾಗಿಯದೆ. ಭತ್ತದ ಗದ್ದೆಗಳಲ್ಲಿ ಹಸಿಗೊಬ್ಬರದ ಬಗ್ಗೆ ಕೊಳಿಂಚ ಉಪಯೋಗಿಸುವದೂ ಜ್ಯಾರಿಗೆ ಬಂದಿರುತ್ತದೆ. ಪಟ್ಟಾಂಬಿ, ತಳಿಪರಂಬಾ, ಕೊಯಂಬತ್ತೂರು—ಈ ವ್ಯವಸಾಯ ಶೋಧನೆಯ ರಾಣ್ಯಗಳಲ್ಲಿ ಉಂಟುಮಾಡಿದ ಒಳ್ಳೇ ಉತ್ತಮ ತರದ ಭತ್ತದ ಬೀಜವನ್ನು ಪ್ರತಿ ವರ್ಷವೂ ರೈತರಿಗೆ ದಾರಾಳವಾಗಿ ಕೊಡುತ್ತಾರೆ.

ತೆಂಗು.

ಕಾಸರಗೋಡು ತಾಲೂಕಿನಲ್ಲಿ ನಾಲ್ಕು ಕಡೆ ಇರುವ ಶೋಧನ ರಾಣ್ಯಗಳಲ್ಲಿಯೂ ತೆಂಗಿನ ತೋಟಗಳ ಪಾಲನೆಯ ಕ್ರಮದ ಕುರಿತು ಶೋಧನೆಗಳು ನಡೆಯುತ್ತಿವೆ. ಈ ರಾಣ್ಯಗಳಿಂದ ಬೀಜದ ಕಾಯಿಯ ಬೀಜಗಳನ್ನು ರೈತರಿಗೆ ಹಂಚುತ್ತಾರೆ. ತೆಂಗಿನ ತೋಟಗಳಿಗೆ ಗೊಬ್ಬರ ಹಾಕುವ ಮ ಅವುಗಳನ್ನು ಕೃಷಿಮಾಡುವ ಕುರಿತು ಅನುಭವವನ್ನು ಕೊಡುತ್ತಾರೆ ತೆಂಗಿನ ಕೃಷಿಗೆ ಇತ್ತೀಚೆಗೆ ತೆಂಗಿನ ಕಾಯಿಯ

ಕ್ರಿಯವು ಬಿದ್ದುಹೋಗಿ ತೊಂದರೆಯಾಗಿದೆ ಈ ತೊಂದರೆ ಇಲ್ಲದಿದ್ದರೆ ಈ ಜಿಲ್ಲೆಯಲ್ಲಿ ಇಷ್ಟರಲ್ಲಿ ಎಷ್ಟೋ ಕಡೆ ತೆಂಗಿನ ತೋಟಗಳು ಹೆಚ್ಚುತ್ತಿದ್ದವು.

ಫಲಗಳು.

ಈ ಜಿಲ್ಲೆಯಲ್ಲಿ ವ್ಯವಸಾಯ ಇಲಾಖೆಯವರು ಫಲ ಕೃಷಿಗೆ ಬಹಳವಾದ ಉತ್ತೇಜನ ಕೊಟ್ಟಿರುತ್ತಾರೆ. ಒಳ್ಳೇ ಉತ್ತಮ ತರದ ಫರಂಗಿ ಹಲಸುಗಳನ್ನು ಮಾಡಲಿಕ್ಕೆ ಸಹಾಯ ಮಾಡಿರುತ್ತಾರೆ. ಬೆಟ್ಟು ಸ್ಥಳಗಳಲ್ಲಿಯೂ ಮನೆಯ ಹತ್ತಿರ ಹಿತ್ತಲುಗಳಲ್ಲಿಯೂ ಮಳೆಯ ಬಲದಿಂದ ಹುಟ್ಟುವ ಈ ಜಾತಿಯ ಫಲಗಳಲ್ಲಿ ಕೆಲವು 8 ರಿಂದ 10 ರಾತ್ತಲುಗಳ ಭಾರವಿರುವುದುಂಟು. ಮೊಳಕೆಗಳು ಬೇಕೆಂದು ಹೆಚ್ಚು ಜನರು ಅಪೇಕ್ಷಿಸುವುದರಿಂದ ಅಂಥಾ ಮೊಳಕೆಗಳನ್ನು ಮಾಡುವ ವಿಸ್ತೀರ್ಣವನ್ನು ಈಗ ಹೆಚ್ಚಿಸಿರುತ್ತಾರೆ. ಕಸಿ ಮಾವು, ನೇಂದ್ರಬಾಳೆ, ಗೇರು, ಒಳ್ಳೇ ಮೆಣಸು ನಡುವದನ್ನು ಹೆಚ್ಚಿಸಲಿಕ್ಕೂ ಇತ್ತೀಚೆಗೆ ವ್ಯವಸಾಯ ಇಲಾಖೆಯವರು ಎಷ್ಟೋ ಪ್ರಯತ್ನ ಪಡುತ್ತಿದ್ದಾರೆ.

ಕೊಳೆರೋಗ ಕ್ರಿಮಿಕೀಟಗಳು

ತೋರುವಲ್ಲಿ ಅವುಗಳನ್ನು ನಾಶಪಡಿಸುವ ಕ್ರಮವನ್ನು ಈ ಇಲಾಖೆಯವರು ತೋರಿಸಿ ಕೊಡುತ್ತಾರೆ. ತೆಂಗುಗಳಿಗೆ ಹಿಡಿಯುವ ಕಂಬಳಿ ಹುಳ, ಕಂಗುಗಳಿಗೆ ಹಿಡಿಯುವ ಮಹಾಲಿ ಎಂಬ ಕೊಳೆರೋಗ ಇವುಗಳ ವಿಷಯ ಅವರು ಹೆಚ್ಚಿನ ಮನಸ್ಸನ್ನು ಕೊಟ್ಟಿರುತ್ತಾರೆ. ಅಲ್ಲದೆ ಜೇಣುನೊಣ ಸಂರಕ್ಷಣೆ, ಕೋಳಿ ಜಾತಿಯ ಪಕ್ಷಿಗಳ ಪಾಲನೆ ಇವುಗಳ ಕುರಿತು ವಿದ್ಯಾವಂತರಾದ ಜನರು ಮನಸ್ಸು ಕೊಡುವ ವಿಷಯ ಪ್ರಯತ್ನಿಸುತ್ತಿದ್ದಾರೆ.

ಜಾನುವಾರು.

ಅಲ್ಲಲ್ಲಿರುವ ಪಶು ವೈದ್ಯಶಾಲೆಗಳಲ್ಲಿ ಬೀಜದ ಹೋರಿಗಳನ್ನು ಪೋಷಣೆಮಾಡಿ ಈ ಜಿಲ್ಲೆಯ ಜಾನುವಾರದ ಜಾತಿಯನ್ನು ಒಳ್ಳೇಯದಾಗಿ ಮಾಡಲಿಕ್ಕೆ ಪ್ರಯತ್ನಗಳು ನಡಿಯುತ್ತಿವೆ, ಸ್ಥಳೀಯ ಸಂಸ್ಥೆಗಳೂ ಖಾಸಗಿ ಜನರೂ ಬೀಜದ ಹೋರಿಗಳನ್ನೂ ಪೋಷಣೆಮಾಡುವಲ್ಲಿ ಅವರಿಗೆ ಈ ಇಲಾಖೆಯವರು ಹಣ ಸಹಾಯಮಾಡುತ್ತಾರೆ. ಹೀಗೆ, ಈಗ ಈ ಜಿಲ್ಲೆಯಲ್ಲಿ ಹತ್ತು ಬೀಜದ ಹೋರಿಗಳನ್ನು ಪೋಷಣೆಮಾಡುತ್ತಾರೆ. ಇಂಥಾ ಹೋರಿಗಳನ್ನು ಇನ್ನೂ ಹೆಚ್ಚಿಸಲಿಕ್ಕೆ ಪ್ರಯತ್ನಗಳು ನಡಿಯುತ್ತಿವೆ.

(ಮದ್ರಾಸು ಸರಕಾರದಿಂದ ಪ್ರಕಟಿಸಲ್ಪಟ್ಟದ್ದು)

I WRITE AS I PLEASE

By ***B. N. Rao.***

In my self-imposed task as critic of public affairs, I may sometimes have to make uncomplimentary remarks about men and women. But I mean no personal reflexion. And I trust nobody will take me amiss if I criticise any person or party.

Public life would be uninteresting if there were not some one to say hard things about men and matters. And politicians, whether National or Municipal, who are hyper-sensitive to criticism have no business to enter public life. As some one has said, they must get themselves inured to booings and brickbats if they are out to achieve anything.

After all, to be criticised in public life is not such a bad thing. It is really a recognition of a person's existence on this globe. Mr. Bernard Shaw once said that he does not care what people talk or write about him so long as they talk or write about him. For therein lies the secret of success. Publicity is the very soul of modern life

And who does not thrill when he finds his name in print? At any rate, I do.

Municipal Affairs.

Messers. P. G. Achar, P. N. Madhava Rao and B. Vasudeva Rao must have felt mightily pleased when Mr. Aroor Laxminarayana Rao, the Chairman of our Municipality, sustained his first defeat on his resolution in the Municipality which was specially convened for the purpose to present an address of welcome to the Hon'ble Mr. P. T. Rajan, Minister of Public Works, on the occasion of his forthcoming visit to Udipi. Since their attempts to set up a rival condidate for the Chairmanship petered out, they have been smarting under a sense of, shall I call it impotence, to discompose the existing order of things. And it was really good for them to see Mr. Aroor defeated and that too in a most unexpected manner.

Mrs Manorama Bai, good Congresswoman that she was, led the revolt by opposing the resolution moved by the Chair to present an address to the hon'ble Minister. And when the division took place, Mr. Aroor found himself in an overwhelming minority. It was no doubt a sense of personal loyalty to their Chief that made Messers Upendra Nayak and L. S. Nayak to stand neutral. Otherwise the defeat would have been crushing

Obviously Mr. Aroor had miscalculated. He has yet to learn that the unanimous support given to him (if we exclude the three members who walked out on the occasion) by the Councillors does not extend to all and every action of his in his capacity as Municipal Chairman.

And why should he have been so anxious as to go out of his way to defray all the expenses of the function? Was it his "love of officialdom" to which Mr. Vittal Kamath referred sometime ago?

As it is, the Minister's arrival has been postponed. But that is a different thing.

A triangular fight.

The ensuing election to the provincial Legislative Assembly should prove a very exciting affair. Mr. S. U. Paniady has already announced his intention to stand as an independent candidate, and rumour has it that he is being financed by the "Big Business" of the place. It is understood that Dewan Bahadur B. M. Hegde, District Board President, is standing on the Justice ticket.

Some of the "Big Guns" of the Congress like Mr. Hukkerikar, the Secretary-General of the Karnataka Provincial Congress Committee, Dr. N. S. Hardikar, the Congress Generalissimo and Mrs. Kamaladevi, one of the leaders of the Congress Socialist Party, arrived at Udipi last week on a reconnoitring expedition. They appeared to be considerably perturbed over the selection of a suitable candidate for the Coondapur Division. All things considered, I have no hesitation in saying that Mr. A. B. Shetty is the person best fitted to be adopted as the Congress nominee.

Another triangular fight.

A triangular first is also expected in the West Coast Christian constituency. Mr. Oliver Zacharias, Professor, Christian College, Madras, has already announced that he is standing as an independent candidate. I understand that Mr. M. C. Shresta, the sitting member, is contesting on behalf of the Justice Party and Mr. C. J. Varkey, Professor, St. Aloysius' College, Mangalore, on the Congress ticket.

ಬೇಕು

ಕಂಪ್ರೋಸಿಟರೂ,

ಪ್ರಿಂಟರುಗಳೂ

ತುಳುನಾಡ್ ಪ್ರೆಸ್, ಉಡುಪಿ.

NOTICE.

Is hereby given that the trade jointly carried on by Messrs Nallore Ganapathi Kamath and Nallore Narasimha Kamath has been terminated on 18—9—1936 and that Nallore Ganapathi Kamath has undertaken to discharge all the liabilities of the said trade.

UDIPI
19-9-1936

ನಲ್ಲೂರು ಗಣಪತಿ ಕಮ್ತಿ ರುಜು.
ನಲ್ಲೂರು ನರಸಿಂಹ ಕಮ್ತಿ ರುಜು.

ನವಯುಗ
ದ
ಚಂದಾ ವಿವರ

ಸ್ಥಳೀಯ–

ವರ್ಷಕ್ಕೆ ... ರೂ. ೨ ೮ ೦

ಅರ್ಧ ವರ್ಷಕ್ಕೆ ರೂ. ೧ ೬ ೦

ಪರಸ್ಥಳೀಯ–

ವರ್ಷಕ್ಕೆ ರೂ. ... ೩ ೪ ೦

ಅರ್ಧ ವರ್ಷಕ್ಕೆ ರೂ. ೧–೧೨–೦

ಜಾಹೀರಾತುದಾರರಿಗೆ–

ತಾತ್ಕಾಲಿಕ ಜಾಹೀರಾತುಗಳಿಗೆ ಚಚ್ಚೌಕ ಇಂಚಿಗೆ ರೂ. ೦–೪–೦.

ಸ್ಥಾಯಿಯಾ ಜಾಹಿರಾತು ದರಗಳನ್ನು ಮೆನೇಜರರಿಂದ ಪಡೆಯಬಹುದು. ಜಾಹೀರಾತುದಾರರ ಸೂಚನೆಗಳಿದ್ದರೆ ಅವು ಹಿಂದಿನ ಗುರುವಾರ ತಲಪಬೇಕು.

ಮೆನೇಜರ್,
ನವಯುಗ, ಉಡುಪಿ.

ಉಡುಪಿ, ತಾ. ೨೪-೯-'೩೬ ಗುರುವಾರ

ಕರ್ನಾಟಕ ಏಕೀಕರಣ

ಕರ್ನಾಟಕಕ್ಕಿಂತಲೂ ಚಿಕ್ಕವಾಗಿದ್ದು ಅದರಷ್ಟು ಜನ ಸಂಖ್ಯೆ ಮತ್ತು ಆದಾಯವಿಲ್ಲದ ಸಿಂಧ್ ಮತ್ತು ಒರಿಸ್ಸಪ್ರಾಂತ್ಯಗಳು ಪ್ರತ್ಯೇಕ ಆಡಳಿತವನ್ನು ಪಡೆದು ಸ್ವತಂತ್ರವಾಗಿರುವಾಗ ಕನ್ನಡಿಗರು ಕೇವಲ ಸಿಟ್ಟು ಸಿರಿಟ್ಟು ಕೈಕಟ್ಟಿ ಸುಮ್ಮನಿರುವಂತಾಗಿದೆ. ಇನ್ನೂ ಕರುಣಾಜನಕ ಸಂಗತಿಯೆಂದರೆ ಕನ್ನಡಿಗರ ಮೇಲೆ ಪರಪ್ರಾಂತೀಯರ ಧಾಳಿಯು ಪ್ರಬಲವಾಗಿ ನಡೆಯಹತ್ತಿದೆ. ಕನ್ನಡಿಗರು ಪೌರುಷಹೀನರಾಗಿ, ದುರ್ಬಲರಾಗಿ ಅದನ್ನೆಲ್ಲಾ ಕಣ್ಣು ಕಣ್ಣು ನೋಡುತ್ತಾ ಕುಳಿತಿರಬೇಕಾಗಿದೆ. ಕನ್ನಡ ಪ್ರದೇಶಗಳಲ್ಲಿ ಪರಭಾಷೆಗಳ ವರ್ಚಸ್ಸು ಬೆಳದು ಮಾತೃಭಾಷೆಯಾದ ಕನ್ನಡವನ್ನು ಕೇಳುವವರಿಲ್ಲದಂತಾಗಿದೆ. ಕೆಲಮಂದಿ ಕನ್ನಡಿಗರ ಮೊರೆಯು ಅರಣ್ಯರೋದನವಾಗಿದೆ ಕನ್ನಡದ ಬೆಳವಣಿಗೆಗೆ, ಕರ್ನಾಟಕ ಪ್ರದೇಶಗಳ ಹಿತಸಾಧನೆಗೆ, ಕನ್ನಡಿಗರ ನ್ಯಾಯವಾದ ಆಕಾಂಕ್ಷೆಗಳಿಗೆ ಪರಪ್ರಾಂತೀಯರು ಮಾತ್ರವಲ್ಲದೆ ಸರಕಾರವೂ ಅಡ್ಡಗಾಲು ಹಾಕುತ್ತಿದೆ. ಉತ್ತರದಲ್ಲಿ ಮಹಾರಾಷ್ಟ್ರರ, ಪೂರ್ವದಲ್ಲಿ ತೆಲುಗರ ಧಾಳಿಯು ಕರ್ನಾಟಕದ ಏಕೀಕರಣಕ್ಕೆ ಆಘಾತವನ್ನುಂಟುಮಾಡುತ್ತಿದೆ ಈ ಧಾಳಿಯ ರೀತಿಯನ್ನು ನಾವು ಇನ್ನೊಂಡೆಡೆ ಕೊಟ್ಟಿರುವೆವು. ದಕ್ಷಿಣ ಕನ್ನಡದ ಕಾಸರಗೋಡು ತಾಲೂಕಿನಲ್ಲಿ ಮಲಿಯಾಳಿ ಭಾಷೆಯ ವರ್ಚಸ್ಸು ಬೆಳೆಯುತ್ತಿದೆ. ಹೀಗೆ ಸಮುದ್ರವೊಂದರ ಹೊರತು ಇತರ ಎಲ್ಲಾ ಕಡೆಗಳಿಂದಲೂ ಕರ್ನಾಟಕ ಪ್ರಾಂತ್ಯವನ್ನು ಹರಿದು ಹಂಚಿಕೊಳ್ಳುವ ಧೂರ್ತತನವು ನಡೆದಿದೆ.

ಒಕ್ಕಟ್ಟು, ಸ್ವಾವಲಂಬನೆ ಮತ್ತು ಸ್ವಶಕ್ತಿಯಿಲ್ಲದವರು ಅನ್ಯರನ್ನು ಮೀರಿ ಫಲವಿಲ್ಲ. ಕನ್ನಡಿಗರ ಅವಿವೇಕ ಅನೈಕ್ಯ ಅಸಡ್ಡೆ, ಕಾರ್ಯಶೂನ್ಯತೆಯೇ ಅವರನ್ನೀ ಪಾಡಿಗೀಡುಮಾಡಿರುವದು. ಸಮಗ್ರ ಕರ್ನಾಟಕಕ್ಕೊಬ್ಬ ಮುಂದಾಳುವೆಂದಿಲ್ಲ. ಕನ್ನಡಿಗರನ್ನೆಲ್ಲಾ ಜೊಡೆದೆಬ್ಬಿಸಿ ಒಂದೇ ಹಿಡಿತದಲ್ಲಿಟ್ಟುಕೊಂಡು ಮುಂದೂಡುವ ನಾಯಕತ್ವವಿಲ್ಲ. ಸಂದರ್ಭನೋಡಿ ಹೇಗಾದರೂ ತಮ್ಮ ಕಾರ್ಯಸಾಧಿಸಿಕೊಳ್ಳುವ ಮುತ್ಸದ್ದಿತನವಿಲ್ಲ. ಆದುದರಿಂದಲೇ ಅವರು ಹಿಂದೆ ಬಿದ್ದು ನರಳುತ್ತಿರುವರು. ಪರಪ್ರಾಂತೀಯರು ಅವರಮೇಲೆ ಧಾಳಿ ನಡೆಸಲೆದಗೊಂಡಿರುವರು.

ಇನ್ನಾದರೂ ಕನ್ನಡಿಗರು ಕಣ್ಣು ತೆರೆಯುವರೇ? ತಮ್ಮ ಮನೋದೌರ್ಬಲ್ಯದ ಅಭಿಮಾನಶೂನ್ಯತೆಯ ದುಷ್ಪರಿಣಾಮವನ್ನು ಮನಗೊಂಡು ತಮ್ಮ ಹಕ್ಕಿನ ಬಾಧ್ಯತೆಗಳನ್ನೆತ್ತಿ ಹಿಡಿಯಲು ಕಟಿಬದ್ಧರಾಗುವರೇ? ಅನ್ಯ ಭಾಷೆ ಸಂಸ್ಕೃತಿಗಳ ಮೋಹಜಾಲವನ್ನು ಕಡಿದೊಗೆದು ಉಜ್ವಲ ಕರ್ನಾಟಕಾಭಿಮಾನಿಗಳಾಗುವರೆ? ನಾವೇ ನಮ್ಮ ವೈರಿಗಳು, ಅನ್ಯರಲ್ಲ. ನಾವು ಪೌರುಷಹೀನರಾಗಿ, ಅತ್ಯಂತ ಸಂಕುಚಿತ ಮನೋವೃತ್ತಿಯುಳ್ಳವರಾಗಿ, ದೂರದೃಷ್ಟಿ, ವ್ಯಾಪಕ ಬುದ್ಧಿ, ಸಮಗ್ರ ಕರ್ನಾಟಕಭಾವ ಮತ್ತು ಸ್ಫೂರ್ತಿಯಿಲ್ಲದವರಾಗಿ ಬಿದ್ದುಕೊಂಡಿರುವುದರಿಂದಲೇ ಪರಪ್ರಾಂತೀಯರು, ನಮ್ಮವರೇ ಆದ ಸರಕಾರಿ ನೌಕರರು ನಮ್ಮ ಹಿತವನ್ನು ತಮ್ಮಿಚ್ಛಾನುಸಾರ ತುಳಿದು ನಡೆಯುವಂತಾಗಿದೆ. ಕನ್ನಡಿಗರ ಭಾಷೆ, ಸಂಸ್ಕೃತಿಗಳ ಪರತ್ವ ಮತ್ತು ಕರ್ನಾಟಕದ ಏಕೀಕರಣವೆಂಬುದು ಬರಿಯ ಬಾಯಿಮಾತಾಗಿ ಉಳಿದಿದೆ. ಇಂತಹ ಶೋಚನೀಯ ಪರಿಸ್ಥಿತಿಯಲ್ಲಿ ಬೆಳ್ಗಾಂವಿಯಲ್ಲಿ ಕರ್ನಾಟಕ ಏಕೀಕರಣ ಪರಿಷತ್ತಿನ ವಿಶೇಷ ಅಧಿವೇಶನವೊಂದನ್ನು ಜರಗಿಸುವ ಏರ್ಪಾಡು ನಡೆದಿದೆಯೆಂಬುದು ಸಂತೋಷ ವಾರ್ತೆಯಾಗಿದೆ. ಈ ಅಧಿವೇಶನಕ್ಕೆ ಕನ್ನಡಿಗರೆಲ್ಲರೂ ತಕ್ಕ ಪ್ರೋತ್ಸಾಹವಿತ್ತು ಅದು ಜಯಶೀಲವಾಗುವಂತೆ ನೋಡುವುದು ಅವರ ಕರ್ತವ್ಯವಿದೆ.

ನಮ್ಮ ವಾಚಕರಲ್ಲಿ ವಿನಂತಿ.

ಈ ಸಂಚಿಕೆಯೊಂದಿಗೆ ನವಯುಗದ ೧೬ನೆಯ ಸಂಪುಟದ ನಾಲ್ಕು ಸಂಚಿಕೆಗಳು ವಾಚಕರ ಕೈಸೇರಿದಂತಾಯಿತು. 'ನವಯುಗ'ವು ಅಧಿಕಾಧಿಕವಾಗಿ ವಾಚಕರಸೇವೆ ಮಾಡಬೇಕಾದರೆ ವಾಚಕರಿಂದ ಅದಕ್ಕೆ ತಕ್ಕ ಪ್ರೋತ್ಸಾಹವು ದೊರೆಯಬೇಕು. ಅಂತೆಯೇ ನಮ್ಮ ವಾಚಕರೆಲ್ಲರೂ ನವಯುಗಕ್ಕೆ ಚಂದಾದಾರರಾಗಿ ಸೇರಿಯೂ, ಇತರರನ್ನು ಸೇರಿಸಿಯೂ, ಚಂದಾದಾರರು ತಮ್ಮ ಚಂದಾಹಣವನ್ನು ಮುಂದಾಗಿ ಕಳುಹಿಸಿಯೂ ಪ್ರೋತ್ಸಾಹಿಸ ಬೇಕಾಗಿ ವಿನಂತಿ.

ತುಳು ಸಂಚಿಕೆ

ದಕ್ಷಿಣಕನ್ನಡದ ಹಲವು ಮಂದಿ ನಮ್ಮ ವಾಚಕರ ಆಗ್ರಹದ ಮೇರೆಗೆ ದಕ್ಷಿಣಕನ್ನಡದಲ್ಲಿ ಒಂದು ಕಾಲದಲ್ಲಿ ಹೆಚ್ಚಿನ ಪ್ರಾಶಸ್ತ್ಯ ಪಡೆದು ಈಗಲೂ ಹೆಚ್ಚಿನವರ ಮಾತೃಭಾಷೆಯಾದ ತುಳು ಭಾಷೆಯಲ್ಲಿ ಕತೆ, ಕವನ, ಲೇಖನಾದಿಗಳನ್ನೊಳಗೊಂಡ ಕ್ರೌನ್ ¼ ಸೈಜಿನ 8 ಪುಟಗಳ ತುಳು ಸಂಚಿಕೆಯೊಂದನ್ನು ಶ್ರೀ ಎಸ್. ಯು. ಪಣಿಯಾಡಿಯವರ ಸಹಕಾರದಿಂದ ಪ್ರತಿತಿಂಗಳ ಆರಂಭದಲ್ಲಿ ಪ್ರಕಟಿಸುವ ವ್ಯವಸ್ಥೆ ಮಾಡಲಾಗಿದೆ. ಮೊದಲ ಸಂಚಿಕೆಯು ಬರುವ ವಾರದ ಸಂಚಿಕೆಯೊಂದಿಗೆ ಹೊರಬೀಳುವುದು. ಹೊಸ ಚಂದಾದಾರರಾಗುವವರಿಗೆ ಇದೀಗ ಸುಸಂದರ್ಭ.

ಮೆನೇಜರ್, ನವಯುಗ.

ದಕ್ಷಿಣ ಕನ್ನಡ

ಉಡುಪಿ.

ಚುನಾವಣೆಯ ಕಾರ್ಯದ ನಿಮಿತ್ತ ಇಲ್ಲಿಗೆ ಬಂದಿದ್ದ ಡಾ। ಹರ್ಡೀಕರ್, ಶ್ರೀ ಹುಕ್ಕೇರಿಕರ ಮತ್ತು ಶ್ರೀಮತಿ ಕಮಲಾದೇವಿಯರೇ ಮೊದಲಾದವರು ತಾ. 19-9-36ರಲ್ಲಿ ನವಯುಗ ಆಫೀಸಿಗೆ ಬಂದು ಚುನಾವಣೆಯ ಕೆಲಸಗಳ ಕುರಿತು ಚರ್ಚಿಸಿ ತೆರಳಿರುವರು.

ಕಳದ ತಾ. 16-9-36ನೇ ಬುಧವಾರ ಸಂಜೆ 5 ಗಂಟೆಗೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮದ್ರಾಸ್ ಕ್ರಿಶ್ಚಿಯನ್ ಕೊಲೇಜಿನ ಮಿ. ಒಲಿವಿಯರ್ ಜಕೇರಿಯಸರವರು ಬರುವ ಚುನಾವಣೆಯ ಕುರಿತು ಶ್ರೀಯುತ ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಭಾಷಣವಿತ್ತರು.

ಉಡುಪಿ ನಗರ ಸಭೆಯ ವಿಶೇಷ ಸಭೆ.

ಉಡುಪಿಗೆ ಬರಲಿರುವ ಮದ್ರಾಸಿನ ಮಂತ್ರಿಗಳಾದ ಶ್ರೀ. ಪಿ. ಟಿ. ರಾಜನರಿಗೆ ಮಾನಪತ್ರವೀಯುವ ಕುರಿತು ಯೋಚಿಸುವರೆ ನಗರ ಸಭೆಯ ಸ್ಪೆಶ್ಯಲ್ ಮೀಟಿಂಗೊಂದು ತಾ. 18–9–36ರಲ್ಲಿ ಸಂಜೆ 5 ಗಂಟೆಗೆ ಸರಿಯಾಗಿ ಚೆಯರ್‌ಮೆನ್ ಶ್ರೀ ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿಯಿತು. ಅಧ್ಯಕ್ಷರು ಸಭೆ ಕರೆದ ಉದ್ದೇಶವನ್ನು ತಿಳಿಸಿ, "ಶ್ರೀ ರಾಜನರ ಅಧಿಕಾರದೊಳಗೆ ಮುನಿಸಿಪಾಲಿಟಿಯು ಸೇರುವದಿಲ್ಲವಾದರೂ, ಮುಖ್ಯ ಮಂತ್ರಿಗಳಿಗೆ ಸಲಹೆಯೀಯುವ, ಕೋಪರೇಟಿವ್ ಸೊಸೈಟಿಯಿಂದ ನಮಗೆ ಸಾಲಬೇಕಾದರೆ ಕೊಡುವ ಅನುಕೂಲತೆಗಳು ಇವರಿಗಿವೆ. ನಗರ ಸಭೆಯು ಹಣ ಖರ್ಚುಮಾಡದೆ ಅತಿಥಿಯನ್ನು ಗೌರವಿಸುವ ಸಂದರ್ಭವನ್ನು ನಾವು ಕಳೆಕೊಳ್ಳಬಾರದು, ನಮ್ಮ ಸಂಕಷ್ಟಗಳನ್ನೆಲ್ಲಾ ಮಾನಪತ್ರದಲ್ಲಿ ಕಾಣಿಸಲಾಗಿದೆ." ಎಂದು ವಿವರಿಸಿ, ಸಭೆಯ ಅಭಿಪ್ರಾಯವನ್ನು ಕೇಳಿದರು. ಈ ಸಮಯಕ್ಕೆ ಸರಿಯಾಗಿ ಮಂತ್ರಿಗಳ ಆಗಮನವು ಮುಂದುವರಿಸಲ್ಪಟ್ಟ ತಂತಿಯು ಬಂತು. ಶ್ರೀಮತಿ ಪಿ. ಮನೋರಮಾಬಾಯಿಯವರು ಸದ್ಯ ಸ್ಥಿತಿಯಲ್ಲಿ ಮಂತ್ರಿಗಳಿಗೆ ಮಾನಪತ್ರನೀಯುವದು ಸರಿಯಲ್ಲವೆಂಬರ್ಥದ ಠರಾವನ್ನು ತರಲು, ಶ್ರೀ ಮು. ಸುಂದರ ಕಾಮತರವನ್ನು ಅನುಮೋದಿಸಿದರು. ಡಾ। ಪಿ. ಜಿ. ಆಚಾರ್ಯರು ಸೂಚನೆಯನ್ನು ಪುಷ್ಟೀಕರಿಸುತ್ತಾ ಮುನಿಸಿಪಾಲಿಟಿಯ ರಚನೆಯಲ್ಲಿ ನಮಗಿರುವ ಅತೃಪ್ತಿಯನ್ನು ಪ್ರದರ್ಶಿಸಲು ಮಂತ್ರಿಗಳಿಗೆ ಮಾನಪತ್ರ ನಿರಾಕರಣೆಯನ್ನು ಮಾಡಬೇಕೆಂದು ವಾದಿಸಿದರು. ನಮ್ಮ ಖರ್ಚಿನೂ ಇಲ್ಲದೆ, ಅತಿಥಿಗಳನ್ನು ಗೌರವಿಸುವದು ನ್ಯಾಯವೆಂದು ವಾದಿಸಿ ಮಾನಪತ್ರಕೊಡಬೇಕೆಂಬ ಠರಾವನ್ನು ಮಿ. ರೇಗೋರವರು ತಂದು ಶ್ರೀ ಕೆ. ಅನಂತ ಸೆಟ್ಟರು ಅನುಮೋದಿಸಿದರು. ಮಂತ್ರಿಗಳ ಆಗಮನವು ಮುಂದುವರಿಸಲ್ಪಟ್ಟಿದೆ; ಆದ್ದರಿಂದ ಮಾನಪತ್ರದ ಸೂಚನೆಯನ್ನೂ ಮುಂದುವರಿಸಬೇಕೆಂದು ಶ್ರೀ ಎಲ್. ಎಸ್. ನಾಯಕರೊಂದು ಉಪಸೂಚನೆ ತಂದು ಶ್ರೀ ಕೇಶವ ಪ್ರಭುಗಳು ಅನುಮೋದಿಸಿದರೂ, ಅದು 7 ಅನುಕೂಲ 8 ಪ್ರತಿಕೂಲ ಮತ ದೊರೆತು ಬಿದ್ದು ಹೋಯಿತು. ಶ್ರೀಮತಿ ಮನೋರಮಾ ಬಾಯಿಯವರ ಸೂಚನೆಯು 9 ಅನುಕೂಲ 3 ಪ್ರತಿಕೂಲ ಮತಗಳಿಂದ ಮಂಜೂರಾಯಿತು. ಶ್ರೀಗಳಾದ ಉಪೇಂದ್ರ ಎಸ್. ನಾಯಕ್, ಎಲ್. ಎಸ್. ನಾಯಕ್, ಕೇಶವ ಪ್ರಭುಗಳು ತಟಸ್ಥರಾಗಿದ್ದರು. ನಗರ ಸಭೆಯ ಸ್ಪೆಶ್ಯಲ್ ಸಭೆಯೊಂದು ಇದೇ ತಾ. 26-9-36ಕ್ಕೆ ಜರಗಲಿರುವದು.

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನವರ ಆಶ್ರಯದಲ್ಲಿ ಇಲ್ಲಿಯ "ಫೈನಾನ್ಸಿಯಾ ಎಕ್ಸ್‌ಪರ್ಟ್ಸ್" ಪತ್ರಿಕೆಯ ಸಂಪಾದಕರಾದ ಶ್ರೀ. ಬಿ. ಎನ್. ರಾವ್. ಎಂ ಎ. ಯವರು "ರಾಷ್ಟ್ರದ ಆರ್ಥಿಕ ಜೀವನದಲ್ಲಿ ಬೇಂಕ್, ಇನ್ಶೂರೆನ್ಸ್ ಕಂಪೆನಿಗಳು ವಹಿಸಿದ ಭಾಗ" ಎಂಬ ಕುರಿತು, ತಾ. 25-9-36ನೇ ಸಂಜೆ 4 ಗಂಟೆಗೆ ಸಿಂಡಿಕೇಟಿನ ಮುಖ್ಯಾಫೀಸಿನಲ್ಲಿ ಭಾಷಣವೀಯಲಿರುವರು.

ನವರಾತ್ರಿ ಮಹೋತ್ಸವ

ಕಳದ, ವರ್ಷಗಳಲ್ಲಿ ಜರಗಿದಂತೆ ಈ ವರ್ಷವೂ ನವರಾತ್ರಿ ಮಹೋತ್ಸವವು ಬರುವ ತಾ. 16-10-36ರಿಂದ 24-10-36ರ ವರೆಗೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ನಡೆಯಲಿರುವದು. ನಾಟಕ, ಸಂಗೀತ, ವ್ಯಾಯಾಮ, ಭಾಷಣ, ಪದ್ಯವಾಚನ, ಪ್ರಹಸನ ಮುಂತಾದ ಕಾರ್ಯಕ್ರಮಗಳಿರುವವು. ಇವುಗಳಲ್ಲಿ ಭಾಗವನ್ನು ವಹಿಸಬೇಕೆಂದು ಅಪೇಕ್ಷಿಸುವವರು ಇದೇ ತಾ. 5-10-36ರ ಒಳಗೆ ಕಾರ್ಯದರ್ಶಿಯವರಾದ ಶ್ರೀ. ಎಸ್. ಯು ಪಣಿಯಾಡಿಯವರಿಗೆ ತಿಳಿಸತಕ್ಕದ್ದು.

1935ರಲ್ಲಿ ಜರಗಿದ ಮಂಗಳೂರಿನ ಕೆಥೋಲಿಕ್ ಮಹಿಳಾ ಪರಿಷತ್ತಿನ ಸ್ವಾಗತಾಧ್ಯಕ್ಷೆಯಾದ ಮಿಸೆಸ್ ಸಿ. ಎಲ್ ಕುಬಾಸೋರವರು ಸೆವೆನೀರ್ ಎಂಬ ಚಿತ್ರ ಸಂಗ್ರಹ ಪುಸ್ತಕವನ್ನು ಮುದ್ದಾಗಿ ಮುದ್ರಿಸಿಕೊಟ್ಟ ಉಡುಪಿ ಪ್ರೆಸ್ಸಿನ ಹೆಡ್ ಕಂಪೋಸಿಟರಾದ ಶ್ರೀ ಕೆ. ವೀರಣ್ಣಶೆಟ್ಟರಿಗೆ, ತಾ. 21ರಲ್ಲಿ ಉಡುಪಿ ಪ್ರೆಸಿನಲ್ಲಿ ಸ್ಥಳೀಕ ಚರ್ಚಿನ ರೆವರೆಂಡ್ ಫಾದರ್ ಸಿಕೇರರ ಅಧ್ಯಕ್ಷತೆಯಲ್ಲಿ ಸಭೆ ಜರಗಿಸಿ ಒಂದು ಸುವರ್ಣ ಪದಕವಿತ್ತು ಸನ್ಮಾನಿಸಿದುದು ಅಭಿನಂದನೀಯವಾಗಿದೆ.

ಉಡುಪಿಯಲ್ಲಿ ಜಟ್ಕಾ ಗಾಡಿಯವರಿಗೆ ತಮ್ಮ ಗಾಡಿಗಳನ್ನು ನಿಲ್ಲಿಸಲು ವ್ಯವಸ್ಥಿತವಾದೊಂದು ಸ್ಥಳವಿಲ್ಲದೆ ಬಹಳ ತೊಂದರೆಯಾಗಿರುವಂತಿದೆ. ಮುನಿಸಿಪಾಲಿಟಿಯವರು ಆ ಕಡೆಗೆ ಗಮನವಿತ್ತು ಗಾಡಿಯವರ ಸಂಕಷ್ಟನಿವಾರಣೆ ಮಾಡುವರೆಂದು ಭಾವಿಸುತ್ತೇವೆ ಎಂದೊಂದು ಬಾತ್ಮಿ.

ಯಂಗ್ ಮೇನ್ಸ್ ಸ್ಪೋರ್ಟಿಂಗ್ ಕ್ಲಬ್, ಉಡುಪಿ, ಇದರ ಸಭೆಯು ತಾ. 10ನೇ ಸಂಜೆ ಸದರಿ ಸಂಘದ ಆಟದ ರಂಗದಲ್ಲಿ ನಡೆದು ಕ್ಲಬ್ಬಿನ ಸಂಸ್ಥಾಪಕ ಪ್ರೆಸಿಡೆಂಟರಾದ ಶ್ರೀ. ಕೆ. ಗೋಪಾಲಕೃಷ್ಣ ನಾಯಕರು ಕ್ಲಬ್ಬಿಗೊಂದು ಪ್ಲ್ಯಾಟಿಂಗನ್ನು ಕೊಟ್ಟದ್ದಕ್ಕಾಗಿ ಆಭಾರ ಸೂಚಿಸಲಾಯಿತು. ಕಳೆದ ವರ್ಷ ಸೆಕ್ರೆಟರಿಗಳಾಗಿ ಬಹಳ ಶ್ರಮವಹಿಸಿ ಕೆಲಸಮಾಡಿದ ಶ್ರೀಯುತ ಎಮ್. ಆರ್. ಭಂಡಾರಕರರ ಕಾರ್ಯವನ್ನು ಪ್ರಶಂಸಿಸಿ ವ್ಯಾಪಾರದ ನಿಮಿತ್ತ ಇವರ ಸೇವೆಯನ್ನು ಕ್ಲಬ್ಬು ಕಳಕೊಂಡುದಕ್ಕಾಗಿ ವಿಷಾದ ಸೂಚಿಸಲಾಯಿತು. ಕಳೆದ ವರ್ಷ ಕ್ಲಬ್ಬಿನ ಕೆಪ್ಟನರಾಗಿ ಜಯಶೀಲವಾಗಿ ಟೀಮನ್ನು ನಡೆಸಿದ ಮಿ. ಎಂ. ಜಿ. ಸಲ್ದಾನರಿಗೆ ವಂದನೆಯನ್ನರ್ಪಿಸಲಾಯಿತು. ಕ್ಲಬ್ಬಿಗೆ ಬೇರೆ ಬೇರೆ ರೀತಿಯಲ್ಲಿ ಸಹಾಯಮಾಡಿದ ಹಿತಚಿಂತಕ ಮತ್ತು ಆಶ್ರಯದಾತರೆಲ್ಲರಿಗೂ ಕೃತಜ್ಞತೆಯನ್ನಿತ್ತು ಚಾಲ್ತಿ ವರುಷಕ್ಕೆ ಶ್ರೀ. ಹಾರಾಡಿ ರಮಾನಾಥರಾಯರನ್ನು ಕೆಪ್ಟನರನ್ನಾಗಿಯೂ ಶ್ರೀಗಳಾದ ಪಿ. ಬಿ. ಪ್ರಭು ಮತ್ತು ಕೆ. ಎನ್. ಕಾಮತರನ್ನು ಜತೆಕಾರ್ಯದರ್ಶಿಗಳಾಗಿಯೂ ಸರ್ವಸಮ್ಮತಿಯಿಂದ ಆರಿಸಿ ಸಭೆಯು ಕೊನೆಗೊಂಡಿತು.

(೧೬ನೇ ಪುಟದಿಂದ ಮುಂದುವರಿಸಿದ್ದು.)

ಸತ್ಯಾಗ್ರಹವನ್ನು ಚರಿಸಿದರು, ತುರಂಗವನ್ನು ಪ್ರವೇಶಿಸಿದರು. ಆಗ ಬ್ರಿಟಿಷರಿಗೆ ನಿಜಸ್ಥಿತಿಗೊತ್ತಾಯಿತು. ಗಾಂಧಿಜಿಯವರೊಡನೆ ಸಂಧಾನ ಹೂಡಿದರು. ಗಾಂಧಿ-ಇರ್ವಿನ್ ಒಪ್ಪಂದವೇ ಇದರ ಪರಿಣಾಮ.

ಚಕ್ರಗೋಷ್ಟಿಗಳು

ಒಂದಲ್ಲ, ಎರಡಲ್ಲ, ಮೂರು ಚಕ್ರಗೋಷ್ಟಿಗಳು ನಡೆದುವು. ಪ್ರತಿಯೊಂದರಲ್ಲಿಯೂ ಹಿಂದೀಯರ ಅಹಿತಕ್ಕೆ ಬೇಕಾದ ಪಂಚಾತಿಕೆಗಳೇ ನಡೆದುವು. ಬ್ರಿಟಿಷ್ ರಾಜತಂತ್ರಜ್ಞರು ಹಿಂದೀಯರಿಗೆ ಅಧಿಕಾರ ಕೊಡುವ ವಿಷಯದಲ್ಲಿ ಸ್ವಲ್ಪವೂ ಮನಸ್ಸು ಕೊಡಲಿಲ್ಲ. ಇದರಿಂದ ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಸತಿ ಸ್ವಾತಂತ್ರ್ಯವೂ ನಮಗೆ ಸಿಗುವುದಿಲ್ಲವೆಂಬುದನ್ನು ತಿಳಿದು ಸಂಪೂರ್ಣ ಸ್ವರಾಜ್ಯವನ್ನು ಹಿಂದೀಯರು ಪಡೆಯಬೇಕೆಂಬ ನಿರ್ಧಾರವನ್ನು ಕಾಂಗ್ರೆಸ್ ಮಾಡಿತು. ಲಾಹೋರು ಕಾಂಗ್ರೆಸು ಪೂರ್ಣ ಸ್ವರಾಜ್ಯದ ಠರಾವನ್ನು ಮಂಜೂರು ಮಾಡಿತು.

ಜಸ್ಟಿಸ್ ಪಕ್ಷ

ಈಗ ಹಿಂದೀಯರಿಗೊಂದು ರಾಜ್ಯ ರಚನೆ ಕೊಡಲ್ಪಟ್ಟಿದೆ. ಈ ಸುಧಾರಣೆಯನ್ನು ಮುರಿಯಬೇಕೆಂದು ಕಾಂಗ್ರೆಸಿನವರು ನಿರ್ಧರಿಸಿರುವರು. ಈ ಸುಧಾರಣೆಯಲ್ಲಿ ಅಧಿಕಾರವೆಲ್ಲವೂ ಪರಕೀಯರ ಕೈಯಲ್ಲಿರುವುದು. ಕೇಂದ್ರ ನ್ಯಾಯವಿಧಾಯಕ ಸಭೆಗೆ ವಕ್ರಚುನಾವಣೆ! ಫೆಡರಲ್ ರಾಜ್ಯ ಪದ್ಧತಿಯು ಯಾರಿಗೂ ಈಗಿನ ಕ್ರಮದಲ್ಲಿ ಬೇಡ. ಆದರೆ ಜಸ್ಟಿಸ್ ಪಕ್ಷದವರು ಇದನ್ನು ಸ್ವೀಕರಿಸಬೇಕೆಂದಿದ್ದಾರೆ. ಚುನಾವಣೆಗೆ ಒಂದು ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಿದ್ದಾರೆ. ಅವರು ಕೋಟಿ ಖರ್ಚುಮಾಡುವಲ್ಲಿ ಕಾಂಗ್ರೆಸ್ ಲಕ್ಷ ಖರ್ಚುಮಾಡಿದರೆ ಸಾಕು. ಜಸ್ಟೀಸರು ನ್ಯಾಯವಿಧಾಯಕ ಸಭೆಗಳಿಗೆ ಪ್ರವೇಶಿಸದಂತೆ ಮಾಡುವುದು ಕಾಂಗ್ರೆಸಿನ ಕರ್ತವ್ಯವಾಗಿದೆ. ಆದುದರಿಂದ ಕಾಂಗ್ರೆಸಿನ ಪರವಾಗಿ ಪ್ರತಿಯೊಬ್ಬನೂ ತನ್ನ ಮತದಾನವಮಾಡಬೇಕು. ದೇಶದಲ್ಲಿ ಜನ ಜಾಗ್ರತಿಯನ್ನುಂಟುಮಾಡಬೇಕು.

ಕರ್ನಾಟಕದವರ ಪ್ರಶಂಸೆ

ಕನ್ನಡಿಗರು ಬಹಳ ತ್ಯಾಗಮಾಡಿದ್ದಾರೆ. ಕರ್ನಾಟಕದ ರೈತರ ಸತ್ಯಾಗ್ರಹವು ಎಲ್ಲರನ್ನೂ ಮನಮೆಚ್ಚುವಂತೆ ಮಾಡಿದೆ ಆಬಾಲವೃದ್ಧರೂ ಕಾಂಗ್ರೆಸ್ ಭಕ್ತರು. ಆದುದರಿಂದ ಇಲ್ಲಿ ಕಾಂಗ್ರೆಸಿನ ಕಡೆಗೆ ಪ್ರಚಂಡ ಜನಮತ ದೊರಕುವುದೆಂದು ನಂಬಿದ್ದೇನೆ.

ಶ್ರೀ ಹುಕ್ಕೇರಿಕರರ ಭಾಷಣ

ಶ್ರೀ. ಹುಕ್ಕೇರಿಕರರು ಶ್ರೀ. ಸಾಂಬಮೂರ್ತಿಗಳ ಅಭಿಪ್ರಾಯವನ್ನು ಸುಲಭ ಶೈಲಿಯಲ್ಲಿ ಕನ್ನಡದಲ್ಲಿ ಎಲ್ಲರಿಗೂ ತಿಳಿಯುವಂತೆ ಹೇಳಿದರು ಸತ್ಯಾಗ್ರಹದಲ್ಲಿ ಭಾಗವಹಿಸದವರು ಈಗ ಕಾಂಗ್ರೆಸಿಗೆ ಬಂದುದಕ್ಕಾಗಿ ಕೆಲವರು ಸಂಶಯಪಡುವರು. ಆದರೆ ಈಗಿನ ಕಾಂಗ್ರೆಸ್ ಧೋರಣೆಯಲ್ಲಿ ನಂಬಿಕೆಯಿದ್ದಲ್ಲಿ ಯಾರೂ ಬರಬಹುದು. ತ್ಯಾಗಕ್ಕಾಗಿ ಸ್ವರಾಜ್ಯ ಸಂಪಾದನೆಗಾಗಿ ಹೋರಾಡುವುದಕ್ಕಾಗಿ ಅವರು ಮುಂದೆ ಬರುವರೆಂಬುದನ್ನು ಯಾರೂ ಮರೆಯಕೂಡದೆಂದು ತಿಳಿಸಿದರು.

ಡಾ| ಹರಡೀಕರರು

ಡಾ. ಎನ್. ಎಸ್. ಹರಡೀಕರರು ಒಂದು ಉಜ್ವಲ ಭಾಷಣಮಾಡಿ ಅದರಲ್ಲಿ ಸ್ವಯಂಸೇವಕರ ದಳವನ್ನು ದಕ್ಷಿಣ ಕನ್ನಡದಲ್ಲಿ ಸಿದ್ಧಗೊಳಿಸಬೇಕೆಂದು ತಿಳಿಸಿದರು. ಮದ್ರಾಸಾಧಿಪತ್ಯದಲ್ಲಿ ಸೇವಾದಳದ ಮೇಲೆ ಬಹಿಷ್ಕಾರವಿಲ್ಲವೆಂದೂ ಅವಕಾರಣ ಅದನ್ನು ಏರ್ಪಡಿಸುವುದಕ್ಕೆ ಎಲ್ಲಾ ಸೌಲಭ್ಯಗಳಿವೆಯೆಂದೂ ಮುಖ್ಯವಾಗಿ ಜನತೆಗೆ ಉತ್ಸಾಹವಿರಬೇಕೆಂದೂ ತಿಳಿಸಿದರು.

ಈ ದಿನ ಶ್ರೀ. ಸಾಂಬಮೂರ್ತಿಗಳು ಮದ್ರಾಸಿಗೂ, ಡಾ. ಹರಡೀಕರರೂ, ಹುಕ್ಕೇರಿಕರರೂ, ಶ್ರೀಮತಿ ಕಮಲಾದೇವಿಯವರೂ ಸಕಲೇಶಪುರಕ್ಕೂ ಹೊರಟು ಹೋದರು

ಜಿಲ್ಲಾ ಬೋರ್ಡಿನ ಸಭೆಯು

ತಾ. 22-9-'36ರಲ್ಲಿ ಜರಗಿತು. ಎಜ್ಯುಕೇಶನಲ್ ಸ್ಟೇಂಡಿಂಗ್ ಕಮಿಟಿಗೆ ಶ್ರೀ ಆನಂದ ಬಲ್ಲಾಳರು ಆರಿಸಲ್ಪಟ್ಟರು. ಬಳಿಕ ಪ್ರಶ್ನೋತ್ತರಗಳಾದುವು. ಶ್ರೀ ಎ. ಬಿ. ಶೆಟ್ಟರು, ನೊದಲಿನ ಬೋರ್ಡಿನ ಆಡಳಿತ ವಿಷಯವಾಗಿ ಮಾಡಿದ ಆಕ್ಷೇಪಣೆಗಳೇ ಮೊದಲಾದುವುಗಳ ಕುರಿತು ಪ್ರಶ್ನೆ ಕೇಳಿದರು. ಬೋರ್ಡಿನ ಆರ್ಥಿಕ ಪರಿಸ್ಥಿತಿಯ ವರದಿಯನ್ನೊಪ್ಪಿಸಲು ಒಂದು ಕಮಿಟಿಯು ಏರ್ಪಟ್ಟಿತು. ಡಾ. ವಿಟ್ಠಲ ಶೆಟ್ಟರ ಬೋ. ನೌಕರರ ಸಂಬಳದಲ್ಲಿಯ ಒಂದಾಣೆಯ ಕಡಿತವನ್ನು ತೆಗೆದು ಹಾಕಬೇಕು ಮತ್ತು ರೂ. 10.000ವನ್ನು ಗ್ರಾಮಾಂತರಗಳ ಉಪಯೋಗಕ್ಕೆ ಖರ್ಚುಮಾಡಬೇಕೆಂಬ ವಿಷಯದ ಠರಾವು ಮಂಜೂರಾಯಿತು.

(ವಿವರ ಮುಂದಿನ ಸಂಚಿಕೆಯಲ್ಲಿ)

ಕ್ಷಣಕ್ಷಣಕ್ಕೂ ಮುಂದೇನೆಂಬ ತವಕವನ್ನುಂಟುಮಾಡುವ ಸಾಮಾಜಿಕ ನಾಟಕ.

ವ್ಯಭಿಚಾರಿಣಿ ಯಾರು ?

ನೂರು ಪುಟಗಳಿಗೂ ಮಿಕ್ಕಿದ್ದು ಅನೇಕ ದೃಶ್ಯಚಿತ್ರಗಳಿಂದೊಡಗೂಡಿದ ಪುಸ್ತಕ

ವ್ಯಭಿಚಾರಿಣಿ ಯಾರು?

ತಾರುಣ್ಯದ ಪ್ರೇಮುದುಬ್ಬರದ ಒಂದು ಕ್ಷಣದ ಅವಿವೇಕದಿಂದ ಪಾಷಾಣಹೃದಯಿಸಮಾಜದ ಅಸಹನೀಯ ಪೀಡೆಗೊಳಗಾದರೂ ಸಚ್ಚಾರಿತ್ರ್ಯದ ಪ್ರತಿಮೂರ್ತಿಯಾಗಿರುವ ದೀನ ದುಃಖಿತ ತರುಣಿಯೊ?

ದೃಶ್ಯ ದೃಶ್ಯಕ್ಕೂ ವಿಚಾರ ತರಂಗವನ್ನೆಬ್ಬಿಸಿ ಮನ ಸೂರೆಗೊಳಿಸುವ ಕಥಾನಕ.

ವಾಚಕರನೇಕರ ಆಗ್ರಹದ ಮೇರೆಗೆ ನವಯುಗದಲ್ಲಿ ಪ್ರಕಟವಾದುದನ್ನು ಇದೀಗ ತಿದ್ದಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ

ಬೆಲೆ. ೦—೮—೦.

೧ ಪ್ರತಿ ಬೇಕಾದವರು ಹತ್ತಾಣೆ ಸ್ಟಾಂಪು ಕಳುಹಿಸಬೇಕು.

ವ್ಯಭಿಚಾರಿಣಿ ಯಾರು ?

ಸಮಾಜದಲ್ಲಿ ಮಾನವಂತೆಯಾಗಿ ಮೆರೆದಾಡಿ, ಗುಪ್ತ ದುರಾಚಾರಿಣಿಯಾಗಿ ವರಿಸಿದ ಪತಿಯ ಜೀವನ ಸುಖವನ್ನೇ ಮಣ್ಣುಗೂಡಿಸಿ ಸೇವಾ ವಿಷಯಸುಖಾಭಿಲಾಷಿಯಾಗಿರುವ ವಿಲಾಸಿನಿ ರಮಣಿಯೊ?

ತರುಣ ತರುಣಿಯರಿಗೆ ಅತ್ಯಂತ ಬೋಧಪರವಾದ ನಾಟಕ.

ನವಯುಗ ಆಫೀಸು, ಉಡುಪಿ. ☞ ಪ್ರತಿಗಳು ಸಿಗುವ ಸ್ಥಳ ☜ ಕಿರಿಯರ ಪ್ರಪಂಚ, ಉಡುಪಿ.

ಇದೇ ನಾಟಕವು ತಾ. 3-10-1936ನೇ ಶನಿವಾರ ರಾತ್ರಿ 9-30ಕ್ಕೆ

ಮಂಗಳೂರಿನ ಶ್ರೀ ಜಗದಂಬಾ ಎಮೆಚೂರ್ ನಾಟಕ ಸಂಘದವರಿಂದ

ಗಣಪತಿ ಹೈಸ್ಕೂಲಿನಲ್ಲಿ ಪ್ರದರ್ಶಿಸಲ್ಪಡುವುದು.

ಮಂಗಳೂರಿಗೆ ದೇಶಭಕ್ತ ಸಾಂಬಮೂರ್ತಿಗಳ ಆಗಮನ!

ಅಪೂರ್ವ ಸ್ವಾಗತ!!

ದಕ್ಷಿಣ ಕನ್ನಡದಲ್ಲಿ ಚುನಾವಣೆಯ ಚಳವಳವನ್ನು ಕಾಂಗ್ರೆಸಿನವರ ಕಡೆಯಿಂದ ಆರಂಭಿಸುವ ಸಮಾರಂಭವನ್ನು ಜರಗಿಸುವುದಕ್ಕಾಗಿ ಆಂಧ್ರದೇಶದ ಧುರೀಣರಾದ ಶ್ರೀ ಬಿ ಸಾಂಬಮೂರ್ತಿಯವರು ಆಹ್ವಾನಿಸಲ್ಪಟ್ಟಿದ್ದರು. ಶ್ರೀ ಸಾಂಬಮೂರ್ತಿಯವರು ನಿನ್ನೆ ದಿನ ಸಾಯಂ 4-30ಕ್ಕೆ ಮಂಗಳೂರು ರೈಲ್ವೆ ನಿಲ್ದಾಣದಲ್ಲಿ ಬಂದಿಳಿದರು. ಅವರನ್ನು ಇದಿರುಗೊಳ್ಳುವುದಕ್ಕೆ ಶ್ರೀಗಳಾದ ಸುಬ್ರಹ್ಮಣ್ಯಭಟ್ಟರು, ಡಾ. ಹರಡೀಕರರು, ಶ್ರೀ. ಕಮಲಾದೇವಿಯರು ಮತ್ತು ಕಾಂಗ್ರೆಸ್ ಅಧಿಕಾರಿಗಳು ರೈಲ್ವೇ ಸ್ಟೇಶನಿನಲ್ಲಿ ಕಾದಿದ್ದರು. ಶ್ರೀ. ಸಾಂಬಮೂರ್ತಿಗಳು ರೈಲಿನಿಂದ ಇಳಿದ ಕೂಡಲೆ ಶ್ರೀ. ಬಿ. ಅನಂತರೈಗಳು ಅವರಿಗೆ ಹೂವಿನ ಹಾರ ಹಾಕಿ ಸತ್ಕರಿಸಿದರು ನೆರೆದಿದ್ದ ಮಹನೀಯರ ಪರಿಚಿತಿಯನ್ನು ಅಭ್ಯಾಗತರಿಗೆ ಶ್ರೀ. ಕಮಲಾದೇವಿಯರು ಮಾಡಿಸಿಕೊಟ್ಟ ಮೇಲೆ ಅವರು ಎಲ್ಲರಿಗೂ ಹಸ್ತಲಾಘವವನ್ನಿತ್ತು ಅವರಿಗಾಗಿ ಕಾದಿದ್ದ ವಾಹನ(ಮೋಟರ್)ಕ್ಕೆ ಹೋಗಿ ಅಲ್ಲಿಂದ ಧಾರೇಶ್ವರ ಗಾರ್ಡನ್ನಿಗೆ ಹೋಗಿ ಅಲ್ಲಿ ಶ್ರೀ ಕಮಲಾ ದೇವಿಯವರ ಅತಿಥಿಗಳಾಗಿ ನಿಂತರು.

ಶ್ರೀ ಸಾಂಬಮೂರ್ತಿಯವರ ಉಜ್ವಲ ಭಾಷಣ

ಕಾಂಗ್ರೆಸ್‌ಸದಸ್ಯರಿಗೆ ಬೆಂಬಲಕೊಡಿರಿ! ಆಂಧ್ರ ಕನ್ನಡವೆಂಬ ಭೇದ ಬಿಡಿರಿ!

ನಿನ್ನೆಯ ದಿನ ಸಾಯಂಕಾಲ 5 45 ಕ್ಕೆ ಸರಿಯಾಗಿ ಮಂಗಳೂರಿನ ಲೈನ್ ಮೈದಾನಿನಲ್ಲಿ ಶ್ರೀ. ಸಾಂಬಮೂರ್ತಿಯವರು ರಾಷ್ಟ್ರಪಕ್ಷದ ಪರವಾಗಿ ಚುನಾವಣೆಯ ಚಳವಳದ ಆರಂಭೋತ್ಸವವನ್ನು ಆರಂಭಿಸಿದರು. ಶ್ರೀ ಸಾಂಬಮೂರ್ತಿಗಳನ್ನು ನೋಡಿ ಅವರ ಭಾಷಣವನ್ನು ಕೇಳಲು ಸಾವಿರಾರು ಮಂದಿ ಸುಮ್ಮನೆ ಐದು ಗಂಟೆಯಿಂದಲೂ ಕಾದಿದ್ದರು.

ಸಾಯಂಕಾಲ 5-45ಕ್ಕೆ ಸರಿಯಾಗಿ ಭಾಷಣ ಕರ್ತರು ಸಭಾಸ್ಥಾನವನ್ನು ಪ್ರವೇಶಿಸಿದರು. ಜಿ. ಕಾಂಗ್ರೆಸ್ ಸೆಕ್ರೆಟರಿಗಳಾದ ಶ್ರೀ ಭೋಜರಾಯರು ಶ್ರೀ ವೈಕುಂಠ ಬಾಳಿಗರನ್ನು ಅಧ್ಯಕ್ಷಸ್ಥಾನ ವಹಿಸುವಂತೆ ಪ್ರಾರ್ಥಿಸಿದ ಮೇರೆಗೆ ಅವರು ಅಗ್ರಾಸನ ವಹಿಸಿದರು. ಅಭ್ಯಾಗತರ ಪರಿಚಿತಿಯನ್ನು ಸಭೆಯವರಿಗೆ ಮಾಡಿಕೊಡುವ ಸಂದರ್ಭದಲ್ಲಿ ಅಧ್ಯಕ್ಷರು ಹೀಗೆಂದರು. ಶ್ರೀ ಸಾಂಬಮೂರ್ತಿಗಳು ಆಂಧ್ರದೇಶದ ಪ್ರಸಿದ್ಧ ಧುರೀಣರು. ದೇಶದ ಸ್ವಾತಂತ್ರ್ಯಕ್ಕಾಗಿ ಬಹಳ ತ್ಯಾಗಮಾಡಿರುವರಲ್ಲದೆ, ಬಹಳ ಕಷ್ಟಗಳನ್ನು ಅನುಭವಿಸಿರುವರು. ಜೈಲನ್ನು ಅನೇಕ ಸಾರಿ ಪ್ರವೇಶಿಸಿರುವರು. ಅಂತಹ ಮಹನೀಯರು ಈ ಚುನಾವಣೆಯ ಚಳವಳದ ಆರಂಭೋತ್ಸವವನ್ನು ನೆರವೇರಿಸುವುದರಿಂದ ನಮ್ಮ ಜಿಲ್ಲೆಯ ಭಾಗ್ಯವು ವಿಶೇಷವೆಂದು ಹೇಳಬೇಕಾಗುವುದೆಂದು ಹೇಳಿದರು.

ಅನಂತರ ಅಖಿಲಭಾರತದಲ್ಲಿ ಹೆಸರು ಪಡೆದ ಸರದಾರ ವಲ್ಲಭಭಾಯಿ ಪಟೇಲ್ ರಾಜೇಂದ್ರ ಪ್ರಸಾದ್, ಶ್ರೀ ಶ್ರೀಪ್ರಕಾಶ, ಶ್ರೀ ಭೂಲಾಭಾಯಿದೇಸಾಯಿ, ಶ್ರೀ ನಾರಾಯಣ ರಾವ್ ಜೋಶಿ ಇವರೇ ಮೊದಲಾದವರ ಸಂದೇಶಗಳೂ ಅವರ ಆಶೀರ್ವಾದ ಪೂರ್ವಕವಾದ ಪತ್ರಗಳೂ ಸಭೆಯಲ್ಲಿ ಶ್ರೀ ಕಮಲಾದೇವಿಯವರಿಂದ ಓದಲ್ಪಟ್ಟಿತು.

ಅನಂತರ ಶ್ರೀ ಸಾಂಬಮೂರ್ತಿಯವರು ತಮ್ಮ ಭಾಷಣವನ್ನಿತ್ತರು. ಅವರು ಹೇಳಿದ್ದೇನೆಂದರೆ.—

ಇಂದಿನ ಸಭೆ

"ಮಿತ್ರರೇ, ಸಾಮಾನ್ಯವಾಗಿ ಸಭೆಗಳು ಇರುವುದು ಅರ್ಧ ಚಂದ್ರಾಕೃತಿಯಲ್ಲಿ. ಆದರೆ ಕನ್ನಡನಾಡಿನವರು ಪ್ರತಿಯೊಂದರಲ್ಲಿಯೂ ತಮ್ಮ ವ್ಯಕ್ತಿತ್ವವನ್ನು ತೋರಿಸುವಂತೆಯೇ ಇಂದಿನ ಸಭೆಯಲ್ಲಿಯೂ ತೋರಿಸಿ ಸಭೆಯನ್ನು ಚತುರಸ್ರಾಕಾರವಾಗಿ ಮಾಡಿದ್ದಾರೆ. ಇದರಿಂದಾಗಿ ನನ್ನ ವ್ಯಾಯಾಮವಾಗುವುದಲ್ಲದೆ ದೇಹಕ್ಕೂ ವ್ಯಾಯಾಮವಾಗುವ ಹಾಗಿದೆ".

ಕರ್ನಾಟಕ-ಆಂಧ್ರವಾದ

ಕರ್ನಾಟಕವೂ ಆಂಧ್ರವೂ ಪ್ರತ್ಯೇಕ ಪ್ರತ್ಯೇಕವೆಂದು ತಿಳಿಯಕೂಡದು. ಅವೆರಡೂ ಅಣ್ಣ ತಮ್ಮಂದಿರಂತೆ ಅಥವಾ ಅಕ್ಕ ತಂಗಿಯರಂತೆ. ಕರ್ನಾಟಕದ ಕಲಾ ಕೌಶಲ್ಯಕ್ಕೆ ಆಂಧ್ರದೇಶವು ಸ್ವಲ್ಪ ಬಣ್ಣ ಹಚ್ಚಿ ಮತ್ತಷ್ಟು ಮನೋಹರವಾಗಿ ಮಾಡಿತು. ಹಿಂದುಸ್ಥಾನದ ಕಲಾಭಿವೃದ್ಧಿಗೆ ಈ ಎರಡು ಸಂಸ್ಥಾನಗಳು ಬಹಳ ಸಹಾಯಮಾಡಿವೆ

ಕ್ರಿಸ್ತ ಪೂರ್ವ 400ವರ್ಷಗಳಲ್ಲಿ ಆಂಧ್ರರು ದೊಡ್ಡ ಚಕ್ರಾಧಿಪತ್ಯವನ್ನು ಕಟ್ಟಿದ್ದರು ಅದು ಗಂಗಾನದಿಯ ವರೆಗೆ ವಿಸ್ತರಿಸಿತ್ತು. ಅದರ ಪತನದ ಅನಂತರದಲ್ಲಿ ಶ್ರೀಕೃಷ್ಣದೇವರಾಯನು ಆಂಧ್ರ ಕರ್ನಾಟಕ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಶ್ರೀಕೃಷ್ಣದೇವರಾಯನನ್ನು ಕನ್ನಡಿಗರೂ, ಆಂಧ್ರರೂ ತಮ್ಮವನೆಂದೇ ವಾದಿಸುವರು ವಾದಿಸುವವರು ವಾದಿಸುತ್ತಿರಲಿ. ದೇವರಾಯನು ಪ್ರಸಿದ್ಧ ಅರಸನು, ಆತನ ಕಾಲದಲ್ಲಿ ಕಲೆ, ಸಂಸ್ಕೃತಿ ಇವೆಲ್ಲವೂ ಮುಂದಕ್ಕೆ ಬಂತು. ಕರ್ನಾಟಕ ಸಂಗೀತವು ಶ್ರೀಕೃಷ್ಣದೇವರಾಯನ ಕಾಲದಲ್ಲಿ ಜನ್ಮವೆತ್ತಿ ಪ್ರಾಧಾನ್ಯವನ್ನು ಪಡೆಯಿತು.

ನಾವಿಂದು ಆಂಧ್ರರು, ಕನ್ನಡಿಗರೆಂದು ಭೇದ ಇಟ್ಟುಕೊಳ್ಳಬೇಕಾಗಿಲ್ಲ ಸ್ವರಾಜ್ಯ ಸಂಪಾದನೆಯಾದಮೇಲೆ ನಮ್ಮ ನಮ್ಮ ವಿವಾದವನ್ನು ನಾವೇ ತೀರಿಸಿಕೊಳ್ಳಬಹುದು ಅದನ್ನು ತೀರಿಸಿಕೊಳ್ಳುವ ಶಕ್ತಿಯು ನಮ್ಮಲ್ಲಿದೆ. ಆಂಧ್ರರೂ, ಕನ್ನಡಿಗರೂ ಆರ್ಯ ಸಂಸ್ಕೃತಿಯನ್ನು ದಕ್ಷಿಣ ದೇಶದಲ್ಲಿ ಕಾಪಾಡಿದವರು, ಮತ್ತು ಮುಸಲ್ಮಾನರನ್ನು ಮುಂದುವರಿಯದಂತೆ ದಕ್ಷಿಣ ದೇಶದಲ್ಲಿ ತಡೆಗಟ್ಟಿದವರು. ಹೀಗೆಲ್ಲಾ ಇದ್ದುದರಿಂದ ಇನ್ನು ಕೂಡ ಆಂಧ್ರರೂ ಕನ್ನಡಿಗರೂ ಕೈಕೈಹಿಡಿದು ಮುಂದಡಿಯಿಡಬೇಕಲ್ಲದೆ ಪರಸ್ಪರ ವಿರೋಧಿಸಿಕೊಂಡಿರಬೇಕಾಗಿಲ್ಲ. ನಾವಿಂದು ಯತ್ನಿಸುವುದು ಪ್ರಾಂತ್ಯಗಳ ಏಳಿಗೆಗಲ್ಲ. ಅಖಿಲ ಭಾರತದ ಸ್ವಾತಂತ್ರ್ಯಕ್ಕಾಗಿ, ಕಲ್ಯಾಣಕ್ಕಾಗಿ, ಭರತಖಂಡದ ರಾಷ್ಟ್ರೀಯತೆಯ ಧ್ಯೇಯಕ್ಕಾಗಿ, ನಾವು ಹೋರಾಡುವುದು. ಬಂಗಾಳದವರಾಗಲಿ, ಪಂಜಾಬಿನವರಾಗಲಿ ಅವರು ಹಿಂದೀಯರು ಎಂಬ ಭಾವನೆಯಿಂದಲೇ ನಾವು ಕೆಲಸಮಾಡುತ್ತೇವೆ. ಆದಕಾರಣ ನಮ್ಮ ಪ್ರಾಂತ್ಯವಾರು ವಾದಗಳಿಗೆ ಅವಕಾಶವಿಲ್ಲ. ಹಿಂದುಸ್ಥಾನದ 36ಕೋಟಿ ಜನರ ಸ್ವಾತಂತ್ರ್ಯವೇ ನಮ್ಮ ಹೃದಯದಲ್ಲಿರುವ ಆಕಾಂಕ್ಷೆ.

ಕಾಂಗ್ರೆಸ್ ಇತಿಹಾಸ.

ಭರತ ಖಂಡದ ಸ್ವಾತಂತ್ರ್ಯಕ್ಕಾಗಿ ಭಾರತ ರಾಷ್ಟ್ರಸಭೆಯು ಕಳೆದ 50ವರ್ಷಗಳಿಂದ ಹೋರಾಡಿತು. 'ಆದಿಯಲ್ಲಿ ದೊಡ್ಡ ದೊಡ್ಡ ಭಾಷಣಗಳು ನಡೆಯುತ್ತಿದ್ದವು. ಈಗ ಮಹಾತ್ಮಗಾಂಧಿಯವರು ಸೀದಾ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಅದು ಅಹಿಂಸಾತ್ಮಕ ಅಸಹಕಾರದ ಮಾರ್ಗ 1920ರಿಂದ ಈ ಹೊಸ ತತ್ವವು ನಮ್ಮ ಮುಂದಿದೆ. ಮಹಾತ್ಮಗಾಂಧಿಯವರು ಅಹಿಂಸಾತ್ಮಕ ಅಸಹಕಾರವನ್ನೇ ತಮ್ಮ ಆಯುಧವಾಗಿಟ್ಟುಕೊಂಡಿದ್ದರೂ, ವೈಸರಾಯಗಳೊಡನೆಯೂ ಬ್ರಿಟಿಷ್ ಮಂತ್ರಿಗಳೊಡನೆಯೂ ಭೇಟಿಕೊಡಬೇಕೆಂತಲೂ ಯೋಚಿಸುತ್ತಲೇ ಇದ್ದರು. ಹೀಗೆ ಮಾಡಿಯೇ ಬ್ರಿಟಿಷರ ನಿಜವಾದ ಗುಣವನ್ನು ಬಯಲಿಗೆ ತಂದರು. ಬ್ರಿಟಿಷರು ತಮ್ಮ ದಾರಿಯನ್ನು ತಿದ್ದುಕೊಳ್ಳುವುದಿಲ್ಲವೆಂದು ತಿಳಿದ ಮೇಲೆ ಕಾಯಿದೆ ಭಂಗದ ಚಳವಳವನ್ನು ಹೂಡಿದರು.

ಸೈಮನ್‌ಕಮಿಶನಿನವರು ಬಂದಾಗ ದೇಶಿಯರೆಲ್ಲರೂ ಒಮ್ಮತದಿಂದ ಆ ಕಮಿಶನಿನವರನ್ನು ಹೋಗುವಂತೆ ಹೇಳಿದರು. ಆದರೆ ಆ ಕಮಿಶನಿಗೆ ಸ್ವಾಗತವಿತ್ತವರು ಮದ್ರಾಸಿನ ಜಸ್ಟೀಸ್ ಪಕ್ಷದವರು ಸೈಮನ್ ಪಕ್ಷದವರು, ಸೈಮನ್ ಕಮಿಶನ್ ಇಲ್ಲಿಗೆ ಬಂದಿದ್ದಾಗ ಗುಂಡು ಹೊಡೆಯುವುದು. ಲಾಠಿಯಿಂದ ಹೊಡೆಯುವುದು ಇವೇ ಮೊದಲಾದ ಘೋರಣೆ ನಡೆಯಿತು. ಪಂಜಾಬಿನಲ್ಲಿ ಲಾಲಾಜಿಯವರಿಗೆ ಲಾಠಿಯಿಂದ ಹೊಡೆದು ಆ ನೋವಿನಿಂದಲೇ ಅವರು ಪರಂಧಾಮವನ್ನೈದಿದರು. ಇಷ್ಟಾದರೂ ಜನರು ತಮ್ಮ ಮಾರ್ಗವನ್ನು ಬಿಡಲಿಲ್ಲ.

ಅನಂತರದಲ್ಲಿ ಉಪ್ಪಿನ ಸತ್ಯಾಗ್ರಹವೇ ಮೊದಲಾದ ಕಾಯಿದೆ ಭಂಗಕ್ಕೆ ಚಳವಳಗಳು ನಡೆದುವು. ಹಿಂದುಸ್ಥಾನದ ಸ್ತ್ರೀಯರು ಕೈಯಲ್ಲಿ ಪತಾಕೆಗಳನ್ನು ಹಿಡಿದುಕೊಂಡು ಸಂಪಿರಗಟ್ಟಲೆಯಲ್ಲ

(೧೧ನೇ ಪುಟಕ್ಕೆ ಮುಂದುವರಿದಿದೆ)

DEFEND YOUR OWN INTEREST
BY BANKING WITH THE

UDIPI BANK, Ltd.

UDIPI

ALL KINDS OF BANKING BUSINESS UNDERTAKEN

ESTD: 1925

ಕೆಡಂದಲೆ:—ತಾ. 16-9-36ಕ್ಕೆ ನಮ್ಮ ಕಡಂದ್ಲೆ ಗ್ರಾಮದಲ್ಲಿ ಹೊಸತಾಗಿ ಒಂದು ಬ್ರಾಂಚ್ ಪೋಸ್ಟಾಫೀಸನ್ನು ಇನಸ್ಪೆಕ್ಟರರು ಬಂದು ಬಹು ವಿಜೃಂಭಣೆಯಿಂದ ತೆರೆಯೋಣಾಗಿ ಕೆ ಮುದ್ದು ಸೆಟ್ರನ್ನು ಪೋಸ್ಟು ಮಾಸ್ತರರನ್ನಾಗಿ ನೇಮಿಸಿರುತ್ತಾರೆ. ಈ ಸಮಾರಂಭಕ್ಕೆ ಪರಊರ ಗೃಹಸ್ಥರೂ, ಊರ ನಿವಾಸಿಕರೂ, ರೆವಿನ್ಯು ಇನ್ಸ್ಪೆಕ್ಟರರೇ ಮೊದಲಾದ ಮಾನ್ಯ ಗ್ರಹಸ್ಥರೂ ನೆರೆದು ಬಂದು ಗ್ರಾಮವು ವೃದ್ಧಿಯಾಗುವಂತೆಯೂ ಪೋಸ್ಟಾಫೀಸು ಶಾಶ್ವತವಾಗಿ ನಿಲ್ಲುವಂತೆಯೂ ಪ್ರೋತ್ಸಾಹಿಸಿ ಪೋಸ್ಟ್ ಮಾಸ್ತರರಿಂದ ಸತ್ಕರಿಸಲ್ಪಟ್ಟ ಫಲಾಹಾರ ಮೊದಲಾದ ಉಪಚಾರವನ್ನು ಸ್ವೀಕರಿಸಿ, ಹರಸಿ ಸಮಾರಂಭ ಕೊನೆಗೊಂಡಿತು-

ಮುಸಲ್ಮಾನ ಓಟರರ ಅವಗಾಹನೆಗೆ

ತಾ. 30 6-36ರಲ್ಲು ಬಪ್ಪನಾಡ ಕಾರ್ನಾಡ, ತಾಳಿಪಾಡಿ, ಕಿಲ್ಪಾಡಿ, ಪಾವಂಜೆ, ತೋಕೂರು, ವಗೈರೆ ಗ್ರಾಮಗಳ ಮುಸಲ್ಮಾನ ನಿವಾಸಿಕರ ಸಭೆಯಲ್ಲಿ ಕಾರ್ಕಳ ವಕೀಲ್ ಹಾಜಿ ಸಯ್ಯದ್ ಹುಸೇನ ಸಾಹೇಬರನ್ನು ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಮೆಂಬರರಾಗಿ ಆರಿಸಬೇಕಾಗಿ ಮಾಡಿದ ಪ್ರೊಸಿಡಿಂಗ್ಸ ಪ್ರಕಾರ ಸದ್ರಿಯವರಿಗೆ ಅಗತ್ಯವುಳ್ಳ ಸಹಾಯವೊದಗಿಸಿ ಕೊಡುವ ಬಗ್ಗೆ ನೇಮಕ ಮಾಡಿದ ಕಮಿಟಿಯಲ್ಲಿ ಪಾವಂಜೆ ಪಟೇಲ್ ಅಬ್ದುಲ್ ಮುಕ್ರೂರ್ ಅಸದಿ ಸಾಹೇಬರನ್ನೂ ಮಾಸ್ಟರ್ ನೂರುದ್ದೀನ್ ಸಾಹೇಬರನ್ನೂ ಮೆಂಬರರಾಗಿ ಆರಿಸಲಾಗಿತ್ತು. ಆದರೆ, ಸದ್ರಿ ಇಬ್ಬರೂ ಮಹನೀಯರಿಗೆ ಚುನಾವಣೆ ವಗೈರೆ ಕೆಲಸಗಳಲ್ಲಿ ಭಾಗ ವಹಿಸುವದೆ ಆಸಾಧ್ಯ ವ ಅನಾನುಕೂಲವಾಗಿರುವದಾಗಿ ಬರದು ತಿಳಿಸಿ ಅವರು ಸದ್ರಿ ಕಮಿಟಿ ಮೆಂಬರಿಕೆಗೆ ರಾಜಿನಾಮೆ ಕೊಟ್ಟಿರುತ್ತಾರೆ. ಅವರ ರಾಜಿನಾಮೆಗಳಿಂದ ಖಾಲಿ ಬಿದ್ದಿರುವ ಸ್ಥಾನಗಳಿಗೆ ಬೇರೆ ಮೆಂಬರರನ್ನು ನೇಮಕ ಮಾಡುವದು ಅಗತ್ಯ ಉಂಟು. ಚುನಾವಣೆ ಸಂಬಂಧ ಮುಂದಿನ ಅಗತ್ಯವುಳ್ಳ ವಿಲೆವಾರಿಗಳನ್ನು ಸಾಂಗವಾಗಿ ನೆರವೇರಿಸುವ ಬಗ್ಗೆ ಎಲ್ಲಾ ಮುಸಲ್ಮಾನ ಮಹನೀಯರೂ ಮತದಾರರೂ ಸಹಕರಿಸುವದು ಅತೀ ಅಗತ್ಯವಾಗಿರುತ್ತದೆ ಓಟರರ ಲಿಸ್ಟುಗಳು ತಯಾರಾಗಿ ಕೆಳರಡಿಸಲ್ಪಟ್ಟಿರುತ್ತವೆ. ಅವುಗಳಿಂದ ಕಾಣುವ ಆಯಾಯ ಸ್ಥಾನಗಳಲ್ಲಿ ಕಮಿಟಿ ಮೆಂಬರರೂ ಜಾತಿ ಬಂಧುಗಳೂ ಕೂಡಿ ಮಾಡತಕ್ಕ ವಿಲೆವಾರಿಗಳ ನಿರ್ಪಾಡನ್ನು ವಿಳಂಬ ಮಾಡದೆ ಮುಂದರಿಸುವ ಸಮಯವು ಇದೆ ಆಗಿರುತ್ತದೆ.

P. S. M. Saheb.

ಮುಸಲ್ಮಾನ ಮೆಂಬರಿಕೆ ಚುನಾವಣೆ ಸಂಬಂಧ ನೇಮಕಪಟ್ಟ ಕಮಿಟಿಯ ಸೆಕ್ರೆಟರಿ.

ಸೀತಾನದಿ:— ತಾ. 5-9-36ರಲ್ಲು ಇಲ್ಲಿನ ನಾಡ್ಪಾಲು ಬೋರ್ಡುಎಲಿಮೆಂಟರಿ ಶಾಲೆಯಲ್ಲಿ 'ಶಾಕುಂತಲಾ ಪರಿಣಯ' ವೆಂಬ ಯಕ್ಷಗಾನ ಮೃದಂಗ ಸೇವೆಯು ನೆರವೇರಿತು ಎಚ್ ಮಂದರಧರ ಬಲ್ಲಾಳ್, (ದುಷ್ಯಂತ) ಎಸ್. ಗಣಪಯ್ಯ ಶೆಟ್ಟಿ (ಶಾಕುಂತಲೆ) ಬಿ. ಸಂಕಪ್ಪ ತೋಳಾರ್ (ಕಾಲನಾಭಾಸುರ) ಮತ್ತು (ಸಿಂಹಧ್ವಜ) ಬಿ. ಜಗನ್ನಾಥ ಹೆಗ್ಡೆ (ದೂರ್ವಾಸ ಮತ್ತು ಸರ್ವಧಮನ) ಎಚ್. ಬಾಬುರಾವ್ (ದೇವೇಂದ್ರ ಮತ್ತು ಬ್ರಹಸ್ಪೀನ) ನಾಗಯ್ಯ ಹೆಗ್ಡೆ (ನಾರದ) ಮಹಾಬಲಶೆಟ್ಟಿ (ಕಣ್ವಮುನಿ) ಮುಂತಾದವರಿಂದ ತೀರಾ ಹೊಸತಾದ ಈ ಪ್ರಸಂಗವು ಉತ್ತಮರೀತಿಯಿಂದ ನೆರವೇರಿ ಪ್ರೇಕ್ಷಕರ ಪ್ರಸಂಶೆಗೆ ಪಾತ್ರವಾಯಿತು.

ಪ್ರೇಕ್ಷಕ.

ಕಾಸರಗೋಡು

ಇದೇ ಕಳೆದ ತಾ. 15-9-'36ರಲ್ಲು ಶೇಕ್ ಅಬ್ದುಲ್ಲಾ ಗಾಂಧಿಯವರು ಇಲ್ಲಿಗೆ ಆಗಮನಿಸಿದರು. ಅವರು ಬರುವಹೊತ್ತಿಗೆ ಇಡೀ ಕಾಸರಗೋಡು ಪಟ್ಟಣವೆಲ್ಲವೂ ಶೃಂಗಾರವಾಗಿತ್ತು. ಅಲ್ಲಲ್ಲಿ "God save our Abdul Gandhi" ಎಂಬ ಬಿರುದಿನ ಬೋರ್ಡುಗಳು ತೂಗಹಾಕಲ್ಪಟ್ಟಿತ್ತು. ಹಳ್ಳಿಹಳ್ಳಿಗಳಿಂದ ಮುಸಲ್ಮಾನ ಬಾಂಧವರು ತಮ್ಮ ಮತಕ್ಕೆ ಸೇರಿದ ಲೋಕಪ್ರಖ್ಯಾತರಾದ ಮಹಾತ್ಮ ಗಾಂಧಿಜೀಯವರ ಪುತ್ರನನ್ನು ನೋಡುವರೆ ಬಂದು ಸೇರಿದ್ದರು.

ಅಬ್ದುಲ್ಲ ಗಾಂಧಿಯವರು ಅದೇ ದಿನ ಮೈಲಿಗೆ ಬಂದಿಳಿದರು. ಅವರನ್ನು ಜಯಘೋಷದಿಂದ ಮೆರವಣಿಗೆಮಾಡಿ, ಕಾಸರಗೋಡು ಹೈಸ್ಕೂಲಿನ ಎದುರು ಮೈದಾನಿನಲ್ಲಿ ಬಂದು ಸೇರಿದ್ದರು. ಅಲ್ಲಿ ಸಭೆಯ ಮುಂದೆ, ಜನಾಬ್ ಮುಹಮ್ಮದ್ ಶಿರೂರರು ಹಿಂದೂ ಮತವನ್ನು ದೂಷಿಸಿ, ಸ್ವಮತವನ್ನು ತುಂಬು ತುಂಬಾ ಶ್ಲಾಘಿಸಿ ಮಾತಾಡಿದರು. ನಂತರ ಅಬ್ದುಲ್ಲ ಗಾಂಧಿಯವರು ಅಲ್ಲಿಯ ಸಭೆಯಲ್ಲಿ ನೆರೆದ ಹಿಂದುಗಳನ್ನು ಕುರಿತು ಎಲ್ಲರೂ ಮುಸಲ್ಮಾನ ಮತವನ್ನು ಸೇರಬೇಕೆಂದು ಉಪದೇಶಿಸಿದರು. ತಾರೀಕು 16-9-'36ನೇ ಬೆಳಿಗ್ಯೆ ಮೈಲಿಗೆ ಮದ್ರಾಸಿಗೆ ತೆರಳಿದರು. ಅಲ್ಲಿ ಮದ್ಯಪಾನಮಾಡಿ ಅಸಭ್ಯತನದಲ್ಲಿ ವರ್ತಿಸಿದ ಅಪಾದನೆಯಮೇಲೆ ಎಗ್ಮೋರು ಬೇಂಚ್ ಕೋರ್ಟಿನವರು ತಾ 18ರಲ್ಲು ಒಂದು ರೂಪಾಯಿ ಜುರುಮಾನೆ ವಿಧಿಸಿದರು.

ಪಟ್ಲ ಗ್ರಾಮದ ಅಬ್ದುಲ್ಲ ಮತ್ತು ಅಂದುಬ್ಯಾರಿಯೆಂಬವನನ್ನು ಆರೂರು ಗ್ರಾಮದ ರುಗ್ಮಣಿ ಅಮ್ಮನಲ್ಲಿ ನಡೆದ ಕಳವಿನ ಮೊಕದಮೆಯಲ್ಲಿಯೂ, ಅಂಗಾಡಿಪುರಂ ಮಮ್ಮದೆ ಮತ್ತು ಮಂಮುಂಞ ಯೆಂಬವರನ್ನು ಕೂಡ್ಲು ಗ್ರಾಮದ ಅಪ್ಪೋಕ್ಕೆಬ್ಯಾರಿಮನೆಯಲ್ಲಿ ನಡೆದ ಕಳವಿನ ಮೊಕದಮೆಯಲ್ಲಿಯೂ ಅಂದುಂಞಬ್ಯಾರಿಯೆಂಬವನನ್ನು ಬದಿಯಡ್ಕದಲ್ಲಿ ಗಾಡಿಯಿಂದ ತೆಂಗಿನಕಾಯಿಯ ಗೋಣಿಯನ್ನು ಕಳವುಮಾಡಿದ ಮೊಕದಮೆಯಲ್ಲಿಯೂ ಸಾಹಸಿಕರಾದ ಇಲ್ಲಿಯ ಸಬ್ ಇನಸ್ಪೆಕ್ಟರ್ ಶ್ರೀ ಲಕ್ಷ್ಮಣನವರು ಹಿಡಿದು ರಿಮಾಂಡಿನಲ್ಲಿಟ್ಟಿರುವುದು ಅತ್ಯಂತ ಶ್ಲಾಘನೀಯವಾಗಿದೆ.

ಕಳೆದವಾರ ಈ ಪಟ್ಟಣಕ್ಕೆ ಒಳಪಟ್ಟ ಆನೇಬಾಗಿಲು ಎಂಬ ಸ್ಥಳದಲ್ಲಿ ಸುಮಾರು 40ವರ್ಷ ಪ್ರಾಯಭರಿತಳಾದ ಒಬ್ಬ ಮುಹಮ್ಮದೀ ಸ್ತ್ರೀಯು ಉಗ್ರ ವಿಷಜಂತುವಾದ 'ಪೀಳ್ಯನಾಗ' ಎಂಬ ಹಾವಿನ ಕಡಿತದಿಂದಾಗಿ ಮರಣೋನ್ಮುಖಳಾಗಿದ್ದಳು. ಕೂಡಲೇ ಡಿ. ಬೊ. ವಿಷವೈದ್ಯ ಉದ್ಯೋಗಸ್ಥರಾದ ಮಿಸ್ಟರ್ ಕುಂಞರಾಮನ್ ವೈದ್ಯರನ್ನು ಕರತರಿಸಿ, ಸದ್ರೀಯವರ ಚಿಕಿತ್ಸೆಯ ಫಲವಾಗಿ ಅವಳು ಮಿಂಚುವೇಗದಿಂದ ಗುಣಹೊಂದಿ ಈಗ ಸೌಖ್ಯದಲ್ಲಿದ್ದಾಳೆ. ನೆರೆಯವರೆಲ್ಲರೂ ವೈದ್ಯರ ಸಾಹಸವನ್ನು ಕೊಂಡಾಡುತ್ತಾರೆ.

ಹಿರಿಯಡಕ:—ತಾ13-9-36ನೇ ರವಿವಾರ ಪ್ರಾತಃಕಾಲ ಘಂಟೆ 9ಕ್ಕೆ ಆರ್ಯಸಮಾಜ ಮಂದಿರದಲ್ಲಿ ಪಂಚಾಯತ ಸಭೆಯು ಜರಗಿ ಚಾಲ್ತಿ ವರ್ಷಕ್ಕೆ ಪಂಚಾಯತ ಮೆಂಬರರನ್ನು ಚುನಾಯಿಸಲಾಯಿತು. ಮ. ರಾ. ಅಂಜಾರು ರಾಮಣ್ಣ ಹೆಗ್ಡೇರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಒಂದು ವಾಚನಾಲಯವನ್ನು ಕೂಡಲೇ ತೆರಿಯಬೇಕಾಗಿಯೂ ನಿರ್ಣಯಿಸಲಾಯಿತು.

ಎಡನೀರು:—ಇಲ್ಲಿಯ ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ತಾ. 8-9-36 ರಲ್ಲು ಶ್ರೀಕೃಷ್ಣಜಯಂತಿ ಉತ್ಸವವು ರಾ. ಕೆ. ಗಣಪ್ಪಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಭಾಷಣ, 'ಇಂದಿರಾವಿಜಯ' ಎಂಬ ನಾಟಕ ಪ್ರದರ್ಶನ, ಶಾಲಾಬಾಲಕಿಯರ ಕೋಲಾಟಗಳೂ ನಡೆದವು.

ಶ್ರೀ ವಿವೇಕಾನಂದ ಸೇವಾಸಂಘ ನಿಂಜೂರು:—ಇಲ್ಲಿ ತಾ.6-9-36ನೇ ಕುಜವಾರ ಶ್ರೀಕೃಷ್ಣ ಜನ್ಮ ದಿನಾಚರಣೆಯು, ಶ್ರೀಮಾನ್ ಬಾಜಶೆಟ್ಟಿ ಅಂತಯ್ಯಸೆಟ್ಟರವರ ಅಧ್ಯಕ್ಷತೆಯಲ್ಲಿ ಬಹುವಿಜೃಂಭಣೆಯಿಂದ ಜರಗಿತು. ಈ ಸಂದರ್ಭದಲ್ಲಿ ಭಾಷಣ ನಾಟಕಾದಿಗಳಿದ್ದವು.

ಕುಂದಾಪುರ:—ಇಲ್ಲಿಯ ಹೊಸವಕೀಲರಾದ ಶ್ರೀಯುತ ಕೊಕ್ಕೈಬೈಲು ಸಂಜೀವ ಶೆಟ್ರು ಬಿ. ಎ. ಎಲ್. ಎಲ್. ಬಿ ಇವರು ಈಗ ಕೋರ್ಟಿಗೆ ಹೋಗತೊಡಗಿರುವರು. ಈ ತರುಣ ವಕೀಲರು ಕೈಕೊಂಡ ಉದ್ಯೋಗದಲ್ಲಿ ಜಯಶೀಲರಾಗಲೆಂದು ನಾವು ಆಶಿಸುವೆವು.

ಇದೇ ತಾ. 18-9-36ನೇ ಶುಕ್ರವಾರ ಸಾಯಂ ಘಂಟೆ 6-30ಕ್ಕೆ ನರಿಬೇಣ ಮೈದಾನಿನಲ್ಲಿ ಶ್ರೀ. ಕೆ. ಎಲ್. ಭಂಡಾರರು ವಕೀಲ್ ಇವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆ ಜರಗಿತು. ಆವಾಗಲೇ ಇಲ್ಲಿಗೆ ಚಿತ್ತೈಸಿರುವ ಕಾಂಗ್ರೆಸು ಧುರೀಣರಾದ ಶ್ರೀಮತಿ ಕಮಲಾದೇವಿ, ಶ್ರೀ ಆರ್. ಎಸ್. ಹುಕ್ಕೇರಿಕರ್, ಶ್ರೀ ಡಾಕ್ಟರ್ ಎನ್. ಎಸ್. ಹರ್ಡಿಕರ್ ಇವರು. ಕಾಂಗ್ರೆಸು ಚುನಾವಣೆಯ ರಂಗಕ್ಕಿಳಿದ ಕಾರಣ ಜನತೆಯು ಓಟರರು ಕೈಕೊಳ್ಳಬೇಕಾದ ನೀತಿ, ಕಾಂಗ್ರೆಸಿನ ಧ್ಯೇಯ, ಇವನ್ನು ಸಕಾರಣವಾಗಿ ವಿವರಿಸಿ ನಾಳೆ ನಡೆಯಲಿರುವ ಕೌನ್ಸಿಲು ಎಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸು ಉಮೇದ್ವಾರರಿಗೆ ಎಲ್ಲರೂ ಓಟುಕೊಟ್ಟು ಆರಿಸಬೇಕು. ಎದುರಾಳಿಗಳು ತೋರಿಸುವ ಆಸೆ, ಮಾಡುವ ವಂಚನೆಗಳಿಗೆ ಗಮನಕೊಡದೆ ನಮ್ಮ ದೇಶೋದ್ಧಾರದ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸಿನ ಕೀರ್ತಿಯನ್ನು ಎತ್ತಿ ಹಿಡಿದು ದೇಶದ ಪ್ರೀತಿಗೆ ಪಾತ್ರರಾಗಬೇಕೆಂದು ಆಗ್ರಹಪೂರ್ವಕ ವಿನಂತಿಸಿದರು.

NOTICE.

The public is hereby requested to take note that, I, Sagri Karanth Sitharama Bhat, son of Sagri Karanth Narasimha Bhat will sign from this date onwards as S. S. Karanth. My name however shall run as Sagri Karanth Sitharama Bhat.

Udipi
14-8-1936 }

S. S. Karanth.

NOTICE.

South Canara Flood Relief Fund.

Mangalore, South Canara District (1923-24)

In view of the acute distress and suffering caused to a large number of Arecanut cultevators in this District, the Executive Committee of the above Fund has resolved, subject to there being no objection from the subscribers to the Fund, to divert a portion of the balance of the above Fund (now standing at Rs. 5,367—5—8) to the relief of the above mentioned distress and suffering. It is requested that the subscribers to the above Fund or their legal representatives may intimate to the undersigned **by 1st November 1936** if they have any objection to the aforesaid diversion and also to intimate if they have any objection to change the name and object of the Fund from "South Canara Flood Relief Fund" to "Distress Relief Fund".

(By order of the Committee)

U. Ananda Rau,
Honorary Secretary,
South Kanara Flood Relief Fund & Retired Agent,
Imperial Bank of India, *Mangalore, S. C.*

12-9-1936

ನಾರದನ ತಂಬೂರಿ

ನರ ನಾರಾಯಣ! ನರನಾರಾಯಣ!! ಟುಂ, ಟುಯಿಂ. ಟುಂಯಿ, ಟುಂಯಿ, 'ಮುನಿವರರಿದ್ದರು ಹಿಂದಿನ ಯುಗದಲಿ! ಮುನಿವನರಿರುವರು ಕಲಿಯುಗದಿ !! ಘುಂಯಿ-ಘುಂಯಿ-ಘುಂಯೀ!! ನರ ನಾರಾಯಣ! ನಾರದ ಮಹರ್ಷಿಗಳ ಆಗಮನವಾದುದು ಗೊತ್ತಾಯಿತಲ್ಲ. ಮೊನ್ನೆ ನಮ್ಮ ಜಮದಗ್ನಿ ಬಂದುದನ್ನೂ ವರ್ತಕ ಧುರೀಣದಲ್ಲಿ ಕಂಡಿದ್ದೀರಲ್ಲ! ನಾವು ಆ ಯುಗದಲ್ಲಿ 'ಮುನಿವರರು ಆಗಿದ್ದೆವು. ಮಧ್ಯದಲ್ಲಿ ಒಂದು ಪ್ರಳಯ ಬಂತು ನೋಡಿ. ಅದರಲ್ಲಿ ಗುಳವ್ವನೆ ನಮ್ಮದೊಂದು 'ರ' ಅಕ್ಷರವುಳುಗಿ ಹೋಗಿ ಈಗ ನಾವು 'ಮುನಿವರು' ಆಗಿದ್ದೇವಯ್ಯ! ಗ್ರಹಚಾರ (ಗರ್ದಿ) ದೋಷ! ನರ ನಾರಾಯಣ!

* * * * * *

ಜಮದಗ್ನಿ ರಾಯರು 'ಕೊಂಗ್ರೆಸ್ ಪಂಚಕಜ್ಜಾಯ'ವನ್ನು ಮುಂದಿಟ್ಟುಕೊಂಡು ಭಾರೀ ಜಪಮಾಡಿ ಬಿಟ್ಟಿದ್ದಾರೆ! ಕೊಂಗ್ರೆಸು 'ಪಂಚಕಜ್ಜಾಯ'ವನ್ನು ಕೊಡುವದಾದರೆ ಒಂದು ಕೈನೋಡೋಣವೆಂಬ ಮನಸ್ಸು ನನಗೂ ಇತ್ತು; ಆದರೆ ಅದು ಪಂಚಕಜ್ಜಾಯದ ಬದಲಿಗೆ 'ಪಚ್ಚೆಕರೀಕಷಾಯ' (ಹ್ವಲು ಸಾರು) ವನ್ನು ಕೊಟ್ಟಿತು! ನಾವು ಮುನಿಗಳೆಂದರೆ ತೀರ್ಥಪ್ರಸಾದ ಕೈಕೊಳ್ಳುವವರು! ಕೇಳಿ ಮಾನವರೆ! ಆ ಕಷಾಯದ ವಾಸನೆ ನಮ್ಮ ಪ್ರಕೃತಿಗೆ (ನಮಗಲ್ಲ) ಒಗ್ಗುವದಿಲ್ಲ; ಊಹೂಂ!! ಪಂಚಕಜ್ಜಾಯ ನೀಯುತ್ತಿದ್ದರೆ ನಾವು ಕಾಂಗ್ರೆಸನ್ನು ಬಿಡುತ್ತಿದ್ದೆವೆ? ನಾರದನ ಮಾತು ಹೌದೋ ನೋಡಿ ಟುಂಯಿ, ಟುಂ, 'ಅಹುದಾದರಹುದೆನ್ನಿ ! ಅಲ್ಲವಾದರಲ್ಲವೆನ್ನಿ !! ಟುಂಯಿ-ಟುಂಯಿ! ನರ ನಾರಾಯಣ!

* * * * * *

ಜಮದಗ್ನಿ ಮಹಾಮುನಿಗಳು ರಿಪೋರ್ಟು ಮಾಡಿದ್ದನ್ನೊಮ್ಮೆ ನೋಡಿ ಬಿಡಿ ಮಾನವರೆ! ಎಷ್ಟು ಪಸಂದಾಗಿದೆ!! ಅವರಿಗೆ ಕೊಂಗ್ರೆಸಿನಲ್ಲೊಂದು ಮೆಂಬರಿಕೆ, ವರ್ಕಿಂಗ್ ಕಮಿಟಿ ಪಾರ್ಲಿಮೆಂಟರಿಬೋರ್ಡು, ಓಟಿನ ಹಕ್ಕು, ಡಿಸ್ಸಿಪ್ಲೀನ್, ಧುರೀಣರು ಮೊದಲಾದ ಕಟ್ಟುಕಟ್ಟಳೆಗಳ ರಗಳೆಯನ್ನು ಕೇಂಡರಾಗುವುದಿಲ್ಲ. ಅಲ್ಲವೆ ಮತ್ತೆ? ಮನಸ್ಸು ಬಂದಾಗ ಕೊಂಗ್ರೆಸಿಗೆ ಸೇರುವಂತಾಗ, ಬೇಕು—ಮನಸ್ಸು ಹೋದಾಗ ಅಲ್ಲಿಂದ ಜಾರುವಂತಾಗಬೇಕು; ಉಮೇದು ಎಪ್ಪಾಗ ಪ್ರಲು ಸೇರುವಂತಾದರೆ ಹೊಟ್ಟೆನೋವು ಎದ್ದಾಗಲೇ ಅಲ್ಲಿಂದ ಜಾರುವಂತಾಗಬೇಕು! ಹಾಗಿರುತ್ತಿದ್ದರೆ ನಾವು ಇಷ್ಟಿಷ್ಟು ದೊಡ್ಡ ಮಹರ್ಷಿಗಳು ಕೊಂಗ್ರೆಸನ್ನು ಬಿಟ್ಟುಹಾಕುತ್ತಿದ್ದೆವೆ? ನಾರದನ ಮಾತು ಹೌದೋ ನೋಡಿ 'ಅಹುದಾದರಹುದನ್ನಿ! ಅಲ್ಲವಾದರಲ್ಲವೆನ್ನಿ !! ನರ ನಾರಾಯಣ! ನರ ನಾರಾಯಣ!!

* * * * *

ಮಹಾರಾಷ್ಟ್ರದಲ್ಲಿ ನಮ್ಮಂತಹ ಕೆಲವು ಮಹರ್ಷಿಗಳಿದ್ದಾರೆ ಮಾನವರೆ! ಶ್ರೀ. ಕೇಳ್ಕರರೇ ಮೊದಲಾದವರು ಅವರಿಗೆ ನಾರದ ಜಪವಿಲ್ಲ-ಮಂತ್ರವಿಲ್ಲ. ಇದ್ದ ಮಂತ್ರಗಳನ್ನೆಲ್ಲಾ ಹೇಳಿ ಹೇಳಿ ಕೊಂಗ್ರೆಸನ್ನು ಒಲಿಸುವದೇ' ಅವರ ನಿತ್ಯಕರ್ಮ ನೋಡಿ. ಅವರಲ್ಲಿ ಮೊನ್ನೆ ಆಣೆಯವರೊಬ್ಬರು ಆ ಜಪೋಚ್ಚಾರಣೆಯನ್ನು ಕೇಳಲಿಕ್ಕೆ ಸಾಧ್ಯವಿಲ್ಲದೆ ರಾಜೀನಾಮೆ ಕೊಟ್ಟು ಗೃಹಸ್ಥಾಶ್ರಮ ಕೈಕೊಂಡಿದ್ದಾರೆ; ಈಗವರು ಸದ್ಗೃಹಸ್ಥರಾದಂತಾಯಿತು. ಅಂತೂ ಜಮದಗ್ನಿ ಮುನಿಗಳ ಪುಣ್ಯವಷ್ಟೆ. ಅವರ ರಿಪೋರ್ಟು ಮಾನೆಗೂ ಹೋಗಿದ್ದರೆ ಖಾಲಿಬಿದ್ದ ಆಸನದಲ್ಲಿ ಖಂಡಿತವಾಗಿಯೂ ಅವರನ್ನು ಕೂಡ್ರಿಸುತ್ತಾರೆ ನೋಡಿ. ಅಲ್ಲಿ ಕಟ್ಟು ಕಟ್ಟಳೆಗಳ ರಗಳೆಯಿಲ್ಲ. ರಗಳೆಯ ಕಟ್ಟು ಕಟ್ಟಳೆ ಮಾತ್ರವಿದೆ!! ಇನ್ನೊಂದು ಸೊಲ್ಲು ಪದ ಕೇಳಿ—ಘುಂಯಿ, ಘುಂಯಿ, ಎಟಕದ ದ್ರಾಕ್ಷೆಯ ಗೊಂಚಲು ಹುಳಿ ಹುಳಿ!! ಪಟಿಸುಡಿಯನು ನಾರದ ನೋಡಿ!!! ನರ ನಾರಾಯಣ!!

* * * * * *

ಮದ್ರಾಸಿನ ಮಂತ್ರಿಗಳಾದ ಶ್ರೀ ಪಿ. ಟಿ. ರಾಜನರು ಒಂದಾನೊಂದು ದಿನ ಉಡುಪಿಗೆ ಬರುವಾಗ ಅವರಿಗೆ ಮಾನ—ಪತ್ರ ಕೊಡುವದು ಬೇಡವೆಂದು ಇಲ್ಲಿಯ ನಗರ ಸಭೆಯು ನಿರ್ಧರಿಸಿದೆ. ಪತ್ರವನ್ನು ಕೊಟ್ಟರೂ ಬಿಟ್ಟರೂ ಒಂದೆ; ಮಾನವನ್ನು ಮಂತ್ರಿಗಳಿಗೆ ಕೊಟ್ಟು ಕಳಕೊಳ್ಳದೆ ಉಳಿಸಿಕೊಂಡರಲ್ಲಾ-ಎಂದು ನಗರ ಸಭೆಯವರಿಗೆ ನನ್ನದೊಂದು ಥೇಂಕ್ಸ್! ಇನ್ನೊಂದು ಸೊಲ್ಲು ಪದಕೇಳಿ. ತಂಬೂರಿ ಸರಿಮಾಡಿಕೊಳ್ಳುತ್ತೇನೆ. ಟುಂಯಿ, ಟುಂಯಿ-ಘುಂಯಿ, ಘುಂಯಿ. "ಬೇಡವಾದವರೊಡನೆ! ಬೇಡುವವ ಮಾನವನೆ? !! . ." ನರ ನಾರಾಯಣ! ನರ ನಾರಾಯಣ !!

* * * * * *

ಇನ್ನೊಂದು ನೂತನ ನ್ಯೂಸ್ ಕೇಳಿಬಿಡಿ; ಅದನ್ನು ಸರಿಯಾಗಿ ಕೇಳಿ ತೀರ್ಮಾನವನ್ನೂ ಹೇಳಿಬಿಡಿ! ಜಿಲ್ಲಾ ಬೋರ್ಡಿನಲ್ಲಿ ಕೊಂಗ್ರೆಸ್ ಮೆಂಬರರಾಗಿದ್ದವರು ಮುನಿಸಿಪಾಲಿಟಿಯಲ್ಲಿ ಜಸ್ಟೀಸ್ ಮೆಂಬರರಾಗಿರಬಹುದೊ? ಬಹುಶಃ ಆಗಬಹುದೆಂದು ತೋರುತ್ತದೆ. ಜಸ್ಟೀಸ್ ಮಂತ್ರಿಗಳಾದ ಶ್ರೀ. ರಾಜನರಿಗೆ ಮಾನಪತ್ರ ಕೊಡುವ ಸೂಚನೆಯನ್ನು ಕಾಂಗ್ರೆಸ್ ಮೆಂಬರರೊಬ್ಬರು ಅನುಮೋದಿಸಿದ್ದರು! ನೀವೆಲ್ಲಾ ಪೇಪರ್ ಓದುವದುಂಟಲ್ಲ; ಮೊನ್ನೆ ಒಂದು ಪೇಪರಿನಲ್ಲಿ ಬಂದಿತ್ತು-28 ವರ್ಷದ ತರುಣನು ಇತ್ತೀಚೆಗೆ ಹೆಣ್ಣಾಗಿ ಒಂದು ಮಗುವನ್ನು ಹೆತ್ತಿದ್ದಾನಂತೆ! ಗಂಡು ಹೆಣ್ಣಾಗುತ್ತದಂತೆ; ಕೊಂಗ್ರೆಸ್ ಜಸ್ಟೀಸಾಗಬಾರದೇಕೆ? ಹೌದೋ ನೋಡಿ! ಇದೇನಯ್ಯ-ಹೊಟ್ಟೆಯೊಳಗಿಂದ-ಒಂದು ಪದ್ಯವು ಮೇಲಿಮೇಲೆ ಬರುತ್ತಿದೆ; ಬಾಯಿಗೆ ಬಂದಾಯಿತು:—ಧ್ಯೇಯ ದೊಡ್ಡೇನುಂಟು? ಕುರ್ಚಿ ತಗಣೆಯನಂಟು ಹಾಯಾಗಿ ಕುಳಿತವನೆ! ರಾಯನ್ನೆ ಮನುಜ!! ಘುಂಯೂ, ಘುಂಯಿ, ಘುಂಯಿ, ಘುಂಯೂ! ನರ ನಾರಾಯಣ!

ನನಗೇನಾದರೂ ಕಂಡದ್ದನ್ನು ಕಂಡಂತೆಯೇ ಹೇಳಿಬಿಡುವ ಅಭ್ಯಾಸ; ಹಾಗೆ ಮಾಡದಿದ್ದರೆ ಹೊಟ್ಟೆಯುಬ್ಬರಿಸುವ ರೋಗವಿತ್ತು ನೋಡಿ—ಅದಿನ್ನೂ ಗುಣವಾಗಲಿಲ್ಲ! ಇಂಥಾ ರೋಗವೀಗ ಕೆಲವು ಮೆಂಬರರಲ್ಲಿ ತಲೆದೋರಲಿಕ್ಕಾರಂಭಿಸಿದೆ; ಅವರಿಗೂ ಸುಮ್ಮನೆ ಕೂತರೆ ಹೊಟ್ಟೆಯುಬ್ಬರಿಸುತ್ತದಂತೆ; ಬಿದ್ದರಿಂದ ಏನಾದರೂ ಬಂದರೆ ಎದ್ದು ನಿಂತು ಅನುಮೋದನೆ ಮಾಡಿಬಿಡುವದು! ಇನ್ನು ಕೆಲವರ ರೀತಿ ಉಲ್ಟಾ:—ಅವರಿಗೆ ಎದ್ದು ನಿಂತೊಡನೆ ಹೊಟ್ಟೆಯುಬ್ಬರಿಸುವದುಂಟು; ಆದಕ್ಕಾಗಿಯೇ ಅವರು ಏನು ಬಂದರೂ 'ನ್ಯೂಟ್ರಲ್'! ಅಂತೂ ಈ ಕಾಲದಲ್ಲಿ ಹೊಟ್ಟೆಯುಬ್ಬರಿಸುವ ರೋಗವೇ ಬಲವಾದುದಯ್ಯಾ! ಈಗ ಹೋಗಲೆ? ಟುಂಯಿ, ಟುಂಯಿ-ಡುಂಯಿ, ಡುಂಯಿ—ಡುಂಯಿ, ಡುಂಯಿ-ಟುಂಯಿ, ಟುಂಯಿ! ನರಳದೆ ಹೊರಳದೆ ದೇರದ ಹಿತದಲಿ! ನರ ನಾರಾಯಣ ಎನಬೇಕು !! ನರನಾರಾಯಣ! ನರ ನಾರಾಯಣ!!

—ನಾರದ

ಮುಂದಿನ ಚುನಾವಣೆಗಳು.

ಮುಂಬರುವ ಅಸೆಂಬ್ಲಿ ಕೌನ್ಸಿಲುಗಳಿಗೆ ನಿಲ್ಲಲಿಚ್ಛಿಸುವ ಕಾಂಗ್ರೆಸ ಹುರಿಯಾಳುಗಳು ಪ್ರಾಂತಿಕ ಪಾರ್ಲಿಮೆಂಟರೀ ಬೋರ್ಡಿಗೆ ಅರ್ಜಿ ಕೊಡುವ ಕೊನೆಯ ತಾರೀಖು ೩೦-೯-೩೬ ಇರುವುದು. ತಮ್ಮ ಕಡೆಗೆ ಬಂದ ಅರ್ಜಿಗಳನ್ನು ವಿಚಾರಿಸಿ ಅವುಗಳ ಬಗ್ಗೆ ತಮ್ಮ ಶಿಫಾರಸುಗಳನ್ನು ಬರೆದು ಪಾರ್ಲಿಮೆಂಟರೀ ಕಮಿಟಿಯವರು ಮಧ್ಯವರ್ತಿ ಕಮಿಟಿಯವರಿಗೆ ಕಳಿಸತಕ್ಕವರಿದ್ದಾರೆ, ಮಧ್ಯವರ್ತಿ ಕಮಿಟಿಯವರೇ ಕೊನೆಯ ನಿರ್ಣಯವನ್ನು ಕೊಡತಕ್ಕವರು.

ನಿಲ್ಲಲಿಚ್ಛಿಸುವ ಪ್ರತಿಯೊಬ್ಬ ಕಾಂಗ್ರೆಸ ಹುರಿಯಾಳಿಗೆ ಸಂಪೂರ್ಣ ಅವಕಾಶವಿರಬೇಕು ಹಾಗೂ ನಿಲ್ಲಬೇಕೆಂಬ ಅವರ ಇಚ್ಛೆಗೆ ಯಾವ ತಡೆ ಇರಕೂಡದೆಂದು ಸರ್ವರಿಗೂ ತಿಳಿಯುವಂತೆ ಪಾರ್ಲಿಮೆಂಟರೀ ಕಮಿಟಿಯವರು ಮೊದಲಿನಿಂದಲೇ ಎಲ್ಲ ಪತ್ರಿಕೆಗಳಲ್ಲಿ ಪ್ರಕಟನೆಗಳನ್ನು ಕೊಟ್ಟಿರುವರು. ಆದುದರಿಂದ ಯಾವದೇ ವ್ಯಕ್ತಿಗಳ ಅಥವಾ ಗುಂಪುಗಳ ಅಭಿಪ್ರಾಯವನ್ನು ಅವಲಂಬಿಸಿ ಹುರಿಯಾಳಾಗಲಿಚ್ಛಿಸುವ ಯಾವುದೇ ಕಾಂಗ್ರೆಸ ಸಭಾಸದನು ಅರ್ಜಿಮಾಡುವುದು ಇಲ್ಲವೇ ಮಾಡದಿರುವದು ಅಯೋಗ್ಯವಾಗುವದು.

ಹುರಿಯಾಳುಗಳ ಶಿಫಾರಸುಮಾಡಿ ಮುಂದೆ ಹೆಸರುಗಳನ್ನು ಕಳಿಸುವ ಪೂರ್ಣ ಹೊಣೆಗಾರಿಕೆಯು ಇಡೀ ಪಾರ್ಲಿಮೆಂಟರೀ ಕಮಿಟಿಯ ಮೇಲೆ ಇದೆ ಹೊರತು ಅದರಲ್ಲಿಯ ಯಾವದೇ ವ್ಯಕ್ತಿಯ ಅಥವಾ ಗುಂಪಿನ ಮೇಲೆ ಇಲ್ಲ. ಪ್ರತಿಯೊಬ್ಬ ಹುರಿಯಾಳುತನದ ಬಗ್ಗೆ ಆ ಪಾರ್ಲಿಮೆಂಟರೀನ ನಿರ್ಣಯವನ್ನು ಪಡೆಯಲಿಚ್ಛಿಸಬೇಕೇ ಹೊರತು ಆ ಬೋರ್ಡಿನಲ್ಲಿಯ ಇಲ್ಲವೇ ಹೊರಗಿನ ಯಾವದೇ ದೊಡ್ಡ ಇಲ್ಲವೇ ಸಣ್ಣ ವ್ಯಕ್ತಿಯ ಅಭಿಪ್ರಾಯವನ್ನು ಅವಲಂಬಿಸಿ ತಣ್ಣಗೆ ಕೊಡತಕ್ಕದ್ದಲ್ಲ ಪಾರ್ಲಿಮೆಂಟರೀ ಕಮಿಟಿಗೆ ಅರ್ಜಿಮಾಡದೇ ಇತರರ ಅಭಿಪ್ರಾಯಗಳನ್ನೇ ಕೇಳಿಕೊಂಡು ವರ್ತಿಸಿದರೆ ಅದರ ಹೊಣೆಯು ಆಯಾ ಹುರಿಯಾಳು ಮೇಲೆಯೇ ಹೊರತು ಕಾಂಗ್ರೆಸ್ಸಿನ ಸಂಸ್ಥೆಯ ಮೇಲೆ ಇಲ್ಲವೇ ಪಾರ್ಲಿಮೆಂಟರೀ ಕಮಿಟಿಯ ಮೇಲೆ ಇಲ್ಲ ಎಂಬದನ್ನು ನಾವು ಲಕ್ಷ್ಯದಲ್ಲಿಡತಕ್ಕದ್ದು. ಮುಂದೆ ಮಧ್ಯವರ್ತಿ ಪಾರ್ಲಿಮೆಂಟರೀ ಕಮಿಟಿಯವರು ಯಾವದೇ ನಿರ್ಣಯ ಮಾಡಿದರೂ ಅದರಂತೆ ನಡೆದುಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅವರು ಹಲವು ಅರ್ಜಿಗಳನ್ನು ಮಂಜೂರು ಮಾಡಿದ್ದರೂ ಆ ಬಗ್ಗೆ ಕಿಂಚಿತ್ತಾದರೂ ಮನಸ್ತಾಪಮಾಡಿಕೊಳ್ಳದೇ ಆಯಾ ಹುರಿಯಾಳುಗಳು ನಿರುತ್ಸಾಹರಾಗದೇ ಕಾರ್ಯವನ್ನು ಮಾಡುತ್ತಾ ಹೋಗಬೇಕು. ನಮ್ಮಲ್ಲಿ ಸ್ನೇಹ ಸೌಹಾರ್ದಗಳು ಬೆಳೆಯಬೇಕಾದರೆ ಇದೇ ಬಗೆಯ ಮನೋವೃತ್ತಿಯು ಕೆಲಸಗಾರರಲ್ಲಿ ಹೆಚ್ಚಾಗುವದು ಅವಶ್ಯವೆಂದು ನಂಬಿಗೆ ಇದ್ದ ಮೂಲಕ ಈ ಮಾತುಗಳನ್ನು ಈಗ ಹೇಳುವದು ಅವಶ್ಯ ಮತ್ತೂ ಉಚಿತವೆಂದು ಈಗ ಇಲ್ಲಿ ಸ್ಪಷ್ಟವಾಗಿ ಹೇಳಿದ್ದಾಗಿದೆ.

ಹೊಸಮನಿ ಸಿದ್ಧಪ್ಪ.
ಅಧ್ಯಕ್ಷ.
ಕ. ಪ್ರಾಂ. ಕಾಂ. ಕಮಿಟಿ.

ಜಯಕರ್ನಾಟಕದ ಚಂದಾದಾರರಿಗೆ

ಈ ವರ್ಷವು ಅತ್ಯಂತ ಲಾಭಕರ!

ಎರಡು ತಿಂಗಳಿಗೊಮ್ಮೆ ತ್ರಿವರ್ಣ ಚಿತ್ರವನ್ನು ಕೊಡಲಾಗುವುದು.
ಪ್ರತಿ ಸಂಚಿಕೆಯೂ ನಯನಮನೋಹರ ಚಿತ್ರಗಳಿಂದ ತುಂಬಿರುವುದು.

ರಾಜರಹಸ್ಯ

ಎಂಬ ಪ್ರಣಯ-ಸಾಹಸ-ಶೌರ್ಯಾದಿ ಸನ್ನಿವೇಶಗಳಿಂದಲೂ ಅದ್ಭುತರಮ್ಯವಾದ ಘಟನೆಗಳಿಂದಲೂ ಅಕಲ್ಪಿತ ಸುತ್ತುಸುರುಳಿಯ ಸಂವಿಧಾನಕದಿಂದಲೂ ಚಿತ್ತರಂಜಕವಾದ ಕಾದಂಬರಿಯು ಇದೇ ಜನವರಿ ಸಂಚಿಕೆಯಿಂದ ಧಾರಾವಾಹಿಯಾಗಿ ಬರುತ್ತಿದೆ.
ಲೇಖನಗಳ ವೈವಿಧ್ಯವನ್ನೂ ವೈಪುಲ್ಯವನ್ನೂ ಹೆಚ್ಚಿಸಲು ವಿಶೇಷವಾಗಿ ಗಮನ ಕೊಡಲಾಗಿದೆ

ಆದುದರಿಂದ

ಹೊಸದಾಗಿ ಚಂದಾದಾರರಾಗುವವರು—ಯಾವ ತಿಂಗಳಲ್ಲಿಯೆ ಆಗಲಿ ಹಿಂದಿನ ಸಂಚಿಕೆಗಳನ್ನೆಲ್ಲ ತರಿಸಿಕೊಂಡು—ವರ್ಷಾರಂಭದಿಂದಲೇ ಆಗಬೇಕು. ಹಾಗು ಈಗಿದ್ದ ಚಂದಾದಾರರಲ್ಲಿ ವರ್ಷ ಮಧ್ಯದಲ್ಲಿ ಅವಧಿ ಮುಗಿಯುವವರು ಮುಂದೆಯೂ ಚಂದಾದಾರರಾಗಿ ಉಳಿಯಬೇಕು ಇಲ್ಲದಿದ್ದರೆ ಅಪೂರ್ವವಾದ ಕಾದಂಬರಿಯು ಅಪೂರ್ಣವಾಗಿ ಅವರಿಗೆ ಅಸಮಾಧಾನವನ್ನುಂಟುಮಾಡೀತು.

ವಾರ್ಷಿಕ ಚಂದಾ ರೂ. ೫—೮—೦

ಜಾಹೀರಾತಿನ ದರಗಳಿಗೂ ಇತರ ಮಾಹಿತಿಗಳಿಗೂ ಬರೆಯಿರಿ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

— ನಾಯಕ್ ಬ್ರದರ್ಸರ —

ಶ್ರೀ ಮಧ್ವವನೇಂದ್ರ ಮಹೌಷಧಾಲಯ,

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ಕಟಪಾಡಿ, ದ. ಕನ್ನಡ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!!

ವೃದ್ಧಿಕಾಸವ (ಸಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಚಂದ್ರಮಸ್ (ವಾಂತಿಭೇದಿಗೆ ಅನುಭವಸಿದ್ಧ ಔಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಹೆಚ್ಚಿನ ಮಾಹಿತಿಗೂ ಕಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮಧ್ವವನೇಂದ್ರ ಮಹೌಷಧಾಲಯ,
ಕಟಪಾಡಿ, ದಕ್ಷಿಣ ಕನ್ನಡಾ ಜಿಲ್ಲ.



ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೇಳು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಯೂ ಕೊಡಲಾಗುವುದು

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರೆವ್ಯಾಪಾರಿ, ರಥಬೀದಿ ಉಡುಪಿ

ಸ್ತ್ರೀ ಮಲಯಾಳದ **ಸ್ತನೋ ಸ್ತೇಧಃ** ರಹಸ್ಯಗಳು

THE MALAYALA STHANO STHEDAH OUSHADHA CO.
Post-CHALAPURAM. MALABAR

ಇದೀಗತಾನೆ ಬಂದಿದೆ ಪುರುಷರನ್ನಾವುದು ಆಕರ್ಷಿಸುತ್ತದೆಂಬುದನ್ನು ಸ್ತ್ರೀಯರೀಗ ಒಬ್ಬರು ತೀವ್ರ ಪುರುಷನೊಬ್ಬನನು ಪರೀಕ್ಷಿಸಿ ನೋಡಿದ್ದಲ್ಲಿ, ಅತನ ಕಣ್ಣುಗಳು ಸ್ತ್ರೀಯ ಮುಖದಿಂದ ಕೆಳಗೆ ಕುಚಸ್ಥಳಕ್ಕೆ ಚಲಿಸಿ ಕುಚಗಳು ಉನ್ನತವಾಗಿ, ದಢಗೆ ಯೌವನಯುಕ್ತವಾಗಿ ಆಕರ್ಷಕ ವಾಗಿರುವವೋ ಎಂದು ನೋಡುವವು



೪೬ ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು

ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ತೇದಃ— ಅಶಕ್ತ, ಚಿಂತೆ, ಪ್ರಾಯ ಆಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷಕತೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಅಥವಾ ಬಹು ತಗ್ಗಾಗಿದ್ದರೆ, ಸರಿಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರದವಾದರೆ

ದಿ ಮಲಯಾಳ ಔಷಧ ಕಂಪನಿ, ಚಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದ ವಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವವು, ಯೌವ್ವನದ ತುಂಬು ಬರುವವು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವುವು ಸಡಿಲಾಗಿರುವ ಮಾಂಸವು ಸ್ಥಿರವಾಗುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವು ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಿಹೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲರಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು

ಸ್ತನಸ್ತೇಡ ನಂಬ್ರ 20—ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. ೩ ನಂಬ್ರ ೩೩ ಹೊರಗೂ ಉಪಯೋಗಕ್ಕೆ ರೂ ೩. ದರ್ಪಣದ ಕೆಳಗಿರುವ ಕೆಟಲಾಗಿಗೆ ದಯಮಾಡಿ ಬರೆಯಿರಿ.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ

ಮುಟ್ಟುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ

ಶಿಕ್ಷಣರಂಗ

ಮಕ್ಕಳನ್ನು ತಿದ್ದುವ ರೀತಿ

ನಾವು ನಮ್ಮ ಮಕ್ಕಳ ದೇಹ ಮತ್ತು ಮನಸಿನ ಬೆಳವಣಿಗೆಯಲ್ಲಿ, ವಿಚಾರಿಸಿ ಕೆಲಸಮಾಡುವ ಗೊಡವೆಗೆ ಹೋಗುವೆವೇ? ಇಲ್ಲ. ಆ ಕಷ್ಟಕ್ಕೆ ನಾವು ಯಾವಾಗಲೂ ಹಿಂದೆ. ಮಗುವು ಹುಟ್ಟಿದರೆ ಅದರ ಬೆಳವಣಿಗೆಗೆ ನಮ್ಮ ಹಿರಿಯರು ಮಾಡಿಟ್ಟ ರೀತಿ ನೀತಿಗಳಿವೆ; ಮಂತ್ರ ತಂತ್ರಗಳಿವೆ; ಉಡಿಗೆತೊಡಿಗೆಗಳಲ್ಲಿಯೂ ಹಿಂದಿನಿಂದಲೇ ಮಾಡಿಕೊಂಡು ಬಂದ ಕ್ರಮಗಳಿವೆ ಹಾಗೆಯೇ ಬೆಳೆದು ದೊಡ್ಡದಾದಮೇಲೆ ಉಣ್ಣಿಸಿ ತೊಡಿಸಿ ಊರ ಶಾಲೆಗೆ ಕಳುಹಿಸಿಕೊಟ್ಟರಾಯಿತು. ಅಲ್ಲಿ ಕಲಿಸುವ ಕೆಲಸವು ಉಪಾಧ್ಯಾಯರದಷ್ಟೆ. ಅವರಾದರೂ ತಂದೆ ತಾಯಿಗಳಿಗಿಂತ ಹೆಚ್ಚಿನ ಜವಾಬ್ದಾರಿ ವಹಿಸಿ ಕೆಲಸ ಮಾಡುವರೆಂದೂಹಿಸಿದರೆ ಹೇಗಾದೀತು! ಅವರು ಕಲಿಸುವುದಕ್ಕೂ ನಿಯಮಗಳಿವೆ; ಹೇಳುವ, ಕೇಳುವ ಮೇಲಧಿಕಾರಿಗಳಿದ್ದಾರೆ. ಆ ನಿಬಂಧನೆಗಳಿಗೆ, ಈ ಅಧಿಕಾರಿಗಳಿಗೆ ಸರಿ ಹೋಗುವಂತೆ ನಡಕೊಂಡರೆ ಸರಿ. ಹೀಗೆ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯನ್ನು ಮಾಡುವವರು ತೋರುವಿಕೆಗೆ ತಂದೆ ತಾಯಿ ಮತ್ತು ಉಪಾಧ್ಯಾಯರೆಂದಿದ್ದರೂ ನಿಜವಾದ ಕೆಲಸವು ಕ್ರಮನಿಯಮಗಳದ್ದಿರುತ್ತದೆ. "ಇದೇನಪ್ಪಾ ಗಡಿಬಿಡಿ? ಎಲ್ಲಾ ಸಂಗತಿಗಳನ್ನು ತಿರವು ಮುರವುಮಾಡುವದೊಂದೇ ಇವರಿಗೆ ಗೊತ್ತೇ ಹೇಗೆ?" ಎಂದು ನಮ್ಮಮೇಲೆ ಮುನಿಯಬೇಡಿರಿ. ನಾವೆಲ್ಲಾ ಸಾಮೂಹಿಕವಾಗಿ ಉಂಟಾಗುವ ಲಾಭನಷ್ಟಗಳನ್ನು ಸರಿಯಾಗಿಯೇ ಹಂಚಿತಿನ್ನಬೇಕಾಗಿದೆ. ಆದ್ದರಿಂದ ಸಮಾಜದಲ್ಲಿ ಒಳ್ಳಿತೇ ಹೆಚ್ಚಾಗಲೆಂದು ನಾವೆಲ್ಲರೂ ಅಪೇಕ್ಷಿಸಬೇಕಲ್ಲ. ಹಾಗೆ ಒಳ್ಳಿಯದಾಗಬೇಕಾದರೆ ಸರಿಯಾಗಿ ವಿಚಾರಮಾಡಿ ಕೆಲಸಮಾಡಬೇಕು. ಆದ್ದರಿಂದ ನಮ್ಮ ಈ ವಾದವು ತಪ್ಪೋ ಸರಿಯೋ ಎಂಬುದನ್ನು ವಿಚಾರಮಾಡಿಯೇ ನೋಡಿರಿ. ಮೊದಲಾಗಿ ಮಕ್ಕಳ ಕಡೆಗೆ ನಾವಿಡಬೇಕಾದ ಗಮನವನ್ನು ಪ್ರಸ್ತಾಪಿಸುತ್ತೇನೆ!

— ಮನೆಯಲ್ಲಿ —

"ಹುಟ್ಟುವಾಗ ಪಡಕೊಂಡು ಬಂದದ್ದು." ಎಂದು ನಾವು ಸೋಲಿನ ಕಾಲದಲ್ಲಿ ಉದ್ಗರಿಸುವದುಂಟಲ್ಲ. ಸಣ್ಣಪುಟ್ಟ ಅಂಗಾಂಗಗಳು ಮತ್ತು ಅಷ್ಟೇ ಸಣ್ಣದಾದ ಮನಸ್ಸು, ಇಷ್ಟನ್ನು ಬಿಟ್ಟರೆ ನಾವು ಹುಟ್ಟುವಾಗ ಏನನ್ನೂ ಪಡಕೊಂಡು ಬರುವುದಿಲ್ಲ. ಮಿಕ್ಕವುಗಳೆಲ್ಲ ಈ ಪ್ರಪಂಚದಲ್ಲಿಯೇ ದೊರೆತವುಗಳು. ಪರಿಸ್ಥಿತಿಯಿಂದ ತಂದೆ ತಾಯಿಗಳಿಂದ, ಗುರುವಿನಿಂದ, ಸ್ನೇಹಿತರಿಂದ ಪಡಕೊಂಡವುಗಳು. ನಮ್ಮ ಸುತ್ತುಮುತ್ತಲೂ ನಡೆಯುವ ಯಾವ ಕೆಲಸವಾದರೂ, ನಮ್ಮ ಗೋಚರಕ್ಕೆ ಬಂದಲ್ಲಿ ಅದರಿಂದ ಪರಿಣಾಮವಾಗದೆ ಹೋಗುವುದಿಲ್ಲ. ನಮಗೆ ಒಂದು ಕೆಲಸದೊಡನಿರುವ ಸಂಬಂಧ ಮತ್ತು ಆ ಕೆಲಸದ ಮಹತ್ವ ಇವು ದೊಡ್ಡನಿದ್ದರೆ ಪರಿಣಾಮವೂ ದೊಡ್ಡದಾಗುವುದು; ಲಕ್ಷ್ಯಿಸುವಷ್ಟಿಲ್ಲವಾದರೆ ಪರಿಣಾಮವು ಲಕ್ಷ್ಯಕ್ಕೆ ಬರಲಾರದು. ಪೂರ್ವ ಜನ್ಮದಿಂದ ಬಂದುದೆಂಬ ಕೀರ್ತಿಗೊಳಗಾಗುವ ಸಂಗತಿಗಳು ನಮ್ಮಲ್ಲಿ ಧಾರಾಳವಿವೆ. ಪೂರ್ವ ಜನ್ಮವೊಂದು ಉಂಟೋ ಇಲ್ಲವೋ ಎಂಬುದನ್ನು ನಾವಿಲ್ಲಿ ವಿಚಾರಿಸಲು ಕುಳಿತಿಲ್ಲ ಆದರೆ ಇಷ್ಟೊಂದು ಖಂಡಿತ ಲೋಕವು ಉಂಟಾದಂದಿನಿಂದ ಈ ವರೆಗಣ ಮಾನವ ವರ್ಗಕ್ಕೆ ದೊರೆತ ಎಲ್ಲಾ ಸುಖ ದುಃಖಗಳಿಗೂ, ಆಗಾಗಿನ ಕಾರಣಗಳೇ ಇದ್ದುವು. ಆ ಕಾರಣಗಳು ಬಹು ಸೂಕ್ಷ್ಮವಾಗಿದ್ದರೆ, ಇಲ್ಲವೆ ಮರೆತು ಹೋಗುವಷ್ಟು ಪುರಾತನದವಾಗಿದ್ದರೆ ಸಾಮಾನ್ಯರಿಗವರರ್ಥ ತಿಳಿಯದೆ ಸ್ವಲ್ಪ ಪೇಚಾಟವಾಗುತ್ತದೆ. "ಇದು ಪೂರ್ವ ಜನ್ಮದ ಫಲ" ಎಂದು ನಿರ್ಧರಿಸಿ ಬಿಟ್ಟರಾಯಿತು. "ಪೂರ್ವ ಜನ್ಮಕ್ಕೂ ಹೋಗಿ ಸರಿಮಾಡಿಕೊಂಡು ಬಾ" ಎಂದು ಯಾರೂ ಒತ್ತಾಯ ಮಾಡುವಂತಿಲ್ಲವಲ್ಲ! ಆದ್ದರಿಂದ ಈ ವಾದವು ಸೋಮಾರಿಗಳ ಸಂಪತ್ತು! ಸರಿ; ನಾವು ನಮ್ಮ ವಿಷಯ ಪ್ರತಿಪಾದನೆಯ ಪೀಠಿಕೆಯನ್ನು ಇಷ್ಟೂ ಉದ್ದಕ್ಕೆಳೆದು ಬಿಟ್ಟೆವು; ಪರಿಸ್ಥಿತಿಯಿಂದಲೇ ನಮ್ಮಮೇಲೆ ಪರಿಣಾಮ ಉಂಟಾಗುವುದೆಂಬುದನ್ನು ತಿಳಿಸುವುದಕ್ಕಾಗಿ ಹಾಗೆಮಾಡಬೇಕಾಯಿತು ಈ ಪರಿಣಾಮವಾದರೂ ಹೆಚ್ಚಾಗಿ ಉಂಟಾಗುವುದು ಮಕ್ಕಳ ಮೃದು ಮನಸ್ಸಿನಮೇಲೆ ಅವುಗಳ ಮನಸ್ಸು ಪಕ್ವವಾಗುವುದಕ್ಕಾಗಿಯೇ ಇರುತ್ತದೆ ದೇಹ, ಮನಸ್ಸು ಎರಡೂ ಬೆಳೆದು ಪ್ರಪಂಚದ ವ್ಯವಹಾರಕ್ಕೆ ತಯಾರಾಗಬೇಕಷ್ಟೆ; ಆದ್ದರಿಂದ ಪ್ರಥಮತಃ ತಯಾರಾಗುವುದೊಂದೇ ಅವುಗಳ ಕೆಲಸ. ಅದು ಮನೆಯಲ್ಲಿ ಪ್ರಾರಂಭವಾಗಬೇಕು. ತಂದೆ ತಾಯಿಗಳು ಅಥವಾ ಪೋಷಕರು ಅದನ್ನು ಮಾಡಬೇಕು. ದೇಹವು ನಿರೋಗವಾಗಿ, ಸುದೃಢವಾಗಿ ಬೆಳೆದು ಬಹುಕಾಲ ಪ್ರಾಪಂಚಿಕವಾಗಿ ಬಾಳುವ ಏರ್ಪಾಡು ಸಣ್ಣದಿರುವಾಗಲೇ ನಡೆಯಬೇಕು. ತಂದೆ ತಾಯಿಗಳಲ್ಲಿರುವ ಕೊರತೆಯು ದೆಸೆಯಿಂದ, ಕ್ಷೀಣದೆಸೆ, ರೋಗರುಜೆಯೇ ಮೊದಲಾದ ಉಪದ್ರಗಳು ಹುಟ್ಟಿದಾಗಲೇ ಮಕ್ಕಳಲ್ಲಿರುವದುಂಟು. ಕೆಲವು ದೈಹಿಕ ಕೊರತೆಗಳು ಅಗೋಚರವಾಗಿಯೇ ಇರುತ್ತವೆ. ತಂದೆ ತಾಯಿಗಳು ಅವುಗಳ ಕಡೆಗೆ ಲಕ್ಷ್ಯಪೂರ್ಣ ಹಾಗೂ ಸೂಕ್ಷ್ಮ ವಿಚಾರವುಳ್ಳವರಾಗಬೇಕು. ನಿಯಮವಂತೆ ದಿನಕ್ಕೆಂಟು ಸಲ ಹಾಲನ್ನುಣ್ಣಿಸಿ ಮುದ್ದಿಟ್ಟರಾಗದು. ಮಕ್ಕಳ ದೈಹಿಕರೀತಿಯನ್ನು ಪರೀಕ್ಷಿಸಿ, ಆಹಾರದಲ್ಲಿ ಯಾವ ಕ್ರಮವನ್ನನುಸರಿಸಬೇಕೆಂಬುದನ್ನು ಅನುಭವಿಕರಿಂದ ತಿಳಿದು ಹಾಗೆಯೇ ವರ್ತಿಸಬೇಕು. ಇನ್ನು ಮಾನಸಿಕ ಬೆಳವಣಿಗೆಯ ವಿಚಾರ. ಎಲ್ಲಾ ವಿಷಯಗಳಲ್ಲಿಯೂ ದೊಡ್ಡಸ್ಥಿಕೆಯನ್ನೇ ಅಪೇಕ್ಷಿಸುವುದು ಮಾನವ ಮನಸ್ಸಿನ ಒಂದು ಲಕ್ಷಣ. ಮಕ್ಕಳ ಮನಸ್ಸೇ ಅದನ್ನು ತಿಳಿಸುತ್ತದೆ. ತಂದೆಯು ಮುಂಡಾಸುಕಟ್ಟಿಕೊಂಡು, ಬೆತ್ತ ಹಿಡಿದು ತಿರುಗುವನಲ್ಲಾ. ಹಾಗೆಯೇ ತಿರುಗಬೇಕೆಂದು ಮಗನೆಷ್ಟು ಹಾರೈಸುವನೆಂಬುದನ್ನು ಬಲ್ಲಿರಾ? ಅದು ಹುಡುಗನ ಕಣ್ಣ ಮುಂದಿರುವ ಬಹುದೊಡ್ಡ 'ದೊಡ್ಡಸ್ಥಿಕೆ'. ಮುಂದೆ ಅದಕ್ಕಿಂತಲೂ ದೊಡ್ಡ 'ಫ್ಯಾಶನು' ಅವನನ್ನು ಮರುಳುಮಾಡದಿದ್ದ ಪಕ್ಷದಲ್ಲಿ ಆ ಮಗನೊಬ್ಬ ಹೆಸರುವಾಸಿ ಮುಂಡಾಸುವಾಲನಾಗುವನೆಂದು ಖಂಡಿತವಾಗಿ ತಿಳಕೊಳ್ಳಿ! ಆದ್ದರಿಂದಲೇ ಮನೆಯು ಮಗುವಿಗೊಂದು ಮಾದರಿಯಾಗಿರಬೇಕು ಎನ್ನುವುದು! ಮಕ್ಕಳ ಮುಂದೆ, ಹಿಂದೆ, ಎಡ, ಬಲದಲ್ಲಿ ಆದರ್ಶವೇ ಮೂರ್ತಿಮತ್ತಾಗಿರಬೇಕು. ಸಾಧ್ಯವಿದ್ದಷ್ಟು ಉತ್ತಮ ನಡತೆಗಳೇ ನಡೆಯಬೇಕು. ಮಗುವು ಅವುಗಳಿಂದ ಮೋಹಗೊಂಡು ಅನುಸರಿಸ ಹತ್ತುವಾಗ, ನೆರವಾಗಿ ಅದರ ಮನಸ್ಸಿನಲ್ಲಿ ಬೇರೂರುವಂತೆ ಪ್ರೋತ್ಸಾಹಿಸಿ ಬಿಟ್ಟರೆ ಸರಿ. ಅಂತಹ ಶಿಕ್ಷಣವೇ ಮನೆಯಲ್ಲಿ ದೊರಕಬೇಕಾದುದು. ಓದು ಬರಹದ ವಿಚಾರವಾದರೂ ಇದನ್ನು ಬಿಟ್ಟಿಲ್ಲ. ಈ ಮತದಂತೆ ಮಕ್ಕಳನ್ನು ತಿದ್ದುವವರು ಮೊದಲು ತಾವಾಗಿ ತಿದ್ದಿಕೊಳ್ಳುವ ಅಗತ್ಯ ಬೀಳುತ್ತದೆ. ಅದು ಉತ್ತಮವಾದುದ; ಆದರೆ ತಾವು ಪವಿತ್ರರಾಗಿ ಬರುವವರೆಗೆ ಮಕ್ಕಳ ನಡತೆ ಬೇರೆಯಾಗುವ ಸಂಭವವಿದ್ದಲ್ಲಿ ಕೃತ್ರಿಮ ಸಾಧನಗಳಿಂದಾದರೂ, ಅವುಗಳೆದುರಿಗೆ ಮೇಲ್ಪಂಕ್ತಿಯೇ ನಿಲ್ಲುವಂತೆ ಸಾಧಿಸುವುದು ಅಗತ್ಯವಿದೆ.

— ಶಾಲೆಯಲ್ಲಿ —

ಉಪಾಧ್ಯಾಯರ ಕರ್ತವ್ಯವಾದರೂ ಇದಕ್ಕಿಂತ ಭಿನ್ನವಾಗಿಲ್ಲ. ಅವರಿಗೆ ಪಾಠಪಟ್ಟಿಯಿದೆ; ಇಂತಿಂತಹ ರೀತಿಯ ಅಭ್ಯಾಸವನ್ನು ಮಾಡಬೇಕೆಂದು ಅದೆ ಹೇಳುತ್ತದೆ. ಉಪಾಧ್ಯಾಯರು ಅದನ್ನು ಕೇಳಲೇ ಬೇಕೆಂಬ ನಿಯಮವಿದೆ. ಆದರೆ ಈ ಎಲ್ಲಾ ನಿಯಮ ನಿರ್ಬಂಧಗಳು ಮಕ್ಕಳ ಶಿಕ್ಷಣದ ಉತ್ಕೃಷ್ಟತೆಗಾಗಿ ರಚಿಸಲ್ಪಟ್ಟವೆ ಹೊರತು ಬೇರೆಯಲ್ಲ. ಪಾಠ ಪಟ್ಟಿಯಲ್ಲಾಗಲೀ, ಪುಸ್ತಕಗಳಲ್ಲಾಗಲೀ, ಪ್ರಪಂಚದ ಬೇರೆ ಬೇರೆ ಭಾಗ, ಪ್ರಾಣಿ, ವಸ್ತುಗಳ ಚಿತ್ರವಿರಬಹುದು; ವರ್ಣನೆಯಿರಬಹುದು ಇವುಗಳಿಂದ ಹುಡುಗರು ಕಲಿಯಬೇಕಾದದನ್ನೆಲ್ಲಾ ಕಲಿತೇ ಮುಗಿಸಿದರೆನ್ನುವ! ಆನೆಯ ಪಾಠವನ್ನು ಕಲಿತ ಹುಡುಗನು ಆನೆಯನ್ನು ಗುರುತಿಸಿಯೇ ಬಿಟ್ಟಾನು; ಆದರೆ ಆ ಶಾಯಿಯಲ್ಲಿಲ್ಲದ ಒಂದು ಹೊಸ ಕಲೆಯನ್ನು ಆನೆಯಲ್ಲಿ ಕಾಣಲು ಸಾಧ್ಯವಿದೆ. ಆದ್ದರಿಂದಲೇ ಆನೆಯ ಚಿತ್ರವನ್ನು ಕಂಡವನು ಆನೆ ಕಂಡವನಾಗುವದಿಲ್ಲ. ಕಾಗದ ಬಳಪದ ವ್ಯವಹಾರದಲ್ಲಿಯೇ ಮುಗಿದು ಹೋಗುವ ಶಾಲಾಭ್ಯಾಸವು ಈ ರೀತಿ ಅಪೂರ್ಣವಾಗಿರುತ್ತದೆ. ಅದು ಪ್ರಪಂಚದ ಅನುಭವವನ್ನು ಕೊಡುತ್ತದೆ; ಅನುಭವಿಸಲು ಪ್ರೇರೇಪಣೆಯನ್ನಾಗಲೀ, ಶಕ್ತಿಯನ್ನಾಗಲೀ ಉಂಟುಮಾಡುವುದಿಲ್ಲ ಬರಿಯ ಅನುಭವವು ಮನಸ್ಸಿನಿಂದ ಹಿಡಿದು ಬಾಯಿಯವರೆಗೆ ತಿರುಗಾಡಬಲ್ಲುದೇ ಹೊರತು ಕೆಲಸಗಳಿಗಿಳಿಯಲಾರದು. ಅಷ್ಟೆ ಆಗಿ ಬಿಟ್ಟರೆ ಕಾರ್ಯವೇ ಪ್ರಧಾನವಾಗಿರುವ ಈ ಜಗತ್ತಿನಲ್ಲಿ, ಅನುಭವಕ್ಕೊಂದು ಯಥಾಯೋಗ್ಯ ಪ್ರತ್ಯೇಕ ಸ್ಥಾನವಷ್ಟೇ ಹೊರತು ಒಳಗಡೆಗೆ ಆಮಂತ್ರಣವಿರಲಾರದು. ಇಂದಿನ ವಿದ್ಯಾಭ್ಯಾಸವು ನಿಷ್ಪ್ರಯೋಜನವೆಂಬ ಗೊಂದಲವೆದ್ದಿರುವದರ ಕಾರಣವೂ ಇದೇ. ಮಕ್ಕಳು ಶಾಲೆಯಿಂದ ಹೊರ ಬರುವಾಗ ಪ್ರಪಂಚವನ್ನು ಹೊಕ್ಕು ಹೋರಾಡುವ ಯೋಧರಾಗಿ ಕಾಣಬೇಕು. ಆ ಹೋರಾಟದ ರೀತಿಯನ್ನು ಶಾಲೆಯಲ್ಲಿ ಕಲಿಯುವಂತಾಗಬೇಕು. ಈ ಮಾರ್ಪಾಟಿಗೆ ಉಪಕರಣಗಳ ಅಭಾವವೇ ಮೊದಲಾದುವು ತೊಡಕಾಗುವಂತಿಲ್ಲ. ಅವು ಅಷ್ಟೊಂದು ಪ್ರಾಮುಖ್ಯವೂ ಅಲ್ಲ ಮತ್ತೇನೆಂದರೆ, ಶಾಲೆಯಲ್ಲಿ ಸಾಧನೆಯು ಕಾಗದ ಲೇಖನಿಗಳಲ್ಲಿಲ್ಲ; ಮಕ್ಕಳ ಬುದ್ಧಿಯಮೇಲೆ ಎಂದಾಗಬೇಕು. ಕ್ರಮ ನಿಯಮಗಳ ಕಡೆಗಿದ್ದಿರುವ ದೃಷ್ಟಿಯನ್ನು ಹುಡುಗರ ಅಭಿರುಚಿ, ಅಭ್ಯಾಸಗಳ ಕಡೆಗಿಡಬೇಕು: ಇಷ್ಟೆ.

—'ಬಾಲಪ್ರೇಮಿ'

ನಮ್ಮ ಜರಿ ಪಿತಾಂಬ್ರ ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. Choukhamba, Benares City.

ನಮೂನು ಇನಾಮುಗಳು.



ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಗ 1, ಕಾಶೀನಕ್ಷೆ 1, ವಿಶ್ವೇಶ್ವರ ಪಟ 1, ಈ ತಿನಾಮುಗಳು ½ ಅಣೆ ಸ್ಟಾಂಪು ಕಳುಹಿಸಿದರೆ ಇನಾಮವಾಗಿ ಕಳುಹಿಸಲಾಗುವುವು. ಸ್ವಂತವು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರಿ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕಢಪಾನಿ, ಪೇಟಾ, ಕೋಟಿಂಗ್, ಶರ್ಟಿಂಗ್ ಸಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಉಲ್ಲನ್ ಚಾದರ, ಧಾವಳಿ, ನಾಮರ್ದಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪದಲು ಬುಟ್ಟಿ ಹಾಕಿದ ಜರಿ ಸೀರೆ ಎಲ್ಲಾ ರಂಗುಗಳಲ್ಲಿ ರೂ 20ರಿಂದ 55. ಪದಲು ಸಾದಾ 16 ಮೊಳದ ಸೀರೆ 1ಕ್ಕೆ ರೂ 18 ರಿಂದ ರೂ. 35ರ ವರೆಗೆ. ಅರೆ ಕಡಮೆ 16 ಮೊಳ ಕ್ರೇಪ್ ಅಂಚು ರೂ. 10½ ಯಿಂದ ರೂ. 16. ಖಣ 1ಕ್ಕೆ ರೂ. 1½ ರಿಂದ ರೂ. 10ರ ವರೆಗೆ. ಫೋಟೋ ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಜಯವಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶೀ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಪಾರ್ಶ್ವದಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ನ.)

ಉಡುಪಿ ಮುನಿಸಿಪಾಲಿಟಿಯ ಚೆಯರ್ ಮೇನರಾದ ಶ್ರೀಯುತ ಆರೂರು ಲಕ್ಷ್ಮೀನಾರಾಯಣರಾಯರ ಅವಗಾಹನೆಗೆ.

ಸ್ವಾಮಿ,

ದಯವಿಟ್ಟು ಈ ಕೆಳಗಿನ ಸವಾಲುಗಳಿಗೆ ಇದೇ ಪತ್ರಿಕೆಯಲ್ಲಿ ಸಮರ್ಪಕವಾದ ಜವಾಬುಗಳನ್ನು ದಯಪಾಲಿಸುವಂಥವರಾಗಬೇಕಾಗಿ ಅಪೇಕ್ಷೆ.

1 ತಾ. 16–9–1936ನೇ ಬುಧವಾರ ಸಾಯಂಕಾಲ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ತಾವು "ನಾನು ಯಾವ ಪಾರ್ಟಿಗೂ ಸಂಬಂಧಪಟ್ಟವನಲ್ಲ, ಕಾಂಗ್ರೆಸ್ ಪಾರ್ಟಿಯೇ ಆಗಲಿ, ಜಸ್ಟಿಸ್ ಪಾರ್ಟಿಯೇ ಆಗಲಿ, ಅಥವಾ ಇನ್ಯಾವ ಪಾರ್ಟಿಯೇ ಆಗಲಿ, ಒಟ್ಟಾರೆ ಆ ನಾಯ ವ್ಯಕ್ತಿಯ ಯೋಗ್ಯತೆಗಳನ್ನು ನೋಡಿ ಆತನನ್ನೇ ಚುನಾಯಿಸುವುದೇ ನಮ್ಮ ಕರ್ತವ್ಯ" ಎಂಬರ್ಥವುಳ್ಳ ಭಾಷಣವನ್ನು ಕೊಟ್ಟಿದ್ದೀರಷ್ಟೆ?

2 ಕಳದ ಜಿಲ್ಲಾ ಬೋರ್ಡು ಚುನಾವಣೆಯ ಸಮಯ "ವ್ಯಕ್ತಿಗಳ ಯೋಗ್ಯಾಯೋಗ್ಯತೆಗಳನ್ನು ನೋಡುವ ಪ್ರಯೋಜನವಿಲ್ಲ. ಆತನು ಯಾವ ಪಾರ್ಟಿಗೆ ಸೇರಿದವನು? ಅಂಥಾ ಪಾರ್ಟಿಗೆ ಸರಿಯಾದ ಜನಬೆಂಬಲವಿದೆಯೇ? ಅಂಥಾ ಪಾರ್ಟಿಯು ನಮ್ಮ ಸಹಾಯಕ್ಕೆ ಅರ್ಹವಾದದ್ದೇ? ಎಂಬುದನ್ನು ನೋಡಬೇಕು. ಇವೆಲ್ಲವನ್ನೂ ನೋಡಿದರೆ ನಾವು ಕಾಂಗ್ರೆಸ್ ಪಾರ್ಟಿಗೆ ಶಕ್ತಿಮೀರಿ ಸಹಾಯಮಾಡಬೇಕು" ಎಂದು ಹೇಳಿದ್ದೀರಿ ಮತ್ತು ಆ ಪ್ರಕಾರ ನಡದಿದ್ದೀರಿ ಇದು ಸರಿಯೇ?

3 ಹಾಗೆ ನಿಮ್ಮ ಅಭಿಪ್ರಾಯವು ಖಂಡಿತವಾಗಿದ್ದರೆ ಅದೇ ಅಭಿಪ್ರಾಯವನ್ನು ಮೊನ್ನಿನ ಸಭೆಯಲ್ಲಿ ನಿರ್ಭೀತವಾಗಿ ಹೇಳಲಿಕ್ಕೆ ಯಾವ ತೊಡಕು ಇತ್ತು?

4 ಅಥವಾ ತಮ್ಮ ಖಂಡಿತಅಭಿಪ್ರಾಯವನ್ನು ಸೂಚಿಸಲಿಕ್ಕೆ ಆ ಸಭೆಯು ಯೋಗ್ಯವಿದ್ದಿಲ್ಲವೆ?

5 ಕಳದ ಜಿಲ್ಲಾ ಬೋರ್ಡು ಚುನಾವಣೆಯ ನಂತರ ತಮ್ಮ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ (ಅದನ್ನು ಬದಲಾಯಿಸಿದ್ದರೆ ಮಾತ್ರ) ಒದಗಿದ ಸಂದರ್ಭಗಳೇನು?

B Vasudeva Rao.

ಮುಲ್ಕಿಯಲ್ಲಿ ಸ್ಟೀಮರು ಬಂದರ ಬೇಕು.

ಬೊಂಬೇ ಸ್ಟೀಮ್ ನೆವಿಗೇಶನ್ ಕಂಪೆನಿಯವರಲ್ಲಿ ವಿನಂತಿ. ಮುಂಬಾಯಿಯಲ್ಲಿ ಮುಲ್ಕಿ ಬಂದರ ಕಮಿಟಿಯ ಸ್ಥಾಪನೆ

ಆಗೋಸ್ತು ತಿಂಗಳ ತಾ. 23ನೇ ರವಿವಾರ ಪೂರ್ವಾಹ್ನ ಘಂಟೆ 10ಕ್ಕೆ ಮುಂಬಾಯಿ ಕೋಟೆಯೊಳಗಣ ವಲಾಲ ರಸ್ತೆಯಲ್ಲಿರುವ ಆಗಬಾನ ಕಟ್ಟಡದ ಕರ್ನಾಟಕ ನೇಶನಲ್ ಫಿಸಿಕಲ್ ಕಲ್ಚರ್ ಲೀಗಿನ ವಠಾರದಲ್ಲಿ ಮುಲ್ಕಿಯಲ್ಲಿ ಸ್ಟೀಮರು ಬಂದರವಾಗುವುದಕ್ಕೆ ಪ್ರಯತ್ನಿಸುವ ಕುರಿತು ಆಲೋಚಿಸುವರೆ, ಶ್ರೀಯುತ ಬಿ. ವಾಮನ ರಾಯರ ಅಧ್ಯಕ್ಷತೆಯಲ್ಲಿ ಮೂಲ್ಕಿ ಮತ್ತವರ ಪರಿಸರದ ಗ್ರಾಮಗಳವರ ಪ್ರತಿನಿಧಿ ಸಭೆಯೊಂದು ಜರುಗಿತು.

ಸಭೆ ಕರೆದ ಶ್ರೀಯುತ ಹೆಜಮಾಡಿ ದಾಸಪ್ಪ ಚಂಪನವರು, ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಪಟ್ಟಣಗಳಲ್ಲಿ ಒಂದಾದ ಮೂಲ್ಕಿಯಲ್ಲಿ ಸ್ಟೀಮರು ಬಂದರವಾಗುವಂತೆ ಪ್ರಯತ್ನಿಸಬೇಕೆಂಬ ಠರಾವನ್ನು ಸಭೆಯ ಮುಂದಿಟ್ಟು, ಮೂಲ್ಕಿಯಲ್ಲಿ ಬಂದರ ಮಾಡುವುದರ ಅಗತ್ಯ ಮತ್ತು ಅದರಿಂದ ಎಲ್ಲಾ ವರ್ಗಗಳ ಜನರಿಗೆ ಉಂಟಾಗಲಿರುವ ಪ್ರಯೋಜನದ ಕುರಿತು ಸರಸವಾದ ಭಾಷಣವಿತ್ತರು. ಬಳಿಕ ಸಭೆ ಕರೆದ ಶ್ರೀಯುತರುಗಳಾದ ಎಚ್. ಕೆ. ಕುಂದರನ್, ವಿ. ಕೆ. ಕೋಟಿಯನ್, ಆರ್. ಪಿ. ಕುಂದರ್, ಎಮ್. ಬಿ. ಪುತ್ರನ್, ಎಮ್. ಅಪ್ಪಣ್ಣ, ಎಮ್. ಬಿ ಸಟ್ಟಿ, ಎಸ್. ಬಿ. ಕೋಟಿಕಾರ್ ಮತ್ತು ಜಿ. ಟಿ. ಸುವರ್ಣನವರು ತಮ್ಮ ಅಮೂಲ್ಯ ಸೂಚನೆಗಳಿಂದ ಠರಾವನ್ನು ಪುಷ್ಟೀಕರಿಸಿದರು.

ಅಧ್ಯಕ್ಷರು ಬಂದರದ ಆವಶ್ಯಕತೆಗೆ ಉತ್ತರರೂಪವಾದ ಭಾಷಣಗೈದ ಬಳಿಕ ಬೊಂಬೇ ಸ್ಟೀಮ್ ನೆವಿಗೇಶನ್ ಕಂಪೆನಿಯವರಿಗೆ, ಮೂಲ್ಕಿಯಲ್ಲಿ ಸ್ಟೀಮರು ಬಂದರ ಮಾಡುವಂತೆ ಮನವಿ ಮಾಡಿಕೊಳ್ಳಬೇಕೆಂದು ಸರ್ವಾನುಮತದಿಂದ ಮಂಜೂರಾಯಿತು. ಅಂತೆಯೇ ಆ ಕುರಿತು ಪ್ರಯತ್ನ ನಡೆಸುವುದಕ್ಕಾಗಿ 12 ಮಂದಿಯ ಕಮಿಟಿಯೊಂದು ಆರಿಸಲ್ಪಟ್ಟಿತು ಇನ್ನು ಮೂರು ಮಂದಿಯನ್ನು ಸೇರಿಸಿಕೊಳ್ಳಬಹುದೆಂದು ನಿಶ್ಚೈಸಲ್ಪಟ್ಟಿತು

ಬಿ. ವಾಮನರಾವ್ (ಅಧ್ಯಕ್ಷ)

ಕರ್ನಾಟಕ ಏಕೀಕರಣ ಪರಿಷತ್ತಿನ ವಿಶೇಷ ಅಧಿವೇಶನ

ಇತ್ತೀಚೆಗೆ ಬ್ರಿಟಿಷ್ ಮತ್ತು ಸಂಸ್ಥಾನ ಸರಕಾರಗಳಿಂದ ಕನ್ನಡಕ್ಕೆ ಅನೇಕ ಅನ್ಯಾಯಗಳು ಉಂಟಾಗುತ್ತಿವೆ. ಇವುಗಳಿಂದ ಕರ್ನಾಟಕದಲ್ಲಿ ಪರಪ್ರಾಂತೀಯರ ಮತ್ತು ಪರಭಾಷೀಯ ವರ್ಗವನ್ನು ಅನವಶ್ಯಕವಾಗಿ ಬೆಳೆದು ಕರ್ನಾಟಕದ ಹಿತಸಂಬಂಧಗಳಿಗೆ ಬಾಧೆ ಒದಗಲಾರಂಭಿಸಿದೆ. ಕನ್ನಡದ ಬೆಳವಣಿಗೆಗೆ ಪರಪ್ರಾಂತೀಯರ ವಿರೋಧವನ್ನೂ ಪೆ ಸರಕಾರದವರ ವಿರೋಧವೂ ಪ್ರಾರಂಭವಾಗಿ ಸ್ವತಂತ್ರ ಕರ್ನಾಟಕದ ಕಲ್ಪನೆಗೆ ಆಘಾತವಾಗಿದೆ. ಬೆಳಗಾಂವಿ, ಧಾರವಾಡ, ವಿಜಾಪುರ, ಕಾರವಾರ ಜಿಲ್ಲೆಗಳಲ್ಲಿಯು ಸೊಂಪಣೀ ಪಾತೆಯಲ್ಲಿ ಮರಾಠಿಯ ಪ್ರವೇಶವಾಗಿದೆ. ಬೆಳಗಾಂವಿ, ಖಾನಾಪೂರ, ಚಿಕ್ಕೋಡಿ ತಾಲೂಕಗಳಲ್ಲಿಯು ಮತ್ತು ಸುವ ಪೇಟೆಯಲ್ಲಿಯ, ಮತ್ತದರ ಪಟ್ಟಣಗಳು ಕೇವಲ ಮರಾಠಿಯಲ್ಲಿಯೂ ಬಳ್ಳಾರಿ ಜಿಲ್ಲೆಯ ಪೂರ್ವಭಾಗದಲ್ಲಿಯ ಮುಖ್ಯ ಪಟ್ಟಣಗಳು ತೆಲುಗಿನಲ್ಲಿಯೂ ಪ್ರಕಟವಾಗಿವೆ. ಜಮಖಂಡಿ ಸಂಸ್ಥಾನದಲ್ಲಿಯ ಕಾಯಿದೆಯಿಂದಲೇ ಕನ್ನಡ ಭಾಷೆಯನ್ನು ಬಹಿಷ್ಕರಿಸಲ್ಪಡುವುದೆಂದು ಕಟ್ಟಳೆಯಾಗಿದೆ. ಹೈದರಾಬಾದ ಸಂಸ್ಥಾನದ ಕಲಬುರ್ಗಿ ಜಿಲ್ಲೆಯ ಸರಕಾರೀ ವ್ಯವಹಾರವೆಲ್ಲ ಮರಾಠಿಯಲ್ಲಿಯೇ ನಡೆಯುತ್ತಿದೆ. ಉತ್ತರ ಕರ್ನಾಟಕ ಸಂಸ್ಥಾನಗಳಲ್ಲಿಯ ಸರಕಾರೀ ವ್ಯವಹಾರದಲ್ಲಿ ಕನ್ನಡಕ್ಕೆ ಮನ್ನಣೆಯಿಲ್ಲ. ಕನ್ನಡ ಶಾಲೆಗಳಿಗೆ ಪ್ರೋತ್ಸಾಹನವಿಲ್ಲ. ಬೆಳಗಾಂವಿ, ಚಿಕ್ಕೋಡಿ ಕೋರ್ಟುಗಳಲ್ಲಿ ಮರಾಠಿಯು ಕಾಲಿಟ್ಟು ಎಷ್ಟೋ ವರುಷಗಳಾದುವು. ಪೋಸ್ಟ ಆಫೀಸಿನಲ್ಲಿ ಕನ್ನಡ ಫಾರ್ಮುಗಳು ದೊರೆಯದಾಗಿವೆ. ಇನ್ನು ಎಷ್ಟೋ ಸರಕಾರಿ ಕಚೇರಿಗಳಲ್ಲಿಯೂ ಫಾರ್ಮು ಮೊದಲಾದವುಗಳು ಮರಾಠಿಯಲ್ಲಿಯೇ. ಲೋಕಲ್ ಬೋರ್ಡು, ಮ್ಯುನಿಸಿಪಾಲಿಟಿ, ಬ್ಯಾಂಕು ಮೊದಲಾದವುಗಳಲ್ಲಿ ಮರಾಠಿಯ ಪ್ರಾಬಲ್ಯವೇ ಇದೆ! ಬೆಳಗಾಂವಿಯ ಮ್ಯುನಿಸಿಪಾಲಿಟಿಯ ವ್ಯವಹಾರವೆಲ್ಲ ಮರಾಠಿಯಲ್ಲಿಯೆ. ಧಾರವಾಡ ಲೋಕಲ್ ಬೋರ್ಡಿನ ವ್ಯವಹಾರವೆಲ್ಲ ಕನ್ನಡದಲ್ಲಿ ನಡೆಯಬೇಕೆಂದು ಗೊತ್ತುವಾದ ಬಂದರೆ ಅಧ್ಯಕ್ಷರ ಮನ್ನಣೆ ದೊರೆಯಲಿಲ್ಲ. ಬಳ್ಳಾರಿಯಲ್ಲಿಯ ಕನ್ನಡ ಟ್ರೈನಿಂಗ ಕಾಲೇಜನ್ನು ಹೊಸಪೇಟೆಗೆ ಸ್ಥಳಾಂತರ ಮಾಡಿದ್ದರಿಂದ ಬಳ್ಳಾರಿಯಲ್ಲಿ ಆಂಧ್ರರ ವರ್ಚಸ್ಸು ಹೆಚ್ಚಾಗುತ್ತಿದೆ. ಹೀಗಾಗಿ ಕನ್ನಡವು ಎಲ್ಲೆಲ್ಲಿಯೂ ಹಿಂದೂಡಲ್ಪಡಹತ್ತಿದೆ. ಮುಂಬಯಿ, ಪುಣೆ, ಮದ್ರಾಸ ಮೊದಲಾದ ಸರಕಾರ ಕೇಂದ್ರಗಳಲ್ಲಿ ಮರಾಠರೂ ತೆಲಗರೂ ಪ್ರಬಲರಾಗಿದ್ದರಿಂದಲೇ ಸರಕಾರೀ ಖಾತೆಗಳಲ್ಲಿ ಈ ರೀತಿ ಪರಭಾಷೆಗಳ ಪ್ರವೇಶವಾಗುತ್ತಿದೆ. ಈ ಅನ್ಯಾಯಗಳನ್ನೆಲ್ಲ ತಡೆದು ಕನ್ನಡದ ಬೆಳವಣಿಗೆಯನ್ನು ಹೆಚ್ಚಿಸಲು ಅಖಿಲ ಕರ್ನಾಟಕ ಆಂದೋಲನವನ್ನು ಈಗಲೇ ಪ್ರಾರಂಭಿಸುವದು ಅತ್ಯವಶ್ಯಕವಾಗಿದೆ. ಕರ್ನಾಟಕದ ಏಕೀಕರಣ ಚಳವಳಿಗೆ ಮತ್ತೆ ಮೂರ್ತಸ್ವರೂಪವನ್ನು ಕೊಡಬೇಕಾಗಿದೆ.

ಈ ಎಲ್ಲ ದೃಷ್ಟಿಯಿಂದ ನೋಡಲಾಗಿ "ಕರ್ನಾಟಕ ಏಕೀಕರಣ ಪರಿಷತ್ತಿನ ವಿಶೇಷ ಅಧಿವೇಶನವನ್ನು" ಬೇಗನೆ ಕೂಡಿಸುವುದು ಅತ್ಯಂತ ಅವಶ್ಯವೆಂದು ಕಂಡದ್ದರಿಂದ ಇದೇ ನವೆಂಬರ ತಿಂಗಳಲ್ಲಿ ಬೆಳಗಾಂವಿಯಲ್ಲಿ ಕರೆಯುವದು ಗೊತ್ತಾಗಿದೆ. ಇದಕ್ಕೆ ಈಗಾಗಲೇ ಅನೇಕ ಮುಖಂಡರ ಮತ್ತು ವೃತ್ತಪತ್ರಿಕೆಗಳ ಬೆಂಬಲ ದೊರೆತಿದೆ. ಕರ್ನಾಟಕದಲ್ಲಿಯ ಸಂಘಸಂಸ್ಥೆಗಳು, ವೃತ್ತಪತ್ರಿಕೆಗಳು, ಮುಖಂಡರು ಮತ್ತು ಜನಸಾಮಾನ್ಯರು ಸಲಹೆ ಸೂಚನೆಗಳನ್ನು ಕಳುಹಿ, ಧನ ಸಹಾಯವನ್ನು ಮಾಡಿ, ಠರಾವುಗಳನ್ನು ಬರೆದು, ಪ್ರತಿನಿಧಿಗಳನ್ನು ಕಳಿಸಿ ಸರ್ವವಿಧದಿಂದಲೂ ಈ ಪರಿಷತ್ತಿಗೆ ಸಹಾಯಮಾಡಬೇಕಾಗಿ ಬೇಡಿಕೊಳ್ಳುವೆವು.

ಬೆಳಗಾಂವಿ ತಾ ೧೮-೯-೩೬

ಬಳವಂತರಾವ ದಾತಾರ,
ಅಧ್ಯಕ್ಷ

ತಾತ್ಪೂರ್ತಿಕ ಕಾರ್ಯಕಾರೀ ಮಂಡಲ.

ಸೂಚನೆ:—ಪತ್ರವ್ಯವಹಾರವನ್ನೆಲ್ಲ ಕೆಳಗಿನ ವಿಳಾಸಕ್ಕೆ ಮಾಡಬೇಕಾಗಿ ವಿನಂತಿ.

ಕಾರ್ಯದರ್ಶಿ, ಏಕೀಕರಣ ಪರಿಷತ್ತಿನ ಕಾರ್ಯಾಲಯ.
(ಶ್ರೀ ಭುವನೇಶ್ವರೀ ಮುದ್ರಣಾಲಯ) ಗಣಾಚಾರಿ ಹನುಮಾನ ಬೀದಿ,
ಬೆಳಗಾಂವಿ.

ಶ್ರೀ ರಾಮಾರೆಸ್ಟೋರೆಂಟ್

ಉಡುಪಿ.

ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ !!

ಶಾಲಾ ವಿದ್ಯಾರ್ಥಿಗಳ ಅನುಕೂಲಕ್ಕೆ, ಪ್ರವಾಸಿಕರಿಗ ಅತ್ಯುತ್ತಮ ಸೌಕರ್ಯ ಇರುವ ಒಂದೇ ಒಂದು ವಿಶ್ರಾಂತಿಗೃಹವೆಂದರೆ ಶ್ರೀ ರಾಮಾ ರೆಸ್ಟೋರೆಂಟ್! ಸುಲಭ ದರದಲ್ಲಿ ಉತ್ಕೃಷ್ಟವಾದ ತಿಂಡಿ ಪಾನೀಯಗಳು; ಆರೋಗ್ಯಕರ ಊಟ ಇವುಗಳಿಗೆ ನಮ್ಮ ಅನುಭವಪೂರ್ಣ ಪಾಕಶಾಸ್ತ್ರಜ್ಞರು. ಹೀಗಾಗಿ ನೀವುಗಳೆಲ್ಲಾ ಸುಖಿಗಳಾಗಿರಿ! ಸಂತೆಕಟ್ಟೆಯಿಂದ ತೆಂಕು ಕೋರ್ಟು ರೋಡ್ ಮತ್ತು ಕೋಳದಪೇಟೆ ರೋಡ್ ಮಿಲನವಾದಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಿಸಿರುವ ದಿವ್ಯ ಮಹಡಿ ಮನೆಯಲ್ಲಿರುವ ಶ್ರೀ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿನೋಡಿರಿ.

ಎಚ್. ಗೋಪಾಲ ನಾಯಕ್,
ಪ್ರೊಪ್ರೈಟರ್.

ಬೆಲೆ ಸುಲಭ! ಒಂದೇ ದರ!! ಖಾತ್ರಿಮಾಲು!!!

ಎಲ್ಲಿ ?

ಎಸ್. ಅನಂತರಾಮಾಚಾರ್

ಸ್ಟೇಶನರಿ, ಚಿಟ್ನೇರಿ ಮತ್ತು ಶಾಲೋಪಕರಣಗಳ ವ್ಯಾಪಾರಿ.
ತಾಲೂಕು ಕಚೇರಿಬಳಿ, ಉಡುಪಿ.

ಆರೋಗ್ಯವೂ ಅದರ ಸಾಧನೆಯೂ.

(ಮುಂದುವರಿದದ್ದು)

ಸ್ವತಂತ್ರ ಜೀವನ ಯಾವುದು? ತನ್ನನ್ನು ತಾನು ಅರಿತುಕೊಳ್ಳುವುದೆಂದರೇನು? ಇಂದ್ರಿಯಗಳ ಸದುಪಯೋಗವೇ ಯೋಗ. ಜ್ಞಾನ ಯುಕ್ತವಾದ ಪ್ರಗತಿಯೇ ಜೀವಿತದ ಧ್ಯೇಯ.

(ಕಳೆದ ೨೦ನೇ ತಾರೀಕಿನ ದಿವಸ ಪ್ರೇಕ್ಷಾಯತನದ ವಿದ್ಯಾರ್ಥಿಗಳಿಗೆ ಪಂಡಿತ ತಾರಾನಾಥರು "ಆರೋಗ್ಯವೂ ಆದರ ಸಾಧನೆಯೂ" ಎಂಬ ವಿಷಯವಾಗಿ ಹೇಳಿದ್ದರು ಆ ದಿನ ಅರ್ಥಕ್ಕೆ ನಿಲ್ಲಿಸಿದ್ದ ವಿಷಯವನ್ನು ಅವರು ನಿನ್ನೆ ೮-೯ನೇ ದಿವಸ ಹೇಳಿ ಮುಗಿಸಿದರು)



ಮಿತ್ರರೆ,

ಜೀವಿತವು ಸನಾತನ ಪ್ರಸಾದ ಎಂಬದನ್ನು ನಾನು ನಿಮಗೆ ಹೇಳಿದೆ. ಯಾವದನ್ನೂ ಅದೃಷ್ಟಕ್ಕೆ ಬಿಡದೆ ಸ್ವಶಕ್ತಿಯನ್ನವಲಂಬಿಸಿ ವಿವೇಕದ ಹಾದಿಯನ್ನು ತುಳಿಯುವದೇ ಯೋಗವೆಂಬುದನ್ನು ಹೇಳಿದೆ. ಏನೋ ಹುಟ್ಟಿದ್ದಕ್ಕಾಗಿ ಜೀವನವನ್ನು ಸಾಗ ಹಾಕದಿದ್ದರೆ ಗತಿಯಿಲ್ಲವೆಂದು ಕೊಂಡು ಮಾಡಬೇಕಾದ್ದಲ್ಲವೂ ಬಿಡಲಾರದ ಕರ್ಮವೆಂದು ಮಾಡುತ್ತ ಹೋಗುವ ಬದುಕು ಸರ್ವಥಾ ಜೀವನವಲ್ಲವೇ ಅಲ್ಲ. ಕೀಳ್ತರಗತಿಯ ಜೀವಿಗಳಾದ ಪಶು-ಪಕ್ಷಿ ಗಿಡ-ಮರಾದಿಗಳಲ್ಲಿ ಜೀವನವು ಕೇವಲ ಯಂತ್ರವತ್ ಆಗಿದೆ ನಿಸರ್ಗಕ್ಕೆ ಅವು ಸಂಪೂರ್ಣವಾಗಿ ಅಧೀನವಾಗಿವೆ ಮಾನವೀ ಜೀವಿತವೂ ಇಷ್ಟು ಮಾತ್ರವೇಯೋ? ಮನುಷ್ಯ ಜನ್ಮದೊಡನೆಯೇ ವಿವೇಕವೂ ಉದಯಿಸುತ್ತದೆ. ಇದರಿಂದ ಯಂತ್ರವತ್ ಜೀವನದ ಕಟ್ಟುಗಳು ಹರಿದು ಹೋಗುತ್ತವೆ ಪಶು ಪಕ್ಷಿ ಮೊದಲಾದವುಗಳಿಗೆ ಜೀವಿತದ ಯಾಕೆ? ಏನು? ಎಂಬದರ ಅರಿವೇ ಇರುವದಿಲ್ಲ. ತನ್ನ ಗತಿಗಮ್ಯಗಳ ಅರಿವಿಲ್ಲದ ಯಂತ್ರವು ಹೇಗೆ ಚಲಿಸುವದೋ ಅದರಂತೆ ಪಶುಪಕ್ಷಿಗಳೂ ತಮ್ಮ ಜೀವನವನ್ನು ಸಾಗ ಹಾಕುವವು. ಅವುಗಳ ಜೀವಿತದಲ್ಲಿ ಜಾಗೃತಿಯಿಲ್ಲ ಈ ಜಾಗೃತಿಯುಂಟಾದ ಜೀವನದಲ್ಲಿ ಪರಾವಲಂಬನವು ಹೇಳಿದ್ದಲ್ಲ. ಅಂದರೆ, ವಿವೇಕಕ್ಕೆ ಸ್ಥಳವುಳ್ಳ ಮಾನವನು ಯಂತ್ರವತ್ ಜೀವನ ನಡೆಸುವದೂ, ಪಶುಪಕ್ಷಿಗಳಂತೆ ಪ್ರತಿಯೊಂದಕ್ಕೂ ತನ್ನನ್ನೇ ಅವಲಂಬಿಸಿರುವದೂ ನಿಸರ್ಗಕ್ಕೆ ಸುತರಾಂ ಸೇರುವದಿಲ್ಲ. ಆದರೆ, ಸಾಮಾನ್ಯವಾಗಿ ಮಾನವನು ಇದನ್ನು ಲಕ್ಷಿಸದೆ ನಿಸರ್ಗವನ್ನೇ ಅಪ್ಪಿಕೊಳ್ಳುವನು ಇಂದ ಜೀವನವು ಚುಕ್ಕಾಣಿಯಿಲ್ಲದ ಹಡಗದಂತೆ ಈ ತರದ ಜೀವನವೆಂದರೆ ನಿಸರ್ಗವು ಮುಗು ಮುರಿಯುವದು. ಹಾಗೆಂದರೆ ನಿಸರ್ಗವನ್ನು ತಿರಸ್ಕರಿಸಬೇಕೆಂದಲ್ಲ ನಿಸರ್ಗವು ತನಗೆ ಕೊಟ್ಟ ಹಕ್ಕನ್ನು ಉಪಯೋಗಿಸಿಕೊಂಡು ಮುಂದಕ್ಕೆ ಸಾಗಬೇಕು. ಅದು ತನಗೆ ಕೊಟ್ಟ ಬುದ್ಧಿಬಲವನ್ನು ಬಳಸಿಕೊಂಡು ಇತರ ಪಶುಗಳಿಗಿಂತಲೂ ತೀವ್ರವಾಗಿ ಮುಂದ ಸಾಗಬೇಕು. ಆರ್ಯ ಪರಿಭಾಷೆಯಲ್ಲಿ ಹೇಳುವದಾದರೆ ವಿವೇಕನು ಮಾರ್ಗವನ್ನವಲಂಬಿಸಬೇಕು. ನಿಸರ್ಗಕ್ಕೆ ಹೊಂದಿಕೊಂಡು ಕೆಲಸ ಮಾಡುವವನು ಅದನ್ನು ಜಯಿಸುವನು ಅದನ್ನು ಪ್ರತಿಭಟಿಸಿದವನು ಅದರ ಶತ್ರುವಾಗಿ ಕೇಡನ್ನು ತಂದುಕೊಳ್ಳುವನು ನಿಸರ್ಗವನ್ನು ಲೆಕ್ಕಿಸದೆ ತನ್ನ ಮನ ಬಂದಂತೆ ಆಚರಿಸುವದು ಮೂರ್ಖತನ. ಅದು ಸ್ವಾತಂತ್ರ್ಯವೆನಿಸಲಾರದು. ಸ್ವಾತಂತ್ರ್ಯಕ್ಕೆ ವಿವೇಕದ ಮೇರೆಯಿದೆ, ಬಂಧನವಿದೆ, ತತ್ವಕ್ಕೆ ವಿರೋಧವಾದಲ್ಲಿ ಅದರಿಂದ ಅಪಾಯವಿದ್ದೇ ಇದೆ. ನಿಸರ್ಗಕ್ಕೂ ಹೊಂದಿಕೊಂಡು ತತ್ವಕ್ಕೂ ವಿರೋಧಿಯಾಗದೆ ವಿವೇಕಕ್ಕನುಸರಿಸಿ ನಡೆಯುವದೇ ಸ್ವತಂತ್ರ ಜೀವನ.

ಈ ರೀತಿಯಲ್ಲಿ ವ್ಯಕ್ತಿ ಮತ್ತು ಸಮಾಜ ಇವುಗಳ ಹಿತದ ದೃಷ್ಟಿಯಿಂದ ನ್ಯಾಯ ವಾವುದು ಎಂಬದನ್ನು ನೋಡುವದೇ ನಮ್ಮ ಮೊದಲ ಕರ್ತವ್ಯ ತನ್ನ ವಿಷಯದಲ್ಲಿ ತನಗಿರುವ ಕರ್ತವ್ಯ, ಸಮಾಜದ ವಿಷಯದಲ್ಲಿ ತನಗಿರುವ ಕರ್ತವ್ಯ ಇವೆರಡರಲ್ಲಿಯೂ ಹೊಂದಿಕೆಯುಂಟಾಗುವಂತೆ ವ್ಯಕ್ತಿಯು ನೋಡಿಕೊಳ್ಳಬೇಕಾಗುತ್ತದೆ ಇವು ಒಂದಕ್ಕೊಂದು ತಾಕಲಾಡುವದು ಹಿತಕರವಲ್ಲ. ನಿಸರ್ಗಕ್ಕೆ ಅದು ಸಮ್ಮತವೂ ಅಲ್ಲ

ವರ್ತುಲಕ್ಕೊಂದು ಮಧ್ಯಬಿಂದು ಇರಲೇಬೇಕು. ಸಮಾಜದ ಪ್ರತಿ ವ್ಯಕ್ತಿಯೂ ಸಮಾಜದ ಮಧ್ಯ ಬಿಂದುವಿದ್ದಂತೆ ವ್ಯಕ್ತಿಯಿಲ್ಲದ ಸಮಾಜವೆಲ್ಲಿ? ಆದ್ದರಿಂದ ವ್ಯಕ್ತಿಯ ಪ್ರಗತಿ ಇಲ್ಲದಲ್ಲಿ ಸಮಾಜದ ಪ್ರಗತಿಯೂ ಇಲ್ಲವೆಂಬದು ಸಿದ್ಧಾಂತವಾಯಿತಲ್ಲವೇ? ಸಮಾಜದಲ್ಲಿಯೇ ಒಬ್ಬನಾದ ವ್ಯಕ್ತಿಯು ಮೊದಲು ತನ್ನನ್ನು ತಾನು ಅರಿತುಕೊಳ್ಳಬೇಕು ಅಂದರೆ ತನಗೂ ಇತರ ಜೀವಿಗಳಿಗೂ ಇರುವ ಭೇದವನ್ನು ತಿಳಿದುಕೊಳ್ಳಬೇಕು ಅವುಗಳಂತೆ ತನಗೂ ಆಹಾರ ನಿದ್ರಾದಿ ನಿಯಮಗಳು ಅನ್ವಯಿಸಿದರೂ ಅವಕ್ಕಿಂತಲೂ ಒಂದು ಗುಣ ವಿವೇಕವೆಂಬುದು ತನ್ನಲ್ಲಿ ಇದೆ ಎಂಬದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು

ತನ್ನನ್ನು ತಾನು ಅರಿತುಕೊಳ್ಳುವದೆಂದರೇನು? ನಮ್ಮ ಹಿಂದು ಜನರಲ್ಲಿ ಹರಿದಾಸರೇ ಮೊದಲಾದವರು "ತನ್ನನ್ನು ತಾನರಿತೊಡ ಎಂದು ಹೇಳುತ್ತಿರುವದನ್ನು ಯಾವಾಗಲೂ ಕೇಳಬಹುದು ಹೇಳುವವರಿಗಾಗಲಿ, ಕೇಳುವವರಿಗಾಗಲಿ ಅದರ ಅರ್ಥವೇನಾದರೂ ಗೊತ್ತಿದೆಯೋ? ಅವರಲ್ಲಿ ಅದೆಲ್ಲ ಒರೇ ಶಬ್ದ ಚಮತ್ಕಾರ ಸಾಮಾನ್ಯವಾಗಿ ಸರ್ವಸಂಗ ಪರಿತ್ಯಾಗಿಯಾಗಿ ಪರಮಾತ್ಮನನ್ನು ಕಾಣುವದೇ ತನ್ನ ತಾನರಿತುಕೊಳ್ಳುವದು ಎಂದು ಅವರನ್ನುವಗಿಳಿಪಾಠ ಇಷ್ಟು ಹೇಳಿಬಿಟ್ಟರೆ ಏನು ಅರ್ಥವಾಯಿತು? ಸರ್ವಸಂಗ ಪರಿತ್ಯಾಗವೆಂದರೇನು? ಪರಮಾತ್ಮನೆಂದರೇನು? ಕಾಣುವ ಬಗೆ ಹೇಗೆ? ಇವೆಲ್ಲ ಪ್ರಶ್ನೆಗಳಿಗೆ ಮತ್ತೆ ಉತ್ತರವನ್ನು ಕೊಡುವವರು ಯಾರು?

ನಮ್ಮಲ್ಲಿರುವ ವಿವೇಕಕ್ಕೂ-ಗತಾನುಗತಿಕವಾಗಿ ಬಂದಿರುವ ರೂಢಿ ಸಂಪ್ರದಾಯಗಳಿಗೂ ಸದಾ ಕಲಹವು ನಡೆದೇ ಇರುತ್ತದೆ ಸಾಮಾನ್ಯವಾಗಿ ವಿವೇಕವನ್ನು ತಮ್ಮಲ್ಲಿರುವ ಪಶುವೃತ್ತಿಯ ಸಮಾಧಾನಕ್ಕಾಗಿ ಉಪಯೋಗಿಸಿಕೊಳ್ಳುವವರೇ ಬಹಳ ಮನುಷ್ಯನೆಂದರೆ ವಿವೇಕವುಳ್ಳ ಪಶು ಎಂದು ಮೇಲೆ ಹೇಳಿದೆ. ತನ್ನ ತಾನರಿತುಕೊಳ್ಳುವದೆಂದರೆ ನಮ್ಮಲ್ಲಿರುವ ಪಶುವೃತ್ತಿಯನ್ನು ಅಂಕಿತದಲ್ಲಿಟ್ಟುಕೊಳ್ಳುವದು. ಎಂದಲ್ಲದ, ಅದಕ್ಕೆ ಗುಲಾಮರಾಗಿರುವದು ಎಂದಲ್ಲ. ತನ್ನಲ್ಲಿ ಅನಾದಿಯಾದ ಪಶುರಾಜ್ಯವೇ ಇನ್ನೂ ನಡೆದಿರುತ್ತದೋ ಅಥವಾ ಬುದ್ಧಿಯ ಹೊಸ ಹುಟ್ಟು ವೃದ್ಧಿಗೂ ಬರುತ್ತಿದೆಯೋ ಎಂಬುದನ್ನು ನೋಡಿಕೊಳ್ಳುವದೇ ತನ್ನ ತಾನರಿತುಕೊಳ್ಳುವದೆಂದರೆ. ಇಂದ್ರಿಯಗಳಿದ್ದರೆ ವಾಸನೆಯೂ ಇರುವದೆಂದು ಕೈಕಾಲು ಮೊದಲಾದ ಇಂದ್ರಿಯಗಳನ್ನು ನಾಶಮಾಡಿಕೊಂಡು ಬಿಟ್ಟರೆ ಮುಂದೇನು? ಇಂದ್ರಿಯಗಳನ್ನು ಆಧೀನದಲ್ಲಿಟ್ಟುಕೊಳ್ಳುವದೇ ಅವುಗಳ ಮೇಲಿನ ಜಯವಲ್ಲದೆ ಅವುಗಳನ್ನು ತಿರಸ್ಕರಿಸುವದಲ್ಲ. ಎಲ್ಲಿಯ ವರೆಗೆ ಜೀವಿಸಿರುವೆವೋ ಅಲ್ಲಿಯವರೆಗೆ ಇಂದ್ರಿಯಗಳನ್ನು ಬಿಟ್ಟು ಓಡಿ ಹೋಗುವದು ಸಾಧ್ಯವಿಲ್ಲ. ಇಂದ್ರಿಯಗಳ ಸದುಪಯೋಗವೇ ಯೋಗ. ವಸ್ತುವಿನ ಸದುಪಯೋಗವಾಗ ಬೇಕಾದರೆ ಮೊದಲು ಆ ವಸ್ತುವು ಚೆನ್ನಾಗಿರಬೇಕಲ್ಲವೇ? ಅಂದ ಮೇಲೆ ಇಂದ್ರಿಯಗಳ ಅರ್ಥಾತ್ ಅವುಗಳ ತಿರಸ್ಕಾರದಿಂದ ತನ್ನ ತಾನರಿತುಕೊಂಡಂತಾಗುವದೇ? ದೇಹದ ತಿರಸ್ಕಾರವೇ ದುರುಪಯೋಗ. ಸದುಪಯೋಗವೇ ಪುಣ್ಯ ದುರುಪಯೋಗವೇ ಪಾಪ

ಉಪಯೋಗಿಸಲ್ಪಡುವ ವಸ್ತುವಿನ ಯಥಾರ್ಥಜ್ಞಾನವೇ ಸದುಪಯೋಗ ಯಥಾರ್ಥ ಜ್ಞಾನವಿಲ್ಲದೆ ಅಂದರೆ ಒಂದು ವಸ್ತುವಿನ ಗುಣಾವಗುಣಗಳ ಜ್ಞಾನವಿಲ್ಲದೆ ಅದರ ಉಪಯೋಗವಾಗುವ ಬಗೆ ಹೇಗೆ? ಅಂದಮೇಲೆ ದೇಹದ ಯಥಾರ್ಥಜ್ಞಾನವಿಲ್ಲದ ಅದರ ಸದುಪಯೋಗವಾಗಲಾರದು ಎಂದು ಹೇಳಿದಂತಾಯಿತಲ್ಲವೇ?

ಯಥಾರ್ಥ ಜ್ಞಾನದಿಂದ ಸದುಪಯೋಗವೂ ಸದುಪಯೋಗದಿಂದ ತತ್ವದ ಅರಿವೂ ಆಗುವದು. ಇದೇ ತನ್ನ ತಾನರಿತುಕೊಳ್ಳುವ ಬಗೆ. ಸಾನ್ನಿಧ್ಯದಿಂದಲೇ ಗುಟ್ಟು ಗೊತ್ತಾಗುವದು ಜೀವಿತದ ಗುಟ್ಟನ್ನರಿತುಕೊಳ್ಳಲು ವಿವೇಕವನ್ನು ಉಪಯೋಗಿಸಬಾರದವನು ಸ್ವತಂತ್ರ ಜೀವನವನ್ನು ತಪ್ಪಿಸಿಕೊಳ್ಳಲಾರನು

ನಮ್ಮ ಜೀವಿತದ ಸದುಪಯೋಗವು ಆಗುತ್ತಿದೆ ಎಂಬದಕ್ಕೆ ಸಾಕ್ಷಿಯೇನು? ಮೂರು ವಿಷಯಗಳಿಂದ ಅದನ್ನು ದೃಢಪಡಿಸಿಕೊಳ್ಳಬಹುದು (೧) ಕೌಶಲ್ಯಪೂರ್ಣವಾದ ಕಠಿಣ ಕೆಲಸಗಳನ್ನು ಪೂರೈಸುವ ಸಾಮರ್ಥ್ಯ. (೨) ಪರಿಸ್ಥಿತಿಯ ಬದಲಾವಣೆಗೆ ಅನುಕೂಲವಾಗಿ ಹೊಂದಿಕೊಳ್ಳುವದು (೩) ರೋಗಾದಿ ಎಡರುಗಳನ್ನು ಎದುರಿಸುವ ಶಕ್ತಿ.

ನಮ್ಮ ಪ್ರತಿಯೊಂದು ಕೆಲಸವೂ ನಮ್ಮ ಜೀವನವನ್ನು ವಿಕಾಸಗೊಳಿಸುವದಾಗಿರಬೇಕು, ಸಂತೋಷಗೊಳಿಸುವದಾಗಿರಬೇಕು, ಇನ್ನೊಂದು ಕೆಲಸಕ್ಕೆ ಉತ್ಸಾಹವನ್ನೀಯಬೇಕು ಉಪೇಕ್ಷೆಯೇ ನಮ್ಮ ಜೀವನದ ಶತ್ರು; ನಮ್ಮ ಜೀವನದ ಬೆಳಕಿನಲ್ಲಿ ಕತ್ತಲೆಯನ್ನುಂಟುಮಾಡುವಂಥಾದ್ದು. ಜೀವನದ ತತ್ವಸಾರವೇ ಹರಯೋಗದಲ್ಲಿದೆ. ಬುದ್ಧಿಯ ಕಾರ್ಯವು ನಿಚ್ಚಳವಾಗಿದೆ, ಪ್ರಜ್ಞಾಪೂರ್ಣವಾಗಿದೆ, ಚಿತ್ತವು ಕಾರ್ಯಬಲ (ಕೃತುಶಕ್ತಿ) ಪೂರ್ಣವಾಗಿದೆ. ಇವೆರಡೂ ಒಂದಕ್ಕೊಂದು ಕೂಡಿಕೊಂಡು ನಡೆಯಬೇಕು. ಇದೇ ಯೋಗ. ಇವೆರಡರಲ್ಲಿ ತಾಲಮೇಲವಿಲ್ಲದಿರುವದೇ ಆಯೋಗ ಆಯೋಗದಿಂದಲೇ ರೋಗವುದ್ಭವಿಸುವದು, ತನುಮನಸ್ಸುಗಳ ತಾಲಮೇಲವಿಲ್ಲದೆ ಆರೋಗ್ಯವು ಸಾಧಿಸದು. ಆಗ ದೇಹದ ಸದುಪಯೋಗವೂ ಆಗದು. ಸಾಧು ಕಬೀರರು ಹೇಳಿದಂತೆ "ಮನಚಾಹತ್ಯೈರಾಮ ತನುಚಾಹತಪ್ಪ ಆರಾಮ, ಝಗಡೇ ಮೇ ದೋವು ಸಹಿ ರಾಮ ವಿಲೇನ ಆರಾಮ" (ಮನಸ್ಸು ರಾಮನನ್ನು ಕೋರುವದು, ದೇಹವು ಆರಾಮಸುಖವನ್ನು ಬೇಡುವದು. ಇವೆರಡರ ದ್ವಂದ್ವಯುದ್ಧದಲ್ಲಿ ಎರಡೂ ಇಲ್ಲದೆ ಹೋಗುವದು.) ಎಂಬಂತೆ ಜೀವಿತವು ಉದ್ದೇಶರಹಿತವಾಗಿ ವ್ಯರ್ಥವಾಗುವದು. ಇವೆರಡರ ಸಮರಸದಲ್ಲಿಯೇ ನಿಜವಾದ ಆರೋಗ್ಯವಿದೆ. ನಿಜವಾದ, ಜಾಗೃತವಾದ ವಿಕಾಸಪೂರಿತವಾದ ಆರೋಗ್ಯವಿದೆ.

ಒಟ್ಟಿನಲ್ಲಿ ಜ್ಞಾನಯುಕ್ತವಾದ ಪ್ರಗತಿಯೇ ಜೀವಿತದ ಧ್ಯೇಯವೆಂದೂ, ಅದಕ್ಕೆ ಸದೃಢವಾದ ಆರೋಗ್ಯವೂ ಅವಶ್ಯಕವೆಂದೂ ಹೇಳಿದಂತಾಯಿತು. ಬುದ್ಧಿ-ಚಿತ್ತ ಇವುಗಳ ಸಮತೋಲವೇ ಯೋಗವೆಂದಂತಾಯಿತು. ಇಂದ್ರಿಯ ವಿನಾಶವಲ್ಲ, ಅವುಗಳ ಸದುಪಯೋಗವೇ ವ್ಯಕ್ತಿ ಮತ್ತು ಸಮಾಜದ ಪ್ರಗತಿಗೆ ಕಾರಣವೆಂದಂತಾಯಿತು,

ಈ ಆರೋಗ್ಯವನ್ನು ಕಾಪಾಡಿಕೊಂಡು, ಸದುಪಯೋಗವನ್ನು ಮಾಡಿಕೊಳ್ಳಬೇಕಾದರೆ ನಾವು ಪಾಲಿಸಬೇಕಾದ ಎಷ್ಟೋ ನಿಯಮಗಳಿರುವವು. ಅದಕ್ಕೆ ತಾನು ಆರೋಗ್ಯವಂತನಾಗಿರಬೇಕು ಎಂಬ ಸಂಕಲ್ಪಬೇಕು ಮೊದಲು ಹೇಳಿದಂತೆ ಆರೋಗ್ಯವಾಗಲಿ, ಅಥವಾ ಯಾವುದೇ ಸತ್ಯವಾಗಲಿ, ಸ್ವಪರವಂಚಕರು ಹುಡುಕಿಕೊಳ್ಳುವ ಸಮಾಧಾನದಲ್ಲಿ ಸಿಗದು ದೇಹಾರೋಗ್ಯಕ್ಕಾಗಿ ವ್ಯಾಯಾಮ, ಮಿತಾಹಾರ ಮೊದಲಾದುವೂ, ಮನಸ್ಸಿನ ಆರೋಗ್ಯಕ್ಕಾಗಿ ಸಮಾಧಾನ, ಶಾಂತಿ ಮೊದಲಾದುವೂ ಅವಶ್ಯವೆಂಬುದನ್ನು ನಿಮಗೆ ಹೇಳಿದೆ ಇವುಗಳನ್ನು ತಿರಸ್ಕರಿಸದೆ ಇವುಗಳನ್ನು ಸಾಧಿಸುವದರಲ್ಲಿಯೇ ಇವೆರಡರ ಸುಖವೂ ಇದೆ.

ಗಂಗಾಧರಗೋಪಾಲಕೃಷ್ಣ ಹೆಗ್ಡೆ.

ಪತ್ರಿಕೋದ್ಯಮ ಶಾಲಾ ವಿದ್ಯಾರ್ಥಿ,

ತುಂಗಭದ್ರಾ

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಳೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿರಿ.

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ.

ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

ಗಾಂಧಿ ಸಪ್ತಾಹದಲ್ಲಿ ಏನು ಓದುವಿರಿ!

ಪ್ರತಿ ವರುಷದಂತೆ ಅಕ್ಟೋಬರದ ಮೊದಲನೇ ವಾರದಲ್ಲಿ ಗಾಂಧೀ ಜಯಂತೀ ಉತ್ಸವವು ಜರಗುವದು. ಆಗ್ಗೆ ಎಲ್ಲರೂ ಕೆಳಗಿನ ಪುಸ್ತಕಗಳನ್ನು ಅವಶ್ಯವಾಗಿ ಓದಲೇ ಬೇಕು.

(೧)	ಗಾಂಧಿ ವಿಚಾರ ದೋಹನ ಪುಟ ೨೩೦ (ಎಲ್ಲ ವಿಷಯಗಳ ಬಗ್ಗೆ ಗಾಂಧಿಜಿಯವರ ವಿಚಾರ ಸಂಗ್ರಹವು) ಬೆಲೆ	೧—೦—೦
(೨)	ಮಕ್ಕಳ ಮಹಾತ್ಮಾ ಗಾಂಧಿ	೦—೪—೦
(೩)	ಗ್ರಾಮೋದ್ಯೋಗ	೦—೧—೦
(೪)	ರಾಷ್ಟ್ರಧರ್ಮ (೧ ರೂಪಾಯಿಗೆ ನಾಲ್ವತ್ತು ಪ್ರತಿಗಳು) ...	೦—೨—೬
(೫)	ರಾಷ್ಟ್ರಧ್ವಜ	೦—೩—೦
(೬)	ಕಾಂಗ್ರೆಸಿನ ಕಥೆ	೧—೦—೦

ಈ ಎಲ್ಲ ಪುಸ್ತಕಗಳನ್ನು ಕರಿಸುವವರಿಗೆ ಅಂಚೆ ವೆಚ್ಚವಿಲ್ಲದೆ ಕಳಿಸಲಾಗುವದು.

ಸಕ್ರೆಟರಿ,

ಕರ್ನಾಟಕ ಶಿಕ್ಷಣ ಸಮಿತಿ, ಧಾರವಾಡ.

ನವಯುಗಕ್ಕೊಪ್ಪುವ ವಾರ ಪತ್ರಿಕೆ | **ನವಯುಗ** | ವಾರ್ಷಿಕ ಚಂದಾ ಸ್ಥಳೀಯ ೨ ೮ ೦ ; ಅಂಚೆ ವೆಚ್ಚ ಸೇರಿ ೩ ೪ ೦

The MAN behind the RUPEE

Is a power to be reckoned within every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK

LIMITED.

THE

PANGAL NAYAK BANK

LIMITED.

ESTABLISHED 1920.

Head Office: UDIPI] [Branch. Church Road, MANGALORE.

Fixed loans and Overdraft advances are granted on the pledge of gold articles. on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at $4\frac{1}{2}\%$ on 1 or 2 years and at 5% on 3 or 4 years deposits.

Every other description of upto-date Banking business is also undertaken.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ | ## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) | **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವ್ಯೆಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯು ಕಿಮ್ಮತ್ತು ರೂ. ೩ ಟ. ಖ. ಆಣೆ, ೮.

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಮು। ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿಗೆ ೪ ರೂ. ವಿ. ಪಿ. ಖರ್ಚು ಆಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

LAXMI BRAND COFFEE POWDER.

Pure & Superior quality, will last long without loosing its flavour and colour

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

TRADE MARK

WANTED AGENTS in Southern India (samples available)

ಉತ್ಕೃಷ್ಟ ಕಾಪಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಪಿಹುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು, ತಿಳಿಯಬಹುದು.

FOR SALE



Fire Resistance Steel Iron Safes. latest pattern.

ನಮ್ಮಲ್ಲಿ ಕಬ್ಬಿಣದ ಪೆಟ್ಟಿಗೆಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ ತಿಂಗಳುಗಳ್ಳಿ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI S K

Sold also by Instalments

ನಿಮಗೆ ಅಂದವಾದ ಅಚ್ಚಿನಿಂದ ಸೊಗಸಾದ ಛಾಪಾ ಕೆಲಸವಾಗಬೇಕೇ?

ಮಹಾಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್.

ಮಹಾಲಕ್ಷ್ಮಿ ಬಿಲ್ಡಿಂಗ್, ಕುಂದಾಪುರ.

ಈ ಛಾಪಖಾನೆಯಲ್ಲಿ ಕೆಲಸಗಳನ್ನು ಮಾಡಿಸಿರಿ.

ಬೇರೆ ಬೇರೆ ಊರುಗಳಲ್ಲಿ ಬಹಳ ವರ್ಷಗಳಿಂದ ಕೆಲಸ ಕಲಿತು ಪ್ರಾವೀಣ್ಯತೆಯಿದ್ದವರಿಂದ ಹೊಸದಾದ ಅಂದವಾದ ನೂರಾರು ತರದ ಅಚ್ಚುಗಳಿಂದ ತರತರದ ಬಣ್ಣಗಳಿಂದ ನಾಜೂಕಿನಿಂದ ಅತೀ ಸುಲಭ ದರದಲ್ಲಿ ಇಂಗ್ಲೀಷ್, ಕನ್ನಡ, ಮರಾಠಿ ವಗೈರೆ ಭಾಷೆಗಳಲ್ಲಿ ಕೆಲಸಗಳನ್ನು ಮಾಡಿಸಿಕೊಡಲಾದೀತು.

ಇಲ್ಲಿ ಎಲ್ಲಾ ತರದ ಫೋರ್ಮುಗಳೂ ಲೆಟರ್ ಹೆಡ್ಡುಗಳೂ ಕವರುಗಳೂ ಕಂಪೆನಿಯಂತಹ ಸಂಸ್ಥೆಗಳಿಗೆ ಅಗತ್ಯ ಇರುವ ವರ್ಗ ಊಳಿಗ ಪುಸ್ತಕಗಳೂ ಎಲ್ಲಾ ತರದ ಛಾಪಾ ಕೆಲಸಗಳೂ ಬೇಕಾದ ಮಾದರಿಯಲ್ಲಿ ತಯಾರಿಸಿಕೊಡಲ್ಪಡುವುವು.

For nice printing and punctuality look to—

Mahalaxmi Printing Works, Limited,

Mahalaxmi Buildings, Coondapoor.

K RAMAKRISHNA SHENOY,
GENERAL MANAGER

ನವಯುಗದ ಬಿಡಿ ಸಂಚಿಕೆಗಳನ್ನು ವಿಕ್ರಯಿಸಲು
ಕರ್ನಾಟಕದ ಮುಖ್ಯ ಕೇಂದ್ರಗಳಲ್ಲಿ
ಏಜಂಟರು ಬೇಕಾಗಿದ್ದಾರೆ.

ಯು. ಪಿ. ಮೇಸ್ತ, ಉದ್ಯಾವರ, ದ. ಕ.

(ಬಾಣಂತಿ ರೋಗದ ಸ್ಪೆಶ್ಯಲಿಷ್ಟರು)

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಔಷಧಗಳು ದೊರೆಯುತ್ತವೆ.

U. P. Mesta,

Gold Medalled Physician,

UDIAWAR, S. K.

IF YOU WANT

Grand Wall Posters come to us

THULUNAD PRESS, UDIPI

HEAD OFFICE VIEW

ಅಕ್ಟೋಬರ ತಾ 2

ಮಹಾತ್ಮಾಜಿಯವರ ಪಾವನ ಜನ್ಮದಿನ
2-10 1869

ನವಂಬರ ತಾ. 2

ಶ್ರೀ ಭಾರತ ವಸ್ತು ಮಂದಿರದ ಸ್ಥಾಪನಾದಿನ
2 11-1921

ಅಕ್ಟೋಬರ ತಾ. 2

ಸಪ್ಲೈ ಏಜನ್ಸಿ ಲಿಮಿಟೆಡ್; ಇದರ ಸ್ಥಾಪನಾದಿನ
2 10-1933



MAHATMAJI

ಇದೇ **2-10-'36**——ರಿಂದ——**2-11-'36**ರ ವರೆಗೆ

ಮುವ್ವತ್ತೆರಡು ದಿನಗಳ ಸದವಸರದಲ್ಲಿ ≡ **ತಿರುಪೂರು ಖಾದಿಯು** ≡ ತಿರುಪೂರು ದರದಲ್ಲಿ ಮಾರಲ್ಪಡುವುದು!

5 ರೂಪಾಯಿಗಳಿಗಿಂತ ಹೆಚ್ಚಿನ ಇತರ ಸಾಮಾನುಗಳನ್ನು ಕೊಳ್ಳುವವರಿಗೆ ಸೇಕಡಾ 6¼ ರಂತೆ ಕಮಿಶನ್.

Grand Jayanthi Sales for 32 days.

ಶ್ರೀ ಭಾರತ ವಸ್ತು ಮಂದಿರ, ಉಡುಪಿ.

Printed by P VENKATARAMANACHARYA for & on behalf of SUPPLY AGENCY LTD, at THULUNAD PRESS UDIPI and Published by K H SHETTY at 'NAVAYUGA' OFFICE, UDIPI

Registered No. 1564

'ನವಯುಗ'ವು
ಕರ್ನಾಟಕದಲ್ಲೆಲ್ಲಾ
ಸಂಚರಿಸುವುದರಿಂದ
ಜಾಹೀರಾತುಗಳಿಗೆ
ಉತ್ತಮ
ಸಾಧನ

ನವಯುಗ

ವ್ಯಭಿಚಾರಿಣಿ
ಯಾರು?
ಸಚಿತ್ರವಾಗಿ
ಪ್ರಕಟವಾಗಿದೆ.
ಬೆಲೆ ೦—೪—೦.
ಕಿರಿಯರ ಪ್ರಪಂಚ,
ಉಡುಪಿ.

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ,

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬ | ಉಡುಪಿ, ಗುರುವಾರ, ಅಕ್ಟೋಬರ ೧, ೧೯೩೬ | ಸಂಚಿಕೆ ೫

The Canara Industrial and Banking Syndicate, Limited.

(INCORPORATED IN BRITISH INDIA)

ESTD.] **Head Office: "MUKUNDANIVAS", UDIPI.** [1925.

BRANCHES:

1 Mangalore
2 Kanhangad
3 Payyanur
4 Cannanore
5 Udipi
6 Brahmavar
7 Hungarcutta
8 Coondapoor
9 Honavar
10 Kumta
11 Karwar
12 Ankola
13 Sirsi
14 Bhatkal
15 Hubli
16 Belgaum
17 Bellary
18 Adoni
19 Hospet
20 Gadag
21 Bangalore City
22 Karkala
23 Uppinangadi.

ANNOUNCEMENT.

WE HAVE GREAT PLEASUE IN ANNOUNCING THE OPENING OF OUR 24TH BRANCH AT KASARGODE. (S. KANARA DT.)

on Saturday, the 24th Octobei 1936 where all kinds of banking business will be transacted. The public are requested to take advantage of the numerous facilities offered by us.

Paid up Capital: above Rs. 2 lakhs, Deposits: above 19 lakhs,
Total resources: above 27 lakhs.

"MUKUND NIVAS," UDIPI
25-9-1936.

P. A. PAI, Brothers,
Managing Agents.

ಬರುವ ಮದ್ರಾಸ್ ಅಪ್ಪರ್ ಚೇಂಬರ್ ಕೌನ್ಸಿಲಿಗೆ

ಶ್ರೀ. ಬೈಲೂರು ವಾಸುದೇವ ರಾವ್

ಎಡ್ವೊಕೇಟ್ ಇವರು ಸ್ವತಂತ್ರವಾಗಿ ನಿಲ್ಲಲಿರುವರು

ಸುಖನಿವಾಸ

(ತಾಲೂಕು ಕಚೇರಿಯ ಎದು ಗಡೆ)

ಉಡುಪಿ, ದ.ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕ ವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖ ರೇಖೆಯಿಂದ ತಯಾರಿಸಿ ಸದಾ ಕಾಲದ ಲ್ಲಿಯೂ ಅನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿರಿ.

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವ ಲಂಬಿಸಿದೆ.

ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸುಬೇಂಕ್ ಮತ್ತು ರೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪೂಂಜ,

President & Manager, ಪ್ರಸಿಡೆಂಟು ಮತ್ತು ಮೆನೇಜರ್.

ಜಯಕರ್ನಾಟಕದ ಚಂದಾದಾರರಿಗೆ

ಈ ವರ್ಷವು ಅತ್ಯಂತ ಲಾಭಕರ!

ಎರಡು ತಿಂಗಳಿಗೊಮ್ಮೆ ತ್ರಿವರ್ಣ ಚಿತ್ರವನ್ನು ಕೊಡಲಾಗುವುದು.

ಪ್ರತಿ ಸಂಚಿಕೆಯೂ ನಯನಮನೋಹರ ಚಿತ್ರಗಳಿಂದ ತುಂಬಿರುವುದು.

ಹೊಸದಾಗಿ ಚಂದಾದಾರರಾಗುವವರು—ಯಾವ ತಿಂಗಳಲ್ಲಿಯೆ ಆಗಲಿ ಹಿಂದಿನ ಸಂಚಿಕೆಗಳನ್ನೆಲ್ಲ ಕಲಿಸಿಕೊಂಡು—ವರ್ಷಾರಂಭದಿಂದಲೇ ಆಗಬೇಕು. ಹಾಗು ಈಗಿದ್ದ ಚಂದಾದಾರರಲ್ಲಿ ವರ್ಷ ಮಧ್ಯದಲ್ಲಿ ಅವಧಿ ಮುಗಿಯುವವರು ಮುಂದೆಯೂ ಚಂದಾ ದಾರರಾಗಿ ಉಳಿಯಬೇಕು. ಇಲ್ಲದಿದ್ದರೆ ಅಪೂರ್ವವಾದ 'ರಾಜರಹಸ್ಯ' ಕಾದಂಬ ರಿಯು ಅಪೂರ್ಣವಾಗಿ ಅವರಿಗೆ ಅಸಮಾಧಾನವನ್ನುಂಟುಮಾಡೀತು.

ವಾರ್ಷಿಕ ಚಂದಾ ರೂ. ೫—೮—೦

ಜಾಹೀರಾತಿನ ದರಗಳಿಗೂ ಇತರ ಮಾಹಿತಿಗಳಿಗೂ ಬರೆಯಿರಿ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ನಮ್ಮ ಜರಿ ಪಿತಾಂಬ್ರ ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಶಾಲುಗಳ ಕಟಲಾಗ 1, ಕಾಶೀಲಕ್ಷ್ಮೆ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟೇಂಪು ಕಳುಹಿ ಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸ ಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕಿಮಖಾಪು, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚೌಕ, ಧಾವಳಿ, ನಾಮಿಕಿ, ತರತರದ ರುಮಾಲ್ಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪದಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55, ಪದಲು ಸಾದಾ 16 ಮೊಳದ ಶೀರೆ 1 ಕ್ಕೆ ರೂ. 16 ರಿಂದ ರೂ. 35 ರ ವರೆಗೆ. ಅರೆ ಕಡಪು 16 ಮೊಳ ಕ್ರವರ್ ಅಂಚು ರೂ. 10½ ಯಿಂದ ರೂ 18. ಖಣ 1 ಕ್ಕೆ ರೂ. 1½ ರಿಂದ ರೂ. 10 ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶೀ

THE

PANGAL NAYAK BANK

LIMITED.

ESTABLISHED 1920.

Head Office: UDIPI] **[Branch: MANGALORE.**

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4½% on 1 or 2 years and at 5% on 3 or 4 years deposits.

Every other description of upto-date Banking business is also undertaken.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ | **ಸ್ತ್ರೀಧರ್ಮ ಸಂಜೀವಿನೀ ಚೂರ್ಣ** (ರಿಜಿಸ್ಟರ್ಡ) | **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ವ್ಯೆಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾ ಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷ ವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩ ಟ. ಖ. ಆಣೆ, ೮.

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯನಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು। ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿಗೆ ರೂ. ಎ. ಪಿ. ಖರ್ಚು ಆಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಗಣೇಶೋತ್ಸವವೆಂದರೇನು?

ಪ್ರೇಮಾಯತನದಲ್ಲಿ ಪಂಡಿತ ತಾರಾನಾಥರ ಉದ್ಬೋಧಕ ಭಾಷಣ

ಪದ್ಧತಿಯಂತೆ ಈ ವರ್ಷವೂ ಪ್ರೇಮಾಯತನದ ವಿದ್ಯಾರ್ಥಿಗಳು ಈ ಓನೇ [illegible] ಗಣಪತಿಯ ಉತ್ಸವವನ್ನು ಉತ್ಸಾಹದಿಂದ ನೆರವೇರಿಸಿದರು. [illegible] ರಾಯಚೂರಿನಿಂದ ಅನೇಕ ಸದ್ಗೃಹಸ್ಥರೂ ಆಶ್ರಮದ ಹಿಂದಿನ ವಿದ್ಯಾರ್ಥಿಗಳು ಕೆಲವರೂ ಉತ್ಸವಕ್ಕಾಗಿ ಆಗಮಿಸಿದ್ದರು. ಆ ದಿನ ಮುಂಜಾನೆ ವಿದ್ಯಾರ್ಥಿ [illegible] ಆಟ ಓಟ ಮೊದಲಾದವುಗಳ ಸ್ಪರ್ಧೆಗಳು ನಡೆದವು. ಮಧ್ಯಾಹ್ನದಲ್ಲಿ ಭಜನ ಪೂಜೆ, ಊಟಗಳಾದ ನಂತರ ಸಭೆಯ ಸೇರಿತು. ಮೊದಲು ವಿದ್ಯಾರ್ಥಿಗಳ ವಕ್ತೃತ್ವ ಸ್ಪರ್ಧೆಯು ನಡೆಯಿತು. [illegible] ಪಂಡಿತ ತಾರಾನಾಥರ ಭಾಷಣ, ಒಂದಾದ [illegible] ಚಿಕ್ಕ ನಾಟಕ, ಪ್ರಶಸ್ತಿ ಪತ್ರಿಕೆಯನ್ನು ಸ್ಪರ್ಧೆಗಳಲ್ಲಿ ಜಯಶಾಲಿಗಳಾದವರಿಗೆ ಹಂಚುವದು, ಆ ಭಾರ [illegible] ಗಳು ನಡೆದು ಕಾರ್ಯಕ್ರಮವು ಮುಗಿಯಿತು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ. ಕೆ ಎಸ್ [illegible] ಅಯ್ಯಂಗಾರ ಇವರು ಅಧ್ಯಕ್ಷರಾಗಿದ್ದರು. ವಕ್ತೃತ್ವ ಮತ್ತು ನಾಟಕದಲ್ಲಿ [illegible] ಸ್ಪರ್ಧೆಗಳಿಗೆ ಮೈಸೂರು ಸ್ಟೇಟಿನ ಎಗ್ರಿಕಲ್ಚರಲ್ ಕೆಮಿಸ್ಟರಾದ ಮಿ. ಕೆ ಭೀಮರಾವ ಮಿ. ಕೆ ಎಸ್. ಕೆ ಅಯ್ಯಂಗಾರ ಮತ್ತು ಪ್ರೇಮವಿದ್ಯಾಪೀಠದ ವೈಸ್ ಪ್ರಿನ್ಸಿಪಲ್ ಡಾ. ವಾಳ್ವೇಕರ ಇವರು ಪರೀಕ್ಷಕರಾಗಿದ್ದರು. ಪಂಡಿತ ತಾರಾನಾಥರ ಉದ್ಬೋಧಕ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಪ್ರತಿವರ್ಷವೂ ಹಿಂದಿನ ಇಂದಿನ ವಿದ್ಯಾರ್ಥಿಗಳು ಸೇರಿಕೊಂಡು ಆನಂದೋತ್ಸಾಹಗಳಿಂದ ಗಣೇಶೋತ್ಸವವನ್ನು ನೆರವೇರಿಸುತ್ತಾರೆ. ಇಡೀ ದಿನವನ್ನು ವಿವಿಧ ಕಾರ್ಯಕ್ರಮಗಳಿಂದ ಉಲ್ಲಾಸಪೂರ್ಣವಾಗಿ ಕಳೆಯುತ್ತಾರೆ. ಆದರೆ ಈ ಉಲ್ಲಾಸ ಉತ್ಸಾಹಗಳಲ್ಲಿಯೂ ಒಂದು ಧ್ಯೇಯ ಒಂದು ಗಮ್ಯವಿರಬೇಕು. ಧ್ಯೇಯವಿಲ್ಲದ ಉಲ್ಲಾಸ ಮಿಣುಕು ಹುಳದ [illegible] ಇಂತ ಉತ್ಸಾಹವು ಸೋಡಾವಾಟರ್ ಬಾಟ್ಲಿಯಲ್ಲಿಯ ಹವೆಯಂತೆ ಕೂಡಲೆ ಹಾರಿಹೋಗುತ್ತದೆ. ಧ್ಯೇಯ ವಿರಹಿತ ಉತ್ಸಾಹಕ್ಕೆ ಉನ್ಮಾದವೆನ್ನಬಹುದು. ಪ್ರತಿಯೊಂದು ಕೆಲಸದಲ್ಲಿಯೂ ಒಂದು ಧ್ಯೇಯವಿರಬೇಕು. ತಾನು [illegible] ಎಂಬ ಆಸೆಯು ಪ್ರತಿಯೊಬ್ಬನಿಗೂ ಇರುವದು ಸ್ವಾಭಾವಿಕ, ಅದು ಪ್ರಕೃತಿಗುಣ, ಆದರ ಎಲ್ಲವೂ ತನಗೆ ಬೇಕು ಎಂದು ಇರುವ ಆಶೆಗೂ ಧ್ಯೇಯಕ್ಕೂ ಬಹಳ ಅಂತರವಿದೆ. ಧ್ಯೇಯವು ಆಶೆಗಿಂತಲೂ ಹೆಚ್ಚಿನದು, ಶ್ರೇಷ್ಠವಾದದ್ದು. ಧ್ಯೇಯ ಸಿದ್ಧಿಗೆ ಆತ್ಮ ಬಲವಿರಬೇಕು. ಬುದ್ಧಿಯ ದೃಷ್ಟಿ ತಾನು ಬೇಕು, ತಾನು ಎಂಬವದನ್ನು ತನ್ನ ಹುಟ್ಟಿಗೆ ಮಾತ್ರ ಎಂದು ಭಾವಿಸದೆ ಸಂಪೂರ್ಣ ವಿಶ್ವಸೃಷ್ಟಿಯಲ್ಲಿ ತಾನು ಎಂಬವದರ ಮಹತ್ವವನ್ನು ಅರಿತುಕೊಂಡು ತನ್ನ ಆಸೆಗೆ ವ್ಯಾಪ್ತಿಯನ್ನು ಕೊಟ್ಟು, ಸಂಕು ಚಿತತೆ [illegible] ವ್ಯಾಪ್ತ ಮನುಷ್ಯಿಯಲ್ಲಿ ತನ್ನ ವೃತ್ತಿಯು ಹಿತಾಕಾಂಕ್ಷೆಗಳ ವ್ಯಾಪ್ತಿಯೂ ಸಹಜವಾಗಿಯೇ ಆಗುವದು.

ಇಂಥ ಧ್ಯೇಯ ಸಾಧನಕ್ಕಾಗಿಯೇ ನಮ್ಮ ಪೂರ್ವಜರು ಹಬ್ಬಗಳನ್ನು ನಿರ್ಮಿಸಿದ್ದರು. ಉತ್ಸಾಹವು [illegible]

ಧ್ಯೇಯದ ಸಂಕಲ್ಪ ಮಾಡುವ ಪುಣ್ಯ ದಿನವೇ ಹಬ್ಬದ ದಿನ ಅಲ್ಲದೆ ಉದ್ದೇಶದ ಹಿತ ಉಲ್ಲಾಸ ಉತ್ಸಾಹಗಳ ದಿನವಲ್ಲ. ಹಿಂದಿನದನ್ನು ಇಂದಿನದಕ್ಕೆ ಜೋಡಿಸಿ ನಡೆಯುವವರೇ ಸನಾತನಿಗಳು; ಚಿತ್ತವೃತ್ತಿಗಳನ್ನು ಸರಿಯಾಗಿ ದೊಂದಿಸಿ ಕೊಡುವವನೇ ಗಣಪತಿಯು ಆದರೆ ಈಗಿನ ದೇವರುಗಳು ಅರ್ಥವಿಲ್ಲದ ಬದಿಗಂಟುಗಳಾಗಿವೆ. ಅವುಗಳ ಸಂಕೇತಾರ್ಥಗಳು ಮಾಯವಾಗಿ ಬರೇ ರೂಪ ರೇಷೆಗಳಷ್ಟೇ ಉಳಿದಿವೆ. ವಿಚಾರ ಧ್ಯೇಯಗಳನ್ನು ವ್ಯಗ್ರೂಡಿಸಲು ಮನಕ್ಕೆ ಬರುವ ಸಂಕೇತಕ್ಕೇನೇ ವಿಗ್ರಹವೆಂಬ ಹೆಸರು.

[illegible] ಹಬ್ಬದ ಅರ್ಥ [illegible] ಉತ್ಸಾಹಕ್ಕೆ ಹುಟ್ಟಿನ [illegible] ಕೊಡಕೊಡದು ಇದಕ್ಕೆ [illegible] ಹೊಸ ಬಟ್ಟೆ ಹೊದ್ದರ ಹಬ್ಬವು [illegible] ಸ್ವೀಕರಿಸಿಕೊಂಡು ಹೊಸ ಗರಿಯ [illegible] ಮಾಡಿಕೊಂಡು ಬಹುದು.

ಸಂಕಲ್ಪವೇ ಹಬ್ಬದ ಅಂಗ [illegible] ಧ್ಯೇಯದ ಸಂಕಲ್ಪ ಮಾಡುವ ಪುಣ್ಯ ದಿನ, ಒಳ್ಳೆ ಮುಹೂರ್ತ, ಈ ವಿಚಾರವು [illegible] ನಾನ ಪುರಾಣಗಳಲ್ಲಿ ವಿಸ್ತಾರವಾಗಿದೆ. ಎಲ್ಲ ಪುರಾಣಗಳ ತತ್ವವೂ ಒಂದೇ [illegible] ಸಂಸ್ಕೃತಿಯಲ್ಲಿ ಎಲ್ಲ ಪುರಾಣಗಳಿಗೂ [illegible] ಶೈವ, ಸೌರ್ಯ, ಗಾಣಪತ್ಯ, ಶಾಕ್ತ ಇತ್ಯಾದಿಗಳ [illegible] ಕೆಳಗಾದನೆಗಳಿವೆ. ಈ ಜಗದಲ್ಲಿ ಬೋಧ ಮಾಡಿಕೊಡಿದರ [illegible] ಗಣಪತಿ, ಉಚ್ಛಿಷ್ಟ ಮಹಾಗಣಪತಿ, ಇತ್ಯಾದಿ ಕೆಲವು ಬರುವರು. ಇವಲ್ಲದೆ [illegible] ವ್ಯಾಪನೇ ದೇವಿಯನ್ನು ಪ್ರತಿಯೊಂದು [illegible] ಕೂಡಲ ಗಣಪತಿಯು [illegible] ಕಂಡರು [illegible] ಎಲ್ಲ ಸನಾತನಿಗಳು ಇವನ್ನು [illegible] ಬೇಕು. ವೇದಕಾಲದ [illegible] ಹಿಂದಿನದನ್ನು ಇಂದಿನದಕ್ಕೆ ಜೋಡಿಸಿಕೊಂಡು ನಡೆವವರೇ ಸನಾತನಿಗಳು. ಸನಾತನಿಗಳು [illegible] ಕಾಣದ [illegible] ಇವಾ [illegible] ಎಂದು ಹೇಳುವದು [illegible] ಇರುವದು [illegible] ಸನಾತನಿಗಳೆಂದು [illegible] ಇಲ್ಲಿ [illegible] ಮಾತ್ರ [illegible] ಹೇಳಬಹುದು.

ಗಣಪತಿ ಎಂಬುದನ್ನು ಗಣ ಎಂಬುದಕ್ಕೆ [illegible] ಶಕ್ತಿ ಸಂಲಿಕ್ಷ [illegible] ಚಿತ್ತವೃತ್ತಿಗಳ [illegible] ಗಣಗಳ [illegible] ಯಾಗಿ ಹೊಂದಿಸಿ ಕೊಡುವವನೇ ಗಣಪತಿಯು, ಹಾಗೆ ಹೊಂದಿಸುವದೇ ಮಾನವನ ಲಕ್ಷಣ ಮತ್ತು ಧ್ಯೇಯ [illegible] ಸಂಕೇತವಿದು. ಈ ಸಂಕೇತ [illegible] ಸ್ವರಿಯಿದ, ಹೋಲಿ [illegible]

ಗಂಟು ಬದಿಗಂಟು [illegible] ಇಂದಿನ ಅರ್ಥವಿಲ್ಲದ ಬದಿಗಂಟಿಗೆ ಈಗಿನ ದೇವರುಗಳು [illegible] ತಾರ್ಥಗಳು ಮಾಯವಾಗಿ ಬರೇ ರೂಪರೇಷೆಗಳು [illegible] ಸಂಕೇತ [illegible] ವಿಚಾರ ಧ್ಯೇಯಗಳನ್ನು ವ್ಯಗ್ರೂಡಿಸಲು ಮನಕ್ಕೆ ಬರುವ ಸಂಕೇತಕ್ಕೆ ವಿಗ್ರಹವೆಂದು ಹೆಸರು. [illegible] ವಿಗ್ರಹ [illegible] ಅಂತಃಕರಣದ [illegible] ಪ್ರತಿ [illegible] ಸಂಕಲ್ಪ [illegible] ಪುನಃ [illegible] ಮೇಲೆ [illegible] ಅನೇಕ ತಿಗಳು [illegible] ರೂಪದ ಸ್ವರೂಪವೇನು? ಅನೇಕ [illegible] ಅದಕ್ಕೆ ತಕ್ಕ ತಾತ್ಪರ್ಯ ಇದೆ. ಬುದ್ಧಿಯೂ ಇದೆ. ಅದಕ್ಕೇ ಗಣಪತಿಗೆ ಈ ರೂಪ ಕೊಟ್ಟ [illegible] ಬಹುಜನ ಪ್ರೀತಿ [illegible] ಜನ ಪ್ರಿಯವಾದ [illegible] ಹೇಳಿದಂತೆ ಈಗಿನ ಆಚರಣೆಯಂತೆ ಗಣಪತಿಯು ಮನೆಮನೆಗೂ ಹೋಗಿ ತಿನ್ನುವ ತಿಂಡಿಪೋತ ಎಂದಾದರೆ ಹೇಗಾಯಿತು. ಎಂದು [illegible]

ಗಣಪತಿಯ ಕೈಯಲ್ಲಿ ಪಾಶ, ಅಂಕುಶಗಳ [illegible] ಇವರ [illegible] ವೇನು?

ಪ್ರತಿಯೊಬ್ಬರಲ್ಲಿಯೂ ಶಕ್ತಿಯೇನೋ ಇದೆ. ಆದರೆ, ಹೆಚ್ಚಾಗಿ ಅದು ಮಲಗಿಯೇ ಇರುತ್ತದೆ. [illegible] ಮಲಗಿದ ಶಕ್ತಿಯನ್ನು ಎಚ್ಚರಿಸುವ ಉಪಕರಣ, ಪುರಾಣ ಗೀತಾ ಇತ್ಯಾದಿಗಳನ್ನು ನೋಡಿದರೆ [illegible] ಎಚ್ಚರಿಸುವ ಶಕ್ತಿ. ಆದರೆ [illegible] ಎಚ್ಚರಿಸಿದರೂ ಮತ್ತೆ ಮಲಗಿ [illegible] ಹೆಂಡೆಸುವವರೂ ಇದ್ದಾರೆ. ಅದಕ್ಕಾಗಿ ಅವರನ್ನು ಮುಂದುವರಿಸಲು ಅಂಕುಶ ಬೇಕು. ಆದರೆ ಶಕ್ತಿಯನ್ನು ಸ್ವಚ್ಛಂದವಾಗಿ ಬಿಟ್ಟಲ್ಲಿ ಅನಾಹುತಗಳಾಗ [illegible] ಅದಕ್ಕಾಗಿ ಅದನ್ನು ಅಂಕಿತದಲ್ಲಿಟ್ಟುಕೊಳ್ಳ [illegible] ಬೇಕು. ಮಲಗಿದ ಶಕ್ತಿಯನ್ನು ಎಬ್ಬಿಸಿ, ಎಬ್ಬಿಸಿದ ಶಕ್ತಿಯನ್ನು ನಡೆಸಿ, ನಡೆಯುವ ಶಕ್ತಿಯನ್ನು ಹತೋಟಿಯಲ್ಲಿಟ್ಟುಕೊಳ್ಳ ಬೇಕೆಂಬುದನ್ನೇ ಗಣಪತಿಯ ವಿಗ್ರಹವು ಸೂಚಿಸುತ್ತದೆ. ಇವೇ ಜನಿತದ ಧ್ಯೇಯ ಅಲ್ಲವೇ? ಯಾವ ಕಾರ್ಯಕ್ಕೂ ಪೂರ್ವದಲ್ಲಿ ಇವರ ರೂಪವನ್ನು [illegible] ತತ್ವಕ್ಕೆ ಎಚ್ಚರ [illegible] ಅಂಕಿತ [illegible] ಪಡಿಸಿ ಈ ಎಚ್ಚರಿಕೆಯನ್ನು ಮಾಡಿಕೊಂಡು ತಕ್ಕ ಸಂಕಲ್ಪವನ್ನು ವ್ರತ ನಡಿಸಲು [illegible] ದಿನವು.

ಒಟ್ಟಿನಲ್ಲಿ ನಮ್ಮ ಉತ್ಸವಗಳಲ್ಲಿ ನಮ್ಮ ವಿಗ್ರಹಗಳಲ್ಲಿ ಪ್ರತಿಯೊಂದಕ್ಕೂ ಒಂದು ಧ್ಯೇಯ, ಒಂದು ಸಂಕೇತವಿದ್ದೇ ಇದೆ. ಇರಬೇಕು, ಅದನ್ನರಿತುಕೊಂಡು ಸಂಕಲ್ಪವನ್ನು ಮಾಡಿ ಕಾರ್ಯತತ್ಪರರಾಗ ಬೇಕಾದದ್ದು ನಮ್ಮ ಕರ್ತವ್ಯ. ಹಬ್ಬಗಳು ಕೇವಲ ವಿಲಾಸ ಹಾಸಿಹರಟ [illegible] ಎಂದು ನಮ್ಮ [illegible] ಅವುಗಳಲ್ಲಿ ತೋರಿಸಬೇಕು. ಉತ್ಸಾಹವು ಮಿಣುಕು ಒಂದು ಉದ್ದೇಶವೇ ಆದ [illegible] ಕರಣವನ್ನು ಸುಸಾಧಿಸಿಕೊಳ್ಳುವ ಸಾಧನವಾಗುವಂತೆ ನೋಡಿಕೊಳ್ಳುವದೇ ಮುಖ್ಯ ವಿಷಯ.

ಗಂಗಾಧರ ಗೋಪಾಲಕೃಷ್ಣ ಬೆಗಡೆ.
ಪತ್ರಿಕೋದ್ಯಮ [illegible] ವಿದ್ಯಾರ್ಥಿ ತುಂಗಭದ್ರಾ

ಸಮಾಜದ ಅಘೋರಿ ಕೃತ್ಯಗಳಿಗೆ ಹೆದರಿ ಬಾಯಿಬಿಡು ವಿರೇಕೆ? ಅದನ್ನು ನಿವಾರಿಸಲು ಉಪಾಯವೇನು?

ನ [illegible] ಗಾಗಿ ನಾನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-
ಪಿ. ಲಕ್ಷ್ಮಣದೇವ ವಿದ್ಯಾರ್ಥಿ.

ಇದು ಪತ್ರಿಕೆ, ಕರ್ನಾಟಕದಿಂದ ಗೂಡ, ಪ್ರತಿ ಮಾಸದ ೧ನೇ ತಾರೀಕಿಗೆ ತಪ್ಪದೆ ಹೊರಡುವದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ
[illegible]

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ

[illegible] ಉತ್ತಮ ಕಥೆಗಳು [illegible] ವಿಚಾರಗಳು [illegible]

ಕನ್ನಡ [illegible] ಮಾಸಪತ್ರಿಕೆ

[illegible] ಪತ್ರಿಕೆಯು ಇದೊಂದೇ. ಪ್ರತಿ ತಿಂಗಳ ಮೊದಲನೆಯ ತಾರೀಕಿಗೆ ತಪ್ಪದೆ ಹೊರಡುವ ೬೦ ಪುಟಗಳ ಮಾಸಪತ್ರಿಕೆ

ಬೇಗನೇ ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ ೩—೦—0

ಪ್ರವಾಸಿ ಕಾರ್ಯಾಲಯ,
[illegible], ದಕ್ಷಿಣ ಕನ್ನಡ

ಜಪಾನರ ಆತ್ಮಾರ್ಪಣ

ಅವರ ಅತ್ಯುಜ್ವಲ ದೇಶ ಭಕ್ತಿಗಳು

ಪೌರಾತ್ಯ ರಾಷ್ಟ್ರಗಳಲ್ಲಿ ಬಹಳವಾಗಿ ಮುಂದುವರಿದಿರುವ ರಾಷ್ಟ್ರವೆಂದರೆ ಅದು ಜಪಾನ್ ಇದು ಯಾವ ಆಧುನಿಕ ಪಾಶ್ಚಾತ್ಯ ರಾಷ್ಟ್ರಕ್ಕೂ ಯಾವದರಲ್ಲೂ ಕಡಿಮೆ ಯಿಲ್ಲ. ಕಳೆದ ಐವತ್ತು ವರ್ಷಗಳಿಂದಲೂ ಜಪಾನು, ಒಂದೇ ಪ್ರಕಾರ ಮುಂದುವರಿದು ಇಂದು ಜಗತ್ತಿನ ಒಂದು ಮಹಾರಾಷ್ಟ್ರವಾಗಿದೆ. ಇದು ಯಾತರಿಂದ ಸಾಧ್ಯವಾಯಿತು? ಪ್ರಜೆಗಳಲ್ಲಿ ನವಜೀವನದ ಹುರುಪು ಹುಟ್ಟಿದ್ದರಿಂದ; ಪ್ರಜೆಗಳೆಲ್ಲರ ಮನಸ್ಸಿನಲ್ಲಿಯೂ ಸ್ವದೇಶಪ್ರೇಮ ಜ್ಯೋತಿಯು ಬೆಳಗಿದ್ದರಿಂದ.

ಮೊದಲಿಗೆ ಜಪಾನಿನಲ್ಲಿ ಆಯುಧ ಹಿಡಿಯಲು ಸರ್ವ ಪಂಗಡದವರಿಗೂ ಅವಕಾಶವೇ ಇರಲಿಲ್ಲ ಅಲ್ಲಿನ ಕ್ಷತ್ರಿಯರೆಂದು ನಾವು ಕರೆಯಬಹುದಾದ ಸಾಮುರಾಯ ಪಂಗಡದವರು ಮಾತ್ರ ಶಸ್ತ್ರ ಧಾರಣೆ ಮಾಡಬೇಕಾಗಿತ್ತು. ಇವೊತ್ತಿಗೂ ಆ ಸಾಮುರಾಯ್ ಪಂಗಡದವರಿಗೆ ಕತ್ತಿಯಲ್ಲಿ ಮಹಾ ಭಕ್ತಿ; ಅದು ಪೂಜನೀಯವಸ್ತು. ಈ ಸಾಮುರಾಯ್ ಪಂಗಡದವರಿಗೆ ಕಾಣ ತಕ್ಕುದೆಂದರೆ ಗೌರವವೊಂದೇ; ಇದರ ರಕ್ಷಣೆಗಾಗಿ ಇವರು ಮಿಕ್ಕ ಎಲ್ಲವನ್ನೂ ತ್ಯಾಗಮಾಡಬಲ್ಲರು ಪತ್ನೀಪುತ್ರ ಕಳತ್ರಾದಿಗಳು ಸಹಾ ಗೌರವದ ಮುಂದ ತೇಲಿ ಹೋಗುತ್ತಾರೆ ಅಲ್ಲದೆ ಪತ್ನೀ ಪುತ್ರಾದಿಗಳು ಸಹ ತಮ್ಮ ದೇಹಾಂಗವೆಂದೇ ಇವರ ಭಾವನೆ. ಈ ಪಂಗಡದವರ ಭಕ್ತಿಯು ಅನುಪಮವಾದುದು. ತನ್ನ ಪ್ರಭುವನ್ನು ಯಾರಾದರೂ ನಿರ್ಲಕ್ಷಿಸಿ, ಅವಹೇಳನಮಾಡಿದಲ್ಲಿ ಆ ಸೇವಕನು ತನ್ನ ಪ್ರಾಣದಿಂದಾದರೂ ತೀರಿಸಿಕೊಂಡಾನು. ಅಲ್ಲದ ತನ್ನ ಪ್ರಭುವಿಗಾಗಿ ತಾನೂ ಪ್ರಾಣಕೊಟ್ಟಾನೇ ವಿನಹ ಆತ್ಮರಕ್ಷಣೆಯನ್ನು ಎಣಿಸನು. ಈ ನಿಯಮವೇ ಜಪಾನಿನಲ್ಲಿ ಬದ್ಧಮೂಲವಾಗಿರುವ 'ಹಾರಾ- ಕಿರಿ' ಎಂಬ ವಿಚಿತ್ರವಾದ ಆಚಾರದ ಮೂಲ 'ಹಾರಾ ಕಿರಿ' ಎಂದರೆ ಒಬ್ಬನು ಇಚ್ಛಾಪೂರ್ವಕವಾಗಿ ಚಾಕುವಿನಿಂದ ತನ್ನ ಹೊಟ್ಟೆ ಬಗಿದುಕೊಂಡು ಕರುಳುಗಳನ್ನು ಹೊರಗೆ ತೆಗೆದು ಹಾಕಿಕೊಂಡು ಆತ್ಮಾರ್ಪಣಮಾಡುವುದು. ಜಪಾನಿನ ಸ್ತ್ರೀಯರೂ ಮೇಲೆ ಹೇಳಿದ ರೀತಿಯಲ್ಲಿ ಆತ್ಮಾರ್ಪಣ ಮಾಡುವುದರಲ್ಲಿ ಹಿಂತೆಗೆಯರು. ಈಚೆಗೆ ಜಪಾನಿನಲ್ಲಿ ನಡೆದ ಗಲಭೆಗಳಾದ ಮೇಲೆ ಒಬ್ಬ ಹದಿನಾರು ವರ್ಷದ ಯುವತಿಯು ಈ ತೆರನಾಗಿ ಹಾರಾ-ಕಿರಿಯನ್ನು ಮಾಡಿದಳು. ಆದರೆ ಇದು ತುಂಬಾ ಶೋಚನೀಯವಾದ ವಿಷಯ ಇದು ಟೋಕಿಯೋ ನಗರದಲ್ಲಿ ನಡೆಯಿತು. ಇದರ ವಿಷಯವಿದು:—

ಐದು ಸಾವಿರ ಮಂದಿ ಸೋಲ್ಜರುಗಳು ಆಯುಧಶಾಲೆಗಳಿಗಾಗಿ ಹೋಗಿ ಯುದ್ಧ ಕಚೇರಿಯನ್ನು ಮುತ್ತಿ ವಶಪಡಿಸಿಕೊಂಡರು ಪ್ರಧಾನ ಸೇನಾನಿ ಮತ್ತು ನೌಕಾಧ್ಯಕ್ಷ ಇವರಿಬ್ಬರೂ ಕೊಲೆಯಾದರು. ಆಗ ಸಾಮ್ರಾಟರ ವೈಗಾನದಲಿನ ಸೇನೆಯವರು ಈ ಕ್ರಾಂತಿಕಾರರಿಗೂ ಜಗ್ಗದೆ ಎದುರಿಸಿದರು ಆವೇಳೆ ಸ್ವಯಂ ಮಿಕಾಡೋ (ಜಪಾನ್ ಸಾಮ್ರಾಜ್ಯದ ಪ್ರಭುಗಳು) ಸಾಮ್ರಾಟರು ಬರಲಾಗಿ ಈ ಕ್ರಾಂತಿಕಾರರು ಇಲಿಯ ಮರಿಗಳಂತಾಗಿ ಆಯುಧಗಳನ್ನು ನೆಲದಮೇಲಿಟ್ಟು ಶರಣಾಗತರಾದರು ಜಪಾನಿನವರ ಪ್ರಭುಭಕ್ತಿಯು ಇಂತಹುದು ಜಗತ್ತಿನಲ್ಲಿ ಅದ್ವಿತೀಯವಾದುದು ಆಗ ಸೇನಾದಳಪತಿಗಳು ಸಾಮ್ರಾಟರ ಮುಂದೆ ನಿಂತು ಈಗ ನಡೆದ ಕೊಲೆಗಳಿಗೆ ತಾವೇ ಜವಾಬ್ದಾರರು ಸೋಲ್ಜರುಗಳ ನಮ್ಮ ಅಪ್ಪಣೆಯನ್ನು ಪಾಲಿಸಿದರ. ಅಷ್ಟ ಎಂದು ಅರ್ವನ್ನು ತಮ್ಮ ಬೆನ್ನು ಹಿಂದ ಹಾಕಿಕೊಂಡರು. ಈ ಕ್ರಾಂತಿಗೆ ಅವರು ಕೊಟ್ಟ ಕಾರಣವಾದರೂ ಎಂತಹುದು? ರಾಷ್ಟ್ರದ ಏಳಿಗೆಗಾಗಿ ಹೀಗೆ ಮಾಡಬೇಕಾಯಿತೆಂದರು ಅನಂತರ ಸಾಮ್ರಾಟರನ್ನು ಕುರಿತು 'ನಾವು ಹಾರಾ ಕಿರಿಯನ್ನು ಮಾಡಲು ಅಪ್ಪಣೆ ದಯಪಾಲಿಸಬೇಕು' ಎಂದು ಪ್ರಾರ್ಥಿಸಿದರು ಅನಂತರ ಧಾರ್ಮಿಕ ರೀತಿಯಲ್ಲಿ ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡರು ಈ ಹಾರಾಕಿರಿಯಲ್ಲಿ ಒಂದು ವಿಶೇಷ ನಡೆಯಿತು. ಒಬ್ಬ ಮಿಲಿಟರಿ ಹುದ್ದೇದಾರ ಇವನಿಗೆ ಒಬ್ಬ ಮಗಳು ಇವಳಿಗೆ ವಿವಾಹವಾಗಬೇಕಾಗಿತ್ತು. ನಿಶ್ಚಿತನಾಗಿದ್ದ ವರನೂ ಮಿಲಿಟರಿಯಲ್ಲಿದ್ದ ಈ ತಂದೆ, ಆ ಭಾವಿ ಪತಿ ಇಬ್ಬರೂ ಈ ಹಾರಾಕಿರಿಯಿಂದ ಮೃತರಾದರು ಆಗ ತನಗೂ ಹಾರಾಕಿರಿಯೇ ಗತಿಯೆಂದು ಬಗೆದಳು ಅವಳು ಕೈಕೊಂಡ ಮಾರ್ಗವಿದು ರಾಜಧಾನಿಯಾದ ಟೋಕಿಯೋಕ್ಕೆ ಬಂದಳು, ಹಬ್ಬಗಳಲ್ಲಿ ಹಾಕಿಕೊಳ್ಳುವ ಉಡುಪನ್ನು ಧರಿಸಿದಳು. ಸೊಂಟಕ್ಕೆ ಒಂದು ಚಿನ್ನದ ನಡುಕಟ್ಟನ್ನು ಬಿಗಿದಳು. ಕ್ಷಣಕಾಲ ಪ್ರತಿಮೆಯಂತೆ ನಿಂತಿದ್ದಳು ಅನಂತರ ಸಾಮುರಾಯ್ ಸಂಗಡದ ಪೂಜ್ಯವಸ್ತುವಾದ ಕತ್ತಿಯನ್ನು ಹಿರಿದು ಅದನ್ನು ತನ್ನ ತೀಕ್ಷವಾದ ದೇಹದೊಳಕ್ಕೆ ನುಗ್ಗಿಸಿದಳು. ಒಂದೆರಡು ನಿಮಿಷಗಳು ಹಾಗೆಯೇ ನಿಂತಿದ್ದು ಆ ಮೇಲೆ ಮೃತಳಾದಳು.

ಜಪಾನಿನ ಸ್ತ್ರೀಯರು ತಮ್ಮ ಗಂಡಸರಿಗ ದೇಶಸೇವೆಮಾಡಲು ಆಯುಧಗಳನ್ನು ಒದಗಿಸಲು ತಮ್ಮನ್ನೇ ಗುಲಾಮಗಿರಿಗೆ ಮಾರಿಕೊಂಡ ಎಷ್ಟೋ ಜನರು ಅನೇಕರಿದ್ದಾರೆ

* * * *

ಈಗ ಈ ದೇಶದ ವಿಮಾನ ಸೈನ್ಯದಲ್ಲಿ ಒಂದು ದಳವಿದೆ ಇವರು ಸಾಯುವ ನಿರ್ಧಾರವಿದು. ಘಂಟೆಗೆ ೭೦೦ ಮೈಲಿ ಹೋಗುವ ವಿಮಾನದಲ್ಲಿ ೧೦೦೦ ಪೌಂಡು ತೂಕವುಳ್ಳ ಬಾಂಬುಗಳನ್ನು ಇಟ್ಟುಕೊಂಡು ಹೊರಡುವುದು ಯಾವುದನ್ನು ನಾಶಪಡಿಸಬೇಕೋ ಅದರ ಮೇಲೆ ಅಂತರಿಕ್ಷದಿಂದ ವಿಮಾನ ಸಹಿತ ಬೀಳುವುದು. ಹಾಗೆ ಬಿದ್ದಾಗ ಆಗುವ ಸ್ಫೋಟದಲ್ಲಿ ನಿಷೇಧಿಸಿದ ವಸ್ತುವನ್ನು ನಾಶಮಾಡುವುದಲ್ಲದೆ ತಾವೂ ನಾಶಹೊಂದುವರು. ಈ ಮರಣಕ್ಕಾಗಿಯೇ ಇವರು ಈ ವಿಮಾನದ ಗಳಲ್ಲಿ ಕೆಲಸಮಾಡುತ್ತಿದ್ದಾರೆ.

ಜಪಾನಿನ ಸ್ತ್ರೀಯರು ತಮ್ಮ ಕೂದಲುಗಳಿಂದ ಒಂದು ದೊಡ್ಡ ರಾಷ್ಟ್ರಧ್ವಜವನ್ನು ನೇದಿದ್ದಾರೆ ಇದರ ಮೇಲೆ ಸೂರ್ಯೋದಯದ ಲಾಂಛನವಿದೆ. ಈ ಪತಾಕೆಯು ಈಗ ಟೋಕಿಯೋನ ರದಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಇದನ್ನು ಸೈನ್ಯದ ಇಲಾಖೆಗೆ ಕೊಡಲಾಗುವುದು. ಯುದ್ಧವು ಸಂಭವಿಸಿದಲ್ಲಿ ಸೈನಿಕರು ರಣರಂಗದಲ್ಲಿ ಪತಾಕೆಯನ್ನು ನೋಡಿದರೆ, ಮನೆಯಲ್ಲಿರುವ ತಮ್ಮ ಸ್ತ್ರೀಯರನ್ನು ಜ್ಞಾಪಕ ತಂದುಕೊಂಡು ತಮ್ಮ ದೇಶಭಕ್ತಿಯನ್ನು ಸೂರ್ಯಾದಿಯಾಗಿ ತೋರಿಸುತ್ತಾರಂತೆ. ಈ ಪತಾಕೆಯನ್ನು ನೇಯಲು ದೇಶಭಕ್ತಿ ಪ್ರೇರೇಪಿತರಾದ ೮೦೦ ಮಂದಿ ಸ್ತ್ರೀಯರು ತಮ್ಮ ತಲೆ ಕೂದಲುಗಳನ್ನು ಸಮರ್ಪಿಸಿದ್ದಾರಂತೆ!

ಪ್ರ. ಮ

ದ. ಕ. ಜಿಲ್ಲಾ ೯ನೇಯ ಒಕ್ಕಲಿಗರ ಸಹಕಾರ ಸಮಿತಿಯ

ವಾರ್ಷಿಕ ಮಹಾಸಭೆ

ದಕ್ಷಿಣ ಕನ್ನಡ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿಯ ೯ನೇಯ ವಾರ್ಷಿಕ ಮಹಾಸಭೆಯು ತಾ. ೨೧-೯ ೩೬ನೇ ಸೋಮವಾರ ಸಾಯಂಕಾಲ ಘಂಟೆ ೪ಕ್ಕೆ ಕೊಳಂಬೆ ಶಾಲೆಯ ಬಳಿಯಲ್ಲಿ ಶ್ರೀ. ಪಿ. ಶ್ರೀನಿವಾಸರಾವ್ ಬಿ. ಎ, ಇವರ ಅಧ್ಯಕ್ಷತೆಯಲ್ಲಿ ಜರಗಿತು ಕೊಳಂಬೆ, ಕಂದಾವರ ಆದ್ಯಪಾತಿ ಗ್ರಾಮಗಳ ಜನತೆಯು ಸೈಕಿ, ಸುಮಾರು ೩೦ ಜನ ಗಂಡಸರು ಮತ್ತು ಹೆಂಗಸರು ನೆರೆದಿದ್ದರು. ಸಮಿತಿಗೆ ಸೇರಿದ ೯೫ ಕುಟುಂಬಿಕರ ಪ್ರತಿನಿಧಿಗಳು, ಈ ಸಭೆಯಲ್ಲಿ ಹಾಜರಿದ್ದರು.

ಒಕ್ಕಲಿಗರ ಸಹಕಾರ ಸಮಿತಿಯ ವ್ಯವಸ್ಥಾಪಕರಾದ ಶ್ರೀಯುತ ಬಿ. ಟಿ. ರೈಗಳವರು ಸಮಿತಿಯ ೯ನೇಯ ವಾರ್ಷಿಕ ಮಹಾಸಭೆಯ ವರದಿಯನ್ನು ಓದಿ ನೆರೆದ ಸಭಿಕರಿಗೆ ಸವಿಸ್ತಾರವಾಗಿಯೂ, ಹೃದಯಂಗಮವಾಗಿಯೂ ವಿವರಿಸಿ, ಸಮಿತಿಯ ಲೆಖ್ಖ-ಪತ್ರಗಳ ಸಂಪೂರ್ಣ ವಿವರವನ್ನು ಸಭೆಯ ಮುಂದಿಟ್ಟರು ಅನಂತರ ಹಳ್ಳಿಯ ಜನತೆಯು ಹೇಗೆ ಸ್ವತಂತ್ರವಾಗಿ ತನ್ನ ಆರ್ಥಿಕನುಟ್ಟಿಗನುಸಾರವಾಗಿ ನಡೆಯಬೇಕೆಂದೂ, ಯಾವ ರೀತಿಯಲ್ಲಿ ಸ್ಪೃಶ್ಯಾಸ್ಪೃಶ್ಯ ಯರ ವಿಚಾರವು ಶುಷ್ಕವಾದದೆಂದೂ, ಪ್ರಕೃತದ ಪರಿಸ್ಥಿತಿಗನುಸಾರವಾಗಿ ಗ್ರಾಮಗಳ ಆರ್ಥಿಕಸ್ಥಿತಿಯನ್ನು ಯಾವ ವಿಧಾನದಲ್ಲಿ ಸುಧಾರಿಸಬಹುದೆಂದು, ವಿವರಿಸಿ ಕಾರ್ಯರೂಪದಲ್ಲಿ ಮಾಡಿರುವ ವಿಚಾರಗಳನ್ನು ನಿದರ್ಶನವಾಗಿ ತೋರಿಸಿ, ಯಾವ ವಿಧಾನದಲ್ಲಿ ಅವುಗಳನ್ನು ಉಚ್ಚಸ್ಥಿತಿಗೆ, ತರಬೇಕೆಂದೂ ಮೊದಲಾದ ಅನೇಕ ವಿಚಾರಗಳನ್ನು ಸ್ಫೂರ್ತಿದಾಯಕವಾಗಿ, ತುಳುಭಾಷೆಯಲ್ಲಿ ಶಿಕ್ಷಿತ ಮತ್ತು ಅಶಿಕ್ಷಿತ ಜನರಮನಸ್ಸಿನಲ್ಲಿ ಕೂಡಾ ಖಚಿತವಾಗುವಂತೆ, ವಿವರಿಸಿ ಹೇಳಿದರು.

ಅನಂತರ ಶ್ರೀ ಕೆ. ಹೈದರವರು, ಗ್ರಾಮಗಳ ಆರ್ಥಿಕ ದುಃಸ್ಥಿತಿಯ ಪ್ರಮುಖ ಕಾರಣಗಳನ್ನು ಹಸಿವೆಯ ಪ್ರಕೃತದ ಕಾರಣವನ್ನೂ, ಸರಕಾರದ ಗ್ರಾಮೋದ್ಧರಗಳಿಗೆ, ವಿನಿಯೋಗಿಸಿದ ಅಲ್ಪ ಹಣವು ಎಷ್ಟೊಂದು ಪರಿಹಾಸ್ಯಕಾರಕವಾದದೆಂಬುದರ ಕುರಿತು, ಸ್ವತಂತ್ರರಾಗಿ ಗ್ರಾಮಸ್ಥರೇ ಒಗ್ಗಟ್ಟಿನಿಂದ ಕೆಲಸಮಾಡಿ, ಸ್ವಸಂಪೂರ್ಣ ಗ್ರಾಮಗಳನ್ನಾಗಿ ಹೇಗೆ ಮಾಡಬಹುದೆಂಬೂ, ತುಳುವಿನಲ್ಲ ವಿವರಿಸಿದರು.

ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಏಕಮಾತ್ರ ಸಂಸ್ಥೆಯಾದ ಸಹಕಾರ ಸಮಿತಿಯ ಸ್ಥಾಪನೆ ಮತ್ತು ವ್ಯವಸ್ಥಾಪನೆ ಪ್ರಶಂಶಿಸಿ ಮಾತಾಡಿದರು.

ಶ್ರೀ. ಪಿ. ಶ್ರೀನಿವಾಸರಾಯರು, ತಮ್ಮ ಅಧ್ಯಕ್ಷತೆಯ ಭಾಷಣದಲ್ಲಿ ಗ್ರಾಮಸ್ಥರ ವಿಶೇಷವಾದ ಸಾಲದ ಹೊರೆಯ ಕುರಿತೂ, ಸರಕಾರದ ಒತ್ತಾಯ ಪೂರ್ವಕವಾದ ತೀರ್ವೆಯ ವಿಚಾರವೂ, ಹಳ್ಳಿಗರು ಮದ್ಯಪಾನ ಮೊದಲಾದ ವಿಚಾರಗಳಿಗೆ ದುರ್ವ್ಯಯ ಮಾಡದೆ ಅವುಗಳಿಗೆ ತಿಲೋದಕವನ್ನೀಯಬೇಕಾಗಿಯೂ, ಸ್ಪೃಶ್ಯಾಸ್ಪೃಶ್ಯ ವಿಚಾರ,ಸಮೂಹಿಕ ವಿದ್ಯಾಭ್ಯಾಸ, ಮೊದಲಾದ ಅನೇಕ ವಿಚಾರಗಳ ಕುರಿತು ಸರಳವಾದತುಳುಭಾಷೆಯಲ್ಲಿ ವಿವರಿಸಿದರು.

ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀ ಯು, ರಾಮಮೋಹನ ರೈಗಳು, ಅಧ್ಯಕ್ಷರಿಗೂ, ಭಾಷಣಕರ್ತರಿಗೂ ಮತ್ತು ನೆರೆದ ಉತ್ಸಾಹಿಕ ಸಭಿಕರಿಗೂ ಅಭಿನಂದನೆಗಳನ್ನರ್ಪಿಸಿದ ಬಳಿಕ ಸಭೆಯು ಮುಕ್ತಾಯವಾಯಿತು.

ನೋಟೀಸು.

ಉಡ್ಪಿತಾಲ್ಲೂಕು ಬಾರಕೂರಲ್ಲಿರುವ ಸಾಹುಕಾರ್ ಕಲ್ಮಾಡಿ ಮಂಜುನಾಥ ಕಾಮತನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ:—

ನಾನು ಈವರೆಗೆ ಬಾರಕೂರಲ್ಲಿ ಮಾಡಿಕೊಂಡು ಬಂದ ವ್ಯಾಪಾರವು ನನ್ನ ಸ್ವಂತ ಸಂಪಾದನೆದ್ದಾಗಿರುತ್ತದೆ. ವಿನಹ ಹಿರಿಯರದೇನೂ ಇರುವದಿಲ್ಲ. ಅದ್ದರಿಂದ ನನ್ನಿಂದ ಹೊರಗೆ ಸಲುವಂಥಾದ್ದಕ್ಕೂ ಹೋಗಿನಿಂದ ನನಗೆ ಬರುವಂಥಾದ್ದಕ್ಕೂ ನಾನೇ ಜವಾಬ್ದಾರನಾಗುತ್ತೇನೆ ಹೊರತು ನನ್ನ ಮಕ್ಕಳಾದ (೧) ಕೃಷ್ಣರಾಯ ಕಮ್ತಿ, (೨) ಅಪ್ಪಾಯ ಕಮ್ತಿ, (೩) ಸದಾಶಿವ ಕಮ್ತಿ ಇವರಿಗೆ ವಸೂಲು ಮಾಡುವ ಅಧಿಕಾರವೇನೂ ಇರುವುದಿಲ್ಲ. ಅಲ್ಲದ ಅವರುಗಳೊದಲು ಮಾಡಿದ ಯಾ ಮುಂದೆ ಮಾಡುವ ಸಾಲವಗೈರೆಗಳನ್ನು ತೀರಿಸಲು ಅವರೇ ಜವಾಬ್ದಾರರಾಗಿರುತ್ತಾರೆ. ಅಲ್ಲದೆ ನಾನು ಅವರ ಯಾವದೊಂದು ತರದ ಲೇವಾದೇವಿಗೆ ಅಂದರೆ ಮೊದಲು ಮಾಡಿದ ಯಾ ಇನ್ನು ಮಾಡುವ ಸಾಲಗಳಿಗೆ ನಾನು ಹೊಣೆಯಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಯಾರಾದರೂ ನಡೆದರೆ ಅವರೇ ಜವಾಬ್ದಾರರಾಗಿರತಕ್ಕದ್ದು.

ಮಂಜುನಾಥ ಕಮ್ತಿ ರುಜು.

ಶ್ರೀ ಹರಿಹರ ಪುರಾಣ ಪಾರಾಯಣ ಸಂಘ, ಮುಂಬಾಯಿ

ನಾವು ಪ್ರತಿವರ್ಷದಂತೆ ಈ ವರುಷವೂ ಮುಂಬಾಯಿ ಕೋಟೆಯೊಳಗಿನ ಅಪೊಲೊ ರಸ್ತೆಯಲ್ಲಿರುವ ಸರದಾರ ಬಿಲ್ಡಿಂಗಿನ ಕೆಳಗಿರುವ ಆರ್ ಕೆ ಮೋಟಾರ ಕಂಪೆನಿಯಲ್ಲಿ ಕಳೆದ ಆಗೋಸ್ತು ತಿಂಗಳಾದಿಯಿಂದ ಭವಿಷ್ಯೋತ್ತರ ಮಹಾಪುರಾಣದೊಳಗಿನ ವೆಂಕಟಗಿರಿ ಮಹಾತ್ಮೆ ಎಂಬ ಪುಣ್ಯಗ್ರಂಥವನ್ನು ಪ್ರತಿದಿನದಲ್ಲಿ ಪಾರಾಯಣ ಮಾಡುತ್ತಿದ್ದು ಇದೇ ಸಪ್ಟಂಬರ ತಾ 12ನೇ ಶನಿವಾರ ರಾತ್ರಿ ಮಂಗಳೋತ್ಸವ ನೆರವೇರಿತು. ಈ ವರ್ಷ ಪಾರಾಯಣದ ಕಲಸವನ್ನು ಶ್ರೀ ಸುರತ್ಕಲ್ ಚಂದ ನೇಸು ಸೆಟ್ಟಿಗಾರರೂ, ಅರ್ಥ ಹೇಳುವದನ್ನು ಶ್ರೀ ಸುರತ್ಕಲ್ ನಾರಾಯಣ ಪಿ ಸೆಟ್ಟಿಗಾರರೂ ವಹಿಸಿಕೊಂಡು, ಕ್ಲಪ್ತ ಕಾಲಕ್ಕೆ ಸರಿಯಾಗಿ ಒಂದು ವಾಚಕ ನೂಡುತಿದ್ದುದಕ್ಕಾಗಿ ನಾವು ಅವರಿಗೆ ಧನ್ಯವಾದ ಅರ್ಪಿಸುತ್ತೇವೆ. ಶ್ರೀಯುತ ಚಂದಸೆಟ್ಟಿಗಾರರು ಈ ವರುಷ ವಾಚನದ ಸರ್ವ ಖರ್ಚನ್ನೂ ತಾವೇ ವಹಿಸಿಕೊಂಡದ್ದಲ್ಲದೆ ನಮಗೆ ಅನುಕೂಲವಾದ ಸ್ಥಳವನ್ನು ಒದಗಿಸಿಕೊಟ್ಟುದಕ್ಕಾಗಿ ನಾವು ತುಂಬಾ ಋಣಿಯಾಗಿದ್ದೇವೆ. ಓದಲಿಕ್ಕೂ ಅರ್ಥ ಹೇಳುವದಕ್ಕೂ ಪ್ರತಿದಿವಸದಲ್ಲಿಯೂ ಬಂದು ನಮಗೆ ಹೆಚ್ಚಿನ ಸಹಾಯ ಮಾಡುತ್ತಿದ್ದ ಶ್ರೀಯುತರುಗಳಾದ ಸುರತ್ಕಲ್ ಗೋವಿಂದ ಅಣ್ಣು ಸೆಟ್ಟಿಗಾರ, ಕಲ್ಲಾಪು ಕೆ ಪಿ ಸೆಟ್ಟಿಗಾರ, ಕುತ್ಯಾರು ಹೊಸ್ಮಯ್ಯ ಜಿ ಸೆಟ್ಟಿಗಾರ, ಸುರತ್ಕಲ್ ಬಾಬುಮೊಂಡನ್‌ರವರು, ಕಲ್ಲಾಪು ಕೊಗ್ಗ ಪಿ ಸೆಟ್ಟಿಗಾರ- ಇವರೆಲ್ಲರಿಗೂ ನಾವು ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಎರಡು ತಿಂಗಳಿಂದಲೂ ನವ ... ವಾಚನದ ಸಮಯ ... ನಮಗೆ ಬೇಕಾದ ಸಹಾಯ ಮಾಡುತ್ತಿದ್ದ ಶ್ರೀಯುತರುಗಳಾದ ಮಾಸ ... ಕಿಲ್ಲ ಮುಡುಕೂರು ರಾಮಣ್ಣಸೆಟ್ರು, ನಿಡ್ಡೋಡಿ ಚಂದುಸೆಟ್ರು, ಮೂಲ್ಕಿ ಮುದ್ದುಸಿ ಪುತ್ರನ್ ಉಚ್ಚಿಲ ಸೀನಪೂಜಾರಿಯವರು, ಸುರತ್ಕಲ್ ಮಂಜಯ್ಯಸೆಟ್ಟಿಗಾರ, ಎಸ್ಮಾರ್ಗಲ್ ಮುತ್ತಪ, ಪಿ ಸುವರ್ಣ, ಸುರತ್ಕಲ್ ನಾರಾಯಣ ಬಿ ಸೆಟ್ಟಿಗಾರ, ಕುತ್ಯಾರು ಅಣ್ಣಪ್ಪಬಂಗೇರ -ಇವರೆಲ್ಲರಿಗೂ ನಮ್ಮ ಅನಂತ ವಂದನೆ. ಮಂಗಳೋತ್ಸವ ಕೊನೆಗೊಂಡ ತರುವಾಯ ಶ್ರೀ ಸುರತ್ಕಲ್ ಗೋವಿಂದ ಕರ್ಕೇರರ ಭಾಗವತಿಗೆಯಿಂದಲೂ, ಶ್ರೀ ಸಂಜೀವಸೆಟ್ಟಿ ಮೃದಂಗನಾದದಿಂದಲೂ, ಅಂಗದಸಂಧಾನವೆಂಬ ಪ್ರಸಂಗವನ್ನು ಪ್ರಾರಂಭಿಸಿ, ಮೂಲ್ಕಿ ದೊಂಬಸೆಟ್ರು ರಾವಣನ ಪಾತ್ರ ವಹಿಸಿ ಸುರತ್ಕಲ್ ನಾರಾಯಣ ಪಿ ಸೆಟ್ಟಿಗಾರ ರಾವಣನ ಪಾತ್ರ ವಹಿಸಿ, ಕುತ್ತೆತ್ತೂರು ರಾಮಣ್ಣಸೆಟ್ಟು ಅಂಗದನ ಪಾತ್ರವನ್ನೂ ಉಳ್ಳಾಡಿ ವಾಸುಸೆಟ್ರು ಪ್ರಹಸ್ತನ ಪಾತ್ರವನ್ನೂ ಮುಲ್ಕಿ ಶಿವಪ್ಪ ಅಂಚನ್ ಸುಗ್ರೀವನ ಪಾತ್ರವನ್ನೂ ವಹಿಸಿಕೊಂಡು ನಡೆದ ಸಬಕರ ಮನವನ್ನು ಸಂತೋಷಗೊಳಿಸಿದುದಕ್ಕಾಗಿ ಇವರ ಉಪಕಾರಸ್ಮರಣೆ ಮಾಡುತ್ತೇವೆ.

ಇಂತಿ ಸಂಘದವರ ಪರವಾಗಿ
ಕೆ ಜಿ. ಕರ್ಕೇರ, ಸೆಕ್ರೆಟರಿ

ಅಧ್ಯಾಪಕಿಯರ ಸಭೆ

1936ನೇ ಇಸವಿ ಸಪ್ಟಂಬರ ತಾ 12ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಪುತ್ತೂರು ಕೋ-ಒಪರೇಟಿವ್ ಬಿಲ್ಡಿಂಗಿನಲ್ಲಿ ಪುತ್ತೂರು ತಾಲೂಕಿನ ಬೋರ್ಡ ಶಾಲಾ ಉಪಾಧ್ಯಾಯಿನಿಯರ ಸಭೆಯು ಶ್ರೀಮತಿ ಜಿ ಸುಂದರಿ ಬಾಯಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆಳಗೆ ಕಾಣಿಸಿದಂತೆ ಸರ್ವ ಸಮ್ಮತದಿಂದ ನಿರ್ಣಯಗಳು ಮಾಡಲಾಯಿತು.

(1) ಉಪಾಧ್ಯಾಯ ಮತ್ತು ಉಪಾಧ್ಯಾಯಿನಿಯರಿಗೆ ಏಕ ಪ್ರಕಾರವಾದ ಸಂಬಳದ ಸ್ಕೇಲನ್ನು ಇದುವಂತೆ ಗವರ್ನ್‌ಮೆಂಟ್ ಹುಕುಂ ಈಗ ವಾನೇ ಹೊರಟಿರುವುದಾಗಿಯೂ ಆದರ ಪರಿಣಾಮ ವಾಗಿ ನಮ್ಮ ಡಿಸ್ಟ್ರಿಕ್ಟ ಬೋರ್ಡಿನವರು ಉಪಾಧ್ಯಾಯಿನಿಯರ ಸಂಬಳದ ಸ್ಕೇಲನ್ನು ಉಪಾಧ್ಯಾಯರ ಸ್ಕೇಲಿನಷ್ಟಕ್ಕೆ ತಗ್ಗಿಸುವ ಸಂಭವವಿದೆಯೆಂತಲೂ ಕೇಳಿ ಪುತ್ತೂರು ತಾಲೂಕಿನ ಬೋರ್ಡ ಶಾಲೆಗಳ ಉಪಾಧ್ಯಾಯಿನಿಯರು ತುಂಬಾ ವಿಷಾದ ಪಡುತ್ತಾರೆ. ಈ ಕಷ್ಟಕಾಲದಲ್ಲಿ ಬೋರ್ಡಿನವರು ಉಪಾಧ್ಯಾಯಿನಿಯರ ಸಂಬಳ ಕಡಿಮೆಮಾಡಿ ಅವರು ತಮ್ಮ ಕೆಲಸದಲ್ಲಿ ನಿರುತ್ಸಾಹ ಪಡುವಂತೆ ಮಾಡಬಾರದಾಗಿ ಈ ಸಭೆಯು ದೈನ್ಯಭಾವದಿಂದ ಪ್ರಾರ್ಥಿಸಿಕೊಳ್ಳುತ್ತದೆ (2) ಉಭಯತರಿಗೂ ಒಂದೇ ಸ್ಕೇಲನ್ನು ಇನ್ನು ಮುಂದೆ ಕೆಲಸಕ್ಕೆ ಸೇರುವವರ ಸಂಬಂಧವಾಗಿ ಮಾತ್ರ ವಿಹಿತ ಹುದ್ದೆಗಳ ಈಗ ಇರುವವರಿಗೆ ಅದನ್ನು ಅನ್ವಯಿಸ ಬಾರದಾಗಿ ಈ ಸಭೆಯು ಬೇಡಿಕೊಳ್ಳುತ್ತದೆ (3) ಹಾಗೂ ಸ್ಕೇಲು ಈಗಲೇ ಕಡಿಮೆಮಾಡಬೇಕೆಂತ ಒಂದುವೇಳೆ ಮಾನ್ಯ ಡಿ ಬೋರ್ಡಿನವರು ನಿರ್ಣಯಿಸುವುದಾದರೂ ಸಂಬಳದ ಸ್ಕೇಲಿನ ಪರಮಾವಧಿಯನ್ನು ಮಾತ್ರ ತಗ್ಗಿಸಿ ಅದಕ್ಕಿಂತ ಹೆಚ್ಚಿಗೆ ಈಗ ಸಿಕ್ಕುವವರಿಗೆ ಅಷ್ಟರ ಮಟ್ಟಿಗೆ ಪರ್ಸನಲ್ ಎಲೋವನ್ಸಾಗಿ ಕೊಡಬೇಕೆಂತ ಈ ಸಮ್ಮೇಲನವು ಪ್ರಾರ್ಥಿಸುತ್ತದೆ.

ಮೇಲಿನ ನಿರ್ಣಯದಲ್ಲಿ ಹೇಳಿಕೊಂಡದ್ದು ನ್ಯಾಯ ಸಮ್ಮತವಾದ್ದರಿಂದ ಆ ರೀತಿ ವರ್ತಿಸ ಬಹುದೆಂದು ಸಂಬಂಧಪಟ್ಟ ಸ್ಥಾನಿಕ ಸಂಸ್ಥೆಗಳಿಗೆ ಹುಕುಂ ದಯಪಾಲಿಸಬೇಕೆಂದು ಗವರ್ನಮೆಂಟಿನವರನ್ನು ಈ ಸಮ್ಮೇಲನದವರು ಕೇಳಿಕೊಳ್ಳುತ್ತಾರೆ. ಈ ವಿಷಯದ ಕುರಿತು ಮಾನ್ಯ ಮಂತ್ರಿಗಳ ಕಡೆ ವಿಜ್ಞಾಪಿಸಿಕೊಂಡು ಉಪಾಧ್ಯಾಯಿನಿಯರಿಗೆ ಈ ಕಷ್ಟದಿಂದ ಪಾರು ಮಾಡುವರೆ ಮದರಾಸು ನ್ಯಾಯವಿಧಾಯಕ ಸಭೆಯ ಸಭಾಸದರಾದ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರನ್ನು ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು. ಮತ್ತು ಬೋರ್ಡಿನ ಸ್ತ್ರೀ ಸದಸ್ಯರು ಈ ಕುರಿತು ನಮಗೆ ಸಂಪೂರ್ಣ ಬೆಂಬಲವನ್ನಿತ್ತು ನಮ್ಮ ಕಡೆಯಿಂದ 1ನೇ ನಿರ್ಣಯದಲ್ಲಿ ಪ್ರಾರ್ಥಿಸಿಕೊಂಡಂತೆ ಬೋರ್ಡಿನವರು ಉಪಾಧ್ಯಾಯಿನಿಯರನ್ನು ಕಷ್ಟದಿಂದ ವಿಮೋಚನೆ ಮಾಡುವಂತೆ ಆಗ್ರಹಪೂರ್ವಕವಾಗಿ ಕಾದಾಡಬೇಕಾಗಿ ಕೇಳಿಕೊಳ್ಳುವಂತೆ ನಿರ್ಣಯಿಸಲಾಯಿತು.

ಮೇಲಿನ ನಿರ್ಣಯಗಳು ಸಫಲವಾಗುವಂತೆ ಅಗತ್ಯವಿರುವ ಮುಂದಿನ ಎಲ್ಲಾ ಕಾರ್ಯಗಳನ್ನು ಮಾಡುವರೆ Miss M Pries, ಮುಖ್ಯ ಉಪಾಧ್ಯಾಯಿನಿ ಬೋರ್ಡ್ ಮಾಪಿಳ್ಳ ಶಾಲಾ (2) Miss P. Girija Bai, ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಸಹಾಯಕ ಉಪಾಧ್ಯಾಯಿನಿ ಇವರಿಬ್ಬರಿಗೆ ಸಂಪೂರ್ಣ ಅಧಿಕಾರ ಕೊಡಲಾಯಿತು.

ಉತ್ತಮ ವರ್ಗದ ಶ್ರೇಷ್ಠವಾದ **ಸರಸ್ವತಿ** ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇದು ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನೈದನೆಯ ಸಂಪುಟವು 1936ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅವಶ್ಯಕವಾದ ಶಿಕ್ಷಣ ಸಾಹಿತ್ಯ ಕಲೆ-ಆರೋಗ್ಯ ಪಾಕಶಾಸ್ತ್ರ ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳು, ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಕಲಿಕೆಗಾಗಿ 'ಮಕ್ಕಳ ಪುಟಗಳು' ಎಂದೇ ಪ್ರಕಟವಾಗುವವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟನಕ್ಕೆ ಅತ್ಯುತ್ತಮವಾದ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ 3—0—0 ಮಾತ್ರ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟ, ಬೆಂಗಳೂರು ನಗರ

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY

SPECIAL FEATURES.

1. Rebate on yearly payment of policies.
2 Rebate for larger assurances
3 Accident Risk covered on small extra premium
4 Attractive Bonuses

It pays you to represent this Company
Wanted Agents in unrepresented part

Apply to —

KOCHIKAR BROTHERS,

Madras Branch Secretaries

BRANCHES AT

P B 337 Mount Road Madras	Visvesvarapuram Circle Bangalore City	Sourashtram Lathwaru Calicut
Car Street Mangalore	Udipi S India	Charni Road Bombay No 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

SUMMARY OF 1935 ACCOUNTS

Total Assets Over	Rs 80 00 000
Life Funds Over	Rs 68 00 000
Premium Income Over	Rs 2 54 000
Interest Income	Rs 3 16 000
Claims Paid	Rs 5,75 000

Total Claims paid over Rs 58 00,000
Total Business in Force Over Rs 1 12 51 200

TOTAL BUSINESS IN FORCE Rs. 4,42,51,200

ಕಸ್ತೂರಿ ಮಿಶ್ರಣ ದಶಮೂಲವೆಂಬ
ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಕೆಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**— ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ,
ಆಯುರ್ವೇದ ಭೂಷಣ ಮಂಗಳೂರು ದ. ಕ.

ಏಜಂಟರು:—ಮೆಸರ್ಸ್ ಓರಿಯಂಟಲ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ. ಸಂಪಿಗೆ ರಸ್ತೆ ಮಲ್ಲೇಶ್ವರಮ್, (ಬೆಂಗಳೂರು ಸಿಟಿ.)

1926ರಲ್ಲಿ ಸ್ಥಾಪಿಸಲ್ಪಟ್ಟಿದು.

ದಿ ಕ್ರೌನ್ ರಬ್ಬರ್ ಸ್ಟಾಂಪ್ & ಕೋ.,

ಬಲ್ಮಠ ರಸ್ತೆ, ಮಂಗಳೂರು.

ಪರ್ಕುಶನ್ ರಬ್ಬರ್ ಸ್ಟಾಂಪು, ರಿವಾಲ್ವಿಂಗ್ ತಾರೀಕು ಸ್ಟಾಂಪು, ಹಿತ್ತಾಳೆ, ಗಾಜು ಮತ್ತು ಮರದ ಸೈನ್ ಬೋರ್ಡು, ಬೇಜು, ಬೆಲ್ಟು, ಮೇಣದ ಮುದ್ರೆ ಮೊದಲಾದುವುಗಳನ್ನು ತಯಾರಿಸುವವರು, ಮರ, ಶ್ವೇತಶಿಲೆ ಮೊದಲಾದುವುಗಳ ಮೇಲೆ ಬ್ಲೋಕ್ ಪ್ರಿಂಟರ್ಸ್, ಡಿಸ್ಯಾನರ್ಸ್, ಎಂಗ್ರೇವರ್ಸ್.

ಕೈ ಬರಹದ ಸಿಟ್ಟು ಮತ್ತು ಕೈ ಬರಹದಚ್ಚು ನಮ್ಮ ವಿಶಿಷ್ಟತೆ.



ನಮಗೆ ಶಾಖೆಗಳಾಗಲಿ, ಏಜೆಂಟರಾಗಲಿ ಇಲ್ಲದಿರುವುದರಿಂದ ಎಲ್ಲಾ ವಿಚಾರಗಳನ್ನೂ ನಮ್ಮ ಮಂಗಳೂರಿನ ಬಲ್ಮಠ ಆಫೀಸಿನಿಂದ ತಿಳಿಯಬೇಕು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸೆಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಿಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

(1907ರಲ್ಲಿ ಸ್ಥಾಪಿತವಾದದ್ದು)

ವೇಲ್ಯುವೇಶನ್ ವರ್ಷ **1936**.

ಕೊನೆಯ ಬೋನಸ ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ ವಿಮಾ ಹಣ ಪಾವತಿ ರೂ. **37** ಲಕ್ಷ ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು.

ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು:—ಅತ್ಯಧಿಕ ನಷ್ಟೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ.

ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಯಿರಿ.

P. D. BHARGOVA,
General Manager, ***AJMER,***
Or SUPERINTENDENT, 278, Linga Chetty Street, MADRAS

Or Chief Agent:—
BELLARY: MADURA: TRICHINOPOLY: VELLORE.

ಕಿರಿಯರ ಪ್ರಪಂಚದ ಪುಸ್ತಕಗಳು.

೧. ನಾಡಕಥೆ	೦	೨	೦
೨. ಮುಂದಿನ ದೇವರು	೦	೨	೦
೩. ಸ್ವತಂತ್ರ ಜೀವನೋಪಾಯ	೦	೨	೬
೪. ಕುಶಲವ	೦	೪	೦
೫. ಸಂಶಯ ಪಿಶಾಚಿ	೦	೬	೦
೬. ಕಾವ್ಯ ಸಾಮ್ರಾಜ್ಯ	೦	೧೨	೦
೭. ಮಧುವನ	೧	೮	೦
೮. ವ್ಯಭಿಚಾರಿಣಿ ಯಾರು	೦	೮	೦

ನಮ್ಮಲ್ಲಿ ಅಖಿಲ ಕರ್ನಾಟಕದ ಆಧುನಿಕ ಕನ್ನಡ ಗ್ರಂಥಗಳು ದೊರೆಯುತ್ತವೆ.

ಕಿರಿಯರ ಪ್ರಪಂಚ, ಉಡುಪಿ, ದ. ಕ.
ಸೋಲ ಏಜೆಂಟರು—
ಸಪ್ಲೈ ಏಜೆನ್ಸಿ ಲಿಮಿಟೆಡ್, ಉಡುಪಿ.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. Pai, Bros.
ಪಿ. ಎ. ಪೈ. ಬ್ರದರ್ಸ್.
ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd.,

Head Office. MANGALORE. Branch Office Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ ಉಡುಪಿ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2 ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½. ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4½. 1 ವರ್ಷದ ಬಾಬ್ತು ಸಾ. ಶೆ. 5½ 3 ವರ್ಷ ವ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೊ. ನೋಟು, ಹುಂಡಿ, ಸರಕು, ಪಗ್ಗರಿ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ರೂ. 100 ಅಥವಾ ಅದರ ಮೇಲಿನ ಎಮೌಂಟಿಗೆ ಸಾ. ಶೆ. 8. ಮತ್ತು ಅದಕ್ಕಿಂತ ಕೆಳಗಣದು ಸಾ. ಶೆ. 9ರ ದರದ ಬಡ್ಡಿಯಲ್ಲಿಯೂ ಸಾಲ ದೊರೆವುದು ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ತಾಲೂಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ವಿಜಯ ಬ್ಯಾಂಕ್, ಲಿಮಿಟೆಡ್ K. Gopalkrishna Shetty.
ಚೆಯರ್ಮೇನ್ ಕದ್ರಿರೋಡ್, ಮಂಗಳೂರು. ಸೆಕ್ರೆಟರಿ.

ಕಸಿಗಿಡಗಳು.

ಸಪ್ಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಕಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕೆಟಲಾಗ್ಗೆ ಈಗಲೇ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ವಾದಶೀಪ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ., ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋಸ್ ಸ್ಟೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

The last Dt. Board meeting

Collector Presidents' actions criticised

PRESIDENT HECKLED.

(From a correspondent)

The meeting of the Board on the 22nd of October was a very lively one, probably the most lively of the meetings so far witnessed by the public. At the outset the President thanked the members who had withdrawn the questions sent by them. It will be interesting to know who these members are and why they obliged the President. Mr. A. B. Shetty asked the President why some of the resolutions and questions sent by the members in one time were not found in the agenda and why portions of certain questions were omitted and whether the members concerned had been written to about the matter. He also drew the attention of the President to the fact that the supplementary questions and answers at the last meeting had neither been fully nor correctly entered in the proceedings as required by the rules. He wanted to know what arrangements had been made this time to note down supplementary questions and answers. The President said that he had no proper staff for the work and that attempts will be made to take down questions and answers as far as posible. Dr Vittal Shetty pointed out that the rules required that supplementary questions and answers should be fully reported and not "as far as possible."

The questions covered 23 pages of typed matter, but the answers were in most cases very brief. They were 'telegraphic' in their brevity, as observed by Dr. Shetty. First came the questions of Mr. K. Venkappa Shetty regarding the issue of profession tax demand notices in 1934, 1935 and 1936. The answers showed that the notices were issued within the statutory time and that the allegations made in 'Kanteerava' and 'Justice' paper that some of these notices were delayed for election purposes were without foundation The Collector refused to comply with the request of the Ex-President to lend the services of the village officers for this work while he himself utilised his revenue agency for this purpose when he was ex-officio President. The delay in issuing demand notices in 1934 and 1935 were due to inadequate staff as revealed in the answeres given. The next set of questions by Mr. Venkappa Shetty and the answers given to them go to show that in spite of inadequate staff the salaries of Elementary School teachers were disbursed in proper time except in 2 months in 1935 when there was some delay on account of revision of pay and of fixing them on the basis of past service. Thus another of the charges made against the past administration was shown to be groundless. The information furnished in reply to Mr B. Shivarama Shetty's questions gives the lie direct to the accusation that the Board was made bankrupt by wasteful expenditure during the last regime. The causes for the present depleted finances of the Board are seen to be the abolition of tolls, the liabilities taken over as the result of the abolition of taluk boards, the withdrawal of compassionate grants, the reduction in the motor license fee income, the introduction of higher scales of pay for Elementary School teachers as ordered by Government. In spite of these and other extra commitments and reductions in the income of the Board, the Board had a closing balance of Rs. 75,551 at the end of last March. Mr. A. B. Shetty asked the President what basis there was for the allegation that the Board had been reduced to bankruptcy during the previous regime, when there was such a large opening balance and whether the present President had himself made such an allegation during his tours. The President gave away the whole case by saying in reply that he said it for mere fun to people who came asking for various things to be done by the Board Dr. Shetty cornered him further by asking whether he made such a remark at public meeting also and that also was meant as a joke.

The questions which the President found it most uncomfortable to deal with were those relating to the doings of the Collector-President, the way in which attendance was checked by locking up gates and keeping police guard over them, the punishments given to the clerks, peons and other employees, the notice warning the staff against speaking about the sub-court decree passed on him etc. 'No information' was the stereotyped reply to many of these questions.

Question-time lasted for nearly an hour and then the discussion about allowing Dr. Shetty to move his resolutions relating to the removal of 1 anna cut in District Board employees, salaries and of ½ anna additional cut on the pay of Elementary School teachers was carried on till 4 o'clock in the evening. The President read out the Government order received on the budget sanctioning the cuts imposed and declining to give any loan for meeting deficits in the general budget. It was pointed out to the President that this order was based on the information given in the budget and that he should have communicated to Government that the opening balance was now found to be Rs. 75,551/- as against Rs. 28,740/- shown in the budget. The President used strange logic and said he did not think it necessary. He suggested that a committee might be appointed to go into the finances of the Board. The Vice-President and Mr. K. J. Ballal supported this idea. Mr. Manjaya Hegde wanted precedence for his resolution asking that Rs. 10,000/- of the balance amount should first be set apart for village road and water supply works. Dr. Shetty and others urged that he should be given a chance to move his resolutions and speak on them. Mr. Ballal desired to have a ruling from the chair with a view to take up first the proposed to appoint a committee. Mr. A. B. Shetty pointed out that no such ruling could be asked for. It became clear that there was no alternative but to allow the resolutions to be moved in the order they were placed on the agenda.

First, Mr V. Ramanna Shetty's resolution urging Government to sanction personal pay to ex-Taluk Board clerks was passed. It was next resolved at the instance of Mr. A. B. Shetty to form a committee to frame regulations for the conduct of business at meetings. Dr. Vittal Shetty's resolution for the removal of cut in the salaries of District Board employees was next taken up. Mr. Vaikunta Baliga and Mr. Shresta supported this resolution. Dr. Achar did not like the idea that Dr. Shetty should have all the credit and so he forestalled the next resolution of Dr. Shetty by an amendment asking for the

removal of the additional half-anna cut on the pay of Elementary School teachers' Mr. Manjayya Hegde's resolution to allot Rs. 10,500/- out of the balance for ruraj communications and water-supply was tacked on to Dr. Shetty's resolution. The President saw how the wind was blowing and he had to take the resolution as carried. Mr. B. Venkappa Rai's resolution that books and slates should be distributed free to Adi-dravida children in Board Schools was accepted without discussion. The administration report of the Board for the year 1935-36 was passed. Mr A. B Shetty acknowledged his obligations to the Vice-President and the members who had rendered him help in discharging his duties and he expressed his appreciation of the good work done by the staff under discouraging circumstances and his regret at the harassing treatment to which several of them among other employees were subjected just after the elections. He made special mention of the invaluable services rendered by the Secretary of the Board and hoped that the President would recommend the higher scale of pay to be sanctioned for him.

The last of the items considered at this meeting was the ruling given by the President at the meeting of the committee which met to consider what justifications there was for the Collector-President's remarks that there was a chaotic state in the District Board Office Mr. A. B. Shetty asked why the President accepted the resolution and then took 3 months to nullify it by his ruling and he showed how the President was more anxious to shield Mr. Gawne than to stand up for the good name of a local self-govt institution. The Vice-President used sophistical language to justify the ruling given his by chief. Mr. Vaikunta Baliga rose to the occasion by making a well-reasoned speech that Mr. Gawne's unwarranted remark was a reflection against the whole Board and it was up to every one of them to enter their emphatic protest against it. This matter was allowed to lie over and the meeting came to a close at 5-30 P. M without disposing of even one-third of the business on the agenda.

ESTD. 1906

CANARA BANK, LIMITED.

OFFICES AT

Alleppey	Chikmagalur	Kasargod
Arsikere	Cochin	Mangalore-Bunder
Badagara	Coondapoor	Mangalore-City
Bangalore City	Davangere	Manjeshwar
Bombay-Fort	Dodballapur	Moolky
Bombay-Mandvi	Ernaculam	Payyanur
Buntwal	Ganguli	Puttur
Calicut	Hubli	Udipi
Cannanore	Karkala	

Total Working Funds Rs. 75,00,000

I Write As I Please

by

B. N. RAO

Udipi has now the distinction of having a lady Vice-Chairman for the Municipality in the person of Mrs. Manorama Bai. That a woman should have been unanimously elected to this place of honour. if not of power, in this citadel of orthodoxy came to me as something of a surprise though it is true that her election was a sequel to a scramble for the post among some male members.

A futile resolution.

Dr. P. G Achar's resolution to abolish the Municipality was as futile as flogging a dead horse. We may be cocksure that the Government will not abolish the Municipality even if all the members resign *enbloc* as a protest against its establishment. Dr. Achar disclaimed any intention of adopting a policy of obstructionist tactics, which as Mr. Rego warned the House, would only make the Government to supersede the Municipality and replace it not by a Panchayat Board but a Special Officer, a contingency that is to be avoided as far as possible.

Back to the bullock cart.

An echo of the prevalent revolt against machinery was heard in the Municipal Chamber when Dr Achar moved his sensational resolution to replace the existing motor lorry by bullock carts for watering the streets. The resolution was ultimately withdrawn on an assurance given by the Chairman that he would inquire into the subject

I am not satisfied that bullock carts are more economical than the motor lorry. Bullocks will have to be fed during the monsoon unlike the motor lorry and unless it is suggested that they should be lent to farmers for ploughing the fields, if not as stud bulls, I think bullock carts would be more costly to maintain.

On naming a road.

I feel I must protest against the decision of the Municipality to name the road adjoining the Ajjarkad maidan as Sir Lallubhai Samaldas Road in preference to Gandhi Road. I agree that in consideration of Messers Kochikar Brothers having presented four Petromax lights to the Municipality, the latter should do something in appreciation of their services. But the naming of the road after the Bombay knight who is little known in the town and whose connection with Bombay Life is still less known sounds to me as devoid of meaning. A more sensible thing to have done would be to have named the road as Kochikar Padmanabha Pai Road. Mr. Padmanabha Pai is a businessman of whom Udipi might well be proud, and by honouring him the Municipality would not have lost any of it prestige.

I understand an attempt is being made by some members to get the decision of the Council reversed at the next meeting, when I shall have occasion to advert to the subject again.

District Board Affairs.

Our District Board President seems to have a queer sense of humour He is reported to have stated on some occasions that during the regime of his predecessor, Mr. A. B. Shetty, the finances of the Board were in a state of bankruptcy or some words to that effect. When asked to explain what he meant by such allegations, he is said to have stated in the last meeting of the Board that he might have said those words as humour. It is scarcely a satisfactory explanation for making such damaging remarks.

The decision of the Board to set apart a sum of **Rs. 10,000** for rural uplift is a matter on which it deserves to be congratulated, though I cannot equally well congratulate its decision to restore the cut in the pay of teachers and members of its staff.

Electricity for Udipi.

Dr. T. Madhava Pai's move to have electricity for Udipi has not come a day too soon. The idea is to have the electric undertaking as a Municipal concern. He has shown that far from being a loss to the Municipality, the concern would be a source of profit which should enable it to reduce the burden of taxation The capital expenditure of the project has been

estimated at Rs. 60,000. There are 3,000 houses in Udupi Town and even if only 1000 houses were to use electric lights, at a minimum rate of Rs 2 per house per month, this would amount to Rs. 24,000 a year, not to speak that electricity is likely to be used in Industrial concerns after its introduction. As against this, the expenditure would be Rs 3,000 as interest payment at 5 per cent per annum depreciation Rs. 6,000 and Sinking Funds about Rs. 2,000. It is clear therefore that even after meeting management expenses, the Municipality would be in a position to reap a profit. And let it also be remembered that at present about Rs. 1,500 are spent every year for street lighting.

Should the Government think it fit not to grant permission to the Municipality, the idea is to have a local joint stock company for the purpose. It is a grave mistake in my opinion to think that the question of electric supply is premature. For it is the usual experience for electricity to follow in the wake of the establishment of a Municipality. And unless the Municipality or local enterprise bestir themselves, there is every possibility of an outside Company applying to the Government for license and thus forestalling us in the matter to our great detriment.

ಉಡುಪಿ ಮುನಿಸಿಪಾಲಿಟಿಯ ಸಭೆ

ಉಡುಪಿ ನಗರಸಭೆಯು ಇದೇ ತಾ 26-9-36ರಲ್ಲಿ ಸಾಯಂ ಘಂಟೆ 2ಕ್ಕೆ ವೈಸ್‌ಚೆಯರ್‌ಮೇನರ ಚುನಾವಣೆಗಾಗಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನೆರೆಯಿತು. ಶ್ರೀ. ಯು. ಸುಂದರ ಕಾಮತರು ಸೂಚಿಸಿ ಶ್ರೀ. ಕೆ. ಅನಂತ ಪೈಗಳು ಅನುಮೋದಿಸಿದಂತೆ ಶ್ರೀಮತಿ. ಸಿ. ಮನೋರಮಾಬಾಯಿ ಎಮ್. ನಾಯಕರು ವಿರೋಧವಿಲ್ಲದೆ ಉಪಾಧ್ಯಕ್ಷೆಯಾಗಿ ಆರಿಸಲ್ಪಟ್ಟರು. ಅಧ್ಯಕ್ಷರೂ ಡಾ| ಸಿ. ಜಿ. ಆಚಾರ್ಯರೂ ಶ್ರೀಮತಿಯವರನ್ನು ಅಭಿನಂದಿಸಿದಾಗ, "ಈ ಮರ್ಯಾದೆಯು ತನ್ನ ಕಾಂಗ್ರೆಸ್ ಸೇವೆಯ ಪ್ರತಿಫಲವೆಂದೂ, ತನ್ನ ಜವಾಬ್ದಾರಿಯನ್ನು ಯೋಗ್ಯ ರೀತಿಯಿಂದ ನಿರ್ವಹಿಸಲು ಯತ್ನಿಸುವೆನಾಗಿಯೂ ಭಾಷಣವಿತ್ತು ಶ್ರೀ. ಮನೋರಮಾಬಾಯಿಯವರು ಎಲ್ಲರಿಗೂ ಧನ್ಯವಾದಗಳನ್ನರ್ಪಿಸಿದರು. ಸಭೆಯು ಫಲಾಹಾರಕ್ಕೆದ್ದು ಪುನಃ ನಾಲ್ಕು ಘಂಟೆಗೆ ಸೇರಿದಾಗ ಶ್ರೀ ಬಿ. ವಾಸುದೇವ ರಾಯರೇ ಮೊದಲಾದವರ ಪ್ರಶ್ನೋತ್ತರಗಳಾದವು. ಮುನಿಸಿಪಲ್ ಆಡಳಿತೆಯ ಸಂಬಂಧವಾದ ಹಲವು ಠರಾವುಗಳ ವಿಚಾರಣೆಯು ಅಧ್ಯಕ್ಷರು ಹಾಗೂ ಕಮಿಶನರುಗಳಿಂದ ನಡೆದು ಅವೆಲ್ಲಾ ಸಕಾರಣವಾಗಿ ಹಿಂದೆಗೆಯಲ್ಪಟ್ಟ ನಂತರ ಡಾ| ಸಿ. ಜಿ. ಆಚಾರ್ಯರ, ಮುನಿಸಿಪಾಲಿಟಿಯನ್ನು ತೆಗೆದು ಪಂಚಾಯತ್ ಬೋರ್ಡು ಮಾಡುವಂತೆ ಸರಕಾರವನ್ನು ಕೇಳಿಕೊಳ್ಳುವ ಪ್ರಾಮುಖ್ಯ ಠರಾವಿನ ಮೇಲೆ ಚರ್ಚೆಯು ನಡೆಯಿತು. ಡಾ. ಆಚಾರ್ಯರು ಠರಾವಿನ ಪರವಾಗಿ ಭಾಷಣವೀಯುತ್ತಾ, ಕಮಿಶನರು ಪ್ರಥಮತಃ ಹೊರಿಸಿದ್ದ 40,000 ರೂ.ಗಳ ತೆರಿಗೆಯು ಆಪೀಲಿನಿಂದ 30,000ಕ್ಕಿಳಿದಿರುವದೆಂದೂ, ಇದರಲ್ಲಿ 10,000 ರೂ ಗಳು ಸಂಬಂಧಿ ಖರ್ಚಿಗೆ ಹೋಗಿ ನಗರಾಡಳಿತೆಗೆ ಕೇವಲ 20,000 ದೊರೆಯುವದೆಂದೂ, ಸುಮಾರು 17,000ದ ವರೆಗೆ ಜಿಲ್ಲಾ ಬೋರ್ಡಿನವರೇ ಪ್ರತ್ಯೇಕ ಕರಹೊರಿಸದೆ ಉಡುಪಿಗೆ ಖರ್ಚುಮಾಡಿದ್ದರೆಂದೂ ಸೂಚಿಸಿದರು. ಬಡವರ ಹಿತದ ದೃಷ್ಟಿಯಿಂದ ಈ ಠರಾವನ್ನು ಅಂಗೀಕರಿಸಬೇಕೆಂದರು. ಶ್ರೀ. ವಕೀಲ್ ಸಿ. ಎನ್. ಮಾಧವರಾಯರೆದನ್ನು ಅನುಮೋದಿಸಿದರು. ಮಿ. ಡೇಗೋರವರು, ಸೂಚನೆಯನ್ನು ವಿರೋಧಿಸುತ್ತಾ 'ಮುನಿಸಿಪಾಲಿಟಿ ಹೋಗುವ ಹಾಗಿದ್ದರೆ ನಾವೆಲ್ಲರೂ ರಾಜಿನಾಮೆಕೊಡಲು ಸಿದ್ಧರಿರುವೆವು ಮುನಿಸಿಪಾಲಿಟಿಯೊಳಗಿದ್ದು ಕೊಂಡು ಕಿರುಕುಳವನ್ನಬ್ಬಿಸಿದರೆ ಸರಕಾರವು ಸಭೆಯನ್ನು ರದ್ದು ಮಾಡಿ ಅಧಿಕಾರಿಗಳನ್ನು ನೇಮಿಸುವದು. ಇದರಿಂದ ಪಟ್ಟಣಿಗರಿಗೆ ಇನ್ನೂ ಹೆಚ್ಚು ಅನ್ಯಾಯವಾಗಬಹುದಾದುದರಿಂದ, ಹೊರಗೆ ಕೆಲಸ ಮಾಡಬೇಕೇ ಹೊರತು ಇದೆಷ್ಟಕ್ಕೂ ತರವಲ್ಲ' ಎಂದು ಸ್ಫೂರ್ತಿಯುಕ್ತ ಭಾಷಣವಿತ್ತರು. ಶ್ರೀ. ಕೇಶವ ಪ್ರಭುಗಳು, ಮಿ. ಡೇಗೋರವರನ್ನು ಸಮರ್ಥಿಸುತ್ತಾ, ಮುನಿಸಿಪಾಲಿಟಿಯಿಂದಾಗುವ ಅನ್ಯಾಯಗಳನ್ನು ಠಿಕ್ಕಾಪತ್ರ ಸಮೇತ ತೋರಿಸದೆ ಸುಮ್ಮನೆ ಈ ರೀತಿ ಮಾಡುವುದು ಸರಿಯಲ್ಲೆಂಬ ಅರ್ಥದಲ್ಲಿ ಮಾತನಾಡಿದರು. ಶ್ರೀ. ಎಲ್. ಎಸ್. ನಾಯಕರೂ, ಪಂಡಿತ್ ಶ್ರೀ. ಗುರುರಾಜಾಚಾರ್ಯರೂ ಅದೇ ಅಭಿಪ್ರಾಯವನ್ನು ಸೂಚಿಸಿದರು. ಡಾ. ಆಚಾರ್ಯರು, ಸರಕಾರವನ್ನು ವಿನಂತಿಸಿಕೊಂಡಷ್ಟಕ್ಕೆ ಸರಕಾರವು ಮುನಿಸಿಪಾಲ್ ಅಧಿಕಾರಿಗಳ ನೇಮಕ ಮಾಡುವದೆಂಬುದು ಅಸಂಭವವೆಂದರು. ಮತ ತಗೆಯಲಾಗಿ ಠರಾವಿಗೆ 4 ಅನುಕೂಲ 9 ಪ್ರತಿಕೂಲ ಮತಗಳು ದೊರೆತು ಬಿದ್ದು ಹೋಯಿತು. ಇಬ್ಬರು ತಟಸ್ಥರಾಗಿದ್ದರು. ವಿದ್ಯಾರ್ಥಿಗಳಿಗೆ ನೀರು ಕುಡಿಸುವ ಲೋಟಿಯನ್ನು ತಗೆದು ಹಾಕಿಯಿಡಬೇಕೆಂಬ ಸೂಚನೆಯು ಚೆಯರ್‌ಮೇನರು ವಿಚಾರಿಸುವೆನೆಂದು ಮಾತಿತ್ತಂತೆ ಹಿಂದೆಗೆಯಲ್ಪಟ್ಟಿತು. ಎಕ್ಸ್‌ಟೆನ್ಶನ್ ಎಡ್ವೈಸರಿ ಕಮಿಟಿಗೆ ಮಿ. ಯು. ಎಂ ಇಬ್ರಾಹಿಮ್ ಸಾಹೇಬರು ಸರ್ವಸಮ್ಮತಿಯಿಂದ ಆರಿಸಲ್ಪಟ್ಟರು.

ಉಚ್ಚಿಲದಿಂದ ರಸ್ತೆಗೆ 'ಗಾಂಧಿ ರೋಡ್' ಎಂದು ಹೆಸರಿಡಬೇಕೆಂಬ ಶ್ರೀ. ಬಿ. ವಾಸುದೇವರಾಯರ ಠರಾವು 5 ಅನುಕೂಲ 8 ಪ್ರತಿಕೂಲ ಮತಗಳಿಂದ ಬಿದ್ದು ಹೋಯಿತು. ಅದಕ್ಕೆ ಸರ್ ಸಾಮುಖ್ಯಾಪರ ಹೆಸರಿಡಬೇಕೆಂಬ ನಿರ್ಣಯವಾಯಿತು.

ಉಡುಪಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಕುರಿತು ವಿಚಾರಿಸುವರೆ ಡಾ. ಟಿ. ಮಾಧವ ಪೈಗಳು ಕರೆದ ಪಟ್ಟಣಿಗರ ಸಭೆಯು ಇದೇ ತಾ. 27-9-36ರಲ್ಲಿ ಸಿಂಡಿಕೇಟ್ ಬೇಂಕಿನ ಆಫೀಸಿನಲ್ಲಿ ನೆರೆಯಿತು. ಸ್ಥಾನೀಕ ಮೆಜಿಸ್ಟ್ರೇಟರಾದ ಶ್ರೀ. ಸುಂದರೇಶ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು. ಡಾ ಟಿ. ಮಾಧವ ಪೈಗಳು ತನ್ನ ವಿದ್ಯುಚ್ಛಕ್ತಿ ಪ್ರಸಾರಕ ಘೋಷಣೆಯನ್ನು ವಿವರಿಸಿ ಸರಕಾರದಿಂದ ಸಾಲವಾಗಿ 20,000 ರೂಪಾಯಿಗಳು ದೊರೆತರೆ, ಯಾವರೀತಿ ಕಂತಿನಿಂದ ಸಲಾಯಿಸಿ, ಹಣ್ಣಿನ ನಷ್ಟವಿಲ್ಲದೆ ಪಟ್ಟಣಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಬಹುದೆಂಬುದನ್ನು ತಿಳಿಸಿ ಮುನಿಸಿಪಾಲಿಟಿಯ ಮಂಜೂರಾತಿಯನ್ನು ಕೋರಿದರು. ಮುನಿಸಿಪಲ್ ಚೆಯರ್‌ಮೇನ್ ಶ್ರೀ. ಲಕ್ಷ್ಮೀನಾರಾಯಣ ರಾಯರು, ನಗರ ಸಭೆಯ ಪ್ರಕೃತ ದುರವಸ್ಥೆಯನ್ನು ವಿಶದೀಕರಿಸಿ, ಡಾ. ಪೈಗಳು ತಮ್ಮ ಯೋಜನೆಯನ್ನು ನಗರಸಭೆಗೆ ಕಳುಹಿಸಬೇಕೆಂದೂ, ಅದನ್ನು ಸರಕಾರಕ್ಕೆ ಕಳುಹಿಸುವ ಕುರಿತು ವಿಚಾರಿಸುವರೆ ತಾನು ಮುನಿಸಿಪಲ್ ಪ್ರತ್ಯೇಕ ಸಭೆಯೊಂದನ್ನು ಕರೆಯುವೆನೆಂದೂ ಆಶ್ವಾಸನೆಯಿತ್ತರು. ಎಲ್ಲಾ ವಿಷಯಗಳ ಕೂಲಂಕುಷ ವಿಚಾರಣೆಗಾಗಿ ಸ್ಥಾನೀಕ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಕಮಿಟಿಯೊಂದನ್ನು ರಚಿಸಲಾಯಿತು.

ನೋಟೀಸು

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡುಪಿ.

ಈ ಕೆಳಗೆ ಹೆಸರು ತೋರುವವರು ಈ ಬೇಂಕಿನ ಉಡುಪಿ ಆಫೀಸಿನಿಂದ ಚಿನ್ನಾಭರಣಗಳ ಅಡವಿನಮೇಲೆ ಪಡೆದ ಸಾಲಗಳ ಅಸಲು ಮತ್ತು ಅವುಗಳ ಮೇಲಣ ಬಡ್ಡಿ ಹಣ ಬೇಂಕಿಗೆ ನ್ಯಾಯಕ್ಕೆ ವಸೂಲು ಬಾರದೆ ಇದ್ದ ಕಾರಣ ಅವರಿಗೆ ಕಳುಹಿಸಿದ ಟಪ್ಪಾಲು ರಿಜಿಸ್ಟ್ರಿ ನೋಟೀಸುಗಳು ವ ಇತರ ನೋಟೀಸುಗಳು "ಸದ್ರಿಯವರು ಮೃತಪಟ್ಟಿರುತ್ತಾರೆ ಯಾ ಊರಿನಲ್ಲಿ ಇಲ್ಲಾ" ಎಂಬ ಇತ್ಯಾದಿ ಸಬಬುಗಳಿಂದ ಹಿಂತಿರುಗಿ ಬಂದಿರುವುದರಿಂದಲೂ ಸದ್ರಿ ಮೃತರ ವಾರಿಸುದಾರರು ಹಕ್ಕು ಸ್ಥಾಪಿಸಿ ಕೋರ್ಟಿನಿಂದ ಸಕ್ಸೆಶ್ಶನ್ ಸರ್ಟಿಫಿಕೇಟು ಪಡೆದು ಸದ್ರಿ ಸಾಲಗಳ ಅಸಲು ಹಣ ವ ಈ ವರೇಗಿನ ಬಡ್ಡಿ ಬೇಂಕಿಗೆ ಸಲ್ಲಿಸಿ ನಗಗಳನ್ನು ಈ ವರೇಗೂ ಬಿಡಿಸಿಕೊಂಡು ಹೋಗದೆ ಇರುವುದರಿಂದಲೂ ಈ ಮೂಲಕ ಪ್ರಕಟಿಸಲಾಗುವದೇನೆಂದರೆ:— ಸದ್ರಿ ಸಾಲಗಳ ಬಾಬ್ತು ಬಹಾ ಸಮಸ್ತ ಅಸ್ಲು ಬಡ್ಡಿ ಐವೇಜುಗಳು ನೋಟೀಸುಗಳ ಖರ್ಚು ಸಹಿತ ತಾ. 10-10-'36ನೇ ಶನಿವಾರ ಅಪರಾಹ್ನ ಘಂಟೆ 1ರ ಒಳಗೆ ಬೇಂಕಿಗೆ ಜಾಡಾ ವಸೂಲು ಬಾರದೆ ಇದ್ದರೆ ಸದ್ರಿ ಸಾಲಗಳ ಭದ್ರತೆ ಬಗ್ಗೆ ಸದ್ರಿಯವರು ಬೇಂಕಿನಲ್ಲಿ ಒತ್ತೆಯಿಟ್ಟ ನಗಗಳನ್ನು ತಾ. 15-10-'36ನೇ ಗುರುವಾರ ಮಧ್ಯಾಹ್ನ 12 ಘಂಟೆಗೆ ಬೇಂಕಿನ ಉಡುಪಿ ಆಫೀಸಿನಲ್ಲಿ ಬಹಿರಂಗವಾದ ಏಲಂ ಮೂಲಕ ಮಾರಾಟ ಮಾಡಲಾದೀತು. ಏಲಂ ಅದೇ ದಿವಸ ಪೂರ್ಣವಾಗದೆ ಇದ್ದರೆ ನಂತರದ ದಿವಸಗಳಲ್ಲಿ ಮುಂದುವರಿಸಲಾದೀತು.

1. ಸಾಲದ ನಂಬ್ರ [illegible] ಪೆದ್ರು ಕಿಸ್ತೂಜಲುಕಿಸ್, ಜಾಕಿ ಮಾನುವೇಲ್ ಲುವಿಸರ ಮಗ, ಉಪ್ಪೂರು, ಕಲ್ಯಾಣಪುರ ಪೋಸ್ಟು. ಸಾಲದ ಅಸ್ಲು ಬಾಕಿ ರೂ. 25/-, ಬಡ್ಡಿ ಬಾಕಿ ಆದ ತಾ. 27-6-'35.

2. ಸಾಲದ ನಂಬ್ರ 126/ , ಪಿ. ನಾರಾಯಣ ಬೆಡಗ, ರಾಮಪ್ಪ ಬೆಡಗರ ಮಗ, ಜಮಿನ್ದಾರ, ಮಾಂಡೇಶ್ವರ, ಸಾಸ್ತಾನ ಪೋಸ್ಟು ಸಾಲದ ಅಸ್ಲು ಬಾಕಿ ರೂ. 15/-, ಬಡ್ಡಿ ಬಾಕಿಯಾದ ತಾ. 26-3-'36.

3. ಸಾಲದ ನಂಬ್ರ [illegible] ಇಸಾಕ್ ಪೆರಾ, ಬಾಲ್ತಿಸರ್ ಪಿರೇರರ ಮಗ, ಕುಕ್ಕೆಹಳ್ಳಿ ಗ್ರಾಮ, ಕಟಪಾಡಿ ಪೋಸ್ಟು, ಸಾಲದ ಅಸ್ಲು ಬಾಕಿ ರೂ. 30/-, ಬಡ್ಡಿ ಬಾಕಿ ಆದ ತಾ. 9-10-'35.

4. ಸಾಲದ ನಂಬ್ರ [illegible] ಎ. ಅನಂತ ನಾಯ್ಕ, ಸುಬ್ರಾಯ ನಾಯ್ಕರ ಮಗ, ಅಂಬಲಪಾಡಿ, ಉಡುಪಿ ಪೋಸ್ಟು. ಸಾಲದ ಅಸ್ಲು ಬಾಕಿ ರೂ. 50/-, ಬಡ್ಡಿ ಬಾಕಿ ಆದ ತಾ. 11-6-'35.

5. ಸಾಲಗಳ ನಂಬ್ರ 31/ , [illegible] ಮತ್ತು 665/ , ಪಿ. ನರಸಿಂಹ ಉಪಾಧ್ಯ, ಶ್ರೀನಿವಾಸ ಉಪಾಧ್ಯರ ಮಗ, ಪಡುಪೇಟೆ, ಉಡುಪಿ, ಸಾಲಗಳ ಅಸ್ಲು ಬಾಕಿ ರೂ. 115/-, ರೂ. 100/- ಮತ್ತು ರೂ. 55/-, ಬಡ್ಡಿ ಬಾಕಿ ಆದ ತಾ. 8-7-'35, ತಾ. 19-10-'35 ಮತ್ತು 19-10-'35.

6. ಸಾಲದ ನಂಬ್ರ 302/ , ನಾಗೇಂದ್ರ ಶೇರಿಗಾರ, ರಾಜೇಂದ್ರ ಶೇರಿಗಾರರ ತಮ್ಮ, ಪಡುಮುಂಡೂರ ಗ್ರಾಮ, ಕೊಕ್ಕರ್ಣೆ ಪೋಸ್ಟು. ಸಾಲದ ಅಸ್ಲು ಬಾಕಿ ರೂ. 250/-, ಬಡ್ಡಿ ಬಾಕಿ ಆದ ತಾ. 30-11-'35.

7. ಸಾಲದ ನಂಬ್ರ [illegible] ಪಳ್ಳಿ ತಿಮ್ಮಪ್ಪ ಹೆಗ್ಡೆ, ಅಂತಪ್ಪ ಹೆಗ್ಡೆರ ಅಳಿಯ, ಪಳ್ಳಿಗ್ರಾಮ, ಕಾರ್ಕಳ ಪೋಸ್ಟು. ಸಾಲದ ಅಸ್ಲು ಬಾಕಿ ರೂ. 100/-, ಬಡ್ಡಿ ಬಾಕಿ ಆದ ತಾ. 11-11-'35.

8. ಸಾಲದ ನಂಬ್ರ 721/ , ತಿಮ್ಮಪ್ಪ ಶೆಟ್ಟಿ, ಚಂದು ಶೆಟ್ರ ಮಗ, ಹೊಸಮನೆ ಗುತ್ತು, ನಂದಳ್ಕೆ, ಬೆಳ್ಮಣ್ಣು ಪೋಸ್ಟು, ಸಾಲದ ಅಸ್ಲು ಬಾಕಿ ರೂ. 35/-, ಬಡ್ಡಿ ಬಾಕಿ ಆದ ತಾ. 15-11-'35.

ಬೇಂಕಿನ ಆಫೀಸು
ಉಡುಪಿ.
ತಾ 28-9-'36

P. Lakshman Nayak,
Secretary

ವಿನಂತಿ.

ನಮಗೆ ಬಂದ ಅನೇಕ ಲೇಖನಗಳನ್ನೂ ವಾರ್ತೆಗಳನ್ನೂ ಸ್ಥಳಾಭಾವದಿಂದ ಈ ಬಾರಿ ಪ್ರಕಟಿಸಲಾಗಲಿಲ್ಲ. ಕೆಲವನ್ನು ಸಂಕ್ಷೇಪಿಸಿ ಪ್ರಕಟಿಸಿದ್ದೇವೆ ಆ ಬಗ್ಗೆ ಲೇಖಕರೂ ವಾರ್ತಾದಾರರೂ ಕ್ಷಮಿಸಬೇಕಾಗಿ ವಿನಂತಿ.

ಇನ್ನು ಮುಂದೆ ನಮಗೆ ಬರತಕ್ಕ ಲೇಖನಗಳೂ ವಾರ್ತೆಗಳೂ ಆದಷ್ಟು ಸಂಕ್ಷೇಪವಾಗಿರತಕ್ಕದ್ದು.

ನವಯುಗ

ಉಡುಪಿ, ತಾ. ೧-೧೦-'೩೬ ಗುರುವಾರ

ಸಾರ್ವಜನಿಕ ಜೀವನವೂ ಖಾಸಗಿ ದ್ವೇಷ ಸಾಧನೆಯೂ

ಸಾರ್ವಜನಿಕ ಕಾರ್ಯ ಕ್ಷೇತ್ರದಲ್ಲಿ ಖಾಸಗಿದ್ವೇಷಸಾಧಿಸುವ ವಿಲಕ್ಷಣವಮನೋವೃತ್ತಿಯು ದಕ್ಷಿಣಕನ್ನಡದ ಸಾರ್ವಜನಿಕ ಜೀವನದ ದೊಡ್ಡ ಕೇಡಾಗಿ ನಿಂತಿದೆ. ಜನಮುಖಂಡರೆನಿಸಿಕೊಳ್ಳುವ ಕೆಲವರ ಕ್ಷುದ್ರಬುದ್ಧಿಯ ದುಷ್ಪರಿಣಾಮವು ಇಡೀಜಿಲ್ಲೆಯ ವಾತಾವರಣವನ್ನೇ ವಿಷಮಯಗೊಳಿಸಿದೆ. ಈ ಸಲದ ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯು ಈ ದ್ವೇಷಸಾಧನೆಯ ಕುಹಕತನವನ್ನು ಬಹಳವಾಗಿ ಬಯಲಿಗೆ ತಂದಿದುವುದು.

ಕಳೆದ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯ ಸಂದರ್ಭದಲ್ಲಿ ಮಾಜಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಶ್ರೀ| ಎ. ಬಿ. ಶೆಟ್ರು ಆಡಳಿತದ ಮೇಲೆ ಇಲ್ಲಸಲ್ಲದ ಆರೋಪಗಳನ್ನೆಲ್ಲಾ ಹೂಡಿ, ಅವರ ಹೆಸರನ್ನು ಕೆಡಿಸಿ, ಅವರು ಪುನಃ ಪ್ರೆಸಿಡೆಂಟರಾಗಿ ಆರಿಸಿ ಬರದಂತೆ ಪ್ರಚಂಡ ಚಳವಳದ ಸುಳಿಗಾಳಿಯೇ ಎಬ್ಬಿಸಲ್ಪಟ್ಟಿತ್ತು. ಅದಕ್ಕೊಂದು ನ್ಯಾಯ ನೀತಿಯೊಂದಿರಲಿಲ್ಲ. ಅದು ಕೇವಲ ವ್ಯಕ್ತಿದ್ವೇಷ ಪ್ರೇರಿತವಾಗಿದ್ದಿತು ಇಂತಹ ಕುಟಿಲಪ್ರಚಾರದ ಪ್ರವಾಹದಲ್ಲಿ ಹಲವರು ಕೊಚ್ಚಿಬಿಟ್ಟು ತೇಲಿಹೋಗಿದ್ದರು. ನಮ್ಮ ವ್ಯವಸಾಯ ಬಂಧುವೊಂದು ಈ ಪ್ರಚಾರದ ವಾಹನವಾಗಿ ಅದರಲ್ಲಿ ವಿಕಟಾನಂದ ಪಡೆದಿದ್ದಿತು. ಇದರಿಂದಾಗಿ ಈ ಆರೋಪಗಳೆಲ್ಲಾ ನಿಜವಾಗಿರಬಹುದೇ ಎಂಬ ಸಂದೇಹವೂ ಕೆಲವರಲ್ಲಿ ಉಂಟಾಗಿದ್ದಿತು.

ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆ ಮುಗಿದೊಡನೆಯೇ ಕೆಲ ಸಮಯ ಅಧಿಕಾರಕ್ಕೆ ಬಂದ ಕಲೆಕ್ಟರ್ ಪ್ರೆಸಿಡೆಂಟರ ಮನೋವೃತ್ತಿಯಾದರೂ ಮತ್ತೂ ವಿಚಕ್ಷಣವಾಗಿದ್ದಿತು, ಸ್ವೇಚ್ಛಾನುವರ್ತಿಯಾಗಿದ್ದಿತು, ಕಾಂಗ್ರೆಸ್ ಪಕ್ಷದ ಕುರಿತಾದ ಬದ್ಧದ್ವೇಷ ಪ್ರೇರಿತವಾಗಿದ್ದಿತು. ಅವರು ಬೋರ್ಡು ಸಿಬ್ಬಂದಿಯಲ್ಲೂ ಜನತೆಯಲ್ಲೂ ಒಂದು ಬಗೆಯ ದಿಗಿಲನ್ನೇ ಹಬ್ಬಿಸಿದ್ದರು. ಬೋರ್ಡಿನ ಆಡಳಿತದ ಅವ್ಯವಸ್ಥೆ, ಹಣದ ಅಭಾವವನ್ನೆಲ್ಲಾ ಎತ್ತಿ ತೋರಿಸುವಂತೆ ನಡೆಯಲಾರಂಭಿಸಿದರು. ಇದಕ್ಕೆ ಕಾಂಗ್ರೆಸ್ ಪಕ್ಷದ ವಿರೋಧಿಗಳ, ಶ್ರೀ. ಎ. ಬಿ. ಶೆಟ್ರು ದ್ವೇಷಿಗಳ ಸೂತ್ರಚಾಲನೆಯೇ ಕಾರಣ. ಜಿಲ್ಲಾಧಿಕಾರಿಗಳೂ ಈ ಭೂತಚೇಷ್ಟೆಗೆ ಬಲಿಬಿದ್ದು ಪಕ್ಷಪಾತಿಗಳಾಗಿ, ದ್ವೇಷಸಾಧಕರಾಗಿ ಕೆಲಸಮಾಡುವಂತಾಗಿದ್ದಿತು.

ದಿವಾನ್‌ಬಹದೂರು ಬಿ. ಎಂ. ಹೆಗ್ಡೆಯರು ಪ್ರೆಸಿಡೆಂಟರಾಗಿ ಆರಿಸಿ ಬಂದ ಮೇಲಂತೂ ಹಿಂದಿನ ಆಡಳಿತವನ್ನು ದೂಷಿಸಿ, ಶ್ರೀ ಎ. ಬಿ. ಶೆಟ್ರು ಕುರಿತು ನಾನಾ ರೀತಿಯ ಆರೋಪ ಮಾಡುವುದು ಅವರದೊಂದು ಅಭ್ಯಾಸವಾಗಿಯೇ ನಿಂತಿರುವುದು. ಇಂತಹ ದ್ವೇಷಸಾಧನೆಯ ಪರಿಣಾಮವಾಗಿ ಬೋರ್ಡಿನ ಆಡಳಿತವೇ ಕಳಂಕಿತವಾಗಿರುವುದು. ನೌಕರರೊಳಗೇನೆ ತಂಡ ಪಿತಂಡಗಳಾಗಿರುವುವು. ಪಕ್ಷ-ಪ್ರತಿಪಕ್ಷಗಳಿಗೆ ಸೇರಿದವರು ಕೆಲವರು ದ್ವೇಷಸಾಧನೆಗೆ ತೊಡಗಿ ಹಲವರಿಗೆ ಪೀಡೆಯಿತ್ತಿರುವರು. ಬಡ ಅಧ್ಯಾಪಕರುಗಳು ಕೆಲವರು ಎಲ್ಲಿಂದೆಲ್ಲಿಗೆ ವರ್ಗಾಯಿಸಲ್ಪಟ್ಟಿರುವರು. ಒಮ್ಮೆ ಒಂದು ಕಡೆ, ಕೂಡಲೆ ಮತ್ತೊಮ್ಮೆ ಇನ್ನೊಂದು ಕಡೆ ವರ್ಗಾಯಿಸಲ್ಪಡುವ, ಒಮ್ಮೆ ಕೆಳಗೆ ಹಾಕಿ ಕೂಡಲೇ ಮೇಲಕ್ಕೆ ತರುವ, ಕಂಟ್ರಾಕ್ಟುಗಳಲ್ಲಿಯೂ ಖಾಸಗಿ ದ್ವೇಷಸಾಧಿಸನೋಡುವ ಪಕ್ಷಪಾತ ತೋರಿಸುವ, ಒಂದೇ ಮಾತಿನಲ್ಲಿ ಹೇಳುವುದಾದರೆ ಹೊಂಚು ಹಾಕಿಕೊಂಡೆಂಬಂತೆ ಸಾಧ್ಯವಾದಲ್ಲೆಲ್ಲಾ ಖಾಸಗಿ ದ್ವೇಷಸಾಧನೆಮಾಡುವ ವಿಪರ್ಯಾಸವು ಇಡೀ ಬೋರ್ಡಿನ ಪ್ರತಿಷ್ಠೆಯನ್ನೇ ಮಣ್ಣುಗೂಡಿಸಿದೆ. ಇದನ್ನು ವಿರೋಧಿಸಿ ಅದರ ಆಟವು ನಡೆಯದಂತೆ ಮಾಡುವ ಬದಲಿಗೆ, ಇನ್ನಷ್ಟು ಮಸಗಿಸಿ ತಮ್ಮ ಬೇಳೆ ಬೇಯಿಸ ನೋಡುವವರೇ ಹೆಚ್ಚಾಗಿರುವರೆಂಬುದು ಮತ್ತಷ್ಟು ಶೋಚನೀಯವಾಗಿದೆ.

ಸತ್ಯವು ಒಂದಲ್ಲೊಂದು ದಿನ ಹೊರಬೀಳದಿರದೆಂಬುದು ಕಳೆದ ಡಿಸ್ಟ್ರಿಕ್ಟ್ ಬೋರ್ಡ್‌ಸಭೆಯಲ್ಲಿ ವಿದಿತವಾಗಿದೆ. ಎ. ಬಿ. ಶೆಟ್ರ ಆಡಳಿತದಲ್ಲಿ ಅಂತಹ ಅವ್ಯವಸ್ಥೆಯೇನೂ ನಡೆದಿಲ್ಲ. ಕಲೆಕ್ಟರ್ ಪ್ರೆಸಿಡೆಂಟರ ನಡತೆಯು ಇಡೀಬೋರ್ಡಿಗೇನೇ ಅಪಮಾನಕರವೂ; ಕೇವಲ ಕಾಂಗ್ರೆಸ್ ಪಕ್ಷೀಯರ ಮೇಲಿನ ದ್ವೇಷ ಸಾಧಕವೂ ಆಗಿತ್ತೆಂಬುದು ಸಿದ್ಧವಾಗಿದೆ. ಪ್ರೆಸಿಡೆಂಟರು ಅದನ್ನು ಮರೆಮಾಜಲೆತ್ನಿಸಿದುದನ್ನು ನೋಡಿದರೆ ಅವರ ಕುರಿತು ಜನರಲ್ಲಿ ಮೊದಲೇ ಹಬ್ಬಿದ್ದ ಸಂದೇಹಗಳು ಬಲಗೊಳ್ಳದಿರವು. ಶ್ರೀ. ಎ. ಬಿ. ಶೆಟ್ಟರ ಆಡಳಿತಾಂತ್ಯದ ಶಿಲ್ಕು ರೂ. 75,000ಕ್ಕೂ ಮಿಕ್ಕಿರುತ್ತಾ, ಡಿಸ್ಟ್ರಿಕ್ಟ್ ಬೋರ್ಡು ದಿವಾಳಿಗಿರಿಗೆ ಮುಟ್ಟಿದೆಯೆಂದು ದಿವಾನ್ ಬಹದೂರುಹೆಗ್ಡೆಯವರೇ ಪ್ರಚಾರಮಾಡಿ, ವಿನೋದಕ್ಕಾಗಿ ತಾನು ಹಾಗೆ ಮಾಡಿರುವುದೆಂಬುದು ಕೇವಲ ಅಪಹಾಸ್ಯಕರವೇ ಸರಿ. ಪ್ರೆಸಿಡೆಂಟರಂಥ ಜವಾಬ್ದಾರಿ ಮನುಷ್ಯರು ಇಷ್ಟೊಂದು ಬೇಜವಾಬ್ದಾರಿಯಾಗಿ ನಡೆಯುವುದೇ? ಖಾಸಗಿ ದ್ವೇಷಸಾಧನೆಯ ವಿಕಟ ವಿನೋದವಲ್ಲವೆ ಇದು? ಅನಾವಶ್ಯಕವಾಗಿ ಬಡಉಪಾಧ್ಯಾಯರು ಮತ್ತು ನೌಕರರ ಸಂಬಳದ ಮೇಲೆ ಹಾಕಲ್ಪಟ್ಟ ಕಡಿತವು ತೆಗೆದುಹಾಕಲ್ಪಟ್ಟಿರುವುದು ಸಂತೋಷಕರ.

ಮಾತಲ್ಲ, ಕಾರ್ಯಬೇಕು.

ವೈಸರಾಯರ ಈ ಸಲದ ಎಸೆಂಬ್ಲಿ ಭಾಷಣವು, ಅವರು ಪ್ರಥಮವಾಗಿ ಪಟ್ಟಕ್ಕೇರಿದಾಗ ಮಾಡಿದ ಭಾಷಣದಷ್ಟೇ ಸೌಹಾರ್ದ ಮತ್ತು ಸದುದ್ದೇಶ ಭರಿತವಾಗಿರುವುದು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಇನ್ನು ಕೆಲವು ಮಂದಿ ಮೆಂಬರರು ಎಸೆಂಬ್ಲಿ ಸಭಾಸದನವನ್ನೇ ಬಿಟ್ಟು ಹೋಗಿದ್ದರು. ಭಾಷಣವನ್ನು ಕೇಳಿದವರ ಮೇಲೆ ಒಳ್ಳೇಪರಿಣಾಮವುಂಟಾಗಿರುವುದೆಂದು ತಿಳಿದು ಬರುತ್ತದೆ. ಆದರೆ ಬರಿಯ ಭಾಷಣಗಳ ಸತ್ಪರಿಣಾಮದಿಂದೇನು? ಮಾತಿಗೆ ಕಾರ್ಯದ ಬೆಂಬಲವಿರಬೇಕಲ್ಲವೇ? ಈಗ ಲೋರ್ಡ್ ಲಿಲ್ಲಿತ್‌ಗೋರವರು ಅಧಿಕಾರ ಕೈಕೊಂಡು ಹಲವು ತಿಂಗಳುಗಳಾದವು. ಎಲ್ಲಾ ಪಕ್ಷೀಯರನ್ನು ಬರಸಿಕೊಂಡು ದೇಶದಲ್ಲಿ ಸುಮನಸ್ಸನ್ನು ಮಾಡಲೆತ್ನಿಸುವ ಅವರ ಮಾತು ಅಂತೆಯೇ ಉಳಿದಿರುವುದು ಅವರ ಮನಸ್ಸೇನೊ ಒಳ್ಳೇದು. ಸರಕಾರದ ಆಡಳಿತದಲ್ಲಿ ಹೊಸಪರಿಚ್ಛೇದವೊಂದನ್ನು ತೆರೆಯ ಬೇಕೆಂಬ ಸದುದ್ದೇಶವು ಅವರಿಗಿರುವುದು. ಇಂಡಿಯಾ ಆಕ್ಟಿನ ಪ್ರಕರಣಗಳ ವ್ಯಾಖ್ಯೆಯನ್ನು ತಾನು ಬಹಳ ಉದಾರ ದೃಷ್ಟಿಯಿಂದ ಮಾಡಲಿರುವೆನೆಂಬ ಭರವಸೆಯನ್ನು ಕೊಟ್ಟಿರುತ್ತಾರೆ. ಎಲ್ಲ ಪಕ್ಷೀಯರೂ ಅವರೊಂದಿಗೆ ಸಹಕರಿಸಿ ಹೊಸರಾಜ್ಯಾಂಗರಚನೆಯನ್ನು ಜಯಶೀಲಗೊಳಿಸಬೇಕೆಂದೂ ಕೇಳಿಕೊಂಡಿರುತ್ತಾರೆ. ಎಲ್ಲವೂ ಅವರಿಚ್ಛೆಯಂತೆ ನಡಿಯುವುದಿತ್ತೆಂಬುದು ಇಷ್ಟರಲ್ಲೇ ವಿದಿತವಾಗಿರುವುದು. ಆಡಳಿತ ಮಂತ್ರವು ಯಥಾಪ್ರಕಾರವಾಗಿಯೇ ನಡಿಸಲ್ಪಡುತ್ತದೆ. ನೌಕರರ ಹೊಸ ಮನೋವೃತ್ತಿಯ ಲಕ್ಷಣಗಳೇನೂ ತೋರಿಬರುವದಿಲ್ಲ. ಸರಕಾರವು ಕಾಂಗ್ರೆಸನ್ನು ಬದ್ಧವಿರೋಧಿಯಾಗಿ ಭಾವಿಸಿ, ಅದರ ಬಲವನ್ನು ಮುರಿಯಲು ತನ್ನಿಂದ ಸಾಧ್ಯವಾದ ಪ್ರಯತ್ನವನ್ನೆಲ್ಲಾ ನಡಿಸುತ್ತಿರುವಾಗ ಕಾಂಗ್ರೆಸಿನವರು ವೈಸರಾಯರೊಂದಿಗೆ ಸಹಕರಿಸುವದಾದರೂ ಹೇಗೆ? ದೇಶದಲ್ಲಿ ಸುಮನಸ್ಸು ಮತ್ತು ಶಾಂತಿಯಾಗುವ ಬಗೆ ಹೇಗೆ?

ಅಭಿವಂದನೆ

ಶ್ರೀಮತಿ ಮನೋರಮಾ ಬ್ರ್ಯಾ ಮಂಜುನಾಥ ಸಾಯ್ಕರವರು ಉಡುಪಿ ಮುನಿಸಿಪಾಲಿಟಿಯ ವೈಸ್‌ಚೇಯರ್ ಮೆನ್ನರಾಗಿ ಆರಿಸಲ್ಪಟ್ಟಿರುವುದು ಅತ್ಯಾನಂದ ವಿಷಯವಿದೆ ದಕ್ಷಿಣ ಕನ್ನಡದಲ್ಲಿ ಹೀಗೆ ಮಹಿಳೆಯೊಬ್ಬರು ಇಂತಹ ಸ್ಥಾನಕ್ಕೆ ಆರಿಸಲ್ಪಟ್ಟದು ಇದೀಗ ಪ್ರಥಮ ಸಲ ಆ ಗೌರವವು ಉಡುಪಿಗೆ ದೊರೆತುದು ಮತ್ತೂ ಸಂತೋಷಕರ ಶ್ರೀಮತಿಯವರಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆ.

ಕಾಂಗ್ರೆಸಿಗೆ ಬದ್ಧವಿರೋಧ!

ಕೋರ್ಟು ಆಫ್ ವಾರ್ಡ್ಸ್ ಎಂಬುದು ಸಂಯುಕ್ತ ಪ್ರಾಂತ ಸರಕಾರದ ಅಂಗವಾಗಿರುವ ಅದೊಂದು ಸಂಸ್ಥೆ. ಬರುವ ಚುನಾವಣೆಯಲ್ಲಿ ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ ಉಮೇದ್ವಾರಿಗಳು ಜಯಶೀಲವಾಗಿ ಬರದಂತೆ ನೋಡಬೇಕೆಂದೂ, ಅವರ ವಿರೋಧಿಗಳು ಯಾರೇ ಇರಲಿ, ಯಾವ ಪಕ್ಷೀಯರೇ ಇರಲಿ, ಅವರಿಗೆ ಸರಕಾರವು ಸಾಧ್ಯವಾದ ಸಹಾಯವನ್ನೆಲ್ಲಾ ಕೊಡಬೇಕೆಂದೂ ಈ ಕೋರ್ಟು ಆಫ್ ವಾರ್ಡ್ಸಿನವರು ಜಿಲ್ಲಾಧಿಕಾರಿಗಳಿಗೆಲ್ಲಾ ಸರ್ಕ್ಯುಲರು ಕೊಟ್ಟಿರುವರು. ಗುಪ್ತ ಸರ್ಕ್ಯುಲರಿನ ಈ ವಿಷಯವನ್ನು ಪಂಡಿತ ಜವಾಹಿರಲಾಲರೀಗ ಬಯಲಿಗೆಳೆದಿರುವರು. ಇದರಿಂದ ಗಾಳಿ ಎತ್ತ ಬೀಸುವುದೆಂಬುದು ವ್ಯಕ್ತವಾಗುವುದು. ಲೋರ್ಡ್ ಲಿಲ್ಲಿತ್‌ಗೋರವರು ನಿಷ್ಪಕ್ಷಪಾತತೆಯ ಅಭಿವಚನವು ಪ್ರಾಂತಗಳಲ್ಲಿ ಹೇಗೆ ಪಾಲಿಸಲ್ಪಡುವುದೆಂಬುದು ವಿದಿತವಾಗುವುದು. ಬಂಗಾಳ, ವಾಯುವ್ಯ ಗಡಿನಾಡಿನ ಪ್ರಾಂತವೇ ಮೊದಲಾದ ಹಲವು ಕಡೆಗಳಲ್ಲಿ ಸರಕಾರವು ಕಾಂಗ್ರೆಸಿಗೆ ಅಡ್ಡಗಾಲು ಹಾಕಿರುತ್ತದೆ. ಹೀಗೆ ಒಂದೆಡೆ ಸರಕಾರವೂ, ಇನ್ನೊಂದೆಡೆ ಅಪ್ರಾಗತಿಕರೂ ಕಾಂಗ್ರೆಸನ್ನು ವಿರೋಧಿಸಲು ಸೊಂಟ ಕಟ್ಟಿರುವಂತಿವೆ. ಆದುದರಿಂದ ಜನತೆಯು ಸಂಪೂರ್ಣವಾಗಿ ಕಾಂಗ್ರೆಸಿಗೆ ಬೆಂಬಲವಿತ್ತು, ಎಲ್ಲೆಲ್ಲಿಯೂ ಕಾಂಗ್ರೆಸ್ ಉಮೇದ್ವಾರಿಗಳೇ ಜಯಹೊಂದುವಂತೆಮಾಡುವುದು ಅವರ ಕರ್ತವ್ಯವಿದೆ.

ದಕ್ಷಿಣಕನ್ನಡ

ಉಡುಪಿ.

ಡಾ| ಟಿ. ಮಾಧವ ಪೈಗಳ ನೇತೃತ್ವದಲ್ಲಿ ಏರ್ಪಾಡಾಗಿರುವ 40 ಭಾಷಣಗಳಲ್ಲಿ ಮೊದಲನೇ ವ್ಯಾಖ್ಯಾನವು ಶ್ರೀ ಬಿ. ನಾರಾಯಣರಾವ್ ಎಂ. ಎ. (ಸಂಪಾದಕ ಫಿನಾನ್ಸಿಯಾ ಎಕ್ಸ್‌ಪರ್ಟಸ್) ಇವರಿಂದ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಆಯಿತು. "ಜನಾಂಗದ ಆರ್ಥಿಕ ಜೀವನದಲ್ಲಿ ಬೇಂಕ್ ಮತ್ತು ಇನ್ಶೂರೆನ್ಸ್ ಕಂಪೆನಿಗಳ ಭಾಗ" ಎಂಬುದೇ ಭಾಷಣದ ವಿಷಯ. ಭಾಷಣಕಾರರು ಇಂಗ್ಲಿಷಿನಲ್ಲಿ ಬೇಂಕು ಮತ್ತು ಜೀವವಿಮೆಗೆ ಸಂಬಂಧಿಸಿದ ಆಧುನಿಕ ವಿದ್ಯಮಾನಗಳನ್ನು ವಿವರಿಸಿ, ವಿದೇಶಗಳಲ್ಲಿ ಅವುಗಳಿಗಿರುವ ಸ್ಥಾನವನ್ನು ಎತ್ತಿತೋರಿಸಿ, ದೇಶದ ಆರ್ಥಿಕ ಅಭಿವೃದ್ಧಿಗೆ ಇವೆರಡೂ ಸಂಸ್ಥೆಗಳು ಅಗತ್ಯವೆಂಬುದನ್ನು ಮನಗಾಣಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈ, ಬಿ. ಎ. ಯವರು ಅಧ್ಯಕ್ಷರಾಗಿದ್ದರು.

ಉಡುಪಿ ತೆರಿಗೆದಾರರ ಸಂಘದ

ಸಭೆಯೊಂದು ತಾ. 27-9-36 ರಲ್ಲಿ ಮೋಡರ್ನ್ ಶಾಲಾ ಕಟ್ಟೋಣದಲ್ಲಿ ಶ್ರೀಯುತ ಎನ್. ರಾಜಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಸಬ್ ಕಮಿಟಿಯವರು ತಯಾರಿಸಿದ್ದ ಸಂಘದ ನಿಯಮಗಳನ್ನು ಮಂಜೂರುಮಾಡಲಾಯಿತು. ನಗರಸಭೆಯ ಎಜಂಡವನ್ನು ಸಂಘಕ್ಕೂ ಕಳುಹಿಸಿಕೊಡುವಂತೆ ನಗರ ಸಭಾಧ್ಯಕ್ಷರನ್ನು ಕೇಳಿಕೊಳ್ಳುವ ನಿರ್ಣಯವಾಗಿ, ಮೆಂಬರರ ಪ್ರವೇಶ ಫೀಸು ಮತ್ತು ವಂತಿಗೆ ವಗೈರೆ ಬರುವವುಗಳ ವಸೂಲಿಯ ವ್ಯವಸ್ಥೆಮಾಡುವ ಅಧಿಕಾರವನ್ನು ಶ್ರೀ. ಟಿ. ಗಣಪಯ್ಯ ಸೆಟ್ರಿಗೆ ಕೊಡಲಾಯಿತು. ಈಗ ಹೊರಿಸಲ್ಪಟ್ಟಿರುವ ಸೊತ್ತುತೆರಿಗೆಯ ಕ್ರಮಗಳನ್ನು ಸರಿಪಡಿಸುವರೆ ನಗರ ಸಭೆಯ ಅಧ್ಯಕ್ಷರು ಮತ್ತು ವಕೀಲ್ ಮಿ. ಸಿ ರೇಗೊ ಇವರೂ ಆಯಾಯ ವಾರ್ಡಿನ ಕೌನ್ಸಿಲರಿರುವ ಒಂದು ಕಮಿಟಿಯು ಪ್ರತಿಯೊಂದು ವಾರ್ಡನ್ನು

ತುಳುವೆರ್ ಅವಶ್ಯ ಓದರೆತ್ತಿ ಪುಸಕಳು.

ಕೃಷ್ಣಸಂಧಾನ	೦	೮	೦
ಬಡ್ಕಬೈಲ್ ಪರಮೇಶ್ವರಯ್ಯೆರ್ ಬರೆತಿ ಯಕ್ಷಗಾನ ಪ್ರಸಂಗ. ಕನ್ನಡ ಮೂಲಲಾ ಈ ಪುಸ್ತಕಡೇ ಉಂಡು.			
ತುಳು ವ್ಯಾಕರಣ	೦	೮	೦
ಅನೇಕ ವರ್ಷೊಳೆ ಅನುಭವದ ಎಸ್ ಯು. ಪಣಿಯಾಡಿಳೆನ ಕೃತಿ.			
ಮಿತ್ರನಾರಾಯಣ ಕತೆ	೦	೮	೦
ಎ ಎನ್. ಶೀನಪ್ಪ ಹೆಗ್ಗಡೆರ್ ಬರೆತಿನವು. ಹಳ್ಳಿದ ಜೀವನ ಕ್ರಮನ್ ತೋಜಾವು ನಾವೆಲ್			
ಜನಮುಳ್ಗ	೦	೬	೦
ಸ್ವರ್ಗಸ್ಥ ಮಾಧವ ತಿಂಗಳಾಯೆರ್ ಬರೆತಿ ನಾಟಕ.			
ಸತೀಕಮಲೆ	೦	೬	೦
ಎಸ್ ಯು. ಪಣಿಯಾಡಿಲೆನ ಆದಿ ಕೃತಿ ಸಾಮಾಜಿಕ ವಿಷಯೊಳೆನ್ ಚರ್ಚೆ ಮಲ್ತಿ ನಾವೆಲ.			
ಕಾಣಿಗೆ	೦	೪	೦
ನಾರಾಯಣ ಕಿಲ್ಲೆರೆ ಕವನ ಸಂಗ್ರಹ ಸ್ಫೂರ್ತಿದಾಯಕ ಕವನೊಲುಲಾ ಪದಕುಳುಲಾ ಉಳ್ಳ.			
ಅಳಿಯಸಂತಾನ ಕಟ್ಟ್‌ದ ಗುಟ್ಟು	೦	೪	೦
ಅನೇಕ ಚರಿತ್ರೆ ಕಾನೂನು ಗ್ರಂಥೊಳೆ ಆಧಾರಡ್ ವೈ-ವಿ-ತ್ರ ಬಂಗೇರ್ ಬರೆತಿನವು			
ಮುದ್ ಮಾಳತ್ತ್ ಮದನಾಯೆ	೦	೨	೦
ವಿಠಲ ಹೆಗ್ಗಡೆರ್ ಬರೆತಿ ಪೊಲೀಸ್ ನಾವೆಲ್.			
ಬಲೀಂದ್ರ	೦	೨	೦
ಬಂಗಾರ್ದಂಗಿದ ಕತೆ	೦	೧	೦
ತುಳು ಪದ್ಯಮಾಲಿಕೆ	೦	೧	೦
ಕನ್ನಡಕೊ	೦	೦	೬
ಕನ್ಯೋಪದೇಶ	೦	೨	೦
ಅಮುಲ್ ದೆಪ್ಪಡೆ	೦	೧	೦
ಸ್ಪೊರ್ಟ್ಸ್‌ಮೆಂಟ್	೦	೧	೦
ಪಂಚವಟಿ	೦	೩	೦
ತುಳುಪದ್ಯಾವಳಿ	೦	೨	೬
ಪುಗಿರೆದ ಅಮುಲ್	೦	೦	೩
ಕೊಡಕಿನಾರ್	೦	೨	೦
ಮುಂಡತ್ತಾಯೆ	೦	೨	೦
ತುಳು ಭಗವದ್ಗೀತೆ	೦	೬	೦
ವಿಶ್ವರೂಪದರ್ಶನ	೦	೧	೦

ಹಳ್ಳಿಪಳ್ಳಿಳೆಡ್ ತುಳು ಪುಸ್ತಕಳೆನ್ ಪ್ರಚಾರ ಮಲ್ಪುರೆಗ್ ಏಜೆಂಟೆರ್ ಬೋಡು.
ಕಮಿಶನ್ ಕೊರ್ಪುಂಡು. ವ್ಯಾಪಾರಿಳೆಗ್ ದಿಂಜ ಕಮಿಶನ್.
ಅಗತ್ಯ ಇತ್ತಿನಾಕುಳು ಕಾಗದ ಬರೆವೊಳಿ ಅಥವಾ ಪಾತೆರೊಳಿ

ಎಸ್. ಯು. ಪಣಿಯಾಡಿ.
ತುಳುವ ಸಾಹಿತ್ಯಮಾಲೆ,
ಉಡುಪಿ

ನ ವ ಯು ಗ
ತುಳುಸಂಚಿಕೆ

ಸಂಪುಟ ೧	ತಾ. 1—10—1936	ಸಂಚಿಕೆ ೧

ವಿಜ್ಞಾಪನೆ

ತುಳು ಭಾಷೆದ ಪ್ರಚಾರ ದಿನ ಪೋಲಕ್ಕ್ ಹೆಚ್ಚಾವೊಂದು ಬರ್ಪುಂಡು. ಜನಕುಳೆಗ್‌ಲಾ ತುಳುಭಾಷೆದ ಪ್ರಚಾರದ ಆವಶ್ಯಕತೆ ತೆರಿಯೊಣ್ಬ ಬರ್ಪುಂಡು. ಸ್ವಭಾಷೆ ಸ್ವಾಭಿಮಾನದ ಈ ಯುಗಟ್ ತುಳುವೆರ್ ತನ್ನಳೆ ಭಾಷೆನ್ ಪ್ರೀತಿಡ್ ಪ್ರಚಾರ ಮಲ್ಪುನೆ ತಪ್ಪತ್ತ್‌ಂದ್ ಎಣ್ಣ್‌ವೆ. ಅನೇಕ ಚಂದಾದಾರೆರ ಅಪೇಕ್ಷೆದ ಮಿತ್ತ್‌ಲಾ ಕೆಲ ಹಿತಚಿಂತಕೆರೆ ಪ್ರೋತ್ಸಾಹದ ಮಿತ್ತ್‌ಲಾ ತಿಂಗೊಳ್‌ಗೊಂಜೆದಕ್ಕ 'ತುಳುಸಂಚಿಕೆ'ಂದ್ ಒಂಜಿ ಸಪ್ಲಿಮೆಂಟ್‌ನ್ ಕೊರ್ಪೆಂದ್ ನಿರ್ಧಾರ ಮಲ್ತ್‌ದ. ಐಟ್ ವಿಶೇಷಾದ್ ಕಥೆ, ಕತೆಳೆನ್‌ಲಾ ತುಳುನಾಡ್, ತುಳುವ ಸಂಸ್ಕೃತಿ, ತುಳುಭಾಷೆ ಇತ್ಯಾದಿ ವಿಷಯದ ಲೇಖನೊಳೆನ್‌ಲಾ ಪ್ರಕಟ ಮಳ್ಪುವ.

ತುಳುಭಾಷೆದ ಕವಿಕುಳುಲಾ ಲೇಖಕೆರ್‌ಲಾ ಸಹಕಾರ ಮಳ್ಪೆರ್ಂದ್ ಎಂಕಳೆಗ್ ವಿಶ್ವಾಸ ಉಂಡು.

ಸಂಪಾದಕೆ.

ಓಲುಲ್ಲಿ?

೧

ತಿಗಲೆಡೊಂಜಿ ಬುಲಿಪು ಪುಟುದು
ನಿನೆನ್ ಲೆಪ್ಪುಂಡತ್ತ ನಟ್ಟ್‌ದ್
ಆ ಬುಲಿಪುಗು ಪೂಂ ಕುಟುದು
ಒಂತೆ ಬರಯುನಾ!
ಐಟ್ ಬಾಕಿಲಿಸೆನೆ ಜೊಟುದು
ಜತ್ತ್‌ದ್ ಕೊರಯುನಾ!

೨

ಲೋಗ ಲತ್ತ್‌ದ್ ಕೊಪಿ ಬುಲೆ
ಕೈತ ಬರವುಡೊಂಜಿ ಕಲೆ
ಎನೆನ್ ಸುತ್ತರೆ ಬರ್ಪಿ ಬಲೆ
ಪರಿದ ಪೋವಡ್
ನಿನಡ ಪನಿ ಹಾಲವಾಲೆ
ಸಫಲ ಆವಡ್

೩

ಮದೆಟ್ ಉಂತು ಪಾಡುದಡಿ
ನಿನ ನಿರೆಲ್‌ದ ತರೆತ ಕೊಡಿ
ರೂಪರೇಖೆ ತೂದು ಬುಡಿ
ಬಿಸ್ ಯಾನ್‌ಯು!
ಒಲ್ಪ ದೆಂಗ್‌ಲಲ್ಪ ಕಡಿ
ತೂವ್ ದಾನಿಯು!

೪

ನಾಡೊಡಿನ್ನಿ ಬಯ-ಡುಲ್ಲ್
ತೋಜುನೊಂಜಿ ಮನಸ್ ಮುಲ್ಲ್
ಸುತ್ತ ತಿರ್ಕ್ಕ ಕಟ್‌ದಿ ಬಲ್ಲ್
ಯೆಂಚ ದಾಟೊಲಿ?
ನಿನ ಖುಣತಾ ಕೋಡಿ ಮುಲ್ಲ್
ಏಪ ಬೂಟೊಲಿ!

೫

ಬೊಲು ಮೂಲು ತೋಜು ರೂಪ
ಅಂದ, ಅತ್ತ? ಬರ್ಪ ನ್ರೋಪ
ಉಂತ ದೀವೊಡಿನ್ನಿ ಕೋಪ
ಇಪನೆ ಪುಟ್ಟಡ್!
ಗುಟ್ಟು ರಟ್ಟ್ ಮುಳ್ತಿ ಪಾಪ
ಯೆಂಕ್ ತಟ್ಟಡ್!

೬

ತೂವೊಡಾಪಿ ಹರೊಕು ನೋತ್
ಆಪಿ-ಪೋಪಿ ಕತೆನೆ ಬೇತ್
ನಿನನ್ ಪತ್ತು ಸಂತ್ ಏತೆ
ಎಂಚಲಾವಡ್!
ಕೆಲಸದೊಂಜಿ ಪುದೆನ್ ಜಾತ್
ಒಡೆಗೆ ಪೋವಡ್!

೭

ಮದೆಟ್ ದೆಂಗ್‌ದಾಂಡಲಿಯಿ
ಕೆಲಸೊಡುಲ್ಲ ಆಯಿ-ಪೋಯಿ
ಮೊಯಕೊಲೆಡ ಪೊಂಜಿ ಬಾಯಿ
ಹದೂಟು ಕರೆವುಂಡು
ನಿನ ಕಯಿತ ಬೊಳುಪು ಶಾಯಿ
ಚಿತ್ರ ಬರೆವುಂಡು

M. Vittal Hegde.

ಎನ ಮುಲ್ಗ್

(R J GAMA)

ಅವು ಒಂಜಿ ಮುಲ್ಗ್ ಭಾವನೆ ! ಪಣ್ಣೆರೆಗ್ ನಾಚಿಕೆ ಆವುಂಡು, ಅಂಪಲ ಮಲ್ಲೆ ಇಜ್ಜಿ. ಏನ್ ಪಣ್ಪೆ ಒಂಜಿ ಅಪ ರೂಪದ ಸಂತೋಷದ ಸುದ್ದಿ ಅವು ಎನ ಜಲ್ಮೊಡ್ ಇದಮು ಟ್ಟ ಪಡೆವೊಂದಿನಂಚಿನ ಸುಖ: ಏನ್ ಏತೋ ಊರುಲೆನ್ ತಿರ್ಗಾದ್, ಏತೋ ಜನರೆನ್ ತೂತ್, ಏತೊ ಮಹಲ್‌ಲೆನ್ ಸಂದರ್ಶನ ಮಲ್ತ್‌ದ್. ಬೊಕ್ಕ ಏತೊ ಸುರ ಸುಂದರಿಯರೆನ್‌ಲಾ ತೂತ್ ಭಾರಿ ಪಣವುನ್ ಖರ್ಚ್ ಮಲ್ತ್‌ದ್ ಏಟ್ ಸಿಕ್ಕನಾತ್ ಸುಖೊನು ಅನುಭವಿತ್‌ದ್ ಇಪ್ಪೆರೆಗ್‌ಲಾ ...ಂಗಾ ?

ಏನ್ ಅದಗಾದಗ ಒಂಜಿ ಪೊಣ್ಣನ್ ತೂವೆ ಅದಗಾದಗ ಆಲ್ ಎಂಕ್ ತೂವೆರೆ ಸಿಕ್ಕುವೊಲು. ಆಲೆನ ಗುರ್ತ ಪರಿಚಯು ಎಂಕ್ ಇಜ್ಜಿ. ಆಂಡಲಾ ಆಲ್ ಎಂಕ್ ತೂವೆರೆಗ್ ಸಿಕ್ಕುವೊಲು ಆರೆನ ತೂಯಿ ಕೂಡ್ಲೆ ಎನ್ನ ಹೃದಯೊಡ್ ಒಂಜಿ ಸ್ವರ್ಗೀಯ ಆನಂದದ ಅನುಭವ ಆವುಂಡ್. ಆಲೆನ ಪುದಾರ್ ಎಂಕ್ ಗೊತ್ತಿಜ್ಜಿ, ಆಲೆನ ಇಲ್ಲ್ ಏರ್ ಪಿನಯಿ. ಆಲೆಗ್ ಕಂಡನೆ ಉಳ್ಳೆನಾ ಇಜ್ಜೆನಾ, ಜೋಕುಲ್ ಬಾಲ್ಲ್ ಉಳ್ಳನಾ ಇಜ್ಜಾಂಡ್‌ದ್ ಎಂಕ್ ಗೊತ್ತಿಜ್ಜಿ. ಆಲೆಗ್ ಮದ್ಮೆ ಆತ್‌ಂಡಾ ಇಜ್ಜ್ಯಾ ಪಂಡ್‌ದ್‌ಲಾ ಎಂಕ್ ಗೊತ್ತಿಜ್ಜಿ. ಆಲೆಗ್ ಅಪ್ಪೆ, ಅಮ್ಮೆ ಉಲ್ಲೆರಾ ಇಜ್ಜಾ ಪಂಡ್‌ದ್‌ಲಾ ಎಂಕ್ ಗೊತ್ತು ಇಜ್ಜಿ

ಬಾಲೆ ಸಿರಿನ್ ಒಪ್ಪದ್ ಕೊರಿಯೆರ್. ಇನ್ನಿ ಅಜ್ಜೆರೆನ ಮಂಡಲ ಮದಿಪುನು ಕೇಂದ್ರ್ ಅಯಿಕಾನಂಗೆ ನಡತೊಂಡ ಆಕ್ಲೆ ಸಂತಾನ ಸಂತೇಸಿನ್ ಈ ಲೋಕನಾಡ್ನ್ ಕಾಪುನ ಉರಿಬೆಮ್ಮೆರ್ ಕಾತ್‌ದ್ ಕೊರ್ತು ಪೋಯಿನಪ್ಪ ಬತ್ತಿನಪ್ಪ ಅಜ್ಜೆರ್ ನಂಬಿದಿ ಸತ್ಯ ಬೆರಿಸಾಯಾದ್ ಕಾತ್‌ದ್ ಕೊರು ಇನ್ನಿನಾಡೆಗ್ ತೆನ್ಕಾಯಿ ಪುರಲತುಳುನಾಡ್ ಅಮುಂಜ ಗುತ್ತುದ ಸಂಡೊಳಿಗೆ ಶೀನಪ್ಪ ಹೆಗಡೆ ಬರೆಯಿ ಅಜ್ಜೆರೆನ ಮಂಡಲ ಪುಮುಡಿಪು ಇಪ್ಪೆ ನೆವು ಮುಗ್ಧಿಂಡ್.

A. N. S Hegde

ಒಲ, ಒಲ! ಈ ಕಡೆ ತೂವಯನ!

ಲಡಯಿದ ಪೋಲುದ ಘಂ ಘುಂ ಗೌಜಿ
ಬೀಜವು ಬರ್ಚಲು ಮುನ್ ಮುನ್ ಸೂಜಿ
ಇಂಚೀ ಗೌಜಿನ್ ಯಿನಿಗ್‌ಲ ತೂಜಿ
ಕೆಪ್ಪೆರ್ ರೂಪೊಟು ನೆಲನೊಸುದೊಸುದು
ಕುಲ್ಲರೆ ತೂಪನೆ ದೀತನ ಕಾಜಿ
ಒಲ! ಒಲ! ಈ ಕಡೆ ತೂವಯನ!

ಸಾವಿರ ಸಾವಿರ ಬಂಧುಲೆ ಸಾವು
ಕೋಟಿ ಬಡವೆರ್‌ನ ಒಂಜಿನ ಕಾವು
ಅದಗನೆ ಕೊನ-ಬರು ಕರ್ಮೊಗು ಬಾವು
ಬೆರಕೆಲ್ ಜೀವೊಡು ನರಕದ ರೂಪು
ದಾಯೆಗ್ ಪಂಥೊದು ಲಕಿಯರ್‌ಡಾವು!
ಒಲ! ಒಲ! ಈ ಕಡೆ ತೂವಯನ!

ಒಲಿಪುಡು ಕೆಬಿಪೋವುಡೆವೊಂದುಂಡು
ಅಗ್‌ಬಾರುಳೆನವು ನಾರುಂಡು ರುಂಡು
ನೀರ್ನೆತ್ತೆರ್‌ಪಗಲ್‌ನ ಕೈತುಂಡು
ಈ ಸುಖೊಟೀಪಲ ಪೊಣ್ಣಾದುಲ್ಲ
ನಿನ ಬಾಳುವೆಡಿಜ್ಜೀತ್‌ಲ ಬೊಂಡು
ಒಲ! ಒಲ! ಈ ಕಡೆ ತೂವಯನ!

ಇನಿಯಾ ಎಲ್ಲೆನ ಬೂರುನ ಸಾಪ್
ಇನಿಕುಂದಾಂಡಲ ಎಲ್ಲೆಗ್ ದೂಪ್
ತೋಜುನವೆನ್ ಯೇಪಲ ತೂದುಪ್ಪೆ
ಪನುವನ? ಗೆತೊನುಲ ಇಪನೇ ಬಾಸೆ
"ಪ್ರಾಣೊಗು ಪ್ರಾಣೊನು ಸಾವಿರ ಕೊರ್ಪೆ'
ಒಲ! ಒಲ! ಈ ಕಡೆ ತೂವಯನ!

ಆ ಮೆಯಿಟೇ ಮೆಯಿಬೆಂಚಿನ ಮಣ್ಣ?
ನಿಲ್‌ಕಡ, ನಿನ್ನವು ನಿನಡನೆ ಅಣ್ಣ!
ಕೆಬಿಯರತ್‌ದ್ ಆ ದಡಬಡ ಕೇಣ್ಣ
ಗಾಳಿದ ಪಾಲ್‌ನ್ ಸೋಂಟೊಗು ಬಿಗುಪು
ಮಾಸೆದ ಮುಗೆಯಾನಿಂದ್‌ದ್ ಪಣ್ಣ!
ಒಲ! ಒಲ! ಈ ಕಡೆ ತೂವಯನ!

ನೆತ್ತೆರ್‌ದೋಕುಳಿ ಪಾರಿದ ಕೈಟ್
ರೋಮದ ರೋಮೊಲ್‌ನ ಗಾಯದ ಪ್ಯೆಟ್
ದುಂಬುಂತುಲ! ಲೋಕನೆ ತೂಪ್ಯೆಟ್
ದೆಂಗ್‌ಪಡಂಗ್‌ದ್ ಮುಗಿಯಡ ಮೂಲು
ಈಯಿತ್ತಿನವೆನ್ ನಂಬುನ ಒಯಿಟ್?
ಒಲ! ಒಲ! ಈ ಕಡೆ ತೂವಯನ!

ಕಾರ್‌ದ ಬೇರ್‌ನ್ ಪೊಲ್ತ್‌ದ್ ನಡಪು
ನಿನ ಪಗೆನಾಯನ ಅಲ್ಲೆಗ್ ಬಡಿಪು!
ಈ ಬಡ್‌ಕುಲೆಗುಂದೊಂಜೇ ಪಿಡಪು
ಆ ಗೌಜಿಡ್ ನಿನ ಸೊರಲಾ ಬರಡ್
ಅಡ್ಡದ ಬೇಲಿಲೆನ್ ಬೇರ್‌ದ್ ಕಡ್‌ಪು!
ಒಲ! ಒಲ! ಈ ಕಡೆ ತೂವಯನ!

M. V. Hegde.

೩೩ ನಿಷ್ಠ ಹಿರಿಯಾಪೆರಿಯಾಕ್ಲೆ ಎದುರುಡು ತೆಲಿತ್ ನಲಿತ್ತ್‌ದ್ ಪಾತೆರಡ ಆಕ್ಲೆಗ್ ಎಡ್ಡೆ ಮಾನಮರ್ಯಾದಿ ಕೊರುದು ಗಾನಸಡತೆ ಸೀಲೊಲೆನ್ ತೋಜಾವೊಡು ಮಗಾ.

೩೪ "ಜೋಕುಲು ಬಾಲೆಲೆನ್" ಪಾತೆರ್ನವಾಲ್ಲ ತನ ಬಾಲೆ ಲೆಕ್ಕಂದೇ ತೂವೊಂದು ಬಾಲೆಲು ದೇವೆರೆಗ್ ಸಮಾನ್ದ್ ಗಿರೇದ್ ಪರಪಂತ್ಯೆ ಮಲ್ಪಡ ಮಗಾ.

೩೫ ಕಂಡನ್ಯೆ ಇಜ್ಜಾಂದೆ ಉಪ್ಪುನಗ ಎಡ್ಡೆ ಸೀರೆ ಬಂಗಾರ್ ದೀದ್ ಮಂಬರ ಮಲ್ತೊಂದು ಸೋಲೆಡ್ ಉಪ್ಪರೆಗಾಪಂದ್ ಪಂತ್ಯೆದ್ ಪರಪಂತ್ಯೆ ಮಲ್ಪಡ ಮಗಾ.

೩೬ ಕಂಡನ್ಯೆ ಇಲ್ಲಡ್ ಇಜ್ಜಂದಿನಾನಿ ರಾತ್ರೆಡ್ ಮಾಮಿ ಅತ್ತಡ ಮಯತ್ತಿಬಾಲೆಡಪ್ಪ ಜೆಪ್ಪೊಡು. ಇಲ್ಲ್ ಒರ್ತಿಯೇ ಒಂಜಿ ಕಡೆಟ್ ಜೆಪ್ಪತ ಮಗಾ.

೩೭ ಜೋಡುತ್ತಿನ ಕೊಡುಕಟ್ಟುಂಬದಾಕೆಗ್ ಉರಿ ಸಿರಿ ಪೋವೊಡಾಂಡ ಎಡ್ಡೆ ಜನೊಕ್ಲೆಡಪ್ಪ ಪೋದು ಅವುಲು ದಿಂಜ ದಿನ ಕುಲ್ಲಂದ್ ಆಯಿನಾತ್ ಬೇಗ ಬರೊಡು ಮಗಾ.

೩೮ ಕಂಡನ್ಯ ಅರ್ಥ ಬೇಲೆಡ್ ಬುಡ್ತಿನನ್ ಆಯಿನಾತ್ ಆಪಿಲೆಕ್ಕ ಮಲ್ಪಾವೊಡು, ಕಂಡನ್ಯಗ್ ಜೋಡಿತ್ತಿನಾಕ್ಲೆಡ ಜೋ ದಾಂಟ್‌ನಾತ್ ಪಾತೆರೊಡು ಮಗಾ.

೩೯ ಇಲ್ಲಾಲ್ಡ ಮಾ ದೂರು ದೂಸನೆನಾವಡ್ ನಿರೆಕರೆತ ಸುದ್ದಿಸಲೊಕೊನಾವಡ್ ಕಂಡನ್ಯ ಕೇನಂದೆ ಪನಿಯರೆಗಾ ಪಂಡ್ ಮಗಾ.

೪೦ ಪೊರ್ಲುದ ಸೀರೆ ಪದ್ಯೆಯ ಜೋಡ್‌ದ್ ಚದಿ ಮಲ್ತರೆ ಆಪಂದ್. ನಂಕ್ ಸೀಲನೆ ಬಂಗಾರ್ ನ.ಚಿಗೆನ್ನೆ ಸೀರಂಡ್ ತೆರಿನಾಕ್ಲು ಪನ್ಪೆರ್ ಮಗಾ.

೪೧ ನಂಕ್ ಏತ್ ಮಾಲ್ಲದಿಗ್ ಇತ್ತ್ಂಡಲಾ ಅನ್ಯೆನಿ ದೋಚಾವಂದ್ ನಿರ್ಮಲೊಡು ಒಡಮೆರೆ ಲೆಕ್ಕನೇ ತೋಜೊಂದು ಪ್ಪೊಡು ಮಗಾ.

೪೨ ಇಲ್ಲಾಲ್ಡ ಮಾತ ಬದ್‌ಕ್ ಬಾಗ್ಯೊಲೆನ್ ದೀಪಿ ದಾರ್ಗಲೆಡ್ ಪೊರ್ಲುಡು ದೀದ್ ದನೋಲ ಸಮವಲ್ತ್‌ದ್ ದೀವೊಂದುಪ್ಪೊಡು ಮಗಾ.

೪೩ ಅಲ್ಪದೆನ್ ಅಲ್ಪ ಮುಲ್ಪದೆನ್ ಮುಲ್ಪ ತಿಕ್ಕನಲ್ಪ ಪತ್ತ್‌ನಾಂಡ ಜೋಡಾನಗ ನಾಡ್ಂಡ ಒಂಜಿಲಾ ತಿಕ್ಕಂದ್ ಮಗಾ.

೪೪ ಜೇಲೆ ಇಜ್ಜಾಂಡ್ ಅಲ್ಪಮುಲ್ಪ ಮನಿಪಂದ್ ಕುಲ್ಲಡ ಕುಲ್ಲುದುನಾಂಡ ಕುಂಜಲಿಲಾ ಮುಗ್ಯುಗ್ ಏ. ಜೇಲೆ ದಾಂಟಿ ಪೊರ್ತ್ ಮೂಡುಎನೇ ಇಜ್ಜಿ ಇಪ್ಪೆರ್ ಮಗಾ.

೪೫ ಬಂಜಿನಾಕ್ಲು ಅಂಕ್, ಆಯನ, ಕೋಲ, ಬಲಿ. ನೇಮನೆರಿತ ಬಯಿರೂಪ್ಲೆನ್ ತೂವರೆ ಆವಂದ್ ಪೊಕ್ಕ ದಿಂಜ ಪುಲಿ, ಕಾರ, ಕೊಡಕ್ಯನಡ ಕಜಿಪ್ಪುಲೆನ್ ತಿನಿಯರೆ ಆವಂದ್ ಮಗಾ.

೪೬ ಜೋಕ್ಲು ಬಾಲೆಲೆಗ್ ಪೊರ್ಲುಡು ಎನ್ನದೆ ಪನ ಪೂಜಿದ್ ಪದಾ ಜಿಬ್ಬ ನೀರ್‌ಡ್ ನಿರ್ಮಲೊಡು ಮಾಪಾದ್ ಪೂರ್ತಪೊರ್ತುಗು ಬಡಾವು ಕೋರುದು ಎಡ್ಡೆ ಅರ್ದದಿನ ಕುಂಟುಲೆನ್ ಅಡಿಕ್ ಪಾಡ್‌ದ್ ಪಲಂಕ್ಯನೊಡು ಜೆಪ್ಪಾವೊಡು ಮಗ.

೪೭ ಜೋಕ್ಲೆಗ್ ಗಲಿಗಗಲಿಗ್ ಬಲಿತ್ತಿನಪಗ ತಿನಿಯೆರೆ ಕೊರಿಯೆರೆ ಆವಂದ್ ಆಮಾಸೆ, ನಾಸ, ಅಂಗಾರೆ. ಆಯಿತಾರ ಬಾರೆಲೆಡ್ ತಿ.ಗೋಲುಗು ಒರಾಂಡಲಾ ಬಾಲೆಲೆಗ್ ಕೊಡಿ ಮದ್ದ್ ಕಲ್ಯರೆ ಮದಪಡ ಮಗಾ

೪೮ ಏನ್ ದಾನೆ ಪಂಡೆರ್‌ದಲಾ ಬುದ್ಧಿಗ್‌ಂಡ್ ಏನ್ ದ್ ಪಿಸ್‌ರ್ ಮಲ್ಪಂದ್ ಆಕ್ಲು ಪಂಡಿನ ಅಂದಾಂಡ ಆ ಸೀಲೊನು ಬುಡುದು ಎಡ್ಡೆ ಜೇಲೆನೇ ಮಲ್ಪೊಡು ಮಗಾ.

ಆನಿಡ್ದ್ ಪಿತ್ತ್ ನಿನ ಮಾನಿಸಾಲ್ ಪಣ್ಪು ಬುದ್ಧಿಗಜಿನ್ಲೆನ್ ಕೇನೊಂದುಪ್ಪುಲಾ ಇಂದ್‌ದಾ ಮಾಮಿ ತುಕರ ಪೂಂಜಿದನ್ ಲೆತ್ತ್‌ದ್ ಪೊಂಜೆವ್ಯೆ ಇನಿಮುಟ್ಟ ಎಂಕ್ಲು ಉಪ್ಪು ನುಪ್ಪು ಕೊರ್ದ್ ತಾಂಕ್‌ದ್ ಆಂದ್ ಮಲ್ತಿನ ಬಾಲೆ. ಬ ಲೆಗ್ ಆಮೆ ತೂಯಿ ತಾಲ್ಕಗ ನಿಕ್ಲು ಬತ್ತ್‌ದ್ ಒದಗ್‌ಲರ್ ಇನಿ ಮುಟ್ಟ ಈ ಬಾರೆದ ಅಲಾಕ್ ಬರಾಲ್ ಎಂಕುಲು ತೂವೊಂದಿತ್ತ ನನಗು ನಿಕ್ಲೆ ಕೈ [illegible] ಪಾಡ್ದ್ ಕೊರ್ಪ ಅಂಚಾಯಿನೆಡ್ಡ್ [illegible]ಉಂದನಿ ನಡಪಾದ್ ಕೆ. ನೋಪಿನ ಬಹುಬಾರ ನಿಕ್ಲೆಗ್ ಕೊಡುದಿನವು. ಎಂಕ್ಲು ಕೈಯಿ [illegible] ಕೊರಿಯುಂದ್ ಕೈಬುಡುದು ಪಾಪ್ರಡೆ. ಎಡ್ಡೆ ಮಲ್ಪುನವುಲಾ ಪಡ್ಕೆಮಲ್ಪುನವುಲಾ ನಿಕ್ಲೆ ಕೃಟೀ ಉಂಡು. ಒಂಜಿ ತೆರಿಂಜ ಒಂಬ ತೆರಿಯಂದಿನ ಬಾಲೆ. ಮಲ್ತಿ ತಪ್ಪು ಇತ್ತ್ಂಡ ಒಪ್ಪ ಮಲ್ತೊಂದು ಕೂಡುನಡಪುಡಾವೊಡು ಕೊಡಿಕನ್ಯಾರ, ಕಡೆಕುಂದಾರ ಮುಟ್ಟ ಉಪ್ಪು ಸೀಮೆ ಗುತ್ತು ಬರ್ಕೆದಾಕ್ಲೆತಲಾ ಪರಲೂದು ಪಕ್ಕೆಂಡಾಕ್ಲೆಡಲಾ ಊರುನತ್ತ್ ಗುತ್ತಿನಾಕ್ಲೆಡಲಾ ನಟ್ಟಿಯ ನಾಲ್ಜಾಗೆದಕ್ಲೆಡಲಾ ಕಡಲಾಯೆ ಮಡಲಾಯೆ ಬರಿಬನ್ನಾಕ್ಲೆಡಲಾ ಪೊನ್ನನ್ ಒಚ್ಚಿಡ್ ಕೊರ್ಪೆ ಇಂದ್‌ಬ್, ಕನನೀರ್ ಒಚ್ಚಿದ್ ತಂಕರು ಪೊಂಜೆದಿ ಕೈಟ್

ಆಲೆನ್ ಏನ್ ಆಲೆನ್ ಮಸ್ತ್ ಸಾರಿ ತೂತೆ ಪಂಡ್‌ದ್ ಗೊತ್ತುಂಡಾ ಇಜ್ಜಾ? ಅತ್ತ್ ಬೊಕ ಮಾತ ತಾದಿಡ್ ಪೋಪಿ ನಾಕಲೆ ನಾಲ್‌ಡೆ ಎನಾನ್‌ಲಾ ಸೇರ್ಸಾದ್ ದೀತೊಲಾ ದಾನ್ಯಾ? ಏರೆಗ್ ಗೊತ್ತು? ಎಂಕ್ ದಾನ್ಯಾ ಆಲೆನ್ ಪ್ರತಿಸಾರಿ ತೂಯಿ ಕೂಡ್ಲೆ ಎನ್ನ ಹೃದಯ ಒಂಜಿ ಅಪರಿಮಿತ ಆನಂದದ, ಸಮಾನಂದದ, ನಿತ್ಯಾನಂದದ ಸುಖಸಾಗರೊಡು ನಿಂದುಂಡು ಎನ ಆತ್ಮ, ಒಂಜಿ ಮಧುರವಾದ್ ಇತ್ತಿನ್ಯಾ ಆನಂದೊಡ್ ದುಂಬು ದು ಇಂಚಿನ ಆನಂದೊನ್ ಎನ ಜನ್ಮೊಡ್ ಇದಮುಟ್ಟ ಅನು ಭವಿತ್‌ದಿನ ನಿನಪು ಎಂಕ್ ಇಜ್ಜಿ. ನೆಕ್ಕ್ ಮಾತಾ ದಾನೆ ಕಾರಣ? ಆಲ್ ಏರಾ? ಏನ್ ಏರಾ? ಅಂತು ಅವು ಒಂಜಿ ಮರ್ಲ್ ಭಾವನೆ!

* * *

ಏನ್ ಪೇಂಟೆ ತಿರ್ಗರೆಗ್ ಪಿದಾಡ್ದ್ ಇತ್ತೆ; ಪೇಂಟೆಗ್ ಪೋದ್ ಒಂಜಿ ಬೈಸ್‌ಕಲ್ಲ್‌ನ್ ಬಾಡಾಯಿಗ್ ದೆತೊಂದ್ ಮಣಿಪಲೊಡು ಪ್ರಸತ್ತ್ ಆದ್ ಕಟ್ಟಾದಿನ ಸಿಡಿಲ್‌ದ ಕಾರ್ಟೂನ್‌ನ್ ತೂದ್ ಬರೊಡ ಪಂಡ್‌ದ್ ಪೋವೊಂದು ಇತ್ತೆ. ಕೋಲದ ಪೇಂಟೆಡ್ದ್ ನಾಲ್‌ಬೀದಿಗ್ ಬರೊಡ್ ಪಂಡ್‌ದ್ ಬನ್ನಗ ಅಪ್ಪುಲ್ ಆಲ್ ಆ ಪೊಣ್ಣು ಎನ ಎದುರಡೆ ಬರೊಂದು ಇತ್ತೊಲ್. ಏನ್ ಆಲೆನ್ ತೂಯೆ. ಇನಿ ಆಲೆ ಮೋಣೆಡ್ ಈತ್ ದಿನೊಡ್ದ್‌ಲಾ ಹೆಚ್ಚಿಗೆ ಸಂತೋಸದ ಮುಖದ ಇತ್ತ್ಂಡ್. ಆಲ ಒಡೆಗ ಪಿದಾಡಿಲೆಕ್ಕ ತೋಜೊಂದ್ ಇತ್ತ್ಂಡ್. ನೇರಳೆ ಬಣ್ಣದ ಸೀರೆನ್ ತುತ್ತೊಂದು ಇತ್ತಲ್ ಗುಲಾಬಿ ಬಣ್ಣದ ರವಕೆ ಪಾಡ್ದ್ ಇತ್ತೊಲ್. ತರೆಕ್ ಪೂಮುಡಿತ್ತೊಂದು ಇತ್ತಲ್ ನಮ ಜಾತಿದಾಕುಲು ಪಾಡುನ ಬಂಗಾರ್‌ನ್ ಹೆಚ್ಚಿಕಮ್ಮಿ ಮಾತಲಾ ಪಾಡ್ದ್ ಇತ್ತಲ್. ಆಲೆ ಒಟ್ಟುಗು ಪಾತೆ ಏರಾ ಒರಿ ಆಣಜೋವು ಇತ್ತೆ. ಆಲ್ ಆಯ ಒಟ್ಟು ತನ ಕೆಂಪು ಪುಡಿಕುಲೆನ್ ಪಿನಿ ಪಂದಾದ್ ಮನಸ್‌ದ ಪುಲಾ ಮ ತೆಲ್ತ್‌ದ್ ಒಂಜಿ ದಡ್ಡ್ ನಾತೆರ ಪಾತೆರೊಂದು ಇತ್ತಲ್. ಪಾತೆರುನ ನಮೂನಿ ತೂದ್ ಆಯಿ ಆಲೆ ಕಂಡನೆ ಪಂಡ್‌ದ್ ಏನ್ ಅಂದಾಜಿ ಮಲ್ತೆ. ಎನ ಅಂದಾಜಿ ಸಮನ, ಸಮ ಅತ್ತ್ ಪಂಡ್‌ದ್ ಎಂಕ್ ಇದಮುಟ್ಟಲಾ ಗೊತ್ತುಜ್ಜಿ. ಆಲೆನ್ ತೂಯಿ ಬೊಕ್ಕ ಎನ ಮನಸ್ ಮಣಿಪಲದ ಆಲೋಚನೆ ಬುಡ್ಂಡ್. ಕಾರ್‌ಲು ದುಂಬು ದುಂಬು ಪೋವರೆಗ್ ಕೇನಂದೆ ಪೋಯ. ಮೆಲ್ಲನೆ ಪಿರ ತಿರ್ಗದ್ ಆಕಲೆ ಬೆತ್ತ್‌ಡಿ ಪೋವರೆಗ್ ಸುರುಮಲ್ತೆ. ಏನ್ ಎನ ನಾಡಾ ನಡಪುಡು ನಡೆತ್ತ್‌ಡ ಆಕಲೆನ್ ಪಿರಪಾಡ್ದ್ ಏನ್ ಏತಾ ದುಂಬು ಪೋತುವೆ. ಏನ್ ಕಲ್ಲೆರೆ ಬೆತ್ತ್‌ಡಿ ಪೋಲಿಸ್‌ದಾಕುಲು ನಡೆತ್ತಿ ಲೆಕ್ಕ ಮೆಲ್ಲನೆ ನಡತೊಂದು ಪೋಯೆ. ಆಕುಲು ಸೀದಾ ಮೋಟಾರ್ ಆಪಿಸ್‌ಗ್ ಪೋಯೆರ್. ಏನ್ ಆವುಲುಲಾ ಆಕಲೆ ಬೆತ್ತ್‌ಡಿ ಪೋಯೆ. ಆಕುಲು ಕುಂದಾಪುರೊಗು ೨ ಟಿಕೇಟ್ ದೆತೊಂದು ಬಸ್ ಮಿತ್ತಾಯೆರ್. ಆಕುಲು ಒಲ್ತು ಟಿಕೇಟ್ ದೆತೊಂಬೆರ್ ಪಂದ್‌ನ್ ಪಿರಾವುಡ್ ಮೆಲ್ಲ ಕೇಂಡ್ದ್ ಏನ್‌ಲಾ ಕುಂದಾಪುರೊಗು ಒಂಜಿ ಟಿಕೇಟ್ ದೆತೊಂಡ್ ಒಸ್ಸ್ ಮಿತ್ತಾಯೆ. ಬಸ್ಸ್ ಅದಗನೆ ಜಿಂಜಿಪ್ ಪೋಂಡಲಾ, ಮೂವೆರ ನಾಲ್ವೆರ್ ಕುಲ್ಲುನಾತ್ ಜಾಗ್ ಇತ್ತ್ಂಡ್. ಬಸ್ಸ್‌ಡ ಆಲೆನ್ ಲೇಡಿಸ ಸೀಟ್‌ಡ್ ಕುಲ್ಲಾಯೆರ್ ಆಯನ್ ಪಿರಾವುದ ಸೀಟ್‌ಡ್ ಕುಲ್ಲಾಯೆರ್. ಎನನ್ ಎನ ಜಂಟಲ್‌ಮೇನ್‌ಗಿರಿನ್ ತೂದಾ ದಾನ್ನಾ ಪಸ್ಟ್‌ಕ್ಲಾಸ್‌ಡ್ ಕುಲ್ಲಾಯೆರ್. ಬಸ್ಸ್ ಪಿದಾಡ್ಂಡ್.

ಬಸ್ ಕುಂದಾಪುರೊಗು ಮುಟ್ಟ್ಂಡ್ ಜನಕುಲ್ ಮಾತಾ ಜತ್ತೆರ್ ಆಕ್ಲು ಇಪ್ಪೆರ್‌ಲಾ ಜತ್ತೆರ್. ಏನ ಲಾ ಜತ್ತೆ. ನನ ಒಡೆ ಪೋಪಿನಿ? ಅಲ್ಲೆ ಒಂಜಿ ಸಿಗರೇಟ್ ಪಿಯೊಂಡ್ ಉಂತಿಯೆ; ಆಕುಲು ಆಕಲ್ನ ಕಿನ್ನಿ ದಡ್ದ್ ಗಂಟ್‌ಲೆನ್ ಪತೊಂದು ಪಿದಾಡ್ಯೆರ್. ಏನ್ ಸಿಗರೇಟ್‌ದ ಪುಗೆ ಬುಡೊಂದ್ ಮೂಜಿ ನಾಲ್ ಮಾರ್ ದೂರದ ಅಂತರೊಡು ಆಕಲೆ ಪಿರಾವುಡೆ ಪೋಯೆ. ಒಂಜಿ ಫರ್ಲಾಂಗ್ ದೂರ ಪೋದು ಉಪ್ಪರೆಗ್ ಇಯಾನ್ಯ ರಸ್ತೆದ ದತ್ತ ಮರ್ಗಲ್‌ದ್ ಒಂಜಿ ವಿಶಾಲ ಬಯಲ್‌ಡ್ ಕಂಡದ ಪುಣಿಟ್ ಆಕುಲ್ ಜತ್ತ್‌ದ್ ಪೋಯೆರ್. ಅತ್ ಉದ ಬುಲೆದ್ ಪೊರ್ಲುಡ್ ಕುರಲ್ ಬುತ್ತಿನ ಆ ಕಯಿತ ನಡ್ಡೆಡ್ ನಡ್ಡೆದ ಮಿತ್ತ್ ಪೆಜ್ಜೆನ್ ದೀವೊಂದ್ ಆಕುಲ್ ಮಾಯಕ ಆದ್ ಪೋಯೆರ್. ಆಕ್ಲೆನ ನಿವಾಸ ಅಂಚಿಯಾ ದಾನ್ಯಾ ?

ನನ ಏನ್...ಏನ್ ಒಡೆ ಪೋಪಿನಿ ? ಆಕ್ಲೆ ಪಿರಾವುಡ್ ಪೋಪಿನಿಯ? ಎಂಕ್ ಮರ್ಲ್‌ಂದ್ ಪಣಯೆರ? ಅಯ್ಯೊ! ಒಂಜಿ ತಾದಿಡ್ ಪೋಪಿ ಪೊಣ್ಣನ್ ತೂದ್ ಮರ್ಲ ನಮೂನಿ ಏನ್! ದೇಯಿ ಇಡೆಗ್‌ಬತ್ತೆ? ಅಯ್ಯೊ ಅವು ಒಂಜಿ ಮರ್ಲ್ ಭಾವನೆ

ಸಂದರ್ಶಿಸಿ ನ್ಯಾಯವಾದ ರೀತಿಯಲ್ಲಿ ತೆರಿಗೆಯನ್ನು ವಿಧಿಸಿ ಮುನಿಸಿಪಾಲಿಟಿಯ ಮುಂದಿಡಬೇಕೆಂದೂ, ಆ ವರೆಗೆ ಅಪೀಲುಗಳ ತನಿಖೆಯನ್ನು ಮುಂದುವರಿಸಬೇಕೆಂದೂ ನಗರ ಸಭೆಯನ್ನು ಕೇಳಿಕೊಳ್ಳುವ ಠರಾವಾಯಿತು.

ಇಲ್ಲಿಯ ಮೋಡರ್ನ್ ಶಾಲೆಯ ಮಾಜಿ ಅಧ್ಯಾಪಕರಾದ ಶ್ರೀ. ಎಮ್. ನರಸಿಂಹ ಪಡಿಯಾರರು ಇದೇ ತಾ. 28ರಲ್ಲಿ ಅಕಸ್ಮಾತ್ ಹೃದಯಸ್ತಂಭನವುಂಟಾಗಿ ಮೃತರಾಗಿರುವದು ಶೋಚನೀಯವಾಗಿದೆ.

ಇದೇ ತಾ. 2ನೇ ಅಕ್ಟೋಬರವನ್ನು ಗಾಂಧಿ ದಿನವಾಗಿ ಆಚರಿಸಿ, ಖಾದಿಮಾರಾಟ ಸಾರ್ವಜನಿಕ ಸಭೆಯೇ ಮೊದಲಾದ ಕಾರ್ಯಕ್ರಮಗಳನ್ನಾಚರಿಸಬೇಕೆಂದು ಸ್ಥಳೀಕ ಕಾಂಗ್ರೆಸ್ ಕೆಲಸಗಾರರು ನಿರ್ಧರಿಸಿರುವರು.

ಕಟಪಾಡಿ:—ಕಲ್ಯಾಣಪುರ ಮತ್ತು ಕಟಪಾಡಿ ಟೀಮುಗಳೊಳಗೆ ಕ್ರಿಕೆಟು ಮೇಚು ತಾ. 28-9-36ರಲ್ಲಿ ಜರಗಿ ಮುಂದರಿಸಲ್ಪಟ್ಟಿರುವದು.

ಕಡಂದಲೆ—ಸ್ಥಳೀಕ ಯುವಕ ಸಂಘದ ಅಧ್ಯಕ್ಷ ಕೆ. ಸಂಜೀವ ಶೆಟ್ಟರ ಪರಿಶ್ರಮದಿಂದ ಇಲ್ಲಿಯ ಬೋರ್ಡು ಶಾಲೆ ಕಟ್ಟಡವು ದುರಸ್ತಿಹೊಂದಿ ಮನೋಹರವಾಗಿದೆ ಶ್ರೀ. ಶೆಟ್ಟರ ಉದ್ಯಮವು ಸ್ತುತ್ಯ.

ಅರಳ ಶಾಲೆಯ ಅಧ್ಯಾಪಕನೊಬ್ಬನಿಗೆ ಮರಣದಂಡನೆ

ಕಳೆದ ಮೇ ತಾ. 15ರಲ್ಲಿ ಆರೋಪಿತನು ಅರಳಗ್ರಾಮದಲ್ಲಿ ಬಾಬಣ್ಣ ಯಾನೆ ನಿಷ್ಪಾಪಚಂದ್ರನೆಂಬ ೧೦ವರ್ಷ ಪ್ರಾಯದ ಬಾಲಕನೊಬ್ಬನನ್ನು ವಿದಸ್ಪಶೀಕನೆಂಬವನು ಕತ್ತಿಗೆ ಹಿಸುಕಿ ಖೂನಿಮಾಡಿದುದಾಗಿ ಆತನಮೇಲೆ ಆರೋಪಣೆ ಮಾಡೋಣಾಗಿತ್ತು. ಈತನು ಅರಳ ಹಯರ್ ಎಲಿಮೆಂಟರಿ ಶಾಲೆಯ ಅಧ್ಯಾಪಕರಲ್ಲಿ ಒಬ್ಬನಾಗಿದ್ದನು. ಅದಲ್ಲದೆ ಆತನು ತನ್ನ ಮಧ್ಯಾಹ್ನದ ಊಟವನ್ನು ಕೂಡಾ ಶಾಲಾ ಮೇನೇಜರರಾದ ಧರ್ಮಪಾಲ ಶೆಟ್ಟರ ಮನೆಯಲ್ಲಿಯೇ ಮಾಡುತ್ತಿದ್ದನು. ಹೀಗಾಗಿ ಧರ್ಮಪಾಲ ಶೆಟ್ಟರ ಸೊಸೆಯ ಮಗನಾದ ಮೃತ ಬಾಲನ ಪರಿಚಯವೂ ಸಲಿಗೆಯೂ ಈತನಿಗೆ ತುಂಬ ಇತ್ತು. ಹುಡುಗನು ಧರಿಸಿದ್ದ ೭ ಪವನಿನ ಚೈನು ಮತ್ತು ೬ ಪವನಿನ ನೇವಳಕ್ಕಾಗಿ, ಅವನನ್ನು ಆರೋಪಿತನು ಕೊಲೆಮಾಡಿದನೆಂಬ ಆರೋಪಣೆ. ಸೆಶನ್ಸ್ ಜಡ್ಜರು, ಮೂರು ಜನ ಎಸೆಸರರ ಅಭಿಪ್ರಾಯವನ್ನು ಅಂಗೀಕರಿಸಿ ಅಂತೆಯೇ ಕೊಲೆಗಾರನೆಂದು ನಿಶ್ಚೈಸಿದರು.

ಮಿಯಾರು—ತಾ. 19-9-'36ನೇ ಗೌರೀತದಿಗೆಯ ದಿನ ಕಾರ್ಕಳ ಮಿಯಾರು ವೈಶ್ಯ ಸಮಾಜ ಮುಖಂಡರಾದ ನೇಮಿನಾಥ ಪಡಿವಾಳರ ಮನೆಯಲ್ಲಿ, ಮ. ಶಂಕರನಾರಾಯಣ ಸಾಮಗರಿಂದ ಚಂದ್ರಹಾಸ ಕಥೆಯೂ, ತಾ. 20-9-'36ನೇ ವಿನಾಯಕ ಚೌತಿಯದಿನ ರಾತ್ರಿ "ನರಸಿಂಹ ನಾಯ್ಕರ ಭಂಡಸಾಲೆ"ಯಲ್ಲಿ ಸತ್ಯ ಹರಿಶ್ಚಂದ್ರ ಕಥೆಯೂ ನಡೆಯಿತು.

ಕೊಲ್ಲನೊಗರು-ಇಲ್ಲಿಯ ಪಂಚಾಯತ ಶಾಲೆಯಲ್ಲಿ ತಾ. 18-9-'36ರಲ್ಲಿ ಬ್ರಾಹ್ಮಣರೂ, ಗೌಡರೂ, ಬಿಲ್ಲವರೂ, ಹೊಲೆಯರೂ ಅತ್ಯಂತ ಪ್ರೇಮದಿಂದ ಮಿಳಿತವಾಗಿ ಗಣಪತಿ ಪೂಜೆಯನ್ನು ವಿಜೃಂಭಣೆಯಿಂದ ನೆರವೇರಿಸಿದರು. ಸ್ಪರ್ಶ್ಯಾಸ್ಪರ್ಶತೆಯ ಭೇದಭಾವವು ಜನಮನದಿಂದ ಅಳಿದು ಹೋಗುವಂತೆ ಗಣಪತಿ ಸನ್ನಿಧಿಯಲ್ಲಿ ಪ್ರಾರ್ಥಿಸಿದರು. ಈ ಶಾಲೆಯಲ್ಲಿ ಕಳೆದ 1932ನೇ ಇಸವಿಯಿಂದಲೂ, ಅಸ್ಪೃಶ್ಯರ 1+7 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಈ ಅನಾಥ ಬಾಲಕರ ವಿದ್ಯಾರ್ಜನೆಗೆ ಜಿಲ್ಲಾ ಹರಿಜನ ಸಂಘದ ಸಹಾಯವನ್ನು ಕೇಳಿಕೊಂಡಿದ್ದರು. ಈ ವರೆಗೆ ದೊರೆಯಲಿಲ್ಲವೆಂದು ಸಂಬಂಧಪಟ್ಟವರು ತಿಳಿಸುತ್ತಾರೆ. ಇದು ಶೋಚನೀಯವಾಗಿದೆ.

ಮುಲ್ಕಿ-ಮಂಗಳೂರಿನ ರೆವೆರೆಂಡ್ ಇ. ಸುಬ್ಬು ಕೃಷ್ಣಯ್ಯ M. A. B. Co. B. D. ರವರು ಇದೇ ಕಳೆದ ತಾ17-9-'36ನೇ ಗುರುವಾರ ಸಾಯಂಕಾಲ ಘಂಟೆ 5ಕ್ಕೆ Genius of Hindu people ಎಂಬ ವಿಷಯವನ್ನೆತ್ತಿಕೊಂಡು ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ ಬಹು ಸ್ವಾರಸ್ಯಯುಕ್ತವಾದ ಭಾಷಣವನ್ನು ಕೊಟ್ಟರು.

ಮುಲ್ಕಿಯಲ್ಲಿ ಸ್ಟೀಮರು ಬಂದರು ಮಾಡುವಂತೆ ಸಂಬಂಧಪಟ್ಟ ಕಂಪೆನಿಯವರನ್ನು ಕೇಳಿಕೊಳ್ಳುವರೆ ಇದೇ ಕಳೆದ ತಾ. 21-6-'36ರಲ್ಲಿ ಕ್ಲಬ್ಬಿನಲ್ಲಿ ಒಂದು ಸಾರ್ವಜನಿಕ ಸಭೆಸೇರಿ ಈ ಬಗ್ಗೆ ಒಂದು ದೊಡ್ಡ ಸಮಿತಿಯನ್ನು ಏರ್ಪಡಿಸಿರುವರೆಂದು ತಿಳಿದು ಬರುತ್ತದೆ.

ಮೆಹರ್ಬಾನ್ ವಿದ್ಯಾ ಇಲಾಖಾ ಡೈರೆಕ್ಟರ್ ದೊರೆಗಳವರು ಜಿಲ್ಲಾ ವಿದ್ಯಾಧಿಕಾರಿಗಳು ಮತ್ತು ಮಂಗಳೂರಿನ ಗವರ್ನಮೆಂಟ್ ಕೋಲೇಜಿನ ಪ್ರಿನ್ಸಿಪಾಲ್ ಇವರ ಜತೆಯಲ್ಲಿ ಇದೇ ಕಳೆದ ತಾ. 24-9-'36 ರಲ್ಲಿ ಅಪರಾಹ್ನ ಘಂಟೆ 2-15ಕ್ಕೆ ಇಲ್ಲಿಗೆ ಚಿತ್ತೈಸಿ ಹೈಸ್ಕೂಲು ಮತ್ತು ಹುಡುಗರು ಹಾಗೂ ಹುಡುಗಿಯರ ಎಲಿಮೆಂಟರಿ ಶಾಲೆಗಳನ್ನು ಸಂದರ್ಶಿಸಿ ಹೈಸ್ಕೂಲಿನ ಪರಾಂಗವನ್ನು ನೋಡಿ ಸಂತೋಷಪಟ್ಟು 4 30ಕ್ಕೆ ಹಿಂತೆರಳಿದರು.

ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಸಭೆಯು ಇದೇ ಕಳೆದ ತಾ. 26-9-'36ರಲ್ಲಿ ಮಾನಂಪಾಡಿ ಶಾಲೆಯಲ್ಲಿ ಕೂಡಿಬಂತು. ಶ್ರೀ. ಡಾಕ್ಟರ್ ಯಂ. ಆರ್. ಕಾಮತ್‌ರವರು ಸಭಾಧ್ಯಕ್ಷರಾಗಿದ್ದರು ಮಕ್ಕಳಿಂದ ಒಂದು ಲೇಖನ ವಾಚನ

ಇಲ್ಲಿನ ಹೈಸ್ಕೂಲಿನ ಸಹಾಯಾರ್ಥ ಏರ್ಪಡಿಸಿರುವ ಸೋಡ್ತಿಯ ಪುಸ್ತಕಗಳು ಛಂದದಿಂದ ಹೊರಗೆ ಹೋಗುತ್ತಿವೆ. ಮಹಾಜನರು ಉದಾರಾಶ್ರಯವನ್ನು ಕೊಟ್ಟು ನಡಿಸಬೇಕಾಗಿ ವಿನಂತಿ ಇದೆ ಎಂದು ಸದ್ರಿ ಸೋಡ್ತಿ ಕಮಿಟಿಯ ಕಾರ್ಯದರ್ಶಿಯವರು ಅಪೇಕ್ಷಿಸುತ್ತಾರೆ.

ಕಾರ್ಕಳ

ಮೈಸೂರುದೇಶದ ಹಿಂದೂ ಮಹಾಸಭೆಯ ಗೌರವ ಕಾರ್ಯದರ್ಶಿಯವರಾದ ಶ್ರೀ ಅಲ್ವೂರು ಶೀಪಪ್ಪಯ್ಯನವರು ಕಳೆದ ಆದಿತ್ಯವಾರ (20-9 '36) ಸ್ಥಳೀಯ ಆರ್ಯ ಸಮಾಜ ಮಂದಿರದಲ್ಲಿ ಹಿಂದೂಗಳ ಅವನತ ಸ್ಥಿತಿ ಮತ್ತು ಹಿಂದೂ ಮಹಾಸಭೆಯ ಆವಶ್ಯಕತೆಯ ಕುರಿತು ಬೋಧಪ್ರದವಾದ ಭಾಷಣವನ್ನು ಕೊಟ್ಟರು.

ಕರ್ನಾಟಕ ಕಾಂಗ್ರೆಸ್ ಪಾರ್ಲಿಮೆಂಟರಿ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ.ಗಳಾದ ಸುಕ್ನೇಕರ ಮತ್ತು ಹರ್ಡೀಕರರು ಇಲ್ಲಿ ಒಂದು ಚುನಾವಣೆ ಸಂಬಂಧ ಪ್ರಚಾರ ಕಾರ್ಯವನ್ನು ಆರಂಭಿಸಿ ಹೋಗಿರುವರು. ಇದನ್ನು ಜಾರಿಯಲ್ಲಿಟ್ಟು ಮತದಾರರಿಗೆ ಅಗತ್ಯವುಳ್ಳ ಬೋಧನೆ ಅನುಭವ ಗಳನ್ನು ಕೊಡುವ ಕಾರ್ಯಭಾರವು ಸ್ಥಳೀಯ ಕಾರ್ಯಕರ್ತರ ಮೇಲಿದೆ ಅವರೇನುಮಾಡುವರೋ ಮುಂದೆ ನೋಡಬೇಕು.

ಜನರನ್ನು ಕಾಂಗ್ರೆಸ ಮೆಂಬರರನ್ನಾಗಿ ಮಾಡುವ ಕಾರ್ಯವು ಒಳ್ಳೇ ಜೋರಿನಿಂದ ನಡೆಯುತ್ತಿರುವುದು. ಈಗ 700 ಮಿಕ್ಕಿ ಕಾಂಗ್ರೆಸ ಸದಸ್ಯರಾಗಿರುವರೆಂದು ತಿಳಿದು ಬರುತ್ತದೆ. ಜತೆ ಕಾರ್ಯದರ್ಶಿಯರಾದ ಶ್ರೀ. ಕೆ. ಪಿ. ಕೆ. ರಾಮಪುದುವಾಳರವರು ಶ್ಲಾಘನೆಗೆ ಪಾತ್ರರಾಗಿದ್ದಾರೆ.

ಮದ್ರಾಸು ಯುನಿವರ್ಸಿಟಿ ಕಮಿಶನಿನವರು ಇಲ್ಲಿಯ ಶ್ರೀಮಂತ ಭುವನೇಂದ್ರ ಸಂಸ್ಕೃತ ಮಹಾವಿದ್ಯಾಲಯವನ್ನು ಸಂದರ್ಶಿಸಿ ಉತ್ತಮ ಅಭಿಪ್ರಾಯಪಟ್ಟಿರುವ ಹಾಗೂ, ವಿದ್ಯಾಲಯದ ಸುತ್ತುಮುತ್ತ ಪ್ರಾಕೃತಿಕ ಶೋಭೆಯನ್ನು ಕಂಡು ಮುಗ್ಧರಾದ ಹಾಗೆ ತಿಳಿದು ಬರುತ್ತದೆ.

ಕುಕ್ಕುಂದೂರು ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆ

(1) ಇಲ್ಲಿ ಇತ್ತೀಚೆಗೆ ಹರಿಜನ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಆರಂಭವಾಗಿದೆ. (2) ತಾ 14 9-'36ರಲ್ಲು ದಕ್ಷಿಣ ಕನ್ನಡಜಿಲ್ಲಾ ಎಜ್ಯುಕೇಶನಲ್ ಆಫೀಸರರು ಸಂದರ್ಶಿಸಿದ್ದಾರೆ. (3) ನವರಾತ್ರಿಯ ಸಮಯ ಕಾಲಂಪ್ರತಿ ನಡೆಯುವ ಶ್ರೀ ಶಾರದಾಪೂಜಾ ಸಮಾರಂಭವು ಯಥಾವಿಧಿ ನಡೆಯಲಿಕ್ಕಿರುವುದರಿಂದ, ಈ ಸಂದರ್ಭದಲ್ಲಿ ಎಲ್ಲರಿಗೂ ಸುಸ್ವಾಗತವಿದೆ.

ಬೊಂಬಾಯಿ:—ಮುಂಬಾಯಿಯ ಕರ್ನಾಟಕಬಂಧು ವಾರಪತ್ರಿಕೆಯ ಸಹಾಯಾರ್ಥವಾಗಿ ಕರ್ನಾಟಕ ಸೂಕನ ಸಂಗೀತ ಸಭಾ, (ಎಮೆಚೂರ್ಸ್) ಮುಂಬಾಯಿ ಇವರು ಶನಿಪ್ರಭಾವ ಅಥವಾ ವಿಕ್ರಮ ವಿಜಯ ಎಂಬ ಪೌರಾಣಿಕ ನಾಟಕವನ್ನು ಇದೇ ಬರುವ ಅಕ್ಟೋಬರ ತಾ. 9ನೇ ಶುಕ್ರವಾರ ರಾತ್ರಿ ಘಂಟೆ 8-30ಕ್ಕೆ ಸರಿಯಾಗಿ ಕಲ್ಬಾದೇವಿಯಲ್ಲಿರುವ ಭಾಂಗ್ ವಾಡಿ ಥಿಯೇಟರಿನಲ್ಲಿ ಅಭಿನಯಿಸುವರು.

ಅಖಿಲ ಬಂಟರ ಯಾನೆ ನಾಡವರ ಸಂಘದ ಜೊತೆಕಾರ್ಯದರ್ಶಿಗಳಾದ ಶ್ರೀ. ಕೆ. ವೆಂಕಪ್ಪ ಹೆಗ್ಗಡೆಯವರು ಸದ್ರಿ ಸಂಘದ ತಾ. 27ನೇ ಸಪ್ಟಂಬರ ತಿಂಗಳಲ್ಲಿ ಜರಗಲಿಕ್ಕಿರುವ ಸಾರ್ವಜನಿಕ ಸಭೆಯ ಆಮಂತ್ರಣ ಪತ್ರದಲ್ಲಿ ಬಂಟರ ಯಾನೆ ನಾಡವರ ಸಂಘದವರಿಂದ ನವಿದ್ಯಾ ಸಂಘಕ್ಕೆ ಬಂದ ರಾಜಪ್ರಸ್ತಾಪದ ಕಾಗ್ದ ಅಭಿಪ್ರಾಯವನ್ನೂ, ವ, ಇನ್ನಿತರ ವಿಷಯಗಳನ್ನೂ ಮ

DEFEND YOUR OWN INTEREST
BY BANKING WITH THE
UDIPI BANK, Ltd.
UDIPI
ALL KINDS OF BANKING BUSINESS UNDERTAKEN
ESTD: 1925

ಸಭೆಯ ಮುಂದಿಟ್ಟು ಸರ್ವಾನುಮತದಿಂದ ಮಂಜೂರು ಮಾಡುವರೆ ಚರ್ಚಿಸಲಾಗುವುದು.'' ಎಂದು ವಗೈರೆ ಭಾಷಿಸಿರುವರು. ಬಂಟರ ಯಾನೆ ನಾಡವರ ಸಂಘದವರಿಂದ ಅಖಿಲ ಬಂಟರ **ಯಾನೆ** ನಾಡವರ ಸಂಘಕ್ಕೆ ಬಂದ ರಾಜಿಪ್ರಸ್ತಾಪದ ಕಾಗದವನ್ನು ಬಂಟರ ಯಾನೆ ನಾಡವರ ಸಂಘದ ಕಾರ್ಯದರ್ಶಿಗಳಾಗಲೀ, ಅಖಿಲ ಬಂಟರ ಯಾನೆ ನಾಡವರ ಸಂಘದ ಕಾರ್ಯದರ್ಶಿಗಳಾಗಲೀ, ದಯವಿಟ್ಟು ನಿಷ್ಪಕ್ಷಪಾತಿಯಾದ ಈ ನವಯುಗ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ವಿನಂತಿಸುವ,

ಎಸ್. ಸಂಜೀವ ಶೆಟ್ಟಿ.

ಶಿರಿಯಾರ:- ಉಡುಪಿ ತಾಲೂಕು ಶಿರಿಯಾರ ಗ್ರಾಮದ ಮುಖ್ಯ ನಿವಾಸಿಕರು ಸುಪ್ರಸಿದ್ಧರು, ಹಾಗೂ ಗೌರವವುಳ್ಳ ಬಂಟರ ಮನೆತನದಲ್ಲಿ ಒಂದಾದ ಕೊಕ್ಕರ್ಬೈಲು ಮನೆಯ ಯಜಮಾನರಾದ ಶ್ರೀ, ಅಂತ್ಯ ಹೆಗ್ಡೇರವರು ಬಹುಮೂತ್ರ ರೋಗಪೀಡಿತರಾಗಿ, ತಾ, 22-9-'36ನೇ ರಾತ್ರಿ ಘಂಟೆ 9ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇವೆ. ಇವರು 78 ವರ್ಷ ಪ್ರಾಯದವರು. ಸುಮಾರು 1000. ಶೀರ್ವೆ ಕೊಡುವ ಯಜಮಾನರಾಗಿ 20 ವರ್ಷ ಆಡಳಿತ ನಡಿಸಿದವರು. ಸರಳ ಹೃದಯದವರು, ಸಾಧುಸ್ವಭಾವದವರು. 1932ನೇ ಇಸ್ವಿಯಲ್ಲಿ ಪ್ರತಿಸ್ಪರ್ಧಿಯಿಲ್ಲದೆ ತಾಲೂಕು ಬೋರ್ಡು ಮೆಂಬರರಾಗಿ ಆರಿಸಿ ಬಂದವರು. ಕಳದ 1935ನೇ ಇಸ್ವಿಯಲ್ಲಿ ಬರೇ10 ತಿಂಗಳೊಳಗೆ ರೂ 12,000/- ಖರ್ಚುಮಾಡಿ ಒಂದು ದಿವ್ಯವಾದ ಮನೆಯನ್ನು ಕುಟುಂಬಕ್ಕೆ ಕಟ್ಟಿಸಿಕೊಟ್ಟಿರುವರು

ಸ್ವದೇಶ

ಶ್ರೀ ಸುಭಾಸಚಂದ್ರ ಭೋಸರು

ಈಗ ಕುರ್ಸಿಯಾಂಗಿನಲ್ಲಿ ನಿರ್ಬಂಧದಲ್ಲಿರಿಸಲ್ಪಟ್ಟಿರುವರಷ್ಟೆ. ಇವರ ತೂಕವು 185 ರಾತ್ತಲಿಗೂ ಮಿಕ್ಕಿದ್ದು ಈಗ 164ಕ್ಕೆ ಇಳಿದಿರುವುದು. ಸ್ವಲ್ಪ ಸ್ವಲ್ಪ ಜ್ವರಬರುತ್ತಿರುವುದು. ಹೊಟ್ಟೆಯ ಭಾಗದಲ್ಲಿ ನೋಪಿರುವುದು. ಶ್ರೀ ಭೋಸರನ್ನು ಸರ್ ನೀಲರತ್ನ ಸರಕಾರರೂ,ಡಾರ್ಜಿಲಿಂಗಿನ ಸಿವಿಲ್ ಸರ್ಜನರೂ ಪರೀಕ್ಷಿಸಿ ಅವರನ್ನು ಕಲ್ಕತ್ತಕ್ಕೆ ತಂದು ಸರಿಯಾಗಿ ಪರೀಕ್ಷಿಸಬೇಕೆಂದು ತಿಳಿಸಿರುವರಷ್ಟೆ. ಇದರ ಪರಿಣಾಮವೇನಾಗಿರುವುದೆಂದು ತಿಳಿದಿಲ್ಲ

ಶ್ರೀ ಶೈಲೇಂದ್ರನಾಥ ಭೋಸರು

ಕ್ರಾಂತಿಕಾರಕ ಚಳವಳಿಗಾರರೆಂದು ಗಡಿಪಾರುಮಾಡಲ್ಪಟ್ಟ 20 ವರ್ಷಗಳ ವರೆಗ ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿದ್ದ ಶ್ರೀ ಶೈಲೇಂದ್ರನಾಥ ಭೋಸರನ್ನು ಈಗ ಇಂಡಿಯಾ ಸರಕಾರದವರು ಸ್ವದೇಶಕ್ಕೆ ಬರಬಿಟ್ಟಿರುವರು. ಅವರು ಪಂಡಿತ ಮುಕ್ತಕೂಡಿಗೆ ನವಂಬರ ತಾ. 3ಕ್ಕೆ ನ್ಯೂಯಾರ್ಕಿನಿಂದ ಹೊರಟು ಕಲ್ಕತ್ತಕ್ಕೆ ಬರುವರು. ಇವರು ಫೆಡರಲ್ ಎಸಂಬ್ಲಿಯ ಚುನಾವಣೆಗೆ ನಿಲ್ಲಲಿರುವರೆಂದು ತಿಳಿದುಬರುತ್ತದೆ

ಮಹಾರಾಷ್ಟ್ರದ ಫೈಜಪುರದ ಕಾಂಗ್ರೆಸ್ ಸಿದ್ಧತೆಯು ಭರದಿಂದ ನಡೆದಿದೆ. ಶ್ರೀ ನರೀಮನ್, ಜೇನರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಎಸ್. ...

ತಾ. 3—10—'36ನೇ ಶನಿವಾರ ರಾತ್ರಿ 9-30ಕ್ಕೆ

ಶ್ರೀ ಜಗದಂಬಾ ಎಮೆಚೂರ್ ನಾಟಕ ಸಂಘದವರಿಂದ

ಗಣಪತಿ ಹೈಸ್ಕೂಲಿನಲ್ಲಿ ಪ್ರದರ್ಶಿಸಲ್ಪಡುವ

ವ್ಯಭಿಚಾರಿಣಿ ಯಾರು?

ನಾಟಕದ ಒಂದು ದೃಶ್ಯ.

ಈ ನಾಟಕವು ಪುಸ್ತಕ ರೂಪವಾಗಿ ಪದ್ಯ ಸಹಿತ ಪ್ರಕಟವಾಗಿದೆ.

ಪುಟ 100ಕ್ಕೂ ಮಿಕ್ಕಿದ್ದು ಹಲವು ಚಿತ್ರಗಳಿಂದ ಕೂಡಿದೆ.

ಬೆಲೆ ೦—೮—೦ ಮಾತ್ರ.

ಪ್ರತಿಗಳು ಬೇಕಾದವರು ಮಂಗಳೂರಿನ ವಸಂತ ಹಾರ್ಮೋನಿಯಂ ವರ್ಕ್ಸಿಗಾಗಲೀ ಉಡುಪಿಯ ಕಿರಿಯರ ಪ್ರಪಂಚಕ್ಕಾಗಲೀ ಬರೆಯಬೇಕು.

ಉಡುಪಿಯಲ್ಲಿ

ವ್ಯಭಿಚಾರಿಣಿ ಯಾರು?

ತಾ. 10—10—'36ಕ್ಕೆ ಪ್ರದರ್ಶಿಸಲ್ಪಡುವುದು.

ಕಳ್ಳರವರು ಸ್ವಾಗತ ಸಮಿತಿಯ ಮೆಂಬರರಾಗಿ ಸೇರಿರುತ್ತಾರೆ.

ಕೋನಪುರ ಮುನಿಸಿಪಾಲಿಟಿಯವರು ತಮ್ಮ ಹಣ ಖರ್ಚುಮಾಡಿ ಮಹಾತ್ಮಾ ಗಾಂಧಿಯವರ ಚಿತ್ರವನ್ನು ತೆಗದುಕೊಳ್ಳಬಾರದೆಂದು ಸಂಯುಕ್ತ ಪ್ರಾಂತ್ಯ ಸರಕಾರವು ಆಜ್ಞಾಪಿಸಿರುವುದು.

ಕಾಂಗ್ರೆಸ್ ಪ್ರೆಸಿಡೆಂಟ್ ತನವು 3 ವರ್ಷಗಳ ಅವಧಿಯುಳ್ಳದಾಗಬೇಕು, ಮತ್ತು ಪಂಡಿತ ಜವಾಹಿರಲಾಲರೇ ಪುನಃ ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟು ಅವರು 3 ವರ್ಷ ಅಧಿಕಾರದಲ್ಲಿರಬೇಕೆಂಬೊಂದು ಸೂಚನೆಗೆ ಮಹಾತ್ಮಾ ಗಾಂಧಿಯವರ ಒಪ್ಪಿಗೆಯಿದೆ ಎಂದು ತಿಳಿದು ಬರುತ್ತದೆ

ಗಾಂಧಿಜಿಯವರು ಫೈಜಪುರ ಕಾಂಗ್ರೆಸ್ ಪ್ರದರ್ಶನ ವಿಭಾಗವನ್ನು ತಾನೇ ಸ್ವತಹ ಸ್ಥಾಪನೆ ಮಾಡಲಿರುವರೆಂದೂ, ಹಳ್ಳಿ ಕೈಗಾರಿಕೆಗಳ ಪುನರುಜ್ಜೀವನದ ದೃಷ್ಟಿಯಲ್ಲಿ ಅದು ನಡೆಸಲ್ಪಡುವದೆಂದೂ ತಿಳಿದು ಬರುತ್ತದೆ.

ಕಾಂಗ್ರೆಸ್ ಆಫೀಸಿನ ಜಪ್ತಿ

ಕಳದ ತಾ. 28ರಲ್ಲಿ ಅಲಹಾಬಾದಿನ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಆಫೀಸನ್ನು ಪೋಲೀಸರು ಜಪ್ತಿಮಾಡಿದರು. ಕಾಂಗ್ರೆಸ್ ಆಫೀಸಿನಿಂದ ನ್ಯೂಸ್ ಲೆಟರನ್ನು ಪ್ರಕಟಿಗೊಳಿಸಿದುದೇ ಇದಕ್ಕೆ ಕಾರಣ. ಈ ಸಂದರ್ಭದಲ್ಲಿ ಪಂಡಿತ ಜವಾಹಿರಲಾಲರು ಹಾಜರಿದ್ದರು

ಬಿಹಾರಿನಲ್ಲಿ ಪುನಃ ನೆರೆಹಾವಳಿ

ಕಳದ ತಾ. 26ರಲ್ಲಿ ಬಾಗ್ಮತಿ, ಕಮಳಿ, ಬಿನಾಬ್ ಮತ್ತು ಕಾಲ ನದಿಗಳಲ್ಲಿ ನೆರೆಬಂದು ಉತ್ತರಬಿಹಾರಿನಲ್ಲಿ ಹಲವು ಹಳ್ಳಿಗಳು ನೀರಡಿಯಲ್ಲಿರುವವು. ಈ ಭಾಗದ ಭತ್ತದ ಬೆಳೆಗೆ ಬಹಳ ಹಾವಳಿಯಾಗಿದೆ.

ವಿದೇಶ

ಲೀಗ್ ಎಸೆಂಬ್ಲಿಯ ಸಭೆಯಲ್ಲಿ ಅಬಿಸೀನಿಯದ ಪ್ರತಿನಿಧಿಗೆ ಸ್ಥಾನ ದೊರೆಯಬೇಕೆಂದು ಇಟೆಲಿಯು ಆಕ್ಷೇಪಿಸಿದರೂ ಎಸೆಂಬ್ಲಿಯವರು ಸ್ಥಾನಕೊಟ್ಟಿರುವರು. ಇದರಿಂದ ಇಟೆಲಿಯು ಕ್ರೋಧಗೊಂಡಿರುವುದು. ಈ ಪ್ರಯತ್ನಕ್ಕಾಗಿ ನಗಸರು ಸ್ವತಃ ವಿಮಾನಯಾನದಲ್ಲಿ ಜಿನಿವಕ್ಕೆ ಹೋಗಿದ್ದರು. ಕಳೆದ ತಿಂಗಳು ತಾ 25ರಲ್ಲಿ ಲಂಡನಿಗೆ ಹಿಂತಿರುಗಿರುವರು ಅಬಿಸೀನಿಯ ಚಕ್ರವರ್ತಿಯವರು ಈಗ ಲಂಡನಿಗೆಬಂದಿರುವರು

ಪಲಸ್ತೈನಿನಲ್ಲಿ ಗಲಾಟೆಯು ಯಥಾಪ್ರಕಾರ ನಡೆದಿರುತ್ತದೆ. ತೀವ್ರಗಾಮಿ ಅರಬರಿಗೆ ಒಳಗಿಂದೊಳಗೆ ಇಟಲಿಯು ಪ್ರೋತ್ಸಾಹವೀಯುತ್ತಿರುವುದೆಂಬ ಸುದ್ದಿಯುಂಟಾಗಿದೆ. ಗಲಾಟೆಯಾರಂಭವಾದಂದಿನಿಂದ 2643 ಅರಬರೂ, 340 ಮಂದಿ ಯಹೂದ್ಯರೂ ದಸ್ತಗಿರಿಮಾಡಲ್ಪಟ್ಟಿರುವರು

ಸ್ಪೈನಿನ ಬಂಡಾಯ

ದಕ್ಷಿಣ ರಣರಂಗದಲ್ಲಿ ಭೀಷಣ ಹೋರಾಟ ನಡೆದು 3,000 ಮಂದಿ ಬಂಡಾಯಗಾರ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ಮೇದ್ರಿಡ್ ಸರಕಾರದ ಸುದ್ದಿ ಸರಕಾರದ ಕಡೆಯ ಕೆಲವು ಯುದ್ಧನಾವೆಗಳು ಬಂಡಾಯಗಾರರ ಪಕ್ಷ ಹಿಡಿದಿರುವವೆಂದು ಬಂಡಾಯಗಾರರ ಕಡೆಯ ಸುದ್ದಿ.

ಮೇದ್ರಿದಿನಿಂದ 60 ಮೈಲು ದೂರವಿರುವ ಮಕೇಡವು ಬಂಡಾಯಗಾರರ ವಶವಾಗಿರುವುದು. ಇಲ್ಲಿ 3 ದಿನಗಳ ವರೆಗೆ ಭೀಷಣ ಯುದ್ಧ ನಡೆದು ಸರಕಾರಿ ಕಡೆಯ ಅನೇಕ ಮಂದಿ ಕೊಲ್ಲಲ್ಪಟ್ಟಿರುವರು ಬಂಡಾಯಗಾರರು ವಿಮಾನದ ಮೂಲಕ ಬೋಂಬುಗಳನ್ನೆಸದು ಹಾವಳಿಮಾಡಿದರು. ಸರಕಾರಿ ಕಡೆಯ ವಿಮಾನಗಳು ವಿಳಂಬವಾಗಿ ಬಂದುದರಿಂದ ಪ್ರಯೋಜನವಾಗಲಿಲ್ಲ. ಇಕ್ಕಡೆಯ ವಿಮಾನಗಳೊಳಗೂ ಭೀಷಣ ಹೋರಾಟ ನಡೆಯಿತು. ಅಲ್ಕಜಾರ್ ಎಂಬ ಪ್ರಾಮುಖ್ಯ ಕೋಟೆಯು ಕಟ್ಟಕಡೆಗೀಗ ಕಳೆದ ತಾ 22ರಲ್ಲಿ ಸರಕಾರದ ವಶವಾಗಿರುವುದು. ಮಕೇಡದಲ್ಲಿ ನಡೆದ ಭೀಷಣ ಯುದ್ಧದಲ್ಲಿ 4,000 ಮಂದಿ ಸರಕಾರಿ ಕಡೆಯ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ಬಂಡಾಯಗಾರರ ಕಡೆಯ ಸುದ್ದಿ. ಸರಕಾರಿ ಕಡೆಯ ವಿಮಾನಗಳು ಬೋಂಬೆಸದು ಬಂಡಾಯಗಾರರ ಯುದ್ಧನಾವೆಯನ್ನು ನಾಶಮಾಡಿರುವವು. ಸ್ಪೈನನ್ನು ಬಿಟ್ಟುಹೋಗುವ 100 ಮಂದಿ ಜನರಿರುವ ಸ್ಟೀಮರೊಂದು ಮುಳುಗಿಹೋಗಿರುವುದು.

ಪಶ್ಚಿಮ ಅಬಿಸೀನಿಯದ ಗೋರ್ ಎಂಬಲ್ಲಿ ಅಬಿಸೀನಿಯದ ಸ್ವತಂತ್ರ ಸರಕಾರವು ಸ್ಥಾಪಿಸಲ್ಪಟ್ಟಿರುವದಷ್ಟೆ. ಅದನ್ನು ಜೈಸಲು ಇಟೆಲಿಯು ಸೇನೆಯನ್ನು ಕಳುಹಿಸಿರುವುದು. ಇವರಲ್ಲಿ ಅನೇಕರು ರಾಸ್ ನೆಯುಬರ್ ಮತ್ತು ರಾಸ್ ಹೈಲುರವರ ಕೈಕೆಳಗೆ ಹೋರಾಡಿದ ಅಬಿಸೀನಿಯನರು

ಚೀನದ ಹೋಂಗ್ ಕೋ ಎಂಬ ಪಟ್ಟಣದಲ್ಲಿ ಜಪಾನ ಸೈನಿಕರ ಮೇಲೆ ಗುಂಡು ಹೊಡೆಯಲ್ಪಟ್ಟು ಒಬ್ಬನು ಕೊಲ್ಲಲ್ಪಟ್ಟಿರುವನು. ಇಬ್ಬರು ಗಾಯಗೊಂಡಿರುವರು. ಇದರಿಂದ ಜಪಾನ ಸರಕಾರವು ರೇಗಿ ಬಿದ್ದು ಯುದ್ಧ ನಾವೆಗಳನ್ನು ಕಳುಹಿಸಿ ಹೋಂಗ್ ಕೋ ಜಿಲ್ಲೆಗೇನೇ ಮುತ್ತಿಗೆ ಹಾಕಲಾಗಿದೆ ಚೀನೀ ಸರಕಾರದ ಸಂಬಂಧವನ್ನೇ ಕಡಿದು ಹಾಕುವ ಬೆದರಿಕೆ ಹಾಕಲಾಗಿದೆ.

ಟೊಲೇಡೋ ಎಂಬ ಮೇದ್ರಿದಿನ ಮಾರ್ಗದಲ್ಲಿ ಪ್ರಾಮುಖ್ಯ ಸ್ಥಳವು ಬಂಡಾಯಗಾರರ ಅಧೀನವಾಗಿರುವುದು. ಇಲ್ಲಿ ನಡೆದ ಭೀಷಣ ಸಮರದಲ್ಲಿ ಇಕ್ಕಡೆಯಲ್ಲಿಯೂ ಸಾವಿರಾರು ಮಂದಿ ಹತರಾಗಿರುವರು ಬಂಡಾಯಗಾರರಿಗೆ ಹೊರಗಣ ಸಹಾಯ ದೊರೆಯುವ ನಿಮಿತ್ತ ಅವರ ಪ್ರಯಾಣ ಪಡೆಯು ಪ್ರಬಲವಾಗಿದೆ. ಮೇದ್ರಿದನ್ನು ಬಂಡಾಯಗಾರರ ಹಾವಳಿಯಿಂದ ರಕ್ಷಿಸಲು ಸರಕಾರದ ಕಡೆಯವರೆಲ್ಲರೂ ಪ್ರಬಲ ಪ್ರಯತ್ನ ಮಾಡಬೇಕಾಗಿದೆ.

ದ. ಕ. ಜಿಲ್ಲಾ ಬೋರ್ಡು ಸಭೆ

ಕಲೆಕ್ಟರ್ ಪ್ರೆಸಿಡೆಂಟರ ವರ್ತನೆಯ ಮೇಲೆ ಟೀಕೆ.

ಅಧ್ಯಕ್ಷರ ಆರೋಪಣೆಯ ಮೇಲೆ ಚರ್ಚೆ
ಸಂಬಳ ಕಡಿತವು ರದ್ದಾಯಿತು.

(ನಮ್ಮ ಸ್ವಂತ ಬಾತ್ಮಿದಾರರಿಂದ)

ಮಂಗಳೂರು, ತಾ 21—9—36.

ದ. ಕನ್ನಡ ಜಿಲ್ಲಾ ಬೋರ್ಡು ಸಭೆಯು ಕಳೆದ ತಾ. 22ನೇ ಸೋಮವಾರ ಪೂರ್ವಾಹ್ನ 11 ಗಂಟೆಗೆ ಸರಿಯಾಗಿ ಬೋರ್ಡು ಆಫೀಸಿನಲ್ಲಿ ಸೇರಿತು. ದಿವಾನ್ ಬಹದ್ದೂರು ಬಿ. ಮಹಾಬಲಹೆಗ್ಡೆಯವರು ಅಗ್ರಾಸನ ವಹಿಸಿದ್ದರು. ಈ ಬೋರ್ಡು ಚುನಾವಣೆ ಹೊಂದಿದ ಬಳಿಕ ಇಷ್ಟು ಮುಖ್ಯ ಪ್ರಶ್ನೆಗಳು ಚರ್ಚೆಗೆ ಬಂದುದೇ ಇಲ್ಲವೆನ್ನಬಹುದು. ಅಧ್ಯಕ್ಷರು, ಹಲವರು ತಾವು ಹಾಕಿದ್ದ ಪ್ರಶ್ನೆಗಳನ್ನು ವಾಪಾಸು ತೆಗೆದುಕೊಂಡದ್ದರಿಂದ ಕಾರ್ಯಕ್ರಮದ ಪಟ್ಟಿಯು ಸ್ವಲ್ಪ ಚಿಕ್ಕದಾಗಿದೆಯೆಂದೂ, ಸದಸ್ಯರು ಹಾಗೆ ಮಾಡದಿರುತ್ತಿದ್ದರೆ ಎಲ್ಲಾ ವಿಷಯಗಳನ್ನು ಪರ್ಯಾಲೋಚಿಸುವುದು ಪ್ರಯಾಸವಾಗುತ್ತಿತ್ತೆಂದೂ ಸೂಚಿಸಿ ಪ್ರಶ್ನೆಗಳನ್ನು ಹಿಂತೆಗೆದ ಸದಸ್ಯರಿಗೆ ತಮ್ಮ ಧನ್ಯವಾದಗಳನ್ನರ್ಪಿಸಿದರು. ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷರಾದ ಶ್ರೀಮಾನ್ ಎ. ಬಿ. ಶೆಟ್ಟಿಯವರು, ಕೆಲವು ಪ್ರಶ್ನೆಗಳನ್ನು ಕೊನೆ ನಿಶ್ಚಿತ ತಾರೀಕಿನಿಂದ ಬಹಳ ಮುಂಚಿತವಾಗಿ ಕಳುಹಿಸಿದರೂ ಅವುಗಳು ಕಾರ್ಯಕ್ರಮದ (ಅಜೆಂಡಾ) ಪಟ್ಟಿಯಲ್ಲಿ ಬೀಳದಿರುವದನ್ನೂ, ಕೆಲವು ಸೇರಿದ್ದರೂ, ಕೆಲವು ಭಾಗಗಳು ಇಲ್ಲದೆ ಸೇರಿಸಲ್ಪಟ್ಟಿರುವ ಕಾರಣವೇನೆಂದೂ ಕೇಳಿದರು. ಮತ್ತು ಕೆಲವು ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳೂ, ಅವುಗಳ ಮೇಲೆ ನಡೆದ ಚರ್ಚೆಗಳೂ ಬಜೆಟಿನಲ್ಲಿ ಸರಿಯಾಗಿ ಪ್ರಕಟಿಸಲ್ಪಡಬೇಕೆಂದು ಕಾನೂನಿನಿದೆಯೆಂದೂ ತಿಳಿಸಿದರು. ಸಾಧ್ಯವಿರುವಷ್ಟು ಮಟ್ಟಿಗೆ ಸರಿಯಾಗಿ ಪ್ರಚಾರ ಮಾಡುವುದಕ್ಕೆ ಯತ್ನಿಸುತ್ತೇವೆಂದು ಅಧ್ಯಕ್ಷರು ಹೇಳಿದರು. ಕಾಂಗ್ರೆಸ್ ಪಕ್ಷದ ಉಪನಾಯಕರಾದ ಡಾ। ವಿಟ್ಠಲಶೆಟ್ಟಿಯವರು ಎದ್ದು ನಿಂತು, ಅಧ್ಯಕ್ಷರು ಸಾಧ್ಯವಿರುವ ಮಟ್ಟಿಗೆ ಸರಿಯಾಗಿ ಪ್ರಕಟಮಾಡಿಸುವೆನೆಂಬುದು ಸರಿಯಲ್ಲವೆಂದೂ ಅದನ್ನು ಸರಿಯಾಗಿ ಪ್ರಕಟಮಾಡಲೇಬೇಕೆಂದೂ ಹೇಳಿದರು. ಮತ್ತು ಅಧ್ಯಕ್ಷರು ಬಹಳ ಚುಟುಕಾಗಿ ಉತ್ತರವನ್ನು ಕೊಡುವುದು ಯುಕ್ತವಲ್ಲವೆಂದೂ, ಟೆಲಿಗ್ರಾಫ್ ರೀತಿಯ ಉತ್ತರದಿಂದ ಫಲವಿಲ್ಲವೆಂದೂ ಸೂಚಿಸಿದರು. ಈ ಆಕ್ಷೇಪಣೆಗಳನ್ನು ತಾವು ಗಮನಿಸುವುದಾಗಿ ಅಧ್ಯಕ್ಷರು ಹೇಳಿದರು.

ಆ ಮೇಲೆ ಪ್ರಶ್ನೋತ್ತರಗಳಾದವು. ಶ್ರೀ॥ಗಳಾದ ವೆಂಕಪ್ಪಸೆಟ್ಟಿ, ಮಹಮ್ಮದ್ ಶೆರೂಲ್ ಇವರುಗಳ ಪ್ರಶ್ನೆಗಳು ಆದಮೇಲೆ ಶ್ರೀ॥ ಎ. ಬಿ. ಶೆಟ್ಟಿಯವರು ತಮ್ಮ ಪ್ರಶ್ನೆಗಳನ್ನು ಕೇಳಿದರು ಅವುಗಳಲ್ಲಿ ಅತಿ ಮುಖ್ಯವಾದುದನ್ನು ಮಾತ್ರ ಇಲ್ಲಿ ಬರೆಯುತ್ತೇನೆ. 31-3-36ರಲ್ಲಿ ಬೋರ್ಡಿನ ಆಖೈರಿ ಶಿಲ್ಕು (ಕ್ಲೋಸಿಂಗ್ ಬ್ಯಾಲೆನ್ಸ್) ಎಷ್ಟೆಂದು ಕೇಳಲಾಗಿ ಅಧ್ಯಕ್ಷರು ರೂಪಾಯಿ 75551—9—11 ಎಂದರು. ಶ್ರೀ. ಎ. ಬಿ ಶೆಟ್ಟಿಯವರು, ಹಿಂದಿನ ಆಡಳಿತೆಯಲ್ಲಿ ಬೋರ್ಡು ದಿವಾಳಿಯಾಗಿದೆಯೆಂದು ತಾವು ಯಾರಲ್ಲಿಯಾದರೂ ಹೇಳಿದ್ದುಂಟೆ? ಎಂದು ಅಧ್ಯಕ್ಷರನ್ನು ಪ್ರಶ್ನಿಸಿದರು. ವಿನೋದಕ್ಕಾಗಿ (ಹ್ಯೂಮರ್) ಹೇಳಿದ್ದಿರಬಹುದೆಂದರು. ಡಾ. ವಿಟ್ಠಲಶೆಟ್ಟಿಯವರು ಇಂತಹ ಆರೋಪಣೆಯು ವಿನೋದದ ವಿಷಯವೇ? ಬೋರ್ಡಿನ ಅಧ್ಯಕ್ಷರಂತಹ ಜವಾಬ್ದಾರಿಯುಳ್ಳವರು ಇಂತಹ ಆರೋಪಣೆಗಳನ್ನು ಮಾಡುವುದು ನ್ಯಾಯವಲ್ಲವೆಂದರು. ಈ ಸಂದರ್ಭದಲ್ಲಿ ಡಾ. ವಿಟ್ಠಲಶೆಟ್ಟಿಯವರು, ಆಯವ್ಯಯದ ಪಟ್ಟಿಯನ್ನು ತಯಾರಿಸುವಾಗ ಬ್ಯಾಲೆನ್ಸ್ ಎಷ್ಟಿತ್ತೆಂದು ತಿಳಿದಿರಲಿಲ್ಲ. ಈಗ ನೋಡುವಲ್ಲಿ ಧಾರಾಳ ಹಣವಿದೆ. ಆದ್ದರಿಂದ ನೌಕರರ ಸಂಬಳ ಕಡಿತವನ್ನು ಕಿತ್ತುಹಾಕಬೇಕೆಂದರು. ಟ್ರೆಜರಿ ಡಿಪ್ಟಿ ಕಲೆಕ್ಟರರಿಗೆ ಅಧಿಕಾರವನ್ನು ಕೊಡುವುದರ ಮೊದಲು (ಡೆಲಿಗೇಟ್) ಅವರು ಜ್ಯಾರಿ ಮಾಡಿದ ಹುಕುಮುಗಳು ನ್ಯಾಯಸಮ್ಮತವೇ ಎಂಬುದನ್ನು ನೀವು ವಿಚಾರಿಸಿದ್ದೀರಾ ಎಂಬುದು ಶ್ರೀ. ಶೆಟ್ಟಿಯವರ ನಾಲ್ಕನೆಯ ಪ್ರಶ್ನೆ. ಅದನ್ನು ವಿಚಾರಿಸತಕ್ಕ ಆಗತ್ಯವಿಲ್ಲವೆಂದು ಉತ್ತರ. ಪ್ರಶ್ನೆ: ಕೆಲ ಶಾಲೆಗಳನ್ನೂ ಕೆಲವು ಹಾ. ಎ. ಶಾಲೆಗಳ ಮೇಲಿನ ತರಗತಿಗಳನ್ನೂ ಕಲೆಕ್ಟರ್—ಪ್ರೆಸಿಡೆಂಟರು ಬೋರ್ಡಿನ ಅನುಮತಿ ದೊರೆಯಬಹುದೆಂಬ ನಿರೀಕ್ಷೆಯ ಮೇಲೆ ತೆಗೆದುಹಾಕಿದ ವಿಷಯವನ್ನು ಬೋರ್ಡಿನ ಮುಂದಿನ ಮೀಟಿಂಗಿನ ಎದುರಿಗೆ ಆ ಪ್ರಶ್ನೆಯನ್ನು ತರಲಿಲ್ಲವೇಕೆ? ಲೋಕಲ್ ಸೆಲ್ಫ್ ಗವರ್ನ್‌ಮೆಂಟ್ ಆಕ್ಟಿನ 29ನೇ ಕಲಂ ಪ್ರಕಾರ ತರಬೇಕಾಗಿತ್ತಲ್ಲವೇ? ಕಲೆಕ್ಟರ್-ಪ್ರೆಸಿಡೆಂಟರು ಶಾಲೆಗಳನ್ನೂ ತರಗತಿಗಳನ್ನೂ ಮುಚ್ಚಿದ ವಿಷಯವನ್ನು ತಾ. 21—1—36ರಲ್ಲಿ ಜರಗಿದ ಸಾಮಾನ್ಯ ಸಭೆಯ ಮುಂದಿರಿಸಿದ್ದಾರೆ ಹಣದ ಅಭಾವದಿಂದ ಶಾಲೆಗಳನ್ನೂ ಕ್ಲಾಸುಗಳನ್ನೂ ಮುಚ್ಚಿದ್ದೆಂದು ಕಲೆಕ್ಟರ್-ಪ್ರೆಸಿಡೆಂಟರು ಸರಕಾರಕ್ಕೆ ಪತ್ರ ಬರೆದುದರ ಮೇಲೆ, ಸರಕಾರದ ಉತ್ತರವನ್ನು ನಿರೀಕ್ಷಿಸುತ್ತಿದ್ದುದರಿಂದ ಅದನ್ನು ಬೋರ್ಡಿನ ಮುಂದಿರಿಸಲಿಲ್ಲ. ಬಡ್ಜೆಟ್ ಮೀಟಿಂಗಿನಲ್ಲಿ ಇದರ ವಿಚಾರ ಏನೂ ಮಾಡಿಲ್ಲ.

ಪ್ರಶ್ನೆ:—ತಾ. 6-12-35ರಲ್ಲಿ ಕಲೆಕ್ಟರ್ ಪ್ರೆಸಿಡೆಂಟರು ಗುಮಾಸ್ತರುಗಳ ಹಾಜರಿಯನ್ನು ತನಿಕೆ ನಡಿಸುವುದಕ್ಕೆ 11 ಘಂಟೆಗೆ ಬಂದಿದ್ದರೇ? ಉತ್ತರ ಹೌದು ಪ್ರಶ್ನೆ:- ಆಫೀಸ್ ಕಂಪೌಂಡಿನ ದ್ವಾರಗಳನ್ನು ಬಂದು ಮಾಡಿದ್ದು ನಿಜವೇ? ನಿಜವಾದರೆ ಬಾಗಿಲಲ್ಲಿ ಯಾರನ್ನು ನಿಲ್ಲಿಸಿದ್ದರು? ಉತ್ತರ: ತಡವಾಗಿ ಬಂದ ಗುಮಾಸ್ತರು ಕಲೆಕ್ಟರ ಪ್ರೆಸಿಡೆಂಟರಿಗೆ ಕಾರಣ ತಿಳಿಸುವ ವರೆಗೆ ದ್ವಾರಗಳು ಬಂದಾಗಿದ್ದವೆಂದೂ ಒಂದು ದ್ವಾರದಲ್ಲಿ ಕಲೆಕ್ಟರರ ದಫೇದಾರನು ನಿಲ್ಲಿಸಲ್ಪಟ್ಟಿದ್ದಾನೆಂದೂ ತಿಳಿಸಿದ್ದಾರೆ. ಪ್ರಶ್ನೆ: ಕಲೆಕ್ಟರ-ಪ್ರೆಸಿಡೆಂಟರು ಬಂದ ಕೂಡಲೇ ಬಂದ ಕ್ಲಾರ್ಕರನ್ನು ತಡೆದಿರುವರೆ? ತಡೆದಿದ್ದರೆ ಎಷ್ಟು ಮಂದಿಯನ್ನು? ಉತ್ತರ:- ಹೌದು, ಅವರ (ಕ್ಲಾರ್ಕರ) ಹೇಳಿಕೆಯ ಮೇರೆಗೆ ಇಬ್ಬರು. ಪ್ರಶ್ನೆ:-ಪೋಲೀಸರನ್ನು ಆಫೀಸಿನ ಹೊರಗೆ ನಿಲ್ಲಿಸಿದ್ದರೆ? ಇದ್ದರೆ ಏತಕ್ಕಾಗಿ? ಉತ್ತರ: ಅಧ್ಯಕ್ಷರಿಗೆ ಕೊಡಲು ಕಾರಣವಿಲ್ಲ. (ನೋ ಎಕ್ಸ್‌ಪ್ಲನೇಶನ್) ಶ್ರೀಮಾನ್ ಬಿ. ವೈಕುಂಠಬಾಳಿಗರು ಈ ಸಂದರ್ಭದಲ್ಲಿ ಎದ್ದು ಹೀಗೆಂದರು:— ಜಿಲ್ಲಾಬೋರ್ಡು ಸಾರ್ವಜನಿಕ ಸಂಸ್ಥೆ. ಕ್ಲಾರ್ಕರು ಈ ಬೋರ್ಡಿನ ಆಫೀಸಿಗೆ ಸೇರಿದವರು. ಅವರನ್ನು ಈ ರೀತಿ ದಂಡಿಸುವುದೆಂದರೆ ಬೋರ್ಡಿನ ಹೆಸರಿಗೆ ಕುಂದು. ಪ್ರಶ್ನೆ:- ಸ್ವಲ್ಪ ಹೆಚ್ಚು ಸಮಯ (ಗ್ರೇಸ್ ಟೈಮ್) ಕೊಡುವ ಪದ್ಧತಿ ಇದೆಯೆ? ಉತ್ತರ:- ಹೌದು. ಮಾಜಿ ಅಧ್ಯಕ್ಷರ ತಾ. 20—6—33ರ ಹುಕುಂ ಪ್ರಕಾರ 15 ನಿಮಿಷ ಹೆಚ್ಚು ಸಮಯ ಕೊಡಲ್ಪಟ್ಟಿದೆ. ಪ್ರಶ್ನೆ:-ಆ ದಿನ ತಡಮಾಡಿ ಬಂದವರಿಗೆ ದಂಡನೆಯಾಗಿದೆಯೆ? ಅವರು ಎಷ್ಟು ನಿಮಿಷ ತಡವಾಗಿ ಬಂದುದಕ್ಕೆ? ಉತ್ತರ:- ಇಬ್ಬರಿಗೆ ಅಧಿಕ ದಿವಸದ ಸಂಬಳ ಅಪರಾಧವಾಯಿತು ದಂಡನೆಗೊಳಪಟ್ಟ ಕ್ಲಾರ್ಕರ ಹೇಳಿಕೆಯ ಮೇರೆಗೆ ಒಬ್ಬನು ಐದು ನಿಮಿಷ ತಡವಾಗಿಯೂ ಮತ್ತೊಬ್ಬನು 2 ಮಿನಿಟು ತಡವಾಗಿಯೂ ಬಂದಿದ್ದರು. ಪ್ರಶ್ನೆ:- ಡಿ. ಬೋರ್ಡಿನ ಯಾವ ಕ್ಲಾರ್ಕರಿಗಾದರೂ ಬ್ಲೇಕ್ ಮಾರ್ಕು ಬಿದ್ದಿದೆಯೋ? ಬಿದ್ದಿದ್ದರೆ ಏತಕ್ಕಾಗಿ? ಉತ್ತರ:-ಒಬ್ಬನಿಗೆ ಒಂದು ಹುಕುಮಿನ ಶುದ್ಧ ನಕಲನ್ನು ಕಳುಹಿಸದಿದ್ದಕ್ಕಾಗಿ; ಮತ್ತೊಬ್ಬನಿಗೆ ಪಂಚಾಯತ ಆಫೀಸರರ ಸಂಚಾರದ ಪಟ್ಟಿಯನ್ನು ಕಲೆಕ್ಟರ್-ಪ್ರೆಸಿಡೆಂಟರ ಅಪ್ಪಣೆ ಇಲ್ಲದೆ ಫಾಯಿಲ್ ಮಾಡಿದ್ದಕ್ಕೆ. ಪ್ರಶ್ನೆ:- ಒಬ್ಬ ಕ್ಲಾರ್ಕನ ಹಿಂದೆ ಗುಪ್ತ ಪೋಲೀಸನನ್ನು ಕಳುಹಿಸಿದುದು ನಿಜವೇ? ನಿಜವಾಗಿದ್ದರೆ ಕ್ಲಾರ್ಕನ ಯಾವ ತಪ್ಪಿಗಾಗಿ? ಉತ್ತರ:-ನನ್ನ ತಿಳಿವಳಿಕೆಗೆ ಬಂದಿಲ್ಲ. ಪ್ರಶ್ನೆ: ಮೇಲಿನ ವಿಷಯದಲ್ಲಿ ಕಲೆಕ್ಟರ್-ಪ್ರೆಸಿಡೆಂಟರ ಬಂಗ್ಲೆಯಲ್ಲಿ ಆ ಕ್ಲಾರ್ಕನಿಂದ ಏನಾದರೂ ಸ್ಟೇಟ್‌ಮೆಂಟ್ ಪಡೆದಿದ್ದಾರೆಯೆ? ಉತ್ತರ:- ಆ ಪ್ರಶ್ನೆ ಬರುವದಿಲ್ಲ. ಪ್ರಶ್ನೆ:- ಈ ಸ್ಟೇಟ್‌ಮೆಂಟಿನ ಮೇಲೆ ಮಾಡಿದ ರಿಕಾರ್ಡುಗಳು ಆಫೀಸಿನಲ್ಲಿವೆಯೆ? ಉತ್ತರ:— ಇಲ್ಲ. ಪ್ರಶ್ನೆ:—ಕಲೆಕ್ಟರ್-ಪ್ರೆಸಿಡೆಂಟರು ಆಫೀಸ್ ಪೇದೆಗಳನ್ನು ಬರತರ್ಫ್ ಮಾಡಿದ್ದುಂಟೊ? ಇದ್ದರೆ ಯಾವ ತಪ್ಪಿಗೆ? ಉತ್ತರ:—ಹೌದು. ಇಬ್ಬರು ಪೇದೆಗಳು ಬರಬೇಕಾಗಿದ್ದ ಸ್ಥಳದಲ್ಲಿದ್ದರು. ಅವರು ಸರಿಯಾದ ಉಡಿಗೆ ಧರಿಸಿರಲಿಲ್ಲ. ಕಲೆಕ್ಟರರಿಗೆ ಸರಿಮರ್ಯಾದೆಯನ್ನು ಅವರು ಮಾಡಲಿಲ್ಲ. ಪ್ರಶ್ನೆ:-ಸಸ್ಪೆಂಡ್ ಮಾಡುವದರೊಳಗೆ ಪೇದೆಗಳಿಗೆ ಬಂಗ್ಲೆಯಲ್ಲಿ ಏನಾದರೂ ದಂಡನೆಯಾಗಿತ್ತೆ? ಆ ಸಮಯದಲ್ಲಿ ಅಲ್ಲಿ ಡಿ. ಹೆಲ್ತ್ ಆಫೀಸರರು ಇದ್ದಿದ್ದರೆ? ಉತ್ತರ.- ಅಧ್ಯಕ್ಷರಿಗೆ ಆ ವಿಷಯ ಗೊತ್ತಿಲ್ಲ. ಇನ್ನೂ ಬೇರೆ ಕೆಲವು ಪ್ರಶ್ನೋತ್ತರಗಳಾದ ಮೇಲೆ ಸಭೆಯವರು ಠರಾವುಗಳನ್ನು ವಿಚಾರಿಸಿ ನಿರ್ಧರಿಸಲುಪಕ್ರಮಿಸಿದರು. ಶ್ರೀ. ಕೆ ಎಲ್. ಕಾರಂತರನ್ನು ವರ್ಗಾಯಿಸಿದ್ದೇಕೆಂದು ಶ್ರೀ. ಎ. ಬಿ. ಶೆಟ್ಟಿಯವರು ಕೇಳಲಾಗಿ ಶ್ರೀ. ಕಾರಂತರು ಅಧ್ಯಕ್ಷರ ಚುನಾವಣೆಯಾಗದುದಕ್ಕೆ ಆಕ್ಷೇಪ ಮಾತಾಡಿದರೆಂದೂ, ಕಲೆಕ್ಟರರನ್ನು ಸಾಲಗಾರರೆಂದು ಹೇಳಿದರೆಂದೂ ಉತ್ತರ.

ಸರಕಾರದವರು ಕಲೆಕ್ಟರ್-ಪ್ರೆಸಿಡೆಂಟರಿಗೆ ಸಹಾಯಕರನ್ನು ನೇಮಿಸುವ ಸಂದರ್ಭದಲ್ಲಿ ಬರೆದ ಲೇಖನದ ವಿಷಯ ಬಂದಾಗ—ಕಲೆಕ್ಟರರು ಸರಕಾರಕ್ಕೆ ಬರೆದ ಒಂದು ಲೇಖನದಲ್ಲಿ ಬೋರ್ಡಿನ ಆಡಳಿತೆಯು 'ಅವ್ಯವಸ್ಥಿತ' ಸ್ಥಿತಿಯಲ್ಲಿದೆಯೆಂದು ಬರೆದಿದ್ದರೆಂಬ ವಿಷಯದಲ್ಲಿ ಸಭಿಕರು ತುಂಬಾ ಅಸಮಾಧಾನಪಟ್ಟರು. ಕಲೆಕ್ಟರರು ಹಾಗೆ ಬರೆದುದು ಬೋರ್ಡಿನ ಗೌರವಕ್ಕೆ ಕಡಿಮೆಯೆಂದೂ ಇಂತಹ, ಅವ್ಯವಸ್ಥೆ ನಡೆದುದು ಏನೆಂಬುದನ್ನು ಗೊತ್ತುಹಚ್ಚಬೇಕೆಂದೂ ಶ್ರೀ. ಬಾಳಿಗರು ಹೇಳಿದರು. ಇತರ ವಿಷಯಗಳು ಮುಂದುವರಿಸಲ್ಪಟ್ಟವು.

ನವಯುಗಕ್ಕೆ ಸಂಬಂಧಿಸಿದ ಯಾವತ್ತೂ ಪತ್ರವ್ಯವಹಾರಗಳನ್ನು
ಮೆನೇಜರ್, 'ನವಯುಗ' ಉಡುಪಿ, ಈ ವಿಳಾಸಕ್ಕೇನೇ ಮಾಡಬೇಕು.

NOTICE.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 454/36

ವಾದಿ:— ರಾಮ ಭಟ್ಟ, ಬಸ್ರೂರು

ಪ್ರತಿವಾದಿ:— ಸುಬ್ಬಣ್ಣ ಉಳ್ಳೂರ, ಕೈಲಕೆರೆ, ಅನಂತ ಉಳ್ಳೂರರ ಮಗ, ಹಾಲಿ ಕುಂದಾಪುರ ಕಸಬಾ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿಗೆ ಪ್ರತಿವಾದಿಯಿಂದ ಮೂಲಗೇಣಿ ಗೇಣಿ ಬಾಬ್ತು ಬರ ರೂ. 6—15—3 ವಗೈರೆಯನ್ನು ಬರಮಾಡಿಕೊಳ್ಳುವ ಕುರಿತು ದಾಖಲುಮಾಡಿದ ಮೇಲಿನ ದಾವೆಯು ತಾ. 19—10—36ನೇ ಬೆಳಿಗ್ಗೆ 11 ಗಂಟೆಗೆ ನೋಡ್ಲ್ಯಾಗುವ ಕೋರ್ಟಿನಲ್ಲಿ ತನಿಖೆಗೆ ಇಟ್ಟದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

Coondapoor, Date 23-9-36

B. S. Shetty, B.A., B.L.
Vakil for Plaintiff.

ಗಾಂಧಿವಾರ | ೩೫ ಕೋಟಿ ವರುಷ ಆಯುಸ್ಸು!

ತಲೆಯಲ್ಲಿ ಕೂದಲು, ಬಾಯಲ್ಲಿ ಹಲ್ಲು–ಇವೆರಡೂ ಇಲ್ಲದ ನಮ್ಮ ಮುದುಕನಿಗೆ ಈ ದಿನಕ್ಕೆ ತುಂಬಿ ಬರುವದು ಬರೇ 67 ವರ್ಷ; ನಾಳೆಯಿಂದ 68ನೇ ವರ್ಷದ ಪ್ರಾರಂಭ! ಲೆಕ್ಕ ಹಾಕಿನೋಡಿದರೆ ಹಿಂದೀಯರ ಸರಾಸರಿ ವಯಸ್ಸು 21 ವರ್ಷ! ಎಲ್ಲಿಯೋ ಕೆಲವರು 60ರ ಗಡಿಯನ್ನು ಸಮೀಪಿಸಿದವರಿದ್ದರೆ, ಅವರೆಲ್ಲಾ ಮೂರು ಕಾಲಿನ ಜಂತುಗಳಂತೆ ಊರುಗೋಲಿನ ಆಧಾರದಲ್ಲಿ ಹೆಜ್ಜೆ ಹಾಕುತ್ತಾ ಇದ್ದಾರೆಷ್ಟೆ! ಅಂತೂ 60 ಆದವನಿಗೆ 'ಇನ್ನೇನು! ಅವನಿಗೆ ಸಾಯುವದೊಂದೇ ಕೆಲಸ' ಎಂದು ನಮಗೆ ಗೊತ್ತು. ನಮ್ಮ ಈ ಬೋಳು ತಲೆಯ ಹಳಬನಿಗೆ ಅರುವತ್ತರ ಮೇಲೆ ಏಳು ಆಗಿ ಹೋಯಿತು "ಇನ್ನೇನು ಅವನೂ ಆಟವಾಡಿ ಮುಗಿಸಿದ ಹಾಗೆಯೇ!' ಎಂದು ನಿರ್ಧರಿಸೋಣವೆಂದರೆ ಮನಸ್ಸೊಪ್ಪುವದಿಲ್ಲವಲ್ಲ! ಮನಸ್ಸು ಎಷ್ಟಕ್ಕೂ ಒಪ್ಪದಂತೆ ಮಾಡುವ ಕಾರಣಗಳು ಬಲವಾಗಿವೆ ನೋಡಿ. ಮೊದಲನೆಯದಾಗಿ ಕಿರಿಯರ ಅನ್ನಬಟ್ಟೆಗೆ ಹಾದಿ ಮಾಡಿಟ್ಟು ಸಾಯುವುದು ಹಿರಿಯರ ಕರ್ತವ್ಯವಷ್ಟೇ ಅದನ್ನಿನ್ನೂ ನಮ್ಮ ಗಾಂಧಿಯು ಪೂರ್ತಿ ಮಾಡಿಲ್ಲ, ಈ ಕೆಲಸವು ಅರ್ಧದಲ್ಲಿರುವಾಗ ಅದೇ ಆತನ ಜೀವವಾಗಿರುವಾಗ, ಅವನಿಗೀಗ ಅರ್ಧಾಯುಷ್ಯವಾಯಿತೆಂದೇ ಅರ್ಥ. ನಾವು ಒಂದು ಕಾಲದಲ್ಲಿ "ಅಜ್ಞಾನಂ ಪರಮ ಸುಖಂ" ಎಂಬ ಹಾಗೆ ಬಹು ನೆಮ್ಮದಿಯಿಂದಿದ್ದೆವು; ಮಧ್ಯದಲ್ಲಿ ಬಿಳಿ ಟೋಪಿಯನ್ನಿಟ್ಟುಕೊಂಡು ಬಂದ ಈ ಮಹಾತ್ಮ ಸ್ವಾಭಿಮಾನದ ಸಿಹಿಬೆಲ್ಲವನ್ನು ನಮ್ಮ ನಾಲಿಗೆಯ ತುದಿಗೆ ತಾಗಿಸಿ ರುಚಿ ಹಿಡಿಸಿ ಬಿಟ್ಟ–ಈಗ ಅದನ್ನು ಪೂರ್ತಿ ತಿನ್ನಿಸದೆ ಹೋಗಿ ಬಿಟ್ಟನೆಂದರೆ ನಾವು ಬಿಡುವೆವೆ? ಅವನ ಪ್ರಾಯ ಗೀಪಕ್ಕೆ ನಾವು ಜವಾಬ್ದಾರರಲ್ಲ. ಬೇಕಾದಷ್ಟು ಕಾಲ ನಮ್ಮ ಮಧ್ಯದಲ್ಲಿಟ್ಟುಕೊಳ್ಳಲು ನಮಗೆ ಹಕ್ಕು ಇದ್ದೇ ಇದೆ.

ಇನ್ನು ಅವನ ಸ್ವಭಾವವನ್ನು ಕಂಡರೂ, ನಾಡದು ಸಾಯುವ ಮುದುಕನೆಂದು ಹೇಳುವವರಾರು? ನಿಮಗೆ ಐದಾರು ವರ್ಷದ ಮಗುವಿದ್ದರೆ ಐದಾರು ಮಿನಿಟು ಈ ಗಾಂಧಿಯೊಟ್ಟಿಗೆ ಬಿಡಿ; ಆ ಮೇಲೆ ಆ ಮಗು ನೆರೆಯ ಮಕ್ಕಳೊಡನೆ ಆಡಲಿಕ್ಕೆ ಹೋಗುವ ಹಾಗುಂಟೇ ನೋಡಿ, ನಿಮ್ಮ ತಿಂಡಿ, ತಿನಿಸು ಎಲ್ಲವನ್ನೂ ದೂಡಿ ಬಿಟ್ಟು ಈ 67 ವರ್ಷದ ಮಗುವಿದ್ದೆಡೆಗೆ ಓಡಿಹೋದೀತು! ದುಂಡು ಮೇಜಿನ ಪರಿಷತ್ತಿಗೆ ಲಂಡನಿಗೆ ಹೋಗಿದ್ದನಲ್ಲ ಮುದುಕ, ಅಲ್ಲಿ ಇವನ ಬಿಡಾರದ ಸುತ್ತುಮುತ್ತಲಿನ ಮಕ್ಕಳಿಗೆಲ್ಲಾ 'ಗಾಂಧಿ ಮಾಮ' ಎನ್ನುವ ಹಾಗೆ ಬಾಯಿಂದ ಉದುರುತ್ತಿತ್ತು! ಮತ್ತೊಂದು ತಮಾಷೆಕೇಳಿ–1934ನೇ ಇಸವಿಯಲ್ಲಿ ಗಾಂಧಿ ಮಂಗಳೂರಿಗೆ ಬಂದಿದ್ದ; ಉಡುಪಿಗೂ ಬಂದು ಹೋಗುವ ಕಾರ್ಯಕ್ರಮವಿದ್ದರೂ ಆ ಕಾಲದಲ್ಲಿ ವೈಸರಾಯರಾಗಿದ್ದ ಲಾರ್ಡ್ ಐರ್ವಿನ್ನರಿಂದ ಅರ್ಜಂಟ ತಂತಿ ಬಂದುದರಿಂದ, ಉಡುಪಿ ಪ್ರವಾಸ ರದ್ದುಮಾಡಿ ಸ್ಟೀಮರಿನಲ್ಲಿ ಸೀದಾ ಬೊಂಬಾಯಿಗೆ ಹೊರಟಿದ್ದ. "ಅಪರೂಪದ ಜನ, (ನಮಗೆ ಮಾತ್ರವಲ್ಲ; ಶತಮಾನಗಳಿಗೆಕೂಡ) ಒಮ್ಮೆ ನೋಡಿ ಬಿಡೋಣ" ವೆಂದು ನಾವು ಮಲ್ಪೆಯಲ್ಲಿ ಸ್ಟೀಮರಿಗೆ ಹೋಗಿತ್ತು, ಅಲ್ಲಿ ಆ ಸ್ಟೀಮರಿಗಿದ್ದುದು ಹದಿನೈದೇ ಮಿನಿಟು ವಿಶ್ರಾಂತಿ. ಈ ಮಧ್ಯದಲ್ಲಿ ತಲೆಯವರೆಗೂ ನೋಡಿ ಮುಗಿಸುವ ಆತುರ ನಮ್ಮದು ನಮ್ಮೊಟ್ಟಿಗೊಬ್ಬ ಕ್ರಿಶ್ಚಿಯನ್ ಹುಡುಗನಿದ್ದ, ಹುಡುಗ ಚುರುಕಾಗಿಯೂ ಇದ್ದ ಅವನು ಅವಸರದಿಂದ ತಲೆಮುಂದೆ ಹಾಕುತ್ತಾ "ಗಾಂಧಿಯೆಲ್ಲಿ? ಗಾಂಧಿಯೆಲ್ಲಿ?" ಎಂದು ನುಗ್ಗುವ ಭರದಲ್ಲಿ ಕಡೆಯುವ ಕಲ್ಲಿನ ಕರುವಿನಂತಿದ್ದ ತನ್ನ ಬೋಳುತಲೆಯಿಂದ ಗಾಂಧಿಯ ಹೊಟ್ಟೆಗೆ ಹಾಯಿದ! ಮುಖಪತ್ತಿ ಮೇಲೆ ನೋಡಿಯೂ ಕೇಳುತ್ತಾನೆ "ಗಾಂಧಿಯೆಲ್ಲಿ?" ನಮಗೆ ನಗು ಬಂತು. ತಲೆಯು ಗಾಂಧಿಯ ಹೊಟ್ಟೆಯನ್ನು ತಿವಿಯುತ್ತಿದೆ. ಮೆದುಳು ಗಾಂಧಿಯನ್ನೇ ಹುಡುಕುತ್ತಿದೆ ಎಂದು. ಆಗ ಹುಡುಗನ ಬೆನ್ನು ಸವರುತ್ತಾ ಗೊಳ್ಳನೆ ನಕ್ಕು ಬಿಟ್ಟ ಹಳಬ! ಗಾಂಧಿ ದೊಡ್ಡ ಮನುಷ್ಯ–ಚಲ್ಲಣ, ಹ್ಯಾಟು ಹಾಕಿಕೊಂಡು ಭಾರಿ ಗಮ್ಮತ್ತಿನಿಂದ ಇದ್ದಿರಬೇಕು–ಎಂದು ಪಾಪದ ಹುಡುಗನ ಭಾವನೆ. ಹೀಗೆ ಗಾಂಧಿಯೆಂದರೆ ಮಕ್ಕಳೊಡನಾಡುವ ಮಗು. ಹೋದಸಲ ಉಡುಪಿಗೆ ಬಂದಾಗ ಅಜ್ಜರಕಾಡಿನಲ್ಲಿ ಮಾಡಿದುದನ್ನು ನೋಡಲಿಲ್ಲವೆ? ಹುಡುಗಿಯೊಬ್ಬಳು ಬಂದೀಮಾನಪತ್ರವನ್ನೋದಿದಾಗ, ಮಕ್ಕಳಾಟಿಕೆ ಮಾತಾಡಿಯೇ ಅವಳ ಕೈಬಳೆಗಳನ್ನು ಪಡೆಕೊಂಡುದನ್ನು. ಬೊಂಬಾಯಿ ಕೊಂಗ್ರೆಸು ಮುಗಿದಮೇಲೆ, ಇವರೆಲ್ಲಾ ಊರಿಗೆ ಹೊರಟಿದ್ದರಂತೆ, ಆಗ ಒಬ್ಬ ಹುಡುಗನು ಗಾಂಧಿಟೊಪ್ಪಿ ಇಟ್ಟುಕೊಂಡು ಪಿಳಿಪಿಳನೇ ಇವರನ್ನೇ ನೋಡುತ್ತಿದ್ದ, ಈ ಮುದುಕನಿಗೆ ತಮಾಷೆಯುಕ್ಕಿತು, ನೆಲ್ಲನೆ ಹುಡುಗನ ಟೊಪ್ಪಿಯನ್ನು ತೆಗೆದು ವಲ್ಲಭಾಯಿಯವರ ಅರಬೋಳು ತಲೆಗಿಟ್ಟು ನಗೆಯನ್ನೆಬ್ಬಿಸಿ ಬಿಟ್ಟ! ಇಂತಹ ಹುಡುಗಾಟಿಕೆಯು ಅವನ ಹುಟ್ಟು ಸ್ವಭಾವ. ಪ್ರಾಯ 67 ವರುಷವಾಯಿತೆಂದು ಮುದುಕನೆಂದು ದೆಸರಿಟ್ಟರ ಸ್ವಭಾವದ ಮೇಲಿಂದ ಸರಿದೋಗುವದಿಲ್ಲ. ಇನ್ನೂ ದೇಹದಲ್ಲಾದರೂ ಮುದಿತನವು ಕಂಡುಬರುತ್ತದನ್ನುವಿರಾ? ಅದೂ ಇಲ್ಲ. ಮೊದಲು ಇದ್ದುದಕ್ಕಿಂತಲೂ ಈಗ ಬಲತ್ತಿದ್ದಾನೆ ಇದಿರಿನ ಎರಡು ಹಲ್ಲುಗಳು ಕಳಚಿ ಹೋಗಿದ್ದರೆ ಮೊಳೆತ ಗೋದಿಯನ್ನು ಜಗಿಯಲಿಕ್ಕಿಲ್ಲವೆ. ವಸಡಿಗೆ ಬಲವೇ ಸಾಕಾಗುತ್ತದೆ. ಎರಡು ಕಾಲುಗಳನ್ನು ಮಡಚಿ ಹಿಂದಹಾಕಿ ಕುಳಿತುಕೊಂಡು, ಗೋದಿಯ ಜೇಳೆಯನ್ನು ಹಲ್ಲಿಲ್ಲದ ಬಾಯಿಂದ ಜಗಿಯುವದನ್ನು ಕಂಡಾಗ ತೊದಲುವ ಮಗುವೆನ್ನ ಬೇಕೇಹೊರತು ಮುದುಕನೆನ್ನಲಾಗುವದಿಲ್ಲ ಇನ್ನು ಎದ್ದು ಸರ್ಕೀಟಿಗೆ ಹೊರಟನೆಂದರೆ ಎಂಟು ಹತ್ತು ಮೈಲುಗಳವರೆಗೆ ಈಗಲಾದರೂ ನಿಲ್ಲದೆ ನಡೆದೇ ಬಿಡುವನು ಇತ್ತೀಚೆಗೆ ಮೈಸೂರಿನ ನಂದಿಗುಡ್ಡಕ್ಕೆ ಬಂದಿದ್ದನಲ್ಲ ಆ ಆಸುಪಾಸಿನವರಿಗಿದು ಗೊತ್ತಿದೆ, ಈ ಮುದುಕನಿಗೆಂತಹ ದೈಹಿಕ ತ್ರಾಣವಿರುವದೆಂದು. ಸಾವಿಗೆ ಸಮೀಪಿಸುವವನ ಒಂದು ಲಕ್ಷಣವಾದರೂ ನಮ್ಮ ಮುದುಕನಲ್ಲಿ ಕಂಡುಬರುವದಿಲ್ಲ. ಕೈಕಾಲುಗಳ ತ್ರಾಣಕುಂದಿ, ರಕ್ತದ ಚಲನೆಯಿಲ್ಲದೆ, ಕಣ್ಣು ಕೆನ್ನೆಗಳು ಕುಳಿಬಿದ್ದು, ನಿತ್ಯದ ಕೆಲಸಗಳನ್ನು ಮಾಡಲಿಕ್ಕಾಗದೆ ಕಿರಿಯರಿಂದ ಸೇವೆಯನ್ನು ಕೈಕೊಳ್ಳುತ್ತಾ ದಿನವೆಣಿಸುವವರು ನಾಳೆನಾಡದಿನೊಳಗೆ ಹೊರಟುಹೋಗುವ ಮುದುಕರಹದು, ತನ್ನ 35 ಕೋಟಿ ಕಿರಿಯರ ಸೇವೆಯನ್ನು ತಾನೇ ಮಾಡುತ್ತ ಒಳ್ಳೇ ಹುರುಪಿನಿಂದಿರುವವನನ್ನು ನಾವು ಹಾಗೆಯೇ ಕರೆದರೆ ತಪ್ಪಾಗದೆ?

ಈ ಎಲ್ಲಾ ಸಂಗತಿಗಳು ನಿಜ, ಆದರೆ ಪ್ರಾಯ 67 ಆಗಿ ಹೋಯಿತಲ್ಲ! ಪ್ರಕೃತಿಯು ಮೇಲಿನ ರುಜುವಾತುಗಳನ್ನು ತನಖಿ ಮಾಡಿನೋಡಿದರೆ ನಮ್ಮ ವಾದವೇ ಗೆಲ್ಲುವದೆಂಬುವದರಲ್ಲಿ ಸಂದೇಹವಿಲ್ಲ. ಆದರೆ ಕಾಲಗತಿಯು ಆಧಾರ, ಕಾರಣಗಳನ್ನೇನೂ ಅವಲಂಬಿಸಿಕೊಂಡಿಲ್ಲ, ಅದು ನಿಯಮಪ್ರಕಾರ ಚಲಿಸುತ್ತಾ ಹೋಗುತ್ತದಲ್ಲ ಈ 67ರ ಮುದುಕನು ಇನ್ನೆಷ್ಟು ಕಾಲ ನಮ್ಮ ಮಧ್ಯದಲ್ಲಿರಬಹುದು? ನಮ್ಮ ಅಪೇಕ್ಷೆಯೆಂತಾದರೆ ನಾವಿರುವವರೆಗೂ ಈ ಮುದುಕನಿರಬೇಕು, ಆ ಮೇಲೆ ನಮ್ಮ ಕಿರಿಯರಾದವರೂ ಹಾಗೆಯೇ ಹೇಳಿಯಾರು, ಅವರ ಕಿರಿಯರೂ ಅದನ್ನೇ ಬಯಸಿಬಿಟ್ಟಾರು! ಇದು ಹೇಗೆ ಸಾಧ್ಯ? ಇದರ ತೀರ್ಮಾನ ಹೇಗೆ? ಒಂದು ಆಶೆ ಮೂಡುತ್ತದೆ. ಇದು ವಿಜ್ಞಾನಯುಗ ಮಂಗಗಳ ಗ್ರಂಥಿಯಿಂದ ಮನುಷ್ಯನನ್ನು ಮಾಡುವದನ್ನು ಕಲಿತಾಯಿತು, ಒಬ್ಬನ ರಕ್ತವನ್ನು ಇನ್ನೊಬ್ಬನ ದೇಹಕ್ಕೆ ತುಂಬಿಸಿ, ಜೀವ ಬರಿಸಿಯಾಯಿತು, ತಂದೆಯಿಲ್ಲದೆ ಮಕ್ಕಳಾಗಲು ಪ್ರಾರಂಭವಾಯಿತು ಇನ್ನೇನು? ಈ ಶೋಧವು ಮುಂದುವರಿಯುತ್ತಾ ಹೋದಂತೆ ಒಬ್ಬರ ಆಯುಸ್ಸನ್ನು ಇನ್ನೊಬ್ಬರಿಗೀಯುವ ಹಾದಿಯೂ ಕಂಡು ಬರಬಹುದು, ಆಗ ಈ ಮುದುಕನ ಋಣದಿಂದ ಮುಕ್ತರಾಗುವ ಹಾದಿಯೂ ಭಾರತೀಯರಾದ ನಮಗೆ ದೊರಕೀತು! ತನ್ನ ಜೀವಮಾನದ ಪ್ರತಿಯೊಂದು ಕ್ಷಣವನ್ನು ನಮಗಾಗಿ ಕೊಟ್ಟವನು ಈ ಮಹಾತ್ಮ, ಇದಕ್ಕೆ ಪ್ರತಿಫಲವಾಗಿ ನಮ್ಮ ಜೀವಮಾನದ ಒಂದೊಂದು ವರ್ಷವನ್ನು ಅವನಿಗೆಕೊಟ್ಟುಬಿಟ್ಟರೆ ಆ!ಹಾ!ಹಾ!- ನಾವು ೩೫ ಕೋಟಿಜನರಿದ್ದೇವೆ, ೩೫ ಕೋಟಿ ವರ್ಷಗಳ ಆಯುಸ್ಸಾಯಿತು! ಅಂತಹ ಸಂದರ್ಭ ದೊರಕುತ್ತಿದ್ದರೆ ಯಾರೂ ಬೇಡವೆನ್ನುತ್ತಿದ್ದಿಲ್ಲ, ಹಾಗಾಗುತ್ತಿದ್ದರೆ!!

V. H.

ವರ್ಗದಾರರ ಸಭೆ.

ತಾ. 3-9-36ನೇ ಗುರುವಾರ, ಮಂಗಳೂರು ವರ್ಗದಾರ ಸಂಘದ ಶಾಖೆಯಾದ ನಿಡ್ಲೆ ಗ್ರಾಮದ ಸಭೆಯು ಶ್ರೀ ಎಮ್. ಸುಬ್ರಾಯ ಹೆಬ್ಬಾರರಲ್ಲಿ ಕೂಡಿ ಪಾಸಾದ ನಿರ್ಣಯಗಳು. ಪ್ರದೇಶದಲ್ಲಿ ಕೊಳೆ ರೋಗದಿಂದಾದ ಹಾವಳಿಯನ್ನು ವಿಚಾರಿಸುವರೆ ನೇಮಕವಾದ ಕಮಿಟಿಯ ವರದಿಯನ್ನು ಮಂಜೂರು ಮಾಡಲಾಯಿತು, ಕೊಳೆ ರೋಗದಿಂದ ಅಡಿಕೆ, ತೆಂಗುಗಳಿಂದಲೂ, ಧಾರಣೆಯ ಇಳಿತದಿಂದ ಭತ್ತ ಮೊದಲಾದ ಪೈರುಗಳಿಂದಲೂ ರೈತರು ವಿಶೇಷ ನಷ್ಟ ಹೊಂದಿರುವದರಿಂದ ಸರಕಾರದ ಸಹಾಯ ಮತ್ತು ತೀರ್ವೆ ಮಾಫಿ ಕೇಳುವ ನಿರ್ಣಯವನ್ನು ಮಾಡಲಾಯಿತು. ರೈತರು ವಿಶೇಷ ಸಾಲಗಳಲ್ಲಿ ಮುಳುಗಿದ್ದು ಮರುಪಾವತಿಯು ಅಸಾಧ್ಯವಾಗಿರುವುದರಿಂದ, ಸಾಲಗಾರರು ವ್ಯಾಜ್ಯಮಾಡಿ ಸ್ಥಿರ, ಚರಸೊತ್ತು ಗೇಣಿ ಹಕ್ಕುಗಳನ್ನು ಜಪ್ತಿಮಾಡದಂತೆ ಹೊಸ ಕಾನೂನನ್ನು ಮಾಡುವಂತೆ ಸರಕಾರವನ್ನು ಕೇಳಿಕೊಳ್ಳಲಾಯಿತು. ನೀರಿನ ಅನುಕೂಲತೆಗಾಗಿ ಸರಕಾರವು ನಿಬಡ್ಡಿಯಿಂದ ಸಾಲಕೊಟ್ಟು ಕಂತಿನಲ್ಲಿ ವಸೂಲು ಮಾಡಿಕೊಳ್ಳಬೇಕೆಂದೂ, ಸರಕಾರವೇ ಕೊಳೆ ರೋಗದ ಔಷಧಿಯನ್ನೊದಗಿಸಿ, ಫಸಲಿಯಾದಮೇಲೆ ಆ ಬಗ್ಗೆ ಹಣವಸೂಲು ಮಾಡಬೇಕೆಂದೂ, ಗೋಚರವು ಫೀಸನ್ನು ಮಾಫಿ ಮಾಡಬೇಕೆಂದೂ, ನಿರ್ಣಯಗಳಾದವು. ಮಿಯ್ಯಾರು, ನಿಡ್ಲೆ ಬ್ಲೋಕುಗಳಲ್ಲಿರುವ ಫೋರೆಸ್ಟುಗಾರ್ಡರು, ಅಕಾರಣವಾಗಿ, ತಕ್ಸೀರುಗಳನ್ನು ರೈತರಮೇಲೆ ಹೊಂಚಿದುದನ್ನು ನಿಷೇಧಿಸಿ, ವ್ಯವಹರಣೆಯ ಪುನರ್ವಿಮರ್ಶೆ ಮಾಡುವಂತೆ ಮಾನ್ಯ ಡಿ. ಎಫ್. ಓ. ಧೊರೆಗಳವರನ್ನು ಕೇಳಿಕೊಳ್ಳಲಾಯಿತು. ಜಿಂದೆ ಮುಗಿದ ಬೋರ್ಡ ಎಲಿಮೆಂಟರಿ ಶಾಲೆಯನ್ನು ಪುನಃ ಹೊಸ ಕಟ್ಟೋಣದಲ್ಲಿ ತೆರೆಯಬೇಕೆಂದು ಡಿ. ಬೋರ್ಡಿನವರನ್ನು ಕೇಳಿಕೊಳ್ಳಲು, ಮಲೇರಿಯಾ ಹಾವಳಿಯು ಮಿತಿ ಮೀರಿದುದರಿಂದ ಧರ್ಮಾರ್ಥ ಕ್ವಿನೀನ್ ಹಂಚೋಣವನ್ನು ಜಿಲ್ಲಾ ಬೋರ್ಡಿನಿಂದ ಅಪೇಕ್ಷಿಸುವ, ಮೇಲಿನ ನಿರ್ಣಯಗಳನ್ನು ಸಂಬಂಧಪಟ್ಟವರಿಗೆಲ್ಲಾ ಕಳುಹಿಸುವ ಅಧಿಕಾರವನ್ನು ಕಾರ್ಯದರ್ಶಿಯವರಿಗೆ ಕೊಡುವ ಠರಾವುಗಳಾಗಿ ಸಭೆಯು ಚದರಿತು.

ಬೆಲೆ ಸುಲಭ! ಒಂದೇ ದರ!! ಖಾತ್ರಿಮಾಲು!!!

ಎಲ್ಲಿ?

ಎಸ್. ಅನಂತ್ರಾಮಾಚಾರ್

ಸ್ಟೇಶನರಿ, ಕಟ್ಲೇರಿ ಮತ್ತು ಶಾಲೋಪಕರಣಗಳ ವ್ಯಾಪಾರಿ.

ತಾಲೂಕು ಕಚೇರಿಬಳಿ, ಉಡುಪಿ.

— ನಾಯಕ್ ಬ್ರದರ್ಸರ —

ಶ್ರೀ ಮಧ್ವುವನೇಂದ್ರ ಮಹೌಷಧಾಲಯ,

ಪಾರಂಪರ್ಯದ ಅನುಭವ ಸಿದ್ಧೌಷದಗಳು!

ಕಟಪಾಡಿ, ದ. ಕನ್ನಡ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!!

ವೃದ್ಧಿಕಾಸವ (ನಿಸ್ತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಸತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಚಂದ್ರಮುಖ್ (ಕಾಂತಿಭಂಗಿಗೆ ಅನುಭವಸಿದ್ಧ ಔಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಹೆಚ್ಚಿನ ಮಾಹಿತಿಗೂ ಕಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮಧ್ವುವನೇಂದ್ರ ಮಹೌಷಧಾಲಯ,
ಕಟಪಾಡಿ, ದಕ್ಷಿಣ ಕನ್ನಡಾ ಜಿಲ್ಲೆ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಿ ಮ್ರದ ಪಾತ್ರೆಗಳು

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೇಳು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು

ಹೆಚ್ಚಿನ ವಿವರಗಳಿಗೆ ಸಚಿತ್ರ ಕಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರವ್ಯಾಪಾರಿ, ರಥಬೀದಿ ಉಡುಪಿ

ಸ್ತ್ರೀ ಮಲಯಾಳದ

ಸ್ತನೋಸ್ತೇಧಃ

THE MALAYALA STHANO STHEDAH OUSHADHA Co.
Post-CHALAPURAM, MALABAR

ರಹಸ್ಯಗಳು

ಇಡೀಗತಿಳಿಯ ಬಂಧಿದ ಪುರುಷರನ್ನವುದು ಆಕರ್ಷಿಸುವಂಬುದನ್ನು ಸ್ತ್ರೀಯರಿಗೆ ಒಳ್ಳೆಯ ನೀವು ಪುರುಷನೊಬ್ಬನನ್ನು ಪರೀಕ್ಷಿಸಿ ನೋಡಿದ್ದಲ್ಲಿ, ಅತನ ಕಣ್ಣುಗಳು ಸ್ತ್ರೀಯ ಮುಖದಿಂದ ಕೆಳಗೆ ... ಕುಚಗಳು ... ದುಂಡಗೆ ... ಆಕರ್ಷಕವಾಗಿರುವವೋ ಎಂದು ನೋಡುವವು

೪೨ ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ತೇದಃ— ... ಪ್ರಾಯ ಆಗಾಗಿಕ ... ಸ್ತ್ರೀಯರ ಎದೆಯ ಆಕರ್ಷತೆಯು ... ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ... ಅಥವಾ ... ತಗ್ಗಾಗಿದ್ದರೆ, ...

ದಿ ಮಲಯಾಳ ಔಷಧ ಕಂಪೆನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ... ಪೂರ್ಣವಾಗಿ ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ ... ಸ್ಥಿರವಾಗುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ... ದುಂಡಗಾಗಿಯೂ ... ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಹೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ... ತಮ್ಮ ಸೌಂದರ್ಯವನ್ನು ... ರಹಸ್ಯಗಳಿವೆ

ಸ್ತನಸ್ತೇಡ ನಂಬ್ರ 20 ... ನಂಬ್ರ ರೂ. ೩. ನಂಬ್ರ 21 ಹೊರಗಣ ಉಪಯೋಗಕ್ಕೆ ರೂ. ೩.
ಧರ್ಮಾರ್ಥ ... ಉಚಿತ ...

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ

ಋತುವೇದನೆಗಳು, ಸಂತತಿ ನಿರೋಧ, ... ರೋಗಗಳು, ... ಕಾಲರೋಗಕ್ಕಾಗಿ ...

ಚಿಕಿತ್ಸಾ ವಿಜ್ಞಾನ.

(ಲೇಖಕರು:—ಭಿಷಗಾಚಾರ್ಯ ಆಯುರ್ವೇದ ವಿಶಾರದ, ಪಂಡಿತ ತಾರಾನಾಥರು).

ಈ ಮೊದಲು ಮೂರುಸಲ ಕೊಲೆರಾ ರೋಗದ ವಿಷಯವಾಗಿ ಬರೆದಿದ್ದೆ. ಆಗ ಬರೆದ ಲೇಖಗಳಿಂದ ಜನರಿಗೆ ಸಾಕಷ್ಟು ಪ್ರಯೋಜನವಾಗಿರಬಹುದೆಂದು ತಿಳಿದಿದ್ದೆ. ಈಗ ಶ್ರೀ ಆರ್. ಎಸ್. ಹುಕ್ಕೇರಿಕರರು ಮತ್ತೊಮ್ಮೆ ಕೇಳಿಕೊಂಡದ್ದರಿಂದ ಆಗ ಬರೆದದ್ದನ್ನೇ ಬೆಳೆಸಿಬರೆದಿದ್ದೇನೆ. ಈ ಲೇಖನವನ್ನು ಮನಸ್ಸಿಟ್ಟು ಓದಿದಲ್ಲಿ ಕೊಲೆರಾಕ್ಕೆ ಅಷ್ಟು ಭೀತಿ ಪಡುವ ಕಾರಣವಿಲ್ಲ. ಜನರು ಇದನ್ನುಪಯೋಗಿಸಿಕೊಂಡರೆ ನನ್ನ ಶ್ರಮ ಸಾರ್ಥಕವಾಗುವದು. ಜನಸೇವೆಯ ಇಂಥ ಸುಸಂಧಿಯನ್ನು ಒದಗಿಸಿ ಕೊಟ್ಟಿದ್ದಕ್ಕಾಗಿ ಶ್ರೀಹುಕ್ಕೇರಿಕರರಿಗೆ ತುಂಬಾ ಕೃತಜ್ಞನು. ಇಂಥ ಸೇವೆಯ ಲಾಭವನ್ನು ಜನರು ಮೇಲಿಂದ ಮೇಲೆ ಒದಗಿಸಿಕೊಡಬೇಂದು ಅಪ್ಪರಲ್ಲಿ ನನ್ನ ವಿನಂತಿ.

ತಾರಾನಾಥ.

ವಿಸೂಚಿಕಾ

ಈ ರೋಗವು ಕೊಲೆರಾ (Cholera) ಎಂಬ ಹೆಸರಿನಿಂದ ಈಗ ಜನಸಾಮಾನ್ಯಕ್ಕೆ ತಿಳಿದಿದೆ. ಕೊಲೆರಾ ಎಂಬುದು ಇಂಗ್ಲಿಷ್ ಶಬ್ದ. ಇದು ಅತಿಸಾರಗಳಲ್ಲಿ ಬಹಳ ಕಠಿಣವಾದದ್ದು. ಅತಿವಿರೇಚನ ಮಾತ್ರವೇ ಅಲ್ಲದೆ ವಮನವೂ ಇದರಲ್ಲಿ ಕೂಡಿರುವದರಿಂದ ಇದೊಂದು ಬಹಳ ಅಪಾಯಕರವಾದ ರೋಗ.

ಲಕ್ಷಣಗಳು:— ಇದು ಸಾಮಾನ್ಯವಾಗಿ ಸಾಂಕ್ರಾಮಿಕವಾಗಿ ಬರುತ್ತದೆ. ಕೆಲವು ದಿನಗಳೊಳಗಾಗಿಯೇ ನೂರಾರು ಮಂದಿಯನ್ನು ಬಲಿಕೊಂಡು ನಾಶಗೊಳಿಸುತ್ತದೆ. ಒಬ್ಬ ರೋಗಿಯಿಂದ ಇನ್ನೊಬ್ಬ ಆರೋಗ್ಯವುಳ್ಳವನಿಗೆ ಸೇರುತ್ತ, ಹಬ್ಬುತ್ತ ಹೋಗುವ ಮಾರಿ ಇದು. ಮೊದಲು ಯಾವ ಬಾಧೆಯೂ ತೋರಿ ಬರದಂತೆ ಭೇದಿಗಳಾಗತೊಡಗುವವು ಈ ಅತಿಸಾರವು ಸ್ವಲ್ಪಹೊತ್ತು ನಡೆಯಿತೋ ಕೂಡಲೆ ಶರೀರಬಲದ ಕ್ಷಯಕ್ಕೆ ಆರಂಭ ತಲೆ ತಿರುಗುವದು, ಕೈಕಾಲುಗಳು ನಡುಗುವುದು, ಸೆಟೆಯುವದು, ಕರುಳುಗಳಲ್ಲಿ ಸುಳುಕು ಇವೆಲ್ಲ ಒಂದೊಂದಾಗಿ ಉಂಟಾಗುತ್ತವೆ. ಮಲವು ನೀರುನೀರಾಗಿ ಗಂಜಿನೀರಿನ ಬಣ್ಣಉಳ್ಳದಾಗಿ ಬಹಳವಾಗಿ ಹೋಗುವುದು. ಒಮ್ಮೊಮ್ಮೆ ಅದಕ್ಕೆ ರಕ್ತವರ್ಣವಿರುವದೂ ಉಂಟು. ವಾಂತಿಗಳಾಗುವವು, ಹೊಟ್ಟೆಯುರಿ, ಮೈಯೆಲ್ಲ ತಣ್ಣಗಾಗಿರುವದು, ಒದ್ದೆಯಾಗಿರುವದು, ಒದ್ದೆ ಬಟ್ಟೆಯಿಂದ ಸುತ್ತಿದಂತಾಗುವದು ಶ್ವಾಸ, ನಾಲಿಗೆಗಳೂ ತಣ್ಣಗಿರುವವು. ಅನೇಕರಿಗೆ ತಲೆನೋವು, ಎದೆನೋವು ಬರುವುದು ಉಂಟು. ಬಾಯಾರಿಕೆ ಬಹಳ ಶ್ವಾಸೋಚ್ಛ್ವಾಸಗಳಲ್ಲಿ ಒಮ್ಮೊಮ್ಮೆ ಕಷ್ಟ. ಅಪಾದಮಸ್ತಕ ಏನೋ ಒಂದು ಹೇಳಲಾರದ ಸಂಕಟ. ಮೂತ್ರವು ಹೋಗದೆ ಇರುವದು, ಹೋದರೆ ಸ್ವಲ್ಪ ಲೋಳೆಯಾಗಿ ಹೋಗುವದು. ಮೈಗೆ ನೀಲವರ್ಣ ಬರುತ್ತ ಹೋಗುವದು, ಸೊರಗಿ, ಕಣ್ಣುಗಳು ಕುಣಿಗಿಳಿದು, ಮೋರೆ ಭಯಾನಕವಾಗಿ ತೋರುವದು, ಮೈಯಿಂದ ಒಂದು ವಿಲಕ್ಷಣವಾದ ವಾಸನೆ, ಅಲ್ಲಿಂದ ಎಲ್ಲ ಶಕ್ತಿಗಳೂ ಕುಸಿದು ಮರಣಬರುವದು.

ಈ ಲಕ್ಷಣಗಳೆಲ್ಲ ಒಂದರ ಮೇಲೊಂದಾಗಿ ಬೇಗಬೇಗನೆ ಬಂದುಬಿಡುವವು. ವಿರೇಚನಗಳು ಮೊದಲಾದ ೨ರಿಂದ ೪ ಘಂಟೆಗಳೊಳಗೆ ರೋಗಿಗಳು ಸಾಯುವದನ್ನು ಎಷ್ಟೋ ಸಲ ನೋಡಬಹುದು. **ಕಾರಣಗಳು:—** ಬಡಬಗ್ಗರಲ್ಲಿ ಇದು ಬಹು ಶೀಘ್ರವಾಗಿಯೂ ತೀಕ್ಷ್ಣವಾಗಿಯೂ ಹಬ್ಬುತ್ತದೆಂದು ಎಲ್ಲ ವೈದ್ಯರ ಮತ. ಬಹು ಮಂದಿ ಒಂದೇ ಕಡೆಗೆ ಗುಂಪು ಗುಂಪಾಗಿರುವದು ಮನೆಯ ನೆರೆಹೊರೆಯಲ್ಲ ತುಂಬಿರುವದು, ಅನಿಷ್ಟ ಗುಣಾಚರಣೆಗಳು, ಅತಿ ಭೋಜನ, ಉಪವಾಸ, ದುಷ್ಟಭೋಜನ ಇವೆಲ್ಲ ರೋಗಕ್ಕೆ ಬಹಳ ಅನುಕೂಲ. ಕುಡಿಯುವ ನೀರಿನ ಅಶುದ್ಧತೆಯು ಈ ರೋಗಕ್ಕೆ ಮುಖ್ಯಕಾರಣ ಎಂದು ಪಾಶ್ಚಿಮಾತ್ಯ ವಿಚಾರಪರ ಮತ. ಇದಕ್ಕೆ ತಕ್ಕ ಆಧಾರವುಂಟು. ಯಾಕೆಂದರೆ ಕುಡಿಯುವ ನೀರನ್ನೂ ವಾಸಸ್ಥಾನವನ್ನೂ ಒಳಗೂ ಹೊರಗೂ ಸ್ವಚ್ಛಗೊಳಿಸುವ ಈ ರೋಗಕ್ಕೆ ತಡೆಯಾಗುತ್ತದೆಂಬುದು ಅನುಭವದವಾತು. ರೋಗಕ್ಕೆ ಮುಖ್ಯವಾದ ಕಾರಣವನ್ನು ಕಿತ್ತೊಗೆಯದೆ, ಬಂದರೋಗವನ್ನು ಅದರ ಲಕ್ಷಣಗಳನ್ನು ನಿವಾರಿಸಲೆತ್ನಿಸುವದು ಉತ್ತಮ ವಿವೇಕದ ಚಿನ್ಹವಲ್ಲ.

ಆಯುರ್ವೇದದ ದೋಷ, ದೂಷ್ಯ ದೃಷ್ಟಿಯಿಂದಲೂ ಸ್ವಲ್ಪ ನೋಡಿಕೊಳ್ಳುವದು ಅವಶ್ಯಕ. ವಾತವು ಬಹಳ ಪ್ರಕುಪಿತವಾಗಿ, ಎಲ್ಲ ಅವಯವಗಳಲ್ಲೂ ಸೂಜಿ ಚುಚ್ಚಿದಂತಾಗಿ, ನಾನಾವಿಧವಾದ ವೇದನೆಗಳು ಯಾವ ಅಜೀರ್ಣದಿಂದುಂಟಾಗುವವೋ ಅಂಥ ಅಜೀರ್ಣಕ್ಕೆ ವಿಸೂಚೀ ಎನ್ನುತ್ತಾರೆ. ಮಾಧವಕಾರರ ನಿದಾನವು ಹೀಗಿದೆ. ಅಜೇ, ಚರಕದಲ್ಲಿ "ಊರ್ಧ್ವಂ ಚಾಧಶ್ಚ ಪ್ರವೃತ್ತಾಮಾಮ ದೋಷಂ ಯಥೋಕ್ತ ರೂಪಾಂ ವಿಸೂಚಿಂ ವಿದ್ಯಾತ್" ಎಂದು ಬರೆದಿದೆ. ಆಮಾಜೀರ್ಣದಿಂದ ಮೇಲಿಂದಲೂ ಕೆಳಗಿನಿಂದಲೂ ವಿರೇಚನವಾಗುವದಕ್ಕೆ ವಿಸೂಚೀ ಎನ್ನಬೇಕೆಂಬುದೇ ಇವರ ತಾತ್ಪರ್ಯ.

ಪಾಶ್ಚಿಮಾತ್ಯ ಪದ್ಧತಿಗೆ ಇದೊಂದು ಸ್ವತಂತ್ರ ರೋಗ ಆಯುರ್ವೇದಕ್ಕೆ ಇದು ಅಜೀರ್ಣಾತಿಸಾರದ ಒಂದು ಕಠಿಣ ರೂಪ.

ಎಚ್ಚರಿಕೆಯ ಮಾತುಗಳು:— ಕುಡಿಯುವ ನೀರನ್ನು ಒಮ್ಮೆ ಕುದಿಸಿ ಆ ಮೇಲೆ ಆರಿಸಿ ಕುಡಿಯಬೇಕು. ತಾವು ಇರುವ ಜಾಗಗಳನ್ನೂ ನೆರೆಹೊರೆಯನ್ನೂ ಸ್ವಚ್ಛವಾಗಿಡಬೇಕು. ಅಲ್ಲಲ್ಲ ಬಿಸಿಲು ಗಾಳಿಯ ಸಂಚಾರಕ್ಕೆ ಸಾಕಷ್ಟು ಅವಕಾಶವಿರಬೇಕು.

ಮೈಗೆ ಥಂಡಿ ಹತ್ತದಂತೆ, ಮೈ ಬಟ್ಟೆಗಳು ಒದ್ದೆಯಾಗಿರದಂತೆ ನೋಡಿಕೊಳ್ಳಬೇಕು. ಆಟ-ಪಾಟಗಳ ನಂತರ ಮೈ ಬಟ್ಟೆಗಳನ್ನು ತೆಗೆದು ಹಾಕಿ, ಸುರಿಯುವ ಬೆವರನ್ನು ತಟಕ್ಕನೆ ನಿಂದಿರಿಸಬಾರದು. ಮೈಗೆ ಹೆಚ್ಚು ಉಷ್ಣವಾಗದಂತೆಯೂ, ಛಳಿ ಹತ್ತದಂತೆಯೂ ಸುಶೀತೋಷ್ಣ ಸ್ಥಿತಿಯಲ್ಲಿ ವಸ್ತ್ರ ವಾತಾವರಣಗಳನ್ನಿಟ್ಟುಕೊಳ್ಳಬೇಕು.

ಆಹಾರ, ನಿದ್ರೆ ಇತ್ಯಾದಿ ಕ್ರಮಗಳಲ್ಲಿ ತಪ್ಪಬಾರದು. ಹೊತ್ತಿಗೆ ಸರಿಯಾಗಿ ಮಿತಿಯಿಂದ, ಯೋಗ್ಯ ರೀತಿಯಿಂದ ಇವನ್ನೆಲ್ಲ ಭೋಗಿಸತಕ್ಕದ್ದು. ಚಿಂತೆಯನ್ನು ನಿರೋಧಿಸಬೇಕು. ನಿದ್ದೆ ಕೆಡಬಾರದು. ತಿರುತಿಂಡಿ ತ್ಯಾಜ್ಯ. ಪ್ರತಿಯೊಬ್ಬರೂ ತಮ್ಮ ತಮ್ಮ ಅನುಭವವನ್ನು ಮುಂದೆ ಅದಕ್ಕೆ ಸರಿಯಾಗಿ ತಮಗೆ ಹಿತಕರವೆಂದು ತೋರಿದ ಆಹಾರವನ್ನೂ ಅದರ ಪ್ರಮಾಣವನ್ನೂ ಇಟ್ಟುಕೊಳ್ಳಬೇಕು.

ಹಸಿ ತರಕಾರಿಗಳ ಉಪಯೋಗ ಕೂಡದು. ಕೊಲೆರಾ ಇರುವ ಕಾಲದಲ್ಲಿ ಅವನ್ನು ಬೇಯಿಸಿಯೇ ತಿನ್ನಬೇಕು. ಮಾಗದ ಹಣ್ಣು, ಉಪ್ಪಿನಕಾಯಿಗಳು, ಹುಳಿಹಣ್ಣು ಹಂಪಲುಗಳು, ಸೌತೆಕಾಯಿ ಇವನ್ನೆಲ್ಲಾ ಬಿಡುವದು ಉತ್ತಮ.

ಈ ವಿಷಯದಲ್ಲಿ ಎಚ್ಚರವಾಗಿರೋಣದರಿಂದ ಎಷ್ಟೋ ಅನಾಹುತಗಳನ್ನು ತಡೆದುಹಾಕಬಹುದು.

ಪ್ರತಿಬಂಧಕ ಉಪಾಯಗಳು:— ಎಚ್ಚರಿಕೆಯ ಮಾತುಗಳ ಅನುಸರಣದಲ್ಲಿಯೇ ಎಷ್ಟೋ ಪ್ರತಿಬಂಧಕ ಶಕ್ತಿಯಿದೆ ಎಂಬದನ್ನು ಮರೆಯಬಾರದು. ಅದರಲ್ಲೊಂದು ವಿಶೇಷವಾದ ಸಂಗತಿ. ಮಕ್ಕಳ ಬಾಯಿಕಟ್ಟುವದು ಸುಲಭ ಸಾಧ್ಯವಲ್ಲ. ಆದುದರಿಂದ ಅವುಗಳನ್ನು ಕಾಪಾಡಲಿಕ್ಕೆ ಸಾಧ್ಯವಾದ ಉಪಾಯಗಳನ್ನೆಲ್ಲ ಮಾಡಬೇಕು.

ಸಿಹಿಯಿಲ್ಲದೆ ಇರುವ ಯಾವುದೊಂದು ಔಷಧವನ್ನೂ ಚಿಕ್ಕಮಕ್ಕಳು ತಕ್ಕೊಳ್ಳುವದೂ ಬಹು ಕಷ್ಟ. ರುಚಿ ವಾಸನೆಗಳೇ ಇಲ್ಲದ ಔಷದವನ್ನು ಮಾತ್ರ ಅವು ತಿನ್ನುತ್ತವೆ. ಆದರೆ ಅಂಥಾ ಔಷಧಗಳು ಹೋಮಿಯೋಪೆಥಿಕ್ ಪದ್ಧತಿಯಲ್ಲಿವೆಯೇ ಹೊರತು ಇನ್ನಾವ ಪದ್ಧತಿಯಲ್ಲೂ ಇಲ್ಲ. ಇನ್ನೊಂದು ಮಾತು— ಅವುಗಳ ರುಚಿಯೇ ಅವುಗಳಿಗೆ ಅಂತಸ್ಥನ್ನು ತರುವ ಗುಣ. ಕೊಲೆರಾದ ಪ್ರತಿಬಂಧಕ ಶಾಮಕ ಶಕ್ತಿಗಳಿಂದ ಈ ಔಷಧಗಳು ತಮ್ಮಲ್ಲಿರುವ ಎಲ್ಲ ಪಾಶ್ಚಿಮಾತ್ಯ ಚಿಕಿತ್ಸೆಗಳನ್ನೂ ಹಿಂದಕ್ಕೆ ಹಾಕಿಬಿಟ್ಟಿವೆ. ಮೂರನೆಯದೇನೆಂದರೆ ಈ ಔಷಧಗಳನ್ನು ತೆಕ್ಕೊಳ್ಳುವ ಪ್ರಮಾಣ ಬಹು ಚಿಕ್ಕದು. ನಾಲ್ಕನೆಯದು— ಅವುಗಳ ಬೆಲೆಯೂ ಕಮ್ಮಿ. ಈ ಎಲ್ಲಾ ವಿಷಯಗಳನ್ನು ಪರೀಕ್ಷಿಸಿ ನೋಡಿದರೆ ಈ ರೋಗದ ಪ್ರತಿಬಂಧಕೋಪಾಯಗಳಲ್ಲಿ ಹೋಮಿಯೊಪೆಥಿಗೆ ಸೇರಿದವುಗಳಿಗೆ, ಬುದ್ಧಿಯು ಅಗ್ರಸ್ಥಾನವನ್ನು ಕೊಡುತ್ತದೆ.

ವಿಸೂಚಿಕಾ ರೋಗವು ಸಂಚಾರಕ (Epidemic)ವಾಗಿರುವಾಗ ದಿನಕ್ಕೆರಡು ಸಾರಿ, ೧ ಅಥವಾ ೩ ಹನಿ **ರುಬಿನೀಸ್ ಕೆಂಪರ್** ಸ್ವಲ್ಪ ಸಕ್ಕರೆಯಲ್ಲಿ ಕಲೆಸಿ ತಕ್ಕೊಳ್ಳುವದು ಉತ್ತಮ. ಕೊಲೆರಾ ರೋಗಿಗಳ ಹತ್ತಿರವೇ ಆಗಲಿ, ಆ ರೋಗವು ಹಬ್ಬಿರುವ ಜಾಗದಲ್ಲಿಯೇ ಆಗಲಿ, ಹೆಚ್ಚಾಗಿ ಯಾರಿಗಾದರೂ ಇರಬೇಕಾಗಿ ಬಂದರೆ, ಅಂಥವರು ದಿನಕ್ಕೆರಡು ಸಾರೆ ಸ್ವಲ್ಪ ನೀರಿನೊಡನೆ ಕ್ಯೂಪ್ರಮ್ ಎಸಿಟಸ್ 3X (Cuprum Acet 3X) ತಕ್ಕೊಳ್ಳುವದುತ್ತಮ ಎಂದು ಪ್ರಸಿದ್ಧ ಡಾ. ಜೆ. ಕೆ. ಕ್ಲಾರ್ಕರ ಮತ. ಪ್ರಸಿದ್ಧ ಡಾ. ರಡೊಕ್‌ರೂ ಅದನ್ನೇ ಅನುಮೋದಿಸುತ್ತಾರೆ.

ಆಯುರ್ವೇದ ಪ್ರತಿಬಂಧಕೋಪಾಯಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.

ನವಯುಗದ ಬಿಡಿ ಸಂಚಿಕೆಗಳು

ಈ ಕೆಳಗಿನವರಲ್ಲಿ ದೊರೆಯುತ್ತವೆ.

1 ಯಚ್. ಕೋಟ್ಯಣ್ಣ ಶೆಟ್ರು, ಮರ್ಚಂಟ್, **ಕುಂದಾಪುರ**
2 ವಾಸುದೇವರಾವ್, ಎಸ್. ಶಿಬ್ರುಕಾರ್, C/o ಪೊಪ್ಯುಲರ್ ಶೋಪ್, ಸರ್. ಫಿರೋಜ ಮೇತರೋಡ್, ಫೋರ್ಟ್, **ಬೊಂಬಾಯಿ.**
3 ದಿ ಕೆನರಾ ನ್ಯೂಸ್ ಏಜನ್ಸಿ, ಪ್ರೊಪ್ರೈಟರ್, ಬಿ. ಅಚ್ಯುತ ವಿಠಲ ಪೈ, ಬಸ್ ಸ್ಟೇಂಡ್ ಬಳಿ, **ಕಾರ್ಕಳ**
4 ನಗುವನಂದ ಆಫೀಸು, **ಬೆಂಗಳೂರು**
5 ಕೆ. ಟಿ. ನಾಯಕ್, ಜನರಲ್ ಮರ್ಚಂಟ್, **ಅಂಕೋಲ**
6 ಬಿ. ಭೋಜರಾವ್, **ಮೂಲ್ಕಿ**
7 ಯು. ಪಿ. ಮೇಸ್ತ್ರ, ಉದ್ಯಾವರ
8 ಬಿ. ಪದ್ಮನಾಭ ಪೈ, ಮರ್ಚಂಟ್, ಬ್ರಹ್ಮಾವರ
9 ಭಕ್ತಾ ಬ್ರದರ್ಸ್, ಮರ್ಚಂಟ್ಸ್. **ಕಾಸರಗೋಡು**

ಶ್ರೀ ರಾಮಾರೆಸ್ಟೋರೆಂಟ್

ಉಡುಪಿ.

ಊಟ ಉಪಹಾರಗಳ ರುಚಿ! ಸ್ಥಳ ಆಸನಗಳ ಶುಚಿ !!

ಶಾಲಾ ವಿದ್ಯಾರ್ಥಿಗಳ ಅನುಕೂಲತೆ, ಪ್ರವಾಸಿಕರಿಗೆ ಅತ್ಯುತ್ತಮ ಸೌಕರ್ಯ ಇವೆಲ್ಲಾ ಇರುವ ಒಂದೇ ಒಂದು ವಿಶ್ರಾಂತಿಗೃಹವೆಂದರೆ ಶ್ರೀ ರಾಮಾ ರೆಸ್ಟೋರೆಂಟ್! ಸುಲಭ ದರದಲ್ಲಿ ಅತ್ಯುತ್ತಮ ತಿಂಡಿ ಪಾನೀಯಗಳು; ಅತ್ಯಾರೋಗ್ಯಕರ ಊಟ ಇವುಗಳಿಗೆ ನಮ್ಮ ಅನುಭವಪೂರ್ಣ ಪೇಲ್ಬಿಚಾರಣೆ. ಹೀಗಾಗಿ ನಿಮಗೆಲ್ಲಾ ಸುಖವೇ ಸುಖ! ಸಂತೆಕಟ್ಟೆಯಿಂದ ತೆಂಕು ಕೋರ್ಟ್ ರೋಡ್ ಮತ್ತು ಕೋಳದಪೇಟೆ ರೋಡ್ ಮಿಲನದಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಿಸಿರುವ ದಿವ್ಯವಾದ ಮಂದಿರದಲ್ಲಿರುವ ಶ್ರೀ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿನೋಡಿರಿ.

ಎಚ್. ಗೋಪಾಲ ನಾಯಕ್,

ಪ್ರೊಪ್ರೈಟರ್.

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ)

ಸಂ. ನ

ಮೂಲ್ಕಿಯಲ್ಲಿ ಸ್ಟೀಮರ್ ಬಂದರು ಮಾಡಬೇಕು

ಮೂಲ್ಕಿ ಬಂದರ ಸಮಿತಿಯ ಕಾರ್ಯದರ್ಶಿಗಳಿಂದ

ಮುಂಬಾಯಿ

ಆರಂಭದಲ್ಲಿ ಬಹು ಅಸಾಧ್ಯವೆಂದು ತೋರುವ, ಕಾರ್ಯವಾದರೂ ಧೈರ್ಯದಿಂದ ಮುಂದೆ ನಡೆದಂತೆಲ್ಲಾ ಸುಲಭವಾಗುತ್ತಲೂ, ಫಲದಾಯಕವಾಗುತ್ತಲೂ ಹೋಗುವುದು. ಸಾಧನೆಯಲ್ಲಿ ಧೃಢತ್ವವೊಂದೇ ಸಾಲದು; ಸುಸೂತ್ರವಾದ ಸಂಘಶಕ್ತಿಯೂ ಆವಶ್ಯಕವು. ಅದಕ್ಕಾಗಿಯೇ ಮೊನ್ನೆ ಮೂಲ್ಕಿಯಲ್ಲಿ ಸ್ಟೀಮರು ಬಂದರವಾಗುವಂತೆ ಪ್ರಯತ್ನ ನಡೆಸುವ ಉದ್ದೇಶಕ್ಕೆ ಮುಂಬಾಯಿ ಕೋಟೆಯೊಳಗಣ ಆಗಶಾಸಕಟ್ಟಡದಲ್ಲಿ ಸಭೆ ಜರಗಿದಾಗ ಒಂದು ಯೋಗ್ಯ ಸಮಿತಿಯು ಸ್ಥಾಪನೆಯಾಯಿತು. ಸಮಿತಿಯವರು ತಮ್ಮ ಕರ್ತವ್ಯದಂತೆ, ಅವಶ್ಯವಿರುವ ವರ್ತಮಾನ ಸಾಮಗ್ರಿಗಳನ್ನೆಲ್ಲಾ ಸಂಗ್ರಹಿಸಿ, ಜನರಲ್ಲಿ ಮತ್ತು ಸ್ಟೀಮರು ಕಂಪೆನಿಯವರಲ್ಲಿ ಇದರ ಕಡೆಗೆ ಜಾಗ್ರತೆ ಹುಟ್ಟಿಸುವರು. ನಂತರ ಕಂಪೆನಿಯವರಲ್ಲಿ ಮನವಿ ಮಾಡಿಕೊಳ್ಳುವರು. ಮೂಲ್ಕಿಯಿತ್ತಕಡೆಯಿಂದ ಮುಂಬಾಯಿಗೆ ಬಂದು ನೆಲಸಿರುವ ಜನರ ಸಂಖ್ಯೆ ಮತ್ತು ಅವರು ಪ್ರಯಾಣದಲ್ಲಿ ಪಡುವ ಕಷ್ಟ ತೊಂದರೆಗಳನ್ನು ನೋಡಿದರೆ ಅವರು ಈ ತನಕ ತಮ್ಮ ಪ್ರಯಾಣದ ಪ್ರಯಾಸಗಳನ್ನು ನೀಗುವುದಕ್ಕೆ ಪ್ರಯತ್ನವನ್ನು ನಡೆಸದೆ ಇದ್ದುದು ಆಶ್ಚರ್ಯ ಮಾತ್ರವಲ್ಲ, ದುಃಖಕರ ಸಂಗತಿಯಾಗಿಯು ವುದು. ಇಷ್ಟು ಕಾಲಯಾಪನೆಗೈದು ಆರಂಭಿಸಿದ ಕಾರ್ಯವು ಈಗಲಾದರೂ ಸಫಲ ಹೊಂದುವಂತೆ ಸರ್ವರ ಆಶೀರ್ವಾದ-ಸಹಕಾರಗಳು ದೊರೆಯುವುದೆಂದು ಭರವಸೆ ಇದೆ.

ನಮ್ಮ ಪ್ರಕೃತದ ಕಾರ್ಯವು ನಮಗಾಗಲೀ ಅಥವಾ ನಾವೆಣಿಸುವಂತೆ ಕಂಪೆನಿಯವರಿಗಾಗಲೀ ದುಸ್ತರವೆಂದು ತೋರಲಾರದು. ಹಾಗಿದ್ದರೂ ಸೂಕ್ಷ್ಮ ವಿಚಾರಕ್ಕೆ ಕಷ್ಟಸಾಧ್ಯವಾದ ಕೆಲಸವಾಗಿ ತೋರಲೂಬಹುದು. ಇದಲ್ಲದೆ ಕಾರ್ಯಸಿದ್ಧಿಯಲ್ಲಿ ಕಂಪೆನಿಯವರು ವೆಚ್ಚಕ್ಕೆ ಗುರಿಯಾಗುವ ಸಂಭವವೂ ಬರಬಹುದು. ಆದರೆ ಇದರಿಂದ ಜನರಿಗೂ ಕಂಪೆನಿಯವರಿಗೂ ಉಂಟಾಗಲಿರುವ ಪ್ರಯೋಜನದ ಕಡೆಗೆ ಲಕ್ಷ್ಯ ಕೊಟ್ಟರೆ ಶ್ರಮವಾಗಲೀ, ವೆಚ್ಚವಾಗಲೀ ಎಷ್ಟಾದರೂ ಅಲ್ಪವೆಂದು ತೋರದಿರದು. ಕೆಲಸವು ಆವಶ್ಯಕ, ಕಷ್ಟ ಪರಿಹಾರಕ ಮತ್ತು ಇಷ್ಟದಾಯಕವೆಂದು ಕಂಪೆನಿಯವರಿಗೆ ಖಚಿತವಾದರೆ (ಆಗಲೇಬೇಕು) ವೆಚ್ಚವೆಷ್ಟಾದರೂ, ಅದರವನ್ನು ನೆರವೇರಿಸುವುದಕ್ಕೆ ಹಿಂಜರಿಯಬಾರದು. ಕಾರಣ ಯಾವ ಜನರಿಂದ ಅವರು ಅಷ್ಟೊಂದು ಪ್ರಯೋಜನ ಹೊಂದುತ್ತಾರೋ, ಅಂಥವರ ಹಿತಚಿಂತನೆಯು ಕಿಂಚಿತ್ತಾದರೂ ಅವರ ಹೃದಯದಲ್ಲಿ ಇರಲಿಕ್ಕೇಬೇಕು. ಈ ತಿಳುವಳಿಕೆಯು ಅವರ ಮನಸ್ಸಿಗೆ ಬರುವಂತೆ ಮಾಡುವುದರಲ್ಲಿ ನಾವು ಜಯ ಹೊಂದಿದರೆ ನಮ್ಮ ಕೆಲಸವು ಎಷ್ಟೋ ಸುಲಭವಾಗುವುದು. ಯಾವ ಕಾರ್ಯವನ್ನು ನಾವು ನಮ್ಮ ಕರ್ತವ್ಯಾಂಶವೆಂದು ನಾವು ವಹಿಸಿಕೊಂಡು ಆರಂಭಿಸುವೆವೋ, ಅದನ್ನು ಮನಃಪೂರ್ವಕವಾಗಿ ಉತ್ಸಾಹದಿಂದ ಮುಂದೆ ಸಾಗಿಸುವೆವು. ಎಲ್ಲಾ ತರದ ಸರಳ ಪ್ರಯತ್ನಗಳನ್ನೂ ಮಾಡಿ ನೋಡುವೆವು. "ಸಾಧಿಸಿದರೆ ಸಬಳ ನುಂಗಬಹುದು" ಎಂಬ ಮಾತು ಈ ಕಾಲದಲ್ಲಿಯೂ ನಿಜವಾಗಿರುವುದೇ ಎಂದು ಶೋಧಿಸುವೆವು. ನಮ್ಮ ಯಥಾರ್ಥ ಕೃತಿಗೆ ಫಲ ದೊರಕಿಸುವ ಭಾರ ಈಶ್ವರಾಧೀನವು.

ಕೊಳೆರೋಗದ ಹಾವಳಿ

ಕುಂದಾಪುರ ತಾಲೂಕಿನ ಹಾಲಾಡಿ, ಶಂಕರನಾರಾಯಣ, ಕೋಟೂಡಿ, ಅಂಪಾರು, ಕಾಡಿ, ಮಚ್ಚಟ್ಟು, ಉಳ್ಳೂರು, ಮಾನಂಜೆ, ಕಮಲಶಿಲೆ, ಯಡಮೊಗೆ ಮತ್ತು ಹಳ್ಳಿಹೊಳೆ—ಈ ಎಲ್ಲಾ ಪ್ರದೇಶಗಳಲ್ಲೂ ೮-೧೦ ವರ್ಷಗಳಿಂದ ಅಡಿಕೆ ತೋಟಕ್ಕೆ ಕೊಳೆರೋಗ ಪ್ರಾರಂಭವಾಗಿದ್ದರೂ ಈ ವರ್ಷ ವಿಪರೀತವಾಗಿ, ೨-೩ ಸಾರಿ ಬೋರ್ಡು ಮಿಕ್ಶ್ಚರನ್ನು ಮಾಡಿ ಉಪಯೋಗಿಸಿದರೂ ಮಳೆಯ ಹಾವಳಿಯಿಂದ ಪ್ರಾರಂಭದಲ್ಲಿ ಔಷಧವು ಪ್ರಯೋಜನವಿಲ್ಲದೆ ಎಲ್ಲಾ ಕಡೆಗಳಲ್ಲಿ ನಷ್ಟವಾಗಿರುತ್ತದೆ. ಇದೂ ಅಲ್ಲದೆ ಮುಂದಿನ ಉತ್ಪತ್ತಿಗಳಿಗೆ ಕಾರಣಗಳಾದ ಬಹಳ ಅಡಿಕೆ ಮರಗಳು ಸತ್ತುಹೋಗಿರುತ್ತವೆ. ಈ ಮುಂಚೆ ಔಷಧದ ಖರ್ಚು ಕೃಷಿಯ ಖರ್ಚು ತೀರ್ವೆ ಸಹ ಅಳಿಯುಳಿದ ಉತ್ಪತ್ತಿಯಿಂದ ಸಿಕ್ಕುತಿತ್ತು. ಈ ವರ್ಷ ಕೊಳೆರೋಗದ ಪರಿಣಾಮವಾಗಿ ಕೃಷಿಕರ ಭಾವೀ ಜೀವನಕ್ಕೆ ತೊಂದರೆಯುಸ್ಥಿತಿದೆ. ಗವರ್ನಮೆಂಟಿನವರೇನೋ ಎಲ್ಲಾ ಗ್ರಾಮ ಉದ್ಯೋಗಸ್ಥರು ಇವರ ಕುರಿತು ವಿವರ ವರದಿಯನ್ನು ಕಳುಹಿಸಬೇಕೆಂದು ಅಪ್ಪಣೆ ಮಾಡಿರುವರಾದರೂ, ಸರಿಯಾಗಿ ವಿಚಾರಿಸಿ ವರದಿಗಳನ್ನು ಕಳುಹಿಸುವರೆಂದು ನಂಬಿಕೆಯಿಲ್ಲ. ಕುಂದಾಪುರದಲ್ಲಿರುವ ಕೃಷಿ ಡಿಮೊನೆಸ್ಟ್ರೇಟರು ಕೂಡ ಶಂಕರನಾರಾಯಣಕ್ಕೆ ಬಂದು, ಸ್ವಂತರು ಯಂತ ಮಾಡಿಕೊಂಡು ಅಲ್ಲಿಯ ಹತ್ತಿರ-ಹತ್ತಿರದ ಸ್ಥಳಗಳನ್ನು ಮಾತ್ರವೇ ನೋಡಿರುತ್ತಾರೆ; ಉಳಿದ ಸ್ಥಳಗಳಲ್ಲಿ ತಿರುಗಾಡಿ ಜನರಿಗೆ ಯಾವ ಬಗೆಯ ಸಹಾಯ ಸ್ಥಿತಿಯ ಕುರಿತು ಆವ ಬಗೆಯ ಪರಿಜ್ಞಾನವೂ ಡಿಮೋಸ್ಟ್ರೇಟರಿಗೆ ಇಲ್ಲದಿರುತ್ತದೆ. ಈ ಕುರಿತು ಗವರ್ನಮೆಂಟಿನವರು ಯೋಗ್ಯ ಜನರಿಂದ ತನಿಖೆ ನಡೆಸಿ, ಮುಂದಿನ ತೀರ್ವೆಯಲ್ಲಿ ಸಿಸ್ತನ್ನು ತೀರಿಸಿ ತಿಳಿದು ನ್ಯಾಯವಾದ ರಿಯಾಯ್ತಿ ಮಾಡುವುದೂ,—ಅದೂ ಅಲ್ಲದೆ ಕೊಳೆರೋಗದ ಕುರಿತು ಮುಂದಿನ ವರ್ಷ ಮುಂದಾಗಿ ಔಷಧ ವಗೈರೆ ಸಹಾಯವನ್ನು ಕೃಷಿಕರಿಗೆ ಮಾಡುವುದೂ ಘನ ಸರಕಾರದವರು ಕೈಗೊಳ್ಳುವರಾಗಿ ಭಾವಿಸುತ್ತೇನೆ.

M. Shesagiri Rao, Mananje

ಹಿಂದುಳಿದ ಜಾತಿಯವರ ಚುನಾವಣೆ

ಓಟುದಾರರ ಮೂಲಪಟ್ಟಿಯು ಈಗಾಗಲೆ ಪ್ರಕಟವಾದ್ದರಿಂದ ನಮ್ಮ ಜಾತಿಯ ಓಟರರ ಸಂಖ್ಯೆ ಎಷ್ಟೆಂದು ನಮಗೆ ಒಂದು ಅಂದಾಜು ಸಿಕ್ಕಬಹುದು. ಶೆಡ್ಯೂಲ್ ಪಟ್ಟಿಯಲ್ಲಿದ್ದವರ ಪ್ರಥಮ ಚುನಾವಣೆಯು ಬಹುಶಃ ಡಿಸಂಬರ್ ತಿಂಗಳಲ್ಲಿ ಜರಗಬಹುದು. ಆಗ ಕನಿಷ್ಟ ಪಕ್ಷಕ್ಕೆ ಈ ಜನಗಳು ತಮ್ಮೊಳಗಿಂದ ನಾಲ್ಕು ಮಂದಿಯನ್ನು ತಮ್ಮವರ ಓಟುಗಳಿಂದಲೇ ಆರಿಸಬೇಕು. ಆದ್ದರಿಂದ ಈ ಪ್ರಥಮ ಚುನಾವಣೆಯು ಈ ಶೆಡ್ಯೂಲ್ ಪಟ್ಟಿಯಲ್ಲಿರುವ ಜಾತಿಗಳದೇ ಆಗಿದೆ. ಈ ನಾಲ್ಕರನ್ನು ಇವರು ಚುನಾಯಿಸಿದ ಮೇಲೆ ಎಂದರೆ ಜನರಲ್ ಓಟರರು ಈ ನಾಲ್ಕರೊಳಗಿಂದ ಒಬ್ಬನನ್ನು ಆಯ್ದುಕೊಳ್ಳಬೇಕು. ಈ ಶೆಡ್ಯೂಲ ಜಾತಿಯವರು ತಮ್ಮ ಹಿತದ ಕಡೆಗೆ ದೃಷ್ಟಿ ಇಡುವುದಾದರೆ ಯಾವುದೊಂದು ರಾಜಕೀಯ ತಂಡದ ಬೆನ್ನು ಹಿಡಿಯದೆ ತಮ್ಮ ಸ್ವಂತ ದಾರಿಯೊಂದನ್ನು ಕಡಿದುಕೊಂಡುಹೋಗಬೇಕು. ಯಾಕೆಂದರೆ ಈ ಹಿಂದುಳಿದವರು ಈ ರಾಜಕೀಯ ಪ್ರತಿಯೊಂದು ತಂಡದ ಸಹಾನುಭೂತಿಯನ್ನು ಪಡೆಯಬೇಕಲ್ಲದೆ ಅದನ್ನು ಕಳಕೊಳ್ಳಬಾರದು. ಮತ್ತು ಆ ಸಹಾನುಭೂತಿಯ ಮೇಲೆ ಆಧರಿಸದೆ ಸ್ವತಂತ್ರವಾಗಿ ಕೆಲವು ಕಾಲದ ವರೆಗೆ ನಿಲ್ಲಲು ಸಾಧ್ಯವೇ ಇಲ್ಲ. ಯಾವ ರಾಜಕೀಯ ತಂಡದ ಕೈಯಲ್ಲಿ ಅಧಿಕಾರದ ಸೂತ್ರಗಳು ಸೇರುತ್ತವೆಯೋ ಆ ತಂಡದವರ ಸಹಾನುಭೂತಿ ಮತ್ತು ಆಶ್ರಯಗಳಿಗೆ ಈ ಹಿಂದುಳಿದವರು ಕೈಚಾಚಬೇಕಾಗುವುದು. ಆದ್ದರಿಂದ ಇವರು ಈ ತಂಡಗಳ ಹೋರಾಟದಲ್ಲಿ ಭಾಗ ತೆಗೊಳ್ಳದೆ ತಮ್ಮ ಸ್ವಂತ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನೇ ಉದ್ಧರಿಸಿಕೊಳ್ಳಲಿಕ್ಕೆ ಬೇಕಾದ ಯಾವತ್ತು ಸಾಧನಗಳನ್ನು ನಡೆಯಲು ಯತ್ನಿಸಬೇಕು. ಅದೇ ಕಾಲದಲ್ಲಿ ನಾವು ಸರ್ವದಾ ಇತರರ ಮೇಲೆ ಆಧರಿಸಿರದೆ, ನಮ್ಮ ಸ್ವಂತ ಕಾಲುಗಳ ಬಲದಿಂದಲೇ ನಡೆಯಲು ಸಾಹಸಪಡುತ್ತಿರಬೇಕು. ಇದಕ್ಕಾಗಿ ಇಂಥ ಒಂದು ಕೂಟವು ತಲೆದೋರಲು ಈ ಜಿಲ್ಲೆಯಲ್ಲಿ ಸರ್ವರೂ ನಮಗೆ ಆಶ್ರಯಕೊಡಬೇಕಾಗಿ ನನ್ನ ವಿನಂತಿ. ಇದೇ ಉದ್ದೇಶದಿಂದ ನಮ್ಮ ಜಿಲ್ಲೆಯ ಬೇರೆ ಬೇರೆ ಉಪಜಾತಿ, ಪಂಗಡಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಸಮ್ಮೇಲನವನ್ನು ನವಂಬರ್ ತಿಂಗಳಲ್ಲಿ ಎಂದರೆ ಪ್ರಥಮ ಚುನಾವಣೆಯ ದಿನ ಗೊತ್ತಾದ ನಂತರವೇ ಜರಗಿಸಬೇಕೆಂದು ನನ್ನ ಅನಿಸಿಕೆ. ಆದ್ದರಿಂದ ಈ ಜಾತಿಗಳಿಗೆ ಸೇರದ ಇತರ ಜಾತಿಗಳವರು ನಮ್ಮ ಈ ಚುನಾವಣೆಯಲ್ಲಿ ಮಾತ್ರ ಬಿಡಿಸಿ ತಮ್ಮ ಸ್ವಾರ್ಥಸಾಧನೆಗೋಸ್ಕರ ನಮ್ಮಲ್ಲಿ ಪಕ್ಷ ತಂಡಗಳಾಗುವಂತೆ ಮಾಡದೆ ದೂರವಿರಬೇಕೆಂದು ನಮ್ಮ ಬಿನ್ನಹ. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ನಮ್ಮ ಜಾತಿಯವರಿಗೆ ಪ್ರತ್ಯೇಕಿಸಿಟ್ಟ ಸ್ಥಾನಗಳಿಗೆ ನಿಜವಾಗಿಯೂ ಓದು ಬರಹ ಗೊತ್ತಿದ್ದು ಸುಶಿಕ್ಷಿತರಾದವರು ಇರುತ್ತ ತೀರ ನಿರಕ್ಷರರಾದವರಿಗೆ ಸ್ಪರ್ಧೆಗೆ ನಿಲ್ಲಿಸಿ ಕಳೆದ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಮಾಡಿದ ಅನರ್ಥವನ್ನು ಇನ್ನೊಮ್ಮೆ ಮಾಡುವದು ನ್ಯಾಯವಾಗಲಾರದು. ಯಾಕೆಂದರೆ ತಮ್ಮ ಮನಸ್ಸಿನಲ್ಲಿ ನಮ್ಮಲ್ಲಿ ನಿಜವಾಗಿಯೂ ಯೋಗ್ಯರಾದವರನ್ನೇ ಆರಿಸಬೇಕೆಂದು ಕಾಂಕ್ಷೆ ಇದೆ. ಅದಕ್ಕೆ ಅಡ್ಡಿ ಬರಬಾರದೆಂದು ನಾವು ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ.

S. G. Salenna

ಗೌರವ ಕಾರ್ಯದರ್ಶಿ,

ದ. ಕ. ಜಿಲ್ಲಾ ಆದಿ ದ್ರಾವಿಡ ಅಭ್ಯುದಯ ಸಂಘ

ಮಂಗಳೂರು.

ಹೊಳೆ ದಾಟುವರೇಗೆ ಓಟ, ದೊರೆ ವರೇಗೆ ದೂರು!

ಈ ಶಿರೋನಾಮೆಯ ಕೆಳಗೆ ಕೆಲವು ತಿಂಗಳ ಮೊದಲು ಮಂಗಳೂರು ಬಂದರ ಗಡಿ ಒಳಗೆ ಬೆಂಗರೆಯಲ್ಲಿ ಮೀನು ದೋಣಿಗಳನ್ನು ಇಡುವ ಬಗ್ಗೆ ಮಾಡೋಣಾಗುವ ವ್ಯಾಪಾರಗಳಿಗೆ ಒಕ್ಕಿಗೆ ಸುಮಾರು 310 ರೂಪಾಯಿಗಳು ಆಗುವಷ್ಟು ದರದ ನೆಲಬಾಡಿಗೆಯನ್ನು ಸರಕಾರದವರು ಹೊರಿಸಿದ್ದೂ, ಪೋರ್ಟ ಆಫೀಸರಿಂದ ಹಿಡಿದು ಮದರಾಸು ಗವರ್ನಮೆಂಟು ವರೇಗ ಮೀನು ದೋಣಿಗಾರರು ಮನವಿಗಳ ಮೇಲೆ ಮನವಿ ಮಾಡಿದರೂ ಸದ್ರೀ ತೆರಿಗೆ ಸ್ವಲ್ಪವಾದರೂ ಕಡಿಮೆ ಆಗದೆ ಇದ್ದದ್ದು, ಇದಕ್ಕಾಗಿ ಕೆಲ ದೋಣಿಗಾರರು ಈ ಅನ್ಯಾಯದ ತೆರಿಗೆಯನ್ನು ಕೊಡಲೊಪ್ಪದೆ ತಮ್ಮ ವ್ಯಾಪಾರಗಳನ್ನೇ ಬಿಟ್ಟು ತಗೆದದ್ದು ಮೊದಲಾದ ವಿಷಯಗಳನ್ನು ನಾನು ಇದೇ ಪತ್ರಿಕೆಯಲ್ಲಿ ಪ್ರಕಟಿಸಿದ್ದೆ. ತರುವಾಯ ನಮ್ಮ ಮಾನ್ಯ ಪ್ರತಿನಿಧಿಗಳಾದ ಶ್ರೀಮಾನ್ ಎ. ಬಿ. ಶೆಟ್ಟಿಯವರು ಮದ್ರಾಸು ಕೌನ್ಸಿಲಿನಲ್ಲಿ ಈ ಕುರಿತು ಪ್ರಶ್ನೆಗಳನ್ನು ಹಾಕಿಯೂ ಸರಕಾರದ ಮಂತ್ರಿಗಳು ಈ ವಿಷಯವನ್ನು ಪುನರಾಲೋಚಿಸುವಂತೆಯೂ ಮಾಡಿದ ಪ್ರಯತ್ನದಿಂದಾಗಿ, ಸರಕಾರದವರು ಈಗ ಇದನ್ನು ನೆಲಬಾಡಿಗೆ 50-ರಷ್ಟು ಕಡಿಮೆ ಮಾಡಿದ್ದಾರೆ.

ಈ ಬಗ್ಗೆ ನಾವು ಸರಕಾರದವರಿಗೂ ಶ್ರೀಮಾನ್ ಎ. ಬಿ. ಶೆಟ್ಟಿಯವರಿಗೂ ಮಂಗಳೂರು ಮೀನುದೋಣಿಗಾರರ ಪರವಾಗಿ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಬಿ. ಮೋಹನಪ್ಪ ತಿಂಗಳಾಯ,

ಮಂಗಳೂರು.

ಬಾಲವಾಙ್ಮಯದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ

ಬಾಲವಾಙ್ಮಯ

ಬೆಲೆ: ೦ ೩ ೦

ಉಪಾಧ್ಯಾಯರ ಪ್ರಕಟನ ಸಮಿತಿ,
ಉಡುಪಿ.

ಸ್ತ್ರೀ ವಿಭಾಗ

ಭಾರತದ ಮಹಿಳಾಮಣಿಗಳು

ಅನ್ನಿಬಿಸೆಂಟಜ್ಜಿಯವರು

ಅಕ್ಕಂದಿರಾ!

ನಾನು ನಿಮ್ಮೊಡನೆ ಆಗಾಗ ಸುಖ ದುಃಖದ ಮಾತುಕಥೆಯಾಡಬೇಕೆಂದಿದ್ದೇನೆ. ಮನೆಕೆಲಸಗಳನ್ನು ಮುಗಿಸಿ ಯಾವ ವೇಳೆ ಒಟ್ಟಿಗೆ ಕುಳಿತು, ಗಂಡನ ಸಿಡುಕು, ಪಲ್ಯದ ರುಚಿ ಹಸಿ ಕಟ್ಟಿಗೆಯ ಉಪದ್ರ—ಈ ಎಲ್ಲಾ ಸಂಗತಿಗಳನ್ನು ಪರಸ್ಪರ ಹೇಳಿಕೊಂಡು, ಒಬ್ಬರಿಗೊಬ್ಬರು ತಮಾಷೆ ಮಾಡಿಕೊಳ್ಳುವದು ನಮ್ಮ ಪದ್ಧತಿ. ನಾವು ಆ ವರೆಗೆ ಅನುಭವಿಸಿದ ಸಂಕಷ್ಟಗಳು ಈ ನಲ್ನುಡಿಯ ಕಾಲದಲ್ಲಿ ಓಡಿಹೋಗುತ್ತವೆ. ಹಾಗಾಗಲು ಕಾರಣವೇನು ಗೊತ್ತುಂಟೆ? ಸುಖವಾಗಲೀ ದುಃಖವಾಗಲೀ ಇರುವದು ನಮ್ಮ ಮನಸ್ಸಿನಲ್ಲಿ; ಇದಕ್ಕೊಂದು ದೃಷ್ಟಾಂತ ಹೇಳುತ್ತೇನೆ. ಮೊನ್ನೆ ನನ್ನ ನೆರೆಯ ಸುಬ್ಬಕ್ಕನಿಗೆ ಅವಳ ಗಂಡ ಜುಟ್ಟು ಹಿಡಿದು ಬಗ್ಗಿಸಿ ಎಮ್ಮೆಗೆ ಬಡಿದ ಹಾಗೆ ಹತ್ತಿಪ್ಪತ್ತು ಗುದ್ದು ಹೊಡೆದ; ಇದನ್ನು ಕೇಳಿದ ನನಗೆ ದುಃಖವಾಗಿ ಸುಬ್ಬಕ್ಕನನ್ನು ನೋಡೋಣವೆಂದು ಹೋದೆ; ನಾನು ಹೋದಾಗ ಅವಳು ನಗುತ್ತಾ "ಬಾರೇ! ಕೂತುಕೊ" ಎನ್ನುತ್ತಾ ತಮಾಷೆ ಮಾಡಿದಳು. ಅವಳಿಗೆ ಪೆಟ್ಟು ಬಿದ್ದ ಏನು ಮಸಿಟೂ ಆಗಿರಲಿಲ್ಲ. ನಾನು ಅದಕ್ಕಾಗಿ ಮರುಕ ಸೂಚಿಸಿದಾಗ "ಅದೇನೂ ಇಲ್ಲ ಕಣೋ! ಅವರ ಸ್ವಭಾವವೇ ಹಾಗೆ! ಹೊಡೆವರೆ ಹೊಡೆಯುತ್ತಾರೆ—ಗಂಡನಲ್ಲವೆ!" ಎಂದು ಕಲಕಲನೆ ನಕ್ಕುಬಿಟ್ಟಳು. ಅವಳ ಸಂಗತಿ ಹೀಗಾಯಿತಲ್ಲಾ; ನೋಡಿ, ನಿನ್ನೆ ನಾಗಿಗೆ ಅವಳ ಗಂಡ ಬಂಧಿಸ್ಸಿ ಸಿಡುಕಿದನಂತೆ; ಪಲ್ಯಕ್ಕೆ ಉಪ್ಪು ಖಾರವು ಜಾಸ್ತಿಯಾಯಿತೆಂದು 'ಇದನ್ನು ನಿನ್ನ ತಲೆಗೆ ಮೆತ್ತಿಕೊ" ಎಂದು ಊಟ ಬಿಟ್ಟು ಎದ್ದನಂತೆ ಆಗಲೇ ಹೋಗಿ ಮಲಗಿದ ನಾಗಿ ಇಡೀ ದಿವಸ ಊಟಕ್ಕೆ ಕೂಡ ಏಳಲಿಲ್ಲ! ನೋಡಿದಿರಾ! ಸುಬ್ಬಕ್ಕನ ತಲೆಗೆ ಮೆತ್ತಿದರೂ ಅವಳಿಗೆ ನೋವಿಲ್ಲ, ನಾಗಿಗೆ 'ತಲೆಗೆ ಮೆತ್ತಿಕೊ' ಎಂದು ಹೇಳಿದ್ದರಿಂದಲೇ ಅಷ್ಟು ನೋವಾಯಿತು. ಮನಸ್ಸಿನಲ್ಲಿ ಸುಖವನ್ನು ನಿರ್ಮಿಸಿಕೊಳ್ಳಬಲ್ಲವನಿಗೆ ಯಾವಾಗಲೂ ಸುಖವೇ ಸಿಗುತ್ತದೆ. ಮನೆಯಲ್ಲಿ ಎಷ್ಟೇ ಬಡತನವಿರಲಿ; ಕಿರುಬಾಗಿಲಿನ ಜಗಲಿಯಲ್ಲಿ ಕುಳಿತುಕೊಂಡು, ನೆರೆಯ ಅಕ್ಕತಂಗಿಯರ ಕೂಡೆ ನಲ್ನುಡಿಸುತ್ತಾ ಕುಳಿತಾಗ ಬೇರೆ ಯಾವ ಚಿಂತೆಯೂ ಗೊತ್ತಾಗುವದಿಲ್ಲ. ವಾರಕ್ಕೊಂದು ದಿನದ ಒಂದು ಸಂಜೆಯ ಮಾತುಕತೆಯಲ್ಲಿ ನನ್ನದೂ ಇರಲಿ. ಈ ವಾರ ನಿಮಗೆ ಸನ್ಮಾನ್ಯಳಾದ ಒಬ್ಬ ಸ್ತ್ರೀಯ ಚರಿತ್ರೆಯನ್ನು ಹೇಳುತ್ತೇನೆ. ಅವಳೇ ನಮ್ಮ ಅನ್ನಿ ಬಿಸೆಂಟಜ್ಜಿ. ಈ ಹೆಸರನ್ನು ಕೇಳಿ ಕೆಲವು ಪೈಯ್ಯಾರಿಗಳು ತಮ್ಮ ಗಂಡಂದಿರ ಬಳಿಗೆ ಹೋಗಿ "ಕಾಣಿ; ಒಬ್ಬಳಿಗೆ ಅನ್ನಿ ಬಿಸೆಂಟ್ ಎಂದು ಹೆಸರುಂಟಂತೆ; ಎಲ್ಲಿಯಾದರೂ ಉಂಟೆ ಈ ವಿಚಿತ್ರ?" ಎಂದು ಬೇಗ ಏಳಿಯಲೂ ಬಹುದು. ಆದರೆ, ವಿಚಾರಿಸಿ ನೋಡಿರಿ; ಸುಂದರಿ ಎಂಬ ಹೆಸರಿದ್ದವರು ಎಷ್ಟು ಮಂದಿ ಸುಂದರಿಯರೇ ಆಗಿದ್ದಾರೆ. 'ಸುಶೀಲೆ'ಯು ಗಂಡನ ಮನೆಗುಳಿ ಜಗಳ ತಪ್ಪಲಿಕ್ಕೇ ಇಲ್ಲ! ಹೆಸರು ಯಾವುದೇ ಇರಲಿ; ಅವರವರ ಗುಣನಡತೆಯನ್ನು ಹೊಂದಿಕೊಂಡು ಎಲ್ಲಾ ಸಂಗತಿಗಳಿವೆ. ಅಕ್ಕಗಳ! ಈ ಅನ್ನಿಬಿಸೆಂಟಜ್ಜಿ ಐರಿಷ್ ದೇಶದವಳು. ಅವಳ ಹೆಸರೂ ಆ ದೇಶದ್ದು; ಹೀಗೆ ಹೆಸರು ಕೂಡ ನಮಗರ್ಥವಾಗದಷ್ಟು ದೂರ ದೇಶದವಳು ಆ ಧಿಟ್ಟೆ! ಆದರೆ ನಮಗೆ ಅವಳಷ್ಟು ಹತ್ತಿರದ ಸಂಬಂಧಿಕರು ಹೆಚ್ಚು ಮಂದಿಯಿಲ್ಲ. ಸಣ್ಣದಿರುವಾಗಲೇ ಅವಳು ತತ್ವಜ್ಞಾನಾಸಕ್ತಳು. ಇತರ ಯಾವ ಧರ್ಮಗ್ರಂಥಗಳಿಂದಲೂ ಸಮಾಧಾನ ದೊರೆಯದೆ ಭಗವದ್ಗೀತೆ ಮೊದಲಾದ ಹಿಂದೂ ಧರ್ಮ ಗ್ರಂಥಗಳನ್ನೋದಿ, ಮನಶ್ಶಾಂತಿ ಪಡೆದಳು. ಹಿಂದೂದೇಶದ ಕುರಿತು ಬಹಳ ಪೂಜ್ಯಭಾವವುಳ್ಳವಳಾದಳು. ಅನಂತರ ನಮ್ಮ ಭರತಖಂಡಕ್ಕೆ ಸ್ವತಃ ಬಂದು, ನಮ್ಮ ದೇಶದ ಸ್ಥಿತಿಗತಿ, ಜನರ ಮನೋಸ್ಥಿತಿ ಇವುಗಳನ್ನೆಲ್ಲಾ ಸರಿಯಾಗಿ ತಿಳಿದುಕೊಂಡಳು. ಐರ್ಲೆಂಡಿನವರಂತೆ ನಮ್ಮನ್ನಾಳುವ ಬ್ರಿಟಿಷರ ಜಾತಿಯವರು ಬಹುಕಾಲಕ್ಕೆ ಮೊದಲು ಇಂಗ್ಲೆಂಡಿನಿಂದಲೇ ಬಂದು, ಅಲ್ಲಿ ಮನೆ ಮಾಡಿ ನಿಂತವರು. ಅವರನ್ನಾಗ ಇಂಗ್ಲಿಷರೇ ಆಳುತ್ತಿದ್ದರು. ಹೀಗೆ ಒಂದೇ ಜಾತಿ, ಒಂದೇ ನೀತಿ, ಒಂದೇ ರೀತಿಯವರಾದರೂ ದೇಶ ಮಾತ್ರ ಬೇರೆಬೇರೆಯಾದ್ದರಿಂದ, ಅವರವರೊಳಗೆ "ನಾವು-ನೀವು" ಬಂದುಬಿಟ್ಟಿತು. "ನಮ್ಮ ದೇಶವನ್ನು ನೀವು ಆಳುವುದು ಬೇಡ" ಎಂದವರು ಹೋರಾಡಲು ಸುರುಮಾಡಿದರು. ನೋಡಿದಿರಾ—ದೇಶಕ್ಕಾಗಿ ತಮ್ಮ ಬಂಧುಗಳೆದುರೂ ಹೋರಾಡಿ ಸ್ವಾತಂತ್ರ್ಯವನ್ನು ಕಸಗೊಂಡರು. ನಮ್ಮ ಜಾತಿ ಬೇರೆ, ನೀತಿ ಬೇರೆ, ಆದರೂ ಬ್ರಿಟಿಷರನ್ನು ಬಿಡಲಿಕ್ಕೆ ಸನ್ನಾಹವಾಗಲಿಲ್ಲ. ಈ ಅಜ್ಜಿ ಹಿಂದೂದೇಶಕ್ಕೆ ಬರುವಾಗ ಐರ್ಲೆಂಡಿನಲ್ಲಿ ಸ್ವಾತಂತ್ರ್ಯಕ್ಕೆ ಹುರುಡಾಟ ನಡೆಯುತ್ತಲೇ ಇತ್ತು. ಆ ಸ್ವಾಭಿಮಾನವನ್ನು ಬುತ್ತಿ ಕಟ್ಟಿಕೊಂಡೇ ಬಂದಿದ್ದಳು ಯುವತಿ.

ಅದನ್ನು ನಮ್ಮ ಭಾರತಮಾತೆಗೆ ಉಣ್ಣಿಸಿದಳು ಎನು ಐರಿಷ್ ಮಾತವೆಂದು ಹಿಂದೀಮಾತೆಯು ಕುಗ್ಗಲಿಲ್ಲ ನೋಡಿ! ಇಲ್ಲಿಯ ಜನರ ದಾಸ್ಯಮನೋವೃತ್ತಿ, ಬಡತನ ಇವುಗಳನ್ನೆಲ್ಲಾ ಕಂಡು ಆ ಹೆಣ್ಣು ಹೃದಯವು ಕರಗಿತು. ಅವಳು ತನ್ನ ನಾಡಿನ ಯೋಚನೆಯನ್ನೇ ತ್ಯಜಿಸಿ, ಇಲ್ಲಿಯವರ ಸುಧಾರಣೆ ಮಾಡಬೇಕೆಂದು ಸಂಕಲ್ಪಿಸಿದಳು. ಕೇಳಿದಿರಾ! ನಾವೆಲ್ಲಾ ತವರು ಮನೆಯಿಂದ ನಾಲ್ಕು ಮೈಲು ದೂರದ ಗಂಡನ ಮನೆಗೆ ಹೋದರೆ—ಅಲ್ಲಿ ಕೂತುಕೊಂಡು ನೆನಸುವುದು ತವರು ಮನೆಯ ನೆಮ್ಮದಿಯನ್ನೇ! ಯಾವುದಾದರೊಂದು ಮೂಲ ಹಿಡಿದು ಅಳುವವರು ಎಷ್ಟು ಮಂದಿಯಿಲ್ಲ? ಅಂಥಾ ಹದಿಗೆಯು ಆಗಿನ ಅನ್ನಿಬಿಸೆಂಟಳಿಗಿಲ್ಲ. ಸಾವಿರಾರು ಮೈಲು ದೂರದ ಹಿಂದೂದೇಶಕ್ಕೆ ಬಂದರೂ ಅದನ್ನೇ ತನ್ನ ನಾಡಾಗಿ ಗಣಿಸಿ, ಇಡೀ ದೇಶದಲ್ಲೇ ತನ್ನ ಕೆಲಸಗಳಿಂದ ಪೂಜ್ಯತೆಯನ್ನು ಸಂಪಾದಿಸಿಬಿಟ್ಟಳಲ್ಲ! ಹಾಗಿರಬೇಕು ಹೆಂಗಸರು! ಬಿಸೆಂಟರು ಮೊದಲು ಮೊದಲು ಸ್ತ್ರೀಯರ ಸುಧಾರಣೆಗೆ ಹೆಚ್ಚಿನ ಪ್ರಯತ್ನ ಮಾಡಿದರು. ಸ್ತ್ರೀಯರು ಪಶು-ಪ್ರಾಣಿಗಳಂತೆ ಪರಾಧೀನತೆಯಲ್ಲಿಯೇ ಕಾಲ ಕಳೆಯಬಾರದೆಂದು ಹೋದಲ್ಲೆಲ್ಲಾ ಬೋಧಿಸಿದರು. ಅವರಲ್ಲಿ ಅಷ್ಟು ಧೈರ್ಯವಿತ್ತು. ಬೇಕೆಂದೇ ಅಳುಕನ್ನು ತಂದುಕೊಂಡು, ಮನೆಯಲ್ಲಿ ಕಡಿಮೆಯಾದ ಜೀನಸಿನ ಹೆಸರು ಹೇಳಲಿಕ್ಕೇನೆ ಒಂದು ಘಂಟೆ ತೆಗೆಯುವ ಹುಡುಗಿಯರಿಂದೇನಾದೀತು? ಅವರ ಜೀವಮಾನವಿಡೀ ಜೀನಸುಗಳ ಹೆಸರು ಹೇಳುವದರಲ್ಲೇ ಮುಗಿದು ಹೋದೀತು! ಅನ್ನಿಬಿಸೆಂಟರ ಜನ್ಮವು ಮಾತ್ರ ಇಡೀ ಹಿಂದುಸ್ಥಾನದ ಕೊರತೆಯನ್ನು ತುಂಬಿಸುವದಕ್ಕಾಗಿ ಮೀಸಲಿರಿಸಿದುದು. ಅದ್ದರಿಂದ ಅವರಲ್ಲಿ ಹೇಡಿತನವಿರಲಿಲ್ಲ; ಅಳುಕಿರಲಿಲ್ಲ ಇದ್ದುದನ್ನು ಖಂಡತುಂಡವಾಗಿ ಹೇಳಿಬಿಡುವವರು; ಮನಸಿಗೆ ತೋರಿದುದನ್ನು ಆಚರಿಸಿಯೇ ಆಚರಿಸುವವರು.

ಹೀಗಾಗಿ ಅವರ ಧೈರ್ಯ, ಸಾಹಸ, ವಾಕ್ಪಟುತ್ವ, ಚಟುವಟಿಕೆ—ಇವೆಲ್ಲಾ ಆ ಕಾಲದಲ್ಲಿ ಹಿಂದೂದೇಶಕ್ಕೆ ಬಹಳ ಉಪಕಾರಕ್ಕೆ ಬಿದ್ದವು. ಅವರು ರಾಜಕೀಯ, ಸಾಮಾಜಿಕ ಮತ್ತು ತತ್ವಪರವಾದ ಹಲವು ಪುಸ್ತಕಗಳನ್ನು ಬರೆದಿರುವರು ನಮ್ಮ ಭಾರತ ರಾಷ್ಟ್ರೀಯ ಮಹಾಸಭೆಯುಂಟಲ್ಲ! ಅದನ್ನು ಸ್ಥಾಪಿಸಿದವರಲ್ಲಿ ಬಿಸೆಂಟಮ್ಮನವರೂ ಒಬ್ಬರು. ಅವರು ಒಂದು ವರ್ಷದ ಸಭೆಗೆ ಅಧ್ಯಕ್ಷೆಯಾಗಿಯೂ ಬಹುಮಾನಿಸಲ್ಪಟ್ಟಿದ್ದಾರೆ. ಕೊನೆಕೊನೆಗೆ ಹಿಂದೀ ಸಂಸ್ಥಾನವೆಲ್ಲ ಬಿಸೆಂಟಜ್ಜಿಯಲ್ಲಿ ಬಾಸು ಹೊಕ್ಕಾಗಿ ನಿಂತಿತು. ಎಲ್ಲಾ ಪರಿಸ್ಥಿತಿಯನ್ನು ತಿಳಿದುಕೊಂಡ ಮಹಾನುಭಾವೆ ಯಾವುದೂ ಹುಟ್ಟಿದ ದೇಶ ಗೊತ್ತುಂಟೆ-"ಹಿಂದೂದೇಶವು ತನ್ನನ್ನು ತಾನೇ ಆಳಿಕೊಳ್ಳದೆ ಸುಖವಿಲ್ಲ" ಅದಕ್ಕಾಗಿ ಅವರು ಹೋಮ್‌ರೂಲ್ ಚಳವಳಿಯನ್ನು ಪ್ರಾರಂಭಿಸಿ ದೇಶವಲ್ಲೆಲ್ಲಾ ಜಾಗೃತಿಯನ್ನುಂಟು ಮಾಡಿದರು. ಈಗ ಗಾಂಧಿಯವರಿದ್ದಾರೆ, ಜವಾಹಿರಲಾಲರಿದ್ದಾರೆ—ಆಗಾಗ ಏನಾದರೂ ಗಡಿಬಿಡಿಯೆಬ್ಬಿಸಲಿಕ್ಕೆ. ಅವರ ಬಿಸೆಂಟಮ್ಮನವರ ಆ ಕಾಲದಲ್ಲಿ ಯಾರೂ ಇರಲಿಲ್ಲ ನೋಡಿ; ಯಾರಿಲ್ಲದಿದ್ದರೇನಾಯಿತು? ಬಿಸೆಂಟಮ್ಮನೊಬ್ಬರೇ ಲೋ. ತಿಲಕರ ಸಹಾಯವನ್ನು ಪಡಕೊಂಡು ಹೂಡಿಯೇ ಬಿಟ್ಟರು ಹೋಂ ರೂಲು ಚಳವಳವನ್ನು! ಇದಕ್ಕಾಗಿ ಅವರಿಗೆ ಶಿಕ್ಷೆಯೂ ಆಯಿತು! ಅಂತೂ ಭಾರೀ ಕಾರ್ಬಾರಿನ ಹೆಂಗಸು; ಯಾರಿಗೂ ಹೆದರಿದವಳಲ್ಲ ಬಿಸೆಂಟಜ್ಜಿ. ಆದರೆ ಅವರಲ್ಲೊಂದು ಬೇಡವಾದ ಗುಣವಿತ್ತು ಅಕ್ಕಗಳೆ! ಅದೇನು ಗೊತ್ತುಂಟೆ-ನ್ಯಾಯವು ಎಲ್ಲಿಯೇ ಇರಲಿ; ನೀತಿಯು ಯಾವ ದಿಕ್ಕನ್ನೂ ಸೇರಿರಲಿ-ಅವರಿಗೆ ತಾನು ಹೇಳಿದ್ದೇ ಆಗಬೇಕು! ತನ್ನ ಪಂಥವೇ ಗೆಲ್ಲಬೇಕು!! ಮಹಾತ್ಮಾ ಗಾಂಧಿಯವರು ಅಸಹಕಾರ ಹೂಡಿದ್ದರಲ್ಲಾ-ಅದು ಈ ಮುದುಕಿಗೆ ಸರಿತೋರಲಿಲ್ಲ. "ಈ ಗಾಂಧಿಗೆ ಹುಚ್ಚು" ಎಂದು ಜೈಯ್ಯುವದಕ್ಕೇನೇ ಸುರು ಮಾಡಿದರು ಜನರೆಲ್ಲಾ ಗಾಂಧಿಯವರನ್ನು ದೇವರೆಂದೇ ಪೂಜಿಸುತ್ತಿದ್ದ ಆ ಕಾಲದಲ್ಲಿ, ಇಷ್ಟು ಹಸಿಬಿಸಿ ಮಾತನ್ನು ಆಡುವ ಧೈರ್ಯ ಯಾರಿಗಿತ್ತು ಹೇಳಿ! ಈ ಮುದುಕಿಯ ಸ್ವಭಾವವೇ ಹಾಗೆ. ಹಿಂದೀ ರಾಜಕೀಯ ಮತ್ತು ಸಾಮಾಜಿಕ ವಿಷಯಗಳಲ್ಲಿ ಮಾತ್ರ ಅಜ್ಜಮ್ಮನ ಕೈ ಬಾಯಿಯಿದ್ದುದೆಂದು ತಿಳಿಯಬೇಡಿ; ಧಾರ್ಮಿಕ ವಿಷಯದಲ್ಲಿಯೂ ಇವರು ಹಲವರಿಗೆ ಗುರುವಾಗಿದ್ದರು. ನೋಡಿ—ನಮ್ಮ ಥಿಯೋಸೋಫಿಕಲ್ ಪಂಥವುಂಟಲ್ಲ-ಅದರ ತಾಯಿಯೇ ಇವರು. ಅಡ್ಯಾರಿನಲ್ಲೊಂದು ಆಶ್ರಮವನ್ನು ಸ್ಥಾಪಿಸಿ ನೂರಾರು ಮಂದಿ ಶಿಷ್ಯರನ್ನು ಸಂಪಾದಿಸಿದ್ದಾರೆ ಅವರ ತೀಕ್ಷ್ಣಬುದ್ಧಿಗೆ ಧರ್ಮವು ಹೇಗೆ ಅಂಟಿತೆಂಬುದೇ ನನಗೆ ತಿಳಿಯದು ನಡು ತುಂಬಾ ನೆರಿಗೆಯ ಸೀರೆಯನ್ನುಟ್ಟುಕೊಂಡು ಕಂಠದಲ್ಲಿ ರುದ್ರಾಕ್ಷಿ ಮಾಲೆಗಳನ್ನು ಹಾಕಿಕೊಂಡು, ನೆರಿಗೆ ಬಿದ್ದ ಹಣೆಯಗಲಕ್ಕೂ ಭಸ್ಮವನ್ನು ಲೇಪಿಸಿಕೊಂಡು, ಅದೇ ಶೃಂಗಾರವೆಂದು ಹೆಗ್ಗಳಿಕೆ ತೋರಿಸುತ್ತಿರುವ ಮುದುಕಿಯನ್ನು ಕಂಡಾಗ, ಉಡುಪಿ ಪರ್ಯಾಯಕ್ಕೆ ಗಟ್ಟದಿಂದ ಇಳಿದುಬರುವ ಸನ್ಯಾಸೀ ಸ್ತ್ರೀಯರಿದ್ದಾರಲ್ಲಾ—ಅವರ ನೆನಪಾಗುತ್ತಿತ್ತು. ಹೀಗೆ ಧಾರ್ಮಿಕ ಭಾವನೆಯಿರುವವರು, ರಾಜಕೀಯ ಸಾಮಾಜಿಕ ಹಾದಿಗಳಲ್ಲಿಯೂ ಮಂತ್ರ ಹೇಳುತ್ತಾ ತುದಿಗಾಲನ್ನಷ್ಟೇ ಊರಿ ನಡೆಯುವ ಪದ್ಧತಿ; ನಮ್ಮ ಅಜ್ಜಮ್ಮನವರ ರೀತಿ ಮಾತ್ರ ಬೇರೆಯೆ. ಅವರು ತೀವ್ರಗಾಮಿಗಳು! ಎಲ್ಲವೂ ಜೋರಿನಲ್ಲಿಯೇ ಆಗಬೇಕು ಅವರಿಗೆ—ಇಷ್ಟು ಕ್ರಾಂತಿಯ ಮನೋವೃತ್ತಿಯವರಾದರೂ ಯೋಗಾಭ್ಯಾಸ, ಜಪ, ತಪಗಳಲ್ಲಿ ಭಾರೀ ಶ್ರದ್ಧೆಯವರು! ಪಾಶ್ಚಿಮಾತ್ಯ ನಾಜೂಕಿನ ಸ್ತ್ರೀಯೊಬ್ಬಳು, ಹೀಗೆ ಜಪ-ತಪವನ್ನು ಅಂಗೀಕರಿಸುವದು ಕ್ರಾಂತಿಕಾರಕ ಮನೋವೃತ್ತಿಯ ದೃಷ್ಟಾಂತವೆನ್ನಿ! ಅಂತಹ ಗಂಡೆದೆಯ, ಶೌರ್ಯ ಸಾಹಸದ ಪ್ರತಿಮೂರ್ತಿಯಂತಿದ್ದ ನಮ್ಮ ಅನ್ನಿಬಿಸೆಂಟಜ್ಜಿಯವರು ತೊಂಭತ್ತರ ಗಡಿಯನ್ನು ಸಮೀಪಿಸುವ ವರೆಗೂ ಬಾಳಿ, ಕಟ್ಟಕಡೆಗೆ ನಮ್ಮನ್ನಗಲಿಯೇ ಬಿಟ್ಟರು. ಸಾಯುವ ವರೆಗೂ ಹಿಂದೂದೇಶದ ಹಿತವನ್ನೇ ಕನವರಿಸಿದ ಮುದುಕಿಯದು! ಆ ಮುದಿ ಬರದುಸ್ಥಿತಿಯಲ್ಲಿ ಕೂಡಾ ತರುಣರ ರಕ್ತ ಬಿಸಿಯೇರಿಸುವಷ್ಟು ಹುರುಪಿದ್ದವರು. ಈ ಕಾಲದಲ್ಲಿ ಅಂತಹ ಒಂದು ಮುದುಕಿ ಇರಬೇಕಿತ್ತು! ಮಾತುವರ್ಣನೆ? ನಮಗೆ ಋಣವಿಲ್ಲ!

—ಇತಿ ನಿಮ್ಮ ಸಹೋದರಿ,

'ಸರೂ'

ಗಣಪತಿ ವಿಲಾಸ

ಕೋರ್ಟು ರಸ್ತೆ, --- ಉಡುಪಿ.

ಭೋಜನ—ಉಪಹಾರ—ವಿಶ್ರಾಂತಿ ಇವುಗಳಿಗೆ ಆದರ್ಶ ಗೃಹ.

ಆರೋಗ್ಯವೂ, ಹಿತಕರವೂ ಆದ ಭೋಜನ !

ಸ್ನಾನ-ವಸತಿಗಳಿಗೆ ಯೋಗ್ಯ ಸೌಕರ್ಯ !!

ಟೀಪಾರ್ಟಿ ಇತ್ಯಾದಿಗಳಿಗೆ ಉತ್ಕೃಷ್ಟ ಸಿದ್ಧತೆಗಳು !!!

ಮುನ್ಸಿಫ್ ಕೋರ್ಟು, ಕಚೇರಿ ಮತ್ತು ಶಾಲೆಗಳಿಗೆ ಸಮೀಪದ ಕೇಂದ್ರದಲ್ಲಿದ್ದು ಸರ್ವರಿಗೂ ಅತ್ಯಂತ ಅನುಕೂಲವಾಗಿರುತ್ತದೆ. ವಿದ್ಯಾರ್ಥಿಗಳಿಗೆ ರಿಯಾಯತಿ ದರದಲ್ಲಿ ಉತ್ತಮ ತರದ ಏರ್ಪಾಡು ಮಾಡಲಾಗುವುದು.

ಕೆ. ಮಂಜುನಾಥಯ್ಯ,

ಪ್ರೊಪ್ರೈಟರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

ಡಿಪೋವಿನ ರಿಂಗ್‌ವರ್ಮ್ ಮುಲಾಮು.

ಇಷ್ಟರವರೆಗಣ ನಮ್ಮ ವಿಲಿಯಮ್ ಎಂಡ್ ಕೋ ರವರ ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು, ಈಗ ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ

'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು **ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.**

ಅಮೃತಾಂಜನ ಡಿಪೋ,

ಬೊಂಬಾಯಿ ಮದ್ರಾಸು ಕಲ್ಕತ್ತ.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತ ವ್ಯಾದಿಗೆ ಕೊಡುವುದಲ್ಲದೆ, ಉಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರ್ಯಕ್ಲೀನಿಂಗ್ ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: ಯಮ್. ಯಸ್. ಭಟ್ಕಳ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore.*

SUPERFINE UP TO DATE CUTTING! — ವಜ್ರಗಳು — BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತದೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪೆಯೊಂದನ್ನು ಗವರ್ಮೆಂಟ್ ಕೊಲಿಜಿನ ಎದುರುಗಡೆ ತೆರೆಯಲಾಗಿದೆ

ಕೆ. ರಾಮಚಂದ್ರ ಕೃಷ್ಣ ಶೇಟ್,

ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ADVERTISE IN

NAVAYUGA

Nationalist Kanarese Weekly

with the widest Circulation throughout Karnatak.

ಪ್ರೇಮ ವಿದ್ಯಾಪೀಠ

ತುಂಗಭದ್ರಾ (ಬಳ್ಳಾರಿ ಜಿಲ್ಲಾ)

ಇದರ ಹೊಸ ವರ್ಷವು ಜೂಲೈಯಲ್ಲಿ ಪ್ರಾರಂಭವಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್, ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸುಗಳಿವೆ. ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪ್ ಇಟ್ಟು ಬರೆಯಿರಿ.

ಮುಖೋಪಾಧ್ಯಾಯಿನೀ ಡಾ|| ಸುಮತಿಬಾಯಿ,

ಬಿ ಎ ಎಲ್ ಟಿ, ಎಫ್ ಪಿ ಎಮ್ ಎಸ್ ಶಿಷ್ಯಗೃಹ, ಬಿಜಾಪುರ್.

ವಿದ್ಯಾ ಸಂಸ್ಥೆಗೆ ಸಹಾಯಮಾಡಿರಿ ! **ಸತ್ಕಾರ್ಯಕ್ಕೆ ಪ್ರೋತ್ಸಾಹಕೊಡಿರಿ !!**

ದಿ ಮೂಲ್ಕಿ ಗ್ರೇಂಡ್ ರೇಫ಼ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಯೋಗ್ಯ ಕಮ್ಮಿಟಿಯವರಿಂದ ನಡಿಸಲ್ಪಡುವುದು

ಎ. ಬಿ. ಶೆಟ್ಟಿ, ಎಸ್ಕ್ವಾಯರ್, ಎಂ. ಎಲ್. ಸಿ ಪ್ರೆಸಿಡೆಂಟ್. — **ಡಾ| ಎಂ. ಆರ್. ಕಾಮತ್**, ಎಲ್ ಎಂ ಪಿ ವೈಸ್ ಪ್ರೆಸಿಡೆಂಟ್.

ರೂ. 20,000/-ವು 1,789 ಇನಾಮುಗಳಾಗಿ ಹಂಚಲ್ಪಡುವುದು.

ಪ್ರಥಮ ಬಹುಮಾನ ರೂ **3,000/-** ದ್ವಿತೀಯ ಬಹುಮಾನ ರೂ **2,000** - ತೃತೀಯ ಬಹುಮಾನ ರೂ. **1,000/**

ಟಿಕ್ಕಿ ಅಚ್ಚಿನ ತಾರೀಕು 28—1—1937] [ಸೋಡ್ತಿ ತೆಗೆಯುವ ತಾರೀಕು 31—1—1937

ಟಿಕೇಟು ಒಂದರ ಕ್ರಯ ಆಣೆ ನಾಲ್ಕು ಮಾತ್ರ.

30 ಟಿಕೇಟುಗಳಿರುವ ಪುಸ್ತಕಕ್ಕೆ ರೂ ೭ ಮಾತ್ರ. ಟಿಕೇಟು ಪುಸ್ತಕಗಳು ನಗದಿಯಾಗಿ ವಿಕ್ರಯಿಸಲ್ಪಡುವವು. ಟಿಕೇಟು ಮಾರಿ ರೂ 350/-ಕ್ಕೂ ಹೆಚ್ಚು ಸಂಗ್ರಹಿಸಿಕೊಟ್ಟವರೊಳಗೆ ರೂ. 300/-ರ ಒಂದು, ರೂ. 100/-ರ ಎರಡು ಮತ್ತು ರೂ. 50/-ರ 84 ಇನಾಮುಗಳು ಹಂಚಲ್ಪಡುವವು

ಟಿಕೇಟು ವಿಕ್ರಿತದಿಂದ ರೂ. 25/. ಮತ್ತು ಹೆಚ್ಚು ಮಾಡಿಕೊಟ್ಟವರಿಗೆ ಶೇಕಡಾ ೬¼ರಂತೆ ಕಮೀಷನ್ ಕೊಡಲಾಗುವುದು

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ—

ಸೆಕ್ರೆಟರಿ,

ಮೂಲ್ಕಿ, ದ. ಕನ್ನಡ | ದಿ ಮೂಲ್ಕಿ ಗ್ರೇಂಡ್ ರೇಫ಼ಲ್

3—9—1936 | (ಹೈಸ್ಕೂಲ್ ಸಹಾಯಾರ್ಥ)

THE

Commonwealth Assurance Co. Ltd.

(ESTD 1920)

Chairman. Mr N C Kelkar, LL M. L A

Head Office. **POONA CITY.**

Chief Agency Office: **HAMPANKATTA, MANGALORE.**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೋಲಿಸಿದಾರರಿಗೆ ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಯಿರಿ.

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್

ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು

LAXMI BRAND COFFEE POWDER.

Pure & Superior quality, will last long without loosing its flavour and colour

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Sold also by Instalments

Fire Resistance Steel Iron Safes. latest pattern.

ನಮ್ಮಲ್ಲಿ ಕಬ್ಬಿಣದ ಪೆಟ್ಟಿಗೆಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI, S. K.

ನವಯುಗದ ಬಿಡಿ ಸಂಚಿಕೆಗಳನ್ನು ವಿಕ್ರಯಿಸಲು

ಕರ್ನಾಟಕದ ಮುಖ್ಯ ಕೇಂದ್ರಗಳಲ್ಲಿ

ಏಜಂಟರು ಬೇಕಾಗಿದ್ದಾರೆ.

ನಿಮಗೆ ಅಂದವಾದ ಅಚ್ಚಿನಿಂದ ಸೊಗಸಾದ ಛಾಪಾ ಕೆಲಸವಾಗಬೇಕೇ?

ಮಹಾಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್.

ಮಹಾಲಕ್ಷ್ಮಿ ಬಿಲ್ಡಿಂಗ್, ಕುಂದಾಪುರ.

ಈ ಛಾಪಖಾನೆಯಲ್ಲಿ ಕೆಲಸಗಳನ್ನು ಮಾಡಿಸಿರಿ.

ಬೇರೆ ಬೇರೆ ಊರುಗಳಲ್ಲಿ ಬಹಳ ವರ್ಷಗಳಿಂದ ಕೆಲಸ ಕಲಿತು ಮಾಹಿತಿಯಿದ್ದವರಿಂದ ಹೊಸದಾದ ಅಂದವಾದ ನೂರಾರು ತರದ ಅಚ್ಚುಗಳಿಂದ ತರತರದ ಬಣ್ಣಗಳಿಂದ ನಾಜೂಕಿನಿಂದ ಅತೀ ಸುಲಭ ದರದಲ್ಲಿ ಇಂಗ್ಲಿಷ್, ಕನ್ನಡ, ಮಾರಾಠಿ ವಗೈರೆ ಭಾಷೆಗಳಲ್ಲಿ ಕೆಲಸಗಳನ್ನು ಮಾಡಿಸಿಕೊಡಲಾದೀತು.

ಇಲ್ಲಿ ಎಲ್ಲಾ ತರದ ಫೋರ್ಮುಗಳೂ ಲೆಟರ್ ಹೆಡ್ಡುಗಳೂ ಕವರುಗಳೂ ಕಂಪೆನಿಯಂತಹ ಸಂಸ್ಥೆಗಳಿಗೆ ಅಗತ್ಯ ಇರುವ ವರ್ಗ ಊಳಿಗ ಪುಸ್ತಕಗಳೂ ಎಲ್ಲಾ ತರದ ಛಾಪಾ ಕೆಲಸಗಳೂ ಬೇಕಾದ ಮಾದರಿಯಲ್ಲಿ ತಯಾರಿಸಿಕೊಡಲ್ಪಡುವುವು.

For nice printing and punctuality look to—

Mahalaxmi Printing Works, Limited,

Mahalaxmi Buildings, Coondapoor.

K. RAMAKRISHNA SHENOY,
GENERAL MANAGER.

ಯು. ಪಿ. ಮೇಸ್ತ, ಉದ್ಯಾವರ, ದ. ಕ.

(ಬಾಣಂತಿ ರೋಗದ ಸ್ಪೆಶ್ಯಲಿಸ್ಟರು)

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಔಷಧಗಳು ದೊರೆಯುತ್ತವೆ.

U. P. Mesta,

Gold Medalled Physicion,

UDIAWAR, S. K.

USE ALWAYS

SUVASINI AGARBATHIES

(REGISTERED)

SUPPLY AGENCY, LTD. UDIPI



HEAD OFFICE VIEW

ಅಕ್ಟೋಬರ ತಾ. 2

ಮಹಾತ್ಮಜಿಯವರ ಪಾವನ ಜನ್ಮದಿನ.

2-10-1869

ನವಂಬರ ತಾ. 2

ಶ್ರೀ ಭಾರತ ವಸ್ತು ಮಂದಿರದ ಸ್ಥಾಪನಾದಿನ.

2-11-1921

ಅಕ್ಟೋಬರ ತಾ. 2

ಸಪ್ಲೈ ಏಜನ್ಸಿ ಲಿಮಿಟೆಡ್, ಇದರ ಸ್ಥಾಪನಾದಿನ

2-10-1933

MAHATMAJI

ಇದೇ **2-10-'36**——ರಿಂದ——**2-11-'36**ರ ವರೆಗೆ

ಮುವ್ವತ್ತೆರಡು ದಿನಗಳ ಸದವಸರದಲ್ಲಿ ≡ **ತಿರುಪೂರು ಖಾದಿಯು** ≡ ತಿರುಪೂರು ದರದಲ್ಲಿ ಮಾರಲ್ಪಡುವುದು!

5 ರೂಪಾಯಿಗಳಿಗಿಂತ ಹೆಚ್ಚಿನ ಇತರ ಸಾಮಾನುಗಳನ್ನು ಕೊಳ್ಳುವವರಿಗೆ ಸೇಕಡಾ 6¼ ರಂತೆ ಕಮಿಶನ್.

Grand Jayanthi Sales for 32 days.

ಶ್ರೀ ಭಾರತ ವಸ್ತು ಮಂದಿರ, ಉಡುಪಿ

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618

'ನವಯುಗ'
ದಲ್ಲಿ
ಪ್ರಕಟಣೆಯ
ದರಗಳು
ಚಚ್ಚೌಕ ಇಂಚಿಗೆ
0—4—0
ಕೆಂಟ್ರಾಕ್ಟ್ ದರಗಳಿಗೆ
ಬರೆಯಿರಿ

ನವಯುಗ

ವ್ಯಭಿಚಾರಿಣಿ
ಯಾರು ?
ಸಚಿತ್ರವಾಗಿ
ಪ್ರಕಟವಾಗಿದೆ.
ಬೆಲೆ ೦—೮—೦.
ಕಿರಿಯರ ಪ್ರಪಂಚ,
ಉಡುಪಿ

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದ,
ಬನದ ನಾಡೊಳು ಮೊಳಗುತಿದ ತುಮುಲನಾದ,

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ದುಪ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ, ಅಕ್ಟೋಬರ ೮, ೧೯೩೬ [ಸಂಚಿಕೆ ೬

The Canara Industrial and Banking Syndicate, Limited.
(INCORPORATED IN BRITISH INDIA)

ESTD.] **Head Office: "MUKUNDANIVAS", UDIPI.** [1925.

BRANCHES:

1 Mangalore	8 Coondapoor	15 Hubli
2 Kanhangad	9 Honavar	16 Belgaum
3 Payyanur	10 Kumta	17 Bellary
4 Cannanore	11 Karwar	18 Adoni
5 Udipi	12 Ankola	19 Hospet
6 Brahmavar	13 Sirsi	20 Gadag
7 Hungarcutta	14 Bhatkal	21 Bangalore City
22 Karkala	23 Uppinangadi	

ANNOUNCEMENT

WE HAVE GREAT PLEASURE IN ANNOUNCING
THE OPENING OF OUR 24TH BRANCH
AT KASARGODE. (S. KANARA DT.)
on Saturday, the 24th October' 36 where all kinds of banking business will be transacted. The public are requested to take advantage of the numerous facilities offered by us.

Paid up Capital: above Rs. 2 lakhs, Deposits: above 19 lakhs,
Total resources: above 29 lakhs.

"MUKUND NIVAS," UDIPI
30-9-1936

P. A. PAI, Brothers,
Managing Agents.

ಬರುವ ಮದ್ರಾಸ್ ಅಪ್ಪರ್ ಚೇಂಬರ್ ಕೌನ್ಸಿಲಿಗೆ
ಶ್ರೀ. ಬೈಲೂರು ವಾಸುದೇವ ರಾವ್
ಎಡ್ವೋಕೇಟ್ ಇವರು ಸ್ವತಂತ್ರವಾಗಿ ನಿಲ್ಲಲಿರುವರು

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖ ರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿರಿ

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ. ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟು ಮತ್ತು ಮೆನೇಜರ್.

ಜಯಕರ್ನಾಟಕದ ಚಂದಾದಾರರಿಗೆ

ಈ ವರ್ಷವು ಅತ್ಯಂತ ಲಾಭಕರ!

ಎರಡು ತಿಂಗಳಿಗೊಮ್ಮೆ ತ್ರಿವರ್ಣ ಚಿತ್ರವನ್ನು ಕೊಡಲಾಗುವುದು.

ಪ್ರತಿ ಸಂಚಿಕೆಯೂ ನಯನಮನೋಹರ ಚಿತ್ರಗಳಿಂದ ತುಂಬಿರುವುದು.

ಹೊಸದಾಗಿ ಚಂದಾದಾರರಾಗುವವರು—ಯಾವ ತಿಂಗಳಲ್ಲಿಯೇ ಆಗಲಿ ಹಿಂದಿನ ಸಂಚಿಕೆಗಳನ್ನೆಲ್ಲ ತರಿಸಿಕೊಂಡು—ವರ್ಷಾರಂಭದಿಂದಲೇ ಆಗಬೇಕು. ಹಾಗು ಈಗಿದ್ದ ಚಂದಾದಾರರಲ್ಲಿ ವರ್ಷ ಮಧ್ಯದಲ್ಲಿ ಅವಧಿ ಮುಗಿಯುವವರು ಮುಂದೆಯೂ ಚಂದಾದಾರರಾಗಿ ಉಳಿಯಬೇಕು. ಇಲ್ಲದಿದ್ದರೆ ಅಪೂರ್ವವಾದ 'ರಾಜರಹಸ್ಯ' ಕಾದಂಬರಿಯು ಅಪೂರ್ಣವಾಗಿ ಅವರಿಗೆ ಅಸಮಾಧಾನವನ್ನುಂಟುಮಾಡೀತು.

ವಾರ್ಷಿಕ ಚಂದಾ ರೂ. ೫—೮—೦

ಜಾಹೀರಾತಿನ ದರಗಳಿಗೂ ಇತರ ಮಾಹಿತಿಗಳಿಗೂ ಬರೆಯಿರಿ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಶಾಲುಗಳ ಕಟಲಗು 1, ಕಾಶೀವಸ್ತ್ರ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಅಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟೇಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಶಾಲು, ಕದಪಾಮ್ಸಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳ, ಧಾವೇ, ನಾಮಾಲ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪದಲು ಬುಟ್ಟಿ ಹಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55. ವದಲು ಸಾದಾ 16 ಮೊಳದ ಸೀರೆ 1 ಕ್ಕೆ ರೂ. 16 ರಿಂದ ರೂ. 25 ರ ವರೆಗೆ. ಅರೆ ಕಡಮೆ 16 ಮೊಳ ಕ್ಲಬರ್ ಅಂಚು ರೂ. $10\frac{1}{2}$ ಯಿಂದ ರೂ 16. ಖಣ 1 ಕ್ಕೆ ರೂ. $1\frac{1}{4}$ ರಿಂದ ರೂ 10 ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶೀ

THE

PANGAL NAYAK BANK

LIMITED.

ESTABLISHED 1920.

Head Office: UDIPI] [Branch: MANGALORE.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at $4\frac{1}{2}\%$ on 1 or 2 years and at 5% on 3 or 4 years deposits.

Every other description of up-to-date Banking business is also undertaken.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ | ## ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) | **ಹಣ ಪರತ**

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಷೇಶ ಟೊಂಕದಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್. ಇನ್ಸ್ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ. ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

[ಎ ಪಿ. ಖರ್ಚು ಆಣೆ ೮,

ಬಹಳಸಾರಿ ಹಡೆಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ನಂ। ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ವಾರದ ವಿಚಾರ

ಸ್ಪೈನಿನ ಬಂಡಾಯ.

ಸ್ಪೈನಿನಲ್ಲಿ ಇತ್ತಲಾಗಿ ಬಂಡಾಯಗಾರ ಕೈಯೇ ಮೇಲಾಗುತ್ತಾ ಬಂದಿದೆ. ಜನ ಲ್ ಫ್ರೇಂಕೋರವರು ಸಕಲ ಬಂಡಾಯ ಗಾರ ಸೇನೆಯ ಅಧಿನಾಯಕರಾಗಿ ನೇಮ ಲ್ಪಟ್ಟಿದ್ದಾರೆ. ಅವರು ಟೊಲೇಡೋ ಪಟ್ಟಣದಿಂದ 45 ಮೈಲು ದೂರದ ಟಿಲ ರೇರ ಎಂಬಲ್ಲಿ 1,50,000 ಸೇನೆ, 150 ಮಾನ ಮತ್ತು ಫಿರಂಗಿ ತೋಪುಗಳನ್ನು ಸಂಗ್ರಹಿಸಿ ಮೋದ್ರಿದಿನ ಮೇಲೆ ಧಾಳಿನಡೆ ಸುವ ಸಿದ್ಧತೆಯಲ್ಲಿದ್ದಾರೆ. ಸ್ಪೆನಿಶ್ ಮೊರೊ ಕ್ಕೋದಿಂದ ಹೆಚ್ಚು ಹೆಚ್ಚಾಗಿ ಸೇನೆಯು ಬಂಡಾಯಗಾರರ ಸಹಾಯಕ್ಕಾಗಿ ಬರುತ್ತಾ ಇದೆ. ಪೋರ್ಚುಗಲ್ ದೇಶವು ಬಂಡಾಯ ಗಾರರಿಗೆ ಪ್ರತ್ಯಕ್ಷವಾಗಿ ಸಹಾಯವನ್ನೀ ಯುತ್ತಿದೆ. ಅದರ ಮೂಲಕ ಜರ್ಮನಿ ಮತ್ತು ಇಟಲಿ ಸರಕಾರಗಳೂ ಒಳಗಿಂದೊ ಳಗೆ ಬಂಡಾಯಗಾರರಿಗೆ ಸಹಾಯಮಾಡು ತ್ತಿವೆ. ಹೊರಗಣ ರಾಷ್ಟ್ರಗಳೆಲ್ಲಾ ತಟಸ್ಥ ರಾಗಿರಬೇಕೆಂಬ ಫ್ರಾನ್ಸ್ ಮತ್ತು ಇಂಗ್ಲೆಂ ಡುಗಳ ಪ್ರಯತ್ನವು ಕೇವಲ ಆಡೊಂಬ ರಾಸ್ಪದವಾಗಿ ಪರಿಣಮಿಸಿದೆ. ಸ್ಪೆನಿಷ್ ಸರ ಕಾರಕ್ಕೆ ಮೆಕ್ಸಿಕೋದಿಂದ ಸಹಾಯವು ದೊರೆತಿದೆ. ಮೋದ್ರಿದಿನ ಮೇಲಿನ ಬಂಡಾ ಯಗಾರರ ಪ್ರಚಂಡ ಧಾಳಿಯನ್ನು ತಡೆ ಗಟ್ಟಲು ಸರಕಾರಿ ಕಡೆಯವರೂ ತಕ್ಕ ಸಿದ್ಧತೆ ಮಾಡುತ್ತಿದ್ದಾರೆ. ಅವರಿಗೂ ಸಾಕ ಷ್ಟು ವಿಮಾನಗಳ ಸಹಾಯವು ದೊರೆತಿದೆ. ಇನ್ನು ಸ್ವಲ್ಪ ದಿನಗಳಲ್ಲೇ ಜಯಾಪಜಯ ವು ನಿಶ್ಚಯವಾಗಬಹುದು.

ಚೀನಾ ಜಪಾನ ಯುದ್ಧ

ದ ಕಾರ್ಮುಗಿಲೇರಿ ಬಂದರೂ ಪ್ರಕೃತ ದು ಚೆದರಿ ಹೋಗುತ್ತಿರುವಂತೆ ತೋರು ವುದು. ಜಪಾನು ಒಂದೊಮ್ಮೆ ಉಗ್ರ ಘೋಷಣೆ ಪಡಿಸಿ, ತನ್ನ ಪ್ರಜೆಗಳ ಆತ್ಮ ರಕ್ಷಣೆಗೆಂಬ ನೆಪದಿಂದ ಚೀನಕ್ಕೆ ಹೆಚ್ಚಿನ ಜಲಸೇನೆ ಕಳುಹಿಸಿ ಬೆದರಿಕೆ ಬೀರಿತು ಚೀನೀಯರಲ್ಲಿ ಜಪಾನರ ವಿರೋಧ ಭಾವ ವನ್ನು ಹಾಳುಮಾಡುವ ಪ್ರಚಾರ ಕೆಲಸವು ಕಡೆಗಟ್ಟಲ್ಪಡುವಂತೆ ಚೀನೀಯ ವಿದ್ಯಾರ್ಥಿ ಗಳ ಪಠ್ಯ ಪುಸ್ತಕಗಳ ಮೇಲ್ವಿಚಾರಣೆಯನ್ನು ಜಪಾನರು ನಡಿಸಬೇಕೆಂದು ಸೂಚಿಸು ವಷ್ಟರ ಉದ್ಧಟತನ ತೋರಿಸಿತ್ತು. ಆದರೆ ಚೀನೀಯರು ಜಪಾನರ ದರ್ಪಕ್ಕೆ ಮಣಿ ಯುವೆ ಅವನ್ನು ವಿರೋಧಿಸಿಯೇ ಸಿದ್ಧವೆಂಬ ನಿರ್ಧಾರಕ್ಕೆ ಬರುವ ಹದದಲ್ಲಿರುವಾಗ ಜಪಾನು ಒಂದು ಹೆಜ್ಜೆ ಹಿಂದಿಟ್ಟು ಹೋಂಗ್‌ಕ್ಕೊ ಎಂಬಲ್ಲಿ ಸಂಗ್ರಹಿಸಿದ ತನ್ನ ಜಲಸೇನೆಯ ನ್ನು ಕಡಿಮೆಮಾಡಿ ಸಂಧಿಪ್ರಸ್ತಾಪಕ್ಕೆ ಕುಸು ಅವಕಾಶವನ್ನುಂಟು ಮಾಡಿರು ವುದು. ಆದುದರಿಂದ ಚೀನೀ ಜಪಾನ ಯುದ್ಧವಾಗುವ ಸಂಭವವು ಸದ್ಯ ಹಿಂದಾ ಗಿರುವುದು.

ಪೆಲಸ್ತಿನದ ಪರಿಸ್ಥಿತಿ

ಯು ಸ್ವಲ್ಪ ಸುಧಾರಿತವಾಗಿರುವುದು. ಲೂಟಿ-ಕೊಲೆ-ಗಲಾಟೆಗಳು ಕಡಿಮೆಯಾಗ ಹತ್ತಿರುವವು ಪ್ರಬಲ ಬ್ರಿಟಿಷ್ ಸೇನೆಯು ಬಂದಿರುವಾಗ ಕೊಲೆ ಲೂಟಿಗಳಿಂದ ಯಾವ ಪ್ರಯೋಜನವೂ ಇಲ್ಲೆಂಬುದು ಅರಬ ರಿಗೆ ವಿದಿತವಾಗುತ್ತಿರಬೇಕು. ಆದರೆ ಸೇನಾ ಬಲದ ಒತ್ತಾಯದಿಂದ ಸ್ಥಾಪಿಸಲ್ಪಡುವ ಶಾಂತಿಯು ಎಂದೂ ಶಾಶ್ವತವಾಗಿ ಉಳಿ ಯಲಾರದು. ಪೆಲಸ್ತಿನದ ಅರಬರ ನ್ಯಾಯ ವಾದ ಹಕ್ಕು ಬಾಧ್ಯತೆಗಳನ್ನು ಬ್ರಿಟಿಷ್ ಸರಕಾರವು ಅಂಗೀಕರಿಸಿ ಅವರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸುವನಕ ಪೆಲಸ್ತಿ ನದ ಸುರಕ್ಷಿತತೆಯುಂಟಾಗಲಾರದು

ರಾಷ್ಟ್ರಧ್ವಜಕ್ಕೆ ಮನ್ನಣೆ

ನಾಗಪುರ ಮುನಿಸಿಪಾಲಿಟಿಯವರು ತಮ್ಮ ಆಧೀನವಿರುವ ಶಾಲೆಗಳಲ್ಲಿ, ಕ್ಲಾಸು ಗಳು ಆರಂಭವಾಗುವ ಮೊದಲು ರಾಷ್ಟ್ರೀ ಯ ಧ್ವಜವಂದನೆಯು ನಡೆಯಬೇಕೆಂಬ ಠರಾವುಮಾಡಿ, ರಾಷ್ಟ್ರಧ್ವಜವನ್ನು ಅಧಿ ಕಾರಿಕವಾಗಿ ಸ್ವೀಕರಿಸಿರುವರು. ದೇಶದ ಸ್ಥಳೀಯ ಸಂಸ್ಥೆಗಳೆಲ್ಲಾ ಈ ಮಾದರಿಯ ನ್ನನುಸರಿಸಿ ರಾಷ್ಟ್ರೀಯಧ್ವಜಕ್ಕೆ ತಕ್ಕ ಮ ನ್ನಣೆಯಿತ್ತ ಪಕ್ಷದಲ್ಲಿ ಸರಕಾರಕ್ಕೆ ಮತ್ತ ದನ್ನು ರಾಷ್ಟ್ರೀಯ ಧ್ವಜವಾಗಿ ಅಂಗೀಕರಿ ಸದೆ ನಿರ್ವಾಹವಿಲ್ಲದಾಗುವುದು. ಪ್ರತಿ ಯೊಂದು ರಾಷ್ಟ್ರಕ್ಕೂ ತನ್ನದೇ ಆದ ರಾಷ್ಟ್ರೀ ಯ ಧ್ವಜವಿದ್ದು ಅದು ಅಭಿಮಾನದ ಸಂಕೇತವಾಗಿರುವಾಗ ಹಿಂದೀಯರಿಗೆ ಇನ್ನೂ ವಿದೇಶೀಯ 'ಯೂನಿಯನ್ ಜೇಕೇ' ಧ್ವಜವಾಗಿರುವುದು ಅಭಿಮಾನ ಶೂನ್ಯತೆಯು ಹೆಗ್ಗುರುತಾಗಿರುವುದು. ಆದು ದರಿಂದ ರಾಷ್ಟ್ರೀಯ ಧ್ವಜವೇ ತಮ್ಮ ಧ್ವಜ, ತಮ್ಮ ಗೌರವದ ನಿಶಾನಿ, ಅಭಿಮಾನದ ಸಂಕೇತವೆಂದು ಪ್ರತಿಯೊಬ್ಬ ಭಾರತೀಯ ನು ಭಾವಿಸಿ, ಅದು ದೇಶದಲ್ಲೆಲ್ಲಾ ಯೋಗ್ಯ ಸ್ಥಾನ-ಮಾನ ಪಡೆವಂತೆ ಮಾಡತಕ್ಕದ್ದು.

ಪ್ರೊಟೆಸ್ಟೆಂಟ್ ಕ್ರೈಸ್ತರೂ ಹರಿಜನರೂ

ದಕ್ಷಿಣ ಹಿಂದುಸ್ಥಾನದ ಹರಿಜನರನ್ನು ತಂಡ ತಂಡವಾಗಿ ತಮ್ಮ ತಮ್ಮ ಧರ್ಮ ಗಳಿಗೆ ಸೇರಿಸಲು ಮುಸಲ್ಮಾನರು, ಸಿಖ್ಖರು, ಕಥೋಲಿಕರೇ ಮೊದಲಾದವರಿಗ ಸುಸಂಘ ಟಿತವಾದ ಪ್ರಯತ್ನ ನಡಿಸುತ್ತಿರುವರು. ಇಷ್ಟರವರೆಗೆ ಪ್ರೊಟೆಸ್ಟೆಂಟರು ಅಂತಹ ಸಂ ಘಟಿತ ಪ್ರಯತ್ನವನ್ನೇನೂ ಹೆಚ್ಚಾಗಿ ನಡಿ ಸಿರುವುದಿಲ್ಲ. ಈಗ ಅವರಲ್ಲೂ ಆ ಮನಸ್ಸುಂ ಟಾಗಿದೆ. ಇದಕ್ಕಾಗಿ ಇಂಗ್ಲೆಂಡಿನ ಕೆಲಮಂದಿ ಪ್ರೊಟೆಸ್ಟಾಂಟ್ ಕ್ರೈಸ್ತ ಚರ್ಚ್ ಅಧಿಕಾರಿ ಗಳು ಫಂಡುಮಾಡಿ ಅಧ್ಯಾಪಕರನ್ನು ಹಳ್ಳಿ ಕೆಲಸಗಾರರನ್ನು ನೇಮಿಸಿ, ಹರಿಜನರ ಸ್ಥಿತಿ ಗತಿಗಳನ್ನು ಸುಧಾರಿಸಿ ಆ ಮೂಲಕ ಅವರ ನ್ನು ತಮ್ಮ ಧರ್ಮಕ್ಕೆಳೆವ ಪ್ರಯತ್ನ ನಡಿ ಸುವ ನಿರ್ಧಾರ ಮಾಡಿರುತ್ತಾರೆ. ಇದಕ್ಕಾಗಿ ಪ್ರಕೃತ 25,000 ಪವನು ಸಂಗ್ರಹಿಸುವ ನಿರ್ಧಾರವಾಗಿದೆ. ಹರಿಜನರು ಹಿಂದುಗಳಿಗೆ ಬೇಡವಾದರೂ, ಅವರಿಗೆ ಬೇಕಾದ ಧಾರ್ಮಿ ಕ, ಸಾಮಾಜಿಕ ಮತ್ತು ಸಾಂಪತ್ತಿಕ ಅನು ಕೂಲತೆಗಳನ್ನಿತ್ತು ಸ್ವಾಗತೀಕರಿಸುವವರು ಬಹಳ ಮಂದಿಯಿರುತ್ತಾರೆ.

ದೇಶೀಯ ಹಡಗ ಕಂಪೆನಿ

ಗಳಿಗೆ ಅಭಿವೃದ್ಧಿಗೆ ಬೇಕಾದ ಪ್ರೋತ್ಸಾ ಹವೀಯುವುದು ಪ್ರತಿಯೊಂದು ದೇಶದ ಸರಕಾರದ ಕರ್ತವ್ಯವಿರುತ್ತದ ಅಂತೆಯೇ ಪ್ರತಿಯೊಂದು ದೇಶದವರೂ ತಮ್ಮ ತಮ್ಮ ಹಡಗು ಕಂಪೆನಿಗಳಿಗೆ ಬೇಕಾದ ಸಹಾಯ ಮತ್ತು ಅನುಕೂಲತೆಯನ್ನೊದಗಿಸಿ ಕೊಟ್ಟಿ ರುತ್ತದೆ. ಆದುದರಿಂದಲೇ ಹಿಂದುದೇಶ ದಿಂದ ಎಷ್ಟೋ ಪಾಲು ಚಿಕ್ಕ ರಾಜ್ಯಗಳಿಗೂ ಸ್ವತಂತ್ರ ಹಡಗು ಕಂಪನಿಗಳಿರುತ್ತವೆ. ಹಡಗ ಕೈಗಾರಿಕೆಯಲ್ಲಿ ಅವು ದೊಡ್ಡ ದೊಡ್ಡ ರಾಷ್ಟ್ರಗಳಿಗಿಂತ ಹಿಂದಿಲ್ಲ. ಆಗರೆ ಹಿಂದು ದೇಶದಲ್ಲ ಸರಕಾರವು ದೇಶೀಯ ಹಡಗ ಕಂಪೆನಿಗಳನ್ನು ಮಲತಾಯಿ ದೃಷ್ಟಿ ಯಿಂದ ಕಂಡು ಅವುಗಳು ಬಾಳಿ ಬೆಳೆಯು ವಂತೆ ಯಾವ ಸಹಾಯವನ್ನೂ ಕೊಡುವು ದಿಲ್ಲ. ಇದರಿಂದ ಬ್ರಿಟಿಷ ಹಡಗು ಕಂಪೆನಿ ಗಳಿಗೆ ಹಾನಿಯುಂಟಾಗ ಬಹುದಾದುದ ರಿಂದ ಹಿಂದಿ ಸರಕಾರವು ಹಿಂದೀ ಹಡಗ ಕಂಪೆನಿಗಳನ್ನು ತಮ್ಮಷ್ಟಕ್ಕೆ ಸಾಯ ಬಿಡು ವ ಧೋರಣೆ ವಹಿಸಿದೆ. ಹಿಂದೀ ಹಡಗ ಕಂಪೆನಿಗಳ ಸ್ಥಾಪನೆ ಮತ್ತು ಅಭಿವೃದ್ಧಿಯ ವಿಷಯದಲ್ಲಿ ಹೆಚ್ಚಿನ ಕೆಲಸಮಾಡಿರುವ ವಾಲ್ ಚಂದ ಹೀರಾ ಚಂದರು ಈ ವಿಷಯ ವನ್ನು ಜನತೆಯ ಗಮನಕ್ಕೆ ತಂದಿರುತ್ತಾರೆ. ಅವರು ಹಿಂದೀಯರ ಅನುಕೂಲತೆಗಾಗಿ ಯುರೋಪ್ ಮತ್ತು ಹಿಂದುದೇಶಗಳ ನಡುವೆ ಸಂಚರಿಸುವ ಹಡಗ ಕಂಪೆನಿಯೊಂ ದನ್ನು ಸ್ಥಾಪಿಸಲಿದ್ದಾರೆ. ಇಷ್ಟರ ವರೆಗೆ ಹಿಂದೀ ವಿದೇಶೀಯ ಹಡಗ ಕಂಪೆನಿಗಳೇ ಹಿಂದೀ ಪ್ರಯಾಣಿಕರನ್ನೂ ಸಾಮಾನು ಗಳನ್ನೂ ಒಯ್ಯುತ್ತಿದ್ದುವು. ಆದರೆ ಇನ್ನು ಮುಂದೆಯೂ ಹಿಂದೀಯರು ವಿದೇಶಿ ಕಂಪೆನಿಗಳ ಮೇಲೆ ಹೊಂದಿಕೊಂಡಿರುವು ದರಲ್ಲಿ ಪುರುಷಾರ್ಥವಿಲ್ಲ. ಸಾಹಸಿಗಳಾದ ಹಿಂದೀಯರು ಹಿಂದೀ ಹಡಗ ಕಂಪನಿಗಳ ನ್ನು ಸ್ಥಾಪಿಸಿ ನಡೆಸಲು ಮುಂದೆ ಬರು ವಾಗ ಅವರಿಗೆ ತಕ್ಕ ಸಹಾಯವಿತ್ತು ಪ್ರೋತ್ಸಾಹಿಸುವುದು ಸರಕಾರದ ಕರ್ತವ್ಯ ವಿದೆ.

ಸ್ವದೇಶ ವಾರ್ತೆ

ಗನಿಯಲ್ಲಿ ಅಪಘಾತ

ಬಿಹಾರಿನ ಝರಿಯ ಎಂಬ ಗನಿಯಲ್ಲಿ ಸಪ್ಟಂಬರ ತಾ. 29ರಲ್ಲು ಗನಿಯ ಒಂದು ಭಾಗವು ಕುಸಿದುಬಿದ್ದು ಇಬ್ಬರು ಸಜೀವ ವಾಗಿ ಹೂಳಲ್ಪಟ್ಟು ಮೃತರಾಗಿರುವರು. ಗನಿಯಾಳುಗಳ ನಾಲ್ಕು ಮನೆಗಳು ಕುಸಿದು ಅವುಗಳಲ್ಲಿದ್ದ ಜನರ ಸಮೇತ ಗನಿಯೊಳಗೆ ಬಿದ್ದುವು. ಗನಿಯ ಅಧಿಕಾರಿಗಳು ಬಹಳ ಪ್ರಯತ್ನಮಾಡಿ ಗನಿಯಲ್ಲಿದ್ದ 22 ಮಂದಿ ಯನ್ನು ರಕ್ಷಿಸಿದರು ಹಲವರಿಗೆ ಪೆಟ್ಟಾಗಿ ರುವುದು.

20 ಮೆಂಬರರ ಸಹಿ ಹಾಕಿ ನೋಟೀಸ್ ಕೊಟ್ಟ ಮೇರೆಗೆ ಮದ್ರಾಸ್ ಕೋರ್ಪರೇಶ ನಿನ ವಿಶೇಷ ಸಭೆಯೊಂದು ಸಪ್ಟಂಬರ ತಾ. 30ರಲ್ಲು ನಡೆದು ಪಂಡಿತ ಜವಾಹಿರ ಲಾಲರಿಗೆ ಮಾನಪತ್ರ ನೀಯುವ ನಿರ್ಧಾರ ವಾಗಿದೆ. ಜಸ್ಟಿಸ್ ಪಕ್ಷದ ಕೆಲಮಂದಿ ಮೆಂಬರರು ಇದಕ್ಕೆ ವಿರೋಧವಿದ್ದರು. ಸಭೆ ನಡೆಯುವಾಗ ಸ್ಪೀಕರರಲ್ಲೊರ್ವನು ಸಭಾ ರಂಗಕ್ಕೆ ಮೊಟ್ಟೆಯೊಂದನ್ನು ಬಿಸಾಡಿ ಸ್ವಲ್ಪ ಗಲಾಟೆಯಾಯಿತು.

ಇದೇ ತಾ. 1ರಲ್ಲು ರಜೆಯಮೇಲೆ ಹೋ ಗಿದ್ದ ಮದ್ರಾಸು ಗವರ್ನರರಾದ ಲೋರ್ಡ್ ಅರ್ಸ್ಕಿನರು ಮದ್ರಾಸಿಗೆ ಬಂದು ಅಧಿಕಾರ ವಹಿಸಿರುವರು.

ಪಂಡಿತ ಜವಾಹಿರಲಾಲ ನೆಹರುಗಳು ಇದೇ ತಾ. 2ರಲ್ಲು ವಾರ್ಧಕ್ಕೆ ಹೋಗಿ ಗಾಂಧಿಯವರೊಡನೆ ಮಾತಾಡಿ ಅಲ್ಲಿಂದ ಮದ್ರಾಸಿಗೆ ಹೋಗಲಿರುವರು.

ಕಲ್ಕತ್ತದ ಕಾಳಿಘಾಟಿನಲ್ಲಿ ನಡೆಯುವ ಪ್ರಾಣಿಬಲಿ ನಿಷೇಧಾರ್ಥವಾಗಿ ಪಂಡಿತ ಶರ್ಮರು ಎರಡನೇ ಸಲ ಆಮರಣ ಉಪ ವಾಸ ಕೈಕೊಂಡೀಗ ಸಪ್ಟಂಬರ ತಾ. 29ಕ್ಕೆ 31 ದಿನಗಳಾದುವು. ಅವರು ಕಂಟಕಾವಸ್ಥೆ ಯಲ್ಲಿ ಮಲಗಿಕೊಂಡಿರುವರು ಅವರ ದೇಹ ತೂಕವು 35 ರಾತ್ತಲು ಕಡಿಮೆಯಾಗಿರುವುದು

ತಿರುಪತಿಬೆಟ್ಟದ ಬುಡದಿಂದ ದೇವಸ್ಥಾ ನಕ್ಕೆಹೋಗಲು ವಿಮಾನ ಸರ್ವಿಸನ್ನಿಡುವ ಯೋಚನೆ ನಡೆದಿದೆ.

ಇಂಪೀರಿಯಲ್ ವಿಮಾನ ಕಂಪೆನಿಯ ವಿಮಾನವೊಂದು ಸಪ್ಟಂಬರ ತಾ. 28ರಲ್ಲು ಕರಾಚಿಯಿಂದ ಹೊರಟು ಡಿಲ್ಲಿಗೆ ಹೋಗಿ ಪೆಟ್ರೋಲು ತುಂಬಿಸುವಾಗ ಬೆಂಕಿ ಹಚ್ಚಿ ಸುಟ್ಟುಹೋಗಿರುವುದು. ಪ್ರಯಾಣಿಕರಿ ಗೇನೂ ಅಪಾಯವಾಗಿರುವುದಿಲ್ಲ. ಆದರೆ ಟಪ್ಪಾಲು ಸ್ವಲ್ಪ ಸುಟ್ಟುಹೋಗಿದೆ.

ಬಂಗಾಳದಲ್ಲಿ ಇತ್ತಲಾಗಿ ಕ್ರಾಂತಿಕಾರಕ ಅತ್ಯಾಚಾರವೇನೂ ನಡೆಯದೆ ಪರಿಸ್ಥಿತಿಯು ಶಾಂತವಾಗಿರುವುದಾದರೂ, ಇನ್ನು ಎಚ್ಚರ ದಲ್ಲಿಯೇ ಇರಬೇಕಾದುದರಿಂದ, ಈಗ ಬಂ ಧನದಲ್ಲಿರುವ ಡಿಟಿನ್ಯೂ ಕೈದಿಗಳನ್ನು ಬಿಟ್ಟು ಬಿಡಲಾಗುವುದಿಲ್ಲೆಂದೂ, ದಬ್ಬಾಳಿಕೆ ಕಾ ನೂನುಗಳನ್ನು ತೆಗೆದು ಹಾಕಲಾಗುವುದಿ ಲ್ಲೆಂದೂ ಹೋಮ್ ಮೆಂಬರರು ಎಸೆಂಬ್ಲಿ ಯಲ್ಲಿ ತಿಳಿಸಿರುವರು.

ನೆರೆಹಾವಳಿ ಸಹಾಯ

ಹಿಂದೀ ಜನತೆಯ ಬರಗಾಲ ನಿವಾರಣಾ ಫಂಡಿನ ಕಮಿಟಿಯವರು ಇದೇ ತಾ 3ರಲ್ಲು ಸಿಮ್ಲಾದಲ್ಲಿ ಸಭೆಸೇರಿ ಸಂಯುಕ್ತ ಪ್ರಾಂತ್ಯದ ನೆರೆಹಾವಳಿ ಪೀಡಿತರಿಗೆ ರೂ. 25,000 ಮತ್ತು ಬಿಹಾರಿಗೆ ರೂ 15,000 ಸಹಾಯ ಮಾಡಿರುವರು.

ವಿಮಾನ ಧಾಳಿಯ ಸಂದರ್ಭದಲ್ಲಿ ಹೇಗೆ ರಕ್ಷಣೆಮಾಡಿಕೊಳ್ಳಬೇಕೆಂಬುದನ್ನು ಸಿಂಧ ದೇಶದ ಸೇನಾಧಿಕಾರಿಗಳು ಅಲ್ಲಿಯ ಪ್ರಜೆ ಗಳಿಗೆ ಕಲಿಸುವ ಏರ್ಪಾಡು ನಡಿಸುತ್ತಿರು ವರು.

ಪಂಡಿತ ಮಾಲವೀಯರು

ಹಿಂದಿನ ಕಾಯಿಲೆಯಿಂದಲೂ ಪೀಡಿತ ರಾಗಿರುವುದಿಲ್ಲೆಂಬುದು ಸಂತೋಷಕರ. ವಿಶ್ರಾಂತಿತೆಗೆಟ್ಟು ಕೆಲಸಮಾಡಿದುದರಿಂದ ಅವ ರಿಗೆ ಅಶಕ್ತಿಯು ತೊಡಗಿರುವುದಷ್ಟೆ. ಅವರು ಇನ್ನೊಂದು ತಿಂಗಳವರೆಗೆ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟ ರರು ಸೂಚಿಸಿರುವರು.

ಚಿನ್ನದ ರಫ್ತು

ಇದೇ ತಾ. 3ಕ್ಕೆ ಅಂತ್ಯವಾಗುವ ವಾರ ದಲ್ಲಿ ರೂ. 2,517,744ರಷ್ಟರ ಚಿನ್ನವು ಮುಂಬಾಯಿಯಿಂದ ರಫ್ತಾಗಿದೆ ಇಂಗ್ಲೆಂ ಡು ಚಿನ್ನದ ಪ್ರಮಾಣ ತೆಗೆದು ಹಾಕಿ ದಂದಿನಿಂದ ರೂ 2,820,391,238 ರಷ್ಟರ ಚಿನ್ನವು ರಫ್ತಾಗಿರುವುದು.

ಸನಾತನ ಧರ್ಮ

ಹರಿಜನರು ದೇವಸ್ಥಾನಕ್ಕೆ ಪ್ರವೇಶಿಸುವುದಕ್ಕೆ, ವಿಧವಾವಿವಾಹಕ್ಕೆ, ಪ್ರೌಢವಿವಾಹಕ್ಕೆ, ಮಠಸಂಸ್ಥೆಗಳ ಸುಧಾರಣೆಗೆ ವಿರೋಧವಾಗಿ ಸಾಧಿಸುವುದೇ ಸನಾತನಿಯ ಮುಖ್ಯ ಲಕ್ಷಣ !

ಕಳೆದ ಐದಾರು ವರುಷಗಳಿಂದ ಸನಾತನ ಧರ್ಮವೇನೆಂದು ನಮ್ಮ ಪತ್ರಿಕೆಗಳಲ್ಲಿ ನಾನು ಎಡೆಬಿಡದೆ ಸಾರುತ್ತಿದ್ದರೂ ಇನ್ನೂ ನಮ್ಮವರಿಗೆ ಅದರ ನಿಜವಾದ ಅರ್ಥವು ತಿಳಿಯಲಿಲ್ಲವೆಂದರೆ ನಾನು ಏನೆನ್ನಬೇಕು? ಉತ್ತಮೋತ್ತಮ ಸನಾತನಿ ಎಂದು ಹೆಸರು ಹಾಕಿಕೊಂಡು ಒಬ್ಬರು ನವಯುಗದ ತಾ. ೨೪-೯-೩೬ರ ಸಂಚಿಕೆಯಲ್ಲಿ ಬರೆದ "ಇದಕ್ಕೊಂದು ಉಪಾಯ ಹೇಳಿ" ಎಂಬ ಲೇಖನದಲ್ಲಿ ಕಾಫಿ ಹೋಟೆಲಿನವನು ಸನಾತನಿತ್ವವನ್ನು ಉಳಿಸಿಕೊಂಡು ಹೇಗೆ ಹೋಟೆಲು ನಡೆಯಿಸ ಬಹುದು? ಸನಾತನಿತ್ವವನ್ನು ಕಳೆದುಕೊಳ್ಳದೆ ನಾವು ಹೇಗೆ ಹೋಟೆಲುಗಳಲ್ಲಿ ಕಾಫಿ ಕುಡಿಯಬಹುದು? ಎಂದು ಪ್ರಶ್ನಿಸಿದ್ದಾರೆ. ಇವರ ಲೇಖನವು ನಮ್ಮ ಸನಾತನಿಗಳಿಗೆ ಸಂಬಂಧಿಸಿದ್ದು. ಆದುದರಿಂದ ನಾನು ಅದನ್ನು ಆಮೂಲಾಗ್ರವಾಗಿ ಓದಿರುತ್ತೇನೆ. ಸುಧಾರಕರೆನಿಸಿಕೊಳ್ಳುವವರಲ್ಲಿ ಸನಾತನ ಧರ್ಮದ ವಿಚಾರವಾಗಿ ತಪ್ಪು ಅಭಿಪ್ರಾಯಗಳು ಇರುವುದು ಸಹಜವಾದರೂ ಸನಾತನಿಗಳೆನಿಸಿಕೊಳ್ಳುವವರೂ ಈ ತರದ ಗ್ರಹಿಕೆಗಳನ್ನು ಇಟ್ಟುಕೊಂಡಿರುವುದು ನೋಡುವಾಗ ನಾವು ಈ ವರೆಗೆ ಸನಾತನ ಧರ್ಮದ ವಿಚಾರವಾಗಿ ಮಾಡಿದ ಪ್ರಚಾರವು ಸಾಲದೆಂದೇ ನನಗೆಣಿಸುತ್ತಿದೆ. ಇದಕ್ಕಾಗಿ ಸನಾತನ ಧರ್ಮದ ಸಂಪೂರ್ಣ ತತ್ವಗಳನ್ನು ಬೋಧಿಸುವ ಒಂದು ದೊಡ್ಡ ಗ್ರಂಥವನ್ನೆ ಬರೆದು ಸದ್ಯದಲ್ಲಿ ಪ್ರಕಟಿಸಬೇಕೆಂದಿದ್ದೇನೆ. ಆ ವರೆಗೆ ನನ್ನ ಅಭಿಪ್ರಾಯಗಳನ್ನು ಪತ್ರಿಕೆಗಳಲ್ಲಾದರೂ ಪ್ರಕಟಿಸುವುದು ಒಳ್ಳೆಯದೆಂದು ಯೋಚಿಸಿ ಈ ಲೇಖನವನ್ನು ಬರೆದಿರುತ್ತೇನೆ. ಉತ್ತಮೋತ್ತಮ ಸನಾತನಿಗಳ ಲೇಖನವನ್ನು ಓದುವಾಗ ಇವರು ನನ್ನಂತೆ ನಿಜವಾದ ಸನಾತನಿಯೋ ಅಥವಾ ಹೆಸರಿಗೆ ಮಾತ್ರ ಸನಾತನಿಯೆಂದೆನಿಸಿಕೊಂಡಿರುವ ಒಬ್ಬ ಸುಧಾರಕರೋ ಎಂದು ನನಗೆ ಸಂಶಯವಾಗುತ್ತಿದೆ. ಅದು ಹೇಗಿದ್ದರೂ ಇವರು ನಮ್ಮ ಸನಾತನ ಧರ್ಮದ ತಲೆಬುಡ ತಿಳಿದವರಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆನು. ಏಕೆಂದರೆ ಕಳೆದ ನಲ್ವತ್ತು ಐವ್ವತ್ತು ವರುಷಗಳಿಂದ ಯಾವ ಪದ್ಧತಿಯು ನಮ್ಮಲ್ಲಿ ನಡೆದು ಬಂದಿದೆಯೋ ಅದು ಸನಾತನ ಧರ್ಮಕ್ಕೆ ವಿರೋಧವಲ್ಲವೆಂದು ನಾನು ಈ ಮೊದಲೇ ಅನೇಕ ಸಾರಿ ಹೇಳಿರುತ್ತೇನೆ. ಅರ್ಧ ಶತಮಾನದಿಂದೀಚೆ ಕಾಫಿ ಊಟದ ಹೋಟೆಲಿನ ವ್ಯಾಪಾರವನ್ನು ಬ್ರಾಹ್ಮಣರು ಸಾಂಗವಾಗಿ ನಡಿಸುತ್ತಿರುವುದರಿಂದ ಹೋಟೆಲು ಇಡುವುದು ನಮ್ಮ ಸನಾತನ ಧರ್ಮಕ್ಕೆ ವಿರೋಧವಲ್ಲವೆಂದು ತಲೆ ಇದ್ದವರಿಗೆ ತಿಳಿದೀತು. ಇದಲ್ಲದೆ ಒಬ್ಬನು ಸನಾತನಿಯೋ ಸುಧಾರಕನೋ ಎಂಬುದನ್ನು ಅವನ ಜೀವನ ಕ್ರಮದಿಂದ ಅಥವಾ ನಡತೆಯಿಂದ ತಿಳಿದುಕೊಳ್ಳುವುದಲ್ಲ; ಬಾಹ್ಯದಲ್ಲಿ ಅವನು ಆಡುವ ಮಾತುಗಳಿಂದಲದನ್ನು ತಿಳಿದುಕೊಳ್ಳತಕ್ಕದೆಂಬುದನ್ನು ನಾನೀಗ ಪ್ರಥಮತಃ ಹೇಳುವುದಲ್ಲ. ನಮ್ಮ ಉತ್ತಮೋತ್ತಮ ಸನಾತನಿಗಳು, ಬ್ರಾಹ್ಮಣ ಹೋಟೆಲುಗಾರರು ಎಲ್ಲಾ ಜಾತಿಯವರ ಎಂಜಲು ಕಪ್ ಪ್ಲೇಟುಗಳನ್ನು ತೊಳೆಯುತ್ತಾರೆ; ಹೊಗೆಸೊಪ್ಪಿನ ವೀಳ್ಯದೆಲೆ ಜಗಿಯುತ್ತಾ ಕಾಫಿ ತಿಂಡಿ ಕೊಡುತ್ತಾರೆ. ಯಾವ ಜಾತಿಯವನು ತಯಾರಿಸಿದ ಬೀಡವನ್ನಾದರೂ ಗಿರಾಕಿಗಳಿಗೆ ದಾನ ಮಾಡುತ್ತಾರೆ ಎಂದು ಬರೆದುದನ್ನು ನೋಡುವಾಗ ಇವುಗಳೆಲ್ಲಾ ನಮ್ಮ ಸನಾತನ ಧರ್ಮಕ್ಕೆ ವಿರೋಧವಾದ ಕೆಲಸಗಳೆಂದು ಅವರು ತಿಳಿದುಕೊಂಡಂತೆ ಕಾಣುತ್ತದೆ. ಸಂಪಾದನೆಯ ಕೆಲಸದಲ್ಲಿ ಕೈಹಾಕಿದ ಯಾವನಾದರೂ ಜಾತಿ ನೀತಿ ಎಂದು ಕುಳಿತರೆ, ಸಾಧ್ಯವಿಲ್ಲವೆಂದು ಸನಾತನಿಗಳಿಗೂ ಗೊತ್ತಿದೆ. ಆದುದರಿಂದ ಕಾಫಿ ಹೋಟೆಲಿನ ಧರ್ಮಕ್ಕನುಸಾರವಾಗಿ ಜಾತಿ ನೀತಿಯನ್ನೆಣಿಸದೆ ಹೋಟೆಲಿಗೆ ಬಂದವನ ಎಂಜಲು ತೆಗಿಯ ಬೇಕಾಗುತ್ತದೆ. ನಾನು ಮೊದಲೇ ಅನೇಕ ಸಾರಿ ಹೇಳಿದಂತೆ ಒಬ್ಬನ ಕಾರ್ಯದಲ್ಲಿ ಅವನ ಸನಾತನತ್ವ ಇರುವುದಲ್ಲ. ಹರಿಜನರು ದೇವಸ್ಥಾನಕ್ಕೆ ಪ್ರವೇಶಿಸುವುದಕ್ಕೆ, ವಿಧವಾ ವಿವಾಹಕ್ಕೆ, ಪ್ರೌಢ ವಿವಾಹಕ್ಕೆ, ಮಠ ಸಂಸ್ಥೆಗಳ ಸುಧಾರಣೆಗೆ ವಿರೋಧವಾಗಿ ಸಾಧಿಸುವುದೇ ಸನಾತನಿಯ ಮುಖ್ಯ ಲಕ್ಷಣವಾಗಿರುವುದರಿಂದ ಕಾಫಿ ಹೋಟೆಲಿನ ವ್ಯಾಪಾರಕ್ಕೂ ಸನಾತನತ್ವಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ಹರಿಜನರ 'ಹೊರತು' 'ಹರಿಜನರ ಹೊರತು' ಎಂದು ನಮ್ಮ ಉತ್ತಮೋತ್ತಮ ಸನಾತನಿಗಳು ಅಲ್ಲಲ್ಲಿ ಹಂಗಿಸುತ್ತಿದ್ದಾರೆ. ನಾನು ಹೇಳುವುದಾದರೆ ಸ್ವಲ್ಪ ಸಮಯದೊಳಗೆ ಹರಿಜನರೂ ನಮ್ಮ ಹೊಟೇಲುಗಳಿಗೆ ಬರಬಹುದು ಎಂದು ನಮಗೆ ಗೊತ್ತಿದೆ. ಅಂತಹ ಸಂದರ್ಭ ಬಂದರೂ ನಾವು ಹಿಂಜರಿಯುವವರಲ್ಲ. ಹರಿಜನರು ದೇವಸ್ಥಾನಕ್ಕೆ ಪ್ರವೇಶಿಸ ಕೂಡದೆಂದೇ ನಮ್ಮ ಚಳವಳ ಹೊರತು ಕಾಫಿ ಹೋಟೇಲುಗಳಿಗೆ ಅವರಿಗೆ ಪ್ರವೇಶ ದೊರೆಯಕೂಡದೆಂದು ನಮಗೆ ಹಟವಿಲ್ಲ. ಆದುದರಿಂದವರ ಈ ರೀತಿಯ ವ್ಯಂಗ್ಯದ ಮಾತುಗಳಿಂದ ಪ್ರಯೋಜನವಿಲ್ಲ. 'ಉತ್ತಮೋತ್ತಮ ಸನಾತನಿಗಳು ಇನ್ನೊಂದು ಕಡೆಯಲ್ಲಿ, ಕೋಟು ಸನಾತನಿಗಳಿಗೆ,ಶರ್ಟು ಸನಾತನಿಗಳಿಗೆ ಮತ್ತು ಶರ್ಟು ರಹಿತ ಸನಾತನಿಗಳಿಗೆ ಎಷ್ಟು ಸುಲಭವಲ್ಲಿ ಸಹಪಂಕ್ತಿಯಾಯಿತು ಎಂದು ತಮಾಷೆಯಿಂದ ಬರೆದು ಬಿಟ್ಟಿದ್ದಾರೆ. ಬ್ರಾಹ್ಮಣರು ಇತರರ ಒಟ್ಟಿಗೆ ಒಂದೇ ಪಂಕ್ತಿಯಲ್ಲಿ ಕುಳಿತು ಅನ್ನ ಊಟ ಮಾಡಬಾರದೆಂಬುದು ಮಾತ್ರ ಸನಾತನ ಧರ್ಮದ ತತ್ವವಲ್ಲದೆ, ಅನ್ನ ವಿನಹ ಇತರ ಯಾವ ಪದಾರ್ಥ ತಿನ್ನುವಾಗಲೂ ಕುಡಿಯುವಾಗಲೂ ಈ ನಿರ್ಬಂಧವಿಲ್ಲ. ಆದುದರಿಂದ ಕಾಫಿ ಹೋಟೇಲುಗಳಲ್ಲಿ ಈ ಸಹಪಂಕ್ತಿ ದೋಷವೆಂದಿರುವುದಿಲ್ಲ. ಯಾರೊಂದಿಗೆ ಕುಳಿತು ಕಾಫಿ ಹೋಟೇಲುಗಳಲ್ಲಿ ತಿಂದರೂ ಕುಡಿದರೂ ನಮ್ಮ ಸನಾತನತ್ವಕ್ಕೆ ಎಳ್ಳಷ್ಟೂ ತೊಂದರೆಯಿಲ್ಲ.

ನಮ್ಮ ಸನಾತನಿಗಳಲ್ಲಿ ಬಂಧುತ್ವವಿಲ್ಲವೆಂದು ಕಳೆದ ಸಂಚಿಕೆಯಲ್ಲಿ ಈ ಮೊದಲೇ ಬರೆದಿರುತ್ತೇನೆ. ಅವರಲ್ಲಿ ಕೋಟು ಸನಾತನಿ ಶರ್ಟು ಸನಾತನಿ ಶರ್ಟುರಹಿತ ಸನಾತನಿಗಳೆಂಬ ಭೇದಬುದ್ಧಿಯು ಯಥೇಷ್ಟವಿದೆ ಎಂದು ನನಗೆ ಗೊತ್ತಿದೆ. ಇದಲ್ಲದೆ ಜನಿವಾರ ಇರುವ ಸನಾತನಿ ಜನಿವಾರ ಇಲ್ಲದ ಸನಾತನಿ ಎಂಬ ಭೇದವೂ ಬೇಕಾವಷ್ಟು ಇದೆ. ಈ ಭೇದಬುದ್ಧಿಯನ್ನು ಹೋಗಲಾಡಿಸಿ ಸುಧಾರಕರಲ್ಲಿರುವಂತೆಯೇ ನಮ್ಮಲ್ಲಿಯೂ ಬಂಧುಪ್ರೇಮವಿರಬೇಕೆಂದು ನನ್ನ ಅಭಿಪ್ರಾಯ. ಹರವಿಲಾಸಶಾರ್ದರು ಮಕ್ಕಳ ಮದುವೆಯನ್ನು ನಿರ್ಬಂಧಿಸಬೇಕೆಂಬ ಬಿಲನ್ನು ಎಸೆಂಬ್ಲಿಯಲ್ಲಿ ತಂದಾಗಲದನ್ನು ಎದುರಿಸಲಿಕ್ಕೆ ಹಿಂದುಗಳೂ ಮುಸಲ್ಮಾನರೂ ಹೇಗೆ ಒಂದಾಗಿ ನಿಂತರು ಎಂದು ನೆನಪಿಲ್ಲವೇ? ಆ ಆಕ್ಟನ್ನು ಖಂಡಿಸುವದಕ್ಕೋಸ್ಕರ ಕಲ್ಕತ್ತೆಯಲ್ಲಿ ನಡೆದ ಮಹಾ ಮೆರವಣಿಗೆಯಲ್ಲಿ ಹಿಂದೂ ಸ್ವಾಮಿಗಳೂ ಮುಹಮ್ಮದೀಯ ಮೌಲ್ವಿಗಳೂ ಒಟ್ಟಿಗೆ ಸೇರಲಿಲ್ಲವೇ? ಎಂಡೌಮೆಂಟು ಆಕ್ಟಿಗೆ ವಿರೋಧವಾಗಿ ಬ್ರಾಹ್ಮಣರು ಅಬ್ರಾಹ್ಮಣರೆಂಬ ಭೇದವಿಲ್ಲದೆ ಎಲ್ಲಾ ಸನಾತನಿಗಳೂ ಕೆಲಸ ಮಾಡಲಿಲ್ಲವೇ? ಆದುದರಿಂದ ಸನಾತನಿಗಳೆಲ್ಲರೂ ಐಕ್ಯದಿಂದ ಕೆಲಸ ಮಾಡಿದರೆ ಮಾತ್ರ ನಮ್ಮ ಸನಾತನ ಧರ್ಮವು ಉಳಿದೀತಲ್ಲದೆ, ಬೇರೆ ಉಪಾಯವಿಲ್ಲ.

ನಮ್ಮ ದೇಶದಲ್ಲಿ ನಮ್ಮ ಸನಾತನ ಧರ್ಮವನ್ನೇ ಮೂಲಚ್ಛೇದನ ಮಾಡಲೆತ್ನಿಸುವ ಅನೇಕ ಬಿಲ್ಲುಗಳು ಪ್ರಕೃತ ಎಸೆಂಬ್ಲಿಯಲ್ಲಿವೆ. ಅಂತರ್ಜಾತೀಯ ವಿವಾಹಗಳಾಗಬೇಕು, ಅಸ್ಪೃಶ್ಯರಿಗೆ ಎಲ್ಲಾ ಸಾರ್ವಜನಿಕ ಸಂಸ್ಥೆಗಳಲ್ಲಿ ಪ್ರವೇಶ ದೊರೆಯಬೇಕು, ಸ್ತ್ರೀಯರಿಗೆ ಪುರುಷರಂತೆಯೇ ಎಲ್ಲಾ ಹಕ್ಕುಗಳೂ ಇರಬೇಕು, ಬಾಲ್ಯ ವಿವಾಹವನ್ನು ಇಂಜಕ್ಷನ್ ಮೂಲಕ ನಿಲ್ಲಿಸುವರೆ ಕೋರ್ಟುಗಳಿಗೆ ಹಕ್ಕು ಇರಬೇಕು. ಎಂಬೀ ಮೊದಲಾದ ಅನಾಹುತದ ಬಿಲ್ಲುಗಳು ಈಗ ಚರ್ಚೆಯಲ್ಲಿವೆ. ನಾವು ಹೀಗೆಯೇ ತಣ್ಣಗೆ ಕುಳಿತರೆ ಅವು ಸದ್ಯದಲ್ಲಿಯೇ ಕಾನೂನಾಗುವುದರಲ್ಲಿ ಸಂದೇಹವಿಲ್ಲ. ಅವನ್ನೆದುರಿಸುವುದಕ್ಕಾಗಿ ನಾವು ಕೆಲವು ಭಜನೆಗಳನ್ನಾದರೂ ಏರ್ಪಡಿಸಬೇಡವೇ? ಈ ಬಿಲ್ಲುಗಳೆಲ್ಲವೂ ತಮ್ಮಷ್ಟಕ್ಕೆ ಮುರಿದು ಹೋಗುವಂತೆ ಒಂದು ರಾಶಿಪೂಜೆಯನ್ನಾದರೂ ನಾವು ಹೇಳಿಕೊಳ್ಳಬಾರದೇ? ಈ ಮೊದಲು ಭಜನೆಯಿಂದ ದೇವಸ್ಥಾನ ಪ್ರವೇಶದ ಬಿಲ್ಲನ್ನೂ ರಾಶಿಪೂಜೆಯಿಂದ ಮಠಗಳ ಬಿಲ್ಲನ್ನೂ ನಾವು ಮುರಿದು ಬಿಟ್ಟಿಸಲಿಲ್ಲವೇ?

ನಮ್ಮ ಸನಾತನ ಧರ್ಮಕ್ಕೆ ಇಂತಹ ಮಹತ್ತ್ವದ ಅನಾಹುತಗಳು ಬಂದಿರುವಾಗ ಅವೆಲ್ಲವನ್ನೂ ಮರೆತು ಬಿಟ್ಟು ಕೋಟು ಸನಾತನಿಯು ಸನಾತನಿ ಬೆಂಚಿನಲ್ಲಿ ಕುಳಿತರೆ ಶರ್ಟು ಸನಾತನಿಯು ಎಲ್ಲಿ ಕುಳಿತುಕೊಳ್ಳಬೇಕು? ಶರ್ಟುರಹಿತ ಸನಾತನಿಯು ಎಲ್ಲಿ ಕುಳಿತುಕೊಳ್ಳಬೇಕು? ಎಂಬೀ ಮೊದಲಾದ ಸಣ್ಣ ಸಣ್ಣ ವಿಚಾರವನ್ನು ನಾವು ಚರ್ಚಿಸುತ್ತಿರುವುದು ನಮ್ಮ ಧರ್ಮದ ದೌರ್ಭಾಗ್ಯವೆಂದೇ ಹೇಳಬೇಕು. ಈ ತೆರದ ವಿಚಾರಗಳನ್ನು ಮೂಲೆಗೊತ್ತಿ ನಾವು ಸನಾತನಿಗಳೆಲ್ಲರೂ ಒಟ್ಟಾಗಿ ನಮ್ಮ ಸನಾತನ ಧರ್ಮವು ಆವಷ್ಟು ಕಾಲವಾದರೂ ಉಳಿಯುವಂತೆ ನಾವು ಮಾಡಲೇಬೇಕು. ಸಾಧ್ಯವಿದ್ದರೆ ಇದಕ್ಕೊಂದು ಉಪಾಯ ಹೇಳಿ.

ಇತಿ ನಿಜವಾದ **ಸನಾತನಿ.**

ಸಮಾಜದ ಅಸೂರಿ ಕೃತ್ಯಗಳಿಗೆ ಹೆದರಿ ಬಾಯಿಬಿಡುವಿರೇಕೆ? ಅದನ್ನು ನಿವಾರಿಸಲು ಉಪಾಯವೇನು?

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ತಮ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ ೧೬ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು-ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ.

ಸ್ತ್ರೀಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ. ಪ್ರತಿ ತಿಂಗಳ ಮೊದಲನೆಯ ತಾರೀಕಿಗೆ ತಪ್ಪದೆ ಹೊರಡುವ ೬೦ ಪುಟಗಳ ಮಾಸಪತ್ರಿಕೆ.

ಬೇಗನೇ ಚಂದಾದಾರರಾಗಿರಿ.

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ

ಬೆಲೆ ಸುಲಭ! ಒಂದೇ ದರ!! ಖಾತ್ರಿಮಾಲು!!!

ಎಲ್ಲಿ ?

ಎಸ್. ಅನಂತ್ರಾಮಾಚಾರ್

ಸ್ಟೇಶನರಿ, ಕಟ್ಲೇರಿ ಮತ್ತು ಶಾಲೋಪಕರಣಗಳ ವ್ಯಾಪಾರಿ.

ತಾಲೂಕು ಕಚೇರಿಬಳಿ, ಉಡುಪಿ.

ಸರ್ಕಾರು

ಶಾಲೆಗಳ ಮುಖ್ಯ ಉಪಾಧ್ಯಾಯರಿಗೆ:-

ನಿಮ್ಮ ಶಾಲೆ ಇರುವ ಗ್ರಾಮದಲ್ಲಿರುವ ಶಾಲೆ ಪ್ರಾಯದ ಮಕ್ಕಳ ಖಾನೇಶುಮಾರಿ ಲೆಖ್ಖವನ್ನು ಇದೇ ಬರುವ ನವಂಬರ ೧೫-ಗಳನೇ ತಾರೀಕುಗಳಲ್ಲಿ ತೆಗೆಯಬೇಕು. ಉಪಾಧ್ಯಾಯರು ಮನೆಮನೆಗೆ ಸಂದರ್ಶನೆ ಮಾಡಿ ಸದ್ರಿ ಲೆಖ್ಖವನ್ನು ತಪ್ಪಿಲ್ಲದೆ ಬಹಳ ಜಾಗರೂಕತೆಯಿಂದ ತೆಗೆಯತಕ್ಕದ್ದು. ಈ ಕುರಿತು ಈ ಕೆಳಗಣ ಸೂಚನೆಯನ್ನು ಕೊಟ್ಟಿರುತ್ತದೆ.

1) ಒಂದು ಗ್ರಾಮದಲ್ಲಿ ಒಂದೇ ಶಾಲೆಯಿದ್ದರೆ ಆ ಇಡೀ ಗ್ರಾಮದ ಖಾನೇಶುಮಾರಿಯನ್ನು ಆ ಶಾಲೆಯ ಉಪಾಧ್ಯಾಯರೇ ತೆಗೆಯತಕ್ಕದ್ದು. 2) ಒಂದು ಗ್ರಾಮದಲ್ಲಿ ಎರಡು ಅಥವಾ ಹೆಚ್ಚಿಗೆ ಶಾಲೆಗಳಿದ್ದರೆ ಆ ಗ್ರಾಮದ ಎಲ್ಲಾ ಶಾಲೆಗಳ ಉಪಾಧ್ಯಾಯರು ಒಟ್ಟು ಕೂಡಿ, ಒಂದು ಮೀಟಿಂಗು ಮಾಡಿ, ಆ ಗ್ರಾಮದ ಮನೆಗಳನ್ನು ಅವರೊಳಗೆ ಹಂಚಿಕೊಳ್ಳಬೇಕು ಹೀಗೆ ಹಂಚಿಕೊಳ್ಳುವಾಗ ಯಾವದಾದರೂ ಒಂದು ಮನೆಯೂ ಬಿಟ್ಟುಹೋಗದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು 3) ಪ್ರತಿಯೊಂದು ಶಾಲೆಯವರೂ ಅವರ ಪಾಲಿಗೆ ಬಂದ ಮನೆಗಳ ಖಾನೇಶುಮಾರಿ ತೆಗೆದ ನಂತರ ಇಡೀ ಗ್ರಾಮದ ಖಾನೇಶುಮಾರಿ ಲೆಖ್ಖವನ್ನು ತಯಾರಿಸಿ ಪ್ರತಿಯೊಂದು ಶಾಲೆಯಲ್ಲಿ ಇಡತಕ್ಕದ್ದು. ಈ ಜುಮ್ಲಾ ಪಟ್ಟಿಯ ಒಂದು ನಕಲನ್ನು ನವಂಬರ ಆಖೈರಿಯೊಳಗೆ ನಮ್ಮ ಆಫೀಸಿಗೆ ತಲ್ಪುವಂತೆ ರವಾನಿಸತಕ್ಕದ್ದು. 4) ಇಡೀ ಗ್ರಾಮದಲ್ಲಿರುವ ಶಾಲೆಗೆ ಹೋಗಲು ಪ್ರಾಯಕ್ಕೆ ಬಂದ ಮತ್ತು ಶಾಲೆಗೆ ಹೋಗುವ ಮಕ್ಕಳ ಜುಮ್ಲಾ ಸಂಖ್ಯೆಯನ್ನು ಸದರಿ ರಿಜಿಸ್ಟ್ರಿಯ ಕೊನೆಗೆ ಈ ಕೆಳಗೆ ತೋರಿಸಿದಂತೆ ಜಾತಿವಾರು ಕಾಣಿಸತಕ್ಕದ್ದು.

a) ಶಾಲೆ ಪ್ರಾಯದ ಮಕ್ಕಳ ಜುಮ್ಲಾ ಸಂಖ್ಯೆ —೧ ಹಿಂದುಗಳು (ಆದಿದ್ರಾವಿಡರು ಇತರ ಹಿಂದುಗಳು) ಗಂಡು ಹೆಣ್ಣು. ೨ ಮಹಮ್ಮದೀಯರು, ೩ ಕ್ರೈಸ್ತರು, ೪ ಇತರರು (ಮೇಲೆ ಕಾಣಿಸಿದ ಜಾತಿಗಳಲ್ಲಿ ಸೇರದವರು).

b) ಶಾಲೆಗೆ ಹೋಗುವ ಮಕ್ಕಳ ಜುಮ್ಲಾ ಸಂಖ್ಯೆ—೧ ಹಿಂದುಗಳು (ಆದಿದ್ರಾವಿಡರು, ಇತರ ಹಿಂದುಗಳು) ಗಂಡು, ಹೆಣ್ಣು, ೨ ಮಹಮ್ಮದೀಯರು, ೩ ಕ್ರೈಸ್ತರು, ೪ ಇತರರು (ಮೇಲೆ ಕಾಣಿಸಿದ ಜಾತಿಗಳಲ್ಲಿ ಸೇರದವರು).

5) ನಿಮ್ಮ ಗ್ರಾಮದಲ್ಲಿರುವ ಶಾಲೆಗಳ ಪಟ್ಟಿಯನ್ನು ತಯಾರಿಸಿ ... ರಿಗೆ ಕಳುಹಿಸಿಯದೆ ಗ್ರಾಮದ ಶಾಲೆಗಳ ಉಪಾಧ್ಯಾಯರನ್ನು ಕರೆದು ಒಂದು ಸಭೆ ಕೂಡಿಸಿ ಈ ಕೆಲಸವನ್ನು ಹಂಚಿಹಾಕಬೇಕಾಗಿ ನಾವು ಅವರನ್ನು ಕೇಳಿಕೊಂಡಿದ್ದೇವೆ 6) ಪ್ರತಿಶಾಲೆಯಲ್ಲಿ ಆ ಗ್ರಾಮದ ನಕ್ಷೆಯನ್ನು ತಯಾರಿಸಿ ಇಡತಕ್ಕದ್ದು. 7) ಗ್ರಾಮದಲ್ಲಿರುವ ಮನೆಗಳ ಮತ್ತು ಯಜಮಾನರ ಪಟ್ಟಿಯನ್ನು ಗ್ರಾಮದ ಶ್ಯಾನುಭೋಗರಿಂದ ಪಡೆಯಬಹುದು. 8) ಹೊಸ ಮನೆಗಳು ಇದ್ದರೆ ಅವುಗಳಿಗೆ ಕ್ರಮವಾಗಿ ಹೊಸ ನಂಬ್ರ ಕೊಡಬೇಕು. ಉದಾ:—60 ನಂಬ್ರ ಇದ್ದ ಹಳೆಮನೆಯ ಹತ್ತಿರ ಎರಡು ಹೊಸ ಮನೆಗಳಿದ್ದರೆ ಆ ಹೊಸಮನೆಗಳಿಗೆ 60 (a) 60 (b) ನಂಬ್ರ ಕೊಡಬಹುದು 10) ಕ್ರಿಶ್ಚಿಯನ್, ಲೇಬರ್ ಮತ್ತು ಮಹಮ್ಮದೀಯ ಶಾಲೆಗಳ ಉಪಾಧ್ಯಾಯರು ಅವರ ಮೇಲಾಧಿಕಾರರೊಡನೆ ವಿಚಾರಿಸಿ ಅವರ ಸೂಚನೆಗಳ ಪ್ರಕಾರ ಅವರ ಶಾಲೆಗೆ ಸಂಬಂಧಪಟ್ಟ ಮಕ್ಕಳ ಖಾನೇಶುಮಾರಿ ತೆಗೆಯತಕ್ಕದ್ದು. 11) ಗ್ರಾಮದ ಶಾಲೆಗಳನ್ನು ಹಂಚುವ ಕ್ರಮ ಉದಾ:—ಮೂಡುತೋನ್ಸೆ ಗ್ರಾಮದಲ್ಲಿ ಜನರಲ್ ಶಾಲೆಗಳು 5 ಇವೆ. 1 ಹಿಂದೂ ಹಾಯರ್ ಎಲಿಮೆಂಟರಿ ಶಾಲೆ, 2 ಸೈಂಟ್ ಜೋಸೆಫ್ಸ್ ಶಾಲೆ, 3 ನಡಂಬಳ್ಳಿ ಶಾಲೆ, 4 ಮೂಡುಕುದ್ರು, 5 ಕನ್ನಾರಗುದ್ರು. ಗ್ರಾಮದ ಮನೆಗಳನ್ನು ಈ ಪ್ರಕಾರ ಹಂಚಿಯದೆ:—1 ಹಿಂದೂ ಹಾ. ಎ. ಶಾಲೆ 25% ಮನೆಗಳು, 2 ಸೈಂಟ್ ಜೋಸೆಫ್ಸ್ ಶಾಲೆ 25% ಮನೆಗಳು, 3 ನಡಂಬಳ್ಳಿ ಶಾಲೆ 20% ಮನೆಗಳು, 4 ಮೂಡುಕುದ್ರು 15% ಮನೆಗಳು, 5 ಕನ್ನಾರಕುದ್ರು 15% ಮನೆಗಳು.

12) ಶಾಲೆಗೆ ಹೋಗುವ ಪ್ರಾಯ ಮಹಮ್ಮದೀಯರಿಗೆ ಗಂಡು 6-13 ವರುಷ, ಹೆಣ್ಣು 6-11 ವರುಷ. ಮಹಮ್ಮದೀಯರಲ್ಲದವರಿಗೆ ಗಂಡು 6-12 ವರುಷ, ಹೆಣ್ಣು 5-10 ವರುಷ.

(Sd) **M. Martis,**
Dy. Inspector of Schools,
Udipi Range.

ಜಿಲ್ಲಾ ಕಾಂಗ್ರೆಸ್ ಕಮಿಟಿಗೆ

ಸ್ವಯಂಸೇವಕರು ಬೇಕು.

ಇದೇ ಬರುವ ಫೆಬ್ರವರಿ ತಿಂಗಳಲ್ಲಿ ನಡೆಯಲಿಕ್ಕಿರುವ ಲೆಜಿಸ್ಲೇಟಿವ್ ಎಸೆಂಬ್ಲಿ ಮತ್ತು ಕೌನ್ಸಿಲು ಚುನಾವಣೆಯಲ್ಲಿ ಚುನಾವಣೆ ಮುಗಿಯುವ ವರೆಗೆ ಸುಮಾರು ೪-೫ ತಿಂಗಳುಗಳ ವರೆಗೆ ಜಿಲ್ಲೆಯ ಹಳ್ಳಿಗಳಲ್ಲಿದ್ದು ಕಾಂಗ್ರೆಸ್ ಕಡೆಯಿಂದ ಪ್ರಚಾರ ಮಾಡುವರೆ ಇಡೀ ದಿವಸ ಕೆಲಸ ಮಾಡಲಿಕ್ಕೆ ತಯಾರಿರುವ (Whole time workers) ಪ್ರಕೃತ ಸುಮಾರು ೩೦-೪೦ ಮಂದಿ ಸ್ವಯಂಸೇವಕರನ್ನು ನೇಮಕ ಮಾಡುವ ಆಲೋಚನೆಯು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಇದೆ ಅವರಿಗೆ ಅವರ ಅಶನ-ವಸನದ ಖರ್ಚಿನ ಬಗ್ಗೆ ಮಾತ್ರ ಸಂಬಳ (honorarium) ಕೊಡಲಾದೀತು. ಉಮೇದ್ವಾರರು ಸಾಕಷ್ಟು ವಿದ್ಯಾವಂತರಾಗಿ ರಾಜಕೀಯ ವಿಷಯಗಳಲ್ಲಿ ಅನುಭವವಿದ್ದು, ಹಳ್ಳಿಗಳಲ್ಲಿ ಜನರಿಗೆ ಕಾಂಗ್ರೆಸಿನ ವಿಷಯ ಪ್ರಚಾರಮಾಡುವರೆ ಸಾಮರ್ಥ್ಯವುಳ್ಳವರಿರಬೇಕು. ಕಳೆದ ಕಾಯಿದೆ ಭಂಗ ಚಳವಳದಲ್ಲಿ ಸ್ವಯಂಸೇವಕರಾಗಿ ಇದ್ದು ಜೈಲಿಗೆ ಹೋದವರಿಗೆ ಹೆಚ್ಚಿನ ಲಕ್ಷ್ಯ (preference) ಕೊಡಲಾಗುವದು. ಉಮೇದ್ವಾರರು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಕೂಡಲೆ ಬರೆಯಬೇಕಾಗಿ ವಿನಂತಿ.

ಎಂ. ಎಸ್. ಅಧಿಕಾರಿ,
ಪ್ರೆಸಿಡೆಂಟ್ ಇನ್‌ಚಾರ್ಜ್,
ಜಿಲ್ಲಾ ಕಾಂಗ್ರೆಸ್ ಕಮಿಟಿ, ಕಾರ್ಕಳ.

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY

SPECIAL FEATURES.

1 Rebate on yearly payment of policies.
2 Rebate for larger assurances.
3. Accident Risk covered on small extra premiums.
4. Attractive Bonuses

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT.

P B 337 Mount Road, Madras	Visveswarapuram Circle Bangalore City	Sowmyalayam Puthiyara Calicut
Car Street Mangalore	Udipi, S India	Charni Road Bombay No 4

—EVIDENCE—
OF
SECURITY & STABILITY
FIGURES THAT SPEAK FOR THEMSELVES

TOTAL ASSETS Rs. 80,66,600

SUMMARY OF 1935 ACCOUNTS

Total Assets Over	Rs 80,00,000
Life Funds Over	Rs 68,00,000
Premium Income Over	Rs 22,54,000
Interest Income	Rs 3,16,000
Claims Paid	Rs 5,75,000
Total Claims paid over	Rs. 38,50,000
Total Business in Force Over	Rs 4,42,51,200

TOTAL BUSINESS IN FORCE Rs. 4,42,51,200

ಪ್ರೇಮ ವಿದ್ಯಾಪೀಠ

ತುಂಗಭದ್ರಾ (ಬಳ್ಳಾರಿ ಜಿಲ್ಲಾ)

ಇದರ ಹೊಸ ವರ್ಷವು ಜೂಲೈಯಲ್ಲಿ ಮೊದಲಾಗುತ್ತದೆ ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್, ಸ್ಕೂಲ್‌ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟ್ಯಾಂಪ್ ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ॥ ಸುಮತಿಬಾಯಿ,
ಬಿ. ಎ ಎಲ್. ಟಿ., ಎಫ್. ೭ ಎಮ್ ಎಸ್. ಭಿಷಗ್ರತ್ನ, ರಿಜಿಸ್ಟ್ರರ್

ಯು. ಪಿ. ಮೇಸ್ತ್ರ, ಉದ್ಯಾವರ, ದ. ಕ.

(ಬಾಣಂತಿ ರೋಗದ ಸ್ಪೆಶ್ಯಲಿಸ್ಟರು)

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಔಷಧಗಳು ದೊರಯುತ್ತವೆ.

U. P. Mesta,
Gold Medalled Physicion,
UDIAWAR, S. K.

ಚಿಕಿತ್ಸಾ ವಿಜ್ಞಾನ.

ಲೇಖಕರು:—ಭಿಷಗಾಚಾರ್ಯ ಆಯುರ್ವೇದ ವಿಶಾರದ, ಪಂಡಿತ ತಾರಾನಾಥರು.

(೫ನೇ ಸಂಚಿಕೆಯಿಂದ ಮುಂದುವರಿದುದು)

೧. ಆರತಿ ಕರ್ಪೂರ (ಉಂಡೆ ಕರ್ಪೂರ) ೧॥ ತೊಲೆಗೆ ಅಜವಾಸದ ಹೂ ೧ ತೊಲೆಯನ್ನು ಕೂಡಿಸಿದರೆ ಎರಡೂ ಕರಗಿ ನೀರಾಗುವದು. ಒಂದು ಲೆಕ್ಕ ಶೀಸೆಯಲ್ಲಿ ಇವುಗಳ ಚೂರುಹಾಕಿ, ಬೂಚುಹಾಕಿ ಬಿಟ್ಟು ಚೆನ್ನಾಗಿ ಅಲ್ಲಾಡಿಸಬೇಕು. ಎರಡೂ ಕರಗಿ ನೀರಾಗುವದು. ಈ ದ್ರಾವಕದ ೧ ಅಥವಾ ೨ ಹನಿಯನ್ನು ಒಂದು ಚಿಟಿಕೆ ಸಕ್ಕರೆಯಲ್ಲಿ ಕಲೆಸಿ ಊಟಕ್ಕಿಂತ ಒಂದು ತಾಸಿಗೆ ಮೊದಲು ನುಂಗಿ ಬಿಡಬೇಕು. ದಿನಕ್ಕೆರಡರಿಂದ ಮೂರುಸಾರಿಯ ವರೆಗೆ ತಕ್ಕೊಳ್ಳಬಹುದು.

೨. ಒಂದು ಹೊಸಮಣ್ಣಿನ ಗಡಿಗೆಯನ್ನು ಲೋಭಾನದ ಹೊಗೆಯ ಮೇಲೆ ಬೋರಲಹಾಕಬೇಕು. ಅದರಲ್ಲಿ ಹೊಗೆ ತುಂಬಿರುವಾಗ, ಅದು ಅರ್ಧತುಂಬುವ ವರೆಗೆ ಚೆನ್ನಾಗಿ ಕಾದು ಆಗಲೇ ಉಗುರು ಬೆಚ್ಚಗಾಗಿರುವ ನೀರನ್ನು ಅದರಲ್ಲಿ ಚುರುಕಾಗಿ ತುಂಬಿಸಿಬಿಟ್ಟು, ಬಾಯಿ ಮುಚ್ಚಿ ಇಟ್ಟುಬಿಡಬೇಕು. ಆ ನೀರು ಹಾಕಬೇಕಾದರೆ, ನೀರಿನ ೮ ಭಾಗಕ್ಕೆ ೧ ಭಾಗ ಪ್ರಕಾರ ನಿಂಬೆ ರಸವನ್ನು ಮೊದಲೇ ಕೂಡಿಸಿರಬೇಕು. ಹಾಗೆ ಕೂಡಿಸಿ ಗಡಿಗೆಯಲ್ಲಿಟ್ಟ ನೀರು ತಣ್ಣಗಾದಮೇಲೆ ಅದನ್ನು ೩ ರಿಂದ ೫ ತೊಲೆಯವರೆಗೆ ಮುಂಜಾನೆ ಬರೇ ಹೊಟ್ಟೆಯಲ್ಲಿ ಕುಡಿಯಬೇಕು.

ಸಹಾಯಕ ಉಪಾಯಗಳು:— ವಿರೇಚನವು ಮೊದಲಾದೊಡನೆ ಅಂಗಾತ ವಿರಮಿಸುವುದು ಅವಶ್ಯಕ. ಮನಸ್ಸಿನಲ್ಲಿ ಉಲ್ಲಾಸಕ್ಕೇ ಉಚ್ಚಸ್ಥಾನ ಕೊಡಬೇಕು. ಯಾಕೆಂದರೆ ಉಲ್ಲಾಸಕ್ಕೇ ಒಂದು ಪ್ರಬಲ ಪ್ರತಿಬಂಧಕ ಶಕ್ತಿಯಿದೆ. ರೋಗಬಂದಾಗ ನಿರೋಧ ಶಕ್ತಿಯಿದೆ. ಚಿಂತೆಯು ಮೃತ್ಯುವಿಗೆ ಆಮಂತ್ರಣಕೊಡುತ್ತದೆ.

ರೋಗಿಯನ್ನು ಮಲಗಿಸಿದ ಕೋಣೆಯಲ್ಲಿ ಗಾಳಿಬೆಳಕು ಧಾರಾಳವಾಗಿರಬೇಕು. ಆದರೆ ಬೀಸುವ ಗಾಳಿಯಾದರೆ ಅದು ನೇರವಾಗಿ ಮೈಗೆ ಹತ್ತದಂತಿರಬೇಕು. ಕೋಣೆ ಬೆಚ್ಚಗಾಗಿರಬೇಕು. ಮೈ ಕಾವು ಇಳಿಯದಂತೆ ಬಿಸಿನೀರ ಬಾಟ್ಲಿಗಳನ್ನು ಪಕ್ಕಪಕ್ಕದಲ್ಲಿ ಹೊದಿಕೆಯಲ್ಲಿ ಸೇರಿಸಿಬಿಡಬೇಕು. ಮೈತಿಕ್ಕಿಯೂ ಅದರ ಕಾವು ಇಳಿಯದಂತೆ ಮಾಡಬಹುದು. ಆದರೆ ಹಾಗೆಮಾಡುವಾಗ ಮೈಗೆ ಗಾಳಿಹತ್ತದಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ತಿಕ್ಕುವದನ್ನು ಹೊದಿಕೆಯೊಳಗೇ ಕೈಹಾಕಿಮಾಡುವದು ಲೇಸು. ಕುಡಿಯುವದಕ್ಕೆ ತಣ್ಣಗಾದ ನೀರನ್ನು ಕೊಡಬೇಕು. ಮಂಜುಗಡ್ಡೆ ಹಾಕಿಯೂ ಕೊಡಬಹುದು. ಬಟ್ಟೆ, ಹಾಸಿಗೆ, ಇತ್ಯಾದಿಗಳು ಸ್ವಚ್ಛವಾಗಿರಬೇಕೆಂದು ಎಷ್ಟು ಒತ್ತಿ ಹೇಳಿದರೂ ಕಮ್ಮಿಯೇ.

ವಾಂತಿ ಭೇದಿ ನಿಂತಮೇಲೆ ರೂಢ ಆಹಾರವನ್ನು ಒಂದೇಟಿಗೆ ತಕ್ಕೊಳ್ಳುವದು ಅಪಾಯಕರ, ರೋಗವಿರುವ ವರೆಗೆ ನೀರೇ ಆಹಾರ. ರುಚಿಸುವಂತೆ ನಿಂಬೇರಸವನ್ನು ಕಲೆಸಿಯೂ ಕೊಡಬಹುದು. ಬಿಸಿಹಾಲು ಸಕ್ಕರೆ ಕೊಡಬಹುದು. ಗುಣವಾದ ಎರಡು ದಿನ ಕಿತ್ತಲೆ ಮೊಸಂಬಿ ಹಣ್ಣಿನ ರಸವನ್ನು ಕುಡಿಸುವದು. ಅನಂತರ ಎರಡು ದಿನ, ಅದಲ್ಲದೆ ಮಜ್ಜಿಗೆ, ತಳ್ಳಗಾದ ಅಕ್ಕಿಯಗಂಜಿಯನ್ನು ತೆಕ್ಕೊಳ್ಳಬಹುದು. ಅಲ್ಲಿಂದ ಸ್ವಲ್ಪ ಮೆತ್ತಗಾದ ಅನ್ನ, ತಿಳಿಸಾರು, ಮಜ್ಜಿಗೆ ಹೀಗೆ ಕೆಲದಿನ ಇದ್ದಮೇಲೆ ಮಾಮೂಲಿ ಆಹಾರವನ್ನು ಸ್ವಲ್ಪ ಪ್ರಮಾಣದಿಂದ ತಕ್ಕೊಳ್ಳುತ್ತ, ಕ್ರಮೇಣ ಹೆಚ್ಚಿಸುತ್ತಾ ಹೋಗಬೇಕು. ದಿನ ಒಂದಕ್ಕೆ ಹೆಚ್ಚು ಕಡಿಮೆ ೨ ತೊಲೆ ಜೇನು ತುಪ್ಪ ಈ ಆಹಾರ ವಸ್ತುಗಳಲ್ಲಿ ಕಲೆಸಿ ತಕ್ಕೊಳ್ಳಬಹುದು. ಹಾಗೆ ತಕ್ಕೊಳ್ಳುವದೇ ಉತ್ತಮ ಎಂದೂ ಹಲವರ ಮತ. ರೋಗವಿರುವಾಗ ಕೂಡ ಹಾಲು ಹಾಕದೆ ಕಾಫಿಕೊಡಬಹುದು ಎಂದು ಹಲವು ಪಾಶ್ಚಿಮಾತ್ಯ ವೈದ್ಯರ ಮತವಿದೆ.

ಚಿಕಿತ್ಸಾ ಯೋಜನೆಗಳು.

(೧–೨) ಹಿಂದೆಕೊಟ್ಟ ಪ್ರತಿಬಂಧಕ ಯೋಜನೆಗಳು ಇಲ್ಲಿಯೂ ಕೆಲಸಕ್ಕೆ ಬರುತ್ತವೆ ಅದರಲ್ಲಿ ಮೊದಲನೇದು*(ಕರ್ಪೂರ-ಅಜವಾಸದ ಹೂ)ವಿನ ದ್ರಾವಕ ಬಹಳ ಒಳ್ಳೆಯ ಔಷಧ. ಅದರ ೫-೮ ಹನಿ ಹೆಚ್ಚು ಕಡಿಮೆ ಒಂದೊಂದು ಪಾವಲಿತೂಕ ಸಕ್ಕರೆಯೊಡನೆ ಕೊಟ್ಟರೆ ಎರಡುಮೂರು ಸಲ ಕೊಡುವಷ್ಟರಲ್ಲಿ ವಾಂತಿಭೇದಿಗಳೊಳಗೆ ಒಂದಾದರೂ ನಿಲ್ಲುವದು. ಹಾಗೆ ಒಂದಾದರೂ ನಿಲ್ಲುವವರೆಗೆ ಈ ದ್ರಾವಕವನ್ನು ಅರ್ಧ ಘಂಟೆಗೊಮ್ಮೆ ಕೊಟ್ಟರೆ ಸಾಕು. ಮಾರನೆದಿನದಿಂದ ದಿನಕ್ಕೆರಡು ಮೂರು ಸಾರಿ ಕೊಟ್ಟರೆ ಸಾಕು.

ಇದರಿಂದ ಮೈಗೆ ಶೀತವೇರುವದೂ ಇಲ್ಲ. ಹೃದಯಶ್ವಾಸಕೋಶಗಳಿಗೂ ತುಂಬಾ ಲಾಭವಿದೆ. ಇದು ರೋಗಿಯಶಕ್ತಿಯನ್ನು ಇಳಿಯಗೊಡುವುದಿಲ್ಲ ಮೈಯನ್ನು ಬೆಚ್ಚಗಾಗಿಡುತ್ತದೆ.

ಕೈ ಮೈಗಳ ಸೆಳತವೆಲ್ಲಿಯಾದರೂ ಇದ್ದರೆ ಇದರ ಒಂದು ಭಾಗವನ್ನು ಕೊಬ್ಬರಿಯೆಣ್ಣೆಯ ಒಂದೂವರೆ ಭಾಗಕ್ಕೆ ಕಲೆಸಿ ಚೆನ್ನಾಗಿ ತಿಕ್ಕಿದರೆ ಅದು ಕಡಿಮೆಯಾಗುವದು,

ಎರಡನೆಯದು.— ಹಿಂದೆ ಬರೆದ ತಯಾರುಮಾಡಿ ಗಡಿಗೆಯಲ್ಲಿಟ್ಟ ನಿಂಬೆನೀರನ್ನು ೨೦-೩೦ ನಿಮಿಷಕ್ಕೊಮ್ಮೆ ಕುಡಿಯುತ್ತ ಹೋದರೆ ಕಾಲೆರಾ ಶೀಘ್ರದಲ್ಲಿ ಗುಣವಾಗುವದು. ವಾಂತಿಭೇದಿ ಪ್ರಾರಂಭವಾದ ಕೂಡಲೇ ತಕ್ಕೊಂಡರೆ ಈ ಯೋಜನೆಯು ಉತ್ತಮ ಫಲಕಾರಿ.

(3) ಎಕ್ಕೆ ಬೇರಿನ ಚಕ್ಕೆ ೧ ತೊಲೆ ಮೆಣಸು ೧ ತೊಲೆ,-ಇದನ್ನು ಹಸಿ ಶುಂಠಿಯ ರಸದಲ್ಲಿ ನುಣ್ಣಗರೆದು ೧ ಗುಂಜಿ ಪ್ರಮಾಣದ (ಸುಮಾರು ಮೆಣಸಿನ ಕಾಳಿನಷ್ಟು ಗುಳಿಗೆಗಳನ್ನು ಮಾಡಬೇಕು.

ವಾಂತಿಯಾಗಲಿ ಭೇದಿಯಾಗಲೀ ಒಮ್ಮೊಮ್ಮೆ ಆದೊಡನೆ ೧ ಮಾತ್ರೆನುಂಗಿ ಸ್ವಲ್ಪ ಬೆಚ್ಚಗಾದ ನೀರನ್ನು ಕುಡಿಯಬೇಕು. (ತಣ್ಣೀರು ಕುಡಿಯಬಹುದು) ಮೂರು ನಾಲ್ಕು ಸಲ ನುಂಗುವಷ್ಟರೊಳಗಾಗಿ ಗುಣಕಂಡು ಬರುವದು.†

(೪) ಒಡಿಸೋಪು, ಪುದೀನಾಸೊಪ್ಪು ಪ್ರತಿಯೊಂದು ಮುಕ್ಕಾಲು ತೊಲ, ಲವಂಗ ೫ ಮಾತ್ರ, ಗುಲಕನ್ ೨ತೊಲೆ, ಬಡಿಸೋಪು ಲವಂಗಗಳನ್ನು ಸ್ವಲ್ಪ ಜಜ್ಜಿ ಬಾಕಿ ಸಾಮಗ್ರಿಗಳೊಡನೆ ೨ ಸೇರು ನೀರಿನಲ್ಲಿ ಕುದಿಸಿ ಸೋಸಿ ಆರಿಸಿ ಇಡಬೇಕು. ರೋಗಿಗೆ ಬಾಯಾರಿಕೆ ಆದಂತೆಲ್ಲ ಇದನ್ನು ಕೊಡುತ್ತಾ ಹೋಗಬೇಕು.

ರೋಗ ಮೊದಲಾದೊಡನೆ ಕೊಡುತ್ತಾ ಹೋದರೆ ಇದೊಂದರಿಂದಲೇ ರೋಗ ಗುಣವಾಗುವದೂ ಉಂಟು.

ಹೋಮಿಯೋಪಥಿಕ್ ಚಿಕಿತ್ಸೆಯೂ ಬಹಳ ಉತ್ತಮ, ಮತ್ತು ಎಂಥ ಸೂಕ್ಷ್ಮ ನಾಲಿಗೆಯವರಿಗಾದರೂ ಅನುಕೂಲ †

೨ ಈ ಔಷಧಿಗಳನ್ನು ಪ್ರತಿಬಂಧಕ್ಕಾಗಿಯಾದರೆ ದಿನಕ್ಕೊಂದುಸಲ ತಕ್ಕೊಂಡರಾಯಿತು. ಇಲ್ಲವಾದರೆ ರೋಗದ ಜೋರಿಗೆ ತಕ್ಕಂತೆ ಮೂರ ಘಂಟೆಯಿಂದ ಹಿಡಿದು ಅರ್ಧ ಅರ್ಧ ಘಂಟೆಗೊಮ್ಮೆ ಕೂಡಕೊಡಬಹುದು.

ಭೇದಿ ಮೊದಲಾದೊಡನೆ ರುಬಿನಿಕ್ ಕೆಂಪರ್, ವಿಕೇ ಸ್ಟೈಟಮ್ ಸಹ ಒಮ್ಮೆ ಅದು ಒಮ್ಮೆ ಇದು ಕೊಲೆರಾ ಪೂರ್ಣರೂಪಗೊಂಡಾಗ– ಕೆಂಪರ್ ಇದು ಸಾಕಾಗದೆ ಹೋದರೆ ಆರ್ಸೆನಿಕ್, ಕ್ಯೂಪ್ರಮ್ ಎಳೆಡ್ ಇಪೆಕಿಕ್ ಎಮೋನ್ ಸಲ್ವ-ಒಂದು ತಪ್ಪಿದರೆ ಇನ್ನೊಂದು ಬಲಕ್ಷಯವಾಗುವಾಗ:-ಆರ್ಸೆನಿಕಮ್, ಎಕೆನ್ಯಾಟಮ್, ಕಾರ್ಬೆವೆಜಿಟೆಲಿಸ್, ಒಂದು ತಪ್ಪಿದರೆ ಇನ್ನೊಂದು ಭ್ರಮೆಯಿದ್ದರೆ ಘೊಸ ಫೊರಿಕಮ್, ವಾಂತಿ ಭೇದಿ ನಿಂತಮೇಲ:-ಚೈನಾ, ಫೋಸ್ ಫೋರಿಕ್

೩. **ಸೂ:**–ರೋಗಿಯ ವಾಂತಿಭೇದಿಯನ್ನು ಸುಡಬೇಕು ಅಥವಾ ಆಳವಾದ ಕುಣಿಗೆ ಹಾಕಬೇಕು ಬಟ್ಟೆಗಳನ್ನು ೧೦ ನಿಮಿಷವಾದರೂ ನೀರಿನಲ್ಲಿ ಬೇಯಿಸಿ ಮತ್ತೆ ಒಗೆಯಬೇಕು. ಗುಣವಾದ 3 ದಿನದ ವರೆಗೆ ಯಾವ ಗಟ್ಟಿ ಆಹಾರವನ್ನೂ ಕೊಡಬಾರದು ವಾಂತಿ ಭೇದಿ ನಿಂತ ೨೨ ತಾಸುಗಳ ಮೇಲೆ ಬಿಸಿ ಹಾಲು ಸಕ್ಕರೆ ಸ್ವಲ್ಪ ಸ್ವಲ್ಪ ಕೊಡಬಹುದು.

ಪಥ್ಯ:— ತಣ್ಣಗಾದ ನೀರು, ಹಳೆಯ ಅಕ್ಕಿಯ ಅನ್ನದ ಗಂಜಿ, ಹಸುವಿನ ಹಾಲು ಮೊಸರು. ಮಜ್ಜಿಗೆ ಮೆಂತೆ, ಬೂರಾ ಸಕ್ಕರೆ, ಇಸಬಗೋಲ ಬೀಜದ ನೀರು ಅತಿಸಾರದಲ್ಲಿ ಕೊಟ್ಟ ಅಪಥ್ಯವೇ ಆದಕ್ಕೂ.

* ಈ ದ್ರಾವಕವು ಒಂದು ಅದ್ಭುತವಾದ ಔಷಧ. ಮುತ್ತುಮುತ್ತಲೂ ಕಾಲರ ಬಂದ ಕ ನೆಯಿಲ್ಲ, ಚಿಕಿತ್ಸೆಗಾಗಿ ವ್ಯವಸ್ಥೆಮಾಡುವದು ನಮ್ಮ ಪ್ರೇಮ ಮೆಡಿಕಲ್ ಸರ್ವೀಸಿನ ಒಂದು ವಾಡಿಕೆ. ಅದ್ದರಿಂದ ಸಾವಿರಾರು ರೋಗಿಗಳ ಸೇವೆಯನ್ನು ಮಾಡುವ ಸುದೈವವು ನಮಗೊದಗಿದೆ. ಈ ಔಷಧದಿಂದ ೧೦೦ರಲ್ಲಿ ಲೆಂಕ್ಕೆ ಕಡಿಮೆ ಯಾಗದಂತೆ ಇಷ್ಟರವರೆಗೆ ವಾಸಿಯಾಗಿದೆ. ೧ ಮೂರು ವರ್ಷಗಳ ಹಿಂದೆಯೇ ಇಲ್ಲಿಂದ ೩೨ ಮೈಲಿ ದುಮಾರಿಗಿರುವ ಕೋಸಗಿ ಎಂಬ ಯೂನಿಯನ್‌ನಲ್ಲಿ ನಾವೊಂದು ಕಾಲರಾ ಕೆಂಪ್ ಹಾಕಿದ್ದೆವು. ಅಲ್ಲಿ ನಮ್ಮ ವೈದ್ಯರಿಂದಾದ ಸೇವೆಯ ಫಲವನ್ನು ಕುರಿತು "ಇವರು ಚಿಕಿತ್ಸೆಮಾಡಿದ ರೋಗಿಗಳಲ್ಲನೇಕರು ಕಠಿಣಾವಸ್ಥೆಯಲ್ಲಿದ್ದರು. ಆದರೂ ಇವರಿಂದ ಚಿಕಿತ್ಸೆ ಹೊಂದಿದ ೬೦ ರೋಗಿಗಳಲ್ಲಿ ೩ ಮಂದಿಬಿಟ್ಟು ಉಳಿದವರೆಲ್ಲರೂ ಪಾರಾಗಿ ಬದುಕಿದರು!" ಎಂದು ಯೂನಿಯನ್ ಪ್ರೆಸಿಡೆಂಟರೇ ಪ್ರಶಂಸೆಮಾಡಿದ್ದಾರೆ ಅಲ್ಲಿಯು ಕೊಟ್ಟ ಔಷಧಿಗಳಲ್ಲಿಯೂ ಇದೇ ಮುಖ್ಯ.

ಇದರ ಉಪಯೋಗವು ಅಲ್ಲಿಗೇ ಸೂಕ್ತವಾಗುವದಿಲ್ಲ. ಪೆಟ್ಟು ಹತ್ತಿದ ಕಡೆಹಚ್ಚಿದರೆ ಗಟ್ಟಿಕಟ್ಟಿದ ರಕ್ತಕರಗಿ ಬಾವು ಇಳಿಯುತ್ತದೆ. ಹಲ್ಲುನೋವಿಗೆ ಹತ್ತಿಯಲ್ಲಿ ಒಂದು ಹನಿಹಾಕಿ ಆ ಹತ್ತಿಯನ್ನಿಟ್ಟುಕೊಂಡರೆ ಗುಣ,-ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ನೋವುಗಳಿಗೆ ೨-೩ ಹನಿ ಸಕ್ಕರೆಯಲ್ಲಿ ಹಾಕಿ ದಿನಕ್ಕೆರಡು ಮೂರುಸಾರ್ತಿ ತಕ್ಕೊಂಡರೆ ಎಷ್ಟೋ ಹಿತ, ನೋವುಳ್ಳ ಚೇಳುಗಳ ಕಡಿತಕ್ಕೆ ಹಚ್ಚಿ ತಿಕ್ಕಿದರೆ ಕಡಿಮೆಯಾಗುತ್ತದೆ ರಕ್ತ ಹೊರಟಕಡೆ ಇದನ್ನು ಯಾವಾಗಲೂ ಮನೆಯಲ್ಲಿ ಇಟ್ಟುಕೊಳ್ಳುವದರಿಂದ ಎಷ್ಟೋ ಉಪಕಾರವಿದೆ.

†೧. ಸಾವು ಹತ್ತಿರ ಬಂದಂತೆ ತೋರಿದರೂ ಈ ಮಾತ್ರೆಗಳಿಂದ ರೋಗಿಯು ಅಪಾಯದಿಂದ ದೂರವಾಗುವನು. ಅವನಿಗೆ ಜ್ವರವೂ ಬರುವದು. ಆದರೆ ಆ ಜ್ವರವು ವಾಸಿಯಾಗುವದರ ಶುಭ ಚಿಹ್ನೆ:—ಎಂದು ಈ ಮಾತ್ರೆಗಳನ್ನು ಕುರಿತು ಡಾ। ಬಿಂಬಿಯವರು ಬರೆಯುತ್ತಾರೆ.

†೨. ಈ ಎಲ್ಲ ಔಷಧಗಳ ಪ್ರಮಾಣವು ಒಂದೇ ರೀತಿ ಈ ಔಷಧಿಗಳನ್ನು ೪ ವಿಧವಾಗಿ ಮಾಡುತ್ತಾರೆ.-(೧) ಟಿಂಕ್ಚರ (ದ್ರವರೂಪ) ೨ ಪಿಲ್ಯೂಲ್ (ಚಿಕ್ಕಗುಳಿಗೆಗಳು) ೩ ಗ್ಲೋಬ್ಯೂಲ್ (ಬಹು ಚಿಕ್ಕ ಗುಳಿಗೆಗಳು) ೪ ಟ್ರಿಟ್ಯೂರೇಷನ್ ಪೌಡರ್ (ಪುಡಿಯಾಗಿರುವದು) ಪ್ರಯಾಣಿಕರಿಗೆ ಗುಳಿಗೆಗಳು ಅನುಕೂಲ

ಒಂದೊಂದು ಸಲಕೊಡುವ ಪ್ರಮಾಣ
ಟಿಂಕ್ಚರ್ ಆದರೆ ೧ರಿಂದ ೩ ಹನಿ
ಪಿಲ್ಯೂಲ್ ೩
ಗ್ಲೋಬ್ಯೂಲ್ ೬
ಪೌಡರ್.—೧ಗ್ರೇನ್ ಅಂದರೆ ಪಥ್ಯಗುಂಜಿ ಸುಮಾರು.

[ಹೆಚ್ಚಿನ ಮಾಹಿತಿಬೇಕಾದರೆ ಪ್ರೇಮ ಮೆಡಿಕಲ್ ಸರ್ವೀಸ್ ತುಂಗಭದ್ರಾ (ಬಳ್ಳಾರಿ ಡಿಸ್ಟ್ರಿಕ್ಟ್) ಇವರಿಗೆ ಉತ್ತರಕ್ಕಾಗಿ ಸ್ಟಾಂಪಿಟ್ಟು ಬರೆದುಕೊಳ್ಳಬೇಕು.

ಪತ್ರಿಕಾಕರ್ತರಲ್ಲಿ ವಿನಂತಿ.

ನಾನು ಇದೇ ತಿಂಗಳ ತಾ. 9ರಿಂದ 5 ವಾರಗಳ ರಜೆಯನ್ನು ಪಡೆದು ಊರಿಗೆ ಬಂದಿರುವೆನು. ನನ್ನ ಎಲ್ಲಾ ಪತ್ರಿಕೆಗಳನ್ನೂ ಕಾಗದ ಪತ್ರಗಳನ್ನೂ ಬರುವ ನವಂಬರ ತಿಂಗಳ ತಾ. 20ರ ವರೆಗೆ ಈ ಕೆಳಗಿನ ವಿಳಾಸಕ್ಕೆ ರವಾನಿಸಬೇಕಾಗಿ ವಿನಂತಿ.

ಕೆ. ಟಿ ಕರ್ಕೇರ,
ಕರ್ಕೇರ ಹವ್ರ್ಸ್,
Surtakal Post, S. K.

ನೋಟೀಸು

ಸನ್ 1936ನೆ ಇಸವಿ ಅಕ್ಟೋಬರ ತಾರೀಖು 16ನೇ ಶುಕ್ರವಾರ ರಾತ್ರಿ ಸ್ವಾತಿ ನಕ್ಷತ್ರದಲ್ಲಿ 11 ಘಂಟೆ 34 ನಿಮಿಷಕ್ಕೆ ಸರಿಯಾಗಿ ತುಲಾಕಾವೇರಿ ಸಂಕ್ರಮಣ ತೀರ್ಥೋದ್ಭವದ ಪುಣ್ಯಕಾಲದ ಶುಭ ಮುಹೂರ್ತವು.

ಕೆ. ಕಾಳಪ್ಪ,
ಪ್ರೆಸಿಡೆಂಟ್, ಕೂರ್ಗ್ ಟೆಂಪಲ್ಸ್ ಫಂಡ್ ಕಮಿಟಿ
ಮಡಿಕೇರಿ.

ಮಾನ್ಯ ಮಂತ್ರಿ ಟಿ. ಪಿ. ರಾಜನರೂ ಉಡುಪಿ ಮುನಿಸಿಪಾಲಿಟಿಯೂ.

ಅಯ್ಯಾ,

ಮಾನ್ಯ ಮಂತ್ರಿಗಳಾದ ಪಿ. ಟಿ ರಾಜನರವರು ಉಡುಪಿಗೆ ಚಿತ್ತೈಸುವ ಸಂದರ್ಭದಲ್ಲಿ ಪುರಜನರ ಪರವಾಗಿ ಉಡ್ಪಿ ಮುನ್ಸಿಪಾಲಿಟಿಯವರುಅವರಿಗೆ ಸತ್ಕಾರಮಾಡಿ ಬಿನ್ನವತ್ತಳೆಯನ್ನು ಅರ್ಪಿಸಬೇಕೆಂಬುಗರ ವಿಷಯ ಮುನಿಸಿಪಲ್ ಚೆಯರ್‌ಮೇನ್ ಮಾ. ರಾ. ರಾ. ಆರೂರು ಲಕ್ಷ್ಮೀನಾರಾಯಣ ರಾಯರು ಸ್ಪೆಶಲ್ ಮೀಟಿಂಗಿನಲ್ಲಿ ಕೊಟ್ಟ ಸೂಚನೆಯೂ ಆ ವಿಷಯ ಮಿ. ಜಿ. ಸಿ. ರೇಗೋರವರ ಠರಾವೂ ಬಿದ್ದು ಹೋಗಿ, ಶ್ರೀಮತಿ ಮನೋರಮಾ ಬಾಯಿಯವರ ಮಂತ್ರಿಗಳಿಗೆ ಸತ್ಕಾರಮಾಡುವುದು ಉಚಿತವಲ್ಲವೆಂಬ ಠರಾವೇ ಬಹುಮತದಿಂದ ಅಂಗೀಕೃತವಾಗಿರುವುದು. ಆ ವಿಷಯ ನಿಮ್ಮ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ನಾರದನ ಟೀಕೆಯೂ ಇದ್ದಿತು.

ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಕಾಂಗ್ರೆಸ್ ಪರವಾಗಿ ಆರಿಸಲ್ಪಟ್ಟಿರುವ ಮೆಂಬರರೇ ಶ್ರೀ. ರಾಜನರಿಗೆ ಬಿನ್ನವತ್ತಳೆಯನ್ನೀಯಬೇಕೆಂಬ ಠರಾವನ್ನು ಮುನ್ಸಿಪಲ್ ಮೆಂಬರರಾಗಿ ಮುನ್ಸಿಪಲ್ ಮೀಟಿಂಗಿನಲ್ಲಿ ಸಮರ್ಥಿಸಿದರಿಂದ ನಾರದನಿಗೆ ಖೇದವಾಗಿರುವುದು. ಉಡ್ಪಿ ಮುನ್ಸಿಪಾಲಿಟಿಯು ನಗರಾಭಿವೃದ್ಧಿಗೋಸುಗ ಏರ್ಪಡಿಸಿಟ್ಟ ಒಂದು ಸಂಸ್ಥೆ. ಅದು ಮೊನ್ನೆತಾನೆ ಜನ್ಮತಾಳಿರುವುದು. ಆ ಸಂಸ್ಥೆಗೆ ಆರಿಸಿಬಂದಿರುವ ಮೆಂಬರರು ತಂಮ ರಾಜಕೀಯ ಅಭಿಪ್ರಾಯಗಳಿಗೋಸುಗ ಆರಿಸಿ ಬಂದವರಲ್ಲ.

ಪುರಜನರು ಕೊಡುವ ತೆರಿಗೆಯು ಆ ವಸ್ತು ಅವರ ಪ್ರಯೋಜನಗಳಿಗಾಗಿ ವಿನಿಯೋಗಿಸಲ್ಪಡುವಂತೆಯೂ, ನಗರದಲ್ಲಿನ ಜನತೆಯ ಸೌಕರ್ಯಗಳು ಹೆಚ್ಚಿಸಲ್ಪಡುವಂತೆಯೂ, ಹೋರಾಡಬೇಕಾಗಿದ್ದ ನಾಗರಿಕರ ಪ್ರತಿನಿಧಿಗಳು ತಮ್ಮ ರಾಜಕೀಯ ಅಭಿಮತಗಳನ್ನು ಅನ್ಯರಮೇಲ ವತ್ತಾಯಪಡಿಸಿ ಯುಕ್ತಾಯುಕ್ತತೆಗಳನ್ನೆಣಿಸದೆ ನಗರಾಭಿವೃದ್ಧಿಯ ಹಿತದ ದೃಷ್ಟಿಯನ್ನು ಬದಿಗೊತ್ತಿ ಬರೇ ಪಂಗಡಗಳ ಬಲದಿಂದ ಠರಾವುಗಳನ್ನು ಮಂಜೂರು ಮಾಡಿಸುವುದರಿಂದ ನಗರಾಭಿವೃದ್ಧಿಗೆ ಹೇಗೆ ಸಹಾಯ ಮಾಡಿದಂತಾಗುವುದು?

ಅತಿಥಿಗಳಿಗೆ ಸತ್ಕಾರಮಾಡುವುದು ಪ್ರತಿಯೊಬ್ಬ ಭಾರತೀಯನ ಆದ್ಯಕರ್ತವ್ಯ. ಇಲ್ಲಿಗೆ ಬರಬೇಕೆಂದಿದ್ದ ಮಂತ್ರಿಯವರು ಮದರಾಸು ಸರಕಾರದಲ್ಲಿ ಈಚೆಗೆ ಹಲವು ವರುಷಗಳಿಂದ ಪ್ರಾಮುಖ್ಯತೆಯನ್ನು ಹೊಂದಿ ಆಡಳಿತ ನಡಿಸಿಕೊಂಡು ಬರುತ್ತಿದ್ದ ಜಸ್ಟಿಸ್ ಪಾರ್ಟಿಯ ಪ್ರಾಮುಖ್ಯ ಮೆಂಬರರಲ್ಲೊಬ್ಬರು. ಮುನ್ಸಿಪಾಲಿಟಿಯ ಆಡಳಿತವು ಇವರಿಗೆ ಸಂಬಂಧಿಸಿದ್ದಲ್ಲವಾದರೂ ಅಭಿವೃದ್ಧಿಖಾತೆಯ ಮಂತ್ರಿಗಳಾಗಿದ್ದು ನಮ್ಮ ನಗರವಾಸಿಗಳಿಗೆ ಒ ವಲ್ಲದಿದ್ದರಿನ್ನೊಂದು ಬಗೆಯಲ್ಲಿ ಸಮ್ಮಂದಿಸಬಹುದಾದ ಅನೇಕ ಖಾತೆಗಳು ಇವರ ಕೈಕೆಳಗಿರುವುವು. ಜಸ್ಟಿಸ್ ಪಾರ್ಟಿಯವರೆ ಅಯೋಗ್ಯರಾದರೇ? ತಮ್ಮ ಪಾರ್ಟಿಯವರಲ್ಲದಿದ್ದರೆ ಇತರರಿಗೆ ಧಿಕ್ಕಾರ ತೋರಿಸಬೇಕೆಂದು ಕಾಂಗ್ರೆಸಿನವರ ಧ್ಯೇಯವೆ? ಜಸ್ಟಿಸ್ ಪಾರ್ಟಿಯು, ನಮ್ಮ ನಗರ ಸಭೆಯವರಿಗೆ ಅಷ್ಟೊಂದು ಹೇಯವಾದುದು ಹೇಗೆ?

ನಾರದನ ತಂಬೂರಿ

ನರನಾರಾಯಣ! ನರನಾರಾಯಣ!

ಟುಂ, ಟುಂಯಿ, ಟುಂಯಿ, ಬಂದನು ನಾರದ ಬರಲಿಲ್ಲಾತನು! ಹಿಂದಿನ ವಾರದಲೀ!! ನರನಾರಾಯಣ! ನರನಾರಾಯಣ! ಹೌದಯ್ಯ! ಕಳೆದ ವಾರವೂ ಬಂದೇಬಿಡಬೇಕೆಂದು ಹೊರಟಿದ್ದೆ — ಅಜ್ಞರೆಕಾಡಿನ ಠನ್ಸಿಗೆ ದೊಡ್ಡಸ್ಕಿಕೆ ಬಂದುದು ನಿಮಗೆಲ್ಲಾ ಗೊತ್ತುಂಟಲ್ಲ—ಬೊಂಬಾಯಿಯ ಲಕ್ಷಾಧೀಶರೊಬ್ಬರ ಹೆಸರು ಹಾಕಿದ್ದಾರೆ—ಅದರಲ್ಲೀ ಭಿಕ್ಷಾಧೀಶ ನಾರದನು ಕಾಲು ಹಾಕುವಾಗ ಹೆದರಿಹೋದ ನೋಡಿ! ಹೀಗಾಗಿ ವಾಯಿದೆಗೆ ಸರಿಯಾಗಿ ಬರಲಿಕ್ಕಾಗಲಿಲ್ಲ. ಒಂದು ವಾರವಲ್ಲವೆ? ನರನಾರಾಯಣ!

* * *

ಆಗಲಿಕ್ಕೆ ಒಂದು ವಾರ! ಒಂದು ವಾರ ತಡವಾದುದಕ್ಕೆ ನಮ್ಮ ಮಾಜಿ ಕಲೆಕ್ಟರ್ ಪ್ರೆಸಿಡೆಂಟರ ಮರ್ಜಿಯ ಶಿಕ್ಷೆ ಕೊಡಬೇಡಿ ಮಾನವರೆ! ನೋಡಿ—ಅವರು ಐದು ಮತ್ತು ಎರಡು ಮಿನಿಟು ತಡವಾಗಿ ಬಂದ ಇಬ್ಬರು ಕ್ಲಾರ್ಕರಿಗೆ ಅಧಿಕ ದಿವಸದ ಸಂಬಳ ಅಪರಾಧ ಮಾಡಿದ್ದರಂತೆ! ಅದೇ ಕಾನೂನನ್ನು ನೀವು ನನ್ನ ಮೇಲೆ ಜ್ಯಾರಿಗೆ ತಂದರೆ ನಾರದನ ಜೀವಮಾನವಿಡೀ ಶಿಕ್ಷೆಯಲ್ಲಿ ಹೋದೀತು! ನಿಮ್ಮ ಕಲಿಯುಗದಲ್ಲಿ ಕಾಲಿಟ್ಟದ್ದಕ್ಕೆ ಅಷ್ಟನ್ನೊಮ್ಮೆ ಮಾಡಬೇಡಿರಿ! "ಕಲಿಯುಗವೆಂದರೆ ತಲೆ ತಿರುಗುತಲಿದೆ!-ತಳಮಳವೇಳುತಿದೆ! ಘುಂಯಿ, ಘುಂಯಿ, ನರನಾರಾಯಣ! ನರನಾರಾಯಣ!!!

* * *

'ನಾರದ ಡೋಂಗಿ' ಎಂದು, ನೀವೆಲ್ಲಾ ಹೇಳುವುದುಂಟಲ್ಲಾ — ಓಹೋ! ನೀವು ಮಾನವರೂ ಡೋಂಗಿಯಿಂದಲೇ ಕೆಲಸ ಸಾಧಿಸುವದುಂಟು!! ಮೊನ್ನೆ ಜಿಲ್ಲಾ ಬೋರ್ಡು ಸಭೆಯಲ್ಲಿ ಶ್ರೀ. ಎ. ಬಿ. ಶೆಟ್ರು ಕೇಳಿದರು, "ಬೋರ್ಡಿನಲ್ಲಿ ಶಿಲ್ಕು ರೂ. 75,5551—9—11 ಇರುವಾಗ ಬೋರ್ಡು ದಿವಾಳಿಯಾಗಿದೆ ಎಂದು ಯಾಕೆ ಹೇಳಿದಿರಿ?" ಅಧ್ಯಕ್ಷರು ಹೇಳಿದರು "ತಮಾಷೆಗಾಗಿ ಹಾಗೆ ಹೇಳಿರಬಹುದು." ಈ ಮಾತು ನಿಜವಯ್ಯ! ಇದನ್ನು ಕೇಳುವಾಗ ನಿಮಗೆ ತಮಾಷೆಯಾಗುತ್ತದಲ್ಲ—ಅಧ್ಯಕ್ಷರು ಆಗ ಹಾಗೆ ಹೇಳಿ, ಈಗ ಹೀಗೆ ಹೇಳದಿರುತ್ತಿದ್ದರೆ ನಿಮಗೆ ತಮಾಷೆಯಾಗುತ್ತಿತ್ತೆ? ಟುಂಯಿ ಟುಂಯಿ!! ಮನಕೆ ತಮಾಷೆಯನೆಬ್ಬಿಸುವವನಿಗೆ! ಮಣಿವನು ನಾರದನು!! ಘುಂಯಿ ಘುಂಯಿ! ನರನಾರಾಯಣ! ನರನಾರಾಯಣ!!

* * *

ಅಬ್ಬಬ್ಬ! ಉಪಾಧ್ಯಾಯರ ಸಂಬಳದ ಅರ್ಧಾಣೆ ಕಡಿತ, ನೌಕರರ ಸಂಬಳದಲ್ಲಿ ಒಂದಾಣೆ ಕಡಿತವನ್ನು ತೆಗೆದು ಹಾಕಬೇಕೆಂದು ಜಿಲ್ಲಾ ಬೋರ್ಡಿನಲ್ಲಿ ನಿರ್ಣಯವಾಗಿತ್ತು. ನೋಡಿ—ಅದು ಸದ್ಯಕ್ಕೆ ಕೂಡದೆಂದು ಸರಕಾರದ ಹುಕುಂ ಬಂದಿದೆಯಂತೆ! ಆ ಕೀರ್ತಿ ಕೊಂಗ್ರೆಸಿನವರಿಗೆ ಹೋಗಬಾರದೆಂದು, ಒಳಸಂಚು ನಡೆದಿತ್ತಂತೆ! ಸಾಕಲ್ಲ—ಹಾರಿ ಹಾರಿ ಕಡಿತವನ್ನೇ ಕಡಿತ ಮಾಡುವ ಕೊಂಗ್ರೆಸಿನವರ ಹುಚ್ಚು, ಬಡ ನೌಕರರ ಹೊಟ್ಟೆಯ ಕಿಚ್ಚು—ಇವೆರಡರಿಂದ ಆಗುವದೇನು ನೋಡೋಣ! ಘುಂಯಿ, ಘುಂಯಿ, ಘುಂಯಿ !! ಬಡವರ ಉದರದ ಕಿಚ್ಚನು ಜಳಿಸಿತು, ಘೋರಿಗಳ ಹೊಟ್ಟೆಕಿಚ್ಚು! !! ಘುಂಯಿ! ನರನಾರಾಯಣ! ನರನಾರಾಯಣ!

* * *

ನಮ್ಮ ಉಡುಪಿ ಮುನಿಸಿಪಾಲಿಟಿಯು, ಮದ್ರಾಸ್ ಮಂತ್ರಿ ಶ್ರೀ ಪಿ. ಟಿ. ರಾಜನರಿಗೆ ಮಾನಪತ್ರ ಕೊಡಬಾರದೆಂದು ನಿರ್ಣಯಿಸಿದೆಯಲ್ಲ—ಅದನ್ನೂ ನಾರದನ ಅಭಿಪ್ರಾಯವನ್ನೂ 'ಮಾಧವ'ರು ಆಕ್ಷೇಪಿಸುತ್ತಾರೆ ನರನಾರಾಯಣ! ತೆರಿಗದಾರರ ಹಿತಕ್ಕಾಗಿ ಇರಬೇಕಾದ ನಗರಸಭೆಯ ಪ್ರತಿನಿಧಿಗಳು ತಮ್ಮ ತಮ್ಮ ಪಕ್ಷಗಳ ಪರವಾಗಿ ಹೋರಾಡುವದು ಮಾಧವರಿಗೆ ಸರಿತೋರುವದಿಲ್ಲ, ನರನಾರಾಯಣ! ನಾರದನು ಮಾಧವರ ನೀತಿಯಂತೆಯೇ ನಡೆದಿದ್ದಾನಯ್ಯ! ಪಕ್ಷಪಾತವಿರಬಾರದೆಂದೇ ತೀರಾ ಪಕ್ಷಪಾತಿಗಳಾದ ಶ್ರೀ. ರಾಜನರಿಗೆ ಮಾನಪತ್ರ ನಿರಾಕರಣೆಯನ್ನು ಸಮರ್ಥಿಸಿಬಿಟ್ಟ—ಕೇಳಿ ಈ ಪದ್ಯವೂ ಹಾಗೆಯೇ ಹೇಳುತ್ತದೆ. ಘುಂಯಿ, ಘುಂಯಿ, ಘುಂಯೀ—!! ನಗರದ ಹಿತಬಿಟ್ಟು ಸ್ವಪಕ್ಷದ ಹಿತವನೆ! ಬಗೆಯುವ ಮಂತ್ರಿಗೆ ಶರಣೇಕೆ? !! ನರನಾರಾಯಣ! ನರನಾರಾಯಣ!!

* * *

ಸ್ಥಳೀಕ ಸಂಸ್ಥೆಗಳನ್ನು ರಾಜಕೀಯ ಅಭಿಪ್ರಾಯಕ್ಕಾಗಿ ಪ್ರವೇಶಿಸುವದಲ್ಲವೆಂದು ಮಾಧವರ ಮತ! ಅಬ್ಬಬ್ಬಾ! ಈ ಸಂಸ್ಥೆಗಳ ತುತ್ತತುದಿಯ ಅಧಿಕಾರಿಯಾದ ಶ್ರೀ. ಪಿ ಟಿ. ರಾಜನರೂ, ಬೊಬ್ಬಿಳಿ ರಾಜರೂ ಹೋದಲ್ಲಿ ಬಂದಲ್ಲೆಲ್ಲಾ ತಮ್ಮ 'ಪಕ್ಷವೇ ಪರಮಾತ್ಮ'ನೆನ್ನುತ್ತಾ ಬರುತ್ತಾರಲ್ಲಾ! ಇದೇ ಶ್ರೀ. ರಾಜನರು ಮುನಿಸಿಪಾಲಿಟಿಗಳು ಮಾನಪತ್ರ ಕೊಟ್ಟಲ್ಲೆಲ್ಲಾ, ಕೊಂಗ್ರೆಸಿನವರ ತಿಲಕಸ್ವರಾಜ್ಯನಿಧಿಯು ಅನ್ಯಾಯವಾಗಿದೆಯೆಂದು ಬಿಸಿಬಿಸಿ ಸುಳ್ಳನ್ನಾಡುತ್ತಾ ಬಂದಿದ್ದರಲ್ಲ! ಹೇಗೆ ಮಾಧವರೆ? ಈ ಅಬದ್ಧಗಳನ್ನೆಲ್ಲಾ ಕೇಳಿ ಹೇಳಿಸಿಕೊಳ್ಳುವ ಸಂದರ್ಭವನ್ನು ಉಡುಪಿ ನಗರ ಸಭೆಯು ಕಳಕೊಂಡರೆ ನಿಮಗೇಕೆ ಬೇಸರ? ನಿಮ್ಮ ಬೇಸರ ಹೋಗುವಂತೆ ಒಂದು ಹಾಡು ಹಾಡುತ್ತೇನೆ—ಕೇಳಿಬಿಡಿ. ಘುಂಯಿ, ಘುಂಯಿ, ಜಾತಿಯ ಸ್ವಾರ್ಥದ ಬಲಿಪರ ಭಂಗಿಸಿ! ನೀತಿಯನೊರೆವುದು ಜನ ಧರ್ಮ !! ಘುಂಯಿಾ, ಘುಂಯಿಾ, ನರನಾರಾಯಣ! ನರನಾರಾಯಣ!!

ಮಾಧವರನ್ನು ಇನ್ನೊಂದರಲ್ಲಿಯೂ ಸಮಾಧಾನ ಪಡಿಸುತ್ತೇನೆ. ಬನ್ನಿ ಮಾಧವರೆ! ಡಿ. ಬೋರ್ಡಿನಲ್ಲಿ ಕೊಂಗ್ರೆಸ್ ಮೆಂಬರರಾಗಿದ್ದವರು ಮುನಿಸಿಪಾಲಿಟಿಯಲ್ಲಿ ಜಸ್ಟೀಸ್ ಮಂತ್ರಿಗಳನ್ನು ಸತ್ಕರಿಸಬೇಕೆಂದರೆ ತಪ್ಪೇನು?" ಎನ್ನುತ್ತೀರಲ್ಲ—ಕೇಳಿ. ಬೊಬ್ಬಿಳಿ ರಾಜರು ಈ, ರಾಜನರು—ಇವರೆಲ್ಲಾ ಎಲ್ಲರನ್ನೂ ಸಮಾನತೆಯಿಂದ ಕಾಣಬೇಕಾದ ಮಂತ್ರಿಗಳು—ಆದರೂ ಅವರು ತಾವು ಜಸ್ಟೀಸ್ ಪಾರ್ಟಿಯವರೆಂಬುದನ್ನು ಒಂದೇ ಒಂದು ಕ್ಷಣ ಮರೆತುಬಿಡುವದಿಲ್ಲ—ಅದ್ದರಿಂದಲೇ ಅವರು ತಾಜಾ ಜಸ್ಟೀಸರು! ಮಂಗಳೂರು ಬೋರ್ಡು ಸಭೆಯಲ್ಲಿ ಕೊಂಗ್ರೆಸ್ ಮೆಂಬರರಾಗಿದ್ದವರು ಉಡುಪಿ ಸಭೆಯಲ್ಲಿ ಜಸ್ಟೀಸರಾಗಿಬಿಟ್ಟರೆ, ಮುವತ್ತಾರು ಮೈಲು ಪ್ರಯಾಣದಲ್ಲೇ ಹಾರಿಹೋಗುವ ಕೊಂಗ್ರೆಸು ರಂಗು ಅದ್ಯಾವ ಚಂದಕ್ಕೆ ಹೇಳಿ? ಘುಂಯಿ. ಘುಂಯಿ, ಘುಂಯಿ, 'ಹುಡುಗರ ಪರಿಯಲಿ ಬಡಗನೆ ನಂಬುವ! ಗಡಿಬಿಡಿಯಿಂದಲಿ ಫಲವುಂಟೆ? !! ಘುಂಯಿ, ಘುಂಯಿ, ಘುಂಯಿ, ನರನಾರಾಯಣ! ನರನಾರಾಯಣ!!

ಕೇಳಿ ರಾಯರೆ! ಸಾರ್ವಭೌಮರು ಟೀ ಪಾರ್ಟಿಯಿತ್ತರು; ಗಾಂಧಿಯವರದನ್ನು ಸ್ವೀಕರಿಸಿದರು. ನಾರದನೇಕೆ ಟೀಕಿಸಲಿಲ್ಲ? ಎಂದು ಮಾಧವರ ಪ್ರಶ್ನೆ. ಅಯ್ಯಯ್ಯೋ!! ಅವರು ಕೊಟ್ಟು ಇವರು ಕುಡಿದುದಕ್ಕೆ. ನಾರದನು ಬಾಯಿಚಪ್ಪರಿಸಬೇಕೆ? ನರನಾರಾಯಣ! ನೀವೆಲ್ಲಾ ಕೂಡಿ ಒಂದು ಟೀಪಾರ್ಟಿಯನ್ನು ಶ್ರೀ. ಪಿ. ಟಿ ರಾಜನರಿಗೆ ಕೊಟ್ಟು, ನನ್ನನ್ನೂ ಒಮ್ಮೆ ಕರೆದುನೋಡಿ! ಎರಡು ಮಿನಿಟಿನ ಮಟ್ಟಿಗೆ ತಂಬೂರಿಯನ್ನು ಕೆಳಗಿಟ್ಟು ನಾರದನೂ ಸಿಂಗಲಿಗೆ ಕೈಕೊಟ್ಟಾನು! ಆ ಮಾತು ಬೇರೆ, "ಸದ್ಯಸ್ಥಿತಿಯಲ್ಲಿ ಮುನಿಸಿಪಾಲಿಟಿಯ ರಚನೆಯಲ್ಲಿ ನಮಗಿರುವ ಅಸಮ್ಮತಿಯನ್ನು ತೋರಿಸುವದಕ್ಕಾಗಿ ನಾವು ಮಾನಪತ್ರ ನಿರಾಕರಿಸುತ್ತೇವೆ" ಎನ್ನುತ್ತವೆ ಉಡುಪಿ ನಗರ ಸಭೆ, ಅದು ಸರಿ ಎನ್ನುತ್ತಾನೆ ನಾರದ. ಸ್ನೇಹದಿಂದ ಕೊಡುವ ಟೀಪಾರ್ಟಿ ನಾರದನಿಗೂ ಸಿಹಿ! ಪಕ್ಷಪಾತಿಗಳಿಗೆ ಕೊಡುವ ಮಾನಪತ್ರವುಂಟಲ್ಲಾ — ಅದು ಮಾತ್ರ ಕಹಿ!! ತಿಳಿಯಿತೆ? ಇನ್ನೊಂದೇ ಒಂದು ಸೊಲ್ಲು ಪದ್ಯ ಹೇಳಿ ಹೋಗಿಬಿಡುತ್ತೇನೆ. ಬಾಕಿ ಹಿಂದಿನಿಂದ. ಘುಂಯಿ, ಘುಂಯಿ, ಘುಂಯಿ, ಘುಂಯಿ, ಮಾನವ ಮರೆಯುವ! ಜಾತಿಯ ಕೊರಳಿಗೆ!! ಮಾನಪತ್ರದ ಕಟ್ಟುವದೇಕೆ? !! ಘುಂಯಿ, ಘುಂಯಿ, ಘುಂಯಿ, ಘುಂಯಿ! ನರನಾರಾಯಣ! ನರನಾರಾಯಣ!!

—ನಾರದ.

ರಾಜಕೀಯ ಕಾರ್ಯರಂಗದಲ್ಲಿ ಒಬ್ಬನ ಅಭಿಪ್ರಾಯದಂತೆಯೇ ಎಲ್ಲವರೂ ನಡೆಯುವುದು ಕಷ್ಟಸಾಧ್ಯ. ದೇಶಭಕ್ತಿಯು ತಮ್ಮ ಪಾರ್ಟಿಯವರದ್ದೇ ಜನ್ಮಸಿದ್ಧ ಹಕ್ಕು ಎಂದು ಸಾರುವ ಕಾಂಗ್ರೆಸ್ ಮೆಂಬರರೊಳಗೂ ಅಧಿಕಾರ ಸ್ವೀಕಾರದವರು ಕೆಲವರು, ಅಧಿಕಾರ ಧಿಕ್ಕಾರದವರು ಕೆಲವರು, ಸೋಶಿಯಲಿಸ್ಟರು ಕೆಲವರು, ಇವೇ ನೊದಲಾದ ಪಂಗಡಗಳಿಲ್ಲವೆ? ರಾಜಕೀಯ ಅಭಿಪ್ರಾಯಗಳು ಬೇರೆ ಬೇರೆಯಾಗಿದ್ದರೆ ಅವು ಪರಸ್ಪರ ಸಮ್ಮಿಲನಕ್ಕೆ ತೊಡಕು ಉಂಟುಮಾಡಬೇಕೆ? ಹಾಗಿದ್ದರೆ ಮಹಾತ್ಮ ಗಾಂಧಿಯವರು ಇಂಗ್ಲೆಂಡಿಗೆ ಪ್ರಯಾಣ ಬೆಳಸಿದಾಗ ಜೋರ್ಜ್ ಸಾರ್ವಭೌಮರು ಅವರಿಗೆ ಉಪಹಾರದ ಆಮಂತ್ರಣವಿತ್ತುದೇಕೆ? ಗಾಂಧೀಜಿಯವರು ಅದನ್ನು ಸ್ವೀಕರಿಸಿದುದು ಹೇಗೆ? ನಾರದನು ಅದನ್ನು ಟೀಕಿಸದಿದ್ದುದೇಕೆ? ಸ್ವಭಾವ ಸೌಹಾರ್ದದಿಂದ ಅತಿಥಿ ಸತ್ಕಾರವು ಯೋಗ್ಯವಾದುದೆಂದು ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸ್ ಮೆಂಬರರಾಗಿದ್ದವರೊಬ್ಬರು ಮುನಿಸಿಪಲ್ ಮೀಟಿಂಗಿನಲ್ಲಿ ಜಸ್ಟಿಸ್ ಪಾರ್ಟಿಯವರನ್ನು ಸತ್ಕರಿಸಬೇಕೆಂದು ಹೇಳಿದುದರಿಂದ ಅವರು ಯಾವ ಪಾರ್ಟಿ ಶಿಸ್ತಿಗೆ ವಿರೋಧವಾಗಿ ನಡೆದ ಹಾಗಾಯಿತು? ನಾರದನು ಬೆಚ್ಚಿಬಿದ್ದು ಟೀಕಿಸುವುದರಲ್ಲೇನಿದೆ? —ಮಾಧವ.

ಕಸ್ತೂರಿ ಮಿಶ್ರಿತ ದಶಮೂಲವೆಂಬ
ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಕೆಬಗ್ಯೆಯೂ, ಪ್ರಸವವೇದನಾ ಬಗ್ಯೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ ಶಾಸ್ತ್ರಿ,
ಆಯುರ್ವೇದ ಭೂಷಣ ಮಂಗಳೂರು ದ. ಕ.

ಏಜಂಟರು:—ಮೆಸರ್ಸ್ ಒರಿಯಂಟಲ್‌ಡ್ರಗ್ಸ್‌ಎಂಡ್ ಜನರಲ್ ಏಜನ್ಸಿ, ಸಂಪಿಗೆ ರಸ್ತೆ ಮಲ್ಲೇಶ್ವರಮ್, (ಬೆಂಗಳೂರು ಸಿಟಿ)

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.

ಸ್ಥಾಪನೆ: 1920

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.		ತಲಪುವ ಘಂಟೆ	
ಮಿಕ್ಸೆಡ್	ಬೆಳಿಗ್ಗೆ	5-55	ರಾತ್ರಿ	8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಿಗ್ಗೆ	8-25	ಮಧ್ಯಾಹ್ನ	1-20
ಮೈಲ್	ಬೆಳಿಗ್ಗೆ	9-50	ಸಂಜೆ	4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ	12-15	ಮಧ್ಯಾಹ್ನ	2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ	3-20	ಸಂಜೆ	6-15
ಶಟಲ್	ಸಂಜೆ	5-35	ಬೆಳಿಗ್ಗೆ	9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

(1907ರಲ್ಲಿ ಸ್ಥಾಪಿತವಾದದ್ದು)

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸ ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ ವಿಮಾ ಹಣ ಪಾವತಿ ರೂ. **37** ಲಕ್ಷ ಮಿಕ್ಕಿವೆ.
ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು.
ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.
ಏಜನ್ಸಿ ಶರ್ತಗಳು:—ಅತ್ಯಧಿಕ ನಫೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ.
ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಯಿರಿ.

P. D. BHARGOVA,
General Manager, AJMER,
Or SUPERINTENDENT, 2/8, Linga Chetty Street, MADRAS

Or Chief Agent:—
BELLARY: MADURA: TRICHINOPOLY: VELLORE.

ಕಿರಿಯರ ಪ್ರಪಂಚದ ಪುಸ್ತಕಗಳು.

೧. ನಾಡಕಥೆ	೦	೨	೦
೨. ಮುಂದಿನ ದೇವರು	೦	೨	೦
೩. ಸ್ವತಂತ್ರ ಜೀವನೋಪಾಯ	೦	೨	೬
೪. ಕುರಲವ	೦	೪	೦
೫. ಸಂಶಯ ಪಿಶಾಚಿ	೦	೬	೦
೬. ಕಾವ್ಯಸಾಮ್ರಾಜ್ಯ	೦	೧೨	೦
೭. ಮಧುವನ	೧	೮	೦
೮. ವ್ಯಭಿಚಾರಿಣಿ ಯಾರು	೦	೮	೦

ನಮ್ಮಲ್ಲಿ ಅಖಿಲ ಕರ್ನಾಟಕದ ಆಧುನಿಕ ಕನ್ನಡ ಗ್ರಂಥಗಳು ದೊರೆಯುತ್ತವೆ.

ಕಿರಿಯರ ಪ್ರಪಂಚ, ಉಡುಪಿ, ದ. ಕ.

ಸೋಲ ಏಜೆಂಟರು—
ಸಪ್ಲೈ ಏಜೆನ್ಸಿ ಲಿಮಿಟೆಡ್, ಉಡುಪಿ.

ಸ್ವದೇಶೀ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. Pai, Bros.
ಪಿ. ಎ. ಪೈ. ಬ್ರದರ್ಸ್.
ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd.,

Head Office MANGALORE Branch Office Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟ್ ರಸ್ತೆ ಉಡ್ಪಿ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½. ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4½. 1 ವರ್ಷದ ಬಾಬ್ತು ಸಾ. ಶೆ. 5½. 2 ವರ್ಷ ವ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ, ಭಂಗಾರದ ಈಡಿನ ಮೇಲೆ ರೂ. 100 ಅಥವಾ ಅದರ ಮೇಲಿನ ಐವೇಜಿಗ ಸಾ. ಶೆ. 8 ಮತ್ತು ಅದಕ್ಕಿಂತ ಕೆಳಗಣದು ಸಾ. ಶೆ. 9ರ ದರದ ಬಡ್ಡಿಯಲ್ಲಿಯೂ ಸಾಲ ದೊರೆವುದು
ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಸಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B Shetty, ವಿಜಯ ಬ್ಯಾಂಕ್, ಲಿಮಿಟೆಡ್ K. Gopalkrishna Shetty.
ಚೇರ್‌ಮೇನ್ ಕಡ್ರಿರೋಡ್, ಮಂಗಳೂರು. ಸೆಕ್ರೆಟರಿ.

ಕಸಿಗಿಡಗಳು.

ಸಪ್ಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಕಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೆ ರುಚಿ, ರಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ವಾದೇಶೀ ಶಾಪ್, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕಂ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋಸ್ ಸ್ಟೋರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆಸರಾ ನರ್ಸರಿ,
ಪೋಸ್ಟ್ ಕಾಪು, ದ ಕನ್ನಡ.

I Write as I Please *by* B. N. RAO

Mr. B Vasudeva Rao, Advocate, Udipi, has announced his candidature for election to the Madras Legislative Council from the South Kanara constituency. It is rumoured that either Rao Saheb Dr. U. Rama Rao or Mr. U. C. S. Bhat will be adopted as the Congress candidate.

Assembly elections.

Mr. Paniady's candidature for the Assembly has undoubtedly created an unfortunate situation. No person may doubt Mr. Paniady's sincerity. During the civil disobedience movement when many so called leaders in South Kanara retired into their shells or positively sabotaged the movement from inside, Mr. Paniady took the lead and suffered imprisonment for his convictions. His standing therefore as an independent candidate has come as a great surprise to one and all. The primary task before the electors in this Presidency is to inflict a smashing defeat on the Justice Party. Any dissension therefore among Congressmen is to be deplored. It is clear that Mr. Paniady holds strong views about his candidature. The situation requires tactful handlir ; unless we can view with equanimity the triumph of the reactionary Justice Party.

No special meeting.

There was a move a few days ago to requisition a special meeting of the Udipi Municipality with a view to get the decision of the Municipality in the matter of naming the road adjoining the Ajjarkad maidan as Sir Lallubhai Samaldas Road reversed. As it is, it seems that the question will only be considered in the next ordinary meeting.

Electric supply for Udipi

It looks as if Udipi is going to have electric supply in the near future. At a meeting of the Committee that was appointed about a fortnight ago as a result of the deliberations of some of the influential persons of the place, and which was held on Sunday last at the premises of the Canara Industrial & Banking Syndicate with Mr. Aroor Lakshminarayana Rao, the Municipal Chairman, in the Chair, Mr. V. S. Kudva, the General Manager of the C. P. C. Co., Ltd, and an authority on industrial undertakings is reported to have expressed himself strongly in favour of the project. He was against the Municipality undertaking the work on grounds of efficiency, but he was thoroughly satisfied that if a joint stock company was started for the purpose, the concern would be a great success. Mr. Aroor, it is believed, gave an assurance that he would try his best to persuade the Council to agree to take electric current from the company for lighting the streets. It may be stated here that at present the Municipality spends about Rs 2,000 a year on kerosene lamps and when the town is fully lit, the amount is expected to rise to Rs 4,000.

The Committee finally decided to appoint Sub-Committee consisting of Dr. T. Madhava Pai, Mr. V. S. Kudva, Mr. Anantha Shetty, Mr. P. Padmanabha Rao and Mr. P. Gopala Naik to draft the Memorandum and Articles of Association of the company for applying to the Government for the necessary license. And what with a plethora of idle money waiting for investment, there can be no doubt that the shares will be fully taken up by the public when they are issued for subcription in due course.

ESTD 1906.

CANARA BANK, LIMITED.

OFFICES AT

Alleppey	Chikmagalur	Kasargod
Arsikere	Cochin	Mangalore-Bunder
Badagara	Coondapoor	Mangalore-City
Bangalore City	Davangere	Manjeshwar
Bombay-Fort	Dodballapur	Moolky
Bombay-Mandvi	Ernaculam	Payyanur
Bantwal	Ganguli	Puttur
Calicut	Hubli	Udipi
Cannanore	Karkala	

Total Working Funds Rs. 75,00,000

ರಾಷ್ಟ್ರಪತಿ ಜವಹಿರಲಾಲರ ಸಂದೇಶ

ರಾಷ್ಟ್ರಪತಿ ಪಂಡಿತ ಜವಹಿರಲಾಲ ನೆಹರುಗಳವರು ಕನ್ನಡ ನಾಡಿನ ಮಹಾಜನರಿಗೆ ತಮ್ಮ ಪವಿತ್ರ ಸಂದೇಶವನ್ನು ಕಳುಹಿಸಿರುವರು. ಅದು ಈರೀತಿಯಲ್ಲಿದೆ—

'ಕರ್ನಾಟಕವು ಚುನಾವಣೆಯ ಕಾರ್ಯಾರಂಭವನ್ನು ಸದ್ಯದಲ್ಲಿಯೇ ಮಾಡಲಿದೆಯೆಂದು ತಿಳಿದಿರುವೆನು. ಕರ್ನಾಟಕದ ಜನರಿಗೆ ಸನ್ಮಂಗಳವಾಗಲೆಂದು ಹರಸುತ್ತೇನೆ. ಕನ್ನಡಿಗರು ರಾಷ್ಟ್ರಸಭೆಯ ಸಂದೇಶವನ್ನು ಜನರ ದಾಸ್ಯವನ್ನು ಹೋಗಲಾಡಿಸುವ ಭಾರತ ಸ್ವಾತಂತ್ರ್ಯದ ಸಂದೇಶವನ್ನು ಪ್ರಾಂತದ ಪ್ರತಿಯೊಂದು ಮೂಲೆಗೂ ತೆಗೆದುಕೊಂಡು ಹೋಗುವರೆಂದು ನಂಬಿದ್ದೇನೆ. ರಾಷ್ಟ್ರಸಭೆಯು ಪ್ರಾಂತಿಕ ನ್ಯಾಯ ವಿಧಾಯಕ ಸಭೆಗಳಿಗೆ ಉಮೇದ್ವಾರರನ್ನು ನಿಲ್ಲಿಸಬೇಕೆಂದು ನಿರ್ಧರಿಸಿದೆ; ನಾವು ಈ ಚುನಾವಣೆಯಲ್ಲಿ ಸಂಪೂರ್ಣ ಶಕ್ತಿಯನ್ನು ಉಪಯೋಗಿಸಿ ಹೋರಾಡಬೇಕೆಂದು ಆಲೋಚಿಸಿದ್ದೇವೆ. ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ನಾವು ಜಯಶಾಲಿಗಳಾಗುವೆವೆಂಬುದರಲ್ಲಿ ಸಂಶಯವಿಲ್ಲ. ಚುನಾವಣೆಗಳಲ್ಲಿ ಪ್ರಕೃತ ಪಡೆಯುವ ಜಯಕ್ಕಿಂತಲೂ ಮುಖ್ಯವಾದುದು ಯಾವುದೆಂದರೆ ನಮ್ಮ ಧ್ಯೇಯಗಳನ್ನೂ, ನಮ್ಮ ಗುರಿಯನ್ನೂ ಬಿಡದಿರುವುದು. ಏನು ಬೇಕಾದರೂ ಸಂಭವಿಸಲಿ, ನಾವು ಆ ಗುರಿಯನ್ನು ಬಿಟ್ಟು ಕೆಳಗಿಳಿಯಕೂಡದು. ಅಂತಹ ಉಚ್ಚ ಧ್ಯೇಯ ಗುರಿಗಳಿದ್ದುದರಿಂದಲೇ ರಾಷ್ಟ್ರಸಭೆಯು ಹಿಂದೀಯರ ಒಕ್ಕಟ್ಟಿನ, ಸ್ವಾತಂತ್ರ್ಯದ, ಭಾರತ ಸ್ವಾತಂತ್ರ್ಯದ ಹೆಗ್ಗುರುತಾಗಿದೆ. ಅಂತಹ ಧ್ಯೇಯಗಳಿರುವುದರಿಂದಲೇ ನಮ್ಮ ಗುರಿಯನ್ನು ನಾವು ಸಂಪಾದಿಸುವೆವೆಂಬ ಧೈರ್ಯವು ನಮಗಿದೆ.

ನಮ್ಮನ್ನಿಂದು ಇದಿರಿಸುವಷ್ಟು ಘನತರವಾದ ವಿಷಮ ಪರಿಸ್ಥಿತಿಯು ಹಿಂದೆಂದೂ ಲೋಕವನ್ನು ಇದಿರಿಸಿಲ್ಲ. ನಮ್ಮಲ್ಲಿ ಬಲಶಾಲಿಗಳಾದವರ ಧೈರ್ಯ ಸಾಹಸವನ್ನೂ, ಶಕ್ತಿಯನ್ನೂ ಭವಿಷ್ಯವು ಪರೀಕ್ಷಿಸಿ ತೋರಿಸುವುದು. ಇದನ್ನು ಜ್ಞಾಪಕದಲ್ಲಿಟ್ಟುಕೊಂಡು, ಇಂತಹ ಪರಿಸ್ಥಿತಿಯುಬಾರದಂತೆ ಮಾಡಬೇಕಾದರೆ ಮತ್ತು ಬರಬಹುದಾದ ಕಷ್ಟಪರಂಪರೆಗಳನ್ನು ಪಡೆಯಬೇಕಾದರೆ ಬಲವಾದ, ಸರಿಯಾದ ಶಿಸ್ತುಗಳಿರುವ ಮತ್ತು ಉಚ್ಚ ಧ್ಯೇಯ ಮತ್ತು ಗುರಿಗಳಿರುವ ಒಂದು ಸಂಸ್ಥೆಯನ್ನು ಹೊಂದಿಕೊಂಡಿರಬೇಕು. ಕಷ್ಟ ಒದಗುವ ಸಂಭವದಲ್ಲಿಯೂ ಆ ಗುರಿಯನ್ನು ತ್ಯಜಿಸದ ಸಂಸ್ಥೆಯನ್ನು ಹೊಂದಬೇಕು. ಇಂದು ಅಂತಹ ಸಂಸ್ಥೆಯೆಂದರೆ ಭಾರತ ರಾಷ್ಟ್ರೀಯಸಭೆ, ಆದಕಾರಣ ನಾವೆಲ್ಲರೂ ಕಾಂಗ್ರೆಸ್ ಧ್ವಜದ ಕೆಳಗೆ ನಿಂತು, ಅದನ್ನು ಇನ್ನಷ್ಟು ಬಲಪಡಿಸಿ ಹಿಂದುಸ್ಥಾನದ ಐಕ್ಯದ ಮತ್ತು ಸ್ವಾತಂತ್ರ್ಯದ ಗುರುತನ್ನಾಗಿ ಮಾಡಬೇಕು ಕರ್ನಾಟಕದ ಜನರು ಮೊದಲಿನಂತೆಯೆ ಇಂದೂನಾಳೆಯೂ ಕಾಂಗ್ರೆಸಿಗೆ ಬೆಂಬಲಕೊಟ್ಟು ನಿಲ್ಲುವರೆಂದೂ ಕಾಂಗ್ರೆಸ್ ಕಡೆಯ ಸದಸ್ಯರಿಗೇ ಚುನಾವಣೆಯಲ್ಲಿ ಜಯವಾಗುವಂತೆ ಮಾಡುವರೆಂದೂ ಮತ್ತು ಇನ್ನುಮುಂದಕ್ಕೆ ಬರಲಿರುವ ಇನ್ನೂ ಘೋರವಾದ ಹೋರಾಟಕ್ಕೆ ಪೂರ್ವಸಿದ್ಧತೆಮಾಡುವರೆಂದೂ ನಂಬಿದ್ದೇನೆ.

ಕಸ್ತೂರಿ ಮಿಶ್ರಣ ದಶಮೂಲವೆಂಬ
ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಕೆಬಗ್ಯೆಯೂ, ಪ್ರಸವವೇದನಾ ಬಗ್ಯೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ ಶಾಸ್ತ್ರಿ,
ಆಯುರ್ವೇದ ಭೂಷಣ ಮಂಗಳೂರು ದ. ಕ.

☞ ಏಜಂಟರು:—ಮೆಸರ್ಸ್ ಓರಿಯಂಟಲ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರಸ್ತೆ ಮಲ್ಲೇಶ್ವರಮ್, (ಬೆಂಗಳೂರು ಸಿಟಿ)

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.



ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಪರ್‌ಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲುಪುವ ಘಂಟೆ
ಮಿಕ್ಸೆಡ್	ಬೆಳಗ್ಗೆ 5-55	ರಾತ್ರಿ 8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 8-15
ಶಟಲ್	ಸಂಜೆ 5-25	ಬೆಳಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

(1907ರಲ್ಲಿ ಸ್ಥಾಪಿತವಾದದ್ದು)

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸ ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ ವಿಮಾ ಹಣ ಪಾವತಿ ರೂ. **37** ಲಕ್ಷ ಮಿಕ್ಕಿವೆ.
ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು.
ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.
ಏಜನ್ಸಿ ಶರ್ತಗಳು:—ಅತ್ಯಧಿಕ ನಫೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ.
ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಯಿರಿ.

P. D. BHARGOVA,
General Manager, ***AJMER,***
Or SUPERINTENDENT, *278, Linga Chetty Street,* MADRAS

Or Chief Agent.—
BELLARY: MADURA: TRICHINOPOLY: VELLORE.

ಕಿರಿಯರ ಪ್ರಪಂಚದ ಪುಸ್ತಕಗಳು.

೧. ನಾಡಕಥೆ	೦	೨	೦
೨. ಮುಂದಿನ ದೇವರು	೦	೨	೦
೩. ಸ್ವತಂತ್ರ ಜೀವನೋಪಾಯ	೦	೨	೬
೪. ಕುಶಲವ	೦	೪	೦
೫. ಸಂಶಯ ಪಿಶಾಚಿ	೦	೬	೦
೬. ಕಾವ್ಯಸಾಮ್ರಾಜ್ಯ	೦	೧೨	೦
೭. ಮಧುವನ	೧	೮	೦
೮. ವ್ಯಭಿಚಾರಿಣಿ ಯಾರು	೦	೮	೦

ನಮ್ಮಲ್ಲಿ ಅಖಿಲ ಕರ್ನಾಟಕದ ಆಧುನಿಕ ಕನ್ನಡ ಗ್ರಂಥಗಳು ದೊರೆಯುತ್ತವೆ.

ಕಿರಿಯರ ಪ್ರಪಂಚ, ಉಡುಪಿ, ದ. ಕ.

ಸೋಲ ಏಜೆಂಟರು—
ಸಪ್ಲೈ ಏಜೆನ್ಸಿ ಲಿಮಿಟೆಡ್, ಉಡುಪಿ.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. Pai, Bros.
ಪಿ. ಎ. ಪೈ. ಬ್ರದರ್ಸ್.
ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd.,

Head Office MANGALORE. Branch Office Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ ಉಡ್ಪಿ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½. ಖಾಯಂ ಠೇವಣಾತಿಗಳು 3 ತಿಂಗಳ ಬಾಬ್ತು, ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು, ಸಾ. ಶೆ. 4½. 1 ವರ್ಷದ ಬಾಬ್ತು, ಸಾ. ಶೆ. 5½ 2 ವರ್ಷ ವ ಮೇಲಿನವುಗಳ ಬಾಬ್ತು, ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ರೂ. 100 ಅಥವಾ ಅದರ ಮೇಲಣ ಐವೇಜಿಗೆ ಸಾ. ಶೆ. 8 ಮತ್ತು ಅದಕ್ಕಿಂತ ಕೆಳಗಣದು ಸಾ. ಶೆ. 9ರ ದರದ ಬಡ್ಡಿಯಲ್ಲಿಯೂ ಸಾಲ ದೊರೆವುದು ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

A. B. Shetty, ವಿಜಯ ಬ್ಯಾಂಕ್, ಲಿಮಿಟೆಡ್ K. Gopalkrishna Shetty.
ಚೇರ್ಮೆನ್ ಕಛೇರಿರೋಡ್, ಮಂಗಳೂರು. ಸೆಕ್ರೆಟರಿ.

ಕಸಿಗಿಡಗಳು.

ಸಪ್ಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಕಟ್ಲೆ ಹಣ್ಣಾಗುತ್ತದು, ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೆ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಜಾತಿ ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ವಾದಶಿ ಡಿಪೋ, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

I Write as I Please *by* B. N. RAO

Mr. B Vasudeva Rao, Advocate, Udipi, has announced his candidature for election to the Madras Legislative Council from the South Kanara constituency. It is rumoured that either Rao Saheb Dr. U. Rama Rao or Mr. U. C. S. Bhat will be adopted as the Congress candidate.

Assembly elections.

Mr. Paniady's candidature for the Assembly has undoubtedly created an unfortunate situation. No person may doubt Mr. Paniady's sincerity. During the civil disobedience movement when many so called leaders in South Kanara retired into their shells or positively sabotaged the movement from inside, Mr. Paniady took the lead and suffered imprisonment for his convictions. His standing therefore as an independent candidate has come as a great surprise to one and all. The primary task before the electors in this Presidency is to inflict a smashing defeat on the Justice Party. Any dissension therefore among Congressmen is to be deplored. It is clear that Mr. Paniady holds strong views about his candidature. The situation requires tactful handling unless we can view with equanimity the triumph of the reactionary Justice Party.

No special meeting.

There was a move a few days ago to requisition a special meeting of the Udipi Municipality with a view to get the decision of the Municipality in the matter of naming the road adjoining the Ajjarkad maidan as Sir Lallubhai Samaldas Road reversed. As it is, it seems that the question will only be considered in the next ordinary meeting.

Electric supply for Udipi

It looks as if Udipi is going to have electric supply in the near future. At a meeting of the Committee that was appointed about a fortnight ago as a result of the deliberations of some of the influential persons of the place, and which was held on Sunday last at the premises of the Canara Industrial & Banking Syndicate with Mr. Aroor Lakshminarayana Rao, the Municipal Chairman, in the Chair, Mr. V. S. Kudva, the General Manager of the C. P. C. Co., Ltd., and an authority on industrial undertakings is reported to have expressed himself strongly in favour of the project. He was against the Municipality undertaking the work on grounds of efficiency, but he was thoroughly satisfied that if a joint stock company was started for the purpose, the concern would be a great success. Mr. Aroor, it is believed, gave an assurance that he would try his best to persuade the Council to agree to take electric current from the company for lighting the streets. It may be stated here that at present the Municipality spends about Rs 2,000 a year on kerosene lamps and when the town is fully lit, the amount is expected to rise to Rs 4,000.

The Committee finally decided to appoint Sub-Committee consisting of Dr. T. Madhava Pai, Mr. V. S. Kudva, Mr. Anantha Shetty, Mr. P. Padmanabha Rao and Mr. P. Gopala Naik to draft the Memorandum and Articles of Association of the company for applying to the Government for the necessary license. And what with a plethora of idle money waiting for investment, there can be no doubt that the shares will be fully taken up by the public when they are issued for subscription in due course.

ESTD 1906.

CANARA BANK, LIMITED.

OFFICES AT

Alleppey	Chikmagalur	Kasargod
Arsikere	Cochin	Mangalore-Bunder
Badagara	Coondapoor	Mangalore-City
Bangalore City	Davangere	Manjeshwar
Bombay-Fort	Dodballapur	Moolky
Bombay-Mandvi	Ernaculam	Payyannur
Buntwal	Gangult	Puttur
Calicut	Hubli	Udipi
Cannanore	Karkala	

Total Working Funds Rs. 75,00,000

ರಾಷ್ಟ್ರಪತಿ ಜವಹಿರಲಾಲರ ಸಂದೇಶ

ರಾಷ್ಟ್ರಪತಿ ಪಂಡಿತ ಜವಹರಲಾಲ ನೆಹರುಗಳವರು ಕನ್ನಡ ನಾಡಿನ ಮಹಾಜನರಿಗೆ ತಮ್ಮ ಪವಿತ್ರ ಸಂದೇಶವನ್ನು ಕಳುಹಿಸಿರುವರು. ಅದು ಈರೀತಿಯಲ್ಲಿದೆ—

'ಕರ್ನಾಟಕವು ಚುನಾವಣೆಯ ಕಾರ್ಯಾರಂಭವನ್ನು ಸದ್ಯದಲ್ಲಿಯೇ ಮಾಡಲಿದೆಯೆಂದು ತಿಳಿದಿರುವೆನು. ಕರ್ನಾಟಕದ ಜನರಿಗೆ ಸನ್ಮಂಗಳವಾಗಲೆಂದು ಹರಸುತ್ತೇನೆ. ಕನ್ನಡಿಗರು ರಾಷ್ಟ್ರಸಭೆಯ ಸಂದೇಶವನ್ನು ಜನರ ದಾಸ್ಯವನ್ನು ಹೋಗಲಾಡಿಸುವ ಭಾರತ ಸ್ವಾತಂತ್ರ್ಯದ ಸಂದೇಶವನ್ನು ಪ್ರಾಂತದ ಪ್ರತಿಯೊಂದು ಮೂಲೆಗೂ ತೆಗೆದುಕೊಂಡು ಹೋಗುವರೆಂದು ನಂಬಿದ್ದೇನೆ. ರಾಷ್ಟ್ರಸಭೆಯು ಪ್ರಾಂತಿಕ ನ್ಯಾಯ ವಿಧಾಯಕ ಸಭೆಗಳಿಗೆ ಉಮೇದ್ವಾರರನ್ನು ನಿಲ್ಲಿಸಬೇಕೆಂದು ನಿರ್ಧರಿಸಿದೆ; ನಾವು ಈ ಚುನಾವಣೆಯಲ್ಲಿ ಸಂಪೂರ್ಣ ಶಕ್ತಿಯನ್ನು ಪ್ರಯೋಗಿಸಿ ಹೋರಾಡಬೇಕೆಂದು ಆಲೋಚಿಸಿದ್ದೇವೆ. ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ನಾವು ಜಯಶಾಲಿಗಳಾಗುವೆವೆಂಬುದರಲ್ಲಿ ಸಂಶಯವಿಲ್ಲ. ಚುನಾವಣೆಗಳಲ್ಲಿ ಪ್ರಕೃತ ಪಡೆಯುವ ಜಯಕ್ಕಿಂತಲೂ ಮುಖ್ಯವಾದುದು ಯಾವುದೆಂದರೆ ನಮ್ಮ ಧ್ಯೇಯಗಳನ್ನೂ, ನಮ್ಮ ಗುರಿಯನ್ನೂ ಬಿಡದಿರುವುದು. ಏನು ಬೇಕಾದರೂ ಸಂಭವಿಸಲಿ, ನಾವು ಆ ಗುರಿಯನ್ನು ಬಿಟ್ಟು ಕೆಳಗಿಳಿಯಕೂಡದು. ಅಂತಹ ಉಚ್ಚ ಧ್ಯೇಯ ಗುರಿಗಳಿದ್ದುದರಿಂದಲೇ ರಾಷ್ಟ್ರಸಭೆಯು ಹಿಂದೀಯರ ಒಕ್ಕಟ್ಟಿನ, ಸ್ವಾತಂತ್ರ್ಯದ, ಭಾರತ ಸ್ವಾತಂತ್ರ್ಯದ ಹೆಗ್ಗುರುತಾಗಿದೆ. ಅಂತಹ ಧ್ಯೇಯಗಳಿರುವುದರಿಂದಲೇ ನಮ್ಮ ಗುರಿಯನ್ನು ನಾವು ಸಂಪಾದಿಸುವೆವೆಂಬ ಧೈರ್ಯವು ನಮಗಿದೆ.

ನಮ್ಮನ್ನಿಂದು ಇದಿರಿಸುವಷ್ಟು ಘನತರವಾದ ವಿಷಮ ಪರಿಸ್ಥಿತಿಯು ಹಿಂದೆಂದೂ ಲೋಕವನ್ನು ಇದಿರಿಸಿಲ್ಲ. ನಮ್ಮಲ್ಲಿ ಬಲಶಾಲಿಗಳಾದವರ ಧೈರ್ಯ ಸಾಹಸವನ್ನೂ, ಶಕ್ತಿಯನ್ನೂ ಭವಿಷ್ಯವು ಪರೀಕ್ಷಿಸಿ ತೋರಿಸುವುದು. ಇದನ್ನು ಜ್ಞಾಪಕದಲ್ಲಿಟ್ಟುಕೊಂಡು, ಇಂತಹ ಪರಿಸ್ಥಿತಿಯು ಬಾರದಂತೆ ಮಾಡಬೇಕಾದರೆ ಮತ್ತು ಬರಬಹುದಾದ ಕಷ್ಟ ಪರಂಪರೆಗಳನ್ನು ಎದುರಿಸಬೇಕಾದರೆ ಬಲವಾದ, ಸರಿಯಾದ ಶಿಸ್ತುಗಳಿರುವ ಮತ್ತು ಉಚ್ಚ ಧ್ಯೇಯ ಮತ್ತು ಗುರಿಗಳಿರುವ ಒಂದು ಸಂಸ್ಥೆಯನ್ನು ಹೊಂದಿಕೊಂಡಿರಬೇಕು. ಕಷ್ಟ ಒದಗುವ ಸಂಭವದಲ್ಲಿಯೂ ಆ ಗುರಿಯನ್ನು ತ್ಯಜಿಸದ ಸಂಸ್ಥೆಯನ್ನು ಹೊಂದಬೇಕು. ಇಂದು ಅಂತಹ ಸಂಸ್ಥೆಯೆಂದರೆ ಭಾರತ ರಾಷ್ಟ್ರೀಯ ಸಭೆ. ಆದಕಾರಣ ನಾವೆಲ್ಲರೂ ಕಾಂಗ್ರೆಸ್ ಧ್ವಜದ ಕೆಳಗೆ ನಿಂತು, ಅದನ್ನು ಇನ್ನಷ್ಟು ಬಲಪಡಿಸಿ ಹಿಂದುಸ್ಥಾನದ ಐಕ್ಯದ ಮತ್ತು ಸ್ವಾತಂತ್ರ್ಯದ ಗುರುತನ್ನಾಗಿ ಮಾಡಬೇಕು. ಕರ್ನಾಟಕದ ಜನರು ಮೊದಲಿನಂತೆಯೇ ಇಂದೂ ನಾಳೆಯೂ ಕಾಂಗ್ರೆಸಿಗೆ ಬೆಂಬಲಕೊಟ್ಟು ನಿಲ್ಲುವರೆಂದೂ ಕಾಂಗ್ರೆಸ್ ಕಡೆಯ ಸದಸ್ಯರಿಗೇನೇ ಚುನಾವಣೆಯಲ್ಲಿ ಜಯವಾಗುವಂತೆ ಮಾಡುವರೆಂದೂ ಮತ್ತು ಇನ್ನು ಮುಂದಕ್ಕೆ ಬರಲಿರುವ ಇನ್ನೂ ಘೋರತರವಾದ ಹೋರಾಟಕ್ಕೆ ಪೂರ್ವಸಿದ್ಧತೆ ಮಾಡುವರೆಂದೂ ನಂಬಿದ್ದೇನೆ.

ನವಯುಗ ಪತ್ರಿಕೆಯು ಮಂಗಳೂರಿನಿಂದ ಇದೇ ಸಪ್ಟಂಬರ ಆದಿಯಲ್ಲೇ ಉಡುಪಿಗೆ ಬಂದಿದ್ದರೂ, ಕೆಲವು ಪತ್ರವ್ಯವಹಾರಕರು ವಿಳಾಸ ಬರೆಯುವುದರಲ್ಲಿ ತಪ್ಪಿ ಬೀಳುತ್ತಿರುವರು. ನವಯುಗಕ್ಕೆ ಸಂಬಂಧಪಟ್ಟ ಎಲ್ಲಾ ಪತ್ರವ್ಯವಹಾರಗಳನ್ನು "ನವಯುಗ ಆಫೀಸು, ಉಡುಪಿ" ವಿಳಾಸಕ್ಕೆನೇ ತಪ್ಪದೆ ಮಾಡಬೇಕಾಗಿದೆ. ಕೆನರಾ ಛಾಪಖಾನೆಯೂ ಅದರ ಮೆನೇಜರರೇ ಮೊದಲಾದವರೆಲ್ಲಾ ಮಂಗಳೂರಿನಲ್ಲಿಯೇ ಇದ್ದು ನವಯುಗ ಪತ್ರಿಕೆಯೊಂದೇ ಉಡುಪಿಗೆ ಬಂದಿರುವದೆಂಬುದನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

ಮೆನೇಜರ್, 'ನವಯುಗ,' ಉಡುಪಿ.

ಉಡುಪಿ, ತಾ.- ೮-೧೦-'೩೬ ಗುರುವಾರ

ಕ್ಷುದ್ರ ಸ್ವಾರ್ಥದ ಕೂಗು.

ಇಂದೀಗ ಸಮತಾವಾದವು ಇಡೀ ಲೋಕದಲ್ಲೇ ಹಬ್ಬಿರುವ ಅದೊಂದು ನವೀನ ತತ್ವವಾಗಿರುವುದು. ಭಂಡವಾಳಶಾಹಿ, ಸಾಮ್ರಾಜ್ಯಶಾಹಿಗಳ ಪರಿಣಾಮವಾದ ಜನತೆಯ ದಾರಿದ್ರ್ಯ, ದುಃಖ, ನಿರುದ್ಯೋಗಗಳ ಭೀಕರ ಪರಿಸ್ಥಿತಿಯನ್ನು ಕೆಲಮಟ್ಟಿಗಾದರೂ ನಿವಾರಿಸಿ ಜನಸಾಮಾನ್ಯರ ಜೀವನದಲ್ಲಿ ಆಶೋದಯವನ್ನುಂಟುಮಾಡುವ ಒಂದೇ ಒಂದು ಉಪಾಯವಾಗಿ ಈಗ ಸಮತಾವಾದವು ಜನಮನವನ್ನಾಕರ್ಷಿಸಿರುವುದು. ಹಿಂದೀಯರ ಮೇಲಾದರೂ ಈ ನವೀನ ತತ್ವದ ಪರಿಣಾಮವಾಗದಿಲ್ಲ. ಅದು ಹಿಂದು ದೇಶದಲ್ಲಿಯೂ ದಿನೇ ದಿನೇ ಬೆಳೆಯುತ್ತಾ ಬಂದು ಇಂದೀಗ ಸ್ಥಿರವಾದ ನೆಲೆಯನ್ನು ಪಡೆದಿರುವುದು. ಇದಕ್ಕೆ ಬಲುಮಟ್ಟಿಗೆ ಪಂಡಿತ ಜವ್ಹಾರಲಾಲರೇ ಕಾರಣವೆಂದು ಹೇಳಬೇಕು. ಆಗರ್ಭ ಶ್ರೀಮಂತರಾಗಿ ಹುಟ್ಟಿ, ಧನ ದೌಲತ್ತಿನ ತುತ್ತ ತುದಿಗೇರಿದ್ದ ಪಂಡಿತರು, ಧನಶಾಹಿಯ ಭಿನ್ನಭೇದ ಮೂಲವಾದ ಸಮಾಜಸ್ಥಿತಿಯು ಆಮೂಲಾಗ್ರವಾಗಿ ಬದಲಾವಣೆಹೊಂದದೆ ಗತ್ಯಂತರವಿಲ್ಲೆಂದು ನಿರ್ಧರಿಸಿ, ಅದರ ಬದಲಾಗಿ ಹೆಚ್ಚಿನ ಜನರ ಸುಖಸಾಧಕವಾದ ಸಮತಾವಾದದ ಸಮಾಜ ವ್ಯವಸ್ಥೆಯೇ ಯುಕ್ತವಾದುದೆಂದು ತಿಳಿದು ಅದನ್ನು ಧೈರ್ಯದಿಂದ ಕಾಂಗ್ರೆಸಿನ ಪ್ರೆಸಿಡೆಂಟರ ಗಾದಿಯಿಂದಲೆ ಸಾರಿದೇಶಕ್ಕೆಲ್ಲಾ ಅವಕ್ಕೊಂದು ಗಣನೀಯ ಸ್ಥಾನವನ್ನಿತ್ತಿರುವರು.

ಸಮತಾವಾದಕ್ಕೆ ಅಷ್ಟೊಂದು ಪ್ರಾಮುಖ್ಯ ಸ್ಥಾನದೊರೆತು, ಅದರ ಪ್ರಭಾವವು ದಿನೇ ದಿನೇ ಹೆಚ್ಚುತ್ತಿರುವುದನ್ನು ಕಂಡು ದೇಶದ ಸಂಕುಚಿತ ಸ್ವಾರ್ಥಪರ ಭಂಡವಾಳಶಾಹಿಯೂ, ಸಾಮ್ರಾಜ್ಯಶಾಹಿಯೂ ದಿಗಿಲುಗೊಂಡು ಅದನ್ನು ವಿರೋಧಿಸಲು ಸೊಂಟಕಟ್ಟಿರುವುದು. ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಜನರಲ್ ಸೆಕ್ರೆಟರಿಗಳಾದ ಶ್ರೀ. ಮಸಾನಿಯವರು ಪಂಜಾಬಿಗೆ ಕೇವಲ ಅಲ್ಲಿಯ ಸಮತಾವಾದಿಗಳೊಳಗಣ ಕಲಹವನ್ನು ಇತ್ಯರ್ಥಿಸ ಹೋಗಿದ್ದಾಗ ಸರಕಾರಕ್ಕದು ಅಸಹನೀಯವಾಗಿ ಅವರನ್ನಲ್ಲಿಂದ ಹೊರಹಾಕಿತು. ಸಮತಾವಾದವು ದೇಶದಲ್ಲಿ ಹಬ್ಬದಂತೆ ಸರಕಾರವು ತನ್ನಿಂದ ಸಾಧ್ಯವಾದ ಆತಂಕಗಳನ್ನೆಲ್ಲಾ ಒಡ್ಡುತ್ತಿರುವುದು. ಇತ್ತ ಧನಶಾಹಿಯೂ ಸಮತಾವಾದವನ್ನು ಮೊಗ್ಗೆಯಲ್ಲೆ ಮುರಿದುಬಿಡುವ ಪ್ರಯತ್ನ ನಡಿಸುತ್ತಿರುವುದು. ದೊಡ್ಡ ಜಮೀನುದಾರರೂ, ಭಂಡವಾಳಗಾರರೂ ಅದನ್ನು ವಿರೋಧಿಸಲು ಸಂಘಟಿತವಾಗಿ ಕೆಲಸಮಾಡ ಹತ್ತಿರುವರು.

ಸೆಪ್ಟೆಂಬರ ತಾ. 29ರಲ್ಲು ಸರ್ ಫಿರೋಜ್ ಸೆತ್ನರವರು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ವಿಲಕ್ಷಣವಾದೊಂದು ಸೂಚನೆಯನ್ನು ತಂದು ಅದು ಸರ್ವ ಸಮ್ಮತದಿಂದ ಮಂಜೂರಾಗಿರುವುದು. ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ಜವ್ಹಾರಲಾಲರೇ ಮೊದಲಾದವರು ದೇಶದಲ್ಲಿ ಪ್ರಚಾರಮಾಡುತ್ತಿರುವ ಸಮತಾವಾದ ತತ್ವಗಳನ್ನು ನಿಷೇಧಿಸಿ ಅವು ಜನರಲ್ಲಿ ಹಬ್ಬದಂತೆ ತಡೆಗಟ್ಟಲು ಸರಕಾರವು ತಕ್ಕ ಕಾರ್ಯ ಕೈಕೊಳ್ಳಬೇಕು. ಮಧ್ಯ ತರಗತಿಯ ಶಿಕ್ಷಿತ ನಿರುದ್ಯೋಗಿ ಸಮಸ್ಯೆಯನ್ನು ನಿವಾರಿಸಬೇಕು. ಬೇಸಾಯಗಾರ ಮತ್ತು ಮಜೂರ ಜನತೆಯಲ್ಲಿ ಪ್ರಬಲವಾಗಿ ಹಬ್ಬಿರುವ ದಾರಿದ್ರ್ಯ ಸಂಕಷ್ಟಗಳನ್ನು ತೊಲಗಿಸಲೆತ್ನಿಸಬೇಕೆಂಬೇ ಈ ನಿರ್ಣಯದ ಸಾರಾಂಶವಿರುವುದು. ದೇಶದಲ್ಲಿ ಪ್ರಬಲವಾಗಿ ಹಬ್ಬುತ್ತಿರುವ ಸಮತಾವಾದದ ಪ್ರವಾಹವನ್ನು ತಡೆಗಟ್ಟಿ ತಮಗೆ ರಕ್ಷಣೆಯಾಯದಿದ್ದರೆ ಬೊಂಬಾಯಿಯ ಭಂಡವಾಳಗಾರರು ಉಳಿಯುವರೀತಿ ಇಲ್ಲೆಂದೇ ಸರ್ ಫಿರೋಜ್ ಸೆತ್ನರವರ ಕ್ಷುದ್ರ ಸ್ವಾರ್ಥದ ಕೂಗು! ಅಂದರೆ ಕೆಲವು ಸಹಸ್ರ ಮಂದಿಯಾದ ಭಂಡವಾಳಗಾರರ ಧನದೌಲತ್ತಿಗೆ ತೊಂದರೆ ಬಾರದಂತೆ ಸರಕಾರವು ನೋಡಬೇಕು. ಜನಸಾಮಾನ್ಯರ ಅವಸ್ಥೆಯು ಏನೇ ಇರಲಿ, ಅವರೆಂತಹ ಭೀಕರ ಸಂಕಷ್ಟಕ್ಕೊಳಗಾಗಿರಲಿ, ಅವರ ನಿಜವಾದ ಹಿತಸಾಧನೆಯ ನವೀನ ವ್ಯವಸ್ಥೆಯಾದ ಸಮತಾವಾದವನ್ನು ತಡೆಗಟ್ಟಿ ತಮ್ಮ ಸಂಕುಚಿತಸ್ವಾರ್ಥವನ್ನು ಯಥಾಪ್ರಕಾರ ಕಾಪಾಡಬೇಕೆಂದೇ ಈ ಭಂಡವಾಳಗಾರರ ಸಾಧನೆ. ಜನತೆಯ ನಿರುದ್ಯೋಗ ಮತ್ತು ದಾರಿದ್ರ್ಯ ನಿವಾರಣೆಯೆಂಬುವೆಲ್ಲಾ ಬರಿಯ ನಟನೆ. ಯಾಕೆಂದರೆ ಬಡ ಮೆಂಬರರಿಗೆ ಸ್ವಲ್ಪವೇನಾದರೂ ಹಕ್ಕು ಬಾಧ್ಯತೆಗಳನ್ನೀಯುವ ಕಾರ್ಯವನ್ನು ಸರಕಾರವು ಕೈಕೊಂಡರ ಒಡನೆಯೇ ಈ ಭಂಡವಾಳಗಾರರು ವಿರೋಧಿಸುವರು. ಜಮೀನುದಾರರ ಮನೋವೃತ್ತಿಯು ಇಂತಹದೇ. ಬೇಸಾಯಗಾರರಿಗೆ ಜಾಮೀನಿನ ಕುರಿತು ಯಾವುದೊಂದು ತರದ ಹಕ್ಕನ್ನೀಯುವುದಕ್ಕೂ ಅವರ ವಿರೋಧವಿದ್ದೇ ಇದೆ.

ಈಗಣ ಸಮಾಜಸ್ಥಿತಿಯು ಬುಡಸಮೇತವಾಗಿ ಕಿತ್ತು ಹಾಕಲ್ಪಡದಿದ್ದರೆ ಧನಶಾಹಿ, ಸಾಮ್ರಾಜ್ಯಶಾಹಿಗಳ ಸಂಕುಚಿತ ಸ್ವಾರ್ಥದ ಬುಡಕ್ಕೇನೇ ಕೊಡಲಿಯಿಡದಿದ್ದರೆ ಮಜೂರರನ್ನೂ, ಬೇಸಾಯಗಾರರನ್ನೂ ಜೀವನ್ಮೃತರನ್ನಾಗಿಮಾಡಿರುವ ತೀವ್ರ ದಾರಿದ್ರ್ಯ ನಿರುದ್ಯೋಗಗಳು ದೂರವಾಗುವ ಹಾಗಿಲ್ಲ. ಸರಕಾರವಾಗಲಿ, ಧನಶಾಹಿಯಾಗಲಿ ಎಂತಹ ಆತಂಕವನ್ನೊಡ್ಡಿದರೂ ಸಮತಾವಾದದ ಪ್ರವಾಹವು ದೇಶದಲ್ಲೆಲ್ಲಾ ಪ್ರಬಲವಾಗಿ ಹಬ್ಬಿ ನೆಲೆಗೊಳ್ಳದಿರದು. ಯಾಕೆಂದರೆ ಅದರ ಹೊರತು ಜನತೆಯ ಉದ್ಧಾರದ, ಸುಖಸಾಧನೆಯ ಬೇರೆ ಉಪಾಯವೇ ಈಗ ತೋರುವುದಿಲ್ಲ.

ಚರ್ಚೆಯೂ ಕೂಡದು!

ಇಂಗ್ಲೆಂಡು ಹವಣಿಗಿರುವ ಚಿನ್ನದ ಪ್ರಮಾಣವನ್ನು ತೆಗೆದುಹಾಕಿ ತನ್ನ ನಾಣ್ಯ ವಿನಿಮಯ ಕ್ರಮದಲ್ಲಿ ಬದಲಾವಣೆ ಮಾಡಿರುವುದು. ಅದರಿಂದಾಗಿ ಅಲ್ಲಿಯ ವ್ಯಾಪಾರ ವಹಿವಾಟುಗಳು ಹೆಚ್ಚುವಂತಾಗಿರುವುದು, ಜಪಾನು ತನ್ನ ನಾಣ್ಯದ ವಿನಿಮಯ ಬೆಲೆಯನ್ನು ಬಹಳವಾಗಿ ಇಳಿಸಿ, ವ್ಯಾಪಾರಾಭಿವೃದ್ಧಿಗೆ ಬಹಳ ಸಹಾಯಮಾಡಿರುವುದು, ಇತರ ಹಲವು ರಾಷ್ಟ್ರಗಳು ಇದೇ ರೀತಿ ಮಾಡಿರುವವು. ಈಗ ಫ್ರಾನ್ಸು ತನ್ನ ನಾಣ್ಯದ ವಿನಿಮಯ ದರವನ್ನಿಳಿಸಿ ಯುರೋಪು ಮತ್ತು ಅಮೇರಿಕಗಳಲ್ಲಿ ನಾಣ್ಯ ವಿನಿಮಯದ ಮೊದಲಿನ ವ್ಯವಸ್ಥೆಯ ಬದಲಾವಣೆಯಾಗಿರುವುದು. ಇದರಿಂದ ಹಿಂದುದೇಶದ ಮೇಲೂ ಪರಿಣಾಮವಾಗಿರುವುದು. ಆ ಕುರಿತು ಎಸಂಬ್ಲಿಯಲ್ಲಿ ಚರ್ಚಿಸುವ ಸೂಚನೆಯೊಂದನ್ನು ಮಿ. ಶಾಸ್ತ್ರಿ ಎಂಬವರು ತಂದಾಗ, ಸರ್ ಜೇಮ್ಸ್ ಗ್ರಿಗ್ಗರು ಕೂಡಲೆ ವ್ಯಾಸರಾಯರ ವಿಶೇಷಾಧಿಕಾರದ ಆಶ್ರಯ ಪಡೆದು, ಅದರ ಚರ್ಚೆಯೇ ನಡೆಯದಂತೆ ಮಾಡಿ ಕೃತಾರ್ಥರಾದರು. ಲೋಕದ ಎಲ್ಲಾ ರಾಷ್ಟ್ರಗಳು ತಮ್ಮ ನಾಣ್ಯವಿನಿಮಯ ಧೋರಣೆಯನ್ನು ಬದಲಾಯಿಸಿ, ವಿನಿಮಯ ಬೆಲೆಯನ್ನಿಳಿಸಿರುವಾಗ, ಇಂಡಿಯಾಸರಕಾರವು ತಣ್ಣಗೆ ಕುಳಿತು, ರೂಪಾಯಿಯ ವಿನಿಮಯ ಬೆಲೆಯನ್ನಿಳಿಸಬೇಕೆಂದು ದೇಶದಲ್ಲಿ ಎಷ್ಟೊಂದು ಚಳವಳ ನಡೆದರೂ ಅದನ್ನೊಂದಿಷ್ಟು ಗಮನಿಸದೆ ಅದರ ಬೆಲೆಯನ್ನು ಯಥಾಪ್ರಕಾರವಾಗಿರಿಸಿರುವ ಅಂತರ್ಯವೇನೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲವಷ್ಟೆ. ಈ ಸಂಬಂಧವಾದ ಚರ್ಚೆ ಕೂಡ ಎಸೆಂಬ್ಲಿಯಲ್ಲಿ ನಡೆಯಬಾರದೆಂದು ನಮ್ಮ ಅರ್ಥಸಚಿವರ ಆತಂಕ. ಅದರಿಂದ ಇಂಗ್ಲೆಂಡಿನ ಹಿತಕ್ಕೇನಾದರೂ ಹಾನಿಯುಂಟಾಗುವುದೆಂಬೋ ಏನೋ? ದೇಶದ ನಾಣ್ಯವಿನಿಮಯ ಧೋರಣೆಯು ದೇಶಹಿತಕ್ಕಾಗಿರುವುದಾದರ ಅದನ್ನು ಜನತೆಯ ಅಪೇಕ್ಷೆ ಮೇರೆಗೆ ಬದಲಾಯಿಸಲು, ಆ ಸಂಬಂಧವಾದ ಯಾವ ಚರ್ಚೆಯನ್ನಾದರೂ ನಡಿಸಬಿಡಲು ಅಡ್ಡಿ ಮಾಡಬೇಕೇಕೆ?

ಸರಕಾರಿ ನೌಕರರೂ ಚುನಾವಣೆಯೂ

ಇದೇ ತಾ. 1ರಲ್ಲು ಎಸೆಂಬ್ಲಿಯಲ್ಲಿ, ಸರಕಾರಿನೌಕರರು ಚುನಾವಣೆಗಳಲ್ಲಿ ಯಾವ ತರದ ಭಾಗವನ್ನೂ ವಹಿಸದಂತಾಗಬೇಕೆಂಬ ಸೂಚನೆಯನ್ನು ಡಾಕ್ಟರ್ ಖಾನರು ತಂದು, ವಾಯವ್ಯ ಗಡಿನಾಡು ಪ್ರಾಂತದಲ್ಲಿ ಸರಕಾರಿ ಅಧಿಕಾರಿಗಳು, ಚುನಾವಣೆಯ ಸಂಬಂಧವಾದ ರೆಡ್‌ಶರ್ಟರ ಸಭೆಗಳು ನಡೆಯದಂತೆ ಮಾಡುವ ಆತಂಕಗಳನ್ನೆಲ್ಲಾ ವಿವರಿಸಿ ಹೇಳಿದರು. ಸರಕಾರಿ ಅಧಿಕಾರಿಗಳು ರೆಡ್‌ಶರ್ಟರನ್ನು ಇನ್ನೂ ತಮ್ಮ ಬದ್ಧವೈರಿಗಳಂತೆ ಕಂಡು ಅವರು ಯಾವ ಚಟುವಟಿಕೆಯನ್ನಾದರೂ ನಡಿಸದಂತೆ ತಮ್ಮಿಂದ ಸಾಧ್ಯವಾದ ತಡೆಯನ್ನೊಡ್ಡುವುದು ಅತ್ಯಂತ ಶೋಚನೀಯವಿದೆ. ಇಂತಹ ತೀವ್ರ ಅನ್ಯಾಯವು ಕೂಡಲೆ ನಿಲ್ಲಿಸಲ್ಪಡದಿದ್ದರ, ಚುನಾವಣೆಯಲ್ಲಿ ಸರಕಾರದ ತಾಟಸ್ಥ್ಯದ ಆಶ್ವಾಸನೆಯು ಬರಿಯ ಬಾಯಿಮಾತಾಗುವುದು. ಸರಕಾರಿ ನೌಕರರು ಯಾವ ರೀತಿಯಲ್ಲಾದರೂ ಚುನಾವಣೆಗಳಲ್ಲಿ ಕೈ ಹಾಕದಂತೆ ಸರಕಾರವು ಬಹಳ ಜಾಗರೂಕವಾಗಿರಬೇಕು. ಸರಕಾರಿ ನೌಕರರು ಯಾವ ಪಕ್ಷಪಾತಕ್ಕೂ ಒಳಗಾಗದೆ ತಟಸ್ಥರಾಗಿರಬೇಕೆಂದು ವೈಸರಾಯರ ಅಪೇಕ್ಷೆಯಿದೆ. ಅಂತೆಯೇ ನೌಕರರಲ್ಲಾ ನಿಷ್ಪಕ್ಷಪಾತವಾಗಿದ್ದು, ಚುನಾವಣೆಗಳಲ್ಲಿ ಯಾವ ತರದ ಭಾಗವನ್ನೂ ವಹಿಸಬಾರದು. ಹಾಗೇನಾದರೂ ಭಾಗ ವಹಿಸಿದರೆ, ಅದು ದೊಡ್ಡ ಅಪರಾಧವಾಗಿ ಪರಿಗಣಿಸಲ್ಪಡುವುದೆಂಬ ಮಾನ್ಯ ಲೋ ಮೆಂಬರರ ಅಭಯ ವಚನಗಳೇನೋ ತೃಪ್ತಿಕರವಿವೆ ಆದರೆ ಈ ಮಾತು ಕಾರ್ಯದಲ್ಲಿ ಹೇಗೆ ನಡೆಯುವುದೋ ನೋಡಬೇಕು.

ದಕ್ಷಿಣ ಕನ್ನಡ

ಉಡುಪಿ

ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಯ ಪ್ರಚಾರಕರಾದ ಶ್ರೀ. ಎನ್. ಎಸ್. ಕಿಲ್ಲೆಯವರ ವಿನಂತಿಯಂತೆ ಉಡುಪಿ ತಾಲೂಕು ಕೊಂಗ್ರೆಸ್ ಕಮಿಟಿಯ ವಿಶೇಷ ಸಭೆಯೊಂದು ತಾ. 30–9–36ರಲ್ಲಿ ಶ್ರೀ. ಪಿ. ಎಮ್. ನಾಯ್ಕರ ನಿವಾಸದಲ್ಲಿ ಶ್ರೀಯುತ ಉಪೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ನೆರೆಯಿತು. ಖಾಲಿಬಿದ್ದ ಸ್ಥಾನಗಳಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಪಿ. ಮಂಜುನಾಥ ನಾಯ್ಕರೂ, ಕಾರ್ಯದರ್ಶಿಗಳಾಗಿ ಶ್ರೀ. ಕೆ. ಶ್ರೀನಿವಾಸಪೈ ಮತ್ತು ಶ್ರೀ ಎಮ್. ವಿಠಲ ಹೆಗ್ಡೆಯರೂ, ಕೋಶಾಧಿಕಾರಿಯಾಗಿ ಶ್ರೀ ಬಾಳ್ಕಟ್ಟ ಕೃಷ್ಣಯ ಹೆಗ್ಡೆಯರೂ ಆರಿಸಲ್ಪಟ್ಟರು

ತಾ 2-10-36ರಲ್ಲಿ ಗಾಂಧೀಜಯಂತಿಯ ಸಲುವಾಗಿ ಕೊಂಗ್ರೆಸ್ ಕಮಿಟಿಯ ಕಡೆಯಿಂದ ಖಾದಿಮಾರಾಟವು ನಡೆಯಿತು. ಸಂಜೆ ಶ್ರೀ ಪಿ. ಮಂಜುನಾಥ ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆಯೊಂದು ರಥಬೀದಿಯಲ್ಲಿ ನೆರೆದು, ಶ್ರೀಗಳಾದ ಯು. ನಾಗಪ್ಪ ಕಾಮತ್, ಎಮ್. ವಿಟ್ಠಲ ಹೆಗ್ಡೆ, ಎನ್. ಎಸ್. ಕಿಲ್ಲೆ, ಎಸ್. ಯು. ಪಣಿಯಾಡಿಯವರು ಗಾಂಧಿಯವರ ಧ್ಯೇಯ, ಕಾರ್ಯಕ್ರಮ, ಮಹಾತ್ಮೆಯೇ ಮೊದಲಾದುವುಗಳ ಕುರಿತು ಭಾಷಣವಿತ್ತರು. ಅಧ್ಯಕ್ಷರ ಭಾಷಣವೂ ಕಾರ್ಯದರ್ಶಿಯರ ಧನ್ಯವಾದವೂ ನಡೆದು ಸಭಾಂತ್ಯವಾಯಿತು.

ಉಡುಪಿಗೆ ವಿದ್ಯುಚ್ಛಕ್ತಿಯನ್ನೊದಗಿಸುವ ಕುರಿತು ಯೋಚಿಸುವರೆ ನಿಯಮಿಸಲ್ಪಟ್ಟ ಕಮಿಟಿಯ ಸಭೆಯು ತಾ 4-10-36 ರಲ್ಲಿ ಮುಕುಂದ ನಿವಾಸದಲ್ಲಿ ಮುನಿಸಿಪಲ್ ಚೆಯರ್‌ಮೆನ್ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನೆರೆಯಿತು. ಸಾಧ್ಯಾಸಾಧ್ಯತೆಯ ವಿಷಯವಾಗಿ ಕೂಲಂಕುಷ ಚರ್ಚೆಯು ನಡೆದು ಸರಕಾರಕ್ಕೆ ಬರೆದುಕೊಳ್ಳಬೇಕೆಂಬ ನಿರ್ಧಾರವಾಯಿತು.

ಸಂಘ ಕೂಟದ ವರ್ಷಾವಧಿ ಮಹಾ ಸಭೆ

ನಂಬ್ರ 3277ನೇ ಉಡುಪಿ ಸಹಕಾರ ಸಂಘ ಕೂಟದ ಚಾಲ್ತಿ ವರುಷದ ಮಹಾ ಸಭೆಯು ಇದೇ ತಾ. 4ರಲ್ಲು ಬಡಗಬೆಟ್ಟು ಸಹಕಾರ ಸಂಘದ ಆಫೀಸಿನಲ್ಲಿ ಅಪರಾಹ್ನ ಎರಡೂವರೆ ಗಂಟೆಗೆ ರಾ। ವಕೀಲ್ ಕೆ. ಜ. ಬಲ್ಲಾಳ್, ಬಿ. ಎ., ಎಲ್ ಎಲ್. ಬಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಹಕಾರಿ ಸಂಘಗಳ ಸಬ್ ಡಿಪ್ಯುಟಿ ರಿಜಿಸ್ಟ್ರರವರೂ, ಸೆಂಟ್ರಲ್ ಬ್ಯಾಂಕಿನ ಕಾರ್ಯದರ್ಶಿಯರೂ ವಿಶೇಷವಾಗಿ ಹಾಜರಿದ್ದು ಸಭೆಗೆ ಹೊಸ ಹುರುಪನ್ನುಂಟುಮಾಡಿದರು. ಗತ ವರುಷದ ವರದಿ ವಾಚನ, ಚಾಲ್ತಿ ವರುಷದ ಬಜೇಟು ಮಂಜೂರಾತಿಯಾದ ಬಳಿಕ ಇಲಾಖಾ ಸರ್ಕಲಾರುಗಳು ಆಲೋಚಿಸಲಾದುವು. ದಂಡನೆ ಬಡ್ಡಿ ಶರ್ತವನ್ನು ಸಂಪೂರ್ಣ ತೆಗೆದುಹಾಕಬಾರದೆಂದೂ ಕೋಳಿಗಳನ್ನು ಸಾಕುವಿಕೆಯ ಬಗ್ಗೆ ಹೊಸ ಸಂಘ ಸ್ಥಾಪಿಸಬೇಕೆಂದೂ ನಿರ್ಧಾರಗಳಾದವು. ಮಾನ್ಯ ಡಿವೆಲಪ್‌ಮೆಂಟ್ ಮಿನಿಸ್ಟರರು ಉಡುಪಿಗೆ ಚಿತ್ತೈಸುವಾಗ ಸನ್ಮಾನಾರ್ಥವಾಗಿ ಅವರಿಗೊಂದು ಮಾನಪತ್ರ ಮತ್ತು ಟೀಪಾರ್ಟಿಯನ್ನೀಯಬೇಕಾಗಿ ಗೊತ್ತುವಳಿಯಾಗಿ ಚಾಲ್ತಿ ವರುಷಕ್ಕೆ ಆಡಳಿತೆ ಮಂಡಳಿಯ ಸದಸ್ಯರ ಚುನಾವಣೆಗಳಾದುವು. ಶ್ರೀ. ಗಳಾದ ಕೆ. ಜೆ. ಬಲ್ಲಾಳ್; ಕೆ. ಆರ್. ಶಣೈ; ಕೆ. ಶ್ರೀನಿವಾಸ ಪೈ; ಯು ಕೆ. ಗೋವಿಂದ ಶೆಟ್ಟಿ; ಕೆ. ಗಣಪಯ್ಯ ಶೆಟ್ಟಿ; ಯಸ್. ಯಸ್. ನಾರಾಯಣ ರಾವ್; ಕೆ. ಜಿನರಾಜ ಶೆಟ್ಟಿ ಈ ಏಳುಮಂದಿ ಆರಿಸಲ್ಪಟ್ಟ ತರುವಾಯ ಧನ್ಯವಾದಗಳಾಗಿ ಸಭೆಯು ಅಂತ್ಯವಾಯಿತು.

ಶ್ರೀ ಪೇಜಾವರ ಮಠೀಯ ಸರಸ್ವತೀ ಭಾಂಡಾಗಾರ.

ಕಳೆದ ಸಪ್ಟಂಬರ ತಾ ೨೬ರಲ್ಲು ಮದ್ರಾಸ್ ಯುನಿವರ್ಸಿಟಿ ಕಮಿಶನಿನ ಮೆಂಬರರಾದ ಎಸ್. ಆ. ರಂಗನಾಥನ್ ಎಮ್.ಎ. ಎಲ್.ಟಿ., ಮತ್ತು ಸಿ. ಕುಂಞನ್ ರಾಜಾ ಇವರು ಉಡುಪಿ ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜನ್ನು ಸಂದರ್ಶಿಸಿದರು. ತರುವಾಯ ಅದೇ ದಿನ ಸ್ಥಳೀಯ ಶ್ರೀ ಪೇಜಾವರ ಮಠೀಯ ಸರಸ್ವತೀ ಭಾಂಡಾಗಾರವನ್ನು ಸಂದರ್ಶಿಸಿ, ಈ ಕೆಳಗೆ ಕಂಡುಬರುವ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ. 26—9—'36.

"We visited the Saraswati Bhandagara free Reading Room and Library this morning and were shown round the place by the Agent to the Sri Pejavar Mutt. There is a good collection of Sanskrit books and manuscripts in the Library and the Reading Room possesses several English and Indian journals and papers. Great credit is due to His Holiness the Swamiji of the Mutt for maintaining this free Reading Room. We wish the institution every success."

(Sd) S L. RANGANATHAN,
(Sd) C KUNHANRAJA,
Members of the Madras University Commission

ಉಪಾಧ್ಯಾಯರ ಸಭೆಗಳು

ತಾರೀಕು 3-10-'36ನೇ ಪೂರ್ವಾಹ್ನ ಗಂಟೆ ೮ಕ್ಕೆ ಉಡ್ಪಿ ಮುನ್ಸಿಪಲ್ ವೈನ್ ಶಾಲೆಯಲ್ಲಿ ಮುನ್ಸಿಪಲ್ ಅಧ್ಯಾಪಕರ ಸಭೆಯು ಡಾ. ಆಚಾರ್ಯರವರ ಅಧ್ಯಕ್ಷತೆಯಲ್ಲಿ ನೆರವೇರಿತು ವರದಿ ವಾಚನವಾದ ಬಳಿಕ ಈ ಕೆಳಗಿನ ಠರಾವುಗಳು ಮಂಜೂರಾದವು 1. ಹೊಸ ಕೌನ್ಸಿಲಿಗೆ ಚುನಾಯಿಸಲ್ಪಟ್ಟ ಡಾ. ಆಚಾರ್ಯರವರಿಗೆ ಈ ಸಂಘವು ತನ್ನ ಹೃತ್ಪೂರ್ವಕ ಆಭಾರ ಸೂಚಿಸುತ್ತದೆ. 2. ಪಿಪಾಟಂಗಿನ ನೋಟೀಸು, ಸಂಘದ ಧನವನ್ನು ಬೇಂಕಿನಲ್ಲಿಡುವ ವಿಚಾರ, ಪುಸ್ತಕ ಭಾಂಡಾರ ಮುಂತಾದುವುಗಳ ಕುರಿತಾದ ನಂಬ್ರ 9-10-12ನೇ ರೂಲುಗಳ ತಿದ್ದುಪಡಿ. 3 ಚಾ ಫಲಾಹಾರಕ್ಕೆ ಖರ್ಚಾದ ಹಣ ಮಂಜೂರಾತಿ 4. ಮುನ್ಸಿಪಲ್ ಸಭೆಯ ಎಜಂಡಿಂದ ಒಂದು ಕೋಪಿಯನ್ನು ಈ ಸಂಘದ ಕಾರ್ಯದರ್ಶಿಯವರಿಗೆ ಕಳುಹಿಸುವಂತೆ ಏರ್ಪಡಿಸಿಕೊಳ್ಳುವುದು. 5. ಕಂಬಾಯಿನ್ ಸ್ಕೂಲ್ ಡೇ ಬಗ್ಯೆ ಒಂದು ಕಮಿಟಿಯು ನಿರ್ಮಿತವಾಯಿತು. 6 ಉಪಾಧ್ಯಾಯರುಗಳ ಸಂಕಷ್ಟಗಳನ್ನು ಡೆಪ್ಯುಟೇಶನ್ ಮೂಲಕ ಅರಿಕೆ ಮಾಡುವರೆ ಡಾ. ಚೇರ್‌ಮೇನರನ್ನು ಕೇಳಿಕೊಳ್ಳುವುದು. 7. ನಗರಸಭೆ ಚೇರ್‌ಮೇನರಿಗೂ ಕೌನ್ಸಿಲರುಗಳಿಗೂ ಸಂಘದ ಪರವಾಗಿ ಒಂದು ಸೋಶಿಯಲ್‌ಗ್ಯಾದರಿಂಗ್ ನಡಿಸಬೇಕೆಂದು ತೀರ್ಮಾನಿಸಲ್ಪಟ್ಟಿತು.

ತಾರೀಕು 3-10-'36ನೇ ಅಪರಾಹ್ನ ಘಂಟೆ 2-30ಕ್ಕೆ ಉಡ್ಪಿ ವೈನ್ ಶಾಲೆಯಲ್ಲಿ ಉಡುಪಿ ಸೆಂಟರಿನ ಅಧ್ಯಾಪಕರ ಮಾಸಿಕ ಸಭೆಯು ಡಾ। ಸಿಲ್ವಿಸ್ಟರ್ ಫೆರ್ನಾಂಡಿಸರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳು ವರದಿಯನ್ನೂ ಸರ್ಕ್ಯುಲರುಗಳನ್ನೂ ಓದಿದರು. "ಉಪಾಧ್ಯಾಯರ ಜೀವನದ ಶ್ರೇಷ್ಠತ್ವದ" ಕುರಿತಾಗಿ ರಾ. ಕೆ. ನಾರಾಯಣ ಸೆಟ್ರು ಒಂದು ಸುರಸವಾದ ಭಾಷಣವನ್ನು ಮಾಡಿದರು. ರಾ। ಡಿಪ್ಯುಟಿ ಇನ್ಸ್‌ಪೆಕ್ಟರವರಿಂದ ಕಳ್ಪಿದ ಸರ್ಕ್ಯುಲರು ಎಲ್ಲಾ ಶಾಲೆಗಳಿಗೂ ಇರುವದರಿಂದ ಅವುಗಳನ್ನು ಪಡೆಯುವರೆ 4-30ರ ನಂತರ ತಮಗೆ ಸಾಧ್ಯವಿಲ್ಲವೆಂದು ಸಭಿಕರು ಅಭಿಪ್ರಾಯಪಟ್ಟಂತೆ ಬಟವಾಡೆಮಾಡಿ ಸಹಿ ಪಡೆಯಲಾಯಿತು. ಈ ದೆಸೆಯಿಂದ ಕಾರ್ಯಕ್ರಮದ ಇತರ ವಿಷಯಗಳನ್ನು ಮುಂದರಿಸಬೇಕಾದುದರಿಂದಲೂ, ಸಭೆಯು ಶಿಸ್ತಿಲ್ಲಕ್ರಮವಾದುದರಿಂದಲೂ ಹಲವು ಸೂಚನೆಗಳು ಬಂದು ಆ ಬಗ್ಯೆ ಹಳೆ ಕ್ರಮವನ್ನೇ ಅನುಸರಿಸಬೇಕೆಂದು ಒಂದು ಠರಾವು ಮೂಲಕ ರಾ. ಡಿ. ಇನ್ಸ್‌ಪೆಕ್ಟರವರ ಕೂಡೆ ಪ್ರಾರ್ಥಿಸಿಕೊಳ್ಳಲಾಯಿತು. ಆಫೀಸಿನಿಂದ ಬರುವ ಸರ್ಕ್ಯುಲರುಗಳನ್ನು ಸರಿಯಾಗಿ ಸ್ಪಷ್ಟವಾಗಿ ಬರಾಯಿಸುವಂತೆ ಕೇಳಿಕೊಳ್ಳಲಾಯಿತು. ಹಿಂದುಗಳ ಪ್ರಾಮುಖ್ಯ ಹಬ್ಬವಾದ ದೀಪಾವಳಿ ದಿನಗಳಲ್ಲಿ ಮನೆಮನೆಗಳಿಗೆ ಹೋಗಿ ಶಾಲಾ ಮಕ್ಕಳ ಬಾನೇಶು ಮೊರಿಯನ್ನು ತಗೆಯುವುದು ಅನುಚಿತವೆಂದೂ ಈ ಕುರಿತು ಮೇಲಾಧಿಕಾರಿಗೆ ಬರೆದುಕೊಳ್ಳಬೇಕೆಂದೂ ತಂದ ಠರಾವು ಬಹಳ ಚರ್ಚೆಗಳಿಂದ ಬಿದ್ದು ಹೋಯಿತು. ಆರಂಭದಲ್ಲಿ ಉಪಾಧ್ಯಾಯರ ಗೌರವ, ಶ್ರೇಷ್ಠತ್ವದ ಕುರಿತು ಭಾಷಣವನ್ನು ಸರಿಯಾಗಿ ಕೇಳಿ ಅದಕ್ಕೆ ವಿರೋಧವಾಗಿ ಅನುಸರಿಸಬೇಕೆಂಬ ಭಾವನೆಯಿಂದಲೋ ಎಂಬಂತೆ ಹಲವು ಉಪಾಧ್ಯಾಯರು ಮನಬಂದಂತೆ ವಾಕ್ಚಾತುರ್ಯವನ್ನು ತೋರಿಸುತ್ತಲೂ, ತಿರುಗಾಡುತ್ತಲೂ, ಸಭೆಯಿಂದ ಹೊರಟು ಹೋಗುತ್ತಲೂ ಇದ್ದುದು ಶೋಚನೀಯವು. ಈ ವಿಷಯದ ಕುರಿತು ಅಧ್ಯಕ್ಷರೂ ಕಾರ್ಯದರ್ಶಿಯವರೂ ಅದೇ ಅಭಿಪ್ರಾಯಪಟ್ಟು ಬಹಳವಾಗಿ ಮನನೊಂದು ಉಳಿದ ಕೆಲವೇ ಮೆಂಬರುಗಳಿಂದ ಸಭೆಯು ಜರಗಿತು ಎಂದು ಬಾತ್ಮಿ.

ತಿದ್ದುಪಡಿ

ಕಳೆದ ವಾರದ ಸಂಚಿಕೆಯಲ್ಲಿ ಅರಳಗ್ರಾಮದ ಖೂನಿ ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾದವನು ವೀರಪ್ಪ ಶೇಕನೆಂದು ತಪ್ಪಾಗಿ ಪ್ರಕಟವಾಗಿತ್ತು. ಅಪರಾಧಿಯ ಹೆಸರು ಐತಪ್ಪ ಶೇಕನೆಂದಾಗಬೇಕು.

> **ಬರುವ ವಾರ**
> **ರಾಮಾಚಾರ್ಯರ ಪೂಜೆ**
> **(ವಿನೋದ ಕತೆ)**
> **ಪ್ರಕಟವಾಗುವುದು.**
> **ನೆನಪಿರಲಿ**

ಸ್ವದೇಶ

ಪಂಡಿತ ಜವಾಹರಲಾಲರು.

ಇದೇ ತಾ. ೬ರಲ್ಲು ಮದ್ರಾಸಿಗೆ ಚಿತ್ತೈಸಿದಾಗ ಸೆಂಟ್ರಲ್ ಸ್ಟೇಶನಿನಲ್ಲಿ ಅವರಿಗೆ ಸಂಭ್ರಮದ ಸ್ವಾಗತವೀಯಲಾಯಿತು. ರೈಲ್ವೆ ಪ್ಲೇಟ್‌ಫೋರ್ಮಿನಲ್ಲಿ ಸುಮಾರು 500 ಮಂದಿ ಹಾಜರಿದ್ದರು. ಹೊರಗೆ ಸಾವಿರಾರು ಮಂದಿ ನೆರೆದಿದ್ದರು.

ಬೊಂಬಾಯಿಯ ಬೈಕುಲದಲ್ಲಿ ಒಂದು ದೇವಸ್ಥಾನ ಮತ್ತು ಮಸೀದಿಯು ಹತ್ತಿರ ಹತ್ತಿರ ಸ್ಥಾಪಿಸಲ್ಪಟ್ಟ ಸಂಬಂಧವಾಗಿ ಹಿಂದು ಮತ್ತು ಮುಸಲ್ಮಾನರೊಳಗೆ ತೀವ್ರ ವೈರಮ್ಯವುಂಟಾಗಿರುವುದು. ಈ ಸಂಬಂಧವಾಗಿ ಬೊಂಬಾಯಿ ಕೊರ್ಪರೇಶನಿನಲ್ಲಿ ಬಹಳ ಚರ್ಚೆ ನಡೆದಿದ್ದಿತು.

ಜರ್ಮನಿಯಲ್ಲಿ ನಡೆದ ಇಡೀ ಲೋಕದ ಹೋಕಿಪಂದ್ಯಾಟದಲ್ಲಿ ಎಲ್ಲಾ ರಾಷ್ಟ್ರಗಳವರನ್ನೂ ಗೆದ್ದು ವಿಜಯಿಗಳಾಗಿ ಸರ್ವರನ್ನೂ ಬೆರಗುಗೊಳಿಸಿದ ಹಿಂದೀ ಹೋಕಿಟೀಮಿನವರು ಸಪ್ಟೆಂಬರ ತಾ. 30ರಲ್ಲು ಬೊಂಬಾಯಿಗೆ ಬಂದಿಳಿದಾಗ ಅವರಿಗೆ ಬೊಂಬಾಯಿ ಕೋರ್ಪರೇಶನಿನವರು ಸ್ವಾಗತವಿತ್ತು ಸತ್ಕರಿಸಿದರು.

DEFEND YOUR OWN INTEREST
BY BANKING WITH THE
UDIPI BANK, Ltd.
UDIPI
ALL KINDS OF BANKING BUSINESS UNDERTAKEN
ESTD: 1925

ಮಂಗಳೂರು.

ಗಾಂಧಿ ಜಯಂತಿ

2,000 ಮಂದಿಗೆ ಅಕ್ಕಿ ದಾನ

ಕಳೆದ ತಾ. 2ನೇ ಶುಕ್ರವಾರ ದಿವಸ ಮಹಾತ್ಮಾ ಗಾಂಧಿಯವರ ಜನ್ಮ ದಿನಾಚರಣೆಯು ಬಹಳ ವಿಜೃಂಭಣೆಯಿಂದ ನೆರವೇರಿತು ಪ್ರಾತಃಕಾಲ ಕಾಂಗ್ರೆಸ್ ಚಕ್ತರ ಮತ್ತು ಪುರಪ್ರಮುಖರ ಮೆರವಣಿಗೆಯೊಂದು ಕಾಂಗ್ರೆಸ್ ಭವನದಿಂದ ಹೊರಟು, ನಗರದ ಪ್ರಧಾನ ಬೀದಿಗಳಲ್ಲಿ ಹೋಗಿ ಮೈದಾನಿಗೆ ಬಂದು ಸೇರಿತು ಮೆರವಣಿಗೆಯಲ್ಲಿ ಡಾ। ಅಡಪರವರೂ, ವೆಂಕಪ್ಪ ರೈಗಳೂ ಇವರೇ ಮೊದಲಾದ ಗೃಹಸ್ಥರಿದ್ದರು.

ಮೈದಾನದಲ್ಲಿ ರಾಷ್ಟ್ರಗೀತೆಯನ್ನು ಸ್ವಯಂಸೇವಕರು ಹಾಡುತ್ತಿದ್ದರು. ಅನಂತರ ಧ್ವಜವಂದನಾ ಸಮಾರಂಭವು ನಡೆಯಿತು. ಶ್ರೀಮತಿ ಲಕ್ಷ್ಮೀರೈಗಳು ರಾಷ್ಟ್ರಧ್ವಜವನ್ನು ಏರಿಸಿದರು.

ಅನಂತರ ಬಡಬಗ್ಗರಿಗೆ ಅಕ್ಕಿಯನ್ನು ಹಂಚಲಾಯಿತು. ಸುಮಾರು 2,000 ಮಂದಿ ಬಡಬಗ್ಗರು ಅಕ್ಕಿಯನ್ನು ಪಡೆದು ಸಂತೋಷಚಿತ್ತರಾಗಿ ಹೋದರು ಜಿಲ್ಲಾ ಕಾಂಗ್ರೆಸಿನವರು ಈ ಮಹಾಪುಣ್ಯಕೆಲಸವನ್ನು ಬಹಳ ಯಶಸ್ವಿಯಾಗಿ ಜರಗಿಸಿದರು.

ಸಾಯಂಕಾಲ 6 ಗಂಟೆಗೆ ಸರಿಯಾಗಿ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದು ರಿವೆರೆಂಡ್ ಸುಬ್ಬುಕೃಷ್ಣಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮಾನ್ ಕೆ. ಹೈದರರೂ ಶ್ರೀ ಬಿ ಲಕ್ಷ್ಮಣದೇವವಿದ್ಯಾರ್ಥಿಗಳೂ ಮಹಾತ್ಮಗಾಂಧಿಯವರ ಪವಿತ್ರಚರಿತ್ರೆ, ಅವರ ಧ್ಯೇಯ, ಸ್ವಾತಂತ್ರ್ಯಪ್ರಿಯತೆ, ಸತ್ಯಾಗ್ರಹ ಮತ್ತು ಅವರು ದೇಶಕ್ಕಾಗಿ ಮಾಡಿದ ತ್ಯಾಗ ಇವುಗಳನ್ನು ಕುರಿತು ಬಹಳ ಸ್ವಾರಸ್ಯವಾದ ಉಪನ್ಯಾಸಮಾಡಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೀಗೆಂದರು. "ಮಹಾತ್ಮಗಾಂಧಿಯವರು ಕ್ರಿಸ್ತ, ಮಹಮ್ಮದ ಪೈಗಂಬರರಂತೆಯೇ ಧರ್ಮವನ್ನೇ ತಮ್ಮ ಧ್ಯೇಯದ ಅಡಿಗಟ್ಟನ್ನಾಗಿ ಮಾಡಿರುವರು. ಆ ಕಾರಣದಿಂದಲೇ ಲೋಕವೇ ಇಂದು ಅವರನ್ನು ಗೌರವಿಸುತ್ತಿದೆ. ಐಂದುಸ್ಥಾನದ ವಿಷಯವಾಗಿ ಅರಿಯದ ಜನರೂ ಕೂಡಾ ಮಹಾತ್ಮರನ್ನು ಕೊಂಡಾಡುತ್ತಾರೆ ಅದರಿಂದಲೇ ಅವರ ಪವಿತ್ರ ಜೀವನದ ಮಹತ್ವವು ಗೊತ್ತಾಗುವುದು. ಮಹಾತ್ಮರ ತತ್ವಗಳನ್ನು ಅವರ ದೇಶಬಾಂಧವರಾದ ನಾವು ಆಚರಣೆಗೆ ತರಬೇಕು ಹಾಗೆ ಆಚರಣೆಗೆ ತಂದುದೇ ಆದರೆ ಮಹಾತ್ಮರನ್ನು ಪುನಃ ರಾಜಕೀಯ ರಂಗಕ್ಕೆ ಕರತರಬಹುದು. ಮಹಾತ್ಮರಿಗೆ ಭಗವಂತನು ದೀರ್ಘಾಯುಸ್ಸನ್ನೂ ಆರೋಗ್ಯವನ್ನೂ ಕರುಣಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ"

ಅಧ್ಯಕ್ಷರ ಭಾಷಣವಾದ ಮೇಲೆ ನೆರೆದ ಸಭಿಕರಿಗೂ, ಭಾಷಣ ಕರ್ತರುಗಳಿಗೂ ಅಧ್ಯಕ್ಷರಿಗೂ ಧನ್ಯವಾದರ್ಪಣೆಯಾದ ಮೇಲೆ ಸಭೆಯು ಮುಕ್ತಾಯವಾಯಿತು

ಡಿ. ಸಿ. ಯಂ. ವಾರ್ಷಿಕೋತ್ಸವ.

ಮಂಗಳೂರ ಡಿ. ಸಿ. ಯಂ. ಇದರ ವಾರ್ಷಿಕೋತ್ಸವವು ಕಳೆದ ತಾ. 29ನೇ ಸಾಯಂಕಾಲ ಡಿ. ಸಿ. ಯಂ ಶಾಲಾಭವನದಲ್ಲಿ ಜರಗಿತು. ಮದ್ರಾಸ್ ವಿದ್ಯಾಂಗದ ಡೈರೆಕ್ಟರ್ ಧೊರೆಗಳಾದ ಮಿ। ಆರ್. ಎಂ ಸ್ಟಾಥೇಮ್ ಸಾಹೇಬರು ಅಗ್ರಾಸನ ವಹಿಸಿದ್ದರು ಡಿ. ಸಿ.ಯಮಿನ ಕಾರ್ಯದರ್ಶಿಗಳಾದ ಶ್ರೀ। ಸೂರ್ಯನಾರಾಯಣರಾಯರು ಗತವರ್ಷದವರದಿಯನ್ನೋದುತ್ತಾ, ಶಾಲೆಯುಮಾಡಿದ ಕೆಲಸಗಳನ್ನೂ ಇನ್ನೂ ಕೈಕೊಳ್ಳಬೇಕೆಂದಿರುವ ಕೆಲಸಗಳನ್ನೂ ಸವಿಸ್ತಾರವಾಗಿ ತಿಳಿಸಿದರು. ಮತ್ತು ಹಣದ ಅಭಾವವಿರುವದರಿಂದ ಏನು ಕೆಲಸಮಾಡುವದಕ್ಕೂ ಅನುಕೂಲವಿಲ್ಲವೆಂದೂ, ಸರಕಾರದವರು ಹೆಚ್ಚಿಗೆ ಸಹಾಯ ದಯಪಾಲಿಸಬೇಕೆಂದೂ ಬೇಡಿಕೊಂಡರು.

ಡೈರೆಕ್ಟರು ಧೊರೆಗಳು ತಮ್ಮ ಭಾಷಣದಲ್ಲಿ, ಹರಿಜನರ ಸಮಸ್ಯೆಯು ಬಹು ದೊಡ್ಡದೆಂದೂ ಆರೇಳು ಮಿಲಿಯ ಜನರನ್ನು ಮುಂದಕ್ಕೆ ತರುವ ಕೆಲಸವು ಬಹಳಕಷ್ಟದ್ದೆಂದೂ ಸರಕಾರದವರು ಹರಿಜನರ ವಿಷಯದಲ್ಲಿ ಬಹಳ ಸಹಾನುಭೂತಿಯುಳ್ಳವರಾಗಿರುವರೆಂದೂ ಹೇಳಿದರು ಮತ್ತು ಸರಕಾರದವರ ಮುಂದೆ ಅನೇಕ ಯೋಜನೆಗಳು ಇರುವುವೆಂದೂ ಅವುಗಳು ಜಾರಿಗೆ ಬಂದರೆ ಹರಿಜನರ ಉದ್ಧಾರವು ಹೆಚ್ಚಾಗಿ ಆಗುವುದೆಂದೂ, ಆದರೆ ಈ ಮಹಾ ಕೆಲಸದಲ್ಲಿ ಮಹಾಜನರು ಸಹ ಭಾಗವಹಿಸಬೇಕೆಂದೂ ಈ ಶಾಲೆಯಿಂದ ಓದಿ ಉದ್ಯೋಗವನ್ನು ಪಡೆದ ಹರಿಜನ ಯುವಕರು ಸಹ ತಮ್ಮ ಶಕ್ತ್ಯಾನುಸಾರಶಾಲೆಗೆ ಸಹಾಯಮಾಡಬೇಕೆಂದೂ ಸೂಚಿಸಿ ತಮ್ಮ ಸಹಾನುಭೂತಿಯನ್ನು ಪ್ರದರ್ಶಿಸುತ್ತಾ ಡಿ. ಸಿ. ಯಮಿಗೆ ರೂ. 100-0 0ಚಂದಾ ದಯಪಾಲಿಸಿದರು ಹರಿಜನರಲ್ಲಿ ಮೊದಲನೆಯ ಬಿ ಎ, ಎಲ್. ಟಿ. ಯವರಾದ ಶ್ರೀ। ಓ. ಕೃಷ್ಣರವರನ್ನು ದೊರೆಗಳು ಅಭಿವಂದಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಶ್ರೀ। ಯಂ ಎಸ್. ಮಾಧವರಾಯರು ಡೈರೆಕ್ಟರ ದೊರೆಗಳವರಿಗೆ ಧನ್ಯವಾದಗಳನ್ನರ್ಪಿಸಿದ ಅನಂತರ ಸಭಾಂತ್ಯವಾಯಿತು ಶಾಲಾಮಕ್ಕಳು ನಾಟಕ, ಪ್ರಹಸನ ಇತ್ಯಾದಿಗಳನ್ನು ಅಭಿನಯಿಸಿ ಧೊರೆಗಳವರ ಮನಸ್ಸಿಗೆ ಸಂತೋಷವನ್ನುಂಟುಮಾಡಿದರು.

ಆಗಮನ

ದಕ್ಷಿಣಕನ್ನಡಜಿಲ್ಲೆಯ ಕಲೆಕ್ಟರರಾಗಿ ನೇಮಕಹೊಂದಿದ ಮಿ। ಎ. ಕ್ರೊಂಬಿ ಸಿ ಐ ಇ., ಐ, ಸಿ. ಎಸ್, ರವರು ಕಳೆದ ತಾ. 29ರಲ್ಲಿ ಖಾನ್ ಬಹದ್ದೂರ್ ಹುಮಾಯೂನ್ ಸಾಹೇಬ್ ಬಹದೂರರವರಿಂದ ಅಧಿಕಾರವನ್ನು ಪಡೆದುಕೊಂಡರು.

ನಗರ ಸಭೆ

ತಾ 5 10 36ರಲ್ಲಿ ಮಂಗಳೂರು ನಗರಸಭೆಯ ಮೀಟಿಂಗು ನಗರ ಸಭಾಮಂದಿರದಲ್ಲಿ ಜರಗಿತು.

ಕದ್ರಿ—ಇಲ್ಲಿಯ ಗಣಪತಿ ಗೋಮುಖ ತೀರ್ಥದ ಚಿಲುಮೆಯ ಕಟ್ಟೋಣವನ್ನು ವೃದ್ಧಿಮಾಡಿ ಮೇಲ್ಛಾರಯನ್ನು ಹೊಸದು ಪಡಿಸುವಪುಣ್ಯಕಾರ್ಯವನ್ನು ಮಂಗಳೂರು ಇಂಪಿರಿಯಲ್ ಬೇಂಕಿನ ರಿಟಾಯರ್ಡ್ ಏಜಂಟರಾಗಿದ್ದ ಶ್ರೀಮಾನ್ ಯು. ಆನಂದ ರಾವ್ ಅವರ್ಗಳವರು ಕೈಕೊಂಡಕಾರ್ಯಸ್ತುತ್ಯವಾಗಿದ

ಇಲ್ಲಿಯ ಶ್ರೀ ಮಂಜುನಾಥ ದೇವರ ಗೋಪುರದಲ್ಲಿ ಸಪ್ತಂಬರ ತಿಂಗಳ ತಾ. 10 ಗಂಟಗೆ ನಮ್ಮ ಜಿಲ್ಲೆಯ ಕುಲಾಲರ ಯಾನೆ ಮೂಲ್ಯರ ಜಾತಿಯ ಒಂದು ಮಹಾಸಭೆ ಜರಗಿತು ಇದರಲ್ಲಿ ಸಮಾಜದ ಒಂದು ಗಡುತರವಾದ ನ್ಯಾಯ ಇತ್ಯರ್ಥ ಪಡಿಸುವ ಬಗ್ಗೆ ಕೊಡಿಯಾಲ್ ಬೈಲು ಕೆ. ಬಾಬು ಬಂಗೇರರ ವಿನಂತಿ ಪತ್ರವನ್ನು ಮಂಗಳೂರು ಹೋಬಳಿ ಸೀಮೆಯ 1ನೇ ಗುರಿಕಾರ ಕೋಟಿಮೂಲ್ಯರು ವಗ್ಯೆರೆ 8 ಜನ ಗ್ರಾಮಗುರಿಕಾರರು ಪ್ರಕಟಿಸಿದ ಪ್ರಕಟಣೆಯನ್ನು ಕುರಿತು ವಿಮರ್ಶಿಸಿ ಸಮಾಜದ ನಿಬಂಧನೆಗೆ ವಿರೋಧವಾಗಿ ನಡೆದ ಐದು ಮಂದಿಯನ್ನು ವಿಧಿಪಡಿಸಿ ವಿಮೋಚನೆಪಡಿಸಲಾಯಿತು. ಆದರೆ ಜಾತಿ ಅಭ್ಯುದಯ ಸಂಘವನ್ನು ಸ್ಮರಣೆಗೆ ತಾರದ ಇದ್ದದ್ದು ವಿಷಾದಕರವಾಗಿದ. ಮತ್ತು ಇಂಥಾ ಸಭೆಗೆ ಒಬ್ಬ ಅಧ್ಯಕ್ಷರನ್ನಾಗಿ ಚುನಾಯಿಸದೆ ಎಲ್ಲರೂ ಪದ ಹೇಳುವದೂ ಎಲ್ಲರೂ ಅರ್ಥ ಹೇಳುವಂತೆ ಯಾವ ಕ್ರಮವು ಇಲ್ಲದ್ದರಿಂದ ಇನ್ನು ಮುಂದೆ ಸದರಿ ಸಮಾಜದ ಹೋಬಳಿ ಸೀಮೆಯ ಗುರಿಕಾರರು ವ ಮೆಂಬರರು ಕೂಡಾ ಸಭೆನಡಿಸಿದ್ದಲ್ಲಿ ಬೇರೆ ಇತರರ ಸಭೆಗಳಂತೆ ಅದಕ್ಕೆ ಒಬ್ಬ ಅಧ್ಯಕ್ಷನೂ ಮತ್ತು ಸಭೆಯಲ್ಲಿ ಆ ದಿನ ನೂತಾಡತಕ್ಕ ಪ್ರಸ್ತಾಪಗಳೂ ಮೊದಲೇ ನಿಶ್ಚಯಿಸಿಕೊಳ್ಳುವದು ಯೋಗ್ಯವಾಗಿದೆ, ಅದಲ್ಲದೆ ಸಭೆ ಮುಕ್ತಾಯವಾಗುವ ಮೊದಲು ಮಧ್ಯದಲ್ಲಿ ಒಬ್ಬೊಬ್ಬರು ಎದ್ದು ಹೋಗುವದು ವಿಹಿತವಲ್ಲ ಎಂಬ ಬಾತ್ಮಿ.

ದ. ಕ. ಪಂಡಿತ ಸಂಘದ ವಾರ್ಷಿಕೋತ್ಸವವು ತಾ, ೪-೧೦-೩೬ರಲ್ಲಿ ಜರಗಿತು. ಶ್ರೀ ಯು. ಕಣ್ಣಪ್ಪ ಎಂ ಎ. ಎಲ್. ಟಿ (ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರ್)ಯವರು ಅಧ್ಯಕ್ಷರಾಗಿದ್ದರು ಸಂಘದ ಆವಶ್ಯಕತೆಯ ಕುರಿತು ಅಧ್ಯಕ್ಷರ ಭಾಷಣವಾಗಿ ಶ್ರೀ ರಾಮಚಂದ್ರ ಐಯ್ಯರರು ಪಂಡಿತರ ವಿಷಯವಾಗಿಅತಿದೀರ್ಘ ಭಾಷಣವಿತ್ತರು. ಶ್ರೀ ಅನಂತ ಉಪಾಧ್ಯಾಯರು ಅಧ್ಯಕ್ಷರು, ಶ್ರೀ. ಯು ರಾಮಪ್ಪಮತ್ತುಸುಬ್ಬರಾಯರು ಜತೆ ಉಪಾಧ್ಯಕ್ಷರು, ಶ್ರೀಯುತರಾದ ಟಿ ನಾರಾಯಣ ಭಟ್ಟ ಹಾಗೂ ಬಿ. ಶಂಕರ ಭಟ್ಟರು ಕಾರ್ಯದರ್ಶಿಗಳು ಆಗಿ ಹೊಸ ವರ್ಷಕ್ಕೆ ಚುನಾಯಿಸಲ್ಪಟ್ಟರು. ಶ್ರೀಗಳಾದ ಯು ರಾಮಪ್ಪ, ಎಂ ಎಸ್ ಅಡಿಯೋಡಿ, ವಿ. ರಾಮಶರ್ಮ ಶ್ರೀಮತಿ ಎಂ. ರಮಾಬಾಯಿ ಇವರುಗಳೂ ಮೇಲಿನ ಅಧಿಕಾರಿಗಳೂ ಸೇರಿದ ಕಾರ್ಯಕಾರೀ ಸಮಿತಿಯ ಏರ್ಪಾಡುನಡೆಯಿತು.

ಇಲ್ಲಿಯ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಸ್ಕೌಟು ದಳದ ವರ್ಧಂತಿಉತ್ಸವ ಸಪ್ಟಂಬರ೩೦ನೇ ಬುಧವಾರ ಶ್ರೀ ಕಾರ್ಕಳ ಸದಾಶಿವರಾವ್ ಬಿ. ಎ. ಎಂ. ಎಲ್. ರವರ ಅಧ್ಯಕ್ಷತೆಯಲ್ಲಿ ಜರಗಿತು ಸ್ತ್ರೀ ಸಾಹಸವೆಂಬ ನಾಟಕವೂ ಅಭಿನಯಿಸಲ್ಪಟ್ಟಿತು.

ಕಳದ ನವಂಬರ ತಿಂಗಳ ಚುನಾವಣೆಯಲ್ಲಿ ಆರಿಸಿ ಬಂದ ಜಿಲ್ಲಾ ಬೋರ್ಡು ಮೆಂಬರ ಶ್ರೀ ಬಿ. ರಾಮಣ್ಣಸೆಟ್ಟಿ ಬಿ ಎ. ಬಿ. ಎಲ್.ರವರ ಚುನಾವಣೆಯು ರದ್ದಾಗಬೇಕೆಂದು ಶ್ರೀ ಎಂ. ನಾಗಪ್ಪ ಹೊಳ್ಳರು ಸಬ್ ಕೋರ್ಟಿನಲ್ಲಿ ವ್ಯಾಜ್ಯಹೂಡಿದಂತೆ ಸಬ್ ಜಡ್ಜರು ಸಕಾರಣವಾಗಿ ಶ್ರೀ ಸೆಟ್ಟರ ಚುನಾವಣೆಯನ್ನು ರದ್ದುಮಾಡಿ ಹೊಸ ಚುನಾವಣೆಗೆ ಅಪ್ಪಣೆಯಿತ್ತಿರುವರು.

ಮದ್ರಾಸ್, ಮಂತ್ರಿಮಾನ್ಯ ಶ್ರೀ. ಪಿ. ಟಿ. ರಾಜನರು ತಾ. 15ರಲ್ಲಿ ಮಂಗಳೂರಿಗೆ ಆಗಮಿಸಲಿರುವರು. ಕೊಳೆರೋಗದ ಹಾವಳಿಯನ್ನು ಪರೀಕ್ಷಿಸುವದೇ ಅವರ ಉದ್ದೇಶವೆಂದು ತಿಳಿದುಬರುತ್ತದೆ.

ಪುತ್ತೂರು:—ತಾ 16-10-36ರಿಂದ 25-10-36ರ ತನಕ ಪುತ್ತೂರು ಸಹಕಾರಿ ಸಂಘದ ಕಟ್ಟಡದಲ್ಲಿ ದಸರಾ ಮಹೋತ್ಸವವು ಜರಗುವುದು. ಪ್ರತಿದಿನ ಸಾಯಂಕಾಲ ಬೇರೆಬೇರೆ ವಿದ್ವನ್ಮಣಿಗಳ ಭಾಷಣಗಳೂ ರಾತ್ರಿ ನಾನಾತರದ ವಿನೋದಗಳೂ ಇರುವವು. ತಾ. 24ರ ಮಧ್ಯಾಹ್ನ 2 ಗಂಟೆಗೆ ಶ್ರೀ। ವಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಾಹಿತ್ಯೋತ್ಸವವು ಜರಗುವುದು.

ಕೋಟಾಡಿ:—ಇಲ್ಲಿ ಇದೇ ತಾ. 4ರಲ್ಲಿ ದನವೊಂದನ್ನು ಹಿಡಿದು ತಿನ್ನುತ್ತಿದ್ದ ಹುಲಿಯನ್ನು ಬಿಲ್ಲವನೊಬ್ಬನು ಬಡಿಗೆಯಿಂದ ಹೊಡೆಯಲು ಅದು ಅವನನ್ನು ಬಹಳವಾಗಿ ಜಖಂಗೊಳಿಸಿ ಕಾಡಿಗೋಡಿತು. ಊರವರೆಲ್ಲಾ ಕೂಡಿ ಬೇಟೆಯಾಡಿ, ಶ್ರೀ। ಬಿ ಅಂತಯ್ಯ ಹೆಗ್ಡೆಯರು ಆ ಹುಲಿಯನ್ನೂ, ಅದರ ಜತೆಯನ್ನೂ ಗುಂಡಿಟ್ಟು ಹೊಡೆದು ಕೊಂದಿರುವರು.

ಬ್ರಹ್ಮಾವರ:—ಇಲ್ಲಿಯ ಮಟ್ಪಾಡಿ ಕೃಷ್ಣಯ್ಯಶೆಟ್ಟರು ಮೂಲವ್ಯಾಧಿ ಪೀಡಿತರಾಗಿದ್ದು ಕಳೆದ ತಾ 30 9 36ರಲ್ಲು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರು ಪ್ರಸಿದ್ಧ ಅರ್ಥಗಾರರೂ, ಕಾಂಗ್ರೆಸ್ ಭಕ್ತರೂ, ಉತ್ಸಾಹೀ ರಾಷ್ಟ್ರಸೇವಕರೂ, ಜನಪ್ರೀತರೂ ಆಗಿದ್ದರು ಇವರ ನಿಧನದಿಂದ ಬ್ರಹ್ಮಾವರ ಮತ್ತು ಆಸುಪಾಸಿನ ಜನತೆಯು ತುಂಬಾ ದುಃಖಕ್ಕೀಡಾಗಿರುವುದು.

ಪುತ್ತೂರು:—ಸಪ್ಟಂಬರ ತಾ 26ರಲ್ಲಿ ಪುತ್ತೂರಿನ ಹುಡುಗರ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಒಂದು ಸಭೆನಡೆದು ಪುತ್ತೂರಿನ ಡಿಪ್ಟಿ ಇನ್ಸ್‌ಪೆಕ್ಟರ ದ ಶ್ರೀ. ಬಿ. ವಿ ರಮಣರ ಪ್ರಯತ್ನದಿಂದ 'ಜೂನಿಯರ್ ರೆಡ್‌ಕ್ರೋಸ್ ಸೊಸೈಟಿ' ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು. ಇದು ಜನೋಪಕಾರಕ್ಕೆ ರೆಡ್‌ಕ್ರೋಸ್ ಸೊಸೈಟಿಯ ಕಿರಿಯ ಶಾಖೆಯಾಗಿರುತ್ತದೆ. ಚಿಕ್ಕ ಹುಡುಗರು ಆರೋಗ್ಯ ಕ್ರಮಕ್ಕನುಗುಣವಾದ ಜೀವನ ನಡೆಸುವಂತೆ ಬೋಧಿಸುವ ಮತ್ತು ಸಂಕಷ್ಟ ಸಂಧರ್ಭದಲ್ಲಿ ಸಹಾಯ ಮಾಡುವ ಉದ್ದೇಶವುಳ್ಳದ್ದಾಗಿದ. ಇಂತಹ ಸಂಸ್ಥೆಯು ಪುತ್ತೂರಲ್ಲಿ ಸ್ಥಾಪಿತವಾದುದು ಇದೀಗ ಪ್ರಥಮ ಸಲ.

ಕೃಷಿ ಇಲಾಖೆಯ ಡೈರೆಕ್ಟರರು ಡಿಪ್ಟಿ ಡೈರೆಕ್ಟರ್ ಮತ್ತು ಸರಕಾರದ ಮೈಕೊಲೆಜಿಸ್ಟರೊಂದಿಗೆ ಪುತ್ತೂರನ್ನು ಸಂದರ್ಶಿಸಿ ತಾ 27-9-36ರಲ್ಲು ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳ ಅಡಿಕೆ ತೋಟಗಾರರ ಸಭೆಯೊಂದನ್ನು ನಡೆಸಿದರು. ಡೈರೆಕ್ಟರರು ಇದರ ಅಧ್ಯಕ್ಷರಾಗಿದ್ದರು ಅವರು ತಾನು ಸಂದರ್ಶಿಸಿದ ಹಲವು ತೋಟಗಳ ಅನುಭವವನ್ನಿತ್ತು ಮಹಾಲಿರೋಗವನ್ನು ಹೇಗೆ ಅಡಗಿಸ ಬಹುದೆಂಬುವನ್ನು ಸೂಚಿಸಿದರು ಈ ರೋಗ ನಿವಾರಣೆಯ ಉಪಾಯಗಳನ್ನೆಲ್ಲಾ ಸೂಚಿಸಿ ಒಂದು ಕರಪತ್ರವು ಪ್ರಕಟಿಸಲ್ಪಡುವುದೆಂದು ತಿಳಿಸಿದರು.

ಇಂತಹ ರೈತರ ಗತಿಯೇನು?

ಹಳ್ಳಿಯ ರೈತರು
ಜೀವನ್ಮೃತರು
ಧನಿಕರ ತುಳಿತಕೆ ಸಿಲುಕಿಹರು
ಅಲ್ಲಿಯ ಬಡವರು
ಅನುದಿನ ದುಡಿವರು
ದುಡಿದುದ ಕೊಡುವರು ಧನಿಕರಿಗೆ

ಬಡವರ ಪೀಡಿಸಿ
ದುಡ್ಡನು ಕೂಡಿಸಿ
ಮೆರೆವರು ಧನಿಕರು ಅಲ್ಲಲ್ಲಿ
ಹಸಿವೆಗೆ ಹೊರಳುತ
ನೋವಿಗೆ ನರಳುತ
ಇರುವರು ರೈತರು ಹಳ್ಳಿಯಲಿ

ಕಷ್ಟವ ಪಡುವರು
ನಷ್ಟವ ಪಡೆವರು
ಇಷ್ಟವ ಮಾಡುವರೆಲ್ಲರಿಗೆ
ಎಲ್ಲರ ಹೊಟ್ಟೆಗೆ
ಎಲ್ಲರ ಬಟ್ಟೆಗೆ
ಹಳ್ಳಿಯ ಕಷ್ಟದಿ ದುಡಿಯುವ್ವುಗು

ರಾಮನು ಉಣ್ಣುವ
ದೊಮನು ತಿನ್ನುವ
ಭೀಮನು ಮುಕ್ಕುವದೆಲ್ಲವನು
ಹಳ್ಳಿಯ ಬೆಳೆವುದು
ಎಲ್ಲವ ಕಳೆವುದು
ಉಣ್ಣಲು ಇಲ್ಲದೆ ಬಳಲುವುದು

ದುಡಿವರು ಬಡವರು
ದಡಬಡ ಕೊಡುವರು
ಹಸಿವೆಗೆ ಕುಡಿವರು ಗಂಜಿಯನು
ದುಡಿವರು ರೈತರು
ಕೊಡುವರು ರೈತರು
ಆದರೆ ಇರುವುದೆ ರೈತರಿಗೆ

ಸಾಲಕೆ ಅಳೆಯಲು
ತೆರಿಗೆಗೆ ಹೋಗಲು
ಉಳಿವುದು ಸೊನ್ನೆಯು ರೈತರಿಗೆ
ಎಲ್ಲರು ಬಡವರು
ಹಳ್ಳಿಯ ರೈತರು
ಬಳಲುತಲಿರುವರು ಅನುದಿನವು

ಪರಿಪರಿ ಕಷ್ಟದಿ
ತರತರ ನಷ್ಟದಿ
ತೊಳಲುವ ಬಳಲುವ ರೈತರನು
ಹೆಚ್ಚಿದ ಸಾಲವು
ಭೀಕರ ಶೂಲವು
ನಿತ್ಯವು ಕೊಲುತಿದೆ ರೈತರನು

ತೆರಿಗೆಯ ಹೊರೆಯಿದೆ
ಶಿರವನು ಮುರಿದಿದೆ
ಇಂತಿಹ ರೈತರ ಗತಿಯೇನು?
ರೈತರ ಕಷ್ಟವು
ಹಳ್ಳಿಯ ನಷ್ಟವು
ದೇಶದ ಕಷ್ಟಕೆ ಮೂಲವದು

ಗೆಳೆಯರೆ ಕೇಳಿರಿ
ದಾರಿಯ ಹೇಳಿರಿ
ಹಳ್ಳಿಯ ಕಷ್ಟವು ನೀಗುವರೆ
ಹಳ್ಳಿಯ ನೋಡಿರಿ
ಕಣ್ಣನು ತರೆಯಿರಿ
ಕರುಣೆಯ ತಾಳಿರಿ ರೈತರಲಿ

ಬನ್ನಿರಿ ಬನ್ನಿರಿ
ಹಳ್ಳಿಯ ಸಲಹಿರಿ
ದೇಶದ ತಿರುಳನು ರೈತರನು

ಮುದ್ರಾಡಿ ಕೃಷ್ಣಯ್ಯಸೆಟ್ಟಿ

ಒಕ್ಕಲಿಗರ ಮಹಾಸಭೆ.

ಕಾರ್ಕಳ ತಾಲೂಕು ಪಾಲಡ್ಕ ಕೃತ್ತಿಗ್ಗೆ ಬೆಳುವಾಯಿ ಗ್ರಾಮಗಳ ದಕ್ಷಿಣ ಕನ್ನಡ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿಯ ವಾರ್ಷಿಕ ಮಹಾಸಭೆಯು ತಾ. 23 9-36ರಲ್ಲಿ ಕೊಡ್ಯಡ್ಕದಲ್ಲಿ ಕಾರ್ಕಳ ವಕೀಲ್ ಶ್ರೀಮಾನ್ ಪಿ ವಿ ಉಪಾಧ್ಯಾಯ ಬಿ ಎ. ಬಿ. ಎಲ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಅಧ್ಯಕ್ಷರ ಚುನಾವಣೆಯಾದ ನಂತರ ಸಮಿತಿಯ ಜನಕರೂ ಪಾಲಕರೂ ಆದ ಶ್ರೀಮಾನ್ ಬಿ. ಟಿ. ರೈ ಇವರು ಸಮಿತಿಯ ಆರನೇ ವರ್ಷದ ವರದಿಯ ವಿಷಯವನ್ನು ಓದಿ ಹೇಳಿದರು.

ಗ್ರೈನ್ ಬೇಂಕ್ ಮತ್ತು ಪಂಚಾಯತ್ ಬೋರ್ಡು ಸ್ಥಾಪನೆಯ ಕುರಿತು ಸಂಬಂಧ ಪಟ್ಟ ಅಧಿಕಾರಿಗಳ ಅನುಮತಿ ಸಿಗದೆ ನಿರಾಶೆಯಾದ್ದರಿಂದ ಮುಡಿ ಒಂದರ ಸಾಲಿಯಾನ ಬಡ್ಡಿ ಮೂರುವರೆ ಸೇರಿನ ದರದಲ್ಲಿ ಊರಿನ ಉದಾರ ಗೃಹಸ್ಥರಿಂದ ಅಕ್ಕಿ ಮುಡಿ 162 ಕಳಸಿಗೆ 1 ಸೇರು ಒಂಭತ್ತನ್ನು ಡಿಪೋಜಿಟು ಲೆಕ್ಕಕ್ಕೂ ಅಕ್ಕಿ ಮುಡಿ 35 ಕಳಸಿಗೆ 2 ಸೇರು 1ನ್ನು ಧರ್ಮವಾಗಿಯೂ ಈ ಸಮಿತಿಗೆ ಸಹಾಯ ಮಾಡಿದವರ ಉಪಕಾರ ಸ್ಮರಣೆಯನ್ನು ಸಭೆಯ ಮುಂದೆ ವ್ಯಕ್ತಪಡಿಸಿದರು.

ಹಳ್ಳಿಗರಲ್ಲಿ ಪ್ರತಿಯೊಂದು ಮನೆಯಲ್ಲೂ ಕನಿಷ್ಟ ಒಬ್ಬನಾದರೂ ವಿದ್ಯಾವಂತನಿರ ಬೇಕೆಂದೂ ಹಳ್ಳಿಗರು ಅಜ್ಞಾನಿಗಳಾಗಿ ಮೋಸ ಹೋಗಬಾರದೆಂದೂ ಪ್ರತಿಯೊಬ್ಬರೂ ವಿಚಾರಮಾಡಿ ನಡೆಯಬೇಕೆಂದೂ ಸೂಚಿಸಿದರು ಲೇವಾದೇವಿಗಳಲ್ಲಿ ದೇವಿದಾಖಲೆಯಿಟ್ಟುಕೊಳ್ಳಬೇಕೆಂದು ಒತ್ತಿ ಹೇಳಿದರು. ಹಳ್ಳಿಗರು ಮಡಿಯಲಿಕ್ಕೆ ಕಲಿತರೆ ಮಾತ್ರ ಸಾಲದು. ದುಡಿದುದನ್ನು ಕಾಪಾಡಿಕೊಳ್ಳಲಿಕ್ಕೂ, ಲಾಭಕರವಾಗಿ ಉಪಯೋಗಿಸಿಕೊಳ್ಳಲಿಕ್ಕೂ ಕಲಿಯ ತಕ್ಕದ್ದೆಂದು ಸ್ಪಷ್ಟ ತಿಳಿಸಿದರು ಕಾಯಿಲೆ ಬಂದಾಗ ಹಳ್ಳಿಗರು ನೆಟ್ಟಗೆ ವೈದ್ಯರ ಮನೆಗೆ ಹೋಗತಕ್ಕದ್ದೆಂದೂ ಭಟ್ಟರು ಜೋಯಿಸರು ಮಂತ್ರವಾದಿಗಳು ಜಾದುಗಳು ಮೊದಲಾದವರ ಬಳಿಗೆ ಹೋದಲ್ಲಿ ಆವರು ಅಷ್ಟದಾರಿಗೆ ಹಚ್ಚಿ ತಲೆ ಕೆಡಿಸುತ್ತಾರೆಂದೂ ವಿವರಿಸಿದರು. ಹಳ್ಳಿಗನ ದುಡ್ಡಿನ ಪೆಟ್ಟಿಗೆಗೆ ಅನೇಕ ರಂಧ್ರಗಳು ಇದ್ದಾವೆಂದೂ ಈ ರಂಧ್ರಗಳ ದ್ವಾರಾ ಹಳ್ಳಿಗನ ದುಡ್ಡು ದೇವಾಲಯ, ಭೂತಾಲಯ, ಭಟ್ಟ, ಜೋಯಿಸ, ಮಂತ್ರವಾದಿ ಮೊದಲಾದವರ ಬಳಿಗೆ ಹರಿಯುತ್ತಿದೆಯೆಂದೂ, ಹಳ್ಳಿಗನು ಈ ಕೋಟೆಗಳನ್ನು ಮುಚ್ಚಿ ತನ್ನ ಆರ್ಥಿಕ ಸುಧಾರಣೆಯನ್ನು ತಾನೇ ಮಾಡಿಕೊಳ್ಳಬೇಕೆಂದೂ ಬುದ್ಧಿ ಹೇಳಿದರು. ಉದಾರ ಬುದ್ಧಿಯ ಶ್ರೀಮಂತರು ಅರ್ಥವಿಲ್ಲದ ದೇವಸ್ಥಾನಗಳಿಗೆ ಧನ ಸಹಾಯ ಮಾಡುವುದಕ್ಕಿಂತ ಊರ ಮಂದಿಗಳ್ಗೆ ಉಪಕಾರ ಮಾಡುವ ಇಂಥಾ ಸಮಿತಿಗಳಿಗೆ ಸ್ವಹಸ್ತ, ಪರಹಸ್ತ ಮೂಲಕ ಧನಸಹಾಯ ಮಾಡಿದಲ್ಲಿ ಊರಿಗೆಲ್ಲ ಸುಖ ಮಾದೀತೆಂದರು. ಮತ್ತು ಈ ಸಮಿತಿಯ ಕಾರ್ಯಕ್ಕೆ ಪ್ರೋತ್ಸಾಹ ಸಿಗುವ ಹಾಗೆ ತಾವು ತಮ್ಮ ಪೇಟೆಯ ಮಿತ್ರರುಗಳಲ್ಲಿ ಪ್ರೇರಿಸುವುದಾಗಿ ಅಭಿವಚನವಿತ್ತರು.

ಬಂಟರ ಯೂನೆ ನಾಡವರ ಸಂಘ, ಮುಂಬಾಯಿ

ಈ ಸಂಘದ ಸಾರ್ವಜನಿಕ ಸಭೆಯು ಇದೇ ಅಕ್ಟೋಬರ ತಿಂಗಳ ತಾ. 11ನೇ ಆದಿತ್ಯವಾರ ಮ ರಾ. ರಾ. ಡಾಕ್ಟರ್ M· ವೆಂಕಟ್ರಾಯ ಸೆಟ್ರು ಜೆ ಪಿ. ಅವರ್ಗಳವರ ಅಧ್ಯಕ್ಷತೆಯಲ್ಲಿ ಕೋಟೆಯ ಫ್ಯಾರ್ ಬಜಾರಿನ ಹತ್ತಿರ ದಲಾಲ್ ಸ್ಟ್ರೀಟಿನಲ್ಲಿರುವ ಅಭಾಖಾನ ಬಿಲ್ಡಿಂಗಿನ 4ನೇ ಮಾಳಿಗೆಯಲ್ಲಿ ಮಧ್ಯಾಹ್ನ ಘಂಟೆ 3ಕ್ಕೆ ಜರಗಲಿರುವುದರಿಂದ ಸಂಘದ ಸದಸ್ಯರೆಲ್ಲರೂ ದಯವಿಟ್ಟು ಸದ್ರಿ ಸಭೆಗೆ ಬತ್ತ್ಯಸಿ, ಅವರ ಕಾರ್ಯಕ್ರಮಗಳಲ್ಲಿ ಭಾಗ ವಹಿಸಬೇಕಾಗಿ ವಿನಂತಿ.

ಕಾಪು ಕಾಂತಪ್ಪಶೆಟ್ಟಿ,
ಬ್ರಹ್ಮಾವರ ನಾರಾಯಣಶೆಟ್ಟಿ,
ಗೌರವ ಜೊತೆ ಕಾರ್ಯದರ್ಶಿಗಳು.

ತೀರ್ಥಹಳ್ಳಿ ಸಮಾಚಾರ

ಈ ಊರಿನಲ್ಲಿ ಈ ವರುಷ ಮಳೆ ಸರಿಯಾಗಿ ಬಂದಿರುವುದರಿಂದ ಬತ್ತದ ಪೈರು ಚೆನ್ನಾಗಿ ಇದೆ. ಅಡಕೆ ತೋಟಗಳು ಕೊಳೆ ರೋಗದ ದೆಸೆಯಿಂದ ಪೂರ್ಣ ಕ್ಷೀಣ ದೆಸೆಗೆ ಬಂದಿರುತ್ತವೆ. ರೈತರು ಹಣದ ಅಭಾವದಿಂದ ತೋಟದ ಕಾಮಗಾರಿಯನ್ನು ಸಮಾ ಮಾಡಿಸದೆ ಹಾಗೆಯೇ ನಿಲ್ಲಿಸಿರುತ್ತಾರೆ. ಅಡಿಕೆ ಧಾರಣೆಯೂ ಸಮರ್ಪಕವಾಗಿ ಯಿಲ್ಲ, ಕಂದಾಯ ತೆರುವರೆ ಸಾಧ್ಯವಿಲ್ಲದೆ, ಎಷ್ಟೋ ಜಮೀನುಗಳು ಸರಕಾರದವರಿಂದ ಹರಾಜು ಹಾಕಲ್ಪಟ್ಟಿರುತ್ತವೆ ಇದೇ ರೀತಿ ನಡಗರ ಮುಂದೆ ಮಲೆನಾಡಿನ ಅವಸ್ಥೆಯು ಹೇಳತೀರದು ಘನಸರಕಾರದವರು ನಮ್ಮ ಈ ಮಲೆನಾಡಿನ ಕಡೆಗೆ ತಮ್ಮ ದಿವ್ಯ ದೃಷ್ಟಿಯನ್ನಿಟ್ಟು ಬಡ ರೈತರನ್ನು ಕಾಪಾಡುವ ಭಾರವು ಅವರದಾಗಿರುತ್ತದೆ. ಇಲ್ಲಿನ ಮುನಿಸಿಪಾಲಿಟಿಯಲ್ಲಿ ಕೆಲಸಕಾರ್ಯಗಳು ಹುರುಪಿನಿಂದ ನಡೆಯುತ್ತಾ ಇವೆ. ಕಾಯಿಲೆ ಕಸಾಲೆ ಹೆಚ್ಚಾಗಿ ಇರುವುದಿಲ್ಲ. ಇಲ್ಲಿನ ಗವರ್ನ್‌ಮೆಂಟ್ ಆಸ್ಪತ್ರೆ ಡಾಕ್ಟರ್‌ರವರೂ, ಲೇಡಿ ಡಾಕ್ಟರು ರವರೂ ರೋಗಿಗಳನ್ನು ಮುತು ವರ್ಜಿಯಿಂದ ನೋಡಿಕೊಂಡು ಜನಾನುರಾಗಕ್ಕೆ ಪಾತ್ರರಾಗಿರುತ್ತಾರೆ. ದೇಶಿಧೀನಸಿ ಧಾರಣೆಯು ಜಾಸ್ತಿಯಾಗಿಲ್ಲ ವ್ಯಾಪಾರಸ್ಥರಿಗೆ ವ್ಯಾಪಾರ ಬಹಳ ಮಂದಿಯಿರುತ್ತೆ ಎಂತ ಹೇಳುತ್ತಾರೆ. ಮುಂದಿಯಾದರೂ ಅಡಿಕೆಗೆ ಧಾರಣೆ ಒಂದಲ್ಲಿ ಮಲೆನಾಡು ಸ್ವಲ್ಪ ತಲೆ ಎತ್ತಲಿಕ್ಕೆ ಸಾಕು. ಇದೇ ರೀತಿ ಧಾರಣೆ ಇರುವ ಪಕ್ಷ ಮಲೆನಾಡಿನ ಅವಸ್ಥೆ ಹೇಳತೀರದು.

ಅಂಕೋಲೆಯ ಪತ್ರ

ತಾ ೩ ೧೦-೩೬ರಲ್ಲಿ ಎಡ್ವರ್ಡ್ ಇಂಗ್ಲಿಷ್ ಹ್ಯಾಸ್ಕೂಲಿನಲ್ಲ ಮೆಜಿಕ್ ಲೆಂಟರ್ನ್ ಡಿಸ್ಟ್ರಿಕ್ಟ್ ಕೆಲಕೇಖಾತೆಯ ಒಪೀಸರೆ ದಬ್ಬೀರಾಯರು ತೋರಿಸಿದರು ಪ್ರತಿಹಳ್ಳಿಗಳಿಗೂ ಹೋಗಿ ಮೆಜಿಕ್ ಲೆಂಟರ್ನ್ ತೋರಿಸುತ್ತಿರುವರಾಗಿ ಸುದ್ದಿ. ನಿನ್ನೆಯ ದಿನ ಬ್ರಾವಿಕೇರಿಗೆ ಹೋಗಿ, ಹೊಸ ಮಾರ್ಗದ ಫೋಟೋ ತೆಗೆದುಕೊಂಡು ಬಂದಿರುವರಾಗಿಯೂ ಮತ್ತು ಆ ಪ್ಲೇಟನ್ನು ಮುಂದಿನ ಸಾರಿ ಪ್ರದರ್ಶಿಸುವರಾಗಿಯೂ ಸುದ್ದಿ.

ಶ್ರೀಯುತ ಡಿಂಗಾ ದೇವ್ರನಾಯ್ಕರು ೧ನೇ ನಂಬ್ರ ಕನ್ನಡಶಾಲೆಯ ಮಾಸ್ತರರು. ಇಲ್ಲಿ ಒಂದು ಹರಿಜನಶಾಲೆಯನ್ನು ನಡೆಸುತ್ತಿರುವರಾಗಿಯೂ ಮತ್ತು ಶಾಲೆಯ ಫೋಟೋ ಸಹ ದಬ್ಬೀರಾಯರು ತಮ್ಮ ಪ್ರದರ್ಶನಕ್ಕೆ ತೆಗೆದುಕೊಂಡಿರುವರಾಗಿ ಸುದ್ದಿ.

ಅಂಕೋಲಾದಲ್ಲಿ ಹುಬ್ಬಳ್ಳಿ ಸರ್ವಿಸಿಗೆ ಕೋಂಪಿಟೇಶನ್ ಜೋರಿನಿಂದ ನಡೆದಿರುವುದು ಮೇಲ್ ಟೆಂಡರವನ್ನು ಲಕ್ಷ್ಮೀ ಸರ್ವೀಸ್ ಕೊಲ್ಲಾಪುರದವರು ಕಡಿಮೆ ಮಾಡಿ ತಕ್ಕೊಂಡರೆಂದು ಕಲಬುರ್ಗಿ ಈ ಮುಂಚಿನ ಮೇಲ್ ಸರ್ವಿಸಿನವರು ಕೋಂಪಿಟೇಶನಿಗ ನಿಂತಿರುವರಾಗಿ ಸುದ್ದಿ. ೯೦ ಮೈಲು ದೂರದ ಹುಬ್ಬಳ್ಳಿಗೆ ಎಂಟಾಣೆ. ಈ ಮೊದಲು ಎರಡು ರೂಪಾಯಿ ದರವಿತ್ತು. ಹ್ಯಾಗೂ ಜನತೆಗೊಂದುಪಕಾರ. ಹುಬ್ಬಳ್ಳಿ ನೋಡದವರು ಹುಬ್ಬಳ್ಳಿ ನೋಡಿಕೊಂಡರು ಗೋಕರ್ಣ ನೋಡದವರು ಹುಬ್ಬಳ್ಳಿ ಅತ್ತಲಾಗಿನವರು ಒಂದೇ ಸಮನೆ ಗೋಕರ್ಣಯಾತ್ರೆಗೆ ಬರ ಹತ್ತಿದ್ದಾರೆ; ಗೋಕರ್ಣಕ್ಷೇತ್ರ ಜನರದೂ ಒಂದು ಸುದೈವ ಮೇಲ್‌ಟೆಂಡರ್ ಒಬ್ಬರಗೊಬ್ಬರು ಹಿಂದೆ ತಕ್ಕೊಳ್ಳುವವರೆಗೆ ಕೋಂಪಿಟೇಶನ್ ನಡೆಯುವದಾಗಿ ಕಾಣುತ್ತದೆ.

ಅಂಕೋಲಾತಾಲೂಕು ಗುಂಡಬಾಳ ಹಳ್ಳಿಯ ಸಮೀಪದಲ್ಲಿ ಹೋದ ಸಪ್ಟಂಬರದಲ್ಲ ಒಬ್ಬ ಕ್ರಿಶ್ಚನ್ ಶಿಕಾರಿಯು ೩ ಆನೆಗಳನ್ನು ಕೊಂದನು. ಮತ್ತೊಬ್ಬ ಶಿಕಾರಿಗೂ ಹಳಿಯಾಳ ಅತ್ತಕಡೆಯಿಂದ ಆನೆಯ ಕಾಟ ಹೆಚ್ಚೆಂದು ಹಳ್ಳಿಯತ್ತ ಕಡೆಯ ರಿಪೋರ್ಟಿನ ಮೇಲೆ ಮಾಮ್ಲೇದಾರರು ಕರಿಸಿಕೊಂಡಿರುವರಾಗಿ ಸುದ್ದಿ. ಈ ಹಿಂದೆ ಮೂರಾನೆಗಳನ್ನು ಕೊಂದ ಶಿಕಾರಿಗೆ ಹೊನ್ನಾವರ ಅತ್ತಕಡೆಗೂ ಶಿಕಾರಿ ದಸೆಯಿಂದ ರವಾನಿಸಿದ್ದಾರೆ ಒಟ್ಟಿನ ಮೇಲೆ ಸುತ್ತಮುತ್ತಲೂ ಈ ಜಿಲ್ಲೆಯ ಹಳ್ಳಿಗಳಲ್ಲಿ ಆನೆಯ ಕಾಟ.

ಅಂಕೋಲಾ ಇದು ತಾಲೂಕಾ ಊರಿದ್ದು ಮೋಟಾರ ಪ್ರವಾಸಕ್ಕೆ ಕಾನಡಾ ಜಿಲ್ಲೆಯಲ್ಲಿ ಮುಖ್ಯಸ್ಥಳವಾಗಿರುವುದು ಇಲ್ಲಿ ೧ ಇಂಗ್ಲೀಷ್ ಹ್ಯಾಸ್ಕೂಲ್. ೩ ಕನ್ನಡ ಮತ್ತು ಮರಾಠಿ ಹೆಣ್ಣು ಹುಡುಗಿಯರ ಶಾಲೆ ಹೀಗಿರುವುದು ಆದರೆ ಒಂದು ಲ್ಯಾಬ್ರೆರಿ ಮಂತ್ರ ಎಷ್ಟೋ ಪೆನ್ಶನ್‌ದಾರರೂ ಜಮೀನ್‌ದಾರರೂ ಇದ್ದು ಚೆನ್ನಾಗಿ ನಡೆಯಲು ಕಷ್ಟವಾಗಿರುವದಂತೆ! ವರ್ಗಣಿ ಸರಿಯಾಗಿ ಬರುವದಿಲ್ಲವಂತೆ! ಆದರೆ ಹಳ್ಳಿಗಳಲ್ಲಿ ಹಿಚ್ಚಡದಂಥ ಸಣ್ಣ ಹಳ್ಳಿ ನೂರಿನ್ನೂರು ಜನಸಂಖ್ಯೆ' ಕನ್ನಡ ನಾಲ್ಕನೇ ಯತ್ತೆ ವರೆಗೆ ಸಹ ಕಲಿತವರು ಸಿಗುವುದು ಅಪರೂಪ. ಈಗ ಕನ್ನಡ ಶಾಲೆ ೫-೬ ವರ್ಷಗಳಿಂದಲೇ ಸುರು. ಅಂಥ ಕಡೆಯಲ್ಲಿ ಲ್ಯಾಬ್ರೆರಿಸ್ಥಾಪನೆ ಆಗಲು ಹಳ್ಳಿಯ ಜನರದ್ದೇ ಪ್ರಯತ್ನ ಬಾಸ್ಗೋಡದಲ್ಲಿ ಇದೂ ಒಂದು ಹಳ್ಳಿ ಲ್ಯಾಬ್ರೆರಿ ಉಂಟು ಅಂಕೋಲಾ ಶಹರದಲ್ಲಿ ಮಾತ್ರ ಲ್ಯಾಬ್ರೆರಿ ಮಹತ್ವವಿಲ್ಲ. ನೋಡಬೇಕು ಕಾಲದ ಮಹಿಮೆ.

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ) ಸಂ. ನ..

ವಿದ್ಯಾಭಿಮಾನಿಗಳೇ!

ಮಂಗಳೂರಿನ ವಿದ್ಯಾರ್ಥಿಗಳಲ್ಲಿ ಸಂಘಶಕ್ತಿಯನ್ನೂ ಸಹೋದರ ಪ್ರೇಮವನ್ನೂ ಉಂಟುಮಾಡಲು ಜನಿಸಿದ ವಿದ್ಯಾರ್ಥಿ ಸಂಘದ (Studnets' Union) ಕುರಿತು ವಿದ್ಯಾರ್ಥಿಗಳೇ ಈಗ ಕಡೆಗಣ್ಣ ನೋಟವನ್ನು ಬೀರಿರುವುದು ತುಂಬಾ ಲಾಂಛನಾಸ್ಪದವಾದ ವಿಷಯವಾಗಿದೆ.

ಜಿಲ್ಲೆಯ ಎಲ್ಲಾ ಕಡೆಗಳಿಂದ ವಿದ್ಯಾಭ್ಯಾಸಕ್ಕಾಗಿ ಇಲ್ಲಿಗೆ ಬರುವ ವಿದ್ಯಾರ್ಥಿಗಳು ಈ ಸಂಘದಲ್ಲಿ ಕೂಡಿ ಜಿಲ್ಲೆಯ ವಿದ್ಯಾರ್ಥಿಗಳೆಲ್ಲರ ಸಂಸ್ಥೆಯಾಗಿ ಅದನ್ನು ಮಾಡಿ, ಎಲ್ಲರಲ್ಲೂ ಸಹೋದರಪ್ರೇಮವನ್ನೂ ಸೌಜನ್ಯವನ್ನೂ ಉಂಟುಮಾಡುವ ಉಚ್ಚಧ್ಯೇಯದಿಂದ ಇದೀಗ ಹಲವು ಕಾರ್ಯಗಳನ್ನು ತನ್ನ ಮುಂದಿರಿಸಿ ತನ್ನ ಕರ್ತವ್ಯವನ್ನು ಮುಂದುವರಿಸಿ ಜಿಲ್ಲೆಯ ಹಿರಿಯರ ಮತ್ತು ವಿದ್ಯಾರ್ಥಿಗಳ ಉದಾರ ಸಹಾಯ ಸಹಕಾರಗಳಿಂದ ವಿದ್ಯಾರ್ಥಿಗಳಿಗೆ ಸಹಕಾರಿಯಾಗುವವಲ್ಲದೆ, ಈ ಸಂಘದೊಡನೆ ಸಹಕರಿಸಿ ಅದು ಸಾಯದಂತೆ ಪ್ರಯತ್ನಿಸಬೇಕು. ಅದು ತನ್ನ ಮುಂದೆ ಈ ಕೆಳಗಣ ಉಚ್ಚ ಉದ್ದೇಶಗಳನ್ನಿಟ್ಟುಕೊಂಡಿದೆ:—

ಜಿಲ್ಲೆಯ ಬೇರೆಬೇರೆ ಕಡೆಯ ವಿದ್ಯಾರ್ಥಿಗಳಲ್ಲಿ ಸಹೋದರ ಪ್ರೇಮವನ್ನುಂಟುಮಾಡಿಸಿ ಸಮಾಜಸೇವೆಯನ್ನು ಬೆಳೆಸುವಿಕೆ, ವಿದ್ಯಾರ್ಥಿಗಳ ಶಾರೀರಿಕ ಮಾನಸಿಕ ಮತ್ತು ಸಾಮಾನ್ಯ ವ್ಯವಹಾರಗಳ ಅಭಿವೃದ್ಧಿಯಲ್ಲಿ ಸಹಕಾರಿಯಾಗುವುದು, ವಿದ್ಯೆಗೆ ಸಹಾಯ, ವಿದ್ಯಾರ್ಥಿಗಳಲ್ಲೂ ಬೋಧಕರಲ್ಲೂ ಅನ್ಯೋನ್ಯತೆಯನ್ನುಂಟುಮಾಡುವುದು ಮತ್ತು ಭಾಷಣ, ಕೀರ್ತನ, ಸಭೆ, ಕಲಾಭಿಮಾನ, ಸಮಾಜ-ಹಳ್ಳಿಗಳ ಉದ್ಧಾರದ ಬಗೆ ಮುಂತಾದವುಗಳನ್ನು ಬೆಳೆಸುವುದು. ಇಂತಹ ಸತ್ಕಾರ್ಯಕ್ಕೆ ಎಲ್ಲರೂ ನೆರವಾಗರೇ?

ವಿದ್ಯಾರ್ಥಿ.

ಸನ್ಮಾನ್ಯ ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನ ಅಧ್ಯಕ್ಷರು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನಿತ್ತು ನಮಗೆ ಬಂದ ಸಂಶಯವನ್ನು ನಿವಾರಿಸುವರು ನಂಬುವೆವು. 1 ನೀವು ಕುಂದಾಪುರಕ್ಕೆ ಬಂದಾಗ ಇಲ್ಲಿನ ಕರ್ನಾಟಕ ಸಂಘದ ಅಧ್ಯಕ್ಷರು ನಿಮ್ಮೊಡನೆ ಸದ್ರಿ ಸಂಘದ ವಾರ್ಷಿಕ ವರ್ಧಂತ್ಯುತ್ಸವವನ್ನು ಜರಗಿಸುವರೆ ಕುಂದಾಪುರ ಬೋರ್ಡ ಹ್ಯಾಸ್ಕೂಲಿನಲ್ಲಿ ಸ್ವಲ್ಪ ಸ್ಥಳ ಕೊಡಬೇಕೆಂದು ವಿನಂತಿಸಿದರೆ? 2 ನೀವು "ಶಾಲೆಯನ್ನು ವರ್ಧಂತ್ಯುತ್ಸವವನ್ನು ಜರಗಿಸಲು ಕೊಟ್ಟರೆ ಸಾರ್ವಜನಿಕರು ನನ್ನ ಮೇಲೆ ಕೆಟ್ಟ ಅಭಿಪ್ರಾಯ ಪಟ್ಟಾರು" ಎಂದು ಹೇಳಿದುದು ನಿಜವೆ? 3 ತಾ. 26, 27, 28ಕ್ಕೆ ರಜೆಯಿದ್ದಿತ್ತಲ್ಲವೆ? 4 ಕನ್ನಡಸಾಹಿತ್ಯ ಸೇವೆ ಮಾಡುವ ಕರ್ನಾಟಕ ಸಂಘಕ್ಕೆ ಸ್ಥಳ ಕೊಡದಿರಲು ಕಾರಣವೇನು? 5 ನಮ್ಮ ಜಿಲ್ಲೆಯ ಪುತ್ತೂರಿನ ದಸರಾ ಮಹೋತ್ಸವವು ನಡೆಯುವುದೆಲ್ಲಿಂದು ತಿಳಿದಿರುವಿರಾ? 6 ನೀವು ಬರುವ ಮದ್ರಾಸ್ ನ್ಯಾಯವಿಧಾಯಕ ಸಭೆಗೆ ಕುಂದಾಪುರ ಸರ್ಕಲಿನಿಂದ ಸಾರ್ವಜನಿಕರ ಟೀಕೆಗೊಳಗಾದ ಜಸ್ಟಿಸ್ ಪಕ್ಷದ ಪರವಾಗಿ ನಿಲ್ಲುವಿರಲ್ಲವೇ? 7 ನಮ್ಮ ಸರ್ಕಲಿನ ಉಮೇದ್ವಾರರಾದ ನಿಮ್ಮ ಈ ವರ್ತನದಿಂದ ಕುಂದಾಪುರಪಟ್ಟಣಿಗರು ಹಾಗೂ ಕನ್ನಡ ಭಾಷಾಭಿಮಾನಿಗಳು ಸಂಶಯ ಪಡಲಾರರೇ?

V. M. Navad.

ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷರ ಅವಗಾಹನೆಗೆ

ತಾ. 15-8-'36 ಮಂಗಳವಾರ ಸಾಯಂಕಾಲ ½ ಘಂಟೆಯಿಂದ ರಾತ್ರಿ 9½ ಘಂಟೆಯವರೆಗೆ ಕಾಸರಗೋಡು ಬೋರ್ಡು ಹೈಸ್ಕೂಲಿನ ಹಿತ್ತಲಲ್ಲಿ ಅಡ್ವೊಕೇಟ್ ಕೆ ಮಂಮ್ಮುಂಞಯವರ ಅಧ್ಯಕ್ಷತೆಯಲ್ಲಿ ಮಹಮ್ಮದಿ ಮತ ಪ್ರಸಾರಕ್ಕಾಗಿ ಒಂದು ಸಾರ್ವಜನಿಕ ಮಹಾಸಭೆಯು ಜರಗಿ ಆ ಗಿವಸ ಬೆಳಿಗ್ಗೆ ಹತ್ತು ಘಂಟೆಯಿಂದ ಶಾಲೆಯ ವರಾರವು ಆಗಾಗ್ಗೆ ಬಂದು ಹಿಂತಿರುಗುತ್ತಿದ್ದ ಮಾಪಿಳ್ಳೆಯವರಿಂದ ತುಂಬಿದ ಗಲಾಟೆಯಿಂದಲೂ ಕೇರಳ ಸಂಚಾರಿಗಳಾಗಿ ಐದು ವರುಷಗಳ ಪ್ಲೇಗಿನಿಂದ ಕೇರಳದವರನ್ನು ಮಹಮ್ಮದಿಯರಾಗಿ ಮಾಡಲು ಆತುರಗೊಂಡ ಶೇಕ್ ಅಬ್ದುಲ್ಲಾ ಗಾಂಧಿ, ಡಾ। ಕೆ. ಕಮಾಲ್ ಪಾಷಾತೈಯ್ಯಾಲ್ ಮುಂತಾದವರಿಗೆ ಕೆಳ ಕ್ಲಾಸುಗಳುಳ್ಳ ಆಟದ ಮೈದಾನಿನಲ್ಲಿ ಶೃಂಗರಿಸಲ್ಪಟ್ಟ 'ಸ್ಲೇಟ್ ಫೋಮ್' ರಚಿಸುವ ಅವಸರದಿಂದಲೂ, ವಿದ್ಯಾರ್ಥಿನಿಯರೂ, ಚಿಕ್ಕ ವಿದ್ಯಾರ್ಥಿಗಳೂ ಶಾಲೆಗೆ ಬರಲಿಕ್ಕಾಗದ ವಿವರವೂ, ಮತ ಪ್ರಸಾರದ ರಭಸದಲ್ಲಿ ಇಸ್ಲಾಮು ಮತವನ್ನು ಶ್ರೇಷ್ಠ ಮತವೆಂದು ಹೊಗಳಿ, ಇತರ ಮತಗಳನ್ನು ದೂಷಿಸಿ, ಖಂಡಿಸಿದ ವಿವರಗಳೂ ಇದರಿಂದ ಮಹಮ್ಮದಿಯರಲ್ಲದವರಿಗೆ ಆದ ಅಸಮಾಧಾನವೂ ಕಾಸರಗೋಡಲ್ಲಿ ಈವರೇಗೆ ಇರುತ್ತಿದ್ದ ಒಗ್ಗಟ್ಟಿಗೆ ಭಂಗವಾಗಿ ಮುಸ್ಲಿಮ್ ಮತ್ತು ಅಮುಸ್ಲಿಮರೊಳಗೆ ವೈಮನಸ್ಸಿಗೆ ಕಾರಣವಾದ ವಿವರವೂ ಅಧ್ಯಕ್ಷರ ತಿಳುವಳಿಕೆಗೆ ಬಂದಿರುವುದೇ? ಮಹಮ್ಮದಿ ಮತ ಪ್ರಸಾರಕ್ಕೂ, ಬೇರೆ ಮತಗಳ ಖಂಡನೆಗೂ ಆಸ್ಪದವಾಗುವಂತೆ ಶಾಲಾವರಾರವನ್ನು ಸಭಾಕಾರ್ಯ, ಉಪನ್ಯಾಸ ಮುಂತಾದುವುಗಳಿಗೆ ಉಪಯೋಗಿಸುವ ಬಗ್ಗೆ ಕೊಟ್ಟುದ್ದೆಂಬುದು ನಿಜವೇ? ಹಾಗೆ ಅಧ್ಯಕ್ಷರು ಅಪ್ಪಣೆಕೊಡುವ ಸಂದರ್ಭದಲ್ಲಿ ಆ ದಿವಸ ಶಾಲಾ ದಿವಸವಾದ ಕಾರಣ ಮುಂದಣ ಜನಾಂಗವಾದ ವಿದ್ಯಾರ್ಥಿಗಳ ಹಿತಚಿಂತನೆಯನ್ನು ದೃಷ್ಟಿ ಪಥದಲ್ಲಿಟ್ಟು ಶಾಲೆಯು ಎಲ್ಲಾ ಮತಗಳ ವಿದ್ಯಾರ್ಥಿಗಳಿಂದ ಸೇರಿದ್ದೆಂದೂ, ಮತ ಪ್ರಸಾರಕ್ಕೆ ಶಾಲಾಸ್ಥಳವನ್ನು ಕೊಡುವುದರಲ್ಲಿ ನ್ಯಾಯವಿದ್ದಿಲ್ಲವೆಂದೂ, ಮಾತ್ರವಲ್ಲ ಡಿಸ್ಟ್ರಿಕ್ಟ್ ಬೋರ್ಡು ಮತ ಪ್ರಸಾರಕ್ಕಾಗಿ ಶಾಲೆಯನ್ನು ನಡಿಸುತ್ತಿಲ್ಲವೆಂಬುದನ್ನೂ ಆಲೋಚಿಸಿರುವರೇ? ಇದು ವಿಭಾಗಿಸಿ ಆಳುವ ಧೋರಣೆಯಂತೆ ಕಾಣುತ್ತದೆ, ಮಾತ್ರವಲ್ಲ, ಡಿಸ್ಟ್ರಿಕ್ಟ್ ಬೋರ್ಡು ನೌಕರರಾದ ಕಾಸರಗೋಡು ಲೈಬ್ರೇರಿಯನ್ ಮಹಮ್ಮದ್ ಕುಂಞಯವರ ಭಾಷಣವೂ ಆಗಿತ್ತು. ಇವರಲ್ಲಿ ಅಧ್ಯಕ್ಷರ ಉದ್ದೇಶವಾದರೂ ಏನಿತ್ತು? ಮಾನ್ಯ ಅಧ್ಯಕ್ಷರು ಈ ಕುರಿತು ಜನರ ಸಂದೇಹವನ್ನು ನಿವಾರಿಸುವಂತೆ ಪತ್ರಿಕೆಗಳ ಮೂಲಕ ತಿಳಿಸುವಂತೆ ಕೋರುವ,

ಕಾಸರಗೋಡು ನಿವಾಸಿ.

ಕಾಸರಗೋಡು ಬಾತ್ಮಿದಾರರೂ ಶೈಖ್ ಅಬ್ದುಲ್ಲಾ ಗಾಂಧಿಯವರೂ

(ಲೇಖಕ—ಮುಹಮ್ಮದ್ ಶ್ರೀರೂಲ್)

ಇಲ್ಲಿಗೆ ತಾರೀಕು 5-9-36ರಲ್ಲು ಶೈಖ್ ಅಬ್ದುಲ್ಲಾ ಗಾಂಧಿಯವರು ಮತ್ತು ಡಾಕ್ಟರ್ ಕಮಾಲ್ ಪಾಷಾತಯ್ಯಾಲ್ ಮುಂತಾದವರು ಬಂದಾಗ, ಸ್ವಾಗತ ಕಮ್ಮಿಟಿ ಅಧ್ಯಕ್ಷನಾಗಿ ನಾನು ಮಾಡಿದ ಭಾಷಣವನ್ನು ದುರ್ವ್ಯಾಖ್ಯಾನಮಾಡಿ 21-9-'36ನೇ ನವಯುಗದಲ್ಲಿ ಪ್ರಕಟಿಸಿರುವ ರಿಪೋರ್ಟನ್ನು ನೋಡಿ ತುಂಬಾ ವಿಷಾದ ಪಡುತ್ತೇನೆ. ಒಬ್ಬ ಮುಸ್ಲಿಮನೆಂಬ ನೆಲೆಯಲ್ಲಿ ಯಾವುದೊಂದೂ ಮತವನ್ನೂ ದೂಷಿಸಲಾರೆನು. ಏಕೆಂದರೆ ಅದು ನನಗೆ ವಿರೋಧ. ಇದು ಖುರಾನಿನಲ್ಲಿ ವ್ಯಕ್ತವಾದ ಭಾಷೆಯಲ್ಲಿ ನಾನಾ ಪ್ರಕಾರವಾಗಿ ಉದ್ಘೋಧಿಸಲ್ಪಟ್ಟಿರುವುದು.

1 ಬೇರೆಯವರು ಆರಾಧಿಸುವ ವಸ್ತುಗಳನ್ನು ನಿಂದಿಸಿ ಮಾತಾಡಬಾರದು. 2 ಎಲ್ಲಾ ದೇಶಗಳಲ್ಲಿಯೂ ನಾವು ಪ್ರವಾಚಕರನ್ನು ಕಳುಹಿಸಿರುವೆವು. ಪ್ರವಾಚಕರಲ್ಲಿ ನಾವು ವ್ಯತ್ಯಾಸಗಳನ್ನು ಕಾಣುವುದಿಲ್ಲ. ದೇವರನ್ನು ಆರಾಧಿಸುವ, ಚರ್ಚು, ಸಾಬಿಯಾನ್ ಮೊದಲಾದ ಮಂದಿರಗಳನ್ನು ನಾಶಮಾಡಬೇಡ ಎಂಬಿತ್ಯಾದಿಯಾಗಿ ಅನ್ಯಮತವನ್ನು ದೂಷಿಸಬಾರದಾಗಿಯೂ ಅನ್ಯಮತೀಯರಿಗೆ ದ್ರೋಹಮಾಡಬಾರದಾಗಿಯೂ ಸಹಿಷ್ಣುತೆಯ ತತ್ವಗಳು ಬೋಧಿಸಲ್ಪಟ್ಟಿರುವುದು ಅಂದೂ-ಇಂದೂ ನನ್ನ ಸ್ಮೃತಿ ಪಥದಲ್ಲಿ ಇದ್ದೇ ಇದೆ. ಆದರೆ ಇಸ್ಲಾಂ ಮತವನ್ನಾಗಲಿ, ಮುಸ್ಲಿಮರನ್ನಾಗಲಿ ಸಂಬಂಧಿಸುವ ಯಾವುದಾದರೂ ಒಂದು ವಿಷಯವನ್ನು ಬರೆಯುವಾಗ ಕನ್ನಡ ಬರಹಗಾರರಾಗಲಿ, ಕನ್ನಡ ಪತ್ರಿಕಾ ಕರ್ತರಾಗಲಿ ಇಸ್ಲಾಮ್‌ಮತವು ಅನ್ಯಮತೀಯರ ಕೂಡೆ ವರ್ತಿಸಬೇಕಾಗಿಯಾದ ಮರ್ಯಾದೆಯನ್ನು ಸುಮಾರು 1300 ವರ್ಷಗಳ ಹಿಂದೆ, ನಿರ್ದೇಶಿಸಿರುವುದೋ ಆ ತತ್ವಗಳನ್ನು ಇಪ್ಪತ್ತನೆಯ ಶತಮಾನದಲ್ಲಾದರೂ, ಅವರು ಇಸ್ಲಾಮಿನ ಮೋಕುಂತ ಅನುವರ್ತಿಸುತ್ತಿದ್ದರೆ ಅದೆಷ್ಟು ಅಭಿನಂದನೀಯವಿತ್ತು? ಹೆಚ್ಚೇಕೆ? ಶೈಖ್ ಅಬ್ದುಲ್ಲಾ ಗಾಂಧಿಯವರ ಆಗಮನದ ವಾರ್ತೆಗಳನ್ನು ನಮ್ಮ ಜಿಲ್ಲೆಯ ಕೆಲವು ಕನ್ನಡ ಪತ್ರಿಕೆಗಳಲ್ಲಿ ಬರೆದಿರುವ ರಿಪೋರ್ಟುಗಳು ನಿಷ್ಪಕ್ಷಪಾತಿಗಳ ನಿಷ್ಕಾಮವಾದ ವಿಮರ್ಶೆಗೆ ಗುರಿಯಾಗಲಿ.

ಅಸ್ಪೃಶ್ಯರು ಅನುಭವಿಸುತ್ತಿರುವ ನರಕೀಯಯಾತನೆಗಳನ್ನು ಕಂಡು ವಿಷಾದಪಡುವ ಎಷ್ಟೋ ಹಿಂದೂ ಮುಖಂಡರು, ಆಚಾರವನ್ನು ಮೃಗೀಯ ಪದ್ಧತಿಯೆಂದು ಬರೆದಿರುವರು. ಈ ವಿಷಯವನ್ನೇ ನಾನು ಕೂಡಾ, ಅದೇ ಭಾಷೆಯಲ್ಲಿ ಹೇಳಿದುದು ಖರೆ. ಈ ವಿಚಾರವು ಸ್ಥಿರವಾಗಿ ನಿಲ್ಲಬೇಕಾದುದೆಂತಲೂ, ಇದನ್ನು ಇತರರೂ ಮನ್ನಿಸಬೇಕೆಂದೂ ವಾದಿಸುವವರಿದ್ದರೆ ಅಂಥವರ ಅಭಿಮತಕ್ಕೆ ವಿರುದ್ಧವಾದುದೇ ನನ್ನ ಅಭಿಪ್ರಾಯವೆಂದು ಹೇಳಲು ತುಂಬಾ ಸಂತೋಷವಿದೆ.

ಇನ್ನೊಂದು ವಿಷಯ,- ಇಸ್ಲಾಮ್ ಮತಾವಲಂಬನದಿಂದ ಅಸ್ಪೃಶ್ಯತೆಯು, ನಾಶವಾಗುವುದು. ಅಂಥ ಅಸ್ಪೃಶ್ಯತೆ ಹೋಗಲಾಡಿಸಲು, ಮುಂದೆ ಬಂದ ಡಾ। ಕಮಾಲ್ ಪಾಷಾತಯ್ಯಿಲ್‌ರನ್ನು ಅನಾವಶ್ಯಕವಾದ ದೋಷಾರೋಪಣೆಗೆ ಗುರಿಮಾಡುವುದು ಯುಕ್ತವಲ್ಲವೆಂದು ಕೂಡಾ ನಾನು ವ್ಯಕ್ತಮಾಡಿರುವೆನು. ಲೇಖಕರು ನಾನು ಇಸ್ಲಾಮ್ ಮತವನ್ನು ಹೊಗಳಿ ಮಾತಾಡಿದೆನೆಂದು ಉದ್ಘೋಷಿಸುವರು. ಇಸ್ಲಾಮಿನ ಯಥಾರ್ಥ ತತ್ವವನ್ನು ಬಿಟ್ಟು ಆ ಸಂದರ್ಭವಾಗಿ ಒಂದೇ ಒಂದು ಪದವನ್ನು ಕೂಡಾ ನಾನು ಹೇಳಿದ್ದಾಗಿ, ಲೇಖಕರಿಗೆ ಬಯಲಿಗೆ ತರಲು ಸಾಧ್ಯವಿದ್ದರೆ, ಮುಂದೆ ಒದಲು ಆಹ್ವಾನೆ ಮಾಡುವೆನು.

ಹೇಮಾಶ್ರುಪತ್ರ

ದಕ್ಷಿಣಕನ್ನಡ ಜಿಲ್ಲಾ ಉಡ್ಪಿ ತಾಲೂಕು ಕಲ್ಯಾಣಪುರ ಹಿಂದೂ ಎಲಿಮೆಂಟರಿ ಶಾಲಾ ಅಧ್ಯಾಪಕ ಶ್ರೀ॥ ಸತ್ಯಮಿತ್ರ ಬಂಗೇರರು ಪ್ರಕಟಿಸಿದ ಹೃದಯನಿವೇದನೆಯಿದು. ಈ ಪುಸ್ತಕದಲ್ಲಿ ತೋರುವ ಪ್ರಕಾರ ಅವರ ಕುಮಾರ್ತೆ ಮಾಜಿ ಹೇಮಾವತಿ ಬಂಗೇರಳಿಗೆ ತಿಳಿದ ಡಾಕ್ಟರರಿಂದ ಔಷಧಿ ಮಾಡಲಿಕ್ಕೆ ಬಿಡದೆ, ರಾ॥ ಪಿ ಸಿ. ಕಾರಟರು ತಾನೇ ಔಷಧ ಕೊಟ್ಟದ್ದರಿಂದ ಪ್ರಾಣಘಾತವಾಯಿತೆಂದೂ, ಊಟಕ್ಕಿದ್ದವಳನ್ನು ಮಂಕುಮಾಡಿ ರೆವೆರೆಂಡ್ ಇಮ್ಮಾನುವೇಲ್ ಜೀವೋ ಮರು ಕೋ. ಓ. ಸೊಸ್ಸೈಟಿಯಿಂದ ರೂ. 75ನ್ನು ಸಾಲ ತೆಗಿಸಿ ತನ್ನ ಗರ್ಜಿಗೆ ಉಪಯೋಗಿಸಿಕೊಂಡರೆಂದೂ, ಆ ಅನ್ಯಾಯಗಳನ್ನು ತನಿಕೆಯಿಂದ ನ್ಯಾಯಪಡಿಸಿಕೊಡಬೇಕಾಗಿ ಬಾಸೆಲ್ ಮಿಶ್ಯನ್ ಸಂಸ್ಥೆಯ 3 ಮಂದಿ ಮೇಲಧಿಕಾರಿಗಳಿಗೆ ವಿನಂತಿಸಿಕೊಂಡಲ್ಲಿ ಅವರಲ್ಲಿ ಒಬ್ಬನಾದರೂ ಅದರಲ್ಲಿ ಕೈಹಾಕದೆ ತಟಸ್ಥರಾದರೆಂತಲೂ ತಿಳಿಯುವ ಈ ಸಂಗತಿಯು ಬಹು ಶೋಚನೀಯವೇ ಸರಿ. ತಮ್ಮ ಕೈಕೆಳಗಿರುವ ಮಾಸ್ಟರ್ ಮತ್ತು ಪಾಸ್ಟರ್ ಇವರ ದೋಷಗಳನ್ನು ಕಣ್ಮುಚ್ಚಿ ನೋಡಿದರೆ ವಿನಹ ಅರ್ಜದಾರನ ವಿನಂತಿಯು ಅರಣ್ಯರೋದನವಾಯಿತೆಂದು ಮೇಲ್ಕಂಡ ಪುಸ್ತಕದಿಂದ ಒಡೆನು ಕಾಣುತ್ತದೆ. ಹೀಗಾಗಿ ಪುಸ್ತಕ ಬರೆದ ಶ್ರೀ॥ ಬಂಗೇರರಿಗೆ 3 ವಿಧದಿಂದ ಪೆಟ್ಟು ಬಿದ್ದುದರಿಂದ ಅವರು ಸದ್ರಿ ವಿಷಯಗಳನ್ನು ಜನತೆಯ ಮುಂದಿಡಲು ಕಾರಣವಾಯಿತೆಂದು ತೋರುತ್ತದೆ.

ಆಪ್ತ ಸಂಬಂಧಿಕರಲ್ಲೊಬ್ಬ.

ಅಖಿಲ ಬಂಟರ ಯಾನೆ ನಾಡವರ ಸಂಘ ಮುಂಬಯಿ

ತಾ. 27-9-36ನೇ ಆದಿತ್ಯವಾರ ಅಪರಾಹ್ನ ಘಂಟೆ 4-30ಕ್ಕೆ ಮ. ರಾ. ರಾ. ಕೆ. ಪಿ. ಕೆ. ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿದ ಮಹಾಸಭೆಯ ಪ್ರೊಸೀಡಿಂಗ್ಸ್:—

ಹಾಜ್ರು— 37 ಜನ ಸಂಘದ ಸದಸ್ಯರು ಮತ್ತು ಮ. ರಾ. ರಾ. ಬ್ರಹ್ಮಾವರ ನಾರಾಯಣ ಶೆಟ್ರು ಮ. ರಾ. ರಾ. ಪಾಂಗಾಳ ಮಹಾಬಲ ಶೆಟ್ರು, ಮ. ರಾ. ರಾ. ಮ್ಯೋಗಿನ ಮಾಲಾಡಿ ಶಿವಪ್ಪ ಶೆಟ್ರು.

(1) ತಾ. 23—8—36ರಲ್ಲು ಆಡಳ್ತೆ ಕಮಿಟಿಯವರು ನಿಶ್ಚೈಸಿದ ಪ್ರಕಾರ ನಮ್ಮ ಅಖಿಲ ಬಂಟರ ಯಾನೆ ನಾಡವರ ಸಂಘವನ್ನು ಮುಕ್ತಾಯ ಮಡ್ಸಿ ಬಂಟರ ಯಾನೆ ನಾಡವರ ಸಂಘಕ್ಕೆ ಸೇರ್ಸಿಕೊಳ್ಳು. ವಂತೆ ನಿಶ್ಚೈಸಲಾಯ್ತು (ಆಡಳ್ತೆ ಕಮಿಟಿಯ 2ನೇ ನಿರ್ಣಯದಂತೆ)

(2) ಈ ಕೆಳಗಿನ ಕಾಗದ ಪ್ರಕಾರ ಬಂಟರ ಯಾನೆ ನಾಡವರ ಸಂಘಕ್ಕೆ ಕಾಗದ ಕೊಡುವುದಲ್ಲದೆ, ಈ ಅಖಿಲ ಬಂಟರ ಯಾನೆ ನಾಡವರ ಸಂಘವನ್ನು ಈ ದಿನವೇ ಮುಕ್ತಾಯ ಮಾಡಲಾಯ್ತು.

ಕಾಗದ ಕುಲಾಂಕುಶ.

"ಬಂಟರ ಯಾನೆ ನಾಡವರ ಸಂಘದ ಅಧ್ಯಕ್ಷರವರಿಗೆ:—

ನಿಮ್ಮ ತಾ 12-9-36ನೇ ಕಾಗದದ ಪ್ರಕಾರ ನಮ್ಮ ಅಖಿಲ ಬಂಟರ ಯಾನೆ ನಾಡವರ ಸಂಘವನ್ನು ಕ್ರಮದಂತೆ ತಾ. 27-9-36ರಲ್ಲು ಜರಗಿದ ಸಾರ್ವಜನಿಕ ಸಭೆಯಲ್ಲಿ ಈ ದಿನ ಸರ್ವಾನುಮತಿಯಿಂದ ಸಂಪೂರ್ಣ ಮುಕ್ತಾಯಗೊಳಿಸಿರುವೆವು. ಈ ಕಾಗದದ ಪಟ್ಟಿಗೆ ಲಕ್ಷೀಕರ್ಸಿದ ಶೆಡ್ಯೂಲಿನಲ್ಲಿ ನಮೂದಿಸಿರುವ ಮುಂಬಾಯಿ ಅಖಿಲ ಬಂಟರ ಯಾನೆ ನಾಡವರ ಸಂಘದ ಸದಸ್ಯರು ಜಾತಿ ಅಭಿವೃದ್ಧಿಗೋಸ್ಕರ ನಿಂಮ ಬಂಟರ ಯಾನೆ ನಾಡವರ (ಮುಂಬಾಯಿ) ಸಂಘಕ್ಕೆ ಈ ಮೂಲಕ ಸೇರಿರುತ್ತೇವೆ."

ಬಂಟರ ಯಾನೆ ನಾಡವರ ಸಂಘದ ಮೇಲಿನ ಕಾಗದಕ್ಕೆ ಅನುಕೂಲವಾದ ಜವಾಬು ಬಂದರೆ ಈ ನಮ್ಮ ಸಂಘದ ಸರ್ವ ರಿಕಾರ್ಡು, ಜಮಾ ಇರುವ ಹಣ ವಗೈರೆ ಬಂಟರ ಯಾನೆ ನಾಡವರ ಸಂಘಕ್ಕೆ ಒಪ್ಪಿಸುವರೇ ಸರ್ವ ಅಧಿಕಾರವನ್ನು ಮ. ರಾ. ರಾ. ಕೆ. ಪಿ. ಕೆ. ಶೆಟ್ರಿಗೆ ಕೊಡಲಾಯ್ತು.

ಕೆ. ಪಿ. ಕೆ. ಶೆಟ್ಟಿ,
ಅಧ್ಯಕ್ಷ.

ಮೂಲ್ಕಿಯಲ್ಲಿ ಸ್ಟೀಮರು ಬಂದರು

ಮೂಲ್ಕಿಯು ಅನಾದಿ ಕಾಲದಿಂದಲೂ ವ್ಯಾಪಾರದ ಮುಖ್ಯ ಕ್ಷೇತ್ರವಾಗಿತ್ತು. ಆದರೆ ಇತ್ತೀಚೆಗೆ ವ್ಯಾಪಾರ ಸೌಕರ್ಯಗಳು ಕಡಿಮೆಯಾಗಿ ಸ್ವಲ್ಪ ಹಿಂದೆ ಬಿದ್ದಿದೆ.

ಮಲ್ಪೆಯಲ್ಲಿ ಸ್ಟೀಮರು ಹತ್ತುವ ಪ್ರಯಾಣಿಕರಲ್ಲಿ ಶೇಕಡಾ 75ಮಂದಿ ಇಲ್ಲಿಯವರು. ಅಂದರೆ ಪ್ರತೀ ಸ್ಟೀಮರು ದಿವಸ 50 60 ಪೆಸೆಂಜರರು ಇಲ್ಲಿಂದ ಹೋಗುತ್ತಾರೆ. ಇಲ್ಲಿಯೇ ಬಂದರು ಆದರೆ ಎರ್ಮಾಳ್, ಕಾಪು ಈ ಕಡೆಯಿಂದಲೂ, ಮುಕ್ಕ ಸುರತ್ಕಲ್ ಈ ಕಡೆಯಿಂದಲೂ ಪೆಸೆಂಜರರು ಇಲ್ಲಿಯೇ ಬರುವರು. ಅಂದರೆ ಕನಿಷ್ಟಪಕ್ಷ ಪ್ರತಿ ಸ್ಟೀಮರಿಗೆ 100ರ ಮೇಲೆ ಪೆಸಂಜರರು ಇಲ್ಲಿಯೇ ಸಿಕ್ಕುವರು. ಅದಲ್ಲದೆ ಪ್ರತೀ ಸ್ಟೀಮರಿಗೆ ಸುಮಾರು 100ರ ಮೇಲೆ ಶುಂಠಿಗಾಡಿಗಳು ಇಲ್ಲಿಂದ ಹೋಗುವವು. ಅದಲ್ಲದೆ ಇಲ್ಲಿ 3-4 ಕಚ್ಚೇರಿ ಸಾಹುಕಾರರು ಇರುವರು. ವರ್ಷ 10 ಸುಮಾರು 1ಲಕ್ಷ ರೂಪಾಯಿಯ ಸಾಮಾನುಗಳನ್ನು ತರಿಸುತ್ತಿರುವರು.

ಹೀಗೆ ಇಲ್ಲಿ ಬಂದರುಮಾಡಿದರೆ ಸಾಕಷ್ಟು ಪೆಸೆಂಜರರೂ, ನಾವಗಾನೂ ದೊರೆಯುವುದರಲ್ಲಿ ಸಂಶಯವಿಲ್ಲ.

ಈ ಕುರಿತು ವಿಶೇಷ ಚಳವಳವನ್ನು ಹೂಡಲಿಕ್ಕೆ ಪುರಜನರು ಸಾಹಸಕೊಟ್ಟು ಅದಕ್ಕೆ ತಕ್ಕ ರಿಕಾರ್ಡುಗಳನ್ನು ಸಂಗ್ರಹಿಸುತ್ತಿರುವರು.

ತನ್ಮಧ್ಯ ಈ ಬಗ್ಗೆ ನಮ್ಮ ಊರಿನವರಾಗಿ ಮುಂಬೈಯಲ್ಲಿರುವ ಕೆಲವು ಆಢ್ಯ ಜನರು ಕೂಡಿ, ಒಂದು ಕಮಿಟಿಯನ್ನು ಮಾಡಿ, ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯ

ಇಲ್ಲಿಯೂ ಇದೇ ಕಳೆದ ತಾ. 21-9-'36ರಲ್ಲು ಒಂದು ಸಾರ್ವಜನಿಕ ಸಭೆಸೇರಿ "ಮೂಲ್ಕಿ ಪೋರ್ಟ್ ಕಮಿಟಿ" ಮುಲ್ಕಿ, ಎಂಬ ಸಮಿತಿಯು ಏರ್ಪಡಿಸಲಾಗಿದೆ.

ಕಾರ್ಯಕಾರಿ ಸಮಿತಿಯ ಮೆಂಬರರು.

1. ಆರ್. ಆರಂಜ, (ಪ್ರೆಸಿಡೆಂಟ) 2. ಯಂ. ಆರ್. ಪೂಂಜ, (ವೈಸ್ ಪ್ರೆಸಿಡೆಂಟ್) 3. ಬಿ. ಭೋಜರಾವ್, (ಕಾರ್ಯದರ್ಶಿ) 4. ಡಾ| ಯಂ. ಆರ್. ಕಾಮತ್, 5. ಯು. ಕೃಷ್ಣರಾಯ ಶೆಣೈ.

ಮುಂಬಯಿಯಲ್ಲಿರುವ ಮೂಲ್ಕಿ, ಪಡುಬಿದ್ರಿ, ಎರ್ಮಾಳ್, ಮುಕ್ಕ, ಸುರತ್ಕಲ್ ಈ ಪ್ರಾಂತ್ಯದ ಎಲ್ಲಾ ಮಹನೀಯರೂ ಈ ಭಾಗದಲ್ಲಿ ಹೆಚ್ಚಿನ ಸಹಾಯಕೊಟ್ಟು ಸಹಕರಿಸ ಬೇಕಾಗಿ ಕೋರಿಕೆ.

ಬಿ. ಭೋಜರಾವ್,
ಕಾರ್ಯದರ್ಶಿ.

ಮಾನ್ಯ ಡಿ| ಬೋರ್ಡು ಮೆಂಬರರಾದ ಶ್ರೀಮಾನ್ ಡಾ| ವಿಠ್ಠಲ್ ಶೆಟ್ರು, ಡಾ| ರಾ| ಪಿ. ಜಿ. ಆಚಾರ್ಯರೂ ಬೋರ್ಡು ನೌಕರರ ಹಾಗೂ ಉಪಾಧ್ಯಾಯರ ಅಭಿವಂದನೆಗೆ ಪಾತ್ರರು

22-9-'36ಕ್ಕೆ ಜರಗಿದ ಡಿ| ಬೋರ್ಡಿನ ಕಾರ್ಯಕಲಾಪಗಳಲ್ಲಿ ಬೋರ್ಡು ನೌಕರರಿಗೆ ಅನುಕೂಲವಾಗಿ ಪಾಸಾದ ಠರಾವುಗಳೇ ಪ್ರಾಮುಖ್ಯವಾದುವುಗಳು ಬೋರ್ಡಿನ ಜನರಲ್ ಸಂಸ್ಥೆಯವರ ಸಂಬಳದ ಕಡಿತವು ಸಂಪೂರ್ಣ ಕಟಾಪಾಯಿತು. ಎಲಿಮೆಂಟರಿ ಸ್ಕೂಲ್ ಉಪಾಧ್ಯಾಯರ ಕಡಿತವು ರೂಪಾಯಿಗೆ 1½ ಆಣೆ ಇದ್ದದ್ದು 1 ಆಣೆಗೆ ಇಳಿಯಿತು. ಸರಕಾರ ಹುಕುಂ ಪ್ರಕಾರ ಉಪಾಧ್ಯಾಯಿನಿಯರ ಸಂಬಳದ ಸ್ಕೇಲನ್ನು ಇಳಿಸಬೇಕಾಗಿದ್ದರೂ ಮೊದಲಿನ ಸ್ಕೇಲು ಊರ್ಜಿತಕ್ಕೆ ನಿಂತಿತು.

ಬೋರ್ಡು ನೌಕರರ ಪರವಾಗಿ ಪಾಸಾದ ಮೇಲಿನ ನಿರ್ಣಯಗಳ ಕುರಿತು ಸ್ವರಾಜ್ಯ ಪಾರ್ಟಿಯ ಮೆಂಬರರು ಜರಗಿಸಿದ ತಾ. 21-9-'36ನೇ ದಿನದ ಮೀಟಿಂಗಿನಲ್ಲಿ ತಮ್ಮ ಸಹಾನುಭೂತಿಯನ್ನು ತೋರಿಸುವುದಾಗಿ ನಿರ್ಣಯಿಸಿದ್ದರು. ಮಾತ್ರವಲ್ಲ, ಉಪಾಧ್ಯಾಯಿನಿಯರ ಸ್ಕೇಲನ್ನು ಊರ್ಜಿತವಿಡುವಂತೆ ಬೋರ್ಡು ಮೀಟಿಂಗಿನ ಮುಂದೆ ಒಂದು, ಉಪಸೂಚನೆಯನ್ನು ತರುವ ಹಾಗೆ ಮಿಸೆಸ್ ಮನೋರಮಾ ಬಾಯಿಯವರು ನಿಶ್ಚಯಿಸಿದ್ದರು ಹಾಗೂ ಬೋರ್ಡು ಮೀಟಿಂಗಿನಲ್ಲಿ ಮೇಲಿನ ನಿರ್ಣಯಗಳು ಒಮ್ಮತದಿಂದ ಪಾಸಾದುದರಿಂದ ಬೋರ್ಡು ನೌಕರರು ಮಾನ್ಯ ಬೋರ್ಡಿಗೆ ತಮ್ಮ ಅಭಿವಂದನೆಯನ್ನು ಅರ್ಪಿಸುವುದು ಕರ್ತವ್ಯವಾಗಿದೆ.

ಶ್ರೀಮಾನ್ ಡಾ| ವಿಠಲ ಶೆಟ್ರು ಎಲ್ಲರಿಗಿಂತಲೂ ಹೆಚ್ಚಿನ ಶ್ಲಾಘನೆಗೆ ಪಾತ್ರರು. ಇವರೇ ಜನರಲ್ ಸಂಸ್ಥೆಯವರ ಕಡಿತವನ್ನು ತೆಗೆದುಹಾಕಬೇಕಾಗಿಯೂ, ಎಲಿಮೆಂಟ್ರಿ ಸ್ಕೂಲು ಉಪಾಧ್ಯಾಯರ ಕಡಿತವನ್ನು 1 ಆಣೆಗೆ ಇಳಿಸಬೇಕಾಗಿಯೂ ಮೀಟಿಂಗಿನ ಮೊದಲೇ ಬೋರ್ಡಿಗೆ ಸೂಚನೆ ಕೊಟ್ಟವರು; ಹಾಗೂ ಬೋರ್ಡಿಗೆ ಲೆಕ್ಕವನ್ನು ಪರಿಶೋಧಿಸಿ, ಬಜೆಟಿನಲ್ಲಿ ಹೆಚ್ಚಿನ ಹಣವನ್ನು ತೋರಿಸಿಕೊಟ್ಟು ಬೋರ್ಡು ನೌಕರರಿಗೆ ಸಂಬಳದಲ್ಲಿ ಕಡಿತವನ್ನು ತಂದು ಒಡ್ಡುವುದು ಎಷ್ಟಕ್ಕೂ ಸರಿಯಲ್ಲವೆಂದು ಸಕಾರಣವಾಗಿ ವಿವರಿಸಿ ಎಲ್ಲರ ಮನಸ್ಸಿಗೆ ಸರಿ ಎಂದು ಎಣಿಸಿದರು.

ಡಾ| ರಾ| ಪಿ. ಜಿ ಆಚಾರ್ಯರಿಗೆ ಎಲಿಮೆಂಟ್ರಿ ಸ್ಕೂಲು ಉಪಾಧ್ಯಾಯರ ಮೇಲೆ ಮಹತ್ತರವಾದ ಪ್ರೇಮವೂ, ದಯೆಯೂ ಇದೆ ಎಂದು ಹೇಳುವುದರಿಂದ ಅತಿಶಯೋಕ್ತಿಯಾಗಲಾರದು. ಜನರಲ್ ಸಂಸ್ಥೆಯವರ ಕಡಿತವನ್ನು ತೆಗೆದುಹಾಕಬೇಕೆಂದು ರಾ| ಡಾ| ವಿಠ್ಠಲಶೆಟ್ರು ಸೂಚನೆಯನ್ನು ತಂದಾಗಲೇ ಎಲಿಮೆಂಟ್ರಿ ಸ್ಕೂಲು ಉಪಾಧ್ಯಾಯರ ಕಡಿತದಲ್ಲಿ ರೂಪಾಯಿಗೆ ½ ಆಣೆಯಂತೆ ಕಡಿಮೆಮಾಡಬೇಕಾಗಿ ರಾ| ಪಿ. ಜಿ. ಆಚಾರ್ಯರು ಉಪ ಸೂಚನೆಯನ್ನು ತಂದರು. ಈ ಉಪ ಸೂಚನೆಯೇ ಡಾ| ವಿಠ್ಠಲ ಶೆಟ್ರ ಪ್ರಧಾನ ಸೂಚನೆಯಾಗಿ ಎಜಂಡದಲ್ಲಿ ಇದ್ದು ನಂತರ ಬೋರ್ಡಿನ ಮುಂದೆ ಬರಲಿಕ್ಕಿದ್ದರೂ ಆಚಾರ್ಯರು ಉಪಸೂಚನೆಯು ಯುಕ್ತಾಯುಕ್ತವಾಗಿತ್ತು. ಹೀಗೆ ಉಪಸೂಚನೆಯಾಗಿ ತಂದುದರಿಂದ ಪರಿಣಾಮದಲ್ಲಿ ಹೆಚ್ಚಿನ ಫಲಕಾರಿಯಾಯಿತೆನ್ನಬೇಕು. ಈ ಎಲ್ಲಾ ಕಾರಣಗಳಿಂದ ಬೋರ್ಡು ನೌಕರರು ಮಾನ್ಯ ಬೋರ್ಡಿಗೆ ತಮ್ಮ ಕೃತಜ್ಞತೆಯನ್ನು ತೋರಿಸುವುದಲ್ಲದೆ ಪ್ರತ್ಯೇಕವಾಗಿ ರಾ| ಡಾ| ವಿಠಲ ಶೆಟ್ರನ್ನೂ, ರಾ| ಡಾ| ಪಿ. ಜಿ. ಆಚಾರ್ಯರನ್ನೂ ಶ್ಲಾಘಿಸಲೇ ಬೇಕು.

ಪ್ರೇಕ್ಷಕರಲ್ಲೊಬ್ಬ.

ಬಾಲವಾಙ್ಮಯದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ

ಬಾಲವಾಙ್ಮಯ

ಬೆಲೆ ೦ ೩ ೦ .

ಉಪಾಧ್ಯಾಯರ ಪ್ರಕಟನ ಸಮಿತಿ,
ಉಡುಪಿ.

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ

R. E. O. No. 593/36

O. S. 335/35

ವಾದಿ—ತಿಪ್ಪಯ್ಯ ಯಾನೆ ರಾಮಣ್ಣ ಚಡಗ ಅರ್ಜಿದಾರ.

ಪ್ರತಿವಾದೀರು—ಲಕ್ಷ್ಮೀನಾರಾಯಣ ಚಡಗ ಕೂಡಾ ಎದ್ರಿರು.

ಸದ್ರಿ ಅಮ್ಲು ಜಾರಿಯಲ್ಲಿ ಪಾಂಡೇಶ್ವರ ಗ್ರಾಮದಲ್ಲಿರುವ ಕೃಷ್ಣ ಚಡಗರ ಮಗ 1ನೇ ಎದ್ರಿ ಲಕ್ಷ್ಮೀನಾರಾಯಣ ಚಡಗ1, ಗೋವಿಂದ ಉಪಾಧ್ಯರ ಮಗ ಶ್ರೀನಿವಾಸ ಉಪಾಧ್ಯ 1 ಕೂಡಾ 2 ಜನರಿಗೆ ತಿಳಿಯಪಡಿಸುವುದೇನೆಂದರೆ—

ಸದ್ರಿ ಡಿಕ್ರಿ ಅಮ್ಲು ಜಾರಿಯಲ್ಲಿ ಅರ್ಜಿದಾರನು ಎದ್ರಿರ ಹಕ್ಕಿನ ಸ್ಥಿರ ಆಸ್ತಿ ಏಲಂ ಬಗ್ಗೆ ಇಸ್ತಿಹಾರು ದಾಖಲುಮಾಡಿರುವುದರಿಂದ ಆ ಕುರಿತು ಸೇಲ್ ನೋಟೀಸು ಬಗ್ಗೆ ತಾ. 16—10—36ಕ್ಕೆ ತಸ್ಕಿಗೆ ಇಟ್ಟಿರುವುದರಿಂದ ಈ ಬಾಬಿನಲ್ಲಿ ನಿಮ್ಮದೇನಾದರೂ ಆಕ್ಷೇಪಣೆ ಇರುವ ಪಕ್ಷಕ್ಕೆ ಸದ್ರಿ ದಿವಸ ಈ ಕೋರ್ಟು ಮುಂದೆ ಪೂರ್ವಾಹ್ನ 11 ಘಂಟೆಗೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಲಾಗುವುದು.

ಮೊಕ್ಕಾಂ: ಕುಂದಾಪುರ
ತಾ. 1-10-1936

S. A. Udpa,
Advocate for Petitioner.

NOTICE

TO WHOMSOEVER IT MAY CONCERN.

I, Sagri Karanth Seetharam Bhat son of Sagri Karanth Narasimha Bhat have changed my name as Sagri Seetharam Karanth and will sign henceforth as S. S. KARANTH.

UDIPI
Dated 20-9-1936

S. S. Karanth.

— ನಾಯಕ್ ಬ್ರದರ್ಸ —

ಶ್ರೀ ಮದ್ಭುವನೇಂದ್ರ ಮಹೌಷಧಾಲಯ,

ಪಾರಂಪರ್ಯದ ಅನುಭವ ಸಿದ್ಧೌಷದಗಳು!

ಕಟಪಾಡಿ, ದ. ಕನ್ನಡ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!!

ವ್ಯಾಘ್ರಿಕಾಸವ (ಸಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕ ಅತೀ ಉಪಯುಕ್ತ)
ಮಹಾಮಾಷತೈಲ (ಪಕ್ಷವಾತಕ್ಕ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಚಂದ್ರಮಸ್ (ವಾಂತಿಭೇದಿಗೆ ಅನುಭವಸಿದ್ಧ ಔಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ, ದಕ್ಷಿಣ ಕನ್ನಡಾ ಜಿಲ್ಲೆ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು.

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕ! ಹದಿನೇಳು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನು ಗಳನ್ನು ಮನಸೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರೆವ್ಯಾಪಾರಿ, ರಥಬೀದಿ, ಉಡುಪಿ.

ಸ್ತ್ರೀ ಮಲಯಾಳದ

ಸ್ತನೋಸ್ತೇಧಃ

THE MALAYALA STHANO STHEDAH OUSHADHA CO.
Post - CHALAPURAM, MALABAR

ರಹಸ್ಯಗಳು

ಇದೀಗತಿಳಿದು ಬಂದಿದ ಪುರುಷರನ್ನಾವುದು ಆಕರ್ಷಿಸುತ್ತದೆಂಬುದನ್ನು ಸ್ತ್ರೀಯರೀಗ ಒಲ್ಲರು ನೀವು ಪುರುಷನೊಬ್ಬನನ್ನು ವೀಕ್ಷಿಸಿ ನೋಡಿದ್ದಲ್ಲಿ, ಅತನ ಕಣ್ಣುಗಳು ಸ್ತ್ರೀಯ ಮುಖದಿಂದ ಕೆಳಗೆ ಉಚಸ್ಥಳಕ್ಕೆ ಚಲಿಸಿ ಕುಚಗಳು ಉನ್ನತವಾಗಿ, ದುಂಡಗೆ ಯೌವನಯುಕ್ತವಾಗಿ ಆಕರ್ಷಕವಾಗಿರುವವೋ ಎಂದು ನೋಡುವವು.

18 ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ಥನಸ್ಥೆಡ:—ಆಸ್ವಸ್ಥ, ಚಿಂತೆ, ಪ್ರಾಯ ಆಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷತೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಅಥವಾ ಸಣ್ಣ ತಗ್ಗಾಗಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರದಾದರೆ

ದಿ ಮಲಯಾಳ ಔಷಧ ಕಂಪೆನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ಪಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವವು, ಟೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವುವು. ಸಡಿಲಾಗಿರುವಮಾಂಸವು ಸ್ಥಿರವಾಗುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವು ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಿಹೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು

ಸ್ಥನಸ್ಥೆಡ ನಂಬ್ರ 20—ಒಳಗೆ ಹಾಗುದುಕೊಳ್ಳುವುದಕ್ಕೆ ನಂಬ್ರ ರೂ. ೩. ನಂಬ್ರ ೩೧ ಹೊರಗಣ ಉಪಯೋಗಕ್ಕೆ ರೂ. ೩. ಧರ್ಮಾರ್ಥ ಕಳುಹಿಸಲ್ಪಡುವ ಕೆಟಲಾಗಿಗೆ ದಯಮಾಡಿ ಬರೆಕೊಳ್ಳಿ.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಮುಟ್ಟುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ

ದಕ್ಷಿಣ ಕನ್ನಡಾ ಜಿಲ್ಲೆಯ ಮಹಾ ಜನರಲ್ಲಿ ವಿನಂತಿ.

ಹೊಸ ಸುಧಾರಣೆಯ ಪ್ರಕಾರ ಬರುವ ಫೆಬ್ರವರಿ ತಿಂಗಳಲ್ಲಿ ನಡೆಯಲಿಕ್ಕಿರುವ ನ್ಯಾಯವಿಧಾಯಕ ಸಭೆಯ ಚುನಾವಣೆಯ ಸಂಬಂಧವಾದ ಕಾಂಗ್ರೆಸ್ ಕಡೆಯ ಪ್ರಚಾರದ ಸಮಾರಂಭವು ನಮ್ಮ ಜಿಲ್ಲೆಯಲ್ಲಿ ತಾ. 20-9-36ನೇ ಆದಿತ್ಯವಾರ ಮಂಗಳೂರಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ಧುರೀಣರಿಂದ ಪ್ರಾರಂಭಿಸಲ್ಪಟ್ಟ ಸಂಗತಿಯನ್ನು ಅನೇಕರು ತಿಳಿದಿರಬಹುದು. ಕಳೆದ 50 ವರ್ಷಗಳಿಂದ ಕಾಂಗ್ರೆಸು ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಜನರ ಸೇವೆಯನ್ನು ಮಾಡುತ್ತಾ ಇದೆ. ದಿವಸ ಹೋಗುತ್ತಾ ಕಾಂಗ್ರೆಸಿನ ಬಲವು ಹೆಚ್ಚಾಗುತ್ತಾ ಬರುತ್ತದೆ. ವೈರಿಗಳೊಡನೆ ಯುದ್ಧ ಮಾಡುವಾಗ ಅನೇಕತರದ ಆಯುಧಗಳನ್ನು ಉಪಯೋಗಿಸಬೇಕಾಗುತ್ತದೆ. ಹಾಗೆಯೇ ಕಾಂಗ್ರೆಸು ಸತ್ಯಾಗ್ರಹ, ಕಾಯಿದೆ ಭಂಗ ಚಳವಳಗಳೆಂಬ ಆಯುಧಗಳನ್ನು ಪ್ರಕೃತ ಹಿಂತೆಗೆದು ದೇಶದ ಪರಿಸ್ಥಿತಿಗನುಸರಿಸಿ ಇದಿರಾಳುಗಳೊಡನೆ ಹೋರಾಡುವರೆ ಆಯುಧ ಸಾಮಗ್ರಿಗಳನ್ನು ಬದಲಾವಣೆ ಮಾಡಿ ಬರುವ ನ್ಯಾಯವಿಧಾಯಕ ಸಭೆಗಳ ಒಳಗೆ ಹೋಗಿ ಅಲ್ಲಿ ತಮ್ಮ ಇದಿರಾಳಿಗಳೊಡನೆ ಹೋರಾಡಬೇಕೆಂದು ನಿಶ್ಚಯಿಸಿರುವುದೆ. ನಮ್ಮ ಒಪ್ಪಿಗೆಯಿಲ್ಲದೆ ನಮ್ಮ ದೇಶದ ಮೇಲೆ ಹೊರಿಸಲ್ಪಟ್ಟಂಥಾ, ಎಲ್ಲ ಪಕ್ಷಗಳಿಂದಲೂ ಖಂಡಿಸಲ್ಪಟ್ಟಂಥಾ ನವ ಸುಧಾರಣೆಯೆಂದು ಕರೆಯಲ್ಪಡುವ, ನಮ್ಮ ಗುಲಾಮಗಿರಿಯನ್ನು ಮತ್ತಷ್ಟು ಬಲಪಡಿಸುವ 1935ನೇ ಇಸವಿಯ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟನ್ನು ವಿರೋಧಿಸುವುದೇ ನ್ಯಾಯವಿಧಾಯಕ ಸಭೆಗಳಿಗೆ ಕಾಂಗ್ರೆಸಿನವರು ಪ್ರವೇಶಿಸುವ ಮುಖ್ಯ ಉದ್ದೇಶವಾಗಿರುತ್ತದೆ.

ಇದು ತನಕ ಕಾಂಗ್ರೆಸಿನವರು ನ್ಯಾಯವಿಧಾಯಕ ಸಭೆಗಳ ಒಳಗೆ ಪ್ರವೇಶ ಮಾಡದೆ ಇದ್ದುದರಿಂದ ಕೆಲವು ಮಂದಿ ಸ್ವಾರ್ಥಿಗಳು ಅವುಗಳ ಒಳಗೆ ಹೋಗಿ ದೇಶದ ಮತ್ತು ಬಡವರ ಹಿತವನ್ನು ಬದಿಗೊತ್ತಿ ಅನೇಕ ಕೆಡಕುಗಳನ್ನುಂಟುಮಾಡಿರುವ ಸಂಗತಿಯು ಎಲ್ಲರಿಗೂ ತಿಳಿದ ವಿಷಯವೇ. ಕಾಂಗ್ರೆಸಿನವರು ಬರುವ ನ್ಯಾಯವಿಧಾಯಕ ಸಭೆಗಳಲ್ಲಿ ಭಾಗ ವಹಿಸುವುದರಿಂದ ಮಾತ್ರವೆ ನಮ್ಮ ದೇಶವು ಸ್ವಾತಂತ್ರ್ಯದ ಗುರಿಯನ್ನು ಮುಟ್ಟುವ ಹೆಚ್ಚಿನ ಸಂಭವ ತೋರುವುದಿಲ್ಲವಾದರೂ ಅದರಿಂದ ನಮಗೆ ಹೆಚ್ಚಿನ ಪ್ರಯೋಜನ ಸಿಕ್ಕಲಾರದಾದರೂ, ಜಸ್ಟಿಸ್ ಪಾರ್ಟಿ ಮೊದಲಾದ ಸರಕಾರದವರು ಹೇಳಿದ್ದಕ್ಕೆ "ತಥಾಸ್ತು" ಎಂದು ಹೇಳುವ ಪಕ್ಷಗಳ ಜನರು ಅವುಗಳ ಒಳಗೆ ಹೊಕ್ಕು, ಪ್ರಜೆಗಳಿಗೆ ಮಾಡುವ ಅನಾಹುತ ಮತ್ತು ಅನ್ಯಾಯಗಳನ್ನು ನಿಲ್ಲಿಸಲಿಕ್ಕೆ ಸಾಧ್ಯ ಉಂಟು. ಈಗ ಅತ್ಯಧಿಕವಾಗಿ ಸರಕಾರದವರಿಂದ ಹೊರಿಸಲ್ಪಟ್ಟಿರುವ ಭೂಕಂದಾಯವನ್ನು ಇಳಿಸುವರೆಯೂ, ನಮ್ಮ ದೇಶದ ರೈತರ ಸಂಘಟಣೆ ಮಾಡುವದು, ಮತ್ತು ಅವರ ಸಾಲಗಳನ್ನು ನಿವಾರಿಸಲಿಕ್ಕೆ ಉಪಾಯಗಳನ್ನು ಕಂಡುಹಿಡಿಯುವರೆಯೂ, ನಮ್ಮ ದೇಶದ ಕೈಗಾರಿಕೆಗಳಿಗೆ ಪ್ರೋತ್ಸಾಹಕೊಟ್ಟು ನಮ್ಮ ಜನರ ದಾರಿದ್ರ್ಯವನ್ನು ಹೋಗಲಾಡಿಸುವರೆಯೂ, ಇನ್ನೂ ಅನೇಕತರದ ಪ್ರಯೋಜನಗಳನ್ನು ದೊರಕಿಸಿ ಕೊಡುವರೆಯೂ ಕಾಂಗ್ರೆಸಿನವರು ಬರುವ ನ್ಯಾಯವಿಧಾಯಕ ಸಭೆಗಳಲ್ಲಿ ಜನತೆಯ ಪರವಾಗಿ ಹೋರಾಡುವರು. ಬರುವ ನ್ಯಾಯವಿಧಾಯಕ ಸಭೆಗಳ ಚುನಾವಣೆಯಲ್ಲಿ ಕಾಂಗ್ರೆಸಿನ ಕಡೆಯಿಂದ ಪ್ರತಿಯೊಂದು ಸ್ಥಾನಗಳಿಗೂ ಉಮೇದ್ವಾರರು ನಿಲ್ಲಿಸಲ್ಪಡುವರು. ಮದರಾಸಿನ ಎಸಂಬ್ಲಿಗೆ ನಮ್ಮ ಜಿಲ್ಲೆಗಿರುವ ಮೂರು ಜನರಲ್ ಸ್ಥಾನಗಳಿಗೂ, ಇಡೀ ಜಿಲ್ಲೆಗೆ ಮದರಾಸ್ ಕೌನ್ಸಿಲಿಗಿರುವ ಒಂದು ಸ್ಥಾನಕ್ಕೂ ಮತ್ತು ರಿಜರ್ವ್ ಸ್ಥಾನಗಳಿಗೂ ಕಾಂಗ್ರೆಸ್ ಕಡೆಯಿಂದ ಉಮೇದ್ವಾರರು ನಿಲ್ಲಿಸಲ್ಪಡುವರು. "ಎದುರು ಪಕ್ಷದವರು ಈ ಮೊದಲು ಕೆಲಸ ಮಾಡಿರುತ್ತಾರೆ. ಕಾಂಗ್ರೆಸ್ ಕಡೆಯಿಂದ ಈ ವರೆಗೆ ಹೆಚ್ಚಿನ ಕೆಲಸ ನಡೆದಿರುವುದಿಲ್ಲ. ಉಮೇದ್ವಾರರೂ ಈ ವರೆಗೆ ಎದುರು ಬರುವದಿಲ್ಲ" ಎಂತ ಯಾರೂ ತಿಳಿಯಕೂಡದು. ಮತ್ತು ತಮ್ಮ ವೋಟುಗಳನ್ನು ಎದುರುಪಕ್ಷದವರಿಗೆ ವಾಗ್ದಾನಮಾಡಕೂಡದು. ಬರುವ ತಿಂಗಳೊಳಗೆ ಕಾಂಗ್ರೆಸ್ ಕಡೆ ಉಮೇದ್ವಾರರು ಆರಿಸಲ್ಪಡುವರು. ಉಮೇದ್ವಾರರನ್ನು ಆರಿಸುವ ಕೊನೆಯ ಅಧಿಕಾರವು, ಸರದಾರ್ ವಲ್ಲಭಭಾಯಿ ಪಟೇಲರು ಅಧ್ಯಕ್ಷರಾಗಿಯೂ ಬಾಬು ರಾಜೇಂದ್ರಪ್ರಸಾದರು ಮತ್ತು ಪಂಡಿತ ವಲ್ಲಭಪಂಥರು ಕಾರ್ಯದರ್ಶಿಯರಾಗಿಯೂ ಇರುವ ಅಖಿಲಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಕಮಿಟಿಯವರದಾಗಿರುತ್ತದೆ. ಅವರು ಸರಿಯಾಗಿ ವಿಚಾರ ಮಾಡಿ ಜನರ ಬೆಂಬಲ ಹೆಚ್ಚಿಗೆ ಇರತಕ್ಕ ಉಮೇದ್ವಾರರನ್ನು ನಿಲ್ಲಿಸುವರು. ಬರುವ ಚುನಾವಣೆಯು ಅಖಿಲ ಹಿಂದೂಸ್ಥಾನದ ಪ್ರಶ್ನೆ—ನಮ್ಮ ದೇಶದ ಸ್ವಾತಂತ್ರ್ಯದ ಪ್ರಶ್ನೆ—ಸರಕಾರದವರ ಮತ್ತು ಕಾಂಗ್ರೆಸಿನ ಬಲಾಬಲ ಪರೀಕ್ಷೆಯ ಪ್ರಶ್ನೆ—ಆದುದರಿಂದ ನಾವು ಜಾತಿಯ ಕಡೆಗೆ ನೋಡದೆ ಕಾಂಗ್ರೆಸ್ ಕಡೆಯ ಉಮೇದ್ವಾರರಿಗೆ ಕೊಟ್ಟ ಪ್ರತಿಯೊಂದು ವೋಟು ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿರುತ್ತದೆ; ನಿಜವಾದ ಜನ ಹಿತಸಾಧನೆಗಾಗಿರುತ್ತದೆ. ಜಸ್ಟಿಸ್ ಪಾರ್ಟಿ ವ ಇತರ ಪಾರ್ಟಿಗಳ ಉಮೇದ್ವಾರರಿಗೆ ಕೊಡುವ ಪ್ರತಿ ಒಂದು ವೋಟು ನಮ್ಮ ದೇಶದ ಗುಲಾಮಗಿರಿಯನ್ನು ಮತ್ತೂ ಬಲಪಡಿಸುವದಾಗುವುದು; ಸ್ವಹಿತಘಾತವಾಗುವುದು. ಕಳೆದ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ನಡೆದ ನಾಚಿಕೆಕರವರ್ತನದಿಂದ ನಾವು ನಿರಾಶೆಪಡದೆ ಅದರಲ್ಲಿ ಉಂಟಾದ ತಪ್ಪುಗಳನ್ನು ತಿದ್ದಿಕೊಂಡು ಅದರಿಂದ ಹೊಸ ಅನುಭವಗಳನ್ನು ಕಲಿತು ಅವರ ವಿದ್ರೋಹಗಳನ್ನು ಮತ್ತು ಫಲಿತಾಂಶವನ್ನು ಮರೆತು ತಪ್ಪಿತಸ್ಥರನ್ನು ಕ್ಷಮಿಸಿ ಅವರ ವರ್ತನೆಯಿಂದ ಅವರು ಪಶ್ಚಾತ್ತಾಪಪಟ್ಟು ಅವರ ನಡತೆಯನ್ನು ತಿದ್ದಿಕೊಳ್ಳಲು ಸಂದರ್ಭಕೊಟ್ಟು ಈ ಸಂಧಿಗ್ಧ ಸಮಯದಲ್ಲಿ ಎಲ್ಲಾ ಜಾತಿಯವರೂ ಮತದವರೂ ತಮ್ಮತಮ್ಮೊಳಗಿನ ಭೇದಗಳನ್ನು ಮೂಲೆಗೊತ್ತಿ ಒಗ್ಗಟ್ಟಾಗಿ ಕಾಂಗ್ರೆಸಿನ ಕಡೆಯಿಂದ ಈಗಿನಿಂದಲೇ ಕೆಲಸ ಮಾಡಲಿಕ್ಕೆ ನೋಡಬೇಕು. ಪ್ರತಿಯೊಂದು ಪೋಲಿಂಗ್ ಸ್ಟೇಶನ್ ವಿಸ್ತೀರ್ಣಕ್ಕೆ ಪ್ರಮುಖರಿರುವ ಒಂದೊಂದು ಇಲೆಕ್ಷನ್ ಸಬ್ ಕಮಿಟಿಗಳನ್ನು ಸ್ಥಾಪಿಸಿ, ಕಾಂಗ್ರೆಸ್ ಉಮೇದ್ವಾರರು ತಮಗೆ ಮೆಂಬರಿಕೆ ಬೇಕಾದರೆ ಒದಗಾದ ಲೆಂದು ನೆನಸದೆ ದ್ರವ್ಯಸಹಾಯ ಅಗತ್ಯವಿರುವ ಉಮೇದ್ವಾರರಿಗೆ ಅವರು ಕೇಳದೆನೇ ಅನುಕೂಲವಿದ್ದವರು ಹಣ ಸಂಗ್ರಹಮಾಡಿ ಕೊಟ್ಟು ಎಲ್ಲರೂ ಈ ಚುನಾವಣೆಯ ಕೆಲಸವು ತಮ್ಮ ಕೆಲಸವೆಂದು ಎಣಿಸಿ ಅನುಕೂಲ ಇದ್ದವರು ಅಲ್ಪಸ್ವಲ್ಪ ಮಟ್ಟಿಗೆ ತಮ್ಮ ಕೈಯಿಂದ ಹಣ ಖರ್ಚಿಗೆ ಬಿದ್ದರೂ ಕಾಂಗ್ರೆಸ್ ಕಡೆಯಿಂದ ಕೆಲಸಮಾಡಿ, ಓಟರರು ಕಾಂಗ್ರೆಸ್ ಕಡೆ ಉಮೇದ್ವಾರರಿಂದ ಬಸ್, ಕಾರ್, ಕಾಫಿ ವಗೈರೆ ನಿರೀಕ್ಷಿಸದೆ ತಮ್ಮ ಪವಿತ್ರ ಕರ್ತವ್ಯವೆಂದು ನೆನಸಿ ಚುನಾವಣೆಯ ದಿವಸ ಪೋಲಿಂಗ್ ಸ್ಟೇಷನಿಗೆ ಕಾಲು ನಡೆಯಿಂದ ಹೋಗಿ ಕಾಂಗ್ರೆಸ್ ಕಡೆ ಉಮೇದ್ವಾರರಿಗೆ ವೋಟುಕೊಟ್ಟು ತಮ್ಮ ಕಡೆಯ ಜನರು ಸಹಾ ಹಾಗೆಯೇ ಮಾಡುವಂತೆ ಪ್ರೋತ್ಸಾಹಿಸಬೇಕಾಗಿಯೂ. ಯುವಕರು ಮತ್ತು ವಿದ್ಯಾರ್ಥಿಗಳು ಕಾಂಗ್ರೆಸ್ ಕಡೆ ಉಮೇದ್ವಾರರ ಕಡೆಯಿಂದ ಕೆಲಸಮಾಡಲು ಸ್ವಯಂಸೇವಕರಾಗಿ ಮುಂದೆ ಬರುವಂತೆಯೂ ಚುನಾವಣೆಯು ಮುಗಿಯುವವರೆಗೆ ಪ್ರತಿಯೊಬ್ಬರ ಬಾಯಿಯಲ್ಲಿಯೂ ಕಾಂಗ್ರೆಸಿಗೆ "ವೋಟುಕೊಡಿರಿ" ಎಂಬ ಮಂತ್ರ ಉಚ್ಚರಿಸಲ್ಪಡುವಂತೆ ಮಾಡಬೇಕಾಗಿಯೂ, ಕಾಂಗ್ರೆಸಿನವರಿಂದ ಯಾರು ಆರಿಸಲ್ಪಡುತ್ತಾರೆಂತ ಕಾಯದೆ ಈಗಿನಿಂದಲೇ ಕೆಲಸಮಾಡಿ ಅದರ ಪರಿಣಾಮದಿಂದ ಇಡೀ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿಯಂತಹ "ಒಂದು ಕಾಂಗ್ರೆಸಿನ ನೈತಿಕ ಶಕ್ತಿಯನ್ನು ಕಲ್ಪಿಸಿ ಕಾಂಗ್ರೆಸಿಗೆ ಎದುರಾಗಿ ಸ್ಪರ್ಧಿಸುವರೆ ಯಾರಿಗೂ ಧೈರ್ಯಉಂಟಾಗದಂತೆಮಾಡಿ ಕಾಂಗ್ರೆಸ್ ಕಡೆಯ ಉಮೇದ್ವಾರರು ನಮ್ಮ ಜಿಲ್ಲೆಯಲ್ಲಿ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಡುವಂತೆ ಮಾಡಬೇಕಾಗಿಯೂ ಕಾಂಗ್ರೆಸಿನ ಜಯಧ್ವಜವನ್ನೆತ್ತಿ ಹಿಡಿದು ಕಾಂಗ್ರೆಸಿನ ಅಭಿಮಾನವನ್ನು ಮತ್ತು ಯಶಸ್ಸನ್ನು ಕಾಪಾಡಬೇಕಾಗಿಯೂ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಡೆಯಿಂದ ಜಿಲ್ಲಾ ಮಹಾಜನರ ಕೂಡೆ ಈ ಮೂಲಕ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಕಾರ್ಕಳ 25-9-1936	ಎಂ. ಎಸ್. ಅಧಿಕಾರಿ, ಪ್ರೆಸಿಡೆಂಟ್ ಇನ್ ಚಾರ್ಜ್ ದಕ್ಷಿಣಕನ್ನಡಜಿಲ್ಲಾ ಕಾಂಗ್ರೆಸ್ ಕಮಿಟಿ.

ಸಾವಿರಾರು ಜನರಿಂದ ಕೊಂಡಾಡಲ್ಪಡುತ್ತಿರುವ

ನವಯುಗಕ್ಕೆ ಇಂದೇ ಚಂದಾದಾರರಾಗಿರಿ

ನವಯುಗದ ಬಿಡಿ ಸಂಚಿಕೆಗಳು

ಈ ಕೆಳಗಿನವರಲ್ಲಿ ದೊರೆಯುತ್ತವೆ.

1 ಯಚ್. ಕೋಟ್ಯಣ್ಣ ಶೆಟ್ಟಿ, ಮರ್ಚಂಟ್, ಕುಂದಾಪುರ
2 ವಾಸುದೇವರಾವ್, ಎಸ್. ಶಿಬ್ರಿಕಾರ್, C/o ಪಾಪ್ಯುಲರ್ ಶೋಪ್, ಸರ್. ಫಿರೋಜ ಮೇತರೋಡ್, ಫೋರ್ಟ್, ಬೊಂಬಾಯಿ.
3 ದಿ ಕೆನರಾ ನ್ಯೂಸ್ ಏಜನ್ಸಿ, ಬಸ್ ಸ್ಟೇಂಡ್ ಬಳಿ, ಕಾರ್ಕಳ
4 ಸಿ. ಶೀನಪ್ಪ, ಶೆಟ್ಟಿ ಕ್ಲೋತ್ ಮರ್ಚಂಟ್, ತೀರ್ಥಹಳ್ಳಿ.
5 ನಗುವನಂದ ಆಫೀಸು, ಬೆಂಗಳೂರು
6 ಕೆ. ಟಿ. ನಾಯಕ್, ಜನರಲ್ ಮರ್ಚಂಟ್, ಅಂಕೋಲ
7 ಬಿ. ಭೋಜರಾವ್, ಮೂಲ್ಕಿ
8 ಯು. ಪಿ. ಮೇಸ್ತ್ರಿ, ಉದ್ಯಾವರ.
9 ಬಿ. ಪದ್ಮನಾಭ ಪೈ, ಮರ್ಚಂಟ್, ಬ್ರಹ್ಮಾವರ
10 ಭಕ್ತಾ ಬ್ರದರ್ಸ್, ಮರ್ಚಂಟ್ಸ್. ಕಾಸರಗೋಡು

ಶ್ರೀ ರಾಮಾರೆಸ್ಟೋರೆಂಟ್

ಉಡುಪಿ.

ಊಟ ಉಪಹಾರಗಳ ರುಚಿ! ಸ್ಥಳ ಆಸನಗಳ ಶುಚಿ !!

ಶಾಲಾ ವಿದ್ಯಾರ್ಥಿಗಳ ಅನುಕೂಲತೆ, ಪ್ರವಾಸಿಗರಿಗೆ ಅತ್ಯುತ್ತಮ ಸೌಕರ್ಯ ಇವೆಲ್ಲಾ ಇರುವ ಒಂದೇ ಒಂದು ವಿಶ್ರಾಂತಿಗೃಹವೆಂದರೆ ಶ್ರೀ ರಾಮಾ ರೆಸ್ಟೋರೆಂಟ್! ಸುಲಭ ದರದಲ್ಲಿ ಅತ್ಯುತ್ತಮ ತಿಂಡಿ ಪಾನೀಯಗಳು; ಆರೋಗ್ಯಕರ ಊಟ ಇವುಗಳಿಗೆ ನಮ್ಮ ಅನುಭವಪೂರ್ಣ ಮೇಲ್ವಿಚಾರಣೆ. ಹೀಗಾಗಿ ನಿಮಗೆಲ್ಲಾ ಸುಖವೇ ಸುಖ! ಸಂತೆಕಟ್ಟೆಯಿಂದ ತೆಂಕು ಕೋರ್ಟ್ ರೋಡ್ ಮತ್ತು ಕೋಳದಪೇಟೆ ರೋಡ್ ಮಿಲನವಾದಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಿಸಿರುವ ದಿವ್ಯವಾದ ಮಂದಿರದಲ್ಲಿರುವ ಶ್ರೀ ರಾಮಾರೆಸ್ಟೋರೆಂಟನ್ನು ಒಮ್ಮೆ ಸಂದರ್ಶಿಸಿನೋಡಿರಿ.

ಎಚ್. ಗೋಪಾಲ ನಾಯಕ್,
ಪ್ರೊಪ್ರೈಟರ್.

ವ್ಯಭಿಚಾರಿಣಿ ಯಾರು?
ನಾಟಕ ಪ್ರದರ್ಶನ

ಇದೇ ತಾ. ೩ರಲ್ಲಿ ಮಂಗಳೂರಿನ ಶ್ರೀ ಜಗದಂಬಾ ಕರ್ನಾಟಕ ನಾಟಕ ಸಂಘ (ಎಮೆಚೂರ್ಸ್) ಇವರು ಶ್ರೀ ಕೆ. ಕೆ. ಶೆಟ್ಟಿ ರಿಂದ ಬರೆಯಲ್ಪಟ್ಟ 'ವ್ಯಭಿಚಾರಿಣಿ ಯಾರು?' ಎಂಬ ಸಾಮಾಜಿಕ ಕ್ರಾಂತಿಕಾರಕ ನಾಟಕವನ್ನು ಮಂಗಳೂರು ಗಣಪತಿ ಹೈಸ್ಕೂಲಿನ ನಾಟಕ ಮಂದಿರದಲ್ಲಿ ಅತ್ಯಂತ ಜಯಶೀಲವಾಗಿ ಅಭಿನಯಿಸಿದರು. ಅಂದು ಎಡೆಬಿಡದೆ ಜಡಿಮಳೆಗರೆಯುತ್ತಿದ್ದರೂ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು ಕೆಲವರು ಟಿಕೇಟು ಸಿಗದೆ ಹಿಂದೆ ಕೂಡ ಹೋಗಬೇಕಾಯಿತು.

ಕಥಾನಕವು ಅದ್ಭುತರಮ್ಯವಾಗಿ ಕುರುಡು ಸಮಾಜವನ್ನು ಕಣ್ದೆರೆಯಿಸುವಂತಿತ್ತು. ನ್ಯಾಯವೂ, ಪ್ರೇಮವೂ ಎಂತಹ ಕಷ್ಟನಷ್ಟಗಳನ್ನಾದರೂ ಸಹಿಸಿ ಗೆದ್ದು ಬರುವುದನ್ನು ವಿಶದೀಕರಿಸುತ್ತಿತ್ತು. ಕಥಾನಕದಂತೆ ಪಾತ್ರವರ್ಗವೂ ಚೆನ್ನಾಗಿಯೇ ಇತ್ತು. ಕಥಾನಾಯಕ, ಪ್ರಭಾಕರ ಪಾತ್ರವನ್ನು ವಹಿಸಿದ ವಸಂತಿ ಹಾರ್ಮೋನಿಯಂ ವರ್ಕ್ಸಿನ ಪ್ರೊಪ್ರೈಟರ್ ಶ್ರೀ. ಅತ್ತಾವರ ಬಾಬುರವರು ತಮ್ಮ ಅಭಿನಯ ಕೌಶಲ್ಯದಿಂದಲೂ, ಹಾಡುಗಾರಿಕೆಯಿಂದಲೂ ಜನ ಮೆಚ್ಚಿಗೆಯನ್ನು ಪಡೆದರು. ತನ್ನ ಜಡ್ಜ್ ಪದವಿಗೆ ರಾಜಯಿತ್ತು ಸಕಲವನ್ನೂ ತ್ಯಜಿಸಿ ಹೋಗುವ ದೃಶ್ಯದಲ್ಲಿ ಇವರೂ ಅತ್ತು ಪ್ರೇಕ್ಷಕರೂ ಅಳುವಂತೆ ಮಾಡಿದರು. ಕಥಾನಾಯಕೆ ಸುಧೆಯ ಪಾತ್ರವನ್ನು ವಹಿಸಿದ ಶ್ರೀ ಕೇದಿಗೆ ರಾಮರಾಯರು ತಮ್ಮ ಪಾತ್ರದಲ್ಲಿ ಲೀನರಾಗಿ, ಭಾವಪೂರ್ಣವಾಗಿ ಅಭಿನಯಿಸಿದರು. ಸ್ತ್ರೀ ಸಹಜ ಗುಣಗಳು ಇವರ ಪಾತ್ರದಲ್ಲಿ ಒಡಮೂಡಿದ್ದು ಇವರು ಸ್ತ್ರೀಯಲ್ಲವೆನ್ನುವ ಸಂದೇಹಕ್ಕೆಡೆಯಿರಲಿಲ್ಲ ಹಾದೂ ಉತ್ತಮವಾಗಿತ್ತು. 'ಬಡವರ ಬಂಧು' ಪತ್ರಿಕೆಯ ಜತೆಸಂಪಾದಕರಾದ ಶ್ರೀ. ನರಸಪ್ಪನವರು ಕೊರಗನ ಪಾತ್ರವನ್ನು ಬಹು ಸ್ವಾರಸ್ಯವಾಗಿ ಅಭಿನಯಿಸಿ ಜನಮನ್ನಣೆಯನ್ನು ಹೊಂದಿದರು. ಶ್ರೀ. ಮೋಹನರಾಯರು ಅಮೃತರಾಯನ ಪಾತ್ರ ಧರಿಸಿ ತಮ್ಮ ಸಮಯೋಚಿತ ಅಭಿನಯ, ಕರ್ಣಾನಂದಕರ ಗಾಯನಗಳಿಂದ ಶ್ಲಾಘನೆಗೊಳಗಾದರು. ಶ್ರೀ. ಆರ್. ಎಸ್. ಚೂರ್ಯನವರು ವಾಮನ, ದಫೆದಾರ, ಇನ್ಸ್‌ಪೆಕ್ಟರ್ ಇತ್ಯಾದಿ ಪಾತ್ರಗಳನ್ನು ವಹಿಸಿ ತಮ್ಮ ಅಭಿನಯ ಚಾತುರ್ಯದಿಂದ ಸಭಿಕರನ್ನು ನಗೆಗಡಲಲ್ಲದ್ದಿದರು ಇನ್ನು ಶ್ರೀ. ಬಿ. ವಿ. ಆಚಾರ್ಯರ ಮುಕುಂದರಾವ್, ಶ್ರೀ. ಟಿ. ಗುರುರಾಜಭಟ್ಟರ ಯಶವಂತರಾವ್, ಶ್ರೀ.ಬಿ. ದೇವರಾಜರ ಡಾ। ರಮಾನಾಥನ್, ಶ್ರೀ ಡಿ. ಎನ್. ಥೋಮಸರ ಬಸಪ್ಪ, ಯು. ಶ್ರೀನಿವಾಸರ ಲೀಲಾ, ಯಂ. ಶ್ಯಾಮರಾಯರ ತುಳಸಿ ಪಾತ್ರಗಳೂ ಚೆಲೋದಾಗಿದ್ದವು.

ನಾಟಕಾಂತ್ಯದಲ್ಲಿ ನಾಟಕಕರ್ತರಾದ ಶ್ರೀ ಕೆ. ಕೆ. ಶೆಟ್ಟರು ತಮ್ಮ ನಾಟಕವನ್ನು ರಂಗಭೂಮಿಗೆ ತಂದುದಕ್ಕಾಗಿ ನಾಟಕ ಸಂಘದವರನ್ನು ಅಭಿವಂದಿಸಿದರು. ಶ್ರೀ. ನರಸಪ್ಪನವರು ಪಾತ್ರ ವಹಿಸಿದವರಿಗೂ ನಾಟಕವನ್ನಾಡಲು ನೆರವಾದವರಿಗೂ ಪ್ರೇಕ್ಷಕರಿಗೂ ಧನ್ಯವಾದವನ್ನಿತ್ತರು. ಕಾರ್ಯದರ್ಶಿಗಳಾದ ಶ್ರೀ. ಎಂ. ಎ. ದೇವಡಿಗರು, ಶ್ರೀ. ಅತ್ತಾವರ ಬಾಬುನವರನ್ನೂ ಇತರರನ್ನೂ ಅಭಿವಂದಿಸಿದರು.

ಈ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಡುವಂತೆ ಪ್ರಯತ್ನಿಸಿದ ಸಂಘದ ಕಾರ್ಯದರ್ಶಿಗಳಾದ ಶ್ರೀ. ಎಂ ಎ ದೇವಡಿಗಾರರ ಮತ್ತು ಶ್ರೀ ಬಿ. ಎಸ್. ಆನಂದರಾಯರ ಪ್ರಯತ್ನವು ಸ್ತುತ್ಯ.

ವಿದೇಶ ವಾರ್ತೆ.

ಸರ್ ಜೋನ್ ವಿಲ್ಲರ್‌ಮೆನರೆಂಬ ಇಂಗ್ಲೆಂಡಿನ ಅತ್ಯಂತ ಶ್ರೀಮಂತರ ಮರಣವಾಗಿಸುತ್ತ ಮರಣತೆರಿಗೆಯಾಗಿ ಬ್ರಿಟಿಷ್ ಸರಕಾರಕ್ಕೆ ೩೦ ಮಿಲಿಯ ಪವನು ದೊರೆಯುವುದು. ಕೇವಲ ಇಂಗ್ಲೆಂಡಿನಲ್ಲಿದ್ದ ಇವರ ಬದುಕಿನ ಮೌಲ್ಯವು 36,685,000 ಪವನುಗಳಾಗಿದ್ದುವು.

ಸೆಪ್ಟಂಬರ ತಾ. ೨೯ರಲ್ಲು ಪೆಲೆಸ್ತಿನದಲ್ಲಿ ಲಷ್ಕರಿಮುಖಂಡರು ಜ್ಯಾರಿಗೆ ತರಲ್ಪಟ್ಟರುವುದು. ಅರಬರು ತಮ್ಮ ಮುಷ್ಕರವನ್ನು ಕೊನೆಗೊಳಿಸಿ ಶಾಂತರೀತಿಯಿಂದ ನಡೆಯಬೇಕೆಂದು, ಅರಬ ದೇಶದ ರಾಜರುಗಳಾದ ಇಬ್ನ್ ಸಾವುದ್ ಮತ್ತು ಅಮೀರ್ ಅಬ್ದುಲ್ಲರ ಕಡೆಯ ಪ್ರತಿನಿಧಿಗಳು ವಿನಂತಿ ಮಾಡಿಕೊಂಡಿರುವರು.

ಕಳ್ಳತನದಿಂದ ಮಾದಕಗಳನ್ನು ತಯಾರಿಸುತ್ತಿದ್ದ ಸಂಬಂಧವಾಗಿ ಅಮೆರಿಕದಲ್ಲಿ ಸುಮಾರು 1000 ಮಂದಿ ಕೈದು ಮಾಡಲ್ಪಟ್ಟಿರುವರು.

ಅಮೆರಿಕದಲ್ಲಿ ನಡೆಯಲಿರುವ ಪ್ರೆಸಿಡೆಂಟರ ಚುನಾವಣೆಯಲ್ಲಿ ಈಗಣ ಅಲ್ಲಿಯ ಪ್ರೆಸಿಡೆಂಟರಾದ ಮಿ. ರುಸವೆಲ್ಟರೇ ಅಲ್ಪ ಮಾತ್ರದ ಬಹುಪಕ್ಷದಿಂದ ಆರಿಸಿ ಬರಬಹುದೆಂದೂ, ಅವರ ಪ್ರಬಲ ಪ್ರತಿಪಕ್ಷಿಯಾದ ಗವರ್ನರ್ ಲೇಂಡನರಿಗೂ ಕೆಲವೆಡೆ ರುಸವೆಲ್ಟರಿಗಿಂತ ಹೆಚ್ಚು ಓಟು ದೊರೆಯಬಹುದೆಂದೂ ನಿರೀಕ್ಷಿಸಲಾಗಿದೆ

ಅಬಿಸೀನಿಯದ ಕೆಲಭಾಗದ ಮೇಲಿನ ತನ್ನ ಅಧಿನಾಯಕತ್ವವನ್ನು ಇಟಲಿಯು ಒಪ್ಪುವುದಾದರೆ ತಾನು ಇತರ ಕೆಲವು ಭಾಗಗಳ ಮೇಲಿನ ತನ್ನ ಅಧಿಕಾರವನ್ನು ಬಿಟ್ಟುಬಿಡಲು ಸಿದ್ಧನಿರುವೆನೆಂಬರ್ಥವಾಗುವ ಹೇಳಿಕೆಯೊಂದನ್ನು ಅಬಿಸೀನಿಯದ ಚಕ್ರವರ್ತಿಗಳು ಮಾಡಿರುವರೆಂದು ಸುದ್ದಿ.

ಸ್ಪೈನಿನ ಬಂಡಾಯ

ಕಳೆದ ಶುಕ್ರವಾರ ಮೇದ್ರಿದ್ ಪಟ್ಟಣದ ಮೇಲೆ ಬಂಡಾಯಗಾರರು ನಡೆಸಿದ ವಿಮಾನ ಧಾಳಿಯಿಂದ 100 ಮಂದಿ ಕೊಲ್ಲಲ್ಪಟ್ಟು ಸರಕಾರದ ಬೋಂಬು ತಯಾರಿಸುವ ಕಾರ್ಖಾನೆಯು ನಾಶವಾಗಿದೆಯೆಂದು ಬಂಡಾಯಗಾರರ ಕಡೆಯ ಸುದ್ದಿ. ಸ್ಪೈನಿಶ್ ಸರಕಾರವು ಜನರು ಚಿನ್ನವನ್ನಾಗಲಿ ಬೆಳ್ಳಿಯನ್ನಾಗಲಿ ಹೊರಗೆ ಕಳುಹಿಸದೆ ಸರಕಾರಕ್ಕೊಪ್ಪಿಸಬೇಕೆಂದು ಆಜ್ಞೆಯಿತ್ತಿರುವರು.

ಚಕ್ರ ಬಂಧ ಸ್ಪರ್ಧೆ
ಸಂಖ್ಯೆ ೧೮ರ ಉತ್ತರ

ಸ	ಮ	ರ				ಸ	ವ	ಮ
ದ	ರ						ಧು	ಮ
ನ		ಸಿ	✻	ಧ	✻	ವ		ತಿ
		✻	ಜ	ನ	ನ	✻		
		ಜಾ	ತ	✻	ಕು	ಲ		
		✻	ನ	ಕು	ಲ	✻		
ಉ		ನ	✻	ಕ	✻	ಬ		ಚ
ರ	ಜಾ						ಚಾ	ರ
ಗ	ಗ	ನ				ಅ	ಗ	ಮ

ಉತ್ತರ ಕೊಟ್ಟವರು:— (1) ತೋನ್ಸೆ ನಂದ್ಯಪ್ಪ ಹೆಗ್ಡೆ, ಕೆಂಜೂರು. (2) ಆರ್. ಬಿ. ಕಳವಾರ್, ಮಂಗಳೂರು. (3) ಯು ಎ. ರಾಮರಾವ್, ಉಡುಪಿ. (4) 'ಜಾಜಿಮಲ್ಲಿಗೆ', ಕಾಪು. (5) ಎಂ. ಉಪೇಂದ್ರ ಶೇಟ್, ಮಂಗಳೂರು. (6) ಎಚ್. ಮಂಜಪ್ಪ ಅಡ್ಯಂತಾಯ, ಮಂಗಳೂರು. (7) ಪಿ. ಭಾರತೀಬಾಯಿ, ಉಡುಪಿ. (8) ಸೇಸಪ್ಪ, ಜೆ. ಶ್ರೀಯಾನ್, ಬೊಂಬಾಯಿ. (9) ಲೋಕಯ, ಬಿ. ಸಾಲಿಯಾನ್, ಬೊಂಬಾಯಿ. (10) ರಾಮ, ಕೆ. ಸುವರ್ಣ, ಬೊಂಬಾಯಿ. (11) ಚಂದು, ಬಿ ಬಿ. ಕೋಟೆಂಕಾರ್, ಬೊಂಬಾಯಿ. (12) ತಬುರ, ಟಿ. ಕೊಟೆಂಕಾರ್, ಬೊಂಬಾಯಿ (13) ಎಚ್. ಸುಬ್ರಾಯ ಪೈ, ಉಡುಪಿ. (14) ಎಚ್. ಶಿವರಾಮ ಶಾಸ್ತ್ರಿ, ಸಾಲಿಗ್ರಾಮ (15) ವೈ. ಉಮೇಶರಾವ್, ಮಂಗಳೂರು. (16) ಬೇಕಲ್ ಕೃಷ್ಣಯ್ಯ, ಉಡುಪಿ. (17) ಬಿ. ಮುತ್ತ, ಮದ್ರಾಸ್. (18) ಎಸ್. ಚರ್ಡಪ್ಪ ಹೆಗ್ಡೆ, ಶಿರಿಯಾರ. (19) ಎಸ್. ಶೇಷಗಿರಿ ರಾವ್, ಪಾನಂಜೆ. (20) ಎಮ್. ವಿಟ್ಠಲ ಶೆಣೈ, ಸೂಡ. (21) ಎಸ್. ದೇಜಪ್ಪ, ಬಿ. ಕೋಟಿಯಾನ್, ಬೊಂಬಾಯಿ (22) ಯು. ದೇಜಪ್ಪ. (23) ಮಾಧವ ಹೆಬ್ಬಾರ್, ಬಿಜೂರು. (24) 'ಯುವಕ' ವಿವೇಕೋದಯ ಯುವಕ ಸಂಘ, ಮಂಗಳೂರು. (25) ಪಿ. ನಾರಾಯಣ ಶೆಟ್ಟಿ, ಕಿಲಿಂಜೆ (26) ಪಂದುಬೆಟ್ಟು ಲಕ್ಷ್ಮಣ ಶೆಟ್ಟಿ, ಉಡುಪಿ. (27) ಹೊನಕೊಪ್ಲ ಪಕೀರ, ಸಿ. ಕರ್ಕೇರ, ಬೊಂಬಾಯಿ. (28) ಬಿ ಗಣಪಯ ಉಡುಪ, ಉಡುಪಿ. (29) ಪಿ ದೇಜಪ್ಪ ಶೆಟ್ಟಿ, ಪಾಂಗಾಳ. (30) ಕೆ. ಟಿ ಕರ್ಕೇರ, ಬೊಂಬಾಯಿ. (31) ಶೀನ, ಎಮ್. ದೇವಡಿಗ, ಬೊಂಬಾಯಿ. (32) ಅಂತೋನಿ ಮೆನೇಜಸ್, ಬೊಂಬಾಯಿ (33) ಸಂಪಾಜೆ, ಮುಂಡಪ್ಪ ರೈ, ದೇಶಕೋಡಿಕಾರ್. (34) ಎಂ. ಎಸ್. ಚಿನ್ನಪ್ಪ ಗೌಡ, ಕೊಲಮೊಗರು. ಇವರೊಳಗೆ ಸೋಡ್ತಿ ಹಾಕಲಾಗಿ ಬೆಳ್ಳಿಯ ಪದಕವು ನಂಬ್ರ 16ನೇ ಶ್ರೀ. ಬೇಕಲ್ ಕೃಷ್ಣಯ್ಯ, ಉಡುಪಿ ಇವರಿಗೆ ಸಿಕ್ಕಿರುತ್ತದೆ.

☞ ಬರುವ ವಾರದ ಹೊಸ ಒಗಟನ್ನು ನಿರೀಕ್ಷಿಸಿರಿ.

ನಮ್ಮ ವಾಚಕರಲ್ಲಿ ವಿನಂತಿ.

ಈ ಸಂಚಿಕೆಯೊಂದಿಗೆ ನವಯುಗದ ೧೬ನೆಯ ಸಂಪುಟದ ೬ ಸಂಚಿಕೆಗಳು ವಾಚಕರ ಕೈಸೇರಿದಂತಾಯಿತು. 'ನವಯುಗ'ವು ಅಧಿಕಾಧಿಕವಾಗಿ ವಾಚಕರ ಸೇವೆ ಮಾಡಬೇಕಾದರೆ ವಾಚಕರಿಂದ ಅದಕ್ಕೆ ತಕ್ಕ ಪ್ರೋತ್ಸಾಹವು ದೊರೆಯಬೇಕು ಅಂತೆಯೇ ನಮ್ಮ ವಾಚಕರೆಲ್ಲರೂ ನವಯುಗಕ್ಕೆ ಚಂದಾದಾರರಾಗಿ ಸೇರಿಯೂ, ಇತರರನ್ನು ಸೇರಿಸಿಯೂ, ಚಂದಾದಾರರು ತಮ್ಮ ಚಂದಾಹಣವನ್ನು ಮುಂದಾಗಿ ಕಳುಹಿಸಿಯೂ ಪ್ರೋತ್ಸಾಹಿಸಬೇಕಾಗಿ ವಿನಂತಿ. ಚಂದಾದಾರರು ನಮ್ಮೊಡನೆ ಪತ್ರವ್ಯವಹಾರ ಮಾಡುವಾಗ ನಂಬ್ರ ಮತ್ತು ಸಂಪೂರ್ಣ ವಿಳಾಸವನ್ನು ಕೊಡಬೇಕಾಗಿ ವಿನಂತಿ.

ನಾವು ವಾರವಾರವೂ ನವಯುಗದ ಪ್ರತಿಗಳನ್ನು ಹೆಚ್ಚಾಗಿ ತೆಗೆಯುತ್ತಾ ಬಂದಿದ್ದೆವು. ಆದರೂ ಕಳೆದ ವಾರ ಸಂಚಿಕೆಗಳು ಸಾಕಾಗದೆ ಬಿಡಿಪ್ರತಿಗಳನ್ನಪೇಕ್ಷಿಸಿದ ಹಲವರನ್ನು ನಿರಾಶೆಗೊಳಿಸಬೇಕಾಗಿ ಬಂತೆಂದು ವಿಷಾದಿಸುತ್ತೇವೆ. ಈ ವಾರದಿಂದ ಪ್ರತಿಗಳನ್ನು ಮತ್ತೂ ಹೆಚ್ಚಿಸಿರುವೆವು.

ನವಯುಗವನ್ನು ಅಭಿನಂದಿಸಿ ಹಿತಚಿಂತಕರಿಂದ ದಿನನಿತ್ಯವೆಂಬಂತೆ ಬರುತ್ತಿರುವ ನೂರಾರು ಪತ್ರಗಳಿಗೆ ಬೇರೆಬೇರೆಯಾಗಿ ಉತ್ತರಗಳನ್ನು ಕಳುಹಿಸಲು ಅನಾನುಕೂಲವಾದುದರಿಂದ ಅವರೆಲ್ಲರನ್ನೂ ಈ ಮೂಲಕ ಅಭಿನಂದಿಸುತ್ತೇವೆ.

ಸಂ ನ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ವಸ್ತ್ರ ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾದಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಗಣಪತಿ ವಿಲಾಸ

ಕೋರ್ಟ್ ರಸ್ತೆ, ಉಡುಪಿ.

ಭೋಜನ—ಉಪಹಾರ—ವಿಶ್ರಾಂತಿ ಇವುಗಳಿಗೆ ಆದರ್ಶ ಗೃಹ.
ಆರೋಗ್ಯವೂ, ಹಿತಕರವೂ ಆದ ಭೋಜನ!
ಸ್ನಾನ-ವಸತಿಗಳಿಗೆ ಯೋಗ್ಯ ಸೌಕರ್ಯ!!
ಟೀಪಾರ್ಟಿ ಇತ್ಯಾದಿಗಳಿಗೆ ಉತ್ಕೃಷ್ಟ ಸಿದ್ಧತೆಗಳು!!!

ಮುನ್ಸಿಫ್ ಕೋರ್ಟು, ಕಚೇರಿ ಮತ್ತು ಶಾಲೆಗಳಿಗೆ ಸಮೀಪದ ಕೇಂದ್ರದಲ್ಲಿದ್ದು ಸರ್ವರಿಗೂ ಅತ್ಯಂತ ಅನುಕೂಲವಾಗಿರುತ್ತದೆ. ವಿದ್ಯಾರ್ಥಿಗಳಿಗೆ ರಿಯಾಯತಿ ದರದಲ್ಲಿ ಉತ್ತಮ ತರದ ಏರ್ಪಾಡು ಮಾಡಲಾಗುವುದು.

ಕೆ. ಮಂಜುನಾಥಯ್ಯ,
ಪ್ರೊಪ್ರೈಟರ್.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತವ್ಯಾದಿಗೆ ಕೊಡುವುದಲ್ಲದೆ, ಉಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರೈಕ್ಲೀನಿಂಗ್ ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: ಯಮ್. ಯಸ್. ಭಟ್ಕಳ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore.*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ ಸ್ಟ್ರಾಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು

ವಿದ್ಯಾ ಸಂಸ್ಥೆಗೆ ಸಹಾಯಮಾಡಿರಿ! ಸತ್ಕಾರ್ಯಕ್ಕೆ ಪ್ರೋತ್ಸಾಹ ಕೊಡಿಸಿರಿ!

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಯೋಗ್ಯ ಕಮ್ಮಿಟಿಯವರಿಂದ ನಡಿಸಲ್ಪಡುವುದು.

ಎ. ಬಿ. ಶೆಟ್ಟಿ, ಎಸ್ಕ್ವೈಯರ್, M.L.C. ಪ್ರೆಸಿಡೆಂಟ್.
ಡಾ। ಎಂ. ಆರ್. ಕಾಮತ್, L.M.P. ವೈಸ್ ಪ್ರೆಸಿಡೆಂಟ್.

ರೂ. 20,000/-ವು 1,789 ಇನಾಮುಗಳಾಗಿ ಹಂಚಲ್ಪಡುವುದು.
ಪ್ರಥಮ ಬಹುಮಾನ ರೂ. **5,000/-** ದ್ವಿತೀಯ ಬಹುಮಾನ ರೂ. **2,000/-**
ತೃತೀಯ ಬಹುಮಾನ ರೂ. **1,000/-**

ಲಿಸ್ಟು ಅಚ್ಚೈರು ತಾರೀಕು 25—1—'37] [ಸೋಡ್ತಿ ತೆಗೆಯುವ ತಾರೀಕು 31—1—'37

ಟಿಕೇಟು ಒಂದರ ಕ್ರಯ ಆಣೆ ನಾಲ್ಕು ಮಾತ್ರ.

20 ಟಿಕೇಟುಗಳಿರುವ ಪುಸ್ತಕಕ್ಕೆ ರೂ. 5 ಮಾತ್ರ. ಟಿಕೇಟು ಪುಸ್ತಕಗಳು ನಗದಿಯಾಗಿ ವಿಕ್ರಯಿಸಲ್ಪಡುವವು. ಟಿಕೇಟು ಮಾರಿ ರೂ. 250/-ಕ್ಕೂ ಹೆಚ್ಚು ಸಂಗ್ರಹಿಸಿಕೊಟ್ಟವರೊಳಗೆ ರೂ. 200/-ರ ಒಂದು, ರೂ. 100/-ರ ಎರಡು ಮತ್ತು ರೂ. 50/-ರ 84 ಇನಾಮುಗಳು ಹಂಚಲ್ಪಡುವವು.

ಟಿಕೇಟು ಮಾರಿ ರೂ. 5000 ಒದಗಿಸಿಕೊಟ್ಟವರು ಹೈಸ್ಕೂಲಿನ ಪೋಷಕರೆಂದು ಪರಿಗಣಿಸಲ್ಪಟ್ಟು ಅವರ ತೈಲಚಿತ್ರವು ಇಡೋಣಾಗುವುದು. ಅಂತೆಯೇ ರೂ. 2000 ಮಾಡಿಕೊಟ್ಟವರು ಆಶ್ರಯದಾತರಾಗಿ ಸದ್ರಿಯವರ ಭಾವಚಿತ್ರವು ಇಡಲ್ಪಡುವುದು. ಮತ್ತು ರೂ. 1000 ಮಾಡಿಕೊಟ್ಟವರ ಹೆಸರು ಚಂದ್ರಕಾಂತ ಶಿಲೆಯಲ್ಲಿ ಕೆತ್ತಲ್ಪಟ್ಟು ಗೋಡೆಯಲ್ಲಿ ಇಡಲ್ಪಡುವುದು.

ಟಿಕೇಟು ವಿಕ್ರಿತದಿಂದ ರೂ. 25/. ಮತ್ತು ಹೆಚ್ಚು ಮಾಡಿಕೊಟ್ಟವರಿಗೆ ಶೇಕಡಾ 6¼ರಂತೆ ಕಮಿಷನ್ ಕೊಡಲಾಗುವುದು.

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ—

ಮೂಲ್ಕಿ, ದ. ಕನ್ನಡ
3—9—1936
ಸೆಕ್ರೆಟರಿ, ದಿ ಮೂಲ್ಕಿ ಗ್ರೇಂಡ್ ರೇಫ್‌ಲ್
(ಹೈಸ್ಕೂಲ್ ಸಹಾಯಾರ್ಥ)

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರವಾಗುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನೈದನೆಯ ಸಂಪುಟವು 1936ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ-ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟನೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

The Commonwealth Assurance Co., Ltd.

(ESTD. 1923)
Chairman, Mr. N. C. Kelkar, Ex-M. L. A.

HEAD OFFICE
POONA CITY.

CHIEF AGENCY OFFICE
HAMPANKATTA,
MANGALORE.

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೋಲಿಸಿದಾರರಿಗೆ
ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಯಿರಿ—

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ಮೊನ್ನೆ ತಾನೇ ಮಂಗಳೂರಿನ
ಜಗದಂಬಾ ನಾಟಕ ಸಂಘದವರಿಂದ
ಅತ್ಯಂತ ಜಯಶೀಲವಾಗಿ
ಅಭಿನಯಿಸಲ್ಪಟ್ಟ ಅತ್ಯುತ್ತಮ
—·— ನಾಟಕ —·—

ವ್ಯಭಿಚಾರಿಣಿ ಯಾರು ?

LAXMI BRAND COFFEE POWDER.

Pure & Superior quality, will last long without loosing its flavour and colour

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris (Hills)

WANTED AGENTS in Southern India (samples available)

ಉತ್ಕೃಷ್ಟ ಕಾಪಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಪಿಹುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

FOR SALE

Fire Resistance Steel
Iron Safes.
latest pattern.

ನಮ್ಮಲ್ಲಿ ಕಬ್ಬಿಣದ ಟ್ರೆಜರಿಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ, ತಿಂಗಳುಗಳ ಕಂತುಗಳಿಂದಲೂ ಮಾರುವ ಏರ್ಪಾಡಿದೆ,



For Prices & Particulars
Apply to—

K. K. Shanbhag & Sons
Court Road, UDIPI S K

Sold also by Instalments

106 ವಾಚಕರ ಅಪೇಕ್ಷೆಯಂತೆ ಪ್ರಕಟಿಸಿದ

—·— ಈ ನಾಟಕ ಪುಸ್ತಕದಲ್ಲಿ —·—

ಅಂಧ ಸಮಾಜದ ನಿಜರೂಪವನ್ನು
ನ್ಯಾಯವು ಅನ್ಯಾಯವನ್ನು ಗೆದ್ದು ಬರುವುದನ್ನು
ಅಧಿಕಾರ, ಧನಲಾಲಸೆಯಲ್ಲ—
ಪವಿತ್ರ ಪ್ರೇಮವೊಂದೇ ಶಾಂತಿದಾಯಕವುದೆಂಬುದನ್ನು
ಕಾಣಬಹುದು.

ವ್ಯಭಿಚಾರಿಣಿ ಯಾರು

ಸಾಮಾಜಿಕ ಕ್ರಾಂತಿಕಾರಕ ನಾಟಕಗಳನ್ನು ಬರೆಯುವುದರಲ್ಲಿ ಹೆಸರುಗೊಂಡ
ಶ್ರೀ. ಕೆ. ಕಾಂತಪ್ಪ ಶೆಟ್ಟರೇ
ಈ ಗ್ರಂಥದ ಕರ್ತರು

ಪುಸ್ತಕವು 100 ಪುಟಗಳಿಗೂ ಮಿಕ್ಕಿದೆ ಹಲವು ಚಿತ್ರಗಳಿಂದ ನಯನಮನೋಹರವಾಗಿದೆ. ಇಷ್ಟಿದ್ದರೂ ಬೆಲೆ ಕೇವಲ ೦—೮—೦
ಟಪ್ಪಾಲು ದ್ವಾರ ೦—೧೦—೦
ಪ್ರತಿಗಳಿಗೂ ಹೆಚ್ಚಿನ ವಿವರಕ್ಕೂ ಬರೆಯಿರಿ.

ಕಿರಿಯರ ಪ್ರಪಂಚ, ಉಡುಪಿ.

Sole Agents—Supply Agency Ltd UDIPI

IF YOU WANT GRAND WALL POSTERS COME TO US.

THULUNAD PRESS UDIPI.

HEAD OFFICE VIEW

ಅಕ್ಟೋಬರ ತಾ 2

ಮಹಾತ್ಮಜಿಯವರ ಪಾವನ ಜನ್ಮದಿನ
2 10-1869

ನವಂಬರ ತಾ 2

ಶ್ರೀ ಭಾರತ ವಸ್ತು ಮಂದಿರದ ಸ್ಥಾಪನಾದಿನ
2 11 1921

ಅಕ್ಟೋಬರ ತಾ. 2

ಸಪ್ಲೈ ಏಜನ್ಸಿ ಲಿಮಿಟೆಡ್, ಇದರ ಸ್ಥಾಪನಾದಿನ
2-10 1933

ಇದೇ 2-10-'36—— ರಿಂದ—— ——2-11-'36ರ ವರೆಗೆ

ಮುವ್ವತ್ತೆರಡು ದಿನಗಳ ಸದವಸರದಲ್ಲಿ ≡ ತಿರುಪೂರು ಖಾದಿಯು ≡ ತಿರುಪೂರ ದರದಲ್ಲಿ ಮಾರಲ್ಪಡುವುದು!

5 ರೂಪಾಯಿಗಳಿಗಿಂತ ಹೆಚ್ಚಿನ ಇತರ ಸಾಮಾನುಗಳನ್ನು ಕೊಳ್ಳುವವರಿಗೆ ಸೇಕಡಾ 6¼ ರಂತೆ ಕಮಿಶನ್.

Grand Jayanthi Sales for 32 days.

ಶ್ರೀ ಭಾರತ ವಸ್ತು ಮಂದಿರ, ಉಡುಪಿ

Printed by P VENKATARAMANACHARYA for & on behalf of SUPPLY AGENCY LTD at THULUNAD PRESS UDIPI and Published by K H SHETTY

Registered No. M. 3618

'ನವಯುಗ'
ದಲ್ಲಿ
ಪ್ರಕಟಣೆಯ
ದರಗಳು
ಒಂದು ಬಾರಿಗೆ
ಒಂದು ಚಚ್ಚೌಕ ಇಂಚಿಗೆ
0—4—0
ಕಂಟ್ರಾಕ್ಟ್ ದರಗಳಿಗೆ
ಬರೆಯಿರಿ.

ನವಯುಗ

ವ್ಯಭಿಚಾರಿಣಿ
ಯಾರು ?
ಸಚಿತ್ರವಾಗಿ
ಪ್ರಕಟವಾಗಿದೆ.
ಬೆಲೆ ೦—೬—೦.
ಕಿರಿಯರ ಪ್ರಪಂಚ,
ಉಡುಪಿ.

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
[illegible]ದ ನಾಡೊಳು ಮೊಳಗುತಿಪ ತುಮುಲನಾದ;

ವಾರಪತ್ರಿಕೆ

ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ, ಅಕ್ಟೋಬರ ೧೫, ೧೯೩೬ [ಸಂಚಿಕೆ ೭

The Canara Industrial and Banking Syndicate, Limited.

(INCORPORATED IN BRITISH INDIA)

ESTD.] **Head Office: "MUKUNDANIVAS", UDIPI.** [1925.

BRANCHES:

1 Mangalore
2 Hubli
3 Belgaum
4 Bellary
5 Adoni
6 Hospet
7 Bangalore City
8 Gadag
9 Cannanore
10 Udipi
11 Kanhangad
12 Payyanur
13 Coondapoor
14 Brahmavar
15 Hungarcutta
16 Honavar
17 Kumta
18 Karwar
19 Ankola
20 Sirsi
21 Bhatkal
22 Karkala
23 Uppinangadi.

ANNOUNCEMENT

WE HAVE GREAT PLEASURE IN ANNOUNCING THAT TWO BRANCHES OF THE SYNDICATE, ONE AT KASARGODE. (S. KANARA DT.) and the other at **Sagar** (Shimoga Dt) will be opened in October '36 on the 24th and the 29th respectively, where all kinds of banking business will be transacted. The public are requested to tke adavantage of the numerous facilities offered by us.

Paid up Capital: above Rs. 2 lakhs, Deposits: above Rs. 19 lakhs.
Total resources: above Rs. 29 lakhs.

"MUKUNDANIVAS," UDIPI
30—9—1936.

P. A. PAI, Brothers,
Managing Agent.

ದ್ವಿತೀಯ ಸಂಸ್ಕರಣ !

ಕಾವ್ಯಸಾಮ್ರಾಜ್ಯ.

೪೮ ಆಧುನಿಕ ಕವನಗಳ ಸಂಗ್ರಹ.

ಬೆಲೆ ೦—೧೨—೦.

"ಆಧುನಿಕ ಕವಿಗಳ ಇಂತಹ ಉತ್ತಮ ಸಂಗ್ರಹವನ್ನು ಈ ವರೆಗೆ ಯಾರೂ ಒದಗಿಸಿಕೊಟ್ಟಿರುವುದಿಲ್ಲ. ಇದಕ್ಕಾಗಿ ಕನ್ನಡಿಗರು 'ಕಿರಿಯರ ಪ್ರಪಂಚ'ಕ್ಕೆ ಆಭಾರ ಮನ್ನಿಸಬೇಕು"

—ಸಂ. ಕರ್ನಾಟಕ.

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖ ರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿರಿ.

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ.

ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು."

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸುಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟು ಮತ್ತು ಮೇನೇಜರ್.

ಜಯಕರ್ನಾಟಕದ ಚಂದಾದಾರರಿಗೆ

ಈ ವರ್ಷವು ಅತ್ಯಂತ ಲಾಭಕರ!

ಎರಡು ತಿಂಗಳಿಗೊಮ್ಮೆ ತ್ರಿವರ್ಣ ಚಿತ್ರವನ್ನು ಕೊಡಲಾಗುವುದು.

ಪ್ರತಿ ಸಂಚಿಕೆಯೂ ನಯನಮನೋಹರ ಚಿತ್ರಗಳಿಂದ ತುಂಬಿರುವುದು.

ಹೊಸದಾಗಿ ಚಂದಾದಾರರಾಗುವವರು—ಯಾವ ತಿಂಗಳಲ್ಲಿಯೆ ಆಗಲಿ ಹಿಂದಿನ ಸಂಚಿಕೆಗಳನ್ನೆಲ್ಲ ತರಿಸಿಕೊಂಡು—ವರ್ಷಾರಂಭದಿಂದಲೇ ಆಗಬೇಕು. ಹಾಗು ಈಗಿದ್ದ ಚಂದಾದಾರರಲ್ಲಿ ವರ್ಷ ಮಧ್ಯದಲಿ ಅವಧಿ ಮುಗಿಯುವವರು ಮುಂದೆಯೂ ಚಂದಾದಾರರಾಗಿ ಉಳಿಯಬೇಕು ಇಲ್ಲದಿದ್ದರೆ ಅಪೂರ್ವವಾದ 'ರಾಜರಹಸ್ಯ' ಕಾದಂಬರಿಯು ಅಪೂರ್ಣವಾಗಿ ಅವರಿಗೆ ಅಸಮಾಧಾನವನ್ನುಂಟುಮಾಡೀತು.

ವಾರ್ಷಿಕ ಚಂದಾ ರೂ. ೫—೮—೦

ಜಾಹೀರಾತಿನ ದರಗಳಿಗೂ ಇತರ ಮಾಹಿತಿಗಳಿಗೂ ಬರೆಯಿರಿ.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು ಇನಾಮುಗಳು.

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀಲಕ್ಷ್ಮಿ 1, ವಿಶ್ವೇಶ್ವರ ಪಟ 1, ಈ ೩ ಸಾಮಾನುಗಳು 1 ಅಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾಪ್ಪು, ಪೇಟಾ, ಕೋಟಿಂಗ್, ಶಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಜೂಲ್ಸ್ ಚಾಳ, ಧಾವಳಿ, ನಾಮಾರಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪದಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. ೨೦ರಿಂದ ೬೬. ಪದಲು ಸಾದಾ 16 ಮೊಳದ ಶೀರೆ 1ಕ್ಕೆ ರೂ. 18ರಿಂದ ರೂ. 35ರ ವರೆಗೆ. ಅರೆ ಕಡಮೆ 16 ಮೊಳ ಕ್ರೇಪ್ ಅಂಚು ರೂ. 10½ ಯಿಂದ ರೂ. 16. ಖಣ 1ಕ್ಕೆ ರೂ. 1¼ ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಸ್, ಕಾಶೀ

THE

PANGAL NAYAK BANK

LIMITED.

ESTABLISHED 1920.

Head Office: UDIPI] **[Branch: MANGALORE.**

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4½% on 1 or 2 years and at 5% on 3 or 4 years deposits.

Every other description of up-to-date Banking business is also undertaken.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು

ಗುಣ ಬಾರದಿದ್ದರೆ | **ಸ್ತ್ರೀಧರ್ಮ ಸಂಜೀವಿನೀ ಚೂರ್ಣ** (ರಿಜಿಸ್ಟರ್ಡ) | **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ. ಎ. ಎಮ್ ಇನ್ಸ್ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತ. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩ ಟ. ಖ. ಆಣೆ, ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ. ಪಿ. ಖರ್ಚ ಆಣೆ ೮.

ಬಹಳಸಾರೆ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಮು॥ ಕೇಳನಾ ಮಾಹಿಮ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ಮದ್ರಾಸಿಗೆ ಪಂಡಿತ ಜವಾಹರಲಾಲರ ಸಂದರ್ಶನ

ಜನಸ್ತೋಮದ ಪ್ರಚಂಡೋತ್ಸಾಹ! ಎಲ್ಲೆಲ್ಲಿಯೂ ಅತ್ಯುತ್ಸಾಹಪರಸ್ವಾಗತ

ಇಂದೀಗ ದೇಶದ ಅನಭಿಷಿಕ್ತ ರಾಜರೆಂದರೆ ಪಂಡಿತ ಜವಾಹರಲಾಲರು. ಅವರು ಜನತೆಯ ಹೃದಯವನ್ನೇ ಸೂರೆಮಾಡಿ ಬಿಟ್ಟಿರುವರು, ತರುಣ-ಹೃದಯ-ಅಧಿದೇವತೆಯಂತಿರುವರು! ಅವರು ಇದೇ ತಾ 5ರಲ್ಲು ಮದ್ರಾಸ್ ಪಟ್ಟಣಕ್ಕೆ ಚಿತ್ತೈಸಿ, 4 ದಿವಸ ಪಟ್ಟಣದಲ್ಲೆಲ್ಲಾ ಬೇರೆ ಬೇರೆ ಕಡೆಗಳಲ್ಲಿ ಭಾಷಣವಿತ್ತು ಅತ್ಯಪೂರ್ವ ಸ್ವಾಗತ ಪಡೆದಿರುವರು. ಜನತೆಯ ಉತ್ಸಾಹವು ಮೇರೆ ಮೀರಿದ್ದಿತು. ಅದಕ್ಕನುಸಾರವಾಗಿ ಪಂಡಿತರೂ ಪ್ರಫುಲ್ಲಚಿತ್ತರಾಗಿದ್ದು ಜನತೆಯ ಮನಸ್ಸನ್ನೊಲಿಸಿದರು. ವಿದ್ಯಾರ್ಥಿಗಳು, ಸ್ತ್ರೀಯರು, ಮಜೂರರು, ವ್ಯಾಪಾರಿಗಳು, ಹರಿಜನರು, ಅವರಿವರೆನ್ನದೆ ಬಹುತೇಕ ಎಲ್ಲವರೂ ಅವರಿಗೆ ಸಂಭ್ರಮದ ಸ್ವಾಗತವೀಯಲು ಮೇಲಾಟ ನಡೆಸುತ್ತಿದ್ದರು. ವಿದ್ಯಾರ್ಥಿಗಳು ಸಮತಾವಾದತತ್ವಪ್ರಚಾರಕ್ಕಾಗಿ ಪಂಡಿತರಿಗೆ ರೂ. 2,000ವನ್ನರ ನಿಧಿಯನ್ನೊಪ್ಪಿಸಿದರು. ತಿಲಕಘಾಟಿನ ಸಾರ್ವಜನಿಕಸಭೆಯಲ್ಲಿ ನೆರೆದ ಜನಸ್ತೋಮವು 1 ಲಕ್ಷಕ್ಕೂ ಮೀರಿದ್ದಿತು. 2 ಘಂಟೆಗಳ ವರೆಗೆ ಪಂಡಿತರು ಒಂದೇ ಪ್ರಕಾರವಾದ ಅತ್ಯುಜ್ವಲಭಾಷಣವಿತ್ತು ಜನರ ಮನಸ್ಸನ್ನು ಸೂರೆಮಾಡಿಬಿಟ್ಟರು. ಅವರು 4 ದಿವಸಗಳಲ್ಲಿ ಅನೇಕ ಕಡೆ ಬೇರೆ ಬೇರೆ ಮನೋವೃತ್ತಿಯ ಜನತೆಗೆ ಬೇಕು ಬೇಕಾದ ರೀತಿಯಲ್ಲಿ ಹಲವು ಭಾಷಣಗಳನ್ನಿತ್ತಿರುವರು. ಪ್ರತಿ ಅರ್ಧ ಘಂಟೆಗೊಂದೆಂಬಂತೆ ಸಭೆ ಭಾಷಣಗಳಿದ್ದವು. ಅವರ ಉತ್ಸಾಹ, ಯಥಾರ್ಥತೆ, ದೃಢನಿರ್ಧಾರ, ನಿರ್ವಂಚಕ ಸ್ವಭಾವಾದಿ ಗುಣಗಳು ಜನತೆಯ ಮೇಲೆ ಬಹಳ ಪರಿಣಾಮವನ್ನುಂಟುಮಾಡಿರುವವು. ಮೊದಲಾಗಿ ಸ್ವಾತಂತ್ರ್ಯಸಾಧನೆ, ಅದಕ್ಕಾಗಿ ಎಲ್ಲವರೂ ಒಗ್ಗಟ್ಟಿನಿಂದ ಕೆಲಸಮಾಡುವ ಮತ್ತು ಅದನ್ನೇ ಗುರಿಯಾಗಿಟ್ಟುಕೊಂಡು ಕೆಲಸಮಾಡಿಕೊಂಡು ಬಂದಿರುವ ಕಾಂಗ್ರೆಸಿಗೆ ಸಹಾಯವೀಯುವ ಆವಶ್ಯಕತೆ ಮತ್ತು ಈಗ ಭೀಷಣವಾಗಿ ಹಬ್ಬಿರುವ ದಾರಿದ್ರ್ಯ, ನಿರುದ್ಯೋಗ ಮತ್ತು ಹಸಿವನ್ನು ನಿವಾರಿಸಲು ಈಗಣ ಸಾಮಾಜಿಕ ಪದ್ಧತಿಯನ್ನೇ ಸಂಪೂರ್ಣ ಬದಲಾಯಿಸಿ ಸಮತಾವಾದತತ್ವಗಳನ್ನು ನಮ್ಮ ದೇಶದ ಸ್ಥಿತಿಗತಿಗನುಗುಣವಾಗಿ ಅನುಸರಿಸಬೇಕೆಂಬ ಹೊಸ ಬೋಧೆಯೇ ಪಂಡಿತ ಜವಾಹರಲಾಲರ ಭಾಷಣಗಳ ಪಲ್ಲವಿಯಾಗಿದ್ದಿತು.

ಪಂಡಿತರು ಜನತೆಯ ತಾಳಕ್ಕೆ ತಕ್ಕ ಹೆಜ್ಜೆ ಹಾಕುವವರಲ್ಲ. ತನಗೆ ಮನಸಿಗೆ ತೋರಿದುದನ್ನು ನಿರ್ದಾಕ್ಷಿಣ್ಯವಾಗಿ ಹೇಳಿಬಿಡುವವರು. ಯಾವ ತೆರದ ಗೌರವ ಪ್ರತಿಷ್ಠೆಯಿಲ್ಲದ ಸರಳ ವರ್ತನೆಯವರು. ಡೌಲು ಆಡಂಬರಗಳ ದ್ವೇಷಕರೆಂಬುದನ್ನು ಮದ್ರಾಸಿನಲ್ಲಿ 4 ದಿವಸಗಳ ಅವರ ಕಾರ್ಯಕಲಾಪಗಳೇ ವ್ಯಕ್ತಪಡಿಸಿರುವವು. ತಾನು ಕಾಂಗ್ರೆಸ್ ಪ್ರೆಸಿಡೆಂಟ್, ಆಮಂತ್ರಿತ ಅತಿಥಿ ಎಂಬುದನ್ನೆಲ್ಲಾ ಅವರು ಒಂದಿಷ್ಟು ಗಣಿಸದೆ ಜನತೆಯೊಡನ ಅವರಲ್ಲೊಬ್ಬನೆಂಬಂತೆ ಸರ್ವಸಾಮಾನ್ಯವಾಗಿಯೇ ನಡೆದು ಜನರನ್ನೊಲಿಸಿಬಿಟ್ಟಿರುವರು

ಸ್ವಾಭಾವಿಕ ವರ್ತನೆಯವರು

ಸ್ವಯಂಸೇವಕರು ದೊಡ್ಡ ದೊಡ್ಡ ಬೊಂಬುಗಳನ್ನು ಹಿಡಕೊಂಡು ಬೊಬ್ಬೆ ಹಾಕಿ ಜನರನ್ನು ಚೆದರಿಸಿ ಗಲಾಟೆಯೆಬ್ಬಿಸುತ್ತಿದ್ದುದು ಪಂಡಿತರಿಗೆ ಅಸಹನೀಯವಾಯಿತು. ಅವರು "ಈ ಬೊಗ್ಗೆಗಳೇಕೆ?' ಎಂದು ಕೇಳಿದಾಗ ಸ್ವಯಂಸೇವಕರು "ನಿಮ್ಮ ರಕ್ಷಣೆಗೆ' ಎಂದರು "ನನ್ನ ರಕ್ಷಣೆಗೆ!' ಎಂದು ಜವಾಹರಲಾಲರು ನಸುನಕ್ಕು ತಾನೇ ಜನರ ನಡುವೆ ನುಗ್ಗಿ ನುಸಿದು ದಾರಿ ಮಾಡಿದರು. ಗಲಭೆಯಿಲ್ಲದೆ ಶಿಸ್ತಿನಿಂದ ಕೆಲಸ ಮಾಡುವ ರೀತಿ ಹೇಗೆಂಬುದನ್ನು ಸ್ವಯಂಸೇವಕರ ಮನಗಾಣಿಸಿದರು. ಮರವಣಿಗೆ ಹೋಗುತ್ತಿದ್ದಾಗ, ಪೋಲೀಸ್ ಅಧಿಕಾರಿಯೊಬ್ಬರು ಜನತೆಯ ಕುರಿತು ಒರಟುತನ ತೋರಿಸಿದಾಗ ಪಂಡಿತರು ಕೂಡಲೆ ಮೋಟರ್ ಕಾರಿನಿಂದ ಕೆಳಹಾರಿ ಆತನನ್ನು ಗದರಿಸಿದರು. ಸಭೆಯಲ್ಲಿ ಗಲಾಟೆಯಾಯಿತೆಂದರೆ ತಾವೇ ಜನರ ನಡುವಿಗೆ ಧಾವಿಸಿ ವ್ಯವಸ್ಥೆಯನ್ನುಂಟುಮಾಡುವರು. ಪ್ರಾಯ 50ಕ್ಕೆ ಸಮೀಪಿಸಿದರೂ ನವಯೌವನದ ಉತ್ಸಾಹ, ಚಟುವಟಿಕೆ, ಸ್ವಾಭಾವಿಕತೆ, ಕಾರ್ಯಶಕ್ತಿ ಮತ್ತು ಚುರುಕುತನ.

ಆಡಂಬರ ವಿರೋಧಿ

ವಿಜೃಂಭಣೆಯ ಸ್ವಾಗತ, ಸ್ತುತಿ, ವಂದನೆ ಪೂಜೆಗಳಿಗೆಲ್ಲಾ ಮರುಳಾಗುವವರು ಇವರಲ್ಲ. ಎಂತಹ ಪ್ರಚಂಡಜನಸ್ತೋಮ, ಎಷ್ಟೊಂದು ಸಂಭ್ರಮದ ಸ್ವಾಗತವೆಂದು ಅವರ ಸತ್ಕಾರಕರು ಹೆಮ್ಮೆಗೊಂಡರೆ ಪಂಡಿತರು "ಇದಕ್ಕಿಂತಲೂ ದೊಡ್ಡ ಜನ ಸಮುದಾಯವನ್ನು ನಾನು ಕಂಡಿದ್ದೇನೆ, ಹೆಚ್ಚಿನ ಸಂಭ್ರಮದ ಸ್ವಾಗತವನ್ನೂ ನಡೆಸಿದ್ದೇನೆ' ಎಂದು ಹೆಮ್ಮೆಯನ್ನಳಿಸಿ ಬಿಡುವರು. ಸಂದರ್ಭಾನುಸಾರ ಕಾಂಗ್ರೆಸ್ ಪ್ರೆಸಿಡೆಂಟತನದ ಪ್ರತಿಷ್ಠೆ ಗೌರವಗಳನ್ನು ಚೆನ್ನಾಗಿ ಪಾಲಿಸಿ ಬಿಡುವರು. ಯಾವುದನ್ನೂ ಲೆಕ್ಕಿಸದೆ ಯಾರನ್ನೂ ಗಣ್ಯಮಾಡದೆ ಸ್ವತಂತ್ರನಾಗಿ ನಡೆಯುವರು.

ದೈನ್ಯತನದ ವಿರೋಧಿ

ಬಹುವಿನೋದಿ, ಬಹಳ ಆನಂದೋತ್ಸಾಹ, ಶಕ್ತಿ, ಉತ್ಸಾಹಗಳ ಪ್ರತಿಬಿಂಬವೇ ಇವರು. ತಾನು ಹೋದಲ್ಲೆಲ್ಲಾ ನವೀನ ವಾದೊಂದು ತೇಜಸ್ಸನ್ನು ಹರಡುವರು. ಎಂತಹವನ್ನಾದರೂ ತಾಳಿಕೊಳ್ಳಬಲ್ಲವರು. ಕ್ಷುದ್ರ ಸಂಕುಚಿತ ಬುದ್ಧಿಯಿಂದ ರಾಗದವರಿಗೆ. ಅವ್ಯವಸ್ಥೆ, ಅನಾಸ್ಥೆಯ ಬದ್ಧ ದ್ವೇಷಕರವರು. ಎಲ್ಲಕ್ಕಿಂತಲೂ ಹೆಚ್ಚಾಗಿ ಸ್ವಾತಂತ್ರ್ಯವನ್ನು ಗೌರವಿಸುವವರು. ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವೆವು. ಮತ್ತು ನಾವು ಸ್ವತಂತ್ರರಾಗಬೇಕಾದರೆ ಸ್ವತಂತ್ರಿಗಳಂತೆಯೇ ನಡೆಯಬೇಕು. ನಿಮ್ಮ ಶಿರಸ್ಸನ್ನು ಸದಾ ನೆಟ್ಟಗಿರಿಸಿಕೊಳ್ಳಿ, ಯಾವ ಮನುಷ್ಯನಿಗಾದರೂ ಮೊಣಕಾಲೂರಬೇಡಿರಿ. ಎಲ್ಲಾ ತರದ ದೀನ ದುರ್ಬಲ ವರ್ತನೆಯನ್ನು ನಾನು ದ್ವೇಷಿಸುವೆನು. ಈ ವಂದನೆ ಈ ಕಾಲು ಹಿಡಿಯುವುದು, ಪುರಸ್ಕಾರಗಳೆಲ್ಲಾ ಸಾಕು. ಎಂದ ಪಂಡಿತರು ತನ್ನಂತೆಯೇ ಹಿಂದಿಯರೆಲ್ಲರೂ ಉಚ್ಚ ಸ್ವಾಭಿಮಾನಿಗಳಾಗಬೇಕೆಂಬ ಉತ್ಕಟೇಚ್ಛೆಯುಳ್ಳವರಿರುವರು.

ಬಡತನದ ಬದ್ಧದ್ವೇಷಿ

ಜವಾಹರಲಾಲರು ಗೋಕುಲವಲ್ ಎಂಬಲ್ಲಿಯ ಹರಿಜನ ನಿವಾಸಕ್ಕೆ ಹೋದಾಗ ಅವರು "ದಾರಿದ್ರ್ಯದ ಮಿತ್ರ"ನೆಂದು ಭಾಷಾ ತಪ್ಪಿನಿಂದ ಹೇಳಲಾಯಿತು. ಇದರಿಂದ ಪಂಡಿತರು ಆವೇಶಗೊಂಡರು. ಅವರ ಕಂಗಳು ಪ್ರಕಾಶಮಾನವಾದುವು. "ನೀವು ನನ್ನನ್ನು ದಾರಿದ್ರ್ಯದ ಮಿತ್ರನೆಂದು ಕರೆದಿರಲ್ಲ, ನಾನು ದಾರಿದ್ರ್ಯದ ಮಿತ್ರನಲ್ಲ, ಎಂದೂ ಅಲ್ಲ, ನಾನೇಕೆ ದಾರಿದ್ರ್ಯದ ಮಿತ್ರನಾಗಿರಬೇಕು? ನಾನದರ ಶತ್ರುವು. ಅದರ ಬದ್ಧದ್ವೇಷಿಯು. ಎದುರಾದನೆ ಹೋರಾಡಿ ಸಾಧ್ಯವಾದರೆ ಅದನ್ನು ನಿರ್ಮೂಲಗೊಳಿಸಬೇಕೆಂದಿರುವವನು. ಆದರೆ ನಾನು ಬಡವರಾಗಿರುವವರ ಮಿತ್ರನೆಂಬುವುದರಲ್ಲಿ ಸಂದೇಹವಿಲ್ಲ. ದೀನದರಿದ್ರರ ಪ್ರಶ್ನೆಯೇ ಬೇರೆ" ಎಂದು ಪಂಡಿತರು ಕೊನೆಗೆ ಸಾವಧಾನ ತಾಳಿದರು.

ಕಠಿಣ ಶಿಸ್ತುಪಾಲಕರು.

ಪಂಡಿತರು ಕಾಂಗ್ರೆಸಿನೊಳಗೆ ಕಠಿಣ ಶಿಸ್ತು ಬೇಕು. ಕಾಂಗ್ರೆಸಿನ ಆಜ್ಞೆಯು ಅಕ್ಷರಶಃ ಪಾಲಿಸಲ್ಪಡಬೇಕು. ಕಾಂಗ್ರೆಸಿನ ಹೆಸರು ಹೇಳಿ ಯಾರಾದರೂ ಸ್ವೇಚ್ಛಾನುಸಾರ ನಡೆಯುವಂತಾಗಬಾರದೆಂದು ಹಠಪಡುವರು. ಕಾಂಗ್ರೆಸಿನ ದೋಷಗಳೇನಾದರೂ ಇದ್ದರೆ ಅದರೊಂದಿಗೆ ಸೇರಿಯೇ ಸರಿಪಡಿಸಲೆತ್ನಿಸಬೇಕಲ್ಲದೆ ಅದಕ್ಕೆ ವಿರೋಧವಾಗಿ ನಡೆವಲ್ಲಿ, ಮನ ಬಂದಂತೆ ವರ್ತಿಸಿಯಲ್ಲ. ತಿರುಚಿನಾಪಳ್ಳಿ ಮುನಿಸಿಪಾಲಿಟಿಯವರ ಮಾನಪತ್ರವನ್ನವರು ನಿರಾಕರಿಸಲು ಇದೇ ಕಾರಣ. "ನಿಮಗೇನಾದರೂ ನ್ಯಾಯವಾದ ದೂರುಗಳಿದ್ದರೆ, ಕಾಂಗ್ರೆಸಿನವರಾಗಿಯೇ ನನ್ನ ಬಳಿಗೆ ಬನ್ನಿರಿ. ನಾನು ನಿಮಗೆ ಕಿವಿಕೊಡುವೆನು. ಆದರೆ ನೀವು ಕಾಂಗ್ರೆಸನ್ನು ಬಿಟ್ಟು ಹೋಗಿ ಅದರ ಪ್ರತಿಷ್ಠೆಗಳನ್ನುಲ್ಲಂಘಿಸಿದರೆ, ಆಗ ನಿಮ್ಮೊಡನೆ ಹೋರಾಡುವುದು, ನಿಮ್ಮನ್ನು ಮುರಿಯುವುದು ನನ್ನ ಕರ್ತವ್ಯವಾಗುವುದು" ಎಂದರು ಪಂಡಿತರು; ತಾವು ಕಾಂಗ್ರೆಸಿನವರೆಂದು ಹೇಳಿಕೊಂಡು ಕಾಂಗ್ರೆಸಿಗೆ ವಿರೋಧವಾಗಿ ನಡೆಯುವ ಕೆಲವರ ಚಟವನ್ನು ಸಂಪೂರ್ಣವಾಗಿ ನಿಷೇಧಿಸಿರುವರು. ಕಾಂಗ್ರೆಸಿನೊಳಗೆ ಕುಹಕಿಗಳಿದ್ದಾರೆ, ಅನ್ಯಾಯವಾಗುತ್ತದೆಂಬುದನ್ನೆಲ್ಲಾ ಅವರು ಬಲ್ಲರು. ಆದರೆ ಅದನ್ನು ನಿವಾರಿಸಲೆಂದು ಕಾಂಗ್ರೆಸನ್ನು ಬಿಟ್ಟು ಹೋಗಿ ಅದರ ಪ್ರತಿಷ್ಠೆಗೆ ವಿರೋಧವಾಗಿ ನಡೆದಲ್ಲಿ ಕಾಂಗ್ರೆಸಿನ ಪ್ರತಿಷ್ಠೆಯನ್ನು ಮಣ್ಣುಗೂಡಿಸಿದಂತಾಗುವುದೆಂಬುದೇ ಪಂಡಿತರ ಅಭಿಮತ.

ಜಾತೀಯತೆಯ ಅಸಹಿಷ್ಣುವು.

ಪಂಡಿತರಿಗೆ ಜಾತೀಯತೆಯೆಂದರಾಗದು. ಅದೂ ರಾಜಕೀಯ ಸ್ವಾತಂತ್ರ್ಯಸಾಧನೆಯ ಗುರಿಯುಳ್ಳವರೆಂದೆಣಿಸಿಕೊಂಡು ಬ್ರಿಟಿಷ್ ಸಾಮ್ರಾಜ್ಯದೊಡನೆ ಸಹಕರಿಸಿ ನಡೆಯುವ ಅಪ್ರಗತಿಕತನವು ಅವರಿಗೆ ಸಹನೀಯವಾಗದು. ನಮ್ಮ ಜಾತೀಯವಾದಿಗಳು ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನೆತ್ತಿ ಹಿಡಿಯುವವರಲ್ಲದೆ ಮತ್ತೇನಲ್ಲ" ಎಂದೇ ಅದರ ಸ್ಪಷ್ಟಮತ. ಇಂತಹ ಜಾತೀಯ ಮುಖಂಡರೆನಿಸುವವರೊಡನೆ ಯಾವ ತರದ ಒಪ್ಪಂದ ಒಡಂಬಡಿಕೆಗಳನ್ನು ಮಾಡಿಕೊಳ್ಳಬಾರದೆಂದೇ ಪಂಡಿತರ ಹಠ.

ಭವಿಷ್ಯದ ನಿರ್ಮಾಣಕರು.

ತಿಲಕ ಘಾಟಿನ ಪ್ರಚಂಡಸಾರ್ವಜನಿಕ ಸಭೆಯಲ್ಲಿವರು ತನ್ನ ಜೀವನದ ತತ್ವನಿವೇದನೆಮಾಡಿದರು. ಹೃದಯವನ್ನು ಜನತೆಯ ಮುಂದೆ ತೆರೆದಿಟ್ಟರು. ಆತ್ಮದ ವೇದನೆಯನ್ನು ಕೆಂಡ ಕೆಂಡವಾಗಿ ಹೊರಕಾರಿದರು. 2 ಘಂಟೆಗಳ ವರೆಗೆ ಜನತೆಯನ್ನು ಸ್ತಂಭವಾಗಿರಿಸಿದರು. "ನಾನು ಭೂತಕಾಲದ ಕುರಿತು ಬಹಳವಾಗಿ ಆಲೋಚಿಸುವೆನು, ಭವಿಷ್ಯದ ಕುರಿತು ಬಹಳ ಕಲ್ಪನೆ ಕಟ್ಟಿಕೊಳ್ಳುವೆನು. ಈ ನಡುವೆ ಪ್ರಕೃತವನ್ನು ಮರೆತೇ ಬಿಡುವೆನು" ಎಂದು ಪಂಡಿತರೆಂದ ಮಾತು ಅಕ್ಷರಶಃ ನಿಜ. ಅವರು ಇಂದಿನ ಹೊಸ್ತಿಲಲ್ಲಿ ನಿಂತು, ಮುಂದಿನ ವಿಶಾಲ ವಿಶ್ವದ ನೋಟವನ್ನು ನೋಡುವುದರಲ್ಲಿ ತಲ್ಲೀನವಾಗಿರುವರು. ಹಾಗಂತ ಇಂದಿನ ಸ್ಥಿತಿಗತಿಗಳಿಗೆ ಕಣ್ಮುಚ್ಚಿ ಕೊಂಡಿರುವುದಿಲ್ಲ. ಇಂದೀಗ ನಮಗೆ ಪ್ರಾಮುಖ್ಯವಾಗಿ ಬೇಕಾದುದೆಂದರೆ ರಾಜಕೀಯ ಸ್ವಾತಂತ್ರ್ಯವೆಂದು ಅವರು ಒತ್ತಿ ಒತ್ತಿ ಹೇಳುತ್ತಿರುವುದೇ ಇದಕ್ಕೆ ಸಾಕ್ಷಿ: ಅವರ ಸಮತಾವಾದವು ಮುಂದಿನ ವಿಚಾರ. ಇಂದೀಗ ಅವರಿಗೆ ಮುಖ್ಯ ಬೇಕಾದುದು ಸ್ವರಾಜ್ಯ. ಸ್ವರಾಜ್ಯ ದೊರೆತ ಮೇಲೆ ಸಮತಾವಾದದ ತತ್ವಗಳನ್ನು ಆಯಾ ದೇಶದ ಸ್ಥಿತಿಗತಿಗಳಿಗನುಗುಣವಾಗಿ ಮಾರ್ಪಡಿಸಿ, ನವೀನ ಸಮಾಜ ಮತ್ತು ಸಾಂಪತ್ತಿಕ ರಚನೆಮಾಡದೆ ಜನತೆಯ ಉದ್ಧಾರದ ಮಾರ್ಗವು ಇನ್ನೊಂದಿಲ್ಲೆಂದೇ ಪಂಡಿತರ ಮನೋನಿರ್ಧಾರ. ಹೊಸಯುಗದ ನಾಂದಿಯುವವು, ಹಳೆಯ ಲೋಕವು [illegible] ಭೂಕಂಪಕ್ಕೊಳಗಾಗಿ ವಿನಾಶಕ್ಕೀಡಾದ ದಿನವು ದೂರವಿಲ್ಲ. ಆ ಮಹಾಪ್ರಳಯವು ಸಮೀಪಿಸಹತ್ತಿದೆ. ಅದರ ಮಸಣದ ಮೇಲೆ ಹೊಸ ರಚನೆಯಾಗಬೇಕು. ಆ ಹೊಸಯುಗದ ಹೊಂಬೆಳಕು ಹರಿದಿರುವುದು. ಅದನ್ನು ಸ್ವಾಗತೀಕರಿಸಲು ಎಲ್ಲರೂ ಸಿದ್ಧರಾಗಿರಬೇಕೆಂದೇ ಪಂಡಿತರ ಬೋಧೆ.

ಈ ವಾರದ ಕತೆ—

ರಾಮಾಚಾರ್ಯರ ಪೂಜೆ

"ಉಪಾಧ್ಯಾಯ"ರಿಂದ

ರಾಮಾಚಾರ್ಯರು ಪೂಜೆಯ ಕಾಲದಲ್ಲಿ ಊಟವನ್ನೇ ನೆನಸುತ್ತಾರೆ. ಸೀತಮ್ಮನ ಅಡಿಗೆಗೆ ಅಂದೇ ತುಸು ವಿಳಂಬ. ಆಚಾರ್ಯರು ಗಂಧದ ಕೊರಡನ್ನು ತೇದು ಪರಿಮಳವೆಬ್ಬಿಸಲಿಲ್ಲ; ಸೀತಮ್ಮನ ತಲೆಗೆ ಎಸೆದು ಅವಳನ್ನು ಬೀಳಿಸುತ್ತಾರೆ. ಇಂಥ ಪೂಜೆಯಿಂದಲೂ ದೇವರು ಪ್ರತ್ಯಕ್ಷನಾದ!

ಇಂದು ರಾಮಾಚಾರ್ಯರು ಸಮ್ಮನ್ಸ ಪ್ರಕಾರ ಬೆಳಿಗ್ಗೆ ೧೧ ಗಂಟೆಗೆ ತಪ್ಪದೆ ಮೆಜಿಸ್ಟ್ರೇಟ್ ಕೋರ್ಟಿಗೆ ಹಾಜರಾಗತಕ್ಕ ದಿನ. ಈ ಸಂಗತಿಯನ್ನು ರಾಮಾಚಾರ್ಯರು ಸೀತಮ್ಮಗೆ ನಿನ್ನೆಯೇ ತಿಳಿಸಿದ್ದರು. ಹತ್ತು ಗಂಟೆಯ ಒಳಗಾಗಿ ಊಟ ತಯಾರಾಗಬೇಕೆಂದು ಸಾರಿ ಸಾರಿ ಹೇಳಿದ್ದರು. ಬೆಳಿಗ್ಗೆ ಒಂಭತ್ತೂವರೆ ಗಂಟೆಯ ವರೆಗೆ ವಕೀಲರಲ್ಲಿ ಅನುಭವ ಮಾಡಿಕೊಳ್ಳಲಿಕ್ಕೆಯೇ ಆಯಿತು. ಮನೆಗೆ ಬಂದವರೇ ಕೊಡಪಾನ ಹಿಡಿದುಕೊಂಡು ಬಾವಿಯಕಟ್ಟೆಗೆ ಸ್ನಾನಕ್ಕೇನೇ ನಡೆದರು. ಹಿತ್ತಲು ಬದಿಯಲ್ಲಿ ಕೆಲಸದವಳ ಹತ್ತಿರ ಏನೋ ಮಾತಾಡಿಕೊಂಡಿದ್ದ ಸೀತಮ್ಮನು ಗಂಡನು ಸ್ನಾನಕ್ಕೆ ಇಳಿದುದನ್ನು ನೋಡಿ ಒಳಗೆ ಓಡಿ ಬಂದಳು. ಒಲೆಗೆ ಬೆಂಕಿ ಹಚ್ಚಿಸಿ ಗಂಡನು ಸ್ನಾನ ಮಾಡಿ ಬರುವಾಗ ಎದುರು ಬೀಳದೆ ಹೇಗೋ ತಪ್ಪಿಸಿಕೊಂಡು ನಿಮಿಷದೊಳಗೆ ತನ್ನ ಸ್ನಾನ ತೀರಿಸಿ ಒಳಗೆ ಓಡಿ ಬಂದಳು ಅನ್ನಕ್ಕೆ ನೀರು ಇಟ್ಟು ಬೆಂಕಿ ಉರಿಸತೊಡಗಿದಳು. ರಾಮಾಚಾರ್ಯರು ಬಹಳ ಸೂಕ್ಷ್ಮದಲ್ಲಿ ಜಪ ಆಹ್ನಿಕಗಳನ್ನು ಮುಗಿಸಿ ಪೂಜೆಗೆ ಪ್ರಾರಂಭಿಸಿದರು. ಅಡಿಗೆ ಮನೆಯಿಂದ ಫಕ್ಕನೆ ಹೊರಗೆ ಓಡಿ ಬರುತ್ತಿರುವ ಸೀತಮ್ಮನನ್ನು ನೋಡಿ "ಏನು ಅಡಿಗೆಯಾಯಿತೆ?" ಎಂದು ಪ್ರಶ್ನಿಸಿದರು. ಸೀತಮ್ಮನು ಬಹಳ ಗಾಬರಿಗೊಂಡು ಅನ್ನ ಕೊದಿ ಬಂತು; ಇನ್ನು ಹತ್ತು ನಿಮಿಷದಲ್ಲಿ ಎಲ್ಲವೂ ಸಿದ್ಧವಾಗುವುದೆಂದಳು. ರಾಮಾಚಾರ್ಯರು ಸಿಟ್ಟುಗೊಂಡು, ಈ ದಿನ ಬೆಳಿಗ್ಗೆ ನನಗೆ ಕೋರ್ಟಿಗೆ ಹೋಗ ಬೇಕೆಂದು ನಿನ್ನೆ ನಾನು ನಿನ್ನ ಕೂಡೆ ಹೇಳಲಿಲ್ಲವೇ? ನೀನು ಈ ವರೆಗೆ ಎಲ್ಲಿ ಸತ್ತಿದ್ದಿ? ಹನ್ನೊಂದು ಗಂಟೆಯ ಒಳಗೆ ನಾನು ಕೋರ್ಟಿಗೆ ಮುಟ್ಟದಿದ್ದರೆ ಅಲ್ಲಿ ನನ್ನ ಶ್ರಾದ್ಧವಾಗುವುದೆಂದು ನಾನು ಮೊದಲೇ ಹೇಳಿ ಸತ್ತಿದ್ದೆನಲ್ಲಾ. ನನ್ನ ಕರ್ಮ, ಇಲ್ಲಿ ಒಂದು ಸಾವಿನ ಪೂಜೆ ಮುಗಿಸದೆ ನನ್ನ ಹೆಣ ಎಲ್ಲಿಗೂ ಹೊರಗೆ ಕೊಂಡು ಹೋಗಲಿಕ್ಕೆ ಉಪಾಯವಿಲ್ಲ ಇನ್ನು ನಿನ್ನ ಹತ್ತು ನಿಮಿಷ ಮುಗಿಯುವಾಗ ನನ್ನ ಜನ್ಮ ಸಂದಿತು ಎಂದು ಗರ್ಜಿಸಿದರು. 'ಇಲ್ಲ' ನೀವು ಗಾಬರಿಯಾಗಬೇಡಿ, ಅರ್ಧ ಗಂಟೆಯೊಳಗೆ ನಾನು ನಿಮ್ಮನ್ನು ಕಳುಹಿಸಿದರೆ ಸರಿಯಷ್ಟೆ! ಎಂದು ಭರವಸೆ ಹೇಳಿ ಸೀತಮ್ಮನು ತೆಂಗಿನಕಾಯಿ ಅರೆಯಲಿಕ್ಕೆ ಹಿಡಿದಳು. ಆಗ ರಾಮಾಚಾರ್ಯರು ನನ್ನನ್ನು ನೀನು ಕಳುಹಿಸುತ್ತಿ, ಯಮನ ಪಟ್ಟಣಕ್ಕೆ ಎನ್ನುತ್ತಾ ಹೇಗೂ ತೀರ್ಥ ಮಾಡಿ ದೇವರ ಅಲಂಕಾರ ತೀರಿಸಿದರು. ನಂತರ ತನ್ನ ಹೆಂಡತಿಯನ್ನು ಕರೆದು, ಏನು ಒಂದು ದೀಪವನ್ನಾದರೂ ಇಲ್ಲಿ ಸುಡುತ್ತಿಯೋ? ಅಥವಾ ಅದಕ್ಕೂ ನಾನೇ ಸಾಯಬೇಕೋ" ಎಂದರು. ಸೀತಮ್ಮನು ಫಕ್ಕನೆ ಎದ್ದು ದೀಪ ಹಚ್ಚಿಕೊಟ್ಟು ಪುನಃ ಅರೆಯಲಿಕ್ಕೆ ಹಿಡಿದಳು. ರಾಮಾಚಾರ್ಯರು ಸಿಟ್ಟುಗೊಂಡು, ಅದು ಯಾರ ಬೊಜ್ಜಕ್ಕೆ ತೆಂಗಿನಕಾಯಿ ಅರೆಯುತ್ತಿ. ನನ್ನನ್ನು ಹತ್ತು ಗಂಟೆಯ ಒಳಗೆ ಕೊಂಡು ಹೋಗದಿದ್ದರೆ ನನ್ನ ಜೀವವೇ ಹೋದೀತು. ಸ್ವಲ್ಪ ಈ ದೇವರಿಗೆ ನೈವೇದ್ಯ ಸುಡುತ್ತಿದ್ದರೆ ಈ ಕರ್ಮದ ಪೂಜೆಯನ್ನಾದರೂ ಮುಗಿಸಿ ನಾನು ಕೋರ್ಟಿಗೆ ಸಾಯುತ್ತಿದ್ದೆ. ಊಟವಿಲ್ಲದಿದ್ದರೆ ನಾನು ಉಪವಾಸವಾದರೂ ಬೀಳಬಹುದು. ಈ ದೇವರಿಗೆ ಒಂದು ಪೂಜೆಯ ಶಾಸ್ತ್ರ ಸುಡದೆ ಉಪಾಯವಿಲ್ಲವಷ್ಟೆ!! ಎನ್ನುತ್ತಾ ದೇವರಿಗೆ ಧೂಪವನ್ನು ತೋರಿಸಿ "ನೈವೇದ್ಯವೆಲ್ಲಿ? ಎಂದು ಗಟ್ಟಿಯಾಗಿ ಕೂಗಿದರು. ಅನ್ನ ಸ್ವಲ್ಪ ಬಲುಪ್ರಂಟು. ಐದು ನಿಮಿಷ ತಡೆಯಿರಿ. ಎಂದು ಸೀತಮ್ಮನು ಸ್ವಲ್ಪ ಧೈರ್ಯಗೊಂಡು ಮೆಲ್ಲಗೆ ಹೇಳಿ ಬಿಟ್ಟಳು. ಆಗ ರಾಮಾಚಾರ್ಯರಿಗೆ ತಡೆಯಲಾರದ ಸಿಟ್ಟು ಬಂದು "ನೀನು ಇನ್ನೂ ಸಾಯಲಿಲ್ಲವೇ?" ಎನ್ನುತ್ತಾ ಗಂಧದ ಕೊರಡನ್ನು ತೆಗೆದು ಸೀತಮ್ಮನ ಮೇಲೆ 'ಬಿಸಾಡಿದರು. ಅದು ಅವಳ ತಲೆಗೆ ತಾಗಿ ಅವಳು 'ಅಯ್ಯೋ ನಾರಾಯಣ! ನಿನ್ನ ಪೂಜೆಯಿಂದಾಗಿ ನನ್ನ ಜೀವವೇ ಹೋಯಿತು' ಎಂದು ಕೂಗಿ ನೆಲದ ಮೇಲೆ ಬಿದ್ದಳು. ಅಷ್ಟರಲ್ಲಿ ದೇವರ ಕವಾಟಿನ ಒಳಗಿನಿಂದ ಭಯಂಕರ ಶಬ್ದವಾಯಿತು. ಸಂಪುಷ್ಟದಲ್ಲಿದ್ದ ಶಾಲಿಗ್ರಾಮಗಳು ಒಂದೊಂದಾಗಿ ಹೊರ ಬಿದ್ದವು. ದೇವರ ಮಂಟಪವು ನಡುಗಲಾರಂಭಿಸಿತು. ರಾಮಾಚಾರ್ಯರು ಇದನ್ನು ನೋಡಿ ಬಹಳ ಗಾಬರಿಯಾಗಿ ದೇವರ ಕವಾಟಿನ ಬಾಗಿಲನ್ನು ಹಾಕಿದರು. ಆದರೆ ಬಾಗಿಲು ತನ್ನಷ್ಟಕ್ಕೆ ಪುನಃ ತೆರೆಯಿತು. ರಾಮಾಚಾರ್ಯರು ಬಾಗಿಲು ಹಾಕಿ ಗಟ್ಟಿಯಾಗಿ ಒತ್ತಿ ಹಿಡಿದುಕೊಂಡರು. ಒಳಗಿನಿಂದ ಬಾಗಿಲನ್ನು ಬಲವಾಗಿ ದೂಡುವಂತಾಯಿತು. ಭಯದಿಂದ ರಾಮಾಚಾರ್ಯರು ನಡುಗಲಾರಂಭಿಸಿದರು. ಅಷ್ಟರಲ್ಲಿ ಕವಾಟಿನ ಒಳಗಿನಿಂದ 'ಓ ಪಾಪಿ ಬ್ರಾಹ್ಮಣನೆ, ನಿನ್ನ ಪೂಜೆಯು ನನಗೆ ಯಥೇಷ್ಟವಾಯಿತು. ನೀನು ಎಷ್ಟು ಶ್ರದ್ಧೆಯಿಂದ ಅದನ್ನು ನಡಿಸುತ್ತಿದ್ದೀ ಎಂದು ನನಗೆ ತಿಳಿಯಿತು; ಹೋಗು. ನಿನ್ನ ಹೆಂಡತಿಯು ಬದುಕಿರುವಳೋ ನೋಡು ನಡೆ ಹೋಗು' ಎಂದು ಮಾತು ಕೇಳಿಸಿತು. ರಾಮಾಚಾರ್ಯರು ಅಲ್ಲಿಂದ ಎದ್ದು ಅಡಿಗೆ ಮನೆಗೆ ಹೋಗಿ ಹೆಂಡತಿಯನ್ನು ಎಬ್ಬಿಸಿ ಉಪಚರಿಸಿದರು. ಮತ್ತು ನಡೆದ ಸಂಗತಿಯನ್ನು ಅವಳಿಗೆ ತಿಳಿಸಿದರು. ಅನಂತರ ಪೂಜೆಯ ಕಾಲದಲ್ಲಿ ಮಂತ್ರ ವಿನಾ ಬೇರೇನೂ ಮಾತಾಡುವುದನ್ನೇ ನಿಲ್ಲಿಸಿ ಬಿಟ್ಟರು.

ಮೂಲ್ಕಿ ಹೈಸ್ಕೂಲ್

ಮುಂಬೈಯಲ್ಲಿರುವ ಕನ್ನಡಿಗ ಮಹಾಶಯರಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಮಹನೀಯರಲ್ಲಿ ಸವಿನಯ ವಿನಂತಿ.

ವಿದ್ಯಾಭಿಮಾನಿಗಳೇ!

ನಮ್ಮ ಊರು ಒಂದು ಕಾಲದಲ್ಲಿ ವ್ಯಾಪಾರದಲ್ಲಿಯೂ, ವಿದ್ಯೆಯಲ್ಲಿಯೂ, ಸಂಗೀತ ಕಲೆಯಲ್ಲಿಯೂ, ಹೆಚ್ಚೇಕೆ ಎಲ್ಲಾ ಮಟ್ಟಿಗೂ ಹೆಸರು ಪಡೆದ ಊರಾಗಿತ್ತು. ಆದರೆ ದುರ್ದೈವ ವಶಾತ್ ಇತ್ತೀಚೆಗೆ ಕೆಲವು ವರ್ಷಗಳಿಂದ ಪ್ರೌಢ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದೆ, ನಮ್ಮ ತರುಣರು ಹೆಚ್ಚಿನ ಪೇಚಾಟ ಪಡುತ್ತಿದ್ದರು. ಆದರೆ, ನಮ್ಮ ಇಲ್ಲಿಯ ಮುಖಂಡರ ಅವಿಶ್ರಾಂತ ಪರಿಶ್ರಮದಿಂದ ಇಲ್ಲಿ ಒಂದು ಹೈಸ್ಕೂಲ್ ಸ್ಥಾಪನೆಯಾಗುವ ಸುಯೋಗವು ಒದಗಿತು ಈಗ ಅದನ್ನು ಉಳಿಸುವುದೂ, ಅಳಿಸುವುದೂ ಕನ್ನಡಿಗರಾದ ನಮ್ಮನ್ನು ಹೊಂದಿಕೊಂಡಿವೆ. ಇದನ್ನು ಬಲಪಡಿಸುವರೆ, ಸರಕಾರದ ಕೆಲವೊಂದು ಶರ್ತಗಳನ್ನು ಪೂರೈಸಿ ಕೊಡುವರೆ ಅನ್ಯ ಉಪಾಯ ತೋರದೆ (ಅಂದರೆ ಧನ ಸಂಗ್ರಹಮಾಡುವ ದಾರಿಕಾಣದೆ) ಇಲ್ಲಿಯ ಮುಖಂಡರು ದೀರ್ಘಾಲೋಚನೆ ಮಾಡಿ ಸದ್ರಿ ಹೈಸ್ಕೂಲಿನ ಸಹಾಯಾರ್ಥವಾಗಿ ಒಂದು ಸೋಡ್ತಿಯನ್ನು ಹೊರಡಿಸಿದುದು ತಮಗೆಲ್ಲ ತಿಳಿದ ವಿಚಾರವೇ ಆಗಿದೆ. ಕನ್ನಡಿಗರು "ಇದು ಒಂದು ಊರಿನ ವಿಚಾರ"ವೆಂದು ತಾತ್ಸಾರ ಮಾಡುವುದು ಸಮಂಜಸವಲ್ಲ. ಕನ್ನಡಿಗರು ಸರ್ವರೂ ಒಂದಾಗಿ ಇದಕ್ಕೆ ಹೃತ್ಪೂರ್ವಕ ಸಹಾಯ ಕೊಟ್ಟು ನಡಿಸುವುದು ಕನ್ನಡಿಗನೆಂದು ಹೇಳಿಸಿಕೊಳ್ಳುವ ಪ್ರತೀಯೊಬ್ಬನ ಕರ್ತವ್ಯವಾಗಿದೆ.

ಮಹಾಶಯರೇ! ಈಗಿನಂಥ ದುರ್ದಿನಗಳಲ್ಲಿ ಧನ ಸಹಾಯ ಬೇಡುವುದು ತೀರ ಕಷ್ಟಕರವಾಗಿದೆ. ನಮ್ಮ ಬಂಧುಗಳು ಪರ ಊರಿನ ಸೋಡ್ತಿಗಳಿಗೆ ಮಹದಾಶ್ರಯವನ್ನು ಕೊಡುತ್ತಿರುವರು. ಆದರೆ, ನಮ್ಮ ನಾಡಿನ ಒಂದು ವಿದ್ಯಾ ಸಂಸ್ಥೆಯ ಸಹಾಯಾರ್ಥವಾಗಿ ಏರ್ಪಡಿಸಿರುವ ಈ ಯೋಜನೆಯ ವಿಷಯ ಸಂಕುಚಿತ ಭಾವನೆ ತೋರಿಸುವುದು ನ್ಯಾಯವಲ್ಲ ಇಲ್ಲಿ "ನನ್ನ ಊರು, ನಿನ್ನ ಊರು" ಎಂಬ ಸ್ವಾರ್ಥಪರ ಭಾವನೆಯು ಎಂದೂ ಮೂಡಬಾರದು.

ಸುಹೃದಯರೇ! ಅಭಿಮಾನಶಾಲಿಗಳಾಗಿರಿ! ಈ ಯೋಜನೆಯು ಯಶಸ್ವಿಯಾಗುವಂತೆ ಸಹಾಯ ಕೊಡಿರಿ. ಎಲ್ಲರೂ ಒಂದಾಗಿ ಉದಾರ ಸಹಾಯ ಕೊಟ್ಟು ನಡೆಸಿರಿ. ಒಂದು ವಿದ್ಯಾ ಸಂಸ್ಥೆಯನ್ನು ಉಳಿಸಿದ ಪುಣ್ಯಕ್ಕೆ ಭಾಜನರಾಗಿರಿ.

ಮಹಾಶಯರೇ! ಸೋಡ್ತಿ ಪುಸ್ತಕಗಳು ಸರ್ವತ್ರ ಹೋಗುತ್ತಿವೆ ಕರ್ನಾಟಕದ ಮೂಲೆಮೂಲೆಯಿಂದ ಆರ್ಡರುಗಳು ಬರುತ್ತಿರುವುದು ಶುಭದಾಯಕವಾಗಿದೆ. ಇದೇ ರೀತಿ ಮುಂದೂ ಉತ್ಸಾಹ ನೀಡಿರಿ.

ಪುಸ್ತಕಗಳನ್ನು ಈ ವರೆಗೆ ಪಡೆದವರು ಕನಿಷ್ಠ ಪಕ್ಷ ಬರುವ ತಿಂಗಳ ಅಂತ್ಯದೊಳಗೆ ದಯವಿಟ್ಟು ಹಣವನ್ನು ಪಾವತಿ ಮಾಡಬೇಕಾಗಿ ವಿನಂತಿ. ಪ್ರತಿ ತಿಂಗಳ ಲೆಖ್ಖ ತಸ್ಕಿ ನಡಿಸಿ ನಮ್ಮ ಅಭಿವೃದ್ಧಿಯನ್ನು ಪ್ರಚಾರ ಪಡಿಸುವ ನಿರ್ಧಾರ ನಮ್ಮಲ್ಲಿದೆ. ಆದ್ದರಿಂದ ಹಣ ಬಂದಷ್ಟು ನಮಗೆ ಹೆಚ್ಚಿನ ಪ್ರೋತ್ಸಾಹವು ಸಿಗುವುದು.

ಟಿಕೇಟು ಪಡಕೊಂಡವರು ದಯವಿಟ್ಟು ತಮ್ಮ ಟಿಕೇಟುಗಳನ್ನು ಬಹು ಜೋಪಾಸನದಿಂದ ಕಾಯ್ದಿಡ ಬೇಕೆಂದು ಸೂಚನೆ. ಸರ್ವರೂ ಒಮ್ಮನಸ್ಸಿನಿಂದ ನಮಗೆ ನೆರವಾಗ ಬೇಕಾಗಿ ತಿರಿಗೊಮ್ಮೆ ವಿಜ್ಞಾಪನೆ. ಸೋಡ್ತಿ ತೆಗೆಯುವ ತಾರೀಕನ್ನು (ತಾ. 31-1-37) ಯಾವ ಕಾರಣದಿಂದಲೂ ಮುಂದರಿಸೋಣಾಗುವದಿಲ್ಲ.

ಇಂತೀ ತಮ್ಮ ಹಿತೇಚ್ಛು

ಬಿ: ಭೋಜರಾವ್,

ಕಾರ್ಯದರ್ಶಿ.

ಬಿ. ಮುಲ್ಕಿ ಗ್ರೇಂಡ್ ರೀಫೆಲ್, ಮೂ

ಪ್ರೇಮ ವಿದ್ಯಾಪೀಠ

ತುಂಗಭದ್ರಾ (ಬಳ್ಳಾರಿ ಜಿಲ್ಲಾ)

ಇದರ ಹೊಸ ವರ್ಷವು ಜೂಲಾಯಿಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್, ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪ್ ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ| ಸುಮತಿಬಾಯಿ,

ಬಿ. ಎ. ಎಲ್. ಟಿ., ಎಫ್. ಆ. ಎಸ್. ಎಸ್., ಭಿಷಗ್ರತ್ನ, ರಿಜಿಸ್ಟ್ರಾರ್

ಯು. ಪಿ. ಮೇಸ್ತ, ಉದ್ಯಾವರ, ದ. ಕ.

(ಬಾಣಂತಿ ರೋಗದ ಸ್ಪೆಶ್ಯಲಿಸ್ಟರು)

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಔಷಧಗಳು ದೊರೆಯುತ್ತವೆ.

U. P. Mesta,

Gold Medalled Physicion

UDIAWAR, S. K.

ಸ್ಪೈನಿನ ಅಂತಃ ಕಲಹ

ಮೇದ್ರಿದಿನ ಮೇಲೆ ವಿಮಾನದಾಳಿ!

ಬಂಡಾಯಗಾರರಿಗೆ ಹೊರಗಣ ಸಹಾಯ!

ಇದೇ ತಾ. 5ರಲ್ಲು ಬಂಡಾಯಗಾರರ 30 ವಿಮಾನಗಳು ಮೇದ್ರಿದ್ ಪಟ್ಟಣದ ಮೇಲೆ ಬಾಂಬೆಸೆದು ಹಾವಳಿ ಮಾಡಿರುವವೆಂದು ತಿಳಿದುಬರುತ್ತದೆ. ಕೆಟಲೋನಿಯನಿಯಲ್ಲಿ ನಡೆದ, ಕ್ರಾಂತಿಯ ಎರಡನೆ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅಲ್ಲಿಯ ಸರಕಾರದ ಸೇನೆಯ ಮುಖ್ಯನಾಯಕರಾದ ಡೋನ್ ಲೂಯಿ ಕಂಪೆನೀಸ್ ಎಂಬವರು ತಾವು ಕೊನೆವರೆಗೂ ಹೋರಾಡಿ ಒಂದೋ ಸಾಯಲು ಇಲ್ಲವೆ ಜೈಸುವ ನಿರ್ಧಾರ ಮಾಡಿರುವೆವು. ತಾವೀಗ ಫೆಸಿಸ್ಟರನ್ನು ಮಾತ್ರವಲ್ಲ, ಹಳೆಯ ಸೇನಾಧಿಕಾರಿಗಳನ್ನೂ ವಿರೋಧಿಸಬೇಕಾಗಿದೆಯೆಂದು ಪ್ರಕಟಪಡಿಸಿರುವರು. ಬಂಡಾಯಗಾರರ ಸ್ವಾಧೀನವಿರುವ ಬವೀಡೋ ಪಟ್ಟಣವನ್ನು ಸರಕಾರಿ ಕಡೆಯ ಸೈನಿಕರೂ, ಗನಿಯಾಳುಗಳೂ ಆವರಿಸಿ ಭೀಷಣ ಕೈಕೈ ಹೋರಾಟ ನಡೆದು ಅದೀಗ ಬಹುತೇಕ ಸರಕಾರದ ವಶವಾಗಿರುವುದು. ಸೀರಾ ಮೊರೇನ ಗುಡ್ಡಗಳ ಅತ್ಯುನ್ನತ ಶಿಖರದ ಕೋಟೆಯೊಂದರೊಳಗೆ 250 ಮಂದಿ ಬಂಡಾಯಗಾರರು ಆಶ್ರಯ ಪಡೆದು ಸರಕಾರಿ ಸೈನಿಕರಿಂದ ಮುತ್ತಲ್ಪಟ್ಟಿರುವರು. 9 ದಿನಗಳಿಂದ ಅವರಿಗೆ ಹೊರಗಣಿಂದ ಯಾವ ಸಹಾಯವೂ ದೊರೆಯದಂತಾಗಿದೆ. ಬಂಡಾಯಗಾರರು ಇವರನ್ನು ರಕ್ಷಿಸಲು ಪ್ರಬಲ ಪ್ರಯತ್ನ ನಡಿಸುತ್ತಿರುವರು. ಬಂಡಾಯಗಾರರು ವಿಮಾನ ದಾಳಿ ನಡಿಸಿದರೆಂದು ಬಲ್ಬಾನಿನಲ್ಲಿ ಸೆರೆಯಲ್ಲಿರಿಸಲ್ಪಟ್ಟಿದ್ದ 150 ಮಂದಿ ಬಂಡಾಯಗಾರ ಪಕ್ಷೀಯರನ್ನು ಗುಂಡು ಹೊಡೆದು ಕೊಂದು ಹಾಕಲಾಗಿದೆ.

ಮೇದ್ರಿದ್ ಪಟ್ಟಣವನ್ನು ಬಂಡಾಯಗಾರರ ಅಧೀನಪಡಿಸದಿದ್ದರೆ ಪಟ್ಟಣಿಗರ ಮೇಲೆ ಪ್ರತೀಕಾರ ಮಾಡಲಾಗುವುದೆಂದು ಎಚ್ಚರಿಸುವ ಕರಪತ್ರಗಳನ್ನು ವಿಮಾನ ಮೂಲಕ ಕೆಳಗೆಸೆಯಲಾಗಿದೆ; ಮೇದ್ರಿದಿನ ಜನರಲ್ಲಿ ದಿಗಿಲುಂಟಾಗಿರುವುದೆಂದೂ ಸ್ತ್ರೀಯರು ಮಕ್ಕಳು ಮುದುಕರೆಲ್ಲಾ ಸಹಸ್ರಗಟ್ಟಲೆಯಲ್ಲಿ ಅದನ್ನು ಬಿಟ್ಟು ಹೋಗುತ್ತಿರುವರೆಂದೂ ಬಂಡಾಯಗಾರರ ಕಡೆಯ ಸುದ್ದಿ.

ಬಂಡಾಯಗಾರರು ಮೇದ್ರಿದಿನ ಮಾರ್ಗದಲ್ಲಿರುವ ಸರಕಾರದ ಸುಭದ್ರ ಸ್ಥಳಗಳಲ್ಲೊಂದಾದ ಸಾಂತಾಕ್ರೂಜ್ ಎಂಬುದನ್ನು 3 ದಿನಗಳ ಭೀಷಣ ಸಮರದ ನಂತರ ವಶಪಡಿಸಿಕೊಂಡಿರುವರು. ಮತ್ತು ಮೇದ್ರಿದಿನ ಕೊನೆಯ ರಕ್ಷಣೆಯ ಸುಭದ್ರ ಸ್ಥಳವಾದ ಸವಲ್ಕನೆಸ್ಸೀರೋ ಎಂಬಲ್ಲಿಗೆ ಸಮೀಪಿಸಿರುವರು.

ಬಂಡಾಯಗಾರರಿಗೆ ಜರ್ಮನಿ ಮತ್ತು ಇಟಲಿಯ ಸಹಾಯ

ಇದೇ ತಾ. 7ರಲ್ಲು ಎಡಿನ್‌ಬರ್ಗ್ ಪಟ್ಟಣದಲ್ಲಿ ಇಂಗ್ಲೆಂಡಿನ ಲೇಬರ್‌ಪಾರ್ಟಿಯ ಪರಿಷತ್ತು ಜರಗಿದಾಗ ಸ್ಪೈನ್ ಸರಕಾರದ ಪ್ರತಿನಿಧಿಗಳಿಬ್ಬರು ಬಂದು, ಹೃದ್ರಾವಕ ಭಾಷಣ ಮಾಡಿದರು. "ಜರ್ಮನಿ ಮತ್ತು ಇಟಲಿಯು ಬಂಡಾಯಗಾರರಿಗೆ ಬೇಕಾದ ಸಹಾಯವೀಯುತ್ತಿವೆ. ಇಂಗ್ಲೆಂಡು ಮತ್ತು ಫ್ರಾನ್ಸುಗಳು ನಮಗೇನೂ ಸಹಾಯ ಮಾಡುವುದಿಲ್ಲ. ನಮಗೀಗ ಕತ್ತು ಹಿಸುಕಿದಂತಾಗಿದೆ. ಸ್ಪೈನಿನ ಅಂತಃಕಲಹದಲ್ಲಿ ಕೈ ಹಾಕಬಾರದೆಂಬ ತಾಟಸ್ಥ್ಯದ ಒಡಂಬಡಿಕೆಯು ಬರಿಯ ಫಾರ್ಸಾಗಿದೆ. ನಾವು ದೊಡ್ಡ ಶಕ್ತಿಗಳಿಂದ ಟಾಂಕಿ ಮತ್ತು ಯುದ್ಧ ವಿಮಾನಗಳೊಡನೆ ಹೋರಾಡಬೇಕಾಗಿದೆ. ಬಂಡಾಯಗಾರರು ವಶಪಡಿಸಿಕೊಂಡ ಸ್ಥಳಗಳಲ್ಲಿರುವ ಮಜೂರ ಸಂಘದವರನ್ನೆಲ್ಲಾ ಗುಂಡು ಹೊಡೆದು ಕೊಲ್ಲಲಾಗಿದೆ" ಎಂಬುದೇ ಈ ಪ್ರತಿನಿಧಿಗಳ ಭಾಷಣದ ಸಾರಾಂಶವಾಗಿದ್ದಿತು.

ಸೋವಿಯೆಟ್ ಸರಕಾರದ ಎಚ್ಚರಿಕೆ

ಜರ್ಮನಿ ಮತ್ತು ಪೋರ್ಚುಗಲ್ ದೇಶಗಳು ತಾಟಸ್ಥ್ಯದ ಒಪ್ಪಂದವನ್ನು ಮುರಿದು ಬಂಡಾಯಗಾರರಿಗೆ ಯುದ್ಧೋಪಕರಣಗಳನ್ನು ಹೆಚ್ಚಾಗಿ ಒದಗಿಸಿಕೊಡುತ್ತಿವೆ. ಪೋರ್ಚುಗಲ್ ದೇಶವು ಬಂಡಾಯಗಾರರಿಗೆ ಬೆಂಬಲವಾಗಿ ನಿಂತಿದೆ ಎಂಬದೀಗ ಸಾಕಷ್ಟು ಸಿದ್ಧವಾಗಿದೆ. ಇಂತಹ ವರ್ತನೆಯು ಕೂಡಲೆ ನಿಲ್ಲಿಸಲ್ಪಡದಿದ್ದರೆ ತಾವು ತಾಟಸ್ಥ್ಯದ ಒಡಂಬಡಿಕೆಗೆ ಒಪ್ಪಲಾರೆವೆಂದು ಸೋವಿಯೆಟ್ ಸರಕಾರದವರು ಲಂಡನಿನ ತಾಟಸ್ಥ್ಯ ರಕ್ಷಕ ಕಮಿಟಿಗೆ ತಿಳಿಸಿರುವರು. ಬಂಡಾಯಗಾರರಿಗೆ ಬೇಕಾದಷ್ಟು ಯುದ್ಧೋಪಕರಣಗಳು ಒದಗಿಸಲ್ಪಟ್ಟು, ಸ್ಪೈನ್ ಸರಕಾರಕ್ಕೆ ಯಾವ ಸಹಾಯವೂ ದೊರೆಯದಂತಾಗುವ ಏರ್ಪಾಡಿಗೆ ತಾವು ಒಪ್ಪಲಾರೆವೆಂದು ಸ್ಪಷ್ಟಪಡಿಸಿರುವರು. ಬೆಲ್ಜಿಯಮಿನ ಸೋಸಿಯಲಿಸ್ಟ್ ಪಕ್ಷದವರೂ ತಾಟಸ್ಥ್ಯದ ಒಪ್ಪಂದವನ್ನು ನಿಷೇಧಿಸಿರುವರು. ಈ ಸಂಬಂಧವಾಗಿ ಇಂಗ್ಲೆಂಡಿನ ಲೇಬರ್ ಪಕ್ಷದ ಪ್ರಮುಖ ಮೇಜರ್ ಅಟ್ಲೆಯವರೇ ಮೊದಲಾದವರು ಸರ್ ಆಸ್ಟಿನ್ ಚೇಂಬರ್‌ಲೇನರ ಭೇಟಿಮಾಡಿ, ತಾಟಸ್ಥ್ಯದ ಘೋಷಣೆಯಿಂದುಂಟಾಗಿರುವ ಅನ್ಯಾಯವನ್ನವರ ಮನಗಾಣಿಸಿರುವರು.

ಬಂಡಾಯಗಾರರ ವಿಜಯ

ಮೇದ್ರಿದಿನಿಂದ 10 ಮೈಲು ಈಶಾನ್ಯದಲ್ಲಿರುವ ಸರಕಾರದ ಪ್ರಬಲ ಸೇನಾಸಿದ್ಧತೆಯ ಸ್ಥಳವಾದ ನಿಸ್ತಲೋನಿಯ ಎಂಬ ಪ್ರಾಮುಖ್ಯ ಪಟ್ಟಣವನ್ನು ಬಂಡಾಯಗಾರರು, 3 ದಿವಸಗಳ ಎಡೆಬಿಡದ ಭಯಂಕರ ಹೋರಾಟದ ನಂತರ ವಶಪಡಿಸಿಕೊಂಡಿರುವರೆಂದು ತಿಳಿದುಬರುತ್ತದೆ. ವಾಯುವ್ಯದ ನವಪ್ಪೇರಲ್ ಎಂಬ ಮುಖ್ಯ ಸ್ಥಳವೂ ಬಂಡಾಯಗಾರರ ವಶವಾಗಿರುವುದು. ಹೆಚ್ಚಿನ ಯುದ್ಧ ವಿಮಾನಗಳ ನಿಮಿತ್ತವೇ ಬಂಡಾಯಗಾರರ ಕೈ ಮೇಲಾದುದಾಗಿದೆ. ಈ ಭಾಗದಿಂದ ಬಂಡಾಯಗಾರರು ಮೇದ್ರಿದಿಗೆ ಪ್ರವೇಶಿಸಬಹುದಾದರೂ ಸರಕಾರದ ಕಡೆಯವರು ಪ್ರಬಲ ವಿರೋಧವನ್ನೊಡ್ಡಿ ತಡೆಗಟ್ಟುವ ನಿರ್ಧಾರ ಮಾಡಿರುವರು.

ಸ್ಪೈನ್ ಸರಕಾರದ ಪ್ರಧಾನ ಮಂತ್ರಿಗಳಾದ ಸೀನರ್ ಕ್ಯಾಬಲ್ಲೆರೋರವರು ಇದೇ ತಾ. 8ರಲ್ಲು ಮೋಟರ್‌ಕಾರಿನಲ್ಲಿ ಹೋಗುತ್ತಿದ್ದಾಗ ವೈರಿವಿಮಾನವೊಂದು ಅವರ ಬೆನ್ನಟ್ಟಲು ಅವರು ಕಡೆಗೆ ಮೋಟರ್‌ಕಾರು ಬಿಟ್ಟು ಸಂಕವೊಂದರಡಿಯಲ್ಲಿ ಅಡಗಿ ಕೂತುಕೊಳ್ಳಬೇಕಾಯಿತೆಂದು ಬಂಡಾಯಗಾರರ ಕಡೆಯ ವಾರ್ತೆ.

ಬಂಡಾಯಗಾರರಿಗೆ ಇಟಲಿಯ ಪ್ರತ್ಯಕ್ಷ ಸಹಾಯ

ಬಂಡಾಯಗಾರರು ಮೇದ್ರಿದ್ ಪಟ್ಟಣದ ಕಡೆಗೆ ಮುಂದೊತ್ತುತ್ತಿದ್ದಾರೆ. ನವಲ್ಪೇರಲ್, ಎಸ್ಕಲೋನ, ಸಾನ್ ಮಾರ್ಟಿನ್ ಮೊದಲಾದ ಮೇದ್ರಿದಿನ ಬಳಿಯ ಪ್ರಾಮುಖ್ಯ ಸ್ಥಳಗಳು ಬಂಡಾಯಗಾರರ ವಶವಾಗಿ, ಸರಕಾರಿ ಕಡೆಯ ಸೈನಿಕರು ಪರಾಜಿತರಾಗಿ ಹಿಂದೆ ಸರಿದಿರುತ್ತಾರೆ. ಟೊಲೇಡೋ ಮತ್ತು ಅವಿಲ್ಲ ಎಂಬ ಎರಡು ಕಡೆಗಳಿಂದ ಹೋರಾಡುತ್ತಿದ್ದ ಬಂಡಾಯಗಾರರ ಸೇನೆಗಳು ಒಟ್ಟಾಗಿವೆ, ಸರಕಾರಿ ಕಡೆಯ 3000 ಸೇನೆಯು ಮೇದ್ರಿದಿಗೆ ಹಿಂದೆಸರಿಯಲಾಗುವ ಸ್ಥಿತಿಯುಂಟಾಗಿದೆ.

ಸರಕಾರದ ಕಡೆಯ ವಿಮಾನಗಳ ಸುದ್ದಿಯೇ ಇಲ್ಲ. ವೈಮಾನಿಕರು ಮುಷ್ಕರ ಹಿಡಿದು ಕೆಲಸ ಮಾಡಲು ನಿರಾಕರಿಸಿರುವರೆಂದು ಸುದ್ದಿಯುಂಟಾಗಿದೆ. ಒವೀಡೋ ಪಟ್ಟಣದಲ್ಲಿ ಭೀಷಣ ಕಾಳಗ ನಡೆದಿದೆ. ಸರಕಾರಿ ಕಡೆಯವರು ಹಲವು ಪಟ್ಟಣಗಳಿಗೆ ಬೆಂಕಿ ಕೊಟ್ಟು ಬಹಳ ನಷ್ಟವುಂಟಾಗಿರುವುದು. ಒವೀಡೋದಲ್ಲಿ ಆವರಿತರಾಗಿರುವ ಬಂಡಾಯಗಾರರ ಸಹಾಯಕ್ಕಾಗಿ ಬರುತ್ತಿದ್ದ 900 ಮಂದಿ ಸೈನಿಕರನ್ನು ಸರಕಾರದ ಕಡೆಯವರು ಸೋಲಿಸಿರುವರೆಂದು ತಿಳಿದುಬರುತ್ತದೆ. ಅಲಿಗನ್ ರಣರಂಗದಲ್ಲಿ 4000 ಮಂದಿ ಬಂಡಾಯ ಸೈನಿಕರು ಪರಾಜಿತರಾಗಿರುತ್ತಾರೆ. ಇತ್ತಲಾಗಿ ಮಜೋರ್ಕ ಎಂಬಲ್ಲಿಂದ ಹೋಗಿ ಇಬಿಜ ದ್ವೀಪವನ್ನು ವಶಪಡಿಸಿಕೊಂಡ ಬಂಡಾಯಗಾರರ ಸೇನೆಯಲ್ಲಿ 700 ಮಂದಿ ಇಟಲಿಯಾನ ಸೈನಿಕರು ವೇಷ ಪಲ್ಲಟಿಸಿಕೊಂಡು ಭಾಗಿಯಾಗಿದ್ದರೆಂದೂ ಈ ಸೈನ್ಯದ ನಾಯಕರು ಕೌಂಟ ರೋಸಿ ಎಂಬ ಇಟಲಿಯಾನ ಶ್ರೀಮಂತರೊಬ್ಬರಾಗಿದ್ದರೆಂದೂ ಸ್ಪೈನ್ ಸರಕಾರವು ಪ್ರಕಟಪಡಿಸಿರುವುದು.

THE BOMABY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAA BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore	Udipi, S India	Charni Road, Bombay No. 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

SUMMARY OF 1935 ACCOUNTS

Total Assets Over	Rs. 80,00,000
Life Funds Over	Rs. 68,00,000
Premium Income Over	Rs 22,54,000
Interest Income	Rs. 3,16,000
Claims Paid	Rs 5,75,000

Total Claims paid over Rs. 38,50,000
Total Business in Force Over Rs. 4,42,51,200

TOTAL BUSINESS IN FORCE Rs. 4,42,51,200

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚನ್ನು ಹೊರಗೆಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಕೆಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ,

ಆಯುರ್ವೇದ ಭೂಷಣ ಮಂಗಳೂರು ದ. ಕ.

☞ ಏಜಂಟರು:—ಮೆಸರ್ಸ್ ಓರಿಯಂಟಲ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರಸ್ತೆ, ಮಲ್ಲೇಶ್ವರಮ್, (ಬೆಂಗಳೂರು ಸಿಟಿ)

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ.



ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಗ್ಗೆ 5-55	ರಾತ್ರಿ 8-55
ಕಾಂಜಂಗಾಡ್ ಪ್ಯಾಸಂಜರ್	ಬೆಳಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

[1907ರಲ್ಲಿ ಸ್ಥಾಪಿತವಾದದ್ದು]

ವೇಲ್ಯುವೇಶನ್ ವರ್ಷ 1933.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ

ವಿಮಾ ಹಣ ಪಾವತಿ ರೂ. **37** ಲಕ್ಷ ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು. ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು:—ಅತ್ಯಧಿಕ ನಫೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ. ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಯಿರಿ:

P. D. BHARGOVA,
General Manager, AJMER,

SUPERINTENDENT. 278, Linga Chetty Street, MADRAS

Or Chief Agent:—
BELLARY: MADURA: TRICHINOPOLY: VELLORE.

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ತಮ ಸಣ್ಣ ಕಥೆ, ಕವನಗಳಿಂದೊಡಗೂಡಿ, ಪ್ರತಿ ಮಾಸದ 15ನೇ ತಾರೀಕಿಗೆ ತಪ್ಪದೆ ಹೊರಡುವದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು-ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ.

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

ಬೆಲೆ ಸುಲಭ! ಒಂದೇ ದರ!! ಖಾತ್ರಿಮಾಲು!!!

ಎಲ್ಲಿ?

ಎಸ್. ಅನಂತರಾಮಾಚಾರ್

ಸ್ಟೇಶನರಿ, ಕಟ್ಲೇರಿ ಮತ್ತು ಶಾಲೋಪಕರಣಗಳ ವ್ಯಾಪಾರಿ.

ತಾಲೂಕು ಕಚೇರಿಬಳಿ, ಉಡುಪಿ.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ. ಬ್ರದರ್ಸ್.

ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd.,

Head Office: MANGALORE. Branch Office Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: **ಕೋರ್ಟು ರಸ್ತೆ ಉಡ್ಪಿ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½. ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು ಸಾ. ಶೆ. 4½. 1 ವರ್ಷದ ಬಾಬ್ತು ಸಾ. ಶೆ. 5½ 2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—ಅಂದರೆ—ಪ್ರೊ ನೋಟು, ಹುಂಡಿ, ನಗದು, ವಸ್ತುಗಳ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ರೂ. 100 ಅಥವಾ ಅದರ ಮೇಲಿನ ಐವೇಜಿಗೆ ಸಾ. ಶೆ. 8. ಮತ್ತು ಅದಕ್ಕಿಂತ ಕೆಳಗಿನದು ಸಾ. ಶೆ. 9ರ ದರದ ಬಡ್ಡಿಯಲ್ಲಿಯೂ ಸಾಲ ದೊರೆವದು

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಹುಂಡಿಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ವಿಜಯ ಬ್ಯಾಂಕ್, ಲಿಮಿಟೆಡ್ K. Gopalkrishna Shetty.
ಜನರಲ್ ಮೇನೇಜರ್ ಕದ್ರಿರೋಡ್, ಮಂಗಳೂರು. ಸೆಕ್ರೆಟರಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಕಟ್ಟಲೆ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಸಕ್ಕರೆ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವದು. ವರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವದು

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಯಾಂಡ ಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ.

I Write as I Please *by* B N. RAO

It is probably unnecessary to emphasise that the views expressed by me in these columns are not necessarily the views of this paper, though more often than not they are likely to be identi cal. I am stating this just because there might not be any possibility of misunderstanding on this score by the public.

In this connection, I would also like to clear misapprheension prevailing among certain persons that the NAVAYUGA is an anti-Brahmin paper. Considerable mischief is being done by some interested persons by such false propaganda. For the satisfaction of these gentlemen, I can tell them that the majority of the subscribers of the paper are *not* non-Brahmins. It must be remembered that the NAVAYUGA is a Socialist paper and as such it does not believe in caste or community, though it is certainly not opposed to religion in the higher sense of the term

District Congress Committee Crisis.

The resignation of the President and some other members from the South Kanara District Congress Committee has created something like a crisis in local Congress politics, which is to be particularly deplored in view of the forthcoming elections. The reasons for the resignation are not known but I have good grounds for stating that they have something to do regarding the choice of candidates from our District for the coming elections.

Samaldas Road Controversy

The naming of the road adjoining the Ajjarkad Maidan as Sir Lallubhai Samaldas Road raises some important questions of public policy. Apart from the absurdity involved in naming a road after a person-who with all my deference to Sir Lallubhai - is practically unknown in our town, however much eminent he might be in Bombay, the question naturally arises as to whether the christening of roads can be made a matter of barter Consciously or unconsciously just because the Bombay Life Company presented four petromax lights to the Municipality, it does not necessarily mean that the Municipality should name the road opposite to its building after a person who is connected with it for values received.

Frankly I consider the action of the Municipality in having agreed to name this particular road in the way it has done as inexpedient. The Municipality should never make itself a party to any quasi-business transaction by lending the prestige of its name which is what actually takes place when a road is named after a person associated with any particular institution in the locality in which it is situated, and and doubly so when the Municipality goes out of its way to do so not as part and parcel of a general plan of naming roads but as a special case.

I for one am willing to treat the incident as closed. And I would personally urge those who are keen on getting previous decision of the Municipality reversed not to proceed with the matter further so as to avoid bad blood. But I suggest that the Municipality should be more cautious as regards such questions in future.

Dasara in Udipi.

In many places, Dasara or NAVARATRI as it is more popularly known in these parts is celebrated publicly (in a manner of speaking) Here however apart from the performance of puja in houses and temples no public activities mark the occasion. In the last two years, an attempt was made by some public-spirited persons to celebrate the festival in a befitting manner. This year also they intend to have NAVARATRI MOHOTSAVA at the Sri Ramakrishna Theatre, when music, drama and physical culture demonstration will be performed by well known persons.

As yet, Udipi cannot boast of any cultural life, unless indeed we include under it the newly started cinema. Man does not live or breed alone, by which of course I do not mean he can live by praying all day and night, as some saints preach (but not practice), that our physiological necessities must be supplemented by some cultural activities. It is to be hoped that the public of Udipi will take advantage of the facilities for the enjoyment of culture provided to them during the ensuing NAVARATRI festival.

Municipal People's Party.

Just as I am closing these lines, I learn that there is a movement afoot to formally start a Municipal People's Party consisting of Dr. Achar and Messrs B. Vasudeva Rao and P. N. Madhava Rao, with the first named as Leader. Attempts will be made, I understand, to enlist a few more members. This party however will have nothing to do with the People's Party of the Maharaja of Pithapuram.

ESTD 1906.

CANARA BANK, LIMITED.

OFFICES AT

Alleppey	Chikmagalur	Kasargod
Arsikere	Cochin	Mangalore-Bunder
Badagara	Coondapoor	Mangalore-City
Bangalore-City	Davangere	Manjeshwar
Bombay-Fort	Dodballapur	Moolky
Bombay-Mandvi	Ernaculam	Payyanur
Buntwal	Gauguli	Puttur
Calicut	Hubli	Udipi
Cannanore	Karkala	

Total Working Funds Rs. 75,00,000

ದೇಶದ ಆರ್ಥಿಕ ದುಃಸ್ಥಿತಿ, ಅದರ ಕಾರಣಗಳು ಮತ್ತು ನಿವಾರಣೆ

(ಶ್ರೀ. ಬಿ. ನಾರಾಯಣರಾವ್, ಎಂ. ಎ. ಯವರಿಂದ.)

ಬ್ರಾಹ್ಮಣೋ ಭೋಜನಪ್ರಿಯಃ (ವಿಚಾರಗಳಿಂದ)

ಇವೇ ಮೊದಲಾದ ಲೇಖನಗಳಿಗಾಗಿ ಬರುವ ವಾರದ ಸಂಚಿಕೆ ನೋಡಿರಿ.

THE ELECTION COMPAIGN.

The Congress and the Justice Party are trying to strengthen their forces in their own way. Pandit Jawaharlal Nehru has been invited by the Tamil Nadu Congress committee and his present tour is revivifying congress work in Madras & the Tamil Districts. The Justice Party believes in money power in politics. For some time past it has been thinking of bundling out the Third Minister and putting the Kumar Raja of Chettinad in his place. Sicklied over with the pale cash of this thought poor Mr. Reddiar had to take to bed and the Kumar Raja has relieved him of further illness by taking over the burden of Ministership from him ... ...

The propagonist of the People's party, the Maharaja of Pithapuram is coming this week to the west coast to fish in our waters. What he will catch in his net remains to be seen. On the 18th instant he will be in Mangalore with his lieutenant Mr. Muthia Mudaliar. They may tell the public what their new party stands for ... .

The hon. Mr. Rajan also will be in Mangalore at the time. He too is out on an election campaign At Bellary the other day he was presented with welcome addresses from the Municipal Council and the District Board. Here his host is honouring him with an address from the employees of the Board just after his arrival. The hon. Minister will be taken to some of the key positions in the field of election and made to put new cheer into wavering candidates and the supporters of the Party. Many mouths are already watering at the prospect of the crumbs that are expected to be thrown from the Minister's table....

It is doubtful whether the hon Minister will be allowed to give any public address on the past achievements and the further plans of the Justice party. Much of the election work will be done behind the Purdah. The leader of the Justice party in this district does not believe in any open propaganda. He himself wears his party label under a mark lest his Brahmin friends should run away from him. Will the hon. Mr. Rajan find out some men who have the candowr to own openly that they are Justicites and organise them into a Party before he leaves the district?

Searchlight.

ತಾ. **15-10-1936**ನೇ ಗುರುವಾರ ರಾತ್ರಿ **9-30**ಕ್ಕೆ
ಮಂಗಳೂರು ಎಮೆಚೂರ್ಸ್, ಇವರು

ವ್ಯಭಿಚಾರಿಣಿಯಾರು

ಎಂಬ ನಾಟಕವನ್ನು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಅಭಿನಯಿಸುವರು.

ನಾರದ ವಿಚಾರ

ಹೇಗಾದರೊಂದು ಮಂತ್ರಿಪದವಿ ಸಿಕ್ಕಿತಪ್ಪ !

ಮದ್ರಾಸಿನ ಶ್ರೀ ಕುಮಾರ ರಾಜ ಮುತ್ತಯ ಚೆಟ್ಟಿಯಾರ್‍ರು ಬಹಳ ಸಮಯದಿಂದ ಮಂತ್ರಿಪದವಿಯೊಂದು ಪಡೆಯಲು ಸೇಚಾಡುತ್ತಿದ್ದರು. ಲಕ್ಷಾಧೀಶರಾದ ಅವರು ಅದಕ್ಕಾಗಿ ಹಣವನ್ನು ನೀರಿನಂತೆ ವ್ಯಯಿಸುತ್ತಿದ್ದರು. ತಾನು ಶ್ರೀಮಂತನಾಗಿರುವ ಮಾತ್ರದಿಂದಲೇ ತನಗೆ ಹುದ್ದೆ ಗೌರವಗಳು ದೊರಕಲೇಬೇಕೆಂಬ ಮನಸ್ಸುಳ್ಳವರವರು. ಬೊಬ್ಬಿಲಿಯ ರಾಜರು ಅವರಿಗೆ ಮಂತ್ರಿ ಪದವಿಕೊಡದೆ ನಿರಾಶೆಪಡಿಸಿದಾಗ ಜಸ್ಟಿಸ್ ಪಕ್ಷಕ್ಕೆ ವಿರೋಧವಾಗಿ ನಡೆದು ಅದನ್ನು ಬಿಟ್ಟುಹೊಸ ಪಕ್ಷವೊಂದನ್ನು ಸ್ಥಾಪಿಸಿದ್ದರು ಆ ಮೇಲೆ ರಾಜಿಯಾಗಿ ಪುನಹ ಜಸ್ಟಿಸ್ ಪಕ್ಷಕ್ಕೆ ಸೇರಿದರು. ಇಂದೀಗ ಕೇವಲ ಆರು ತಿಂಗಳ ಮಂತ್ರಿಪದವಿಯೊಂದು ಅವರಿಗೆ ದೊರೆತಿದೆ. ಮಂತ್ರಿಗಳ ಪೈಕಿ ಅನುಭವಶಾಲಿಯೂ ಬುದ್ಧಿವಂತರೂ ಆದ ದಿವಾನ್ ಬಹದೂರು. ಕುಮಾರಸ್ವಾಮಿ ರೆಡ್ಡಿಯಾರರು ಪಾಪ, ಕಾಯಿಲೆಯ ಸೆವನದಿಂದ ಸರಳ ಮಂಚ ಹಿಡಿಯಬೇಕಾಗಿದೆ. ಚುನಾವಣೆಯು ಸಮೀಪಿಸಿರುವಾಗ ಶ್ರೀ ಮುತ್ತಯ ಚೆಟ್ಟಿಯಾರರ ಧನದ ಸಹಾಯಪಡೆಯಲೆಂದೇ ಈ ಮಂತ್ರಿಪದವಿಯು ಕೊಡಲ್ಪಟ್ಟಿರುವುದೆಂಬುದು ಸ್ವಯಂ ಸ್ಪಷ್ಟ ಇಲ್ಲವಾದರೆ ಬೊಬ್ಬಿಲಿ ರಾಜರು ನಾಲ್ಕು ತಿಂಗಳ ವರೆಗೆ ಆರೋಗ್ಯ ಲಾಭಕ್ಕಾಗಿ ಇಂಗ್ಲೆಂಡಿನ ವರೆಗೆ ಹೋಗಿಬರಲಿಲ್ಲವೇ? ಹಾಗೆಯೇ ಶ್ರೀ ರೆಡ್ಡಿಯಾರರು ಆರೋಗ್ಯ ಲಾಭಹೊಂದುವ ವರೆಗೆ ಕೆಲಸಮಯ ರಜೆಕೊಡಬಾರದಿತ್ತೇ? ಅಥವಾ ಅವರಿಗೆ ಪ್ರಾಣಾಂತಿಕ ಕಾಯಿಲೆಯುಂಟಾಗಿರುವುದೆಂದು ಬೊಬ್ಬಿಲಿ ರಾಜರಿಗೆ ಖಂಡಿತವಾಗಿರುವುದೇ? ಇದೀಗ ಕೇವಲ ಲಜ್ಜಾಸ್ಪದವಾದ ನೇಮಕವಲ್ಲದೆ ಮತ್ತೇನಿಲ್ಲ. ಇದಕ್ಕೆ ಮಾನ್ಯ ಗವರ್ನರರು ಒಪ್ಪಿಗೆಯಿತ್ತುದು ಆಶ್ಚರ್ಯಕರ.

ಪೆಲಸ್ಟೈನದ ಪರಿಸ್ಥಿತಿ

ಪೆಲೆಸ್ಟೈನವನ್ನು ಯೆಹೂದ್ಯರ ಆಶ್ರಯ ಸ್ಥಾನವಾಗಿ ಮಾಡುವ ಬ್ರಿಟಿಷ ಸರಕಾರದ ಧೋರಣೆಯನ್ನು ನಿಷೇಧಿಸಿ, ಅದು ಅರಬರ ಅಧೀನವಾಗಿಯೇ ಇದ್ದು ಅರಬರ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಬ್ರಿಟಿಷ್ ಸರಕಾರವು ಅಂಗೀಕರಿಸುವಂತೆ ಇತ್ತಲಾಗಿ ಕೆಲವು ತಿಂಗಳುಗಳಿಂದ ಅರಬರು ಬ್ರಿಟಿಷ ಸರಕಾರದ ವಿರೋಧವಾಗಿ ಚಳವಳನಡಿಸಿ ಮುಷ್ಕರ ಮತ್ತು ಪ್ರಬಲ ಹೋರಾಟವೇ ನಡೆದು ಪೆಲಸ್ಟೈನದಲ್ಲಿ ಸೇನಾಡಳಿತವು ಸ್ಥಾಪಿಸಲ್ಪಟ್ಟಿರುವುದಷ್ಟೆ. ಆ ಮೇಲೆ, ಅರಬಸ್ಥಾನದ ಅರಸರಾದ ಇಬನ್ ಸಾವ್ರದ್, ಇರಕಿನ ಫಾಜಿ ಮತ್ತು ಅಮೀರ್ ಅಬ್ದುಲ್ಲ ಮತ್ತು ಯಮೆನಿನ ಇಮಾಮರ ಮಧ್ಯಸ್ಥಿಕೆಯಿಂದ ಈ ಚಳವಳವು ನಿಲ್ಲಿಸಲ್ಪಟ್ಟು ಶಾಂತಿಯುಂಟಾಗುವ ಸಂಭವತೋರುತ್ತದೆ ಬ್ರಿಟಿಷರ ನ್ಯಾಯ ದೃಷ್ಟಿಯಲ್ಲಿ ವಿಶ್ವಾಸವನ್ನಿಟ್ಟು ಚಳವಳವನ್ನು ನಿಲ್ಲಿಸಬೇಕೆಂದೇ ಈ ೪ ಮಂದಿ ಅರಸರುಗಳ ವಿನಂತಿ. ಆ ಮೇರೆಗೆ ಮುಷ್ಕರವು ನಿಲ್ಲಿಸಲ್ಪಟ್ಟಿದೆ. ಹೆಚ್ಚಿನ ಅರಬರು ಈ ವಿನಂತಿಯನ್ನು ಮನ್ನಿಸಬಹುದೆಂದು ನಂಬಲಾಗಿದೆ. ಇನ್ನು ಮುಂದೆ ತಾವು ಮೊದಲೇ ನೇಮಿಸಿರುವ ರೋಯಲ್ ಕಮಿಶನಿನ ವಿಚಾರಣೆಯನ್ನು ಸರಿಯಾಗಿ ನಡಿಸಿ ಅರಬರಿಗೆ ನ್ಯಾಯದೊರೆವಂತೆ ನೋಡುವುದು ಬ್ರಿಟಿಷ್ ಸರಕಾರದ ಕರ್ತವ್ಯವಿರುತ್ತದೆ.

ಸ್ಪೈನಿನ ಬಂಡಾಯ

ಬಂಡಾಯಗಾರರಿಗೆ ಪೋರ್ಚುಗಲ್ ದೇಶವು ಆಶ್ರಯಸ್ಥಾನವಾಗಿದೆ. ಪೋರ್ಚುಗಲ್ಲಿನ ಮೂಲಕ ಜರ್ಮನಿಯೂ ಇಟೆಲಿಯೂ ಬೇಕಾದ ಸಹಾಯವನ್ನೆಲ್ಲಾ ಕೊಡುತ್ತಿವೆ. ವಿಶೇಷವಾಗಿ ಬಂಡಾಯಗಾರರಿಗೆ ಯುದ್ಧ ವಿಮಾನಗಳು ಬಹಳವಾಗಿ ಒದಗಿಸಲ್ಪಡುತ್ತಿವೆಯೆಂಬುದರಲ್ಲಿ ಸಂದೇಹವೇ ಇಲ್ಲ. ಈ ಕುರಿತು ಇಂಗ್ಲೆಂಡ್ ಮತ್ತು ಫ್ರಾನ್ಸ್‌ದೇಶಗಳವರು ವಿಚಾರಣೆ ನಡಿಸಿ ಫಲಿತಾಂಶವು ತಿಳಿಯುವಷ್ಟರಲ್ಲಿ ಸ್ಪೈನಿನ ಪ್ರಧಾನ ಪಟ್ಟಣವಾದ ಮೇದ್ರಿದನ್ನು ಬಂಡಾಯಗಾರರು ವಶಮಾಡಿಕೊಂಡು ಬಿಡುವರೋ ಎಂಬ ಸಂದೇಹಕ್ಕೆಡೆಯಾಗಿದೆ. ತಾಟಸ್ಥ್ಯದ ಧೋರಣೆಯ 'ಫಾರ್ಸ'ನ್ನು ರಶ್ಯವು ಬಯಲಿಗೆಳೆದು ತಾನು ತಾಟಸ್ಥ್ಯದ ಒಪ್ಪಂದದಿಂದ ಬೇರೆಯಾಗುವ ಎಚ್ಚರವಿತ್ತಿದೆ. ಜರ್ಮನಿಯು ರಶ್ಯದ ವರ್ತನೆಯಕುರಿತು ಹಲ್ಲು ಮಸೆಯ ಹತ್ತಿದೆ. ಸ್ಪೈನಿನ ಅಂತಃಕಲಹವು ಹೊರಗೂ ತೀವ್ರ ವೈಷಮ್ಯವೆಬ್ಬಿಸುವ ಸಂಭವ ತೋರುತ್ತದೆ. ತಾ. ೧೧ರವಾರ್ತೆಯಂತೆ ಸರಕಾರಿ ಕಡೆಯ ಸೈನಿಕರು, ಮೇದ್ರಿದನ್ನು ಮುತ್ತಿಬರುವ ಬಂಡಾಯಗಾರ ಸೈನಿಕರ ಮೇಲೆ ಬಿದ್ದು ತಡೆಗಟ್ಟಿರುವರೆಂದು ತಿಳಿದು ಬರುತ್ತದೆ. ಆದರೆ ಬಂಡಾಯಗಾರರ ಕಡೆಯಿಂದ ಬಂದ ವಾರ್ತೆಯಿಂದ ಅವರು ಮುತ್ತೂ ವಿಜಯಹೊಂದಿರುವಂತೆ ತೋರುತ್ತದೆ.

ಪಂಡಿತ ಜವಾಹಿರಲಾಲರು

ಮದ್ರಾಸಿಗೆ ಬಂದಂದಿನಿಂದ ಅಲ್ಲಿಯ ರಾಷ್ಟ್ರೀಯ ಜೀವನದಲ್ಲಿ ವಿದ್ಯುತ್ ಪ್ರವಾಹದ ಸಂಚಾಲನೆಯಾದಂತಾಗಿದೆ. ಕಳೆದ ವಾರವು ಮದ್ರಾಸ್ ಪಟ್ಟಣದಲ್ಲಿ ಜವಾಹಿರಲಾಲರ ಹಪ್ತೆಯಾಗಿದ್ದಿತೆನ್ನಬಹುದು. ಮುಂಜಾನೆಯಿಂದ ರಾತ್ರಿಯವರೆಗೆ ಇಡೀ ಪಟ್ಟಣದ ಜೀವನದಲ್ಲಿ ಕಾಂಗ್ರೆಸ್ ಪ್ರೆಸಿಡೆಂಟರ ಸತ್ಕಾರ, ಸಭೆ, ಭಾಷಣಗಳ ಹೊರತು ಬೇರೊಂದು ಸಂಗತಿಯೇ ಜನರ ಗಣನೆಗೆ ಬರಲಿಲ್ಲ. ಅವರಿಗೆ ಸಾರ್ವತ್ರಿಕವಾದ ಸ್ವಾಗತ ದೊರೆತಿದ್ದಿತು. ಕಾಂಗ್ರೆಸಿನ ವೈರಿಗಳ ಎದೆ ತಲ್ಲಣಗೊಳ್ಳುವಂತೆ ಜನಸ್ತೋಮಕ್ಕೆ ಪಂಡಿತರ ಸಂದರ್ಶನದ ಮಂಕು ಹಿಡಿದಂತೆ ತೋರುತ್ತಿತ್ತು. ಪಂಡಿತರು ಮದ್ರಾಸ್ ಬಿಟ್ಟು ಎಲ್ಲಿಹೋದರೂ ಜನಸಮುದಾಯವೇ ಅವರೊಂದಿಗೆ ಚಲಿಸುವಂತೆ ತೋರುವುದು. ಹಳ್ಳಿಮೂಲೆಯಲ್ಲಿಯೂ ಸಹಸ್ರಗಟ್ಟಲೆ ಜನರವರನ್ನೊಮ್ಮೆ ನೋಡಲು ತವಕಗೊಂಡು ನೆರೆದುಬರುವರು. ರಾತ್ರಿಹಗಲೆನ್ನದೆ ಹಸಿವು ತೃಷೆಗಳಗೊಡವೆ ಇಲ್ಲದ ೨೪ ಘಂಟೆಗಳನ್ನೆಲ್ಲಾ ಪಂಡಿತರು ಜನರಿಗಿತ್ತರೂ ಸಾಲದೆಂಬಂತಾಗಿರುವುದು. ಇದರಿಂದ ಇಡೀ ದೇಶದ ಜನಸಮುದಾಯವೆಲ್ಲಾ ರಾಷ್ಟ್ರೀಯ ಸ್ವಾತಂತ್ರ್ಯದ ಲವಲವಿಕೆಯಿಂದಿದೆ ಕಾಂಗ್ರೆಸಿನ ಬೆಂಬಲಕ್ಕಿದೆಯೆಂಬುದು ಸಿದ್ಧವಾಗುವುದು ಇಂದೀಗ ಪಂಡಿತ ಜವಾಹಿರಲಾಲರು ದೇಶದ ಅದೃಷ್ಟ ಪುರುಷರಂತಾಗಿ ಜನ ಹೃದಯದ ಪ್ರತಿಷ್ಠಿತ ಮೂರ್ತಿಯಾಗಿರುವರು.

ಸಮಾಚಾರ ಸಂಗ್ರಹ

ಲಕ್ನೋದಲ್ಲಿ ನೆರೆಹಾವಳಿ — 35,000 ಜನರ ಮನೆಮಾರು ನಾಶ.

ಇತ್ತೀಚೆಗೆ ಸಂಯುಕ್ತ ಪ್ರಾಂತ್ಯದಲ್ಲಿ ಉಂಟಾದ ನೆರೆ ಹಾವಳಿಯಲ್ಲಿ ಲಕ್ನೋ ಪಟ್ಟಣವೊಂದರಲ್ಲೇ 7507 ಮನೆಗಳು ಬಿದ್ದು ಹೋಗಿ ೩೫,೦೦೦ ಜನರು ನಿರಾಶ್ರಿತರಾಗಿರುವರು. ಒಟ್ಟು ನಷ್ಟ ರೂ. 3 ಲಕ್ಷ ಮೀರಿರುವುದು. ಮನೆಗಳನ್ನು ಹೊಸತಾಗಿ ಕಟ್ಟಲು ಲಕ್ನೋ ಮುನಿಸಿಪಲ್ ಬೋರ್ಡಿನ ಛೇರ್ಮನ್‌ರಾದ ಚೌಧುರಿ ಖಾಲಿಕುಜಾಮನರು ಸರಕಾರದಿಂದ ರೂ. 1 ಲಕ್ಷ ಸಹಾಯ ಕೇಳಿರುವರು.

ಅಹಮ್ಮದಾಬಾದ್ ಗಿರಣಿ ಮುಷ್ಕರ

ಅಹಮ್ಮದಾಬಾದ್ ಹತ್ತಿ ಗಿರಣಿಗಳ ಮಜೂರರ ಸಂಬಳವನ್ನು ನೂರಕ್ಕೆ ಇಂತಿಷ್ಟು ಕಡಿಮೆಮಾಡಬೇಕೆಂದು ಗಿರಣಿಮಾಲಕರು ನಿರ್ಧರಿಸಿ ಕೆಲವು ಗಿರಣಿಮಾಲಕರು ಅದನ್ನು ಜ್ಯಾರಿಗೆ ತಂದಿರುವರು. ಇದರಿಂದಾಗಿ ಕೆಲವು ಗಿರಣಿಗಳ ಮಜೂರರು ಮುಷ್ಕರ ಹಿಡಿದಿರುವರು. ಮಜೂರರ ಸಂಬಳ ಕಡಿತವನ್ನು ಮಜೂರ ಸಂಘದವರು ವಿರೋಧಿಸಿ ಸದ್ರಿ ಪ್ರಶ್ನೆಯನ್ನು ಮಧ್ಯಸ್ಥಿಕೆಯಿಂದ ತೀರ್ಮಾನಿಸಬೇಕೆಂಬ ಸೂಚನೆ ಮಾಡಿರುವರು.

ಅಬಿಸೀನಿಯದ ಪರಿಸ್ಥಿತಿ.

ಅಬಿಸೀನಿಯದಲ್ಲಿ ಇನ್ನು ಇಟೆಲಿಯವರನ್ನು ಪ್ರಬಲವಾಗಿ ವಿರೋಧಿಸುವವರಿರುವುದಿಲ್ಲ. ಅಬಿಸೀನಿಯರ ಉತ್ತರದ ಸೇನಾನಾಯಕರೂ, ಪಶ್ಚಿಮ ಅಬಿಸೀನಿಯದ ಗೋರಿನಲ್ಲಿ ಸ್ಥಾಪಿತವಾಗಿರುವ ಸರಕಾರದ ಮುಖ್ಯಾಧಿಕಾರಿಯೂ ಆದ ರಾಸ್ ಇಮ್ರುರವರು ತನ್ನ ಪರಿವಾರದೊಂದಿಗ ಅಬಿಸೀನಿಯವನ್ನೇ ಬಿಟ್ಟು ಉಗಾಂಡಕ್ಕೆ ಹೋಗಿ ನೆಲಸಲಿರುವರೆಂದು ತಿಳಿದು ಬರುತ್ತದೆ. ಮುಸಲೋನಿಯವರು ಲೀಗ್ ಆಫ್ ನೇಶನ್ಸನ್ನು ಬಿಟ್ಟುಬಿಡದೆ ಮತ್ತು ಅದರ ಕಾರ್ಯಕಲಾಪಗಳಲ್ಲೂ ಭಾಗಿಯಾಗದೆ ಕೆಲ ಸಮಯ ತಟಸ್ಥರಾಗಿರುವ ನಿರ್ಧಾರಕ್ಕೆ ಬಂದಿರುವಂತಿದೆ. ಫ್ರಾನ್ಸು ಇಟೆಲಿಯ ಅಬಿಸೀನಿಯ ಸಾಮ್ರಾಜ್ಯವನ್ನು ಅಂಗೀಕರಿಸುವಂತೆ ತೋರುತ್ತದೆ

ರಾಷ್ಟ್ರೀಯ ಧ್ವಜಾರೋಹಣ

ಇದೇ ತಾ. 7ರಲ್ಲು ಕಲ್ಕತ್ತ ಕೋರ್ಪರೇಶನಿನವರು, ತಮ್ಮ ಅಧೀನವಿರುವ ಸಂಸ್ಥೆಗಳಲ್ಲಿ ರಾಷ್ಟ್ರೀಯ ಧ್ವಜಾರೋಹಣ ಮಾಡುವ ವೆಚ್ಚವನ್ನು ಮಂಜೂರು ಮಾಡಿರುವರು. ಯುರೋಪಿಯನ್ ಮತ್ತು ನೊಮಿನೇಟ್ ಮೆಂಬರರು ಮಾತ್ರ ಇದಕ್ಕೆ ವಿರೋಧವಿದ್ದರು. ಇದೇ ರೀತಿ ದೇಶಬಂಧು ದಾಸರ ಮರಣ ದಿನಾಚರಣೆಯ ವೆಚ್ಚವನ್ನೂ ಕೋರ್ಪರೇಶನಿನವರು ಮಂಜೂರು ಮಾಡಿರುವರು

ಮಹಾತ್ಮಾ ಗಾಂಧಿಯವರು

ಇದೇ ತಾ. ೨೭ರಲ್ಲು ವಾರ್ಧದಿಂದ ಬೊಂಬಾಯಿಗೆ ಹೋಗಿ ತಾ. ೨೮ರಲ್ಲು ಅಹಮ್ಮದಾಬಾದಿನ ಮಾರ್ಗವಾಗಿ ರಾಜಕೋಟೆಗೆ ತೆರಳುವರು. ಅಲ್ಲಿ ಎರಡು ದಿನವಿದ್ದು ತಾ. 30ರಲ್ಲು ಅಹಮ್ಮದಾಬಾದಿಗೆ ಪುನಃ ಹಿಂತಿರುಗಿ ಅನಂತರ 3 ದಿನಗಳವರೆಗೆ ಅಹಮ್ಮದಾಬಾದಿನಲ್ಲದ್ದು ಗುಜರಾತಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತನ ವಹಿಸುವರು. ಖಾನ್ ಅಬ್ದುಲ್ ಗಾಫರ್ ಖಾನರು ಗಾಂಧಿಜಿಯವರೊಂದಿಗೆ ಬರುವರೆಂದೂ, ಸರ್ದಾರ್ ವಲ್ಲಭಾಯಿಯವರು ಬೊಂಬಾಯಿಯಲ್ಲಿ ಅವರೊಂದಿಗೆ ಸೇರಲಿರುವರೆಂದೂ ತಿಳಿದು ಬರುತ್ತದೆ.

ಭಾರತ ಮಾತಾ ಮಂದಿರ

ಬೆನಾರೀಸಿನ ಕಾಶಿ ವಿದ್ಯಾಪೀಠದ ಬಳಿ ಭಾರತ ಮಾತಾ ಮಂದಿರವೆಂಬ ದೇವಸ್ಥಾನವೊಂದನ್ನು ಸ್ಥಳೀಯ ಮಿಲ್ಯಾಧೀಶರೊಬ್ಬರು ಕಳೆದ 10 ವರ್ಷಗಳಿಂದ ಕಟ್ಟಿಸುತ್ತಿರುವರು. ಅದರ ಕೆಲಸವೀಗ ಸಂಪೂರ್ಣವಾಗಿದೆ. ಈ ದೇವಸ್ಥಾನವು ಶ್ವೇತಶಿಲೆಯ ಕೆತ್ತನೆಕೆಲಸಗಳಿಂದ ಅತ್ಯಂತ ಮನೋಹರವಾಗಿದೆ. ಇದರೊಳಗೆ ಶೃಂಗರಿಸಲ್ಪಟ್ಟಿರುವ ಹಿಂದುದೇಶದ ಶ್ವೇತಶಿಲಾ ನಕಾಶೆಯೊಂದಿರುವುದು. ಇದು ೩೨ ಇಂಚು ಉದ್ದ ಮತ್ತು ಅಷ್ಟೇ ಅಗಲವಾಗಿದೆ. ಇದಕ್ಕೇನೇ ಸುಮಾರು ರೂ. ೨೫,೦೦೦ ವೆಚ್ಚವಾಗಿದೆ. ದೇವಸ್ಥಾನದ ಒಳಭಾಗದ ಗೋಡೆಗಳಲ್ಲಿ ಹಿಂದುದೇಶದ ಚಾರಿತ್ರಿಕ ಚಿತ್ರಗಳು ಪೈಂಟ್ ಮಾಡಲ್ಪಟ್ಟಿವೆ. ಇದೇ ತಾ. ೨೫ರಲ್ಲು ಮಹಾತ್ಮ ಗಾಂಧಿಯವರು ಬೆನಾರೀಸಿಗೆ ಹೋಗಿ ಈ ಮಂದಿರವನ್ನು ತೆರೆಯಲೊಪ್ಪಿರುವರೆಂದು ತಿಳಿದು ಬರುತ್ತದೆ. ಪಂಡಿತ ಜವಾಹಿರಲಾಲ, ಸರ್ದಾರ್ ವಲ್ಲಭಾಯಿ ಮೊದಲಾದ ಮುಖಂಡರೂ ಈ ಸಂದರ್ಭದಲ್ಲಿ ಆಮಂತ್ರಿಸಲ್ಪಟ್ಟಿರುವರು

ಮದ್ರಾಸಿನ ಹೊಸ ಮಂತ್ರಿಗಳು
ಕುಮಾರ ರಾಜ ಮುತ್ತಯ್ಯ ಚೆಟ್ಟಿಯವರ ನೇಮಕ

ಶಿಕ್ಷಣ ಮತ್ತು ಆರೋಗ್ಯ ಖಾತೆಯ ಮಂತ್ರಿಗಳಾದ ಮಾನ್ಯ ದಿವಾನ್ ಬಹದೂರು ಎಸ್. ಕುಮಾರ ಸ್ವಾಮಿ ರೆಡ್ಡಿಯವರಿಗೆ ಅಕಸ್ಮಾತ್ತಾಗಿ ಕಾಯಿಲೆಯುಂಟಾಗಿರುವುದರಿಂದ ಅವರ ಬದಲಾಗಿ ಕುಮಾರ ರಾಜ ಮುತ್ತಯ ಚೆಟ್ಟಿಯಾರರು ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವರು. ಶ್ರೀ ಕುಮಾರ ಸ್ವಾಮಿ ರೆಡ್ಡಿಯಾರರು ಕಳೆದ ೬ ವರ್ಷಗಳಿಂದ ಮಂತ್ರಿಗಳಾಗಿದ್ದರು

ಪೆಲೆಸ್ತೈನಿನ ಗಲಾಟೆ

ಶಾಂತಿ ಸ್ಥಾಪನೆಯ ಮಾತುಕತೆ.

ಅರಬಿಸ್ಥಾನದ ಇಬನ್ ಸಾವುದರೇ ಮೊದಲಾದ 1 ಮಂದಿ ಅರಸರ ಮಧ್ಯಸ್ಥಿಕೆಯಿಂದ ಪೆಲಸ್ತಿನದ ಅರಬರು ಸ್ವಾತಂತ್ರ್ಯ ಸಾಧನೆಗಾಗಿ ನಡೆಸಿದ ಹೋರಾಟವು ನಿಲ್ಲಿಸಲ್ಪಟ್ಟು ಶಾಂತಿಯುಂಟಾಗುವ ಸಂಭವ ತೋರುತ್ತದೆ. ಈ ವಿಷಯದಲ್ಲಿ ಬೇಗನೆ ವಿನಂತಿಯೊಂದು ಹೊರಡಿಸಲ್ಪಡುತ್ತದೆ. ಪೆಲಸ್ತೈನದಲ್ಲಿ ಸೇನಾಡಳಿತವು ಸ್ಥಾಪಿಸಲ್ಪಟ್ಟಿರುವುದಷ್ಟೆ. ಈ ಸೈನಿಕರಿಗೂ ಅರಬರಿಗೂ ಅಲ್ಲಲ್ಲಿ ಹೋರಾಟಗಳು ನಡೆದು ಅರಬರ ಪ್ರಮುಖ ನಾಯಕರೊಬ್ಬರು ಕೊಲ್ಲಲ್ಪಟ್ಟಿರುವರು. ಇದೇ ತಾ ೪ರಲ್ಲು ಸೈನಿಕರು ಜೆರುಸಲೆಮ್ಮಿನ ಬಳಿಯ ಗುಡ್ಡ ತಪ್ಪಲುಗಳಲ್ಲಿನ ಅರಬರನ್ನು ನಿವಾರಿಸುತ್ತಿರುವರು. ತಾ ೯ರಲ್ಲು ಕೆಲವುಮಂದಿ ಅರಬರಿಗೂ ಸೈನಿಕರಿಗೂ ಹೋರಾಟವಾಗಿ 15 ಮಂದಿ ಅರಬರು ಕೊಲ್ಲಲ್ಪಟ್ಟಿರುವರು ಇಲ್ಲವೆ ಗಾಯಗೊಂಡಿರುವರು. ಬ್ರಿಟಿಷರ ಎರಡು ಟ್ಯಾಂಕಿಗಳು ಒಡೆದು ಹಾಕಲ್ಪಟ್ಟಿರುವವು.

ದೇಶಬಂಧು ದಾಸರ ತೈಲಚಿತ್ರದ ಮೇಲೆ ಪರದೆ.
ಕಲೆಕ್ಟರರ ವರ್ತನೆಯ ನಿಷೇಧ

ಕಲ್ಕತ್ತದ ಹೌರ ಪಟ್ಟಣದ ಟೌನ್ ಹೋಲಿನಲ್ಲಿ ದೇಶಬಂಧು ದಾಸರ ತೈಲಚಿತ್ರವು ಇರಿಸಲ್ಪಟ್ಟಿರುವುದು. ಈ ಹೋಲು ಇದೇ ತಾ. 1ರಲ್ಲು ದರ್ಬಾರು ನಡೆಸಲು ಕಲೆಕ್ಟರರಿಗೆ ಕೊಡಲ್ಪಟ್ಟಿರುವುದು. ಕಲೆಕ್ಟರರಾದ ರೈಸ್-ರೇಶಚಂದ್ರಸಿಂಹ ಬಹದೂರರು ದೇಶ ಬಂಧುಗಳ ತೈಲ ಚಿತ್ರದ ಮೇಲೆ ಪರದೆಹಾಕಿಸಿ ಮರೆಮಾಡಿಸಿರುವರು. ಇದರಿಂದ ಹೌರ ಮುನಿಸಿಪಾಲಿಟಿಯವರು ರೇಗಿಬಿದ್ದು ಇದೇ ತಾ. ೧ರಲ್ಲು ಸಭೆಸೇರಿ ಕಲೆಕ್ಟರರ ವರ್ತನೆಯನ್ನು ನಿಷೇಧಿಸಿರುವರು ಮತ್ತು ಹೋಲನ್ನು ದರ್ಬಾರು ನಡಿಸಲು ಕೊಡಲಾಗುವುದಿಲ್ಲವೆಂದು ನಿಶ್ಚೈಸಿರುವರು

ಅಮರಜ್ಯೋತಿಯ ಪ್ರಶಂಸೆ

ಬೊಂಬಾಯಿಯ ಪ್ರಭಾತ ಫಿಲ್ಮ್ ಕಂಪೆನಿಯವರ ಉತ್ಕೃಷ್ಟ ಚಿತ್ರವಾದ ಅಮರ ಜ್ಯೋತಿಯು, ವೆನಿಸಿನಲ್ಲಿ ನಡೆಯುವ ಅಂತರ ರಾಷ್ಟ್ರೀಯ ಚಲನ ಚಿತ್ರಕಲಾ ಪ್ರದರ್ಶನಕ್ಕೆ ಕಳುಹಿಸಲ್ಪಟ್ಟಿರುವುದಷ್ಟೆ. ಇದು ಅಲ್ಲಿಯ ಜನರಿಂದಲೂ, ವಿಮರ್ಶಕರಿಂದಲೂ ಬಹಳವಾಗಿ ಪ್ರಶಂಸಿಸಲ್ಪಟ್ಟಿದೆ. ಗಂಡನ ಕ್ರೂರ ಪೀಡೆಗೊಳಗಾದ ಪತ್ನಿಯು ಗಂಡನನ್ನು ಬಿಟ್ಟುಹೋಗಿ ಸಮುದ್ರದಲ್ಲಿ ಕಳ್ಳತನ ನಡಿಸಿ ಕಳ್ಳರ ದೊಡ್ಡ ಪಂಗಡವನ್ನು ಸ್ಥಾಪಿಸಿ, ಸ್ತ್ರೀಸ್ವಾತಂತ್ರ್ಯವನ್ನೇ ತನ್ನ ಜೀವನದ ಉದ್ದೇಶವಾಗಿಮಾಡಿದುದೇ ಅಮರ ಜ್ಯೋತಿಯ ಕಥಾಸಾರಾಂಶ. ಇದರಲ್ಲಿ ಶ್ರೀಮತಿ ದುರ್ಗಾಬಾಯಿ ಕೋಟೆ, ಶಾಂತಾ ಆಪ್ಟೆ, ಕುಮಾರಿ ವಸಂತಿ ಚಂದ್ರಮೋಹನ ನಿಂಬೋಲ್ಕರ್ ಮೊದಲಾದವರು ಪಾತ್ರವಹಿಸಿರುವರು.

ನರ್ತಕಿಯರ ನಾಟಕ ಕಂಪೆನಿ

ಸಂಯುಕ್ತ ಪ್ರಾಂತದ ನೈನಿತಾಲಿನ ಸುಮಾರು 10 ಮಂದಿ ನರ್ತಕಿಯರು ಸ್ವತಂತ್ರವಾಗಿ ಜೀವನ ನಡಿಸುವುದಕ್ಕಾಗಿ ತಮ್ಮದೇ ಆದೊಂದು ನಾಟಕ ಮಂಡಲಿಯನ್ನು ಸ್ಥಾಪಿಸಿರುವರು. ನಾಟಿಕೆಯರ ವೇಶ್ಯಾವೃತ್ತಿಯನ್ನು ನಿಲ್ಲಿಸಿಬಿಡಬೇಕೆಂಬುದೇ ಇವರ ಉದ್ದೇಶ. ಈ ನಾಟಕ ಮಂಡಳಿಯ ಪಾತ್ರಧಾರರೆಲ್ಲಾ ಸ್ತ್ರೀಯರೇ. ಸುಪ್ರಸಿದ್ಧ ನಾಟಕಕಾರರಾದ ಠಾಕೂರು ಜಗನ್ನಾಥ ಸಿಂಘರೇ ಇದರ ಪ್ರೇರೇಪಕರು

ಹಿಂದೀ ಕಲೆಯ ಮೆಚ್ಚಿಗೆ

ಸುಪ್ರಸಿದ್ಧ ಹಿಂದೀ ನರ್ತಕಿಯಾದ ಮೇನಕೆಯು ತನ್ನ ಪಂಗಡದೊಂದಿಗೆ ಯುರೋಪಿನ ಪ್ರೇಗ್ ಪಟ್ಟಣಕ್ಕೆ ಹೋಗಿ ನರ್ತನ ನಡಿಸಿ ಪ್ರಶಂಸೆ ಪಡೆದಿರುವರು. ಹಿಂದೀ ನರ್ತನಕಲೆಯು ಜನತೆಯ ಮೆಚ್ಚಿಗೆಗೊಳಗಾಗಿರುವುದು.

ಮೌಲಾನ ಶೌಕತಾಲಿಯವರ ನಿಷೇಧ
ಅಬ್ದುಲ್ಲಾ ಗಾಂಧಿಯವರ ಪ್ರಚಾರ.

ಕೆಲವುಮಂದಿ ಮುಸಲ್ಮಾನರು ಅಬ್ದುಲ್ಲಾ ಗಾಂಧಿಯವರ ಮತಾಂತರವನ್ನು ಮಹತ್ವಾಗಿ ಮಾಡಿಕೊಂಡು ಅದರ ಪ್ರಚಾರಕ್ಕಾಗಿ ಕೋಣ್‌ಪುರದಲ್ಲಿ ತಬ್ಲಿಗ್ ಪರಿಷತ್ತನ್ನು ಜರಗಿಸುವುದನ್ನು ಮೌಲಾನಶೌಕತಾಲಿಯವರು ನಿಷೇಧಿಸಿರುವರು. ಅವರು ಸದ್ರಿ ಪರಿಷತ್ತಿನಲ್ಲಿ ಭಾಗಿಯಾಗಲು ನಿರಾಕರಿಸಿರುವರು. ಶ್ರೀ ಹರಿಲಾಲ ಗಾಂಧಿಯವರ ಮತಾಂತರವನ್ನೇ ಪ್ರಚಾರಗೊಳಿಸಿ ಮುಸಲ್ಮಾನರ ಮೇಲೆ ದೊಡ್ಡ ವಂಚನೆ ನಡಿಸುವ ಕುತಂತ್ರವಿದೆಂದೇ ಅವರ ಅಭಿಮತ. ಹೊಸತಾಗಿ ಮತಾಂತರಹೊಂದಿದ ಅಬ್ದುಲ್ಲ ಗಾಂಧಿಯವರು ಇಸ್ಲಾಮ್ ಧರ್ಮದ ಕುರಿತು ತಬ್ಲಿಗ್ ಪರಿಷತ್ತಿನಲ್ಲಿ ಭಾಷಣಮಾಡುವುದೆಂಬುದರಲ್ಲಿ ಅರ್ಥವಿಲ್ಲ. ಇಂತಹ ಸಭೆಗಳಲ್ಲಿ ಅಬ್ದುಲ್ಲ ಗಾಂಧಿಯವರು ಭಾಗಿಯಾಗದಿರುವುದೇ ಒಳ್ಳೇದೆಂದು ಡಿಲ್ಲಿಯ ಖಾಜಿ ಸಾಜುದ್ದೀನರು ಹೇಳಿರುವರು.

ದಿವಂಗತ ಮುಲ್ಕಾಡಿ ಕೃಷ್ಣಯ್ಯ ಶೆಟ್ರು.

ಹೋಯಿತ್ತು; ನನ್ನ ಪರಮಾಪ್ತರಲ್ಲೊಬ್ಬರಾಗಿದ್ದ ಕೃಷ್ಣಯ ಶೆಟ್ರು ಅಕಾಲನಿಧನದಿಂದ ನನ್ನ ಮನಸ್ಸು ತುಂಬಾ ತಪಿಸುತ್ತಿದೆ. ಯಕ್ಷಗಾನರಂಗದಲ್ಲಿಯೇ ಅವರ ಪರಿಚಯವು ಮೊದಲಾಗ ನಡಗಿದುದು. ಆ ಪರಿಚಯದಿಂದ ನಮ್ಮೊಳಗೆ ಸ್ನೇಹಲಾಭವು ಆಗಿರದಿದ್ದರೂ, ರಾಜಸಭೆಯ ರಂಗದಲ್ಲಿ ನಾವು ಒಂದಾಗಿದ್ದವು. ಪ್ರಾಚೀನಪದ್ಧತಿಯೇ ಪ್ರಾಮುಖ್ಯವಾಗಿ ಬೇರೂರಿದವರಲ್ಲಿ, ಪ್ರಗತಿಪರಧೋರಣೆಗಳಿಗೆ ಸಾಧ್ಯವಿದ್ದಷ್ಟು ಸಹಾಯ ಮಾಡಿರುವ ನಮ್ಮ ಜಿಲ್ಲೆಯ ಕೆಲವೇ ಮಂದಿಗಳಲ್ಲಿ ಕೃಷ್ಣಯ ಶೆಟ್ರು ಒಬ್ಬರಾಗಿದ್ದರು. ವೀರತೆಯೇ ಮುಖ್ಯ ಲಕ್ಷಣವಾಗಿದ್ದು ಯಾವಕಾಲಕ್ಕೂ ಯಾರೊಬ್ಬರಿಗೂ ಮಣಿಯದ ಆ ಶೆಟ್ರ ತಲೆಯು ಸಾರ್ವಜನಿಕಸಂಸ್ಥೆಯಲ್ಲಿ ಹೋರಾಡುವವರನ್ನು ಕಂಡರೆ ಆದರದಿಂದ ಬಾಗುತ್ತಿತ್ತು. ಅಂಥವರಿಗೆ ಯೋಗ್ಯವಾದ ಆತಿಥ್ಯವು ಅವರಲ್ಲಿ ಬೇಕಾದಂತೆ ದೊರಕುತ್ತಿತ್ತು. ಆದ್ದರಿಂದಲೇ ಯಾವುದೊಂದು ಸಂಸ್ಥೆಯ ಪರವಾಗಿ ಕೆಲಸ ಮಾಡುವವರು ಬ್ರಹ್ಮಾವರಕ್ಕೆ ಹೋದಲ್ಲಿ ಅವರ ಆಮಂತ್ರಣಕ್ಕಾಗಿ ಅಳದಿರಲಾರರು. ಅವರಲ್ಲಿ ಪಾಂಡಿತ್ಯವು ತುಂಬಿಕೊಂಡಿತ್ತು. ಆದ್ದರಿಂದಲೇ ಅವರ ಮಾತುಗಳಿಗಿಂತ ಅದು ಎಷ್ಟೋ ಆಳವಾಗಿತ್ತು. ಅದ್ದರಿಂದಲೇ ಅವರಿದ್ದ ಯಕ್ಷಗಾನ ಕೂಟಗಳಲ್ಲಿ ಅವರ ಪರಿಚಯವಿದ್ದ ಅರ್ಥಧಾರಿಗಳು ಯಾವಾಗಲೂ ಹೆಚ್ಚು ಜಾಗ್ರತೆಯಿಂದಿರಬೇಕಾಗಿತ್ತು. ಯಕ್ಷಗಾನ ರಂಗದಲ್ಲಿ ನಾವು ಒಬ್ಬರನ್ನೊಬ್ಬರು ಚೆನ್ನಾಗಿ ತಿಳಿದು ಕಲೆತು ಕಲಸಮಾಡುವ ಕಾಲವು ಕೂಡಿಬರುತ್ತಿರುವಾಗಲೇ ಅವರು ಕಳದುಹೋದುದು ತುಂಬಾ ದುಃಖಕರವಾಗಿದೆ.

ಎನ್. ಎಸ್. ಕಿಲ್ಲೆ.

ನವಯುಗ

ಉಡುಪಿ, ತಾ. ೧೫-೧೦-'೩೬ ಗುರುವಾರ

ಪಂಡಿತ ಜವಾಹರಲಾಲರ ಭಾಷಣ

ಪಂಡಿತ ಜವಾಹರಲಾಲರು ಮದ್ರಾಸಿನ ತಿಲಕ ಘಾಟಿನ ಪ್ರಚಂಡಸಾರ್ವಜನಿಕ ಸಭೆಯಲ್ಲೂ ಇತರ ಕಡೆಗಳಲ್ಲೂ ಮಾಡಿದ ಭಾಷಣಗಳಲ್ಲಿ ಜನತೆಯ ಮನಗಾಣಿಸಿದ ಎರಡು ಪ್ರಾಮುಖ್ಯ ವಿಷಯಗಳೆಂದರೆ ದೇಶದ ಸ್ವಾತಂತ್ರ್ಯಸಾಧನೆ ಮತ್ತು ಹೊಸ ಸಾಂಪತ್ತಿಕ ಮತ್ತು ಸಮಾಜರಚನೆಯ ಸಿದ್ಧತೆ. ಈಗ ದೇಶಕ್ಕೆ ಎಲ್ಲಕ್ಕಿಂತಲೂ ಮೊದಲಾಗಿ ಬೇಕಾದುದು ರಾಜಕೀಯ ಸ್ವಾತಂತ್ರ್ಯ. ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಪರಾಧೀನತೆಯಿಂದ ಹಿಂದೀಯರೀಗ ಪ್ರಥಮವಾಗಿ ವಿಮುಕ್ತಹೊಂದಬೇಕು. ದೇಶದ ಸ್ವಾತಂತ್ರ್ಯ ಸಾಧನೆಗಾಗಿ ಕಳೆದ 50 ವರ್ಷಗಳಿಂದ ಅವಿರತವಾಗಿ ಕೆಲಸಮಾಡಿಕೊಂಡು ಬಂದ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯೆಂದರೆ ಕಾಂಗ್ರೆಸು. ಅದರ ಮೂಲಕ ಮಾತ್ರವೇ ನಿಜವಾದ ಸ್ವಾತಂತ್ರ್ಯವನ್ನು ಸಾಧಿಸಲು ಸಾಧ್ಯವಿದೆ. ಆದುದರಿಂದ ಜನರೆಲ್ಲಾ ಒಮ್ಮತದಿಂದ ಅದರೊಡನೆ ಸಹಕರಿಸಿ ಒಕ್ಕಟ್ಟಿನಿಂದ ಸ್ವರಾಜ್ಯ ಸಾಧನೆಗಾಗಿ ಪ್ರಯತ್ನಿಸಬೇಕು. ಸದಾ ಅದರ ಗೌರವವನ್ನೆತ್ತಿ ಹಿಡಿಯಲು ಸಿದ್ಧರಿರಬೇಕು. ಅದರ ಅನುಜ್ಞೆಯನ್ನು ಶಿರಸಾವಹಿಸಿ ಪಾಲಿಸಬೇಕು ಅದಕ್ಕಾಗಿ ಯಾವ ತ್ಯಾಗಮಾಡುವುದಕ್ಕೂ ಸಿದ್ಧರಿರಬೇಕು. ಕಠಿಣ ಶಿಸ್ತಿನಿಂದ, ಪ್ರಬಲ ಸಂಘಟನೆಯಿಂದ, ಕೆಲಸಮಾಡಿ ಕಾಂಗ್ರೆಸಿನ ಬಲವನ್ನು ಹೆಚ್ಚಿಸಬೇಕು. ಅದು ಕೈಕೊಂಡ ಕಾರ್ಯಕ್ರಮವು ಜಯಶೀಲಹೊಂದುವಂತೆ ಮಾಡಬೇಕು. ಪ್ರಕೃತ ಅದು ಚುನಾವಣೆಯಲ್ಲಿ ಭಾಗಿಯಾಗುವ ನಿರ್ಧಾರಮಾಡಿರುವುದರಿಂದ ಜನರಲ್ಲ ಅದರ ಪರವಾಗಿ ನಿಂತ ಉಮೇದ್ವಾರಿಗಳನ್ನೇ ಆರಿಸಿ, ಕಾಂಗ್ರೆಸಿನ ಮೇಲಿನ ವಿಶ್ವಾಸವನ್ನು ಸಿದ್ಧಪಡಿಸಬೇಕೆಂದೇ ಪಂಡಿತರ ಆಗ್ರಹದ ಹೇಳಿಕೆ. ಯಾವ ಉದ್ದೇಶದಿಂದಾದರೂ ಕಾಂಗ್ರೆಸಿನೊಳಗೆ ಒಡಕುಂಟುಮಾಡುವ ಕಾರ್ಯವು ಅವರಿಗೆ ಸಹನೀಯವಾಗಲಾರದು. ತಾನು ಸಮತಾವಾದಿಯಾದರೂ, ಸಮತಾವಾದವನ್ನು ಕಾಂಗ್ರೆಸು ಸ್ವೀಕರಿಸಿರುವುದಿಲ್ಲವಾದರೂ ಅದಕ್ಕಾಗಿ ಅವರು ಕಾಂಗ್ರೆಸಿನೊಳಗೆ ಒಡಕುಂಟುಮಾಡಲು ತಯಾರಿಲ್ಲ. ಸ್ವಾತಂತ್ರ್ಯ ಸಾಧನೆಯೇ ಕಾಂಗ್ರೆಸಿನ ಮೊದಲ ಗುರಿ. ಆ ಗುರಿ ಮುಟ್ಟಿದ ಮೇಲೆ ಮಾತ್ರವೇ ಇನ್ನಾವ ಕೆಲಸವನ್ನಾದರೂ ಮಾಡಲು ಸಾಧ್ಯವಿದೆಯೆಂಬುದೇ ಅವರ ಮನೋನಿರ್ಧಾರ.

ಹಿಂದೀಯರು ಸ್ವಾತಂತ್ರ್ಯಕ್ಕಾಗಿ ಚಳವಳಿಸುತ್ತಿರುವಾಗಲೇ ಲೋಕದ ಇತರ ಕಡೆಗಳಲ್ಲಿ ನಡೆಯುತ್ತಿರುವ ಸಂಗತಿಗಳ, ಹೋರಾಟಗಳ, ವಿಪ್ಲವಕ್ರಾಂತಿಗಳ ಕುರಿತು ಕಣ್ಮುಚ್ಚಿಕೊಂಡಿರಬಾರದು ವಿಶಾಲಬುದ್ಧಿಯುಳ್ಳವರಾಗಬೇಕು; ವ್ಯಾಪಕದೃಷ್ಟಿಯಿಂದ ಲೋಕದಲ್ಲಿ ನಡೆಯುವ ಸಂಗತಿಗಳನ್ನೆಲ್ಲ ವಿಚಾರಿಸಿ ತಿಳಕೊಳ್ಳಬೇಕು. ಹೊರಗಣ ಆಗುಹೋಗುಗಳಿಗೆ ಮನಸ್ಸನ್ನು ಮುಚ್ಚಿಡುವ ಜಡಬುದ್ಧಿಯವರಾಗಬಾರದು. ಸಾಮ್ರಾಜ್ಯಶಾಹಿ, ಧನದೌಲತ್ತು ಶಾಹಿಯ ದುಷ್ಪರಿಣಾಮದ ನಿಮಿತ್ತ ಈಗಣ ಸಮಾಜ ವ್ಯವಸ್ಥೆಯು ಕುಸಿದು ಬೀಳ ಹತ್ತಿರುವುದು. ಲೋಕವನ್ನೇ ಮಹಾಪ್ರವಾಹವು ಆವರಿಸ ಹತ್ತಿರುವುದು. ಅದು ಅವರಿವರೆನ್ನದೆ ಎಲ್ಲರನ್ನೂ ತನ್ನ ಹೊಯ್ಲಿನೊಂದಿಗೆ ಒಯ್ದು ಬಿಡುವುದು. ಆ ಮಹಾಸಂಘಟ್ಟಕ್ಕೆ, ಆ ಕ್ರಾಂತಿಗೆ, ಆ ನವನಿರ್ಮಾಣಕ್ಕೆ ಹಿಂದೀಯರು ತಮ್ಮನ್ನು ತಯಾರುಮಾಡಿಕೊಳ್ಳಬೇಕು. ಧನಶಾಹಿ, ಸಾಮ್ರಾಜ್ಯಶಾಹಿಯ ಪರಿಣಾಮವಾದ ಘೋರದಾರಿದ್ರ್ಯ ಮತ್ತು ನಿರುದ್ಯೋಗ ಸಮಸ್ಯೆಗಳ ನಿವಾರಣೆಯಾಗಿ ಜನಸಾಮಾನ್ಯರ ಸುಖ ವ್ಯವಸ್ಥೆಯ ಒಂದೇ ದಾರಿಯೆಂದರೆ ಸಮತಾವಾದ. ರಶ್ಯದ ಮಾದರಿಯು ನಮ್ಮ ಮುಂದಿದೆ. ಇತರ ಕೆಲವು ದೇಶಗಳವರು ಅದನ್ನು ಬೇರೆಬೇರೆ ರೀತಿಯಲ್ಲಿ ಅನುಸರಿಸುತ್ತಿದ್ದಾರೆ. ಹಿಂದೀಯರು ಅದನ್ನು ಹಿಂದುದೇಶದ ಸ್ಥಿತಿಗತಿಗನುಸಾರವಾಗಿ ಸರಿಪಡಿಸಿ ತಮ್ಮದೇ ಆದ ನವಸಮಾಜ ವ್ಯವಸ್ಥೆಯನ್ನು ಮಾಡದೆ ಗತ್ಯಂತರವಿರುವುದಿಲ್ಲ. ಆಂಗ್ಲೇಯರು ಹೋಗಿ ಅವರ ಬದಲಿಗೆ ಹಿಂದೀಯರು ಅಧಿಕಾರಕ್ಕೆ ಬಂದು ಈಗಣ ರಾಜ್ಯಾಡಳಿತವನ್ನು ನಡೆಸುವಂತಾದಲ್ಲಿ ಜನತೆಗೆ ಯಾವ ಪ್ರಯೋಜನವೂ ದೊರೆಯಲಾರದು. ದಾರಿದ್ರ್ಯದುಃಖವೂ, ನಿರುದ್ಯೋಗ ಸಮಸ್ಯೆಯೂ ಒಂದಿಷ್ಟು ನಿವಾರಿತವಾಗದು. ದೇಶದಲ್ಲಿ ನಿರ್ಭಿಕ್ಷೆಯುಂಟಾಗಬೇಕಾದರೆ, ಜನಸಾಮಾನ್ಯರ ದಾರಿದ್ರ್ಯದುಃಖವು ನಿವಾರಿತವಾಗಬೇಕಾದರೆ, ಘೋರನಿರುದ್ಯೋಗಸಮಸ್ಯೆಯು ಬಿಡಿಸಲ್ಪಡಬೇಕಾದರೆ ಇಂದಿನ ಅತಳಿತಕ್ರಮವು ಸಾಂಪತ್ತಿಕ ಸ್ಥಿತಿಯು, ಸಮಾಜ ವ್ಯವಸ್ಥೆಯು, ಜೀವನಕ್ರಮವು ಬುಡಸಮೇತ ಕಿತ್ತು ಹಾಕಲ್ಪಟ್ಟು ಹೊಸ ನಿರ್ಮಾಣವಾಗಬೇಕು ಇಂತಹ ನಿರ್ಮಾಣಕ್ಕಾಗಿ, ಮಹತ್ತಾದ ಕ್ರಾಂತಿಗಾಗಿ ಹಿಂದೀಯರು, ವಿಶೇಷವಾಗಿ ತರುಣರು ಈಗಲೇ ವಾತಾವರಣವನ್ನು ತಯಾರಿಸಬೇಕೆಂದೇ ಪಂಡಿತ ಜವಾಹಿರಲಾಲರ ಬೋಧನೆ

ಉಡುಪಿ

ಸತ್ಕಾರ:—ಮದ್ರಾಸಿನ ಡೆವಲಪ್‌ಮೆಂಟ್ ಮಂತ್ರಿಗಳಾದ ಶ್ರೀ ಪಿ. ಟಿ ರಾಜನರು ಇದೇ ತಾ. 17ಕ್ಕೆ ಉಡುಪಿಗೆ ಬಂದಾಗ ಇಲ್ಲಿಯ ನಗರ ಸಭಾಧಿಪತಿ ಶ್ರೀ ಎ. ಲಕ್ಷ್ಮೀನಾರಾಯಣರಾಯರು ಅವರಿಗೊಂದು ಟೀ ಪಾರ್ಟಿಯನ್ನೀಯುವರೆಂದು ತಿಳಿದುಬರುತ್ತದೆ.

ನಾಟಕ:—ಕಳೆದ ತಾ. 3ರಲ್ಲಿ ಮಂಗಳೂರಿನಲ್ಲಿ ಜಯಶೀಲವಾಗಿ ಅಭಿನಯಿಸಲ್ಪಟ್ಟ "ವ್ಯಭಿಚಾರಿಣಿ ಯಾರು?" ಎಂಬ ಸಾಮಾಜಿಕ ನಾಟಕವು ಇಂದು (ತಾ. 15ಕ್ಕೆ) ಮಂಗಳೂರು ಎಮೆಚೂರರಿಂದ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ರಾತ್ರಿ 9-30ಕ್ಕೆ ಅಭಿನಯಿಸಲ್ಪಡುವದು.

ಆತ್ಮಹತ್ಯೆ:—ಇಲ್ಲಿಯ ಸರಕಾರೀ ಧರ್ಮಾಸ್ಪತ್ರೆಯಲ್ಲಿದ್ದ ಕಲ್ಯಾಡಿಯ ಕ್ರಿಶ್ಚಿಯನ್ ರೋಗಿಯೊಬ್ಬನು ಹೊಟ್ಟೆನೋವನ್ನು ತಡೆಯಲಾರದೆ ಕಳೆದ ತಾ. 11ನೇ ಆದಿತ್ಯವಾರ ರಾತ್ರಿ ಆಸ್ಪತ್ರೆಯ ಬಾವಿಗೆ ಹಾರಿ ಆತ್ಮಹತ್ಯೆಮಾಡಿಕೊಂಡಿರುವನು.

ದಕ್ಷಿಣಕನ್ನಡ

ನವರಾತ್ರಿ:—ಇಲ್ಲಿಯ ನವರಾತ್ರಿ ಮಹೋತ್ಸವದ ವಿವಿಧ ಕಾರ್ಯಕಲಾಪಗಳು ಶ್ರೀ. ಎಸ್. ಯು. ಪಣಿಯಾಡಿಯವರ ನೇತೃತ್ವದಲ್ಲಿ 'ಉಡುಪಿ ಮಹಾಜನ ಸಭೆ'ಯವರಿಂದ ಇದೇ ತಾ 16ಕ್ಕೆ ಶ್ರೀ. ರಾಮಕೃಷ್ಣ ಥಿಯೇಟರಿನಲ್ಲಿ ಪ್ರಾರಂಭವಾಗುವವು

ಸೂಚನೆ

ನಮ್ಮ ೫ನೇ ಸಂಚಿಕೆಯಲ್ಲಿ, ಮಂಗಳೂರು ಎಮೆಚೂರ್ ನಾಟಕ ಸಂಘದವರು ಉಡುಪಿಯಲ್ಲಿ ಆಡಲಿರುವ "ವ್ಯಭಿಚಾರಿಣಿ ಯಾರು?" ನಾಟಕದ ಕುರಿತು ಕೊಟ್ಟಿದ್ದ ಪ್ರಕಟಣೆಯಲ್ಲಿ ಕೆಲವರು ತಪ್ಪಾದ ಅರ್ಥವನ್ನು ಕಾಣುತ್ತಿರುವದು ಶೋಚನೀಯವಿದೆ. "ವ್ಯಭಿಚಾರಿಣಿ ಯಾರು?" ಎಂಬುದು ಅವರು ಆಡಲಿರುವ ನಾಟಕದ ಹೆಸರು ಎಂದು ಸ್ಪಷ್ಟವಾಗಿ ತಿಳಿಸಲಿಚ್ಛಿಸುತ್ತೇವೆ.

ಸಂ. ನ.

ದ. ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಯು. ಪಿ ಮಲ್ಯರೂ, ಶ್ರೀಗಳಾದ ಎನ್. ಎಸ್. ಕಿಲ್ಲೆ, ಹಲ್ನಾಡು ಸೂರಪ್ಪಯ್ಯ, ಕೆ. ತಿಮ್ಮಪ್ಪ ಶೆಟ್ಟರೂ, ಜಿಲ್ಲಾ ಕೊಂಗ್ರೆಸ್ ಕಮಿಟಿಯ ತಮ್ಮ ಸ್ಥಾನಗಳಿಗೆ ರಾಜಿನಾಮೆಯಿತ್ತಿರುವರು. ಆ ಕುರಿತು ಪ್ರಶ್ನಿಸಲ್ಪಟ್ಟಾಗ ಶ್ರೀ. ಕಿಲ್ಲೆಯರಿತ್ತ ಹೇಳಿಕೆ:—"ಯಾವ ಪವಿತ್ರ ಧ್ಯೇಯದಿಂದ ನಾನು ಕೊಂಗ್ರೆಸ್ ಕೆಲಸಗಾರನಾಗಿ ಸೇರಿರುತ್ತೇನೋ ಆ ಧ್ಯೇಯಕ್ಕೆ ಸರಿಯಾಗಿ ಕೆಲಸ ಮಾಡುವದಕ್ಕೆ ಇಂದಿನ ಪರಿಸ್ಥಿತಿಯಲ್ಲಿ ಕೊಂಗ್ರೆಸು ಕಮಿಟಿಗಳಲ್ಲಿ ಇರುವದಕ್ಕಿಂತಲೂ ಇಲ್ಲದಿರುವುದೇ ಲೇಸೆಂದು ನನ್ನ ಅಭಿಪ್ರಾಯ ಆ ಭಾವನೆಗೆ ಸರಿಯಾಗಿ ನಾನು ಕಮಿಟಿಗಳನ್ನು ಬಿಡುವಾಗ ಅವುಗಳಲ್ಲಿ ನನ್ನಿಂದ ಬಲಿಷ್ಠರೂ, ಚುರುಕಾದವರೂ, ಹೆಸರುವಾಸಿಗಳೂ ಇರುವವರಿಂದ ಯಾವ ರೂಪದಲ್ಲಿಯೂ ಕೊರತೆಗೆ ಎಡೆಯಿಲ್ಲ. ಎಂದೆಂದಿಗೂ ಕೊಂಗ್ರೆಸಿನ ವಿಧೇಯ ಸೇವಕನಾಗಿಯೇ ಇರುವೆನೆಂಬುದು ಖಂಡಿತ"

ಕೆಲವು ದಿವಸಗಳಲ್ಲಿ ಆಗಿಂದಾಗ್ಗೆ ಮಳೆ ಬಂದು ಕಟಾವಿಗೆ ಬಹಳ ತೊಂದರೆಯಾಗಿತ್ತು. ಈಗ ನಾಲ್ಕಾರು ದಿನಗಳಿಂದ ಒಳ್ಳೇ ಬಿಸಿಲು ಕಾಯುತ್ತಿರುವದರಿಂದ ಬೆಳೆಕಟಾವಿಗೆ ಅನುಕೂಲವಾಗಿದೆ. ಪುನಃ ನಿನ್ನೆಯಿಂದ ಮಳೆಯ ಸೂಚನೆ ಕಾಣುತ್ತಿದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಾನ್ಯ ಮಂತ್ರಿ ಶ್ರೀ ಪಿ ಟಿ ರಾಜನರ ಸಂಚಾರ ಕಾರ್ಯಕ್ರಮ

ಮದ್ರಾಸ್ ಸರಕಾರದ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಮಂತ್ರಿಗಳಾದ ಶ್ರೀ. ಪಿ. ಟಿ. ರಾಜನವರು ಇದೇ ತಾ. 15ನೇ ಸಂಜೆ ನೈಲಿನಲ್ಲಿ ಮಂಗಳೂರಿಗೆ ಬಂದು ಸಂಜೆ ಘಂಟೆ 5-30ಕ್ಕೆ ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ದಿವಂಗತ ಖಾನ್ ಬಹದೂರ 'ಹಾಜಿ ಅಬ್ದುಲ್ಲಾ ಸಾಹೇಬ್ ಬಹದೂರರ ತೈಲಚಿತ್ರದ ಅನಾವರಣ ಮಾಡುವರು. ಘಂಟೆ 5-45ಕ್ಕೆ ಡಿಸ್ಟ್ರಿಕ್ಟ್ ಬೋರ್ಡು ನೌಕರರ ಸಂಘದವರಿಂದ ಮಾನಪತ್ರ ಸ್ವೀಕರಿಸುವರು. ತಾ. 16ನೇ ಬೆಳಗ್ಗೆ ಘಂಟೆ 9ಕ್ಕೆ ಮುಂಡಾಜೆಗೆ ಹೋಗಿ ಮಹಾಳಿ ರೋಗ ಹಾವಳಿಯ ಅಡಿಕೆ ತೋಟಗಳನ್ನು ನೋಡಿ, ಸಂಜೆ ಮಂಗಳೂರಿಗೆ ಹಿಂತಿರುಗಿ ಮಂಗಳೂರಿನ ಸೈಂಟ್ ಎಲೋಸಿಯಸ್ ಕೊಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಇನಾಮು ಹಂಚುವ ಸಮಾರಂಭ ನಡಿಸುವರು. ತಾ. 17ನೇ ಬೆಳಗ್ಗೆ ಘಂಟೆ 9ಕ್ಕೆ ಮೂಲ್ಕಿ ಮತ್ತು ಫಲಿಮಾರಿಗೆ ಹೋಗಿ ಸಂಜೆ ಘಂಟೆ 4ಕ್ಕೆ ಉಡುಪಿಗೆ ಮುಟ್ಟಿ ಉಡುಪಿ ತಾಲೂಕಿನ ಕೋಪರೇಟಿವ್ ಸೊಸ್ಯಾಟಿಗಳ ಪರವಾಗಿ ಮಾನಪತ್ರ ಸ್ವೀಕರಿಸಿ ಉಡುಪಿ ಮುನಿಸಿಪಲ್ ಚೇಯರ್‌ಮೆನರಿಂದ ಟೀ ಪಾರ್ಟಿ ಸತ್ಕಾರಪಡೆಯುವರು. ರಾತ್ರಿ ಶ್ರೀ ಕೃಷ್ಣದೇವಸ್ಥಾನವನ್ನು ಸಂದರ್ಶಿಸುವರು ತಾ 18ನೇ ಬೆಳಗ್ಗೆ ಘಂಟೆ ೮ಕ್ಕೆ ಮಲ್ಪೆಗೆ ತೆರಳಿ ಅಪರಾಹ್ನ ಘಂಟೆ 1ಕ್ಕೆ ಉಡುಪಿಯಿಂದ ಹೊರಟು ಕಾರ್ಕಳ ಮೂಡಬಿದ್ರಿ ಮಾರ್ಗವಾಗಿ ಮಂಗಳೂರಿಗೆ ಹಿಂತಿರುಗಿ ಅಲ್ಲಿ ಸಂಜೆ ಘಂಟೆ 4-30ಕ್ಕೆ ಸೆಂಟ್ರಲ್ ಕೋಪರೇಟಿವ್ ಬೇಂಕಿನಲ್ಲಿ ಸ್ವಾಗತ ಪಡೆದು ಕೋಪರೇಟಿವ್ ಸೊಸ್ಯಾಟಿಗಳಿಂದ ಮಾನಪತ್ರ ಸ್ವೀಕಾರಮಾಡುವರು. ತಾ. 19ರಲ್ಲು ಟ್ರೇಡ್ ಸ್ಕೂಲು, ಹಂಚುಕಾರ್ಖಾನೆ ಮೊದಲಾದುವನ್ನು ಸಂದರ್ಶಿಸಿ ಮಂಗಳೂರಿನ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲ ಸ್ವಾಗತ ಪಡೆಯುವರು. ತಾ. 20ರಲ್ಲು ಮಂಗಳೂರಿಂದ ವಿಟ್ಲಕ್ಕೆ ತೆರಳಿ ಅಲ್ಲಿ ಮಹಾಲಿ ರೋಗ ಹಾವಳಿಗೊಳಗಾದ ಅಡಿಕೆ ತೋಟಗಳನ್ನು ನೋಡುವರು. ಸಂಜೆ ಕಾಸರಗೋಡಿಗೆ ಹೋಗಿ ತಾ 21ನೇ ಬೆಳಗ್ಗಿನ ರೈಲು ಬಂಡಿಯಲ್ಲಿ ಹೊರಟುಹೋಗುವರು

ವ್ಯಾಯಾಮ ಪ್ರದರ್ಶನ

ಉಡುಪಿ ಮಹಾಜನ ಸಭೆಯ ನೇತೃತ್ವದಲ್ಲಿ ಇದೇ ತಾ. 16ರಿಂದ 24ರ ವರೆಗೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮಾಮೂಲಿನಂತೆ ಜರಗಲಿರುವ ನವರಾತ್ರಿ ಮಹೋತ್ಸವ ಸಮಾರಂಭದಲ್ಲಿ ತಾ. 18ನೇ ಆದಿತ್ಯವಾರ ರಾತ್ರೆ ಘಂಟೆ 9-30 ರಿಂದ 12ರ ತನಕ ಉಡುಪಿಯ ಪ್ರಥಮ (ಸ್ಥಾಪನೆ 1931) ಸಾರ್ವಜನಿಕ ವ್ಯಾಯಾಮ ಶಾಲೆಯಾದ 'ಉಡುಪಿ ವ್ಯಾಯಾಮ ಶಾಲೆ'ಯ ವರ ಶಕ್ತಿಯುಕ್ತಿಪರ ಮತ್ತು ಚಿತ್ತಾಕರ್ಷಕ ವ್ಯಾಯಾಮ ಪ್ರದರ್ಶನವು ನಡೆಯಲಿರುವುದು. ವ್ಯಾಯಾಮ ಶಾಲೆಯ ನೇತೃತ್ವದಲ್ಲಿ ಜನವರಿ 1935ರಲ್ಲಿ ನಡೆದ 'ದಕ್ಷಿಣಕನ್ನಡ ಜಿಲ್ಲಾ ಪ್ರಥಮ ವ್ಯಾಯಾಮ ಸ್ಪರ್ಧೆ'ಯ ಸಮಾರಂಭದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ರಾವ್ ಸಾಹೇಬ್ ಡಾಕ್ಟರ್ ಯು. ರಾಮ ರಾವ್, ಕೌನ್ಸಿಲ್ ಒಫ್ ಸ್ಟೇಟಿನ ಮಾಜಿ ಮೆಂಬರ್, ಇವರು ವ್ಯಾಯಾಮ ಶಾಲೆಯನ್ನು ಸಂದರ್ಶಿಸಿದಾಗ ಹೀಗೆ ಅಭಿಪ್ರಾಯ ಪಟ್ಟಿರುತ್ತಾರೆ.

"The Institution is well supplied with Gymnasium apparatus. The Institution is very deserving encouragement by the generous public. The institution seems a real want in Udipi I wish the institution continued Success".

(Sd) **U. Rama Rao.**

SUPPLIMENT TO THIS ISSUE OF 'NAVAYUGA DATED 15-10-'36.

ಉಡುಪಿ ಮಹಾಜನ ಸಭಾ

ಪ್ರಕಟಣೆ ನಂ. ೩

ನವರಾತ್ರಿ ಮಹೋತ್ಸವ

ಆರಂಭ
ತಾ. 16-10-1936
ಶುಕ್ರವಾರ

ಅಂತ್ಯ
ತಾ. 24-10-1936
ಶನಿವಾರ

ವಿದ್ಯುದ್ದೀಪಗಳಿಂದ ಅಲಂಕೃತವಾದ
ಹೊಸತಾಗಿ ಬರೆಯಿಸಲ್ಪಟ್ಟ ಫರದೆ ಸೀನರಿಗಳಿಂದ ಶೋಭಿಸುವ

ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ಕೇವಲ ಕಲೋಪಾಸನೆ ದೃಷ್ಟಿಯಿಂದ ಉಡುಪಿಯ ತರುಣರಿಂದಲೂ, ತರುಣಿಯರಿಂದಲೂ, ಬಾಲಕರಿಂದಲೂ, ತೋರಿಸಲ್ಪಡುವ ನಾಟಕ, ಸಂಗೀತ, ವ್ಯಾಯಾಮ, ಹರಿಕಥೆ, ಕೋಲಾಟ; — ಲೇಜಿಮ್; ಜಡೆಯಾಟ ಮುಂತಾದ ವಿವಿಧ ದೃಶ್ಯಾವಳಿಯಿಂದ ಕೂಡಿದ —
ನವರಾತ್ರಿ ಮಹೋತ್ಸವದ ಕಾರ್ಯಕ್ರಮದಲ್ಲಿ ಭಾಗವನ್ನು ವಹಿಸಿ
ಉಡುಪಿಯ ಪಟ್ಟಣಿಗರು ತಮ್ಮ ಕರ್ತವ್ಯವನ್ನು ಪೂರೈಸುವರಾಗಿ ನಿರೀಕ್ಷಿಸಲಾಗಿದೆ.

ಪ್ರತಿನಿತ್ಯವೂ ರಾತ್ರಿ 9-30ರಿಂದ 12 ಗಂಟೆ ವರೆಗೆ.

-- ಕಾರ್ಯಕ್ರಮ --

16—10—'36 ಶುಕ್ರವಾರ. I
ಶ್ರೀ ಶಾರದಾ ಸಂಗೀತ ನಾಟಕ ಸಭೆಯುವರ
"ಚೌ ಚೌ" ನಾಟಕ.

17—10—'36 ಶನಿವಾರ. II
ಶ್ರೀಯುತ ಫಿಡ್ಲ್ ಮಂಜುನಾಥಯ್ಯನವರ
ಮತ್ತು ಪಾರ್ಟಿಯವರ
ಸಂಗೀತ.

1೮—10—36 ಆದಿತ್ಯವಾರ. III
ಉಡುಪಿ ವ್ಯಾಯಾಮ ಶಾಲೆಯವರ
ವ್ಯಾಯಾಮ ಪ್ರದರ್ಶನ.

19—10—36 ಸೋಮವಾರ. IV
ಉಡುಪಿ ಮಹಾಜನ ಸಭೆಯ ನಾಟಕ ವಿಭಾಗದವರ
DRAMA UP-TO-DATE ಎಂಬ ನಾಟಕ.

20—10—36 ಮಂಗಳವಾರ. V
ಕೀರ್ತನಭೂಷಣ ಶ್ರೀ॥ ಶ್ರೀಪಾದದಾಸ ಹಂಡೆಯವರ
ಕರ್ನಾಟಕವಿಜಯ ಎಂಬ ಕೀರ್ತನೆ.

21—10—36 ಬುಧವಾರ. VI
ಶ್ರೀಯುತರಾದ ಮುರಹರಿರಾವ್,
ಮಂಜುನಾಥಯ್ಯ, ಪ್ರಭಾಕರರಾವ್ ಮುಂತಾದವರ
ಸಂಗೀತ ಕಚೇರಿ.

22—10—36 ಗುರುವಾರ. VII
ಶ್ರೀ ಶಾರದಾಸಂಗೀತ ಕಲಾ ಶಾಲಾ ಮತ್ತು
ಸರಸ್ವತೀ ಬಾಲಿಕಾ ಪಾಠಶಾಲೆಯ ಬಾಲಕಿಯರಿಂದ
ಸತ್ಯವಾನ್ ಸಾವಿತ್ರಿ ನಾಟಕ.

23—10—36 ಶುಕ್ರವಾರ. VIII
ಶಿವಾಜಿ ವ್ಯಾಯಾಮ ಮಂದಿರದವರ
ವ್ಯಾಯಾಮ ಪ್ರದರ್ಶನ.

24—10—36 ಶನಿವಾರ. IX
ಶ್ರೀ ಶಾರದಾ ಸಂಗೀತ ನಾಟಕ ಸಭೆಯವರ
ಫ್ಶೈಲಾದ ಮಿಡ್ ವೈಫ್ ನಾಟಕ.

ಪ್ರತಿನಿತ್ಯ ಪ್ರವೇಶ ಹಾಸಲಿನ ದರ— I ತರಗತಿ 0 8 0, II ತರಗತಿ 0 5 9, III ತರಗತಿ 0 4 0, IV ತರಗತಿ 0 2 0.

ಮೊದಲನೆ ದಿನದ ಕಾರ್ಯಕ್ರಮ:

ತಾ. 16—10—'36 ಶುಕ್ರವಾರ I

ಶ್ರೀ ಶಾರದಾ ಸಂಗೀತ ನಾಟಕ ಸಭೆಯವರು
'ಚೌ ಚೌ' ಅಥವಾ 'ಪುಷ್ಪಗುಚ್ಛ'
ಎಂಬ ನಾಟಕವನ್ನು ಅಭಿನಯಿಸುವರು.

ಮುಖ್ಯ ದೃಶ್ಯಗಳು—
ಕಂಸವಧೆ— ರಜತ ಸೀನ್ (Comic) ವನಮಾಲಿಕೆ ಸೀನ್—ಕುಬ್ಜೆಯ ಸೀನ್.
ಪ್ರೇಮಲೀಲಾ—ನಿರ್ಮಲೆ ಎಂಬ ವಾರಾಂಗನೆಯ ಮನೆಯ ದೃಶ್ಯ.
(ಗಾಯನ, ನರ್ತನ)
ಧೂಮಕೇತು—ಕುಟಿಲ ಸಿಂಹನು ವಿಶಾಲೆಯ ಕಣ್ಣುಗಳನ್ನು ಕೀಳಿಸುವ ದೃಶ್ಯ.
ರಾಜರ್ಷಿ ವಿಶ್ವಾಮಿತ್ರ-ಕೈಲಾಸ ಪರ್ವತ-ವಿಶ್ವಾಮಿತ್ರನ ತಪಸ್ಸು-ವಸಿಷ್ಠನ ಆಶ್ರಮ

ಗಾಯನ-ನರ್ತನಗಳಿಂದ ಕೂಡಿದ ಈ ದೃಶ್ಯವನ್ನು ನೋಡಲು ಮರೆಯಬೇಡಿರಿ.

ತಾ. 18ಕ್ಕೆ ನಡೆಯಲಿಕ್ಕಿರುವ ವ್ಯಾಯಾಮ ಪ್ರದರ್ಶನವನ್ನು ಮರೆಯದೆ ಮಹಾಜನರೆಲ್ಲರೂ ಥಿಯೇಟರಿನಲ್ಲಿ ಅಸಂಖ್ಯಾತರಾಗಿ ನೆರೆದು ಹರ್ಷಿತರಾಗಿ ವ್ಯಾಯಾಮ ಶಾಲೆಯನ್ನು ಹರಸುವುದಲ್ಲದೆ ಇತ್ತೋಪ್ಯತಿಯವಾಗಿ ಧನ ಸಹಾಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ಸವಿನಯವಿನಂತಿ.

ಟಿ. ಸಂಜೀವ ಶೆಟ್ಟಿ.
ವ್ಯಾಯಾಮ ಶಿಕ್ಷಕ ಮತ್ತು ಡ್ಯಾರೆಕ್ಟರ್
(ಒಸರಿ)

ಕುಂಜಾಲು-ಇದೇ ತಾ. 28-10-'36ನೇ ಆದಿತ್ಯವಾರ ಮತ್ತು ಸೋಮವಾರ, ವಿವಿಧ ಕಾರ್ಯಕಲಾಪಗಳಿಂದ ಆರೋಗ್ಯ ಸಪ್ತಾಹವು ಆಚರಿಸಲ್ಪಡುವದೆಂದೂ, ಎಲ್ಲರೂ ಸಹಕರಿಸಬೇಕೆಂದೂ, ಕಾರ್ಯನಿರ್ವಾಹಕ ಕಮಿಟಿಯ ಅಧ್ಯಕ್ಷರಾದ ಶ್ರೀಯುತ ಐರ್ಮಾಡಿ ನಾರಾಯಣ ಶೆಟ್ಟರು ತಿಳಿಸುತ್ತಾರೆ.

ಮಂಗಳೂರು

(ನಮ್ಮ ಸ್ವಂತ ಬಾತ್ಮಿದಾರರಿಂದ)

ತಾ. 12-10-'36

ಮಂಗಳೂರು ನಗರ ಸಭೆ

ಮಂಗಳೂರು ನಗರ ಸಭೆಯ ಸಾಧಾರಣ ಸಭೆಯು ಸಭಾಭವನದಲ್ಲಿ ಕಳೆದ ತಾ. 5ನೇ ಸೋಮವಾರ ಸಾಯಂಕಾಲ ಜರಗಿತು. ಮಾನ್ಯ ಡಾ| ಪಿಟ್ಟಿಲ ಶೆಟ್ಟಿಯವರು ಅಂದು ನಗರದಲ್ಲಿ ಇಲ್ಲದ್ದರಿಂದ ನಗರ ಸಭೆಯ ಉಪಾಧ್ಯಕ್ಷರಾದ ಡಾ| ಯು. ಪಿ ಮಲ್ಯರು ಅಧ್ಯಕ್ಷಸ್ಥಾನ ವಹಿಸಿದ್ದರು. ಕೆಲವು ವೆಚ್ಚಗಳಿಗೆ ಹಣ ಮಂಜೂರು ಮಾಡಿದ ಬಳಿಕ ಹಲವು ಸರಕಾರಿ ಹುಕುಮುಗಳು ಓದಿ ರೆಕಾರ್ಡು ಮಾಡಲ್ಪಟ್ಟವು. ಹಾಲಿಗೆ ನೀರು ಬೆರಸಿ ಮಾರಿದನೆಂಬ ಅಪಾದನೆ ಮೇಲೆ ಸೆನಿಟರಿ ಇನ್ಸ್‌ಪೆಕ್ಟರರು ಓರ್ವನ ವ್ಯವಹರಣೆ ಹೂಡಿದ್ದರು. ಇದರ ವಿಷಯವಾಗಿ ಮಾತಾಡುತ್ತಾ ಶ್ರೀ ಆನಂದ ತಲ್ವಾರರು ಹೀಗೆಂದರು. ಮದ್ರಾಸ್ ಹೈಕೋರ್ಟಿನವರು ತೀರ್ಮಾನಿಸಿದ ಇತ್ತೀಚಿಗಿನ ಒಂದು ಮೊಕದ್ದಮೆಯ ಆಧಾರದಮೇಲೆ ಹಾಲಿಗೆ ನೀರು ಬೆರಸಿದನೆಂದು ಸೆನಿಟರಿ ಇನ್ಸ್‌ಪೆಕ್ಟರರು ದಾವೆ ಮಾಡಿದರೆ ಹೆಚ್ಚಿನ ಪ್ರಯೋಜನವಾಗಲಾರದು. ಇದಕ್ಕೆ ಸಾಕ್ಷಿಗಳೂ ಇನ್ಸ್‌ಪೆಕ್ಟರರ ಕೈಕೆಳಗಿನವರೇ ಆದ್ದರಿಂದ ಅದಕ್ಕೆ ಹೆಚ್ಚಿನ ಬೆಲೆ ದೊರೆಯಲಾರದು. ಆ ಕಾರಣದಿಂದ ಈ ವ್ಯವಹರಣೆಯನ್ನು ಮುಂದರಿಸುವುದರಿಂದ ಫಲವಿದೆಯೇ ಎಂಬುದನ್ನು ಮೊದಲಾಗಿ ಯೋಚಿಸಬೇಕು. ಒಂದು ವೇಳೆ ಅದನ್ನು ಮುಂದರಿಸುವುದಾದರೆ ಇನ್ಸ್‌ಪೆಕ್ಟರರನ್ನೇ ಮುಂದಕ್ಕೆ ಬಿಟ್ಟರೆ ಫಲವಿಲ್ಲ. ಸರಿಯಾದ ವಕೀಲರನ್ನು ಕಮಿಶನರು ನೇಮಿಸಬೇಕು ಎಂದರು. ಶ್ರೀ| ತಲ್ವಾರರ ಸೂಚನೆಯು ಅಂಗೀಕರಿಸಲ್ಪಟ್ಟು 50 ರೂಪಾಯಿ ಫೀಸಿಗಿಂತ ಮೇಲ್ಪಡದೆ ಓರ್ವ ಯೋಗ್ಯ ವಕೀಲರನ್ನು ನೇಮಿಸುವುದಕ್ಕೆ ಕಮಿಶನರಿಗೆ ಅಧಿಕಾರ ಕೊಡಲಾಯಿತು. ಟೈಫಾಯ್ಡ್ (ವಿಷಮ ಜ್ವರ) ಜ್ವರಕ್ಕೆ ಔಷಧ ಹಾಕುವರೇ ಬೇಕಾದ ಔಷಧಿಯನ್ನು ನಗರದ ಜನರಿಗೆ ಧರ್ಮಾರ್ಥವಾಗಿ ಕೊಡಬೇಕೆಂದೂ, ಅದನ್ನು ವೈದ್ಯರ ಹತ್ತಿರ ಕೊಡಬೇಕೆಂದೂ ನಿರ್ಧಾರವಾಯಿತು. ಇತರ ವಿಷಯಗಳು ಬಾಕಿ ಇಡಲ್ಪಟ್ಟವು. ಮಾರ್ಕೆಟ್ ವಾರ್ಡ್ ಹುಡುಗರ ಶಾಲೆಯ ಕಟ್ಟೋಣ ಮತ್ತು ಸುತ್ತಲಿನ ಗೋಡೆಗಾಗಿ 15 ಸಾವಿರಕ್ಕೆ ಮೇಲ್ಪಟ್ಟ ಹಣವನ್ನು ಮಂಜೂರು ಮಾಡಿದರು.

ಪಂಡಿತರ ಸಂಘ

ದ. ಕ. ಜಿಲ್ಲಾ ಪಂಡಿತರ ಮಹಾ ಸಭೆಯು ಕಳೆದ ತಾ 4ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಘುನಾಥಯ್ಯ ಸ್ಮಾರಕ ಮಂದಿರದಲ್ಲಿ ಜರಗಿತು. ವಿದ್ಯಾಧಿಕಾರಿಗಳು ಪಂಡಿತರ, ತಮ್ಮ ಹಿತಚಿಂತನೆಯ ಕಾರ್ಯಕ್ಕೆ ಕೈ ಹಚ್ಚಿದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ ಹಲವು ಸೂಚನೆಗಳನ್ನು ಕೊಟ್ಟರು. ಅನಂತರದಲ್ಲಿ ಹೊಸವರ್ಷದ ಅಧಿಕಾರಿಗಳ ಚುನಾವಣೆಯಾಯಿತು.

ದ. ಕನ್ನಡ ಜಿಲ್ಲಾ ಕಾಂಗ್ರೆಸ್ ಸಭೆ
ಶ್ರೀಮಾನ್ ಅಧಿಕಾರಿಗಳು ಅಧ್ಯಕ್ಷರಾದರು
ಪಂ| ಜವಾಹರಲಾಲರಿಗೆ ಆಮಂತ್ರಣ

ಕಳೆದ ತಾ. 11ನೇ ಭಾನುವಾರ ಸಾಯಂಕಾಲ ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಭೆಯು ಕಾಂಗ್ರೆಸ್ ಭವನದಲ್ಲಿ ಸೇರಿತು. ಶ್ರೀಯಂ ಎಸ್ ಅಧಿಕಾರಿಗಳು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಮೊದಲು ದಿವಂಗತ ಜಿ ಟಿ ಸಂಡರ್‌ಲೆಂಡರ ನಿಧನದ ಕುರಿತು ಸಂತಾಪ ಸೂಚಕ ಠರಾವನ್ನು ಮಂಜೂರು ಮಾಡಿದರು. ಅನಂತರ ಹಿಂದಿನ ಸಭೆಯ ಚಿಕ ಪತ್ರವನ್ನು ಪರಿಶೀಲಿಸಿ ಅದನ್ನು ಸ್ವೀಕರಿಸಿದರು. ಹೊಸ ವರ್ಷದ ಬಜೆಟ್ ಅಂಗೀಕೃತವಾಯಿತು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಯಿಂದರಾಜಿನಾಮೆಕೊಟ್ಟು ಬಿಟ್ಟ ಸದಸ್ಯರ ರಾಜಿನಾಮೆಗಳನ್ನು ಪರಿಶೀಲಿಸಿದರು. ಡಾ| ಮಲ್ಯರು ಅಧ್ಯಕ್ಷಸ್ಥಾನಕ್ಕೆ ಮಾತ್ರ ರಾಜಿಕೊಟ್ಟದ್ದರಿಂದ ಅವರನ್ನು ಕಾರ್ಯಕಾರಿ ಮಂಡಲಿಯಲ್ಲಿ ಸದಸ್ಯರಾಗಿ ಒಪ್ಪಲಾಯಿತು. ಡಾ| ಮಲ್ಯರಸ್ಥಾನಕ್ಕೆ ಹಂಗಾಮಿ ಅಧ್ಯಕ್ಷರಾಗಿದ್ದ ಶ್ರೀ. ಯಂ ಎಸ್. ಅಧಿಕಾರಿಗಳು ಚುನಾಯಿಸಲ್ಪಟ್ಟರು. ಶ್ರೀ. ಕಿಲ್ಲೆಯವರ ರಾಜಿನಾಮೆಯನ್ನು ಸ್ವೀಕರಿಸದೆ ಬಾಕಿ ಇಡಲ್ಪಟ್ಟಿತು. ಇನ್ನುಳಿದವರು ಸದಸ್ಯರ ರಾಜಿನಾಮೆಯು ಸ್ವೀಕೃತವಾಯಿತು. ಜಿಲ್ಲಾಕಾಂಗ್ರೆಸ್ ಸಮಿತಿಯವರು ಕಳೆದ ಜಿಲ್ಲಾಬೋರ್ಡಿಗೆ ಕಾ. ಪಕ್ಷದಿಂದ ಹೋಗಿ ಕಾಂಗ್ರೆಸ್ ಶಿಸ್ತಿಗೆ ವಿರುದ್ಧವಾಗಿ ನಡೆದ 8 ಮಂದಿ ಸದಸ್ಯರನ್ನು ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಡಬೇಕೆಂದು ಕಾ. ಕಮಿಟಿಯವರು ಹೇಳಿದರೂ ಅದನ್ನು ಲಕ್ಷಿಸದ ಕಾರಣ ಅವರನ್ನು ಇನ್ನು ಯಾವ ಕಾಂಗ್ರೆಸ್ ಸಂಸ್ಥೆಗೆ ಸೇರಿಸಿಕೊಳ್ಳಬೇಕಾದರೂ ಮುಂಚಿತವಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅನುಮತಿಯನ್ನು ಪಡೆದು ಕೊಳ್ಳಬೇಕೆಂದಾಯಿತು.

ಪಂ. ಜವಹರಲಾಲರಿಗೆ ಆಮಂತ್ರಣ

ಜಿಲ್ಲಾ ಕಾಂಗ್ರೆಸ್ ಕಮಿಟಿಯವರು, ಭಾರತ ರಾಷ್ಟ್ರಸಭೆಯ ಅಧ್ಯಕ್ಷರಾದ ಪಂಡಿತ ಜವಹರಲಾಲ ನೆಹರುಗಳಿಗೆ ದ. ಕನ್ನಡ ಜಿಲ್ಲೆಯನ್ನು ಸಂದರ್ಶಿಸಲು ಆಮಂತ್ರಣ ಕೊಡಬೇಕೆಂದು ಸರ್ವಸಮ್ಮತಿಯಿಂದ ನಿರ್ಧಾರವಾಯಿತು.

ಬರುವ ಚುನಾವಣೆಗೆ ಸಿದ್ಧತೆ

ಬರುವ ಅಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೇನೇ ಪ್ರಚಂಡ ವಿಜಯ ಸಿಗುವ ಹಾಗೆ ಸರಿಯಾದ ಚುನಾವಣೆ ಸಮಿತಿಗಳನ್ನೇರ್ಪಡಿಸಬೇಕೆಂದು ನಿರ್ಧಾರವಾಯಿತ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು, ಕಾರ್ಯದರ್ಶಿಗಳು, ಕೋಶಾಧ್ಯಕ್ಷರು ಮತ್ತು ಜಿಲ್ಲೆಯ ಪರವಾಗಿ ಪಾರ್ಲಿಮೆಂಟರಿ ಬೋರ್ಡಿನಲ್ಲಿರುವ ಇಬ್ಬರು ಸೇರಿರುವ ಒಂದು ಸಮಿತಿಯನ್ನೇರ್ಪಡಿಸಬೇಕೆಂದಾಯಿತು ಮತ್ತು ಆಯಾ ಡಿವಿಜನುಗಳಲ್ಲಿ ಹೆಚ್ಚಿನ ಜನ ಜಾಗೃತಿಯನ್ನುಂಟುಮಾಡಬೇಕೆಂದು ಡಿವಿಜನಲ್ ಸಮಿತಿಗಳನ್ನು ಏರ್ಪಡಿಸಬೇಕೆಂದು ನಿರ್ಧಾರವಾಯಿತು.

ಇನ್ನೂ ಹಲಕೆಲವು ತೀರ್ಮಾನಗಳಾದ ಮೇಲೆ ಸಭೆಯು ಮುಕ್ತಾಯವಾಯಿತು.

ಪೊಪ್ಯುಲರ್ ವಿಮಾ ಕಂಪೆನಿ

ಈ ಕಂಪೆನಿಯವರು ಕಳೆದ ತಾ 4ರಲ್ಲಿ ತಮ್ಮ ಆಫೀಸಿನಲ್ಲಿ ಶ್ರೀ ಎ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿಸಿ ಕಳೆದ ವರ್ಷ ದಕ್ಷತೆಯಿಂದ ಕೆಲಸಮಾಡಿದ ಏಜಂಟರಿಗೂ ಸಂಸ್ಥೆಗಳಿಗೂ ಪಾರಿತೋಷಕಗಳನ್ನು ಹಂಚಿದರು. ಶ್ರೀ| ಶ್ರೀನಿವಾಸ ಪೈಗಳು ವಿಮೆಯ ವಿಷಯವಾಗಿಯೂ ಪೊಪ್ಯುಲರ್ ಕಂಪೆನಿಯ ವಿಷಯವಾಗಿಯೂ, ಭಾಷಣವಿತ್ತು ಅದಕ್ಕೆ ಅಭಿವೃದ್ಧಿಯನ್ನು ಬಯಸಿದರು. ಶ್ರೀ| ಬಿ. ವಿಟ್ಠಲರಾಯರು ಸಭಿಕರನ್ನು ಫಲಾಹಾರಗಳಿಂದ ಸತ್ಕರಿಸಿದರು.

ಅಸೆಂಬ್ಲಿಗೆ ಹೊಸ ಉಮೇದ್ವಾರರು

ಬರುವ ಮದ್ರಾಸ್ ಲೆಜಿಸ್ಲೆಟಿವ್ ಅಸೆಂಬ್ಲಿಗೆ ಮಂಗಳೂರು ಡಿವಿಜನಿನಿಂದ ಶ್ರೀಮಾನ್ ಇ. ಸುಬ್ಬುಕೃಷ್ಣಯ್ಯನವರು ಓರ್ವ ಉಮೇದ್ವಾರರಾಗಿರುವರೆಂದು ತಿಳಿಸಿದ್ದಾರೆ. ಶ್ರೀಯುತರು ಸ್ವತಂತ್ರ ಪಕ್ಷದವರಾಗಿ ನಿಲ್ಲುವರು.

ಧರ್ಮ

ಇಂಪೀರಿಯಲ್ ಬೇಂಕಿನ ರಿಟಾಯರ್ಡ್ ಏಜಂಟರಾದ ರಾವ್ ಬಹದ್ದೂರು ಯು. ಆನಂದರಾಯರು ಕದ್ರಿ ಶ್ರೀ ಮಂಜುನಾಥ ಕ್ಷೇತ್ರದಲ್ಲಿರುವ ಗೋಮುಖ ತೀರ್ಥ ಮೇಲ್ಪುರೆ ಕಟ್ಟಡವನ್ನು ದುರಸ್ತಿ ಪಡಿಸಿರುವರು. ಇದ ಬಹಳ ಸ್ತುತ್ಯ ಧರ್ಮವೇ ಸರಿ.

ಬ್ರಹ್ಮ ಸಮಾಜ

ಮಂಗಳೂರು ಬ್ರಹ್ಮಸಮಾಜದ 66ನೇ ವಾರ್ಷಿಕೋತ್ಸವವು ಬರುವ ವಾರದಿಂದ ಪ್ರಾರಂಭವಾಗಿರುವದು. ಪ್ರತಿನಿತ್ಯವೂ ದೀಪಾರಾಧನೆ, ಭಜನೆ, ಭಾಷಣ ಇತ್ಯಾದಿಗಳು ಕ್ರಮವಾಗಿ ನಡೆಯುವುವು.

ತಾ 10ರಲ್ಲಿ ವಿವಿಧ ಧರ್ಮಗಳ ಮೇಲೆ ಪ್ರಸಿದ್ಧ ಪಂಡಿತರುಗಳ ಭಾಷಣಗಳಾಗುವುವು. ಸ್ಥಳ—ಬ್ರಹ್ಮಸಮಾಜ ಮಂದಿರ

ಗ್ರಾಮೋದ್ಯೋಗ ಸಂಘ

ಗ್ರಾಮೋದ್ಯೋಗ ಸಂಘದ ಸಭೆಯೊಂದು ಈ ವಾರ ನಡೆಯಿತು. ಸಭೆ ಜರುಗುವ ವಿಷಯವನ್ನೇ ಪ್ರಕಟಿಸಲಿಲ್ಲವಾದ ಕಾರಣ ಸಭೆಗೆ ಹೋಗಿ ವರದಿಯನ್ನು ತಯಾರಿಸಲು ಸಾಧ್ಯವಾಗಲಿಲ್ಲ.

"ಶ್ರೀ ಕಾಳಿಕಾಂಬಾ ಪ್ರಸಾದಿಕ ರಾಷ್ಟ್ರೀಯ ವಿಶ್ವಬ್ರಾಹ್ಮಣ ಸಮಾಜೋದ್ಧಾರಕ ಸಭಾ, ಮಂಗಳೂರು" ಎಂಬ ಸಂಘದ ಆಫೀಸು ತಿಂಗಳೊಂದರ ರೂ. 3—0—0 ಬಾಡಿಗೆ ನಿರ್ಣಯಿಸಿ ವಸಂತ ಬಿಲ್ಡಿಂಗಿನ ಮಾಳಿಗೆಯಲ್ಲಿ ಇರುತ್ತಿತ್ತು. ಪ್ರಕೃತ ಸ್ಥಿತಿಯಲ್ಲಿ ಆದಾಯವೇನೂ ಇಲ್ಲದ ಬರೀ ಖರ್ಚಿನ ಹಾದಿಯೇ ಕಂಡು ಬಂದುದರಿಂದ ತಾ 2—10—36ನೇ ಡೈರೆಕ್ಟರರ ಸಭೆಯಲ್ಲಿ ಆ ಪ್ರಸ್ತಾಪವನ್ನೆತ್ತಿದಲ್ಲಿ ಶ್ರೀಯುತ ಸರಾಫ್ ಅಡ್ಯಾರು ನಾರಾಯಣಾಚಾರ್ಯರು ಸದ್ರಿ ಸಂಘದ ಆಫೀಸಿನ ಕಾರ್ಯಕಲಾಪಗಳಿಗೆ ತನ್ನ ಮನೆಯಲ್ಲಿ ಸ್ಥಳ ಕೊಡುತ್ತೇನೆಂದು ಹೇಳಿದ ಅವರ ಉದಾರಪ್ರಿಯಕ್ಕೆ ಈ ಸಂಘವು ಕೃತಜ್ಞತೆಯನ್ನು ಸೂಚಿಸುವುದೆಂದು ಸಂಘದ ಪರವಾಗಿ ಕಾರ್ಯದರ್ಶಿಯವರಾದ ಕೆ. ಚಂದ್ರಯಾಚಾರ್ಯರು ತಿಳಿಸುತ್ತಾರೆ.

ಸ್ವೀಕಾರ ಮತ್ತು ವಿಮರ್ಶೆ

"ದಿ ಜನರಲ್ ಎಶ್ಶೂರೆನ್ಸ್ ಸೊಸೈಟಿ, ಲಿಮಿಟೆಡ್, ಅಜ್ಮೀರ್"

ಇದರ 20ನೇ ವಾರ್ಷಿಕ ವರದಿಯು ನಮ್ಮ ಕೈ ಸೇರಿದೆ

ಶ್ರೀ ಜಿ ಎಸ್ ಲಕ್ಷ್ಮಣಪೈಗಳಿಂದ ರಚಿಸಲ್ಪಟ್ಟ 'ಸಂತ ಶಿಖಾಮಣಿ ದಾಮಾಜಿಪಂತ' ಎಂಬ ಪೌರಾಣಿಕ ನಾಟಕವು ನಮ್ಮ ಕೈ ಸೇರಿದ. ಪುಸ್ತಕದ ಬಾಹ್ಯಾಂಗವು ಉತ್ತಮವಿದೆ. ಕಥೆಯು ಹಳೆಯದಾದರೂ, ಸುಡಿಗಟ್ಟು, ಪದ್ಯಗಳಲ್ಲಿ ಆಧುನಿಕತೆಯಿದೆ. ನಾಟಕವು ಭೈವಭಕ್ತಿಯ ಕಡೆಗೆ ಮನಸನ್ನೆಳೆಯುತ್ತದೆ. ಅವರೂ ಎಲ್ಲಕ್ಕೂ ಮಿಗಿಲಾಗಿ ದಾಮಾಜಿಪಂತನ ಪ್ರಾಮಾಣಿಕತನ, ವಿಶ್ವಾಸವನ್ನು ಚಿತ್ರಿಸುವದರಿಂದ ಸ್ವಭಾವಿಕತೆಗೆ ನ್ಯೂನತೆಯಿಲ್ಲ. ೮೦ ಪುಟಗಳಿಗೂ ಮಿಕ್ಕಿದ ಪುಸ್ತಕದ ಬೆಲೆ ಬರೀ ಹನ್ನೆರಡಾಣೆ.



ವ್ಯಭಿಚಾರಿಣಿ ಯಾರು? ನಾಟಕದ ಒಂದು ದೃಶ್ಯ.

ಮೂಡಬಿದ್ರಿ:—ತಾ. 2-10-36ರಲ್ಲಿ ಇಲ್ಲಿಯ ನ್ಯಾಟ್ ಸ್ಕೂಲ್ ಆಶ್ರಮದಲ್ಲಿ ಡಾಕ್ಟರ್ ವೆಂಕಟಪ್ರಿಯವುಳ್ಳರ ಅಧ್ಯಕ್ಷತೆಯಲ್ಲಿ ಅಂಗದಸಂಧಾನವೆಂಬ ಯಕ್ಷಗಾನ ಸಭೆಯು ಜರುಗಿಸಲ್ಪಟ್ಟಿತು. ಯಕ್ಷಗಾನ ನಟರಾದ ಮ. ರಾ. ಮಲ್ಪೆ ಸಾಮುಕರವರ ಅಂಗದನ ಅರ್ಥವೂ, ಪೊಳಲಿ ಶಾಸ್ತ್ರಿಗಳವರ ಪ್ರಹಸ್ತನ ಅರ್ಥವೂ ಬಹು ಶ್ರಾವ್ಯ ಮತ್ತು ಮನೋರಂಜಕವಾಗಿತ್ತು.

ತಾ. 3-10-36ರಲ್ಲಿ ಇಲ್ಲಿಯ ಉಪಾಧ್ಯಾಯರ ಸಭೆಯು ದಿಗಂಬರ ಜೈನ ಹಾ. ಎ. ಶಾಲೆಯಲ್ಲಿ ಹೊಸಬೆಟ್ಟು ಸೆಂಟ್ ಸೆಬೆಸ್ತಿಯನ ಮುಖ್ಯ ಉಪಾಧ್ಯಾಯರಾದ ಮ. ರಾ. ಬಿ. ಎಂ ಸಿಕೇರಾ ಅಧ್ಯಕ್ಷತೆಯಲ್ಲಿ ಜರಗಿತು. ಮ. ರಾ. ಜೆ ಎಂ ಮಿನೇಜಸರು 5ನೇ ಕ್ಲಾಸಿನ ಮಕ್ಕಳಿಗೆ ಭೂಗೋಳಶಾಸ್ತ್ರದಲ್ಲಿ ಮಾದರಿ ಪಾಠವನ್ನು ಕೊಟ್ಟರು. ಬರುವ ಸಭೆಯು ನವಂಬರ 7ಕ್ಕೆ ಬೋರ್ಡು ಹುಡುಗರ ಶಾಲೆಯಲ್ಲಿ ಜರಗತಕ್ಕದ್ದೆಂದು ನಿರ್ಣಯಿಸೋಣಾಗಿದೆ.

ಮಂಜೇಶ್ವರ:—ಇಲ್ಲಿಯ ಶ್ರೀಮದನಂತೇಶ್ವರ ದೇವಸ್ಥಾನದ ಹಾಯರ್ ಎಲಿಮೆಂಟರಿ ಶಾಲೆಯವರು ಹೊಸತಾಗಿ ಕಟ್ಟಿಸುವ ಕಟ್ಟೋಣದ ಶಾಪೆಯ. ಶಂಕುಸ್ಥಾಪನೆ ಸಮಾರಂಭವು ಕಳೆದ ತಾ 1-10-36ನೆ ಆದಿತ್ಯವಾರ ಶ್ಯಾಮ ಗಂಟೆ 5ಕ್ಕೆ ಮಾನ್ಯ ಜಿಲ್ಲಾ ಸೆಶ್ಶನ್ ಜಡ್ಜರಾದ ಮಿರ್ ಅನಿಸಾರುದ್ದೀನ್ ಎಸ್ಕ್ವೈಯರ್ ಎಂ. ಎ., ಎಲ್ ಎಲ್. ಬಿ, ಬಾರ್-ಎಟ್-ಲೋ ಇವರ ಸುಹಸ್ತದಿಂದ ಬಹಳ ವಿಜೃಂಭಣೆಯಿಂದ ಜರಗಿತು. ಇವರು ಶಾಲಾ ಹುಡುಗರ ಅಂದಿನ ತಿಂಗಳ ಹಬ್ಬದ ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಿದುದಲ್ಲದೆ ಶಾಲೆಯ ವಿಶೇಷ ಚಟುವಟಿಕೆಗಳನ್ನು ಕಂಡು, ಅತ್ಯಾಸಂತಿಕರಾಗಿ, ತಮ್ಮ ಸಂತೋಷವನ್ನು ಪ್ರಕಟಿಸಿ ದೇವಳದ ಅಧಿಕಾರಿಗಳ. ಸರ್ವಜಾತಿ ಮತದವರಿಗೂ ಧರ್ಮಾರ್ಥವಾಗಿ ವಿದ್ಯಾದಾನವನ್ನು ಕೊಡುವ ಈ ಸಂಸ್ಥೆಯ ಉತ್ತರೋತ್ತರ ಅಭಿವೃದ್ಧಿಯ ಬಗ್ಗೆ ಮಾಡುವ ಪರಿಶ್ರಮಕ್ಕೋಸ್ಕರ ಅವರನ್ನು ಅಭಿನಂದಿಸಿದರು. ಮಾನ್ಯ ಡಿ. ಇ. ಒ.ಗಳಾದ ಯು. ಕಣ್ಣಪ್ಪನವರೂ ಪಬ್ಲಿಕ್ ಪ್ರೊಸಿಕ್ಯೂಟರ್ ಕಾರ್ಕಳ ಸದಾಶಿವರಾವ್ ಎಡ್ವೋಕೇಟ ವಗೈರೆ ಅನೇಕ ಸ್ಥಳೀಯ ಮಹನೀಯರೂ ಈ ಸಮಾರಂಭಕ್ಕೆ ಚಿತ್ತೈಸಿದ್ದರು. ಶಾಲಾ ವಿದ್ಯಾರ್ಥಿಗಳು ವಿವಿಧ ವಿನೋದಗಳಿಂದ ಸಭಿಕರ ಮನಸ್ಸನ್ನು ಸಂತೋಷಪಡಿಸಿದ ತರುವಾಯ ನೆರೆದ ಸರ್ವರಿಗೂ ತಿಂಡಿಯು ಹಂಚಲಾಯಿತು. ರಾತ್ರಿ ಸಾರ್ವಜನಿಕ ಭೋಜನದೊಂದಿಗೆ ಸಮಾರಂಭ ಕೊನೆಗಂಡಿತು.

ಮೂಲ್ಕಿ:—ಇಲ್ಲಿ ಸ್ಟೀಮರು ಬಂದರ ಮಾಡುವವರ ಕುರಿತು ಮಾಹಿತಿ ಪಡಕೊಳ್ಳುವರೆ ಬೊಂಬೈ ಸ್ಟೀಮ್ ನೇವಿಗೇಶನ್ ಕಂಪೆನಿಯ ಕಡೆಯಿಂದ ಸದ್ರಿ ಕಂಪೆನಿಯ ಇನ್ಸ್‌ಪೆಕ್ಟರರೂ, ಮಲ್ಪೆ ಏಜಂಟರೂ ಇದೇ ಕಳೆದ ತಾ. 1-10-36ರಲ್ಲು ಇಲ್ಲಿ ಬಂದಿದ್ದು ಸ್ಥಳಿಕ ಯೂನಿಯನ್ ಕ್ಲಬ್ಬಿನಲ್ಲಿ ಪುರಜನರ ಸಭೆ ಸೇರಿ, ಬೇಕಾದ ಮಾಹಿತಿಯನ್ನು ಪಡಕೊಂಡರು. ಸದ್ರಿಯವರಿಗೆ ಒಂದು ಸತ್ಕಾರಕೂಟವನ್ನು ಏರ್ಪಡಿಸಿತ್ತು. ನಂತರ ಕೊಳಜಾಕಂಜಾಳದ ಕಡೆಗೆ ಹೋಗಿ ಸ್ಥಳ ನೋಡಿ, ಇಷ್ಟು ಬಂದರು ಆಗುವ ಕುರಿತು ಸಮಾಧಾನಪಟ್ಟು ಹಿಂತಿರುಗಿದರು.

ಇಲ್ಲಿ ಕೆಲವು ದಿನಗಳಿಂದ ಜಡಿಮಳೆ ಬರುತ್ತಿದ್ದು ಬೇಸಾಯಗಾರರ ಗೋಳನ್ನು ಹೇಳಿ ತೀರದು. ಕೈಗೆ ಸಿಕ್ಕಿದ ತುತ್ತು ಬಾಯಿಗೆ ಬೀಳದಂತಾಗಿದೆ. ದೈವೇಚ್ಛೆ!

ಇಲ್ಲಿಯ ಹೈಸ್ಕೂಲಿನ ಸಹಾಯಾರ್ಥವಾಗಿ ಏರ್ಪಡಿಸಿದ ಸೋಡ್ತಿಯ ಟಿಕೇಟಗೇನೇ ಬೆಲೆ ಇಟ್ಟಿರುವುದರಿಂದ ಸದ್ರಿ ಸೋಡ್ತಿಯ ಟಿಕೇಟು ಪಡಕೊಂಡವರು ಬಹಳ ಜೋಪಾಸನದಿಂದ ಕಾಯ್ದಿಡಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಮತ್ತು ಸದ್ರಿ ಸೋಡ್ತಿಯ ಟಿಕೇಟನ್ನು ಪಡಕೊಂಡವರು ಸದ್ರಿ ಟಿಕೇಟಿನ ಮೊತ್ತವನ್ನು ಜಮೆ ಕಟ್ಟಿಕೊಂಡಿರುತ್ತಾರೋ ಇಲ್ಲವೋ ಎಂಬುದನ್ನು ರಿಪ್ಲೈ ಕಾರ್ಡಿನ ಮೂಲಕ ಬರದು ತಿಳಿಯಬಹುದಾಗಿ ಸದ್ರಿ ಸೋಡ್ತಿ ಕಮಿಟಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ

ಹಿರಿಯಡ್ಕ:—ಇದೇ ಕಳೆದ ತಾ. 8ನೆ ಗುರುವಾರ ಅಪರಾಹ್ನ ಗಂಟೆ 4-30ಕ್ಕೆ ಆರ್ಯಸಮಾಜಮಂದಿರದಲ್ಲಿ ಇಲ್ಲಿಯ ಶಾಲಾ ಅಧ್ಯಾಪಕರಾದ ಮ. ರಾ. ಕಲ್ಯಾಣಪುರ ವಿಟ್ಠಲದಾಸನ್ಯಾಕರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಆರ್ಯಸಮಾಜದವರಿಂದ ಒಂದು ವಾಚನಾಲಯವು ತೆರೆಯಲಾಯಿತು. ವಾಚನಾ ಮಂದಿರದ ಅವಶ್ಯಕತೆಯ ಮತ್ತು ಅದರಿಂದ ಜನರಿಗೆ ಸಿಕ್ಕುವ ಪ್ರಯೋಜನದ ಕುರಿತು ಮ. ರಾ. ಗೋಪಿಂದರಾಜಹೆಗ್ಡೆರವರು, ಇಲ್ಲಿಯ ಶಾಲಾಧ್ಯಾಪಕರಾದ ಮ. ರಾ. ನರಸಿಂಹಭಟ್ಟ, ಲಕ್ಷ್ಮೀನಾರಾಯಣ ನ್ಯಾಕರು, ಸುಬ್ರಾಯಸೆಟ್ಟಿ ಮತ್ತು ಎಚ್. ಕೆ. ಅನಂತಯ್ಯನವರು ಒಳ್ಳೆ ಭಾಷಣಗಳನ್ನು ಮಾಡಿದರು. ಇದೇ ಗ್ರಾಮದ ಪಟೇಲ್ ಮ. ರಾ. ಸುಂದರಸೆಟ್ಟಿ ತಮಗೆ ಬರುವ ರಾಷ್ಟ್ರಬಂಧು ಪತ್ರಿಕೆಯನ್ನು ಸಂಘದ ಉಪಾಧ್ಯಕ್ಷರಾದ ಮ. ರಾ. ನರಸಿಂಹಕಾಮ್ತಿರವರು ತಮಗೆ ಬರುವ ಕಂಠೀರವ ಪತ್ರಿಕೆಯನ್ನೂ ಮುಂದಿನಕ್ಕೆ ದಾನವಾಗಿ ಕೊಟ್ಟರು. ನಂತರ ಮಾನ್ಯ ಅಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದವನ್ನರ್ಪಿಸಿ ಸಭೆಯು ಮುಕ್ತಾಯವಾಯಿತು.

ಉದ್ಯಾವರ:—ಇದೇ ತಾ. 16ನೇ ಶುಕ್ರವಾರ ಶ್ರೀ. ಕೆ. ಮುರಾರಿರಾಯರ ಗಾಯನಕಚೇರಿಯೊಂದು ಶ್ರೀ. ಕೆ. ಮಂಜುನಾಥಯ್ಯನವರ ಫಿಡ್ಲ ಮತ್ತು ಶ್ರೀ. ಪ್ರಭಾಕರರಾಯರ ತಬ್ಲಾವಾದನದೊಂದಿಗೆ ಸ್ಥಳೀಕ ಕೆಥೋಲಿಕ ಶಾಲಾ ಕಟ್ಟಡದಲ್ಲಿ ಜರಗುವುದು.

ಕೆಣಂಜಾರು:—ಕಣಂಜಾರು-ಎಲಿಯಾಳ ಹಿಂದೂ ಪ್ರಾಥಮಿಕ ಶಾಲೆಯಲ್ಲಿ ಕ್ರಮದಂತೆ ಶ್ರೀ "ನಿತ್ಯಾನಂದ ಪ್ರಬುದ್ಧ" ಸಭೆಯ ಕಾರ್ಯಂ ಅಧ್ಯಕ್ಷರಾದ ಶ್ರೀ. ಮುತ್ತಯ್ಯ ಹೆಗಡೇರ ಅಧ್ಯಕ್ಷತೆಯಲ್ಲಿ, ಇದೇ ತಾ 4-10-36ನೆ ಆದಿತ್ಯವಾರ ಮಧ್ಯಾಹ್ನ ನೆರೆಯಿತು. ಶ್ರೀ ಪಟ್ಟಾರು ಮಣ್ಣ ಹೆಗಡೇರು, ತಾನು ಈ ಸಭೆಯನ್ನು ಸ್ಥಾಪಿಸುವಾಗ ನಿಶ್ಚಯಿಸಿಕೊಂಡ ಉದ್ದೇಶವನ್ನೂ, ಆದು ವಿಷಯದ ವಾತಾವರಣದಿಂದ ಅಪಜ್ಜಿಗೇರಾದುದನ್ನೂ ವಿವರಿಸುತ್ತಾ "ಗುರು-ಶಿಷ್ಯ" ಸಂಬಂಧ ವಿವರಿಸಿ ಭೋಧಿಸಿದರು. ಶ್ರೀ ಎಂ. ಸಂಕಪ್ಪಹೆಗ್ಡೆರು, ಹಳ್ಳಿ ಸಂಸ್ಕೃತಿಯ ಕುರಿತು ಮಹಾತ್ಮಾ ಗಾಂಧಿ ಜಯಂತಿಯನ್ನು ವಿವರಿಸಿದರು. ಅಧ್ಯಕ್ಷರ ಬೋಧಪರ ಯುಕ್ತಿಯುಕ್ತ ಭಾಷಣವಾಯಿತು. ಸಭಿಕರಲ್ಲಿ ಹೆಚ್ಚಿನವರು ಖಾದೀ ದೀಕ್ಷೆಯನ್ನು ಕೈಗೊಂಡರು. ಬರುವ ಸಭೆಯು ಕ್ರಮದಂತೆ ಬರುವ ತಿಂಗಳ ಪ್ರಥಮ ಆದಿತ್ಯವಾರ ಮಧ್ಯಾಹ್ನ!

ಹಳ್ಳಿ:—ಇದೇ ತಾ 5-10-36 ಸೋಮವಾರ ಹಳ್ಳಿಗ್ರಾಮಾಭ್ಯುದಯ ಸಂಘದ ಸಭೆಯು ಶ್ರೀ. ಎಂ. ಸಂಕಪ್ಪ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರೀಯ ಪದ-ಪ್ರಾರ್ಥನೆ, ವರದಿವಾಚನ, ಕೆಲ ಸೂಚನೆಗಳಾದ ಬಳಿಕ, ಉಡುಪಿಯ ಶ್ರೀ ಸುಬ್ರಾಯ ಪೈಗಳೂ, ಶ್ರೀ ಪಳ್ಳಿ ಬಾಲಕೃಷ್ಣ ಹೆಗ್ಡೆರೂ, ಸಂಘದ ಏಳ್ಗೆ, ಗ್ರಾಮಾಭ್ಯುದಯದ ದಕ್ಷತೆಗಳನ್ನು ಸುರಸವಾಗಿ ವಿವರಿಸಿದರು. ಬಾಕಿ ಸದಸ್ಯರು ಕೇಳಿದ ಸಂಶಯಗಳು ಗೌರವಕಾರ್ಯದರ್ಶಿ ಶ್ರೀ ರಾಯಪ್ಪಯ್ಯಗಳ ಸಮರ್ಪಕ ಉತ್ತರದಿಂದ ನಿವೃತ್ತಿಯಾದವು. ಅಂತ್ಯದಲ್ಲಿ ಅಧ್ಯಕ್ಷರು ಹಳ್ಳಿಯ ಮಿತವ್ಯಯ, ಸರಳ ಜೀವನವನ್ನೂ, ಮಹಾತ್ಮಾ ಜೀಯವರ ಪುಣ್ಯತಿಥಿಯನ್ನೂ ಎತ್ತಿ ಮಾತನಾಡಿದರು. ವಿಶೇಷಸಭೆಯೊಂದನ್ನು ಜರಗಿಸಬೇಕೆಂದು ಸರ್ವಾನುಮತಿಯಾಗಿ, ಧನ್ಯವಾದದೊಂದಿಗೆ ಸಭಾಂತ್ಯವಾಯಿತು. ಬರುವ ಸಭೆಯು ತಾ 31-10-36 ನೇ ಶನಿವಾರ.

ಶಿರ್ವ:—"ಹಳ್ಳಿಯ ಕೂಟ"ದವರು ತಾ 2-10-36 ಶುಕ್ರವಾರ ಮಹಾತ್ಮಾ ಗಾಂಧಿಯವರ ಪುಣ್ಯ ತಿಥಿಯನ್ನು ಬಹು ಶ್ರದ್ಧೆಯಿಂದ ಆಚರಿಸಿದರು. ಗಾಂಧಿಯವರ ಉದ್ದೇಶದಂತೆ ಹಳ್ಳಿಯೇಳ್ಗೆಗಾಗಿ ಸೊಂಟಕಟ್ಟಿ ಕೆಲಸಮಾಡಬೇಕೆಂದೂ, ಸಭೆ, ಭಜನೆ, ಪತ್ರಿಕಾದಿಗಳ ಮೂಲಕ ಹಳ್ಳಿಗರಲ್ಲಿ ನವಚೇತನವನ್ನುಂಟು ಮಾಡಬೇಕೆಂದೂ ನಿಶ್ಚಯಿಸಲಾಯಿತು —ತಾ 16-10-36ನೇ ಶುಕ್ರವಾರ 'ಹಳ್ಳಿಯ ಕೂಟ'ದ ವಿಶೇಷಸಭೆಯೊಂದು ನೆರೆಯಲಿರುವುದು. ಕಾರ್ಯ ಕ್ರಮಾದಿಗಳನ್ನು ಮುಂದಕ್ಕೆ ತಿಳಿಸಲಾಗುವುದು. ಹಳ್ಳಿಗ.

ಬಾರ್ಕೂರು:— ಇಲ್ಲಿಯ ಹಿಂದೂ ಕ್ಲಬ್ಬಿನ ಐದನೇ ವಾರ್ಷಿಕೋತ್ಸವವು ಕಳೆದ ತಾ. 5-10-'36ಲ್ಲು ವಿಜೃಂಭಣೆಯಿಂದ ನವಯುಗದ ಸಂಪಾದಕ, ಶ್ರೀಯುತ ಕೆ. ಕೆ. ಸೆಟ್ರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಮಹೋತ್ಸವಕ್ಕೆ ಸುಮಾರು ಐದುನೂರು ಮಂದಿ ಆಬಾಲವೃದ್ಧರು ನೆರೆದಿದ್ದರು ಪ್ರತಿಯೊಂದು ಕಾರ್ಯಭಾಗವೂ ವ್ಯವಸ್ಥಿತ ರೀತಿಯಲ್ಲಿ ಜರಗಿದುದು ಶ್ಲಾಘನೀಯವೇ ಸರಿ ಶ್ರೀಯುತ ಕೆ. ಕೆ. ಸೆಟ್ಟರು ಸಪತ್ನೀಕರಾಗಿ ಕ್ಲಬ್ಬಿನ ಮೆಂಬರರಿಂದ ಸ್ವಾಗತೀಕರಿಸಲ್ಪಟ್ಟಮೇಲೆ ಕ್ಲಬ್ಬಿನ ಮೆಂಬರರ ಮತ್ತು ಅಧ್ಯಕ್ಷರ ಫೋಟೋ ತೆಗೆಯಲಾಯಿತು. ನೆರೆದ ಎಲ್ಲಾ ಸಭಿಕರಿಗೂ ಫಲಾಹಾರಾದಿ ಸತ್ಕಾರಗಳು ನಡೆದ ಬಳಿಕ ಟಿ. ಶುಕ್ರಮಾಸ್ತರರ ಸೂಚನೆಯಂತೆ, ಸರ್ವೋತ್ತಮ ಶೆಣೆಯರಿಂದ ಅನುಮೋದಿಸಲ್ಪಟ್ಟು ಶ್ರೀಯುತ ಕೆ. ಕೆ. ಸೆಟ್ಟರು ಸಭಾಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ತರುವಾಯ ಕ್ಲಬ್ಬಿನ ಗೌರವ ಕಾರ್ಯದರ್ಶಿಗಳಾದ ಶ್ರೀಯುತ ವಿಟ್ಠಲ ಸೆಟ್ಟರು ಕ್ಲಬ್ಬಿನ ವರದಿಯನ್ನು ಓದಿದರು ಶ್ರೀ. ಕಾಪು ಸರ್ವೋತ್ತಮ ಸೆಟ್ರು ಅಧ್ಯಕ್ಷ ಮಹಾಶಯರ ಪರಿಚಯವನ್ನು ಸಭಿಕರಿಗೆ. ಮಾಡಿಕೊಟ್ಟರು. ಶ್ರೀಗಳಾದ ಬೈಕಾಡಿ ರಾಮಣ್ಣ ಸೆಟ್ಟರು ಬಾರಕೂರು ಶಾಲಾ ಹೆಡ್ ಮಾಸ್ಟರ್, ಶ್ರೀ ರಾಮಣ್ಣ ಸೆಟ್ಟರು, ಬಿ. ಎಲ್. ಅಡಿಗಳು, ಕೆ. ಶಂಕರನಾರಾಯಣರಾಯರೂ, ಬಿ. ವಿಟ್ಠಲ್ ಸೆಟ್ಟರೂ ಕ್ಲಬ್ಬಿನ ಪ್ರಯೋಜನದ ಕುರಿತು ಸಭೆಯ ಪರವಾಗಿ ಭಾಷಣಮಾಡಿದರು. ಪಂದ್ಯಾಟಗಳಲ್ಲಿ ಗೆದ್ದ ಮಕ್ಕಳಿಗೆ ಬಹುಮಾನಗಳನ್ನು ಹಂಚಿದ ಬಳಿಕ ಅಧ್ಯಕ್ಷರು ಕ್ಲಬ್ ಜೀವನದ ಕುರಿತು ಅಮೋಘವಾದ ಭಾಷಣವನ್ನಿತ್ತರು ಕ್ಲಬ್ಬಿನ ಪರವಾಗಿ ಹಾಗೂ ಸಭೆಯ ಪರವಾಗಿ ಅಧ್ಯಕ್ಷರಿಗೆ ಧನ್ಯವಾದವನ್ನರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಕಾರ್ಯಕ್ರಮದಂತೆ ರಾತ್ರೆ ಗಂಟೆ 9ಕ್ಕೆ ನಡೆದ ಯಕ್ಷಗಾನ ಕೂಟಕ್ಕೆ ಸಾಧಾರಣ ಎಂಟುನೂರು ಮಂದಿ ಸೇರಿದ್ದರು. ಪ್ರಸಿದ್ಧ ಅರ್ಥಧಾರಿಗಳಾದ ಮ ರಾ. ತೆಕ್ಕಟ್ಟೆ ಬಾಬಣ್ಣ ಶ್ಯಾನುಭಾಗರು, ಮ. ರಾ. ಹೆಬ್ರಿ ಮಂದರ ಬಲ್ಲಾಳರು, ಮ ರಾ. ವೀರಭದ್ರ ನಾಯ್ಕರು ಮತ್ತು ಅರ್ಥದಾರಿಗಳಾದ ಅನೇಕ ಉಪಾಧ್ಯಾಯರು ತಮ್ಮ ವಾಕ್ಪ್ರೌಢಿಮೆಯನ್ನು ತೋರಿಸಿ ಸಭಿಕರನ್ನು ಆನಂದಗೊಳಿಸಿದರು.

ಹಿಂದೂಗಳ ಐಕಮತ್ಯ

ಹಿಂದೂಮತವು ಹಲವು ಜಾತಿಗಳಾಗಿ ಛೇದಿಸಲ್ಪಟ್ಟು ಜಾತಿಭೇದದ ಗೊಂದಲದಲ್ಲಿ ಸಿಲುಕಿ, ಸೌಹಾರ್ದ್ರವನ್ನು ಕಳೆದುಕೊಂಡು ಅಧಃಪತನಕ್ಕೀಡಾದುದು ಹಿಂದುಗಳ ಗೌರವಕ್ಕೊಂದು ಕೊರತೆಯೇ ಸರಿ. ಇದರ ದೆಸೆಯಿಂದ ಅನ್ಯ ಮತಸ್ಥರ ಉಪದೇಶವೆಂಬ ಗಾಣದಲ್ಲಿ ಚೆನ್ನಾಗಿ ಅರೆಯಲ್ಪಟ್ಟು ಸತ್ವವನ್ನು ಕಳೆದುಕೊಂಡು ನಿಸ್ತೇಜವಾಗಿರುವ ಈ ಮತೋದ್ಧಾರಣಾಕಾರ್ಯಕ್ಕೆ ಸೊಂಟಕಟ್ಟುವುದು ಪ್ರತಿಯೊಬ್ಬ ಹಿಂದೂವಿನ ಮುಖ್ಯ ಕರ್ತವ್ಯವು. ಇದಕ್ಕೆ ಐಕ್ಯಮತ್ಯದ ಪ್ರಭಾವವು ಇದ್ದೇ ತೀರಬೇಕು.

ಬಾರಕೂರಲ್ಲಿ ತಾ. 3-10-36ಲ್ಲು ನಡೆದ ಘಟನೆಯೊಂದು ಇದಕ್ಕೆ ಉತ್ತಮ ನಿದರ್ಶನವಾಗಿರುತ್ತದೆ. ಮೈಸೂರು ಸೀಮೆಯ ರುದ್ರಯ್ಯನೆಂಬ ಲಿಂಗಾಯಿತನು ತನಗಿದ್ದ ಅಸ್ವಸ್ಥದಿಂದ ವಿಮುಕ್ತನಾಗಲು ತನ್ನ ಚಿಕ್ಕ ಸಂಸಾರದೊಡನೆ ಬಾರ್ಕೂರಿಗೆ ಬಂದು, ವೈದ್ಯಕೊಬ್ಬರಿಂದ ಚಿಕಿತ್ಸೆ ಹೊಂದುತ್ತಿದ್ದು ತಾ. 2-10-'36ನೇ ಶುಕ್ರವಾರ ಮೃತ್ಯುವಶನಾದನು. ಅವನ ಜಾತಿಯವರಾರೂ ಇಲ್ಲಿ ಇಲ್ಲದುದರಿಂದ ಆತನ ಶವಸಂಸ್ಕಾರಕ್ಕೆ ಭಂಗ ಉಂಟಾಗುವ ಪ್ರಸಂಗದಲ್ಲಿ ಹಿಂದೂಕ್ಲಬ್ಬಿನ ಉತ್ಸಾಹೀ ಸದಸ್ಯರು ಸ್ಥಳೀಯ ಶಾಲಾ ಸ್ಕೌಟು ದಳದವರ ಸಹಕಾರದಿಂದ, "ಆತನು ಯಾವ ಜಾತಿಯವನಾದರೂ ತಮ್ಮ ಹಿಂದು ಧರ್ಮದವ"ನೆಂಬ ಅಭಿಮಾನದಿಂದ, ಶವ ಸಂಸ್ಕಾರವನ್ನು ಮೃತನ ಜಾತಿಯ ಸಂಪ್ರದಾಯಕ್ಕನುಗುಣವಾಗಿ ನೆರವೇರಿಸಿದರು. ಈ ಸಂದರ್ಭದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಹಿಂದುಗಳೂ, ಮುಸಲ್ಮಾನ ಬಂಧುಗಳೂ, ಸೇರಿ ದೊಡ್ಡ ಜನಸ್ತೋಮದೊಡನೆ ಮೆರವಣಿಗೆಯಿಂದ ದಫನಕಾರ್ಯವನ್ನು ಸಾಂಗವಾಗಿ ಜರಗಿಸಿದರು.

ಈ ಕಾರ್ಯಪ್ರಸ್ತುತ್ಯವೇ ಸರಿ. ಬಾರಕೂರಿನ ಹಿಂದೂ ಮುಸಲ್ಮಾನರ ಐಕ್ಯವೂ, ಹಿಂದೂಧರ್ಮ-ದವರೊಳಗಿನ ಪರಸ್ಪರಾನುರಾಗಸಹಾನುಭೂತಿಗಳೂ, ಅನುಕರಣೀಯವಿವೆ.

ಮೂಲ್ಕಿಯಲ್ಲಿ ಬಂದರು ಅವಶ್ಯಕ.

(ಮೂಲ್ಕಿ ಬಂದರ ಕಮಿಟಿಯ ಕಾರ್ಯದರ್ಶಿಗಳಿಂದ ಮುಂಬಾಯಿ)

ದಕ್ಷಿಣ ಕನ್ನಡದ ಮಧ್ಯಭಾಗದಲ್ಲಿರುವ ಮೂಲ್ಕಿ ಪಟ್ಟಣವು ಒಂದು ಕಾಲದಲ್ಲಿ ವ್ಯಾಪಾರದಲ್ಲಿ ಪ್ರಮುಖವಾಗಿದ್ದುದು ಜನರೆಲ್ಲರೂ ಅರಿಯದ ವಿಷಯವಲ್ಲ. ಇಷ್ಟು ಘನತೆಯ ಸ್ಥಾನವನ್ನು ಬೊಂಬಾಯಿ ಸ್ಟೀಮ್ ನೆವಿಗೇಶನ್ ಕಂಪನಿಯವರು, ಈ ತನರ ಬಂದರು ಮಾಡದೆ ಅಲಕ್ಷಿಸುತ್ತಾ ಬಂದುದು ಬಹು ವಿಷಾದಕರ ಸಂಗತಿಯಾಗಿದೆ. ಇದರಿಂದ ಅಲ್ಲಿಯ ಪ್ರಯಾಣಿಕರೂ, ಅಲ್ಲಿಯ ರಮಣೀಯ ದೃಶ್ಯ ಮತ್ತು ದೇವಸ್ಥಾನಗಳ ಬೆಡಗು ಕೌತುಕಾದಿಗಳನ್ನು ನೋಡಲಿಕ್ಕೆ ಹೋಗುವ ಇತರ ಜನರೂ ಬಹು ವಿಧಕಷ್ಟಗಳನ್ನು ಅನುಭವಿಸುತ್ತಿರುವರು. ಅಲ್ಲದೆ ಯಥಾಕ್ರಮ ಅಲ್ಲಿಯ ವ್ಯಾಪಾರವ್ಯವಹಾರಗಳು ಬಹು ಹೀನಾವಸ್ಥೆಗೆ ಬಂದಿರುವುವು. ಇವುಗಳ ಪುನರುಜ್ಜೀವನಕ್ಕೆ ತಕ್ಕ ಯೋಜನೆಯನ್ನು ಗೈಯದಿದ್ದರೆ, ಉನ್ನತಿಯ ಬಾಭವು ಕನಸಿನ ಗಂಟಾಗದಿರದು. ಮುಂಬಾಯಿ ಶಹರಿನಲ್ಲಿಯೂ, ಐದು ಸಾವಿರಕ್ಕೆ ಕಡಿಮೆಯಾಗದಷ್ಟು ನಿವಾಸಿಕರು ಮೂಲ್ಕಿಯ ಏಳಿಗೆಯ ಚಿಂತನೆಯಲ್ಲಿರುವರು

ಪ್ರತಿಮಂಗಳವಾರವೂ ಶುಕ್ರವಾರವೂ ಮುಂಬಾಯಿಯಿಂದ ಮಂಗಳೂರಿಗೆ ಅಥವಾ ಕಲ್ಲಿಕೋಟೆಗೆ ಹೋಗುತ್ತಿರುವ ಸ್ಟೀಮರುಗಳಲ್ಲಿ ತುಂಬಿಸಲ್ಪಡುವ ಜನರಲ್ಲಿ ಅಧಿಕಾಂಶವು ಮೂಲ್ಕಿಯ ಮತ್ತು ಅದರ ಸರಹದ್ದಿನ ಸಂಖ್ಯೆಯು ಎಂಬ ಮಾತು ನಿರ್ವಿವಾದ ಸಂಗತಿಯಾಗಿರುವುದು. ಆದರೂ ಈ ಜನರೇ ಅತ್ಯಂತ ಉಪೇಕ್ಷಿಸಲ್ಪಟ್ಟು ಹೇಳಲಾರದಷ್ಟು ಸಂಕಷ್ಟಗಳನ್ನು ಅನುಭವಿಸಬೇಕಾಗುವುದು. ಮೂಲ್ಕಿಯಲ್ಲಿ ಸ್ಟೀಮರು ಬಂದರು ಮಾಡದ ಕಾರಣ ಅಲ್ಲಿಯವರು ನಿರುಪಾಯವಾಗಿ ಮಲ್ಪೆ ಅಥವಾ ಮಂಗಳೂರಲ್ಲಿ ಇಳಿಯ ಬೇಕಾಗಿ ತಮ್ಮ ಸ್ಥಾನಗಳನ್ನು ಸೇರುವ ಮೊದಲು ಹೆಚ್ಚಿನಉಪದ್ರವಗಳಿಗೆಗುರಿಯಾಗುವರು. ಇಂಥಾ ಕಷ್ಟಗಳಿಂದ ಪಾರಾಗುವುದಕ್ಕಾಗಿಯೇ ಮುಂಬಾಯಿಯಲ್ಲಿರುವ, ಮೂಲ್ಕಿಯ ವಿಶೇಷವಾಗಿ ಪೂರ್ವ ಸರಹದ್ದಿನ ಜನರು ಬೋರೀ ಬಂದರನ್ನು ಸೇರಿ ರೈಲು ಹಾದಿಯನ್ನು ಹಿಡಿಯುವುದು. ಹೀಗಾಗಿ ತಮ್ಮ ಆದಾಯವು ಅನ್ಯರನ್ನು ಸೇರುತ್ತಿದ್ದರೂ, ಸ್ಟೀಮರು ಕಂಪನಿಯವರು ಜಾಗ್ರತರಾಗದಿರುವದು ಆಶ್ಚರ್ಯಕರ ಸಂಗತಿಯು. ಜನರಿಗೆ ಕಿಂಚಿತ್ ಸುಖವನ್ನುಂಟುಮಾಡುವುದರಿಂದ, ಕಂಪನಿಯು ಅವರ ಆದರ ಸಹಕಾರಗಳನ್ನು ಪಡೆಯಬಹುದಲ್ಲದೆ, ತಮ್ಮ ಆದಾಯವನ್ನು ಬಹು ವೃದ್ಧಿಗೊಳಿಸಲಾಗುವುದು.

ಮೂಲ್ಕಿಯು ಒಮ್ಮೆ ವ್ಯಾಪಾರದ ಪ್ರಶಂಸೆಯಲ್ಲಿ ಜಿಲ್ಲೆಯ ಯಾವ ಬಂದರುಗಳಿಗೂ ಎರಡನೆಯವಾಗಿರಲಿಲ್ಲ. ಅಲ್ಲಿ ಸದಾ ಹರಿಯುತ್ತಿರುವ "ಶಾಂಭವಿ" ನದಿಯು ಉಪ್ಪಕ್ಕೂ ಸರಿಯುತ್ತಿದ್ದ ಸರಕಿನ ಹಡಗು ದೋಣಿಗಳ ಸಾಲುಗಳು ಈಗಲೂ ಜನರ ಹೃದಯದಲ್ಲಿ ಪ್ರತಿಬಿಂಬಿಸುವಂತಿದೆ. ಇಷ್ಟು ದೊಡ್ಡ ವ್ಯಾಪಾರವು ನಾಶಹೊಂದುವುದಕ್ಕೆ ಒಂದು ಮುಖ್ಯ ಕಾರಣವು ಸ್ಟೀಮರು ಕಂಪನಿಯವರು ಮೂಲ್ಕಿಯನ್ನು ತಮ್ಮ ಬಂದರುಗಳಲ್ಲಿ, ಒಂದಾಗಿ ಪರಿವರ್ತಿಸಿಕೊಳ್ಳದಿದ್ದುದು. ಈಗಲಾದರೂ ಮೂಲ್ಕಿಯಲ್ಲಿ ಸ್ಟೀಮರು ನಿಲ್ಲಿಸುವುದಾದರೆ, ನಾಶಹೊಂದಿದ ವ್ಯಾಪಾರದ ಪುನರುದ್ಧಾರವಾಗಿ ಮೂಲ್ಕಿಯು ತನ್ನ ಪೂರ್ವದ ಕೀರ್ತಿಯನ್ನು ಪುನಃ ಸಂಪಾದಿಸುವುದರಲ್ಲಿ ಸಂಶಯವಿಲ್ಲ. ಮೂಲ್ಕಿಯ ಈ ತರದ ಉದ್ಧಾರದಿಂದ ಜನರಲ್ಲಿ ಸಂತೃಪ್ತಿ ಸಮಾಧಾನಗಳು ಹುಟ್ಟಿ ಕಂಪನಿಯವರ ಕಡೆಗೆ ಕೃತಜ್ಞತೆ ತೋರಿಸುವರಲ್ಲದೆ ಕಂಪನಿಯ ಆದಾಯವು ವೃದ್ಧಿಗೊಳ್ಳುವುದರಲ್ಲಿ ಲೇಶವೂ ಸಂದೇಹವಿಲ್ಲ ಪ್ರಮುಖವಾದ ಕಂಪನಿಯು ಈ ಸತ್ಕಾರ್ಯದಲ್ಲಿ ವಿಮುಖವಾಗದೆಂದೇ ನಮ್ಮಭರವಸೆ.

ಬೋರ್ಡು ಮೂಲಶಾಲಾಧ್ಯಾಪಕ ಮಹಿಳೆ-ಮಹನೀಯರೇ!

ನಮ್ಮವರ ಏಕೀಕರಣ ಮತ್ತು ಸಂಘ ನವಿಚಾರದಲ್ಲಿ ಒಂದು ವಿನಂತಿ, ಈ ವಿಚಾರವು ಹೊಸತೇನೂ ಅಲ್ಲ, ಮೂಲಶಾಲಾಧ್ಯಾಪಕರ ಬಗೆಬಗೆಯ ಸಂಘರಚನೆಯು ಮೊದಲ್ಗೊಂಡು ಇದ್ದುದು. ತಾಲೂಕು ಬೋರ್ಡುಗಳು ಅಧಿಕಾರ ಪ್ರವರ್ತನೆಯಲ್ಲಿದ್ದಾಗ ಬೋರ್ಡುಮೂಲಶಾಲಾಧ್ಯಾಪಕರ ಏಳಿಗೆ ಮತ್ತು ಬೋರ್ಡು ಮೂಲಶಾಲೆಗಳಲ್ಲಿ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಚಳವಳವು ಒಂದೊಂದು ತಾಲೂಕಿಗೆ ಮಾತ್ರ ಅನ್ವಯಿಸಿತ್ತು. ಹೀಗಾಗಿ 1929ರಲ್ಲಿ ಉಡುಪಿ ತಾಲೂಕು ಬೋರ್ಡುಮೂಲಶಾಲಾಧ್ಯಾಪಕರು ಒಂದು ಗೂಡಿ, ಸುವ್ಯವಸ್ಥಿತವ ಒಂದು ಸಂಘವನ್ನು ಸ್ಥಾಪಿಸಿಕೊಂಡು ಕಾರ್ಯಪ್ರವರ್ತನೆಗಾರಂಭಿಸಿ, ಸಂಘರಚನ ಮತ್ತು ಅದರ ಕಾರ್ಯಕಲಾಪಗಳಿಗಾಗಿ ರಚಿಸಲ್ಪಟ್ಟ ನಿಯಮ ನಿಬಂಧನೆಗಳ ಸಹಿತವಾದ ಒಂದು ಬಿನ್ನವತ್ತಳೆಯು ತಾಲೂಕು ಬೋರ್ಡಿಗೂ ಜಿಲ್ಲಾ ಎಡ್ಯುಕೇಶನಲ್ ಆಫೀಸರವರಿಗೂ ಸಮರ್ಪಿತವಾಗಿತ್ತು ಆ ಅಧಿಕಾರಿಗಳು ಆ ಯೋಜನೆಯನ್ನು ಆಹ್ಲಾದ ಪೂರ್ವಕ ಅಂಗೀಕರಿಸಿದುದರಿಂದ ಅದು ಅಧ್ಯಾಪಕರ ಹಾಗೂ ಮೂಲವಿದ್ಯಾಭ್ಯಾಸದ ಪುರೋಭಿವೃದ್ಧಿಯ ಮೊದಲನೆಯ ಸೋಪಾನವಾಗಿ ಪರಿಣಮಿಸಿತು. ತಾಲೂಕು ಬೋರ್ಡುಗಳು ಜಿಲ್ಲಾ ಬೋರ್ಡಿಗೆ ಸಂಯೋಜಿಸಲ್ಪಟ್ಟ ತರುವಾಯ 1931ರಲ್ಲಿ ಈ ಸಂಘದ ಸ್ಥಾಯಿತ್ವವನ್ನು ಜಿಲ್ಲಾ ಬೋರ್ಡು ಪ್ರೆಸಿಡೆಂಟರವರ ಸರಾಂಬರಿಕೆಗೂ ತರಲ್ಪಟ್ಟಾಗ ಸಂಘದ ಮೇಲ್ಮೆಯ ಹಿತಕಾಂಕ್ಷೆಯಿಂದಲೇ ಅವರೂ ಅಪ್ಪಣೆಯನ್ನು ದಯೆಪಾಲಿಸಿದ್ದರು ಈಗ ಜಿಲ್ಲಾ ಬೋರ್ಡಿನ ಅಧಿಕಾರದೊಳಗಿರುವ ಎಲ್ಲಾ ಮೂಲಶಾಲೆಗಳಲ್ಲಿ ಉದ್ಯೋಗ ವರ್ತನೆಯಲ್ಲಿರುವ ಅಧ್ಯಾಪಕರ ಸಂಘದ ವಿಚಾರ, ಈ ಕುರಿತು ಜನತೆಯ ಹಿತಸಾಧನೆಗಾಗಿ ತನು-ಮನ ಧನವನ್ನು ಅರ್ಪಿಸಿರುವ ಅನೇಕ ಮಹನೀಯರ ಹಿತ ಸೂಚನೆಗಳನ್ನು ಅವಲಂಬಿಸಿ, ಇಂದಿನ ಜಿಲ್ಲಾ ಬೋರ್ಡು ಎಡ್ಯುಕೇಶನಲ್ ಆಫೀಸರವರ ಆಜ್ಞಾಧಾರಕದ ಸೂಚನೆಯನ್ನು ಕಾಂಕ್ಷಿಸಿ ಬಿನ್ನಯಿಸಿದುದಕ್ಕೆ ಪ್ರತಿ ತಾಲೂಕಿನಲ್ಲಿಯೂ ಬೋರ್ಡು ಮೂಲಶಾಲಾಧ್ಯಾಪಕರ ತಾಲೂಕು ಸಂಘಗಳ ರಚನೆಯು ಪ್ರಾರಂಭದಲ್ಲಿ ಆಗುವಂತೆ ಪ್ರಯತ್ನಿಸಬೇಕೆಂಬ ಸೂಚನೆಯನ್ನು ಅಧಿಕಾರಿಗಳು ದಯೆಪಾಲಿಸಿರುವುದರಿಂದ ಈ ಸಂಘದ ತತ್ವವನ್ನು ಅವರು ಮನನಮಾಡಿ ಪ್ರಸ್ತಾಪನೆಯ ಸಂಘ ರಚನೆಯು ಆವಶ್ಯಕವೆಂದು ಅಂಗೀಕರಿಸಿದುದರ ಶುಭ ಸೂಚನೆಯಾಗಿದೆ. ಪ್ರಕೃತ ಬೋರ್ಡಿನವರ ಅಧೀನದಲ್ಲಿರುವ ಸುಮಾರು 630 ಮೂಲಶಾಲೆಗಳಲ್ಲಿ ಉದ್ಯೋಗಪ್ರವರ್ತಿಸುತ್ತಿರುವ ಸುಮಾರು 1500 ಮಂದಿ ಅಧ್ಯಾಪಕ ಮಹಿಳೆ-ಮಹನೀಯರು ಏಕಮನಸ್ಕರಾಗಿ ಸಾಮುದಾಯಕದಿಂದ ತಮ್ಮೋನ್ನತಿಯನ್ನು ಸಾಧಿಸುವುದು ಅಸಮಂಜಸವೆಂದು ಯಾರೂ ಗ್ರಹಿಸರು. ಜಿಲ್ಲೆಯ ಮೂಲಶಾಲೆಗಳಲ್ಲಿ ಅಭ್ಯಾಸಮಾಡುತ್ತಿರುವ ಶೇಕಡಾ 60ರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ ಬೋಧಿಸುತ್ತಿರುವ ಬೋರ್ಡುಮೂಲಾಧ್ಯಾಪಕರಿಗೆ ಕಷ್ಟ ಪರಂಪರೆಗಳು ಇಲ್ಲವೆಂದಲ್ಲ; ಲಗಣಿತ. ಇಂಥಾ ಅವ್ಯವಸ್ಥೆಯನ್ನು ಪರಿಹರಿಸಿಕೊಳ್ಳುವುದಕ್ಕೂ ಮೂಲ ವಿದ್ಯಾಭ್ಯಾಸದ ಪ್ರಚಾರವು ಉತ್ಸುಕತೆಯಿಂದ ಮುಂದೊತ್ತಿ ಎಲ್ಲರನ್ನೂ ಅಕ್ಷರಜ್ಞರನ್ನಾಗಿ ಮಾಡುವುದಕ್ಕೂ ತಕ್ಕುದಾದ ಸಂಚಿಕೆಗಳನ್ನುಮಾಡುವುದೂ ಬೋರ್ಡು ಶಾಲಾಧ್ಯಾಪಕರು ಇನ್ನಾದರೂ ತದೇಕಚಿತ್ತರಾಗಿ ಪ್ರಯತ್ನಿಸುವ ಸದುದ್ದೇಶದ ಸಾಧನೆಗಾಗಿ ಪ್ರತಿ ತಾಲೂಕಿನಲ್ಲಿಯೂ ಬೋರ್ಡು ಮೂಲಶಾಲಾಧ್ಯಾಪಕರ ಸಂಘ ಸ್ಥಾಪನೆಯನ್ನು ಮಾಡುವುದಕ್ಕೆ ಆರಂಭಿಸಿ ಸ್ವಗೌರವವನ್ನು ಕಾಪಾಡಿಕೊಳ್ಳಬೇಕಾಗಿ ಪ್ರಾರ್ಥಿಸುವ, ತಮ್ಮಗಳನುರಾಗಭಿಮಾನಿ

ಎಂ. ಗೋವಿಂದರಾವ್.

ಕಾಂಗ್ರೆಸ ಕಮಿಟಿಗಳ ಸ್ಥಾಪನೆ ಮತ್ತು ಚುನಾವಣೆ

೩೦-೯-೩೬ರ ವರೆಗೆ ನಡೆಯತಕ್ಕ ಕಾಂಗ್ರೆಸ ಸಭಾಸದರನ್ನು ಮಾಡುವ ಕಾರ್ಯವು ಈ ಒಳಗಾಗಿ ಮುಗಿದಿದೆ ಇನ್ನು ಆಯಾ ಸ್ಥಳಗಳಲ್ಲಿ ಕಾಂಗ್ರೇಸ ಕಮಿಟಿಗಳನ್ನು ಸ್ಥಾಪಿಸುವ ಕಾರ್ಯವು ವ್ಯವಸ್ಥಿತ ರೀತಿಯಿಂದ ಆಗುವುದು ಆವಶ್ಯವು. ಹೊಸ ಕಾಂಗ್ರೇಸ್ ಕಮಿಟಿಗಳ ಹೊಸ ಚುನಾವಣೆಗಳು ೧೫ನೇ ಡಿಸೆಂಬರದೊಳಗಾಗಿ ಆಗಲಿಕ್ಕೇ ಬೇಕು. ಅಂದರೆ ಪ್ರತಿಯೊಂದು ಜಿಲ್ಲಾ ಕಾಂಗ್ರೆಸ ಕಮಿಟಿಯ ಹೊಸ ಚುನಾವಣೆಯು ಇದೇ ೧೦ (ಹತ್ತನೇ) ತಾರೀಖಿನೊಳಗಾಗಿ ಆಗಲೇ ಬೇಕು. ಇದೇ ರೀತಿಯಾಗಿ ಗ್ರಾಮ, ಸರಕಲ, ನಗರ, ಕಾಂಗ್ರೆಸ ಕಮಿಟಿಗಳ ಚುನಾವಣೆಯು ಇದೇ ನವೆಂಬರ ೩೦ನೇ ತಾರೀಖಿನೊಳಗಾಗಿ ಆಗತಕ್ಕದ್ದು. ಆಯಾ ಜಿಲ್ಲಾ ಕಾಂಗ್ರೆಸ ಕಮಿಟಿಯ ಘಟನೆಯ ಪ್ರಕಾರ ಈ ಎಲ್ಲಾ ಚುನಾವಣೆಗಳು ಸಾಗತಕ್ಕದ್ದು. ಪ್ರತಿಯೊಂದು ಕಾಂಗ್ರೆಸ ಕಮಿಟಿಯ ಅಧಿಕಾರೀ ವರ್ಗದಯಾದಿಯೊಂದನ್ನು ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಕಳಿಸಿಕೊಡತಕ್ಕದ್ದು.

ಕಾಂಗ್ರೆಸ ಸದಸ್ಯರ ಪಟ್ಟಿಗಳು.

ಕಾಂಗ್ರೆಸ ಪ್ರಾಥಮಿಕ ಸದಸ್ಯರ ಪಟ್ಟಿಗಳು ಇದೇ ತಿಂಗಳ ೧೫ನೇ ತಾರೀಖಿನೊಳಗಾಗಿ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಚೇರಿಗೆ ತಲುಪುವಂತೆ ಜಿ ಕಾಂ. ಕ. ಗಳು ಕಳಿಸಿಕೊಡಬೇಕು ಆದರೆ ಜಿ. ಕಾಂ. ಕ. ಗಳು ಟೈಪು ಮಾಡಿದ ೨ ಪ್ರತಿಗಳನ್ನು ಕಳಿಸಬೇಕಾದುದರಿಂದ ೧-೨ ದಿವಸ ಹೆಚ್ಚಿಗೆ ಹಿಡಿಯಬಹುದು ಕಾರಣ ಜಿ. ಕಾಂ. ಕಮಿಟಿಗಳು ತಮ್ಮ ಜಿಲ್ಲೆಗಳಲ್ಲಿಯ ಹಳ್ಳಿ ಮತ್ತು ಪಟ್ಟಣಗಳಲ್ಲಿ ಆದ ಕಾಂಗ್ರೆಸ ಸದಸ್ಯರ ಸಂಖ್ಯೆಯನ್ನು ಪ್ರಾ. ಕಾ. ಕಮಿಟಿಗೆ ಬೇಗನೇ ಕಳಿಸಿಕೊಡಬೇಕು ಹಾಗೂ ಈ ಅಂಕೆಗಳ ಕೆಳಗೆ ಜಿಲ್ಲಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರ ಸಹಿಯು ಇರಬೇಕು.

ಮತ್ತು ಟೈಪಮಾಡಿದ ಕಾಂಗ್ರೆಸ ಸದಸ್ಯರ ಪಟ್ಟಿಗಳನ್ನಾದರೂ ಜಿ. ಕಾಂ. ಕ. ಯವರು ಬೇಗನೇ ಕಳಿಸಿಕೊಡಬೇಕು.

ರಂಗನಾಥ ರಾಮಚಂದ್ರ ದಿವಾಕರ.

ಧಾರವಾಡ
೮-೧೦-೧೯೩೬.

ಗೌರವ ಕಾರ್ಯದರ್ಶಿ,
ಕರ್ನಾಟಕ ಪ್ರಾಂತಿಕ
ಕಾಂಗ್ರೆಸ ಕಮಿಟಿ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಪಾರ್ಲಿಮೆಂಟರೀ ಬೋರ್ಡು.

(ಪ್ರಕಟಣೆ ೩)

ವೃತ್ತಪತ್ರಿಕೆಯವರಾಗಲಿ ಅವರ ಸುದಿಗಾರರಾಗಲೀ ಊಹಾಪೂರ್ವಕವಾಗಿ ಇಲ್ಲವೆ ವಿಶ್ವಾಸನೀಯವೆಂಗು ಪ್ರಕಟಿಸಿದ ಕಾಂಗ್ರೆಸ ಚುನಾವಣೀ ಸಂಬಂಧದ ಅದವಾ ಕಾಂಗ್ರೆಸ ಉಮೇದುವಾರರುಗಳ ಸಂಬಂಧದ ಯಾವದೇ ಸುದ್ದಿಯು ನಿಜವೆಂದು ಇಲ್ಲವೆ ಅಧಿಕೃತವೆಂದು ಯಾರೂ ತಿಳಿಯ ಕೂಡದೆಂದು ಜನತೆಗೆ ನಮ್ಮ ಬಿನ್ನಹವಿದೆ.

ಕಾರ್ಯದರ್ಶಿಗಳ ಇಲ್ಲವೆ ಅಧ್ಯಕ್ಷ, ಉಪಾಧ್ಯಕ್ಷ, ಚೆರಮನ್ನ ಇವರಲ್ಲಿ ಒಬ್ಬರ ಸಹಿ ಇಲ್ಲದೇ ಪ್ರಕಟವಾದ ಈ ಒಗೆಯ ಯಾವದೇ ಸುದ್ದಿಯು ಅಧಿಕೃತವೆಂದು ಇಲ್ಲವೆ ನಿಜವೆಂದು ಯಾರೂ ತಿಳಿಯಬಾರದಾಗಿ ಎಲ್ಲರಿಗೂ ವಿನಂತಿಯಿದೆ.

ರಾ. ಶ್ರೀ. ಹುಕ್ಕೇರಿಕರ
ನಾ. ಸು. ಹರ್ಡೀಕರ
ಗೌರವ ಕಾರ್ಯದರ್ಶಿಗಳು
ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಪಾರ್ಲಿಮೆಂಟರೀ ಬೋರ್ಡು ಧಾರವಾಡ.

L. Dis 10850/A2/36

NOTICE.

As it is reported that the Mundaje Bridge in mile 15/2 of Trunk Road, No. A 22 (Mangalore-Mysore Road) is in a damaged condition, it is hereby ordered that no traffic should pass over the said bridge from this date until further notification. Any person attempting to take a vehicle on the bridge will do so at his own risk.

B. M. Hegde.
President, Dt. Board,
South Kanara, MANGALORE.
3-10-1936.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಮ. ರಾ. ರಾ. ದಿವಾನ್ ಬಿ. ಮಹಾಬಲ ಹೆಗ್ಡೆ ಅವರ್ಗಳ್. ಬಹದ್ದೂರ್ ಬಿ. ಎ. ಬಿ. ಎಲ್, ರವರು

ಸರ್ಕಿಲಾರು

ಎಲ್ಲಾ ಪಂಚಾಯ್ತು ಪ್ರಸಿಡೆಂಟರಿಗೆ

ಗ್ರಾಮ ಪಂಚಾಯ್ತುಗಳು ಸ್ಥಾಪಿಸಿ ನಡಿಸಿಕೊಂಡು ಬರುತ್ತಿರುವ ಪುಸ್ತಕ ಭಂಡಾರಗಳ ಸಹಾಯಾರ್ಥವಾಗಿ ಚಾಲ್ತಿ ವರ್ಷದಲ್ಲಿ ಕೊಡುವರೆ ರೂಪಾಯಿ 10,000ವನ್ನು ಅಧಿಕವಾಗಿ ವಿಂಗಡಿಸಿರುವದಾಗಿಯೂ ಮತ್ತು ಈ ಕೆಳಗೆ ನಮೂದಿಸಿದ ಶರ್ತಗಳಿಗೆ ಒಳಪಟ್ಟು ಹಾಗೆ ಕೊಡಲಾಗುವ ಹಣವನ್ನು ಗ್ರಾಮ ಪಂಚಾಯ್ತುಗಳು ತಮ್ಮ ಸ್ವಾಧೀನವಿರುವ ಪುಸ್ತಕ ಭಂಡಾರಗಳಿಗೆ ಪುಸ್ತಕಗಳನ್ನು ಮತ್ತು ಪುಸ್ತಕಗಳನ್ನು ಇರಿಸುವ ಬಗ್ಗೆ ಅಗತ್ಯವಿರುವ ಸಾಹಿತ್ಯ ಸಾಮುಗ್ರಿಗಳನ್ನು ಒದಗಿಸುವದಕ್ಕೆ ಉಪಯೋಗಿಸತಕ್ಕದ್ದಾಗಿಯೂ ಮದ್ರಾಸ್ ಗವರ್ನಮೆಂಟಿನವರು ತಮ್ಮ ತಾರೀಕು 16-9-1936ರ ವಿದ್ಯಾ ಸಂಬಂಧವಾದ 1968ನೇ ಹುಕುಮಿನ ಮೂಲಕ ತಿಳಿಸಿರುತ್ತಾರೆ.

(1) ಪ್ರತಿಯೊಂದು ಪುಸ್ತಕ ಭಂಡಾರಕ್ಕೆ ಕೊಡುವ ಗ್ರಾಂಟಿನ ಅತ್ಯಧಿಕ ಮಿತಿ ರೂಪಾಯಿ 300/-

(2) ಗ್ರಾಮ ಪಂಚಾಯ್ತುಗಳು ಪುಸ್ತಕ ಭಂಡಾರಕ್ಕೆ ಅಗತ್ಯವಿರುವ ಕಟ್ಟೋಣ, ಸಾಹಿತ್ಯ ಸಾಮುಗ್ರಿ ಮತ್ತು ಶಿಬಂದಿಯ ಅನುಕೂಲತೆಯನ್ನು ಒದಗಿಸತಕ್ಕದ್ದು.

(3) ಪುಸ್ತಕ ಭಂಡಾರವು ಸಾರ್ವಜನಿಕವಾಗಿದ್ದು ಎಲ್ಲಾ ಜಾತಿಯವರು ಬರಲಾಗುವ ನಿರಾತಂಕವಾದ ಜಾಗೆಯಲ್ಲಿ ಇರಗೊಡಿಸಲ್ಪಡತಕ್ಕದ್ದು.

(4) ಬೆಲೆಗೆ ಕೊಂಡುಕೊಳ್ಳುವ ಪುಸ್ತಕಗಳ ಪಟ್ಟಿಯು ಸಂಬಂಧಪಟ್ಟ ಜಿಲ್ಲಾ ಎಜ್ಯುಕೇಶನಲ್ ಆಫೀಸರಿಂದ ಮಂಜೂರಾಗಿರತಕ್ಕದ್ದು.

(5) ಮೆಂಬರರ ಮತ್ತು ಪುಸ್ತಕಗಳ ಹೆಸರುಗಳನ್ನು ಕಾಣಿಸಿದ ರಿಜಿಸ್ತ್ರಿಗಳನ್ನು ತಯಾರಿಸಿ ಇರಿಸುವುದಲ್ಲದೆ ಅಂಥ ರಿಜಿಸ್ತ್ರಿಗಳನ್ನು ಬೇಕಾದ ಸಮಯದಲ್ಲಿ ತನಿಖಿ ಬಗ್ಗೆ ಮೇಲ್ತನಿಖೆಯ ಆಫೀಸರರ ಮುಂದೆ ಹಾಜರು ಪಡಿಸತಕ್ಕದ್ದು.

2. ಪುಸ್ತಕ ಭಂಡಾರಗಳ ಬಗ್ಗೆ ಗ್ರೇಂಟನ್ನು ಅಪೇಕ್ಷಿಸುವ ಗ್ರಾಮ ಪಂಚಾಯ್ತುಗಳು ಈ ಕೆಳಗೆ ಕಾಣಿಸಿದ ವಿವರಗಳನ್ನೊಳಕೊಂಡ ಅರ್ಜಿಗಳನ್ನು ಪಂಚಾಯ್ತದ ನಿರ್ಣಯದೊಂದಿಗೆ ಸಂಬಂಧಪಟ್ಟ ಜಿಲ್ಲಾ ಎಡ್ಯುಕೇಶನಲ್ ಆಫೀಸರ ಮುಖಾಂತರ ಕಳುಹಿಸಬೇಕು.

(i) ತಗಲಿದ ಒಟ್ಟು ಖರ್ಚು

(ii) ಹಿಂದಿನ ವರ್ಷಗಳಲ್ಲಿ ಗ್ರೇಂಟು ಸಿಕ್ಕಿದ್ದರೆ ಅದರಿಂದ ಖರ್ಚು ಮಾಡಲ್ಪಟ್ಟ ಹಣ.

(iii) ಹಾಗೆ ಸಿಕ್ಕಿದ್ದ ಗ್ರೇಂಟಿನ ಪೈಕಿ ಖರ್ಚಾಗದೆ ಉಳಿದಿರುವ ಶಿಲ್ಕು.

(iv) ಗವರ್ನಮೆಂಟಿನಿಂದ ಈಗ ಅಪೇಕ್ಷಿಸುವ ಮೊಬಲಗು.

ಎಲ್ಲಾ ಅರ್ಜಿಗಳು ಇದೇ ಅಕ್ಟೋಬರ ತಿಂಗಳ ತಾರೀಕು 25ರ ವಳಗೆ ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರಿಗೆ ತಲುಪಬೇಕಾಗಿರುವುದರಿಂದ ಜಾಗ್ರತೆಯಾಗಿ ಎಲ್ಲಾ ಪಂಚಾಯ್ತದವರು ನಿರ್ಣಯಮಾಡಿ ಅರ್ಜಿ ಕಳುಹಿಸಬೇಕಾಗಿಯೂ ಈ ಸುಸಂಧರ್ಭವನ್ನು ಕಳಕೊಳ್ಳಬಾರದಾಗಿಯೂ ಈ ಮೂಲಕ ತಿಳಿಸಲಾಗುತ್ತದೆ.

ಬಿ. ಮಹಾಬಲ ಹೆಗ್ಡೆ,
ಪ್ರೆಸಿಡೆಂಟ್ ಡಿ. ಬೋರ್ಡು.

(ಹದಿನೈದನೇ ಪುಟದಿಂದ ಮುಂದರಿಸಿದ್ದು.)

ಮಾಡಿಕೊಳ್ಳಿ ಎಂದನೇಕರು ಘೋಷಿಸುವ ಮಂತ್ರ. ಈ ರೀತಿ ಹೃದಯ ಶುದ್ಧಮಾಡಿಕೊಂಡು ಯುದ್ಧಮಾಡಲು ಅವರು ಕಲಿಸಿದ್ದೇ ಘನವಾದ ಪಾಠ. ಜಯಾಪಜಯಗಳು ಪರಿಸ್ಥಿತಿಯನ್ನವಲಂಬಿಸಿವೆ. 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಕರ್ಮಕ್ಕೆ ಮಾತ್ರ ಸಮತೇ ಫಲಗಳನ್ನು ಯೋಚಿಸುವದಲ್ಲ. ಅವರು ಪರಿಣಾಮವನ್ನೇ ಕರ್ಮಕ್ಕೆ ಪ್ರಧಾನವಾಗಿಟ್ಟು ಕೊಳ್ಳಲಿಲ್ಲ. ಪಾಶ್ಚಿಮಾತ್ಯಗಳ ಇತಿಹಾಸವನ್ನೇ ನೋಡೋಣ, ಅವರಿಗೆ ಶಾಂತಿಯೆಂದರೆ ಯುದ್ಧದ ಆಯಾಸಪರಿಹಾರ. ಅದೇ ಮುಂದಿನ ಯುದ್ಧದ ತಯಾರಿ. ಈ ಪ್ರಜಾಪ್ರಭುತ್ವವೆಂಬರೆ ಹಲವು ಘನ ಮದಾಂಧರ ಸೂತ್ರದ ಗೊಂಬೆಯ ಆಟ, ಅದು ಬರೀ ಹೆಸರು. ಇವರ ಮಾಯಾವಿದ್ಯೆಗೆ ಲಕ್ಷೋಪಲಕ್ಷ ಬಡಬಗ್ಗರು ಬರೀ ನೂನವ ಯಂತ್ರಗಳಾಗುತ್ತಿದ್ದಾರೆ. ಯುದ್ಧಗಳೂ ಒಪ್ಪಂದಗಳೂ ಇವರ ಹಾಕುಗೈಯ ಚಿನ್ನಾಭರಣಗಳು; ಪ್ರಜಾಪ್ರಭುತ್ವವೆಂಬುದು ಇವರ ಬಡಬಗ್ಗರಯಂತ್ರೀಕರಣಕ್ಕೆ ಶುಭನಾಮ. ಇವರ ಪ್ರಜಾಪ್ರೇಮ, ವಿಶ್ವಬಾಂಧವ್ಯ ಇವೆಲ್ಲವೂ ಬರೀ ಸನ್ಯಾಸ. ಇಲ್ಲಿ ನಡೆಯುತ್ತಿದ್ದ ಅವರ ಅಂಧಾನುಕರಣಕ್ಕೆ ತಮ್ಮ ಆತ್ಮಬಲದ ಅಣೆಕಟ್ಟನ್ನು ಎದುರು ಇಟ್ಟುಬಿಟ್ಟರು. ಸಕಲರ ಹಿತಕ್ಕಾಗಿಯೇ ಸ್ವಾತಂತ್ರ್ಯಸ್ವರಾಜ್ಯ ಬೇಕೆಂದೇ ಅವರ ಮತ, ಅವರ ಜೀವನವೇ ಅವರ ಉಪದೇಶದ ಮಾದರಿ. ಅದೇಕೆ ಅವರ ಉಪದೇಶವೇ ನಿತ್ಯ ಜೀವನದ ಬೆಳಕು. ಈ ಬೆಳಕಿನಲ್ಲಿಯೇ ಸದಾ ಜೀವಿಸಲೆತ್ನಿಸುವೆವು ಎಂಬ ದೃಢಸಂಕಲ್ಪವನ್ನೇ ಇಂದಾದರೂ ನಾವು ನೋಡಿದರೇನೇ ಇಂಥ ಔತಣಗಳು ಸಾರ್ಥಕ. ಹಬ್ಬಕ್ಕೆ ತಕ್ಕ ಸಂಕಲ್ಪ ಇಲ್ಲದೇ ಇಂತಹ ಹಬ್ಬಗಳು ಅಜ್ಜಮ್ಮನ ನೂರಾರು ಹಬ್ಬಗಳಿಗೆ ಸೇರುವವು. ಎಚ್ಚರಿಕೆ ಇರಲಿ. ಈ ಸಂಕಲ್ಪವನ್ನೇ ರೂಪಗೊಳಿಸಲು ಬಲಪಡಿಸಲೂ ಗಾಂಧೀಜಿಯವರ ವಿಷಯವಾದ ಪುಸ್ತಕಗಳನ್ನೆಲ್ಲವನ್ನೂ ನಾವು ಮನನಮಾಡಿಕೊಳ್ಳಬೇಕು. ಇಂದು ಡಾ. ಅನಿಬಸೆಂಟರ ಜನ್ಮದಿನವೂ ಅಹುದು. ಅವರೇ ಗಾಂಧಿಜಿಯವರಿಗೆ ಅವರು ಆಫ್ರಿಕೆಯ ಸತ್ಯಾಗ್ರಹ ಸಮರದಿಂದ ಜಯಶಾಲಿಗಳಾಗಿ ತಿರುಗಿದಾಗ ಮಹಾತ್ಮರೆಂಬ ಹೆಸರನ್ನು ಕೊಟ್ಟರು. ಡಾ. ಅನಿಬೆಸೆಂಟರೂ ಒಬ್ಬ ಅಸಾಧಾರಣ ವ್ಯಕ್ತಿ, ಅವರ ಚರಿತ್ರವನ್ನೂ ಅವರು ಗಾಂಧಿಜಿಯವರ ವಿಷಯದಲ್ಲಿ ಬರೆದದ್ದನ್ನು ಎಲ್ಲರೂ ಓದಬೇಕು. ಗಾಂಧಿಜಿಯವರು ಹೇಗೆ ಮಹಾತ್ಮರಾದರು ಎಂಬದನ್ನು ಅರಿತುಕೊಳ್ಳಲು ಆ ಜೀವನವನ್ನೂ ಸಾಧಿಸಲೆತ್ನಿಸುವ ಸಂಕಟವನ್ನೂ ಮನನಮಾಡಿಕೊಂಡರೆ ಅವರ ಜಯಂತಿಯನ್ನಾಚರಿಸಿದ್ದಕ್ಕೆ ಸಾರ್ಥಕ

ಪಂಡಿತರ ಭಾಷಣವಾದ ಮೇಲೆ ಅಧ್ಯಕ್ಷ ಪಿ. ಕೆ. ಭೀಮರಾಯರು ಮಹಾಪುರುಷರ ಜೀವನದ ಬೆಲೆಯನ್ನು ಅರಿಯಬೇಕಾದರೆ ಮಹಾಪುರುಷರೇ ಬೇಕು. ಪಂಡಿತರು ಅಂಥ ಒಂದು ವ್ಯಕ್ತಿಗಳಾದ್ದರಿಂದಲೇ ಗಾಂಧೀಜೀಯವರ ಜೀವನದ ಸೊಗಸನ್ನು ನಮಗೆ ಹೇಳಿದರು. ಇಂದು ಅನೇಕಾನೇಕ ಕಡೆಗಳಲ್ಲಿ ಸಾವಿರಾರು ಜನರು ಗಾಂಧಿಜಿಯವರ ವಿಷಯವನ್ನು ಕೇಳಬಹುದಾದರೂ ಅವರೆಲ್ಲರ ಭಾಗ್ಯದಲ್ಲಿ ನಮಗೆ ಸಿಕ್ಕಜ್ಞಾನಾನುಭವವು ದೊರೆಯುವದೆಂದು ನಾನು ಹೇಳಲಾರೆ. ಪ್ರೇಮವಿದ್ಯಾಪೀಠವಿದ್ಯಾರ್ಥಿಗಳು ಭಾಗ್ಯಶಾಲಿಗಳೇ ಸರಿ. ಇಂಥ ಸುಯೋಗವು ಎಷ್ಟೋ ಸಲ ದೊರಕುತ್ತಿದೆ. ವಿದ್ಯಾರ್ಥಿಗಳು ಈ ಸುಸಂಧಿಯನ್ನು ಪಯೋಗಿಸಿಕೊಂಡು ಚಿಕ್ಕ ಮಹಾತ್ಮರು ಚಿಕ್ಕ ಕಾಲಾನಾಥರೂ ಆದದ್ದೇ ಆದರೆ ಅದೇ ನಮ್ಮ ದೇಶಕ್ಕೆ ಸುದಿನವೆಂದು ನಾನು ಭಾವಿಸುತ್ತೇನೆ ಎಂದು ಹೇಳಿ ಸಭೆಯನ್ನು ಮುಗಿಸಿದರು

ಅಖಿಲ ಬಂಟರ ಯಾನೆ ಯಾನೆ ನಾಡವರ ಸಂಘ.

ಮುಂಬಾಯಿಯಲ್ಲಿರುವ ಸರ್ವ ಸ್ವಜಾತಿ ಗೃಹಸ್ಥರ ತಿಳುವಳಿಕೆ ಬಗ್ಗೆ.

ನಮ್ಮ ಮುಂಬಾಯಿ ಅಖಿಲ ಬಂಟರ ಯಾನೆ ನಾಡವರ ಸಂಘವನ್ನು ಜಾತಿಯ ಅಭಿವೃದ್ಧಿಗೋಸ್ಕರ ಕಳದ ಸಪ್ಟಂಬರ ತಿಂಗಳ ತಾ. 27ರಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಸರ್ವಾನುಮತದಿಂದ ಮುಕ್ತಾಯಗೊಳಿಸಿ ಬಂಟರ ಯಾನೆ ನಾಡವರ ಸಂಘಕ್ಕೆ ಸೇರಿಸಿರುವೆವು.

ಕೆ. ವೆಂಕಪ್ಪ ಹೆಗ್ಡೆ.
ಗೌರವ ಜೊತೆ ಕಾರ್ಯದರ್ಶಿ,

ಕಿರಿಯರ ಪ್ರಪಂಚದ ಪುಸ್ತಕಗಳು.

೧. ನಾಡಕಥೆ	೦	೨	೦
೨. ಮುಂದಿನ ದೇವರು	೦	೨	೦
೩. ಸ್ವತಂತ್ರ ಜೀವನೋಪಾಯ	೦	೨	೬
೪. ಕುರಲವ	೦	೪	೦
೫. ಸಂಶಯ ಪಿಶಾಚಿ	೦	೬	೦
೬. ಕಾವ್ಯಸಾಮ್ರಾಜ್ಯ	೦	೧೨	೦
೭. ಮಧುವನ	೧	೮	೦
೮. ವ್ಯಭಿಚಾರಿಣಿ ಯಾರು	೦	೮	೦

ನಮ್ಮಲ್ಲಿ ಅಖಿಲ ಕರ್ನಾಟಕದ ಆಧುನಿಕ ಕನ್ನಡ ಗ್ರಂಥಗಳು ದೊರೆಯುತ್ತವೆ.

ಕಿರಿಯರ ಪ್ರಪಂಚ, ಉಡುಪಿ, ದ. ಕ.
ಸೋಲ ಏಜೆಂಟರು—
ಸಪ್ಲೈ ಏಜೆನ್ಸಿ ಲಿಮಿಟೆಡ್, ಉಡುಪಿ.

NOTICE.

Applications are invited from qualified hands for appointment as Fieldmen on Rs. 30/- per month to work in Mahali disease affected areas in South Kanara District especially in puttur and Kasargod taluks. The appointment will be for a period of two months from the 15th November 1936. The minimum qualification required is full pass in the S. S. L. C. Examination and the applicant should be below 25 years of age andfit for active out-door work in arecanut gardens. All applications should be addressed to the undersigned. The selected candidates will have to join duty by the middle of November 1936. A collequial knowledge of Kanareseand Tulu is essential.

TELLICHERRY,
4th October 1936

K. T. Alwa,
Deputy Director of Agriculture
VII Circle, Tellicherry.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 537/33 R. E. P. 1936

1 ವಾದಿ:—ಶ್ರೀನಿವಾಸ ಭಟ್ಟ ಅನಂತ ಭಟ್ಟರ ಮಗ ಬೀಜಾಡಿಗ್ರಾಮದ ಹುದ್ದಾಳಿಯಲ್ಲಿರುವವ. ಈತನಿಂದ ಈ ಡಿಕ್ರಿಯ ಹಕ್ಕನ್ನು ತಾರೀಕು 3-1-1936 ರಲ್ಲು ರಿಜಿಸ್ತ್ರಿ ನಿಶಿ ರೂ 100/-ಕ್ಕೆ ಬೇರೆ ಡಿಕ್ರಿಯ ವಟ್ಟಿಗೆ ಟ್ರೇನ್ಸ್‌ಫರ್ ಪಡದ ಅರ್ಜಿದಾರ ಟಿ. ರಗುನಾಥ ಶ್ಯಾನುಭಾಗ ಮಂಜುನಾಥಶ್ಯಾನುಭಾಗರ ಮಗ ಕುಂದಾಪುರ ತಾಲ್ಲುಕು ತಲ್ಲೂರುಗ್ರಾಮ—

21ನೇ **ಪ್ರತಿವಾದಿ**—ಅಬ್ದುಲ ರಹಿಮಾನಸ್ಸಾಬ ಯಾನೆ ಉಮ್ಮಾರಸ್ಸಾಬ ಕಾದಿರಿಸ್ಸಾಬರ ಮಗ ಕೋಟೇಶ್ವರ ಮಾಗಣೆ ಬಡಾಕೆರೆಯಲ್ಲಿರುವವ—

ಸದ್ರಿ ಡಿಕ್ರಿಯ ಹಕ್ಕನ್ನು ಅರ್ಜಿದಾರನು ಟ್ರಾನ್ಸ್‌ಫರ್ ಪಡದು ಮೊಕ್ತಾರುಜುಪಡಿಸುವರೆ ದಾಖಲ್ಲು ಮಾಡಿದ ಮೇಲ್ಕಂಡ ಅಮಲ್ ಜಾರಿಯು ತಾರೀಕು. 16-10-1936ಕ್ಕೆ ತನ್ಖಿಗೆಯಿಟ್ಟದೆ. ಆ ಕುರಿತು ಆಕ್ಷೇಪಯಿದ್ರೆ ಜಾಹೀರುಮಾಡ ತಕ್ಕದ್ದು. ಯಿಲ್ಲದಿದ್ರೆ ಸದ್ರಿ ಅಮಲ್ ಜಾರಿಯಲ್ಲಿ ಯೇಕ ಪಕ್ಷವಾಗಿಮಾಡಿ ಸದ್ರಿ ಅಮ್ಲುಜಾರಿ ಪ್ರಾರ್ಥನೆ ಮುಂದರಿಸಲಾದೀತು.

ತಾರೀಕು 6—10—1936.
ಮೊಕ್ಕಾಂ, ಕುಂದಾಪುರ.

K. Narayana Shenai,
Pleader
ಅರ್ಜಿದಾರನ ಕಡೆ ವಕೀಲ

ಗಾಂಧಿಜಯಂತಿ

"ಮ. ಗಾಂಧಿಯವರು ಈಗಿನ ರಾಜಕಾರಣ ಧುರೀಣರಿಗೆ ರಾಜಕಾರಣವು ಕೇವಲ ಬುದ್ಧಿಬಲದ ಆಟ ಮಾತ್ರವಲ್ಲ; ಅದು ಅಂತರಂಗದ ಶಕ್ತಿ ಸ್ಫೂರ್ತಿಯ ಕಿರಣವೂ ಆಗಿರಬೇಕು ಎಂಬುದನ್ನು ತಿಳಿಸಿಕೊಟ್ಟರು. ಅವರು ರಾಜಕಾರಣಕ್ಕೆ ಸತ್ಯ ತತ್ವಗಳ ಕವಚವನ್ನೂ ತೊಡಿಸಿದರು. ಇನ್ನೊಬ್ಬರನ್ನು ಹತ್ತಿಕ್ಕಿ ನಮ್ಮನ್ನು ಎತ್ತಿಕೊಳ್ಳುವ ಮಾರ್ಗವು ಸದಾ ಅಪಾಯಕಾರಿ. ನಮಗೆ ಬೇಕಾದುದು ಸ್ವರಾಜ್ಯ ಸಾಮ್ರಾಜ್ಯವಲ್ಲ ಎಂದು ಸಾರಿದರು."

ಪಂಡಿತ ತಾರಾನಾಥರ ಭಾಷಣ

ತಾ ೨-೧೦-೩೬ನೇ ದಿವಸ ಪ್ರೇಮಾಯತನದ ವಿದ್ಯಾರ್ಥಿಗಳು ಮಹಾತ್ಮಾ ಗಾಂಧಿಯವರ ೬೮ನೇ ಹುಟ್ಟಿದ ದಿವಸವನ್ನು ಉತ್ಸಾಹದಿಂದ ನೆರವೇರಿಸಿದ್ದರು. ಬೆಂಗಳೂರಿನ ಅಗ್ರಿಕಲ್ಚರಲ್ ಕೆಮಿಸ್ಟರಾದ ಶ್ರೀ ಕೆ. ಭೀಮರಾವ್ ಬಿ. ಎ ಎಫ್. ಸಿ ಎಸ್ ಅಂದಿನ ಸಭೆಗೆ ಅಧ್ಯಕ್ಷರಾಗಿದ್ದರು ಮಧ್ಯಾಹ್ನ ೩ ಗಂಟೆಗೆ ಉಪಹಾರ ನಂತರ ಸಭೆ ಸೇರಿತು ಪಂಡಿತ ತಾರಾನಾಥರು ಸ್ಫೂರ್ತಿದಾಯಕವಾದ ಭಾಷಣ ಮಾಡಿದರು ಅದರ ಸಾರಾಂಶ

ಈ ದಿನವು ಅಖಿಲ ಭಾರತದಲ್ಲಿ ಮಾತ್ರವೇ ಅಲ್ಲ; ಜಗತ್ತಿನ ಅನೇಕ ಭಾಗಗಳಲ್ಲಿಯೂ ಆಚರಿಸಲ್ಪಡುತ್ತಿದೆ. ಈ ದಿನ ನಾವು ಹಿಂದುಸ್ಥಾನಕ್ಕೆ ಅಥವಾ ಜಗತ್ತಿಗೇ ಎಂದರೂ ಎನ್ನಬಹುದು, ಹೊಸ ಇತಿಹಾಸವನ್ನೇ ಉಂಟುಮಾಡಿ ಕೊಟ್ಟ ಮಹಾತ್ಮನ ಜನ್ಮದಿನಾಚರಣೆಯಲ್ಲಿ ಭಾಗಿಗಳಾಗುತ್ತಿದ್ದೇವೆ. ಸಾಮಾನ್ಯವಾಗಿ ಜನ್ಮದಿನಾಚರಣೆಯ ಸಭೆಯಲ್ಲಿ ಆ ಮಹಾಪುರುಷನು ಹುಟ್ಟಿದ್ದೆಲ್ಲಿ, ಬೆಳೆದದ್ದೆಲ್ಲಿ, ಇತ್ಯಾದಿ ವಿಷಯಗಳನ್ನು ಕುರಿತು ಹೇಳುವ ದಿನ. ಆದರೆ ಇವೆಲ್ಲ ಚಿಕ್ಕ ವಿಷಯಗಳನ್ನು ಮಹಾತ್ಮಾ ಗಾಂಧಿಯವರ ಜನ್ಮದಿನ ಹೇಳುವದು ಅವರ ಘನತೆಗೆ ತಕ್ಕದ್ದಲ್ಲ. ಅವರ ಜೀವನದಲ್ಲಿ ಈ ಪ್ರಸಂಗಗಳಿಗಿಂತಲೂ ಅಧಿಕ ಮಹತ್ವವುಳ್ಳ ಅನೇಕ ವಿಷಯಗಳಿವೆ. ಅವರ ಜೀವನವು ಮಾನವಜಾತಿಗೆ ಒಂದು ಮಾದರಿಯಾಗುವಂತಿದೆ ಅದಕ್ಕಾಗಿ ನಾವು ಅವರು ಮಾನವ ಜನಾಂಗಕ್ಕೆ ಕಲಿಸಿದ ಹೊಸ ಪಾಠವೇನು? ಅವರ ಘನತೆಗೆ ಕಾರಣಗಳಾದ ಸಂಗತಿಗಳೇನು ನೋಡೋಣ ಇವು ಮಾತ್ರವೇ ನಮ್ಮ ಹೃದಯವನ್ನು ಶುದ್ಧಗೊಳಿಸಿ ನಮಗೆ ಕಾರ್ಯಬಲವನ್ನು ಕೊಡಬಲ್ಲವಾಗಿವೆ, ಜೀವನದಲ್ಲಿ ನಾವು ಹೊರಬೇಕಾದ ಹೊಣೆಗಾರಿಕೆಯನ್ನು ಪೂರೈಸುವ ಸಾಮರ್ಥ್ಯವನ್ನು ನೀಡುವವಾಗಿವೆ.

ಯಾವದೇ ಮಹಾಪುರುಷನ ಜನ್ಮದಿನಾಚರಣೆಯು ಸ್ವತಃ ಅವನಿಗೇ ಒಂದು ಸಂತೋಷದ ದಿನವೆಂದು ನಾನು ಹೇಳಲಾರೆ. ಅಂದು ನಾವು ಕೊಡುವ ಧನ್ಯವಾದವನ್ನು ಮಾನಮರ್ಯಾದೆಯೆಂದು ಅವನು ಭಾವಿಸುವದಿಲ್ಲ. ಯಾಕೆಂದರೆ, ಅವನು ಧ್ಯೇಯಪ್ರಿಯನು, ಮಾನಪ್ರಿಯನಲ್ಲ. ಘನವಂತನು, ಲಾಭ-ಮಾನಗಳನ್ನು ಮೀರಿದವನು ತನ್ನ ಜನ್ಮದಿನವನ್ನು ಇತರರು ಆಚರಿಸುವದನ್ನು ಕಂಡಾಗ ಇಷ್ಟೊಂದು ವರ್ಷಗಳು ತಾನು ಜೀವಿಸಿದ್ದು ತಾನು ಮುಂದಿಟ್ಟುಕೊಂಡ ಧ್ಯೇಯಕ್ಕೆ ತಕ್ಕಂತೆ ತನ್ನಿಂದ ಆಗಬೇಕಾದ ಕೆಲಸಗಳು ಆಗಿಲ್ಲವಲ್ಲ ಎಂದೇ ಅವನು ಯೋಚಿಸಿಕೊಳ್ಳುವನು. ತನ್ನ ಕೆಲಸವಾಗಲಿಲ್ಲವೆಂಬ ಯೋಚನೆಯು ಸಂತೋಷದಾಯಕವೇ? ಅದೇ ರೀತಿ ಇಂದಿನ ದಿನವು ಮ ಗಾಂಧಿಯವರಿಗೆ ಆನಂದದಾಯಕವೆಂದು ನಾನು ಅನ್ನಲಾರೆ. ಇದು ಇತರರಿಗೆ, ನಮಗೆ ಸಂತೋಷದ ಪ್ರಸಂಗ. ಅವರಿಂದ ನಾವು ಹೊಂದಿದ ಅನೇಕ ಉಪಕಾರಗಳಿಗಾಗಿ ನಾವು ಅವರನ್ನು ಸ್ಮರಿಸಿಕೊಂಡು ಸಂತೋಷ ಪಡುತ್ತೇವೆ. ಅವರು ನಡೆದಂತೆ ನಾವು ನಡಿಯುತ್ತ ಚಪ್ಪರಿಸುತ್ತ ಸುಖಿಸುತ್ತಿದ್ದೇವೆ

ಈಗ ನಾವು ಅನುಭವಿಸುವ ಈ ಆನಂದವು ಕ್ಷಣಮಾತ್ರದ ಉತ್ತೇಜನದ, ಅಥವಾ ದೇಶದಲ್ಲಿ ನಡೆದಿರುವ ಬರೀ ರಾಜಕೀಯ ಆಂದೋಲನದ ಪರಿಣಾಮವೋ ಎಂದು ನೋಡಿಕೊಳ್ಳೋಣ ಇಷ್ಟು ಮಾತ್ರ ನಮ್ಮ ಸಂತೋಷಕ್ಕೆ ಕಾರಣವಾದರೆ ಆ ಸಂತೋಷವು ಈ ಉತ್ತೇಜನದ ಹುರುಪು ಕಡಿಮೆಯಾದೊಡನೆಯೇ ನೀರ ಮೇಲಣ ಗುಳ್ಳೆಯಂತೆ ಒಡೆದು ಇಲ್ಲದಂತಾಗುವದು. ಹಾಗಾದರೆ ನಮ್ಮ ಹುರುಪಿನಿಂದ ನಮ್ಮ ಸಮಯವನ್ನು ವ್ಯರ್ಥವಾಗಿ ಕಳೆದು ಹೊಂದೇ ಬರುವದಲ್ಲದೆ, ಶಾಶ್ವತವಾದ ಒಂದು ಪ್ರಯೋಜನವೂ ಅದರಿಂದ ಸಿಗಲಾರದು ಹೀಗಾಗದಂತೆ ಎಚ್ಚರಗೊಳ್ಳಬೇಕಾದುದು ನಮ್ಮ ಕರ್ತವ್ಯ. ಅದಕ್ಕೆ ಯಾವ ಮಹಾಪುರುಷನನ್ನು ಇಂದು ಸ್ಮರಿಸಿಕೊಳ್ಳುತ್ತಿರುವೆವೋ ಆತನು ತನ್ನ ಜೀವನವನ್ನು ತನ್ನ ಘನತೆಯನ್ನು ಪಡೆದ ಮಾರ್ಗವನ್ನೂ ಚೆನ್ನಾಗಿ ಅರಿತುಕೊಳ್ಳಬೇಕು. ನಮ್ಮಂತೆಯೇ ಮನುಷ್ಯನಾಗಿರುವ ಅವನು ಮಾನವಜಾತಿಗೇ ಕಲ್ಯಾಣಪ್ರದನಾಗಲು ಯಾವ ಶಕ್ತಿಯನ್ನು ಸಂಪಾದಿಸಿಕೊಂಡನೋ ಅದನ್ನು ತಿಳಿದುಕೊಳ್ಳಬೇಕು

ಮ. ಗಾಂಧಿಯವರು ಈಗಿನ ರಾಜಕಾರಣಧುರೀಣರಿಗೆ ರಾಜಕಾರಣವು ಕೇವಲ ಬುದ್ಧಿಬಲ ಆಟ ಮಾತ್ರವಲ್ಲ ಅದು ಅಂತರಂಗದ ಶಕ್ತಿ-ಸ್ಫೂರ್ತಿಯ ಕಿರಣವೂ ಆಗಿರಬೇಕು, ಎಂಬದನ್ನು ತಿಳಿಸಿಕೊಟ್ಟರು. ಅವರು ರಾಜಕಾರಣಕ್ಕೆ ಸತ್ಯ ತತ್ವಗಳ ಕವಚವನ್ನು ತೊಡಿಸಿದರು ಇದುವರೆಗಿನ ರಾಜಕಾರಣಪಟುಗಳು ಈಗಿನ ಇತರ ರಾಷ್ಟ್ರಗಳ ರಾಜಕಾರಣಪಟುಗಳ ವ್ಯಕ್ತಿಯ ಒಳ ಜೀವನಕ್ಕೆ ಮಹತ್ವವನ್ನೇ ಕೊಡುವದಿಲ್ಲ ಹೇಗೇ ಆಗಲಿ, ವೈರಿಯನ್ನು ಹಣ್ಣು ಮಾಡುವದೇ ಅವರ ಗುರಿ ಆದರೆ, ಗಾಂಧಿಯವರು ಸ್ವರಾಜ್ಯ, ಸ್ವಾತಂತ್ರ್ಯದ ಸಂಪಾದನೆಗಾಗಿ ಸತ್ಯವನ್ನು ಬದಿಗಿಡಬೇಕಾದಲ್ಲಿ ಅದು ಬೇಡ, ಸತ್ಯವನ್ನು ಬಲಿಯಾಗಿಟ್ಟುಕೊಂಡ ಸ್ವರಾಜ್ಯವು ಗಳಿಸಲರ್ಹವಾದ ವಸ್ತುವಲ್ಲವೆಂದು ಹೇಳಿದರು. ಸತ್ಯದ ತಳಹದಿಯಿಲ್ಲದೆ ಪಡೆದ ನಮ್ಮ ಸ್ವರಾಜ್ಯವೂ ಈಗಿನ ಇತರ ಸ್ವತಂತ್ರ ರಾಷ್ಟ್ರಗಳಂತೆ ಇತರರ ರಕ್ತವನ್ನು ಹೀರಿ ಬದುಕುವ ಜಿಗಳೆಯಾಗುವದು, ಇನ್ನೊಬ್ಬರನ್ನು ಹತ್ತಿಕ್ಕಿ ನಮ್ಮನ್ನು ಎತ್ತಿಕೊಳ್ಳುವ ಮಾರ್ಗವು ಸದಾ ಅಪಾಯಕಾರಿ ನಮಗೆ ಬೇಕಾದುದು ಸ್ವರಾಜ್ಯ ಸಾಮ್ರಾಜ್ಯವಲ್ಲ ಎಂದು ಅವರು ಸಾರಿದರು

ನಮ್ಮಲ್ಲಿ ಮಹಾಪುರುಷರಿಲ್ಲವೆಂದಲ್ಲ. ಆದರೆ, ಮಹಾಪುರುಷಮರ್ಯರಿಗೂ ಯೋಗ್ಯ ವಾತಾವರಣವು ಬೇಕು. ಸ್ವಾಮಿ ವಿವೇಕಾನಂದರು ಪಾಶ್ಚಾತ್ಯರಾಷ್ಟ್ರಗಳಲ್ಲಿ ಸಂಚರಿಸಿ "ನಾವು ಭಾರತೀಯರು ೩೩ ಕೋಟಿ ಜಂತುಗಳು ಗುಲಾಮವಂಶಜರು" ಎಂದು ಪಾಶ್ಚಾತ್ಯರು ಭಾವಿಸುತ್ತಾರೆಂದು ಹೇಳಿದ್ದಾರೆ ನಿಜಸ್ಥಿತಿಯು ಹಾಗೇ ಇದೆ. ಬಹುಜನರ ಈ ಸ್ಥಿತಿಯ ಮೂಲಕವಾಗಿ ನಮ್ಮ ಮಹಾಪುರುಷರಿಂದ ಆಗಬೇಕಾದ ಕಾರ್ಯಗಳು ಆಗುತ್ತಿಲ್ಲ. ಆದರೆ ಪಾಶ್ಚಾತ್ಯ ಪದ್ಧತಿಯಿಂದ ಸ್ವರಾಜ್ಯ ಪಡೆದರೆ ಹಿಂದುಸ್ಥಾನವು ತನ್ನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಗತ್ತಿಗಾದ ಹೊಸ ಸಂದೇಶವನ್ನಿತ್ತಂತಾಗುವದೂ? ಸ್ವಾತಂತ್ರ್ಯದಿಂದ ಅನುಕೂಲತೆಗಳು ದೊರೆಯುವವು ಆಗ ಹಿಂದುಸ್ಥಾನವು ಜಗತ್ತಿಗೆ ಹೊಸತೇನನ್ನಾದರೂ ಕಲಿಸಬಹುದು ಎಂದು ಅನೇಕರು ಹೇಳಬಹುದು ಆದರೆ ವಕ್ರಮಾರ್ಗವನ್ನಾದರೂ ಹಿಡಿದು ಕಾರ್ಯಸಾಧನ ಮಾಡಿಕೊಳ್ಳಲು ಕಲಿತ ಜನಾಂಗವು ಒಮ್ಮೆಲೇ ಸುಧಾರಿಸುವದೆಂದರೆ ಹೇಗೆ? ಆಗ ಈಗಿನ ಇತರ ಸ್ವತಂತ್ರರಾಷ್ಟ್ರಗಳಂತೆ ನಮ್ಮಲ್ಲಿಯೂ ಘನತ್ವಕ್ಕೆ ಬೆಲ ಒಂದು ಪ್ರಜಾಸತ್ತಾತ್ಮಕರಾಜ್ಯವೆಂಬ ಹೆಸರು ಮಾತ್ರ ಉಳಿದು ಅಧಿಕಾರ ಸೂತ್ರ ಮಾತ್ರ ಕೆಲ ಒಡೆಯರ ಬಂಡವಾಳಗಾರರ ಸ್ವಾಧೀನವಾಗುವದು. ಆಗ ಸ್ವಾರ್ಥ ಹೋಗಿ ತತ್ವವೆಂದು ಬರಬೇಕು? ಅದಕ್ಕಾಗಿಯೇ ಗಾಂಧಿಜೀಯವರು ನಮ್ಮ ಸಮರಸಮಯಗಳಲ್ಲಿಯೇ ನಮ್ಮ ಅಂತರಂಗವನ್ನು ಶುದ್ಧಿಪಡಿಸಿಕೊಳ್ಳೋಣವೆಂದು ಹೇಳುತ್ತಾರೆ ಹೃದಯಶುದ್ಧಿಯನ್ನು ಮಾಡಿಕೊಂಡು ವೈರಿಗಳೊಡನೆ ಹೋರಾಡುವ ಅಪೂರ್ವವಾದ ಅಸಹಕಾರ ಚಳವಳಿಯನ್ನು ಅವರು ಭೋಧಿಸಿದರು. ಇದೊಂದು ತತ್ವಮಾತ್ರವೇ ಅಲ್ಲ ಅದರ ಸಾಧನೆಗಾಗಿ ಅದರ ಪರಿಣಾಮವು ಭಾರತೀಯ ಇತಿಹಾಸವನ್ನೇ ಉಜ್ವಲಗೊಳಿಸಿ ಎತ್ತಿಟ್ಟು ಲೋಕಾಕರ್ಷಕವನ್ನಾಗಿ ಮಾಡಿದೆ ಶಸ್ತ್ರಗಳಿಲ್ಲದ ಹೋಡಿಸಿಕೊಂಡರೂ ಹೊಡೆಯದ ಮಹಾತ್ಮರ ನೈತಿಕಸಂಗ್ರಾಮಪದ್ಧತಿಯನ್ನು ಕಂಡು ಜಗತ್ತಿಗೆ ಜಗತ್ತೇ ಅಚ್ಚರಿಗೊಂಡಿತು ಅವರು ದಾಂಡಿಯಾತ್ರೆಮಾಡಿ ಒಂದು ಹಿಡಿ ಉಪ್ಪನ್ನು ಹೆಕ್ಕಿದ್ದೇತಡ, ಹಿಮಾಲಯದಿಂದ ಕನ್ಯಾಕುಮಾರಿ ವರೆಗೆ ಇಡೀ ಭಾರತವೇ ಎಚ್ಚತ್ತು ಒಂದಾಗಿ ಚಲಿಸಿದ್ದನ್ನು ಕಂಡು ಉಪ್ಪು ಹೆಕ್ಕಿ ಸ್ವರಾಜ್ಯ ಸಂಪಾದಿಸುವ ಹುಚ್ಚು ಎಂದು ಗಾಂಧಿಜಿಯವರನ್ನು ಹಾಸ್ಯಮಾಡಿದವರೇ ಮೂಗಿನ ಮೇಲೆ ಬೆರಳಿಟ್ಟುಕೊಂಡು ಮೂಕರಾದರು. ತಮ್ಮ ಅಲ್ಪಬುದ್ಧಿಯಿಂದ ಮಹಾತ್ಮರ ಬುದ್ಧಿಯ ಬೆಲೆ ಕಟ್ಟಲೆತ್ನಿಸುವ ಜನರ ಹಾಸ್ಯವೇ ಇದಕ್ಕೆ ಕಾರಣ ತೋರಿಕೆಯಲ್ಲಿ ಅಲ್ಪನಾಗಿ ಕಂಡುಬಂದ ಮಹಾತ್ಮರ ಈ ಕಾರ್ಯದ ಹಿಂದೆ ಅಗಾಧವಾದ ಆತ್ಮಶಕ್ತಿ ಇದ್ದಿತು. ಶಕ್ತಿಗೆ ಹೃದಯಶುದ್ಧಿಯ ಬೆಂಬಲವಿದ್ದರೆ ಅದು ತೃಣವನ್ನು ಅಸ್ತ್ರಶಸ್ತ್ರವನ್ನಾಗಿ ಮಾಡಬಲ್ಲದು ಅಂಥ ಶಕ್ತಿಯು ಮಾತ್ರವೇ ನಿಜವಾದ ವಿಜಯವನ್ನು ಸಂಪಾದಿಸಬಲ್ಲದು. ಆ ಶಕ್ತಿಯ ಸಂಕಲ್ಪವನ್ನು ತೋಫು ಬಾಂಬುಗಳಾಗಲೀ, ಲಕ್ಷಗಟ್ಟಲೆ ಸೈನ್ಯವಾಗಲೀ ಎದುರಿಸಿ ಜಯಿಸಲಾರದು. ಈ ಶಕ್ತಿಯ ಮಹತ್ವವನ್ನೇ ಗಾಂಧಿಜೀಯವರ ಜೀವನವು ಎತ್ತಿ ಹಾಡುತ್ತಿದೆ. "ಕ್ರಿಯಾಸಿದ್ಧಿಸ್ಸತ್ವೇ ಭವತಿ ಮಹತಾಂನೋಪಕರಣೇ" ಈ ಪ್ರಾಚೀನ ಆರ್ಯೋಕ್ತಿಯೇ ಈ ಹಾಡಿನ ಪಲ್ಲವಿ.

ಮಹಾತ್ಮಾಜಿಯವರಲ್ಲಿರುವ ಈ ಅಪೂರ್ವಶಕ್ತಿಯೇ ಜಗತ್ತಿನ ಇತಿಹಾಸದಲ್ಲಿ ಹೊಸ ಪುಟ ಒಂದನ್ನು ಸುವರ್ಣಾಕ್ಷರಗಳಿಂದ ಬರೆದಿದೆ ಭಾರತೀಯರು ಗುಲಾಮರಾಗಲು ಮಾತ್ರವೇ ಹುಟ್ಟಿಲ್ಲ ಇನ್ನು ಹೆಚ್ಚು ದಿನ ಅವರು ಗುಲಾಮರಾಗಿರುವದೂ ಇಲ್ಲ ಎಂಬದನ್ನು ಅವರ ಈ ಶಕ್ತಿಯೇ ಜಗತ್ತಿಗೆ ತೋರಿಸಿಕೊಟ್ಟಿತು. ಭಾರತೀಯರ ಹೃದಯವನ್ನೇ ಕಟ್ಟಿಮುದುರಿಸಿದ ಶೃಂಖಲೆಯು ಮುರಿದು ಚೂರುಚೂರಾಗಿ ಆಗಲೇಬಿದ್ದಿತು. ಶೃಂಖಲೆಯು ಬಿದ್ದುಹೋಗುವದು ಸ್ವಲ್ಪ ಕಾಲದ ವಿಷಯ ಮಾತ್ರವೇ. ಇನ್ನು ಸ್ವರಾಜ್ಯವು ಬೇಕಾಗಿದ್ದರೂ ಮಹಾತ್ಮರಿಗೆ ಸಾಮ್ರಾಜ್ಯವು ಬೇಡ. ಪಶ್ಚಿಮ ರಾಷ್ಟ್ರಗಳೆಲ್ಲವೂ ಸಾಮ್ರಾಜ್ಯವಾದಿಗಳು. ಈ ವಾದದಲ್ಲಿ ಅಬಿಸೀನಿಯಕ್ಕೆ ಆದ ಗತಿಯೇನು ನಮಗೆ ಅದರಿಂದ ಕಂಡು ಬಂದದ್ದೇನು? ಬಲಿಷ್ಠರ ಹಿತಕ್ಕಾಗಿ ಅಶಕ್ತರನ್ನು ಬಲಿಯಾಗಿಡುವದೆಂಬದಲ್ಲವೇ? ಇಂಥ ವೃತ್ತಿಯುಳ್ಳ ಸ್ವರಾಜ್ಯವು ಬೇಡವೇ ಬೇಡವೆಂದು ಅವರ ಹೇಳಿಕೆ. ಅದಕ್ಕಾಗಿಯೇ ಅವರು ಮೊದಲು ಹೃದಯಶುದ್ಧಿ ಬೇಕು ಎಂದು ಹೇಳಿದ್ದು, ಹೊರಗಿನ ವೈರಿಗಳನ್ನು ಎದುರಿಸುವ ಮೊದಲು ಒಳಗಿನ ಶತ್ರುಗಳನ್ನು ಜಯಿಸಿ ಆತ್ಮಶುದ್ಧಿ

(ಹದಿನಾಲ್ಕನೆಯ ಪುಟಕ್ಕೆ ಮುಂದರಿಸಿಯದೆ)

— ನಾಯಕ್ ಬ್ರದರ್ಸರ —

ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ಕಟಪಾಡಿ, ದ. ಕನ್ನಡ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!!

ವೃದ್ಧಿಕಾಸವ (ಸಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಚಂದ್ರಮಸ್ (ವಾಂತಿಭೇದಿಗೆ ಅನುಭವಸಿದ್ಧ ಔಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ, ದಕ್ಷಿಣ ಕನ್ನಡಾ ಜಿಲ್ಲೆ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ಹಿತ್ತಾಳೆ ಪಾತ್ರೆಗಳು

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೇಳು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನು ಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಯೂ ಕೊಡಲಾಗುವುದು.
ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರೆವ್ಯಾಪಾರಿ. ರಥಬೀದಿ, ಉಡುಪಿ

ಸ್ತ್ರೀ ಮಲಯಾಳದ **ಸ್ತನೋಸ್ತೇಧಃ** ರಹಸ್ಯಗಳು
THE MALAYALA STHANO STHEDAH OUSHADHA CO.
Post - CHALAPURAM; MALABAR

ಇದೀಗತಾನೆ ಬಂದಿದೆ. ಪುರುಷರನ್ನು ಆಕರ್ಷಿಸುವ ಸೌಂದರ್ಯವು ಸ್ತ್ರೀಯರಿಗೆ ಇಲ್ಲದಿದ್ದರೆ ಪುರುಷನು ತನ್ನನ್ನು ಪ್ರೀತಿಸುವನೇ? ನೋಡಿದಲ್ಲಿ, ಅವನ ಕಣ್ಣುಗಳು ಸ್ತ್ರೀಯ ಮುಖದಿಂದ ಕೆಳಗೆ ಕುಚಸ್ಥಳಕ್ಕೆ ಚಲಿಸಿ ಕುಚಗಳು ಉನ್ನತವಾಗಿ, ದೃಢವಾಗಿ ಯೌವನಯುಕ್ತವಾಗಿ ಆಕರ್ಷಕವಾಗಿರುವವೋ ಎಂದು ನೋಡುವವು.

48 ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ತೇಧ:—ಅಶಕ್ತ, ಚಿಂತೆ, ಪ್ರಾಯ ಆಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷಕತೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಅಥವಾ ಬಿರು ತಗ್ಗಾಗಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರವಾದರೆ

ದಿ ಮಲಯಾಳ ಔಷಧ ಕಂಪೆನಿ. ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ವಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವುವ, ಟೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವುವು. ಸಡಿಲಾಗಿರುವ ಮಾಂಸವು ಸ್ಥಿರವಾಗುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವುವು. ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಹೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು

ಸ್ತನಸ್ತೇಧ ನಂಬ್ರ 20 ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ, ರೂ. ೩. ನಂಬ್ರ ೨೧ ಹೊರಗಣ ಉಪಯೋಗಕ್ಕೆ ರೂ. ೩. ಧರ್ಮಾರ್ಥ ಕಳುಹಿಸಲ್ಪಡುವ ಕೆಟಲಾಗಿಗೆ ದಯಮಾಡಿ ಬರಕೊಳ್ಳಿ.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ

ಮುಖವರ್ಣದಗಳು, ನ ಶಕ್ತಿ ಸಿದ್ಧಾಂತ, ಧಾತುನಷ್ಟಿ, ಲಿಂಗದೃಢ, ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ

ರೂ ಢ ವಾ ದಿ ಗ ಳ

ಮನೋದೌರ್ಬಲ್ಯ

(ಲೇಖಕ:—ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ ಕಾರ್ಕಳ)

ಸುಧಾರಣೆಗಳಾಗಬೇಕೆಂದು ತಿಳಿದೂ ಅವನ್ನು ಆಚರಣೆಗೆ ತರಲಾರದವರ ಮನೋದೌರ್ಬಲ್ಯವನ್ನು ದೂರಮಾಡುವ ಉಪಾಯವು ಒಂದೇ- ಅದು ಸದ್ವಿದ್ಯೆಯಪ್ರಸಾರವಾಗಿರುತ್ತದೆ.

ಸಮಾಜದಲ್ಲಿ ಪ್ರಕೃತ ಎರಡು ವರ್ಣಗಳಿಗೆ ಸೇರಿದ ಜನರು ಕಾಣಲಿಕ್ಕೆ ಸಿಕ್ಕುತ್ತಾರೆ. ಮೊದಲನೆ ವರ್ಗಕ್ಕೆ ಸೇರಿದವರು ಸುಧಾರಕರು; ಎರಡನೆ ವರ್ಗಕ್ಕೆ ಸೇರಿದವರು ರೂಢವಾದಿಗಳು. ಇವರು ಪರಸ್ಪರ ಒಬ್ಬರನ್ನೊಬ್ಬರು ದೂಷಿಸಿ ಕೇವಲ ತಾವು ಆಡಿದ್ದೂ ಮಾಡಿದ್ದೂ ಮಾತ್ರ ಸರಿಯೆಂದು ಕಾದಾಡುತ್ತ ಬೆನ್ನಿಗೆ ಬೆನ್ನು ಮಾಡಿ ನಿಲ್ಲುವದನ್ನು ಹೆಚ್ಚಾಗಿ ನೋಡಬಹುದು. ಆದರೆ ಇವರು ಹೀಗೆ ಪೂರ್ವಪಶ್ಚಿಮವಾಗಿ ನಿಲ್ಲಲಿಕ್ಕೆ ಯಾವ ಕಾರಣಗಳೂ ಇರುವದಿಲ್ಲ. ವೇಷಭೂಷಣಗಳಲ್ಲಿ ಹೊರತು ರೂಢವಾದಿಗಳಿಗೂ ಸುಧಾರಕರಿಗೂ ಯಾವ ವಿಶೇಷ ತರಹದ ವ್ಯತ್ಯಾಸವು ಇರುವದಿಲ್ಲ. ರೂಢವಾದಿಗಳು ತಿಲಕಮುದ್ರೆ, ಭಸ್ಮಧಾರಣೆ ಮಾಡಿಕೊಂಡರೆ, ಸುಧಾರಕರು ಕ್ರೋಪುಮಾಡಿ ತಲೆಬಾಚಿ ಕೊಳ್ಳುತ್ತಾರೆ. ರೂಢವಾದಿಗಳ ಅಂತರಂಗ ಪರೀಕ್ಷೆಯನ್ನು ಮಾಡಿದ್ದಾದರೆ 100ರಲ್ಲಿ 99 ಮಂದಿ ಸುಧಾರಕರೇ ಇದ್ದಾರೆ. ಸುಧಾರಕರು ಸಮಾಜದಲ್ಲಿ ಯಾವ ಯಾವ ಸುಧಾರಣೆಗಳಾಗಬೇಕೆನ್ನುತ್ತಾರೋ ಅವಕ್ಕೂ ಹೆಚ್ಚಿಗೆ ಸುಧಾರಣೆಗಳಾಗಬೇಕೆಂದು ರೂಢವಾದಿಗಳಿಗೆ ತಿಳಿದಿದೆ. ಸುಧಾರಕರೂ ರೂಢವಾದಿಗಳೂ ಕೂಡಿಯೇ ಸಮಾಜದಲ್ಲಿ ಎಷ್ಟೋ ಸುಧಾರಣೆಗಳನ್ನು ಮಾಡಿದ್ದಾರೆ, ಈಗಲೂ ಮಾಡುತ್ತಿದ್ದಾರೆ. ಸುಧಾರಕರು ಅಂಥ ಇಂಥ ತರದ ಸುಧಾರಣೆಗಳನ್ನು ಮಾಡಿದೆವೆಂದು ಹೇಳುತ್ತ ಇರುವರು. ಆದರೆ ರೂಢವಾದಿಗಳು ಮಾತ್ರ ಮಾಡಿದ ಸುಧಾರಣೆಗಳನ್ನು ಹೇಳುವದಿಲ್ಲ. ತಮ್ಮ ಅಂತರಂಗದ ಅಭಿಪ್ರಾಯಗಳನ್ನು ಅಂತರಂಗದಲ್ಲಿಯೇ ಇಟ್ಟುಕೊಂಡು ಹೊರಗೊಂದು ಬೇರೆಯೇ ವೇಷಹಾಕಿಕೊಳ್ಳುತ್ತಾರೆ. ಸುಧಾರಕರು ಸುಧಾರಣೆಯ ಕಾರ್ಯದಲ್ಲಿ ಒಂದು ಹೆಜ್ಜೆ ಮುಂದಿದ್ದಾರೆ; ರೂಢವಾದಿಗಳು ಒಂದು ಹೆಜ್ಜೆ ಹಿಂದಿದ್ದಾರೆ. ಅಷ್ಟೆ!

ಸುಧಾರಕ ರೂಢವಾದಿಗಳೊಳಗಿನ ಆ ಒಂದು ಹೆಜ್ಜೆಯ ಅಂತರವು ತೋರಿಬರುವದು ಅವರವರ ಮನೋಬಲದಲ್ಲಿ! ಸುಧಾರಕರು ತಮಗೆ ಸತ್ಯವೆಂದು ತೋರಿದುದನ್ನು ಸತ್ಯವೆಂದೇ ಆಡುತ್ತಾರೆ; ಆಡಿದಂತೆಯೇ ಮಾಡಿಯೂ ತೋರಿಸುತ್ತಾರೆ. ಅವರೊಳಗೆ ತ್ರಿಕರಣ ಶುದ್ಧಿ ಇದೆ. ಆದರೆ ರೂಢವಾದಿಗಳೊಳಗೆ ಮಾತ್ರ ಈ ತ್ರಿಕರಣಶುದ್ಧಿ ಇರುವದಿಲ್ಲ; ತಮಗೆ ತೋರಿದಂತೆ ಆಡಿ, ಆಡಿದಂತೆ ಮಾಡಿ ಆದರ್ಶಪ್ರಾಯರಾಗಲಿಕ್ಕೆ ಬೇಕಾದಷ್ಟು ಸುಧಾರಕರಿಗೆ ಇರುವಷ್ಟು ಧೈರ್ಯ, ಸ್ಥೈರ್ಯ ಮನೋಬಲಗಳು ಅವರಿಗೆ ಇರುವದಿಲ್ಲ. ಇದೊಂದು ವಿಷಯವನ್ನು ಬಿಟ್ಟರೆ ಬೇರೆ ಎಲ್ಲಾ ವಿಷಯಗಳಲ್ಲಿಯೂ ಅವರು ಈಗಿನ ಸುಧಾರಕರಂತೆಯೇ ಇರುವರೆಂಬುದನ್ನು ರೂಢವಾದಿಗಳ ನಡೆನುಡಿ ಆಚಾರ ವಿಚಾರಗಳನ್ನು ಕೇಳಿ ತಿಳಿದು ಅನುಭವಮಾಡಿಕೊಂಡುದರ ಆಧಾರದ ಮೇಲೆ ನಾವು ಘಂಟಾಘೋಷವಾಗಿ ಹೇಳಬಲ್ಲೆವು.

ತ್ರಿಕರಣಶುದ್ಧಿ ಇರುವವರು ಸುಧಾರಕರೆಂದೂ ಉಳಿದವರು ರೂಢವಾದಿಗಳೆಂದೂ ನಮ್ಮ ಅಭಿಪ್ರಾಯವು. ಸಾಮಾಜಿಕ ಸುಧಾರಣೆಗಳಾಗಬೇಕೆಂದು ಅಂತರಂಗದಲ್ಲಿ ಯಾದರೂ ಎಣಿಸದಿರುವವರು ಈಗ ಸಮಾಜದಲ್ಲಿ ಒಬ್ಬರೂ ಇರುವದಿಲ್ಲ. ಆದರೆ ಸುಧಾರಣೆಗಳನ್ನು ಮಾಡಿತೋರಿಸುವವರು ಮಾತ್ರ ದುರ್ಲಭರಾಗಿದ್ದಾರೆ. ಅಸ್ಪೃಶ್ಯತೆಯ ನಿವಾರಣೆಯಾಗಬೇಕು, ಹರಿಜನರ ಉದ್ಧಾರವಾಗಬೇಕು, ಇಲ್ಲವಾದರೆ ಹಿಂದುಗಳ ಸ್ಥಿತಿ ನೆಟ್ಟಗಾಗಲಿಕ್ಕಿಲ್ಲವೆಂದು ತಿಳಿಯದವರು ಯಾರಿದ್ದಾರೆ? ಪ್ರೌಢವಿವಾಹ, ವಿಧವಾವಿವಾಹ, ಅಂತರ್ಜಾತಿಯ ವಿವಾಹಗಳು ಈಗ ಅನಿವಾರ್ಯವಾಗಿವೆ ಎಂದು ತಿಳಿಯುವವರು ಯಾರಿದ್ದಾರೆ? ಜಾತಿಭೇದ ನಿರ್ಮೂಲವಾಗದೆ ಹಿಂದುಗಳು ಉತ್ಕರ್ಷತೆಯನ್ನು ಪಡೆಯಲಾರರೆಂದು ತಿಳಿಯದವರು ಯಾರಿದ್ದಾರೆ? ಕನ್ಯಾಶುಲ್ಕ ವರಶುಲ್ಕ ಪದ್ಧತಿಗಳು ಹಾನಿಕರವೆಂದು ತಿಳಿಯದವರು ಯಾರಿದ್ದಾರೆ? ಧರ್ಮದೂಷಿಗಳ ಹೆಸರಿನಲ್ಲಿ ಎಷ್ಟೋ ಅಸತ್ಯಯ, ಅನಾಚಾರ್ಯ, ದುರ್ವ್ಯಯ, ಅತಿವ್ಯಯಗಳಾಗುತ್ತವೆಂದು ತಿಳಿಯದವರು ಯಾರಿದ್ದಾರೆ? ಒಮ್ಮೆಗೆ ಇಂಥ ತಿಳಿಯದ ಜನರು ಮುಂದೆ ಬನ್ನಿ, ಅಥವಾ ಕೈ ಎತ್ತಿ!- ಎಂದು ಹೇಳಿದರೆ ಆಗ ಒಬ್ಬನಾದರೂ ಮುಂದೆ ಬರಲಿಕ್ಕಿಲ್ಲ, ಕೈ ಎತ್ತಲಿಕ್ಕಿಲ್ಲ! ಯಾಕೆಂದರೆ, ಎಲ್ಲರಿಗೂ ಹೀಗೆಲ್ಲ ಆಗುತ್ತಿದೆಯೆಂದು ಗೊತ್ತುಂಟು. ಆದರೆ ಇಂಥ ಸಂದರ್ಭಗಳಲ್ಲಿ ತಮ್ಮ ಅಭಿಪ್ರಾಯಗಳು ಹೀಗೆಯೇ ಇವೆಯೆಂದು ಸ್ಪಷ್ಟವಾಗಿ ಹೇಳುವ ಧೈರ್ಯವು ಮಾತ್ರ ಇವರಿಗಿರುವದಿಲ್ಲ. ತಮ್ಮ ನಿಶ್ಚಿತ ಅಭಿಪ್ರಾಯಗಳಿಗೆ ವಿರೋಧವಾಗಿಯೇ ನಡಕೊಂಡು ಆತ್ಮವಂಚನೆಯನ್ನಾದರೂ ಇವರು ಮಾಡಿಕೊಳ್ಳುವರಲ್ಲದೆ ಧೈರ್ಯದಿಂದ ಮುಂದೆ ಬಂದು ಸುಧಾರಣೆಯ ಪ್ರಚಾರ ಕಾರ್ಯಗಳಿಗೆ ಕೈಕೊಡರು. ಕಾರಣ ಇಷ್ಟೇ-ಮೊದಲು ಹೇಳಿದಂತೆ. ಅವರಿಗೆ ಹಾಗೆ ಮಾಡಲಿಕ್ಕೆ ಬೇಕಾದ ಮನೋಬಲವಿರುವದಿಲ್ಲ, ಧೈರ್ಯ ಸ್ಥೈರ್ಯಗಳಿರುವದಿಲ್ಲ; ತಮ್ಮನ್ನು ದೇವಾಂಶಸಂಭೂತರೆಂದು ತಿಳಿದ ಅಜ್ಞ ಜನರು ತಮ್ಮನ್ನೆಲ್ಲಿ ದೂಷಿಸುವರೋ ಎಂಬ ಅಂಜಿಕೆ ರೂಢವಾದಿಗಳಿಗೆ ಬಹಳವಾಗಿರುತ್ತದೆ.

ರೂಢವಾದಿಗಳಲ್ಲಿರುವ ಈ ಕೊರತೆಯ ಕಾರಣಗಳನ್ನೂ ನಿವಾರಣೋಪಾಯಗಳನ್ನೂ ನಾವೀಗ ಚಿಂತಿಸಬೇಕಾಗಿದೆ. ಶರೀರಬಲ ಮನೋಬಲಗಳೆರಡು ಮುಖ್ಯವಾಗಿ ಶಿಕ್ಷಣದ ಮೂಲಕವೇ ಬರತಕ್ಕವಾಗಿವೆ. ಶಿಕ್ಷಣವು ಜೀವನ ಕ್ರಮವನ್ನು ತಿಳಿಸಿಕೊಡುತ್ತದೆ. ಪರಂತು ಈಗ ಶಿಕ್ಷಿತರೆನ್ನಿಸಿಕೊಳ್ಳುವವರಲ್ಲಿಯೂ ಈ ದೌರ್ಬಲ್ಯಗಳಿವೆ. ಆದ್ದರಿಂದ ಅವರು ಪಡೆದ ಶಿಕ್ಷಣದಲ್ಲಿ ಯಾವದೋ ಮಹತ್ವಾದ ದೋಷವಿದೆಯೆಂದು ತಿಳಿಕೊಳ್ಳಬೇಕಾಗಿದೆ. ರೂಢವಾದಿಗಳು ಸಮಾಜ ಸುಧಾರಣೆಯ ಕಾರ್ಯಕ್ಕೆ ಕ್ರಿಯಾತ್ಮಕ ಸಹಾನುಭೂತಿಯನ್ನು ತೋರಿಸದಿರುವ ಕಾರಣವು ಅವರಿಗೆ ದೊರೆತ ಶಿಕ್ಷಣದಲ್ಲಿರುವ ದೋಷಗಳಲ್ಲದಿಗದೆ ಎಂದು ಖಂಡಿತವಾಗಿಯೂ ಹೇಳಬಹುದು. ಮಹಾತ್ಮಾ ಗಾಂಧಿಯವರು ಬರೆದಂತೆ-'ಈಗ ಸುತ್ತಮುತ್ತಲಿನ ವಾತಾವರಣಕ್ಕೂ ಶಿಕ್ಷಣಕ್ಕೂ ಯಾವ ಸಂಬಂಧವೂ ಇರುವದಿಲ್ಲ. ದೇಶದಲ್ಲಾಗುತ್ತಿರುವ ಪರಿವರ್ತನಗಳಿಗೆ ತಕ್ಕಂತೆ ಶಿಕ್ಷಣವು ಹೊಂದಿಕೆಯಾಗಬೇಕು; ಅಲ್ಲವಾದರೆ ಸುಧಾರಣಾಕಾರ್ಯವು ಅಸಾಧ್ಯವಾಗುವದು. ಪದವೀಧರರು ಕೂಡ ಕನ್ಯಾಶುಲ್ಕ ವರಶುಲ್ಕಗಳಂಥ ದುಷ್ಟ ಪದ್ಧತಿಗಳಿಗೆ ತಿಲಾಂಜಲಿಯನ್ನು ಕೊಡಲಸಮರ್ಥರಾಗಿ ಆತ್ಮಘಾತಮಾಡಿಕೊಳ್ಳುವರೆಂದರೆ ಶಿಕ್ಷಣದ ದೋಷವು ನಿಜವಾಗಿಯೂ ಬಹಳ ದೊಡ್ಡದಾಗಿದ್ದಿರಬೇಕೆಂದು ನಾವು ತಿಳಕೊಳ್ಳಬೇಕು. ಸಂಸಾರದ ಪ್ರತಿಯೊಂದು ಕ್ಷೇತ್ರದಲ್ಲಿ ಉಪಸ್ಥಿತವಾಗುವ ಅನೇಕಾನೇಕ ಜೀವನ ಸಮಸ್ಯೆಗಳನ್ನು ತಪ್ಪಿಲ್ಲದೆ ಬಿಡಿಸಲಿಕ್ಕೆ ಬೇಕಾದ ಸಾಮರ್ಥ್ಯವನ್ನೂ ಯೋಗ್ಯತೆಯನ್ನೂ ತಂದುಕೊಡುವಂಥ ಶಿಕ್ಷಣವೇ ನಿಜವಾಗಿ ಪ್ರಯೋಜನಕಾರಿಯಾದ್ದಾಗಿದೆ. ದೇಶದಲ್ಲೀಗ ಅಂಥ ಶಿಕ್ಷಣವು ದೊರೆಯುವದಿಲ್ಲ.

ಸುಧಾರಣೆಗಳಾಗಬೇಕೆಂದು ತಿಳಿದೂ ಅವನ್ನು ಆಚರಣೆಗೆ ತರಲಾರದವರ ಮನೋದೌರ್ಬಲ್ಯವನ್ನು ದೂರಮಾಡುವ ಉಪಾಯವು ಒಂದೇ-ಅದು ಸದ್ವಿದ್ಯೆಯ ಪ್ರಸಾರವಾಗಿರುತ್ತದೆ

ಬಾ ಲ ವಾ ಙ್ಮ ಯ ದ
ಅವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ

ಬಾ ಲ ವಾ ಙ್ಮ ಯ

ಬೆಲೆ ೦—೩—೦

ಉಪಾಧ್ಯಾಯರ ಪ್ರಕಟನ ಸಮಿತಿ,
ಉ ಡು ಪಿ .

ಕಡವಿನ ಫೀಸಿನ ಸುಲಿಗೆ

ಕುಂದಾಪುರ ಟೌನಿಗೆ ಅತೀ ಸಮೀಪವಿರುವ ಖಾರ್ವಿ ಕೇರಿಯಲ್ಲಿರುವ "ಕಾಶಿನ ಕಡವು" ಎಂಬುದು. ಹೆಚ್ಚು ಜನರು ಆಮದು ರಪ್ತು ಆಗುವ ಕಡವಾಗಿರುತ್ತದೆ. ವಂಡ್ಸೆ, ಕೊಲ್ಲೂರು, ಹನ್ನನ ಅತ್ತಕಡೆಯಿಂದ ಕೋರ್ಟು ಕಚೇರಿಗಳಿಗೆ ಬಂದು ಹೋಗಲಿಕ್ಕೂ, ಸಂತೆ ವ್ಯಾಪಾರಕ್ಕೆ ಬಂದು ಹೋಗಲಿಕ್ಕೂ, ಕೊಲ್ಲೂರು ಮುಕಾಂಬಿಕಾ ದರ್ಶನಕ್ಕೆ ಹೋಗುವ ಯಾತ್ರಿಕರಿಗೂ ಈ ಕಡವು ಪಾರಾಗಿ ಹೋಗಬೇಕಾಗುತ್ತದೆ.

ಮೇಲಿನ ಕಡವು 6-7 ಮನೆಯ ಖಾರ್ವಿಯರ ಅಧೀನವಿದ್ದು, ಅವರು ಮನಬಂದಂತೆ ವರ್ತಿಸುವದು ಅಭ್ಯಾಸವಾಗಿ ಹೋಗಿದೆ. ಈ ಜನರು ಸ್ವಭಾವತಃ ಉಡಾಫೆಯವರೂ, ಮೊಕ್ರಾರಿಯವರೂ, ಜನರ ತಾರತಮ್ಯ ಇಲ್ಲದವರೂ ಆಗಿರುತ್ತಾರೆ.

ಈ ಕಡವಿನಿಂದ ಪಾರಾಗುವ ಜನರಿಂದ ತಲಾ 1ರ 0-0-6 ಪೈ ಯಿಂದ 0-1-0 ವರೇಗೆ ವಸೂಲುಮಾಡುವದಲ್ಲದೆ, ಪರಸ್ಥಳೀಕರಿಂದ ಹಾಗೂ ಕೊಲ್ಲೂರು ಜಾತ್ರೆಗೆ ಹೋಗುವ ಮಲೆಯಾಳಿ ಜನರಿಂದ 0-1-0 ಯಿಂದ 0-1-6 ಆಣೆ ವರೇಗೆ ವಸೂಲು ಪಡೆಯುವದಲ್ಲದೆ, ಅಷ್ಟು ಜಾಸ್ತಿ ಕೊಡಲು ಸಮ್ಮತಿಸದವರ ಕೊಡೆ, ವಸ್ತ್ರ, ಕಂಬಳಿ ಮುಂತಾದವುಗಳನ್ನು ಕಸಕೊಂಡು ತೊಂದರೆ ಪಡಿಸುತ್ತಿರುವ ಸಂಗತಿ ಆಗಾಗ ಕೇಳಿಬರುತ್ತಿದೆ.

ಈ ಕಡವು ಆಳವಾದದ್ದು. ಪ್ರವಾಹವ ತುಫಾನು ಉಳ್ಳದ್ದು. ಖಾರ್ವಿಯರ ಚಿಕ್ಕ ಮಕ್ಕಳು, ಸಣ್ಣ ದೋಣಿಗಳಿಂದ ಜನರನ್ನು ಪಾರುಮಾಡುತ್ತಿರುವುದು ವಾಡಿಕೆಯಾಗಿದೆ. ಇದರಿಂದ ಒಂದಲ್ಲೊಂದು ದಿನ ಹೆಚ್ಚಿನ ಅಪಾಯ ಉಂಟಾಗದಿರದು.

ಜನರಿಗೆ ಹೆಚ್ಚಿನ ಉಪಯೋಗಕರವಾದ ಈ ಕಡವನ್ನು ಮೇಲಿನ ಖಾರ್ವಿಜನರಿಂದ ತಪ್ಪಿಸಿ ಡಿಸ್ಟ್ರಿಕ್ಟು ಬೋರ್ಡಿನ ಆಡಳಿತೆಗೆ ತೆಗೆದುಕೊಂಡರೆ ಬೋರ್ಡಿಗೆ ವರ್ಷ 1ರ ರು 500-0-0 ಕ್ಕಿಂತ ಜಾಸ್ತಿ ಆದಾಯ ಸಿಕ್ಕುವದಲ್ಲದೆ, ಅಲ್ಲಿ ಪಾರಾಗುವ ಪ್ರಯಾಣಿಕರಿಗೆ ಸಂಭವಿಸುವ ಕಷ್ಟ ನಷ್ಟಗಳೇ ಮೊದಲಾದ ಮೇಲಿನ ತೊಂದರೆಗಳಿಂದ ಪಾರುಮಾಡಿದಂತಾಗುವದು.

ಪ್ರಯಾಣಿಕರಲ್ಲೊಬ್ಬ.

ನವಯುಗದ ಬಿಡಿ ಸಂಚಿಕೆಗಳು

ಈ ಕೆಳಗಿನವರಲ್ಲಿ ದೊರೆಯುತ್ತವೆ.

1 ಯಚ್. ಕೋಟ್ಯಣ್ಣ ಶೆಟ್ಟಿ, ಮರ್ಚಂಟ್, ಕುಂದಾಪುರ
2 ವಾಸುದೇವರಾವ್, ಎಸ್. ಶಿಬ್ರೂಕಾರ್, C/o ಪೋಪ್ಯುಲರ್ ಹೋಸ್, ಸರ್. ಫಿರೋಜ ಮೇತಹೋಡ್, ಫೋರ್ಟ್, ಬೊಂಬಾಯಿ
3 ದಿ ಕೆನರಾ ನ್ಯೂಸ್ ಏಜನ್ಸಿ, ಬಸ್ ಸ್ಟೇಂಡ್ ಬಳಿ, ಕಾರ್ಕಳ
4 ಪಿ. ಶೀನಪ್ಪ, ಶೆಟ್ಟಿ ಕ್ಲೋತ್ ಮರ್ಚಂಟ್, ತೀರ್ಥಹಳ್ಳಿ.
5 ನಗುವನಂದ ಆಫೀಸು, ಬೆಂಗಳೂರು
6 ಕೆ. ಟಿ. ನಾಯಕ್, ಜನರಲ್ ಮರ್ಚಂಟ್, ಅಂಕೋಲ
7 ಬಿ. ಭೋಜರಾವ್, ಮೂಲ್ಕಿ
8 ಯು. ಪಿ. ಮೇಸ್ತ, ಉದ್ಯಾವರ-
9 ಬಿ. ಪದ್ಮನಾಭ ಪೈ, ಮರ್ಚಂಟ್, ಬ್ರಹ್ಮಾವರ
10 ಭಕ್ತಾ ಬ್ರದರ್ಸ್, ಮರ್ಚಂಟ್ಸ್, ಕಾಸರಗೋಡು
11 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು

ನಾರದನ ತಂಬೂರಿ

ನರ ನಾರಾಯಣ! ನರ ನಾರಾಯಣ! ಘುಂಯಿ, ಘುಂಯಿ, ನಾರದ ಬಂದನು, ಬಂದನು ನಾರದ! ನಾರದ ಸುದ್ದಿಯ ನಿಸಿ ಬೇಕೆ? ‖ ಟುಂ, ಟುಂಯಿ, ಘುಂಯೀ ‖ ಬಂದೆ ಮಾನವರೇ! ನಮ್ಮ ಜಿಲ್ಲೆಗೆ ಆಚಿನಿಂದ ನಿಮ್ಮ ಅಭಿವೃದ್ಧಿ ಖಾತೆಯ ಮಂತ್ರಿ ಶ್ರೀ. ಪಿ. ಟಿ. ರಾಜನರೂ ಬರುತ್ತಿದ್ದಾರೆ, ಕಿಚಯಿಂದ ಪೀಪಲ್ಸ್ ಪಾರ್ಟಿಯ ನಾಯಕರಾದ ಪಿಠಾಪುರಮ್ ರಾಜರೂ ಬರುತ್ತಿದ್ದಾರೆ-ಹೌದಯ್ಯ! ನಿಮ್ಮ ಕೈಯಲ್ಲಿ ದ.ಕ. ಜಿಲ್ಲೆಯ ಜಾತಕವುಂಟೆ? ಇದ್ದರೆ ಸ್ವಲ್ಪ ಕೊಡುವಿರಾ? ಬೃಹಸ್ಪತಿಯಣ್ಣನ ಹತ್ತಿರ ತೋರಿಸಿ ಬರುತ್ತೇನೆ-ನಮ್ಮ ಜಿಲ್ಲೆಯ ಗ್ರಹಗತಿಯಲ್ಲಿ ಶನಿಯ ಪ್ರವೇಶವಾಯಿತೋ ನೋಡಬೇಕಾಯಿತು! ಘುಂಯಿ, ಘುಂಯಿ, ಶನಿಕಾಟ ತಗಲಿಸುದೆ ನಮ್ಮ ಜಿಲ್ಲೆಗೆ ಬರಿದೆ! ತಣಿಸುವಾ ಮಂತ್ರ ವಂದೇ ಮಾತರಂ ‖ ಘುಂಯಿ, ಘುಂಯಿ, ನರ ನಾರಾಯಣ! ನರ ನಾರಾಯಣ!

* * * *

ಏನಯ್ಯಾ! ನಮ್ಮ ಮಂತ್ರಿ ಶ್ರೀ ರಾಜನರಿಗೆ ನಾವೇನೂ ಗಮ್ಮತ್ತು ಮಾಡುವದು ಬೇಡವೆ? ಜಿಲ್ಲಾ ಬೋರ್ಡು ಮಾತಾಡುವದಿಲ್ಲ, ಉಡುಪಿ ಮುನಿಸಿಪಾಲಿಟಿಯು "ನನ್ನದಿಲ್ಲ" ಎನ್ನುತ್ತಿದೆ. ಇದೂ ಚೆಂತಿಲ್ಲ ನೋಡಿ! ಜಿ. ಬೋರ್ಡು ನೌಕರರು ಮಾನಪತ್ರ ಕೊಡುತ್ತಾರೆ, ಉಡುಪಿ ಸಹಕಾರ ಸಂಘದವರೂ ಕೊಡುತ್ತಾರೆ. ಸಾಲದೆ? ಘುಂಯಿ, ಘುಂಯಿ, ಪರರ ನಂಬಲು ಬೇಡ। ನಿನ್ನವರೆ ನಿನಗೆ ಗತಿ ‖ ಘುಂಯಿ, ಘುಂಯಿ, ನರ ನಾರಾಯಣ!

* * * *

ಮಾನಪತ್ರಗಳ ಮಾನ ಪತ್ತೆ ಮಾಡಲು ನಾರದನೀಗ ಬಂದುದಲ್ಲ ನೋಡಿ! ಅವುಗಳಿಂದ ಯಾರಿಗೇನು ಬಾಧಕ? ನಿಮ್ಮ ನೌಕರರಿಂದ ನಿಮಗೆ ಬೇಕಾದುವನ್ನು ನೀವು ಪಡೆಯುವದಿಲ್ಲವೆ? ಅದಿರಲಿ, ಈ ಮಂತ್ರಿಗಳೀಗ ಪೂರ್ತಿ ಐದು ದಿವಸ ಜಿಲ್ಲೆಯಲ್ಲಿ ತಿರುಗುತ್ತಾರಲ್ಲಾ-ಹೀಗೆ ತಿರುಗಿ ಜನರ ಕಿವಿಯಲ್ಲಿ ಟುಂಯಿ, ಟುಂಯಿ, ಮಾಡುವ ಶೈಸನ್ನು ನನ್ನ ಹೆಸರಿನಲ್ಲಿ ರಿಜಿಸ್ಟರ್ ಆಗಿದೆ. ಆ ಹಕ್ಕು ಇವರಿಗ ಹೇಗೆ ಒಂತು ಹೇಳಿ? ನನ್ನ ಗೃಹಚಾರ! ಟುಂಯಿ, ಟುಂಯಿ! ನಾರದನಿಗಿದ್ದಿದ ಪೇಟೆಂಟಿಲ್ಲವು! ಚಾರಿದನ್ನೆ, ಹಾ! ಕಲಿಯುಗದಿ ‖ ಘುಂಯಿ, ಘುಂಯಿ! ನರ ನಾರಾಯಣ!

* * * *

ದೇವಲೋಕದಿಂದ ಬಂದು ಈ ರೀತಿ ಮಾನವರ ಬಾಯಿಗ ಬಿದ್ದೆನಲ್ಲಾ ಎಂದು ನನಗೊಂದಿಷ್ಟು ಬೇಸರ ಬರುವದು ಸ್ವಾಭಾವಿಕವೆನ್ನಿ! ನನ್ನ ಹಕ್ಕನ್ನು ಇವರೂ ಪಡೆದರ ಹೋಗಲಯ್ಯ! ಇವರ ಹಕ್ಕನ್ನೂ ಇವರು ಕಾಯಬೇಕಲ್ಲ! ನೋಡಿ, ಇವರು ಒಂದು ಜಸ್ಟೀಸ್ ಪಾರ್ಟಿಯವರಲ್ಲಿ ಗುಜು ಗುಜು ಎಬ್ಬಿಸಿದ್ದಾರ "ಇಂಥವರೇ ನಮ್ಮ ಪಾರ್ಟಿಯವರು" ಎಂದು ನಾಮ ಇಟ್ಟುಬಿಟ್ಟರೇನು ಇವರಿಗೆ? ಇವರು ಅಬ್ರಾಹ್ಮಣ ಪಾರ್ಟಿಯವರಯ್ಯ! ನಾವು ಹಾಕುವ ಬ್ರಾಹ್ಮಣರಲ್ಲ! ಘುಂಯಿ, ಘುಂಯಿ ‖ ನಾಮವ ಜೇಪಿಸಿಕೊಳ್ಳರು ಹಾಗೂ! ‖ ನಾಮುವಿಡರು ತವುಗೂ ‖ ನರ ನಾರಾಯಣ! ನರ ನಾರಾಯಣ!!

* * * *

ನೀವೆಲ್ಲಾ ಹೇಳುವದುಂಟಲ್ಲಾ ದಿವಾನ್ ಬಹದೂರು ಹಗ್ಡೆಯವರು ಜಸ್ಟಿಸ್ ಪಾರ್ಟಿಯವರೆಂದು ಅವರೊಡನೆ ಕೇಳಿ. ಅವರ ಪಾರ್ಟಿಯ ಹೆಸರೂ ಅತ್ತೆಯ ಹೆಸರೂ ಒಂದೇ ಎಂಬ ಹಾಗೆ ಕಾಣುತ್ತದೆ; ಹಾಗೆಂದೇ ತಿಳಕೊಳ್ಳಬೇಡಿ ಮಾನವರೆ! ಅವರ ಮರ್ಜಿ ಕಂಡು ನನ್ನ ಊಹೆಯಿದ್ದು! ಹಾಗಿರದೆ ಉಪಾಯವೂ ಇಲ್ಲ ನೋಡಿ! ಜಸ್ಟೀಸ್ (ಅಬ್ರಾಹ್ಮಣ) ಪಾರ್ಟಿಯೆಂದು ಹೇಳಿಬಿಟ್ಟರೆ, ಬ್ರಾಹ್ಮಣರು ಬೆನ್ನುಹಾಕುವಾಗ ತಮ್ಮ ಓಟನ್ನೂ ಜನಿವಾರದಲ್ಲಿ ಉರುಲು ಹಾಕಿ ಕಟ್ಟಿ ಎಳಕೊಂಡು ಹೋಗಿಬಿಟ್ಟರೆ! ಅಹುದಯ್ಯ! ಟುಂಯಿ, ಟುಂಯಿ, ಓಟಿದ್ದವರನ್ನೆಲ್ಲ ಕಾದಿ ಬೇಡುವ ಸಮಯ। ಕಾಟವದು ಸಾಕಪ್ಪ! ಅಯ್ಯೋ ಬೇಡ! ಟುಂಯಿ, ಟುಂಯಿ, ನರ ನಾರಾಯಣ!

* * * *

ನಾನು ಹೇಳುವದಿಷ್ಟು- ಏನೇ ಆಗಲಿ! ಈ ಸಲ ಒಂದ ಮಂತ್ರಿಗಳು ತಮಗೆ ಬೇಕಾದವರೊಬ್ಬರಿಗೆ "ಇವರು ನಮ್ಮ ಕಡೆಯವರು" ಎಂದು ಒಂದು ನಾಮವಿಟ್ಟೇ ಬಿಡಬೇಕು, ಅಷ್ಟನ್ನೊಮ್ಮೆ ಇವರು ಮಾಡಿದರೆ ಮತ್ತೆ ಮತದಾರರು ಮೂರು ನಾಮವೆಳೆದೇ ಬಿಡುತ್ತಾರೆನ್ನಿ! ಇವರ ವ್ಯವಸ್ಥೆ ಹೀಗಾಯಿತಲ್ಲಾ-- ನಮ್ಮ ಕಾಂಗ್ರೆಸ್ಸಿನ ಕೆಲವರ ಅವಸ್ಥೆ ನೋಡಿ! ನರ ನಾರಾಯಣ! ನರ ನಾರಾಯಣ!! ಘುಂಯಿ, ಘುಂಯಿ ಜಗಳವೆ ಜಗವನು ಭಗ ಭಗ ಸುಡುತಿದೆ! ನಾರದ ತಪ್ಪಿಸಿಕೊಳಬೇಕೆ? ‖ ಘುಂಯಿ, ಘುಂಯಿ ನರ ನಾರಾಯಣ! ನರ ನಾರಾಯಣ!!

* * * *

ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ಒಬ್ಬೊಬ್ಬರಿಗೊಂದೊಂದು ಕೆಲಸವಿತ್ತಲ್ಲ. ಅವರಲ್ಲಿ ನಾಲ್ಕು ಮಂದಿ ಒಮ್ಮೆಗೇ ಬಿಟ್ಟುಬಿಟ್ಟರು. ನರ ನಾರಾಯಣ! "ಯಾಕೆ ಸ್ವಾಮಿಗಳೂ ಹೀಗೆ ಮಾಡಿದಿರಿ? ಎಂದೊಬ್ಬರೊಡನೆ ಕೇಳಿದ ನನ್ನ ಕಾಂಗ್ರೆಸ್ ನೀವೆಯ ಪವಿತ್ರ ಧ್ಯೇಯವನ್ನು ಸಾಧಿಸಲು ಸದ್ಯ ಸ್ಥಿತಿಯಲ್ಲಿ ಕಮಿಟಿಯಲ್ಲಿರುವದಕ್ಕಿಂತಲೂ ಹೊರಗಿದ್ದರೆ ಅನುಕೂಲ"ಎಂದರು ನರ ನಾರಾಯಣ! ಪವಿತ್ರ ಧ್ಯೇಯ ಸಾಧಿಸಲು ಹೊರಗೆ ಹೋಗಬೇಕಾದರೆ ಒಳಗೇನಾಗಿತ್ತಯ್ಯ? ನರ ನಾರಾಯಣ! ನರ ನಾರಾಯಣ!! ಅವರಿಗೆಲ್ಲಾ ನಾನೊಂದು ಹೇಳಿಬಿಟ್ಟರೆ ಕೇಳಿಯಾರ? ಕೇಳಿ ಬಂಧುಗಳೇ! ನೀವೆಲ್ಲಾ ನಿಮ್ಮ ಪವಿತ್ರ ಧ್ಯೇಯವನ್ನು ಹಿಡಕೊಂಡು ಹೊರಗೋಡಬೇಡಿರಿ! ಒಳಗಿದ್ದೇ ನರ ನಾರಾಯಣ ಮಂತ್ರ ಜಪಿಸಿರಿ! ಘುಂಯಿ, ಘುಂಯಿ, ‖ ನರ ನಾರಾಯಣ ಮಂತ್ರವ ಜಪಿಸಲು! ನರನಿಗೆ ಕಾಂಗ್ರೆಸು ತಪವನ ‖ ನರ ನಾರಾಯಣ! ನರ ನಾರಾಯಣ!! —ನಾರದ.

ವಿಶೇಷ ವಾರ್ತೆ!

ಸ್ಪೈನಿನಲ್ಲಿ ಸರಕಾರವು 40,000 ಸೈನ್ಯಗಳನ್ನು ತಯಾರುಮಾಡಿಟ್ಟು ಮೇಡ್ರಿದಿನಲ್ಲಿ ಬಂಡಾಯಗಾರರನ್ನು ಇದಿರಿಸಲು ಸಿದ್ಧವಾಗಿದೆ! ಇಷ್ಟರಲ್ಲೇ ಭಯಂಕರ ಧಾಳಿ ನಡೆದಿರಬೇಕು!

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ)
ಸಂ. ನ

ದಿವಂಗತ ಹಾಜಿ ಅಬ್ದುಲ್ ಖಾನ್ ಸಾಹೇಬರ ಮೆಮೋರಿಯಲ್ ಫಂಡಿನ ಕಾರ್ಯದರ್ಶಿಯವರ ಸನ್ನಿಧಾನಕ್ಕೆ ಪುರಜನರ ಪರವಾಗಿ ವಿನಂತಿ.

ಸ್ವಾಮಿಾ,

ಕಳೆದ 1935ನೇ ಅಗೋಸ್ತು ತಿಂಗಳಲ್ಲಿ ದಿವಂಗತ ಖಾನ್ ಸಾಹೇಬರ ಒಂದು ಪ್ರತಿಮೆಯನ್ನು ನಮ್ಮ ಪಟ್ಟಣದಲ್ಲಿ ಇರಿಸಬೇಕೆಂದು ಆ ಪರವಾಗಿ ಸಾರ್ವಜನಿಕ ವಂತಿಗೆಯನ್ನು ತೆತ್ತು ಇಂದಿಗೆ ವರ್ಷ ಒಂದು ಕಳೆಯಿತು. ಆದರೆ ಅದರ ಮುಂದಿನ ವ್ಯವಸ್ಥೆ ಏನಾಯಿತೆಂದು ಇದು ವರೆಗೂ ಯಾರಿಗೂ ತಿಳಿಯದ ಸಮಸ್ಯೆಯಾಗಿರುತ್ತದೆ. ಆದ ಪ್ರಯುಕ್ತ ಕಾರ್ಯದರ್ಶಿಗಳು ಬೇಸರಿಸದ ಈ ಕೆಳಗಿನ ವಿಷಯಗಳ ಕುರಿತು ತಮ್ಮ ಅನುಭವವನ್ನು ಚಂದಾದಾರರ ಸಮಾಧಾನದ ಬಗ್ಗೆ ಇದೇ ಬರುವ ನವಯುಗದಲ್ಲಿ ಪ್ರಕಟಿಸಬೇಕಾಗಿ ವಿನಂತಿ.

1 ಇದು ವರೆಗೆ ವಂತಿಗೆ ಎಷ್ಟಾಗಿರುತ್ತದೆ?

2 ಸದ್ರಿ ಹಣವು ಎಲ್ಲಿರುತ್ತದೆ.

3 ಪಟ್ಟಿಯಲ್ಲಿ ಹೆಸರು ಹಾಕಿ ವಸೂಲು ಬಾಕಿ ಇರುವ ಹಣವೆಷ್ಟು?

4 ಚಂದಾದಾರರಿಂದ ವಸೂಲು ಮಾಡಿಯೂ ತಮ್ಮ ಕೈಸೇರದ ಹಣವೆಷ್ಟು?

5 ಇನ್ನು ಮುಂದಿನ ವ್ಯವಸ್ಥೆಯೇನು?

6 ಈ ಕುರಿತು ಈ ಮುಂಚೆ ಏನೆಲ್ಲಾ ಏರ್ಪಾಡುಗಳು ನಡೆದಿರುತ್ತವೆ?

ಹಿತೈಷಿ.

ಬಂಟ್ವಾಳ ಪೋಸ್ಟಾಫೀಸಿನ ವರ್ಗಾವರ್ಗಿ.

ಬಂಟ್ವಾಳ ಪೋಸ್ಟಾಫೀಸು 1923ನೇ ಇಸವಿಯಲ್ಲಿ ಘೋರ ನೆರೆಯಲ್ಲಿ ಆಗ ಹೊಸಪೇಟೆಯಲ್ಲಿದ್ದ ಟಪ್ಪಾಲು ಆಫೀಸಿನ ಕಟ್ಟೋಣವು ಬಿದ್ದುಹೋಗಿ ಟಪ್ಪಾಲು ಚೀಲ ಆಫೀಸಿನ ರಿಕಾರ್ಡು ಇತ್ಯಾದಿ ಮಣ್ಣಿನೊಳಗಿಂದ ಅಗೆದು ತೆಗೆಯಬೇಕಾಯಿತು. ಅಲ್ಲಿಂದ ಕೂಡಲೇ ಬಂಟ್ವಾಳ ಸಬ್ ಮೇಜಿಸ್ಟ್ರೇಟರ ಕಚೇರಿಯ ಜೈಲು ಕೋಣೆಯಲ್ಲಿ ಇಡಲ್ಪಟ್ಟಿತ್ತು. ಸ್ವಲ್ಪ ಸಮಯದ ನಂತರ ಡಾ. ಬಿ ಶ್ರೀನಿವಾಸ ಪ್ರಭುಗಳ ಮೋಟಾರು ಶಡ್ಡಿಗೆ ವರ್ಯ್ಯೋಣವಾಯಿತು. ಅಲ್ಲಿ ಸಹ ಸ್ಥಳ ಅಭಾವದ ದೆಸೆಯಿಂದ ಆಗ ಇಲ್ಲಿ ಪೋಸ್ಟು ಮಾಸ್ಟರಾಗಿದ್ದ ರಾಕೃಷ್ಣರಾಯ ಬಾಳಿಗರವರು ಬೇರೆಯೆಲ್ಲಾದರೂ ಯೋಗ್ಯ ಪೋಸ್ಟು ಆಫೀಸು ಸಿಕ್ಕುವಂತೆ ಅನೇಕ ಪ್ರಯತ್ನ ಮಾಡಿದರೂ ಸಫಲವಾಗದ ಇಲ್ಲಿಯ ಮಹಾನುಭಾವರೂ, ವರ್ಗದಾರರೂ ಆದ ಶ್ರೀ. ಎಸ್ ವೆಂಕಟರಮಣಯ್ಯನವರೊಡನೆ ಒಂದು ಯೋಗ್ಯ ಸ್ಥಳದಲ್ಲಿ ಉತ್ತಮ ಕಟ್ಟಡ ಕಟ್ಟಿಸಿ ಕೊಡಹೇಳಿದ ಪ್ರಕಾರ ಅವರು ಕಟ್ಟೋಣ ಕಟ್ಟಿಸಿಕೊಟ್ಟು 11 ವರ್ಷ ಕಾಲ ಕಳೆದುಹೋಯಿತು. ಆದರೆ ಈಗ ಮಾತ್ರ ಸದ್ರಿ ಆಫೀಸು ಬೇರೆ ಕಟ್ಟೋಣಕ್ಕೆ ವರ್ಯ್ಯಬೇಕೆಂದು ಬೇರೆ ಕಟ್ಟೋಣ ಹುಡುಕುತ್ತಾರಂತೆ. ಒಬ್ಬರು ತನ್ನ ಹಿತ್ತಲಲ್ಲಿರುವ ಒಂದು ಕಟ್ಟೋಣ ತೋರಿಸಿಕೊಟ್ಟಿರುತ್ತಾರಂತೆ. ಅದರ ಮುಂದುಗಡೆ ಕಾಫಿ ಹೋಟೆಲುಗಳೂ, ಅಂಗಡಿಗಳೂ ಉಂಟಂತೆ.

ಆದ್ದರಿಂದ ಈಗಿರುವ ಪೋಸ್ಟು ಆಫೀಸು ಗಾಳಿ ಬೆಳಕು ಇದ್ದು ಯೋಗ್ಯ ಆಫೀಸು ರೂಮೂ, ರಿಕಾರ್ಡು ಕೋಣೆಯೂ, ಅದಕ್ಕೆ ಲಗ್ತಿಯಾಗಿ ಪೋಸ್ಟು ಮಾಸ್ಟರವರ ಮನೆ, ರನ್ನರ್ ಕ್ವಾರ್ಟರ್ಸ್, ಹಟ್ಟಿ, ಕೊಟ್ಟಿಗೆ, ಸದಾ ನೀರು ಇರುವ ಬಾವಿ ಇತ್ಯಾದಿ ಸರ್ವಾನುಕೂಲತೆ ಇದ್ದು ಇಲಾಖೆಯವರಿಗೆ ಯಾವ ತೊಂದರೆಯಿಂದ ಬೇರೆ ಕಟ್ಟೋಣ ಹುಡುಕುತ್ತಾರೆಂದು ತಿಳಿದು ಬರುವುದಿಲ್ಲ

ಆದ್ದರಿಂದ ಈಗಿರುವ ಪೋಸ್ಟು ಆಫೀಸನ್ನು ವರ್ಗಾಯಿಸಬಾರದಾಗಿ ಓರ್ವ ಪುರನಿವಾಸಿಯ ಬಾತ್ಮಿ

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಕ್ರಮ ನಂಬ್ರ 101/1936

ಶಿಂಘುಶೆಟ್ಟಿ— ವಾದಿಳು

ಮತ್ತು

ಮುತ್ತು ಶೆಟ್ಟಿ ಸಹಾ — ಪ್ರತಿವಾದಿರು.

2ನೇ ಪ್ರತಿವಾದಿ ಶ್ಯಾಮ ಶೆಟ್ಟಿ ಮುತ್ತು ಶೆಟ್ಟಿ ಮಗ ಉಡ್ಪಿ ತಾಲ್ಕು ಕುತ್ಯಾರ ಗ್ರಾಮದ ಕುತ್ಯಾರು ಗುತ್ತಿನಲ್ಲಿರುವವ:—

ಪ್ರತಿವಾದಿರು ವಾದಿಳಿಗೆ ತಾ 20-4-1921ರಲ್ಲು ರೂಪಾಯಿ 150—0—0ಕ್ಕೆ ರಿಜಿಸ್ಟ್ರಿಸಿಕೊಟ್ಟ ಅಡವು ದಸ್ತಾವೇಜಿನ ಬಾಬ್ತು ಅಸಲು ಬಡ್ಡಿ ಖರ್ಚು ವಸೂಲು ಮಾಡಿಕೊಳ್ಳುವರೆ ವಾದಿಳು ದಾಕ್ಲುಮಾಡಿದ ಸದ್ರಿದಾವೆಯು ಮೇಲ್ಕಂಡ ಕೋರ್ಟಿನ ತನಿಖೆ ಬಗ್ಗೆ ತಾರೀಕು 31-10-1936ಕ್ಕೆ ಯಿಟ್ಟಿರುತ್ತದ ನಿಮಗೆ ಆ ಕುರಿತು ಯೇನಾದ್ರು ಆಕ್ಷೇಪಯಿದ್ರೆ ಸದ್ರಿ ತಾರೀಕು ದಿವಸ ಬೆಳಗ್ಗೆ 10 ಘಂಟೆಗೆ ಸದ್ರಿ ಕೋರ್ಟಿನಲ್ಲಿ ನೀವು ಹಾಜರಾಗಿ ಉದಹರಿಸಲಿಕ್ಕೆ ತಪ್ಪಿದರೆ ನಿಮ್ಮನ್ನು ಗೈರುಹಾಜರಿಮಾಡಿ ಕೋರ್ಟಿನವರಿಗೆ ಯುಕ್ತಕಂಡ ರೀತಿ ತೀರ್ಮಾನಿಸಲಾಗುವದು ಎಂತ ಈ ಮೂಲಕ 2ನೇ ಪ್ರತಿವಾದಿಯಾದ ನಿಮಗೆ ತಿಳಿಸೋಣಾಗುತ್ತದೆ

ಕಾರ್ಕಳ, ದ. ಕ.
ತಾ. 8—10—1936

P. Shamba Shetty.
ವಾದಿಳಕಡೆ ವಕೀಲ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾಗಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಶ್ರೀ ರಾಮಾರೆಸ್ಟೋರೆಂಟ್

ಉಡುಪಿ

ಊಟ ಉಪಹಾರಗಳ ರುಚಿ ! ಸ್ಥಳ ಆಸನಗಳ ಶುಚಿ !!

ಶಾಲಾ ವಿದ್ಯಾರ್ಥಿಗಳ ಅನುಕೂಲತೆ, ಪ್ರವಾಸಿಕರಿಗೆ ಅತ್ಯುತ್ತಮ ಸೌಕರ್ಯ ಇವೆಲ್ಲಾ ಇರುವ ಒಂದೇ ಒಂದು ವಿಶ್ರಾಂತಿಗೃಹವೆಂದರೆ ಶ್ರೀ ರಾಮಾರೆಸ್ಟೋರೆಂಟ್! ಸುಲಭ ದರದಲ್ಲಿ ಅತ್ಯುತ್ತಮ ತಿಂಡಿ ಪಾನೀಯಗಳು; ಅತ್ಯಾರೋಗ್ಯಕರ ಊಟ ಇವುಗಳಿಗೆ ನಮ್ಮ ಅನುಭವಪೂರ್ಣ ಮೇಲ್ವಿಚಾರಣೆ. ಹೀಗಾಗಿ ನಿಮಗೆಲ್ಲಾ ಸುಖವೇ ಸುಖ! ಸಂತೆಕಟ್ಟೆಯಿಂದ ತೆಂಕು ಕೋರ್ಟುರೋಡ್ ಮತ್ತು ಕೋಳದಪೇಟೆ ರೋಡ್ ಮಿಲನವಾದಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಿಸಿರುವ ದಿವ್ಯವಾದ ಮಂದಿರದಲ್ಲಿರುವ ಶ್ರೀರಾಮಾ ರೆಸ್ಟೋರೆಂಟನ್ನೊಮ್ಮೆ ಸಂದರ್ಶಿಸಿನೋಡಿರಿ.

ಎಚ್. ಗೋಪಾಲ ನಾಯಕ್,
ಪ್ರೊಪ್ರೈಟರ್.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತ ವ್ಯಾದೆಗೆ ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರೈಕ್ಲೀನಿಂಗ್ ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: ಯಮ್. ಯಸ್. ಭಟ್ಕಳ್.

DIAMONDS! **DIAMONDS!!**

K. Ramachandra Krishna Shet

Near Mission High School, *Mangalore.*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ವಿದ್ಯಾ ಸಂಸ್ಥೆಗೆ ಸಹಾಯಮಾಡಿರಿ! ಸತ್ಕಾರ್ಯಕ್ಕೆ ಪ್ರೋತ್ಸಾಹ ಕೊಡಿಸಿರಿ!

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಯೋಗ್ಯ ಕಮ್ಮಿಟಿಯವರಿಂದ ನಡಿಸಲ್ಪಡುವುದು

ಎ. ಬಿ. ಶೆಟ್ಟಿ, ಎಸ್ಕ್ವೈಯರ್, M.L.C. ಪ್ರೆಸಿಡೆಂಟ್.

ಡಾ| ಎಂ. ಆರ್. ಕಾಮತ್, L.M.P. ವೈಸ್ ಪ್ರೆಸಿಡೆಂಟ್.

ರೂ. **20,000/-**ವು **1,789** ಇನಾಮುಗಳಾಗಿ ಹಂಚಲ್ಪಡುವುದು.
ಪ್ರಥಮ ಬಹುಮಾನ ರೂ. **.,000/-** ದ್ವಿತೀಯ ಬಹುಮಾನ ರೂ. **2,000/-**
ತೃತೀಯ ಬಹುಮಾನ ರೂ. **1,000/-**

ಟಿಕ್ಕು ಅಮ್ಮುದು ತಾರೀಕು 25—1—'37] [ಸೋಡ್ತಿ ತೆಗೆಯುವ ತಾರೀಕು 31—1—'37

ಟಕೇಟು ಒಂದರ ಕ್ರಯ ಆಣೆ ನಾಲ್ಕು ಮಾತ್ರ.

20 ಟಿಕೇಟುಗಳಿರುವ ಪುಸ್ತಕಕ್ಕೆ ರೂ. 5 ಮಾತ್ರ. ಟಿಕೇಟು ಪುಸ್ತಕಗಳು ನಗದಿಯಾಗಿ ವಿಕ್ರಯಿಸಲ್ಪಡುವವು. ಟಿಕೇಟು ಮಾರಿ ರೂ. 250/-ಕ್ಕೂ ಹೆಚ್ಚು ಸಂಗ್ರಹಿಸಿಕೊಟ್ಟವರೊಳಗೆ ರೂ. 200/-ರ ಒಂದು, ರೂ. 100/-ರ ಎರಡು ಮತ್ತು ರೂ. 50/-ರ 54 ಇನಾಮುಗಳು ಹಂಚಲ್ಪಡುವವು.

ಟಿಕೇಟು ಮಾರಿ ರೂ. 5000 ಒದಗಿಸಿಕೊಟ್ಟವರು ಹೈಸ್ಕೂಲಿನ ಪೋಷಕರೆಂದು ಪರಿಗಣಿಸಲ್ಪಟ್ಟು ಅವರ ತೈಲಚಿತ್ರವು ಇಡೋಣಾಗುವುದು. ಅಂತೆಯೇ ರೂ. 2000 ಮಾಡಿಕೊಟ್ಟವರು ಆಶ್ರಯದಾತರಾಗಿ ಸದ್ರಿಯವರ ಭಾವಚಿತ್ರವು ಇಡಲ್ಪಡುವುದು. ಮತ್ತು ರೂ. 1000 ಮಾಡಿಕೊಟ್ಟವರ ಹೆಸರು ಚಂದ್ರಕಾಂತ ಶಿಲೆಯಲ್ಲಿ ಕೆತ್ತಲ್ಪಟ್ಟು ಗೋಡೆಯಲ್ಲಿ ಇಡಲ್ಪಡುವುದು.

ಟಿಕೇಟು ವಿಕ್ರಿತದಿಂದ ರೂ. 25/. ಮತ್ತು ಹೆಚ್ಚು ಮಾಡಿಕೊಟ್ಟವರಿಗೆ ಶೇಕಡಾ 6¼ರಂತೆ ಕಮಿಶನ್ ಕೊಡಲಾಗುವುದು.

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ—

ಮೂಲ್ಕಿ, ದ, ಕನ್ನಡ } **ಸೆಕ್ರೆಟರಿ, ದಿ ಮೂಲ್ಕಿ ಗ್ರೇಂಡ್ ರೇಫ್‌ಲ್**
3—9—1936 (ಹೈಸ್ಕೂಲ್ ಸಹಾಯಾರ್ಥ)

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇದೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನೈದನೆಯ ಸಂಪುಟವು 1936ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಆವಶ್ಯಕವಾದ ಶಿಕ್ಷಣ-ಸಾಹಿತ್ಯ-ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟನೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. 3—0—0 ಮಾತ್ರ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, **ಬೆಂಗಳೂರು ನಗರ**

The Commonwealth Assurance Co., Ltd.

(ESTD. 1929)

Chairman. Mr. N C. Kelkar, Ex-M. L. A.

HEAD OFFICE: **POONA CITY.**

CHIEF AGENCY OFFICE: **HAMPANKATTA, MANGALORE.**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೋಲಿಸಿದಾರರಿಗೆ
ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಿನ ವಿಳಾಸಕ್ಕಾಗಲಿ ಬರೆಕೊಳ್ಳಿರಿ—

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ತರುಣ ತರುಣಿಯರಿಗೆ
ಅತ್ಯಂತ ಬೋಧಪ್ರದವಾದ
ಅತ್ಯಾಧುನಿಕ ನಾಟಕ

ವ್ಯಭಿಚಾರಿಣಿಯಾರು?

LAXMI BRAND COFFEE POWDER.

Pure & Superior quality, will last long without loosing its flavour and colour

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ ಸದಾ ಉಪಯೋಗಿಸಿರಿ ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

FOR SALE

Fire Resistance Steel Iron Safes. latest pattern

ನಮ್ಮಲ್ಲಿ ಕಬ್ಬಿಣದ ತ್ರಿಜರಿಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ ...ಂಗಳಿಗೆ ಕಂತುಗಳಿಂದಲೂ ಮಾರಲ್ಪಡುವದು.

For Prices & Particulars Apply to—

K. K. Shanbhag & Sons
Court Road UDIPI S K



Sold also by Instalments

106 ವಾಚಕರ ಅಪೇಕ್ಷೆಯಂತೆ ಪ್ರಕಟಿಸಿದ
ಈ ನಾಟಕ ಪುಸ್ತಕದಲ್ಲಿ
ಅಂದ ಸಮಾಜದ ನಿಜರೂಪವನ್ನು
ನ್ಯಾಯವು ಅನ್ಯಾಯವನ್ನು ಗೆದ್ದು ಬರುವುದನ್ನು
ಅಧಿಕಾರ, ಧನಲಾಲಸೆಯಲ್ಲ—
ಪವಿತ್ರ ಪ್ರೇಮವೊಂದೇ ಶಾಂತಿಯಿಯುವುದೆಂಬುದನ್ನು
ಕಾಣಬಹುದು.

ವ್ಯಭಿಚಾರಿಣಿ ಯಾರು

ಸಾಮಾಜಿಕ ಕ್ರಾಂತಿಕಾರಕ ನಾಟಕಗಳನ್ನು ಬರೆಯುವುದರಲ್ಲಿ ಹೆಸರುಗೊಂಡ
ಶ್ರೀ. ಕೆ. ಕಾಂತಪ್ಪ ಶೆಟ್ಟರೇ
ಈ ಗ್ರಂಥದ ಕರ್ತರು

ಪುಸ್ತಕವು 100 ಪುಟಗಳಿಗೂ ಮಿಕ್ಕಿದೆ ಹಲವು ಚಿತ್ರಗಳಿಂದ ನಯನಮನೋಹರವಾಗಿದೆ ಇಷ್ಟಿದ್ದರೂ ಬೆಲೆ ಕೇವಲ ೦—೮—೦
ಟಪ್ಪಾಲು ದ್ವಾರ ೦—೧೦—೦
ಪ್ರತಿಗಳಿಗೂ ಹೆಚ್ಚಿನ ವಿವರಗಳಿಗೂ ಬರೆಯಿರಿ.

ಕಿರಿಯರ ಪ್ರಪಂಚ, ಉಡುಪಿ.

Sole Agent—Supply Agency Ltd UDIPI

ಒಂದೇ ತಿಂಗಳಲ್ಲಿ ಇಂಗ್ಲಿಷ್

೦ ೮ ೦ —— ತುಳುನಾಡ್ ಪ್ರೆಸ್, ಉಡುಪಿ.

H AD OFFICE VIEW

ಅಕ್ಟೋಬರ ತಾ 2

ಮಹಾತ್ಮಾಜಿಯವರ ಪಾವನ ಜನ್ಮದಿನ
2 10 1869

ನವಂಬರ ತಾ 2

ಶ್ರೀ ಭಾರತ ವಸ್ತು ಮಂದಿರದ ಸ್ಥಾಪನಾದಿನ
2 11 1921

ಅಕ್ಟೋಬರ ತಾ. 2

ಸಪ್ಲೈ ಏಜನ್ಸಿ ಲಿಮಿಟೆಡ್, ಇದರ ಸ್ಥಾಪನಾದಿನ
2 10 1933

ಇದೇ **2-10-'36** —— ರಿಂದ —— **2-11-'36**ರ ವರೆಗೆ

ಮುವ್ವತ್ತೆರಡು ದಿನಗಳ ಸದವಸರದಲ್ಲಿ ≡ **ತಿರುಪೂರು ಖಾದಿಯು** ≡ ತಿರುಪೂರ ದರದಲ್ಲಿ ಮಾರಲ್ಪಡುವುದು!

೫ ರೂಪಾಯಿಗಳಿಗಿಂತ ಹೆಚ್ಚಿನ ಇತರ ಸಾಮಾನುಗಳನ್ನು ಕೊಳ್ಳುವವರಿಗೆ ಸೇಕಡಾ 6¼ ರಂತೆ ಕಮಿಶನ್

Grand Jayanthi Sales for 32 days.

ಶ್ರೀ ಭಾರತ ವಸ್ತು ಮಂದಿರ, ಉಡುಪಿ.

Printed by P VENKATARAMANACHARYA for & on behalf of SUPPLY AGENCY LTD at THULUNAD PRESS UDIPI and Published by K H SHETTY ... OFFICE UDIPI

Registered No. M. 3618

'ನವಯುಗ'
ದಲ್ಲಿ
ಪ್ರಕಟಣೆಯ
ದರಗಳು
ಒಂದು ಬಾರಿಗೆ
ಒಂದು ಚಚ್ಚೌಕ ಇಂಚಿಗೆ
0—4—0
ಕಂಟ್ರಾಕ್ಟ್ ದರಗಳಿಗೆ
ಬರೆಯಿರಿ.

ನವಯುಗ

ನ್ಯಭಚಾರಿಣಿ
ಯಾರು ?
ಸಚಿತ್ರವಾಗಿ
ಪ್ರಕಟವಾಗಿದೆ
ಬೆಲೆ ೦—೮—೦.
ಕಿರಿಯರ ಪ್ರಪಂಚ,
ಉಡುಪಿ.

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದ ತುಮುಲನಾದ,

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ, ಅಕ್ಟೋಬರ ೨೨, ೧೯೩೬ [ಸಂಚಿಕೆ ೮

The Canara Industrial and Banking Syndicate, Limited.

(INCORPORATED IN BRITISH INDIA)

ESTD.] **Head Office: "MUKUNDANIVAS", UDIPI.** [1925

BRANCHES:

1 Mangalore
2 Hubli
3 Belgaum
4 Bellary
5 Adoni
6 Hospet
7 Bangalore City
8 Gadag
9 Cannanore
10 Udipi
11 Kanhangad
12 Payyanur
13 Coondapoor
14 Brahmavar
15 Hungarcutta
16 Honavar
17 Kumta
18 Karwar
19 Ankola
20 Sirsi
21 Bhatkal
22 Karkala
23 Uppinangadi.

ANNOUNCEMENT

WE HAVE GREAT PLEASURE IN ANNOUNCING THAT TWO BRANCHES OF THE SYNDICATE, ONE AT KASARGODE. (S. KANARA DT.) and the other at **Sagar** (Shimoga Dt) will be opened in October '36 on the 24th and the 29th respectively, where all kinds of banking business will be transacted. The public are requested to take adavantage of the numerous facilities offered by us.

Paid up Capital: above Rs. 2 lakhs, Deposits: above Rs. 19 lakhs,
Total resources: above Rs. 29 lakhs.

"MUKUNDANIVAS," UDIPI
30—9—1936.

P. A. PAI, Brothers,
Managing Agents

ದ್ವಿತೀಯ ಸಂಸ್ಕರಣ !

ಕಾವ್ಯಸಾಮ್ರಾಜ್ಯ

೪೮ ಆಧುನಿಕ ಕವನಗಳ ಸಂಗ್ರಹ.

ಬೆಲೆ: ೦—೧೨—೦

"ಆಧುನಿಕ ಕವಿಗಳ ಇಂತಹ ಉತ್ತಮ ಸಂಗ್ರಹವನ್ನು ಈ ವರೆಗೆ ಯಾರೂ ಒದಗಿಸಿಕೊಟ್ಟಿರುವುದಿಲ್ಲ. ಇದಕ್ಕಾಗಿ ಕನ್ನಡಿಗರು 'ಕಿರಿಯರ ಪ್ರಪಂಚ'ಕ್ಕೆ ಆಭಾರ ಮನ್ನಿಸಬೇಕು.'

—ಸಂ. ಕರ್ನಾಟಕ.

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖ ರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿರಿ.

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ.

ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸುಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟು ಮತ್ತು ಮೆನೇಜರ್.

ಜಯಕರ್ನಾಟಕದ ಚಂದಾದಾರರಿಗೆ

ಈ ವರ್ಷವು ಅತ್ಯಂತ ಲಾಭಕರ!

ಎರಡು ತಿಂಗಳಿಗೊಮ್ಮೆ ತ್ರಿವರ್ಣ ಚಿತ್ರವನ್ನು ಕೊಡಲಾಗುವುದು.

ಪ್ರತಿ ಸಂಚಿಕೆಯೂ ನಯನಮನೋಹರ ಚಿತ್ರಗಳಿಂದ ತುಂಬಿರುವುದು.

ಹೊಸದಾಗಿ ಚಂದಾದಾರರಾಗುವವರು — ಯಾವ ತಿಂಗಳಲ್ಲಿಯೆ ಆಗಲಿ ಹಿಂದಿನ ಸಂಚಿಕೆಗಳನ್ನೆಲ್ಲ ತರಿಸಿಕೊಂಡು—ವರ್ಷಾರಂಭದಿಂದಲೇ ಆಗಬೇಕು. ಹಾಗು ಈಗಿನ್ನ ಚಂದಾದಾರರಲ್ಲಿ ವರ್ಷ ಮಧ್ಯದಲ್ಲಿ ಅವಧಿ ಮುಗಿಯುವವರು ಮುಂದೆಯೂ ಚಂದಾದಾರರಾಗಿ ಉಳಿಯಬೇಕು. ಇಲ್ಲದಿದ್ದರೆ ಅಪೂರ್ವವಾದ 'ರಾಜರಹಸ್ಯ' ಕಾದಂಬರಿಯು ಅಪೂರ್ಣವಾಗಿ ಅವರಿಗೆ ಅಸಮಾಧಾನವನ್ನುಂಟುಮಾಡೀತು.

ವಾರ್ಷಿಕ ಚಂದಾ ರೂ. ೫—೮—೦

ಜಾಹೀರಾತಿನ ದರಗಳಿಗೂ ಇತರ ಮಾಹಿತಿಗಳಿಗೂ ಬರೆಯಿರಿ.

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು ಇನಾಮುಗಳು.

OUR CUSTOMER
THIS MAN

THIS MAN
WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀಲಕ್ಷ್ಮಿ 1, ವಿಶ್ವೇಶ್ವರ ಪಟ 1, ಈ ೩ ಸಾಮಾನುಗಳು 1 ಆಣೆ ಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಪಸ್ಸಂದು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಪಾಂಪಡವಾಳ್ಗಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳ, ಧಾವಳಿ, ನೆಮಂಡಿ, ತರತರದ ದುಪ್ಪಟ್ಟಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಪದಲು ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55. ಪದಲು ಸಾದಾ 16ಮೊಳದ ಶೀರೆ 1ಕ್ಕೆ ರೂ. 16ರಿಂದ ರೂ. 36ರ ವರೆಗೆ. ಅರೆ ಕರದ 16ಮೊಳ ಕ್ಲಾವರ್ ಅಂಚು ರೂ. 10½ ಯಿಂದ ರೂ 16. ಖಣ 1ಕ್ಕೆ ರೂ. 1½ರಿಂದ ರೂ 10ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಿಸ್, ಕಾಶೀ

THE

PANGAL NAYAK BANK

LIMITED.

ESTABLISHED 1920.

Head Office: UDIPI] [Branch: MANGALORE.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4½% on 1 or 2 years and at 5% on 3 or 4 years deposits.

Every other description of up-to-date Banking business is also undertaken.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು

| ಗುಣ ಬಾರದಿದ್ದರೆ | ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಜಿಸ್ಟರ್ಡ) | ಹಣ ಪರತ |

ಈ ಚೂರ್ಣವು ಕೆಂಪು ಬಿಳೆ ಶರಗಿಗೆ ಶತ್ರುವಾಗಿರುವುದು. ಅನಿಯಮಿತಶರನದಿಂದ ಮುಟ್ಟಾಗುವಿಕೆ, ಕ್ಷೇತ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩. ಟ. ಖ. ಆಣೆ, ೮, ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ ಪಿ. ಖರ್ಚು ಆಣೆ ೮,

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತತೆಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು। ಕೇಳವಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಬೊಂಬಾಯಿಯಲ್ಲಿ ಹಿಂದು ಮುಸಲ್ಮಾನ ಗಲಾಟೆ

45 ಮಂದಿಯ ಕೊಲೆ! 430 ಮಂದಿಗೆ ಜಕಮ್!!

ಹಲವು ಕಟ್ಟಡಗಳು ಸುಟ್ಟುಹಾಕಲ್ಪಟ್ಟವು. ಎಲ್ಲೆಲ್ಲಿಯೂ ಲೂಟಿ, ಗಲಾಟೆ, ಹೋರಾಟಗಳು ನಡೆಯುತ್ತಿರುವುವು.

ಆಹಾರ ಸಾಮುಗ್ರಿಗಳ ಬೆಲೆ ಫಕ್ಕನೆ ಏರಿರುವುದು

ಬೊಂಬಾಯಿಯಲ್ಲಿ 4 ವರ್ಷಗಳ ಹಿಂದೆ ಭೀಷಣ ಹಿಂದು ಮುಸಲ್ಮಾನ ಜಗಳ ನಡೆದು 109 ಮಂದಿ ಕೊಲ್ಲಲ್ಪಟ್ಟು 1900 ಮಂದಿ ಗಾಯಗೊಂಡಿದ್ದರಷ್ಟೆ. ಈಗ ಇದೇ ತಾ. 15ರಲ್ಲು ಪುನಹ ಹಿಂದುಮುಸಲ್ಮಾನ ಗಲಭೆಯದ್ದು ಭಯಂಕರ ಸ್ವರೂಪ ತಾಳಿರುವುದು. ಈ ಕಲಹಕ್ಕೆ ಮೂಲ ಕಾರಣವೆಂದರೆ ಬೈಕುಲದಲ್ಲಿ ಮಾರುತಿ ದೇವಸ್ಥಾನದ ಎದುರಲ್ಲಿ ಸಭಾ ಮಂಟಪವೊಂದನ್ನು ಕಟ್ಟಿಸಲು ನಡೆದ ಏರ್ಪಾಡು. ಈ ಮಂಟಪ ಕಟ್ಟುವ ಸ್ಥಳದ ಬಳಿ ಮಸೀದಿ ಯೊಂದಿರುವುದರಿಂದ ಮಂಟಪ ಕಟ್ಟಬಾರದೆಂದು ಮುಸಲ್ಮಾನರು ಆಕ್ಷೇಪಿಸಿದ್ದರು. ಈ ಕುರಿತು ಬೊಂಬಾಯಿ ಕೊರ್ಪರೇಶನಿನಲ್ಲಿಯೂ ಚರ್ಚೆ ನಡೆದು, ಮಂಟಪ ಕಟ್ಟಬೇಕೆಂಬ ಸೂಚನೆಗೇನೇ ಒಪ್ಪಿಗೆ ದೊರೆಯಿತು. ಈ ಸಂದರ್ಭದಲ್ಲಿ ಮುಸಲ್ಮಾನ ಮೆಂಬರರು ಕೋರ್ಪರೇಶನಿನ ಸಭೆ ಬಿಟ್ಟು ಹೋಗಿದ್ದರು.

ಇದೇ ತಾ. 15ನೇ ಬೆಳಿಗ್ಗೆ ಮಾರುತಿ ದೇವಸ್ಥಾನದ ಸಭಾ ಮಂಟಪ ಕಟ್ಟುವ ಕೆಲಸವು ಆರಂಭವಾದಾಗ ಉದ್ವೇಗಗೊಂಡ ಮುಸಲ್ಮಾನ ಗುಂಪೊಂದು ಅದನ್ನು ತಡೆಯಲೆತ್ನಿಸಿತು. ಆಗ ದೇವಸ್ಥಾನದ ಬಳಿ ಬಂದೋಬಸ್ತಿಗಾಗಿರಿಸಲ್ಪಟ್ಟಿದ್ದ ಪೋಲೀಸರು ಕೆಲವು ಮಂದಿ ಮುಸಲ್ಮಾನರನ್ನು ದಸ್ತಗಿರಿ ಮಾಡಿದರು. ಇದರಿಂದ ಮುಸಲ್ಮಾನ ಜನಸ್ತೋಮವು ತಲೆಗೆಟ್ಟು "ಅಲ್ಲಾ ಹೋ ಅಕ್ಬರ್" ಎಂದು ಕೂಗುತ್ತಾ ಪೋಲೀಸರಮೇಲೆ ಕಲ್ಲು ಮೊದಲಾದುವುಗಳನ್ನೆಸೆಯಲಾರಂಭಿಸಿತು. ಆಗ ಪೋಲೀಸರು ಲಾಠಿ ಪ್ರಯೋಗ ಮಾಡಿ ಜನರನ್ನು ಚೆದರಿಸಿದರು. ಪೋಲೀಸರು 3 ಮಂದಿ ಹಿಂದುಗಳು ಮತ್ತು 3 ಮಂದಿ ಮುಸಲ್ಮಾನರನ್ನು ಕೈದುಮಾಡಿ ಲೋರಿಯಲ್ಲಿ ಹಾಕಿ ಸ್ಟೇಶನಿಗೊಯ್ಯುವಾಗ ಜನರು ಲೋರಿಯನ್ನಾವರಿಸಿ ಪೋಲೀಸರ ಮೇಲೆ ಕಲ್ಲುಮೊದಲಾದುವನ್ನೆಸೆದರು. ಪೋಲೀಸ್ ಕನ್‌ಸ್ಟೆಬ್ಲನೊಬ್ಬನಿಗೆ ಬಲವಾದ ಪೆಟ್ಟಾಯಿತು. ಡಿಪ್ಯುಟಿ ಇನ್‌ಸ್ಪೆಕ್ಟರ್ ಗಾರ್ಡಿನರರು ಈ ಕನ್‌ಸ್ಟೆಬ್ಲನ ಸಹಾಯಕ್ಕೆ ಹೋದಾಗ ಜನರು ಅವರನ್ನೂ ಮುತ್ತಿ ಅವರಮೇಲೆ ಕಲ್ಲೆಸೆದರು. ಅವರು ಪಿಸ್ತೂಲು ಹೊರ ತೆಗೆದು ತೋರಿಸಿದಾಗ ಜನರು ಬೈಕುಲ ಸಂಕದ ಕಡೆಗೋಡಿ ಅಲ್ಲಿ ಹೋರಾಟವಾರಂಭವಾಯಿತು. 3 ಮಂದಿ ಹಿಂದುಗಳು ತಿವಿಯಲ್ಪಟ್ಟರು. ಪೋಲೀಸರು ಲೋರಿಗಳಲ್ಲಿ ಸಂಕದ ಬಳಿಗೆ ಧಾವಿಸಿ ಜನರನ್ನು ಚೆದರಿಸಿದರು. ಅನಂತರ ಗಲಾಟೆಯು ಇತರ ಸ್ಥಳಗಳಿಗೂ ಹಬ್ಬಿತು. ಕೂಡಲೆ ಪೋಲಿಸರು ಅಲ್ಲಲ್ಲಿ ಧಾವಿಸಿ ದೊಡ್ಡ ಹೋರಾಟವಾಗದಂತೆ ತಡೆದರು. ಆದರೆ ಅಲ್ಲಲ್ಲಿ ರಸ್ತೆಗಳ ಸಂದುಗೊಂದು ಮತ್ತು ಗಲ್ಲಿಗಳಲ್ಲಿ ಜಗಳಗಳು ನಡೆಯಲಾರಂಭಿಸಿದವು. ಮುಸಲ್ಮಾನ ಜನಸ್ತೋಮವು ಟ್ರೈನು ಮೋಟರು ಮತ್ತು ಇತರ ವಾಹನಗಳನ್ನು ತಡೆದು ಕಲ್ಲೆಸೆದು ಹಾವಳಿ ಮಾಡ ತೊಡಗಿತು.

ಗಲಾಟೆಯ ಸ್ಥಳಗಳಲ್ಲೆಲ್ಲಾ ಅಂಗಡಿಗಳು ಮುಚ್ಚಲ್ಪಟ್ಟಿರುವವು. ಬೈಕುಲ, ಭೆಂಡಿಬಜಾರ್, ಡೋಂಗ್ರಿ, ನಾಗಪಾಡ ಮತ್ತು ಫೋರಸ್ ರೋಡ್‌ಗಳಲ್ಲಿ ಗಲಾಟೆಯು ಪ್ರಬಲವಾಗಿ ಹಬ್ಬಿರುವುದು. ಮುಸಲ್ಮಾನರಿರುವ ಪ್ರದೇಶಗಳಲ್ಲೆಲ್ಲಾ ಕರ್ಫ್ಯೂ ಆಚರಿಸಲ್ಪಟ್ಟಿದೆ. 5 ಕ್ಕಿಂತ ಹೆಚ್ಚು ಮಂದಿ ಒಟ್ಟು ಸೇರಬಾರದು, ಆಯುಧಗಳನ್ನು ಹಿಡಕೊಂಡು ಹೋಗಬಾರದೆಂದು ನಿಷೇಧಿಸುವ ಕಾನೂನುಗಳು ಜ್ಯಾರಿ ಮಾಡಲ್ಪಟ್ಟಿವೆ.

ರಾತ್ರಿಯಾದೊಡನೆಯೇ ಗಲಾಟೆಯು ಹೆಚ್ಚಿರುವುದು. ನಾಗಪಾಡ ಪ್ರದೇಶದಲ್ಲಿ ಹಿಂದುಗಳಿಗೂ ಮುಸಲ್ಮಾನರಿಗೂ ತೀವ್ರ ಹೋರಾಟ ನಡೆದಾಗ ಪೋಲೀಸರು 4 ಸಲ ಗುಂಡು ಹಾರಿಸಿ ಜನರನ್ನು ಚೆದರಿಸಿದರು. ಪಟ್ಟಣದ ಇನ್ನಿತರ 4 ಕಡೆಗಳಲ್ಲಿಯೂ ಪೋಲೀಸರು ಗುಂಡುಹಾರಿಸಬೇಕಾಯಿತು. ತಾ. 15ನೇ ರಾತ್ರಿಯ ವರೆಗೆ 14 ಮಂದಿ ಕೊಲ್ಲಲ್ಪಟ್ಟು 170ಕ್ಕಿಂತಲೂ ಮಿಕ್ಕವರು ಗಾಯಗೊಂಡಿದ್ದರು. ಇವರಲ್ಲಿ ಹೆಚ್ಚಿನವರು ಹಿಂದುಗಳು.

ತಾ. 16ನೇ ಬೆಳಿಗ್ಗೆ ಉಮರ್‌ಖಾಡಿ ಜೈಲಿನ ಬಳಿ ಪುನಹ ಹಿಂದು ಮುಸಲ್ಮಾನ ಹೋರಾಟ ನಡೆದಾಗ ಪೋಲೀಸರು ಗುಂಡು ಹಾರಿಸಿ ಜನರನ್ನು ಚೆದರಿಸಿದರು. ರಾತ್ರಿ 10 ಘಂಟೆಯಿಂದ ಬೆಳಿಗ್ಗೆ 6 ಘಂಟೆಯ ವರೆಗೆ ಜನರಾರೂ ಮನೆಬಿಟ್ಟು ಹೋಗಬಾರದೆಂದು ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಹುಕುಮು ಜ್ಯಾರಿಮಾಡಿರುವರು. ಡೋಂಗ್ರಿಯಲ್ಲಿರುವ ಮುಸಲ್ಮಾನ ಅಂಗಡಿಯೊಂದು ಲುಟಾಯಿಸಲ್ಪಟ್ಟಾಗ ಪೋಲೀಸರು ಒಂದು 3 ಮಂದಿಯನ್ನು ದಸ್ತಗಿರಿ ಮಾಡಿರುವರು. ಮೋಜಮೋಹಲ್ಲ ಪ್ರದೇಶದಲ್ಲಿರುವ ದೇವಸ್ಥಾನವೊಂದನ್ನೊಡೆದು ಪೂಜಾರಿಯ ಸಾಮಾನುಗಳೆಲ್ಲಾ ಒಯ್ಯಲ್ಪಟ್ಟಿವೆ. ಮೂರ್ತಿಯು ಒಡೆದು ಹಾಕಲ್ಪಡಲಿದ್ದಾಗ ಪೋಲೀಸರು ಬಂದು ತಡೆದು 6 ಮಂದಿ ಮುಸಲ್ಮಾನರನ್ನು ಕೈದುಮಾಡಿದರು.

ತಾ. 17ರಲ್ಲು ಗಲಾಟೆಯು ಅತ್ಯಂತ ಭೀಷಣ ಸ್ವರೂಪ ತಾಳಿರುವುದು. ಕೊಲ್ಲಲ್ಪಟ್ಟವರ ಮತ್ತು ಗಾಯಗೊಂಡವರ ಸಂಖ್ಯೆಯು 38 ಮತ್ತು 360ಕ್ಕೆ ಮುಟ್ಟಿರುವುದು. ಪೋಲೀಸರು ಆಗಾಗ ಗಲಾಟೆಗಾರರ ಮೇಲೆ ಗುಂಡೆಸೆದು ಚೆದರಿಸಬೇಕಾಯಿತು. ಗಲಾಟೆಯು ಯಾವ ತರದ ಭಾಗವನ್ನೂ ವಹಿಸದೆ ತಮ್ಮ ಕೆಲಸಕ್ಕಾಗಿ ಹೋಗುತ್ತಿರುವವರ ಮೇಲ ಬಿದ್ದು ಅವರನ್ನು ನಿಷ್ಕರುಣವಾಗಿ ತಿವಿದು ಹಾಕುವ ಅತ್ಯಾಚಾರವು ಗಲಾಟೆಯ ಸ್ಥಳಗಳಲ್ಲೆಲ್ಲಾ ನಡೆಸಲ್ಪಡುತ್ತಿವೆ. 14 ವರ್ಷದ ಹುಡುಗನೊಬ್ಬನನ್ನು ತಿವಿದು ಕೊಂದು ಶವವನ್ನು ತುಂಡುತುಂಡಾಗಿ ಕಡಿದು ಹಾಕಲಾಗಿದೆ. ದಿಗಿಲುಗೊಂಡ ಜನರು ಕೆಲವರು ಬೊಂಬಾಯಿ ಬಿಟ್ಟು ಬೇರೆ ಬೇರೆ ಕಡೆಗಳಿಗೆ ಹೋಗುತ್ತಿದ್ದಾರೆ. ಇದೇ ತಾ. 17ರಲ್ಲು ಪೋಲೀಸ್ ಕಮಿಶನರ ಆಮಂತ್ರಣದ ಮೇರೆಗೆ ಎರಡೂ ಸಮಾಜಗಳ ಮುಖಂಡರ ಸಭೆ ಸೇರಿ ಶಾಂತಿಸ್ಥಾಪನೆಯ ಕುರಿತು ಚರ್ಚೆ ನಡಿಸಿದರು. ಗಲಾಟೆ ಮಾಡದೆ ಶಾಂತತೆಯಿಂದ ನಡೆದು ಬೊಂಬಾಯಿಯ ಹೆಸರನ್ನುಳಿಸಬೇಕೆಂದು ವಿನಂತಿಸುವ ಹೇಳಿಕೆಯೊಂದನ್ನು ಹಿಂದು ಮುಸಲ್ಮಾನ ಮುಖಂಡರು ಇಂದು ರಾತ್ರಿ ಹೊರಡಿಸಿರುವರು.

ಗಲಾಟೆಯು ಬೈಕುಲದಿಂದ ಕಾಮಾಟಿಪುರ, ಮದನ್‌ಪುರ ಮತ್ತು ನಾಲ್ಬಜಾರಿಗೆ ಪ್ರಬಲವಾಗಿ ಹಬ್ಬಿ ಈ ಸ್ಥಳಗಳಲ್ಲಿ ಹಿಂದು ಮುಸಲ್ಮಾನ ಪಂಗಡಗಳೊಳಗೆ ಅನೇಕ ತರದ ತೀವ್ರ ಹೋರಾಟ ನಡೆಯಿತು. ದೊಣ್ಣೆ, ಕಲ್ಲು, ಚೂರಿಯೇ ಮೊದಲಾದುವುಗಳೇ ಹೋರಾಟದ ಆಯುಧಗಳು. ಪೋಲೀಸರು ಈ ಹೋರಾಟದ ಸ್ಥಳಗಳಿಗೆಲ್ಲಾ ಧಾವಿಸಿ ಹಲವು ಸಲ ಗುಂಡು ಹಾರಿಸಿ ಗಲಾಟೆ ನಿಲ್ಲಿಸಲೆತ್ನಿಸಿದರು. ಒಂದು ಮಸೀದಿ ಮತ್ತು ಇನ್ನೊಂದು ದೇವಸ್ಥಾನಕ್ಕೆ ಬೆಂಕಿ ಕೊಡಲು ನಡೆದ ಪ್ರಯತ್ನವನ್ನು ಪೋಲೀಸರು ತಡೆಗಟ್ಟಿದರು.

ಜಿಲ್ಲಾ ಭಾಗಗಳಿಂದ 500 ಪೋಲೀಸರು ಹೆಚ್ಚಿಗೆಯಾಗಿ ತರಿಸಲ್ಪಟ್ಟಿರುವರು. ಗಲಾಟೆಗಾರರು ಟ್ರೇಮು ಕಾರುಗಳ ಮೇಲೆಲ್ಲಾ ಕಲ್ಲೆಸೆಯುತ್ತಿದ್ದರು. ಆ ಪ್ರಗಳಲ್ಲಿ ಜನರಾರೂ ಹೋಗುತ್ತಿದ್ದಿಲ್ಲ. ಸಂಜೆಯಾದಂತೆ ಗಲಾಟೆಯು ಮತ್ತಷ್ಟು ಹೆಚ್ಚಿತು. ಜನತೆಯು ಪೋಲೀಸರೊಡನೆ ಕಣ್ಣು ಮುಚ್ಚಾಟವಾಡುತ್ತಿದ್ದಂತೆ ತೋರುತ್ತಿತ್ತು. ಪೋಲೀಸರು ಬಂದಡೆ ಗಲಾಟೆ ನಿಲ್ಲಿಸಿದೊಡನೆಯೇ ಇನ್ನೊಂದೆಡೆ ಉಂಟಾಗುತ್ತಿತ್ತು. ಅಲ್ಲಿ ಹೋದೊಡನೆಯೇ ಇನ್ನೊಂದೆಡೆ ತಲೆಯೆತ್ತುತ್ತಿತ್ತು. ಕೆಲವು ಕಡೆ ಗಲಾಟೆಗಾರರು ಮನೆಮಾಡುಗಳ ಮೇಲೇರಿ ಪೋಲೀಸರ ಮೇಲೆ ಕಲ್ಲೆಸೆಯುತ್ತಿದ್ದರು. ಬೂಲೇಶ್ವರ್ ಠಾಕೂರ್‌ದ್ವಾರ್ ಎಂಬಲ್ಲಿ 3 ಮುಸಲ್ಮಾನ ಅಂಗಡಿಗಳು ಲುಟಾಯಿಸಲ್ಪಟ್ಟಿರುವವು, ಇಷ್ಟರ ವರೆಗೆ 8 ಅಂಗಡಿಗಳು ಲುಟಾಯಿಸಲ್ಪಟ್ಟಿವೆ. ಪೋಲೀಸರ ಗೋಳೀಬಾರಿನಿಂದ 24 ಮಂದಿ ಜಖಮು ಹೊಂದಿರುವರೆಂದು ತಿಳಿಯಬರುತ್ತದೆ. ಮದನಪುರ ಮತ್ತು ಕಮಾಟಿಪುರದಲ್ಲಿ ಹಿಂದುಮುಸಲ್ಮಾನ ಹೋರಾಟವು ಹಲವು ಸಲ ನಡೆದು ಪೋಲೀಸರು ಹಲವು ಸಲ ಲಾಠಿಪ್ರಹರ ಮತ್ತು ಗುಂಡು ಹಾರಿಸಿ ಜನತೆಯನ್ನು ಚೆದರಿಸಿದರು. ಫೋರಸ್ ರೋಡ್ ಎಂಬಲ್ಲಿ ಕ್ರೋಧಗೊಂಡ ಮುಸಲ್ಮಾನ ಜನಸ್ತೋಮವು ಪೋಲೀಸರ ಮೇಲೆ ಕಲ್ಲೆಸೆಯಿತು. ಆಗ ಪೋಲೀಸರು ಗುಂಡೆಸದು 3 ಮಂದಿ ಕೊಲ್ಲಲ್ಪಟ್ಟರು.

ತಾ. 17ನೇ ಬೆಳಿಗ್ಗೆ ಪುನಹ ಗಲಾಟೆಯು ಭೀಕರ ಸ್ವರೂಪ ತಾಳಿ 2 ಮಂದಿ ಕೊಲ್ಲಲ್ಪಟ್ಟು 50 ಮಂದಿ ಗಾಯಗೊಂಡಿರುವರು. ಕಟ್ಟಡಗಳಿಗೆ ಬೆಂಕಿ ಕೊಡುವ, ಅಂಗಡಿಗಳನ್ನು ಲುಟಾಯಿಸಿ ಸುಟ್ಟುಹಾಕುವ ಸಾಮುದಾಯಿಕವಾಗಿ ಹೊಡದಾಟ ನಡಿಸುವ ಅಕೃತ್ಯಗಳು ಇಂದು ಹೆಚ್ಚಾಗಿದ್ದುವು. ದೇವಸ್ಥಾನ, ಮಸೀದಿ ಮತ್ತು ಅಂಗಡಿಗಳಿಗೆ ಬೆಂಕಿ ಕೊಟ್ಟುದನ್ನು ನೊಂದಿಸುವುದಕ್ಕಾಗಿ 12 ಸಲ ಫಾಯರ್ ಬ್ರಿಗೇಡನ್ನು ಹೊರ ಕರೆಯಲಾಯಿತು ಪೋಲೀಸರು 7 ಸಲ ಗೋಳಿಬಾರು ಮಾಡಿದರು. ಫಕ್ಲೆಂಡ್ ರೋಡ್ ಎಂಬಲ್ಲಿ ಗಲಾಟೆಗಾರರು ಪೋಲೀಸರ ಮೇಲೆ ಕಲ್ಲು ಮತ್ತು ಬಾಟ್ಲಿಗಳನ್ನೆಸೆದಾಗ ಅವರು ಗುಂಡೆಸದು ಇಬ್ಬರು ಗಾಯಗೊಂಡಿರುವರು. ಕಮಾಟಿಪುರದಲ್ಲಿ ಮುಸಲ್ಮಾನಪುಂಡರು ಹಿಂದು ದೇವಸ್ಥಾನಕ್ಕೆ ಬೆಂಕಿ ಕೊಡಲೆತ್ನಿಸಿದಾಗ ಪೋಲೀಸರು ಗೋಳಿಬಾರು ಮಾಡಿ ಚೆದರಿಸಿದರು. ಕಾಳಾದೇವಿ ಮತ್ತು ಚಂದನವಾಡಿ ಎಂಬಲ್ಲಿ ಗಲಾಟೆಗಾರರು ಅಂಗಡಿಗಳನ್ನು ಲುಟಾಯಿಸಿ ಅವುಗಳಿಗೆ ಬೆಂಕಿಕೊಟ್ಟರು. ಪೋಲೀಸರು ಗುಂಡು ಹಾರಿಸಿ ಒಬ್ಬನು ಕೊಲ್ಲಲ್ಪಟ್ಟನು.

ಮಹಮ್ಮದೀಯರಿರುವಲ್ಲಿರುವ ಹಿಂದು ಅಂಗಡಿಗಳನ್ನೂ ಹಿಂದುಗಳಿರುವಲ್ಲಿರುವ ಮುಸಲ್ಮಾನ ಅಂಗಡಿಗಳನ್ನೂ, ಲುಟಾಯಿಸಿ ಸುಟ್ಟು ಹಾಕುವ ಅಕೃತ್ಯವು ಪ್ರಬಲವಾಗಿ ನಡೆದಿರುವುದು. ಚಾರ್ನಿರೋಡ್ ಸ್ಟೇಶನಿನ ಬಳಿಯ ಅಂಗಡಿಗಳಿಗೆ ಬೆಂಕಿ ಕೊಟ್ಟಾಗ ಬೆಂಕಿಯು ಹತ್ತಿರದ ಮಸೀದಿಯ ಮಾಡಿಗೆ ಹಿಡಿಯಲು ಪೋಲೀಸರು ಬಂದು ಅದನ್ನು ನೊಂದಿಸಿದರು. ಜಮಿಲ್ ಮೊಹಲ್ಲ ಎಂಬಲ್ಲಿರುವ ಲಕ್ಷ್ಮೀನಾರಾಯಣ ದೇವಸ್ಥಾನಕ್ಕೆ ಬೆಂಕಿ ಕೊಡುವ ಪ್ರಯತ್ನವನ್ನು ಪೋಲೀಸರು ತಡೆಗಟ್ಟಿದರು. ಕಮಾಟಿಪುರದಲ್ಲಿ ಮುಸಲ್ಮಾನ ಪುಂಡರು ಬಂದು ದೇವಸ್ಥಾನ ತುಂಬಾ ಬೀಡಿ ಎಲೆ ಹಾಕಿ ಬೆಂಕಿಕೊಟ್ಟರು. ಕಡೆಗೆ ಫಾಯರ್ ಬ್ರಿಗೇಡ್ ಬಂದು ಬೆಂಕಿ ನೊಂದಿಸಲ್ಪಟ್ಟಿತು. ಇದಕ್ಕೆ ಪ್ರತೀಕಾರವಾಗಿ ಹಿಂದುಗಳು ಮುಸಲ್ಮಾನ ಮಸೀದಿಯೊಂದಕ್ಕೆ ಬೆಂಕಿ ಕೊಡಲು ಅದನ್ನೂ ಫಾಯರ್ ಬ್ರಿಗೇಡ್ ಬಂದು ನೊಂದಿಸಿತು.

ಕಮಾಟಿಪುರದಲ್ಲಿ ಮುಸಲ್ಮಾನರು ಹಿಂದು ಅಂಗಡಿಗಳನ್ನು ಲುಟಾಯಿಸಲೆತ್ನಿಸಿದಾಗ ಹಿಂದುಗಳು ತಡೆದು ತೀವ್ರ ಹೋರಾಟ ನಡೆಯಿತು. ಮುಸ್ತಾಂತಂಕ್ ಎಂಬಲ್ಲಿ ಕೆಳಗೆ ದೇವಸ್ಥಾನವೊಂದಿದ್ದ ಮೂರುಪ್ಪರಿಗೆಯ ಕಟ್ಟಡವೊಂದಕ್ಕೆ ಬೆಂಕಿ ಕೊಡಲಾಯಿತು ತಾ. 17 ಸಂಜೆ ಗಲಾಟೆಯು ಗಿರಣಿ ಪ್ರದೇಶಕ್ಕೆ ಹಬ್ಬುವ ಸೂಚನೆಗಳು ತೋರಿ ಬಂದಿರುವವು. ಇಂದು ಬೆಂಕಿ ನೊಂದಿಸಲು ಒಟ್ಟು ೨೩ ಸಲ ಫಾಯರ್

ಆನು ಪುಟದ ೧ನೇ ಕಲಂಗೆ ನೋಡಿರಿ!

ದೇಶದ ಆರ್ಥಿಕ ದುಃಸ್ಥಿತಿ, ಅದರ ಕಾರಣಗಳು ಮತ್ತು ನಿವಾರಣೆ

ಲೇಖಕರು:— ಬಿ. ನಾರಾಯಣ ರಾವ್, ಎಮ್. ಎ. ಸಂಪಾದಕ, ಫೈನೇನ್ಶಿಯಲ್ ಎಕ್ಸ್‌ಪರ್ಟ್ಸ್, ಉಡುಪಿ.

ಕಳೆದ ಆರು ವರ್ಷಗಳಿಂದ ರಶ್ಯಾ ಬಿಟ್ಟು ಭೂಲೋಕದ ಬೇರೆ ಎಲ್ಲಾ ದೇಶಗಳು ಅಸದೃಶ್ಯವಾದ ಆರ್ಥಿಕ ಮುಗ್ಗಟ್ಟಿಗೆ ಗುರಿಯಾಗಿವೆ. ಅದರ ಫಲಿತಾಂಶವಾಗಿ ವ್ಯಾಪಾರಸ್ಥರಿಗೆ ಕಡಿಮೆ ಲಾಭ, ನಿರುದ್ಯೋಗ ಮತ್ತು ವಿಶೇಷವಾದ ಬಡತನವನ್ನು ನಾವು ಎಲ್ಲೆಲ್ಲಿಯೂ ನೋಡಬಹುದು. ಇಂಥಾ ಆರ್ಥಿಕ ದುಸ್ಥಿತಿಗೆ ಕಾರಣವೇನು ಮತ್ತು ಅದನ್ನು ಹೇಗೆ ನಿವಾರಿಸುವುದು, ಎಂದು ಚರ್ಚಿಸುವುದೇ ಈ ಲೇಖನದ ಉದ್ದೇಶ. ವಿಷಯವನ್ನು ಮುಂದರಿಸುವ ಮುಂಚೆ, ಜನರಲ್ಲಿ ಇರುವ ಒಂದೆರಡು ತಪ್ಪು ಗ್ರಹಿಕೆಯನ್ನು ತಿದ್ದಬೇಕಾಗಿದೆ.

ಆರ್ಥಿಕ "ಬಿರುಗಾಳಿ"

ಅನೇಕ ಅರ್ಥ ಶಾಸ್ತ್ರಜ್ಞರು ಈಗಿನ ಆರ್ಥಿಕ ವಿಪ್ಲವವನ್ನು ಬಿರುಗಾಳಿಗೆ ಹೋಲಿಸಿದ್ದಾರೆ. ಈ ಉಪಮೆಯು ಈಗಿನ ಸ್ಥಿತಿಗತಿಗೆ ಅನ್ವಯಿಸುವುದಿಲ್ಲ. ಬಿರುಗಾಳಿಯು ಭೂಕಂಪ, ನೆರೆ, ಇತ್ಯಾದಿಯಂತೆ ನೈಸರ್ಗಿಕ ಕಾರಣಗಳಿಂದ ಆಗುವುದು. ಆದರೆ ಈಗ ಇರುವ ಆರ್ಥಿಕ ಮುಗ್ಗಟ್ಟು ಅಂತಹದೇನೂ ಅಲ್ಲ. ಅದು ಮಾನವನ ಅಂಕೆಯಿಂದ ಹೊರಗೆ ಇಲ್ಲ. ಯೋಗ್ಯವಾದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಿಂದ ಅದನ್ನು ತಡೆಯಬಹುದಿತ್ತು. ಇನ್ನೂ ಯೋಗ್ಯವಾದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಿಂದ ಅದನ್ನು ನಿವಾರಿಸಬಹುದು

ಬಿರುಗಾಳಿ, ಭೂಕಂಪ ಇತ್ಯಾದಿ ಸೃಷ್ಟಿಯ ಪ್ರಕೋಪದಿಂದ ಸಮಾಜದ ಎಲ್ಲಾ ಶ್ರೇಣಿಯಲ್ಲಿರುವ ಜನರಿಗೂ ಕಷ್ಟ-ನಷ್ಟಗಳು ಆಗುವವು. ಆದರೆ ಈಗಿನ ಸ್ಥಿತಿಯು ಹಾಗಿಲ್ಲ. ಕೈಗಾರಿಕೆ, ವ್ಯಾಪಾರ ಮತ್ತು ವ್ಯವಸಾಯ ಮಾಡುವವರೂ ಮತ್ತು ಮಜೂರಿಗೆ ಕೆಲಸ ಮಾಡುವವರೂ ಈ ಮುಗ್ಗಟ್ಟಿನಿಂದ ಬಹಳ ಹಾನಿಹೊಂದಿದ್ದಾರೆ ಸ್ಥಿರವಾದ ಆದಾಯವುಳ್ಳವರು ಅಂದರೆ ಸರಕಾರಿ ಮತ್ತು ಇತರ ನೌಕರರು ಮತ್ತು ಹಣವನ್ನು ಮುಂಚಿತವಾಗಿಯೇ ನಿಶ್ಚಿತವಾದ ದರದಲ್ಲಿ ಬಡ್ಡಿಗೆ ಇಟ್ಟಿರುವವರು.-ಇವರಿಗೆ ಯಾವರೀತಿಯಲ್ಲಿಯೂ ಬಾಧಕವಾಗಲಿಲ್ಲ. ಅದರ ಬದಲಾಗಿ ಅವರಿಗೀಗ ಹಬ್ಬದ ಸಮಯ. ಏಕೆಂದರೆ ಸರಾಸರಿ ಜೀನಸುಗಳ ಕ್ರಯವು ಸೇಕಡಾ ಸುಮಾರು 40ರಂತೆ ಕಡಿಮೆಯಾಗಿದೆ. (ಅಕ್ಕಿ ಇತ್ಯಾದಿ ಧಾನ್ಯಗಳ ಕ್ರಯವು ಅರ್ಧಕ್ಕೆ ಅರ್ಧವಾಗಿವೆ; ವಸ್ತ್ರ ಇತ್ಯಾದಿ ಸಿದ್ಧವಾದ ಸಾಮಾನುಗಳು ಸೇಕಡಾ 33ರಂತೆ ಕಡಿಮೆ ಕ್ರಯಕ್ಕೆ ಸಿಕ್ಕುತ್ತವೆ). ಅಂದರೆ ಅವರ ನಿಜವಾದ ಆದಾಯವು, ಇತರರು ನಷ್ಟವನ್ನು ಅನುಭವಿಸುವಾಗ, ಸೇಕಡಾ 40ರಂತೆ ಹೆಚ್ಚಾಗಿದೆ. ಹೀಗಿರುವಾಗ ಇವರು ಪುನರುಜ್ಜೀವನ ಕಾರ್ಯವನ್ನು ಪ್ರತಿಯೊಂದು ದೇಶದಲ್ಲಿಯೂ ವಿರೋಧಿಸುವುದರಲ್ಲಿ ಏನೂ ಆಶ್ಚರ್ಯವಿಲ್ಲ.

ಕೆಲವರ ಮನಸ್ಸಿನಲ್ಲಿ ಭೂಲೋಕದಲ್ಲಿ ಬೇಕಾದಷ್ಟು ಹಣವಿಲ್ಲವೆಂದೂ ಅದರ ಇಲ್ಲದಿರುವಿಕೆಯೇ ಆರ್ಥಿಕ ಮುಗ್ಗಟ್ಟಿಗೆ ಜವಾಬ್ದಾರಿಯೆಂದೂ ಮತ್ತೂ ಈಗಲೂ ಅದರ ಏಳಿಗೆಗೆ ಮುಖ್ಯವಾದ ತೊಡಕೆಂದೂ ಭಾವನೆ ಇದೆ. ಹಣದ ಕೊರತೆಯು ಮುಗ್ಗಟ್ಟಿನ ಒಂದು ಕಾರಣವೆಂದು ಒಪ್ಪಬಹುದು, ಆದರೆ ಅದು ಕೇವಲ ಒಂದು ಕಾರಣ ಮತ್ತು ಎಲ್ಲಕ್ಕಿಂತಲೂ ಮುಖ್ಯವಾದ ಕಾರಣವಲ್ಲ. ಆರ್ಥಿಕ ಏಳಿಗೆಗೆ ಹಣದ ಅಡಚಣೆಯೇ ಅಡ್ಡ ಬಂದು ನಿಲ್ಲುತ್ತದೆ ಎಂಬ ಮಾತಿನಲ್ಲಿ ಸ್ವಲ್ಪವೂ ತಿರುಳಿಲ್ಲ. ಕೆಲವು ತಿಂಗಳ ಹಿಂದೆ ಹಿಂದುಸ್ಥಾನ ಸರಕಾರದವರು ಸೇಕಡಾ 2½ರಂತೆ 1952ನೇ ಇಸವಿಯಲ್ಲಿ ಹಿಂದೆಕೊಡಲ್ಪಡುವ 12 ಕೋಟಿ ರೂಪಾಯಿಯ ಸಾಲವನ್ನು ತೇಲಾಡಿಸಿದರು ಕ್ಷಣಮಾತ್ರದಲ್ಲಿಯೇ 12 ಕೋಟಿಯಲ್ಲಿ 30 ಕೋಟಿ ರೂಪಾಯಿಯಷ್ಟು ಹಣವು ಸರಕಾರಕ್ಕೆ ಅರ್ಪಿಸಲಾಯಿತು. ಅಂದರೆ 18 ಕೋಟಿ ರೂಪಾಯಿಯನ್ನು ಸರಕಾರದವರು ಬೇಡವೆಂದು ಹೇಳುವ ಸಂದರ್ಭವು ಬಂತು. ಅದೇ ಪ್ರಕಾರ ಸರಕಾರದವರು ಹೊರಡಿಸುವ ಅಲ್ಪ ಅವಧಿಯ ಸಾಲಗಳ (Treasury Bills) ಅಂದರೆ ಒಂದು ವರ್ಷಕ್ಕಿಂತ ಕಡಿಮೆ ಸಮಯಕ್ಕೆ ತೆಗೆದುಕೊಳ್ಳುವ ಸಾಲಗಳು ಬಡ್ಡಿಯ ದರವು ಈಗ 100 ರೂಪಾಯಿಗೆ 7 ಆಣೆಯಂತೆ ಆಗಿರುತ್ತದೆ. 100 ರೂಪಾಯಿಗೆ 7 ರೂಪಾಯಿ ಬಡ್ಡಿಯನ್ನು ಅಲ್ಪ ಅವಧಿಯ ಸಾಲಗಳ ಮೇಲೆ ಕೊಡುವ ಸಮಯವೊಂದಿದ್ದಿತು. ಆದುದರಿಂದ ಭೂಲೋಕದಲ್ಲಿ ಈಗ ಹಣವಿಲ್ಲವೆಂಬ ಮಾತು ಸುಳ್ಳು. ಹಾಗಾದರೆ ಆರ್ಥಿಕ ಮುಗ್ಗಟ್ಟಿನ ಕಾರಣವೇನು? ಅದನ್ನು ಹೇಗೆ ನಿವಾರಿಸುವುದು?

ಹಣದ ಅಭಾವ

ಮೇಲೆ ಹೇಳಿದಹಾಗೆ ಹಣದ ಕೊರತೆಯು ಒಂದು ಕಾರಣವಾಗಿದೆ. ಬೇಕಾದಷ್ಟು ಚಿನ್ನ-ಕರೆನ್ಸಿ ನೋಟುಗಳನ್ನು ಯಾವುದರ ಆಧಾರದ ಮೇಲೆ ಸರಕಾರ ಅಥವಾ ದೇಶದ ಕೇಂದ್ರ ಬ್ಯಾಂಕು (Central Bank) ಕೊಡುವವೋ ಆ ಲೋಹ–ಇಲ್ಲವೆಂದಲ್ಲ. ಆದರೆ ಚಿನ್ನವು ಭೂಲೋಕದ ಸಾಲಗಾರ ದೇಶಗಳಾದ ಅಮೇರಿಕದ ಸಂಯುಕ್ತ ಸಂಸ್ಥಾನ ಮತ್ತು ಫ್ರಾನ್ಸಿನಲ್ಲಿ ಅವುಗಳ ಆಮದುಗಳಿಗಿಂತ ರಫ್ತುಗಳೇ ಹೆಚ್ಚಾದ್ದರಿಂದ ಕೇಂದ್ರೀಕರಿಸಲ್ಪಟ್ಟವು. ಮುಂಚಿನ ಕಾಲದಲ್ಲಿಯಾದರೋ ಒಂದು ದೇಶಕ್ಕೆ ಹೆಚ್ಚು ಚಿನ್ನ ಬಂದರೆ ಅದು ಅದನ್ನು ಬೇರೆ ದೇಶಗಳಿಗೆ ಸಾಲಕೊಟ್ಟು ಅಥವಾ ತನಗೆ ಅನುಕೂಲವಾದ ಪರದೇಶಿ ವ್ಯಾಪಾರದ ಫಲವಾಗಿ ಬರಬೇಕಾದ ಚಿನ್ನದ ಮೊಬಲಗಿನಷ್ಟು ಸರಕನ್ನು ಇತರ ದೇಶಗಳಿಂದ ಆಮದು ಮಾಡುತ್ತಿತ್ತು ಹೀಗೆ ಪ್ರತಿಯೊಂದು ದೇಶದಲ್ಲಿ ಸಾಕಷ್ಟು ಚಿನ್ನವಿದ್ದು ಪ್ರಪಂಚದ ಒಳಗಿನ ಹಾಗೂ ಹೊರಗಿನ ವ್ಯಾಪಾರವು ಸಾಂಗವಾಗಿ ನಡೆಯುತ್ತಿತ್ತು. ಆದರೆ ಜರ್ಮನಿ, ಆಸ್ಟ್ರಿಯ ಇತ್ಯಾದಿ ರಾಷ್ಟ್ರಗಳಲ್ಲಿ ರಾಜಕೀಯ ಕ್ರಾಂತಿ ಇದ್ದುದರಿಂದ ಸಾಲಗಾರ ದೇಶಗಳು ಇವುಗಳಿಗೆ ಸಾಲಕೊಡಲಿಕ್ಕೆ ಕೇಳಲಿಲ್ಲ. ಅದೇ ರೀತಿಯಲ್ಲಿ ಆರ್ಥಿಕ ಸ್ವಯಂಸಾಕಾಗುವಿಕೆ(Economic self-suffiency)ಯ ತತ್ವದ ಪ್ರಕಾರ ಪರದೇಶದಿಂದ ಬರುವ ಆಮದುಗಳನ್ನು ಕಡಿಮೆಮಾಡಿದವು. ಈ ವಿಷಯದಲ್ಲಿ ಅಮೇರಿಕವು ದೊಡ್ಡ ಅಪರಾಧಿಯೆಂದು ಹೇಳಬಹುದು. ಹೀಗಿರುವಾಗ ಒಂದೆರಡು ದೇಶಗಳಲ್ಲಿ ಕೇಂದ್ರಿಸಲ್ಪಟ್ಟ ಚಿನ್ನಕ್ಕೆ "ಬಂಜೆತನ" (Sterilisation of gold) ಪ್ರಾಪ್ತವಾಗಲು, ಪ್ರಪಂಚದ ವಾಣಿಜ್ಯ ವ್ಯವಹಾರವನ್ನು ನಡೆಸಲಿಕ್ಕೆ ಸಾಕಷ್ಟು ಚಿನ್ನವಿರಲಿಲ್ಲ. ಹೀಗೆ ಸಾಲಮಾಡಿದ ದೇಶಗಳಲ್ಲಿ ಉತ್ಪನ್ನದ ಪರಿಣಾಮವೂ ಮುಂಚಿನಷ್ಟೆ ಅಥವಾ ಅದಕ್ಕಿಂತಲೂ ಹೆಚ್ಚಾದರೂ, ಚಿನ್ನದ ಅಭಾವದಿಂದ ಜೀನಸುಗಳ ಕ್ರಯವು ಕುಗ್ಗಿದವು. ಕ್ರಮೇಣವಾಗಿ ಧಾರಣೆಯ ಇಳಿತವು ಸಾಲಕೊಟ್ಟ ದೇಶಗಳಿಗೂ ಹಬ್ಬಿದವು. ಏಕೆಂದರೆ ಮೊತ್ತಮೊದಲು ಆರ್ಥಿಕ ಮುಗ್ಗಟ್ಟಿಗೆ ಒಳಗಾದ ದೇಶಗಳು ಅದರಿಂದ ಹಾನಿಯಾದ ತನ್ನ ಕೈಗಾರಿಕೆಗಳನ್ನು ಕಾಪಾಡುವುದಕ್ಕಾಗಿ ಸಾಲಕೊಟ್ಟ ದೇಶಗಳಿಂದ ಆಮದುಮಾಡಲಿಕ್ಕೆ ಕೇಳಲಿಲ್ಲ. ಆದುದರಿಂದ ಈ ದೇಶಗಳ ವ್ಯಾಪಾರಕ್ಕೂ, ಚಿನ್ನದ ವಿಪುಲತೆಯಿದ್ದರೂ, ಕುಂದಕ ಬಂದಿತು. ಇದ್ದ ಜೀನಸುಗಳನ್ನು ದೇಶದ ನಿವಾಸಿಗಳಿಗೆ ಮಾರುವುದೆಂದರೆ, ದೇಶದಲ್ಲಿ ಅವುಗಳಿಗೆ ಗಿರಾಕಿಯಿಲ್ಲ. ಈ ರೀತಿಯಲ್ಲಿ ಆರ್ಥಿಕ ದುಃಸ್ಥಿತಿಯು ವಿಶ್ವವ್ಯಾಪಕವಾಯಿತು.

ಮಿತಿ ಮೀರಿದ ಉತ್ಪನ್ನ.

ಆದರೆ ಆರ್ಥಿಕ ದುಃಸ್ಥಿತಿಯ ಮೂಲ ಕಾರಣವು ಬೇರೆಯಾಗಿರುತ್ತದೆ. 1913 ರಿಂದ 1929 ನೇ ಇಸವಿ (ದುಃಸ್ಥಿತಿಯು ಶುರುವಾದ ವರ್ಷ)ಯವರೇಗೆ ಪ್ರಪಂಚದ ಆಹಾರ ಸಾಮಾಗ್ರಿಗಳ ಮತ್ತು ಕೈಗಾರಿಕೆಗೆ ಬೇಕಾದ ಅಸಿದ್ಧ ಪದಾರ್ಥಗಳ ಉತ್ಪನ್ನವು ಜನಸಂಖ್ಯೆಯ ಅಭಿವೃದ್ಧಿಗಿಂತ ಮೂರರಷ್ಟು ಹೆಚ್ಚಿತು. ಹಾಗೆಯೇ ಸಿದ್ಧ ಪದಾರ್ಥಗಳ ಉತ್ಪನ್ನವೂ ವಿಶೇಷವಾಗಿ ಹೆಚ್ಚಿತು. ಹೀಗಿರುವಾಗ ಸಂಪತ್ತಿನ ಅಭಿವೃದ್ಧಿಯು ಸಂತಾನದ ಅಭಿವೃದ್ಧಿಗಿಂತ ಕಡಿಮೆಯೆಂದೂ ಇದೇ ಈಗ ಇರುವ ಬಡತನಕ್ಕೂ ನಿರುದ್ಯೋಗಕ್ಕೂ ಕಾರಣವೆಂದು ಜನನಸಂಯಮನ (birth control) ವಾದಿಗಳು ಹೇಳುವುದರಲ್ಲಿ ಅರ್ಥವಿಲ್ಲ. ಮಿತ ಸಂತತಿಗೆ ವೈಯ್ಯಕ್ತಿಕ ಕಾರಣಗಳಿರಬಹುದು; ಆದರೆ ಆರ್ಥಿಕ ಕಾರಣಗಳೇನು ಇಲ್ಲ. ಆದರೆ ಈ ವಿಷಯವು ಬೇರೆ. ಹೀಗೆ ಪ್ರಪಂಚದ ಉತ್ಪನ್ನವು ಹೆಚ್ಚಾಗುವುದಕ್ಕೆ ಕಾರಣವೇನು. ಮತ್ತು ಅದು ಹೇಗೆ ಈಗಿನ ಆರ್ಥಿಕ ದುಃಸ್ಥಿತಿಗೆ ಕಾರಣವಾಯಿತೆಂದು ಪ್ರಕೃತ ನಿಷ್ಕರ್ಷಿಸಬೇಕಾದ ವಿಚಾರ.

ಆಧುನಿಕ ಯಂತ್ರಗಳ ಅಸಾಧಾರಣವಾದ ಸಾಮರ್ಥ್ಯದಿಂದ ಖರ್ಚು ಹೆಚ್ಚದೆ ಉತ್ಪನ್ನವನ್ನು ವೃದ್ಧಿಗೊಳಿಸಲಿಕ್ಕೆ ಸಾಧ್ಯವಾಯಿತು. ಮತ್ತೊಂದ ರೀತಿಯಲ್ಲಿ ನೋಡಿದರೆ, ಯಂತ್ರದ ಸಾಮರ್ಥ್ಯವು ಹೆಚ್ಚು ಆದಹಾಗೆ, ಉತ್ಪನ್ನದ ವಿಧಾನದಲ್ಲಿ ಯಂತ್ರವು ಮನುಷ್ಯನ ಸ್ಥಾನವನ್ನಾಕ್ರಮಿಸಿತು. ಇದಕ್ಕೆ 'ಕೈಗಾರಿಕೆಯ ವಿವೇಕೀಕರಣ' (Rationalisation of Industry) ಎಂದು ಹೆಸರು. ಇದು ಎಷ್ಟರ ಮಟ್ಟಿಗೆ ನಿರುದ್ಯೋಗವನ್ನು ಉಂಟುಮಾಡಿತು ಎಂದು ಮುಂದೆ ತಿಳಿಯುವುದು. ಮತ್ತೊಂದು ಕಾರಣವೇನೆಂದರೆ ಕಳೆದ ಯುದ್ಧದ ನಂತರ ಅನೇಕ ಹೊಸ ರಾಷ್ಟ್ರಗಳು (ಪೋಲೇಂಡ್, ರುಮೇನಿಯ ಇತ್ಯಾದಿ) ಹುಟ್ಟಿದವು. ಈ ಚಿಕ್ಕ ರಾಷ್ಟ್ರಗಳು ತಮ್ಮ ಆರ್ಥಿಕ ಆವಶ್ಯತೆಗಳಿಗಾಗಿ ಪರದೇಶಗಳ ಮೇಲೆ ಅಧೀನವಾಗಿರಬಾರದೆಂಬ ಆಕಾಂಕ್ಷೆಯಿಂದ ಅವುಗಳ ರಫ್ತಿನ ಮೇಲೆ ವಿಶೇಷವಾದ ಸುಂಕವನ್ನು ಏರಿಸಿ ತಮಗೆ ಬೇಕಾದ ಸಾಮಗ್ರಿಗಳನ್ನೆಲ್ಲಾ ದೇಶದ ಒಳಗೇ ತಯಾರು ಮಾಡಿದವು. ಒಟ್ಟಾರೆ "ಆರ್ಥಿಕ ರಾಷ್ಟ್ರತ್ವ" (Economic Nationalism) ಸ್ಫೂರ್ತಿಯಿಂದ ಪ್ರತಿ ಒಂದು ದೇಶವೂ ಇತರ ದೇಶದ ಸಾಮಾನುಗಳ ಮೇಲೆ ಆಮದು ಸುಂಕವನ್ನು ಏರಿಸಿ, ದೇಶದ ಮೇರೆಯೊಳಗೇ ಸಿದ್ಧ ಹಾಗೂ ಅಸಿದ್ಧ ಪದಾರ್ಥಗಳ ಉತ್ಪನ್ನವನ್ನು ವೃದ್ಧಿಗೊಳಿಸಲು ಸಾಹಸ ಪಟ್ಟವು.

ಇಂಥಾ ವಿದ್ಯಮಾನದಿಂದ ಏನಾಯಿತು? ಉತ್ಪನ್ನದ ಪರಿಮಾಣವು ಹೆಚ್ಚಾಯಿತು. ಆದರೆ ಮಿತಿಮೀರಿದ ಉತ್ಪನ್ನಕ್ಕೆ ಗಿರಾಕಿಯಿರಲಿಲ್ಲ. ಪರದೇಶಗಳಲ್ಲಿ ಗಿರಾಕಿಯಿರಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಮೇಲೆ ತಿಳಿಸಿದಂತೆ ಪ್ರತಿಯೊಂದು ರಾಷ್ಟ್ರವೂ "ಆರ್ಥಿಕ ಸ್ವಯಂಸಾಗುವಿಕೆ"ಯ ತತ್ವವನ್ನು ಅವಲಂಬಿಸುತ್ತಿತ್ತು. ದೇಶದ ಒಳಗೆ ಗಿರಾಕಿಯಿಲ್ಲ; ಅಂದರೆ ಎಲ್ಲಾ ಜನರಿಗೂ ಊಟಕ್ಕೂ ಉಡಲಿಕ್ಕೂ ಬೇಕಾದಷ್ಟು ಇತ್ತು ಎಂದು ತಿಳಿಯಬಾರದು; ಆದರೆ ಹೆಚ್ಚಾದ ಉತ್ಪನ್ನವನ್ನೇ ಹೀರುವುದಕ್ಕೆ ಜನತೆಯಲ್ಲಿ ಸಾಕಷ್ಟು "ಕೊಂಡುಕೊಳ್ಳುವ ಶಕ್ತಿ" (purchasing power) ಯಿರಲಿಲ್ಲ. ಹೀಗಿರುವಾಗ ಜೀನಸುಗಳ ಧಾರಣೆಯು ಕುಸಿದು ಬಿದ್ದುದು ಕೇವಲ ಸ್ವಾಭಾವಿಕವಾಗಿದೆ ಒಂದು ವಸ್ತುವಿನ ಒದಗಿಸುವಿಕೆಯು (Supply) ಗಿರಾಕಿ (demand)ಗಿಂತ ಹೆಚ್ಚಿದ್ದರೆ, ಅದರ ಕ್ರಯವು ಬೀಳುವುದು ಅರ್ಥಶಾಸ್ತ್ರದ ಒಂದು ಪ್ರಾಥಮಿಕ ನಿಯಮವಾಗಿದೆ. ಹೀಗೆ ಕ್ರಯವು ಕಡಿಮೆಯಾದಹಾಗೆ ಕೈಗಾರಿಕೆಯಲ್ಲಿ ಪ್ರವೃತ್ತರಾದವರು ಉತ್ಪನ್ನವನ್ನು ಕಡಿಮೆಮಾಡಿದರು. ಅರ್ಥಾತ್ ತಮ್ಮ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ ಕೂಲಿಗಾರರು ನಿರುದ್ಯೋಗಿಗಳಾದರು ಅಥವಾ ಅವರ ಮಜೂರಿ ಕಡಿಮೆಮಾಡಲಾಯಿತು. ವ್ಯವಸಾಯ ಮಾಡುವವರು ತಮ್ಮ ಅವಿವೇಕದಲ್ಲಿ ಮುಂಚಿನ ಪ್ರಕಾರವಾಗಿಯೇ ದವಸಧಾನ್ಯಗಳನ್ನು ಬಿತ್ತುತ್ತಿದ್ದರು. ಆದುದರಿಂದಲೇ ಸಿದ್ಧ ಪದಾರ್ಥಗಳ ಕ್ರಯಕ್ಕಿಂತಲೂ ಅಸಿದ್ಧ ಪದಾರ್ಥಗಳ ಕ್ರಯವೇ ಹೆಚ್ಚುಬೀಳಲಿಕ್ಕೆ ಕಾರಣ.

ಕೈಗಾರಿಕೆಯ ವಿವೇಕೀಕರಣ

"ಕೈಗಾರಿಕೆಯ ವಿವೇಕೀಕರಣ"ಯ ವಿಷಯ ಮೇಲೆ ಮಾತನಾಡಲಾಗಿದೆ. ಇದು ಕೆಲವು ವೇಳೆ ಅಧಿಕವಾದ ಉತ್ಪನ್ನಕ್ಕೆ ಕಾರಣವಾಯಿತು. ಆದರೆ ಇನ್ನೂ ಕೆಲವು ಸಂದರ್ಭಗಳಲ್ಲಿ ಹೀಗೆ ಆಗ ಮುಂಚೆ ಇದ್ದಷ್ಟೇ ಪರಿಮಾಣದ ಉತ್ಪನ್ನದ

ಕೆಲಸವು ಕಡಿಮೆ ಸಂಖ್ಯೆ ಕೂಲಿಗಾರರಿಂದಲೇ ನಡೆಯುವಂತೆ ಮಾಡಿತು. ಹೀಗೆ ಮನುಷ್ಯರ ಬದಲಿಗೆ ಯಂತ್ರವನ್ನೇ ಉಪಯೋಗಿಸಿದರಿಂದ, ಕೈಗಾರಿಕೆಯ ಅಧಿಪತಿಗಳಿಗೆ ಸಿಕ್ಕುವ ಲಾಭದ ಅಂಶವು ಹೆಚ್ಚಿತು. ಏಕೆಂದರೆ ಈಗ ಮುಂಚಿನಗಿಂತ ಕೆಲಸಗಾರರಿಗೆ ಕೊಡುವ ಮಜೂರಿಯು ಕಡಿಮೆಯಾಯಿತು. ಆದರೆ ಇಂಥಾ ಲಾಭವು ಕೇವಲ ತಾತ್ಕಾಲಿಕವಾಗಿ ಪರಿಣಮಿಸಿತು. ಯಂತ್ರದ ಉಪಯೋಗದಿಂದ ನಿರುದ್ಯೋಗಿಗಳಾದ ಜನರ ಕೊಂಡುಕೊಳ್ಳುವ ಶಕ್ತಿಯು ಕುಗ್ಗಿತು; ಅಂದರೆ ತಯಾರಾದ ಸಾಮಾನಿಗೆ ಮುಂಚಿನಷ್ಟು ಗಿರಾಕಿಯಿಲ್ಲ. ಹೀಗೆ ನಿರುದ್ಯೋಗ, ಬಡತನ, ಕ್ರಯದ ಬೀಳುವಿಕೆ-ಇವು ಒಂದು ಮತ್ತೊಂದರ ಬೆನ್ನು ಹತ್ತಿ ಓಡಿದು ಹೋದಂತೆ ತೋರುತ್ತದೆ.

(ಸಶೇಷ)

ಶ್ರೀ ಶಾರದಾ ವಿಜಯ ಕನ್ನಡ

ಧರ್ಮಾರ್ಥ ರಾತ್ರಿಶಾಲೆ

ಮುಂಬಯಿ

ವಿಜಯ ನಗರ ಸಾಮ್ರಾಜ್ಯದ ಆರನೇ ಶತಮಾನದ ಉತ್ಸವಾಚರಣೆಯ ಸಲುವಾಗಿ ಮುಂಬಯಿ ಕನ್ನಡಿಗರ ಸಹಾಯವನ್ನು ಅಪೇಕ್ಷಿಸಿ ಬಂದಿದ್ದ ಶ್ರೀ ಆಲೂರ ವೆಂಕಟರಾವ್, ಬಿ. ಎ., ಎಲ್ ಎಲ್. ಬಿ. ಇವರು ಈ ಶಾಲೆಯನ್ನು ಸಂದರ್ಶಿಸಿ ಈ ರೀತಿ ಅಭಿಪ್ರಾಯಪಟ್ಟರು. 'ನಾನು ಸಂಸ್ಥೆಯನ್ನು ಸಂದರ್ಶಿಸಿದೆನು. ನಿಜವಾಗಿಯೂ ಇದೊಂದು ಪ್ರಯೋಜನವುಳ್ಳ ಸಂಸ್ಥೆ. ಕನ್ನಡಿಗರು ಇದುವರೆಗೂ ತಮ್ಮ ಮಕ್ಕಳಿಗೆ ಕನ್ನಡದಲ್ಲಿ ವಿದ್ಯೆ ಕಲಿಸಬೇಕೆಂಬುದನ್ನು ತಿಳಿಯದಿರುವದು ವಿಷಾದಕರ. ಈ ಶಾಲಾ ಉಪಾಧ್ಯಾಯರ ಪ್ರಯತ್ನದಿಂದ ಮುಂಬಯಿ ಕನ್ನಡಿಗರು ಜಾಗೃತರಾಗಿ ಕರ್ತವ್ಯನಿಷ್ಠರಾಗುವರೆಂದು ನಂಬುತ್ತೇನೆ. ಮತ್ತು ಅಸುಪಾಸಿನಲ್ಲಿ ವಾಸಿಸುವ ಕನ್ನಡಿಗರು ತಮ್ಮ ಮಕ್ಕಳನ್ನು ಈ ಶಾಲೆಗೆ ಕಳುಹಿಸಿ ಪ್ರೋತ್ಸಾಹಿಸಬೇಕೆಂದು ಬೇಡುತ್ತೇನೆ."

ಹೀಗೆ ಯಾಕೆ?

ಗಂಗಾಧರ ಗೋಪಾಲಕೃಷ್ಣ ಹೆಗಡೆ, ಪತ್ರಿಕೋದ್ಯಮ ಶಾಲಾ, **ತುಂಗಭದ್ರಾ**

ಅಸೆಂಬ್ಲಿಯಲ್ಲಿ ಅಮೃತಬಝಾರ ಪತ್ರಿಕಾ ಪ್ರತಿನಿಧಿಯು ಬರಕೂಡದು, ಎಂದು ಅಸೆಂಬ್ಲಿಯ ಅಧ್ಯಕ್ಷರು ಅಪ್ಪಣೆಕೊಡಿಸಿದ್ದಾರೆ. ಕಲಕತ್ತೆಯ ಪತ್ರಿಕೆಗಳೆಲ್ಲವೂ ಇದರಿಂದ ಸಂತಾಪಗೊಂಡಿವೆ. ಈ ವಿಷಯವಾಗಿ ಅಮೃತಬಝಾರ ಪತ್ರಿಕೆಯು ಅಸೆಂಬ್ಲಿಯ ಕಾರ್ಯಕ್ರಮಗಳ ವಿಷಯದಲ್ಲಿ ನಾವು ಬರೆದಿರುವ ಲೇಖಗಳು, ಟೀಕೆ-ಟಿಪ್ಪಣಿಗಳು ತೀರ ಯೋಗ್ಯವಾಗಿವೆ. ನಮ್ಮ ಮಾತುಗಳಲ್ಲಿ ಪತ್ರಿಕಾ ಕರ್ತರಾಗಿ ನಾವು ಮಾಡಬೇಕಾದ ಕರ್ತವ್ಯಕ್ಕೆ ಯಾವ ರೀತಿಯಲ್ಲಿಯೂ ಚ್ಯುತಿಬಾರದಂತೆ ಜಾಗ್ರತೆ ವಹಿಸಿದ್ದೇವೆ. ನಮ್ಮ ಟೀಕೆ-ಟಿಪ್ಪಣಿಗಳು ಯುಕ್ತಿಗಳು ಕಟುವಾಗಿರಬಹುದು. ಆದರೆ ಅಧ್ಯಕ್ಷರು ಪಕ್ಷಪಾತದಿಂದ ಅಪ್ಪಣೆಯನ್ನು ಕೊಡಿಸಿದರೆಂದು ನಾವು ಹೇಳಿಲ್ಲ, ಅಥವಾ ನಮ್ಮ ಹೇಳಿಕೆಯಲ್ಲಿ ಒಂದೇ ಒಂದಾದರೂ ಅಸಭ್ಯ ಶಬ್ದವನ್ನು ಉಪಯೋಗಿಸಿಲ್ಲ.

ಸರ್ ಅಬ್ದುಲ್ ರಹೀಮರ ಕೃತಿಯು ಇನ್ನೊಂದು ದೃಷ್ಟಿಯಿಂದಲೂ ಅಯೋಗ್ಯವಾಗಿದೆ. ಪತ್ರಿಕಾ ಪ್ರತಿನಿಧಿಗಳನ್ನು ಅಸೆಂಬ್ಲಿ ಗೃಹಕ್ಕೆ ಬರಗೊಡದಂತೆ ಮಾಡುವದರಿಂದ ಅವರ ಧ್ಯೇಯ ಧೋರಣೆಗಳನ್ನೇನಾದರೂ ಬದಲಿಸಲು ಸಾಧ್ಯವೆಂದುಕೊಂಡಿದ್ದಾರೋ? ಶಾಯಿದೆ ಕೌನ್ಸಿಲುಗಳಲ್ಲಿ ಪ್ರವೇಶ ದೊರಕಿಸಲಿಕ್ಕಾಗಿ, ಅಲ್ಲಿಯ ಸುದ್ದಿಗಳನ್ನು ದೊರಕಿಸುವ ಸೌಲಭ್ಯಕ್ಕಾಗಿ ಪತ್ರಿಕೆಗಳು ತಮ್ಮ ಸ್ವಾತಂತ್ರ್ಯವನ್ನು ಮಾರಿಬಿಡುವವೆಂದು ಅವರು ಎಣಿಸಿದ್ದಾರೋ? ನಮ್ಮ ಮಟ್ಟಿಗೆ ಹೇಳುವದಾದರೆ ೬೦ ವರ್ಷಗಳಿಂದಲೂ ಆಶೆ-ಪ್ರತ್ಯಾಶೆಗಳ ಮೋಹಕ್ಕಾಗಲಿ, ಸಿಟ್ಟು, ಬೆದರಿಕೆಗಳ ಭಯಕ್ಕಾಗಲಿ ಒಳಗಾಗದೆ ನಮ್ಮ ಕರ್ತವ್ಯವನ್ನು ನಾವು ಪಾಲಿಸಿರುವಾಗ, ಈಗ ಮಾತ್ರ ಅಸೆಂಬ್ಲಿಯ ಅಧ್ಯಕ್ಷರು ಹೆದರಿಸಿದರೆಂದು ಬೆದರುವವೇ?

ಇನ್ನೂ ಅನೇಕ ಪತ್ರಿಕೆಗಳು ಅಸೆಂಬ್ಲಿಯ ಅಧ್ಯಕ್ಷರ ಈ ವರ್ತನೆಯನ್ನು ನಿಷೇಧಿಸಿವೆ. ಗಬ್ಬಾರಿಕೆಯ ಕಾನೂನುಗಳು ಪ್ರಚಾರದಲ್ಲಿ ಬಂದಂದಿನಿಂದ ಮುದ್ರಣ ಸ್ವಾತಂತ್ರ್ಯಕ್ಕೆ ಅನೇಕ ರೀತಿಯಲ್ಲಿ ಧಕ್ಕೆ ತಗಲಿದೆ. ಈಗ ಅಮೃತಬಝಾರ ಪತ್ರಿಕೆಯ ಸುದ್ದಿಗಾರನಿಗೆ ಮಾತ್ರ ಪ್ರತಿಬಂಧ ಮಾಡಿದ್ದರೂ ಇದು ಕೇವಲ ಆ ಪತ್ರಿಕೆಯ ವಿಷಯದಲ್ಲಿ ಮಾತ್ರವಲ್ಲ, ಇಡೀ ಹಿಂದುಸ್ಥಾನದ ಪತ್ರಿಕೆಗಳ ವಿಷಯದಲ್ಲಿ ಮಾಡಿದ ಅನ್ಯಾಯ, ಪತ್ರಿಕಾ ವ್ಯವಸಾಯಕ್ಕೇ ಇದು ಸಹಿಸಲಾರದ ಅಪಮಾನ.

ಮುಂಬಯಿಯಲ್ಲಿಯೂ ಇದೇ ರೀತಿ ನಡೆಯಿತು. ಅಲ್ಲಿಯ ಎಕ್ಸಿಕ್ಯುಟಿವ್ ಕೌನ್ಸಿಲಿನವರು ಗವರ್ನರಾದ ಲಾರ್ಡ್ ಬ್ರೆಬೋರ್ನರವರಿಗೆ ಕೊಟ್ಟ ಟೀ ಪಾರ್ಟಿಯಲ್ಲಿ ಪತ್ರಿಕಾ ಪ್ರತಿನಿಧಿಗಳನ್ನು ಹೊರಗೆ ಹಾಕಿದರು. ಹೀಗೆ ಹಿಂದುಸ್ಥಾನದಲ್ಲಿ ಮುಖ್ಯವಾದ ಈ ಎರಡು ಪ್ರಾಂತಗಳಲ್ಲಿ ಈ ರೀತಿ ಅಧಿಕಾರಿಗಳು ಪತ್ರಿಕಾಕರ್ತರ ಮೇಲೆ ಕಣ್ಣಿಟ್ಟಿರುವದರ ಕಾರಣವೇನು, ಅರ್ಥವೇನು? ಕಾಂಗ್ರೆಸಿನ ಚಟುವಟಿಕೆಗಳಿಂದ ಈಗ ಪತ್ರಿಕೆಗಳು ಕೇವಲ ಸುದ್ದಿಯ ಹೊತ್ತಿಗೆಗಳಾಗಿರದೆ ನಿರ್ಭಯ ನಿರ್ದಾಕ್ಷಿಣ್ಯ ಅಭಿಪ್ರಾಯ ಪತ್ರಿಕೆಗಳಾಗಿವೆ. ವಿಷಯವನ್ನು ವಿಮರ್ಶಿಸಿ ತಪ್ಪು ಒಪ್ಪುಗಳನ್ನು ತೋರಿಸಿ ಜನರಿಗೆ ಎಚ್ಚರಿಕೆಯನ್ನು ಕೊಡುವದಾಗಿವೆ.

ಈ ರೀತಿಯ ಜನಜಾಗ್ರತಿಯು ಸರಕಾರದ ಅಧಿಕಾರವನ್ನು ಹತೋಟಿಯನ್ನು ಕ್ಷೀಣಿಸಲು ಕಾರಣವಾಗಿರುವದರಿಂದ ಸರಕಾರಿ ಪ್ರಮುಖರು ಪತ್ರಿಕೆಗಳ ಬಲವನ್ನು ತಗ್ಗಿಸುವ ಈ ಹೊಸ ದಾರಿಯನ್ನು ಹಿಡಿದಿದ್ದಾರೆ. ಇಲ್ಲಿ ನಡೆದುಬಂದ ನಿರಂಕುಶ ಪ್ರಭುತ್ವದ ಅಧಿಕಾರಕ್ಕೆ ಪತ್ರಿಕೆಗಳು ಅಡ್ಡಗಾಲು ಹಾಕುವದು ಸರಕಾರಕ್ಕೆ ಇಷ್ಟವಿಲ್ಲದಿರುವದೇ ಈ ಹೊಸ ಮಾರ್ಗವು ಹಾಕಲ್ಪಡಲು ಕಾರಣವಾಗಿದೆ. ಇದನ್ನು ಎದುರಿಸಲು ಬಲವಾದ ಸಂಘಟನೆಬೇಕು. ಈ ಅಧಿಕಾರದ ಪ್ರಯೋಗವು, ಪತ್ರಿಕೆಗಳ ಜನರ ಸ್ಥಿತಿ ಗತಿಯ ಮುಖ. ಕರ್ನಾಟಕದಲ್ಲಿ ಇನ್ನೂ ಹೆಚ್ಚು ಎಚ್ಚರಿಕೆಬೇಕು. ಕರ್ನಾಟಕದಲ್ಲಿ ಯೋಗ್ಯ ಪತ್ರಿಕೆಗಳು ಇಲ್ಲವೇ ಇಲ್ಲವೆನ್ನಬಹುದು. ಹೆಸರಿಗೆ ಕ್ಷೀರಸಾಗರ ಭಟ್ಟ, ಮಜ್ಜಿಗೆಗೆ ತತ್ವಾರ ಎಂಬಂತೆ ಪತ್ರಿಕೆಗಳ ಹೆಸರುಗಳೇನೋ ಚೆನ್ನಾಗಿದ್ದರೂ, ತಮ್ಮ ಧ್ಯೇಯವ ಘೋಷಣೆ ಮಾಡಿಕೊಂಡರೂ ಅವು ಎಷ್ಟರ ಮಟ್ಟಿಗೆ ಶೈಕ್ಷಣಿಕವಾಗಿವೆ, ಎಷ್ಟರ ಮಟ್ಟಿಗೆ ಸತ್ಯಪ್ರಿಯವಾಗಿವೆ, ಎಷ್ಟರ ಮಟ್ಟಿಗೆ ಧ್ಯೇಯವನ್ನು ಸಾಧಿಸುತ್ತಿವೆ ಎಂದರೆ ಉತ್ತರವನ್ನು ಕೊಡುವದು ಸ್ವಲ್ಪ ಪ್ರಯಾಸದ ಮಾತೇ ಸರಿ. ಹೆಚ್ಚಾಗಿ ನಮ್ಮಲ್ಲಿಯ ಪತ್ರಿಕೆಗಳು ಒಂದು ಜಾತಿಗೆ ಅಥವಾ ಒಂದು ಜಿಲ್ಲೆಗೆ ಸಂಬಂಧಪಟ್ಟವು. ಜಾತಿಯ ಅಭಿಮಾನದಿಂದಲೋ ಅಥವಾ ಸ್ಥಳೀಯ ಅಭಿಮಾನದಿಂದಲೋ ಹಲಕೆಲವರು ಈ ಪತ್ರಿಕೆಗಳನ್ನು ಕೊಳ್ಳುವದರಿಂದಲೂ ಜಾಹೀರಾತು ನೋಟೀಸುಗಳಿಂದಲೂ ಈ ಪತ್ರಿಕೆಗಳು ಜೀವವನ್ನು ಹಿಡಿದುಕೊಂಡಿವೆ ಅಷ್ಟೆ. ಅವುಗಳ ಬಾಳಿಕೆಯನ್ನು 'ಜೀವನ' ಎಂಬ ಶಬ್ದದ ನಿರ್ಬಂಧದಲ್ಲಿ ತಿಳಿಯಲು ಬರುವಂತಿಲ್ಲ. ಇದಕ್ಕೆ ಹೊಟ್ಟೆ ಹೊರಕೊಳ್ಳುವ ಅನೇಕ ವ್ಯವಸಾಯಗಳಲ್ಲಿ ಇದೂ ಒಂದು ಎಂದು ತಿಳಿದು ನಮ್ಮಲ್ಲಿ ವರ್ತನೆ ಇರುವದೇ ಕಾರಣ. ನಮ್ಮ ಸಂಪಾದಕರಿಗೆ ಯೋಗ್ಯ ಶಿಕ್ಷಣದ ಅಭಾವವಿದೆ. ಅಲ್ಲದೆ ಪತ್ರಿಕೆಗಳಲ್ಲಿ ಸಂಘಟನವಂತೂ ಕೇಳಲೇ ಬಾರದು. ಒಬ್ಬೊಬ್ಬರದು ಒಂದೊಂದು ರೀತಿ. ಈ ವಿಷಯವಾಗಿ ಪಂಡಿತ ತಾರಾನಾಥರವರು ಹೀಗೆ ನಾವೊಮ್ಮೆ ಮಾತಾಡುತ್ತಿದ್ದಾಗ "ನಮ್ಮ ನಾಡಿನಲ್ಲಂತೂ ಒಬ್ಬ ಸಂಪಾದಕರು ಇನ್ನೊಬ್ಬರ ಮೇಲೆ ಮೊಕದ್ದಮೆಗಳನ್ನು ಹೂಡುತ್ತಾರೆ. ಇವರಲ್ಲಿ ದುರ ಸಂಘಟನೆ, ಪರಸ್ಪರ ಆದರ, ಸಹಾನುಭೂತಿಗಳಿಗೆ ಬದಲಾಗಿ ದ್ವೇಷಿಸುತ್ತಿರುವ ವ್ಯಾಜ್ಯಗಳೇ ಪ್ರಮಾಣ" ಎಂದು ಹೇಳಿದ್ದರು.

ಒಂದು ವೇಳೆ ಮೇಲಿನ ಅಧಿಕಾರಿಗಳಿಂದ ಆದ ನೀತಿವಿರುದ್ಧವಾದ ನಿಂದೆ ಉಳಿದ ಸಕಲ ಪತ್ರಿಕೆಯವರೂ ತಮ್ಮ ಸ್ವರ ನಿಂದೆ ಮಾತ್ರವೇ ಅಲ್ಲ ತಾವು ಪ್ರತಿನಿಧಿಗಳಾಗಿರುವ ಜನರ ನಿಂದೆಯೇ ಎಂದು ಭಾವಿಸಿ ಅದನ್ನು ಎದುರಿಸಲು ಸಿದ್ಧರಾಗುವವರೆಗೆ ಈಗ ಅಲ್ಲಲ್ಲಿ ತೋರುವ ದಬ್ಬಾಳಿಕೆಯಲ್ಲಿ ಗತ್ಯಂತರವಿಲ್ಲ. ಈಗ ಪತ್ರಿಕಾ ವ್ಯವಸಾಯಕ್ಕೇ ಅಪಮಾನವಾಗಿದೆ. ನಮ್ಮ ಕರ್ನಾಟಕದ ಪತ್ರಿಕಾಕರ್ತರು ಇನ್ನಾದರೂ ತಮ್ಮಲ್ಲಿಯ ಮತಭೇದಗಳನ್ನು ಬಿಟ್ಟುಕೊಟ್ಟು ಪತ್ರಿಕೋದ್ಯಮದ ನಿಜ ಉದ್ದೇಶವನ್ನು ಈಡೇರಿಸುವರೋ?

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances
3. Accident Risk covered on small extra premiums
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras	Visveswarapuram Circle, Bangalore City.	Sounyalayam Puthiyara, Calicut.
Car Street, Mangalore.	Udipi, S India	Charni Road, Bombay No. 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

SUMMARY OF 1935 ACCOUNTS

Total Assets Over	Rs. 80,00,000
Life Funds Over	Rs. 68,00,000
Premium Income Over ...	Rs. 22,54,000
Interest Income	Rs. 3,16,000
Claims Paid	Rs. 5,75,000

Total Claims paid over Rs. 38,50,000
Total Business in Force Over Rs. 4,42,51,200

TOTAL BUSINESS IN FORCE **Rs. 4,42,51,200**

ಕಸ್ತೂರಿ ಮಿಶ್ರಣ ಪಕ್ವಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಯಿಂದಲೂ, ಪ್ರಸವವೇದನಾ ಬಗ್ಯೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದ ವ್ಯಾಧಿಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ,

ಆಯುರ್ವೇದ ಭೂಷಣ ಮಂಗಳೂರು ದ. ಕ

ಏಜಂಟರು:—ಮೆಸರ್ಸ್ ಓರಿಯಂಟಲ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ. ಸಂಪಿಗೆ ರಸ್ತೆ ಮಲ್ಲೇಶ್ವರಮ್, (ಬೆಂಗಳೂರು ಸಿಟಿ)

ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ.



ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸ್ಟೆನ್ ಬೋರ್ಡು, ಪೇಡೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಪೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-15	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 6-25	ಬೆಳಿಗ್ಗೆ 9-30

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

ಸ್ಥಾಪಿತವಾದದ್ದು.] [1907ರಲ್ಲಿ

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70 ಲಕ್ಷ** ಮಿಕ್ಕಿವೆ.

ವಿಮಾ ಹಣ ಪಾವತಿ ರೂ. **37 ಲಕ್ಷ** ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು. ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು:—ಅತ್ಯಧಿಕ ನಫೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ. ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಂ

P. D. BHARGOVA,
General Manager, ***AJMER,***

SUPERINTENDENT. 278, Linga Chetty Street, MADRAS

Or Chief Agent:—
BELLARY: MADURA: TRICHINOPOLY: VELLORE.

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ತಮ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 15ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಲಯ,
ಅಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು-ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು-ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳ ನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ.

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

ಬೆಲೆ ಸುಲಭ! ಒಂದೇ ದರ!! ಖಾತ್ರಿಮಾಲು!!!

ಎಲ್ಲಿ ?

ಎಸ್. ಅನಂತ್ರಾಮಾಚಾರ್

ಸ್ಟೇಶನರಿ, ಕಟ್ಲೇರಿ ಮತ್ತು ಶಾಲೋಪಕರಣಗಳ ವ್ಯಾಪಾರಿ.

ತಾಲೂಕು ಕಚೇರಿಬಳಿ, ಉಡುಪಿ.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ಸಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.

ಪಿ. ಎ. ಪೈ ಬ್ರದರ್ಸ್,

ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd.,

Head Office: MANGALORE. Branch Office, Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ ಉಡ್ಪಿ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½. ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4½. 1 ವರ್ಷದ ಬಾಬ್ತು ಸಾ. ಶೆ. 5½ 2 ವರ್ಷ ವ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—ಅಂದರೆ—ಪ್ರೊ. ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ರೂ. 100 ಅಥವಾ ಅದರ ಮೇಲಿನ ಐವೇಜಿಗೆ ಸಾ. ಶೆ. 8 ಮತ್ತು ಅದಕ್ಕಿಂತ ಕೆಳಗಣದು ಸಾ. ಶೆ. 9ರ ದರದ ಬಡ್ಡಿಯಲ್ಲಿಯೂ ಸಾಲ ದೊರೆವುದು ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಹಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ವಿಜಯ ಬ್ಯಾಂಕ್, ಲಿಮಿಟೆಡ್ **K. Gopalkrishna Shetty.**
ಚೆಯರ್‌ಮೇನ್ ಕಚೇರಿ, ಮಂಗಳೂರು, ಸೆಕ್ರೆಟರಿ.

ಕಸಿಗಿಡಗಳು.

ಸಪ್ಪೊಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಕಿಟ್ಟ ಹಣ್ಣಾಗುವದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ರಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಪಡುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಟಾಂಡ ಕೋ. ಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಮೋನ್ ಸ್ಟ್ರೇಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,

ಕೋಸ್ಟ್ ಕಾಪು, ದ. ಕನ್ನಡ.

ಅಂದು? ದಸರಾ! ಇಂದು?

ಪ್ರಕೃತಿಯಲ್ಲಿ ಬೆರೆದು ಬೆದರಿಸುತ್ತಿರುವ ದೈವಿಕ ಶಕ್ತಿಯ ರಹಸ್ಯವನ್ನರಿಯುವದು ಪ್ರಥಮ ಮೂರು ದಿನಗಳ ಧ್ಯೇಯ; ಆ ಪ್ರಕೃತಿಯಲ್ಲೇ ಅಡಕವಾಗಿರುವ ದೈವದ ಸಾಂಪತ್ತಿಕ ಹಾಗೂ ಪೋಷಕ ವಸ್ತುಗಳನ್ನು ಮನಗಂಡು ಅನನ್ನು ಸಾಧಿಸುವ ಚಿಂತನೆಯು ಅನಂತರದ ಮೂರು ದಿನಗಳ ಕಾರ್ಯೋದ್ದೇಶ; ಮೊದಲನೆಯ ಹಿಡಿತದಿಂದ ಪಾರಾಗಿ, ಎರಡನೆಯದನ್ನು ವಶಪಡಿಸಿಕೊಂಡು ಅನುಭವಿಸಲು ಬೇಕಾಗಿರುವ ವಿದ್ಯೆಯ ಹಾದಿಯನ್ನು ಯೋಚಿಸಿ, ತಕ್ಕ ಸಾಧನಗಳನ್ನು ಕಲ್ಪಿಸಿಕೊಳ್ಳಬೇಕೆಂಬುದು ಇಂಗಿತವನ್ನು ಕೊನೆಯ ಮೂರು ದಿನಗಳು ಸಾರುವವು.

ಹಿಂದೂ ಹಬ್ಬಕ್ಕೊಂದು ವಿಶೇಷ ಲಕ್ಷಣವಿದೆ. ಅದು ಕೇವಲ ನಿಷ್ಕ್ರಿಯಾತ್ಮಕವಾದ ಆನಂದಗೋಷ್ಠಿಯ (merry making) ಕಾಲವಲ್ಲ; ಬರೀ ವಿಧ್ಯುಕ್ತ ಪೂಜೆ. (religious rites and ceremonies) ಗಳಲ್ಲೇ ಕಾಲಯಾಪನೆ ಸಾಗುವಂತಹುದೂ ಅಲ್ಲ; ಬಂಧುಬಳಗ ಕೂಡಿ ಔತಣದೂಟವಮಾಡಿ (social gathering & feasting) ಕುಣಿದಾಡುವ ಸಮಯವೂ ಅಲ್ಲ. ಆದರೆ ಇವೆಲ್ಲವೂ ವಿಚಾರದ ಹದವರಿಯದೆ ಆದರಲ್ಲವ. ಹಬ್ಬದ ಧ್ಯೇಯವು ಮಾತ್ರ ಇವುಗಳಿಂದಲೇ ಕೊನೆಮುಟ್ಟುವುದಿಲ್ಲ. ದೈನಿಕ ಭಕ್ತಿಯ ನೆರಳಲ್ಲಿ ಜನತೆಯ ಜೀವನವು ಸುಖಶಾಂತಿದಾಯಕವಾಗಿ ಸಾಗುವಂತಹ ಹಾದಿಯನ್ನು ಪುನಃ ಪುನಃ ನೆನಪರಿಕೆಗೆ ತಂದು ಅದನ್ನು ಆಚರಣೆಯಲ್ಲಿ ಇಳಿಸುವಂತಹ ಲಕ್ಷಣವಿದೆ ಪ್ರತಿಯೊಂದು ಹಬ್ಬದಲ್ಲಿ. ಅದೇ ಹಬ್ಬದ ಧ್ಯೇಯ; ಅದೇ ಅದರ ಆತ್ಮ. ಅದಿದ್ದ ಹಬ್ಬದಾಚರಣೆಯು ಕಾರ್ಯಕಲಾಪಗಳೆಲ್ಲ ಜೀವಕಳೆತುಂಬಿರುವ ಶರೀರವನ್ನು ಅಲಂಕರಿಸಿ ಮೆರವಣಿಗೆ ಮಾಡಿದಂತೆ. ಅದಿಲ್ಲದಿದ್ದ ಹಬ್ಬದ ಸಂಭ್ರಮವು ಗೊಂಬೆಯ ಶೃಂಗಾರದಂತೆ. ಸಾಮಾನ್ಯ ಹಬ್ಬಗಳಿಗೂ ಇಂತಹದೊಂದು ವಿಶೇಷತ್ವವಿರುವಾಗ, ಹಬ್ಬಗಳ ಅರಸಾಗಿರುವ ದಸರೆಯ ಧ್ಯೇಯವು ಮಹತ್ವದ್ದಿರಬೇಕಲ್ಲವೆ? ಅದರ ವಿಚಾರವು ಕಾಲೋಚಿತವಾಗಿದೆ.

ಅರ್ಜುನನು ಈಶ್ವರನೊಡನೆ ಹೋರಾಡಿ ಜಯಿಸಿ ಆತನಿಂದ ತ್ರಿಲೋಕ ವಿಜಯಿಯಾಗಲಾಪ ಧನುಸ್ಸನ್ನು ಪಡೆದನಂತೆ. ಅರ್ಜುನನೇಕೆ? ಮಾನವ ಇತಿಹಾಸವೇ ಹಾಗಿದೆ. ಆದಿಯಿಂದಲೂ ಮನುಷ್ಯನು ಸೃಷ್ಟಿ (Nature) ಯೊಡನೆ ಹೋರಾಡುತ್ತಲೇ ಇದ್ದಾನೆ. ಅದರ ರಹಸ್ಯವನ್ನು ಭೇದಿಸುತ್ತಿದ್ದಾನೆ. ಅದನ್ನು ಗೆಲ್ಲುತ್ತಲಿದ್ದಾನೆ. ಗೆದ್ದ ಹಾಗೆಲ್ಲ ಆತನು ವಿಜಯಿಯಾಗುತ್ತಲಿದ್ದಾನೆ. ಸೃಷ್ಟಿಯ ಶಕ್ತಿಯಲ್ಲಿ ದೇವರು ಅಡಕವಾಗಿರುವನು. ಆತನ ರಹಸ್ಯವನ್ನು ಗ್ರಹಿಸುವುದೇ ದೇವರನ್ನು ತಿಳಿಯುವುದು. ಅದಕ್ಕಾಗಿ ಹೋರಾಡುವುದೇ ತಪಸ್ಸು. ಸೃಷ್ಟಿಯೊಡನೆ ಮಾನವನು ನಡೆಸುತ್ತಿರುವ ಈ ಜ್ಞಾನಾರ್ಜನೆಯ ಸೆಣಸಾಟದಲ್ಲಿ ಆತನು ಎಷ್ಟೆಷ್ಟು ಕೃತಾರ್ಥನಾಗುವನೋ ಅಷ್ಟಷ್ಟು ಆತನು ದೇವರನ್ನು ಒಲಿಸಿ ಕೊಂಡಂತಾಗಿ ವಿಜಯಿಯಾಗುವನು. ಮಾನವನ ಈ ವಿಜಯ ರಹಸ್ಯದ ಸಂಕೇತವೇ ಈಶ್ವರಾರ್ಜುನರಕಾಳಗ. ಅನುದಿನವೂ ಮಾನವನು ಈ ಸೃಷ್ಟಿಶಕ್ತಿಯ ರಹಸ್ಯಭೇದ ಸಂಗ್ರಾಮದಲ್ಲಿ ನಿರತನಾಗಿದ್ದರೂ ನಮ್ಮ ಪೂರ್ವಿಕರು ಸಾಮುದಾಯಿಕವಾಗಿಯೂ ಸಾರ್ವತ್ರಿಕವಾಗಿಯೂ ಅದರ ಪರಿಪೂರ್ಣ ಚಿಂತನೆಗೆ ಮತ್ತು ಕಾರ್ಯಕ್ಷೇತ್ರ ನಿರೂಪಣೆಗೆ ಮೀಸಲಾಗಿಟ್ಟು ಕೊಂಡಿರುವ ದಿವಸಗಳೇ ಈ ದಸರೆಯ ಒಂಭತ್ತು ದಿನಗಳು. ದೇವರು ಸೃಷ್ಟಿಯಲ್ಲಿ ಬೆರೆತು (God reveels himself in Nature) ಕಾಣುತ್ತಿದ್ದಾರೆಂಬುದರ ತಿಳಿವನ್ನು ಕೊಡುವುದಕ್ಕಾಗಿ ಮಹಾಕಾಳಿ ವೈಷ್ಣವಿಯರ ಪೂಜೆಗಳು ಆತನನ್ನು ಹೇಗೆ ಒಲಿಸಿಕೊಳ್ಳಬಹುದೆಂಬುವ ಹಾದಿಯನ್ನು ತೋರಿಸುವುದಕ್ಕಾಗಿ ಸರಸ್ವತೀ ಪೂಜೆ. ತಿಳಿವಳಿಕೆ ವಿದ್ಯೆಗಳೊಂದಿಗೆ ಸಾಧನಗಳೂ ಅವಶ್ಯವೆಂಬುದರ ಸಂಕೇತಕ್ಕಾಗಿ ಆಯುಧಪೂಜೆ. ಹೀಗೆ ಮಾನವನು ನವರಾತ್ರಿಯ ಕಾರ್ಯಕಲಾಪಗಳಿಂದ ವಸ್ತುಸ್ಥಿತಿಯನ್ನರಿತು ಅದನ್ನು ಗೆದ್ದು ಸುಖಶಾಂತಿಯಿಂದ ಬಾಳುವಂತಾಗಬೇಕೆಂಬ ಧ್ಯೇಯಸಂಕೇತದಿಂದ ನಮ್ಮ ಪೂರ್ವಿಕರು ದಸರೆಯ ವಿಧಿವಿಧಾನಗಳನ್ನು ಕಲ್ಪಿಸಿದರು. ಧ್ಯೇಯದಲ್ಲಿಯೂ ಆಚರಣೆಯಲ್ಲಿಯೂ ಸಾರ್ವತ್ರಿಕ ಏಕತಾನತೆ (Harmony) ಯಿರಲೆಂದು ಅವನ್ನು ಪೂಜಾವಿಧಾನದ ಮಂತ್ರಗಳಾಗಿಯೂ ಪಾರಾಯಣ ಗ್ರಂಥಗಳಾಗಿಯೂ ನಮಸ್ಕಾರದ ಸ್ತೋತ್ರಗಳಾಗಿಯೂ ಬರೆದಿಟ್ಟರು. ಅವೆಂದರೆ ಪರಂಪರೆಯ ಅವರ ಚಿಂತನೆಯಿಂದುದ್ಭವಿಸಿದ ಭಾವನೆಯ ಸ್ಪಟಿಕನಿಚಯ (crystallised thoughts)ಗಳು. ಆ ಕಾಲದಲ್ಲ ಸಂಸ್ಕೃತ ಭಾಷೆಯು ದೇಶಭಾಷೆಯಾಗಿದ್ದು ಅದರಲ್ಲಿ ವಿಶೇಷ ಪಾಂಡಿತ್ಯವಿಲ್ಲದವನಿಗೂ ಕೇಳಿದರೆ ತಿಳಿಯುವಂತಹ ಊರ ಮಾತಾಗಿತ್ತು. ಆದುದರಿಂದ ಅಂದಿನ ಪಾರಾಯಣದಲ್ಲಿ ಬಾಯಿ ಅಲುಗಾಡಿದಂತೆ ಕಿವಿಯು ಕೇಳಿದಂತೆ ಹೃದಯವೂ ಪಡಿನುಡಿಗೊಡುತ್ತಿತ್ತು. ಪ್ರತಿಯೊಂದು ಮಂತ್ರೋಚ್ಚಾರಣೆಯೊಡನೆ ಹೃದಯದಲ್ಲಿ ಭಾವತರಂಗಗಳೆದ್ದು ಅದು ವರ್ಣಿತವಾದ ಶಕ್ತಿಯ ಸ್ವರೂಪವನ್ನು ಬಗೆಗಾಣುತ್ತಿತ್ತು. ಒಟ್ಟಿನಮೇಲೆ ಬುದ್ಧಿಹೃದಯಾತ್ಮಗಳು ಸಂಸ್ಕಾರ ಹೊಂದುತ್ತಿದ್ದುವು. ಅಂದಿನ ಪೂಜೆಗಳಿಂದ, ಸ್ತೋತ್ರಗಳಿಂದ, ಪಾರಾಯಣ ಪಠಣದಿಂದ. ಅಂತಹ ಪೂಜೆಗೆ ಆಗಲೇ ಫಲಪ್ರಾಪ್ತಿ — ಆ ಹೃದಯ ಬುದ್ಧಿಗಳಿಗಾಗುತ್ತಿದ್ದ ಸಂಸ್ಕಾರ ಪಾವಿತ್ರ್ಯಗಳ ಫಲವಾಗಿ ಬರುವ ಆತ್ಮೋನ್ನತಿಯೇ ಪೂಜಾಫಲ! ಯಾವ ಪೂಜೆಯಾಗಲಿ ಜಪವಾಗಲಿ ಪಾರಾಯಣವಾಗಲಿ ಅದನ್ನು ಮಾಡುವವನು ಅದರ ಅರ್ಥವನ್ನು ತಿಳಿದು ಅದರೊಡನೆ ತನ್ನ ಹೃದಯವನ್ನು ಕೂಡಿಸಲು ಶಕ್ತನಾದರೆ ಮಾತ್ರ ಆ ಪೂಜೆ ಆ ಜಪ ಪಾರಾಯಣ ಸಾರ್ಥಕ. ಹಾಗಾಗಬಾರದಾದರೆ ಅದನ್ನು ಮಾಡುವವನೂ ಮಾಡಿಸುವವನೂ ನೋಡುವವರೂ ಕೇಳುವವರೂ ನಿರರ್ಥಕ ಕಾಲಹರಣ ಮಾಡುವ ಮಕ್ಕಳಾಟವಾಡುವವರು. ಚಿಕ್ಕಮಕ್ಕಳು ಆಡುವಗೊಂಬೆಯ ಸಂಸಾರದಾಟಕ್ಕೂ ಇದರವಕ್ಕೂ ಹೆಚ್ಚಿನ ವ್ಯತ್ಯಾಸವಿರದು. ಇದ್ದರೆ ಅದಿಷ್ಟೇ—ಇವರು ದೊಡ್ಡ ಬೆಳವಣಿಗೆಯ ಮಕ್ಕಳು! (children of older growth) ಆಗಿನವರು ಪೂಜೆಯ ಅರ್ಥ ತಿಳಿದು ಮಾಡಿ ಕೃತಕೃತ್ಯರಾಗುತ್ತಿದ್ದರು. ಅವರು ದೊಡ್ಡ ದೇಹದ ಮಕ್ಕಳಾಗಿದ್ದಿಲ್ಲ; ದೊಡ್ಡ ಮನಸ್ಸಿನ ಮಹಾನುಭಾವರಾಗಿದ್ದರು.

ಈಗ ಆಚರಿಸುತ್ತಿರುವ ದಸರೆಯನ್ನು ಈ ದೃಷ್ಟಿಯಿಂದ ಪರಾಮರ್ಶಿಸಿದರೆ ನಾವಿಂದು ಮಾಡುತ್ತಿರುವುದು ಉದ್ದೇಶ ರಹಿತ ಗಲಭೆ. ಅದರಲ್ಲಿ ನಾಡಿನ ಅಭಿವೃದ್ಧಿಸಾಧಕವಾದ ಕ್ರಿಯಾಭಾಗಗಳಿಲ್ಲ. ಎಲ್ಲವೂ ಪೂಜೆಯಲ್ಲಿಯೇ ಪರ್ಯವಸಾನ. ಅದೂ ವಿಚಿತ್ರತರದ ಪೂಜೆ! ನಮ್ಮ ಹಿರಿಯರು ತಮ್ಮ ಬುದ್ಧಿ ಹೃದಯ ಮತ್ತು ಆತ್ಮಗಳ ವಿಕಾಸಕ್ಕಾಗಿ ಪೂಜೆಯನ್ನು ತಿಳಿದು ಮಾಡುತ್ತಿದ್ದರೆ ಅರಿತು ಮಂತ್ರವನ್ನು ಹೇಳುತ್ತಿದ್ದರೆ ಅರ್ಥಮಾಡಿ ಪಾರಾಯಣವನ್ನು ಪಠಿಸುತ್ತಿದ್ದರೆ, ನಾವಿಂದು ಅವನ್ನೆಲ್ಲ ದೇವರೇ ಕೇಳಿತಿಳಿದು ಅರ್ಥಮಾಡಿಕೊಂಡು ನಮಗೆ ಮೆಚ್ಚುತ್ತಾನೆಂದು ಮಾಡುತ್ತಿದ್ದೇವೆ, ಮಾಡಿಸುತ್ತಿದ್ದೇವೆ. ಅಂತೂ ಅವನ್ನೆಲ್ಲ ಕೇಳಿ ತಿಳಿದುಕೊಂಡು ಅರ್ಥಮಾಡಿಕೊಳ್ಳುವ ಕೆಲಸವು ದೇವರದೇ. ಹೇಳುವ ಅಥವಾ ಹೇಳಿಸುವ ಕೆಲಸ ನಮ್ಮದು! 'ದವಲಚ್ಚಾದಾ' ಹಾಕಿಸಿದಂತೆ ದುಡ್ಡುಕೊಟ್ಟು ಭಟ್ಟರಿಂದ ಹೊಗಳಿಸಿದರೆ ದೇವರು ಮೆಚ್ಚಲಿಕ್ಕೇನು ಆತನು ಅಂತಹ ಆತ್ಮಸ್ತುತಿಪ್ರಿಯನೆ? ಮುಖಸ್ತುತಿಗೆ ಹಿಗ್ಗುವ ಉಬ್ಬಾಳುವೆ ಅತ? ಇಲ್ಲವೆ ಆತನ ಸೃಷ್ಟಿರಹಸ್ಯವನ್ನು ಆತನ ಶಕ್ತಿಮಹತ್ವವನ್ನು ಆತನೆಲ್ಲಾದರೂ ಮರೆತು ಬಿಟ್ಟಾನೆಂದು ಆತನಿಗೆ ನಾವು ನೆನಪು ಮಾಡುವುದೆ? ಹಾಗಾದರೆ ಪಾರಾಯಣಗಳನ್ನು ಫೋನೋಗ್ರಾಫ್ ಪ್ಲೇಟು ಪಟ್ಟಿಗಳನ್ನಾಗಿ ಮಾಡಿಸಿ ದೇಗುಲದ ಪೌಳಿಗಳಲ್ಲೋ ಮನೆಯೊಳಗಿನ ದೇವರ ಕೋಣೆಯೊಳಗೋ ಇಟ್ಟು ಕೀಲಿಕೊಟ್ಟು ನುಡಿಸುತ್ತಿದ್ದರೆ ಈಗ ನಡೆಯುತ್ತಿರುವ ಪಾರಾಯಣಕ್ಕಿಂತ ಸ್ಪಷ್ಟೋಕ್ತಿಗಳಿಂದ ಶುದ್ಧಸ್ವರದಿಂದ ಪಠಣವಾಗಿ ದೇವರೋ ದೇವತೆಯೋ ಆದಿ ಶಕ್ತಿಯೋ ಇದೇ ನಿದೆಯೋ ಅದು ಇನ್ನೂ ಹೆಚ್ಚಾಗಿ ಮೆಚ್ಚಲಾರದೆ? ಮೂರ್ತಿಯೋ ಚಿತ್ರಪಠವೋ ಕಲಶವೋ ಕೇಳಿಕೇಳಿ ತನ್ನ ಕಿವಿಕಿವುಡಾಗುವುದನ್ನು ತಪ್ಪಿಸಿಕೊಳ್ಳುವುದಕ್ಕಾದರೂ ಅವನ್ನಿಡಿಸಿದ ವ್ಯಕ್ತಿಗೆ ಪ್ರತ್ಯಕ್ಷವಾಗಿ ವರವನ್ನೀಯಲೂ ಬಹುದಲ್ಲವೆ? ಅಯ್ಯೋ! ನಮ್ಮ ದುರವಸ್ಥೆಯೇ! ನಮ್ಮ ಅಜ್ಞಾನವೇ! ನಮ್ಮ ಅಂಧಶ್ರದ್ಧೆಯೇ! ನಮ್ಮ ನಿರ್ವಿಚಾರ ಬುದ್ಧಿಯೆ! ಹೀಗಿದ್ದು ನಾವು ಆಸ್ತಿಕರೆಂದು ಹೇಳಿಕೊಳ್ಳುತ್ತೇವಲ್ಲ! ಹೇಗೂ ನಾವು ಪೂಜಾವಿಧಾನಗಳಲ್ಲಿ ಪ್ರವೀಣರು! (experts) ಅವೆಲ್ಲವನ್ನೂ ಸುಲಭಹಾದಿಗೆ ಇಳಿಸಿಕೊಂಡ (made easy) ಬುದ್ಧಿವಂತರು ನಾವು. ನಮ್ಮ ಪೂರ್ವಜರಂತಲ್ಲ. ಯಾರಿಂದಾದರೂ ನಮಸ್ಕಾರ ಹಾಕಿಸಿದರೆ ದುರ್ಗಾ ನಮಸ್ಕಾರವಾಗುತ್ತೆ; ದೀಪ ನಮಸ್ಕಾರವಾಗುತ್ತೆ; ಸೂರ್ಯ ನಮಸ್ಕಾರವಾಗುತ್ತೆ! ಪರ್ವಕ್ಕೊಮ್ಮೆ ಪುಸ್ತಕಗಳ ಕಟ್ಟನ್ನು ತೆಗೆದು ಪಟ್ಟೆ ಸುತ್ತಿ ನಮಸ್ಕಾರ ಹಾಕಿದರೆ ಶಾರದಾ ಪೂಜೆಯಾಯಿತು. ಅಂತೆಯೇ ಸೌದೆಯ ಅಟ್ಟದಲ್ಲಿ (lumberoom) ತುಕ್ಕು ಹಿಡಿದು ಬಿದ್ದಿರುವ ಆಯುಧಗಳನ್ನು ತೆಗೆದಿಟ್ಟು ನಮಸ್ಕಾರ ಹೊಡೆದರೆ ಆಯಿತು ಆಯುಧ ಪೂಜೆ! ಇನ್ನು ನಮ್ಮ ಅನ್ನದಾನದ ವಿಚಾರವೂ ವಿಚಿತ್ರ! ಉಣ್ಣಲಿಲ್ಲದ ಹಸಿಗೆ ಎತ್ತಣಿಂದಲೂ ಕರೆ! ಕರೆಯಿಲ್ಲದೆ ಹೋಗುವ ಸೋಮಾರಿ ಟೊಣಪಣ್ಣನವರಿಗೂ ಅನ್ನದಾನವಿದೆಯೆನ್ನಿ! ಆದರೆ ಅನ್ಯಜಾತಿಯ ದೀನಾನಾಥ ಬಡಬಗ್ಗರು ಅರ್ತರು ಕುಂಟರು ಕುರುಡ ಇಂತಹರ್ಯಾರಾದರೂ ಹತ್ತಾರು ಜನರು ಆಶೆಯಿಂದ ಬೈಗಿನವರೆಗೂ ಕಾದುಬಿದ್ದಿದ್ದು 'ದನ್ನಯ್ಯಾ! ಒಂದುಮುಷ್ಟಿ!' ಎಂದರೆ "ಇಲ್ಲ, ಹೋಗು! ಎಲ್ಲ ಕರ್ಚಾಗಿ ಹೋಯಿತು." ಅನ್ನೇಕೆ? ಕೊರಗರು ಎಂಜಲೆಲೆ ಬೇಡಿದರೆ ಪ್ರತಿಫಲವಾಗಿ ಒಂದು ಬುಟ್ಟಿಯನ್ನೋ ಕುಕ್ಕೆಯನ್ನೋ ಕೇಳುವ ದಾನಶೀಲರೂ ಇದ್ದಾರೆ! ಈ ರೀತಿಯಲ್ಲಿಯೂ ಆ ದೇವಿಗೆ ನಾವು ಮಾಡುತ್ತಿರುವ ಮಾಡಿಸುತ್ತಿರುವ ದಶರಾತ್ರಿಯಾರಾಧನೆಗಳಿಂದ ಅವಳು ಪ್ರಸನ್ನಳಾಗಿ ಲೋಕಾರಿ

ಸಕಲೇಶಪುರದ

ಟೌವನ್ ಮುನಿಸಿಪಾಲಿಟಿ

ಈ ಟೌವನಿನಲ್ಲಿ ಹೇಮಾವತಿ ನದಿಯ ಪಕ್ಕದ ಮೈದಾನದಲ್ಲಿ ತಾ 12-11-1936 ರಿಂದ 15-11-1936ರ ವರೆಗೆ ದನಗಳ ಜಾತ್ರೆಯು ನಡೆಯುತ್ತದೆ. ದಾಸುಗಳಿಗೆ ಸುಂಕವಿಲ್ಲ, ನೀರಿನ ಹುಲ್ಲಿನ ಮತ್ತು ಸ್ಥಳದ ವಸತಿ ಚೆನ್ನಾಗಿರುತ್ತೆ. ಉತ್ತಮ ದಾಸುಗಳಿಗೆ ಬಹುಮಾನವು ಕೊಡಲ್ಪಡುತ್ತೆ. ಈ ಪ್ರದರ್ಶನವು ಕುಲಗುಂದದ ಜಾತ್ರೆಗೆ ಮೊದಲೇ ಆಗುವುದರಿಂದ ಒಳ್ಳೆ ದಾಸುಗಳ ಮಾರಾಟವಾಗುವ ಸಂಭವವಿದೆ.

ಸಕಲೇಶಪುರ } ಅಬ್ದುಲ್ಲಾ ಹುಸೇನ್ ಷರೀಫ್, ಪ್ರೆಸಿಡೆಂಟ್.

ಕಿರಿಯರ ಪ್ರಪಂಚದ ಪುಸ್ತಕಗಳು.

೧. ನಾಟಕಥೆ	೦	೨	೦
೨. ಮುಂದಿನ ದೇವರು	೦	೨	೦
೩. ಸ್ವತಂತ್ರ ಜೀವನೋಪಾಯ	೦	೨	೬
೪. ಕುಶಲವ	೦	೪	೦
೫. ಸಂಶಯ ಪಿಶಾಚಿ	೦	೬	೦
೬. ಕಾವ್ಯಸಾಮ್ರಾಜ್ಯ	೦	೧೨	೦
೭. ಮಧುವನ	೧	೮	೦
೮. ವ್ಯಭಿಚಾರಿಣಿ ಯಾರು	೦	೮	೦

ನಮ್ಮಲ್ಲಿ ಅಖಿಲ ಕರ್ನಾಟಕದ ಆಧುನಿಕ ಕನ್ನಡ ಗ್ರಂಥಗಳು ದೊರೆಯುತ್ತವೆ.

ಕಿರಿಯರ ಪ್ರಪಂಚ, ಉಡುಪಿ, ದ. ಕ.
ಹೋಲ್ ಏಜಂಟರು—
ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

ಷ್ಟಗಳನ್ನು ದೂರಮಾಡಿ ನಮಗೆ ಬುದ್ಧಿಶಕ್ತಿ ಬಾಹುಶಕ್ತಿ ವಿದ್ಯಾರಾರೋಗ್ಯೈಶ್ವರ್ಯಾದಿ ಸಕಲ ಮನೋಭಿಷ್ಟಗಳನ್ನು ಅವಳಲ್ಲಿರುವ ನಮ್ಮ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ ಲೆಕ್ಕದಲ್ಲಿ ಜಮೆ ಬರೆದುಕೊಳ್ಳುವಳೆಂದು ನಂಬುವರೆಷ್ಟು ಮಂದಿ! ಮಾತ್ರವಲ್ಲ, ತಮ್ಮ ಪುಣ್ಯದ ಡಿಪಾಜಿಟ್ ಲೆಕ್ಕವು ದಿನೇ ದಿನೇ ವೃದ್ಧಿಯಾಗುತ್ತಾಲಿದ್ದ ಯೆಂದು ಹಿಗ್ಗಿ ನೆರೆದವರಿಂದ ಪುಣ್ಯಾತ್ಮನೆಂದು ಶ್ಲಾಘಿಸಿಕೊಳ್ಳುವವರೆಷ್ಟಿಲ್ಲ! ಮತ್ತಷ್ಟು ಚೋದ್ಯವೇನೆಂದರೆ ಇವರ ಹೆಸರಿಗೆ ಜಮೆಯಾಗುವ ಆ ಇಷ್ಟಫಲಗಳಿಗೆ ಇವರು ಚೆಕ್ ಕೊಟ್ಟಾಗ ಅದು ಡಿಸ್ಆನರ್ (dishonour) ಆಗಿ ಬಂದರೂ ತಮ್ಮ ಆಚರಣೆಯಲ್ಲೇನೋ ನ್ಯೂನತೆಯಿದೆ ಎಂಗರಿಯದೆ ಹಿಡಿದ ದಾರಿಯಲ್ಲೇ ಮತ್ತೂ ಮತ್ತೂ ಮುಂದುವರಿಯುತ್ತಿರುವ ಮಂದಿಯ ಮನೋವೃತ್ತಿಯು ವಿಚಿತ್ರ

ಇಂತಹ ನಿರಾಶಾಮಯ ಅಂಧಕಾರದಲ್ಲಿಯೂ ಕಾಲಪರಿವರ್ತನೆಯ ಅವಸ್ಥಾಂತರಕ್ಕೊಳಪಟ್ಟು ದಸರೆಯ ಧ್ಯೇಯ ತತ್ವಗಳನ್ನು ಪುನಃ ಪ್ರಚಾರಕ್ಕೆ ಬರುವ ಲಕ್ಷಣಗಳು ಅಲ್ಲಲ್ಲಿ ಕಾಣಬರುವುದು ಸಂತೋಷದಾಯಕವಾಗಿದೆ. ಸಾಹಿತ್ಯ ಗೋಷ್ಟಿಗಳು, ಕಲಾಕೌಶಲ್ಯ ಪ್ರದರ್ಶನಗಳು, ಗರಡಿಸ್ಥಾಪನೆಗಳು, ನಿಸರ್ಗದ ರಹಸ್ಯವನ್ನು ಭೋದಿಸುವ ಉಪನ್ಯಾಸ ಪ್ರದರ್ಶನಾದಿಗಳು, ಧಾರ್ಮಿಕ ಕೂಟಗಳು ಮುಂತಾದುವನ್ನು ನಾಡಿನ ಸರ್ವತೋಮುಖವಾದ ಅಭಿವೃದ್ಧಿಯ ಧ್ಯೇಯದಿಂದ ಏರ್ಪಡಿಸಿಕೊಂಡಿರುವ ಹಲವು 'ನಾಡಹಬ್ಬದ' ಸಂಸ್ಥೆಗಳು ದಸರೆಯ ಧ್ಯೇಯವನ್ನು ಇಂದಿನ ಪರಿಸ್ಥಿತಿಗೆ ತಕ್ಕಂತೆ ತನ್ನ ಜೀವನದಲ್ಲಿ ಇಳಿಸಿಕೊಳ್ಳುವ ಪ್ರಯತ್ನಮಾಡುತ್ತಿರುವುದು ಆಶಾಜನಕವಾಗಿದೆ. ಅವಸ್ಥಾಂತರ ಕಾಲದಲ್ಲಿ ಲೋಪಗಳೂ ನ್ಯೂನತೆಗಳೂ ಬರುವುದು ಸಹಜ. ಆದೂ ಕಾರಣ ಅವೆಲ್ಲ ಆದರ್ಶವೆನ್ನಲಾಗುವುದಿಲ್ಲವಾದರೂ ಆದರಣೀಯವಾಗಿವೆ. ಅವನ್ನು ಪ್ರೋತ್ಸಾಹಿಸಿ ರೂಪಗೊಳಿಸುವುದು ವಿಚಾರಗಳೆಲ್ಲರ ಕರ್ತವ್ಯ. ಅವಕ್ಕೆ ನೆರವಾಗಿ ಬರುವುದು ನಾಡಿನ ಮೇಲ್ಮೆಯನ್ನು ಹಾರೈಸುವವರ ಮೊದಲ ಕಾರ್ಯ ಇಂದಿನ ವಿಚಾರ ಯುಗದ ಕಿರಿಯರು ನೋಡಿ ತಿಳಿದು ನಲಿದು ಅವುಗಳ ಉತ್ಸಾಹ ತೋರುವುದು ಅವರ ಪಾಲಿನ ಕರ್ತವ್ಯ.

ಕೊವಡ್ಕಲ್ ಶ್ರೀನಿವಾಸ ರಾವ್, ಉಡುಪಿ

ನಾರದನ ತಂಬೂರಿ

ನರ ನಾರಾಯಣ! ನರ ನಾರಾಯಣ! ಘುಂಯಿ, ಘುಂಯಿ! ಕಾಸಾಡಿದ ಕಡೆ ಕೈಯಾಡಿಸುವಾ! ಕಲಿಗಳು ಕಲಿಯುಗದಿ! ಘುಂಯಿೋ! ನರ ನಾರಾಯಣ! ಶುಭವಾಗಲಿ ಮಾನವರೆ! ವರ್ತಕ ಧುರೀಣವ ಜಮದಗ್ನಿಯು ಕೊಂಗ್ರೆಸಿನ ಕುರಿತು ಕೆಂಡಾಬಟ್ಟಿ ಹುಟ್ಟಿದವನೆಂದು ಬುದ್ಧಿಗಾಗಿ ಒಂದೆರಡು ಖಾರ ಮಾತಾಡಿದ್ದೆ–ಖಾರವು ಅವನ ಪ್ರಕೃತಿಗೆ ಒಗ್ಗುವದಿಲ್ಲವೆಂದು ಗೊತ್ತಿದ್ದರೂ ಹಾಗೆಯೇ ಬಿಡಬೇಕಾಯಿತೆನ್ನಿ! ಪಾಪ! ಅವರಿಂದ ಹೊಸತೊಂದು ರೋಗವೇ ಹುಟ್ಟಿ ಜಮದಗ್ನಿ ಕೈ ಬಾಯಿ ಬಡಕೊಳ್ಳುವಂತಾಗಬೇಕೇ? ನರ ನಾರಾಯಣ! ಮತ್ತೇನೂ ಇಲ್ಲ-ಕೇವಲ ಬಾಯಾಕಳಿಸುವ ಹೊಸ ರೋಗ!! ಅಯ್ಯೋ ಪಾಪ! ಘುಂಯಿ, ಘುಂಯಿ! ವಿಷಯದ ಪರಿವೆಯೆ ಇಲ್ಲದೆ ಹರಟುವ ವಿಷಮಯ ರೋಗವು ಹಾನಿಕರ! ಘುಂಯಿ, ಘುಂಯಿೋ ನರ ನಾರಾಯಣ.

●

ಮತ್ತೊಂದು ತಮಾಷೆ ನೋಡಿ. ದ. ಕ. ಕೊಂಗ್ರೆಸು ಕಮಿಟಿಯ ಕಾರ್ಯದರ್ಶಿ ಶ್ರೀ. ಬಿ. ಭೋಜರಾಯರೂ ಆ ಕುರಿತು ಬುದ್ಧಿ ಹೇಳಲು ಬಂದರು ಜಮದಗ್ನಿ ಎದ್ದೇ ಬಿಟ್ಟನಯ್ಯ! "ಮುಖಂಡರ ಹೆಸರಿಗೆರಚಲು ನಾನು ಒಟ್ಟುಕೂಡಿಸಿದ ಕೆಸರನ್ನೆಲ್ಲಾ ನಿಮ್ಮ ಮುಖಕ್ಕೆ ಬಳಿದು ಬಿಡುತ್ತೇನೆ" ಎಂದು ಹೆದರಿಸಿದ್ದಾನೆ! ನರ ನಾರಾಯಣ! ನಾನೊಂದು ನೋಟೀಸು ಹಚ್ಚುತ್ತೇನೆ- ಓದಿಬಿಡಿ–"ಹೇಸಿಕೆ! ಹೇಸಿಕೆ!! ಆದುದರಿಂದ ಜಾಗ್ರತೆ! ಜಮದಗ್ನಿಯ ಬಳಿಸಾರುವವರಿಗೆ ಕೆಸರು ಬೀಳುವ ಸಂಭವವಿರುವದರಿಂದ ಎಲ್ಲರೂ ಹತ್ತು ಗಜ ದೂರದಲ್ಲೇ ಇರಬೇಕಾಗಿದೆ" ನರ ನಾರಾಯಣ! ಘುಂಯಿ, ಘುಂಯಿ,!! ಕೆಸರಿನ ಜಾತಿಯ ನಾಯಕನಾದರೆ! ನಿರ್ಮಲದವರನು ಗೆಲಬಹುದು!! ಘುಂಯಿ, ಘುಂಯಿ, ನರ ನಾರಾಯಣ.

●

ಇನ್ನೊಂದೆಡೆಯಲ್ಲಿ ಒಬ್ಬರು ಹೇಳುತ್ತಾರೆ 'ಜಮದಗ್ನಿ ಸ್ವಾರ್ಥಿ' ಎಂದು. ನನಗಾ ಮಾತು ಕೇಳಲಿಕ್ಕಾಗುವದಿಲ್ಲ–ಕಿವಿ ಮುಚ್ಚಿಕೊಂಡೆ ನೋಡಿ! 'ನರನಾರಾಯಣ! ನರ ನಾರಾಯಣ! ಜಮದಗ್ನಿ ಕೇವಲ ನಿಸ್ವಾರ್ಥಿ ತನ್ನಂತೆ ಪರರನ್ನು ಬಗೆವವನು! ಕಾಂಗ್ರೆಸ್ ಕೆಲಸಮಾಡಿ ತನ್ನ ಮುಖಕ್ಕೆ ಕೆಸರು ಬಳಿದುಕೊಂಡು ಈಗ ನೆಮ್ಮದಿ ಹೊಂದಿದುದರಿಂದಲೆ ಅದೇ ಸುಖವನ್ನು ಇತರ ಕೊಂಗ್ರೆಸ್ ಕೆಲಸಗಾರರಿಗೂ ಕೊಡಬೇಕೆಂದು ಅವರ ಮುಖಕ್ಕೂ ಕೆಸರು ಬಳಿಯಲು ನೋಡುತ್ತಾನಯ್ಯ! ನರನಾರಾಯಣ' ಈಗಾದರೂ ತಿಳಿಯಿತ, ಜಮದಗ್ನಿಯು ಕಲಿಸಿಕೊಡುವ ನಿಸ್ವಾರ್ಥ ಸೇವೆಯ ರೀತಿ? ಕೊಂಗ್ರೆಸುವಾಲರೇ ಮನಸಿದ್ದರೆ ಕಲಿಯಿರಿ ನೋಡೋಣ! ಘುಂಯಿ, ಘುಂಯಿ,!! ತನ್ನಂತಾಗಲು ಪರರನು ಕಾಂಬವ! ಮಾದರಿಯಲ್ಲವೆ ನೀವ್ ಹೇಳಿ! !! ನರನಾರಾಯಣ.

ಕೊಂಗ್ರೆಸು ಜನರನ್ನೆಲ್ಲಾ ಕಷ್ಟಕ್ಕೀಡು ಮಾಡಿತು-ಎಂದು ದೂರುತ್ತಿದ್ದಾನಲ್ಲಾ ಜಮದಗ್ನಿ! ಓ ಜಮದಗ್ನಿ ಮಹರಾಯ! ಆ ಕಷ್ಟದಿಂದ ಅರ್ಧದಲ್ಲೇ ತಪ್ಪಿಸಿಕೊಂಡು ಬರುವವರನ್ನು ಕೊಂಗ್ರೆಸು ಕಟ್ಟಿಹಾಕುವದಿಲ್ಲವೆಂಬುದು ನಿನಗೂ ಅನುಭವವುಂಟಲ್ಲಯ್ಯ! ದೇಶಪ್ರೇಮಿಗಳು ತಮ್ಮ ಅಂತಃಸ್ಫೂರ್ತಿಯಿಂದ ಕಷ್ಟವನ್ನನುಭವಿಸಿ ಜನ್ಮ ಸಾರ್ಥಕಮಾಡಿಕೊಳ್ಳುತ್ತಿರುವರೆನ್ನು! ಕಷ್ಟಕ್ಕಾಗಿ ಅವರು ಅಳುವದಿಲ್ಲ ಆ ಕಷ್ಟವನ್ನು ಅರ್ಧದಲ್ಲೆ ಪರಿಹರಿಸಿಕೊಂಡ ನಿನಗೆ ದೇಶ ಪ್ರೇಮಿಗಳ ಪಾಲಿನ ಅಳುವನ್ನು ಅಳುವ ಈ ಕಷ್ಟವೇಕಯ್ಯ? ಸುಮ್ಮನೆ ಕರದಯ್ಯ ಸುಖವನ್ನು ಅನುಭವಿಸಿದರಾಗದೆ? ನಿನ್ನ ತೂಕಡಿಕೆಗೊಂದು ಹಾಡುಬೇಕಾದರೆ ನಾನು ಹಾಡುತ್ತೇನೆ-ಕಿವಿಯರಳಿಸು. ಘುಂಯಿ, ಘುಂಯಿ !! ಮೂಗನು ಕಳಕೊಂಡವ ಹೂಂಕರಿಸದೆ ! ಮೂಗನಾಗಿರುವದು ಸುಖ ! ಜೋ ಜೋ !! ಘುಂಯಿ, ಘುಂಯಿ, ನರ ನಾರಾಯಣ! ನರ ನಾರಾಯಣ!

●

'6 ತಿಂಗಳು ಒಂದು ವರುಷ ವಾಯಿದೆಯ ಸ್ವರಾಜ್ಯವು ಕಳೆದುಹೋಯಿತು'– ಎಂದು ವಾಯಿದೆಯ ಸಾಲವನ್ನು ಕೊಂಗ್ರೆಸಿನೊಡನೆ ಕೇಳುವ ದೊಡ್ಡ ಸಾಹುಕಾರನಂತೆ ಜಮದಗ್ನಿಯು ಹಂಗಿಸಿಕೇಳುತ್ತಿದ್ದಾನಲ್ಲಾ-ಹಾಗಂದರೇನಯ್ಯ? ಆರು ತಿಂಗಳು-ಒಂಭತ್ತು ತಿಂಗಳು ವಾಯಿದೆಪಡೆದು ಜೈಲು ಸೇರಿದರ ಆ ವಾಯಿದೆಗೆ ಸರಿಯಾಗಿ ನಡೆಯಲು ನಮ್ಮಿಂದಾಗುವದಿಲ್ಲ! ಸ್ವರಾಜ್ಯವೆಂದರೇನು? ಆರು ತಿಂಗಳಲ್ಲೇ ಕೊಯ್ಲಿಗೆ ಬಾರು ವರ್ತಕ ಧುರೀಣನ ಬಾಯಿಗೆ ಬೀಳುವ ವಸವವೆಂದು ನೆನಸಿದೆಯಾ ಮಹಾರಾಯಾ! ಘುಂಯಿ, ಘುಂಯಿ, !! ತಿಂಗಳ್ವರುಷವ, ಪೈ ರೂಪಾಯಿಯ ಗುಣಿಸಲು, ಸ್ವಾತಂತ್ರ್ಯವು ಬಹುದೆ? !! ಘುಂಯಿ, ಘುಂಯಿ, ನರ ನಾರಾಯಣ! ನರ ನಾರಾಯಣ!

●

'ಜಮದಗ್ನಿಯನ್ನು ನಿಮ್ಮ ಲೇಖನಗಳಿಂದ ತಲೆ ಕೆಳಗುಮಾಡಲು ಸಾಧ್ಯವಿಲ್ಲ' ಎಂದು ಭರವಸೆಯಿಂದ ಭುಜ ತಟ್ಟಿಕೊಳ್ಳುತ್ತಾನೆ [illegible] ಹಾಗೆ [illegible] ವಯ್ಯ! ಯಾರೂ ಆ ಪ್ರಯತ್ನಮಾಡಬೇಡಿ ಜಮದಗ್ನಿಯ ತಲೆ ಕೆಳಗೆ-ಮೇಲೆ, ಹಿಂದೆ-ಮುಂದೆ ತಿರುಗುತ್ತಿರುವಾಗ, ನೀವು ಕೇವಲ ಕೆಳಗೆ ಮಾಡಿಬಿಡುವದೆಂದರೆ ಆಗದ ಕೆಲಸ ಮತ್ತು ಹಾಗೆ ಮಾಡಿದರೆ ಪ್ರಪಂಚದ ಒಂದು ಮನೋಹರ ಆಟವನ್ನು ಬಂದುಮಾಡಿಬಿಟ್ಟ ದೋಷವೂ ಬರಬಹುದು. ಜಮದಗ್ನಿ ರಾಯಾ! ನಿನ್ನ ಆರೋಗ್ಯಕ್ಕೆ ಹಾನಿಯಿಲ್ಲವಾದರೆ, ಯಾರಿಗೂ ಮೇಲೆ ಕೆಳಗೆ ಮಾಡಲಾಗದಂತೆ ಈ ರೀತಿ ತಿರುಗಿಸುತ್ತಿರುವದೇ ಒಳ್ಳೆತಯ್ಯ! ಬೇಕಾದರೆ ತೆಗೆದುಕೋ-ನನ್ನ ಬೆಂಬಲ. ಘುಂಯಿ, ಘುಂಯಿ, !! ಚಕ್ರ ಲೋಕದಿ ಕಾಗೆಯ ಕಾಕಾ ಬೆಳಗಾಗುವದಂದರುಹಲಿಕೆ !! ಘುಂಯಿ ಘುಂಯಿ, ನರನಾಯಣ! ನರನಾರಾಯಣ!!

—ನಾರದ

(೩ನೇ ಪುಟದಿಂದ ಮುಂದರಿಸಿದ್ದು.)

ಬ್ರಿಗೇಡನ್ನು ಹೊರ ಕರೆಯಬೇಕಾಯಿತು ತಾರ' ದೇವಿನಲ್ಲ ಟ್ರೈನಿನಿಂದಿಳಿದ ಮುಸಲ್ಮಾನನೊಬ್ಬನು ಕಲ್ಲು ಹೊಡೆದು ಕೊಲ್ಲಲ್ಪಟ್ಟಿರುವನು ಗಿರ್ಗಾವ್ ಬೇಕ್‌ರೋಡಿನಲ್ಲ ಮುಸಲ್ಮಾನ ಜಟ್ಕಾವಾಲನೊಬ್ಬನು ಹಿಂದು ಡಾಕ್ಟರರ ಆಸ್ಪತ್ರೆಯಲ್ಲಿ ಆಶ್ರಯ ಪಡೆದಾಗ ಹಿಂದುಗಳು ಸದ್ರಿ ಆಸ್ಪತ್ರೆಯನ್ನು ಮುತ್ತಿ ಲೂಟಿಮಾಡಿ, ಕಿಟಕಿ ಬಾಗಿಲೊಡೆದು ಸಾಮಾನುಗಳನ್ನು ಮುರಿದು ಹಾಕಿದರು. ಕಡೆಗೆ ಪೋಲೀಸರು ಬಂದು ಈ ಡಾಕ್ಟರರನ್ನೂ ಜಟ್ಕಾವಾಲನನ್ನೂ ರಕ್ಷಿಸಿದರು. ಕಾರ್ನಕ್ ಬ್ರಿಜ್ಜಿನಲ್ಲಿ 3 ಮುಸಲ್ಮಾನರಮೇಲೆ ಕಲ್ಲೆಸೆದು ಇಬ್ಬರನ್ನು ತಿವಿಯಲಾಯಿತು. ಒಬ್ಬ ಮುಸಲ್ಮಾನನು ತಿವಿದು ಕೊಲ್ಲಲ್ಪಟ್ಟಿರುವನು. ಮುಸಲ್ಮಾನರು ದೇವಸ್ಥಾನವೊಂದಕ್ಕೆ ಬೆಂಕಿಕೊಡಲು ೪ದಪೆ ಪ್ರಯತ್ನಿಸಿ ನಿರಾಶರಾದರು ಸಾರ್ಜೆಂಟ್ ಶರ್ಮನರಿಗೆ ಕಲ್ಲು ಹೊಡೆಯಲ್ಪಟ್ಟು ಅವರು ಗಾಯಗೊಂಡು ಆಸ್ಪತ್ರೆಗೊಯ್ಯಲ್ಪಟ್ಟಿರುವರು. ಡೋಂಗ್ರಿಯಲ್ಲಿರುವ ಹಿಂದುಮನೆಯೊಂದನ್ನು 300 ಮಂದಿ ಮುಸಲ್ಮಾನರು ಮುತ್ತಿ ಅದಕ್ಕೆ ಬೆಂಕಿ ಕೊಡುವುದರಲ್ಲಿರುವಾಗ, ಸಬ್ ಇನ್‌ಸ್ಪೆಕ್ಟರ್ ಹಕಿಮರು ಏಕಾಕಿಯಾಗಿ ಅಲ್ಲಿಗೆ ಧಾವಿಸಿ ಮುಸಲ್ಮಾನರನ್ನು ತಡೆಗಟ್ಟಿದರು. ಆ ಮೇಲೆ ಪೋಲೀಸ್ ಸಹಾಯ ಬಂದು, 4 ಮಂದಿ ಸ್ತ್ರೀಯರು, 1 ಮಕ್ಕಳು ಮತ್ತು ಒಬ್ಬ ಮುದುಕನಿರುವ ಈ ಕುಟುಂಬವನ್ನು ರಕ್ಷಿಸಿದರು.

ಗಲಾಟೆಯ ನಿಮಿತ್ತ ಧವಸಧಾನ್ಯ, ಮಾಂಸ ಮತ್ತು ತರಕಾರಿಗಳ ಬೆಲೆಯು ಬಹಳವಾಗಿ ಹೆಚ್ಚಿರುವುದು. ಪೋಲೀಸರು ಲೋರಿಗಳಲ್ಲಿ ವ್ಯಾರ್‌ಲೆಸ್ ಸೆಟ್ಟುಗಳನ್ನಿಟ್ಟುಕೊಂಡು ಗಲಾಟೆಯ ಸ್ಥಳಗಳಲ್ಲಿ ಸಂಚರಿಸಲಾರಂಭಿಸುವರು. ಗವರ್ನರರೂ ಹೋಮ್ ಮೆಂಬರರೂ ಪೂನದಿಂದ ಬಂದು ಶಾಂತಿಸ್ಥಾಪಿಸಲೆತ್ನಿಸುತ್ತಿರುವರು. ತಾ. 17ನೇ ಮಧ್ಯರಾತ್ರಿಯ ನಂತರ ಗಲಾಟೆಯು ಸ್ವಲ್ಪ ಕಡಿಮೆಯಾಗಿರುವುದು. ಸುಮಾರು 3000 ಜನರು ಬೊಂಬಾಯಿ ಬಿಟ್ಟು ಹೋಗಿರುವರು. ಸೈನ್ಯವು ಸಿದ್ಧವಾಗಿರಿಸಲ್ಪಟ್ಟಿರುವುದು. ಕಲಹದ ವಿಷಯವನ್ನು ಮಿ. -ಎಮ್. ಎ. ಜಿನ್ನ ಮತ್ತು ಶ್ರೀ. ಭೂಲಭಾಯಿ ದೇಸಾಯಿಯವರ ಮಧ್ಯಸ್ತಿಕೆಗೊಪ್ಪಿಸುವ ಆಲೋಚನೆ ನಡೆದಿದೆ.

ತಾರೀಕು 3-10-'36.

ಕುಂದಾಪುರತಾಲ್ಲೂಕು ನಂ. 94ನೇ ಮೊಳಹಳ್ಳಿ ಗ್ರಾಮದ ಯಜಸ್‌ಕೂಡ್ಲು ಶೀಸಿ ಆಚಾರ್ತಿಮಗಳು ಸಾವಿತ್ರಿ ಆಚಾರ್ತಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ.—

ಮೊಳಹಳ್ಳಿಗ್ರಾಮದ ಹೆಸಿನಕಟ್ಟೆ ಮುತ್ತಕ್ಕ ಹೆಗ್ಗಡ್ತಿಯು ವಾದಿಯಾಗಿ ನನ್ನ ಮೇಲೆ ಕುಂದಾಪುರ ಡಿ! ಮು! ಕೋರ್ಟು ಕ್ರಮ ನಂಬ್ರ [illegible]ನೇಗೆ ಒಂದು ದಾವಾವಮಾಡಿ ಡಿಕ್ರಿ ಪಡಕೊಂಡಿರುತ್ತಾರೆ. ಸದ್ರಿ ಡಿಕ್ರಿಯ ಅಮ್ಲಜಾರಿ ಕುರಿತು ನನಗೆ ಇತ್ತಲಾಗಿ ನೋಟೀಸು ಬಂದದೆ. ಆ ನೋಟೀಸಿಗೆ, ದಸ್ಕತಿನ ಬಗ್ಯೆಂತ ಹೇಳಿ ನನ್ನಿಂದ 3 ಹೆಬ್ಬೆಟ್ಟು ಮೊಹರುಗಳನ್ನು ಕೋರ್ಟು ಮೇಡೆಯ ವಳಸಂಚಿಯಿಂದ ಸದ್ರಿ ಮುತ್ತಕ್ಕ ಹೆಗ್ಗಡ್ತಿಯ- ಅಣ್ಣ ತೇಜಪ್ಪ ಹೆಗ್ಡೆಯು ಪಡಕೊಂಡು ಹೋದ ಸಂಗ್ತಿ ಈಗ ನನ್ನ ತಿಳುವಳಿಕೆಗೆ ಬಂದಿರುತ್ತದೆ. ಈ ಮೂಲಕ ಸದ್ರಿ ಹೆಬ್ಬೆಟ್ಟುಗಳನ್ನು ಬರಹಗೊತ್ತಿಲ್ಲದ ನನ್ನಿಂದ ತೇಜಪ್ಪ ಹೆಗ್ಡೆಯು ಅಕ್ರಮ ಲಾಭ ಹೊಂದುವ ಕೆಟ್ಟ ವಿಚಾರದಿಂದ ಪಡಕೊಂಡದ್ದಾಗಿರಬೇಕು. ಅಂಥಾ ಹೆಬ್ಬೆಟ್ಟಿನ ಆಧಾರದಮೇಲೆ ಸದ್ರಿಯವನು ತಯಾರಿಸ ಬಹುದಾಗುವ ಯಾವತ್ತು ರಿಕಾರ್ಡುಗಳು ಯಾವ ಸಂದರ್ಭದಲ್ಲಿಯೂ, ನನ್ನಮೇಲೆ ಬಾಧ್ಯವಾಗತಕ್ಕದ್ದಲ್ಲ ಎಂಬ ಸಂಗ್ತಿ ಇದರಿಂದ ವ್ಯಕ್ತಪಡಿಸುತ್ತೇನೆ

|| ಈ ಗೆರೆ ಸಾವಿತ್ರಿ ಆಚಾರ್ತಿ ರುಜು.

I Write as I Please

by **B. N. RAO**

The reception given by the public of Udipi to the Hon'ble Minister of Public Works was anything but enthusiastic. Nor did he, on his part, create any good impression by his visit. It is generally believed that Mr. Rajan's visit was in connection with the forthcoming elections to the local Legislative Assembly. Rumour has it that he approached Mr. Dharmasthal Manjayya Hegde to stand on the Justice ticket from the Puttur division constituency in opposition to Mr. K. R. Karanth, the probable Congress candidate.

It is also stated that he sounded the Mathadhipathis of Udipi as regards the possibility of their lending their support to the Justice Party candidate from the Coondapur division constituency. It is to be hoped however that the Mathadhipathis will not be misled by the blandishments of the propagandists of the Justice Party. Apart from the fact that every vote cast for the Justice Party would be a vote against Swaraj, let it be remembered that it is the Justice Party that is responsible for the commun. ! G. O. And the Mathadhipathis would only be stultifying themselves if they are so ill-advised as to exercise their influence on behalf of the now thoroughly discredited Justice Party.

An incident

Some unpleasantness seems to have been generated as a result of the Minister's visit. When he went to the Christian High School to open the Co-operator's Conference, it was noted that Mr. Aroor Lakshminarayana Rao, the Municipal Chairman, was *not* the first to be introduced to the Minister. This was regarded as a slight by some persons, who argued that as the first citizen of the town, Mr. Aroor was entitled to that honour, the Municipality's refusal to present the Minister with an address on a previous occasion notwithstanding, especially when it is remembered that he for one was not opposed to accord civic reception to the Minister.

In this connection, I was told that the tea party given by Mr. Aroor to the Minister turned out to be a highly formal affair.

Election Campaign

Mr. Oliver Zacharias addressed a meeting at Ajjarkad maidan the other day in pursuance of his election campaign. Mr. M. Vittal Kamath was in the Chair. I was all along under the impression that Mr. Kamath was a Congressman. His consenting to preside on the occasion came to me therefore as a great surprise Mr. Zacharias is standing as an independent candidate, and in view of the fact that a Congress Christian is also contesting, Mr Kamath's attitude is liable to be misunderstood by the public.

Municipal People's Party

I am authoritatively informed that while there is a definite move to formally start an opposition party in our Municipal Council and also it was originally proposal to name it as the Peopel's Party, just to a 'oid confusion with the People's Party of the Maharaja of Pithapuram, it has now been decided to change it name.

ಸ್ಪೈನಿನ ಅಂತಃಕಲಹ.

ಮೊದ್ರಿದನ್ನು ವಶಪಡಿಸಿಕೊಳ್ಳಲು ಬಂಡಾಯಗಾರರ ಪ್ರಬಲ ಯತ್ನ

ಬಂಡಾಯಗಾರರು ಮೊದ್ರಿದಿನ ದಕ್ಷಿಣ ಮತ್ತು ಈಶಾನ್ಯದ ೮ ಪ್ರಾಮುಖ್ಯ ಸ್ಥಳಗಳನ್ನು ವಶಪಡಿಸಿಕೊಂಡಿರುವರಾದರೂ ಮೋದ್ರಿದ್ ವೆರೆನೀಸಿಯ ರೈಲ್ವೆ ಇನ್ನೂ ಯಥಾಪ್ರಕಾರ ಚಲಿಸುತ್ತಿರುವುದು. ಈ ರೈಲ್ವೆಯು ಮುಖ್ಯ ಜಂಕ್ಷನೊಂದಾದ ಅಂದಜುವೇಜ್ ಸ್ಟೇಶನಿನ ಮೇಲೆ ಬಂಡಾಯಗಾರರು ಪುನಹ ವಿಮಾನ ಧಾಳಿ ನಡಿಸಿರುವರು. ಮೋದ್ರಿದಿನ ಅಧಿಕಾರಿಗಳೂ ಜನರು ವೃಥಾ ರಕ್ತಪಾತ ಮಾಡದೆ ಶರಣಾಗತರಾಗಬೇಕೆಂದು ಪುನಹ ವಿಮಾನಮೂಲಕ ಕರಪತ್ರಗಳನ್ನು ಹಂಚಲಾಗಿದೆ.

ಒವೀಡೋ ಎಂಬಲ್ಲಿ ಸರಕಾರಿ ಕಡೆಯವರಿಗೂ ಬಂಡಾಯಗಾರರಿಗೂ ಭೀಷಣ ಕೈ ಕೈ ಹೋರಾಟ ನಡೆದಿರುವುದು ಗಣಿಯಾಳುಗಳು ಸಿಡಿ ಮದ್ದನ್ನುಪಯೋಗಿಸಿ ಬಂಡಾಯಗಾರರ ಆಶಯಗಳನ್ನು ಸ್ಫೋಟಗೊಳಿಸುತ್ತಿರುವರು. ಒವೀಡೋಕ್ಕೆ ಬರುವ ಬಂಡಾಯಗಾರರ ಕಡೆಯ ಮೂರಿಶ್ ಸೈನಿಕರು ತಡೆಗಟ್ಟಲ್ಪಟ್ಟು ಅನೇಕ ಮಂದಿ ಕೊಲ್ಲಲ್ಪಟ್ಟಿರುವರೆಂದು ಸರಕಾರದ ಕಡೆಯ ಸುದ್ದಿ. ಒವೀಡೋದಲ್ಲಿ 2000 ಮಂದಿ ಸರಕಾರಿ ಕಡೆಯವರು ಕೊಲ್ಲಲ್ಪಟ್ಟಿರುವರೆಂದ ಬಂಡಾಯಗಾರರ ಕಡೆಯ ವಾರ್ತೆ.

ಇದೇ ತಾ. 15ರಲ್ಲು ಬಂಡಾಯಗಾರರು ಮೋದ್ರಿದಿನ ಮೇಲಿನ ಪ್ರಬಲ ಧಾಳಿಯನ್ನಾರಂಭಿಸಿರುವರು. 3 ಕಡೆಗಳಿಂದ ಅವರು ಮುಂದೊತ್ತಿ ಬರುತ್ತಿರುವರು. ಒವೀಡೋದಲ್ಲಿ ಭೀಷಣ ಹೋರಾಟ ನಡೆದಿರುವುದು. 1000 ಮಂದಿ ಬಂಡಾಯಗಾರರು ಕೊಲ್ಲಲ್ಪಟ್ಟಿರುವರೆಂದು ಸರಕಾರದ ಕಡೆಯ ಸುದ್ದಿ ಸ್ಪೈನಿಶ್ ಮೊರೊಕ್ಕೋ ದೇಶಕ್ಕೆ ಸ್ವತಂತ್ರರಾಜ್ಯಭಾರವೀಯುವ ಆಶೆಯನ್ನು ಬಂಡಾಯಗಾರರು ತೋರಿಸುತ್ತಿರುವರು.

ಹಿಂದೂದೇಶದಲ್ಲಿ ಇದುವರೆಗೆ ತಯಾರಾದ ಚಿತ್ರಗಳಲ್ಲಿ
ಅತೀ ಉತ್ತಮವಾದ ನ್ಯೂಥಿಯೇಟರ್ಸ್ ಚಿತ್ರ
ಮಿಲಿಯನಯರ್ ಅಥವಾ ಕ್ರೋಢಪತಿ
ಸೈಗಲ್, ರಾಜಕುಮಾರಿ, ನವಾಬ್, ಮಲಿನಾ, ಸನ್ಯಾಲ್
ಅಲ್ಲದೆ ಈ ಜಗತ್ಪ್ರಖ್ಯಾತ ಕಂಪೆನಿಯ ಎಲ್ಲಾ ನಟನಟಿಯರು!
ಶ್ರೀ ಚಿತ್ರಾ ಟಾಕೀಸ್, ಮಂಗಳೂರು,
ಇಲ್ಲಿ ತಾರೀಕು 21-10-'36ರಿಂದ ಪ್ರದರ್ಶಿಸಲ್ಪಡುವುದು.

ESTD 1906.

CANARA BANK, LIMITED.

OFFICES AT

Alleppey	Chikmagalur	Kasargod
Arsikere	Cochin	Mangalore-Bunder
Badagara	Coondapoor	Mangalore-City
Bangalore City	Davangere	Manjeshwar
Bombay-Fort	Dodballapur	Moolky
Bombay-Mandvi	Ernaculam	Payyannur
Bantwal	Ganguli	Puttur
Calicut	Hubli	Udipi
Cannanore	Karkala	

Total Working Funds Rs. 75,00,000

ಬರುವ ವಾರ

ಸನಾತನಿಗಳ ಅನಭಿಷಿಕ್ತ ರಾಜ (ಕಥೆ)

ಜಗತ್ತಿಗೆ ಶಾಂತಿ ಬೇಕಂತೆ! ಶಾಂತಿ!! (ಲೇಖನ)

ಇವೇ ಮೊದಲಾದ ಅಮೂಲ್ಯ ವಿಷಯಗಳು ಬರುವವು. ಒಗಟೂ ಇದೆ. ಓದಲು ಮರೆಯಬೇಡಿರಿ.

ನವಯುಗ

ಉಡುಪಿ, ತಾ. ೨೨-೧೦-'೩೬ ಗುರುವಾರ

ಅಂಧಶ್ರದ್ಧೆಯೇ ಕಾರಣ

ವಿಚಾರವಿಹೀನ ಮಾನವನು ಪಶುವಿಗಿಂತಲೂ ಕಳಕೆಯಿರುವನು. ಸಂದರ್ಭಾನುಸಾರ ಅವನು ತನ್ನ ಮಾನವತ್ವವನ್ನೆ ಮರೆತು ದಾನವನಂತೆ ವರ್ತಿಸಿ ಸಮಾಜಕ್ಕೇನೇ ಅನಾಹುತಕಾರಿಯಾಗುವನು. ಕ್ರೂರ ಪ್ರಾಣಿಗಳಿಂದ ಆಗುವ ಹಾನಿಗೊಂದು ಪರಿಮಿತಿಯಿದೆ. ಆದರೆ ವಿಚಾರ ವಿವೇಕಹೀನ ಮಾನವ ಪ್ರಾಣಿಯಿಂದ ಸಮಾಜಕ್ಕಾಗುವ ಹಾನಿಯು ಇಷ್ಟಿಷ್ಟೆಂದು ಹೇಳಬರುವದಿಲ್ಲ. ಯಾವುದಾದರೊಂದು ಬಗೆಯ ಭ್ರಾಂತಿಗವನು ಕಟ್ಟುಬಿದ್ದನೆಂದರೆ ಒಂದಿಷ್ಟು ವಿಚಾರವಿಲ್ಲದೆ ಎಂತಹ ಪೈಶಾಚಿಕ ಕೃತ್ಯಕ್ಕೂ ಹೇಸನು. ಜನತೆಯಲ್ಲಿ ವಿಚಾರ ಶಕ್ತಿಯನ್ನು ಹೆಚ್ಚಿಸಿ ಅವರು ತಮ್ಮ ಮಾನವ್ಯದ ವಿಶಿಷ್ಟತೆಯನ್ನರಿತು ಸಮಾಜದ ಹಿತಸಾಧಕರಾಗಿ ನಡೆವಂತೆ ಮಾಡುವ ಬದಲಿಗೆ, ಅವರನ್ನು ಅಂಧಶ್ರದ್ಧೆಯ ಗೂಡೊಳಗಿರಿಸಿ, ತಮಗೆ ಬೇಕಾದಂತೆ ಕುಣಿಯಲು ಸರ್ಕಸಿನ ಪ್ರಾಣಿಗಳಂತೆ ತರಬೇತಿ ಮಾಡಿಟ್ಟುಕೊಳ್ಳುವ ಧರ್ಮ ದೇವರುಗಳ ಸೋಗಿನಿಂದ ನಾನಾ ರೀತಿಯ ಭ್ರಾಂತಿಯನ್ನು ಹಬ್ಬಿ ಕ್ಷುದ್ರ ಸ್ವಾರ್ಥ ಸಾಧಿಸುವ ಕುಹಕತನವು ಪೂರ್ವಕಾಲದಿಂದಲೂ ನಡೆದು ಬಂದಿರುವುದು. ಅದೇ ಸಮಾಜದಲ್ಲಿ ಇಂದಿಗೂ ಪ್ರತಿಷ್ಠೆ ಪಡೆದು ಮೆರೆಯುತ್ತಿರುವುದು. ಜನಸಾಮಾನ್ಯರು ಅದರ ಸೂಕ್ಷ್ಮಜಾಲದಲ್ಲಿ ಬಿದ್ದು ನರಕುರಿಗಳಂತೆ ನಡೆಯುವರು. ಎಂತಹ ವಿದ್ಯೆಬುದ್ಧಿಯ ಮಾನವನಾದರೂ ಈ ಧರ್ಮದೇವರುಗಳೆಂದರೆ ಪ್ರತಿನಿಧಿಗಳೆನಿಸುವ ಕುಹಕಿಗಳ ಬಲೆಯೊಳಗೆ ಬಿದ್ದನೆಂದರೆ ಮತ್ತವನು ಅವರ ಸೂತ್ರದಗೊಂಬೆಯಾಗಿ ಹೋಗಿಬಿಡುವನು. ಬಾಲ್ಯಾರಾಭ್ಯದಿಂದ ರಕ್ತದಲ್ಲ ಸೇರಿ ಬಂದಿರುವ ಈ ಅಂಧಶ್ರದ್ಧೆಯು ಅವನನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿ ಒಂದಿಷ್ಟು ವಿಚಾರಶಕ್ತಿಯೇ ಇಲ್ಲದ ಪ್ರಾಣಿಯಾಗಿ ಮಾಡಿಬಿಡುವುದು. ಇಂದೀಗ ಸಮಾಜದ ಜನಸಾಮಾನ್ಯರ ಅವಸ್ಥೆಯಿದು. ಅವರೆಷ್ಟು ವಿದ್ಯಾವಂತರಾದರೂ ಸುಸಂಸ್ಕೃತರು ಮತ್ತು ಉದಾರ ಹೃದಯಿಗಳೆನಿಸಿಕೊಂಡರೂ, ಧಾರ್ಮಿಕ ಅಂಧಶ್ರದ್ಧೆಯ ಪ್ರಶ್ನೆ ಬಂದಾಗ, ತಾವು ಕಟ್ಟು ಬಿದ್ದಿರುವ ಮೂಢ ಸಂಪ್ರದಾಯಗಳಿಗೆ ಧಕ್ಕೆ ಬರುವಸಂದರ್ಭವುಂಟಾದಾಗ ಹಿಂಸ್ರ ಪಶುಗಳಿಗಿಂತಲೂ, ಬರ್ಬರ ಮಾನವನಿಗಿಂತಲೂ ಹೀನವಾಗಿ ನಡೆಯುವರು. ಆಗ ಎಂತಹ ಪೈಶಾಚಿಕ ಕೃತ್ಯವಾದರೂ ಅವರಿಗೆ ಪವಿತ್ರ ಕರ್ತವ್ಯವಾಗುವುದು.

ಇಂತಹ ಮನೋವೃತ್ತಿಯೇ, ದೇಶದಲ್ಲಿ ಆಗಾಗ ಕಾಳ್ಗಿಚ್ಚಿನಂತೆದ್ದು ದೇಶದ ಹೆಸರಿಗೇನೇ ಕಳಂಕ ಪ್ರಾಯವಾದ, ಮಾನವ ಧರ್ಮ ವಿಘಾತುಕವಾದ ಹಿಂದುಮುಸಲ್ಮಾನ ಗಲಾಟೆಗೆ ಕಾರಣವಾಗಿದೆ. ಕೋನಪುರದಲ್ಲಿ ನಡೆದ ಭಯಂಕರ ಮಾನವ ಮಾರಣವು, 1932ರಲ್ಲಿ ಭೊಂಬಾಯಿಯಲ್ಲಿ ನಡೆದ ಭೀಷಣನರಯಜ್ಞವು, ಇಂದೀಗ ಬೊಂಬಾಯಿಯ ಹೆಸರನ್ನೇ ಕಳಂಕವ ಕೆಸರಲ್ಲದ್ದಿದುವ ಘೋರ ಅತ್ಯಾಚಾರದ ಮೂಲಕಾರಣವೇ ಈ ಅಂಧಶ್ರದ್ಧೆ. 1932ರ ಬೊಂಬಾಯಿಯ ಭೀಕರ ನರಹತ್ಯೆಯು, ಅತ್ಯಾಚಾರವು, ಮೊಹರಮ್ ಹಬ್ಬದ ಸಂದರ್ಭದಲ್ಲಿ ವೇಷಹಾಕಿಕೊಂಡುಹೋದ ಮುಸಲ್ಮಾನ ಹುಡುಗರು ಕೆಲವರಿಗೆ ಆದೊಂದು ಮನೆಯ ಹಿಂದುಗಳು ಹಣಕೊಡದೆ ನಿರಾಕರಿಸಿದರೆಂಬುದರಿಂದಲೇ ಆರಂಭವಾಗಿ ಘೋರ ಅನಾಹುತಕ್ಕೆ ಕಾರಣವಾಯಿತು. ಇಂದೀಗ ಮಸೀದಿಯೊಂದರ ಬಳಿಯ ಮಾರುತಿ ದೇವಸ್ಥಾನದಿದಿರಲ್ಲಿ ಸಭಾಮಂಟಪವೊಂದನ್ನು ಕಟ್ಟುವ ನಿಮಿತ್ತ ಗಲಾಟೆಯೆದ್ದಿರುವುದು. ಅಂಧ ಶ್ರದ್ಧೆಗೆ ಕಟ್ಟುಬಿದ್ದ ಮಾನವನು ಎಂತಹ ಅಲ್ಪದ ಕಾರಣಗಳಿಂದಾಗಿ ದೊಡ್ಡ ಅನಾಹುತವನ್ನುಂಟುಮಾಡಿಕೊಳ್ಳುವನೆಂಬುದನ್ನು ಚಿತ್ತವೇಧಕವಾಗಿ ಮನಗಾಣಿಸುವ ವಿದ್ಯಮಾನಗಳಿವು. ಅವಿಚಾರಿ ಮಾನವನು ದೇವಧರ್ಮಗಳ ಹೆಸರುಗಳನ್ನು ಆದೆಂತಹ ಪೈಶಾಚಿಕ ಅಮಾನುಷ ಕೃತ್ಯಗಳಿಗೆಲ್ಲಾ ಉಪಯೋಗಿಸುವನೆಂಬುದನ್ನು ಹೃದ್ರಾವಕವಾಗಿ ವಿದಿತಪಡಿಸುವ ಸಂಗತಿಗಳಿವು. ಮಸೀದಿ ದೇವಸ್ಥಾನಗಳ ಕಟ್ಟಡ, ಪೂಜೆ ಪುರಸ್ಕಾರಗಳು ಮಾತ್ರವೇ ದೇವಧರ್ಮಗಳು; ಅವೇ ತಮ್ಮ ಧಾರ್ಮಿಕತೆಯ ಸರ್ವಸ್ವವೆಂಬ ಮನೋವೃತ್ತಿಯೇ ಎಲ್ಲೆಲ್ಲಿಯೂ ಪ್ರಬಲವಾಗಿ ನೆಲೆಗೊಂಡು ಅವಕ್ಕಾಗಿ ಕೋಟಿಗಟ್ಲೆ ಹಣವ್ಯಯವಾಗುತ್ತಿದೆ; ಅವುಗಳ ಹೆಸರಲ್ಲ ಎಂತಹ ಅತ್ಯಾಚಾರವೂ ಪವಿತ್ರತೆಯ ವೇದಿಕೆಗೇರಿಸಲ್ಪಡುತ್ತಿದೆ; ಎಂತಹ ಅನಾಹುತಕ್ಕೂ ಸಂತೋಷದಿಂದ ತಲೆಯೊಡ್ಡಲಾಗುತ್ತದೆ. ಇಂತಹ ಧರ್ಮವು ಅಂಧವಿಶ್ವಾಸವು, ಅವಿಚಾರವು ಜನರಲ್ಲಿ ನೆಲೆಗೊಂಡಿರುವವರೆಗೆ, ವಿದ್ಯಾವಂತರೆನಿಸುವವರೂ ಅವರ ತಾಳಕ್ಕೆ ತಕ್ಕ ಹೆಜ್ಜೆ ಹಾಕಿ ಕುಣಿಯುತ್ತಾ ಬರುತ್ತಿರುವವರೆಗೆ ಸಮಾಜದಲ್ಲಿ ಸ್ವಾಸ್ಥ್ಯ ಸುಭಿಕ್ಷೆಯುಂಟಾಗಲು ಮಾನವ ಬಾಂಧವ್ಯವು ನೆಲೆಗೊಳ್ಳಲು, ಮಾನವನು ಸುವಿಚಾರಿ ಸುಸಂಸ್ಕೃತಸಮಾಜಹಿತಸಾಧಕನಾಗಿ ಬೆಳೆಯಲು ಸಾಧ್ಯವಿಲ್ಲ.

ಉಡುಪಿ

ನವರಾತ್ರಿ—ಕಳೆದ ೧೯ನೇ ಮಿಕ್ರವಾರದಿಂದ ಶ್ರೀ. ರಾಮಕೃಷ್ಣ ಥಿಯೇಟರಿನಲ್ಲಿ ನವರಾತ್ರಿಯ ಕಾರ್ಯಕ್ರಮವು ಮೊದಲಾಗಿದೆ. ಪ್ರಥಮ ದಿನ ಟಾ-ಟಾ ನಾಟಕವೂ, ಎರಡನೆಯ ದಿನ ಗಾಯನವೂ, ಮೂರನೆ ದಿನ ಉಡುಪಿ ವ್ಯಾಯಾಮ ಶಾಲೆಯವರ ಉತ್ತಮ ರೀತಿಯ ವ್ಯಾಯಾಮವೂ ಪ್ರದರ್ಶಿಸಲ್ಪಟ್ಟವು. ನಾಲ್ಕನೆಯ ದಿವಸ 'ಪ್ರಾಮಾ ಅಸ್-ಟು-ಡೇಟ್' ನಾಟಕದ ಪ್ರದರ್ಶನವಾಗುವಾಗ ಜನರು ಅತೃಪ್ತಿಗೊಂಡು ಗಲಾಟೆಯೆಬ್ಬಿಸಿದರು; ಗಲಾಟೆಯು ಮಿತಿಮೀರಿದುದರಿಂದ ಅರ್ಧದಲ್ಲೆ ನಾಟಕ ಪ್ರದರ್ಶನವನ್ನು ಮುಗಿಸಬೇಕಾಯಿತು ಮರುದಿನ ಪರಿಕಥೆ. ತಾ 21 ಕ್ಕೆ ಸಂಗೀತಕಚೇರಿಯೂ, 2೨ಕ್ಕೆ ಸತ್ಯವಾನ್ ಸಾವಿತ್ರಿ ನಾಟಕವೂ, ೨೩ಕ್ಕೆ ವ್ಯಾಯಾಮ ಪ್ರದರ್ಶನವೂ, ೨೪ಕ್ಕೆ 'ಪೈಲಾದ ಮಿಡಾ ವ್ಯಗ್ಗ' ನಾಟಕವೂ ಜರಗುವುದು.

ಮಂತ್ರಿಗಳ ಆಗಮನ— ಮದ್ರಾಸಿನ ಅಭ್ಯುದಯ ಖಾತೆಯ ಮಂತ್ರಿಗಳಾದ ಮಾನ್ಯ ಶ್ರೀ. ಪಿ. ಟಿ. ರಾಜರು ಕಳೆದ ತಾ. 17—10—36ರಲ್ಲಿ ಉಡುಪಿಗೆ ಚಿತ್ತೈಸಿದರು. ಮಂತ್ರಿಗಳು ಅಪರಾಹ್ನ ಘಂಟೆ ೩ಕ್ಕೆ ಸರಿಯಾಗಿ ಉಡುಪಿ ಸಹಕಾರಸಂಘದವರ ಸ್ವಾಗತದ ಏರ್ಪಾಡು ನಡೆದಿದ್ದ ಕ್ರಿಶ್ಚಿಯನ್ ಹೈಸ್ಕೂಲಿಗೆ ಪ್ರವೇಶಿಸಿ ಉಡುಪಿ ನಗರ ಸಭಾಧ್ಯಕ್ಷರಿಂದಲೂ ಉಡುಪಿ ತಾಲೂಕು ಸಹಕಾರ ಯೂನಿಯನಿನ ಅಧ್ಯಕ್ಷರಾದ ಶ್ರೀ. ಕೆ. ಜಿ. ಬಲ್ಲಾಳರೇ ಮೊದಲಾದವರಿಂದಲೂ, ಸ್ವಾಗತೀಕರಿಸಲ್ಪಟ್ಟರು. ಶ್ರೀಯುತ ಬಲ್ಲಾಳರು ಅತಿಥಿಗಳಿಗೆ ಪುಷ್ಪಹಾರ ಹಾಕಿ ಸತ್ಕರಿಸಿ, ರೇಷ್ಮೆಯ ವಸ್ತ್ರದಲ್ಲಿ ಮುದ್ರಿಸಲ್ಪಟ್ಟಿದ್ದ ಮಾನಪತ್ರವನ್ನೋದಿ ಸಮರ್ಪಿಸಿದರು. "ಕೃಷಿಕರ ಅವನತಿಯು ದೆಸೆಯಿಂದ ಸಹಕಾರಸಂಘಗಳಿಗೆ ತಗಲಿದ ದಕ್ಕೆಯ ಪ್ರಸ್ತಾವನೆಯೂ, ಕಲ್ಯಾಣಪುರ, ಭದ್ರಗಿರಿ, ಉಪ್ಪೂರುಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಸಹಕಾರೀ ಸಂಘದ ಕಾರ್ಯಗಳಿಗೆ ಪ್ರೋತ್ಸಾಹಬೇಕೆಂಬ ಅರಿಕೆಯೂ ಜಿಲ್ಲೆಗೊಂದು ಲೇಂಡ್ ಮೊರ್ಗೇಜ್‌ಬೇಂಕನ್ನು ಸ್ಥಾಪಿಸುವ ಭಿನ್ನಹವು ಮಾನಪತ್ರದಲ್ಲಿ ಅಡಕವಾಗಿತ್ತು. ಮಾನ್ಯ ಮಂತ್ರಿಗಳು ಉತ್ತರ ನೀಡುವಾಗ ಸಹಕಾರೀ ಸಂಘಗಳ ದುರವಸ್ಥೆಯು ಪ್ರಾಂತಕ ಪ್ರಶ್ನೆಯೆಂದೂ ಭದ್ರಗಿರಿ ಕಲ್ಯಾಣಪುರಗಳ ವಿಷಯವಾಗಿ ಹೆಚ್ಚಿನ ಮಾಹಿತಿಯಿಲ್ಲವಾದುದರಿಂದ ಮದ್ರಾಸಿಗೆ ಹೋದವನೇ ಸಹಾನುಭೂತಿಪೂರ್ವಕವಾಗಿ ವಿಚಾರಿಸುವೆನೆಂದೂ ಹೇಳಿದರು. ಕೆಲ್ಲಿಕೋಟೆಯಲ್ಲಿ ಸಿಕ್ಕಿದ ಮಾನಪತ್ರದಲ್ಲಿಯೂ ಪ್ರಾರ್ಥಿಸಲ್ಪಟ್ಟ 'ಲೇಂಡ್ ಮೊರ್ಗೇಜ್' ಬೇಂಕಿನ ಸ್ಥಾಪನೆಯ ಕುರಿತು ಸದ್ಯಕ್ಕೆ ಎರಡೂ ಜಿಲ್ಲೆಗಳಿಗೊಂದನ್ನು ಸ್ಥಾಪಿಸುವ ಯೋಜನೆಯು ಸರಕಾರದ ಮುಂದಿರುವದೆಂದರು. ಮಂತ್ರಿಗಳ ಭಾಷಣವಾದ ಮೇಲೆ ಸಭಿಕರ ಪರಿಚಯವನ್ನು ಮಾಡಿಕೊಳ್ಳಲು ಶ್ರೀ. ಕೆ. ಜಿ. ಬಲ್ಲಾಳರೊಂದಿಗೆ ಹೊರಟವರು ಪದ್ಧತಿಯಂತೆ ಉಡುಪಿಯ ನೇಯುರರಿಗೆ ಪ್ರಥಮ ಸಂಭಾವನೆಯಷ್ಟೇ ಯಲಿಲ್ಲ; ಈ ಕಾರಣದಿಂದ ನಗರಾಧ್ಯಕ್ಷ ಶ್ರೀ ಆ ರೂದರು ಹಸ್ತಲಾಘವವನ್ನೀಯಲು ಮುಂದಾಗಲಿಲ್ಲ. ಸಭಿಕರೆಲ್ಲರ ಪರಿಚಯ, ಹಸ್ತಲಾಘವವಾದ ಮೇಲೆ ಟೀಪಾರ್ಟಿಯಾಗಿ ಅಲ್ಲಿಂದ ಉಡುಪಿ ಮಾಧ್ವ ಶಾಲೆಯನ್ನು ಸಂದರ್ಶಿಸಿ, ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಟೀಪಾರ್ಟಿಗೆ ತೆರಳಿದರು ಸತ್ಕಾರಕೂಟಕ್ಕೆ ಉಡುಪಿಯ ಹೆಚ್ಚಿನ ಪ್ರಮುಖ ನಾಗರೀಕರು ಚಿತ್ತೈಸಿದ್ದರು ಇತರ ಮುನಿಸಿಪಲ್ ಮೆಂಬರರಿಗೆಲ್ಲಾ ಆಮಂತ್ರಣವಿದ್ದರೂ, ಹರಿಜನ ಮೆಂಬರರಿಗಿರಲಿಲ್ಲವೆಂದು ತಿಳಿದುಬರುತ್ತದೆ. ಟೀಪಾರ್ಟಿಯಾದ ಮೇಲೆ ಗಾಯನವೂ ಇದ್ದಿತು ರಾತ್ರಿ ಶ್ರೀ ಕೃಷ್ಣ ದೇವಸ್ಥಾನವನ್ನು ಸಂದರ್ಶಿಸಿ ಅಂದು ಸರ್ಕ್ಯೂಟ್ ಹೌಸ್ ಬಂಗಲೆಯಲ್ಲುಳಿದು ಮರುದಿನ ಮಂಗಳೂರಿಗೆ ಹೊರಟುಹೋದರು.

ಕ್ರಿಕೆಟ್ ಟೀಮು—ಇಲ್ಲಿಯ ವೈ ಎಮ್. ಎಸ್. ಕ್ಲಬ್ಬಿನವರು ಕುಂದಾಪುರಕ್ಕೆ ಹೋಗಿ ಕುಂದಾಪುರದ ಟೀಮಿನವರನ್ನು ಕ್ರಿಕೆಟ್ ಮೇಚಿನಲ್ಲಿ ಸೋಲಿಸಿದರು. ವೈ ಎಮ್. ಎಸ್. ಸಿ. ಯವರಿಗೆ 123 ರನ್ನುಗಳೂ ಕುಂದಾಪುರ ಟೀಮಿನವರಿಗೆ 62 ರನ್ನುಗಳೂ ದೊರೆತಿದ್ದವು. ಉಡುಪಿ ಟೀಮಿನ ಕೆಪ್ಟನ್ ಶ್ರೀ. ಎಚ್. ರಾಮನಾಥಯ್ಯರು 44 ರನುಮಾಡಿದ್ದರು.

ಭಾಷಣ—ಪಶ್ಚಿಮ ಕರಾವಳಿಯ ಕ್ರಿಶ್ಚಿಯನ್ ಕೊನ್ಸ್ಟಿಟ್ಯೂಯನ್ಸಿನ ಎಸೆಂಬ್ಲಿ ಉಮೇದ್ವಾರರಾದ ಪ್ರೊಫೆಸರ್ ವಿ. ಒಲಿವರ್ ಉರ್ಫ್. ಇ. ಝಕಾರಾಯಸ್‌ರವರು ಅಜ್ಜರ ಕಾಡಿನ ಮೈದಾನಿನಲ್ಲಿ ವಕೀಲ್ ಶ್ರೀ. ಎಮ್. ವಿಟ್ಠಲ ಕಾಮತರ ಅಧ್ಯಕ್ಷತೆಯಲ್ಲಿ ಭಾಷಣವಿತ್ತರು. ಭಾಷಣಕಾರರು ದೇಶ ಮತ್ತು ಮತದ ಹಿತರಕ್ಷಣೆಯನ್ನು ಸಮರ್ಥಿಸಿ, ಒಳ್ಳೇ ಭಾಷಣಕಾರಬಲ್ಲ, ಕೆಲಸಮಾಡಬಲ್ಲ ಉಮೇದ್ವಾರರನ್ನು ಮತದಾರರು ಆರಿಸಬೇಕೆಂದೂ, ಪರೀಕ್ಷಿಸುವುದಾದರೆ ಆ ವಿಷಯಗಳಲ್ಲಿ ಇತರರೊಡನೆ ಸ್ಪರ್ಧಿಸಲು ತಾನು ಸಿದ್ಧನಿರುವೆನೆಂದೂ ತಿಳಿಸಿದರು. ಓಟಿಗಾಗಿ ಹಣವೀಯುವದನ್ನು ಖಂಡಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಾಮ್ರಾಜ್ಯವಾದ ಮತ್ತು ಧನದೌಲತ್ತನ್ನು ವಿರೋಧಿಸಿ ಬಡವರಿಗೆ ಸಹಾಯ ಮಾಡುವವರನ್ನೇ ಮತದಾರರು ಆರಿಸಬೇಕೆಂದರು.

ವರ್ಗಾ ವರ್ಗಿ—ಮುನಿಸಿಪಲ್ ಕಮಿಶನರರಾಗಿರುವ ಶ್ರೀ. ಯು. ಎಸ್. ಕೃಷ್ಣನಾಯ್ಕರು ಇಲ್ಲಿಂದ ವರ್ಗಾಯಿಸಲ್ಪಟ್ಟು, ಕಣ್ಣಾನೂರಿನ ಕಮಿಶನರ್ ಶ್ರೀ. ನಾರಾಯಣ ಶೆಣೈಯವರು ಇಲ್ಲಿಗೆ ನೇಮಿಸಲ್ಪಡುವರೆಂದು ತಿಳಿದುಬರುತ್ತದೆ.

ನಗರಸಭೆಯ ಸಾಮಾನ್ಯಸಭೆಯು ನಾಳೆ (ತಾ. 23—10—36) ನೆರೆಯಲಿರುವದು.

ಬರುವ ತಾ. ೧—೧೧—೩೬ಕ್ಕೆ ಕೆನರಾ ಬೇಂಕಿನ ಶಾಖೆಯೊಂದು ಉಪ್ಪಿನಂಗಡಿಯಲ್ಲಿ ತೆರೆಯಲ್ಪಡುವದು. ಶ್ರೀಯುತ ಧರ್ಮಸ್ಥಳ ಮಂಜಯ ಹೆಗ್ಡೆಯವರು ತೆರೆಯೋಣ ಸಮಾರಂಭವನ್ನು ಮಾಡುವರು. ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಇದರ ಶಾಖೆಯೊಂದು ಇದೇ ತಾ. ೨೪ಕ್ಕೆ ಕಾಸರಗೋಡಿನಲ್ಲಿಯೂ ತಾ. ೨೯ಕ್ಕೆ ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿಯೂ ತೆರೆಯಲ್ಪಡುವದು.

ಮಂಗಳೂರು.

ಮಂತ್ರಿಗಳ ಆಗಮನ

ಕೈ. ವಾ. ಅಬ್ದುಲ್ಲಾ ಹಾಜಿಯವರ ಭಾವಚಿತ್ರದ ಅನಾವರಣ.

(ನಮ್ಮ ಸ್ವಂತ ಬಾತ್ಮಿದಾರರಿಂದ)

ಮಂಗಳೂರು, ತಾ. ೧೬—೧೦—'೩೬.

ಮದ್ರಾಸ್ ಸರಕಾರದ ಡೆವಲಪ್‌ಮೆಂಟ್ ಇಲಾಖೆಯ ಮಂತ್ರಿಗಳಾದ ಮಾನ್ಯ ಶ್ರೀ ಪಿ. ಟಿ. ರಾಜನ್‌ರವರು ಕಳೆದ ತಾ. ೧೮ರಲ್ಲಿ ಮಂಗಳೂರಿಗೆ ಬಂದರು. ಜ. ಬೋ. ಅಧ್ಯಕ್ಷರೂ ಇನ್ನೂ ಅನೇಕ ಅಧಿಕಾರಿಗಳೂ, ಅನಧಿಕಾರಿಗಳೂ ರೈಲ್ವೆ ಸ್ಟೇಷನಕ್ಕೆ ಹೋಗಿ ಮಂತ್ರಿಗಳನ್ನು ಇದಿರ್ಗೊಂಡು ಹೂವಿನಹಾರಗಳನ್ನು ಸಮರ್ಪಿಸಿ ಉಪಚರಿಸಿ ಸ್ವಾಗತೀಕರಿಸಿದರು. ನೆರೆದಿದ್ದ ಮಹನೀಯರ ಪರಿಚಯವನ್ನು ಮಾನ್ಯ ಮಂತ್ರಿಗಳಿಗೆ ಮಾಡಿಸಿಕೊಟ್ಟ ಬಳಿಕ ಅವರು ಎಲ್ಲರಿಗೂ ಹಸ್ತಲಾಘವವನ್ನಿತ್ತು ದಿವಾನ್ ಬಹದ್ದೂರು ಮಹಾಬಲ ಹೆಗ್ಡೆಯವರ ಅತಿಥಿಗಳಾಗಿ ಅವರಲ್ಲಿಗೆ ಚಿತ್ತೈಸಿದರು

ಅಂದೇ ಸಾಯಂ. 5-30ಕ್ಕೆ ಸರಿಯಾಗಿ ಜಿಲ್ಲಾ ಬೋರ್ಡು ಭವನದಲ್ಲಿ ಕೈ. ವಾ. ಖಾನ್ ಬಹದ್ದೂರು ಹಾಜಿ ಅಬ್ದುಲ್ಲಾ ಹಾಜಿ ಖಾಸಿಂ ಸಾಹೇಬ್ ಬಹದ್ದೂರರವರ ಭಾವ ಚಿತ್ರದ ಅನಾವರಣೋತ್ಸವವು ಮಾನ್ಯ ಮಂತ್ರಿಗಳಿಂದ ನೆರವೇರಿಸಲ್ಪಟ್ಟಿತು. ಜಿಲ್ಲಾ ಬೋರ್ಡು ಅಧ್ಯಕ್ಷರು ಮಂತ್ರಿವರ್ಯರನ್ನು, ಭಾವಚಿತ್ರ ಅನಾವರಣ ಮಾಡಬೇಕೆಂದು ಕೇಳಿಕೊಳ್ಳುವ ಸಂದರ್ಭದಲ್ಲಿ ದಿವಂಗತ ಹಾಜಿ ಅಬ್ದುಲ್ಲಾ ಹಾಜಿಯವರ ಸಂಕ್ಷಿಪ್ತ ಜರಿತ್ರೆಯನ್ನು ಸೂಚಿಸಿ ಅವರು ಹೇಗೆ ಧರ್ಮ ಪ್ರಭುಗಳೆಂಬ ಹೆಸರು ಪಡೆದಿದ್ದರೆಂಬುದನ್ನು ವ್ಯಕ್ತಪಡಿಸಿದರು. ಶ್ರೀ ರಾಜನರು ದಿವಾನ್ ಬಹದ್ದೂರು ಹೆಗ್ಡೆಯವರು ಸೂಚಿಸಿದ ವಿಷಯಗಳೆಲ್ಲವನ್ನೂ ಅನುಮೋದಿಸಿ ಖಾನ್ ಬಹದ್ದೂರ್. ಅಬ್ದುಲ್ಲಾ ಹಾಜಿಯವರಂತಹ ಪ್ರಸಿದ್ಧ ಪುರುಷರ ಚಿತ್ರವನ್ನು ಅನಾವರಣಮಾಡುವ ಸಂದರ್ಭವು ತಮಗೊದಗಿದುದಕ್ಕಾಗಿ ಸಂತೋಷಪಟ್ಟರು. ಅನಂತರ ಸಭಿಕರ ಕರತಾಡನದ ಮಧ್ಯದಲ್ಲಿ ಚಿತ್ರವನ್ನು ಅನಾವರಣಮಾಡಿದರು ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳನ್ನರ್ಪಿಸಿದ ತರುವಾಯ ಸಭಾಂತ್ಯವಾಯಿತು.

ಇದಾದಮೇಲೆ ಜ. ಬೋ. ಆಫೀಸಿನಲ್ಲಿಯೇ ಬೋ. ನೌಕರರ ಸಂಘದವರು ಮಾನ್ಯ ಮಂತ್ರಿಗಳಿಗೆ ಒಂದು ಮಾನ ಪತ್ರವನ್ನು ಸಮರ್ಪಿಸಿ ಅದರಲ್ಲಿ ತಮ್ಮ ಕೋರಿಕೆಗಳನ್ನು ಮಂತ್ರಿವರ್ಯರ ಅವಗಾಹನೆಗೆ ಬರುವಂತೆ ನಿರೂಪಿಸಿದರು. ತಮ್ಮ ಉತ್ತರದಲ್ಲಿ ನೌಕರರ ಸಂಕಷ್ಟಗಳನ್ನು ಸರಕಾರದ ಅವಗಾಹನೆಗೆ ತರುವುದಕ್ಕೆ ತಾವು ಯತ್ನಿಸುವುದಾಗಿ ಅವರು ಹೇಳಿದರು. ಧನ್ಯವಾದ ಸಮರ್ಪಣೆಯಾದಮೇಲೆ ಸಭೆಯು ಮುಕ್ತಾಯವಾಯಿತು.

ಮುಂಡಾಜೆಗೆ ಪ್ರಯಾಣ

ತಾ. 16ನೇ ದಿನ ಬೆಳಗ್ಗೆ ಮಾನ್ಯ ಮಂತ್ರಿಗಳು ಜ. ಬೋ. ಅಧ್ಯಕ್ಷರೊಡನೆ ಮುಂಡಾಜೆಗೆ ಹೋಗಿ ಅಲ್ಲಿಯ ಆಸುಪಾಸಿನ ಹಳ್ಳಿಗಳಲ್ಲಿರುವ ಕೆಲ ಅಡಿಕೆ ತೋಟಗಳನ್ನು ಸಂದರ್ಶಿಸಿ, ಕೊಳೆ ರೋಗವು ಎಷ್ಟರ ಮಟ್ಟಿಗೆ ಪ್ರಬಲವಾಗಿದೆಯೆಂಬುದನ್ನು ಸ್ವತಃ ಪರಿಶೀಲಿಸಿಕೊಂಡು ಬಂದರು.

ಈ ದಿನ ಸಾಯಂಕಾಲ ಮಾನ್ಯ ಮಂತ್ರಿಗಳು ಸೈಂಟ್ ಎಲೋಸಿಯಸ್ ಕಾಲೇಜಿನ ವಿದ್ಯಾರ್ಥಿಗಳಿಗೆ ಪಾರಿತೋಷಕವನ್ನು ಹಂಚುವ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ವಹಿಸಿದರು. ಕಾಲೇಜಿನ ಅಧಿಕಾರಿಗಳು ಅಧ್ಯಕ್ಷರಿಗೆ ಸ್ವಾಗತ ಬಯಸಿದ ತರುವಾಯ ಮಂತ್ರಿ

ಗಳು ಸಮಯೋಚಿತ ಮಾತುಗಳಿಂದ ಕಾಲೇಜಿನವರನ್ನು ವಂದಿಸಿ ಪಾರಿತೋಷಕಗಳನ್ನು ಹಂಚಿದರು ಮತ್ತು ತಮ್ಮ ಭಾಷಣದಲ್ಲಿ ಕೆಥೋಲಿಕ್ ಮಿಶನಿನವರು ವಿದ್ಯೆಗೆಕೊಡುತ್ತಿರುವ ಪ್ರೋತ್ಸಾಹವನ್ನು ಪ್ರಶಂಸಿಸಿ ಮಾತಾಡಿದರು. ಆ ಮೇಲೆ ಕಾಲೇಜಿನ ವಿದ್ಯಾರ್ಥಿಗಳು ನಾಟಕಗಳನ್ನಾಡಿ ತೋರಿಸಿದರು. ಹರ್ಷಚಿತ್ತರಾಗಿ ಮಂತ್ರಿಗಳು ಹಿಂತಿರುಗಿದರು.

ಉಡುಪಿಗೆ ಪ್ರಯಾಣ

ತಾ 17ರಲ್ಲಿ ಶ್ರೀ| ಪಿ ಟಿ ರಾಜನವರು ಮೂಲ್ಕಿಯ ಮಾರ್ಗವಾಗಿ ಉಡುಪಿಗೆ ಪ್ರಯಾಣಮಾಡಿದರು.

ತಾ 18ರಲ್ಲಿ ಮಂಗಳೂರು ಕೋ ಆಪರೇಟಿವ್ ಸಂಘದ ವಾರ್ಷಿಕಸಭೆಯ ಅಧ್ಯಕ್ಷತೆಯನ್ನು ವಹಿಸಿ ಅಲ್ಲಿ ಅಮೋಘವಾದ ಭಾಷಣವನ್ನಿತ್ತರು. ಅಲ್ಲದೆ ಮಂತ್ರಿಗಳಿಗೆ ಫಲಾಹಾರಾದಿ ಸತ್ಕಾರಗಳೂ ನಡೆದುವು.

ಪೀಠಾಪುರದ ಮಹಾರಾಜರು.

ನೂತನವಾಗಿ ಸ್ಥಾಪಿತವಾದ ಮದ್ರಾಸಿನ "ಪೀಪ್‌ಲ್ಸ್ ಪಾರ್ಟಿ"ಯ ಮುಂದಾಳುಗಳಾದ ಪೀಠಾಪುರದ ಮಹಾರಾಜರೂ, ಯುವರಾಜರೂ, ಮಾಜಿ ಮಂತ್ರಿಗಳಾದ ಶ್ರೀ| ಮುತ್ತಯ್ಯ ಮುದಲಿಯಾರರೂ ಕಳೆದ ತಾ 16ನೇ ಭಾನುವಾರ ಬೆಳಿಗ್ಗೆ 9 | ಕ್ಕೆ ಕಣ್ಣಾನೂರಿನಿಂದ ಮಂಗಳೂರಿಗೆ ಬಂದಿಳಿದರು. ನಗರಸಭಾಧ್ಯಕ್ಷರಾದ ಡಾ| ಬಿಟ್ಟಲ ಶೆಟ್ಟಿಯವರೇ ಮೊದಲಾದ ಪ್ರಮುಖ ಪುರಜನರನೇಕರು ಮಹಾರಾಜರನ್ನು ಇದಿರುಗೊಳ್ಳುವುದಕ್ಕೆ ಬಂದಿದ್ದರು. ಹಿಂದೂ ಮಹಾಸಭೆ, ಬ್ರಹ್ಮಸಮಾಜ, ಮುಸ್ಲಿಂ ಅಸೋಸಿಯೇಶನ್ ಮೊದಲಾದ ಸಂಘಗಳ ಪರವಾಗಿ ಮಹಾರಾಜರಿಗೆ ಪುಷ್ಪಹಾರಗಳು ಅರ್ಪಿಸಲ್ಪಟ್ಟವು. ರಾ| ಸುಬ್ಬಕೃಷ್ಣಯ್ಯನವರು ಮಂಗಳೂರಿನ ಪುರಜನರನ್ನು ಮಹಾರಾಜರಿಗೆ ಪರಿಚಿತಮಾಡಿಕೊಟ್ಟರು. ಮಹಾರಾಜರು ಸ್ವಲ್ಪಕಾಲ ನೆರೆದಿದ್ದ ಜನರೊಡನೆ ಸಂಭಾಷಣೆಮಾಡಿದ ಬಳಿಕ ಡಿ ಸಿ ಮಿಶನಿಗೆ ಹೊರಟರು. ಅಲ್ಲಿ ಹರಿಜನರಪರವಾಗಿ ಒಂದುಮಾನಪತ್ರವು ಮಹಾರಾಜರಿಗೆ ಅರ್ಪಿಸಲ್ಪಟ್ಟಿತ್ತು. ಹರಿಜನರ ಉದ್ಧಾರದ ವಿಷಯ ತಮಗಿರುವ ಆಸಕ್ತಿಯನ್ನೀಳ ಕೆಲಮಾತುಗಳನ್ನಾಡಿದರು. ಅಲ್ಲಿಂದ ಕಂಕನಾಡಿಯ ಹಿಂದೂಶಾಲೆಗೆ ಚಿತ್ತೈಸಿ ಅಲ್ಲಿ ಶಾಲಾಮೆನೇಜರರು ಕೊಟ್ಟ ಮಾನಪತ್ರವನ್ನು ಸ್ವೀಕರಿಸಿದರು. ಶಾಲಾಮೆನೇಜರರು ಮಾಡುತ್ತಿರುವ ಸಾಹಸಕ್ಕಾಗಿ ಸಂತೋಷಪಟ್ಟು ರೈಲ್ವೇ ಸ್ಟೇಶನಿಗೆ ತೆರಳಿದರು.

ಸಾಯಂಕಾಲ 4 45ಕ್ಕೆ ರಘುನಾಥಯ್ಯ ಸ್ಮಾರಕ ಮಂದಿರದಲ್ಲಿ ಬ್ರಹ್ಮಸಮಾಜದ ಪರವಾಗಿ ಮಹಾರಾಜರಿಗೆ ಒಂದು ಮಾನಪತ್ರವು ರಾ| ಸುಬ್ಬಕೃಷ್ಣಯ್ಯನವರಿಂದ ಕೊಡಲ್ಪಟ್ಟಿತು. ಅದರಲ್ಲಿ ಮಹಾರಾಜರು ಬ್ರಹ್ಮಸಮಾಜಕ್ಕೂ, ವಿದ್ಯಾಪ್ರಸಾರಕ್ಕೂ ಕೊಡುತ್ತಿರುವ ಪ್ರೋತ್ಸಾಹವನ್ನು ಪ್ರಶಂಸಿಸಿದರು. ಮಹಾರಾಜರು ತಮ್ಮ ಉತ್ತರದಲ್ಲಿ, ತಾವು ಮಾಡಿರುವುದು ಬಹಳ ಅಲ್ಪವೆನ್ನುವುದೂ ಈ ಅಲ್ಪಸೇವೆಯನ್ನು ತಮ್ಮ ಕರ್ತವ್ಯವೆಂದು ತಾವು ಮಾಡಿರುವುದಾಗಿಯೂ ಹೇಳಿ ಮಂಗಳೂರು ಬ್ರಹ್ಮಸಮಾಜದವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಅನಂತರ ಮಹಾರಾಜರ ಗೌರವಾರ್ಥವಾಗಿ ಒಂದು ಫಲಹಾರಸತ್ಕಾರವು ನಡೆಯಿತು. ಅದರಲ್ಲಿ ಮಹಾರಾಜರೂ, ಯುವರಾಜರೂ, ಶ್ರೀ| ಮುತ್ತಯ್ಯ ಮುದಲಿಯಾರರೂ ಮತ್ತು ಮಂಗಳೂರಿನ ಪುರಜನರನೇಕರೂ ಭಾಗವಹಿಸಿದರು.

ಸಾಯಂಕಾಲ 6 ಘಂಟೆಗೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಪೀಠಾಪುರದ ಮಹಾರಾಜರು ತಮ್ಮ ಪೀಪ್‌ಲ್ಸ್ ಪಾರ್ಟಿಯ ಉದ್ದೇಶಗಳನ್ನು ಕುರಿತು ಅಮೋಘ ಭಾಷಣವಿತ್ತರು. ಜನರ ದಾರಿದ್ರ್ಯವನ್ನು ದೂರ ಹಡಿಸುವುದು, ಕೂಲಿಗಾರರಿಗೆ ಹೆಚ್ಚು ಕೂಲಿ ಬರುವಂತೆ ಮಾಡಿ ಆಗಾಗ್ಗೆ ವಿಶ್ರಾಂತಿ, ಸುಖ ಸಿಕ್ಕುವಂತೆ ಮಾಡುವುದು, ರೈತರಿಗೆ ಅನುಕೂಲವಾಗುವಂತೆ ಕಂದಾಯ ಕಡಿಮೆ ಮಾಡುವುದು ಮತ್ತು ವಸ್ತುಗಳಿಗೆ ಹೆಚ್ಚು ಬೆಲೆ ಬರುವಂತೆ ಮಾಡುವುದು, ಸಕಲರಿಗೂ ಪ್ರಾಥಮಿಕ ವಿದ್ಯಾಭ್ಯಾಸ ಕೊಡಿಸುವುದು, ಪ್ರೌಢ ವಿದ್ಯಾಭ್ಯಾಸವನ್ನು ಉಪಯುಕ್ತ ರೀತಿಯಲ್ಲಿ ಕೊಡುವುದು, ಸ್ತ್ರೀಯರಿಗೆ ಸಮಾನಹಕ್ಕು ದೊರೆಯುವಂತೆ ಮಾಡುವುದು ಇವೇ ತಮ್ಮ ಪಕ್ಷದ ಧ್ಯೇಯಗಳೆಂದರು. ಕಾಂಗ್ರೆಸಿನವರು ಸುಧಾರಣೆಗಳನ್ನು ಮುರಿಯುವ ಯತ್ನದಲ್ಲಿರುವುದನ್ನು ತಾವು ಒಪ್ಪುವುದಿಲ್ಲವೆಂದೂ, ಅಧಿಕಾರವನ್ನು ಸ್ವೀಕರಿಸಿ ಅದನ್ನು ಜನತೆಯ ಹಿತಕ್ಕೆ ಉಪಯೋಗಿಸುವುದು ತಮ್ಮ ಉದ್ದೇಶವೆಂದೂ ತಿಳಿಸಿದರು.

ಯುವರಾಜರು ತಮ್ಮ ಭಾಷಣದಲ್ಲಿ ಎಲ್ಲ ಜನರನ್ನೂ ಸುಖಮಯವಾಗಿ ನಡೆಯುವಂತೆ ಮಾಡುವುದೇ ಪಕ್ಷದ ಉದ್ದೇಶವೆಂದೂ, ಅಧಿಕಾರ ಸ್ಥಾನ ಪಡೆಯುವುದು ಮಾತ್ರವೇ ತಮ್ಮ ಉದ್ದೇಶವಲ್ಲವೆಂದೂ, ಆದ ಕಾರಣ ಎಲ್ಲರೂ ತಮ್ಮ ಪಕ್ಷಕ್ಕೆ ಸಹಾಯಮಾಡಬೇಕೆಂದೂ ಪ್ರಾರ್ಥಿಸಿದರು. ಶ್ರೀ| ಮುತ್ತಯ್ಯ ಮುದಲಿಯಾರರು ಕೆಲವು ಮಾತುಗಳನ್ನಾಡಿ ಪಕ್ಷದವರಿಗೆ ಸಹಾಯಮಾಡಬೇಕೆಂದು ಕೇಳಿಕೊಂಡರು.

ಅಧ್ಯಕ್ಷರಾಗಿದ್ದ ಶ್ರೀ| ಯಂ ಮಾಧವರಾಯರು ಮಹಾರಾಜರು ಹೊಸ ಪಕ್ಷವನ್ನು ಹೊಸ ಉದ್ದೇಶದಿಂದ ಸ್ಥಾಪಿಸಿರುವರೆಂದು ಹೇಳಿ ಎಲ್ಲರೂ, ಮಹಾರಾಜರು ಹೇಳಿದ ವಿಷಯಗಳನ್ನು ಸಾವಧಾನವಾಗಿ ವಿಚಾರಿಸಬೇಕೆಂದು ಹೇಳಿದರು.

ಈ ಮಧ್ಯೆ ಕಾಂಗ್ರೆಸಿನ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು? ಅದನ್ನೇಕೆ ನೀವು ಸೇರುವುದಿಲ್ಲ? ಎಂದು ಕೆಲವರು ಪ್ರಶ್ನೆ ಕೇಳಿದರು. ಅದಕ್ಕೆ ಉತ್ತರ ಕೊಡುವ ಬದಲಾಗಿ ಅಧ್ಯಕ್ಷರು ಸಭೆಯನ್ನು ಬರಖಾಸ್ತು ಮಾಡುವುದಕ್ಕೆ ಅಣಿಮಾಡಿದರು. ಕೂಡಲೆ ಗಲಭೆಯೆದ್ದಿತು. ಪಕ್ಷದ ಕಾರ್ಯದರ್ಶಿಗಳು ಆಗ ತಮ್ಮ ಕಾರಣಗಳನ್ನು ಕೊಟ್ಟರು. ಆದರೂ ಪ್ರಶ್ನೆ ಹಾಕಿದವರಿಗೆ ತೃಪ್ತಿಯಾಗಲಿಲ್ಲ. ಮಹಾರಾಜರು ಉತ್ತರ ಕೊಡಬೇಕೆಂದು ಪ್ರಾರ್ಥಿಸಿದರು. ಶ್ರೀ ಮಾಧವರಾಯರು ಕೋಪದಿಂದ ಏನೋ ಹೇಳಿ ಸಭೆಯನ್ನು ಬರಖಾಸ್ತು ಮಾಡಿದರು. ಶ್ರೀ| ಸುಬ್ಬಕೃಷ್ಣಯ್ಯನವರು ಆಭಾರ ಮನ್ನಿಸಿದರು.

ಮಂಗಳೂರಿನ ಯುವಕರಿಗೆ ಶ್ರೀ| ಮಾಧವರಾಯರ ಮಾತಿನಿಂದ ತುಂಬಾ ಅಸಮಾಧಾನಪಟ್ಟು, ಅದೇ ರಾತ್ರಿ ವಿದ್ಯಾರ್ಥಿ ಭವನದ ಪರಾಂಡದಲ್ಲಿ ಶ್ರೀ| ಯು ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ತಮಗೆ ಮಾಡಿದ ಅಗೌರವಕ್ಕಾಗಿ ಕೆನರಾ ಹೈಸ್ಕೂಲಿನಲ್ಲಿ ಸಭೆ ಜರಗಿಸಿದವರ ವರ್ತನೆಯನ್ನು ಖಂಡಿಸಿ, ಪೀಪ್‌ಲ್ಸ್ ಪಕ್ಷದವರು ಒಂದು ಮಾಫಿ ಕೇಳಿಕೆಯನ್ನು ಪಡೆಯುವುದಕ್ಕೆ ತುಂಬಾ ಅಸಮರ್ಥರೆಂದು ಹೇಳಿ ಸರ್ವ ಸಮ್ಮತಿಯಿಂದ ಒಂದು ಠರಾವು ಮಂಜೂರು ಮಾಡಿದರು.

ವಿವಿಧ ಧರ್ಮಗಳ ಪರಿಷತ್ತು.

ತಾ 19ನೇ ಸೋಮವಾರ ಸಾಯಂಕಾಲ ಸ್ಥಳೀಯ ಬ್ರಹ್ಮಸಮಾಜದ ಆಶ್ರಯದಲ್ಲಿ ವಿವಿಧ ಧರ್ಮಗಳ ಪರಿಷತ್ತು ಜರಗಿತು. ಪ್ರೊ| ಶ್ರೀನಿವಾಸಾಚಾರ್ಯರೇ ಮೊದಲಾದ ಅನೇಕ ವಿದ್ವನ್ಮಣಿಗಳು ಈ ಪರಿಷತ್ತಿನಲ್ಲಿ ಭಾಗ ವಹಿಸಿದ್ದರು.

ವಿದೇಶ

ಬಂಡಾಯಗಾರರ ವಿಜಯ.

ಸ್ಪೇನ್ ದೇಶದಲ್ಲಿ ಬಂಡಾಯಗಾರರು ಸಂಪೂರ್ಣ ಜಯಶಾಲಿಗಳಾಗಿ ಸರಕಾರದ ಕಡೆಯ 5000 ಸೈನಿಕರು ಕೊಲ್ಲಲ್ಪಟ್ಟಿರುವರೆಂದು ಬಂಡಾಯಗಾರರ ಕಡೆಯ ಸುದ್ದಿ. ಬಂಡಾಯಗಾರರು ಮೆಡ್ರಿಡಿನ ಕಡೆಗೆ 12 ಮೈಲು ಮುಂದುವರಿದು ದಾರಿಯಲ್ಲಿಯೇ ಕೆಲವು ಪಟ್ಟಣಗಳನ್ನು ವಶಪಡಿಸಿಕೊಂಡಿರುವರೆಂದು ತಿಳಿದುಬರುತ್ತದೆ.

ಮೇಡ್ರಿಡಿನ ಮೇಲಿನ ಬಂಡಾಯಗಾರರ ಧಾಳಿಯನ್ನು ತಡೆಗಟ್ಟುವರೆ ಸರಕಾರವು ಪ್ರಚಂಡ ಪ್ರಯತ್ನ ನಡಿಸುತ್ತದೆ. ಪ್ರಧಾನಮಂತ್ರಿ ಕೆಬಾಲೆರೋ ರವರೇ ಪ್ರಮುಖ ಸೇನಾನಾಯಕತ್ವವನ್ನು ವಹಿಸಿದ್ದಾರೆ. ಕಳೆದ ಕೆಲವು ದಿವಸಗಳಲ್ಲಿ ಸಾವಿರಾರು ಮಂದಿ ಕ್ಷೌರಮಾಡಲ್ಪಟ್ಟಿದ್ದಾರೆ. ಸಶಕ್ತರಾದವರೆಲ್ಲರೂ ಸೇನೆಗೆ ಸೇರಿಸಲ್ಪಟ್ಟಿದ್ದಾರೆ. 100,000 ಮಂದಿಯ ಸೇನೆಯು ಸಿದ್ಧವಾಗಿದೆ.

ಪೆಲೆಸ್ಟೈನದಲ್ಲಿ ಶಾಂತಿಸ್ಥಾಪಿತವಾಗುವ ಲಕ್ಷಣವು ಉಂಟಾಗುವಾಗ ಪುನಃ ಸಣ್ಣ ಗಲಾಟೆಯು ಬ್ರಿಟಿಶ್ ಸೈನಿಕರಿಗೂ ಕೆಲಮಂದಿ ಅರಬರಿಗೂ ಹೋರಾಟ ನಡೆದಿರುವುದು.

ಅಬಿಸೀನಿಯಾದ ಚತುರ ಸೇನಾನಿಯಾಗಿ ಇಟಲಿಯ ದಕ್ಷಿಣದ ಸೇನೆಯನ್ನು ತಡೆಗಟ್ಟಿದ ರಾಸ್ ನಾಸಿಬರವರು, ವಿಮಾನದವರ ಕೋವಿಗೊಳಗಾಗಿ ಆ ರೋಗಕ್ಕೆ ಚಿಕಿತ್ಸೆ ಹೊಂದಲು ಫ್ರಾನ್ಸಿಗೆ ಹೋದವರು ಅಲ್ಲಿಯೇ ಇದೇ ತಾ ೧೭ರಲ್ಲಿ ಮೃತರಾಗಿರುವರು. ಇವರಿಂದ ವೈರಿಗಳಿಗೆ ದೊಡ್ಡ ನಷ್ಟವಾದಂತಾಗಿದೆ. ನಗರವು ಎಂದೂ ಸಿಂಹಾಸನತ್ಯಾಗ ಮಾಡಲಾರರೆಂದು ತಿಳಿದುಬರುತ್ತದೆ. ಅವರು ಪನೆವದ ಬಳಿ ಒಂದು ಮನೆ ತೆಗೆದುಕೊಂಡು ವಾಸಿಸಿರುವರು.

ಇದೇ ತಾ ೧೮ರಲ್ಲಿ ಇಟಲಿಯ ವೆನಿಸ್ ಪಟ್ಟಣದಲ್ಲಿ ಭೂಕಂಪವು ಉಂಟಾಗಿ ೩೩ ಮಂದಿ ಕೊಲ್ಲಲ್ಪಟ್ಟಿರುವರು. ಹಲವು ಮನೆಗಳು ಬಿದ್ದು ಎಷ್ಟೋ ಮಂದಿಗೆ ಪೆಟ್ಟಾಗಿರುವುದು.

ಸ್ವದೇಶ

ಪಂಡಿತ ಜವಾಹರಲಾಲರು.

ಪುನಃ ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಲ್ಪಡುವುದು ಅಶಾವದ ಕವಂದು, ಮೊದಲು ಕಾಂಗ್ರೆಸಿನ ಜನರಲ ಸಕ್ರೆಟರಿಗಳಾಗಿದ್ದ ಡಾಕ್ಟರ ಸೈಯದ್ ಮಹಮ್ಮದರು ಅಭಿಪ್ರಾಯಪಟ್ಟಿರುವರು. ಸಿ ರಾಜಗೋಪಾಲಾಚಾರ್ಯರು ರಾಜಕೀಯದಿಂದ ನಿವೃತ್ತರಾಗಿರುವುದರಿಂದ ಪಂಡಿತರು ಪುನಃ ಆರಿಸಲ್ಪಡಬೇಕೆಂದವರ ಸೂಚನೆಯಾಗಿರುವುದು.

ಡಾಕ್ಟರ್ ಸತ್ಯಪಾಲರು

ವಾಯುವ್ಯ ಗಡಿನಾಡಿಗೆ ಪ್ರವೇಶಿಸಬಾರದೆಂದು ಅಲ್ಲಿಯ ಸರಕಾರವು ನಿಷೇಧಿಸುವುದರಿಂದ ಅವರು ಅಲ್ಲಿಯ ರಸ್ತೆ ಸಂಚಾರದ ಕಾರ್ಯಕ್ರಮವನ್ನೇ ರದ್ದು ಮಾಡಬೇಕಾಗಿ ಬಂದಿರುವುದು.

ಬಿರುಗಾಳಿಯಿಂದ ೪೧೫ ಮರಣ.

ಅಮೆರಿಕದ ಬಳಿಯ ಫಿಲಿಫೈನ್ಸ್ ದ್ವೀಪಗಳ ಮೇಲೆ ಇತ್ತಲಾಗಿ ಬೀಸಿದ ಭೀಕರ ಬಿರುಗಾಳಿಯಿಂದ ೪೧೫ ಮಂದಿ ಕೊಲ್ಲಲ್ಪಟ್ಟಿರುವರು. ಬೆಳೆಗಳೆಲ್ಲಾ ನಾಶವಾಗಿ ಜನರು ಉಪವಾಸ ಬೀಳುವ ಪರಿಸ್ಥಿತಿಯುಂಟಾಗಿರುವುದು.

ನೆಲ್ಲೂರಿನಲ್ಲಿ ಕಾಲರಾ ಹಾವಳಿ.

ನೆಲ್ಲೂರು ಜಿಲ್ಲೆಯಲ್ಲಿ ಮಳೆ ಬಾರದೆ ಕಳೆದ ತಿಂಗಳಲ್ಲಿ ನಡೆಯಬೇಕಾದ ನಾಟಿ ಕೆಲಸವೂ ನಿಂತು ಹೋಗಿರುವುದು. ಹಲವು ಗ್ರಾಮಗಳಲ್ಲಿ ಕುಡಿಯಲು ನೀರು ದೊರೆಯುವುದು ಕೂಡಾ ಕಷ್ಟವಾಗಿರುವುದು. ಈ ಸಂಕಷ್ಟದೊಂದಿಗೆ ಕೆಲವೆಡೆ ಕಾಲರಾ ಪೀಡೆಯೂ ಉಂಟಾಗಿರುವುದು.

ಪಂಡಿತ ನೆಹರೂಗಳು

ಹಳ್ಳಿ ಮೂಲೆಗಳಲ್ಲಿಯೂ ಅತ್ಯುತ್ಸಾಹದ ಸ್ವಾಗತ ಪಡೆಯುತ್ತಿರುವರು. ಅವರು ಹೋಗುವ ರಸ್ತೆಗಳಲ್ಲೆಲ್ಲಾ ಜನರು ಅಸ್ಸಂಗಟ್ಟಿ ನಿಂತು ಸ್ವಾಗತವೀಯುತ್ತಿರುವರು. ಸಾರ್ವಜನಿಕ ಸಭೆಗಳಿಗೆ ಇಡೀ ಹಳ್ಳಿ ಪಟ್ಟಣಗಳೇ ಬಂದು ಸೇರುವಂತೆ ತೋರುವುದು. ಅವರೊಂದಿಗೆ ಜನಸಮುದಾಯವು ಸರಿಯುತ್ತಿರುವಂತೆ ತೋರುವುದು. ಮಥುರೆಯಲ್ಲಿ ಸಲ್ಪ ರೆಸ್ಪೆಕ್ಟ್ ಪಂಗಡದವರೊಬ್ಬನು ಕೇಳಿದ ಪ್ರಶ್ನೆಗೆ ಉತ್ತರ ಕೊಡುವಾಗ ಪಂಡಿತರು, ತಾನು ಬರುವ ಚುನಾವಣೆಯಲ್ಲಿ ಉಮೇದುವಾರನಾಗಿ ನಿಲ್ಲುವುದಿಲ್ಲವೆಂದು ಹೇಳಿ ಕಾಂಗ್ರೆಸು ತನ್ನ ಕಾರ್ಯಕ್ರಮವನ್ನು ಬದಲಾಯಿಸಿ ಕೌನ್ಸಿಲು ಪ್ರವೇಶವನ್ನು ಸ್ವೀಕರಿಸುವುದೇಕೆಂಬುದನ್ನು ವಿವರಿಸಿ ಹೇಳಿದರು. ಇದೇ ತಾ ೧೮ರಲ್ಲಿ ಪಂಡಿತರು ಪ್ರವಾಸ ಮಾರ್ಗವಾಗಿ ತಿರುಚಿನಾಪಳ್ಳಿಗೆ ಹೋಗುವಾಗ ಅವರಿಗೆ ಜನರು ಸ್ವಾಗತವನ್ನೀಯದಂತೆ ಮಾಡುವ ಸಂಸ್ಥಾನದ ಸರಕಾರವು ನಿಷೇಧದ ಆಜ್ಞೆಯನ್ನಿತ್ತು ಪೋಲೀಸ್ ಬಂದೋಬಸ್ತನ್ನಿಟ್ಟಿದಿತು.

ಸ್ಕೋಟ್ ಲೇಂಡಿಗೆ ಹೋಮ್ ರೂಲ್

ಎಡಿನ್ಬರದಲ್ಲಿ ಇದೇ ತಾ ೧೩ರಲ್ಲಿ ಸ್ಕೋಟ್ಲೆಂಡಿನ ಲಿಬರಲ್ ಪಕ್ಷೀಯರ ಪರಿಷತ್ತು ನಡೆದಾಗ, ಸ್ಕೋಟ್ಲೆಂಡಿಗೆ ಹೋಮ್ ರೂಲ ಕೊಡಬೇಕೆಂದೂ, ಸ್ಕೋಟ್ಲೆಂಡಿನ ಹಿತವನ್ನು ಇಂಗ್ಲೆಂಡಿಗೆ ಸರಿಯಾಗಿ ನೋಡಲು ಅಸಾಧ್ಯವಾಗಿರುವವೆಂದೂ, ಆದುದರಿಂದ ಸ್ಕೋಟ್ಲೆಂಡಿನ ಸಾಂಪತ್ತಿಕ ಸ್ಥಿತಿಯು ಬಹಳ ಕೆಟ್ಟುಹೋಗಿರುವುದೆಂದೂ, 'ಡೂಕ್ ಆಫ್ ಮೊಂಟ್ರೋಸ್' ಇವರು ಭಾಷಣವಿತ್ತಿರುವರು.

11 ಮಂದಿಯ ಮರಣ 4 ಮಂದಿಗೆ ಜಖಮ್

ಈಜಿಪ್ತದ ಸ್ವಾತಂತ್ರ್ಯದ ವಿಷಯದಲ್ಲಿ ಅಲ್ಲಿಯ ರಾಷ್ಟ್ರೀಯ ಮುಂದಾಳು ನಾಹಾಸ್ ಪಾಶರವರಿಗೂ ಬ್ರಿಟಿಷ್ ಸರಕಾರಕ್ಕೂ ಒಡಂಬಡಿಕೆಯಾಗಿರುವುದಷ್ಟೆ. ನಾಹಸ್ ಪಾಶರವರು ಈ ಒಡಂಬಡಿಕೆಗೆ ಒಂದೆರಡು ಸಹಿಹಾಕಿ ಹಿಂತಿರುಗಿ ಕೈರೋ ಪಟ್ಟಣಕ್ಕೆ ಪ್ರಥಮ ಸಲ ಹೋದಾಗ ಪ್ರೇಮದ ಜನಸ್ತೋಮವು ಅವರನ್ನೆದುರುಗೊಳ್ಳಲು ನೆರೆದಿತ್ತು. ಆಗ ವಿಮಾನ ಒಂದು ಜನಸ್ತೋಮದ ಮೇಲೆ ಬಿದ್ದು ೧೧ ಮಂದಿ ಕೊಲ್ಲಲ್ಪಟ್ಟು ೪ ಮಂದಿ ಗಾಯಗೊಂಡಿರುವರು.

ಚುನಾವಣೆಗೆ ನಿಲ್ಲದಂತೆ ತಡೆ

ವಾಯುವ್ಯ ಗಡಿನಾಡಿನ ಪಠಾಣ ಮುಖಂಡರಾದ ಖಾನ್ ಅಬ್ದುಲ್ ಗಫಾರ್ ಖಾನರು, ಗಡಿನಾಡಿನ ಅಸೆಂಬ್ಲಿ ಚುನಾವಣೆಗೆ ನಿಲ್ಲಲು ತನಗೆ ಸಮ್ಮತಿಕೊಡಬೇಕೆಂದು ಗವರ್ನರಿಗೆ ಅರ್ಜಿಹಾಕಿದರು. ಆದರೆ ಗವರ್ನರರು ಅವರ ಮೇಲಿನ ನಿಷೇಧವನ್ನು ತೆಗೆದುಹಾಕಲಿಲ್ಲ.

ಕಿರಿಯರ ಪ್ರಪಂಚದ

ಸಾಹಿತ್ಯೋತ್ಸವ

ಇದೇ 21-10-1936ನೇ ರವಿವಾರ ಸಂಜೆ 5 ಘಂಟೆಗೆ

ಉಡುಪಿಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ಉಡುಪಿ ಮಹಾಜನ ಸಭಾ,

ಇವರ ಪೋಷಕತ್ವದಲ್ಲಿ ಜರಗುವುದು

ಘಂಟೆ 5ರಿಂದ 7ರ ವರೆಗೆ ಸಾಹಿತ್ಯದ ವಿಷಯವಾಗಿ ವಿದ್ವಜ್ಜನರ

ಭಾಷಣಗಳಿರುವವು 7ರಿಂದ 9ರ ವರೆಗೆ

"ಹೆಂಡ್ತಿ ಗಂಡನಾದರೆ!"

ಎಂಬ ನಾಟಕವೂ, ವಿನೋದ ಕಾಲಕ್ಷೇಪವೂ ಇರುವುದು. ಕಿರಿಯರ ಪ್ರಪಂಚದ ಮೆಂಬರರೆಲ್ಲಾ ಇದೇ ಆಮಂತ್ರಣವೆಂದು ಭಾವಿಸಿ, ಅಂದಿನ ಕಾರ್ಯಕ್ರಮಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

ನಾಯಕರು- 'ಕಿರಿಯರ ಪ್ರಪಂಚ'

ಪ್ರಕಟಣೆ

ದಿ ಕುಂದಾಪುರ ಬೇಂಕ್, ಲಿಮಿಟೆಡ್, ಕುಂದಾಪುರ

ಇವರ ಷೇರ್ ಒಂದರ ರೂ. ೬ರಂತೆ ಕೊಟ್ಟು 49 ಷೇರುಗಳು ಮಾರಾಟಕ್ಕೆ ಇವೆ. ಖರೀದಿಸಿ ಇಚ್ಛಿಸುವರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು. ಖರೀದಿ ಅಪೇಕ್ಷಿಸುವವರು ಒಂದೂಕಾಲಾಣೆ ಟಿಕೆಟಿನೊಂದಿಗೆ ಪತ್ರವ್ಯವಹಾರ ಮಾಡಬಹುದು.

A. B C
C/o 'Navayuga UDIPI.

ಕಟಪಾಡಿ:— ಶ್ರೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ ಇದೇ ಆಶ್ವೀಜ ಶು. ೧೧ರಿಂದ ಪ್ರಾರಂಭವಾಗುವ ಶ್ರೀ ಭಜನೆ ಸಪ್ತಾಹವು ಅಹೋರಾತ್ರಿ ೭ ದಿನಸಗಳ ವರೆಗೆ ಶ್ರೀದೇವತಾನುಗ್ರಹದಿಂದಲೂ, ಇಷ್ಟರಕ್ಕೂ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿ ಪೂರ್ವಕವಾಗಿ ಉದಾರ ಹಸ್ತದಿಂದ ಮಾಡಿದ ದ್ರವ್ಯ ಸಹಾಯದಿಂದಲೂ, ಎಂದಿನಂತೆ ಸರ್ವ ವಿಘ್ನಗಳಿಂದ ನಿರ್ಗತವಾಗಿ ಸಾಂಗವಾಗಿ ನೆರವೇರುವುದು. ಈ ಮಹೋತ್ಸವಕ್ಕೆ ತಾವು ಅಗತ್ಯವಾಗಿ ಬಂದು, ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ಎಂದು ಪ್ರಕೃತ ಪ್ರೆಸಿಡೆಂಟ್ ಶ್ರೀ. ಸಿ ಅಣ್ಣಪ್ಪ ನಾಯಕರು ತಿಳಿಸುತ್ತಾರೆ.

ಮಂಜೇಶ್ವರ:— "ಅಸಾಮಿ ಹೊರಳಿಕೆ" (False Personation) ಕಳೆದ 1924 ರಲ್ಲಿ ಕನ್ನಾನ ಅಪ್ಪುಂಞ ಬೆಳ್ಚಡನು ಉದ್ಯಾವರ ಕಾಳಮ್ಮಗೆ ಬರಕೊಟ್ಟಿದ್ದಾಗಿ, ಸ್ಥಳೀಯ ರಿಜಿಸ್ಟ್ರಿ ಆಫೀಸಿನಲ್ಲಿ ರಿಜಿಸ್ತ್ರಿಯಾದ ಒಂದು ದಸ್ತಾವೇಜು, ತಾನು ಬರಕೊಟ್ಟಿಲ್ಲ- ವ- ರಿಜಿಸ್ತ್ರಿ ಮಾಡಿಸಿಕೊಟ್ಟಿಲ್ಲವೆಂತ, ನಿಜ ವಾದ ಅಪ್ಪುಂಞ ಎಂಬವನು ರಿಜಿಸ್ತ್ರಾರವರಲ್ಲಿ ಅರ್ಜಿ ಕೊಟ್ಟಮೇರೆಗೆ, ಪೋಲೀಸ್ ತನಿಖೆ ನಡೆಯುತ್ತದೆ.

ಸದ್ರಿ ಕಾಳಮ್ಮನ ಗಂಡ ಮಾಣಿ ಆಚಾರಿ, ೧. ಅಪ್ಪುಂಞ ಬದಲಿಗೆ ರಿಜಿಸ್ಟ್ರಿಗೆ ನಿಂತವನೆಂಬ ಕೊರಗು ೨. ಈತನ ಮಾವ ಮದ್ದಪ್ಪು ಕೊಟ್ಟವನೆಂಬ ಬಬ್ಬ ೩. ಎಂಬವರು, ಮೊನ್ನೆ ತಾ. ೪ರಲ್ಲು ದಸ್ತಗಿರಿ ಮಾಡಲ್ಪಟ್ಟರಲ್ಲದೆ ಗುರ್ತುಸಾಕ್ಷಿ (ಇನೀ ಅಪಾದಿತನ ಮಗ) ರೈಲ್ವೇ ಗೇಟ್‌ಕೀಪರ್ ಕುಂಞಪ್ಪ ಮತ್ತು ಸವ್ಯಂಟೋಟ ಪೋಕರೆಬ್ಯಾರಿ ಎಂಬೀರ್ವರು, ಇಂದು ಮ್ಯಾಜಿಸ್ಟ್ರೇಟರವರ ಮುಂದೆ ಸ್ವತಹಾ ಹಾಜರಾದವರಾಗಿಯೂ ಕೇಳಿ ಬರುತ್ತದೆ.

ಈ ದಸ್ತಾವೇಜನ್ನೂ (ಇದೇ ದಸ್ತಾವೇಜಿಗೆ ಕಾರಣವಾದ ಹಿಂದಣ ಸದ್ರಿ ಅಪ್ಪುಂಞ ಹೆಸರಿನ ದಸ್ತಾವೇಜು ಬರೆದ) ಸ್ಥಳೀಯ ಬರಹಗಾರ ಬಿ. ತಿಮ್ಮಣ್ಣ ಭಟ್ಟ ಮತ್ತು ಇವರ ಅಸಿಸ್ಟಾಂಟರ ಮೇಲೆ, ಇದೇ ರಿಜಿಸ್ತ್ರಿ ಆಫೀಸಿನಲ್ಲಿಯ ರಿಕಾರ್ಡು ಫೋರ್ಜರಿ ಮಾಡಿದಕ್ಕಾಗಿ I. P. C. 466ನೇ ಸೆಕ್ಷನ್ ಪ್ರಕಾರ ನ್ಯೊಕದ್ದಮೆ ನಡೆದಿತ್ತಾಗಿಯೂ ತಿಳಿದು ಬರುತ್ತದೆ.

ಕಾರ್ಕಳ:— ಸ್ಥಳೀಯ ಆರ್ಯಸಮಾಜದಿಂದ ದಿರದಲ್ಲಿ ಕಳೆದ ಆದಿತ್ಯವಾರ ಸಾಯಂಕಾಲ ನಡೆದ ಸಾಪ್ತಾಹಿಕ ಸಭೆಯಲ್ಲಿ ಶ್ರೀ. ಕಟಪಾಡಿ ಶ್ರೀನಿವಾಸ ಶೆಣ್ಯೆಯವರು 'ವಿಕಾಸವಾದ' ದಕುರಿತು ಭಾಷಣ ವಿತ್ತರು.

ಮಳೆಯು ಆಗಾಗ ಬರುತ್ತಿರುವದರಿಂದ ಬೆಳೆ ಕಟಾವಿಗೆ ತುಂಬಾ ಅನಾನುಕೂಲವಾಗಿದ್ದು ರೈತರು ಚಿಂತಾಕ್ರಾಂತರಾಗಿದ್ದಾರೆ.

ಎರಡು ಹಾಯರ ಎಲಿಮೆಂಟರಿ ಶಾಲೆಗಳ 300-400 ಮಕ್ಕಳು ದಿನಾಲೂ ಬಂದು ಹೋಗುವ ಸುಬ್ರಾಯ ಕಾಮತರ ಓಣಿಯು ನಿವಾಸಿಗಳ ಅಜ್ಞಾನ ಮತ್ತು ಅಸಡ್ಡೆಯ ಕಾರಣದಿಂದ ತುಂಬಾ ಅನಾರೋಗ್ಯಕರ ಸ್ಥಿತಿಯಲ್ಲಿದ್ದು ಪಂಚಾಯತು ಬೋರ್ಡಿನವರು ಕೂಡಲೇ ಈ ಸಂಬಂಧ ಉಚಿತವರಿತು ವರ್ತಿಸಿ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವ ಅವಶ್ಯಕತೆಇರುತ್ತದೆ.

ಬಜ್ಪೆ:— ಇಲ್ಲಿ ನೂತನವಾಗಿ ಆರಂಭವಾದ ಪಂಚಾಯತಿ ಬೋರ್ಡಿನ ಸಭೆಯು ತಾ. ೧೧ಕ್ಕೆ ಶ್ರೀ. ಸಿ. ರಾಮಣ್ಣ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲಾಗಿ ಗ್ರಾಮಸ್ಥರಿಂದ ಬಂದಿದ್ದ ನಿವೇದನಾ ಪತ್ರವನ್ನು (ಸಭೆಯ ಮುಂದಿಡಲು) ಕೆಲವೊಂದು ಚರ್ಚೆಗಳಾಗಿ ಕಡೆಗೆ ಆ ಕುರಿತು ಅಪರಲ್ಲಿ ನಮೂದಿಸಿರುವ ಕಷ್ಟಸಂಗತಿಗಳನ್ನು ಸ್ಥಳೀಕ ಶಾಲಾಮಾಸ್ತರರನ್ನು ಕೇಳಿಕೊಳ್ಳುವದೆಂದಾಯಿತು. ಕಾರ್ಯಕ್ರಮದಲ್ಲಿದ್ದ ಇನ್ನು ಕೆಲವು ಹಳ್ಳಿ ಸುಧಾರಣೆಯ ಸಂಗತಿಗಳು ಸರ್ವಾನುಮತದಿಂದ ಪಾಸಾದುವು.

ಕೆಂಜಾರು:— ತಾರೀಕು ೬ರಲ್ಲಿ ಇಲ್ಲಿಯ ಮಕ್ಕಿ ಎಂಬಲ್ಲಿ ವೇಣಪ್ಪಾಚಾರಿ ಎಂಬವನ ಹೆಂಡತಿಯು ತನ್ನ ಗಂಡನು ತನ್ನ ಅಡವಿಟ್ಟಿದ್ದ ಆಭರಣಗಳನ್ನು ಬಿಡಿಸಲಿಲ್ಲ ಎಂಬ ನೆವದಿಂದ ತನ್ನ ಮಗುವನ್ನು ಹಿಡಿದುಕೊಂಡು ಬಾವಿಗೆ ಹಾರಿಪ್ರಾಣತ್ಯಾಗ ಮಾಡಿಕೊಂಡಳು.

ಮೂಡಬಿದ್ರಿ:— ಹತ್ತು ಹನ್ನೆರಡು ದಿನಗಳಿಂದ ತಮ್ಮ ಹರಿಕೀರ್ತನೆಗಳಿಂದ ಸಂತೋಷಗೊಳಿಸಿದ ಶ್ರೀ. ಮಲ್ಪೆ ಶಂಕರನಾರಾಯಣ ಸಾಮಗರಿಗೆ ತಾ. ೧೫-೧೦-೩೬ರಲ್ಲಿ ಇಲ್ಲಿನ ಬಡಗು ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಊರ ಮಹಾಶಯರ ನೇತೃತ್ವದಲ್ಲಿ ಸುವರ್ಣ ಪದಕ ಒಂದನ್ನು ಕೊಡಲಾಯಿತು.

ಮುಂಡ್ಕೂರು:— ಇದೇ ಕಳೆದ ತಾ. ೧೦-೧೦-೩೬ರಲ್ಲು ಮುಂಡ್ಕೂರು ಸಂಟರಿನ ಪ್ರಾಥಮಿಕ ಶಾಲಾ ಅಧ್ಯಾಪಕರ ಮಾಸಿಕ ಸಭೆಯು ಇಲ್ಲಿನ ಬಿ. ಇ. ಎಮ್ ಶಾಲೆಯಲ್ಲಿ ಮ. ರಾ. ರಾ. ಮಂಗಳೂರು ಗವರ್ನಮೆಂಟ್ ಕೊಲೇಜಿನ ಅಧ್ಯಾಪಕ ಪಿ. ಬಿ. ರೋಬರ್ಟ್, ಬಿ. ಎ. ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸದ್ರಿ ಶಾಲಾ ಅಧ್ಯಾಪಕರಲ್ಲಿ ಎಮ್. ಜಿ. ಶೆಣೈರು ಬಣ್ಣಗಳ ವಿಷಯದ ಮಾದರಿ ಪಾಠವನ್ನೂ, ಎಮ್. ವೆಂಕಣ್ಣ ಶೆಟ್ಟಿ 'ಉಪಾಧ್ಯಾಯನ ಮಾದರಿ' ಎಂಬದರ ಕುರಿತು ಭಾಷಣವನ್ನೂ ಮಾಡಿದರು.

ಇಲ್ಲಿನ ಪಂಚಾಯತ ಬೋರ್ಡು ವಾಚನಾಲಯ ಮತ್ತು ಪುಸ್ತಕ ಭಂಡಾರವು ಇದೇ ತಿಂಗಳ ತಾರೀಕಿಗೆ ತೆರೆಯಲ್ಪಟ್ಟಿದೆ. ತಾರೀಕು ೧೨-೧೦-೩೬ರಲ್ಲು ಮಂಗಳೂರು ರೇಂಜ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರವರು ವಾಚನಾಲಯವನ್ನು ಸಂದರ್ಶಿಸಿ ಸಮಾಧಾನಪಟ್ಟಿರುವರು.

ಮುಂಡ್ಕೂರು ಹಾಯರ್ ಎಲಿಮೆಂಟರೀ ಶಾಲಾ ವರ್ಷಾವಧಿ ಪರೀಕ್ಷೆ ಯು ಜರಗಿ 7 ಮಂದಿಯಲ್ಲಿ 6 ಮಂದಿ S. S. L. C. ಯನ್ನು ಪಡೆದಿರುವರು.

ಬೇಕಾಗಿದೆ

ಪುತ್ತೂರು ತಾಲೂಕು ನಂಬ್ರ ೬೨ನೇ ಕಾಣೀರು ಪಂಚ್ಯಾತು ಬೋರ್ಡಿನಿಂದ ನಡಿಸಲ್ಪಡುವ ಪಂಚ್ಯಾತು ಶಾಲೆಯಲ್ಲಿ ಉಪಾಧ್ಯಾಯ ಕೆಲಸ ಮಾಡಲು ಹೈಯರ್ ವ ಲೋವರ್ ಎಲಿಮೆಂಟರಿ ತರಬೇತಿಯಿಂದ ಒಬ್ಬ ಯೋಗ್ಯ ಉಪಾಧ್ಯಾಯರನ್ನು ತಿಂಗಳು 10 ರೂಪ್ಯಾ 15ರ ತಲಬಿನಂತೆ ಬೇಕಾಗಿಯದೆ. ಲೋವರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಿಗೆ ರೂ 12 ಮಾತ್ರ ತಲಬು ಕೊಡೋಣಾಗುವುದು ಖಾಯಶಿಯುಳ್ಳವರು ತಮ್ಮ ಸರ್ಟಿಫಿಕೇಟು ಸಮೇತ ಸದ್ರಿ ಪಂಚ್ಯಾತ್ ಬೋರ್ಡಿನ ಪ್ರೆಸಿಡೆಂಟರಿಗೆ ಕೂಡಲೇ ಮನವಿ ಮಾಡಿಕೊಳ್ಳಬೇಕು.

ಮುತ್ತಪ್ಪ ಗೌಡನ ರುಜು.

ಪ್ರೆಸಿಡೆಂಟ್ ಕಾಣೀರು ಪಂಚ್ಯಾತ್ ಬೋರ್ಡು.

ಸರ್ ಸಾಮುಲ್ದಾಸರ ಮರಣ

ಬೊಂಬಾಯಿಯ ಪ್ರಸಿದ್ಧ ವ್ಯಾಪಾರಿಗಳೂ, ಸಹಕಾರ ಚಳವಳಿಯಲ್ಲಿ ಅತ್ಯಾಸಕ್ತಿಯಿಂದ ಕೆಲಸಮಾಡಿಕೊಂಡು ಬಂದವರೂ, ಬೊಂಬಾಯಿ ಲೈಫ್ ಇನ್ಶೂರೆನ್ಸ್ ಕಂಪೆನಿಯ ಚೇಯರ್‌ಮೆನರೂ ಆದ ಸರ್ ಲಾಲೂಭಾಯಿ ಸಾಮುಲ್ದಾಸರು ಸ್ವಲ್ಪ ಸಮಯದ ಕಾಹಿಲೆಯ ನಂತರ ಇದೇ ತಾ. 14ರಲ್ಲು ಬೊಂಬಾಯಿಯಲ್ಲಿ ತನ್ನ 73ನೇ ವಯಸ್ಸಿನಲ್ಲಿ ಮೃತರಾಗಿರುವರೆಂಬುದು ಶೋಚನೀಯವಿದೆ. ತಾ. 15ರಲ್ಲು ಇವರ ಶವ ಸಂಸ್ಕಾರವು ಬೊಂಬಾಯಿಯಲ್ಲಿ ಸಂಭ್ರಮದಿಂದ ನಡೆಯಿತು. ಮಹಾತ್ಮಾ ಗಾಂಧಿ, ಸರ್ದಾರ್ ಪಟೇಲ್ ಮೊದಲಾದವರು ಸಹಾನುಭೂತಿಯ ಸಂದೇಶ ಕಳುಹಿಸಿದ್ದರು.

ಸಮಾಚಾರ ಸಂಗ್ರಹ

೩೦೦೦ ಬೇಸಾಯಗಾರರ ಮುತ್ತಿಗೆ.

ವಾರ್ಧಾ ಜಿಲ್ಲೆಯ ಮಲ್ಲಾರಿ ಎಂಬಲ್ಲಿಗೆ, ಮಧ್ಯಪ್ರಾಂತದ ಮಂತ್ರಿಗಳಾದ ಮಾನ್ಯ ಆರ್. ಬಿ. ನಾಯುಡುಗಳು ಹೋದಾಗ, ಉಣ್ಣಲಿಲ್ಲದೆ ಉಪವಾಸ ಬೀಳಬೇಕಾದ ೩೦೦೦ ಮಂದಿ ಒಕ್ಕಲಿಗರು ಅವರ ಮೋಟಾರ್‌ಕಾರನ್ನು ಮುತ್ತಿ, "ನಮಗೆ ಆಹಾರ ಕೊಡಿ; ಕೆಲಸ ಕೊಡಿ. ನಮ್ಮ ಹಸಿವನ್ನು ನೀವು ನಿಗಿಸುವ ವರೆಗೆ ನಾವು ನಿಮ್ಮ ಮೋಟಾರ್‌ಕಾರನ್ನು ಹೋಗಬಿಡೆವು" ಎಂದು ತಡೆಗಟ್ಟಿದರು. ರಾತ್ರಿ ೯ ಘಂಟೆಯ ವರೆಗೆ ಚರ್ಚೆ ನಡೆಯಿತು. ಆ ಮೇಲೆ ಈ ಜನರಿಗೆಲ್ಲಾ ಆಹಾರವಿತ್ತು, ಅವರಿಗೆ ಕೆಲಸ ಕೊಡಲಾಗುವುದೆಂಬ ಭರವಸೆಯಿತ್ತ ಮೇಲೆ ಮೋಟಾರು ಮುತ್ತಿಗೆಯನ್ನು ಹೋಗಗೊಡಲಾಯಿತು.

ಪಂಡಿತ ಜವಾಹಿರಲಾಲರು.

ತಮಿಳುನಾಡಿನ ಸಂಚಾರ ಮುಗಿಸಿ ಇದೇ ತಾ. ೧೮ರಲ್ಲು ಆಂಧ್ರ ದೇಶದಲ್ಲಿ ಸಂಚರಿಸಲಾರಂಭಿಸಿರುವರು ನೆಲ್ಲೂರಿನಲ್ಲಿ ಭಾಷಣಮಾಡುವಾಗ, ದಾರಿದ್ರ್ಯ ಮತ್ತು ನಿರುದ್ಯೋಗ ನಿವಾರಣೆಗಾಗಿ ಹಿಂದ್ಯರಿಗೆ ಸ್ವರಾಜ್ಯ ಬೇಕೆಂದು ಹೇಳಿದರು.

ಒಂದು ಸಭೆಯೊಳಗೆ ಪಂಡಿತ ಮಾಲವೀಯ ಮತ್ತು ಭಾಯಿ ಪರಮಾನಂದರ ಕಡೆಯ ಎರಡು ತಂಡಗಳುಂಟಾಗಿವ. ಈ ಎರಡು ಪಕ್ಷಗಳೊಳಗೆ ಪ್ರಬಲ ಭಿನ್ನಾಭಿಪ್ರಾಯವುಂಟಾಗಿದೆ.

ಅರಮನೆಗೆ ಮುತ್ತಿಗೆ.

ಧೋಳಪುರ ಸಂಸ್ಥಾನದ ಸಾವಿರಾರು ಮಂದಿ ಬೇಸಾಯಗಾರರು ಅರಮನೆಗೆ ಮುತ್ತಿಗೆ ಹಾಕಿ ತಮ್ಮಮೇಲೆ ಹೊರಿಸಲ್ಪಟ್ಟಿರುವ ಕಸ್ಟಮ್ ಮತ್ತು ಭೂಕಂದಾಯವು ನಿವರ್ತಿತವಾಗಬೇಕೆಂದು ಮೊರೆಯಿಟ್ಟರು. ಕಟ್ಟಕಡೆಗೆ ಧೋಳಪುರ ರಾಜರು ಇವರ ಪ್ರತಿನಿಧಿಗಳಬ್ಬರನ್ನು ಕಂಡು ಮಾತಾಡಿದರು. ಈ ಮಾತುಕಥೆ ನಡೆಯುವಾಗ ಎಡೆಬಿಡದೆ ಮಳೆ ಬರುತ್ತಿದ್ದರೂ ಬೇಸಾಯಗಾರರೆಲ್ಲಾ ೨೪ ಘಂಟೆಗಳ ತನಕ ಹೊರಗೇನೇ ನಿಂತುಕೊಂಡಿದ್ದರು.

ಮಿ. ಅಬ್ದುಲ್‌ಗಾಫರ್ ಖಾನರು.

ಹಲ್ಲು ನೋವಿನಿಂದ ಪೀಡಿತರಾಗಿ ವಾರ್ಧದಲ್ಲಿರುವರು. ಗಾಂಧೀಜಿಯವರು ಅವರ ಆರೈಕೆ ನೋಡುತ್ತಿರುವರು. ಖಾನರಿಗೆ ಸ್ವಲ್ಪಸ್ವಲ್ಪ ಜ್ವರ ಬರುತ್ತಿರುವುದು. ಹಲ್ಲುನೋವೇ ಇದಕ್ಕೆ ಕಾರಣವೆಂದು ತಿಳಿದುಬರುತ್ತದೆ. ಖಾನರ ಆಹಾರವನ್ನು ಕೂಡ ಗಾಂಧಿಜಿಯವರೇ ಸ್ವತಃ ತಯಾರಿಸುತ್ತಿರುವರಂತೆ. ಖಾನ್ ಸಾಹೇಬರು ಇದೇ ತಾ. ೧೫ರಲ್ಲು ತನ್ನ ಅಣ್ಣನೊಡನೆ ಮಾತಾಡಲು ದಿಲ್ಲಿಗೆ ಹೋದಾಗ ಸ್ಟೇಶನಿನಲ್ಲಿ ಸಂಭ್ರಮದ ಸ್ವಾಗತ ಪಡೆದರು.

ದಕ್ಷಿಣ ಆಫ್ರಿಕೆದ ಶಿಷ್ಟ ಮಂಡಲ

ಹಿಂದೂದೇಶ ಮತ್ತು ದಕ್ಷಿಣ ಆಫ್ರಿಕೆಗಳೊಳಗೆ ಸೌಹಾರ್ದ ಮತ್ತು ಸುಮನಸ್ಸನ್ನುಂಟು ಮಾಡುವ ನಿಮಿತ್ತ ಹಿಂದೂದೇಶವನ್ನು ಸಂದರ್ಶಿಸಲು ಬಂದಿದ್ದ ದಕ್ಷಿಣ ಆಫ್ರಿಕದ ಶಿಷ್ಟಮಂಡಲಿಯವರು ಕಳೆದ ೬೫ ದಿವಸಗಳಿಂದ ದೇಶದಲ್ಲೆಲ್ಲಾ ಸಂಚರಿಸಿ ಎಲ್ಲೆಲ್ಲಿಯೂ ಸಂಭ್ರಮದ ಸ್ವಾಗತಪಡೆದು ಇದೇ ತಾ. ೧೪ ರಲ್ಲು ತಮ್ಮ ದೇಶಕ್ಕೆ ತೆರಳಲು ಬೊಂಬಾಯಿಗೆ ಹಿಂತಿರುಗಿರುವರು.

'ವ್ಯಭಿಚಾರಿಣಿ ಯಾರು?' ನಾಟಕ ಪ್ರದರ್ಶನ

ಶ್ರೀ ಕೆ. ಕೆ. ಶೆಟ್ಟರಿಂದ ರಚಿಸಲ್ಪಟ್ಟ 'ವ್ಯಭಿಚಾರಿಣಿ ಯಾರು' ಎಂಬ ಸಾಮಾಜಿಕ ನಾಟಕವನ್ನು 'ಮಂಗಳೂರು ಎಮೆಚೂರ್ಸ್' ಇವರು ಕಳೆದ ತಾ 15—10—೩೬ನೇ ಗುರುವಾರ ನಗರ ಸಭಾಧ್ಯಕ್ಷ ಶ್ರೀ ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಅಭಿನಯಿಸಿದರು. ಕಿರಿಯರ ಪ್ರಪಂಚದ ವರನ್ನ ವಸ್ತು ಪಕ್ಷಪಾತದಲ್ಲಿ ನಾಟಕವು ಜಯಶೀಲವಾಗಿ ನಡೆಯಿತು. ಆ ದಿನ ಮಹಾಲಯ ಅಮಾವಾಸ್ಯೆಯಾಗಿದ್ದರೂ ಸೀಟಿಕ್ಕಾಗೂ ಮಿಕ್ಕಿದ ಜನ ಸ್ತೋಮವು ನೆರೆದಿತ್ತಲ್ಲದೆ, ಹಲವರು ಟಿಕೇಟು ದೊರೆಯದೆ ಹಿಂದೆ ಹೋಗಬೇಕಾಗಿ ಬಂತು. ನಾಯಕ ಪಾತ್ರವನ್ನು ಶ್ರೀ ಅತ್ತಾವರ ಬಾಬುನವರು ವಹಿಸುವ ನಿರ್ಧಾರವಿತ್ತು ಆದರೆ ನ ಜಕಡೆ ದಿನವೇ ಅವರು ವಿಷಮಜ್ವರದಿಂದ ಹಾಸಿಗೆ ಹಿಡಿದುದರಿಂದ, ಲೇಖಕರಾದ ಶ್ರೀ ಕೆ ಕೆ. ಶೆಟ್ಟರೇ ಮುಖ್ಯ ಪಾತ್ರಧಾರಿಗಳಾದರು. ಬರೇ ಅರ್ಧ ಘಂಟೆಯ ಪೂರ್ವ ತಯಾರಿಯ ಎದುರೇ ಶ್ರೀ ಶೆಟ್ಟಿ ಪ್ರಭಾಕರನ ಪಾತ್ರ ವಹಿಸಿ ತೃಪ್ತಿಕರವಾಗಿ ಅಭಿನಯಿಸಿದರು. ಸುಧೆಯ ಪಾತ್ರವನ್ನು ವಹಿಸಿದ್ದ ಶ್ರೀ. ಕೇದಿಗೆ ರಾಮರಾಯರ ಅಭಿನಯ, ಹಾವ, ಭಾವಗಳೆಲ್ಲವೂ ಸ್ತ್ರೀಸಹಜ ಮಾಧುರ್ಯದಿಂದ ಕೂಡಿದ್ದು ಉತ್ತಮವಾಗಿದ್ದವು ಶ್ರೀ ಮೋಹನ ರಾಯರು ಅಮೃತರಾಯನ ಪಾರ್ಟುವಹಿಸಿ, ತನ್ನ ಇಂಪಾದ ಗಾಯನ, ನಟನೆಯಿಂದ ಸಭಿಕರ ಮೆಚ್ಚಿಗೆಗೆ ಪಾತ್ರರಾದರು. ರೀತಿಯ ಪಾತ್ರವನ್ನು ಶ್ರೀಯುತ ಶ್ರೀನಿವಾಸರು ಚಾತುರ್ಯಪೂರ್ವಕವಾಗಿ ಅಭಿನಯಿಸಿದರು

ಬದರರ ಬಂಧು ಸಂಪಾದಕರಾದ ಶ್ರೀ ಬಿ. ನರಸಪ್ಪನವರ ಕೊರಗನ ಪಾರ್ಟು ಚಲೋದಿತ್ತು ಶ್ರೀ ಚೂರ್ಯನವರು ದಫೇದಾರ, ಸೇವಕ ಮೊದಲಾದ ಪಾತ್ರಗಳಲ್ಲಿ ತನ್ನ ಅಭಿನಯ ಚಾತುರ್ಯವನ್ನು ತೋರಿ ಜನರನ್ನು ರಂಜನೆಯನ್ನುಂಟುಮಾಡಿದರು ಶ್ರೀ. ಟಿ. ಗುರುರಾಜ ಭಟ್ಟರು, ಮುಕುಂದ ರಾಯನಾಗಿ ಉತ್ತಮವಾದ ಅಭಿನಯವನ್ನು ಪ್ರದರ್ಶಿಸಿದರು.

ಶ್ರೀ ಟಿ. ಮಾಧವ ಪೈಗಳು ನಾಯಕ ಪಾತ್ರದ ಒಬ್ಬವಣೆಯನ್ನು ಕುರಿತೂ, ಸಭಾಧ್ಯಕ್ಷರಾದ ಶ್ರೀ ಎ ಲಕ್ಷ್ಮೀನಾರಾಯಣ ರಾಯರು ಅಂದಿನ ನಾಟಕದ ಕುರಿತೂ, ಭಾಷಣವಿತ್ತರು. ಕಿರಿಯರ ಪ್ರಪಂಚದ ಕಾರ್ಯದರ್ಶಿಗಳಾದ ಶ್ರೀ ಕೆ. ಹೊನ್ನಯ ಶೆಟ್ಟಿ

ಶ್ರೀ. ಕೇದಿಗೆ ರಾಮರಾಯರು (ಸುಧೆಯ ವೇಷದಲ್ಲಿ) ಶ್ರೀ. ನರಸಪ್ಪನವರು (ಕೊರಗನ ವೇಷದಲ್ಲಿ)

ವಿದ್ಯಾಮಾನಗಳನ್ನು ವಿವರಿಸಿ ಸರ್ವರಿಗೂ ಧನ್ಯವಾದಗಳನ್ನಿತ್ತರು. ಶ್ರೀ ನರಸಪ್ಪನವರು ಎಮೆಚೂರರ ಕಡೆಯಿಂದ ಮಾತನಾಡಿ ಇಂದಿನ ಪ್ರದರ್ಶನವು ಜಯಶೀಲವಾಗುವಂತೆ ವ್ಯವಸ್ಥೆಮಾಡಿದವರನ್ನು ಅಭಿವಂದಿಸಿದರು. ಮಂಗಳೂರು ಎಮೆಚೂರ್ಸರವರು, ಜಾತಿ, ಮತ ಭೇದವನ್ನಿದಡೆ ನಟನ ಕಲಾ ಚತುರರಾದ ತರುಣರನ್ನು ಪ್ರೋತ್ಸಾಹಿಸಿ, ಒಂದು ಸಂಸ್ಥೆಯಾಗಿ ಸೇರಿಕೊಂಡು ಈ ರೀತಿ ಕನ್ನಡ ನಾಟ್ಯಕಲೆಯ ಅಭಿವೃದ್ಧಿಯನ್ನು ಸಾಧಿಸುತ್ತಿರುವದು ಸ್ತುತ್ಯವಿದೆ ಅವರಿಗೆ ಯಶಸ್ಸನ್ನು ಕೋರುವೆವು. ಈ ನಾಟಕವನ್ನು ಇನ್ನೊಮ್ಮೆ ನೋಡುವ ಕುತೂಹಲವು ಉಳಿದಿರುವುದು ವಂಚಿತೆ 'ಕಂದವ'

'ನವಯುಗ'ಕ್ಕೆ ಇಂದೇ ಚಂದಾದಾರರಾಗಿರಿ

ಖಾನ್ ಬಹದೂರ್ ಮಹಮ್ಮದ್ ಶಮ್ನಾಡ್‌ರವರ ಕೊಡೆ ಒಂದು ವಿನಂತಿ

ಮಾನ್ಯರೇ!

ನೀವು ಇಂಡ್ಯನ್ ಮತ್ತು ಮದ್ರಾಸ್ ಶಾಸನನಿರ್ಮಾಣ ಸಭೆಗಳ ಮೆಂಬರರ ನೆಲೆಯಲ್ಲಿಯೂ ಇತರ ವಿಧವಾಗಿಯೂ ನಮ್ಮ ಸಮುದಾಯಕ್ಕೂ ರಾಷ್ಟ್ರೀಯ ಕಾರ್ಯಗಳಲ್ಲಿಯೂ ಮಾಡಿದ ಅನೇಕ ಪ್ರಯೋಜನಕರವಾದ ಕೃತ್ಯಗಳು ಸ್ತುತ್ಯರ್ಹವಾಗಿವೆ.

ಈಗ ಹೊಸತಾಗಿ ನಿರ್ಮಿಸಲ್ಪಟ್ಟ ಕಾನೂನಿಗನುಸಾರವಾಗಿ ಏರ್ಪಾಡಾಗಲಿಕ್ಕಿರುವ ಮದ್ರಾಸ್ ಶಾಸನನಿರ್ಮಾಣ ಎಸೆಂಬ್ಲಿಯಲ್ಲಿ ನಿಮ್ಮಂಥಾ ಅನುಭವಶಾಲಿಯು ಮೆಂಬರರಾಗಿರುವದು ಅವಶ್ಯವೇ ಸರಿ. ಆದುದರಿಂದ ಮುಂದಕ್ಕೆ ಬೇಗನೇ ಬರಲಿಕ್ಕಿರುವ ಮದ್ರಾಸ್ ಎಸೆಂಬ್ಲಿಯ ಚುನಾವಣೆಯಲ್ಲಿ ನೀವು ಪುತ್ತೂರು ಡಿವಿಜನಿನ ಮುಹಮ್ಮದೀಯ ಓಟರರ ಸಮುದಾಯದ ಪ್ರತಿನಿಧಿಯಾಗಿ ಉಮೇದ್ವಾರರಾಗಿ ನಿಲ್ಲಬೇಕೆಂತ ನಿಮ್ಮನ್ನು ಈ ಮೂಲಕ ಕೇಳಿಕೊಳ್ಳುತ್ತೇನೆ. ಈ ಸಂಗ್ತಿಯಲ್ಲಿ ಅವಶ್ಯವಿರುವ ಎಲ್ಲಾ ಸಹಾಯಮಾಡಲಿಕ್ಕೆ ನಾವು ಸಿದ್ಧರಿದ್ದೇವೆ.

೧ ಯು ಎನ್ ಇಬ್ರಾಹಿಂ ಸಾಹೇಬ್, ಜಮೀನುದಾರ, ಉಡುಂಬುಂದಲ, ತ್ರಿಕರಿಪೂರ ೨ ಪಿ ಸಿ ಮುಹಮ್ಮದ ಕುಂಞ ಹಾಜಿ ಸಾಹೇಬ್, ಜಮೀನುದಾರ, ಕೈಕೊಟ ಕಡವು, ತ್ರಿಕರಿಪೂರ ೩ ಪಿ ಎನ್ ಅಬ್ದುಲ್ಲ ಕಾದ್ರಿ ಸಾಹೇಬ್, ಪಟೇಲ ತ್ರಿಕರಿಪೂರ ೪ ಯು ಎನ್ ಮಂಮದ ಕುಂಞ ಸಾಹೇಬ್, ಜಮೀನುದಾರ, ಉಡುಂಬುಂದಲೆ, ತ್ರಿಕರಿಪೂರ ೫ ಪಿ ಕೆ ಸಿ ಮಹಮ್ಮದ ಕುಂಞ ಸಾಹೇಬ್, ಪಟೇಲ ಪಿಲ್ಲಿ ೬ ಕೆ ಅಬ್ದುಲ್ಲ ಕಾದ್ರಿ ಹಾಜಿ ಸಾಹೇಬ್, ಪಟೇಲ ತೆರ್ವತ್ತೂರು. ೭ ಪಿ ಮಾಮ್ಮುಂಞ ಸಾಹೇಬ್, ಪಂಚಾಯ್ತು ಕೋರ್ಟು ಪ್ರಸಿಡೆಂಟ್ ನೀಲೇಶ್ವರ ೮ ಕೆ ಮೂಡತ್ತ ಮೊಯಿದಿನ್ ಕುಂಞ ಸಾಹೇಬ್, ಜಮೀನುದಾರ, ಚೆಜಾನೂರ ೯ ಕಡಪುರತ್ತ ಅಸ್ಸನ್ ಸಾಹೇಬ್, ಜಮೀನುದಾರ ಲಿಟಾನೂರ ೧೦ ಉಂಚಿಯನ್ ವಳಪ್ಪಿಲ್ ಅಮದ್ ಸಾಹೇಬ್, ಜಮೀನ್‌ದಾರ ಲಿಟಾನೂರ ೧೧ ಮಂಡಿಯುನ್ ಮಹಮ್ಮದ್ ಸಾಹೇಬ್, ಜಮೀನುದಾರ, ಕಾಂಞಂಗಾಡು ೧೨ ಅರಬಿ ಹಾಜಿ ಸಾಹೇಬ್, ಜಮೀನುದಾರ, ಕಾಂಞಂಗಾಡ್ ೧೩ ಬಾರಿಕಾಟ್ ಮೊಯಿದಿನ್ ಹಾಜಿ ಸಾಹೇಬ್, ಮರ್ಚಂಟ್ ಚಿತ್ತಾರಿ ೧೪ ಚೆಮ್ಮಣ್ಣಂಕುಂಟಿಲ್ ಮೊಯಿದಿನ್ ಸಾಹೇಬ್, ಜಮೀನುದಾರ, ಚಿತ್ತಾರಿ ೧೫ ಸಿ ಯಚ್ ಕುಂಞಕಲಂದರ್ ಸಾಹೇಬ್, ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರ್, ಕೆ ಎಸ್ ೧೬ ಮಮ್ಮುಂಞ ಯಾನ ಮಹಮ್ಮದ ಸಾಹೇಬ್, ಜಮೀನುದಾರ ತಳಂಗರೆ ೧೭ ಟಿ ಹಸ್ಸನ್ ಕುಟ್ಟಿಸಾಹೇಬ್ ಪಂಚಾಯ್ತು ಕೋರ್ಟು ಪ್ರೆಸಿಡೆಂಟ್, ತಳಂಗರೆ ೧೮ ಪಿ ಎ ಅಬುಬಕ್ಕರ್ ಸಾಹೇಬ್, ಜಮೀನುದಾರ, ತಳಂಗರೆ ೧೯ ಕೆ ಪೊಯಯದುವತ್ತ ಅಬ್ದುಲ್ ರಹಿಮಾನ್ ಸಾಹೇಬ್ ಮರ್ಚಂಟ್, ತಳಂಗರೆ ೨೦ ಕುನ್ನಿಲ್ ಮಮ್ಮುಂಞ ಸಾಹೇಬ್, ಜಮೀನುದಾರ, ಕಾಸರಗೋಡು. ೨೧ ಕುಂನಿಲ್ ಅಬ್ದುಲ್ಲ ಸಾಹೇಬ್ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರ ಕಾಸರಗೋಡು ೨೨ ಮುಟ್ಟತ್ತೋಡಿ ಕುಂಞಮ್ಮು ಸಾಹೇಬ್, ಮರ್ಚಂಟ್, ಕಾಸರಗೋಡು ೨೩ ಟಿ ಯಂ ಮೊಯಿದಿನ್ ಕುಂಞ ಸಾಹೇಬ್, ಮರ್ಚಂಟ್ ಕಾಸರಗೋಡು ೨೪ ಸಾಹುಕಾರ ಮೊಗ್ರಾಲ ಕುಂಞ ಮಾಹಿನ್ ಕುಟ್ಟಿ ಸಾಹೇಬ್, ಜಮೀನುದಾರ ಮೊಗ್ರಾಲ ೨೫ ಸಾಹುಕಾರ ಯಂ. ಕೆ ಮಹಮ್ಮದ ಸಾಹೇಬ್, ಜಮೀನುದಾರ ಮೊಗ್ರಾಲ ೨೬ ಪಳ್ಳಿಕುಂಞ ಸಾಹೇಬ್, ಮರ್ಚಂಟ್ ಬಂಗ್ರಮಂಜೇಶ್ವರ ೨೭ ಯಂ ಸಲಿಕೆಳ ಮೊಯಿದಿನ್ ಕುಂಞಬ್ಯಾರಿ ಸಾಹೇಬ್, ಜಮೀನುದಾರ ಮಂಜೇಶ್ವರ ೨೮ ಪಿ ಅಹಮ್ಮದ್ ಸಾಹೇಬ್, ಮರ್ಚಂಟ್ ಮಂಜೇಶ್ವರ ೨೯ ಪಾಂಡ್ಯಾಲ ಉಸ್ಮಾನ ಮಹಮ್ಮದಬ್ಯಾರಿ ಸಾಹೇಬ್, ಮರ್ಚಂಟ್ ಮಂಜೇಶ್ವರ ೩೦ ಕೊಪ್ಪಳ ಮ್ಯೊದಿನ್ ಕುಟ್ಟಿಬ್ಯಾರಿ ಸಾಹೇಬ್, ಮರ್ಚಂಟ್ ಮಂಜೇಶ್ವರ ೩೧ ಯಂ ಸಿ ಪಕ್ರುದ್ದೀನ್ ಸಾಹೇಬ್ ಮರ್ಚಂಟ್ ಮಂಜೇಶ್ವರ ೩೨ ಕರಿಪ್ಪೋಡಿ ಮ್ಯೊದಿನ್ ಕುಂಞ ಸಾಹೇಬ್, ಮರ್ಚಂಟ್ ಕಾಸರಗೋಡು ೩೪ ಯಂ ಎ ಮಹಮ್ಮದಬ್ಯಾರಿ ಸಾಹೇಬ್, ಕಂಟ್ರಾಕ್ಟರ್ ಹೊಸಬೆಟ್ಟು ೩೪ ಅಜ್ಜಿಕುಂಞ ಮ್ಯೊದಿನ್‌ಕುಂಞ ಸಾಹೇಬ್, ಜಮೀನುದಾರ ಉದ್ಯಾವರ ೩೫ ಯಂ ಮ್ಯೊದಿನ್ ಕುಂಞಬ್ಯಾರಿ ಸಾಹೇಬ್, ಪಟೇಲ ಉದ್ಯಾವರ ೩೬ ಪಟೇಲ ಸಯ್ಯದಬ್ಯಾರಿ ಸಾಹೇಬ್, ಪಟೇಲ ಕುಂಜತ್ತೂರು ೩೭ ಕುಟ್ಟುಮಬ್ಯಾರಿ ಸಾಹೇಬ್, ಜಮೀನುದಾರ ಪೈವಳಿಕೆ ೩೮ ಸೂಕಿಲ ಹಂಮದ ಕುಂಞ ಹಾಜಿ ಸಾಹೇಬ್, ಜಮೀನುದಾರ ಪೈವಳಿಕೆ ೩೯ ಎ ಪಿ ಒಡೆಯರ್ ಸಾಹೇಬ್, ಜಮೀನುದಾರ ಮಂಗಳೂರು ೪೦ ಯಂ ಕುಂಞಮು ಸಾಹೇಬ್ ಮುನ್ಸಿಪಲ್ ಕೌನ್ಸಿಲರ್ ಮಂಗಳೂರು ೪೧ ಪಳ್ಳಿಕ್ಕಾಲ್ ಮಿತ್ತಬೆ ಮಮ್ಮುಂಞ ಸಾಹೇಬ್, ಮರ್ಚಂಟ್, ತಳಂಗರೆ ೪೨ ಪಿ ಯಂ ಮಂಮದ ಕುಂಞ ಸಾಹೇಬ್, ಮರ್ಚಂಟ್, ತಳಂಗರೆ ೪೩ ಮಸ್ಸದ ಇದ್ದಿನಬ್ಯಾರಿ ಸಾಹೇಬ್, ಮರ್ಚಂಟ್, ಬೆಳ್ತಂಗಡಿ ೪೪ ಪಿ ಯಂ ಮೂಸ ಕುಂಞ ಸಾಹೇಬ್, ಪೋಕಲ್‌ಫಂಡ್ ಕಂಟ್ರಾಕ್ಟರ್, ಉಪ್ಪಿನಂಗಡಿ ೪೫ ಉರನಾಲ್ ಕಾದ್ರಿಬ್ಯಾರಿ ಸಾಹೇಬ್ ಮರ್ಚಂಟ್, ಕುಪ್ಪೆಟ ಉಪ್ಪಿನಂಗಡಿ ೪೬ ಕಾಣಿಯೂರ ಮಹಮ್ಮದ್ ಬ್ಯಾರಿ ಸಾಹೇಬ್ ಜಮೀನ್‌ದಾರ, ಪುತ್ತೂರು ೪೭ ಉಪ್ಪಳ ಮಹಮ್ಮದ ಬ್ಯಾರಿ ಸಾಹೇಬ್ ಮರ್ಚಂಟ್, ಪುತ್ತೂರು ೪೮ ಕೆ ಬಡುವನ್ ಕುಂಞಬ್ಯಾರಿ ಸಾಹೇಬ್, ಪೋಕಲ್‌ಫಂಡ್ ಕಂಟ್ರಾಕ್ಟರ್, ಪುತ್ತೂರು ೪೯ ಮಹಮ್ಮದ ಲಿಯಾಕ್ ಸಾಹೇಬ್, ಮರ್ಚಂಟ್, ಪಟ್ಲ ೫೦ ಕೆ ಕೆ ಸ್ರೀಪತ್ತ ಅಬ್ದುಲ್ ಸಾಹೇಬ್ ಜಮೀನುದಾರ, ತಳಂಗರೆ, ೫೧ ಎರ್ಮು ಅಬ್ದುಲ್ಲ ಸಾಹೇಬ್, ತೆರುವತ್ತ್ ಮರ್ಚಂಟ್, ತಳಂಗರೆ, ೫೨ ಟಿ ಎ ಮಮ್ಮುಂಞ ಸಾಹೇಬ್, ತೆರುವತ್ ಮರ್ಚಂಟ್, ತಳಂಗರೆ ೫೩ ಕೆ-ಕೆ ಪುರ ಅಬ್ದುಲ್ಲ ಸಾಹೇಬ್, ಜಮೀನ್‌ದಾರ, ತಳಂಗರೆ ೫೪ ತೆರುವತ್ ಎರಮು ಅಬ್ದುಲ್ಲ ಸಾಹೇಬ್, ಮರ್ಚಂಟ್, ತಳಂಗರೆ ೫೫ ತೆರುವತ್ ಟಿ ಎ ಮಮ್ಮುಂಞ ಸಾಹೇಬ್ ತಳಂಗರೆ ೫೬ ಎಂ ಎ ಇಬ್ರಾಹಿಂ ಕುಂಞ ಸಾಹೇಬ್, ಜಮೀನ್‌ದಾರ್, ಮೊಗ್ರಾಲ ೫೭ ಎಂ ಟಿ ಮಹಮ್ಮದ್ ಸಾಹೇಬ ಪಟೇಲ, ಮೊಗ್ರಾಲ ೫೮ ಪಳ್ಳಿಕೋಟ ಸಿ ಮಹಮ್ಮದ್ ಹಾಜಿ ಮಹಮ್ಮದಿ ಕಮಿಟಿಮೆಂಬರ್, ಕಳನಾಡ

ನವಯುಗದ ಬಿಡಿ ಸಂಚಿಕೆಗಳು

ಈ ಕೆಳಗಿನವರಲ್ಲಿ ದೊರೆಯುತ್ತವೆ.

1 ಯಚ್ ಕೋಟ್ಯಣ್ಣ ಶೆಟ್ಟಿ, ಮರ್ಚಂಟ್, ಕುಂದಾಪುರ
2 ವಾಸುದೇವರಾವ್, ಎಸ್. ಶಿಬ್ರೂರ್‌ಕಾರ್, C/o ಪೊಪ್ಯುಲರ್ ಹೋಮ್, ಸರ್. ಫಿರೋಜ ಮೇತರೋಡ್, ಫೋರ್ಟ್, ಬೊಂಬಾಯಿ.
3 ದಿ ಕೆನರಾ ನ್ಯೂಸ್ ಏಜನ್ಸಿ, ಬಸ್ ಸ್ಟೇಂಡ್ ಬಳಿ, ಕಾರ್ಕಳ
4 ಪಿ ಶೀನಪ್ಪ ಶೆಟ್ಟಿ ಕ್ಲೋತ್ ಮರ್ಚಂಟ್, ತೀರ್ಥಹಳ್ಳಿ.
5 ನಗುವನಂದ ಆಫೀಸು, ಬೆಂಗಳೂರು
6 ಕೆ ಟಿ ನಾಯಕ್, ಜನರಲ್ ಮರ್ಚಂಟ್, ಅಂಕೋಲ
7 ಬಿ. ಭೋಜರಾವ್, ಮೂಲ್ಕಿ
8 ಯು. ಪಿ. ಮೇಸ್ತ, ಉದ್ಯಾವರ.
9 ಟಿ ಪದ್ಮನಾಭ ಪೈ, ಮರ್ಚಂಟ್, ಬ್ರಹ್ಮಾವರ
10 ಭಟ್ ಬ್ರದರ್ಸ್, ಮರ್ಚಂಟ್ಸ್ ಕಾಸರಗೋಡು
11 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು

ಯು. ಪಿ. ಮೇಸ್ತ, ಉದ್ಯಾವರ, ದ. ಕ.

(ಬಾಣಂತಿ ರೋಗದ ಸ್ಪೆಶ್ಯಲಿಷ್ಟರು)

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಔಷಧಗಳು ದೊರಯುತ್ತವೆ.

U. P. Mesta,
Gold Medalled Physicion,
UDIAWAR, S. K.

ಭಾಷಾಂತರಕಾರರು ದೊರೆಯದೆ ಪೇಚಾಡುವಿರೇಕೆ ?

ಇನ್ಶೂರೆನ್ಸ್ ಮತ್ತು ಬೆಂಕುಗಳ ಪ್ರೊಸ್ಪೆಕ್ಟಸ್, ಮೊದಲಾದುವುಗಳನ್ನೂ ಇತರ ಎಲ್ಲಾ ತರದ ಭಾಷಾಂತರಗಳನ್ನೂ ನಮ್ಮಲ್ಲಿ ಅತ್ಯುತ್ತಮ ರೀತಿಯಿಂದ ಯೋಗ್ಯದರದಲ್ಲಿ ಮಾಡಿಕೊಡಲಾಗುವುದು. ಮಾತು ಕತೆ ಹಾಗೂ ಪತ್ರ ವ್ಯವಹಾರವನ್ನು ಈ ಕೆಳಗಿನ ವಿಳಾಸಕ್ಕೆ ಮಾಡಬೇಕು.

ಟ್ರಾನ್ಸ್ ಲೇಟರ್,
'ಕಿರಿಯರ ಪ್ರಪಂಚ', ಉಡುಪಿ.

ಬಾಡಿಗೆಗೆ ಇದೆ

ಉಡುಪಿ ಪಟ್ಟಣದ ಪ್ರಾಮುಖ್ಯ ಸ್ಥಳದಲ್ಲಿ ಅಂಗಡಿಯೂ, ವ್ಯಾಪಾರಕ್ಕೆ ಯೋಗ್ಯವಾದ ವಿಶಾಲವಾದ ಕೋಣೆಯು ಬಾಡಿಗೆಗೆ ದೊರೆಯುತ್ತದೆ, ವ್ಯಾಪಾರದ ವಹಿವಾಟು, ಜನರ ಆಗಮನ ನಿರ್ಗಮನಗಳಿಗೆಲ್ಲಾ ಕೇಂದ್ರ ಸ್ಥಳ. ಹೆಚ್ಚಿನ ಮಾಹಿತಿಯ ಬಗ್ಗೆ ಮುಖತಾಃ ಮಾತನಾಡಬಹುದು.

C/o **ನವಯುಗ ಆಫೀಸು,** ಉಡುಪಿ.

ವಿದ್ಯಾದಾನಕ್ಕೆ ಪ್ರೋತ್ಸಾಹಿಸಿರಿ !

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

"ಇದ್ಯ ವಿದ್ಯಾದಾಯಿನೀ ಶಾಲೆ" ಮತ್ತು ಹೊಸದಾಗಿ ಸ್ಥಾಪಿಸಲಿರುವ 'ಅನಾಥಾಲಯ'

ಇವುಗಳ ಸಹಾಯಾರ್ಥವಾಗಿ ಏರ್ಪಡಿಸಿರುವ

ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ

ತೆಗೆಯುವ ತಾರೀಕು: **17 1 1937**

ಸೋಡ್ತಿಯ ಮೊಬಲಗು ರೂ. **50,000.**

1ನೇ ಇನಾಂ **8,000,** 2ನೇ ಇನಾಂ **2,000**

ಜುಮ್ಲಾ ಇನಾಮು 1,000 ಇನಾಮುಗಳ ಜುಮ್ಲಾ ಮೌಲ್ಯ 20,125

-.- ಟಿಕೇಟು 1ರ ನಾಲ್ಕಾಣೆ ಮಾತ್ರ -.-

20 ಟಿಕೇಟುಗಳಿರುವ **1** ಪುಸ್ತಕದ ಬೆಲೆ ರೂ **4—0—0.** ಎರಡು ಪುಸ್ತಕಗಳ ಬೆಲೆ ರೂ. **7—8—0.** ಸ್ಪೆಶಲ್ ಬಹುಮಾನಗಳೂ ಇವೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ಮೆನೇಜರ್: ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್, (ದ. ಕ.)

ನ ವ ಯು ಗ

ಎಲ್ಲಿಂದೊ ಇದ್ದಿಹ ಶಕ್ತಿಯು ಬಂದು
ಕನ್ನಡಮಾತೆಯ ಉದರದಿ ನಿಂದು
ನವಯುಗ ಹೆಸರಲಿ ಜನುಮಕೆ ಬಂದು!
ಕನ್ನಡಮಾತೆಯ ಸೇವಿಪುದಿಂದು ||
ಒಡವರಿಗಾಗಿಯೆ
ಮಡಿಯುವ ಯೋಗಿಯೆ
ಬಡವರ ಬಂಧುವೆ ನವಯುಗವೆ!
ಬಡವರ ಕಷ್ಟವ
ನೀಗಿಸಿ, ತುಷ್ಟಸ
ನೀಗುವ ಪೊರೆಯುವ ನವಯುಗವೆ!
ಸಮತಾಮಾವವ
ಒಳ್ಳೆಯ ಬೋಧನ
ಬೋಧಿಸಿ ಜನಗಳ ಸಲಹುವೆಯ?

ಮುದ್ರಾಡಿ ಕೃಷ್ಣಯ್ಯ ಶೆಟ್ಟಿ.

ಬಾ ಲ ವಾ ಙ್ಮ ಯ ದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ

ಬಾ ಲ ವಾ ಙ್ಮ ಯ

ಬೆಲೆ ೦—೩—೦

ಉಪಾಧ್ಯಾಯರ ಪ್ರಕಟನ ಸಮಿತಿ,
ಉಡುಪಿ.

(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ) ಸಂ. ನ.

ರಾಷ್ಟ್ರಸಭೆಯ ಮೇಲೆ ಆರೋಪ

ಉಡುಪಿಯ 'ವರ್ತಕಧುರೀಣ' ಪತ್ರಿಕೆಯು ಕಾಂಗ್ರೆಸನ್ನು ಟೀಕಿಸಿರುವ ರೀತಿಯು ತೀರಾ ಅನಾಗರೀಕ ತನದ್ದಿದೆ. ಅವರ ಸಪ್ಟಂಬರ ತಿಂಗಳ ಸಂಚಿಕೆಯಲ್ಲಿ 'ಕಾಂಗ್ರೆಸ್ ಪಂಚಕಜ್ಜಾಯ' ಎಂಬ ಹೆಸರಿನಿಂದ 'ಜಮದಗ್ನಿಯ' ಹೆಸರಿನಲ್ಲಿ ಪ್ರಕಟವಾದ ಲೇಖನವು ರಾಷ್ಟ್ರಸಭೆಯಂತಹ ಪ್ರಚಂಡ ಸಂಸ್ಥೆಯ ಅವಹೇಳನವಷ್ಟೇ ಹೊರತು ಮತ್ತೇನೂ ಅಲ್ಲ. ಅದಕ್ಕೆ ಉತ್ತರವಿತ್ತ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ. ಬಿ. ಭೋಜರಾಯರನ್ನು 'ಜಮದಗ್ನಿ'ಯು ಅಶ್ಲೀಲ ವಾಕ್ಯಗಳಿಂದ ಟೀಕಿಸಿರುವನಲ್ಲದೆ ಕಾಂಗ್ರೆಸಿನ ಮೇಲೆ ಇನ್ನೂ ಕೆಸರೆರಚಲು ಪ್ರಯತ್ನಿಸಿದ್ದಾನೆ. ರಾಷ್ಟ್ರಸಭೆಯೆಂದರೆ ಭಾರತ ಭೂಮಿಯ ಏಕಮಾತ್ರ ಪ್ರತಿನಿಧಿ ಸಂಸ್ಥೆ. 'ಜಮದಗ್ನಿಯಂತಹ ಕ್ಷುದ್ರ ಮನೋವೃತ್ತಿಯ ಕೆಲವರು 'ಕಾಂಗ್ರೆಸ್ಸಿಗೆ ಆ ಅಧಿಕಾರವನ್ನು ಯಾರೂ ಕೊಟ್ಟಿಲ್ಲ' ಎಂದು ಹರಟುತ್ತಿರಬಹುದು. ಅವರ ಈ ಹರಟೆಯು ಮೇಲಿಂದಲೂ ಕಾಂಗ್ರೆಸ್ ಅಧಿಕಾರವನ್ನು ಪಡೆದಿರುವುದರಿಂದ ಸ್ವಾರ್ಥಿಗಳು ಬೊಬ್ಬಿಡುತ್ತಿರುವರೆಂಬ ಅರ್ಥವೇ ಮೂಡುತ್ತಿದೆ. 'ಜಮದಗ್ನಿಯ' ಕಿರಿಚಾಟದಿಂದ ಕಾಂಗ್ರೆಸ್ಸಿನ ಶಿಸ್ತುಪೂರ್ಣ ಕಾರ್ಯಕ್ರಮಗಳಿಂದ ಅವರ ವಿರೋಧಿಗಳಲ್ಲಿ ಎಂತಹ ತಳಮಳವೆದ್ದಿರಬಹುದೆಂಬುದನ್ನು ಊಹಿಸಬಹುದು. ಕೊಳಕು ಪ್ರಿಯ ವಿರೋಧಿಗೆ ಬೇಕಾದ ತಪ್ಪು ದೊರೆಯದೆ, ಸಿಕ್ಕಲ್ಲೆಲ್ಲಾ ಕೆಸರೆರಚುವ ಅವಸ್ಥೆಯು ಅವನಿಗೆ ಬಂದಾಗಲೇ ನಮ್ಮ ಕಾರ್ಯವು ಜಯಶೀಲವಾಗಿ ಮುಂದುವರಿಯುತ್ತಿದೆ ಎಂದು ಗೊತ್ತು!

ಒಂದು ಎಚ್ಚರಿಕೆಯನ್ನು ನಾವಿಲ್ಲಿ ಕೊಡಬೇಕಾಗಿದೆ. ಕಾಂಗ್ರೆಸ್ ಕಾರ್ಯಕಲಾಪಗಳ ಉಚಿತಾನುಚಿತತೆಯನ್ನು ಮನಗಾಣಿಸುವ ವಿಮರ್ಶೆಯು ನಮಗೂ ಪಥ್ಯವಿದೆ. ರಾಷ್ಟ್ರಸಭೆಯಂಥ ಸಾರ್ವಜನಿಕ ಸಂಸ್ಥೆಗೆ ಅದು ಬೇಕೇ ಬೇಕು ಎಂಬುದನ್ನು ನಾವು ಒಪ್ಪುತ್ತೇವೆ. ಆದರೆ, 'ಜಮದಗ್ನಿಯ' ಟೀಕೆಯು ಆ ಜಾತಿಗೆ ಸೇರಿದುದಲ್ಲ. ಕಾಂಗ್ರೆಸ್ಸಿನ ಅಸ್ತಿವಾರದ ಅವರ ಘಟನೆಯನ್ನೇ ಟೀಕಿಸುವ ಅಧಿಕಪ್ರಸಂಗಕ್ಕೆ 'ಜಮದಗ್ನಿಯು' ಕೈ ಹಾಕಿದ್ದಾನೆ. ಅಲ್ಲೇನೂ ಕೊಳಕು ದೊರೆಯದೆ ತನ್ನದನ್ನೆ ಹೆಚ್ಚಿ, ತಾನೇ ಕಂಡು, ವಿಕಟಹಾಸ್ಯ ಬೀರುತ್ತಿದ್ದಾನೆ. ಇದು ಕಾಂಗ್ರೆಸ್ಸಿನ ದೃಷ್ಟಿಯಿಂದ ಅಕ್ಷಮ್ಯ ಅಪರಾಧ! ಸ್ವಾತಂತ್ರ ಚಳವಳದ ಸಮಯ ಜನರು ಸಹಿಸಿದ ಕಷ್ಟನಷ್ಟಗಳೆಲ್ಲಾ ಕಾಂಗ್ರೆಸ್ ದತ್ತ ಅನಾಹುತಗಳೆಂದು ತೋರಿಸಿಕೊಡಲು 'ಜಮದಗ್ನಿ'ಯ ಪೇಚಾಟ! ಇತರ ರಾಷ್ಟ್ರಗಳು ಲಕ್ಷಾಂತರ ಪ್ರಾಣ ಬಲಿಕೊಟ್ಟು ತಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡಿವೆ. ಹಿಂದೀಯರಲ್ಲಿಯೂ ಅಂತಹ ಧೀರರಿರುವರೆಂಬುದನ್ನು ತೋರಿಸಿಕೊಟ್ಟದ್ದೊಂದು ಮಹತ್ವದ ಅಭಿಮಾನದ ಸಂಗತಿ! ಅದೇ 'ಜಮದಗ್ನಿ'ಯ ದೃಷ್ಟಿಯಲ್ಲಿ ಅನ್ಯಾಯವಾಗಿ ಕಂಡುಬಂದಿದೆ! ಭಾರತಭೂಮಿಯು 'ಜಮದಗ್ನಿ'ಯಂತಹ ದಾಸ್ಯಪ್ರಿಯ; ಕ್ಷುದ್ರಾರೋಪ ಪ್ರಿಯರಿಂದಲೇ ತುಂಬಿರುತ್ತಿದ್ದರೆ ಅವನ ಅಪೇಕ್ಷೆಯ ಸ್ಮಶಾನ ಶಾಂತಿಯೂ ದೊರಕುತ್ತಿತ್ತು. "ಕೌನ್ಸಿಲ್ ಇಲೆಕ್ಷನಿನಲ್ಲಿ ಕಾಂಗ್ರೆಸ್ ಚೀಟು ಕಟ್ಟುವವರೇ ಮೆಂಬರರಾಗಬೇಕು!" ಎಂದೂ 'ಜಮದಗ್ನಿ'ಯು ವಿಕಟವಾಗಿ ಟೀಕಿಸಿದ್ದಾನೆ. ಕಾಂಗ್ರೆಸ್ ದೇಶಪ್ರತಿನಿಧಿಯಾದುದರಿಂದ ಅದು ಚೀಟು ಕಟ್ಟುವವರೇ ಮೆಂಬರರಾಗಬೇಕು. ಚೀಟು ಕಟ್ಟುವ ಹೊಣೆಯು ಕಾಂಗ್ರೆಸಿನದು. ಅದಕ್ಕೆ ಬೇಕಾದ ಸಲಹೆಗಳನ್ನು ಕಾಂಗ್ರೆಸ್ ತನ್ನ ಹಿತಚಿಂತಕರಿಂದಲೇ ಪಡೆದೀತಲ್ಲದೆ 'ಜಮದಗ್ನಿ'ಯಂತಹ ಕಲ್ಮಷಪ್ರೇಮಿಗಳ ಹರಟೆಯನ್ನು ಗಣಿಸಲಾರದು.

"ಸ್ವಾತಂತ್ರ್ಯವೆಂಬ ನಾಮೋಚ್ಚಾರಣೆಗಳಿಂದ ಗುಲಾಮಗಿರಿಯ ಹೊಸ ಮಾದರಿ" ಎಂಬ ಆರೋಪವಂತೂ ತೀರಾ ತಲೆತಿರುಕತನದ್ದಾಗಿದೆ. ರಾಷ್ಟ್ರಸಭೆಯು ತನ್ನ ಗುರಿಯನ್ನು ಸೇರುವ ಕಾಲವು ದೂರವಿರಬಹುದು; ಆದರೆ ಅದು ಉಂಟುಮಾಡಿರುವ ಸ್ವಾತಂತ್ರ್ಯದ ನವಜಾಗ್ರತಿಯಲ್ಲಿ ವಿಚಾರಿಗಳಾರೂ ಸಂದೇಹಪಡಲಾರರು. 'ಜಮದಗ್ನಿ'ಯಾಗಲೀ, ವರ್ತಕಧುರೀಣನಾಗಲೀ, ಅಪೇಕ್ಷಿಸುವ ಸ್ವಾತಂತ್ರ್ಯವೆಂತಹದೆಂಬುದೇ ತಿಳಿಯುವುದಿಲ್ಲ! ಸ್ವಾಭಿಮಾನದ ಮಹತ್ವವನ್ನು ಅಣುವಾಗಿ ತೋರಿಸಿ ಜನರನ್ನೂ ದೀನರಾಗಿ ಮಾಡುವ ಭೈರವ ಸ್ವಾತಂತ್ರ್ಯವೇ ಅವರಿಗೆ ಬೇಕಾಗಿರುವುದೇನೊ! ರಾಷ್ಟ್ರಸಭೆಯು ದೇಶದ ಪ್ರತಿನಿಧಿ ಸಂಸ್ಥೆ; ಪತ್ರಿಕೆಯು ಜನಜಾಗ್ರತಿಯ ಉಪಕರಣ- ವೆಂದಲ್ಲದೆ ಕೆಸರೆರಚುವುದರೊಡನೆ ರಚನೆಯುದರ ಘನತೆಗೂ ಕುಂದನ್ನುಂಟು ಮಾಡಿದ 'ವರ್ತಕಧುರೀಣ'ದ ಅಪರಾಧಕ್ಕೆ ಜನತೆಯು ಯೋಗ್ಯ ಪ್ರಾಯಶ್ಚಿತ್ತವನ್ನು ಹುಡುಕುತ್ತದೆಂದು ನಂಬುತ್ತೇನೆ.

ಪಾಂಗಾಳ ಮಂಜುನಾಥ ನಾಯಕ್,
ಅಧ್ಯಕ್ಷ, ತಾಲೂಕು ಕಾಂಗ್ರೆಸ್ ಕಮಿಟಿ,
ಉಡುಪಿ.

ದಕ್ಷಿಣ ಕನ್ನಡಜಿಲ್ಲಾ ಟೀಚರ್ ಮೆನೇಜರರ ಸಂಘದ ಮನವಿಗೆ ವಿದ್ಯಾ ಇಲಾಖೆಯ ಡೈರೆಕ್ಟರರು ಕೊಟ್ಟ ಉತ್ತರದ ಸಾರಾಂಶ:-

ಶ್ರೀಯುತ ಮೊಳಹಳ್ಳಿ ಶಿವರಾಯರ ಮತ್ತು ಶ್ರೀಯುತ ನಯಂಪಳ್ಳಿ ರಾಮರಾಯರ ಮುಂದಾಳುತನದಿಂದ, ಜಿಲ್ಲಾ ಸಂಘದ ಪ್ರತಿನಿಧಿಗಳಾದ, ರಾ. ಕುರುಕಾಲು ಗಣಪಯ್ಯ ಸೆಟ್ಟಿ, ಕೋಟೆಕಾರ್ ಸುಬ್ಬಣಯ್ಯ, ಉಪ್ರಿ ಅನಂತಯ್ಯ, ಕಾಸರಗೋಡು ವಿಷ್ಣುಮೂರ್ತಿ ಹೊಳ್ಳ, ಮತ್ತು ಕಂಕನಾಡಿ ಸುಬ್ಬರಾವ್, ಕೂಡಾ 5 ಮಂದಿ ಟೀಚರ್ ಮೆನೇಜರರು ಆಗೋಸು 30ರ ಮಹಾಸಭೆಯ ನಿರ್ಣಯಗಳನ್ನೂ ಅವಕ್ಕೆ ಸಂಬಂಧವಾಗಿ ತಯಾರಿಸಿದ ಸ್ಟೇಟ್‌ಮೆಂಟುಗಳನ್ನೂ, ಮಂಗಳೂರಲ್ಲಿ ತಾ. 29-9-36ಕ್ಕೆ ಮೆ. ಡೈರೆಕ್ಟರ್ ಧೊರೆಗಳವರಿಗೆ, ಡೆಪ್ಯುಟೇಶನ್ ಮೂಲಕ ಮನವಿ ಮಾಡಿಕೊಂಡರು. ಆದಕ್ಕುತ್ತರವಾಗಿ, ಸರಕಾರಕ್ಕೆ ಗ್ರೇಂಟಿನ ಸ್ಕೇಲನ್ನು ಏರಿಸುವ ಯೋಚನೆಯಿದೆ ಎಂದೂ ಎಲಿಮೆಂಟರಿ ವಿದ್ಯಾಭ್ಯಾಸಕ್ಕೆ ಅಧಿಕಾಧಿಕ ಹಣ ಖರ್ಚು ಮಾಡುತ್ತಾ ಒಂದಂತೆ ವ್ಯಯವೂ ಅಧಿಕವಾಗುತ್ತಾ ಬಂದ ದರಿಂದ ಅದು ನಿಲ್ಲಬೇಕೆಂದೂ ಸೂಚಿಸಿದರು. ಉತ್ತಮ ಶಾಲೆಗಳಿಗೆ ಸೇಕಡಾ 50ರ ಅಭಿವೃದ್ಧಿ ಗ್ರಾಂಟನ್ನು ಸರಿಯಾದ ನಿಬಂಧನೆಗಳನ್ನು ತಯಾರಿಸಿ ಅದರ ಪರಿಶೀಲನೆಯಿಂದ ಕೊಡಲಾಗುವುದಲ್ಲದೆ ಇನ್ಸ್‌ಪೆಕ್ಟಿಂಗ್ ಆಫೀಸರರಿಗೆ ಆ ಸ್ವಾತಂತ್ರ್ಯವನ್ನೂ ಕೊಡುವದಿಲ್ಲವೆಂದರು. ಬಿಲ್ಡಿಂಗ್ ವ ಫರ್ನಿಚರ್ ಗ್ರಾಂಟನ್ನು ಈ ಜಿಲ್ಲೆಗೂ ಹೆಚ್ಚಿಗೆ ಕೊಡಿಸುವಂತೆ ಮಾಡುವೆನೆಂದೂ ಕಂಪೆನ್ಸೇಶನ್ ಗ್ರಾಂಟು ಕೂಡಾ ಹಿಂದಿನದಕ್ಕಿಂತ ಹೆಚ್ಚಿಸಲಾಗುವದೆಂದೂ, ಹಣವುಳಿಯುವ ಜಿಲ್ಲೆಗಳ ಗ್ರಾಂಟನ್ನು ತಗ್ಗಿಸುವದಲ್ಲದೆ, ಕಡಿಮೆಯಾದ ಜಿಲ್ಲೆಗಳಿಗೆ ವ್ಯವಸ್ಥಿತ ರೀತಿಯಿಂದ ಗ್ರಾಂಟು ಸಿಕ್ಕುವಂತೆ ನಿಗಾ ತೆಗೆದುಕೊಳ್ಳಲಾಗುವದೆಂದೂ, ಗ್ರೇಂಟು ತಗ್ಗಿಸಿದ ಕಾರಣವನ್ನು ಶಾಲಾ ಮೆನೇಜರರಿಗೆ ತಿಳಿಸುವಂತೆ ಆಫೀಸರರನ್ನು ಎಚ್ಚರಿಸಲಾಗುವದೆಂದೂ, ಉಪಾಧ್ಯಾಯರ ಸ್ಕೇಲಿನಲ್ಲಿ ಬಾಧಕವಾಗದಂತೆ ನೋಡಲಾಗುವದೆಂದೂ ಆಶ್ವಾಸನೆಯಿತ್ತರು. 3ನೇ ಕ್ಲಾಸುಗಳ ವರೆಗೆ ಸ್ಕೂಲ್ ಫೀಸು ಮಾಫಿ ಮಾಡುವ ಬಗ್ಗೆ ವಿಚಾರಿಸಲಾಗುವದು; ಖಡ್ಡಾಯ ಶಿಕ್ಷಣವನ್ನು ಜಾರಿಗೆ ತರುವ ಧ್ಯೇಯವನ್ನಿಟ್ಟುಕೊಂಡು ವಿದ್ಯಾ ಪ್ರಚಾರದ ವ್ಯವಸ್ಥೆಗಳಿಸುವೆವು; ಹೊಸ ಸ್ಕೀಮಿನಂತೆ ರಚಿಸಲ್ಪಡಲಿರುವ ಡಿ. ಇ. ಕೌನ್ಸಿಲಿನಲ್ಲಿ ಟೀಚರ್ ಮೆನೇಜರ್ ಪ್ರತಿನಿಧಿಗಳಿಗೆ ಹೆಚ್ಚಿನ ಸ್ಥಾನಗಳನ್ನೀಯುವ ವ್ಯವಸ್ಥೆ ಮಾಡುವೆವು. ಇಲಾಖಾ ಆಫೀಸರರು ಶಾಲೆಗಳಲ್ಲಿ ಭೇದವಿಡದಂತೆ ಎಚ್ಚರಿಸಲಾಗುವದಷ್ಟೇ ಅಲ್ಲದೆ, ಆ ಕುರಿತು ಡಿ. ಇ. ಕೌನ್ಸಿಲಿಗೆ ಹೆಚ್ಚಿನ ಅಧಿಕಾರವೀಯುವೆವು, ಕೆಥೋಲಿಕ್ ಶಾಲೆಗಳ ಸ್ಪರ್ಧೆಯಿಂದ ಇತರರಿಗೆ ಬಾಧಕವಾಗದಂತೆ ಯೋಚಿಸಿ ನಿರ್ಧರಿಸುವೆವು, ಆದಕ್ಕಾಗಿ ಡಿ. ಇ. ಕೌನ್ಸಿಲಿಗೆ ಪೂರ್ಣಾಧಿಕಾರವನ್ನೂ ಕೊಡುವೆವು. ಎಂದೆಲ್ಲಾ ಸಹಾನುಭೂತಿ ಪರ ಆಶ್ವಾಸನೆಗಳನ್ನಿತ್ತರು.

ಕುರ್ಕಾಲು ಗಣಪಯ್ಯ ಶೆಟ್ಟಿ.

ತೀರ್ಥಹಳ್ಳಿಯಲ್ಲಿ ಬಂಟರು ಯಾನೆ ನಾಡವರು

ತೀರ್ಥಹಳ್ಳಿ, ತಾ. 15—10—'36

ಬಂಟರು ಯಾನೆ ನಾಡವರ ಜಾತಿಯ ಮನೆಗಳು ಈ ಊರಿನಲ್ಲಿ ಸುಮಾರು 100ಕ್ಕೆ ಮೇಲ್ಪಟ್ಟಿರುತ್ತೆ. ಜನಸಂಖ್ಯೆಯು 500ಕ್ಕೆ ಹೆಚ್ಚಿಗೆಯಿರುತ್ತದೆ. ಈ ಜನರೆಲ್ಲರೂ ಕನ್ನಡ ಜಿಲ್ಲೆಯಿಂದಲೇ ಇಲ್ಲಿಗೆ ಬಂದವರು ಆಗಿರುತ್ತಾರೆ. ಮತ್ತು ಬಡವರು, ಕಷ್ಟಜೀವಿಗಳು ಆಗಿರುತ್ತಾರೆ. ಇವರಲ್ಲಿ ನಿರಕ್ಷರ ಕುಕ್ಷಿಗಳೇ ಜಾಸ್ತಿ, ಕಾರಣ ಬಡತನದ ದೆಸೆಯಿಂದ ತಮ್ಮ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಮಾಡುವಷ್ಟು ಶಕ್ತಿಯಿಲ್ಲವಾದವರೇ ಜಾಸ್ತಿ ಇವರಲ್ಲಿ ಬಹು ಮಂದಿ ಪರಾವಲಂಬಿಗಳೇ ಇರುತ್ತಾರೆ.

ಕಳೆದ ವರುಷ ಇವರ ಪೈಕಿ ಕೆಲವು ಗ್ರಹಸ್ಥರು ಸೇರಿಕೊಂಡು, ಬಂಟರ ಯಾನೆ ನಾಡವರ ಸಂಘ, ಎಂಬ ಹೆಸರಿನಿಂದ ಒಂದು ಸಂಘವನ್ನು ಏರ್ಪಡಿಸಿ ಅನೇಕರ ಜಯಿ ಜನಾಂಗದ ಸುಧಾರಣೆ, ವಿದ್ಯಾಭ್ಯಾಸದ ಅಗತ್ಯ ಇವೇ ಹಲವು ವಿಷಯಗಳನ್ನು ಮತಸ್ಥರಿಗೆ ಆಗಿಂದಾಗ್ಗೆ ತಿಳಿಸುವ ಏರ್ಪಾಡು ಮಾಡಿಕೊಂಡಿದ್ದರು.

ಆದರೆ, ಎತ್ತು ಏರಿಗೆ ಎಳೆಯಿತು, ಕೋಣ ಹೊಳೆಗೆ ಎಳೆಯಿತು, ಎಂಬದಕ್ಕೆ ಅನುಸರಿಸಿ ಈ ಸಂಘವು ಕೆಲವೇ ಸಮಯ ಊರ್ಜಿತ ಸ್ಥಿತಿಯಲ್ಲಿದ್ದು ತನ್ನಿಂದ ತಾನೆ ವಿಸರ್ಜಿಸಲ್ಪಟ್ಟಿರುತ್ತದೆ. ಇದು ತುಂಬಾ ವ್ಯಸನಕರವಾದ ವಿಷಯವಾಗಿದೆ.

ಸಂಘದ ಕಾರ್ಯಕ್ರಮಗಳಲ್ಲಿ ಶ್ರದ್ಧೆ ವಹಿಸಿ ಕೆಲಸ ಮಾಡಿದವರನೇಕರು ಇನ್ನೂ ತಮ್ಮಿಂದ ಕೈಲಾದ ಮಟ್ಟಿನ ಸೇವೆಯನ್ನು ಜನಾಂಗದವರ ಏಳಿಗೆಗಾಗಿ ಮಾಡಲು ಸಿದ್ಧರಿರುತ್ತಾರೆ. ಆದರೆ, ಇದಕ್ಕೆ ಸರಿಯಾದ ತಳಹದಿಯು ಇಲ್ಲದೆ ಈ ತರದ ತೊಂದರೆಗೆ ಅವಕಾಶವಾಗಿರುತ್ತದೆ.

ಮುಂದೆಯೂ, ಸಮಾಜದ ಅಂಧಶ್ರದ್ಧೆಯನ್ನು ತೊಲಗಿಸಲು, ಬದ್ಧ ಕಂಕಣರಾಗಿ ಕೆಲಸ ಮಾಡಲು ಇವರಿಗೆ ಪರಮಾತ್ಮನು ಯಾವಾಗ ಶಕ್ತಿಯನ್ನು ದಯಪಾಲಿಸುತ್ತಾನೋ? ತಿಳಿಯುವುದಿಲ್ಲ. ಮುಂದೆ ಆದರೂ ಈ ಜನಾಂಗದವರು ಎಚ್ಚರಿಂತ. ಹೀನದೆಸೆಗೆ ಬಂದಿರುವ ಈ ಜನಾಂಗದ ಮೇಲ್ಮೆಗಾಗಿ ಒಂದು ಸಂಘವನ್ನು ಏರ್ಪಡಿಸಿ ಆಗಿಂದಾಗ್ಗೆ ಕೂಟಂಗಳನ್ನು ನಡಿಸಿ, ಜನಾಂಗದ ಕುಂದುಕೊರತೆಗಳನ್ನು ಪರಿಹರಿಸಲು ಪ್ರಯತ್ನಿಸುವುದು ಪ್ರತಿಯೊಬ್ಬ ಜನಾಂಗದ ವ್ಯಕ್ತಿಯ ಕರ್ತವ್ಯವಾಗಿರುತ್ತದೆ.

ಜನಾಂಗದ ಹಿತೇಚ್ಛು.

ಪುತ್ತೂರು ರೆವಿನ್ಯು ಡಿವಿಜನಲ್ ಆಫೀಸರವರಿಂದ

ನೋಟೀಸು.

ದಕ್ಷಿಣಕನ್ನಡ ಜಿಲ್ಲಾ ಪುತ್ತೂರು ತಾಲೂಕ, ಸುಬ್ರಹ್ಮಣ್ಯ ಗ್ರಾಮದ ಕುಲ್ಕುಂದದಲ್ಲಿ ವರ್ಷ ಪ್ರತಿ ಆಗುವ ಜಾನುವಾರು ಸಂತೆಯು ಈ ವರ್ಷ 1936ನೇ ಇಸವಿ ನವಂಬರ ತಿಂಗಳು 26ನೆ ತಾರೀಕಿನಿಂದ, ಅದೇ ಇಸವಿ ದಶಂಬರ ತಿಂಗಳ 13ನೇ ತಾರೀಕಿನ ವರೆಗೆ ಜರಗುವದು. ಅಂದರೆ ಸಂತೆಯು ಕಾರ್ತೀಕ ಪೌರ್ಣಿಮಿ ದಿವಸ ಪ್ರಾರಂಭವಾಗಿ, ಕಾರ್ತೀಕ ಅಮಾವಾಸ್ಯೆ ಬಳಿಕ ಅಂದರೆ ಸುಬ್ರಹ್ಮಣ್ಯ ದೀಪೋತ್ಸವದ ಪರಿಯಂತರ ಜರುಗುವದು. ಸಂತೆಗೆ ತಂಬ ಪ್ರತಿ ಒಂದು ಜಾನುವಾರಿನ ಮೇಲೆ ಎರಡಾಣೆ ಫೀಸು ವಸೂಲು ಮಾಡಲಾದೀತು.

(Sd) **ಕೆ. ಪಿ. ಕೃಷ್ಣನ್ ನಾಯರ್**
ರೆವಿನ್ಯು ಡಿವಿಜನಲ್ ಆಫೀಸರ್

ಹದಿಮೂರು ಜನರೂ ಬದುಕಿದರು.

ಆದವಾನಿ ತಾಲೂಕು ಬಲ್‌ಕಲ್ ಗ್ರಾಮ ವೆಂಕಟರೆಡ್ಡಿಯವರ ಮನೆಯಲ್ಲಿ ಮೊನ್ನೆ 7ನೇ ಅಕ್ಟೋಬರ್ ರಾತ್ರಿಗೆ 13 ಜನರಿಗೆ ವಿಷಬಿದ್ದಿತ್ತೆಂದು ಕೇಳ ಬಂತು. ಈ ಸಂಗತಿಯನ್ನರಿತು ಕೋಸಿಗಿಯ ಶ್ರೀ. ಓಬಳ ನಾಯ್ಕರು ಪ್ರೇಮಾಯತನದಿಂದ ನಡಿಯುತ್ತಲಿರುವ ಅಲ್ಲಿಯ ಆಸ್ಪತ್ರೆಯ ಡಾಕ್ಟರರಾದ ಶ್ರೀ ವೆಂಕಟೇಶ ವೈದ್ಯಭಾನು ಇವರಿಗೆ ಮುಂಜಾನೆ 1½ ಗಂಟೆಗೆ ತಿಳಿಸಿದರು ಡಾ. ವೆಂಕಟೇಶರು ತಮ್ಮ ಸಹಾಯಕ್ಕೆ ಪ್ರೇಮ ಮೆಡಿಕಲ್ ಕಾಲೇಜಿನ ಒಬ್ಬ ಸೀನಿಯರ್ ವಿದ್ಯಾರ್ಥಿ ಶ್ರೀ. ವಿಶ್ವನಾಥರನ್ನೂ ಕರದುಕೊಂಡು ಆ ಕ್ಷಣವೇ ಸನ್ನಾಹಸಿದ್ಧರಾಗಿ ಬಲ್‌ಕಲ್ಲಿಗೆ ಮುಟ್ಟಿದರು. ವಿಷಬಿದ್ದ ಈ ಹದಿಮೂರು ಜನರೂ ಸರಾಸರಿ 20 25 ಸಲ ವಾಂತಿಮಾಡಿಕೊಂಡು ಅತಿಯಾಗಿ ಜಿಗಿಯುತ್ತಾ ಹೊಟ್ಟೆ ಕಸಿವಿಸಿಯಿಂದಲೂ ನಾಲಿಗೆ ಹರಿತಗಳಿಂದಲೂ ಸಂಕಟಪಡುತ್ತಿದ್ದರಂತೆ ಅವರಲ್ಲಿ ಐವರು ತೀರಾ ಕಠಿಣಾವಸ್ಥೆಯಲ್ಲಿದ್ದರಂತೆ. ಅವರೆಲ್ಲರಿಗೂ ಮಧ್ಯಾಹ್ನದ ವರೆಗೆ ಯೋಗ್ಯ ಚಿಕಿತ್ಸೆಯಿಂದ ಮರಣ ಭಯವನ್ನು ತಪ್ಪಿಸಿ, ಸಾಕಷ್ಟು ಸಂತೋಷಸಾಧನ ಬಂದ ನಂತರ ಡಾ. ವೆಂಕಟೇಶರು ಮರಳಿ ಆಶ್ರಮಕ್ಕೆ ಬಂದರು.

ಆಶ್ರಮದ ಆಚಾರ್ಯರಾದ ತಾರಾನಾಥಜೀಯವರು ತಮ್ಮ ಕೊಲೇಜಿನ ಒಬ್ಬ ಗ್ರಾಜುಏಟರಿಂದ 13 ಜನರ ಪ್ರಾಣ ಉಳಿಸುದರ ಗೌರವಾರ್ಥವಾಗಿ ಆದಿನ ಉಳಿದ ಅಭ್ಯಾಸದ ತಾಸುಗಳಿಗೆ ರಜೆ ಕೊಟ್ಟು ಯುವಕರೀರ್ವರನ್ನು ಸನ್ಮಾನಿಸಿದರು

ಸುದ್ದಿಗಾರ.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸು ಮೆಂಬರರ ರಾಜಿನಾಮೆ

ನಾವು ಕೆಲವರು ಜಿಲ್ಲಾ ಕಾಂಗ್ರೆಸು ಕಮಿಟಿಗೆ ರಾಜಿನಾಮೆ ಕೊಟ್ಟಿರುವ ವಿಷಯದಲ್ಲಿ ಹಲವರು ಹಲವು ಅಭಿಪ್ರಾಯಗಳನ್ನು ಮಾಡುತ್ತಿರುವರಲ್ಲದೆ, ಕೆಲವು ಪತ್ರಿಕೆಗಳು ಕೂಡಾ ಬೇರೆ ಬೇರೆ ಅಭಿಪ್ರಾಯಗಳನ್ನು ಕೊಡಲು ಯತ್ನಿಸುತ್ತಿರುವುದು ತುಂಬಾ ವ್ಯಸನಕರ. ಯಾಕಂದರೆ ಕೇವಲ ಕೆಲಸಗಾರರಾಗಿ ಕಾಂಗ್ರೆಸನ್ನು ಸೇರಿರುವವರಲ್ಲಿ ಕೆಲವರು ಹಲಕೆಲವು ಕಾರಣಗಳಿಂದ ಕಮಿಟಿಗಳಲ್ಲಿರುವುದು ಸಾಧ್ಯವಿಲ್ಲದೆ ಅವುಗಳನ್ನು ಬಿಟ್ಟ ಮಾತ್ರಕ್ಕೆ ಅವರು ಕಾಂಗ್ರೆಸನ್ನು ಬಿಟ್ಟ ಹಾಗಾಗುವುದಿಲ್ಲ. ಈ ತನಕ ನಾವು ಕಾಂಗ್ರೆಸ್ ಕೆಲಸವನ್ನು ಬಿಟ್ಟಿಲ್ಲ. ಕಮಿಟಿಯು ಖಾಲಿ ಬಿದ್ದಿಲ್ಲ. ಆದುದರಿಂದಲೇ ಸಿರಾಸಿಗೆ ಯಾವ ರೂಪದಲ್ಲಿಯೂ ಎಡೆಯಿಲ್ಲವೆಂದೇ ನನ್ನ ಅಭಿಪ್ರಾಯವು. ಅಲ್ಲದೆ ಕೆಲಸಗಾರರೆಲ್ಲಾ ಕಮಿಟಿಗಳಲ್ಲಿ ಇದ್ದೇ ತೀರಬೇಕೆಂಬ ಅಗತ್ಯವಿಲ್ಲ ಈ ರಾಜಿನಾಮೆಗಳಿಗೂ ಬರುವ ಎಸಂಬ್ಲಿ ಚುನಾವಣೆಗೂ ಏನೇನೂ ಸಂಬಂಧವಿಲ್ಲ. ರಾಜಿನಾಮೆಯಿತ್ತವರಲ್ಲಿ ಚುನಾವಣೆಯ ರಂಗದಲ್ಲಿಯೂ ಸೊಂಟಕಟ್ಟಿ ಸಣಗಾಡುವವರೇ ಇದ್ದಾರೆ. ಅಂತೂ, ನಾವು ನಾಲ್ಕು ಜನರೂ ಬೇರೆ ಬೇರೆ ಕಾಲಗಳಲ್ಲಿ ಕೊಟ್ಟಿರುವ ರಾಜಿನಾಮೆಗಳೆಲ್ಲಾ ಒಂದೇ ಕಮಿಟಿ ಮೀಟಿಂಗಿನ ಮುಂದ ಬಂದಿದ್ದು, ಒಂದಿಷ್ಟು ಗಲಿಬಿಲಿಗೆ ಕಾರಣವಾಯ್ತಲ್ಲದೆ ಮತ್ತೇನೂ ಇಲ್ಲ. ಹಾಗಾಗಿ ಈ ವಿಷಯದಲ್ಲಿ ಇತರಾಭಿಪ್ರಾಯವನ್ನು ಯಾರೂ ಮಾಡಬಾರದೆಂದು ವಿನಂತಿ ಎಂದು ಶ್ರೀ ಎಸ್. ಎನ್. ಕಿಲ್ಲೆಯವರ. ತಿಳಿಸುತ್ತಾರೆ.

ಕಾಂಗ್ರೆಸ್ಸ ಹುರಿಯಾಳುಗಳಿಗೆ ಬಿನ್ನಹ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಪಾರ್ಲಿಮೆಂಟರೀ ಬೋರ್ಡಿನವರು ಕಳೆದ ೧೨-೧೧ನೇ ತಾರೀಕಿನ ದಿವಸ ಧಾರವಾಡದಲ್ಲಿ ಕೂಡಿದ್ದರು. ಅದರಲ್ಲಿ ಉಳಿದ ಅನೇಕ ವಿಷಯಗಳೊಡನೆ ಹುರಿಯಾಳುಗಳ ಅರ್ಜಿಗಳನ್ನು ವಿಚಾರಿಸಲಾಯಿತು. ಬೋರ್ಡಿನವರು ಮಾಡಿದ ಸೂಚನೆಗಳನ್ನು ಮದ್ರಾಸ ಹಾಗು ಮುಂಬೈ ಇಲಾಖಾ ಕಮಿಟಿಗಳಿಗೆ ಕಳಿಸಿದೆವು. ಅವರು ಈ ತಿಂಗಳ ಕೊನೆಗೆ ಅವುಗಳ ಬಗ್ಗೆ ವಿಚಾರಮಾಡಿ ತಮ್ಮ ಹೇಳಿಕೆಯನ್ನು ಮಧ್ಯವರ್ತಿ ಕಮಿಟಿಗೆ ತಿಳಿಸುವರು. ಅವರೇ ಕೊನೆಯ ನಿರ್ಣಯವನ್ನು ಮಾಡತಕ್ಕವರು ಅವರ ನಿರ್ಣಯವಾಗುವ ವರೆಗೆ ಯಾವ ಹೆಸರುಗಳನ್ನೂ ಪ್ರಸಿದ್ಧಿ ಮಾಡುವದಿಲ್ಲ ಯಾರಾದರೂ ಊಹೆಯಿಂದ ಹೆಸರು ಪ್ರಸಿದ್ಧಿಮಾಡಿದರೆ ಅವು ನಿಜವೆಂದು ಯಾರೂ ತಿಳಿಯಬಾರದು. ನಾವು ಶಿಫಾರಸು ಮಾಡಿದ ಹುರಿಯಾಳುಗಳ ಹೆಸರುಗಳನ್ನು ಯಾರಿಗೂ ಹೇಳಬಾರದೆಂದು ಮೇಲಿನ ಕಮಿಟಿಯ ಅಪ್ಪಣೆಯಿರುವುದರಿಂದ ನಮ್ಮ ಕಚೇರಿಯಲ್ಲಿ ಬಂದು ಇದರ ಬಗ್ಗೆ ಯಾರೂ ಚೌಕಶಿ ಮಾಡಬಾರದು ಹೀಗೆ ಮಾಡುವುದರಿಂದ ಕೆಲಸಮಾಡುವವರಿಗೆ ಸುಮ್ಮನೆ ತೊಂದರೆಯಾಗುತ್ತದೆ.

ಧಾರವಾಡ } ರಾ. ಶ್ರೀ. ಹುಕ್ಕೇರಿಕರ
೨೪-೧೦-೩೬ } ನಾ. ಸು. ಹರ್ಡೀಕರ
ಗೌ. ಕಾರ್ಯದರ್ಶಿಗಳು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಪಾರ್ಲಿಮೆಂಟರೀ ಬೋರ್ಡಿನ ಸಭೆ

ಮೊದಲು ಗೊತ್ತು ಪಡಿಸಿದಂತೆ ಕ. ಪ್ರಾಂ. ಕಾಂ ಪಾ ಬೋರ್ಡಿನ ಸಭೆಯು ೧೨-೧೦-೩೬ನೇ ದಿವಸ ಮಧ್ಯಾಹ್ನ ೪ ಗಂಟೆಗೆ ಶ್ರೀ ನಾರಾಯಣರಾವ ಜೋಶಿ ಇವರ ಅಧ್ಯಕ್ಷತೆಯ ಕೆಳಗೆ ಸೇರಿತ್ತು ಸಭೆಯು ರಾತ್ರಿ ೮ ಗಂಟೆಯ ವರೆಗೂ ಮರುದಿನ ಪ್ರಾತಃಕಾಲ ೮ ಗಂಟೆಯಿಂದ ಮಧ್ಯಾಹ್ನ ೧೨ ಗಂಟೆಯ ವರೆಗೂ ನೇರಿತ್ತು. ಚರ್ಚೆಯಾದ ಮುಖ್ಯ ವಿಷಯಗಳೆಂದರೆ ಹುರಿಯಾಳುಗಳ ಹೆಸರುಗಳನ್ನು ಮೇಲಿನ ಕಮಿಟಿಗೆ ಶಿಫಾರಸು ಮಾಡುವದು. ೭ ಸ್ಥಳಗಳ ಹೊರತು ಎಲ್ಲಾ ಸ್ಥಳಗಳಿಗೂ ಹುರಿಯಾಳುಗಳ ಹೆಸರುಗಳನ್ನು ಶಿಫಾರಸು ಮಾಡಲಾಯಿತು.

ಸದ್ಯಕ್ಕೆ ಇಲಾಖಾ ಕಮಿಟಿಯ ಉದ್ದೇಶ ಪತ್ರಿಕೆಯು ಸಿದ್ಧವಾಗುವ ವರೆಗೆ ಪ್ರಾಂತಿಕ ಉದ್ದೇಶ ಪತ್ರಿಕೆಯು ಕೆಲಸವನ್ನು ಮುಂದೆ ಹಾಕಬೇಕೆಂದು ನಿರ್ಣಯವಾಯಿತು.

ಹಣ ಕೂಡಿಸುವ ಬಗ್ಗೆ ಅಖಿಲ ಭಾರತ ಕಾಂಗ್ರೆಸ ಕಮಿಟಿಯು ಹಾಗು ಮಧ್ಯವರ್ತೀ ಕಮಿಟಿಯ ಅಧ್ಯಕ್ಷರು ಹೊರಡಿಸಿದ ಪ್ರಕಟನೆಯ ವಿಚಾರ ಮಾಡಲಾಯಿತು.

ಕ. ಪ್ರಾಂ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಮಂಡಲದ ಸಭೆಯು,

ಕ ಪ್ರಾಂ ಕಾಂ. ಕಮಿಟಿಯ ಕಾರ್ಯಕಾರೀ ಮಂಡಲದ ಸಭೆಯು ಅಕ್ಟೋಬರ ತಾ ೧೧ನೇ ದಿವಸ ಸಂಜೆಯ ೫ ಗಂಟೆಗೆ ಧಾರವಾಡದಲ್ಲಿ ಸೇರಿತ್ತು. ಕೆಳಗಿನ ನಿರ್ಣಯಗಳು ಸ್ವೀಕೃತವಾದವು.

೧ ಹಳ್ಳಿ, ಸರಕಲ ಹಾಗು ಜಿಲ್ಲಾ ಕಾಂಗ್ರೆಸ ಕಮಿಟಿಗಳ ಹೊಸ ಚುನಾವಣೆ ಹಾಗು ಸ್ಥಾಪನೆ ಇವು ಇದೇ ನವೆಂಬರ ೧೫ರ ನಂತರ ಮತ್ತು ಡಿಶೆಂಬರ ೧೫ನೇ ತಾರೀಕಿನೊಳಗೆ ಆಗಬೇಕೆಂದು ಈ ಸಭೆಯು ನಿರ್ಣಯ ಮಾಡುತ್ತದೆ.

೨ ಆಯಾ ಜಿಲ್ಲಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರ ಫೈಜಪುರ ಕಾಂಗ್ರೆಸ್ಸಿನ ಪ್ರತಿನಿಧಿಗಳ ಚುನಾವಣೆಯ ಅಧಿಕಾರಿಗಳು (ರಿಟರ್ನಿಂಗ ಆಫೀಸರ) ಎಂದು ಈ ಸಭೆಯು ನೇಮಿಸುತ್ತದೆ. ಶ್ರೀ ಸುಬ್ಬರಾವ ಹಳದೀಪೂರಕರ ಹಾಗು ಶ್ರೀ ಪಿ. ಪಿ. ಬೆಳ್ಳಪ್ಪನವರು ಅನುಕ್ರಮವಾಗಿ ಕಾರವಾರ ಹಾಗು ಕೊಡಗು ಜಿಲ್ಲೆಯ ರಿಟರ್ನಿಂಗ ಆಫೀಸರರು ಎಂದು ಈ ಸಭೆಯು ನೇಮಿಸುತ್ತದೆ.

೩ ಆಯಾ ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿಂದ, ಹಾಗು ಅಲ್ಲಲ್ಲಿ ಕಾಂಗ್ರೆಸ್ ಮೆಂಬರರನ್ನು ಮಾಡಲು ಅಧಿಕೃತರಾದ ಗೃಹಸ್ಥರಿಂದ, ಅವರವರು ಸಪ್ಟಂಬರ 30ನೇ ತಾರೀಕಿನ ವರೆಗೆ ಮಾಡಿದ ಸಭಾಸದರ ಫೀಯು ¼ ಹಣವು, ಮತ್ತು ಆಯಾ ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿಂದ ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಸಲ್ಲತಕ್ಕ ಎಲ್ಲಾ ಹಣವು ನವಂಬರ ೧ನೇ ತಾರೀಕಿನೊಳಗಾಗಿ ಸಲ್ಲದೇ ಹೋದಲ್ಲಿ ಆಯಾ ಕಾಂಗ್ರೆಸ ಕಮಿಟಿಗಳು ಹಾಗು ಆಯಾ ರಿಟರ್ನಿಂಗ ಆಫೀಸರರು, ಫೈಜಪೂರ ಪ್ರತಿನಿಧಿಗಳ ಚುನಾವಣೇ ಕಾರ್ಯವನ್ನು ಮಾಡಲು ಅಧಿಕೃತರಾಗುವದಿಲ್ಲವೆಂದು ಈ ಸಭೆಯು ನಿರ್ಣಯ ಮಾಡುತ್ತದೆ.

ಧಾರವಾಡ } ಗೌ ಕಾರ್ಯದರ್ಶಿ
೨೪ ೧೦-೩೬ } ಕ. ಪ್ರಾಂ ಕಾಂ ಕಮಿಟಿ

ಬೆಲೆ:—] "ಶ್ರೀಪತಿ ಪಂಚಾಂಗಂ [6ಕ್ಕೆ ಮಾತ್ರ
ತ್ವರೆಮಾಡಿರಿ ತ್ವರೆಮಾಡಿರಿ

ಹಲವು ತರದ ವಿಶೇಷ ವಿಷಯಗಳಿಗೂ ಸಂದಿಗ್ಧ ವಿಷಯಗಳ ಶಾಸ್ತ್ರೀಯ ನಿರ್ಣಯಗಳಿಗೂ ಜನಸಾಮಾನ್ಯಕ್ಕೆ ಅಗತ್ಯವಾಗುವ ಇತರ ಮುಹೂರ್ತಾದಿ ಸತ್ಪುಷ್ಟ ವಿಷಯಗಳಿಗೂ ಪ್ರಾಮಾಣಿತ ಗಣಿತಕ್ಕೂ ಅನೇಕ ವರ್ಷಗಳಿಂದ ಅನುಭವಸ್ಥರಾಗಿ, ಪಂಚಾಂಗ ಗಣಿತಜ್ಞರಲ್ಲಿ ಹೆಸರುಗೊಂಡ ಬೇಳೂರುಗ್ರಾಮದ ಬ್ರಹ್ಮ ಶ್ರೀ ನರಸಿಂಹ ಅಡಿಗಳಿಂದ ಸೂರ್ಯ ಸಿದ್ಧಾಂತ ರೀತ್ಯಾ ಗುಣಿಸಿ, ಪರಿಶೋಧಿಸಲ್ಪಟ್ಟ "ಶ್ರೀಪತಿ ಪಂಚಾಂಗ"ದ ಹೊರತು ಪ್ರಾಮಾಣಿಕವಾದುದು ಇನ್ನೊಂದಿಲ್ಲ

ಈಶ್ವರ ಸಂವತ್ಸರದ ಈ ಪಂಚಾಂಗವು ದಮ್ಮಿ ½ನೇ (ಅರ್ಧ) ಸೈಜಿನಲ್ಲಿ ಅತ್ಯುತ್ತಮ ಗ್ಲೇಜ್‌ಡ್ ಕಾಗದದಮೇಲೆ ಅಂದವಾಗಿ ಮುದ್ರಿಸಲ್ಪಡುತ್ತದ ಪಂಚಾಂಗವು ಒಟ್ಟಿಗೆ 48 ಪೇಜುಗಳುಳ್ಳದ್ದಾಗಿರುತ್ತದ ಮುದ್ರಿಸಲ್ಪಡುವ ಪಂಚಾಂಗದ ಪ್ರತಿಗಳು ಬರೇ 5,000 ಮಾತ್ರ. ಜಾಹೀರಾತು ಕೊಡುವವರಿಗೆ ಸುಸಂದರ್ಭ. ಪಂಚಾಂಗದ ಪ್ರತಿ ಒಂದರ ಬೆಲೆ 0—0—6 ಮಾತ್ರ ವ್ಯಾಪಾರ ಸ್ಥಿತಿಗೂ. ಹತ್ತು ಯಾ ಹೆಚ್ಚು ಪಂಚಾಂಗಗಳನ್ನು ಒಮ್ಮೆಲೇ ತರಿಸುವವರಿಗೂ, ಪ್ರತಿ ೧೦ಕ್ಕೆ ಪಂಚಾಂಗವನ್ನು ಕಮಿಶನ್ ಕೊಡಲಾಗುವುದು.

ಪಂಚಾಂಗದ ಪ್ರತಿಗಳು ಇದೇ ಬರುವ ನವಂಬರ ತಿಂಗಳು ೨೦ರ ನಂತರ ಮಾರಾಟಕ್ಕೆ ಸಿದ್ಧವಾಗುವುವು.

ಜಾಹೀರಾತಿನ ದರಗಳಿಗೂ, ಪಂಚಾಂಗದ ಪ್ರತಿಗಳಿಗೂ ಈ ಕೆಳಗಿನ ವಿಳಾಸದವರಿಗೆ ಬರೆದು ತಿಳಿಯುವದು.

ಬಿ. ವಿ. ಕಾರಂತ, ಪಾತ್ರೆವ್ಯಾಪಾರಿ, ಕುಂದಾಪುರ. ದ. ಕ.

NOTICE

Sealed tenders will be received up to 16th November 1936 for "Reconstructing the bridge at Bambilla in 22/8 of Mangalore-Mysore Trunk Road No. A 22" with granite masonry abutments and R. C. Deck and R. S. Beams (approximate value Rs. 18,000/-).

Tender documents, plans etc can be seen in the Engineer's Office during office hours and can be had on payment of Rs. 10/- per set.

Alternative quotation for the same with R. C. Superstructure is also invited.

Office of the District Board Engineer South Kanara, Mangalore, 19-10-36 } *(Sd.)* **U. Srinivasa Rao,** *Dt. Board Engineer, (S. K.)*

ಪ್ರೇಮ ವಿದ್ಯಾಪೀಠ

ತುಂಗಭದ್ರಾ (ಬಳ್ಳಾರಿ ಜಿಲ್ಲಾ)

ಇದರ ಹೊಸ ವರ್ಷವು ಜೂಲೈಯಲ್ಲಿ ಮೊದಲಾಗುತ್ತದೆ. ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್, ಸ್ಕೂಲ್‌ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರಾಸ್‌ಪೆಕ್ಟಸ್ ಮಾಹಿತಿಗಾಗಿಕೂಡಲೆ ೨ ಆಣೆ ಸ್ಟಾಂಪ್ ಇಟ್ಟು ಬರೆಯಿರಿ

ಮಹೋಪಾಧ್ಯಾಯಾ ಡಾ|| ಸುಮತಿಬಾಯಿ,

ಬಿ ಎ ಎಲ್. ಟಿ., ಎಫ್. ಆರ್ ಎಮ್ ಎಸ್ ಭಿಷಗ್ರತ್ನ, ರಿಜಿಸ್ಟ್ರಾರ್.

— ನಾಯಕ್ ಬ್ರದರ್ಸ —

ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ಕಟಪಾಡಿ, ದ. ಕನ್ನಡ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!!

ವೃದ್ಧಿಕಾಸವ (ಸಿತ್ರಾಣಕ್ಕ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಚಂದ್ರಮುಸ್ (ವಾಂತಿಭೇದಿಗೆ ಅನುಭವಸಿದ್ಧ ಔಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ **ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.**

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ, ದಕ್ಷಿಣ ಕನ್ನಡಾ ಜಿಲ್ಲೆ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೇಳು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರೆವ್ಯಾಪಾರಿ, ರಥಬೀದಿ, ಉಡುಪಿ

ಸ್ತ್ರೀ ಮಲಯಾಳದ **ಸ್ತನೋಸ್ಥೇಧಃ** ರಹಸ್ಯಗಳು

THE MALAYALA STHANO STHEDAH OUSHADHA CO.,
POST-CHALAPURAM. MALABAR.

ಇದೀಗ ತಿಳಿದು ಬಂದಿದೆ, ಪುರುಷರಿನ್ನೂ ವಿದ ಆಕರ್ಷಿಸುವುದರಲ್ಲಿ ಸ್ತ್ರೀಯರಿಗೆ ಬಲ್ಲಂತ ಜೀವ ಪ್ರಮಾಣಾತ್ಮಕವನ್ನು ಪರೀಕ್ಷಿಸಿ ನೋಡಿದಲ್ಲಿ, ಅವನ ಕಣ್ಣುಗಳು ಸ್ತ್ರೀಯ ಮ ಸಿದಿಂದ ಕೆಳಗೆ ಉಚ್ಚಸ್ಥಳಕ್ಕೆ ಚಲಿಸಿ ಕುಚಗಳು ಉನ್ನತವಾಗಿ, ದುಂಡಗೆ ಯೌವನಯುಕ್ತವಾಗಿ ಆಕರ್ಷಕವಾಗಿರುವವೂ ಎಂದು ನೋಡುವವು

48 ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.



ಪ್ರಖ್ಯಾತ ಮಲಯಾಳಿ ರಹಸ್ಯ ಸ್ಥನಸ್ಥೆಡ:— ಅಶಿಕ್ಷ, ಚಿಂತೆ, ಪ್ರಾಯ ಆಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷಣೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಅಥವಾ ಹಿರು ತಗ್ಗಾಗಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರದಾದರೆ

ದಿ ಮಲಯಾಳ ಔಷಧ ಕಂಪೆನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ವಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುತ್ತವೆ, ಟೊಳ್ಳುತನವು ತುಂಬಿ ಬರುವುದು ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವವು. ಸಡಿಲಾಗಿರುವ ಮಾಂಸವು ಸ್ಥಿರವಾಗುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವ ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಹೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು

ಸ್ಥನಸ್ಥೆಡ ನಂಬ್ರ 20—ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. ೩. ನಂಬ್ರ 21 ಹೊರಗಣ ಉಪಯೋಗಕ್ಕೆ ರೂ. 3. ಧರ್ಮಾರ್ಥ ಕಳುಹಿಸಲ್ಪಡುವ ಕೆಟಲಾಗಿಗೆ ದಯಮಾಡಿ ಬರೆಕೊಳ್ಳಿ.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಮುಟ್ಟುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ

ಬ್ರಾಹ್ಮಣೋ ಭೋಜನಪ್ರಿಯ

ಈ ಮಾತು ನಿಜ. ಯಾವ ಉದ್ಯೋಗವೂ ಇಲ್ಲದೆ ಇನ್ನೊಬ್ಬನ ಖರ್ಚಿನಿಂದ ಸದಾ ಊಟ ಸಿಕ್ಕಿದರೆ ಆದೀತೆಂದು ಬ್ರಾಹ್ಮಣರಿಗೆ ಆಶೆಯಿದೆ. ಅದಕ್ಕಾಗಿಯೇ ಬ್ರಾಹ್ಮಣರಿಗೆ ಭೋಜನ ಮಾಡಿಸಿದರೆ ದೇವರಿಗೆ ಸಂತೋಷವಾಗುತ್ತದೆ ಎಂಬ ಒಂದು ಅಭಿಪ್ರಾಯವನ್ನು ಬ್ರಾಹ್ಮಣರು ಜನರಲ್ಲಿ ಬೋಧಿಸಿಬಿಟ್ಟಿರುತ್ತಾರೆ. ಇದರಿಂದಾಗಿ ಬ್ರಾಹ್ಮಣರಿಗೆ ಮಠ ದೇವಸ್ಥಾನಗಳಲ್ಲಿಯೂ ಮನೆಗಳಲ್ಲಿಯೂ, ಛತ್ರಗಳಲ್ಲಿಯೂ, ಎಲ್ಲೆಲ್ಲಿಯೂ, ನಿರಾಯಾಸವಾಗಿ ಊಟ ಸಿಕ್ಕುತ್ತದೆ. ಬ್ರಾಹ್ಮಣರಿಗೆ ಭೋಜನ ಮಾಡಿಸಿದರೆ ದೇವರಿಗೆ ಸಂತೋಷವಾಗುತ್ತದೆ ಎಂಬ ಅಭಿಪ್ರಾಯವು ಬ್ರಾಹ್ಮಣೇತರರಲ್ಲಿ ಮಾತ್ರವಲ್ಲ ಬ್ರಾಹ್ಮಣರಲ್ಲಿಯೂ ಯಥೇಷ್ಟವಿದೆ. ಜನರಲ್ಲಿ ವಿಚಾರಶಕ್ತಿಯೂ ಬೆಳೆಯುತ್ತಾ ಬಂದಂತೆ ಈ ಅಭಿಪ್ರಾಯವು ಬ್ರಾಹ್ಮಣೇತರರಲ್ಲಿ ಕ್ರಮೇಣ ಕಡಿಮೆಯಾಗ ಹತ್ತಿದೆ. ಮಠ ದೇವಸ್ಥಾನಗಳಲ್ಲಿ ಜಮೆಯಾಗುತ್ತಿರುವ ಹಣವು ಸಾರ್ವಜನಿಕವಾಗಿದ್ದು ಅದರಿಂದ ಒಂದೇ ಜಾತಿಯವರ ಹೊಟ್ಟೆ ತುಂಬಿಸುವುದು ಯಾವ ನ್ಯಾಯವೆಂದು ಬ್ರಾಹ್ಮಣೇತರರು ಮಾತಾಡ ಹತ್ತಿದ್ದಾರೆ. ತಮ್ಮ ಸ್ವಂತ ಖರ್ಚಿನಿಂದ ಬ್ರಾಹ್ಮಣರಿಗೆ ಭೋಜನ ಮಾಡಿಸುವ ಪದ್ಧತಿಯು ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ. ಬ್ರಾಹ್ಮಣೇತರರ ಆಡಳಿತೆಯೊಳಗಿರುವ ದೇವಸ್ಥಾನಗಳಲ್ಲಿ ಬ್ರಾಹ್ಮಣಾರಾಧನೆಯು ಈಗ ಸೂಕ್ಷ್ಮರೀತಿಯಿಂದ ನಡೆಯುತ್ತದೆ. ಕೆಲವು ವರುಷಗಳೊಳಗೆ ಬ್ರಾಹ್ಮಣೇತರ ಕಷ್ಟಾರ್ಜಿತ ದ್ರವ್ಯದಿಂದ ಬ್ರಾಹ್ಮಣರು ನಿರಾಯಾಸವಾಗಿ ಭೋಜನ ಮಾಡುವ ಆಶೆಯು ನಿಷ್ಫಲವಾಗಬಹುದು.

ಬ್ರಾಹ್ಮಣೇತರರು ಬ್ರಾಹ್ಮಣಾರಾಧನೆಯಿಂದಾಗಿ ದೇವರನ್ನು ಒಲಿಸಿಕೊಳ್ಳಬಹುದೆಂಬ ಅಭಿಪ್ರಾಯವನ್ನು ಬಿಡುತ್ತಾ ಬರುತ್ತಿರುವರಾದರೂ ಬ್ರಾಹ್ಮಣರಲ್ಲಿ ಈ ಅಭಿಪ್ರಾಯವು ಏನೂ ಕಡಿಮೆಯಾದಂತೆ ಕಾಣುವುದಿಲ್ಲ. ಬ್ರಾಹ್ಮಣರಲ್ಲಿ ಹುಟ್ಟುವ ಮೊದಲೇ ಭೋಜನಗಳಿಗೆ ಪ್ರಾರಂಭವಾದರೆ ಸತ್ತ ನಂತರವೂ ಭೋಜನವು ನಿಲ್ಲುವಂತಿಲ್ಲ. ಶಿಶುವು ಗರ್ಭದಲ್ಲಿ ಉತ್ಪತ್ತಿಯಾಯಿತೆಂದರೆ ಸೀಮಂತದ ಊಟ. ಶಿಶುವು ಜನಿಸಿದ ನಂತರ ನಾಮಕರಣದ ಊಟ. ಬಾಲಕನಾದನೆಂದರೆ ಉಪನಯನದ ಊಟ. ಬೆಳೆದ ನಂತರ ಮದುವೆಯ ಊಟ, ನಂತರ ಕಲಶಗ್ರಹಣದ ಊಟ. ಅರುವತ್ತು ವರುಷ ದಾಟಿತೆಂದರೆ ಷಷ್ಟಿಪೂರ್ತಿಯ ಊಟ. ಎಂಭತ್ತು ತುಂಬಿದರೆ ಮತ್ತೊಂದು ಊಟ. ಸತ್ತರೆ ಉತ್ತರಕ್ರಿಯೆಯ ಊಟ. ನಂತರ ಒಂದು ವರುಷದ ವರೆಗೆ ತಿಂಗಳು ತಿಂಗಳು ಊಟ. ವರುಷಾಂತ್ಯಕ್ಕೊಂದು ದೊಡ್ಡ ಊಟ. ನಂತರ ಅವನ ಮಕ್ಕಳು ಸಾಯುವವರೆಗೆ ಪ್ರತಿವರುಷವೂ ಶ್ರಾದ್ಧದ ಊಟ. ಮಹಾಲಯದ ಊಟ. ಹೀಗೆ ಜನಿಸುವ ಮೊದಲೇ ಊಟ ಪ್ರಾರಂಭವಾಗಿ ಸತ್ತ ನಂತರ ಅರ್ಧಶತಮಾನ ದಾಟುವ ವರೆಗೂ ಸಾವಿರ ಊಟಗಳು. ಸ್ತ್ರೀಯಾದರೆ ಉಪನಯನದ ಊಟವೊಂದು ಬಿಟ್ಟು ಇತರ ಎಲ್ಲಾ ಊಟಗಳೂ ಇವೆ. ಸಾಲದುದಕ್ಕೆ ಅನೇಕ ವ್ರತಗಳ ಊಟಗಳೂ ಇವೆ. ಇನ್ನು ಜಾತಕವನ್ನು ಪರೀಕ್ಷಿಸಿ ಜೋಯಿಸರು ಮಾಡಬೇಕೆಂದು ಹೇಳುವ ಅನೇಕ ಗ್ರಹಚಾರದ ಊಟಗಳು, ತೀರ್ಥಯಾತ್ರೆಗಳನ್ನು ಮಾಡಿಬಂದು ಮನೆಯಲ್ಲಿ ಮಾಡಿಸುವ ಊಟಗಳು ಬೇರೆ. ಮನೆಯವರ ಕ್ಷೇಮಕ್ಕಾಗಿ ಮಾಡಿಸುವ ಹೋಮ ಪೂಜೆಗಳ ಸಂಬಂಧವಾದ ಊಟಗಳು ಬೇರೆ. ಮನೆತನದ ದೇವರಿಗಾಗಿ ಮಾಡಿಸುವ ಊಟಗಳು ಬೇರೆ. ಮನೆತನದ ಗೌರವಕ್ಕಾಗಿ ದೇವಸ್ಥಾನಗಳಲ್ಲಿ ಮಾಡಿಸುವ ಊಟಗಳು ಬೇರೆ. ಹಬ್ಬ ಹುಣ್ಣಿಮೆಗಳಿಗಾಗಿ ಅನೇಕ ಊಟಗಳು ಬೇರೆ. ಹೀಗೆ ಬ್ರಾಹ್ಮಣರಲ್ಲಿ ಸದಾ ಲೆಕ್ಕವಿಲ್ಲದಷ್ಟು ಊಟಗಳು.

ಒಬ್ಬನು ಎಷ್ಟು ಬಡತನದಲ್ಲಿರುವವನಾದರೂ ವರುಷಕ್ಕೆ ನಾಲ್ಕೈದು ಭೋಜನಗಳನ್ನಾದರೂ ಮಾಡಿಸದೆ ಇರುವುದಿಲ್ಲ. ಐಶ್ವರ್ಯವಂತನಾದರೆ ಅವನಲ್ಲಿ ಆಗುವ ಭೋಜನಗಳಿಗೆ ಮಿತಿಯೇ ಇಲ್ಲ. ಅದರಲ್ಲಿಯೂ ಸ್ಪರ್ಧೆ. ಅವನು ಮಾಡಿಸಿದ ಊಟಕ್ಕಿಂತ ತಮ್ಮಲ್ಲಿಯ ಊಟ ಪ್ರಶಸ್ತವಾಗಬೇಕೆಂದು, ಅವನು ಕೊಟ್ಟದಕ್ಕಿಂತ ಹೆಚ್ಚು ದಕ್ಷಿಣೆ ತಾನು ಕೊಡಬೇಕೆಂದು ಈ ಭೋಜನ ಮಾಡಿಸಿ ದಕ್ಷಿಣೆ ಕೊಟ್ಟು ತಮ್ಮ ಸರ್ವಸ್ವವನ್ನೂ ಕಳೆದುಕೊಂಡ ಬ್ರಾಹ್ಮಣರು ನಮ್ಮಲ್ಲಿ ಬೇಕಾದಷ್ಟಿದ್ದಾರೆ. ಇಂತಹ ಅನೇಕ ಉದಾಹರಣೆಗಳನ್ನು ನೋಡಿಯೂ ಬ್ರಾಹ್ಮಣರು ಪಾಠ ಕಲಿಯುವಂತಿಲ್ಲ. ಈ ರೀತಿಯಲ್ಲಿ ಭೋಜನಗಳನ್ನು ಮಾಡಿಸಿ ಮಾಡಿಸಿ ಬ್ರಾಹ್ಮಣ ಸಮಾಜವು ಬಡತನದಿಂದ ಬಳಲುತ್ತಿದೆ. ಧರ್ಮಾರ್ಥವಾಗಿ ಅಲ್ಲಲ್ಲಿ ಭೋಜನ ಸಿಕ್ಕುವುದು ಬ್ರಾಹ್ಮಣರಿಗೊಂದು ಉಪಕಾರವಲ್ಲವೇ ಎಂದು ಕೆಲವರು ಪ್ರಶ್ನಿಸಬಹುದು. ಪುರೋಹಿತವೃತ್ತಿಯಿಂದ ಜೀವನ ಮಾಡುತ್ತಿರುವವರ ವಿನಾ ಈ ಭೋಜನದ ಪದ್ಧತಿಯಿಂದ ಯಾರಿಗೂ ಕ್ಷೇಮವಿಲ್ಲ. ಅಲ್ಲಲ್ಲಿ ಭೋಜನ ಸಿಕ್ಕುತ್ತದೆಂದು ಎಣಿಸಿ ಬ್ರಾಹ್ಮಣರಲ್ಲನೇಕರು ಯಾವ ವೃತ್ತಿಯನ್ನೂ ಕೈಗೊಳ್ಳದೆ ಸೋಮಾರಿಗಳಾಗಿ ಕಾಲ ಕಳೆಯುತ್ತಿದ್ದಾರೆ. ತಮ್ಮ ಕಷ್ಟಾರ್ಜಿತ ದ್ರವ್ಯದಿಂದ ತಾನು ಬದುಕಬೇಕು ಪರಾನ್ನವನ್ನು ಅವಲಂಬಿಸಿರಬಾರದೆಂಬ ಸ್ವಾಭಿಮಾನವು ನಮ್ಮ ಬ್ರಾಹ್ಮಣರಲ್ಲಿ ಇಲ್ಲದಂತಾಗಿದೆ. ಅನ್ನದಾತನನ್ನು ಮುಖಸ್ತುತಿ ಮಾಡಿ ಪರಾಶ್ರಯದಿಂದ ಜೀವಿಸುವವರು ನಮ್ಮಲ್ಲಿ ಯಥೇಷ್ಟವಿದ್ದಾರೆ. ಸಾರ್ವಜನಿಕವಾದ ಮಠ ದೇವಸ್ಥಾನಗಳ ದ್ರವ್ಯವನ್ನು ಬ್ರಾಹ್ಮಣರೇ ತಿನ್ನುತ್ತಿದ್ದಾರೆಂದು ಬ್ರಾಹ್ಮಣೇತರರು ನಮ್ಮನ್ನು ನೋಡಿ ಅಸೂಯೆ ಪಡುವಂತಾಗಿದೆ. ಮೇಲೆ ಹೇಳಿದಂತೆ ಭೋಜನ ಮಾಡಿಸುವವರೂ, ಭೋಜನವನ್ನು ನಿರೀಕ್ಷಿಸುವವರೂ ಕಠಿಣ ಸ್ಥಿತಿಗೆ ಬರುತ್ತಿದ್ದಾರೆ. ಆದುದರಿಂದ ಬ್ರಾಹ್ಮಣೋ ಭೋಜನಪ್ರಿಯ ಎಂಬ ಹಾಸ್ಯದಿಂದ ತಪ್ಪಿ ನಮ್ಮಲ್ಲಿ ಸ್ವಾಭಿಮಾನವು ಬೆಳೆಯುವಂತೆ ನಾವು ಭೋಜನ ಮಾಡಿಸುವ ಮತ್ತು ಇನ್ನೊಬ್ಬನು ಮಾಡಿಸುವ ಭೋಜನಗಳಿಗೆ ಹೋಗುವ ದುಷ್ಟ ಪದ್ಧತಿಯನ್ನು ಆದಷ್ಟು ಬೇಗನೇ ನಿಲ್ಲಿಸುವುದು ನಮ್ಮ ಸಮಾಜದ ಹಿತದೃಷ್ಟಿಯಿಂದ ಅತೀ ಅವಶ್ಯವಿದೆ. ಈಗಿರುವ ಕ್ರಮ ಕೆಲವು ವರುಷಗಳೊಳಗೆ ಬಹಳ ಕಠಿಣ ಸ್ಥಿತಿಗೆ ಬರುವರೆಂಬುದರಲ್ಲಿ ಸಂದೇಹವಿಲ್ಲ. ಬ್ರಾಹ್ಮಣರು ಈ ಕಡೆ ಸ್ವಲ್ಪ ಗಮನಿಸುವರೇ?

—ವಿಜಾರಿ.

ಚುನಾವಣೆ ಚಳವಳ

ಪುತ್ತೂರು ತಾಲೂಕಿನ ಕಾಡುಪ್ರಾಂತ್ಯದಲ್ಲಿ ಮುಂಡಾಜೆ ಎಂಬುದು ಒಂದು ಹಳ್ಳಿ. ಕಾಡುಪ್ರಾಂತದ ಗ್ರಾಮಸ್ಥರ ಮುಂದಾಳುತನದ ಮನವು ಈ ಹಳ್ಳಿಗಿದ್ದ ಜವಾಬ್ದಾರಿಯನ್ನರಿತು ದುಡಿಯುವ ಚಲವು ಅದಕ್ಕೊಂದಿದೆ. ಈ ಬಾರಿಯ ನ್ಯಾಯ ವಿಧಾಯಕ ಸಭೆಯಲ್ಲಿ ರಾಷ್ಟ್ರೀಯ ಮಹಾಸಭೆಯವರು ಭಾಗ ವಹಿಸುವದನ್ನು ನಿರ್ಣಯಿಸಿದಂದಿನಿಂದ ಈ ಪ್ರಾಂತದ ಪರವಾಗಿ ಶ್ರೀ॥ ಕೋಟ ರಾಮಕೃಷ್ಣ ಕಾರಂತರನ್ನೇ ನಮ್ಮ ಪ್ರತಿನಿಧಿಗಳನ್ನಾಗಿ ಚುನಾಯಿಸಬೇಕೆಂದಾಗಿ ನಿಶ್ಚಯಿಸಿದರು. ಆದಕ್ಕಾಗಿ ಜನತೆಯ ಯೋಗಕ್ಷೇಮವನ್ನು ವಹಿಸಿ ಜನರಿಗಾಗಿ ಸರಕಾರದೊಡನೆ ವಾದಿಸಿ ನ್ಯಾಯ ದೊರಕಿಸಿ ಕೊಡಿಸಬಲ್ಲವರನ್ನೇ ನಮ್ಮ ಪ್ರತಿನಿಧಿಗಳನ್ನಾಗಿ ನೇಮಿಸಿರೆಂದು ಈ ಮೊದಲೇ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಈ ಪ್ರಾಂತದ ಮಹಾಜನರು ಮನವಿಮಾಡಿಕೊಂಡಿದ್ದರು. ಇಂದು ಚುನಾವಣೆಯ ಉಮೇದ್ವಾರರು ಕಾಂಗ್ರೆಸು ಕಡೆಯವರು ಯಾರೆಂಬುದನ್ನು ಇನ್ನೂ ಪ್ರಕಟಪಡಿಸಲಿಲ್ಲ. ಆದರೆ, ಹಾಗೆ ಉಮೇದ್ವಾರಿಕೆಯ ಅರ್ಜಿಯನ್ನು ಮಾಡಿದವರಲ್ಲಿ ಶ್ರೀ॥ ಕಾರಂತರೂ ಒಬ್ಬರು. ನಮ್ಮ ಕಾಡುಹಳ್ಳಿಗಳ ನೀರಸ ಜೀವನದ ವಾತಾವರಣದ ಅನುಭವವಿದ್ದು ವರ್ಗದಾರರ ಸಭೆಯ ನೆರೆಯಲ್ಲಿ ನಮ್ಮಿನಿಗ ಬೆಳಕಿನ ದಾರಿಯನ್ನು ಕಾಣಿಸಿದವರಲ್ಲಿ ಶ್ರೀ॥ ಕಾರಂತರೊಬ್ಬರೇ. ನ್ಯಾಯವಿಧಾಯಕ ಸಭೆಯ ಉಮೇದ್ವಾರರಾಗಿರುವುದರಿಂದ, ಅವರ ಉಮೇದ್ವಾರಿಕೆಯನ್ನು ಸಮರ್ಥಿಸಿ ಅವರನ್ನು ನಮ್ಮ ಸರ್ಕಲಿನ (ಪುತ್ತೂರು ಕಾಸರಗೋಡು) 10,000 ಮತದಾರರ ಪ್ರತಿನಿಧಿಗಳಾಗಿ ನ್ಯಾಯವಿಧಾಯಕ ಸಭಾಮಂದಿರದಲ್ಲಿ ಕಾಣಬಯಸುವ ಮನಸ್ಸನ್ನು ಅತ್ಯಗತ್ಯವನ್ನು ನಿವೇದಿಸುವುದಕ್ಕಾಗಿ ಇಂದು ಮುಂಡಾಜೆಯ ಹೊಸ ಶಾಲಾ ಕಟ್ಟಡದಲ್ಲಿ ಸಾರ್ವಜನಿಕ ಸಭೆಯೊಂದು ಜರುಗಿತು. ಮಂಗಳೂರಿನ ವಕೀಲರಾದ ಶ್ರೀ॥ ಕರಾಡಿ ನರಸಪ್ಪಯ್ಯನವರೇ ಅಗ್ರಾಸನವನ್ನು ವಹಿಸಿದ ಬಳಿಕ, ಶ್ರೀ॥ ಕಾರಂತರು ಇಂದಿನ ಚುನಾವಣೆ ಅದರ ಹಿಂದಿರುವ ಇತಿಹಾಸ ಕಾಂಗ್ರೆಸಿನವರು ಇಂದು ಚುನಾವಣೆಗಿಳಿದುದೇಕೆಂಬುದನ್ನು ವಿಶದಪಡಿಸುತ್ತ ನೀವೆಲ್ಲರೂ, ವ್ಯಕ್ತಿ ಯಾ ಜಾತಿಗತವಾಗಿರುವ ವಿಷಯವನ್ನು ಎಣಿಸದೆ ನಿಮಗಾಗಿ ನಿಮ್ಮ ಕಲ್ಯಾಣಕ್ಕಾಗಿ ದುಡಿಯುವ ಕಾಂಗ್ರೆಸಿನ ಉಮೇದ್ವಾರರಿಗೆ ಮತ ಕೊಡಿರೆಂದು ಹೇಳಿದರು. ಇಂದು ಜನರ ಪ್ರತಿನಿಧ್ಯವಿಲ್ಲದ ಸ್ವಾರ್ಥಿಗಳ ಸಹಾಯದಿಂದ ಸರಕಾರದವರು ಅಸಂಖ್ಯ ಮೂಕ ಪ್ರಜೆಗಳನ್ನು ಕುರಿಮರಿಗಳಂತೆ ಕಾಣುತ್ತಿರುವುದರ ಮರ್ಮವನ್ನು ಈ ಸ್ಥಿತಿಯ ವ್ಯತ್ಯಾಸಗೊಳ್ಳಬೇಕಾದರೆ ಜನರು ಸರಿಯಾಗಿ ಆಲೋಚಿಸಿ ತಮ್ಮ ಪ್ರತಿನಿಧಿಗಳನ್ನು ಕಳುಹಿಸಬೇಕೆಂದೂ ಹೇಳಿದರು. ನಂತರ, ನೆರೆದ ಸಭಿಕರ ಪರವಾಗಿ, ಶ್ರೀ॥ ಕಾರಂತರೇ ನಮ್ಮ ಸರ್ಕಲಿನ ಪರವಾಗಿ ಚುನಾವಣೆಗೆ ನಿಲ್ಲಬೇಕೆಂದೂ ಕಾಂಗ್ರೆಸಿನವರು ಅವರ ಉಮೇದ್ವಾರಿಕೆಯನ್ನು ಸಮರ್ಥಿಸಬೇಕೆಂದೂ ಸರ್ವಾನುಮತದಿಂದ ಠರಾವುಗಳು ಮುಂದೆ ಬಂದು ಮಂಜೂರಾದವು. ನಂತರ ಶ್ರೀ॥ ಕಾರಂತರು ಈ ತನಕ ನಮ್ಮ ಬಡಗ್ರಾಮಗಳ ಕಡೆಯಿಂದ ಮಾಡಿರುವ ಸೇವೆಯ ಸ್ಮರಣೆಕ್ಕಾಗಿಯಾದರೂ ಅವರಿಗೇ ನೀವು ಮತಕೊಡುವುದು ಕರ್ತವ್ಯವೆಂಬಂಶವನ್ನು ಸ್ಪಷ್ಟಪಡಿಸಿ ನಾವೆಲ್ಲ ನಮ್ಮ ಕೆಲಸವೆಂದು ತಿಳಿದು ಮತದಾನದ ಮಹತ್ವವನ್ನು ನಾಡಿಗೇ ವಿಶದಪಡಿಸಬೇಕಾಗಿಯೂ, ಸಭಿಕರ ಸ್ಪಷ್ಟವಾದ ಅಭಿಪ್ರಾಯಗಳು ಹೇಳಲ್ಪಟ್ಟವು. ಪ್ರಚಂಡವಾದ ಒಡವರ ಶಕ್ತಿಯು ಲಕ್ಷಾಂತರ ರೂಪಾಯಿಗಳ ವೈಭವಕ್ಕೆ ಬೆರಗಾಗದೆ ತನ್ನ ಕರ್ತೃತ್ವವನ್ನು ತೋರ್ಪಡಿಸಿಯಶಸ್ವಿಯಾದೀತೆಂಬ ಭರವಸೆಯು ಮುಂಡಾಜೆ ಪ್ರಾಂತದ ಪ್ರತಿಯೊಂದು ಹಳ್ಳಿ ಮತದಾರನಲ್ಲಿದೆ.

ಬರುವ ಚುನಾವಣೆಯ ಕೆಲಸವನ್ನು ಭರದಿಂದ ಸಾಗಿಸುವಂತೆ ಈ ಪ್ರಾಂತದ ಮತದಾರರ ಕಾರ್ಯಕಾರೀ ಸಮಿತಿಯೊಂದನ್ನು ಸ್ಥಾಪಿಸಲಾಗಿ ಕ್ರಮವಾಗ ಮೀಟಿಂಗ್ ಜರಗಿ ಮುಂದಿನ ಯೋಜನೆಯು ತಯಾರಾಗುವ ತನಕ ಸಮಿತಿಯ ಕಾರ್ಯವಾಹಕರಾಗಿ ಶ್ರೀ॥ M. N ಭಿಡೆಯವರನ್ನು ನೇಮಿಸಿರುವುದರಿಂದ, ಈ ಚಳವಳದಲ್ಲಿ ಸಜೀವತೆಯುಂಟಾಗಿ ಮತದಾರರ ಸ್ಫೂರ್ತಿಯು ಕಾಂಗ್ರೆಸಿನ ಕೀರ್ತಿಯನ್ನು ಒಳಗೊಳಿಸೀತೆಂಬುದು ನಿಸ್ಸಂದೇಹ. ಈ ಪ್ರಾಂತದ ಮತದಾರರ ಕಡೆಯಿಂದ ಇನ್ನು ಮುಂದೆ ನಡೆಯಲಿರುವ ಚಳವಳವನ್ನು ಆಗಾಗ ಪತ್ರಿಕೆಗಳಲ್ಲಿ ಪ್ರಕಟಿಸಲಾದೀತು.

ಸೆಕ್ರೆಟರಿ

ಚುನಾವಣಾ ಲೀಗ್, ಮುಂಡಾಜೆ ದ. ಕ.

NOTIFICATION

Paicher road No I. C is closed for all sorts of motor traffic, as the road has only brush wood culverts and is not fit for heavily loaded Vehicles.

Camp UDIP 7 10 } (Sd.) U. SRINIVASA RAO, District Board Engineer, S. K.

ಮೊಗವೀರ ಮಹಾಜನ ಸಭಾ ಮುಂಬಯಿ

ಇಲ್ಲಿ ವಾಸಿಸುತ್ತಿರುವ ದಕ್ಷಿಣ ಕನ್ನಡ ಮೊಗವೀರ ಸಮಾಜದ (ಮಂಗಳೂರು ಬಾರಕೂರು ಹೋಬಳಿ) ಮಹಾಜನ ಸಭೆಯವರು ಅಂತಃಕಲಹದಿಂದ ಕೆಲವು ವರ್ಷಗಳಿಂದ ಇಕ್ಕಟ್ಟಾಗಿದ್ದುದರಿಂದ ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ಮಹಾ ಸಭೆಯವರಿಂದ ಆರಿಸಲ್ಪಟ್ಟು ಇಲ್ಲಿಗೆ ಬಂದ 8 ಜನ ಪ್ರತಿನಿಧಿಗಳು ತಾ. 2-8 36ರಲ್ಲು ಇಕ್ಕಟ್ಟಿನವರೂ ಏಕಸ್ಥಾನದಲ್ಲಿ ಕೂಡುವಂತೆ ಸಭೆ ಜರಗಿಸಿ ರಾಜಿ ಇತ್ಯರ್ಥದೊಡನೆ ಒಕ್ಕಟ್ಟು ಗೈದರು. ತಾ. 3-8-36ರಲ್ಲು ಪುನಃ ಸಭೆಜರಗಿ ಮೊಗವೀರ ಮಹಾಜನ ಸಭೆಯ ಭಂಡಾರ, ಡೇವಿಡ್ ಸಾಸೂನ್ ಕಂಪೆನಿಯಲ್ಲಿ ಕಾಯಂ ಠೇವಣೆಯಾಗಿಟ್ಟ ಹಣದಿಂದ ರೂ. 15000 (ಹದಿನೈದು ಸಾವಿರ)ವನ್ನು ಸದ್ಯಕ್ಕೆ ಸದರೀ 8 ಜನ ಪ್ರತಿನಿಧಿಗಳ ಸ್ವಾಧೀನ ಇರಗೊಡಿಸತಕ್ಕದ್ದೆಂದೂ, ಅವರು ಸದರೀ ಹಣವನ್ನು ಇನ್ನು ಹೊಸತಾಗಿ ನೇಮಿಸಲ್ಪಡಲಿಕ್ಕಿರುವ ಆಡಳಿತೆ ಸಭೆಯವರಿಗೆ ವಾಪಸುಕೊಡತಕ್ಕದ್ದೆಂದೂ, ಮಹಾಜನ ಸಭೆಯ ಭಂಡಾರದ ವಿನಿಯೋಗಾದಿ ಮುಂದಿನ ಸುವ್ಯವಸ್ಥೆಯ ನಿರ್ಧಾರ ಗೈಯ್ಯುವರೆಯೂ, ಮುಂಬಾಯಿಯಲ್ಲಿರುವ ಮೊಗವೀರ ಸಾರ್ವಜನಿಕ ಸಂಸ್ಥೆಗಳನ್ನೆಲ್ಲಾ ಸಮ್ಮಿಳನಗೈದು ಏಕ ಸಂಸ್ಥೆಯಾಗಿರುವಂತೆ ಏರ್ಪಾಡು ಗೈಯ್ಯುವರೆಯೂ 20 ಸದಸ್ಯರುಳ್ಳ ಒಂದು ತತ್ಕಾಲಿಕ ಕಾರ್ಯಕಾರಿ ಕಮಿಟಿಯನ್ನು ನೇಮಿಸತಕ್ಕದ್ದೆಂದೂ ಸರ್ವಾನುಮತದ ಒಪ್ಪಿಗೆಯಿಂದ ಮಂಜೂರುಮಾಡಿ ಸದಸ್ಯರನ್ನು ನೇಮಿಸಿರುತ್ತಾರೆ.

ಮೊಗವೀರ ಸಾರ್ವಜನಿಕ ಸಂಸ್ಥೆಗಳಾಗಿರುವ (1)ಮೊಗವೀರ ಮಹಾಜನ ಸಭಾ, (2) ಮೊಗವೀರ ವ್ಯವಸ್ಥಾಪಕ ಮಂಡಳಿ, (3) ಮೊಗವೀರ ಧರ್ಮೋದ್ಧಾರಕ ಮಂಡಳಿ (4) ಮೊಗವೀರ ಯುವಕ ಸಂಘ, ಮತ್ತು(5) ಭಾರತ ಮಂಡಳಿ,ಈ5 ಸಂಸ್ಥೆಗಳನ್ನು ಐಕ್ಯಗೊಳಿಸಿ ಏಕಸಂಸ್ಥೆ ಏರ್ಪಡಿಸುವ ಸದುದ್ದೇಶದ ಕುರಿತು ತತ್ಕಾಲಿಕ ಕಾರ್ಯಕಾರಿ ಕಮಿಟಿಯವರು ಮೇಲ್ಕಂಡ ಸಂಸ್ಥೆಯವರೂ ಯೋಚಿಸಿ ಸಸೂತ್ರತೆಯ ನಿರ್ಧಾರದ ಬಗ್ಗೆ ತಾ 18-10-36ಕ್ಕೆ ಮೇಲ್ಕಂಡ 5 ಸಂಸ್ಥೆಗಳ ಪ್ರತಿನಿಧಿಗಳು ಒಟ್ಟಿಗೆ ಸಭೆಜರಗಬೇಕೆಂದೂ, ಸದರೀ ಸಭೆಯಲ್ಲಿ ಅನುಭವಸ್ಥರಾದ ಯೋಗ್ಯ ಪ್ರತಿನಿಧಿಗಳನ್ನು ಆರಿಸಿ ಮುಂದಿನ (ಏಕ ಸಂಸ್ಥೆಯ)ಕ್ರಮ ನಿಬಂಧನೆಯನ್ನು ಏರ್ಪಡಿಸುವರೆ ಒಂದು ಸಬ್ ಕಮಿಟಿಯನ್ನು ನೇಮಿಸೋಣಾಗಬೇಕಾಗಿಯೂ ಸರ್ವಾನುಮತದ ಒಪ್ಪಿಗೆಯಿಂದ ನಿರ್ಣೈಸಲ್ಪಟ್ಟಿರುತ್ತದೆ.

ತತ್ಕಾಲಿಕ ಕಾರ್ಯಕಾರಿ ಕಮಿಟಿಯವರ ಬಗ್ಗೆ
ಯರ್ಮಾಳ ಕೊರಗಪ್ಪ ಪುತ್ರನ್
ಮೂಲ್ಕಿ ರಾಮಚಂದ್ರ
ಮಲ್ಪೆ ಲಕ್ಷ್ಮಣ ಕಂಗೆನ್
ಜತೆ ಗೌರವ ಕಾರ್ಯದರ್ಶಿಗಳು.

ಪತ್ರವ್ಯವಹಾರ

ಕಾಸರಗೋಡು ಬಾತ್ಮಿದಾರರೂ ಶೈಕ್ಅಬ್ದುಲ್ಲಾ ಗಾಂಧಿಯವರೂ

ಮಿ| ಮಹಮ್ಮದ ಶಿರೂಲರ ತಾರೀಕು 8-10-36ನೇ ನವಯುಗದಲ್ಲಿ ಪ್ರಕಟವಾದ ಲೇಖನವನ್ನು ಓದಿ ತಾಜಾ ಮುಸ್ಲಿಮನಾಗಿ ಖುರುವಾನ್ ತತ್ವಕ್ಕೆ ಸರಿಯಾಗಿ ನಡಕೊಳ್ಳುತ್ತಾರೆಂಬುದನ್ನು ನೋಡಿ ಆನಂದವಾಯಿತು ಸ್ವಾಗತ ಕಮಿಟಿ ಅಧ್ಯಕ್ಷನಾಗಿ ನೀವು ಮಾಡಿದ ಭಾಷಣವನ್ನು ದುರ್ವ್ಯಾಖ್ಯಾನ್ಯಮಾಡಿ ಪ್ರಕಟಿಸಿದದು ಎಂತ ಬಹಳ ವಿಷಾದ ಪಡುತ್ತೀರಿ. ಹ್ಯಾಗೆ ಎಂತ ತಿಳಿಸಲಿಲ್ಲ. ದುರ್ವ್ಯಾಖ್ಯಾನ ಮಾಡುವ ಅಗತ್ಯವೇನು? ಹೇಳಿದ್ದನ್ನು ಅಲ್ಲಗಳೆಯುವರೆ ಕಾರಣವಿಲ್ಲವಷ್ಟೆ! ಖುರುವಾನಿಗೆ ಸರಿಯಾಗಿ ಅಕ್ಷರಶಃ ನಡಕೊಳ್ಳುವ ಕಾರಣ ಈ ಕೆಳಗಣ ಅನುಮಾನಗಳನ್ನು ಪರಿಹರಿಸುವ ಅಗತ್ಯವಿದೆ. ನೀವು ಕಳದ ಜಿಲ್ಲಾ ಬೋರ್ಡಿಗೆ ಮೆಂಬರರಾಗಿ ಆಕಸ್ಮಿಕವಾಗಿ ಕೊಂಗ್ರೆಸು ಟಿಕೇಟಿನಿಂದ ಆರಿಸಲ್ಪಟ್ಟ ತರುವಾಯ ಸ್ವತಂತ್ರ ಪಾರ್ಟಿಯನ್ನು ಸ್ಥಾಪಿಸಿ ಕೊಂಗ್ರೆಸು ಉಮೇದ್ವಾರರಿಗೆ ಓಟು ಕೊಡದೆ ಕೊಂಗ್ರೆಸ್ ಪ್ಲೆಜ್ಜಿಗೆ ವಿರೋಧವಾಗಿ ಜಸ್ಟಿಸು ಉಮೇದ್ವಾರರಿಗೆ ಓಟು ಕೊಟ್ಟದಾದರೂ ಹೇಗೆ? ನಿಮ್ಮ ಜತೆಯ ಮೆಂಬರರೂ ಇನ್ನೊಬ್ಬರೂ ನಿಮ್ಮನ್ನು ಮೋಸಮಾಡಿದರೂ(ಹ್ಯಾಗೆಂಬುದು ತಿಳಿಸಲಿಲ್ಲ)ಸ್ಕೈನ್ ಬೋರ್ಡಿನಲ್ಲಿ ನಿಮ್ಮನ್ನು ಕತ್ತರಿಸಿ ಹಾಕಿದರು ಎಂಬ ನೆವನಗಳನ್ನು ಎದುರೊಡ್ಡಿ, (ಇದನ್ನು ಮೆಂಬರಿಕೆ ಚುನಾವಣೆಯ ಸಮಯ ಅಥವಾ ಅಧ್ಯಕ್ಷರ ಚುನಾವಣೆಯ ಮೊದಲಾದರೂ ಪ್ರಕಟಿಸದೆ, ಅಧ್ಯಕ್ಷರ ಚುನಾವಣೆಯ ತರುವಾಯ ಮಾತ್ರ ಬೇರೆಯವರ ಕೇಳಿಕೆಗೆ ಇತರರ ಸಮಾಧಾನಕ್ಕೆ ಕೊಟ್ಟ ಉತ್ತರ) ಒಂದು ವೇಳೆ ಇದು ನಿಜವಾಗಿದ್ದರೂ ಕೂಡಾ, ಧರ್ಮಕ್ಕೂ ಬರಕೊಟ್ಟ ಪ್ಲೆಜ್ಜಿಗೂ ವಿರುದ್ಧ ಮೋಸಪಡಿಸಬಹುದಿತ್ತೇ?

ಸಿವಿಕ್ ಬೋರ್ಡಿಗೆ ತೆರಬೇಕಾಗಿದ್ದ ವಂತಿಗೆ ರೂಪಾಯಿ 25-0-0ನ್ನು ನೀವು ಕೊಡದ ಕಾರಣ ನೀವು ಬರಕೊಟ್ಟ "ಪ್ಲೆಜ್ಜು" ನಿಮಗೆ ಲಗಾವಾಗುವುದಿಲ್ಲವೋ?

ಇವುಗಳಿಗೆಲ್ಲಾ ಖುರುವಾನಿನಲ್ಲಿ ಆವ ಕಾಶವಿತ್ತೇ? ನಿಮ್ಮ ವರ್ತನೆಯಲ್ಲಿ ನೀವು ಹೇಳುವಂಥಾ ನಿಮ್ಮ ಸ್ಮೃತಿ ಪಥದಲ್ಲಿ ಇರುವುದಾಗಿ ಹೇಳುವ ಸಹಿಷ್ಣುತೆಯ ತತ್ವಗಳು ಅಡಕವಾಗಿರುವುದೇ? ಮತ್ತು ನಿಂದಿಸಿ ಮಾತಾಡ ಬಾರದು; ವ್ಯತ್ಯಾಸಗಳನ್ನು ಕಾಣಬಾರದು; ದೂಷಿಸಬಾರದು; ದ್ರೋಹ ಮಾಡಬಾರದು ಇತ್ಯಾದಿ ನೀವು ಹೇಳುವ ತತ್ವಗಳನ್ನು ಆಚರಿಸಬೇಕು ಯಾರು? ಪ್ರಿಯ, ಶಿರೂಲರೇ! ಒಂದೊಮ್ಮೆ ಮುಸ್ಲಿ ಸಹೋದರರೊಬ್ಬರು ನಿಮ್ಮನ್ನು ಮೋಸಪಡಿಸಿದರು ಎಂತ ನಿಮಗೆ ಕಂಡರೆ-ಕೂಡಲೇ ನೀವು ಮುಸ್ಲಿಮ್ ಧರ್ಮವನ್ನು ಅವರ ಮೇಲಿನ ಸಿಟ್ಟಿನಿಂದ ತ್ಯಜಿಸಿ ಅವರ ಎದುರು ಅಧರ್ಮಕ್ಕೆ ಸೇರಬಹುದೇ? ಅಸ್ಪೃಶ್ಯರ ಕುರಿತು ವಿಷಾದಪಟ್ಟು ಹಿಂದೂ ಮುಖಂಡರ ಆಚಾರವನ್ನು ಮೃಗೀಯ ಪದ್ಧತಿಎಂದು ಪ್ರತಿಪಾದಿಸಿರುವಿರಿ. ಹಾಗಾದರೆ ನಿಮ್ಮ "ಈ" ಆಚಾರಕ್ಕೆ ಯಾವ ಹೆಸರಿಡಬಹುದು. ನೀವು ಹೇಳಬಲ್ಲಿರಾ? "ಸಂದರ್ಭಕ್ಕೆ ತಕ್ಕ ಕೋಲ" ಎಂಬ ಹಿರಿಯರ ಮಾತಿಗೂ-ನಿಮ್ಮ ವಿಚಿತ್ರ ವ್ಯಾಪಾರಗಳಿಗೂ ತಾಳೆ ಬೀಳುತ್ತವಾದ ಕಾರಣ ಇವರ ಒಳಗುಟ್ಟನ್ನು ಪ್ರತಿಪಡಿಸಿದರೆ ನಿಮ್ಮನ್ನು ಸರಿಯಾಗಿ ತಿಳಕೊಳ್ಳಬಹುದಿತ್ತು.

ಇತಿ "ತಿಳಕೊಳ್ಳಲು ಆಶಿಸುವವ"

ಅಂಕೋಲೆಯ ಪತ್ರ

ಅಂಕೋಲಾ ತೆಂಗಿನಕೇರಿ ದೇವಸ್ಥಾನದಲ್ಲಿ ಬಡಿದಾಟವೆ?

ಅಹಿಂಸಾತತ್ವ ಪ್ರಚಾರದ ಉದ್ದಿಶ್ಯ ಕುರಿಕೋಳಿಗಳನ್ನು ದೇವರಿಗೆ ಕೊಡಬಾರದಾಗಿ ಎರಡು ಪಕ್ಷಗಳುಂಟಾಗಿ ಈಗ ಸದ್ಯದಲ್ಲಿ ಪಕ್ಷದ ಪುಢಾರಿಗಳು ಆಜೆತ್ತಿದ್ದರಿಂದ ಬಡಿದಾಟವಾಯಿತಾಗಿಯೂ ಒಂದು ಪಕ್ಷದ ಪುಢಾರಿಗೆ ಬಹಳೇ ಹೊಡೆತ ಬಿದ್ದು ಜನವಾರ ಹರಿದುಹೋಗಿರುವದಾಗಿಯೂ ಸುದ್ದಿ

ಅಂಕೋಲಾ ತಾಲೂಕಿನ ಸುತ್ತಮುತ್ತಲೂ ಜನರು ಜನಗಳ ಬೇನೆಯಿಂದ ಗೋಳಾಡುತ್ತಿರುವರು ಇಲ್ಲಿಯ ಮಾಮ್ಲೇದಾರ ಸಾಹೇಬರಾದ ಶ್ರೀ. ನಾಡಕರ್ಣಿಯವರಂತೂ ತೀವ್ರ ರಿಪೋರ್ಟಿನಿಂದ ಸನಿಟರಿ ಡಾಕ್ಟರರನ್ನು ತರಿಸಿರುವರು. ಡಾಕ್ಟರರ ಕೆಲಸ ನಡೆದು, ಪರಿಣಾಮ ಅಷ್ಟೇನು ಸಮಾಧಾನಕರವಲ್ಲ ಡಾಕ್ಟರರಂತೂ ತಿರುಗಾಟದಲ್ಲೇ ತಮ್ಮ ಪ್ರಯತ್ನ ತಾವು ಮಾಡುವುದರಲ್ಲಂತೂ ತೊಡಗಿ ಇದ್ದಾರೆ

ಅಂಕೋಲಾ ಎಡ್ವರ್ಡ ಇಂಗ್ಲೀಷ್ ಹ್ಯಾಸ್ಕೂಲಿನ ಫಂಡಿನ ಸ್ಥಿತಿ ನೆಟ್ಟಗಿಲ್ಲ. ಪರಿಸ್ಥಿತಿಗೆ ಈಡುಕೊಟ್ಟು ಮಾಸ್ತರ ಜನರು ಪಗಾರ ಕಡಿತದಿಂದಲೂ ಸಮಾಧಾನದಿಂದಲೇ ಕೆಲಸಮಾಡುತ್ತಿರುವರಾಗಿ ಕಂಡುಬರುತ್ತದೆ. ಬಡಹುಡುಗರಿಗಂತೂ ಫೀ ಮಾಫಿ ಏನೂ ಸಿಗುವುದಿಲ್ಲವೆಂದರೂ ಅಡ್ಡಿ ಇಲ್ಲ. ಸದ್ಯದಲ್ಲಿ ಕಟ್ಟಿಸಬೇಕೆಂತ ಮಾಡಿದ ಇಮಾರತು ಸಹ ಅಷ್ಟರಲ್ಲೇ ನಿಲ್ಲುವದೋ ಏನೋ ಎಂಬದೇ ಸಂಶಯ. ಇಲ್ಲಿಯ ವ್ಯವಸ್ಥಾಪಕ ಕಮಿಟಿಯವರಿಗೆ ಊರ ಜನರ ಯೋಗ್ಯ ಬೆಂಬಲವಿಲ್ಲವೆಂದರಾಗುವದೆ! ಇಡೀ ತಾಲೂಕಿಗಿರುವದೊಂದೇ ಹ್ಯಾಸ್ಕೂಲು. ಮುಂದೇನು ಗತಿಯೆಂಬುದೇ ಪ್ರಶ್ನೆ!

ಇದೇ ಕಳೆದ ಸೋಮವಾರ ತಾ. ೧೨.೧೦.೩೬ ನೇ ದಿವಸ ಸ್ಕೂಲ್ ಬೋರ್ಡ್ ಚೆಯರಮನ್ ಆಗುವ ಕುರಿತು ಕಮಿಟಿ ಕಾರವಾರದಲ್ಲಿ ಬೆಳಗ್ಗೆ ೮|| ಘಂಟೆಗೆ ಕೂಡಿ ೧೧ವರೆಗೆ ಸುಮಾರು ಮುಗಿಯಿತು. ಶ್ರೀಯುತ ಮೋಟನ್ನರ ಹಗಡೆ ಮತ್ತು ಶ್ರೀಯುತ ಆರ್ ಬಿ. ನಾಯ್ಕ ಬಿ ಎ., ಎಲ್ಎಲ್ ಬಿ. ವಕೀಲ ಇವರು ಉಮೇದ್ವಾರರಾಗಿ ನಿಂತಿದ್ದರು. ಇಬ್ಬರಿಗೂ ಸರಿ ಸರಿ ಎಂಟೆಂಟರಂತೆ ವೋಟುಗಳು ಬಿದ್ದು ಚೀಟಿ ಹಾಕಿದ ಕೂಡ್ಲೆ ಆರ್. ಬಿ. ನಾಯಕರೇ ಆರಿಸಿ ಬಂದರು. ಶ್ರೀಯುತ ನಾಯಕರು ಜಿಲ್ಲಾ ಬೋರ್ಡನಲ್ಲಿಗೂ ಮೆಂಬರರಿರುವರು. ಈ ಜಿಲ್ಲೆಯಲ್ಲಿ ನಾಡವರ ಸಮಾಜದಲ್ಲಿ ಜಿಲ್ಲಾ ಬೋರ್ಡಿಗೆ ಆರಿಸಿಬಂದದ್ದು ಇದೇ ಮೊದಲಿನ ಸಾರೆ. ಸ್ಕೂಲ್ ಬೋರ್ಡ ಚೆರ್‌ಮನ್ನರಾದದ್ದು ಇದೇಮೊದಲು.

ಅಂಕೋಲಾದಲ್ಲಿ ಕಳ್ಳತನವು ಜೋರಿನಿಂದ ನಡೆದದೆ ಕೆಲವು ಸಣ್ಣ ಹುಡುಗರ ಸಂಗಡವೂ ಆ ಬಗ್ಗೆ ತಯಾರಾಗಿದೆ. ಸದ್ಯದಲ್ಲಿ ಒಂದು ಚಹಾ ದುಕಾನದಲ್ಲೂ ಕಳವು ಆಗಿರುವದು

ಇಲ್ಲಿಯ ಗ್ರಾಮ ಸುಧಾರಣೆ ಕಮಿಟಿಗೆ ಬಹಳೇ ಪ್ರಯತ್ನದಿಂದಲೇ ಗಂಗಾನಾಥ ಮುಕುಂದ ಪೈಗಳು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು, ಯಾವಾಗಲೂ ತಾಲೂಕು ಬೋರ್ಡಿನಲ್ಲಿ ಒಂದು ಜಾಗೆ ಅವರಿಗೆ ಇದ್ದೇ ಇತ್ತು. ಅವರಿಗೆ ಇಲ್ಲಿಯ ಕೊಂಗ್ರೆಸ್ ಕಮಿಟಿಯವರು ಶಿಫಾರಸು ಮಾಡದೇ ತಾಲೂಕ್ಕ ಬೋರ್ಡಿಗೆ ನಿಂತದ್ದಿಲ್ಲ. ಯಾವಾಗಲೂ ಕೊಂಗ್ರೆಸ್ ಭಕ್ತರು ಈಗ ಗ್ರಾಮಸುಧಾರಣಾ ಕಮಿಟಿಗಾದರೂ ಆರಿಸಲಾದರೆಂಬುದು ಕೇಳಿ ಬಹು ಜನರಿಗೆ ಆನಂದ

ವರ್ತಕರ ಧುರೀಣದ ಧ್ಯೇಯ ವಿಚಕ್ಷಣತೆ

"ವರ್ತಕ ಧುರೀಣದ ಧ್ಯೇಯವು, ಸಂಪಾದಕರ ಮನೋಸ್ಥಿತಿಗನುಗುಣವಾಗಿ ಕ್ರಾಂತಿಯುಕ್ತವೆಂದು ತೋರುವ ಲೇಖನಗಳನ್ನು ಪ್ರಕಟಿಸಿ ಆ ಮೂಲಕ ಚಂದಾದಾರರನ್ನು ಹೆಚ್ಚಿಸಿ ಸಾಕಷ್ಟು ಧನಲಾಭ ಪಡೆಯಬೇಕೆಂಬುದೆ. ಅದರ ಸಂಪಾದಕ ಶ್ರೀ. ಆರ್. ಎಸ್. ಶೆಣೈಯವರು ನನ್ನೊಡನೆ ಸಂಭಾಷಿಸಿದಾಗ ಗೊತ್ತಾದ ವಿಷಯವಿದು. ಕೊಂಗ್ರೆಸಿನ ವಿಷಯವಾಗಿ ಇಂಥವರಿಂದ ತಿಳಿಯುವ ಅಂಶವು ಏನೂ ಇಲ್ಲ. ಅದು ಹಿಂದೀ ಸ್ವಾತಂತ್ರ್ಯಕ್ಕಾಗಿ ಅರ್ಧಶತಮಾನದಿಂದ ದುಡಿಯುತ್ತಿರುವದನ್ನು ಸಕಲರೂ ಬಲ್ಲರು. ನಮ್ಮ ಮುಖಂಡರು ಇಂದಿನ ಪರಿಸ್ಥಿತಿಯು ಇಷ್ಟು ನಿರಾಶಾಜನಕವಿದ್ದರೂ ಇಡೀ ಪ್ರಪಂಚದ ರಾಜಕಾರಣ ಪುರುಷರು ತಲೆದೂಗುವಷ್ಟು ಶಕ್ತಿಯನ್ನು ತೋರಿಸಿದ್ದಾರೆ. ಮಹಾತ್ಮಾಗಾಂಧಿಯವರು ದೇಶದ ಅದೃಷ್ಟ ಪುರುಷರು, ಮಿ. ಜವ ದಗ್ನಿಯವರೇ! ದುಸ್ವಾರ್ಥಕ್ಕೆ ಬಲಿದುರಹಂಕಾರಿಗಳಿಗೆ ನಾಗರೀಕರು ಎಂದೂ ಸ್ವಾತಂತ್ರ್ಯವನ್ನೀಯಲಾರರು ನಿಸ್ವಾರ್ಥ ದೇಶಪ್ರೇಮದಿಂದ ವಾತಾವರಣವು ಪ್ರಕಾಶಗೊಂಡಿರುವಾಗ, ಕ್ಷುಲ್ಲಕ ಸ್ವಾರ್ಥವನ್ನು ಕಟ್ಟಿಕೊಂಡ ಹಂಕಾರಿ ಪ್ರಾಣಿಯು ಸೃಷ್ಟಿಸಲು ಕೂಡ ಅಯೋಗ್ಯನು." ಎಂಬ ಸಾರಾಂಶವುಳ್ಳ ದೀರ್ಘಬಾತ್ಮಿಯೊಂದು ಶ್ರೀ. ಎನ್ ಆರ್. ನಾಯತೊಂಡೆಯವರಿಂದ ಬಂದಿರುವದು. ಸಂ. ನ.

ನೋಟೀಸು

ಕುಂದಾಪುರ ಡಿ| ಮುನ್ಸಿಫ್ ಕೋರ್ಟಿನಲ್ಲಿ

O. S. 238/36

ವಿಶ್ವೇಶ್ವರ ಐತಾಳ ಕೂಡಾ .... **ವಾದಿರು**

1	ರಾಮಚಂದ್ರಯ್ಯ	ಸುಬ್ರಾಯರ ಮಕ್ಕಳು	... **ಪ್ರತಿವಾದಿರು**
2	ಶ್ರೀನಿವಾಸರಾಯ		
3	ನಾರಾಯಣ		
4	ಅಣ್ಣಾಜಿರಾವ್		
5	ಬಾಬುರಾಯ		ಬೀಜಾಡಿ
6	ಮುದ್ದುರಾಯ, ವೆಂಕಟಾಚಲಯ್ಯನ ಮಗ		ಗ್ರಾಮದಲ್ಲಿರುವವರು

ಸದ್ರಿ 1, 2, 3, 4, 5, 6ನೇ ಪ್ರತಿವಾದೀರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ —

ಸದ್ರಿ ವಾದೀರು ನಿಮ್ಮಮೇಲೆ ಕೂಡಾ ಗೇಣಿಬಾಕಿ ಬಗ್ಗೆ ಮಾಡಿದ ಮೇಲಿನ ದಾವೆಯು ತನ್ಕಿಗೆ ತಾರೀಕು 2-11-1936ಕ್ಕೆ ಇಟ್ಟಿರುವುದರಿಂದ, ಆ ಬಾಬಿನಲ್ಲಿ ನಿಮ್ಮದೇನಾದರೂ ಉದಾಹರಣೆಗಳು ಇರುವ ಪಕ್ಷಕ್ಕೆ ಸದ್ರಿ ತನ್ಕಿ ತಾರೀಕಿನ ದಿವಸ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟು ಮುಂದೆ ಖಾವರಾಗಿ ಜ್ಯಾಹೀರುಮಾಡಿ ಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ನಿಮ್ಮ ಗೈರಹಾಜರಿಯಿಂದ ಸದ್ರಿ ದಾವೆಯಲ್ಲಿ ಡಿಕ್ರಿ ಕೊಡೋಣಾಗುವುದು.

ಕುಂದಾಪುರ,
ತಾ. 11-10-'36

G. A. UDPA,
Advocate for Plaintiffs.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು - -

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ಗುಣದಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಶ್ರೀ ರಾಮಾರೆಸ್ಟೋರೆಂಟ್

ಉಡುಪಿ

ಊಟ ಉಪಹಾರಗಳ ರುಚಿ! ಸ್ಥಳ ಆಸನಗಳ ಶುಚಿ !!

ಶಾಲಾ ವಿದ್ಯಾರ್ಥಿಗಳ ಅನುಕೂಲತೆ, ಪ್ರವಾಸಿಕರಿಗೆ ಅತ್ಯುತ್ತಮ ಸೌಕರ್ಯ ಇವೆಲ್ಲಾ ಇರುವ ಒಂದೇ ಒಂದು ವಿಶ್ರಾಂತಿಗೃಹವೆಂದರೆ ಶ್ರೀ ರಾಮಾರೆಸ್ಟೋರೆಂಟ್! ಸುಲಭ ದರದಲ್ಲಿ ಅತ್ಯುತ್ತಮ ತಿಂಡಿ ಪಾನೀಯಗಳ ; ಅತ್ಯಾರೋಗ್ಯಕರ ಊಟ ಇವುಗಳಿಗೆ ನಮ್ಮ ಅನುಭವಪೂರ್ಣ ನೈಪುಣ್ಯತೆಯೇ ಸಾಕ್ಷಿ. ಹೀಗಾಗಿ ನಿಮಗೆಲ್ಲಾ ಸುಖವೇ ಸುಖ! ಸಂತೋಷಪಟ್ಟೆ ಬಂದ ತೀರ. ಕಾರ್ಪೊರೇಷನ್ ಮತ್ತು ಕೋರ್ಟ ಸಮೀಪ ರೋಡಿನ ಮುಖಸವದಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಿಸಿರುವ ದಿವ್ಯವಾದ ಮಂದಿರದಲ್ಲಿರುವ ಶ್ರೀರಾಮಾರೆಸ್ಟೋರೆಂಟನ್ನು ಸಂದರ್ಶಿಸಿ ನೋಡಿರಿ.

ಎಚ್. ಗೋಪಾಲ ನಾಯಕ್,
ಪ್ರೊಪ್ರೈಟರ್.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತವ್ಯಾದೆಗೆ ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರಾಯ್‌ಕ್ಲೀನಿಂಗ್ ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: ಯೆಮ್. ಯೆಸ್. ಭಟ್ಕಳ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನಾಯಿತ (first quality selected) ಎಮರ್ಸ್ಟ್ರ ಕಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ವಿದ್ಯಾ ಸಂಸ್ಥೆಗೆ ಸಹಾಯಮಾಡಿರಿ! ಸತ್ಕಾರ್ಯಕ್ಕೆ ಪ್ರೋತ್ಸಾಹ ಕೊಡಿಸಿರಿ!

ದಿ ಮೂಲ್ಕಿ ಗ್ರೇಂಡ್ ರೇಫ್ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಯೋಗ್ಯ ಕಮ್ಮಿಟಿಯವರಿಂದ ನಡಿಸಲ್ಪಡುವುದು.

ಎ. ಬಿ. ಶೆಟ್ಟಿ, ಎಸ್ಕ್ವಾಯರ್, M.L.C. ಪ್ರೆಸಿಡೆಂಟ್.
ಡಾ। ಎಂ. ಆರ್. ಕಾಮತ್, L.M.P. ವೈಸ್ ಪ್ರೆಸಿಡೆಂಟ್.

ರೂ. 20,000/-ವು 1,789 ಇನಾಮುಗಳಾಗಿ ಹಂಚಲ್ಪಡುವುದು.
ಪ್ರಥಮ ಬಹುಮಾನ ರೂ. 5,000/- ದ್ವಿತೀಯ ಬಹುಮಾನ ರೂ. 2,000/-
ತೃತೀಯ ಬಹುಮಾನ ರೂ. 1,000/-

ಟಿಕ್ಕೆಟು ಅಚ್ಚೆರು ತಾರೀಕು 25—1—'37] [ಸೋಡ್ತಿ ತೆಗೆಯುವ ತಾರೀಕು 31—1—'37

ಟಿಕೇಟು ಒಂದರ ಕ್ರಯ ಆಣೆ ನಾಲ್ಕು ಮಾತ್ರ.

30 ಟಿಕೇಟುಗಳಿರುವ ಪುಸ್ತಕಕ್ಕೆ ರೂ. 6 ಮಾತ್ರ. ಟಿಕೇಟು ಪುಸ್ತಕಗಳು ನಗದಿಯಾಗಿ ವಿಕ್ರಯಿಸಲ್ಪಡುವವು. ಟಿಕೇಟು ಮಾರಿ ರೂ. 250/-ಕ್ಕೂ ಹೆಚ್ಚು ಸಂಗ್ರಹಿಸಿಕೊಟ್ಟವರೊಳಗೆ ರೂ. 200/-ರ ಒಂದು, ರೂ. 100/-ರ ಎರಡು ಮತ್ತು ರೂ. 50/-ರ 84 ಇನಾಮುಗಳು ಹಂಚಲ್ಪಡುವವು.

ಟಿಕೇಟು ಮಾರಿ ರೂ. 5000 ಒದಗಿಸಿಕೊಟ್ಟವರು ಹೈಸ್ಕೂಲಿನ ಪೋಷಕರೆಂದು ಪರಿಗಣಿಸಲ್ಪಟ್ಟು ಅವರ ತೈಲಚಿತ್ರವು ಇಡೋಣಾಗುವುದು. ಅಂತೆಯೇ ರೂ. 2000 ಮಾಡಿಕೊಟ್ಟವರು ಆಶ್ರಯದಾತರಾಗಿ ಸದ್ರಿಯವರ ಭಾವಚಿತ್ರವು ಇಡಲ್ಪಡುವುದು. ಮತ್ತು ರೂ. 1000 ಮಾಡಿಕೊಟ್ಟವರ ಹೆಸರು ಚಂದ್ರಕಾಂತ ಶಿಲೆಯಲ್ಲಿ ಕೆತ್ತಲ್ಪಟ್ಟು ಗೋಡೆಯಲ್ಲಿ ಇಡಲ್ಪಡುವುದು.

ಟಿಕೇಟು ವಿಕ್ರಯದಿಂದ ರೂ. 25/. ಮತ್ತು ಹೆಚ್ಚು ಮಾಡಿಕೊಟ್ಟವರಿಗೆ ಶೇಕಡಾ 6¼ರಂತೆ ಕಮಿಶನ್ ಕೊಡಲಾಗುವುದು.

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ—

ಮೂಲ್ಕಿ, ದ. ಕನ್ನಡ | ಸೆಕ್ರೆಟರಿ, ದಿ ಮೂಲ್ಕಿ ಗ್ರೇಂಡ್ ರೇಫ್ಲ್
3—9—1936 | (ಹೈಸ್ಕೂಲ್ ಸಹಾಯಾರ್ಥ)

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇದು ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚಾರವಾಗುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯು ಹದಿನೈದನೆಯ ಸಂಪುಟದ ೧೯೩೬ನೆಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರಿಗೆ ಅವಶ್ಯಕವಾದ ಶಿಕ್ಷಣ-ಗೃಹ ಕಲೆ-ಆರೋಗ್ಯ-ಶಾಸ್ತ್ರ ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಕೃತಿಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಸ್ತ್ರೀಯರಿಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

The Commonwealth Assurance Co., Ltd.

(ESTD 1920)

Chairman, Mr. N. C. Kelkar Ex-M. L. A.

HEAD OFFICE
POONA CITY.

CHIEF AGENCY OFFICE
HAMPANKATTA,
MANGALORE.

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟು ಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೋಲಿಸಿದಾರರಿಗೆ ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಕೊಳ್ಳಿರಿ—
ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ತರುಣ ತರುಣಿಯರಿಗೆ
ಅತ್ಯಂತ ಬೋಧಪ್ರದವಾದ
ಅತ್ಯಾಧುನಿಕ ನಾಟಕ

ವ್ಯಭಿಚಾರಿಣಿ ಯಾರು ?

LAXMI BRAND COFFEE POWDER.

Pure & Superior quality, will last long without loosing its flavour and colour.

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Fire Resistance Steel Iron Safes.
latest pattern.



ನಮ್ಮಲ್ಲಿ ಕಬ್ಬಿಣದ ಪೆಟ್ಟಿಗೆಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಟಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons
Court Road, UDIPI, S. K.

Sold also by Instalments

106 ವಾಚಕರ ಅಪೇಕ್ಷೆಯಂತೆ ಪ್ರಕಟಿಸಿದ
ಈ ನಾಟಕ ಪುಸ್ತಕದಲ್ಲಿ
ಅಂಧ ಸಮಾಜದ ನಿಜರೂಪವನ್ನು
ನ್ಯಾಯವು ಅನ್ಯಾಯವನ್ನು ಗೆದ್ದು ಬರುವುದನ್ನು
ಅಧಿಕಾರ, ಧನಲಾಲಸೆಯಲ್ಲ —
ಪವಿತ್ರ ಪ್ರೇಮವೊಂದೇ ಶಾಂತಿಯಿಯಾಯುವುದೆಂಬುದನ್ನು
ಕಾಣಬಹುದು.

ವ್ಯಭಿಚಾರಿಣಿ ಯಾರು

ಸಾಮಾಜಿಕ ಕ್ರಾಂತಿಕಾರಕ ನಾಟಕಗಳನ್ನು ಬರೆಯುವುದರಲ್ಲಿ ಹೆಸರುಗೊಂಡ
ಶ್ರೀ. ಕೆ. ಕಾಂತಪ್ಪ ಶೆಟ್ಟರೇ
ಈ ಗ್ರಂಥದ ಕರ್ತರು.

ಪುಸ್ತಕವು 100 ಪುಟಗಳಿಗೂ ಮಿಕ್ಕಿದೆ. ಹಲವು ಚಿತ್ರಗಳಿಂದ ನಯನಮನೋಹರವಾಗಿದೆ. ಇಷ್ಟಿದ್ದರೂ ಬೆಲೆ ಕೇವಲ ೦—೮—೦
ಟಪ್ಪಾಲು ದ್ವಾರ ೦—೧೦—೦
ಪ್ರತಿಗಳಿಗೂ ಹೆಚ್ಚಿನ ವಿವರಗಳಿಗೂ ಬರೆಯಿರಿ.

ಕಿರಿಯರ ಪ್ರಪಂಚ, ಉಡುಪಿ.

Sole Agents—Supply gency Ltd., UDIPI.

WANTED
PRINTERS=ಪ್ರಿಂಟರರು ಬೇಕಾಗಿದ್ದಾರೆ
THULUNAD PRESS, UDIPI



HEAD OFFICE VIEW

ಅಕ್ಟೋಬರ ತಾ. 2
ಮಹಾತ್ಮಜಿಯವರ ಪಾವನ ಜನ್ಮದಿನ.
2-10-1869

ನವಂಬರ ತಾ. 2
ಶ್ರೀ ಭಾರತ ವಸ್ತ್ರಮಂದಿರದ ಸ್ಥಾಪನಾದಿನ.
2-11-1921

ಅಕ್ಟೋಬರ ತಾ. 2
ಸಪ್ಲೈ ಏಜನ್ಸಿ ಲಿಮಿಟೆಡ್, ಇದರ ಸ್ಥಾಪನಾದಿನ
2-10-1933

ಇದೇ **2-10-'36**——ರಿಂದ——**2-11-'36**ರ ವರೆಗೆ
ಮುವ್ವತ್ತೆರಡು ದಿನಗಳ ಸದವಸರದಲ್ಲಿ ≡ **ತಿರುಪೂರು ಖಾದಿಯು** ≡ ತಿರುಪೂರ ದರದಲ್ಲಿ ಮಾರಲ್ಪಡುವುದು!
5 ರೂಪಾಯಿಗಳಿಗಿಂತ ಹೆಚ್ಚಿನ ಇತರ ಸಾಮಾನುಗಳನ್ನು ಕೊಳ್ಳುವವರಿಗೆ ಸೇಕಡಾ 6¼ ರಂತೆ ಕಮಿಶನ್.

Grand Jayanthi Sales for 32 days.

ಶ್ರೀ ಭಾರತ ವಸ್ತ್ರ ಮಂದಿರ, ಉಡುಪಿ.

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS UDIPI and Published by K. H. SHETTY

Registered No. M. 3618

೨೦ ಪುಟಗಳು—ಒಂದಾಣೆ.

NAVAYUGA A Nationlist Kanarese Weekly.

'ನವಯುಗ'
ದಲ್ಲಿ
ಪ್ರಕಟಣೆಯ
ದರಗಳು
ಒಂದು ಬಾರಿಗೆ
ಒಂದು ಚಚ್ಚೌಕ ಇಂಚಿಗೆ
0-4-0
ಕಂಟ್ರಾಕ್ಟ್ ದರಗಳಿಗೆ
ಬರೆಯಿರಿ.

ವ್ಯಭಿಚಾರಿಣಿ
ಯಾರು?
ಸಚಿತ್ರವಾಗಿ
ಪ್ರಕಟವಾಗಿದೆ.
ಬೆಲೆ ೦—೪—೦.
ಬರಿಯರ ಪ್ರಪಂಚ,
ಉಡುಪಿ

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ,

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ, ಅಕ್ಟೋಬರ ೨೯, ೧೯೩೬ [ಸಂಚಿಕೆ ೯

The Canara Industrial and Banking Syndicate, Limited.

(INCORPORATED IN BRITISH INDIA)

ESTD.] Head Office: "MUKUNDANIVAS", UDIPI. [1925

BRANCHES:

1	Mangalore	8	Gadag	15	Hungarcutta
2	Hubli	9	Cannanore	16	Honavar
3	Belgaum	10	Udipi	17	Kumta
4	Bellary	11	Kanhangad	18	Karwar
5	Adoni	12	Payyanur	19	Ankola
6	Hospet	13	Coondapoor	20	Sirsi
7	Bangalore City	14	Brahmavar	21	Bhatkal

22 Karkala 23 Uppinangadi 24 Kasargode 25 Sagar.

ANNOUNCEMENT

WE HAVE GREAT PLEASURE IN ANNOUNCING THAT TWO BRANCHES OF THE SYNDICATE, ONE AT KASARGODE. (S. KANARA DT.) and the other at **Sagar** (Shimoga Dt.) have been opened in October '36 on the 24th and the 29th respectively, where all kinds of banking business are transacted. The public are requested to take adavantage of the numerous facilities offered by us.

Paid up Capital: above Rs. 2 lakhs, Deposits: above Rs. 19 lakhs,
Total resources: above Rs. 29 lakhs.

"MUKUNDANIVAS," UDIPI
30-9-1936.

P. A. PAI Brothers,
Managing Agents

ಬರುವ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿಗೆ
ಸ್ವತಂತ್ರ ಉಮೇದ್ವಾರರಾದ
ಶ್ರೀ. ಬೈಲೂರು ವಾಸುದೇವ ರಾವ್
ಅಡ್ವೊಕೇಟ್, ಇವರು ನಿಮ್ಮ ಪ್ರೋತ್ಸಾಹವನ್ನು ಬಯಸುತ್ತಾರೆ.

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖ ರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿ 'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ. ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರದ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, — ಯಂ. ಆರ್. ಪೂಂಜ,

President & Manager, — ಪ್ರಸಿಡೆಂಟು ಮತ್ತು ಮೆನೇಜರ್.

ಜಯಕರ್ನಾಟಕದ ಚಂದಾದಾರರಿಗೆ

ಈ ವರ್ಷವು ಅತ್ಯಂತ ಲಾಭಕರ!

ಎರಡು ತಿಂಗಳಿಗೊಮ್ಮೆ ತ್ರಿವರ್ಣ ಚಿತ್ರವನ್ನು ಕೊಡಲಾಗುವುದು.

ಪ್ರತಿ ಸಂಚಿಕೆಯೂ ನಯನಮನೋಹರ ಚಿತ್ರಗಳಿಂದ ತುಂಬಿರುವುದು

ಹೊಸದಾಗಿ ಚಂದಾದಾರರಾಗುವವರು — ಯಾವ ತಿಂಗಳಲ್ಲಿಯೆ ಆಗಲಿ ಹಿಂದಿನ ಸಂಚಿಕೆಗಳನ್ನೆಲ್ಲ ತರಿಸಿಕೊಂಡು—ವರ್ಷಾರಂಭದಿಂದಲೇ ಆಗಬೇಕು. ಹಾಗು ಈಗಿದ್ದ ಚಂದಾದಾರರಲ್ಲಿ ವರ್ಷ ಮಧ್ಯದಲಿ ಅವಧಿ ಮುಗಿಯುವವರು ಮುಂದೆಯೂ ಚಂದಾದಾರರಾಗಿ ಉಳಿಯಬೇಕು. ಇಲ್ಲದಿದ್ದರೆ ಅಪೂರ್ವವಾದ 'ರಾಜರಹಸ್ಯ' ಕಾದಂಬರಿಯು ಅಪೂರ್ಣವಾಗಿ ಅವರಿಗೆ ಅಸಮಾಧಾನವನ್ನುಂಟುಮಾಡೀತು.

ವಾರ್ಷಿಕ ಚಂದಾ ರೂ. ೫—೮—೦

ಜಾಹೀರಾತಿನ ದರಗಳಿಗೂ ಇತರ ಮಾಹಿತಿಗಳಿಗೂ ಬರೆಯಿರಿ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು ಇನಾಮುಗಳು.



ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಾಗು 1, ಕಾಶೀಲಕ್ಷ್ಮಿ 1, ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆ ಸ್ಟೇಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕೆದಪಾಮ್ಸ್, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಳ, ಧೋತ್ರ, ನಾಮರ್‍ದ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ಅಗಲ ಬುಟ್ಟಿ ಹಾಕಿದ ಜರೀ ಶೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55. ಅಗಲ ಸಾದಾ 16 ಮೊಳದ ಶೀರೆ 1 ಕ್ಕೆ ರೂ. 16 ರಿಂದ ರೂ. 35 ರ ವರೆಗೆ. ಜರಿ ಕಡಮೆ 16 ಮೊಳ ಕ್ಲಾವರ್ ಅಂಚು ರೂ. 10½ ಯಿಂದ ರೂ 18. ಖಣ 1 ಕ್ಕೆ ರೂ. 1¼ ರಿಂದ ರೂ 10 ರ ವರೆಗೆ. ಪೋಸ್ಟು ಖರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ಶಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬನಾರಸ್, ಕಾಶೀ

THE

PANGAL NAYAK BANK

LIMITED.

ESTABLISHED 1920.

Head Office: UDIPI] [**Branch: MANGALORE.**

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4½% on 1 or 2 years and at 5% on 3 or 4 years deposits.

Every other description of up-to-date Banking business is also undertaken.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ | **ಸ್ತ್ರೀಧರ್ಮ ಸಂಜೀವಿನೀ ಚೂರ್ಣ** (ರಿಜಿಸ್ಟರ್ಡ) | **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಪ್ಯೆಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಫಿಕೇಟ ಮ. ರಾ. ಎ. ಎಮ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩. ಟ. ಖ. ಆಣೆ ೮. ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ಎ ಸಿ. ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು, ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮು। ಕೇಳಬಾ ಮಾಹಿಮಾ ಜಿ. ಠಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಸಮಾಚಾರ ಸಂಗ್ರಹ = ಚುನಾವಣೆಗಾಗಿ ೫ ಮಿಲ್ಯ ಪವನು ವೆಚ್ಚ! ಕುಹಕತನದಿಂದ ಅಬಿಸೀನಿಯವನ್ನು ಗೆದ್ದುದು.

ಅಮೇರಿಕದ ಈ ಸಲದ ಪ್ರೆಸಿಡೆಂಟತನದ ಚುನಾವಣೆಯು ಅತ್ಯಧಿಕ ವೆಚ್ಚದ್ದಾಗಿದೆ. ಈಗಣ ಪ್ರೆಸಿಡೆಂಟರಾದ ಮಿ. ರುಸವೆಲ್ಟರು ಡೆಮೊಕ್ರೆಟಿಕ್ ಪಕ್ಷೀಯರು. ಇವರ ಪ್ರತಿಸ್ಪರ್ಧಿಯಾಗಿ ನಿಂತಿರುವ ಗವರ್ನರ್ ಲೇಂಡನರು ರಿಪಬ್ಲಿಕನ್ ಪಕ್ಷೀಯರು. ಇಕ್ಕಡೆಯವರ ಚುನಾವಣೆಯ ವೆಚ್ಚವು 4ರಿಂದ 5 ಮಿಲ್ಯ ಪವನುಗಳವರೆಗಾಗಬಹುದೆಂದು ಅಂದಾಜುಮಾಡಲಾಗಿದೆ ಇಕ್ಕಡೆಯ ಉಮೇದ್ವಾರಿಗಳಿಗೂ ಸರಿ ಸರಿ ಓಟು ದೊರೆಯಬಹುದೆಂದೂ, ಸ್ವಲ್ಪ ಮಾತ್ರ ಹೆಚ್ಚು ಓಟು ದೊರೆತು ಪ್ರೆಸಿಡೆಂಟ್ ರುಸವೆಲ್ಟರೇ ಪುನಃ ಆರಿಸಲ್ಪಡಬಹುದೆಂದೂ ನಂಬಲಾಗಿದೆ ಎರಡು ಕಡೆಯ ಉಮೇದ್ವಾರಿಗಳೂ ನೀಗ್ರೋ ಜನರ ಓಟು ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಪ್ರೆಸಿಡೆಂಟ್ ರುಸವೆಲ್ಟರೂ ಅವರ ಕುಟುಂಬದ ಹಲವು ಮಂದಿ ಮೆಂಬರರೂ ಎಡೆಬಿಡದೆ ಪ್ರಚಾರಕಾರ್ಯ ನಡೆಸುತ್ತಿದ್ದಾರೆ. ಅವರ ೮೦ ವರ್ಷದ ತಾಯಿಯೂ ಅವರೊಂದಿಗೆ ಕೆಲಸಮಾಡುತ್ತಿದ್ದಾರೆ. ಒಂದು ಲಕ್ಷದ ವರೆಗಣ ಜನ ನೆರೆವಿಯ ಪ್ರಚಂಡ ಸಭೆಗಳಲ್ಲಿ ಭಾಷಣಗಳು ನಡಯುತ್ತಿವೆ.

ಅಬಿಸೀನಿಯ ಯುದ್ಧ.

ಇದೇ ತಾ. 20ರಲ್ಲು ರೋಮಿನಿಂದ ಬಂದ ವಾರ್ತೆಯ ಪ್ರಕಾರ ಇಟೆಲಿಯವರು ಪಶ್ಚಿಮ ಅಬಿಸೀನಿಯದ ಅತಿ ಫಲವತ್ತಾದ ಸಿಡಾಮೋ ಪ್ರದೇಶಕ್ಕೆ ಪ್ರವೇಶಿಸಿರುವರೆಂದು ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ಇಟೆಲಿಯಾನರಿಗೂ ಅಬಿಸೀನಿಯನರಿಗೂ 6 ಘಂಟೆಗಳ ವರೆಗೆ ಯುದ್ಧ ನಡೆದು ನೂರಾರು ಮಂದಿ ಅಬಿಸೀನಿಯನರು ಕೊಲ್ಲಲ್ಪಟ್ಟಿರುವರೆಂದೂ, ಅವರ ನಾಯಕರಾದ ಡೆಡ್ಜಾಜ್ ಅಬ್ಬೆಯವರು ಕೊಲ್ಲಲ್ಪಟ್ಟಿರುವರೆಂದೂ ತಿಳಿದುಬರುತ್ತವೆ. ಇಟೆಲಿಯಾನರು ಅಬಿಸೀನಿಯನರ ಹಲವು ಮಿಶನ್ ತೋಪುಗಳನ್ನು ವಶಪಡಿಸಿಕೊಂಡಿರುವರಂತೆ. ಅಬಿಸೀನಿಯಾನರು ವೀರಾವೇಶದಿಂದ ಕಾದಾಡಿ ಹಲವು ವಿಮಾನಗಳ ಬೋಂಬುಗಳ ಧಾಳಿಯನ್ನು ತಡಕೊಳ್ಳಲಾರದೆ ಇಟೆಲಿಯಾನ ಅಶ್ವಾರೋಹಿಗಳಿಂದ ಪರಾಜಯಗೊಳಿಸಲ್ಪಟ್ಟರು. ಉಳಿದುದು ಳಿದವರು ಗವಿಗುಹೆಗಳಿಗೋಡಿ ಅಡಗಿಕೊಂಡರೆಂದು ವಾರ್ತೆ ಬಂದಿದೆ.

ಇಟೆಲಿ ಅಬಿಸೀನಿಯ ಯುದ್ಧದ ಆರಂಭದಲ್ಲಿ ಇಟೆಲಿಯ ಉತ್ತರದ ಸೇನೆಯ ಸೇನಾಧಿಪತಿಯಾದ ಮಾರ್ಶಲ್ ಡಿ. ಬೋನೋರವರು ತನ್ನ ಜೀವನಸ್ಮೃತಿಯ ಪುಸ್ತಕವೊಂದನ್ನು ಪ್ರಕಟಿಸಿರುವರು ಇದರಲ್ಲಿ ವಿವರಿಸಲ್ಪಟ್ಟಿರುವ ಸಂಗತಿಗಳಿಂದ 1933 ರಲ್ಲೇ ಮುಸಲೋನಿಯವರು ಅಬಿಸೀನಿಯವನ್ನು ಜೈಸುವ ಆಲೋಚನೆ ಮಾಡಿದ್ದಾರೆಂದೂ, ಹೇರಳ ಲಂಚಕೊಟ್ಟು ಅಬಿಸೀನಿಯದ ಪಂಗಡಿಗರ ಮುಖಂಡರನ್ನು ವಶಪಡಿಸಿಕೊಂಡರೆಂದೂ, ಅಬಿಸೀನಿಯವನ್ನು ನಾಗರಿಕಗೊಳಿಸುವ ಪರೋಪಕಾರ ಬುದ್ಧಿಯಿಂದ ತಾವು ಯುದ್ಧ ನಡೆಸಿದುದೆಂಬ ಮುಸಲೋನಿಯವರ ಮಾತು ಕೇವಲ ಕಣ್ಣುಕಟ್ಟೆಂದೂ ಸಿದ್ಧವಾಗುತ್ತದೆ. ಮುಸಲೋನಿಯವರು ಅತ್ಯಂತ ರಹಸ್ಯವಾಗಿ ಒಳಗಿಂದೊಳಗೆ ಯುದ್ಧ ಸಿದ್ಧತನಡಸುತ್ತಾ ಅಬಿಸೀನಿಯದ ಮೇಲೆ ದಂಡೆತ್ತಿಹೋಗಲು ನೆವನವೊಂದನ್ನು ಮಾತ್ರ ಹುಡುಕುತ್ತಿದ್ದರು. ಮುಖ್ಯ ಮುಖ್ಯ ಸ್ಥಳಗಳಿಗೆಲ್ಲಾ ಗುಪ್ತಚಾರರನ್ನು ಕಳುಹಿ ಒಳಸಂಚು ನಡೆಸುತ್ತಿದ್ದರು. ಇವಕ್ಕಾಗಿ ಬಹಳ ಹಣ ವ್ಯಯಿಸಲ್ಪಟ್ಟಿತ್ತು. ಬೇರನ್ ಫ್ರಾಂಚೆಟ್ಟಿ ಎಂಬವರು ಶಿಕಾರಿಯ ನೆವನದಿಂದ ಅಬಿಸೀನಿಯಕ್ಕೆ ಹೋಗಿ ಅಲ್ಲಿಯವರ ರಹಸ್ಯಗಳನ್ನೆಲ್ಲಾ ತಿಳಿದುಕೊಂಡು, ಬೇರೆ ಬೇರೆ ಕಡೆಯ ಪಂಗಡಿಗರ ನಾಯಕರು ದೇಶದ್ರೋಹಮಾಡುವಂತೆ ಲಂಚಕೊಟ್ಟು ಪ್ರೋತ್ಸಾಹಿಸುವ ಒಳಸಂಚು ನಡೆಸಿದ್ದರು. 1935ನೇ ಜುಲ್ಯ ತಿಂಗಳಲ್ಲೇ ಮುಸಲೋನಿಯವರು ಸಕಲ ಯುದ್ಧಸಿದ್ಧತೆ ನಡೆಸಿದ್ದರು. 1935ನೇ ಅಕ್ಟೋಬರ ಅಂತ್ಯದಲ್ಲಿ ಅಥವಾ ನವ್ಹಂಬರ ಅಂತ್ಯದಲ್ಲೇ ಅಬಿಸೀನಿಯದ ಮೇಲೆ ಧಾಳಿ ನಡಸಬೇಕಾಗುವುದೆಂದು ನನ್ನ ಮನೋನಿರ್ಧಾರ. ಅದಕ್ಕಾಗಿ ನಾವು 3ಲಕ್ಷ ಸೇನೆ, 300ರಿಂದ 500ರ ವರೆಗಣ ಯುದ್ಧವಿಮಾನ ಅತ್ಯಂತ ವೇಗದಿಂದ ಚಲಿಸುವ 300 ಮೋಟಾರು ಟ್ರೇಕ್ಟರುಗಳನ್ನು ಸಿದ್ಧಗೊಳಿಸಬೇಕು" ಎಂದು ಮುಸಲೋನಿಯವರೇ ಮಾರ್ಶಲ್ ಡಿ. ಬೋನೋರವರಿಗೆ ಬರೆದಿದ್ದ ಪತ್ರ ಕೂಡಾ ಮಾರ್ಶಲರ ಪುಸ್ತಕದಲ್ಲಿ ಪ್ರಕಟವಾಗಿದೆ.

ಮುಂದಿನ ಕಾಂಗ್ರೆಸ್ ಪ್ರೆಸಿಡೆಂಟರಾರು?

ಖಾನ್ ಅಬ್ದುಲ್ ಗಾಫರ್‌ಖಾನರು ಅಲಹಾಬಾದಿಗೆ ಬಂದು ಕೆಲದಿನವಿದ್ದು ಅಲ್ಲಿಯ ಮುನ್ಸಿಪಾಲ್ಟಿಯಿಂದ ಮಾನಪತ್ರ ಪಡೆದು ಸತ್ಕರಿಸಲ್ಪಟ್ಟರು. ಅವರು ಅಲಹಾಬಾದನ್ನು ಬಿಟ್ಟು ಹೋಗುವಾಗ, ಪಂಡಿತ ಜವ್ಹಾರಲಾಲನೆಹರುಗಳೇ ಪುನಃ ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಲ್ಪಡಬೇಕೆಂಬ ಸೂಚನೆಯನ್ನು ಸಂಪೂರ್ಣವಾಗಿ ಅನುಮೋದಿಸಿದರು. ಪಂಡಿತರು ಪೂರ್ಣ ಮಾಡದಿರುವ ಕೆಲಸವನ್ನು ಸಂಪೂರ್ಣಗೊಳಿಸುವಂತೆ ಮತ್ತು ವಿದೇಶಗಳಲ್ಲಿ ಕಾಂಗ್ರೆಸಿನ ಕುರಿತು ಅವರ ಸ್ಥಿತಿಯು ಮರಸ್ಥಿಯಾಗುವಂತೆ ಅವರು ಪುನಃ ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಲ್ಪಡುವುದೇ ನ್ಯಾಯವೆಂದು ಅಭಿಪ್ರಾಯಪಟ್ಟಿರುವರು. ಮಧ್ಯಪ್ರಾಂತದ ಕಾಂಗ್ರೆಸ್ ಮುಖಂಡರಾದ ಡಾಕ್ಟರ್ ಖರೆಯವರು, ಶ್ರೀ. ಸುಭಾಷಚಂದ್ರ ಭೋಸರು ಈ ಸಲದ ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಲ್ಪಡಬೇಕೆಂದೂ, ಅವರನ್ನು ಸರಕಾರವು ಬಿಡುಗಡೆ ಮಾಡದಿದ್ದರೆ ಪಂಡಿತ ಜವ್ಹಾರಲಾಲರೇ ಅವರ ಬದಲಿಗೆ ಪ್ರೆಸಿಡೆಂಟರಾಗಬೇಕೆಂದೂ ಸೂಚಿಸಿರುವರು.

ಸ್ಪೈನ್ ಸರಕಾರದ ಬಲ

ಆಲ ಇಂಡಿಯಾ ಕಾಂಗ್ರೆಸ್ ಕಮಿಟಿಯ ವಿದೇಶ ಖಾತೆಗೆ ಮೆಡ್ರಿಡಿನಿಂದ ಬಂದ ವಾರ್ತೆಯ ಮೇರೆಗೆ, ಸ್ಪೈನಿನ 18 ಪ್ರಾಂತಗಳು ಸ್ಪೈನ್ ಸರಕಾರದ ಅಧೀನವಿವೆಯೆಂದು ತಿಳಿದುಬರುತ್ತದೆ ಇವುಗಳಲ್ಲಿ 11½ ಮಿಲ್ಯ ಜನರಿದ್ದು ಒಟ್ಟು ಸುಮಾರು 2 ಲಕ್ಷ ಚದರಾಕ ಮೈಲು ವಿಸ್ತೀರ್ಣವಾಗಿವೆ. ಸುಮಾರು 7 ಮಿಲ್ಯ ಜನಸಂಖ್ಯೆಯಿರುವ 16 ಪ್ರಾಂತಗಳಲ್ಲೀಗ ಯುದ್ಧ ನಡೆಯುತ್ತಿವೆ. ಸ್ಪೈನ್ ದೇಶದ ನೇಕಡೆ 60ರಷ್ಟರ ಶಕ್ತಿಯು ಸರಕಾರದ ಅಧೀನವಿದೆ ಬಂಡಾಯಗಾರರಿಗೆ ಸ್ಪೈನ್ ಸರಕಾರವನ್ನು ಜೈಸಲಿಕ್ಕೆ ಸಾಧ್ಯವಾಗುವ ಹಾಗಿಲ್ಲ, ಯಾಕೆಂದರೆ ಅದಕ್ಕೆ ಜನಸಾಮಾನ್ಯರ ಸಂಪೂರ್ಣ ಬೆಂಬಲವಿದೆ. ಮತ್ತು ಬಂಡಾಯಗಾರರು ಸ್ಪೈನಿನ ಪ್ರಧಾನ ಪಟ್ಟಣವಾದ ಮೇಡ್ರಿಡಿಗೆ ಮುಂದುವರಿದಂತೆ ಹಿಂದಿನ ಪ್ರದೇಶಗಳನ್ನು ಅಂಕೆಯಲ್ಲಿರಿಸುವುದು ಕಷ್ಟಸಾಧ್ಯವಾಗುವುದು. ವಿದೇಶಿ ರಾಷ್ಟ್ರಗಳಿಂದ ನಡೆದ ಪ್ರಬಲ ಯುದ್ಧೋಪಕರಣಗಳ ಸಹಾಯವು ಬಂಡಾಯಗಾರರಿಗಿರುವುದು.

ಹಿಂದು ಮಹಾಸಭೆಯಲ್ಲಿ ಒಡಕು

ಇದೇ ತಾ. 21ರಲ್ಲು ಹಿಂದು ಮಹಾಸಭೆಯ ಅಧಿವೇಶನವು ಲಾಹೋರಿನಲ್ಲಿ ನಡದಾಗ ಜಗಳನೆದ್ದು ಪಂಡಿತ ಮಾಲವೀಯರ ತಂಡದವರೂ ಸನಾತನಿಗಳೂ ಹಿಂದು ಮಹಾಸಭೆಯಿಂದ ಬೇರೆಯಾಗಿ ತಮ್ಮದೇ ಆದೊಂದು ಮಹಾಸಭೆಯನ್ನು ಸ್ಥಾಪಿಸುವಂತಾಗಿರುವುದು. ಪಂಡಿತ ಮಾಲವೀಯರ ಪಕ್ಷದ ಸಂಯುಕ್ತ ಪ್ರಾಂತದ ಪ್ರತಿನಿಧಿಗಳು ಕ್ರಮವಾಗಿ ಚುನಾಯಿಸಲ್ಪಟ್ಟವರಲ್ಲೆಂದು ಅವರಿಗೆ ಪರಿಷತ್ತಿಗೆ ಪ್ರವೇಶ ಕೊಡಲ್ಪಡಲಿಲ್ಲ ಹೀಗೆ ಪ್ರವೇಶ ದೊರೆಯದವರಲ್ಲಿ ಪಂಡಿತ ಮಾಲವೀಯರ ಪುತ್ರ ರಾಧಾಕಾಂತ ಮಾಲವೀಯರೊಬ್ಬರು ಇದರಿಂದಾಗಿ ಮಹಾಸಭೆಯ ಅಧಿವೇಶನವು ಆರಂಭವಾದಾಗ ಒಂದು ಕಡೆ ಗಲಾಟೆಯೆದ್ದು ಇತ್ತಂಡದವರೂ ಕುರ್ಚಿಗಳನ್ನೆತ್ತಿ ಬಿಸಾಡಿ ಹೊಡಕೊಂಡರೆಂದು ತಿಳಿದುಬರುತ್ತದೆ. ಕೂಡಲೇ ಪೋಲೀಸರು ಬಂದು 3 ಮಂದಿಯನ್ನು ದಸ್ತಗಿರಿಮಾಡಿ ನಂತರ ಬಿಟ್ಟುಬಿಟ್ಟರು. ಅಧ್ಯಕ್ಷರಾದ ಡಾಕ್ಟರ್ ಕುರ್ತುಕೋಟಿ ಶಂಕರಾಚಾರ್ಯರು ತನ್ನ ಭಾಷಣದಲ್ಲಿ ಹರಿಜನರ ಮತಾಂತರದ ಕುರಿತು ಕೊಟ್ಟ ಅಭಿಪ್ರಾಯವನ್ನು ನಿರ್ಣಯಿ ಮತ್ತು ಹಿಂದು ರಾಷ್ಟ್ರಗಳ ಕುರಿತು ಅವರ ನ್ಯಾಯ್ಯವನ್ನು ಆಕ್ಷೇಪಿಸಿ ಪ್ರಮುಖ ಸನಾತನಿಗಳು ಕೆಲವರು ಮಹಾಸಭೆಯ ಮುಂದಿನ ಕಾರ್ಯದಲ್ಲಿ ಭಾಗವಹಿಸಲೊಪ್ಪದೆ ಪ್ರತ್ಯೇಕವಾಗಿರುವರು ಇವರು, ಅಧ್ಯಕ್ಷರು ತನ್ನ ಅಭಿಪ್ರಾಯಗಳನ್ನು ಹಿಂತೆಗೆಯುವಂತೆ ಬಹಳವಾಗಿ ಪ್ರಯತ್ನಿಸಿಗರೂ ಪ್ರಯೋಜನವಾಗಲಿಲ್ಲ. ಹರಿಜನರಿಗೆ ಹಿಂದು ಸಮಾಜದಲ್ಲಿ ತಕ್ಕ ಸ್ಥಾನಮಾನ ದೊರೆಯದಿದ್ದರೆ ಅವರು ಸಿಖ್ಖ ಧರ್ಮ ಸ್ವೀಕಾರಮಾಡಬಹುದು. ಸಿಖ್ಖ ಮತವು ಹಿಂದು ಧರ್ಮದ ಒಂದು ಅಂಗವಾಗಿರುವುದರಿಂದ ಅದಕ್ಕೆ ಸೇರಿದರೆ ಅದೇನೂ ಮತಾಂತರವಾಗಲಾರದೆಂಬ ಶಂಕರಾಚಾರ್ಯರ ಸ್ಪಷ್ಟವಾದ ಅಭಿಪ್ರಾಯವೇ ಸನಾತನಿಗಳಿಗೆ ಸರಿಹೋಗದುದು. ಶಂಕರಾಚಾರ್ಯರು ತಾನು ತನ್ನ ಅಧ್ಯಕ್ಷತನವನ್ನಾದರೂ ಬಿಡುವೆನೇ ಹೊರತು, ಈ ಅಭಿಪ್ರಾಯವನ್ನು ಬದಲಾಯಿಸಲಾರೆನೆಂದು ಹಠಹಿಡಿದರು. ಆದುದರಿಂದ ಸ್ವಾಗತಸಮಿತಿಯ ಅಧ್ಯಕ್ಷರಾದ ರೈ ಬಹದೂರು ರಾಮಶರಣ ದಾಸರೇ ಮೊದಲಾದ ಸನಾತನಿಗಳೂ, ಪಂಡಿತ ಮಾಲವೀಯರ ತಂಡದವರೂ ಒಟ್ಟಾಗಿ ಪ್ರತ್ಯೇಕವೊಂದು ಹಿಂದು ಮಹಾಸಭೆಯನ್ನು ಸ್ಥಾಪಿಸುವ ಆಲೋಚನೆ ನಡಿಸಿರುವರು

ಪೆಲೆಸ್ಟೈನದ ಪರಿಸ್ಥಿತಿ

ಪೆಲೆಸ್ಟೈನದಲ್ಲಿ ಈಗ ಗಲಾಟೆಯು ನಿಂತು ಶಾಂತಿಯು ಸ್ಥಾಪಿತವಾಗಿದೆ. ಗುಡ್ಡ ಬೆಟ್ಟಗಳಲ್ಲಿ ಬಂಡಾಯಗಾರ ಅರಬರಮೇಲೆ ಹೊಂಚು ಹಾಕುವುದರಲ್ಲಿ ನಿರತರಾಗಿದ್ದ ಬ್ರಿಟಿಷ್ ಪೋಲೀಸರು ತಮ್ಮ ದಿನನಿತ್ಯದ ರಸ್ತೆ ಬೀಟಿನ ಕೆಲಸಕ್ಕೆ ಬಂದಿದ್ದಾರೆ. ಕಳೆದ 6 ತಿಂಗಳುಗಳಿಂದ ವಿನಾದರೊಂದು ಅತ್ಯಾಚಾರ, ಗಲಾಟೆಯು ನಡೆಯುತ್ತಲೇ ಇದ್ದಿತು. ಇದೇ ತಾ. 20ರಲ್ಲು ಯಾವ ಅಂತಹ ಕೃತ್ಯವೂ ನಡೆದಿರುವುದಿಲ್ಲ. ಜನತೆಯು ಪೆಲೆಸ್ಟೈನದ ಪ್ರಶ್ನೆಯ ಕುರಿತು ವಿಚಾರಿಸಲು ಬರುವ ರೋಯಲ್ ಕಮಿಶನನ್ನು ಆತುರದಿಂದ ನಿರೀಕ್ಷಿಸುತ್ತಿದೆ. ಅರಬರು ಬ್ರಿಟಿಷ್ ಸರಕಾರವನ್ನು ವಿರೋಧಿಸುವುದನ್ನು ಬಿಟ್ಟು ಯಹೂದ್ಯರನ್ನು ಬಹಿಷ್ಕರಿಸುವ ಪ್ರಬಲ ಚಳವಳ ಹೂಡಿದ್ದಾರೆ. ಯರುಸಲೇಮಿನ ಯಹೂದ್ಯರ ಅಂಗಡಿಗಳಲ್ಲಿ ಅರಬರು ಯಾವ ಸಾಮಾನನ್ನೂ ತಗೆದುಕೊಳ್ಳದಂತೆ ಪಹರೆಗಾರರು ನಿಲ್ಲಿಸಲ್ಪಟ್ಟಿದ್ದಾರೆ ಅರಬ ವ್ಯಾಪಾರಿಗಳೆಲ್ಲಾ ಅರಬಸ್ಥಾನದಿಂದಲೇ ಸಾಮಾನುಗಳನ್ನು ರಫಿಮಾಡಿ ತೆಗೆದುಕೊಳ್ಳುವ ಪ್ರಯತ್ನ ನಡೆದಿದೆ. ಇದಕ್ಕಾಗಿ ಅರಬರ ದೊಡ್ಡ ಲಿಮಿಟೆಡ್ ಕಂಪೆನಿಯು ಸ್ಥಾಪಿತವಾಗಲಿದೆ.

ಬೊಂಬಾಯಿ ಗಲಾಟೆ ನಿಂತಿತು

ಆರೇಳು ದಿವಸಗಳ ಅಶಾಂತತೆಯ ನಂತರ ಇದೇ ತಾ. 22ರಲ್ಲು ಬೊಂಬಾಯಿಯ ಹಿಂದು ಮುಸಲ್ಮಾನ ಗಲಾಟೆಯು ನಿಂತು ಶಾಂತಿಯುಂಟಾಗಿರುವುದು. ಅಂಗಡಿ ಬೀದಿಗಳೆಲ್ಲಾ ತೆರೆಯಲ್ಪಡುತ್ತಿರುವುವು. ಗಲಾಟೆಯ ಸ್ಥಳಗಳಲ್ಲಿ ಜನ ಸಂಚಾರ ಆರಂಭವಾಗಿರುವುದು. ಯಾವ ಆತಂಕವೂ ಇಲ್ಲದ ಬೈಕುಲದ ಮಾರುತಿ ದೇವಸ್ಥಾನದ ಸಭಾಮಂಟಪ ಕಟ್ಟುವ ಕೆಲಸವು ನಡೆಯುತ್ತಿರುವುದು. ತಾ. 22ರಲ್ಲು ಬೈಕುಲ ಪೋಲೀಸರು, ಪೋಲೀಸರ ಹುಕುಮನ್ನುಲ್ಲಂಘಿಸಿ ಜೂಲಿಗೆನ್ನೊಯ್ಯುತ್ತಿದ್ದುದಕ್ಕಾಗಿ 13 ಮಂದಿಯನ್ನು ಕೈದುಮಾಡಿರುವರು. ಪೋಲೀಸರು ಗಲಾಟೆಯ ಸ್ಥಳಗಳಲ್ಲಿ ಪುಂಡರನ್ನೆಲ್ಲಾ ಹಿಡಿದು ಬಂಧನದಲ್ಲಿರಿಸಿದುದರಿಂದ ಗಲಾಟೆಯು ಬೇಗನೆ ನಿಲ್ಲಲು ಕಾರಣವಾಯಿತು ಒಟ್ಟು 1300 ಮಂದಿಗಿಂತಲೂ ಮಿಕ್ಕಿದ ಗಲಾಟೆಗಾರರು ಮತ್ತು ಪುಂಡರು ದಸ್ತಗಿರಿಮಾಡಲ್ಪಟ್ಟಿರುವರು. ಇವರ ವಿಚಾರಣೆಗಾಗಿ ಪ್ರತ್ಯೇಕವಾಗಿ ಮೆಜಿಸ್ಟ್ರೇಟರುಗಳು ನೇಮಿಸಲ್ಪಟ್ಟು ಕೆಲವರನ್ನು ಸಾರ್ವಜನಿಕವಾಗಿ ಛಡಿಕೊಟ್ಟು ದಂಡಿಸಲಾಗಿದೆ. ಗಲಾಟೆಯ ಸಂದರ್ಭದಲ್ಲಿ ಬೆಂಕಿ ನೊಂದಿಸಲು 70 ಸಲ ಫಯರ್ ಬ್ರಿಗೇಡಿನವರು ಕರೆಯಲ್ಪಟ್ಟಿದ್ದರು. 100 ಕ್ಕಿಂತಲೂ ಮಿಕ್ಕಿದ ಅಂಗಡಿಗಳು ಲೂಟಿಮಾಡಲ್ಪಟ್ಟಿರುವವು ಗಲಾಟೆಯ ಒಟ್ಟು 63 ಮಂದಿ ಕೊಲ್ಲಲ್ಪಟ್ಟಿದ್ದಾರೆ.

ಈ ವಾರದ ಕಥೆ

ಲೇಖಕ —
ಕೆ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ

ಮಧುಸೂದನ ಭಟ್ಟರು ಸನಾತನಿಗಳ ಅನಭಿಷಿಕ್ತ ರಾಜರೆಂಬುದನ್ನು ಕೇಳಿ ನಿಮಗೆ ಬಹಳ ಆಶ್ಚರ್ಯವಾಗಬಹುದು. ಆದರೆ ಇದರಲ್ಲಿ ಆಶ್ಚರ್ಯಪಡತಕ್ಕದ್ದೇನೂ ಇರುವದಿಲ್ಲ. ಸನಾತನ ಧರ್ಮರಹಸ್ಯವನ್ನು ಅವರು ತಿಳಿದಂತೆ ಮತ್ತಾರೂ ತಿಳಿಯಲಿಲ್ಲ. ಈ ಕಾಲದಲ್ಲಿ ಹಣಕ್ಕೆ, ಒನಪು ಒಯ್ಯಾರಗಳಿಗೆ, ಶೃಂಗಾರ ವಿಲಾಸಗಳಿಗೆ, ರೂಪು ಶರೀರಪರಿಮಾಣಗಳಿಗೆ ಇರುವಷ್ಟು ಮಾನ ಮರ್ಯಾದೆಗಳು ಗುಣಪಾಂಡಿತ್ಯಗಳಿಗಿರುವದಿಲ್ಲ. ಮಧುಸೂದನಭಟ್ಟರಲ್ಲಿ ಹಣ ಬೇಕಾದಷ್ಟು ಇತ್ತು. ಅದನ್ನು ಸಂಪಾದಿಸಿದ ಬಗೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಾಗಿ ಹೇಳುತ್ತಾರೆ. ಹೇಳಿಕೊಳ್ಳಬಾರದೇಕೆ? ಮುಖ್ಯ ಹೇಳುವವರ ನಾಲಗೆಗೆ ಎಲುಬಿಲ್ಲ. ಇನ್ನು ಮಧುಸೂದನ ಭಟ್ಟರ ಒನಪು ಒಯ್ಯಾರಗಳೋ, ರೂಪು ಶೃಂಗಾರಗಳೋ, ಮಾತುಗಾರಿಕೆ ಹಾವಭಾವಗಳೋ, ಅವರ ಕೃಷ್ಣವರ್ಣದ ತುಂಬಿದ ದೇಹವೋ ಎಲ್ಲವೂ ಸನಾತನಿಗಳೆಂದು ಹೇಳಿಸಿಕೊಳ್ಳುವವರಿಗೆ ಚೆನ್ನಾಗಿ ಒಪ್ಪುವಂಥಹವೇ! ಅಂದ ಮೇಲೆ ಮಧುಸೂದನ ಭಟ್ಟರು ಸನಾತನಿಗಳೆನ್ನಿಸಿಕೊಳ್ಳುವವರ ಅನಭಿಷಿಕ್ತ ರಾಜರಾಗಲಿಕ್ಕೆ ಅವರಲ್ಲಿ ಗುಣಪಾಂಡಿತ್ಯಗಳ ಆವಶ್ಯಕತೆ ಇದ್ದಿಲ್ಲವೆಂಬುದು ಹತ್ತು ವರ್ಷದ ಮಗುವಿಗಾದರೂ ತಿಳಿದೀತು.

ಭಟ್ಟರು ಜಾತಕವನ್ನು ಸರಿಯಾಗಿ ಗುಣಿಸಿ ಪರಿಶೋಧಿಸಿ ಉತ್ತಮವಾಗಿ ಕೂಡಿಬರುವದೆಂದು ತಿಳಕೊಂಡ ಮೇಲೆಯೇ ತಮ್ಮ ಏಕಮಾತ್ರ ಪುತ್ರಹೀನ ಮಗಳು ಸಾವಿತ್ರಮ್ಮನನ್ನು ಕೃಷ್ಣನಾಚಾರ್ಯರಿಗೆ ಧಾರೆಯೆರೆದು ಕೊಟ್ಟಿದ್ದರು. ಆಚಾರ್ಯರಿಗೆ ಆಗ ೬೦ ದಾಟಿತ್ತಾದರೂ ಭಟ್ಟರಿಗೆ ವ್ಯಸನವಿದ್ದಿಲ್ಲ. ಕಾರಣ, ಪುರಾಣಕಾಲದ ಸಾವಿತ್ರೀ ದೇವಿಯು ಮೃತ್ಯುಮುಖನಾದ ಸತ್ಯವಾನನಿಗೆ ದೀರ್ಘಾಯುಷ್ಯವನ್ನು ತಂದುಕೊಟ್ಟಿದ್ದಳು. ಹಾಗೆ ಆಚಾರ್ಯರಿಗೆ ಏನಾದರೂ ಪ್ರಾಣಾಪಾಯ ಉಂಟಾಗುವದಾಗಿದ್ದರೂ, ನಮ್ಮ ಸಾವಿತ್ರಮ್ಮನು ಅದನ್ನು ಸುಲಭವಾಗಿ ತಪ್ಪಿಸಬಲ್ಲಳು. ಕಾಲವಶನಾದ ಗಂಡನಿಗೆ ಚಿರಂಜೀವತ್ವವನ್ನು ತಂದುಕೊಡುವ ವ್ರತೋಪವಾಸಗಳ ಸಾಧನೆಗೆ ಸಮಯ ಸಾಕಾಗದೆ ಇರಬಹುದೆಂದು ಸಂಶಯ ಪಡಲಿಕ್ಕೆ, ಈಗಿನ ಹೆಮ್ಮಕ್ಕಳಂತೆ ಸಾವಿತ್ರಮ್ಮನಿಗೆ ಮದುವೆಯಾಗುವಾಗ ೨೦-೨೫ ವರ್ಷಗಳೇನೂ ಆಗಿರಲಿಲ್ಲ. ಆಗ ಅವಳಿಗೆ ಬರೇ ಎಂಟು ವರ್ಷ ಪ್ರಾಯ ಮಾತ್ರ! ಆದ್ದರಿಂದ ಭಟ್ಟರಿಗೆ ಆಚಾರ್ಯರ ಸಂಬಂಧವನ್ನು ಮಾಡಿಕೊಳ್ಳುವುದರಲ್ಲಿ ಸಂತೋಷವೇ ಇತ್ತು.

ಆದರೆ ನೋಡಿ, ಹಣೆಯಲ್ಲಿ ಬರೆದುದನ್ನು ಅಳಿಸಲಿಕ್ಕೆ ಬರೆದ ಬ್ರಹ್ಮನಿಗೇ ಸಾಧ್ಯವಾಗಲಿಲ್ಲ, ಜ್ಯೋತಿಷ್ಯವನ್ನು ಬರೆದವನಿಗೇ ತನ್ನ ಮಗಳ ವಿಧವಾದೋಷವನ್ನು ದೂರಮಾಡಲಿಕ್ಕಾಗಲಿಲ್ಲ; ಎಂದ ಮೇಲೆ ನಮ್ಮ ನಿಮ್ಮ ಪಾಡೇನು? ಸಾವಿತ್ರಮ್ಮನು ಕಠಿನಸಾಧನೆಗಳನ್ನು ಮಾಡಿ ಸತಿದೇವನಿಗೆ

ಸನಾತನಿಗಳ ಅನಭಿಷಿಕ್ತ ರಾಜ!

ಮಧುಸೂದನ ಭಟ್ಟರ ಮಗಳು ಸಾವಿತ್ರಮ್ಮ, ಬಾಲವಿಧವೆ, ವಿಧವೆಗೆ ಸಂಸಾರ ಸಾಗಿಸುವ ಸಂದರ್ಭ, ಅಭಿಲಾಷೆ—ಇವೆರಡೂ ಇರಬಾರದಿತ್ತೇನೊ! ಆದರೆ ಸಾಲೂಮೇಸ್ತ್ರನ ಹೆಂಡತಿ ಮೇರಿಯಾಗಿ ಎರಡು ಮಕ್ಕಳನ್ನು ಹೆತ್ತಾಗ ಸಮಾಜವು ಪಿಸುಗುಟ್ಟಲಿಲ್ಲ; ಮಧುಸೂದನ ಭಟ್ಟರಂತೂ ಆನಂದವನ್ನೇ ಹೊಂದಿದರು.

ದೀರ್ಘಾಯುಷ್ಯವನ್ನು ತಂದು ಕೊಡುವ ಮೊದಲೇ ಆಚಾರ್ಯರು ಹೇಳದೆ ಕೇಳದೆ ಪರಲೋಕವಾಸಿಗಳಾದರು. ಭಟ್ಟರು ಏನು ಮಾಡಿಯಾರು? ಹೋದವರನ್ನು ಬರಮಾಡಲಿಕ್ಕಾಗುವದಿಲ್ಲ. ಉಳಿದುದನ್ನಾದರೂ ಸುರಕ್ಷಿತವಾಗಿಡುವದು ಬುದ್ಧಿವಂತಿಕೆಯ ಲಕ್ಷಣ ಎಂದುಕೊಂಡು, ಆಚಾರ್ಯರ ಮನೆಮಾರುಗಳನ್ನು ತಮ್ಮ ಹೆಸರಿಗೆ ಮಾಡಿಕೊಂಡು, ಅಲ್ಲಿ ದಿಕ್ಕಿಲ್ಲದೆ ಬಿದ್ದುಕೊಂಡಿದ್ದ ಚೆಂಬು ಚರಿಗೆಗಳ ಸಮೇತ ಸಾವಿತ್ರಮ್ಮನನ್ನು ತಮ್ಮ ಮನೆಗೆ ಸಾಗಿಸಿದರು. ಹೀಗೆ ತಂದೆಯ ಮನೆಯಲ್ಲಿ ಸಾವಿತ್ರಮ್ಮನು ಸಂಸಾರದಲ್ಲಿ ಇದ್ದೂ ಇಲ್ಲದವಳಂತೆ ತನ್ನ ಆಯುಷ್ಯದ ಏಳೆಂಟು ವರ್ಷಗಳನ್ನು ಕಳೆದಳು.

ಒಂದು ದಿನ ಮಧುಸೂದನ ಭಟ್ಟರು ನಮ್ಮೂರ ದೇವಾಲಯದಲ್ಲಿ ಮೈಸೂರು ದೇಶದಿಂದ ಬಂದ ನರಹರಿಶಾಸ್ತ್ರಿಗಳ ಒಂದು ಹರಿಕಥೆಯ ಏರ್ಪಾಟು ಮಾಡಿದರು. ಜನರಿಗೆ ಮಾತ್ರ ಇದರಲ್ಲಿ ಒಂದು ವಿಶೇಷವು ತೋರಿತು. ಎಂದೂ ಕಾಸು ಬಿಚ್ಚದ ಭಟ್ಟರು ಈಗ ಮಾತ್ರ ೧೦-೨೦ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಯಾಕೆ ಮುಂದಾದರೋ ಎಂಬುದು ಅವರಿಗೊಂದು ಸಮಸ್ಯೆ. ಹಿಂದೆ ಖರ್ಚು ಮಾಡದಿದ್ದರೆ ಮುಂದೆ ಖರ್ಚು ಮಾಡಬಾರದೆಂದುಂಟೆ? ಹಿಂದೆ ಮದುವೆಯಾಗದವರು ಮತ್ತೆ ಮದುವೆಯಾಗುವದಿಲ್ಲವೆ? ಆದರೆ ಜನರ ಸ್ವಭಾವವೇ ಹೀಗೆ—ಯಾವಾಗಲೂ ಪ್ರತಿಯೊಬ್ಬರನ್ನು ಸಂದೇಹದೃಷ್ಟಿಯಿಂದ ನೋಡುವದು! ಅಂದು ರಾತ್ರಿ ಭಟ್ಟರು ಮಗಳನ್ನು ಕರೆದು—ತಾವು ಹರಿಕಥೆಯಿಂದ ಬರುವಾಗ ರಾತ್ರಿ ಸ್ವಲ್ಪ ಮೀರಬಹುದೆಂದೂ, ಹೆಬ್ಬಾಗಿಲಿಗೆ ಕೀಲು ಹಾಕಬೇಕಾದ್ದಿಲ್ಲವಾಗಿಯೂ, ದೀಪವನ್ನು ಸಣ್ಣದು ಮಾಡಿ ಜಾಗ್ರತೆಯಿಂದ ನಿದ್ದೆ ಮಾಡಬೇಕೆಂದೂ ಹೇಳಿ, ಎಂದಿನಂತೆ ಆ ದಿನವೂ ಮನೆಗೆ ಅಗಳು ಬೀಗ ಹಾಕಿ, ಹೊರ ಚಾವಡಿಯ ಮೇಲೆ ತಮ್ಮ ಹಾಸಿಗೆ ಹಾಸಿಟ್ಟು, ಹರಿಕಥೆಗೆ ಹೋದರು.

ಕಾಲಸಾಟವು ಯಾವಾಗ ಹೇಗೆ ನಡೆಯುತ್ತದೆಂದೂ, ಪ್ರಾರಬ್ಧವು ಎಂಥಹದ್ದಿದ್ದುತ್ತದೆಂದೂ ಯಾರೂ ಹೇಳಲಾರರು. ಸಾವಿತ್ರಮ್ಮ ಮನೆಯಲ್ಲಿ ಒಬ್ಬಳೇ. ರಾತ್ರಿ ೧೧ ಘಂಟೆ ಕಳೆದುಹೋಗಿದೆ, ಕಣ್ಣು ತೆರೆದು ತೂಕಡಿಸುತ್ತಿದ್ದ ಅವಳಿಗೆ ಆಗ ಸ್ವಲ್ಪ ಜೊಂಪು ಹತ್ತಿ ಅಲ್ಲೇ ಚಾವಡಿಯ ಮೇಲೆ ಹಾಸಿದ ತನ್ನ ಹಾಸಿಗೆಯ ಮೇಲೆ ಅಡ್ಡ ಬಿದ್ದುಕೊಂಡಳು. ಐದಾರು ಮಿನಿಟುಗಳು ಕೂಡ ಕಳೆಯಲಿಲ್ಲವೆನ್ನುವಷ್ಟರಲ್ಲಿ ಯಾರೋ ಮೆಲ್ಲಗೆ ಬಂದು ತನ್ನ ಕೈ ಹಿಡಿದು ಎಳೆಯುವಂತೆ ಸಾವಿತ್ರಮ್ಮನಿಗೆ ತೋರಿತು. ಕಣ್ಬಿಟ್ಟು ನೋಡುವಾಗ ಇಬ್ಬರು ಅಪರಿಚಿತ ವ್ಯಕ್ತಿಗಳು! ಚೀರಿಡಬೇಕೆನ್ನುವಷ್ಟರಲ್ಲಿ ಅವರು ಸಾವಿತ್ರಮ್ಮನ ಬಾಯಿಗೆ ವಸ್ತ್ರದ ಚಿಂದಿಯನ್ನು ತುಂಬಿಸಿ ಕೈಕಾಲು ಕಟ್ಟಿ ಗಾಡಿಯಲ್ಲಿ ಕುಳ್ಳಿರಿಸಿ ಹೊರಟು ಹೋಗಿಯೇ ಬಿಟ್ಟರು. ಅಷ್ಟಾಗುವಾಗ ಕಥೆಮುಗಿದು ಭಟ್ಟರು ಹಿಂದಿರುಗುತ್ತಿದ್ದರು. ಮನೆಖಾಲಿಯಾಗಿರುವುದನ್ನು ಕಂಡು ಅವರಿಗೆ ಆಗ ತಳಮಳವುಂಟಾಗಲಿಲ್ಲ. ಅವರು ಕರ್ಮಯೋಗಿಗಳು! ಮುಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲವೆಂದೂ, ಕೈಯಿಂದ ತಪ್ಪಿಹೋದ ಬಾಣವು ಮರಳಿ ದೊರೆಯುವದಿಲ್ಲವೆಂದೂ ತಿಳಿದ ಭಟ್ಟರು ಬಲ್ಲ, ನಾವಾದರೂ ಆ ಸಮಯದಲ್ಲಿ ಏನುಮಾಡಲಿಕ್ಕಾಗುತ್ತದೆ? ಮರುದಿನ ಬೆಳಗ್ಗೆ ಮಾತ್ರ ಸಾವಿತ್ರಮ್ಮನು ಯಾರ ಬೆನ್ನಹಿಂದೆಯೋ ಓಡಿಹೋದಳೆಂದೂ, ಇದಕ್ಕಾಗಿಯೇ ಪ್ರಾಯಬಂದ ವಿಧವೆಯರನ್ನು ಮನೆಯಲ್ಲಿ ಇರಗೊಡಿಸಕೂಡದಾಗಿ ಶಾಸ್ತ್ರಕಾರರು ವಿಧಿಸಿದ್ದಾರಾಗಿಯೂ, ಪಾಪ, ಮುದಿಪ್ರಾಯದಲ್ಲಿ ಭಟ್ಟರಿಗೆ ಇಂಥ ದುಃಖವು ಬರಬಾರದಾಗಿತ್ತಾಗಿಯೂ, ಊರವರು ಒಂದಿ ಹೇಳುತ್ತಾ ತಲೆ ತಲೆ ಹೊಡಕೊಳ್ಳುವ ಭಟ್ಟರಿಗೆ ಸಮಾಧಾನ ಹೇಳುವವರಾದರು.

ನಾಲ್ಕು ವರ್ಷಗಳು ಕಳೆದ ಮೇಲೆ ಒಮ್ಮೆ ನಾವು ತೀರ್ಥಯಾತ್ರೆ ಮಾಡುತ್ತ ಗೋಕರ್ಣಕ್ಕೆ ಬಂದಿದ್ದೆವು. ಅಲ್ಲಿ ಆಗ ದೊಡ್ಡ ಜಾತ್ರೆ ಆಗುವದಿತ್ತು. ಕಂಚುಗಾರರ, ಚಂಬುಕುಟಿಗರ, ಮಣಿಸರಕಿನವರ ದೊಡ್ಡ ದೊಡ್ಡ ಅಂಗಡಿಗಳು ಬಿದ್ದಿದ್ದವು. ಒಂದು ಅಂಗಡಿಯ ಮುಂದಿನಿಂದ ಹಾದು ಹೋಗುವಾಗ ನಮ್ಮ ಕಾಲುಗಳು ಮುಂದೆ ಹೆಜ್ಜೆಯನ್ನಿಡಲಿಲ್ಲ. ನಾವು ಕಂಬದಂತೆ ನಿಂತು ಅಲ್ಲಿ ನೋಡಿದೆವು. ಅದು ಸಾಲೂಮೇಸ್ತ್ರನ ಅಂಗಡಿಯೆಂದು ಅಲ್ಲಿ ತೂಗಾಡುತ್ತಿದ್ದ ಬೋರ್ಡಿನಿಂದ ಗೊತ್ತಾಗುತಿತ್ತು. ಮೇಸ್ತ್ರನು—'ಮೇರಿ, ಇನಾಸ ಅಳುತ್ತಾನೆ. ವ್ಯಾಪಾರಮಾಡಲಿಕ್ಕೆ ಬಿಡುವದಿಲ್ಲ. ಒಳಗೆ ಕರಕೊಂಡು ಹೋಗು' ಎನ್ನುವಷ್ಟರಲ್ಲಿ ಅಂಗಡಿಯ ಹಿಂಭಾಗದಿಂದ ಅವಳು ಒಂದು ವರ್ಷದ ಇನ್ನೊಂದು ಮಗುವಿಗೆ ಮೊಲೆಯುಣಿಸುತ್ತ ಇನಾಸನನ್ನು ಎತ್ತಿಕೊಂಡು ಹೋದಳು. ಅವಳನ್ನು ಕಂಡಾಗ ನಮ್ಮ ಮನಸ್ಸಿಗೆ ಹೇಗೊ ಹೇಗೋ ಅನ್ನಿಸಿತು. ಅವಳ ನಮ್ಮ ಕಣ್ಣುಗಳು ಒಂದಾದವು. ಅವಳ ಮುಖವು ಕೆಂಪೇರಿತು, ಕಣ್ಣುಗಳಿಂದ ಕಿಡಿಗಳುದುರತೊಡಗಿದವು. ತುಟಿಗಳು ನಡುಗತೊಡಗಿದವು, ಹಲ್ಲುಗಳು ಕಡಿಯತೊಡಗಿದವು; ಮೂಗಿನಿಂದ ನಿಡಿದಾದ ಬಿಸಿಯುಸಿರೊಂದು ಬಂದು ಮಧ್ಯಾಹ್ನದ ಬಿಸಿಲ ಬೇಗೆಯನ್ನು ಮತ್ತಷ್ಟು ಹೆಚ್ಚಿಸಿತು. ತೀರ್ಥಯಾತ್ರೆಮಾಡಿ ಪುಣ್ಯ ಕಟ್ಟಿಕೊಳ್ಳಲಿಕ್ಕೆ ಬಂದ ನಮ್ಮ ಯಾವ ಅಪರಾಧದಿಂದಲೋ, ಊರದೇವಿಯು ಶಾಪ ಕೊಡಲಿಕ್ಕೆ ಒಂದಂತೆ ಆಗ ನಮಗೆ ತೋರಿತು. ಅವಳ ಗಲ್ಲದಮೇಲಿದ್ದ ಮಚ್ಚೆಯೊಂದು ನಮಗೆ ಪೂರ್ವದ ಒಂದು ಘಟನೆಯ ನೆನಪುಮಾಡಿಕೊಟ್ಟಿತು. ಮೇಸ್ತ್ರನ ಅಂಗಡಿಯಲ್ಲಿ ವ್ಯಾಪಾರಮಾಡುವ ನೆವನದಿಂದ ಮೇರಿಯನ್ನು ಮಾತನಾಡಿಸಿ ನೋಡಬೇಕೆಂದು ಬಹಳ ಪ್ರಯತ್ನಮಾಡಿದೆನಾದರೂ ಪ್ರಯೋಜನವಾಗಲಿಲ್ಲ.

ಕೆಲವು ದಿನಗಳಲ್ಲಿ ಊರಿಗೆ ಮರಳಿದೆವು. ನಾನು ಅದೇ ದಿನ ಸಾಯಂಕಾಲ ನೆಟ್ಟಗೆ ಮಧುಸೂದನ ಭಟ್ಟರ ಮನೆಗೆ ಹೋದೆ. ಅಲ್ಲಿ ಅವರು ಚಾವಡಿಯ ಮೇಲೆ ಕುಳಿತು ಎಲೆಅಡಿಕೆ ಜಗೆಯುತ್ತಿದ್ದರು. ಅಂಗಳದಲ್ಲಿ ಮಾದಿ ನಿಂತು 'ಓಹೋ ನಿಮ್ಮ ಜನಿವಾರದ ಪ್ರತಾಪ ನಾನು ಚೆನ್ನಾಗಿ ಬಲ್ಲೆ. ಹಗಲಿನಲ್ಲಿ ನಿಮ್ಮವರ ಕೊರಳು ಸುತ್ತಿಕೊಂಡಿರುವ ಜನಿವಾರವೇ ರಾತ್ರಿ ನಮ್ಮ ಕೊರಳಿನ ಹಾರವಾಗುತ್ತದೆ. ಹೊಲತಿಯಂತೆ ಹೊಲತಿ! ಏನು ಡಂಭಾಚಾರ! ಜನಿವಾರದ ಶಾಪ ದೊಡ್ಡ ಬ್ರಹ್ಮಶಾಪ! ನಾವೇನು ತಿಳಿಯದವರೇ? ಹುಲ್ಲಿನ ಕಾಸು ಇಟ್ಟುಕೊಳ್ಳುತ್ತೀರಾದರೆ ಹಾಗೆಯೇ ಮಾಡಿ. ಹೊಟ್ಟೆಯ ಕರುಳು ಮಗಳನ್ನೇ ಒಬ್ಬ ಕಿರಿಸ್ತಾನನಿಗೆ ಮಾರಿದ ಕಟುಕರಿಗೆ ಇದೇನು ದೊಡ್ಡ ಮಾತೇ! ಸಾಕು ನಿಮ್ಮ ಅಪ್ಪಂತಿಕೆ!' ಏನೇನೋ ಜರಿದು ಹೇಳುತ್ತಿದ್ದಳು. ನಾನು ಚಾವಡಿಯನ್ನೇರಿ 'ಏನು ಭಟ್ಟರೇ, ಏನು ಸಮಾಚಾರ' ಎಂದೆ. ಭಟ್ಟರು 'ಅಲ್ಲ ಈ ಹೊಲತಿ ಕಾಸಿನ ಹುಲ್ಲಿಗೆ ಆರುಕಾಸು ಕೊಡಬೇಕಂತೆ, ಏನು ಕಲಿಯುಗ!' ಎಂದು ಮುಖ ಸಣ್ಣದು ಮಾಡಿ ಹೇಳಿ ಸೊಂಟಕ್ಕೆ ಬಿಗಿದ ಆರುಕಾಸನ್ನು ತೆಗೆದು ಅಂಗಳಕ್ಕೆ ಬಿಸಾಡಿದರು. ಮಾದಿ ಅದನ್ನು ತೆಗೆದುಕೊಂಡು ದುರದುರನೆ ನೋಡುತ್ತ ಹೊರಗೆ ನಡೆದಳು.

ಭಟ್ಟರ ಮಗಳು ಸಾವಿತ್ರಮ್ಮ ಸಾಲೂಮೇಸ್ತ್ರರ ಹೆಂಡತಿ ಮೇರಿಯಾಗಿ ಎರಡು ಮಕ್ಕಳ ತಾಯಿಯಾಗಿರುವ ವರ್ತಮಾನವನ್ನು ಭಟ್ಟರಿಗೆ ಹೇಳಿ, ಹೇಗೂ ಅವಳನ್ನು ತಿರುಗಿ ಹಿಂದೂ ಧರ್ಮಕ್ಕೆ ಸೇರಿಸಬೇಕೆಂದು ತಿಳಿಸಿದೆ. ಆಗಲವರು ಸ್ವಲ್ಪವಾದರೂ ಬೇಸರದ ಭಾವವನ್ನು ತೋರಿಸದೆ—"ನೋಡಿ ರಾಯರೇ ಅದೃಷ್ಟವನ್ನು ತಿದ್ದಲಿಕ್ಕೆ ಭಗೀರಥನಿಗೂ ಸಾಧ್ಯವಲ್ಲ. ನಮಗೆ ಪ್ರಾಣಕ್ಕಿಂತಲೂ ಧರ್ಮವೇ ಹೆಚ್ಚಿನದು. ಮಗಳ ಮಾತೇನು? ವಿಧವೆಯರನ್ನು ಅದರಲ್ಲೂ ಪ್ರಾಯಕ್ಕೆ ಬಂದ ವಿಧವೆಯರನ್ನು ಮನೆಯಲ್ಲಿ ಇರಿಸದೆ ಕಾಡಿಗಾದರೂ ಬಿಟ್ಟುಬರಬೇಕೆಂದು ಶಾಸ್ತ್ರವಚನವಿದೆ. ನಾನಾದರೋ ಹಾಗೆ ಮಾಡದೆ ಸಾವಿತ್ರಿಯನ್ನು ಉಪಾಯದಿಂದ ಬದುಕಿಸಿದೆನಲ್ಲ? ಇಷ್ಟೇ ನನಗೆ ಸಮಾಧಾನ! ಹೇಗೂ ಬದುಕಿದ್ದಾರೆ. ಅದನ್ನು ಕೇಳಿ ಮನಸ್ಸಿಗೆ ಬಹಳ ಸಂತೋಷವಾಯಿತು" ಎಂದರು.

ಭಟ್ಟರ ಮಾತು ಕೇಳಿ ನನಗೆ ಸ್ವಲ್ಪ ಸಿಟ್ಟು ಬಂದಿತು. "ಭಟ್ಟರೇ ನೀವು ಹೇಳುವದು ಶಾಸ್ತ್ರ, ಹಾಕುವದು ಗಾಳ. ನಿಮ್ಮ ಆಚಾರ ವಿಚಾರ, ನಡೆ-ನುಡಿಗಳಿಗೆ ಏನೇನೂ ಸಂಬಂಧವಿಲ್ಲ. ವಿಧವೆಯರೂ ಅಸ್ಪೃಶ್ಯರೂ ತ್ಯಾಜ್ಯವೆನ್ನುತ್ತೀರಿ. ಆದರೆ

ಣವರೊಡನೆ ಅಸ್ಪೃಶ್ಯತಸಂಬಂಧವನ್ನಿಟ್ಟು ಕೊಳ್ಳಲಿಕ್ಕೆ ಸ್ವಲ್ಪವಾದರೂ ಅಂಜುವದಿಲ್ಲ. ಬಾಯಿಂದ ರಾಮ - ರಾಮ ಬಗಲಲ್ಲಿ ಸೊಣ್ಣೆ. ನರಪಶುಗಳು ನೀವು. ಸ್ತ್ರೀಯರಿಗೂ ಅಸ್ಪೃಶ್ಯರಿಗೂ ಯಾವ ತರದ ಹಕ್ಕು, ಅಧಿಕಾರ, ಸ್ವಾತಂತ್ರ್ಯಗಳನ್ನು ಕೊಡದೆ, ಅವರನ್ನು ಕಾಲಡಿ ಬಿದ್ದು ಸಾಯುವ ಕ್ರಿಮಿಕೀಟಕ್ಕಿಂತಲೂ ಕೀಳುತರವಾಗಿ ಕಾಣುತ್ತೀರಿ. ನಿಮ್ಮ ಪೌರುಷ ಇದರಲ್ಲಿಯೇ ಅಡಗಿದೆ. ನಿಮ್ಮಂಥವರಿಂದಲೇ ಪವಿತ್ರವಾದ, ಅತಿ ಉದಾರವಾದ ಹಿಂದೂಧರ್ಮಕ್ಕೆ ನೋಡವು ತಟ್ಟಿತು. ನಿಮ್ಮಂಥವರಿಂದಲೇ ಧರ್ಮಗ್ಲಾನಿಯಾಯಿತು!' ಎಂದು ಸ್ವಲ್ಪ ಗಟ್ಟಿಯಾಗಿ ಒದರಿದೆ.

ಭಟ್ಟರು ನನ್ನ ಒದರುವಿಕೆಗೇನೂ ಹೆದರಲಿಲ್ಲ. ಅವರು ಹೇಳಿದರು—"ರಾಯರೇ ಸಿಟ್ಟುಮಾಡಿಕೊಳ್ಳಬೇಡಿ, ನಮ್ಮಿಂದ ಧರ್ಮದ ಗ್ಲಾನಿಯಾಗುವದೇನು. ನಿಮ್ಮಿಂದ ಅದರ ರಕ್ಷಣೆಯಾಗುವದೇನು? ನಾವು ನೀವು ಪಾಮರರು ಅಂದ ಮೇಲೆ ನಮ್ಮ ನಿಮ್ಮಿಂದ ಏನಾಗುತ್ತದೆ? ಎಲ್ಲವೂ ಭಗವಂತನ ಆಟ. ಅವನು ಮನಸ್ಸುಮಾಡಿದರೆ ಧರ್ಮೋದ್ಧಾರವು ಒಂದರೆಕ್ಷಣದಲ್ಲಿ ಆಗಬಹುದು. ನಾವು, ಸನಾತನಿಗಳು ಹಿಂದೂ ಸ್ತ್ರೀಯರನ್ನೂ ಅಸ್ಪೃಶ್ಯರನ್ನೂ ಹೀನವಾಗಿ ಕಾಣುವದರ ಕಾರಣ ಬಲ್ಲಿರಾ? ಕೇಳಿ, ಧರ್ಮಕ್ಕೆ ಗ್ಲಾನಿಯಾದಾಗ, ಧರ್ಮದ ಅಭ್ಯುತ್ಥಾನಮಾಡಲಿಕ್ಕೂ, ಅಧರ್ಮವನ್ನು ನಾಶಮಾಡಲಿಕ್ಕೂ ನಾನು ಅವತಾರಮಾಡುತ್ತೇನೆಂದು ದೇವರು ಗರುಡ ಪುರಾಣದಲ್ಲಿ ಹೇಳಿದ್ದಾನೆ. ಸ್ತ್ರೀಯರು ಅಸ್ಪೃಶ್ಯರ ಮೇಲೆ ನಾವು ಅತ್ಯಾಚಾರ ಮಾಡಿದರೆ ಅವರು ವಿಧರ್ಮೀಯರೂ, ಮ್ಲೇಂಛರೂ ಆಗುತ್ತಾರೆ. ಆಗಲಿ, ದೇಶವೆಲ್ಲಾ ಮ್ಲೇಂಛಮಯವಾದಾಗ ಈ ಕಲಿಯುಗದಲ್ಲಿ ಪರಮಾತ್ಮನ ಕಲ್ಕ್ಯವತಾರವಾಗಿ ಧರ್ಮೋದ್ಧಾರವಾಗುವುದು. ಕಲ್ಕ್ಯವತಾರವು ಮುಂದೆಂದೋ ಆಗುವಂಥಾದ್ದು ಈಗಲೇ ಆಗಿಬಿಡಲಿ ಎಂಬುದೇ ಸನಾತನಿಗಳ ಇಚ್ಛೆ. ಹಾಗಾದ ಮೇಲೆ ಪರೋಕ್ಷವಾಗಿಯಾದರೂ ಸನಾತನಿಗಳು ಧರ್ಮರಕ್ಷಕರು ಅಲ್ಲವೆ? ಚೆನ್ನಾಗಿ ಆಲೋಚಿಸಿದರೆ ಭಗವಂತನ ಅವತಾರಕ್ಕೆ ಅಡ್ಡಿಮಾಡುವ ನೀವೇ ಧರ್ಮದ್ರೋಹಿಗಳು! ಏನು ಹೇಳುತ್ತೀರಿ? ಅದ್ದರಿಂದ ಸ್ತ್ರೀಯರಿಗೂ ಅಸ್ಪೃಶ್ಯರಿಗೂ ಯಾವ ಹಕ್ಕು ಅಧಿಕಾರ ಸ್ವಾತಂತ್ರ್ಯಗಳನ್ನೂ ಕೊಡಬಾರದೆಂದು ನಾವು ಶಾಸ್ತ್ರವಚನಗಳನ್ನು ತೋರಿಸುತ್ತೇವೆ. ಅವರನ್ನು ಚೆನ್ನಾಗಿ ಮೆಟ್ಟಿ ಹಿಡಿಯುತ್ತೇವೆ. ಕಲ್ಕ್ಯವತಾರವಾಗಿ ಧರ್ಮ ರಕ್ಷಣೆಯೂ ಲೋಕಕಲ್ಯಾಣವೂ ಆಗಲೆಂದು ದೇವರಿಗೆ ಹರಿಕೆ ಕಾಣಿಕೆ ಹಾಕುತ್ತೇವೆ, ಪೂಜೆ ಉತ್ಸವ ಮಾಡುತ್ತೇವೆ. ಸನಾತನ ಧರ್ಮರಹಸ್ಯವು ತಿಳಿಯಿತೇ?"

ಮಧುಸೂದನ ಭಟ್ಟರ ತರ್ಕಸರಣಿಯನ್ನು ನೋಡಿ ನಾನು ಅವಾಕ್ಕಾದೆನು. ಅಂದಿನಿಂದ ಅವರ ಮೇಲೆ ಮಾತ್ರ ಅವರ ಸನಾತನ ಧರ್ಮದ ಮೇಲೆ ನನಗಿದ್ದ ಸದ್ಭಾವನೆಯ ಅಂಶವು ಕಡಿಮೆಯಾಗುತ್ತಾ ಬಂದು ಈಗ ಅದು ಇದ್ದೂ ಇಲ್ಲದಂತಾಗಿದೆ. ಕಣ್ಣಿದ್ದು ಕುರುಡರಾಗಿ, ಕಿವಿಯಿದ್ದು ಕಿವುಡರಾಗಿ, ಬುದ್ಧಿಯಿದ್ದು ಇಲ್ಲದವರಂತೆ ನಟಿಸಿ, ಹೃದಯವನ್ನು ಪಾಷಾಣದಂತೆ ಕಠಿನಮಾಡಿಕೊಂಡವರೊಡನೆ ಆಡುವ ಪ್ರತಿಯೊಂದು ಮಾತು, ಮಾಡುವ ಪ್ರತಿಯೊಂದು ಕಾರ್ಯ, ಯಾವ ಸತ್ಫಲವನ್ನೂ ಕೊಡಲಾರದು. ಅಂಥವರನ್ನು ತಿದ್ದಬೇಕೆನ್ನುವ ಪ್ರಯತ್ನಗಳು ಅವರ ಹೃದಯ ಬದಲಾವಣೆಮಾಡಬೇಕೆನ್ನುವ ಸಾಹಸಗಳು ಎಲ್ಲಾ ನೀರಿನಲ್ಲಿ ಹೋಮಮಾಡಿದಂತೆ. ಇದಕ್ಕೆ ಸಮುದ್ರ ಮಧುಸೂದನ ಭಟ್ಟರು ಸಾಕ್ಷಿಯಾಗಿದ್ದಾರೆ. ಅವರು ಸನಾತನಿಗಳ ಅನಭಿಷಿಕ್ತ ರಾಜರೆನ್ನಿಸಿ ಕೊಳ್ಳಲಿಕ್ಕೆ ಕೂಡ ಇದೇ ಕಾರಣವಾಗಿರಬಹುದೋ, ಅದು ಮಾತ್ರ ನನಗೆ ಇನ್ನೂ ಚೆನ್ನಾಗಿ ತಿಳಿದಿಲ್ಲ!

ಪ್ರಕಟಣೆ

ದಿ ಕುಂದಾಪುರ ಬೇಂಕ್, ಲಿಮಿಟೆಡ್, ಕುಂದಾಪುರ

ಇದರ ಷೇರ್ ಒಂದರ ರೂ. ೨೦ರಂತೆ ಕೊಟ್ಟ 19 ಷೇರುಗಳು ಮಾರಾಟಕ್ಕೆ ಇವೆ. ಮಾಯಸಿ ಇದ್ದವರು ಈ ಕಳಗಿನ ವಿಳಾಸಕ್ಕೆ ಬರಕೊಳ್ಳಬಹುದು. ಉತ್ತರ ಅಪೇಕ್ಷಿಸುವವರು ಒಂದಾಣೆ ಚೀಟಿ ನೊಂದಿಗೆ ಪತ್ರವ್ಯವಹಾರ ಮಾಡಬಹುದು.

A. B. C.

C/o **"Navayuga" UDIPI.**

ಪಶುರೋಗ ಚಿಕಿತ್ಸೆ

ಗೋಮಾರಿ ಯಾನೆ ಗೋವುಗಳ ಮಹಾಮಾರಿ ರೋಗ, ದೊಮ್ಮೆ ಯಾನೆ ನೆರಡೀ ರೋಗ, ರಕ್ತಸ್ರಾವ ರಕ್ತ ಕೆಂಪು, ಸಪ್ಪರೋಗ; ಕಾಲುಕುಂಟ, ಮೊದಲಾದ ಅನೇಕ ಅಂಟುರೋಗಗಳಿಂದ ವರ್ಷಂಪ್ರತಿ ಸಾವಿರಾರು ಜಾನುವಾರುಗಳು ಸಾಯುತ್ತವೆ. ಈ ರೋಗಗಳ ಹಾವಳಿಯನ್ನು ಕಡಿಮೆ ಮಾಡಲಿಕ್ಕೆಂದು ಟೂರಿಂಗ್ ವೆಟರಿನರಿ ಅಸಿಸ್ಟೆಂಟ ಸರ್ಜನರೆಂಬ ಗ್ರಾಮ ಸಂಚಾರ ಮಾಡುವ ಪಶುವೈದ್ಯರನ್ನು ಸರಕಾರದವರು ನೇಮಕಮಾಡಿರುತ್ತಾರೆ.

ಸರಕಾರಿ ಪಶು ವೈದ್ಯಾಲಯವು ಇರುವಲ್ಲಿ ಆ ವೈದ್ಯಾಲಯದ ಪಶು ವೈದ್ಯರು ಪಶುಗಳಿಗೆ ಬೇಕಾದ ಚಿಕಿತ್ಸೆಯನ್ನು ಮಾಡುತ್ತಾರೆ. ಅಂಥಾ ವೈದ್ಯಾಲಯಗಳು ಇಲ್ಲದಿರುವಲ್ಲಿ ಈ ಟೂರಿಂಗ್ ವೆಟರಿನರಿ ಅಸಿಸ್ಟೆಂಟ ಸರ್ಜನರು ಗ್ರಾಮಗಳಲ್ಲಿ ಅಂಟುರೋಗಗಳ ಹಾವಳಿ ಇಲ್ಲದಿರುವಾಗ, ತಮ್ಮ ಮುಕ್ಕಾಮು ಸ್ಥಳದಲ್ಲಿ ಚಿಕಿತ್ಸೆಗಾಗಿ ಅಲ್ಲಿಗೆ ತಂದ ಪಶುಗಳಿಗೆ ಚಿಕಿತ್ಸೆಯನ್ನು ಮಾಡುತ್ತಾರೆ. ಈ ಟೂರಿಂಗ್ ವೆಟರಿನರಿ ಅಸಿಸ್ಟೆಂಟ ಸರ್ಜನರು ತಿಂಗಳಿಗೆ ೨೦ದಿನಗಳಿಗೆ ಕಡಿಮೆಯಾಗದಂತೆ ಗ್ರಾಮಸಂಚರಣೆಯನ್ನು ಮಾಡಬೇಕಾಗಿರುತ್ತದೆ. ಹೀಗೆ ಸಂಚರಣೆಯನ್ನು ಮಾಡುವಾಗ ಅವರು ಪ್ರತಿ ಗ್ರಾಮದಲ್ಲಿ ಸುಮಾರು 10 ದಿನಗಳ ತನಕ ಉಳಕೊಂಡು ಅಲ್ಲಿ ತಂಗಾಮಿ ವೈದ್ಯಾಲಯವನ್ನು ನಿರ್ಮಿಸಿ, ಜಾನುವಾರುಗಳಿಗೆ ತಗಲುವ ಅಂಟುರೋಗವಲ್ಲದ ಸಾಧಾರಣ ರೋಗ ವ್ಯಾಧಿಗಳಿಗೆಲ್ಲಾ ಮದ್ದು ಕೊಟ್ಟು ಧರ್ಮಾರ್ಥವಾಗಿ ಅವುಗಳಿಗೆ ಚಿಕಿತ್ಸೆ ತೆಗೆಯುವುದು, ಯನ್ನು ಮಾಡಿಕೊಡುತ್ತಾರೆ.

ಮಹಾಮಾರಿ ರೋಗವು ಎಂದೂ ತಲೆದೋರದಂತೆ ಅವರು ಜನರು.ಗಳಿಗಲ್ಲಾ ಸಂದರ್ಭೋಚಿತವಾಗಿ ಹಾಕುಹಾಕುತ್ತಾರೆ. ಜಾತ್ರೆ—ಸಂತೆಗಳು ನಡೆಯುವಲ್ಲಿ ಅವರು ಮೋಯಾಲಾಂದ್ರ ಪ್ರದರ್ಶನಗಳನ್ನು ತೋರಿಸಿ, ಭಾಷಣಗಳನ್ನು ಕೊಟ್ಟು, ಪಶುರೋಗ ಚಿಕಿತ್ಸೆಗಳ ಕುರಿತು ರೈತರಿಗೆ ಜ್ಞಾನವುಂಟಾಗುವಂತೆ ಪ್ರಯತ್ನಪಡುತ್ತಾರೆ. ಇಂಥಾ ಪ್ರಯತ್ನಗಳಿಂದ ಸರಕಾರದ ಇಲಾಖೆಯವರ ಸಹಾಯವನ್ನು ತಾವು ಯಾವ ರೀತಿ ಪಡೆದು ಪ್ರಯೋಜನವನ್ನು ಹೊಂದಬಹುದೆಂಬುದು ರೈತರಿಗೆ ಗೊತ್ತಾಗುತ್ತದೆ. ಅಂಟುರೋಗಗಳು ಎಲ್ಲಿಯಾದರೂ ಸಂಭವಿಸಿ ಅವುಗಳನ್ನು ತಿಳುವಳಿಕೆ ತಂದದ್ದನ್ನು ಕಂಡ ಹಿಡಿಯುವದು ಗ್ರಾಮ ಉದ್ಯೋಗಸ್ಥರು ಈ ಬಾಬಿನಲ್ಲಿ ಇಡುವ ರಿಜಿಸ್ಟರ ಲೆಕ್ಕಗಳನ್ನು ತನಿಖೆಮಾಡಿ ಪರೀಕ್ಷಿಸುವುದು. ಪಶುರೋಗಗಳ ಕುರಿತು ಶೋಧನೆ ನಡೆಸುವ ಉನ್ನತ ಶಿಕ್ಷಣ ವೃತ್ತಾಂತಗಳನ್ನು ಸಂಪಾದಿಸಿಕೊಳ್ಳುವದು —ಇವುಗಳು ಸಹ ಈ ಗ್ರಾಮ ಸಂಚಾರ ಮಾಡುವ ಪಶುವೈದ್ಯ ಇಲಾಖೆಯ ಅಧಿಕಾರಿಗಳ ಮುಖ್ಯ ಕೆಲಸಗಳಾಗಿರುತ್ತವೆ. ಪಶುವೈದ್ಯದ ಪ್ರಯೋಜನವು ಗ್ರಾಮಗಳಲ್ಲಿ ಪ್ರತಿಯೊಬ್ಬರಿಗೂ ಈ ರೀತಿ ಮುಟ್ಟುವಂತಾಗುತ್ತದೆ. ಕಳೆದ ಐದು ವರುಷಗಳಲ್ಲಿ ಸರಕಾರದವರು ವರ್ಷಂಪ್ರತಿ ರೂ. ೩೦,400 ಖರ್ಚುಹಾಕಿ ೪೭ ಮಂದಿ ಗ್ರಾಮ ಸಂಚಾರದ ಪಶುವೈದ್ಯರಿರುವ ಹೆಚ್ಚಿನ ಒಂದು ಸಿಬ್ಬಂದಿಯನ್ನು ನೇಮಕಮಾಡಿರುತ್ತಾರೆ.

ಧರ್ಮಾರ್ಥವಾಗಿ ಹಾಕುವ 'ಸೀರಮ್ ಸಿಮಲ್ಟೇನಿಯಸ್' ಎಂಬ ದಾಕಿನಿಂದ ಜಾನುವಾರುಗಳಿಗೆ ಸಾಧಾರಣ ಮುಂದೆ ಎಂದೂ ಮಹಾಮಾರಿ ರೋಗವು ತಗಲದಂತೆ ರಕ್ಷಣೆಯಾಗುತ್ತದೆ. ಕಳೆದ ಐದು ವರ್ಷಗಳಲ್ಲಿ ಹೀಗೆ ದಾಕುಹಾಕಿದ ಜಾನುವಾರುಗಳ ಸಂಖ್ಯೆಯನ್ನು ಈ ಕೆಳಗೆ ಕಾಣಿಸಿರುತ್ತದೆ —

1930—31	147,880
1931—32	113,566
1932—33	101,115
1933—34	139,352
1934—35	116,130

ಈ ದಾಕನ್ನು ಹಾಕಲಿಕ್ಕೆ ಮಹಾಮಾರಿ ರೋಗ ನಾಶಕ ರಸಿಕೆಯು ಜರೂರಾಗಿ ಹೆಚ್ಚು ಬೇಕಾಗುವುದರಿಂದ 1932ನೇ ಇಸವಿಯಲ್ಲಿ ಮದ್ರಾಸಿನಲ್ಲಿ ಈ ತರದ ರಸಿಕೆ ವ ಸಂಜನರಸ ಬೇಕಾದನ್ನು ತಯಾರಿಸುವ ಸೀರಮ್ ಇನ್ಸ್ಟಿಟ್ಯೂಟ್ ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿರುತ್ತಾರೆ. ಈ ಸಂಸ್ಥೆಯ ಬಗ್ಗೆ ವರ್ಷಕ್ಕೆ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ.

ಇಷ್ಟರ ತನಕ ಈ ಜಿಲ್ಲೆಯಲ್ಲಿ ನಾಲ್ಕು ಜನ ಟೂರಿಂಗ ವೆಟರಿನರಿ ಅಸಿಸ್ಟೆಂಟ ಸರ್ಜನರಿದ್ದರು. 1936ನೇ ಇಸವಿ ಮೇ ತಾರೀಕು ೧ರಿಂದ ಈ ತರಗತಿಯ ಹೆಚ್ಚಿನ ಒಬ್ಬ ಪಶುವೈದ್ಯರನ್ನು ನೇಮಕ ಮಾಡಿರುತ್ತಾರೆ. ಜಿಲ್ಲೆಯ ಆರು ತಾಲೂಕುಗಳನ್ನು ಅವರೊಳಗೆ ವಂಚಿ ಹಾಕಿದ್ದುದರಿಂದ ಅವರು ಎಲ್ಲಾ ಕಡೆಯಲ್ಲಿಯೂ ಬೇಕಾದ ಸಹಾಯವನ್ನು ಮಾಡುತ್ತಾರೆ.

ಮಂಗಳೂರಿನಲ್ಲಿ ಒಂದು, ಪುತ್ತೂರಿನಲ್ಲಿ ಒಂದು, ಹೀಗೆ ಎರಡು ಪಶು ವೈದ್ಯಾಲಯಗಳನ್ನು ಸರಕಾರದವರು ಈ ಜಿಲ್ಲೆಯಲ್ಲಿ ಸ್ಥಾಪಿಸಿರುತ್ತಾರೆ. ಆ ವೈದ್ಯಾಲಯಗಳಿಗೆ ಚಿಕಿತ್ಸೆಯ ಬಗ್ಗೆ ಕೊಂಡುಹೋದ ಪಶುಗಳಿಗೆ ಅಲ್ಲಿ ಮದ್ದು ಕೊಡುತ್ತಾರೆ. ಶಸ್ತ್ರೋಪಯೋಗ ಬೇಕಾದಲ್ಲಿ ಶಸ್ತ್ರೋಪಯೋಗವನ್ನು ಮಾಡಿ ಚಿಕಿತ್ಸೆಮಾಡುತ್ತಾರೆ.

ಕಳೆದ ಐದುವರ್ಷಗಳಲ್ಲಿ ಈ ಜಿಲ್ಲೆಯಲ್ಲಿ ಗೋಮಾರಿಯಾನೆ ಗೋವುಗಳ ಮಹಾಮಾರಿ ರೋಗ ವ ದೊಮ್ಮೆ ಯಾನೆ ನೆರಡೀ ರೋಗವು ತಗಲದಂತೆ ದಾಕುಹಾಕಿದ ಜಾನುವಾರುಗಳ ಸಂಖ್ಯೆಯನ್ನು ಈ ಕೆಳಗೆ ಕೊಟ್ಟಿರುತ್ತದೆ.

	ದೊಮ್ಮೆ ಯಾನೆ ನೆರಡೀ ರೋಗ	ಗೋಮಾರಿ ಯಾನೆ ಗೋವುಗಳ ಮಹಾಮಾರಿ ರೋಗ
1930-31	148	7,722
1931-32	256	902
1932-33	"	1,179
1933-34	"	6,007
1934-35	"	2,045
	404	**13,162**

(ಮದ್ರಾಸು ಸರಕಾರದವರಿಂದ ಪ್ರಕಟಿಸಲ್ಪಟ್ಟದ್ದು)

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras	Visveswarpuram Circle Bangalore City.	Sonnyalayam Puthivara, Calicut
Car Street, Mangalore.	Udipi, S India	Charni Road, Bombay No 4.

—EVIDENCE— OF SECURITY & STABILITY

FIGURES THAT SPEAK FOR THEMSELVES

TOTAL ASSETS **Rs. 80,66,600**

SUMMARY OF 1935 ACCOUNTS

Total Assets Over . .	Rs. 80,00,000
Life Funds Over	Rs. 68,00,000
Premium Income Over ..	Rs. 22,54,000
Interest Income	Rs. 3,16,000
Claims Paid	Rs 5,75,000

Total Claims paid over Rs. 38,50,000
Total Business in Force Over Rs. 4,42,51,200

TOTAL BUSINESS IN FORCE **Rs. 4,42,51,200**

ಕಸ್ತೂರಿ ಮಿಶ್ರಣ ದಶಮೂಲನೆಂಬ
ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಯೆಯೂ, ಪ್ರಸವವೇದನಾ ಬಗ್ಯೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:** – ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ ಮಂಗಳೂರು ದ. ಕ

ಏಜಂಟರು:—ಮೆಸರ್ಸ್ ಒರಿಯಂಟಲ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರಸ್ತೆ ಮಲ್ಲೇಶ್ವರಮ್, (ಬೆಂಗಳೂರು ಸಿಟಿ.)

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ



ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ.
ಮಿಕ್ಸೆಡ್	ಬೆಳಗ್ಗೆ 5-55	ರಾತ್ರಿ 8-55
ಕಾಂಜಂಗಾಡ್ ಪ್ಯಾಸೆಂಜರ್	ಬೆಳಗ್ಗೆ 8 25	ಮಧ್ಯಾಹ್ನ 1-20
ಮೈಲ್	ಬೆಳಗ್ಗೆ 9 50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್.

[1907ರಲ್ಲಿ ಸ್ಥಾಪಿತವಾದದ್ದು.]

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ

ವಿಮಾ ಹಣ ಪಾವತಿ ರೂ. **37** ಲಕ್ಷ ಮಿಕ್ಕಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು. ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ಏಜನ್ಸಿ ಶರ್ತಗಳು:—ಅತ್ಯಧಿಕ ನಫೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ. ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿ

P. D. BHARGOVA,
General Manager, ***AJMER,***

SUPERINTENDENT. 278, Linga Chetty Street, MADRAS

Or Chief Agent:—
BELLARY: MADURA. TRICHINAPOLY VELLORE.

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವುದು

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು-ವೈಜ್ಞಾನಿಕ ವಿಷಯಗಳು-ಪರಂಪರೆಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ.

ವಾರ್ಷಿಕ ಚಂದಾ ರೂ. 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

ಬೆಲೆ ಸುಲಭ! ಒಂದೇ ದರ!! ಖಾತ್ರಿಮಾಲು!!!

ಎಲ್ಲಿ?

ಎಸ್. ಅನಂತರಾಮಾಚಾರ್

ಸ್ಟೇಶನರಿ, ಕಟ್ಲೇರಿ ಮತ್ತು ಶಾಲೋಪಕರಣಗಳ ವ್ಯಾಪಾರಿ.

ತಾಲೂಕು ಕಚೇರಿಬಳಿ, ಉಡುಪಿ.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI BROS
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd.,

Head Office MANGALORE **Branch Office Court Road, UDIPI.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ, ಉಡುಪಿ.**

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½. ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4½. 1 ವರ್ಷದ ಬಾಬ್ತು ಸಾ. ಶೆ. 5½ 2 ವರ್ಷ ವ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—ಅಂದರೆ—ಪ್ರೋ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತವೆ. ಭಂಗಾರದ ಈಡಿನ ಮೇಲೆ ರೂ 100 ಅಥವಾ ಅದರ ಮೇಲಿನ ಐವೇಜಿಗೆ ಸಾ. ಶೆ. 8. ಮತ್ತು ಅದಕ್ಕಿಂತ ಕೆಳಗಣದು ಸಾ. ಶೆ. 9ರ ದರದ ಬಡ್ಡಿಯಲ್ಲಿಯೂ ಸಾಲ ದೊರೆಯುವುದು. ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ವಿಜಯ ಬ್ಯಾಂಕ್, ಲಿಮಿಟೆಡ್ K. Gopalkrishna Shetty.
ಚೆಯರ್‌ಮೇನ್ ಕೊಡ್ಯಾಲ್‌ಬೈಲ್, ಮಂಗಳೂರು. ಸೆಕ್ರೆಟರಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ರೋಗಿಗಳಿಗೆ ಉತ್ತಮ ಆಹಾರ ಅದರಲ್ಲಿ ಶರ್ಕರ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಗೊಳಿಸುವುದು ವಾರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡವೊಂದರ ಕ್ರಯ ರೂ 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ವಾದೇಶಿ ಶಾಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೋ, ರಥಬೀದಿ ಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋಸ್ ಸ್ಟೋರುಗಳಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕನ್ನಡ,

ಜಗತ್ತಿಗೆ ಶಾಂತಿ ಬೇಕಂತೆ! ಶಾಂತಿ!!

ನಿಜವಾಗಿಯೂ ಈಗ ಲೋಕಕ್ಕೆ ಶಾಂತಿ ಬೇಕಾಗಿದೆ. ಯುದ್ಧೋತ್ಸಾಹವನ್ನು ತೋರಿಸುತ್ತಿರುವ ಯಾವ ರಾಷ್ಟ್ರವನ್ನು ಬೇಕಾದರೂ ಕೇಳೋಣ—ಎಲ್ಲವೂ ಹೇಳುತ್ತಿರುವದು 'ಲೋಕ ಶಾಂತಿಯು ಬೇಕೇಬೇಕು' ಎಂಬ ಹಿತವಚನವನ್ನೇ. ಮುಸಲೋನಿಯವರಿಗೆ ಬೇಕಾದುದೂ ಶಾಂತಿ. ಜರ್ಮನಿಯನ್ನು ಪ್ರಶ್ನಿಸಿದರೆ ಹಿಟ್ಲರನು ಮುಂದೆ ಬಂದು ಹೇಳುತ್ತಾನೆ. 'ನಾವು ಜರ್ಮನಿಗೆ ಮತ್ತು ಲೋಕಕ್ಕೆ ಶಾಂತಿ ದೊರೆಯಬೇಕೆಂಬೇ ಹಾತೊರೆಯುತ್ತಿದ್ದೇವೆ' ಸರಿ. ಹಿಟ್ಲರನು ಹಾತೊರೆಯುತ್ತಿರುವನಾದರೆ—ಇನ್ನು ಅದನ್ನು ಬಹುಕಾಲ ತಡೆಗಟ್ಟಿ ಕುಳಿತುಕೊಳ್ಳಲಾರನೆಂಬುದು ನಮ್ಮ ಅನುಭವದ ಮಾತು. ಹಾಗಾದರೆ ಸದ್ಯಕ್ಕೆ ಶಾಂತಿಯು ದೊರಕುವದೆಂದು ನಿರ್ಧಾರಮಾಡಿಕೊಳ್ಳುವ ಮೊದಲು ಈ ಹಿಟ್ಲರ್ ಮುಸಲೋನಿಗಳು ಅಪೇಕ್ಷಿಸುವ ಶಾಂತಿಯ ಜಾತಿಯನ್ನು ತಿಳಿಯೋಣ 'ಲೋಕದಲ್ಲಿ ಅಶಾಂತಿಯುಂಟಾಗಿರುವದು ರಶ್ಯದ ಸಮತಾವಾದದಿಂದ; ಅದನ್ನು ನಿರ್ನಾಮಮಾಡಿದ ಮರುದಿನವೇ ಶಾಂತಿ!' ಎಂದು ತನ್ನ ಫ್ರೆಂಚ್'ಕಟ್' ಮೀಸೆಯನ್ನು ಜಗಿಯುತ್ತಾ ಹಿಟ್ಲರನೂ, ತನ್ನೆತ್ತರದ ಎದೆಯನ್ನುಬ್ಬಿಸುತ್ತಾ ಮುಸಲೋನಿಯೂ ಶಾಂತಿಯ ಹಾದಿಯನ್ನು ತೋರಿಸುತ್ತಿದ್ದಾರೆ. ಫ್ರಾನ್ಸಿನೊಡನೆ ಕೇಳಿದರೆ-ಶಾಂತಿ ಬೇಕು ಹೌದು; ಆದರೆ ಅಲ್ಲಿ ನೋಡಿರಿ-ಹಿಟ್ಲರನು ನಿಗುರಿ ನಿಂತಿದ್ದಾನೆ; ಅವನು ಬಾಲಮುದುಚಿದರೆ ಆಗ ಶಾಂತಿ' ಎನ್ನುತ್ತಿದೆ ಇಟಲಿಯು 'ಶಾಂತಿ ಸ್ಥಾಪಿಸುವ ವಿಧಾನವನ್ನು ಅಬಿಸೀನಿಯದಲ್ಲಿ ನಾವು ಮಾಡಿ ತೋರಿಸಿದ್ದೇವಲ್ಲ' ಎನ್ನುವಂತಿದೆ; ಜಪಾನು ಚೀನದಲ್ಲಿ ಅದರ ಇನ್ನೊಂದು ನಮೂನೆಯ ಪ್ರಯೋಗದಲ್ಲಿದೆ. ಇಂಗ್ಲೆಂಡು ಮತ್ತು ಅಮೇರಿಕವು 'ಶಾಂತಿ'ಗೆ ಯಾರೂ ಸುಯ್ಲೆತ್ತದೆ ಈಗ ಇದ್ದ ಹಾಗೆ ಇದ್ದುಬಿಟ್ಟರೆ ಸರಿ ಎಂಬ ಅರ್ಥವನ್ನು ಕೊಡುತ್ತಿದೆ. ರಶ್ಯವು ಗಾಂಭೀರ್ಯದಿಂದ ಎಲ್ಲವನ್ನೂ ಪರಿಶೀಲಿಸುತ್ತಾ ನಿಂತಂತಿದೆ. ಅಂತೂ, ಇನ್ನೊಂದು ಪ್ರಚಂಡ ಯುದ್ಧವಾಗುವದಾದರೆ ಶಾಂತಿಪ್ರಿಯ-ಶಾಂತಿಪ್ರಿಯ ಜನಾಂಗದೊಳಗೇ ಹೋರಾಟವಾಗುವದು. ಅದೂ ಕೇವಲ ಶಾಂತಿ ಸ್ಥಾಪನೆಗಾಗಿಯೇ ಆಗುವದು! ನಾಗರಿಕತೆಯ ಒಪ್ಪವು ಇಷ್ಟೊ ಥಳಕಾಗಿದೆ. ಯುದ್ಧಕ್ಕೆ ಅನುವಾಗುವ ತಮ್ಮ ವರ್ತನೆಯು ಅನಾಹುತದ್ದೆಂದು ಪ್ರತಿಯೊಂದು ದೇಶಕ್ಕೂ ಗೊತ್ತು; ಸಭ್ಯತನವು ಆ ವರ್ತನೆಯಲ್ಲಿಲ್ಲ; ತಾವು ಸುಭಗರೆನ್ನಿಸಿಕೊಳ್ಳಲು ಒಂದು ಆದರ್ಶವನ್ನು ಕಟ್ಟಿಕೊಳ್ಳದೆ ನಿರ್ವಾಹವಿಲ್ಲ. ಆದ್ದರಿಂದ ಇಷ್ಟನ್ನೂ ಮಾಡುವದು ಶಾಂತಿಗಾಗಿ ಎಂದು ಬಿಟ್ಟರ ಸರಿ; ದೂರುವವರಿಗೆ-ಬೈಯ್ಯುವವರಿಗೆ-ಕೇಳಿದೊಡನೆಯೇ ವಿಷಯವು ಸಿಕ್ಕುವಂತಿಲ್ಲ. ಟೀಕಾಕಾರರನ್ನು ಸ್ವಲ್ಪ ದಣಿಸಿದಂತೆಯೂ ಆಗುವದು-'ಶಾಂತಿಬೇಕೆನ್ನುವ ನೀವು ಹೀಗೇಕೆ ಮಾಡುತ್ತೀರಿ-ಹಾಗೇಕೆಮಾಡಲಿಲ್ಲ?' ಎಂದು ಸಂಗತಿಗಳನ್ನು ಎಳತಂದು ತೋರಿಸುವ ಕಷ್ಟವು ವಿಮರ್ಶಕರಿಗೊದಗುವದು. ಅದಕ್ಕೊಂದಿಷ್ಟು ಸೂಕ್ಷ್ಮವಿಚಾರವೂ ಬೇಕು. ಹೀಗಾಗಿ ಈ 'ಶಾಂತಿಮಂತ್ರ'ದಿಂದ ತಕ್ಕಮಟ್ಟಿನ ಗುಣವುಂಟು ಎಲ್ಲಾ ರಾಷ್ಟ್ರಗಳಿಗೂ! ಅದನ್ನು ಯುದ್ಧೋತ್ಸಾಹಿ ರಾಷ್ಟ್ರಗಳು ತಮ್ಮ ರಕ್ಷಣೆಗಾಗಿ ಕಟ್ಟಿಕೊಂಡಿರುವ ಕೋಟೆಗಳಲ್ಲಿ ಒಂದು ಎನ್ನಲೂಬಹುದು ಅಂತೂ ಇಷ್ಟೊಂದು ನಿಜ. ಶಾಂತಿಯೇ ಬೇಕೆಂದು ಬಯಸುವವರು ತಮ್ಮ ಶಾಂತಿಗೂ-ಈಗ ಬೇರೆಬೇರೆ ರಾಷ್ಟ್ರಗಳು ಪಠಿಸುತ್ತಿರುವ ಆ ಶಾಂತಿಗೂ ಏನೂ ಸಂಬಂಧವಿಲ್ಲವೆಂಬುದನ್ನು ತಿಳಿದುಕೊಂಡಿರಬೇಕು.

ಇದು ದೇಶ-ವಿದೇಶಗಳ ಮಧ್ಯನಾಗುವಲ್ಲಿ ಹುಟ್ಟುವ ಅಶಾಂತಿಯ ಮಾತಾಯಿತು, ಒಂದು ದೇಶವು ಇನ್ನೊಂದರ ಮೇಲಿಟ್ಟಿರುವ ಸಂಶಯ, ದ್ವೇಷದ ಪರಿಣಾಮವಿದು- ಅಶಾಂತಿಯು ಹುಟ್ಟುವುದೇ ಅಲ್ಲಿ ಎಂದು ನಂಬಲಾಗದು. ಆ ಅಶಾಂತಿಯ ರೂಪವು ಬ್ರಹ್ಮರಾಕ್ಷಸನಷ್ಟು ದೊಡ್ಡದಿದೆ. ಅಂತಹ ಭೀಕರ ರೂಪವನ್ನು ಆ ಸ್ಥಳದಲ್ಲಿಯೇ ಲೋಕವು ಪಡೆಯಲು ಅಸಾಧ್ಯ. ಅದು ಪ್ರತಿಯೊಂದು ದೇಶದಲ್ಲಿಯೂ ಹುಟ್ಟಿ ಬೆಳೆದು ಇಲ್ಲಿಗೆ ಬಂತು. ಅಶಾಂತಿಯು ಜನರೊಳಗೆ ನೆಲೆ ನಿಂತಿರುವುದರಿಂದಲೇ, ಲೋಕವೆಲ್ಲಾ ಆ ಸ್ವಭಾವವನ್ನು ಕಲಿತಿರುವದರಿಂದಲೇ—ಈಗಿನ ಗಡಿಬಿಡಿಯನ್ನು ಯುದ್ಧದ ಪೂರ್ವ ಕೃತ್ಯಗಳನ್ನು ಸಹಿಸಿಕೊಂಡಿರಲು ಸಾಧ್ಯವಾಗಿದೆ. ನ್ಯಾಯದೃಷ್ಟಿಯಿಂದ ಇಷ್ಟುದೇ ಅಕ್ಷಮ್ಯ ಅಪರಾಧ; ಆದರೆ ಈಗ ನಾವಿದನ್ನೇ ಶಾಂತಿಯೆಂದು ಭಾವಿಸುತ್ತಾ ಭವಿಷ್ಯವು ಮಾತ್ರ ಹಾಳಾಗುವುದೆಂದು ಹೆದರುತ್ತಿದ್ದೇವೆ; ಅಧಮ ಭವಿಷ್ಯದ ಭೀಕರ ರೂಪವನ್ನು ಕಲ್ಪಿಸಿಕೊಂಡು ಇಂದಿನದೇ ಸುಖವೆಂದು, ಈಗಿನ ಪರಿಸ್ಥಿತಿಗೆ ಚಿರಾಯುಷ್ಯವನ್ನು ಕೊಡಲು ಬಯಸುತ್ತಿದ್ದೇವೆ. ಹಾಗಾಗಲು ಕಾರಣವೇನು? ಪ್ರತಿಯೊಂದು ದೇಶದ ಜನರಲ್ಲಿ ಅತೃಪ್ತಿಯಿದೆ, ಎಲ್ಲಿಯೂ ಅವರ ಇಚ್ಛೆಯು ಪೂರ್ತಿಹೊಂದುವದಿಲ್ಲ; ಅದು ಪೂರ್ತಿಯಾಗದಲ್ಲಿ ಅದನ್ನು ಪೂರೈಸಿಕೊಳ್ಳಬೇಕೆಂಬ ಒಂದೇ ಆತುರವಿರುತ್ತದೆ; ಅನ್ಯರಿಂದ ಸೆಳಕೊಂಡು ಅದನ್ನು ಭರ್ತಿ ಮಾಡಿಕೊಳ್ಳುವ ಬುದ್ಧಿ ಹುಟ್ಟಿದರೆ ಕೆಲಸ ಕೆಟ್ಟಂತೆಯೇ ಸರಿ! ಪ್ರತಿಯೊಬ್ಬರೂ ಒಂದೇ ಸ್ಥಿತಿಯಲ್ಲಿರುವಾಗ, ಒಬ್ಬರನ್ನೊಬ್ಬರು ಸುಲಿಗೆ ಮಾಡಿಕೊಳ್ಳುವದೇ ಕರ್ತವ್ಯವಾಗುತ್ತದೆ; ಅದು ಜನರೊಟ್ಟಿಗೆ ನೆರೆಸಂತು ಪದ್ಧತಿಯಾಗಿ ಹೋದರೆ ಸರಿ. ಆ ಮೇಲೆ ದೇಶ-ದೇಶಗಳೊಳಗಿನ ವ್ಯವಹಾರದಲ್ಲಿ ಈ ಪದ್ಧತಿಯೇ ಸೇರಿಹೋಗುತ್ತದೆ—ಅದರ ಕೊನೆಯ ರೂಪಕ್ಕೆ ಹೆಸರು 'ಯುದ್ಧ' ಎಂದು!

ಅಂತೂ ಯುದ್ಧದ ಮೂಲವು ಜನರ ಅತೃಪ್ತಿಯಾಗಿದೆ. ಯುದ್ಧವು ಜನರ ಅತೃಪ್ತಿ ನಿವಾರಣೆಯ ನಿಷ್ಫಲಯತ್ನವಾಗಿದೆ. ಹಠ, ದ್ವೇಷ, ಧೈರ್ಯ, ಸಾಹಸಗಳು ಯುದ್ಧದಲ್ಲಿ ಪ್ರಕಾಶಕ್ಕೆ ಬರುವದುಂಟು. ಆದರ ಅವು ಯುದ್ಧಕಾಲದಲ್ಲಿ ಸಿಡಿಮದ್ದಿನಂತಹ ಉಪಕರಣಗಳು ಮಾತ್ರ. ಜನಾಂಗಕ್ಕೆ ಕ್ಷೇಮವಾಗಬೇಕೆಂಬುದೇ ಯುದ್ಧದ ಧ್ಯೇಯ. ಯುದ್ಧವೆಂದರೆ ಕೊನೆಗೆ ಸುಖವಿದೆ ಎಂದು ಭಯಂಕರ ಕಷ್ಟಗಳನ್ನು ಆಮಂತ್ರಿಸಿಕೊಳ್ಳುವ ಒಂದು ಸಾಧನ; ಆದರೆ ಆ ಕೊನೆಯನ್ನು ಕಂಡುಹಿಡಿದವರೇ ಇಲ್ಲ; ಅದು ತೀರಾ ಅಸಾಧ್ಯ; ಆ ಗುರಿಯು ಈ ದಿನದ ವರೆಗೂ ಅನಂತಾಕಾರದಲ್ಲಿ ಮರೆಯಾಗಿಯೇ ಇದೆ. ಈ ಸುಖದ ಹಾದಿಯು ಪ್ರತ್ಯೇಕವೇ ಇದೆ. ಜನರಲ್ಲಿ ತೃಪ್ತಿಯುಂಟಾಗಬೇಕು, ಅವರ ಆವಶ್ಯಕತೆಗಳು ಪೂರೈಸಲ್ಪಡಬೇಕು, ಆತುರದ ಬಾಯಿ ಬಡ್ಡಾಗಬೇಕು; ಆಗ ಅಲ್ಲಿ ಶಾಂತಿ ನೆಲೆಯೂರುವುದು. ತಾವು ತೃಪ್ತಿಪಟ್ಟ ಮೇಲೆ ಅನ್ಯರ ಪೀಡೆಗೆ ಹೋಗುವ ವೈಚಿತ್ರ್ಯವು ಈ ತನಕ ನಿರ್ಮಾಣಗೊಂಡಿಲ್ಲ; ಇನ್ನು ಮುಂದೆ ಹುಟ್ಟುವಂತೆಯೂ ಇಲ್ಲ, ಆದ್ದರಿಂದ ತಮ್ಮ ಕ್ಷೇಮಕ್ಕಾಗಿ ಯುದ್ಧವನ್ನು ಪೇಕ್ಷಿಸುವ ರಾಷ್ಟ್ರಗಳು, ತಮ್ಮ ಜನಾಂಗವನ್ನು ತೃಪ್ತಿಗೊಳಿಸಲು ನೋಡುವದೇ ಯುಕ್ತವಾದುದು, ನ್ಯಾಯವಾದುದು.

೧-೧೧.

ವಾರದ ವಿಚಾರ

ಸ್ಪೈನಿನ ಪರಿಸ್ಥಿತಿಯು ಅತ್ಯಂತ ವಿಷಾದಕರಸ್ಥಿತಿಗೆ ಮುಟ್ಟಿದೆ. ಬಂಡಾಯಗಾರರು ಮೇದ್ರಿದನ್ನು ನಾಲ್ಕು ಕಡೆಗಳಿಂದಲೂ ಮುತ್ತುತ್ತಿರುತ್ತಾರೆ. ಕೆಲವೆಡೆ ಸರಕಾರಕ್ಕೂ ಇನ್ನು ಕೆಲವೆಡೆ ಬಂಡಾಯಗಾರರಿಗೂ ಜಯವಾಗಿದೆಯೆಂದು ಪ್ರಕಟವಾಗಿದೆ. ಜನರಲ್ ಫ್ರೇಂಕೋರವರು ಕೊನೆಯ ಸಲ ಮೇದ್ರಿದಿನ ಮೇಲೇರಿ ಹೋಗುವ ಮೊದಲು ತನ್ನ ಸೇನೆಗೆ ಸ್ವಲ್ಪ ವಿಶ್ರಾಂತಿಯನ್ನಿತ್ತಿರುತ್ತಾರೆಂದು ತಿಳಿದುಬಂದಿದೆ ಆದರೆ ವಿಮಾನ ಧಾಳಿಯು ನಡೆಸಲ್ಪಟ್ಟಿದೆ. ಮೇದ್ರಿದಿನಿಂದ 12 ಮೈಲು ದೂರದ ಮೆಸ್ಕ್ವೋನ್ ಎಂಬ ಸರಕಾರದ ರಕ್ಷಣೆಯ ಸ್ಥಳವನ್ನು ಬಂಡಾಯಗಾರರು ಗೆದ್ದಿರುವರೆಂದು ವಾರ್ತೆ ಬಂದಿದೆ. ಅರಗನ್ ರಣರಂಗದಲ್ಲಿ ಸರಕಾರದ ಸೇನೆಯು ಜಯಹೊಂದಿದೆ, ಮುಖ್ಯ ಪಟ್ಟಣದ ರಕ್ಷಣೆಗಾಗಿ ಪ್ರಬಲ ಸಿದ್ಧತೆ ನಡೆದಿದೆ. ರಶ್ಯವು ತಾಟಸ್ಥ್ಯದ ಒಪ್ಪಂದವನ್ನು ಮುರಿದಿರುವುದರಿಂದ ಸ್ಪೈನಿಷ್ ಸರಕಾರದ ಪಕ್ಷೀಯರಲ್ಲಿ ಆತ್ಮಾನಂದವುಂಟಾಗಿದೆ. ರಶ್ಯದಿಂದ ಯುದ್ಧೋಪಕರಣಗಳ ಸಹಾಯ ದೊರೆತಿದೆ, ಪರಿಸ್ಥಿತಿಯು ಶೀಘ್ರವಾಗಿ ಬದಲಾಗಬಹುದೆಂದು ಭಾವಿಸಲಾಗಿದೆ. ಜನರಲ್ ಪೊಜಾಸ್ ಎಂಬವರು ಸರಕಾರಿ ಸೇನೆಯ ಮುಖ್ಯ ನಾಯಕರಾಗಿ ನೇಮಿಸಲ್ಪಟ್ಟಿದ್ದಾರೆ. ಅವರ ಸೇನೆಯನ್ನೆಲ್ಲಾ ಪುನರ್ಘಟಿಸಿರುತ್ತಾರೆ.

* * * *

ಸ್ಪೈನಿನ ಅಂತಃಕಲಹದಲ್ಲಿ ಹೊರಗಣವರು ಕೈಹಾಕಿ ಯುದ್ಧವು ಇಡೀ ಯುರೋಪಿನಲ್ಲೆಲ್ಲಾ ಹಬ್ಬುವ ಅನಾಹುತವುಂಟಾಗಬಾರದಂತೆ ಎಲ್ಲರೂ ತಟಸ್ಥರಿರುವಂತೆ ನೋಡಲು ನೇಮಿಸಲ್ಪಟ್ಟಿರುವ ಸಭಾ ಕಮಿಟಿಯ ಸಭೆಯು ಇದೇ ತಾ. 21ರಲ್ಲು ಸೇರಿ ಪೊರ್ಚುಗಲ್, ಇಟಲಿ ಮತ್ತು ಜರ್ಮನಿಯು ಬಂಡಾಯಗಾರರಿಗೆ ಪ್ರತ್ಯಕ್ಷ ಸಹಾಯಮಾಡಿರುವವೆಂಬ ಸೋವಿಯೆಟ್ ಸರಕಾರದ ಆರೋಪಗಳ ಕುರಿತು ಚರ್ಚೆ ನಡೆದು ಯಾವ ನಿರ್ಣಯವೂ ಆಗಿರುವುದಿಲ್ಲ. ಜರ್ಮನಿ, ಇಟಲಿ ಮತ್ತು ಪೊರ್ಚುಗಲ್ ರಾಷ್ಟ್ರಗಳು, ರಶ್ಯವು ಸ್ಪೈನಿಷ್ ಸರಕಾರಕ್ಕೆ ಸಹಾಯಮಾಡಿರುವದೆಂಬ ಪ್ರತ್ಯಾರೋಪಮಾಡಿರುತ್ತವೆ, ಇಷ್ಟರೊಳಗೆ ಪೊರ್ಚುಗೀಸ್ ಸರಕಾರವು ಸ್ಪೈನಿಷ್ ಸರಕಾರದೊಡನೆ ಸಂಬಂಧವನ್ನು ಕಡಿದು ಹಾಕಿದೆ ಪೊರ್ಚುಗಲ್, ಇಟಲಿ ಮತ್ತು ಜರ್ಮನಿಗಳು ಬಂಡಾಯಗಾರ ಸರಕಾರವನ್ನೇ ನ್ಯಾಯವಾದ ಸರಕಾರವೆಂದು ಅಂಗೀಕರಿಸಿ ಅದಕ್ಕೇನೇ ಬೇಕಾದ ಸಹಾಯವನ್ನೀಡಬಹುದೆಂಬ ಭೀತಿಯುಂಟಾಗಿದೆ. ಇದರಿಂದ ಯುರೋಪಿನ ಪರಿಸ್ಥಿತಿಯು ಪುನಃ ವಿಷಮಸ್ವರೂಪ ತಾಳುವಂತಾಗಿದೆ.

ರಶ್ಯದ ಎದುರಾಗಿ ಜರ್ಮನಿ ಮತ್ತು ಇಟಲಿಗಳು ಒಂದುಗೂಡುವಂತೆ ತೋರುತ್ತದೆ. ಇಟಲಿಯ ವಿದೇಶ ಮಂತ್ರಿಯೂ ಮುಸಲೋನಿಯವರ ಅಳಿಯನೂ ಆದ ಕೌಂಟ್‌ಸಿಯಾನೋರವರು ಹಿಟ್ಲರರೊಡನೆ ನಡೆಸಿದ ಮಾತುಕತೆಯ ಪರಿಣಾಮವಾಗಿ, ಜರ್ಮನಿಯು ಅಬಿಸೀನಿಯವನ್ನು ಇಟಲಿಯ ಅಧೀನ ರಾಜ್ಯವಾಗಿ ಅಂಗೀಕರಿಸುವುದೆಂದೂ, ಜರ್ಮನಿಯ ವಸಾಹತುಗಳ ಮೇಲಿನ ಹಕ್ಕನ್ನು ಇಟಲಿಯು ಸಮರ್ಥಿಸುವುದೆಂದೂ ವಾರ್ತೆಯುಂಟಾಗಿದೆ. ವಿದೇಶ ಸಂಬಂಧವಾದ ಎಲ್ಲಾ ಪ್ರಶ್ನೆಗಳ ವಿಷಯದಲ್ಲಿಯೂ ಇಟಲಿ ಜರ್ಮನಿಗಳೊಳಗೆ ಒಡಂಬಡಿಕೆಯುಂಟಾಗಿದೆಯಂತೆ. ಇದರಿಂದ ಯುರೋಪಿನಲ್ಲೀಗ 3 ಪಕ್ಷಗಳುಂಟಾಗಿವೆ, ಇಟಲಿ ಜರ್ಮನಿಗಳ ಪಕ್ಷವೊಂದು, ರಶ್ಯದ ಪಕ್ಷ ಇನ್ನೊಂದು, ಫ್ರಾನ್ಸ್ ಮತ್ತು ಇಂಗ್ಲೆಂಡುಗಳ ತಟಸ್ಥ ಪಕ್ಷ ಮತ್ತೊಂದು.

* * * *

ಕೈಯಲ್ಲಿ ಖಡ್ಗ ಝಳಪಿಸಿ ಬಾಯಿಯಲ್ಲಿ ಶಾಂತಿಯ ಪಾಠದ ವಿಚಿತ್ರ ಪ್ರದರ್ಶನವೊಂದನ್ನು ಆಗಾಗ ಮಾಡುವುದು ಮುಸಲೋನಿಯವರದೊಂದು ಅಭ್ಯಾಸ ಅಂತೆಯೇ ಅವರು, ಇದೇ ತಾ. 27 ರಲ್ಲು ಬೊಲೊಗ್ನ ಎಂಬಲ್ಲಿ 1,60,000 ಜನಸಮುದಾಯಕ್ಕೆ ಭಾಷಣವೀಯುವಾಗ ಫೆಸಿಸ್ಟ ಯುಗದ 14ನೇ ವರ್ಷಗಳ ಅಂತ್ಯದಲ್ಲಿ ತಾನೀಗ ಶಾಂತಿಯ ಶ್ವೇತಧ್ವಜವನ್ನು ಮುಂದೊಡ್ಡುತ್ತೇನೆ. ಅದು ಚೆನ್ನಾಗಿ ಹರಿತಮಾಡಲ್ಪಟ್ಟ ತರುಣ ಮತ್ತು ಗಟ್ಟಿಯಾದ ಮುಷ್ಟಿಗಳಲ್ಲಿ ಹಿಡಿಯಲ್ಪಟ್ಟ 8 ಮಿಲಿಯ ಖಡ್ಗಗಳ ನಡುವಿಂದೆತ್ತಿ ಹಿಡಿಯಲ್ಪಟ್ಟಿದೆ ಎಂದು ಹೇಳಿದರು. ಇದರ ಸ್ಪಷ್ಟವಾದ ಅರ್ಥವೆಂದರೆ 'ಶಾಂತಿಬೇಕಾಗಿದೆ; ಆದರೆ ಆ ಶಾಂತಿ ಮಾತ್ರ ತನ್ನಿಚ್ಛೆಯದ್ದಾಗಿರಬೇಕು. ಹಾಗಾಗದಿದ್ದರೆ 8 ಮಿಲಿಯ ಖಡ್ಗಗಳು ಅದಕ್ಕಾಗಿ ಹೋರಾಡಲು ಸಿದ್ಧವಿವೆ' ಎಂಬುದು. ಇಂತಹ ಉದ್ಧತ ಮನೋವೃತ್ತಿಯಿಂದ ಎಂದಿಗೂ ಶಾಂತಿ ಉಂಟಾಗಲು ಸಾಧ್ಯವಿದೆಯೇ?

* * * *

ಪೋಲೀಸರ ಕರ್ತವ್ಯ ದಕ್ಷತೆ ಮತ್ತು ಸೈನಿಕರ ಸಕಾಲದ ಬಂದೋಬಸ್ತಿನಿಂದ ಬೊಂಬಾಯಿಯಲ್ಲಿದ್ದ ಭೀಷಣ ಹಿಂದು ಮುಸಲ್ಮಾನ ದಾವಾಗ್ನಿಯು ಒಡನೆಯೇ ನಂದಿಸಲ್ಪಟ್ಟಿರುವದು, ಈಗ ಯಾವ ಗಲಾಟೆಯೂ ಇಲ್ಲದೆ ಸರ್ವಸಾಮಾನ್ಯ ಪರಿಸ್ಥಿತಿಯುಂಟಾಗಿರುವದು. ಈ ಸಂದರ್ಭದಲ್ಲಿ ಪೋಲೀಸರ ಚಾತುರ್ಯವೂ, ಸರಕಾರದ ನಿರ್ದಾಕ್ಷಿಣ್ಯ ಹಾಗೂ ಕಠಿಣ ಧೋರಣೆಯೂ, ಅಭಿನಂದನೀಯವಿರುವದು- ಮತ್ತು ಸಂತೋಷದ ಸಂಗತಿಯೆಂದರೆ ಬೈಕುಲದ ಮಾರುತಿ ದೇವಸ್ಥಾನದ ಮಂಟಪಕಟ್ಟುವ ಕೆಲಸವು ಮುನ್ನಡೆಸಲ್ಪಡುತ್ತಿರುವದು.

ನಾರದನ ತಂಬೂರಿ

ನರ ನಾರಾಯಣ! ಘುಂಯಿ, ಘುಂಯಿ, ಬಂತೈ ಬೀಸುತ ಬೀಸುತ ಬಂತೈ! ಬರುವ ಚುನಾವಣೆ ಸುಳಿಗಾಳಿ॥ ಘುಂಯಿ, ಘುಂಯಿ॥ ನರನಾರಾಯಣ! ಶುಭವಾಗಲಿ ಮಾನವರೆ! ಈಗ ಆದ ಶುಭವು ಬರುವ ಫೆಬ್ರವರಿಯವರೆಗೂ ನಿಂತೇ ಬಿಡಲಿ! ನೋಡಿ, ಬಂತಯ್ಯಾ ಬೀಸುತ್ತಾ ಬೀಸುತ್ತಾ ಚುನಾವಣೆಗಾಳಿ! ಆ ಗಾಳಿಯೊಟ್ಟಿಗೆ ಮದ್ರಾಸಿನ ಕಸಕಡ್ಡಿಗಳು ನಿಮ್ಮ ಕಾಲಡಿಗೆ ಬೀಳಹತ್ತಿವೆ. ಈಚೆ ಬಂದು ನಿಲ್ಲಿರಯ್ಯಾ! ಗಾಳಿಯ ಧೂಳಿಗೆ ಬಾಯಿ ತೆರೆಯಬೇಡಿರಿ ಘುಂಯಿ, ಘುಂಯಿ॥ ನಿಟ್ಟುಸಿರಿನ ಸುಳಿಗಾಳಿಯು ಜನರೇ! ಈ ಹುಸಿಗಾಳಿಯ ನಂಬದಿರಿ॥ ಘುಂಯಿ ಘುಂಯಿ! ನರ ನಾರಾಯಣ! ನರ ನಾರಾಯಣ.

●

ಮೊನ್ನೆ ಬಂದಿದ್ದರಲ್ಲಾ, ನಿಮ್ಮ ಮಂತ್ರಿಗಳು, ಯಾಕೆ ಕೇಳುವಿರಾ? ಮಂತ್ರಿಗಳು ಬರುವುದು ಮಂತ್ರಾಲೋಚನೆಗೆ. ಪುತ್ತೂರು, ಕಾಸರಗೋಡಿಗೆ ಹೋಗಿ ಮರಗಿಡಗಳಿಗೆ ಹತ್ತಿದ ಕೊಳೆರೋಗವನ್ನು ಕಂಡರು. ಮಹಾಮಾರಿ ಅಂಟುರೋಗದಂತೆ ಆ ಕೊಳೆರೋಗ ಮಾನವರೆ! ಇನ್ನು ಅದು ಮರಗಳನ್ನು ಬಿಟ್ಟು ಮತದಾರರನ್ನು ಹಿಡಿದೀತೋ ಎಂದು ಹೆದರಿಕೆ ನನಗೆ! ನರನಾರಾಯಣ! ಘುಂಯಿ, ಘುಂಯಿ॥ ರೋಗಗಳ ನೆಲೆಬೀಡು ನಮ್ಮ ಕನ್ನಡನಾಡು! ಮರದ ರೋಗವು ಮನುಜರಿಗೆ ತಗಲದಿರಲಿ॥ ಘುಂಯಿ, ಘುಂಯಿ, ನರ ನಾರಾಯಣ!

●

ಕೆಲವರಲ್ಲಿ ಅದೊಂದು ಶಕ್ತಿ ಉಂಟು ನೋಡಿ! ನಮ್ಮಲ್ಲಿಯೂ ಒಬ್ಬ ದೊಡ್ಡ ಮನುಷ್ಯನಿದ್ದ. 'ಕರ್ಯದ ರಾವ್' ಎಂದು ಅವನ ಹೆಸರು. ಅವ ಹೋಗಿ ತೆಂಗಿನ ಮರದ ಬುಡದಲ್ಲಿ ನಿಂತು ಮೇಲೆ ನೋಡಿಬಿಟ್ಟನೆಂದರೆ ಸರಿ, ಗೊನೆಯ ಕಾಯಿಗಳೆಲ್ಲಾ ಪಟಪಟ ಉದುರಿ ಬೀಳುತ್ತಿದ್ದವು. ಯಾರಾದರೊಬ್ಬರು ನೋಡಿಯೇ ಕೊಳೆರೋಗವನ್ನು ತೆಗೆಯಬೇಕಾಗಿದ್ದರೆ ಅವನನ್ನೇ ಕರಕೊಂಡು ಹೋಗಬಹುದಿತ್ತು, ಇಲ್ಲಿಯೇ ಇದ್ದನಲ್ಲ! ಅಯ್ಯೋ ಮೋಸವಾಯಿತು! ನರ ನಾರಾಯಣ! ಘುಂಯಿ, ಪಿಳ ಪಿಳ ಪಿಳನೆ ಕಂಡು! ಕೊಳೆರೋಗ ಕಿಗೆಯುವಾ! ಮಂತ್ರವನು ಬಲ್ಲವನೆ ಮಂತ್ರಿನೋಡಿ! ॥ ಘುಂಯಿ, ಘುಂಯಿ, ನರ ನಾರಾಯಣ!

●

ಜಸ್ಟೀಸ್ ಪಾರ್ಟಿಯವರು ಅಂಥಾ ಉಪಕಾರ ಮಾಡಿದ್ದಾರೆ, ಇಂಥಾ ಉಪಕಾರ ಮಾಡಿದ್ದಾರೆ ಎಂದು ಚಂದಚಂದದ ಮಾತುಗಳೆಲ್ಲಾ ಹೊರಡುತ್ತಿವೆ ಜನರೆ! ಕೌದಯ್ಯ! ದಕ್ಷಿಣ ಕನ್ನಡಿಗರೂ ತಿಳಕೊಳ್ಳಬೇಕು. ಕೌನ್ಸಿಲಿನಲ್ಲಿ ದಕ್ಷಿಣ ಕನ್ನಡದಲ್ಲಿ ರಿಸೆಟ್ಲ್‌ಮೆಂಟಿನ ಸಂಬಂಧವಾಗಿ ಶ್ರೀ. ಎ. ಬಿ. ಶೆಟ್ರ ನಿಲುವಿನ ಸೂಚನೆ ಬಂದಿತ್ತಲ್ಲ–ಆಗ ಅದರೊಡನೆ ಸಹಕರಿಸದೆ ನಮ್ಮ ಹೊಟ್ಟೆಗೆ ಏಟು ಕೊಟ್ಟವರಯ್ಯ–ಜಸ್ಟೀಸರು! ಅವರು ಅಂತಹ ಏಟು ಕೊಡುವಾಗ ನೀವೊಂದು ಓಟು ಕೊಡುವದೇನು ದೊಡ್ಡದು ಹೇಳಿ! ಕೊಟ್ಟುಬಿಡಿ-ಹೋಗಲಿ!

ನರನಾರಾಯಣ! ಘುಂಯಿ! ಘುಂಯಿ,॥ ಕೆನ್ನೆಗೆ ಹೊಡೆವನ! ಕೈ ಚುಂಬಿಸುವಾ ಹೇಡಿಗಳೇ ನಾವು?॥ ಘುಂಯಿ, ಘುಂಯಿ: ನರನಾರಾಯಣ! ನರನಾರಾಯಣ!

●

ಉಡುಪಿ ನಗರ ಸಭೆಯ ಮೆಂಬರರಿದ್ದಾರೆ ನೋಡಿ-ಅವರಲ್ಲಿ ಹೆಚ್ಚಿನವರು ವಿದ್ಯಾವಂತರು; ಪದವೀಧರರು; ಸಾರ್ವಜನಿಕ ಕೆಲಸಗಳ ಅನುಭವವುಳ್ಳವರು; ನಿಜವಾಗಿಯೂ ಹೌದಯ್ಯ! ಕಂಡಾಬಟ್ಟೆ ನಾರದನು ಒಂದಿಷ್ಟು ಗಾಂಭೀರ್ಯವನ್ನು ಕಲಿಯೋಣ ಎಂದು ಅಲ್ಲಿ ಹೋದ; ಕಲಿಯಲಿಕ್ಕೆ ಏನೂ ಸಿಕ್ಕದೆ ಕಲಿತುದನ್ನು ಗಟ್ಟಿ ಹಿಡಕೊಂಡು ಹೊರಗೆ ಬರುವಂತಾಗಬೇಕೆ? ನರನಾರಾಯಣ! ನನ್ನ ಗ್ರಹಚಾರ! ಘುಂಯಿ, ಘುಂಯಿ,॥ ಪಾಪಿಯು ಹೋದೆಡೆ ಮೊಣಕಾಲಿನ ಜಲ! ಎಂಬಾ ಗಾದೆಯು ಸುಳ್ಳಲ್ಲ॥ ಘುಂಯಿ, ಘುಂಯಿ, ನರನಾರಾಯಣ!

●

ಅಲ್ಲಿ ಹೋದವನಿಗೊಂದು ಅಂದಾಜಾಯಿತು–ಎರಡು ಪಾರ್ಟಿಗಳಿವೆ, ಎಂದು "ಪಾರ್ಟಿಮಾಡಿಕೊಳ್ಳಲಿ, ನಿನಗೇನು? ಅವರನ್ನು ಕಳುಹಿಸಿದವರು ನಾವಲ್ಲವೇ?" ಎಂದು ತೆರಿಗೆದಾರರು ಸಿಟ್ಟಾಗಬೇಡಿ ಸ್ವಾಮಿಾ! ನೀವು ಅವರನ್ನು ಕಳುಹಿಸಿದ್ದಕ್ಕೆ ಅವರು ನಿಮಗೇನಾದರೂ ಕಳುಹಿಸಿಯಾರೆಂದು ನನಗೆ ಧೈರ್ಯವಿಲ್ಲ! ನಾನು ಯಾಕೆ ಹಾಗೆ ಹೇಳಿದೆ ಗೊತ್ತುಂಟೆ? ಅವರು ನಿಮ್ಮನ್ನೂ ಅವರನ್ನೂ ಮರೆತುಬಿಟ್ಟು ಇದಿರಾಳಿಗಳನ್ನೇ ನೆನೆಯುತ್ತಿದ್ದಾರೆ–ನಿಜವಾಗಿಯೂ ಹೌದು ಮತದಾರರೆ! ನಾರದನ ಚಾಡಿ ಎಂದು ತಾತ್ಸಾರ ಮಾಡಬೇಡಿರಯ್ಯ! ಬಂದು ನೋಡಿ. ಘುಂಯಿ, ॥ನಗರದ ಸಭೆಯಿದು ಕುರುರಣರಂಗವ! ಕಂಡಂತಾದುದು ಕಲಿಯುಗದಿ ॥ ಘುಂಯಿ, ಘುಂಯೀ ನರ ನಾರಾಯಣ! ನರನಾರಾಯಣ!

●

ಮತದಾರರೆ! ನೀವು ಅವರನ್ನು ಕೇಳುವ ಅಧಿಕಾರವುಳ್ಳವರು ರಾಯರೆ! ಆದ್ದರಿಂದ ನಿಮ್ಮಲ್ಲಿ ನನ್ನ ದೂರು-ನೋಡಿ. ಒಂದು ಪಕ್ಷದವರು 'ಇದು ಹಗಲು' ಎಂದರೆ ಇನ್ನೊಂದು ಕಡೆಯವರಿಗೆ 'ಇದು ರಾತ್ರಿ' ಎಂದು ಬಿಡೋಣ ಎಂದೇ ಮನಸ್ಸು. ನನ್ನ ಪುಣ್ಯದಿಂದ ಅಲ್ಲಿ ಯಾವ ಪಾರ್ಟಿಯವರೂ "ಬನ್ನಿ ನಾರದರೇ" ಎಂದು ಹೇಳಲಿಲ್ಲ; ಹಾಗೆ ಹೇಳುತ್ತಿದ್ದರೆ ಒಡನೆಯೇ ಇನ್ನೊಂದು ಪಕ್ಷದವರು "ಹೋಗಿ ನಾರದರೇ!" ಎಂದು ಓಡಿಸಿ ಬಿಡುತ್ತಿದ್ದರು; ಆ ಸಂಭಾವನೆಯುಳ್ಳದಿದ್ದರಿಂದಲೇ ಕಡೆವರೆಗೆ ಕಂಡೆನಯ್ಯಾ, ನರ ನಾರಾಯಣ! ಘುಂಯಿ, ಘುಂಯಿ, ॥ ಮತದಾರರ ಹಿತ ಮಣ್ಣನು ಕೂಡಿತು! ಮೆಂಬರಯೋಧರ ತಾಕಿತದಲೀ ॥ ಘುಂಯಿ, ಘುಂಯಿ, ನರ ನಾರಾಯಣ! ನರ ನಾರಾಯಣ!!

●

ನಾನು ನನ್ನ ಪ್ರಿಯ ಮೆಂಬರರುಗಳನ್ನು ದೂರುತ್ತೇನೆಂದು ತಿಳಿಯಬೇಡಿರಿ. ನನಗೇ ಕಮ್ಮ ಆ ಅಧಿಕ ಪ್ರಸಂಗ? ಆದರಲ್ಲಿ ಅವರ ತಪ್ಪೇನೂ ಇಲ್ಲವೆನ್ನಿ! ನಗರಸಭೆಯು ಹುಟ್ಟಿ ಆರು ತಿಂಗಳು ಆಗಲಿಲ್ಲ; ಆದ್ದರಿಂದ ನಡೆ-ನುಡಿಯಲ್ಲಿ ಬಾಲಲೀಲೆಯೇ ಕಂಡು ಬರುತ್ತದಯ್ಯ. ಅದು ನಿಜ, 'ಆದರೆ ನಿಮ್ಮನ್ನು ಹಾಗೆ ಮಾಡುತ್ತೇವೆ—ಹೀಗೆ ಮಾಡುತ್ತೇವೆ' ಎಂದು ನಗರಸಭೆ ಪ್ರವೇಶಿಸಿದವರಿದ್ದರೆ ಹೇಳಿಬಿಡಿ ಮತದಾರರೇ! "ನಮಗೆ ಮಾಡುವ ಮೊದಲು ನಿಮಗೆ ನೀವೇ ಬೆಳೆಯುವಂತೆ ಮಾಡಿಕೊಳ್ಳಿ" ಎಂದು! ಅಷ್ಟೆ ಘುಂಯಿ, ಘುಂಯಿ, ॥ ಹಿತಕರವಲ್ಲವು ಬಾಲಕರಾಟವು! ಹೋಣೆ ಹೆಗಲಿನೊಳಿರಲು ॥ ಘುಂಯಿ, ಘುಂಯಿ, ನರ ನಾರಾಯಣ! ನರನಾರಾಯಣ!!

—**ನಾರದ.**

JUSTICE PARTY PROPAGANDA.

The Justice Party men in South Kanara shun the light of publicity. A curiously worded notice bearing no signatures calls a meeting at the S. R. S. Home, Mangalore under the cover of darkness and invites the hon. Mr Rajan to address it on the work of his party. The people are left in doubt whether it is a meeting of only party men and their sympathisers or whether it is open to the public. The president of the meeting offers a belated explanation and says that it must be a public meeting since a non-party man like him has been invited to preside over it Barrister Nambiyar who presided at another meeting at the same place a short time ago invited Srimati Kamala Devi to stand as a candidate for the new legislature and assured her the support of himself and all the Bunt boarders representing the different parts of the district. One would like to know whether he made any similar offer to the intending candidates of the Justice Party at the other day's meeting. What an enviable position it is to be free from the shackles of any party and to be able to bestow smiles on all men and give frowns for none!

* * * * *

Did the hon. Mr. Rajan say that the adjournment motion of Mr. A. B. Shetty in the Legislative Council in regard to resettlement in South Kanara was supported by the majority of his partymen? Would the Justice Party leader in this district or any member of the party tell us how many Justicites voted in favour of the motion and what number of them voted against it? If the Justice Ministry and the main wing of their party did not stand by South Kanara in such a matter, with what face can they now ask for our support in the coming election?

* * * * *

Interesting speeches seem to have been made at the dinner given in honour of the Minister at the Minerva Hotel by the friends and sympathisers of the party. Mr. U. Krishna Shetty must have caused great discomfort by indulging in a bit of plain speaking. He appears to have said that they should not mislead the Minister regarding the support for the party in this district, when many of them were fighting shy of calling themselves Justice Party men and there was no proper party organisation or open propaganda on behalf of the party. Mr. Talawar, however, came to the rescue. Two lakhs of Billavas, he assured the Minister, would be behind the party in this district. He spoke with great warmth about the achievement of the local leader, Dewan Bahadur Hegde, in smashing the Congress in the last District Board election and asked why he should not have been knighted for this triumph. Hurrah, Mr. Talawar! Such men as thou are South Kanara's boast. You have done well in taking upon yourself the mantle of leadership from Rao Bahadur Suvarna Your name to be sure will be booked for the —ship.

Searchlight

...ನು ಹೇಳಿದರು. ಆ ವಿಷ ...ತ್ತಿದೆ.

I Write as I Please

by **B. N. K.**

I REGRET that an erroneous statement had crept into these columns last week. It was stated that the Chairman of our Municipality was not the first to be introduced to the Minister of public works when the latter visited the Christian High School to receive the address from the Co-operators of Udipi Taluk. This, I am now informed, is not true Personally I was not present on the occasion, as I was in Madras at that time. The information was given to me at the eleventh hour, when the paper was going to press by a person whose *bona fides* it would have been sinful on my part to question. Obviously he had misread the situation, inasmuch as the Chairman had already been introduced at the entrance to the building. I should feel sincerely sorry if my unintentional mistake has given offence to anybody.

Needless Complaint

I really cannot understand Mr. Vittal Kamath's complaint against me. I had stated in the course of my comments last week that his conduct in presiding over an election meeting organised by a non-Congressman "was liable to be misunderstood by the public". It is not easy to imagine a more innocuous remark than this. It is no good Mr. Kamath saying that he advised the audience to vote for any candidate who would fight against Imperialism and Capitalism. The question before the electorate is either to vote for or against the Congress candidate. And vague utterances like the one made by Mr. Kamath are not calculated to clarify the situation.

Commissioner not wanted

Of course no body wanted a Municipality for Udipi. But now that we have one, I doubt if the Government will agree to the abolition of the post of the Commissioner as recommended by the Municipal Council. The two indeed go together. Sometime ago, the Municipality turned down Dr. Achar's proposal to convert it to a Panchayat Board on the ground that it was most improbable that the Government would agree to such a course of action. I think the same argument holds good against the suggestion for the abolition of the Commissioner's post.

It must not be understood that I am holding any brief for the present Commissioner. While it would be too much to represent him as the villain of the piece in the matter of the creation of the post to which the was subsequently appointed albeit temporarily, it would be true to say that the optimistic picture of our finances depicted by him must have undoubtedly weighed with the Government in issuing the notification creating the post.

Dubious gifts

The Municipality has done the right thing in agreeing to Mr. P. N. Madhava Rao's suggestion regarding the acceptance of petromax lights by it. Private persons and institutions in their desire to boost themselves might present the Minicipality with petromax lights, but it is the rate payers who have to foot the kerosene bill. It is only proper therefore that the donors of gifts should be required to create an endowment if it is their desire that such lights should be located in particular places. Otherwise the Municipality should have the right to install them in such places as it deems fit.

The Canara Mutual.

Although started just a year ago, The Canara Mutual Assurance Company, Ltd, Udipi, has carved a place for itself in the world of Indian insurance. During the period an annua... of Rs. 55,19... Life Fund stands ... 10,151—14 2 after writing off all expenses paid and payable and providing for two claims. These are figures of which any new company might be proud, and are no doubt due to the fact that the management of the company is vested in the hands of an institution with a network of branches throughout South India, namely the Canara Industrial & Banking Syndicate, Ltd., thus obviating the necessity for huge organisation expenses.

ESTD 1906.

CANARA BANK, LIMITED.

OFFICES AT

Alleppey	Chikmagalur	Kasargod
Arsikere	Cochin	Mangalore-Bunder
Badagara	Coondapoor	Mangalore-City
Bangalore City	Davangere	Manjeshwar
Bombay-Fort	Dodballapur	Moolky
Bombay-Mandvi	Ernaculam	Payyannur
Buntwal	Ganguli	Puttur
Calicut	Hubli	Udipi
Cannanore	Karkala	

Total Working Funds Rs. 75,00,000

...ಕಲ್ ಆಫೀಸರರ ಪತ್ನಿಯವರು ಪಾರಿತೋಷಕಗಳನ್ನು ಹಂಚಿದರು.

ಮಂತ್ರಿಗಳು ಸಂದರ್ಶಿಸಿದರು

ಮಾನ... ...ಇದ ಶ್ರೀ ಪಿ. ಟಿ. ರಾಜನ್‌ರ ...ಗೆಳೂರು ಟೇಡಿಸ್ ಕ್ಲಬ್ಬಿಗೆ ಭೆಟ್ಟಿಕೊಟ್ಟು ...ರ್ಯವನ್ನು ನೋಡಿ ಸಂತೋಷ ...ಯರು ವಿದ್ಯಾಯಲ್ಲಿ ...ನೋಡಿ ಸಂ...

ಸ್ಪೈನಿನ ಅಂತಃಕಲಹ

ಮಧ್ಯ ಸಮುದ್ರಕ್ಕೂ ಮೇದ್ರಿದಿಗೂ ಇರುವ ಕೊನೆಯ ರೈಲ್ವೇ ಮಾರ್ಗವನ್ನು ಬಂಡಾಯಗಾರರು ವಶಪಡಿಸಿಕೊಂಡಿರುವರು. ಮೇದ್ರಿದ್ದಿನ ವಿಮಾನ ನಿಲಯದಲ್ಲಿರುವ 2 ವಿಮಾನಗಳನ್ನು ಬಂಡಾಯಗಾರರು ನಾಶಮಾಡಿರುವರೆಂದು ಸುದ್ದಿ ಬಂದಿದೆ. ಇದೇ ತಾ. 26ರಲ್ಲಿ ಬಂಡಾಯಗಾರರು ಮೇದ್ರಿದಿನ ಮೇಲೇರಿ ಹೋಗಲಿರುವರು. ಬೆಗುರ್ಡಿನೋ ಎಂಬಲ್ಲಿ ತಮಗೆ ಅಪಜಯವಾಗಿರುವುದೆಂಬುದನ್ನು ಬಂಡಾಯಗಾರರೇ ಒಪ್ಪಿರುವರು. ನಾವೆಲ್ಮೋರಲ್ ಎಂಬಲ್ಲಿ ಪ್ರಬಲ ಹೋರಾಟ ನಡೆದಿದೆ. ಇಲ್ಲಿ ಪ್ರಥಮವಾಗಿ ಬಂಡಾಯಗಾರರು ಹಿಂದಕ್ಕೆಟ್ಟಲ್ಪಟ್ಟರೂ ಅನಂತರ ಜಯಶೀಲರಾಗಿರುವರೆಂದು ತಿಳಿದುಬರುತ್ತದೆ. ಮೇದ್ರಿದ್ ಪಟ್ಟಣದಲ್ಲಿ ಕಂದಕಗಳನ್ನು ತೋಡಿ, ತಡೆಗಳನ್ನು ಕಟ್ಟುವ ಕೆಲಸವು ಭರದಿಂದ ನಡೆದಿದೆ.

ಚೀನೀ ಗವರ್ನರರ ಕೊಲೆ

ಚೀನದ ಸರ್ವಾಧಿಕಾರಿಯಾಗಿರುವ ಮಾರ್ಶಲ್ ಚಿಯಾಂಗರ ಪ್ರಬಲ ಸಹಾಯಕರೂ, ಹೋಫೇ ಪ್ರಾಂತದ ಗವರ್ನರರೂ ಆದ ಜನರಲ್ ಯಾಂಗರು ಇದೇ ತಾ. 25ರಲ್ಲು ಹೇಂಕೋದಲ್ಲಿ ಚೀನೀಯನೊಬ್ಬನಿಂದ ಕೊಲೆಮಾಡಲ್ಪಟ್ಟಿರುವರು. ಕೊಲೆಗಾರನ ದಸ್ತಗಿರಿಯಾಗಿರುವದು.

ಕರ್ನಾಟಕ ಪ್ರಾಂತ್ಯ

ಕರ್ನಾಟಕ ಏಕೀಕರಣ ಪರಿಷತ್ತಿನ ವಿಶೇಷ ಅಧಿವೇಶನವು ತಾ. ೪-೧೦-೩೭ರಲ್ಲಿ ನಡೆದು ಬರುವ ಚುನಾವಣೆಯಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡುವವರನ್ನೇ ನೇಮಿಸಬೇಕೆಂಬ ಸರ್ವಸಮ್ಮತಿಯ ನಿರ್ಣಯವಾಗಿ, ಈ ಗೊತ್ತುವಳಿಯನ್ನು ಕೇಂದ್ರ ಪಾರ್ಲಿಮೆಂಟರಿ ಬೋರ್ಡುಗಳಿಗೆ ಕಳುಹಿಸಿಕೊಡಬೇಕೆಂದಾಯಿತು. ಏಕೀಕರಣ ಪರಿಷತ್ತಿನ ಪೂರ್ಣಾಧಿವೇಶನವು ನವಂಬರ ತಿಂಗಳಲ್ಲಿ ಬೆಳಗಾವಿಯಲ್ಲಿ ನೆರವೇರಿಸುವುದು, ಸರಕಾರದಿಂದ, ಪರಪ್ರಾಂತೀಯರಿಂದ, ಸಂಘ ಸಂಸ್ಥೆಗಳಿಂದ ಉಂಟಾಗುತ್ತಿರುವ ಧಾಳಿಯ ನಿವಾರಣೆಯನ್ನು ಕಂಡುಹಿಡಿಯಬೇಕಾಗಿದೆ. ಆದುದರಿಂದ ಆ ಕುರಿತು ಮಾಹಿತಿಯನ್ನು ಕನ್ನಡಿಗರು ಒದಗಿಸಿ ಆದಷ್ಟು ಬೇಗನೆ ಕೊಡಬೇಕೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ನಾರದನ ತಂ

ನರನಾರಾಯಣ! ಢುಂಯಿ, ಢ... ಬಂತೈ ಬೀಸುತ ಬೀಸುತ ೦೦ರ ಕರ್ತ ಚುನಾವಣೆ ಸುಳಿಗ್ಗಾಳಿ ಪ್ರತಿನಿಧಿಗಳಿಲ್ಲದ ನರನಾರಾಪ್ರಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ವಿವರಕ್ಕೆ ಬರಿಯಿರಿ.

ಮೆನೇಜರ್—'ನವಯುಗ', ಉಡುಪಿ

ನವಯುಗ

ಉಡುಪಿ, ತಾ ೨೯-೧೦-'೩೬ ಗುರುವಾರ

ದಕ್ಷಿಣ ಕನ್ನಡ ಜಿಲ್ಲೆಯೂ ಜಸ್ಟಿಸ್ ಪಕ್ಷವೂ

ಅಧಿಕಾರದಲ್ಲಿರುವವರ ಬಾಲ ಹಿಡಿದು ಹೋಗುವ ಮನೋವೃತ್ತಿಯು ಸರ್ವ ಸಾಧಾರಣ ಸಾಮಾನ್ಯವಾದುದು. ಒಬ್ಬ ವ್ಯಕ್ತಿ ಅಥವಾ ಪಕ್ಷವು ಎಷ್ಟೊಂದು ಕೆಟ್ಟದು ಕೇಡಾಡ್ಡಿರಲಿ, ಅದಕ್ಕೆ ಅಧಿಕಾರದ ಬಲವಿದ್ದರೆ ಡೊಗ್ಗು ಸಲಾಮು ಹಾಕುವವರು ಬಹಳ. ಎಂದು ಎಂತಹ ಬಲಸಡೆಯಲಿ, ಎಷ್ಟೊಂದು ಗೌರವವನ್ನು ಬೇಕಾದರೂ ಹೊಂದಲಿ; ಕೆಟ್ಟದು ಕೆಟ್ಟದೇ; ಆಸುವರಿಂದ ಅವಕ್ಕೂ ನಮಗೂ ಯಾವ ಸಂಬಂಧವೂ ಇರಬಾರದು; ಯಾವ ರೀತಿಯಲ್ಲಿಯೂ ನಾವವರ ಆಶ್ರಯವಡೆಯಲಾಗದು; ಅದಕ್ಕಾವ ಆಶ್ರಯವನ್ನೂ ಕೊಡ ಬಾರದೆಂಬ ಮನೋನಿರ್ಧಾರ ಮತ್ತು ನೈತಿಕ ಧೈರ್ಯವುಳ್ಳವರು ಬಹಳ ಕಡಿಮೆ. ಆದುದರಿಂದ ಈಗ ಅಧಿಕಾರದಲ್ಲಿರುವ ಜಸ್ಟಿಸ್ ಪಕ್ಷದ ಪರವಾಗಿ ಚುನಾವಣೆಯ ಪ್ರಚಾರಕ್ಕಾಗಿ, ಮಂತ್ರಿತ್ವದ ಸಂದರ್ಶನದ ನಟನೆಯಿಂದ ದಕ್ಷಿಣಕನ್ನಡಕ್ಕೆ ಬಂದಿದ್ದ ಶ್ರೀ. ಪಿ. ಟಿ. ರಾಜನರನ್ನು ಗೌರವಿಸಲು ಕೆಲಮಂದಿ ಹಾತೊರೆದುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ದಕ್ಷಿಣಕನ್ನಡದಲ್ಲಿ ಜಸ್ಟಿಸ್ ಪಕ್ಷಕ್ಕೆ ಎಷ್ಟರ ಪುಟ್ಟಿನ ಬೆಂಬಲವಿದೆ, ಅದರ ದಕ್ಷಿಣ ಕನ್ನಡ ನಾಯಕರೆನಿಸುವವರೇ ಸ್ಪಷ್ಟವಾಗಿ ಅವರ ಹೆಸರಲ್ಲಿ ಕೆಲಸಮಾಡಲು ಅದೆಷ್ಟು ಅಂಜುತ್ತಿದ್ದಾರೆಂಬುದು ಶ್ರೀ ರಾಜನರಿಗೆ ಖಚಿತವಾಗದಿರದು. ಶ್ರೀ. ಪಿ. ಟಿ ರಾಜನರು ತೋರುವಿಕೆಗೆ ಮಾನ್ಯ ಮಂತ್ರಿಗಳಾಗಿ ಜಿಲ್ಲೆಯನ್ನು ಸಂದರ್ಶಿಸಿದರೂ ಅವರಿಗೆ ಸಾರ್ವಜನಿಕವಾದ ಯಾವ ಮನ್ನಣೆಯೂ ದೊರೆಯಲಿಲ್ಲೆಂದು ಹೇಳಬಹುದು. ಕಾಂಗ್ರೆಸನ್ನು ಸವಿಬಡಿದು ದಕ್ಷಿಣಕನ್ನಡದಲ್ಲಿ ಜಸ್ಟಿಸ್ ಪಕ್ಷಕ್ಕೊಂದು ದೊಡ್ಡ ಹೆಸರನ್ನು ತಂದವರೆನಿಪ ದಿವಾನ್ ಬಹದ್ದೂರ ಹೆಗ್ಡೆಯವರು ಪ್ರೆಸಿಡೆಂಟರಾಗಿರುವ ಬೋರ್ಡಿನಲ್ಲಿಯೇ ಜಸ್ಟಿಸ್ ಪಕ್ಷದ ಮಂತ್ರಿಗಳಿಗೆ ಮಾನಪತ್ರ ಎೀಯುವ ಪ್ರಸ್ತಾಪವನ್ನು ಕೂಡಾ ಎತ್ತುವವರಿರಲಿಲ್ಲ. ಮಂಗ್ಳೂರು ಮುನಿಸಿಪಾಲಿಟಿಯವರದರ ಗೋಷ್ಟಿಗೇನೇ ಹೋಗಲಿಲ್ಲ. ಆದಾವ ಕರ್ಮ-ಧರ್ಮ ಸಂಯೋಗದಿಂದ ...ಬೆಯಲ್ಲಿ ಮಾ... ಮಾನಪತ್ರವೀಯುವ ...ದು ಪ್ರಬಲ ಬಹುಪಕ್ಷದಿಂದ ...ದ್ದ ಹೋಗಿ ಗಾಳಿ ಎತ್ತ ಬೀಸುವುದೆಂಬುದನ್ನು ವ್ಯಕ್ತಪಡಿಸಿರುವುದು. ಶ್ರೀ. ಪಿ. ಟಿ. ರಾಜನರು ಮಾನ್ಯ ಮಂತ್ರಿಗಳಾಗಿ ತನ್ನ ಪಕ್ಷದ ಕುರಿತು ಪ್ರಚಾರಮಾಡ ಬಂದಾಗ ಅವರ ಕುರಿತು ದಕ್ಷಿಣ ಕನ್ನಡದಲ್ಲಿ ಇಷ್ಟೊಂದು ಅಸಡ್ಡೆ ಮತ್ತು ಅನಾದರವು ತೋರಿಬಂದಿರ..ವಾಗ ಅವರು ಬರೇ ಶ್ರೀ. ಪಿ. ಟಿ. ರಾಜನರಾಗಿ, ತನ್ನ ಪಕ್ಷವನ್ನು ದಕ್ಷಿಣ ಕನ್ನಡದಲ್ಲಿ ಬಲಗೊಳಿಸಲು ಬಂದಿದ್ದರೆ ಅವರನ್ನಾರು ಗಣಿಸುವವರಿದ್ದರೋ? ಜಿಲ್ಲೆಯಲ್ಲಿ ಕಾಂಗ್ರೆಸಿನ ಬಲವನ್ನೇ ಮುರಿದವರೆನಿಸುವ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಿಗಾದರೂ ಆಗ ಜಸ್ಟಿಸ್ ಪಕ್ಷದ ಕುರಿತು ದಕ್ಷಿಣ ಕನ್ನಡಿಗರ ತಿರಸ್ಕಾರವು ಒಡೆದು ಕಾಣುವಂತಾಗುತ್ತಿತ್ತು.

ತಿರಸ್ಕಾರಕ್ಕೆ ಕಾರಣವೇನು?

ಮೊದಲಾಗಿ ಜಸ್ಟಿಸ್ ಪಕ್ಷವು ಯಾವ ವ್ಯಾಪಕ ಧ್ಯೇಯ ಧೋರಣೆಗಳಿಲ್ಲದ ಸ್ವಪ್ರತಿಷ್ಠಾಕಾಮಿಗಳ, ಅಧಿಕಾರ ಲಾಲಸಿಗಳ ಅದೊಂದು ಪಂಗಡ. ಪ್ರಜಾ ಹಿತಕ್ಕೂ ಸರಕಾರಕ್ಕೂ ಘರ್ಷಣವುಂಟಾಗುವ ಸಂದಿಗ್ಧ ಸಂದರ್ಭಗಳಲ್ಲಿ ಸರಕಾರದ ಬೆನ್ನು ಹಿಡಿದೇ ಹೋಗುವ ಪಕ್ಷ. ಮುಖ್ಯವಾಗಿ ದಕ್ಷಿಣ ಕನ್ನಡದ ಕುರಿತು ತೀರಾ ಅಸಡ್ಡೆ ತೋರಿಸುತ್ತಾ ಯಾವುದ..ದರೊಂದು ಪ್ರಯೋಜನ ಮಾಡದ ಪಕ್ಷ. ದಕ್ಷಿಣಕನ್ನಡ ಜಿಲ್ಲೆಯ ರೈತರಿಗೆ ಅಷ್ಟೊಂದು ಪ್ರಾಮುಖ್ಯವಾದಂತಹ ರಿಸೆಟ್ಲ್ಮೆಂಟಿನಂತಹ ಪ್ರಶ್ನೆಯ ವಿಷಯದಲ್ಲಿಯೂ ಈ ಪಕ್ಷದ ಹಲವರು ಸರಕಾರದ ಕಡೆ ಹಿಡಿದು ಜಿಲ್ಲೆಗೆ ದೊಡ್ಡ ಅನ್ಯಾಯ ಮಾಡಿರುವರು. ಈ ಪಕ್ಷೀಯರು, ದಕ್ಷಿಣಕನ್ನಡ ಜಿಲ್ಲೆಯಲ್ಲಿ ತಮ್ಮ ಜಾತಿಗೆ ಸೇರಿದ, ಅಂಪರೆ ಎಂತಹ ಸಂದರ್ಭದಲ್ಲಿಯೂ ವೈಯಕ್ತಿಕ ಸ್ವಾರ್ಥ ಮತ್ತು ಸ್ವಪ್ರತಿಷ್ಠೆಯನ್ನು ಮುಂದಾಗಿಟ್ಟುಕೊಂಡು ಕೆಲಸಮಾಡುವ ಕೆಲವರ ಸೂತ್ರಚಾಲನೆಯ ಮಾತಿನಮೇರೆಗೆ, ಅವರ ಹೆಸರನ್ನಿಲ್ಲಿ ಮೆರೆಸುವುದಕ್ಕಾಗಿ ಕೆಲವರಿಗೆ ನೌಕರಿ ಹುದ್ದೆಗಳನ್ನಿತ್ತಿರಬಹುದು. ಆದರೆ ನಿಜವಾದ ದಕ್ಷಿಣಕನ್ನಡ ಜಿಲ್ಲೆಯ ಜನಸಾಮಾನ್ಯರ ಹಿತವು ಈ ಜಸ್ಟಿಸ್ ಪಕ್ಷಕ್ಕಾಗಲಿ, ಅವರ ಇಲ್ಲಿಯ ಪ್ರತಿನಿಧಿಗಳೆನಿಸುವವರಿಗಾಗಲಿ ಇರುವುದಿಲ್ಲೆಂದು ಹೇಳಿದರೆ ತಪ್ಪಾಗಲಾರದು. ಇಂತಹ ಪಕ್ಷವೊಂದು ಇನ್ನೂ ಜೀವಿತದಲ್ಲಿರಬೇಕೆ? ಇನ್ನೂ ಅಧಿಕಾರಕ್ಕೆ ಬರಬೇಕೆ? ಹಾಗಾದರೆ ಜನತೆಯ ಹಿತಕ್ಕೇನೇ ಘಾತುಕವಲ್ಲವೇ? ದೇಶದ ಹೆಸರಿಗೇನೇ ಕಳಂಕವಲ್ಲವೇ? ನ್ಯಾಯವಾದ ರಾಷ್ಟ್ರೀಯ ಆಕಾಂಕ್ಷೆಗಳನ್ನು ಕಡೆಗಣಿಸಿ ತಮ್ಮ ಸಂಕುಚಿತ ಸ್ವಾರ್ಥವೇ ಸರ್ವಸ್ವವೆಂದೆಣಿಸಿ ವಿದೇಶಿ ಸರಕಾರಕ್ಕೆ ಸದಾ ಆಶ್ರಯವಾಗಿರುವ ಈ ಜಸ್ಟಿಸ್ ಪಕ್ಷವು ಇನ್ನು ಮುಂದೆ ಉಳಿಯಲಿ ಅಳಿಯಲಿ, ಅದರಿಂದ ಜನಸಾಮಾನ್ಯರ ಮೇಲೇನೂ ಪರಿಣಾಮವಾಗುವ ಹಾಗಿಲ್ಲ.

ದಕ್ಷಿಣ ಕನ್ನಡಿಗರ ಕರ್ತವ್ಯವೇನು?

ಕಳೆದ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಚುನಾವಣೆಯ ಕೊಳತ ಶವವನ್ನು ಇನ್ನೂ ಇನ್ನೂ ಯಾರಾದರೂ ತಬ್ಬಿಕೊಂಡು ಆ ವೈಷಮ್ಯದ ದೃಷ್ಟಿಯನ್ನು ಮುಂದಿನ ಚುನಾವಣೆಗೆ ಬೀರಬಾರದು. ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯು ಕೇವಲ ಜಿಲ್ಲೆಗೆ ಸಂಬಂಧಿಸಿದ ವಿಷಯವಿತ್ತು. ಅದರಲ್ಲಿ ವ್ಯಕ್ತಿ ಜಾತಿಗಳ ಸ್ವಾರ್ಥದಾಟಕ್ಕಾಸ್ಪದ ದೊರೆತಿತ್ತು. ಅದಕ್ಕೂ ಎಸೆಂಬ್ಲಿ ಚುನಾವಣೆಗೂ ಯಾವ ಸಂಬಂಧವೂ ಇರಲಾರದು: ಅದರಲ್ಲಿ ಕಾಂಗ್ರೆಸು ಜಯಶೀಲವಾಗಿರುತ್ತಿದ್ದರೆ ಸ್ವಾರ್ಥಸಿದ್ರೋಹದ ಆಟವು ನಡೆಯದಂತಾಗುತ್ತಿದ್ದರೆ ಇಂದು ದಕ್ಷಿಣ ಕನ್ನಡದಲ್ಲಿ ಜಸ್ಟಿಸ್ ಪಕ್ಷದ ಹೆಸರೆತ್ತುವವರೇ ಇದ್ದಿಲ್ಲ. ಮುಖಂಡರೆನಿಸುವವರು ಕಾಂಗ್ರೆಸಿನ ಹೆಸರಿಗೆ ಅಂದು ತಂದ ಕಳಂಕವನ್ನು ಇಂದು ಜನಸಾಮಾನ್ಯರು ತೊಡೆದು ಹಾಕುವಂತಾ ಬೇಕು. ಯಾಕಂದರೆ ಎಸೆಂಬ್ಲಿ ಚುನಾವಣೆಯು, ಅದೊಂದು ಪ್ರಾಮುಖ್ಯ ರಾಷ್ಟ್ರೀಯ ಪ್ರಶ್ನೆಯಾಗಿ ನಿಂತಿದೆ. ಜನತೆಯ ಮೇಲಿನ ಕರತೆರಿಗೆಗಳ ಹೇರನ್ನು ಮತ್ತಷ್ಟು ಹೆಚ್ಚಿಸುವ, ನೌಕರಿ ಹುದ್ದೆಗಳನ್ನು ಇನ್ನೂ ತಲೆಭಾರವಾಗಿ ಮಾಡುವ, ಆಳರಸರ ಅಧಿಕಾರ ಚಾಲನೆಯನ್ನು ಮತ್ತಷ್ಟು ಭೀಕರಗೊಳಿಸುವ ಹೊಸ ರಾಜ್ಯಾಂಗರಚನೆಯನ್ನು ಮುರಿಯದೀಗ ಗತ್ಯಂತರವಿಲ್ಲವಾಗಿದೆ. ಅದಕ್ಕಾಗಿ ಹೊರಗೆ ಚಳವಳ ನಡಿಸಲು ಅನುಕೂಲ ವಾತಾವರಣವು ಈಗ ಇಲ್ಲದಿರುವುದರಿಂದ ಕಾಂಗ್ರೆಸ್ ಎಸೆಂಬ್ಲಿಯೊಳಗೆ ಪ್ರವೇಶಿಸಿ, ಅದರಿಂದಾಗುವ ಜನಹಿತ ಘಾತವನ್ನು ತಡೆಗಟ್ಟುವ ನಿರ್ಧಾರವಮಾಡಿದೆ. ಆದುದರಿಂದ ಕೇವಲ ಜನಹಿತಕ್ಕಾಗಿಯೇ ಎಸೆಂಬ್ಲಿಗೆ ಹೋಗುವ ಕಾಂಗ್ರೆಸ್ ಪಕ್ಷೀಯರಿಗೆ ಬೆಂಬಲವೀಯುವುದು ತಮ್ಮ ಹಿತದೃಷ್ಟಿಯಿಂದ ಜನತೆಯ ಮುಖ್ಯ ಕರ್ತವ್ಯವಾಗಿರುತ್ತದೆ. ದೇಶವು ಸ್ವಾತಂತ್ರ್ಯ ಪಥದಲ್ಲಿ ಮುಂದುವರಿಯಬೇಕಾದರೆ, ಜನಸಾಮಾನ್ಯರ ಹಿತವು ಗಣನೀಯವಾಗಬೇಕಾದರೆ, ರೈತಜನರ ಈಗಣ ಸಾಂಪತ್ತಿಕ ದುಸ್ಥಿತಿಯೇನಾದರೂ ಸುಧಾರಣೆ ಹೊಂದಬೇಕಾದರೆ ಜನರೆಲ್ಲಾ ಒಮ್ಮತದಿಂದ ಕಾಂಗ್ರೆಸ್ ಪಕ್ಷೀಯರಿಗೇನೇ ಮತವೀಯತಕ್ಕದ್ದು. ದಕ್ಷಿಣಕನ್ನಡಿಗರು ಈ ಕರ್ತವ್ಯ ಬಾಹಿರರಾಗಲಾರರೆಂದು ನಾವು ಭಾವಿಸುತ್ತೇವೆ.

ಉಡುಪಿ

ನವರಾತ್ರಿ ಮಹೋತ್ಸವ:—ಶ್ರೀ ಶಾರದಾ ಸಂಗೀತ ಕಲಾ ಶಾಲೆಯ ಹೆಣ್ಮಕ್ಕಳು ತಾ. ೨೨ರ ನವರಾತ್ರಿ ಮಹೋತ್ಸವದ ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಾವಿತ್ರಿ-ಸತ್ಯವಾನ್ ಎಂಬ ನಾಟಕವನ್ನು ಮನೋಹರವಾಗಿ ಅಭಿನಯಿಸಿದರು. ಕೋಲಾಟ, ಜಡೆ ಆಟ, ಲೇಝಿಂ ಮೊದಲಾದ ಚತುರ ಆಟಗಳನ್ನೂ ಪ್ರದರ್ಶಿಸಿದರು. ಕೆಲವು ಗೃಹಸ್ಥರು ಮೆಡಲುಗಳನ್ನಿತ್ತು ಪ್ರೋತ್ಸಾಹಿಸಿದರು. ಬಾಲಿಕೆಯರ ಕಲಾನೈಪುಣ್ಯವು ಪ್ರೋತ್ಸಾಹಿಸತಕ್ಕದಿತ್ತು. ಉಡುಪಿಯ ಶ್ರೀ ಶಿವಾಜಿ ವ್ಯಾಯಾಮ ಶಾಲೆಯವರು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತಾ. ೨೩ರಲ್ಲಿ ತಮ್ಮ ವ್ಯಾಯಾಮ ಪ್ರದರ್ಶನವನ್ನು ತೋರಿಸಿ ಮನ್ನಣೆಗೆ ಪಾತ್ರರಾದರು; ಮೆಡಲುಗಳೇ ಮೊದಲಾದ ಬಹುಮಾನಗಳು ದೊರೆತುವಲ್ಲದೆ ಶ್ರೀ. ಪಣಿಯಾಡಿಯವರ ೫ ರೂಪಾಯಿ ಸಹಾಯಧನವೂ ಸಿಕ್ಕಿತು. ಈ ಶಾಲೆಯವರು ತಾ. ೨೪ರಲ್ಲಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ತಮ್ಮ ಪ್ರದರ್ಶನಗಳನ್ನು ಯಶಸ್ವಿಯಾಗಿ ನಡೆಸಿದರು. ವಕೀಲ್ ಶ್ರೀ. ಎಮ್. ವಿಟ್ಠಲ್ ಕಾಮತರು ತರುಣರನ್ನು ಶ್ಲಾಘಿಸಿ ಒಂದು ಮೆಡಲು ಬಹುಮಾನವಿತ್ತರು.

ಆಯುಧಪೂಜೆ:—ಶ್ರೀ. ಟಿ. ಸಂಜೀವ ಶೈಗಳ ವ್ಯವಸ್ಥಾಪಕತ್ವದಲ್ಲಿರುವ ಉಡುಪಿ ವ್ಯಾಯಾಮ ಶಾಲೆಯವರು ಇದೇ ತಾ. ೨೪ರಲ್ಲಿ ತಮ್ಮ ಆಯುಧ ಪೂಜೆಯನ್ನು ವಿಜೃಂಭಣೆಯಿಂದ ಜರಗಿಸಿದರು. ಭಜನೆ-ಪೂಜೆಗಳಾದ ಮೇಲೆ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು 'ಆಯುಧದ ಮಹತ್ವ'ವನ್ನು ತಿಳಿಸಿ, ಈ ಶಾಲೆಯವರ ಸ್ತುತ್ಯಸಾಹಸಗಳನ್ನು ಕೊಂಡಾಡಿದರು.

ಭಾಷಣ:—ಪಶ್ಚಿಮ ಕರಾವಳಿಯ ಇಂಡಿಯನ್ ಕ್ರಿಶ್ಚಿಯನ್ ಕೊನ್ಸ್ಟಿಟ್ಯೂಯೆನ್ಸಿಯ ಕೊಂಗ್ರೆಸು ಪರ ಉಮೇದ್ವಾರಿಯಾಗಲಿಚ್ಛಿಸುವ ಮಿ. ಸಿ. ಜಿ. ವಾರ್ಕಿಯವರು ತಾ. ೨೫-೧೦-'೩೬ನೇ ಆದಿತ್ಯವಾರ ಅಜ್ಜರ ಕಾಡಿನಲ್ಲಿ ಡಾ| ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಭಾಷಣವಿತ್ತರು. 'ಜಾತಿ ಮತಗಳೊಳಗೆ ಒಕ್ಕಟ್ಟಿಲ್ಲದೆ ದೇಶದ ಕಲ್ಯಾಣವಾಗದು, ದೇಶದ ಹಿತವನ್ನ ಲಕ್ಷ್ಯದಲ್ಲಿಟ್ಟುಕೊಂಡು ಬಹುಸಂಖ್ಯಾಕರೊಡನೆ ಅನ್ಯೋನ್ಯತೆಯಿಂದಿರುವುದೇ ಅಲ್ಪ ಸಂಖ್ಯಾಕರಾದ ಕ್ರಿಶ್ಚಿಯನ್ನರ ಅಭಿವೃದ್ಧಿಯ ಹಾದಿ-ಎಂದು ವಿವರಿಸಿ ಬೋಧಪ್ರದವಾದ ಭಾಷಣವಿತ್ತರು. ಮಿ. ಜೆರೋಮ್ ಸಾಲ್ದನರು ದೀರ್ಘಕಾಲದಿಂದ ಜನಸೇವೆ ಮಾಡಿ ಶ್ರೀ. ಸತ್ಯಮೂರ್ತಿ ಯವರೇ ಮೊದಲಾದ ಸ್ವೀಕರ ಅಗ್ರಹದ ಮೇರೆಗೆ ಕೊಂಗ್ರೆಸ್ಸಿನ ಪರವಾಗಿ ನಿಲ್ಲಲಿಕ್ಕಿರುವ ಮಿ. ವಾರ್ಕಿಯವರಿಗೆ ಎಲ್ಲರೂ ಮತವೀಯಬೇಕೆಂದು ಕೇಳಿಕೊಂಡರು. ಅಧ್ಯಕ್ಷರ ಭಾಷಣವಾಗಿ ಸಭಾಂತ್ಯವಾಯಿತು.

ವಾರ್ಷಿಕೋತ್ಸವ:—ಉಡುಪಿ ವೈದಿಕ ಧರ್ಮ ವೀರ ಸಂಘದ ಚತುರ್ಥವಾರ್ಷಿಕೋತ್ಸವವು ಇದೇ ತಾ. ೨೫-೧೦-'೩೬ರಲ್ಲಿ ಶ್ರೀ. ಕಟ್ಟೆ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ವ್ಯಾಸಪೂಜೆ, ಭಾಷಣಗಳು, ಭಜನೆ ಇತ್ಯಾದಿ ಕಾರ್ಯಕ್ರಮಗಳೊಡನೆ ನಡೆಯಿತು.

ತಿದ್ದುಪಡಿ ಸೂಚನೆ

ನಮ್ಮ ಕಳೆದ ಸಂಚಿಕೆಯಲ್ಲಿ ಮಾನ್ಯ ಮಂತ್ರಿ ಶ್ರೀ. ಪಿ ಟಿ. ರಾಜನರ ಆಗಮನದ ಸಮಯ ಉಡುಪಿ ಸಹಕಾರ ಸಂಘದವರು ಸ್ಥಳೀಕ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಏರ್ಪಡಿಸಿದ್ದ ಸತ್ಕಾರಕೂಟದಲ್ಲಿ ಪ್ರಥಮ ಸಂಭಾವನೆಯು ಪದ್ಧತಿಯಂತೆ ಉಡುಪಿ ನಗರ ಸಭಾಧ್ಯಕ್ಷರಿಗೆ ದೊರಕಲಿಲ್ಲವೆಂದು ಪ್ರಕಟಿಸಿದ್ದೆವು ನಗರಾಧ್ಯಕ್ಷರನ್ನ ಕೆಳಗಡೆ ಪ್ರವೇಶದ್ವಾರದಲ್ಲಿ ಜಿ. ಬೋರ್ಡು ಅಧ್ಯಕ್ಷರೇ ಪ್ರಥಮತಃ ಪರಿಚಯಮಾಡಿಕೊಟ್ಟದ್ದರಿಂದ ಸಭೆಯಲ್ಲಿ ಇನ್ನೊಮ್ಮೆ ಮಾಡುವ ಅಗತ್ಯವಿರಲಿಲ್ಲವೆಂದು ಶ್ರೀ. ಕೆ ಜಿ. ಬಲ್ಲಾಳರು ನಮಗೆ ತಿಳಿಸುತ್ತಾರೆ. ನಮ್ಮ ವಾರ್ತಾ ವಾಹಕರು ಸಭೆಯ ವಿದ್ಯಮಾನವನ್ನು ವಿವರಿಸಿದ್ದರು; ಆ ಮೊದಲು ನಡೆದಿದ್ದ ಈ ಸಂಗತಿಯನ್ನು ಶ್ರೀ. ಬಲ್ಲಾಳರು ತಿಳಿಸಿದ್ದಕ್ಕಾಗಿ ಸಂತೋಷಿಸುತ್ತೇವೆ.

—ಸಂ. ನ.

ನಗರ ಸಭೆ:—ಉಡುಪಿ ನಗರ ಸಭೆಯ ಎರಡು ಮೀಟಿಂಗುಗಳು ಕಳೆದ ತಾ. 23 ಮತ್ತು 26ರಲ್ಲಿ ಜರಗಿದ್ದವು. ಆ ಕುರಿತು ಬಂದ ಬಾತ್ಮಿಯನ್ನು ಇನ್ನೊಂದೆಡೆ ಕೊಟ್ಟಿದ್ದೇವೆ.

ಶ್ರೀ. ಬಿ. ಎಮ್. ಶಿವರಾಮಯ್ಯನವರು ಪುತ್ತೂರಿನ ದಸರಾ ಮಹೋತ್ಸವಕ್ಕೆ ಬಂದಿದ್ದ ನಂಜನಗೂಡಿನ ಶ್ರೀ. ಶಿವರಾಮಯ್ಯನವರು ಇದೇ ತಾ. ೨೭ರಲ್ಲಿ ಉಡುಪಿಯ ಬೋರ್ಡು ಹೈಸ್ಕೂಲಿನ ಕಂಪೌಂಡಿನಲ್ಲಿ, ವಾತ ಚಲಚಿತ್ರ ಎಂಬ ವಿಷಯವನ್ನೆತ್ತಿ ಮಾಯಾಲಾಂದ್ರದ ಮೂಲಕ ಸ್ವಾರಸ್ಯವುಳ್ಳ ಸುದೀರ್ಘ ಭಾಷಣವಿತ್ತರು. ಪ್ರಥಮತಃ ಶ್ರೀ. ಕೊರಡ್ಕಲ್ಲರು ಭಾಷಣಕಾರರ ಪರಿಚಯವನ್ನು ಮಾಡಿಕೊಟ್ಟರು ಕೊನೆಗೆ ಹೈಸ್ಕೂಲಿನ ಹೆಡ್ಮಾಸ್ತರರಾದ ಮಿ. ಲೋಕಿ ಫೆರ್ನಾಂಡಿಸರು ಭಾಷಣಕರ್ತರಿಗೂ, ಅಭ್ಯಾಗತರಿಗೂ ಧನ್ಯವಾದಗಳನ್ನಿತ್ತರು. ಭಾಷಣಕ್ಕೆ ಸುಮಾರು ಮುನ್ನೂರು ಮಂದಿ ನೆರೆದಿದ್ದರು.

ಉಡುಪಿ ನಗರಸಭೆ

ಉಡುಪಿ ಮುನಿಸಿಪಾಲಿಟಿಯ ಸಾಮಾನ್ಯ ಸಭೆಯು ಇದೇ ೨೩-೧೦-'೩೬ನೇ ಶುಕ್ರವಾರ ಸಂಜೆ 5-15ಕ್ಕೆ ಸರಿಯಾಗಿ ಮುನಿಸಿಪಲ್ ಆಫೀಸಿನಲ್ಲಿ ನೆರೆಯಿತು. ಶ್ರೀ. ಅರೂರು ಲಕ್ಷ್ಮೀನಾರಾಯಣರಾಯರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಸಭಾರಂಭವನ್ನು ಮಾಡಿದರೆಂದಾಡೊಡನೆ ಡಾ| ಪಿ. ಜಿ. ಆಚಾರ್ಯರೆದ್ದು 'ಅಜೆಂಡದಲ್ಲಿ ವ್ಯಾಕರಣದೋಷಗಳಿವೆ; ಬಜೆಟ್ ಕೂಡಾ ಸಕಾಲದಲ್ಲಿ ಕಳ್ಸಲಿಲ್ಲ. ಅದ್ದರಿಂದ ಸಭೆಯ ಕೆಲಸಗಳನ್ನು ಮುಂದುವರಿಸಬೇಕೆಂಬ ಸೂಚನೆ ತಂದರು, ಅಧ್ಯಕ್ಷರೂ ಅದನ್ನು ತವೆಯಾಡದೆ ನಿಯಮ

ವಿರುದ್ಧವೆಂದು ತೆಗೆದುಹಾಕಿದರು ಆ ವೇಳೆ ಸುಮಾರು 107 ಪ್ರಶ್ನೆಗಳು ಕೇಳಲ್ಪಟ್ಟವು; ಅವುಗಳಲ್ಲಿ ಕೆಲವಕ್ಕೆ ಉತ್ತರದೊರೆಯಿತು; ಕೆಲವು ತಳ್ಳಿಹಾಕಲ್ಪಟ್ಟವು; ಕೆಲವು ಯೋಚನೆಮೇಲೆ ನಿಂತವು; ಅಂತೂ ಎಲ್ಲವೂ ಒಂದಲ್ಲೊಂದು ಇತ್ಯರ್ಥ್ಯವನ್ನು ಹೊಂದಿದವು. ತದನಂತರ ಕಮಿಟಗಳ ರಚನೆಯುಗೊಂಡಲ ಕ್ರಮನಿಯಾಮಗಳ (ರೂಲ್ಸ್ ಏಂಡ್ ರೆಗ್ಯುಲೇಶನ್) ಹೇಳಬಹುದು. ಆದರೂ ವ್ಯವಹಾರವೆಲ್ಲ ಹೆಚ್ಚಾಗಿ ಇಂಗ್ಲಿಷಿನಲ್ಲಿಯೇ! ಚರ್ಚೆಯ ರೀತಿಯಲ್ಲಿ ಅಂತಹ ಗಾಂಭೀರ್ಯವೇನೂ ಇಲ್ಲ; ಭಾಷೆಯಲ್ಲಾದರೂ ದ್ ಲು ಬಿಡಬಾರದೆಂದೋ ಏನೋ! ಅರ್ಧವಾಗದ ಕೆಲವರು ಹೇಗೂ ಮೌನವಾಗಿರಬೇಕಲ್ಲ; ಇತರರೆತ್ತಿ ತಪ್ಪಿಡೀತು ತ್ತಾರೆಂದು ಹೊಂಚು ಹಾಕುವವರಿಗೂ ಹೆಚ್ಚಾಗಿ ಮೌನವೇಬೇಕು ಮಿಕ್ಕ ಕೆಲವರು ಯಾವ ... ಮಾಡಲು ಯತ್ನಿಸಬೇಕೆಂದು ಹೇಳಿದರು ಆ ವಿಷಯದಲ್ಲಿ ಆಲೋಚನೆಯು ನಡೆಯುತ್ತಿದೆ.

ಮಹಾರಾಜರ ಉದಾರ ದಾನ.

ಪ್ರಜಾಪಕ್ಷದ ಪ್ರಚಾರ ಕಾರ್ಯಕ್ಕೆಂದು ಬಂದಿದ್ದ ಪೀಠಾಪುರದ ಮಹಾರಾಜರು ಮಹಿಳಾ ಸೇವಾ ಶ್ರಮಕ್ಕೆ ರೂ. ೧೦೦ನ್ನು ಮೊಗವೀರರ ಜ್ಞಾನೋ ... ... ಶೇಖದ ಚಳವಳ

ಕಲ್ ಆಫೀಸರರ ಪತ್ನಿಯವರು ಪಾರಿತೋಷಕಗಳನ್ನು ಹಂಚಿದರು

ಮಂತ್ರಿಗಳು ಸಂದರ್ಶಿಸಿದರು

ಮ್ಯಾನ ... ಿಂದ ಶ್ರೀ ಪಿ ಟಿ. ರಾಜನ್‌ರವು ಮಂಗಳೂರು ಲೇಡಿಸ್ ಕ್ಲಬ್ಬಿಗೆ ಭೆಟ್ಟಿಕೊಟ್ಟು ಅಲ್ಲಿನ ಪುಸ್ತಕ ಭಂಡಾರವನ್ನು ನೋಡಿ ಸಂತೋಷಪಟ್ಟ... ಮಂಗಳೂರಿನ ಸ್ತ್ರೀಯರು ವಿದ್ಯೆಯಲ್ಲಿ ಮುಂದರಿದಿರುವರೆಂಬುದನ್ನು ನೋಡಿ ಸಂ ಕ್ಲಬ್ಬಿನವರ ಚಟುವಟಿಕೆಗಳನ್ನು ... ಉತ್ತರೋತ್ತರ ಅಭಿವೃದ್ಧಿಯನ್ನು

ನವಯುಗ ತುಳು ಸಂಚಿಕೆ

ಸಂಪುಟ ೧	ತುಲಾ (ಬೊಂತೆಲ್) ೧೪ ಗುರುವಾರ	ಸಂಚಿಕೆ ೨

ಕುಂಜಾರಗಿರಿ

೧

ತುಳುನಾಡ್‌ದ ಸಿರಿ
ಕಲಶದ ಪೊರುಲು
ಕವಿ ಕಣ್ಣರೆತಿಪ
ಕೈಮ್ಮೆ ಮುರುಲು !
    ತುಳುವಪ್ಪೆನ ತರೆ
    ಸೂಡಿಪ ಉರುಲು
    ಆ ಕುಂಜಾರಗಿರಿ
    ಆ-ಹಾ ಕುಂಜಾರಗಿರಿ !

೨

ಕರ್ತವ ಕೈಕಲ
ಸದ ನಿಜರೂಪು
ತೂಪವರೀ ಗಿರಿ
ಯೊಂಜೇ ವಾಪು !
    ಕಣ್ಣ್‌ಡ್ ತೂವಡ
    ತಿಗಲೆಡ್ ತೂಲ
    ತಕತಕ ನಲಿಪುಂಡು
    ಪೊರುಲುದ ಮೇಲ !
ಕಲ್ಲ್‌ದ ಮಣ್ಣ್‌ದ
ಮೂಪೆನ ಪಣ್‌ಲ
ಅವು ಪೊರುಲುದ ತುಪ್ಪ್ !
ಅವು ಸೇಲೆದ ಅಪ್ಪ್ !

೩

ಅಪ್ಪೆನ ತಿಗಲೆದ
ಬೊಳುವುದ ಬತ್ತಿ !
    ಪರ ಊರುದ ಕಾ
    ಣಿಕ್ ಕೊನು ಬತ್ತಿ
    ಪಂಥ ಪರಾಕ್ರಮ
    ಧೈರ್ಯದ ರಾಸಿ !
ಸಿರಿನಾಡ್‌ದ ಮನ
ಸ್ಪೈಸ್ರುದ ಕಾಸಿ !
ತುಳು ಕಂಡೊಡು ಭಂ-
ಗಾರದ ಕೊರಲ್ !
    ನಮ ಪೂತೋಟೊಡು
    ಗಮ ಗಮ ಪರಲ್ !
    ನೆಲತರೆ ದೆರ್ತ್‌ದ್
    ಬುಲೆದಿನ ತಿರ್‌ಳ್ !
ಲೋಕೊನು ಬೆಳಗುತಿರಿ !
ಆ ಕುಂಜಾರಗಿರಿ !

M. V. HEGDE.

... ಹೈಸ್ಕೂಲಿನಲ್ಲಿ ದಸರಾ

...ರು ಗಣಪತಿ ಹೈಸ್ಕೂಲಿನಲ್ಲಿ ದಸರಾ ...ವು ಯಶಸ್ವಿಯಾಗಿ ಮುಕ್ತಾಯವಾಯಿ ... ದಿನ ಸಾಯಂಕಾಲ ಜಿಲ್ಲಾ ಮೆಡಿಕಲ್ ... ದರ್ ಸದಾಶಿವರಾಯರ ಅಧ್ಯಕ್ಷತೆ ...ಾದಿ ಪ್ರದರ್ಶನಗಳು ಜರಗಿ ವಿದ್ಯಾರ್ಥಿ ...ತೋಷಕಗಳು ಹಂಚಲ್ಪಟ್ಟವು

...ಿ ಮೆಡಿಕಲ್ ಕೌನ್ಸಿಲ್

...ಡಿಕಲ್ ಕೌನ್ಸಿಲಿನ ಜನರಲ್ ಮೀಟಿಂ... ೨೬ರಲ್ಲಿ ವೆನ್ಲಾಕ್ ಆಸ್ಪತ್ರೆಯ ವರಾ... ...ತು

...ಸರಾ ಮಹೋತ್ಸವ

...ಗಳಾದೇವಿ ದೇವಸ್ಥಾನದಲ್ಲಿ ಜರಗುವ ...ತವು ನಿನ್ನೆಯದಿನ ಬಹಳ ವಿಜೃಂಭಣೆ ...ತು. ಜನ ಸಂದಣಿಯು ಬಹಳ ವಿಶೇಷ

...ಜ್ಞಾನಿಕ ಉಪನ್ಯಾಸ

... ದಸರಾ ಮಹೋತ್ಸವಕ್ಕೆ ಚಿತ್ರೈಸಿದ್ದ ...ನಿಕ ಉಪನ್ಯಾಸ ಪ್ರಚಾರಕರಾದ ಶ್ರೀ ...ಯಂ. ಶಿವರಾಮಯ್ಯನವರು ಮಿತ್ರ ...ಅಶ್ರಯದಲ್ಲಿ ನಿನ್ನೆಯ ದಿನ (ಕಾ...) ಸ್ಕೂಲ್ ಭುವನೇಂದ್ರ ಸಭಾಸದನದಲ್ಲಿ ...ಟ, ಕೊಡಿಟ್ಟ ಮಾತು" ಎಂಬ ವಿಷ...ಣಮಾಡಿದರು ಇವರು ಕಠಿಣ ತರದ ... ಸುಲಭ ಭಾಷೆಯಲ್ಲಿ ಅಪರಲ್ಲೂ ...ವರಿಸಿದರು. ವಿಷಯವನ್ನು ಮತ್ತಷ್ಟು ...ಳಿಸಲು ನಾಯಾಲಾಂಥ್ರವನ್ನು ಉಪ... ಗ್ರಾಮಫೋನು, ಟೆಲಿಫೋನು, ಚಲ...ಡುವ ಚಿತ್ರ ಇವುಗಳ ತತ್ವವನ್ನು ಸರಿ...ಗೆ ತಿಳಿಯುವಂತೆ ಮಾಡಿದರು. ಕನ್ನಡ ...ಷೆ ವಿಜ್ಞಾನವಿಷ್ಟವನ್ನು ತಿಳಿಯುವುದು ...ಬುವನ್ನು ಶ್ರೀ ಶಿವರಾಮಯ್ಯನವರು ...ದರು.

...ನಿವಾಸಸ್ಥರಗಳವರು ತಮ್ಮ ಅಧ್ಯಕ್ಷ... ಶ್ರೀ ಶಿವರಾಮಯ್ಯನವರು ಕೈಕೆಂಡ ... ಪ್ರಶಂಸಿದ್ದಲ್ಲದೆ ಅಂತಹ ಉಪ... ಜನರಿಗೆ ಇಂಗ್ಲೀಷ್ ತಿಳಿಯದ ಜನ...ರು ಪ್ರಯೋಜನವಾಗಬಹುದೆಂಬುದ...

...ಗಳು
ಎಲ್ಲಾ ತರದ ಬೇಂಕ್ ವಹಿವಾಟುಗಳು ನಡೆಸಲ್ಪಡುವವು
ಯಾವಾಗಲೂ ಸಿಗುವವು.
ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ.
ದಿ ಉಡುಪಿ ಬೇಂಕ್ ಲಿಮಿಟೆಡ್
ಉಡುಪಿ

ಕತ್ತಲೆಡ್ ತುಳುನಾಡ್

(ಚರಿತ್ರಾಧಾರೊಳಿ ಮಿತ್ತ್‌ಡ್ಸ್ ಅಂದಾಜಿ, ಕ್ರಿ. ಪು. 500.)

ಬರೆತಿನಾರ್: ಸತ್ಯಮಿತ್ರ ಬಂಗೇರಿ.

ಐಗುಪ್ತದ ಚರಿತ್ರೆಡ್ ತುಳುನಾಡ್.

ಹೆರೊಡೋಟಸ್ (ಕ್ರಿ. ಪು. 484-425) ಇನ್ಪಿ ಚರಿತ್ರೆಗಾರೆ ತನಕಾಲೊಡ್ದ್ ಪೂರ್ವೊಡು ಐಗುಪ್ತ್ಯೆರ್ ನಂಬೋಣ್ದಿತ್ತಿ ದೇವೆರ್ಕುಳೆ ಪಂಡ್‌ದ್ ಆಕುಳು ಈ ಆಕಾರ ಇತ್ತಿ ಬೇನ್ನೂ ಆತ್ತಾಡ ರಾ. ಇನ್ಪಿ ಪಕ್ಕಿನ್ ದೇವೆರ್‌ಂದ್‌ದ್ ಪೂಜೆ ಮಳ್ತೊಣ್ದಿತ್ತೆರ್‌ಂದ್‌ದ್ ಬರೆಪೆ. ಮಾತ್ರತ್ತಂದೆ, ಆ ಪಕ್ಕಿದೇವೆರೆ ವಿಷಯೊಡು ಐಗುಪ್ತ್ಯೆರೆಡಿತ್ತಿ ಪುರಾಣಕಥೆನ್ ಬರವುಯಿತ್ತಿ ಆ ದೇವೆರೆ ಪೂಜಾರಿಳೆಡ್ದ್ ಪಿಂದ್‌ದ್ ಬರೆತೆ. ಅವುದಾನೆಂದ್‌ಂಡ:—

ಈ ಪಕ್ಕಿ ಹಿಂದುಸ್ಥಾನೊಡ್ದ್ ಬತ್ತಿನವು. ಫೊಯೆನಿಕ್ಸ್ (Phoenix) ಅಂದ್‌ದ್ ಪುಟ್ಟುಬಾಸೆಡ್ ಪಣ್ಪುಂಡು. ಅವು ಆಕಾಶೊಡೇ ೫೦೦ ವರ್ಷ ಮುಟ್ಟ ರಾವೊಣ್ದಿತ್ತ್‌ದ್ ಐಡ್ದ್ ಬೊಕ್ಕ ತನ ರೆಂಕೆಳೆನ್ ಬುಡ್ಪಾದ್ ಸುಗಂಧದ್ರವ್ಯೊಳೆಡಪ್ಪ ಬತ್ತ್‌ದ್ ಹೆಲಿಯೋಪೊಲೀಸ್ ದೇವಸ್ಥಾನದ ಉಳಯಿ ಪೊಗ್ಗುಂಡು. ಅವು ಸೈತ್‌ಂಡ ಅವೆನ್ ಬಲಿಪೀಠದ ಮಿತ್ತ್ ಸುಡೊಡು; ಮನದಾನಿ ಐತಕಿನ್ನಿಗ್ ತುಯಿ ಪುಟ್ಟುದು, ಮೂಜೆ ನಾನಿ ಬಲತ್‌ದ್ ಮಲ್ಲ ಫೊಯೆನಿಕ್ಸ್ ಆದ್, ದೇವಸ್ಥಾನದ ಅರ್ಚಕಗ್ ನಮಸ್ಕಾರ ಮಳ್ತ್‌ದ್ ರಾವುದ್ ಪೋಪುಂಡು. ಅವು ಬಂಗಾರ್, ನೀಲ, ಬಾಕಿಬಣ್ಣ ದಿಂಜಿದುಪ್ಪು. ವಿವರ್ಣ ಬಣ್ಣದ ಪಕ್ಕಿ, ಐಕ್ ತರೆತ ಮಿತ್ತ್ ಕೊಟ್ಟು ಉಂಡು. ಸುರೂತ ಫೊಯಿನಿಕ್ಸ್ ಆಡೆಗ್ ಏಪ ಬತ್ತ್‌ಂಡ್ ಆನ್ಪಿನೈತ ವಿಷಯೊಡು ಪಾಕ ಮಂದ್, ಆನಿಗ್ ೫೦೦ ವರ್ಸೊಡು ದುಂಬು ಬತ್ತ್‌ಂಡ್ ಉಪ್ಪೆರ್, ಸಾಕಮಂದ್ ೧೪೬೧, ನನ ಪಾಕಮಂದ್ ೭೦೦೬ ವರ್ಸೊಳೆಗ್ ದುಂಬು ಬೈದ್‌ಂಡ್‌ಂದ್‌ದ್‌ಲಾ ಪಣ್ಪೆರ್ ಅಂದ್‌ದ್ ಬರೆಪೆ.

ನೆತ್ತ ವಿಷಯೊಡು ಪ್ಲೀನಿ (ಕ್ರಿ. ಶ. 20-70) ಬರೆತಿ ಚರಿತ್ರೆಲಾ ಹೆರಡೋಟಸ್ ನೆಕ್ ಸಮಬೂರುಂಡು. ಬೊಕ್ಕ ಫೊಯಿನಿಕ್ಸ್ ಇನ್ಪಿ ಶಬ್ದೊಗು ಐಗುಪ್ತ್ಯೆರೆಡ್‌ಲಾ ಗ್ರೀಕೆರೆಡ್‌ಲಾ ಖರ್ಜೂರದ ಮರೊಕುಳೆ ಪಾಡಿ ಇನ್ಪಿ ಅರ್ಥ ಉಂಡುಂದುದ್ ಪ್ಲೀನಿ ಬರೆತೆ.

ಟೇಸಿಟಸ್ ಚರಿತ್ರೆಗಾರೆ (ಕ್ರಿ. ಶ. ೫೪-೧೧೦) ಐಗುಪ್ತ್ಯೆರೆಡ್ದ್ ಕೇಂಡ್‌ದ್ ಅವು ಸುರೂಟು ಸೆಸೋಸ್ತ್ರಿಸ್ ಇನ್ಪಿ ಒತ್ತಿ ಐಗುಪ್ತುದ ರಾಣಿ ಕಾಲೆಲೊಡು, ಬೊಕ್ಕೊರ ಅಮಾಸಿ II ಕಾಲೊಡು, ನನೊರ ಪ್ತೊಲೆಮಿ III ಕಾಲೊಡು ಬತ್ತ್‌ಂಡ್ ಅಂದ್‌ದೆ ಬರೆತೆ ಮಾತ್ರತ್ತಂದ್, ಕಡೇಕ್ ಒರ ಕ್ರಿ. ಶ. ೩೭ಟ್ ಬತ್ತ್‌ಂಡ್‌ಂದ್ ಪಣ್ಪಿ ಫೊಯಿನಿಕ್ಸ್ ಬೊಕ್ಕ ರೋಮಾಯೆರ್ ಕ್ರಿ. ಶ. ೪೭ಟ್ ತನುಕುಳೆ ಗೊಬ್ಬುಳೆಡ್ ಪ್ರದರ್ಶನ ಮಳ್ತೊಂದಿತ್ತಿ ಫೊಯಿನಿಕ್ಸ್‌ಳು ನಿಜತವತ್ತ್, ಠಕಾರಿ ಫೊಯಿನಿಕ್ಸ್‌ಳಂದ್‌ದ್ ಐಗುಪ್ತ್ಯೆರ್ ಪಣ್ಪೆರ್ ಉಂದ್‌ದ್‌ಲಾ ಬರೆಪೆ.

ಈ ಪಕ್ಕಿದ ವಿಷಯೊಡು A. Wiedman ಇನ್ಪಿ ಗ್ರಂಥಕಾರೆ ಪ್ರಾಚೀನ ಐಗುಪ್ತ್ಯ ಗ್ರಂಥಳೆನ್ ಸೋದಿದ್‌ತೂದು ಈ ಪಕ್ಕಿದೇವೆರೆ ಮಿತ್ತ್ ಕಟ್ಟ್‌ದ್ ಪಣ್ತಿ ಸ್ತುತಿಳು ಮಾತಾ ಸೂರ್ಯಗ್ ಸಲ್ಲುನವಾಮಳ್ಳ; ಅಂಚಾಯಿನೆಡ್ದ್ ಅವು ಸರ್ವಸಾಮಾನ್ಯದ ಒಂಜಿ ಪಕ್ಕಿಯೇ ಆತ್ತ್, ಸೂರ್ಯನೇ ಕವಿ ಅಲಂಕಾರೊಡು ಪಕ್ಕಿ ಅಂದ್‌ದ್ ಪಣ್ತಿನವಾದುಪ್ಪೊಡು ಅಂದ್‌ದ್ ಅನುಮಾನ ಮಳ್ಪುವೆ.

ಯುಸೇಬಿಯಸ್ (ಕ್ರಿ. ಶ. 264-340) ಇನ್ಪಿ ಕ್ರೈಸ್ತ ಸಭಾಚರಿತ್ರ ಲೇಖಕೆ ಬೈಬಲ್‌ಡ್ ಎಜೆಕಿಯೇಲ್ xvii, 3-9ಡು, ಯೆಹೂದ್ಯೆರ್ ನಂಬು ದೇವೆರೆಗ್‌ಂದ್‌ದ್ ಪಣ್ಪಿಪಾತೆರ ಈ ಫೊಯಿನಿಕ್ಸ್ ಪಕ್ಕಿಗ್ ತಾಗುನವಂದ್‌ದೇ ನಿರ್ಣಯಮಳ್ಪುವೆ.

ಕ್ರಿ. ಪು. ೩೦೦ಟ್ ಹಿಬ್ರು ಬೈಬಲ್‌ನ್ ಗ್ರೀಕ್‌ಗ್ ಭಾಷಾಂತರ ಮಳ್ದಿ ಆ ಸೆಪ್ತುವಗಿಂತದ ಯೆಹೂದಿ ಪಂಡಿತೆರೆಗ್ ಯೇಬ್ ಪುಸ್ತಕದ xxix, ೧೨ಟ್ ಹಿಬ್ರುಡು 'ಚೋಲ್' (ಕರ್ನಾಟೊಡು 'ಮರಳು' ಉಂದ್‌ದ್ ಬಾಷಾಂತರ ಆತ್‌ಂಡ್) ಉಂದ್‌ದುಪ್ಪು ಶಬ್ದೊಗು ಫೊಯಿನಿಕ್ಸ್ ಪಕ್ಕಿ ಇನ್ಪಿ ಅರ್ಥ ಇತ್ತ್‌ಂಡ್. ಮಾತ್ರತ್ತ್ಂಡ್, ಆ ಪಕ್ಕಿ ದಕ್ಷಿಣ ಹಿಂದೂಸ್ಥಾನದ ಚೋಳಮಂಡಲ ರಾಜ್ಯಡ್ದ್ ಬರ್ಸಿನವಾಯಿನೆಡ್ದ್ ಐಕ್ ಹಿಬ್ರುಡು ಚೋಲ್ ಉಂದ್‌ದ್ ಪುದರ್ ಹಿರಿಯರೆ ಕಾರಣ ಆಂಡ್ ಉಂದ್‌ದ್ ಹಿಬ್ರು ಪಂಡಿತೆರ್ ಪಣ್ಪೆರ್. (vide E. B.)

ಈ ಮಾತ ಆಧಾರೊಳೆನ್ ಮಾಂಡ Wiedman ಅನುಮಾನ ಮಳ್ಪುಲೆಕ್ಕ ಅವು ಸೂರ್ಯೆ ಅತ್ತ್ ಸರ್ವ ಸಾಮಾನ್ಯ ಒಂಜಿ ಪಕ್ಕಿಯೇ ಆದ್‌ಪ್ಪೊಡು. ಐಗುಪ್ತ್ಯೆರೆಗ್ ಸೂರ್ಯೆಲಾ ಆ ಪಕ್ಕಿದಲೆಕ್ಕನೆ ಆರಾಧ್ಯದೇವೆ ಒಂಜೇಲೆಕ್ಕನೆ ಉಪ್ಪೊಲಿ. ಆಂಡ ಆ ಫೊಯಿನಿಕ್ಸ್ ಪಕ್ಕಿ ನಮ ತುಳುನಾಡ್‌ಡ್‌ದುಂಬು ತಿಕ್ಕೊಣ್ದಿತ್ತಿ ಮೈರ್‌ಪಕ್ಕಿಯೇ ಆದುಪ್ಪೊಡು ಉಂದ್‌ದ್‌ಲಾ ಫೊಯಿನಿಕ್ಸ್ ಇನ್ಪಿ ಶಬ್ದ ನಮ ತುಳುಭಾಷೆದ ತದ್ಭವ ಶಬ್ದ ಆದುಪ್ಪೊಡು ಉಂದ್‌ದ್ ಯಾನ್ ಅಂದಾಜಿ ಮಳ್ಪುವೆ. ದಾಯೆ ಗ್‌ಂದ್‌ಂಡ್ ಮೈರ್ (ಮಯೂರ) ಪಕ್ಕಿಗ್ ಆ ಪ್ರಾಕ್ ತುಳುಟು ಬನಪಕ್ಕಿ ಅತ್ತ್‌ಡ, ಬಾನಪಕ್ಕಿ ಆಂದ್‌ಂದ್ ಪುದರ್ ಪಂಡ್‌ದುಪ್ಪೊಡು ಇನ್ಪಿನೆಕ್ ಸಂಶಯದಾಲಾ ಇಜ್ಜಿ. ಬನ ಆಂದ್‌ಂಡ ಔಳು ಖರ್ಜೂರ ಮರೊಕುಳೆಪಾಡಿ ಎಂಚನಾ ಅಂಚೆನೆ ಮೂಳು ನಿಜಾದಾಲಾ ಮುರೊಕುಳು ಗುಂಪಾದಿತ್ತಿನೆಕೇ ಪಣ್ಪುಂಡು. ಅಂಚಿತ್ತಿ ಬನತ ತಂಪುಡೇ ಮೈರುಳು ಬೈಯುವ ಉಂದ್‌ಂದ್ ನಂಕ್ ಗೊಂತುಂಡುವೆ. ಬೊಕ್ಕ ಹೆರೊಡೋಟಸ್ ಪಣ್ಪಿಲೆಕ್ಕನೆ ಐಕ್ ತರತರದ ಬಣ್ಣಲಾ ತರೆತ ಮಿತ್ತ್ ಕೊಟ್ಟುಲಾ ಉಂಡು. ಅವ್ವತ್ತ್ಂಡ್ ಆ ಪಕ್ಕಿ ಸರಸ್ವತೀ-ವಾಹನ ಅಂದ್‌ದ್ ಹಿಂದೂಸ್ಥಾನೊಡು ಇನಿಕ್ಲಾ ಪೂಜ್ಯಬಾವೊಡೆ ತೂಪಿನವಾದುಂಡು. ಅಂಚಾಯಿನೆಡ್ದ್ ಬನಪಕ್ಕಿ ಉಂದ್‌ದಿತ್ತಿ ತುಳು ಶಬ್ದನೇ ಐಗುಪ್ತ್ಯದ ಬಾಷೆಡ್ ಫೊಯಿನಿಕ್ಸ್ ಅಂದ್‌ದ್ ತದ್ಭವ ಆಂಡ್‌ಂದ್‌ದ್‌ಲಾ ಹಿಂದುಳೆ ಸರಸ್ವತಿ ಇನ್ಪಿ ಪುದರೇ ಐಗುಪ್ತ್ಯೆರೆಸೆಸೋಸ್ಟ್ರಿಸ್ ಆಂದ್ ಉಂದ್‌ದ್‌ಲಾ ಯಾನ್ ಸಂಶಯದಾಂತೆ ನಂಬುವೆ.

ಕ್ರಿ. ಪು. ೩ನೇ ಸಹಸ್ರಮಾನದ ಆದಿದ್ದಿಂಚಿ ತುಳುಕರಾವಳಿಗ್‌ಲಾ ಐಗುಪ್ತೊಗುಲಾ ವ್ಯಾಪಾರ ವಹಿವಾಟ ಇತ್ತ್‌ಂಡ್‌ಂದ್‌ದ್ ತೋಜುಂಡು. ಭವಿಷ್ಯ ಪುರಾಣೊಡು ಕಣ್ವಋಷಿ ಮಿಶ್ರದೇಶಗು (ಐಗುಪ್ತಗು ಮಿಶ್ರದೇಶ ಉಂದ್‌ದ್‌ಲಾ ಪಿಂಚ್ರಾಯಿಂ ಅಂದ್‌ದ್‌ಲಾ ಪುದರುಂಡು) ಪೋದು ಔಳು ಬ್ರಾಹ್ಮಣ ಮತೊನು ಪ್ರಚಾರ ಮಳ್ದಿ ಅಂದ್‌ದ್ ಉಂಡು. ಐಗುಪ್ತ್ಯೆರೆಡ್ ಬ್ರಾಹ್ಮಣಮತತ ಶಿಷ್ಟ ಸಂಪ್ರದಾಯೊಳು ಇತ್ತಿನೆತ ಏತೋ ದೃಷ್ಟಾಂತೊಳು ಉಳ್ಳ. (ಅವೆನ್ ಮೂಳು ಬರೆಪುಜಿ) ಅಂಚಾನೆಡ್ದ್ ಹಿಂದೂಸ್ಥಾನೊಡ್ದ್ ಐಗುಪ್ತಗು ಪೋಯಿ ಆರ್ಯೆರ್ ಆಕುಳೆಗ್ ಆರ್ಯಮತೊನು ಕಲ್ಪದ್, ಅಳ್ತ ಒರ್ತಿ ರಾಣಿಗ್ ಸರಸ್ವತಿ ಇನ್ಪಿ ಪುದರ್ ದೀಯೆರಂದ್‌ದ್ ನಮ ಎಣ್ಣ್‌ಂಡ ಆ ಸೆಸೊಸ್ಟ್ರಿಸ್ ರಾಣಿ ಸರಸ್ವತಿ ಇನ್ಪಿ ಹಿಂದುಪುದರ್‌ದಾಳ್ ಅಂದ್‌ದ್ ತೆರಿಯೊಣೊಲಿ. ಶ್ರೀಕೃಷ್ಣನ ಪುಳ್ಳಿ ಅನಿರುದ್ಧೆ ಇನ್ಪಿನಾಯೆ ಮಿಶ್ರದೇಶದಾಳಾಯಿ ಉಷೆ ಇನ್ಪಿನಾಳೆನ್ ಮದ್‌ಮೆ ಆತೆ ಅಂದ್‌ದ್‌ಲಾ ಉಂಡು. ಮಾತ್ರತ್ತ್ಂಡ್ ಸರಸ್ವತಿ ಹಿಂದುಳೆಗ್ ಎಂಚ ವಿದ್ಯದೇವತೆನಾ ಅಂಚೆನೆ ಐಗುಪ್ತ್ಯೆರೆ ಚಿತ್ರಾಕ್ಷರಮಾಲೆಡ್ ಆ ಪಕ್ಕಿದ ರೂಪ ಆದುಪ್ಪು. ರಾ. ಅಕ್ಷರನೇ ದುಂಬುದವುಲಾ ಸುರುತವುಲಾ ಆದಿತ್ತ್‌ದ್ ನಮ 'ಶ್ರೀ' ಇನ್ಪಿ ಲೆಕ್ಕ ಇತ್ತ್‌ಂಡ್. ಐಗುಪ್ತ್ಯೆರೆ ಚಿತ್ರಾಕ್ಷರಮಾಲೆಡ್‌ದುಂಬತ್ತದ ರಾ. ಅಕ್ಷರನೇ ಗ್ರೀಕ್ ಅಕ್ಷರಮಾಲೆಡ್ A ಅಲ್ಫಾ ಅಂದ್‌ದ್ ರಡ್ದ್ ಕಾಲ್ ಇತ್ತಿ ಅಕ್ಷರ ಆದ್ ಇತ್‌ದ್ ಮಾತಾ ಯುರೋಪಿಯನ್ ಬಾಷೆದ ಅಕ್ಷರಮಾಲೆಳೆ ಆದಿ ಅಕ್ಷರ ಆಂಡ್ ಉಪ್ಪೆರ್. ಈ ಪಕ್ಕಿಯೇ ಅರಬಿ ಜನೊಕುಳೆ ಕಟ್ಟ್‌ಕಥೆಟ್ 'ರಾಕ್' ಇನ್ಪಿ ನೆಲಮುಟ್ಟಂದಿ ಪಕ್ಕಿ ಆದುಪ್ಪುನವು.

ತುಳು ವ್ಯಾಕರಣ

ಬಿಲೆ: ೦ ೮ ೦

ತುಳುವೆರೆ ಕರ್ತವ್ಯ

ಲೇಖಕೆರ್:—ಮುದ್ರಾಡಿ ಜನಾರ್ದನಾಚಾರ್ಯ, ಶಿರೋಮಣಿ.
ಸಂಪಾದಕೆರ್: ಶ್ರೀಕೃಷ್ಣ ಸಂದೇಶ, ಉಡುಪಿ.

'ಯನ ಅಪ್ಪೆ, ಯನ ರಾಮಣಿ, ಯನ ಮಗೆ, ಯನ
ಇಲ್ಲ್, ಯನ ಊರು, ಯನ ದೇಶ' ಅನ್ಪಿ ಸಾಜಾಯಿಂಚಿತ್ತಿ
ಅಭಿಮಾನನ್ಪಿಣೊ ಮನುಷ್ಯೆ ಮಾತ್ರ ಆನಾಯಗ್ ಉಂಡು.
ಪ್ರಾಣಿ ಮಾತ್ರಂತ ಹೃದಯೊಂಟು ದೇವೆರ್ 'ಪ್ರೇಮ'ಅನ್ಪಿಣೊ
ಒಂಜಿ (ಬಳ್ಳ್) ಪಾಶನಿ ಇಜೆಡ್ದೇ. ಆವು ಒರ್ಯರ್ತ್ಲ್ಯಾರ್ಯ
ಗ್ ಉಪಕಾರ ಆನಗ ಆ ಪ್ರೇಮಪಾಶೊಂಕೈಡ್ ಗಂಟ್ ಬೂ
ಣ್ಪುಣು. ಈ ಸಂಸಾರೊಂಟು ಅಪ್ಪೆ, ಮಗೆ, ರಾಮಣಿ
ಕೋಕ್ಕೈ ಒಳೆಯಿ ಒರ್ಯರ್ತ್ಲ್ಯಾರ್ಯಗ್ ಉಪಕಾರೊಂಕ್ಪ್ಯ ಯೋ
ಚಿತ್‌ಂಡ ಈತೆ ಅಂತ್ ಪಣ್ಬರೆ ತೀರಾನ್. ಐತಾವರ ಆಕ್ಳೆ
ಪ್ರೇಮೊಂಕೈಡ್ ಬುಡುಪ್ರೋವರ ಬದಾಂತಿ ಸಾವಿರಾಜಿ ಗಂಟುಳು
ಕೂಳುತು ಒರ್ಯನೊರಿ ಬುಡುತುಪ್ಪೆರೆಗೇ ಬಲ್ಲಿ; ಬುಜೋ
ಬುಡುತಿತ್ಂಡಲಾ ಒರ್ಯನೊರಿ ಎಣ್ಲೊಂತೇ ಉಪ್ಪಿಲಕ ಆ
ಪ್ರೇಣು. ಐತಾವರನೇ ಸಂಸ್ಕೃತೊಂಟು 'ಪ್ರೇಮಬದ್ಧಮಿದಂ ಜಗತ್'
ಅನ್ಪಿ ಪಾತೆರ ಪುಟ್ಟುದ್ನ್. ಸಾಜಾಯಿಂಚಿತ್ತಿ ಪ್ರೇಮ ದಾಂತಿ
ಮನುಷ್ಯ ಹೃದಯ ಪೊಯ್ಯೆದ ಗುಡ್ಡೆನೇ ಸೈ. ಆವೆನಿ ಪರಿಮಳ
ದಾಂತಿ ಪೂ, ರಸ ದಾಂತಿ ಪಂದ್ರ್, ಚಂದ್ರೆ ದಾಂತಿ ಬಾಣ,
ನೀರ್ ದಾಂತಿ ತುದೆ ಅಂತ್‌ಲಾ ಪಣೊಳಿ. ಅಂಚಿನಾಯ
ಟ್ಟ್ಯಗು ಯೇಲರ್ ಕೂಡಯೆರ್. ಅಜ್ಞಾನತ್ತಾವರ ಮನು
ಷ್ಯಡ ಮದ-ಮತ್ಸರೊಂಕ್ಪ್ಯ ಹೆಚ್ಚಾತ್ ಪ್ರೇಮನ್ಪಿಣೊವೇ
ಕೂತ್ತುದಾಂತಿ ನರಮಾನಿಲು ಉಪ್ಪೆರೆ ಪಾಪು. ಅಂಡಲಾ 'ಯನ
ಬುಡ್ದು' ಅನ್ಪಿ ಪ್ರೇಮ ದಾಂತಿನಾಯೆ ಸಿಕ್ಕಯೆ. ಮೂಳು
ಶಾಸ್ತ್ರ ಕಲ್ತ್ನಾಕುಳು ಕೇಂಬೆರ್ 'ಯನ ರಾಮಣಿ ಯನ
ಬುಡ್ದು' ಅನ್ಪಿ ಪ್ರೇಮ ಯೋಗಿಳೆಗ್ ಇದ್ದಿ. ಆಕುಳು ಸಂಸಾ
ರೊಂತ ಬುಡುತ್ತೆರಾತ? ಆಕ್ಳುಲಾ ಪ್ರೇಮದಾಂತಿನಾಕ್ಳು;
ಒಂಜೋ ಮತ್ಸರ ಇತ್ನಾಕ್ಳು ಅನ್ಪರಾ!' ಅಂದ್‌ತ್, ಅಯ್ಯೊ!
ಇಂಚ ಎಂಕೈ ಬಾಯಿಡ್ ಬರುವ? ಇಂಚಿ ಕೇಣ್ಣೊ. ಮನುಷ್ಯೆ
ಪ್ರೇಮಂತ ಮೂರ್ತಿಯಾತುಳ್ಳೆ. ಅಂಡ ಪಾಕ ಜನೊಂಕೈಡ್
ದ್ವೇಷತ್ತಾವರ ಸೋಜಿ ಬರ್ಪುರಿ. ಮನುಷ್ಯನ ಪ್ರೇಮ ಎರಡ್
ರ. ಒಂಜಿ ಸಂಸಾರಂತ ರಾಮಣಿ ಬಾಲೆರ್ ಇಲ್ಲ್-ಬಡ್
ಡ್ ಉಪ್ಪುಣೊ. ಅಂಡ ಆ ವಿಷಯೊಂಕ್ಪ್ಯ ಮಂತ ಮೂಜಿ
ನಂತ ಬಾಳ್ಪಿಗ್ ಆನೆತ್ತಾವರ ಐಕ್ಳೆಡ ಇತ್ತಿ ಪ್ರೇಮ ಶಾಶ್ವತ
ತ್. ಸೈನಕ ಒಂಜಲಾ ಪಿರಪತ್ತ್ ಬರ್ಪುರಿ. ಕುಂದೆನಿ
ಮಂತ ತೆರಿತ್ ಯೋಗಿಳು ದೇವೆರೆನೇ ಪ್ರೀತಿಪುವೆರ್. ಪರ
ಮಾತ್ಮಗ್ ಪುಟ್ಟ್ಯ ಇದ್ದಿ. ಸಾವಿದ್ದಿ. ನಮ ಅಂತ್‌ದಿ ಪಾಪ
ಮಂತ ಜೆಕ್ಕ್‌ಕಳೆತ್ ಏಪಲಾ ಕಡೆಯಾವಂತಿ ಸಂತೋಷನಿ
ಕೊಳ್ಪಿ ಮಾನ್ಯೆಮೆ. ಆಯೆ ಪ್ರೇಮಂತ ಸಮುದ್ರನೇ ಆವೊಂ
ತುಳ್ಳೆ. ಯೋಗಿಳು ತನ್ಕುಳೆ ಪ್ರೇಮನ್ಪಿ ತುದೆನಿ ಕೊಂಡೋತು
ಪರಮಾತ್ಮನ ಪ್ರೇಮಂತ ಸಮುದ್ರೊಂಕು ಕೂಡೋವೆರ್.
ಆತಾವಂತೆ ಆವೆನಿ ರಾಮಣಿ ಬಾಲೆರ್ನ್ಪಿ ಕಿನ್ನಿಕಿನ್ನಿ ಪ್ರೇಮಂತ
ಕೆದು ಉಗ್ಗೆಲುಳೆಗ್ ಕೂಡೋವಯೆರ್. ಬೋಡಾಂಡ ಬೇಶಂತ
ದೆಂಬುಗ್ ಉಳುಂಗುವಿ ಕೆದುಕ್ಳೆಲಕ್ಕ ಉಳುಂಗತ್ತಿಲಕ ಪನಿಪನಿ
ಪ್ರೇಮ ಅಂಪೆರ್. ಆತಾವಂತೆ ಐಕುಳೇ ತನ್ಕುಳೆಗ್ ಎಲ್ಲೆದ
ಆಧಾರ ಅಂತ್ ಪಂಡ್‌ದ್ ನಂಬಯೆರ್. ಐತಾವರ ಮಾಂತೆರೆ
ಗಿತ್ತಿಲಕ ಆಕ್ಳೆಗ್ ಸಂಸಾರೊಂಟು ಪ್ರೇಮ ಇದ್ಯಂತ್ನೆತಾವರ
ಸಂಸಾರ ಬುಡುತ್ನಾಕುಳು ಅಂದ್‌ತ್ ಪಣೊಳಿ. ಆಕುಳು ದೇವ
ರೆನೇ ಪ್ರೀತಿಪುವರಾನೆತ್ತಾವರ ಆಕ್ಳೆನಿ ಪ್ರೇಮಂತ ಮೂರ್ತಿಳು
ಅಂದ್‌ತೇ ತೆರಿಯೋಳಿ. ಇಂಚಾತ್ ಲೋಕೊಂಟು ಮಂತೇ[illegible]
ಒಂಜಾತ್‌ಡ ಒಂಜಿ ತರೊಂಟು ಪ್ರೇಮಂತ ಪರಿಚಯ ಇತ್ನ
ಕುಳೇ ಅಂತ್ ಪಣೊಳಿ.

ಅಂಚಂಡ ಮಾಂತೆರ್ಲ ಸಂಸಾರೊಂಟು ಅಭಿಮಾನ ಬು
ಡುತು ಯೋಗಿಳೇ ಆವೊಳಿದೆ. ಅಸ್ಸ್‌ಂಡ ಆವರೆ ಆವೊಳಿ,
ಅಂಡ ಅವು ಸಾಧ್ಯ ಸೋಜಂತ್ನೆತ್ತಾವರನೇ ಮನುಷ್ಯೆ ಸುರುಟು
ಸಂಸಾರನಿ ಪಸ್‌ತ್ ಕ್ರಮೊಂಟು ಯೋಗಿಯಾವೊಡು. ಐತ್
ಬೆತ್ತೋ ವೈರಾಗ್ಯ ಪುಟ್ಟ್ಯಂಡಪ್ಪೊಲ್ಲ. ಆ ವೈರಾಗ್ಯ ಬರಮುಟ್ಟ
ಇಲ್ಲ್ ಬಾಕಿಲ್ ರಾಮಣಿ ಅಂತೊಂತು ಶಾಸ್ತ್ರೊಂಟು ಪಂಡಿ
ಆಚಾರ ಅಂತೊಂತು ಬತ್ನಾಯಗೊಂಜಿ ಚೊಂಬು ನೀರ್ ಕೊಳು
ತು ಉಪ್ಪುಣೊ ಲೋಕಂತ ರೀತಿ. ಐತಾವರ ಎಂಕುಳು ಸುರುಟು
ಪಂಡಿಲಕ ಐಟ್ಟೈಟ್ ಸಾಜಾಯಿಂಚಿತ್ತಿ ಅಭಿಮಾನ ಮಾಂತೆರ್ಲ
ಇಜ್ಯರೆಗಿತ್ತ್ನೊ. ಆನಪ್ಪ ನಿಂಕುಳು ಜಾನೆ ಪಣ್ಯರೆ ಪಿದಾಡ್
ದರ್? ಇತೆ ಕೇಣ್ಣೊ—ಮನುಷ್ಯೆ ಒರಿಯೇ ಆತುಪ್ಪರೆ ಸಾಧ್ಯಇದ್ದಿ.
ಐತಾವರ ಆಯೆ ಏನ್ ಓಳು ಪುಟ್ಯೊ, ಓಳು ಬೋಳೆತೆ. ಏರೇ
ರೆತ್ತ್ ಜಾನೆ ಜಾನೆ ಉಪಕಾರ ಅಂಪ್ರೋವೊಂಡ್, ಅನ್ಪಿಣೆನಿ
ಮಾಂತ ಯೋಚಿತ್‌ತ್ ಔಳಾಳು ಮಂತ ಪ್ರೇಮಾಭಿಮಾನ
ಇಜಿತ್ ಸುದಾರಿತೊಂತು ಪೋವೆರೆತಕ್ಕ ಇತ್ನೊ ಅಂದ್‌ತ್ ಇತೆ.

ಅಂಚ ಅಂತ್‌ಂಡ ತನ್ಕ್ ಶ್ರೇಯಸ್ಸ್‌ಲಾ ಬಂಧುಳೆಗ್ ಹಿತಲಾ ಕುಲೊಂಕು ಕೀರ್ತಿಲಾ ದೇಶೊಂಕು ಎಡ್ಡೆಲಾ ಆವುಂತ್‌ಲಾ ಪಂಬೊ.

ಮನುಷ್ಯಗ್ ಅಪ್ಪಡ ಪ್ರೇಮ ದಾಂತೆ ಇದ್ದಿ. ಅಪ್ಪೆನೇ ದೇವೆರ್. ಕಷ್ಟ ಬನ್ನಗ ಮನುಷ್ಯೆ 'ಅಪ್ಪಾ' ಅಂದ್‌ತ್ ಕೂಗುವೆ ತಾನ್ ಪುಣೊಂಕು ಸಮಾತಿತ್ತಿ ಕಿನ್ನಿ ಕಾಲೊಂಟು ಬೋತ್ರಿ ಅನ್‌ಂಡಲಾ ಪೊಳ್ತು ಪೊಳ್ತುಗು ಪೇರುಂಪು ಕೊಳ್ತು ಈತ್ ಮಲ್ಲೆ ಅಂತ್‌ದಿ ಪ್ರೇಮಂತ ದೇವತೆ ಪಣ್‌ಂಡ ಅವು 'ಅಪ್ಪೆ'. ಮನುಷ್ಯೆ ಈ ಜನ್ಮೊಂಟೇ ಸುರುಟು ಪಾತೆರ್ನ 'ಅಪ್ಪೆ' ಇನ್ನಿ ಯರಡಕ್ಷರ. ಎಲ್ಯಾಯೆ, ನೇಲ್ಯಾಯೆ, ಬಡವೆ, ಮಲ್ಲಾಯೆ, ಬ್ರಾಹ್ಮಣೆ, ಶೂದ್ರೆ, ದಡ್ಡೆ, ಪಂಡಿತೆ, ಭೋಗಿ, ಜೋಗಿ ಇನ್ನಿ ಬೇದದಾಂತೆ ಮಾಂತೆರ್ಲ ಅಪ್ಪಗ್ ತರೆ ಬಗ್ಗೊವೊಡೆ. ಐತಾವ ರನೇ 'ಅಪ್ಪತ್ತ್ ಮಿತ್ತ್ ಬಂಧು ಇದ್ದಿ, ಉಪ್ಪುತ್ತು ಮಿತ್ತ್ ರುಚಿ ಇದ್ದಿ' ಇನ್ನಿ ಗಾದೆ ವೇದೊಂಕು ಸರಿಯೆನೊಳಿ. ಅಪ್ಪೆ ಅಂತ್‌ದಿ ಉಪಕಾರೊಂಕು ನಮ ಮೆಯಿತ ಚರ್ಮನಿ ಪರಿತ್‌ತ್ ಮುಟ್ಟಂತ್‌ತ್ ಆಳೆಗ್ ಕೊಳುಂಡಲಾ ಪಾಪಸ್. ಉಂಡು ಅಪ್ಪನ ವೈಮೆ. ಉಂದೆನಿ ಮಾಂತ ಜೇಪಣ್ಯರ ಬತ್ತೆ? ಒಯ್ಯೊರಿ ಮನುಷ್ಯೆಲಾ ಅಪ್ಪನಿ ಎಂಚ ತೆರಿಪೆನಾ ಅಂಚನೇ ತಾನ್ ಪುಟ್ಟುದಿ ಊರುನುಲಾ ತೆರಿಯೊಣೊಡುಂತು ಪಣ್ಯರಗೇ.

'ಯನ ಊರು' ಅನ್‌ಂಡ ಏರೆಗ್‌ಲಾ ಒಂಜಿ ವಿಶ್ವಾಸ ಆಪುಣು. ಮನುಷ್ಯೆ ಓಲು ಆಸತ್ ಒತ್ತ್‌ಂಡಲಾ ಸೈಪುಂಡಲಾ 'ಯನ ಊರುಗು ಪೋತ್ ಬೂಳೊಡು'ನ್‌ಪೆ. ಪರವೂರುಗ್ ಪೋ ಪುಣೆತ್ತ್ ಊರುಡು ಗಂಜಿ ಆಂಡಲಾ ಚಿಂತೆ ಇದ್ದಿ ಪನ್ಪೊಂತು ಕುಳ್ಳುಗ ಅನ್ಪೆ, ಜೇಗ್? ಆ ಊರುದೊ ಋಣ (ರುಣ) ಉಂಡು. ಈ ಜನ್ಮೊಂಟು ಆಯೆ ಸುರುಟು ತಿಂದ್ ಪತ್ರ್ನ ಆ ಊರುದೊ ಉಂಪು ನೀರ್. ಸೂರ್ಯೆ, ಚಂದ್ರೆ ತಾರಕೆಳೆನಿ ಸುರುಟು ಸೂತ್ನ ಆ ಊರುದ ಕಡೆದಾಂತಿ ನೀಲ ಬಾಣೊಂಟು. ಮರ ಮಟ್ಟ್, ಗುಡ್ಡೆಬೈಲ್, ತುದೆತೋಡುಳೆ ಪರಿಚಯು ಸುರುಟು ಆ ಊರುಡೇ ಆತ್ನ. ಜೊಲ್ಲೆ ಸೂರಿತೊಂತು ದೊಗ್ಗಲ್ ಪಾಡೊಂತು ಪರಪ್ನಗ ಮೆಯಿಕ್ ಮಾಂತ ಬೂಳಾನೆನಿ ಸೂತು ಅಪ್ಪೆ 'ಅಯ್ಯೊ ಎನ ಬಾಲೆದ ಪೊರ್ಲ್' ಅಂತ್ ಪಾರ್ ಬತ್ತ್‌ತ್ ತಟೊಂತು ಮುದ್ದು ಕೊರ್ತ್ನ. ಓಲು? ನೆನೆಪುಂಡ, ಅವ್ವೇ ಪುಟುದಿ ಊರು ಅಪ್ಪೆ, ಅಮ್ಮೆ, ಮೊಗ್ಯೆ, ಪಳಯೆ, ಬಂದು, ಬಾಂವವೆ, ಪೊದ್ದೆ, ಇಷ್ಟನೇ ಮಾಂತ ನಂಕ್ ಬೋಡಾಯಿ ಜನೊಂಕುಳು ಓಳಿತ್ತೆರ್. ಅವ್ವೇ ಪುಟುದಿ ಊರು. ನಮ ಅಪ್ಪೆ ಯಾ ದೇಶೊಂಟು ನಮನಿ ಪೆದ್ಯಳ್ ಅವ್ವೇ ನಮ ಊರು. ಐಕ್ 'ಮಾತೃಭೂಮಿ' ಒಂಜೋ 'ಜನ್ಮಭೂಮಿ' ಅನ್ಪೆರ್, ಈತ್ನಾಟ್ ಪಂಡಿಲಕ್ಕ ಜನ್ಮಭೂಮಿನ್ಪುಣೊ ಅಪ್ಪಲಕ್ಕನೇ ಮಾಂತೆರೆಗ್ಲಾ ಮಾಮಲ್ಲೆ. ಐತಾವರನೇ 'जननी जन्मभूमिश्च स्वर्गादपि गरीयसी' ಅನ್‌ಂಡ ಪೆದ್ತಿ ಅಪ್ಪೆಲಾ ಪುಟುದಿ ಊರುಲಾ ಸ್ವರ್ಗೊಂತ್ಲಾ ಮಲ್ಲ್' ಅಂದ್‌ತ್ ತೆರಿನಾಕ್ಲ್ ಪಣ್ಪೆರ್.

ಆನೆತ್ತಾವರ ಮನುಷ್ಯೆ ತನ ಪುಟುದಿ ಊರುದ ರುಣ ತೀರ್ಯರಗಾತ್ ಯಾವೊಂಜಿ ಎಡ್ಡೆ ಕೆಲಸನಿ ಅಂತ್‌ತ್ ಮಾಂತೆರೆಗ್‌ಲಾ ಹಿತ ಅಂತ್‌ತ್ ತನ್ಕ್‌ಲಾ ಕುಲೊಂಕ್ಲಾ ಊರುಗ್ಲಾ ಕೀರ್ತಿಕೊಂಡರೊಡು. ಊರುಗು ಸುಬಿಕ್ಷಾಪಿ ಯಾವೊಂಜಿ ಕೆಲಸನಿ ಆಂಡಲಾ ಅಂತೊಂತುಲಾ ಅಂಪುಣಾಕ್ಲೆಗ್ ಸಹಾಯು ಸಿಲಾ ಯೇರಾಯೆ ಅಂತೊಂತುಳ್ಳೆನಾ ಆಯೆನೇ ದೇಶಾಭಿಮಾನಿ. ಆಯಗ್ ಇತ್ ಬೆತ್ತ್‌ಗ್‌ಲಾ ಎಡ್ಡೆ ಆವು.

ನಾವು ತುಳುವೆರ್, ಪಡ್ಡೆ ಸಮುದ್ರಂತ ಒತ್ತುಗ್ ನಮೊ ಒಂಜಿ ಕಿನ್ನಿ ದೇಶ. ಅವ್ವೇ ನಂಕ್ ಮಾತೃಭೂಮಿಯಾವೊಂತಿತ್ತಿ 'ತುಳುನಾಡ್'. ನಮ ಜನಲಾ ದೇಶಂತ ಬೇತೆ ಜನೊಂಕ್ಲೆತ್ತ್ ಕಡಮೆ. ಆಂಡಲಾ ಚಿಂತೆ ಇದ್ದಿ. ಎಡ್ಡ್ ಪಡಿಕೆ ಅನ್ಪುಣೊ ಕಿನ್ನಿ ಮಲ್ಲೆನಾವಡ್ ಲೆಕ್ಕಪಕ್ಕನಾವಡ್ ಪನೊಂತಿದ್ದಿ. ಕೇದಗಡ್ ಕಿನ್ನಿರೆಕೇ ಪರಿಮಳ, ಕಡಮೆ ಆತಿತ್ತಿ ಪಾಂಡವೆಗೇ. ದೈವಸಾಯ ಅಂತ್ ಏರೆಗ್ ಗೊತ್ತಿದ್ದಿ! ಕಿನ್ನಿ ಊರಾಂಡಲಾ ನಮ್ಮೊ ಪರಶುರಾಮ ದೇವರೆ ಸೃಷ್ಟಿ. ರಾಮಭೋಜೆನೇ ಮಾಂತ ಅರಸುಳ್ಳಾಕ್ಲ್ ಆಳ್‌ದ್ನೊ. ನಮ ತುಳುವೆರೆಡ್ ದುಂಬುಡು ಏತ್‌ಜನ ಪಂಡಿತೆಕ್ಲ್ ಪುಟುತು ನಮ ದೇಶೊಂಕು ಕೀರ್ತಿ ಕೊಂಡತ್ರ್ಯರ್! ಆನೆತ್ತಾವರ ನಮುಲಾ ಜಾಲ ಎಡ್ಡೆ ಕೆಲಸ ಅಂತ್‌ತ್ ಶ್ರೇಯಸ್ಸ್ ಪಡೆತೊಣೊಡು. ಜೇಗಾವನ್? ಒಯ್ಯೊರಿ ತುಳುವೆಲಾ ಇಂಚ ತೆರಿಯೊಣುಡು. ಎಂಚ? 'ಏರೇಲೆಗ್ ಎಂಚೆಂಚ ಏನ್ ಎಡ್ಡ್ ಅಂಪಿಗೆ. ಪೋತು ವಣ್ಪುಣೆಟ್, ಸುತ್ತು ಪತ್ತುಣೆಟ್, ಉಣ್ತು ತಿನ್ಪುಣೆಟ್, ವಿದ್ಯಾ ಬುದ್ದಿಡ್, ಬರಸರೊಂಟು, ಕತೆಕವಿತೆಡ್ ಏನ್ ಎಂಚ ಎಡ್ಡೆ ಆವೆ. ನನೊರ್ಯನಿ ಎಂಚ ಎಡ್ಡೆ ಅಂಪಿಗೆ. ಇಲ್ಲ್ ಬಾಕಿಲ್ ಪೊರ್ಲಿಜೊಂತು ಮೈಕೈ ನಿರ್ಮಲ ಅಂತೊಂತು ಗುರುಹಿರಿಯೆರೆಗ್ ಮರ್ಯಾದಿ ಕೊರೊಂತು ಹೋಮನೇಮ ನಡಪುಡೊಂತು ಬದ್‌ಕ್‌ಬಾಗ್ಯ ಜೋಕೆ ಅಂತೊಂತು ಬಡಬಗ್ಗರೆಗ್ ಸಾಯ ಅಂತೊಂತು ದೈವದೇವೆರೆಗ್ ನಡತೊಂತು ಇತ್ತ್ ಬೆತ್ತ್‌ಗ್ ಶ್ರೇಯಸ್ಸಾಪಿಲೆಕ ಎಲ್ಲೆದಾಗ ಉಪ್ಪೆರೆಗ್ ಏನ್ ಇನಿ ಜಾನೆ ಅಂಪೊಡು. ಯನ ಅಮ್ಮೆ, ಅಜ್ಜೆ ಮಾಂತ ಎಂಚ ಇತ್ತೆರ್ ಅಂತ್ ಏಪಲಾ ಯೋಚಿಪೊಡು. ಜಂಜ ಜೇಪಣಿಕೆ

नक्तंदिनानि मे यान्ति कथंभूतस्य सम्प्रति ।
दुःखभाङ् न भवत्येवं नित्यं सन्निहितस्मृतिः ॥ वाग्भट ॥

ಅನ್ನ್‌ಂಡ 'ಪಗೆಲ್ ಮುಪ್ಪ ರಾತ್ರಿ ಮುಪ್ಪ ಗಳಿಗೆ ಯನ ಆಯುಷ್ಯ ಜಾನೆ ಜಾನೆ ಎಡ್ಡೆ-ಪಡಿಕೆ ಕೆಲಸ ಅಂತ್ರ್‌ಪೋನು

ಅಂತ್ ಏಪಲಾ ನೆನೆಪುಣಾಯೆ ದುಃಖಿಯೇ ಆವಯೆ' ಅಂತ್ ವಾಗ್ಭಟಪಂಡಿತೆ ಪಂಡಿಲಕ ಉಪ್ಪೊಡು.

> येन केन प्रकारेण यस्य कस्यापि देहिनः ।
> संतोषं जनयेत्प्राज्ञस्तदेवेश्वरपूजनम् ॥

ಅನ್ಂಡ 'ಯುವ್ವೊಂಜಿ ತರೊಂಟಾಂಡಲಾ ಯುವ್ವೊಂಜಿ ಪ್ರಾಣಿಗೇ ಆವಡ್ ಸಂತೋಷ ಆಪಿಲಕನೇ ತೆರಿನಾಯೆ ಅಂಪೊಡು. ಅವ್ವೇ ದೇವೆರೆ ಸಂತೋಷ'—ಈ ರೀತಿಡ್ ನರಮಾನಿ ಉಪ್ಪೆರ ತಕ್ಕ ಇತ್ತೊ.

ಕಾಲಗತಿಟ್ ನವನಾಗರಿಕತೆಗ್ ಭರತಖಂಡನೇ ದಾಸೆ ಆವೊಂತುಪ್ಪುನಗ ತುಳುವೆರೆನಾಂಡಲಾ ಅವು ಬುಡುವಾ! ನಮ ಇತೆ ಪರದೇಶಂತಾಕ್ಲೆಲಕ ಋಣ್ಪ್ರತಿನ್ಸೆರೆ ಪತ್ತ್‌ಪ್ಪೊದೆಪೆರೆ ಕಲ್ತೊ ಆತಾವಂತೆ ಆಕ್ಲೆಲಕ ಕಾರ್ಯದಕ್ಷತೆ ಧೈರ್ಯ ಸಾಹಸೊಂತ್ಲೆನಿ ಕಲ್ಪ್ನದ್ಯೊ ಬೋಡಾಸೊ ಬುಡ್ಯೊ ಬೋತ್ರ್ಯವಂತ್ನೊ ಪತ್ಯೊ. ಅಂಚಾತ್ ಓ! ತುಳುವೆರೇ! ಪನಿ ಈ ಪಾತೆರನಿ ಕೇಣ್ಲೆ. ಕೇಂಡ್‌ತ್ ನಿಂಕ್ಲೆ ಮನಸ್ಸ್‌ಗೆ ಬುತ್ನದ್ಯಡ ಆ ಕೆಬಿಟ್ ಬುಡ್ಲೆ—ಯುನ್ನೊ ಅಂಕೆ ಇದ್ದಿ. ಆಂಡ ಪನಿ ಯೋಚನೆ ಅಂತ್‌ತ್ ಬುಡ್ಲೆ. ಪರದೇಶಂತ ಕ್ರಮ ಮಂತ ಬುಡ್ಲೆ—ನಮ ಕ್ರಮನೇ ನಂಕ್ ಎಡ್ಡೆ—ಆಯಿಟ್ಲಾ ತುಳುನಾಡ್‌ಡ್ ಜಿಂಜ ಕಣ್ಣುಜಿಲೆ—ತುಳುಬರ, ತುಳುಬಾಷೆ ತುಳು ಕೈಗಾರಿಕೆಳೆನಿ ಮಂತ ಎದ್ರ್ ಕೊಂಡಲ್ಲೆ. ನಮ ಸಂಸಾರ ಕಾಲಿಕ್ಷೇಪೊಂತು ನಿಕ್ಕ್‌ದಿ ಪಣೊವು ಕಾಸ್ ನಮ ಒಟ್ಟುಗು ಜಾಲ ಬರನ್— ಆವೆನಿ ತುಳುವೆರೆ ಹಿತೊಂಕಾತ್ ಸರಿಯಂತಾಡರ್ಾ ನಿಂಕ್ಲೆಗ್ ಇತೆ ಬೆತ್ತ್‌ಗ್ ಎಡ್ಡೆ ಉಂಡು. ಬೇತೆ ಬೇತೆ ಊರುದಾಕುಳು ಪೌಳಾಳ್ತ ಸಂಗತಿಳೆಡ್ ಎಂಚ ಕಣ್ಣುಜಿತೆರ್ ಪಿಂಬರಾ! ಜಿಂಜ ಜೇಪಣಿಕೆ—ಮಂತೆಟ್ಲಾ ನಿಂಕ್ಲು ಈ ಪೊಸಕಾಲಂತ ಬಣ್ಣೊಂಕು ಮರ್ಲಾವಂತೆ ದುಂಬುದ ಆಚಾರೊಂಕ್ಲೆನೇ ಅಂತೊಂತು ಊರುದೊವೇ ಮಾಲುಳೆನಿ ಏಪಲಾ ಗೆತೊಂತು ನಿಂಕ್ಲೆ ಬಾರ್ಲೆಗ್ ಊರುದೊವೇ ವೇದಶಾಸ್ತ್ರ ವಿದ್ಯಾಬುದ್ಧಿಳೆನಿ ಕಲ್ಪೋವೊಂತು ಇತ್ತ್ಂಡ ನಂಕ್ ಮಾಂತ ಸುಭಿಕ್ಷೆ ಉಂಡು.

ಬೇತೆ ಕನ್ನಡಿಗೆರ್ ತೆಲುಗೆರ್ ಮಂತ ಎಂಚ ತನತನ್ಕುಳೆ ದೇಶೊಂಟು ಅಭಿಮಾನ ಇಜಿತ್ ವಿದ್ಯಾಬುದ್ದಿ ಬರಸರ ಆಳಿಕೆ ಬಾಳ್ಕೆಡ್ ಅಭಿವೃದ್ಧಿ ಬರೊಡುಂತು ಸೂಪೆರಾ ನಿಂಕುಳ್ಳಾ ನಮ ತುಳು ನಾಡ್‌ದ ಯುವ್ವೊಂಜಿ ವಿಷಯೊಂಟ್ಲಾ ಸೂವೆರೆ ತಕ್ಕ ಸೂಪುಣಾಕ್ಲೆಗ್ ಸಾಯುಲಾ ಅಂಪೆರೆ ತಕ್ಕ ಇತ್ತೊ. ತುಳುನಾಡ್‌ದ ವಿಷಯು ಜಾಲ ಪಣ್‌ಂಡ ಮೋಣೆಪೀಂಟಾಪ್ಪಾ ತುಳುವೆರ್‌ಲಾ ಉಳ್ಳೆರ್. ಆಕ್ಲೆಗ್ ತುಳುನಾಡ್‌ದಯೋಗ್ಯತೆ ಗೊತ್ತಿದ್ದಿ. ತುಳುನಾಡ್‌ಡ್ ದುಂಬುಡು ಪುಟ್ಟಿತು ಇಡೀ ಭರತಖಂಡೊಂಟೇ ಪುದಾರ್ ಕೊಡತ್ತಿ ಮಧ್ವಾಚಾರ್ಯೆರ್ ವಾದಿರಾಜ ಸ್ವಾಮಿಳುಮೋಕ್ಲೆ ಸಂಗತಿ ಪಿನಯೆರ್. ಆನೆತ್ತ್‌ವರ ತುಳುನಾಡ್‌ದಯೋಗ್ಯತೆನಿ ತೆರಿಪ್ಪೋಪುಣೊಲಾ ದುಂಬುಡ್ ಪ್ಪೋಪುಣಾಕ್ಲುನೊಒಂಜಿ ಕೆಲಸ ಆವೊಂತುಂಡು. ತುಳುವೆರ್ ಎಂಕ್ಲೆಗ್ ಸಾಯ ಅಂತ್‌ಂಡ ಎಂಕ್ಲೆ ಕೆಲಸ ಉದ್ದಪ್ಪೋವನ್—ಸೂಕೊ ದೇವೆರುಳ್ಳೆರ್. ಪೂರ್ಣಾವತಾರಿ ಎಂಕ್ಲೆ ಒಡಿಪುದ ಶ್ರೀಕೃಷ್ಣೆಲಾ ತುಳುನಾಡ್‌ದ ಗುರುಕುಳಾತಿತ್ತಿ ಶ್ರೀ ಮಧ್ವಾಚಾರ್ರ್ಲಾ ತುಳುವೆರೆಗ್ ಪ್ರೇರಿತ್‌ತ್ ಆನಾತ್ ಬೇಗನೇ ಆಕ್ಲೆನಿ ಎಡ್ಡೆ ಸ್ಥಿತಿಕ್ ಕೊಂಡರಂತೆ ಕುಳ್ಳಯೆರ್. ಪುರುಷಪ್ರಯತ್ನ ಮಾತ್ರ ತುಳುವೆರ್ ಅಂಪೊಡು. ಎಂಕ್ಲೆತ್ತ್‌ಯಿ ಸಾಯ ಎಂಕುಳ್ಳಾ ಅಂಪುವೊ. ಮಂತೆಕ್ ಮುದೆಲಾತ್ ತುಳುವೆರ್ ಈತ್ನಾಟ್ ಎಂಕ್ಲು ಪಂಡಿ ವಿಷಯೊಂಕ್ಲೆನಿ ಮನಸ್ಸ್‌ಗ್ ಗೆತೊಣ್ಣೊಡುಂಡ್ಪಿ ಒಂಜಿ ಆಸೆ. ಅಂಪನೆ ತುಳುನಾಡ್‌ಡ್ ನಮ ಮಾತೃಭೂಮಿಡ್ ಅಭಿಮಾನ ಇಜಿತ್ ಅಯ್ಕ್ ಕೀರ್ತಿ ಕೊಂಡರೊಡುಂತು ಬೆತ್ತೊಂಜಿ ಆಸೆ. ಎಂಚಲ ಇತೆನ್‌ಗ್ ಈ ಬರವ ಕಯ್ದಂಪುವೊ. ಗುರ್ತ ಇಪ್ಪಡ್ ಆವಾ!

ತುಳುತ ಗಜೇಂದ್ರಮೋಕ್ಷೊ

ಕವಿ:—ಎಮ್. ವಿ. ಭಟ್.

ಗುರು ಗಣಪತಿ ಶ್ರೀನಾಥ ಶ್ರೀ ಶುಕಾದಿ ಮಹರ್ಷಿಳೆ-
ನ್ನಖಿಲ ಭಗವದ್ಭಕ್ತೆರ್ನಾಕ್ಲೆನ್ನಮಸ್ಕರಿತ್ ತಥಾ
ತ್ರಿಜಗದಧಿಪೇ. ಶ್ರೀ ಗೋವಿಂದೇ ಗಜೇಂದ್ರನ್ ರಕ್ಷಿತೀ
ಕಥೆನ್ ತುಳುಟೇ ಪಣ್ಪಾವ್ಳಿಪೊನ್ಕೆಂಕ್ಲೆನೇ ಹರಿಪದ್ಮದಾ ೧

ತುಳುತ ಕವಿತಾ ಶಕ್ತಿನ್ಸೊಕ್ಳೆಂಕ್ ದೇವಿ ಸರಸ್ವತಿ
ಸುಳಿತ್ ತೆಳಿತೆಂತೆನ್ನಾಸ್ಯೊಂಟೇ ನಿಲೀಲ ದಯಾವತೀ
ವೊಳಿಪು ಚಿರಕಾಲೊಂಟ್ಪೇನ್ನಂತೀ ಗಜೇಂದ್ರನ ಮೋಕ್ಷನೇ
ಮಳಿತ್ ತರೆನೇ ಪಾದೊಂಟನ್ನೆಟ ಜೀಯೆ ಅಜಾಂಗನೆ ೨

ಯನನನುದಿನ ಕಾಪೀ ಪಾಪಿಳೆನ್ನಾಶಮಂಪೀ
ಬಯಸವಿವರ ಕೊಳ್ಪೀ ವಿಷ್ಣುಮಾಯಾ ಸ್ವರೂಪೀ
ಭಗವತಿ ಜಗದಂಬೇ ಇನ್ನನೇನ್ನಾಸೆ ಪಿಂಬೇ
ಕಗುಣರಸ ಕೊಳಂಬೇ ದೇವಿ ಭಂಗಾರ್ದ್ರ ಬೊಂಬೇ ೩

ಹರಿ ಚರಾಚರ ಜೀವಕುಲೇಶ್ವರೇ
ಕರಿಕುಲೇಶನ್ ಎಂಚ ವಿಮೋಚಿತೇ
ಮುದಳೆ ಬಾಯ್ತಿ ಮುಕುಂದೆ ಶುಕರ್ಷಿಳೆ
ಫಣಿಪಣೀಂದ್ ತ್ ಕೇಂಡೆ ಪರೀಕ್ಷಿತೇ ೪

ಈ ಪ್ರಕಾರಂತ ಪ್ರಶ್ನಾಂಡಾ ಅರಸುತ್ತಾ ಪರಾಷ್ಟನೇ
ಶುಕೆರ್ಪಣ್ ಪೆರ್ ಹರ್ಷೊಂಟೇ ಹರಿಭಕ್ತ ಶಿರೋಮಣೀ ೫

ಇಂಚ ತುಳುತ ಗಜೇಂದ್ರಮೋಕ್ಶೊಂಟು ಪೊಂಜನೇಧ್ಯಾಯ ಮುಗಿನ್.

ಕೇಣ್ಣ ಪೇರ್ ಸಮುದ್ರಂತ ಮಧ್ಯೊಂಜಿತ್ತ್ ಪರ್ವತೊ
ತ್ರಿಕೂಟಾಖ್ಯೊ ಎತ್ತ್ರೊರೊಂಟ್ ಪತ್ತ್ ಸಾವಿರ ಯೋಜನ ೧

ಬೊಳ್ಳಿ ಭಂಗಾರ್ ಕಬ್ಬೊಂಕ್ಕೆ ನಾಜಿಕೊಂಬುಳೆ ಕಾತಿಡ್
ಪ್ರಕಾಶಿಪ್ಪೋಷ್ಣ ದಿಕ್ಕೆನ್ನಾ ಸಮುದ್ರನ್ನಾ ಮಹಾದ್ಭುತಾ ೨

ಬೆತ್ತ್ನ ಕೆತ್ತಿಗೆ ರತ್ನೊಂಕ್ಕೆ ಮುತ್ತು ಮಂಟಪ ಮಾಟೆಳು
ನೆಲಕಟ್ಟ್ಳು ಇತ್ತ್ರೊಂತು ಶೋಭಿಪೀ ಗಿರಿಕೇಂಡನಾ ೩

ತೊಟ್ಟೆತೊಟ್ಟೆಡ್ ಘೋರೊಂಟು ಸುತ್ತಮುತ್ತತ್ತ್ ಜಪ್ಪುವೀ
ನೀರಧಾರೆದ ಘೋಷೊಂಟು ಕೆಬಿಕ್ಸಂತೋಷೊ ವರ್ಧಿಪು ೪

ಪೇರೊಸಾಗರೊನೇ ಕಾರ್ನ್ ನೆಡಿಪೀ ಪುಣ್ಯಪರ್ವತೊ
ಪಚ್ಚೆಕಲ್ಲ್ದ ಬೊಳ್ಕೊಂಟು ಸ್ವಚ್ಛ ಪಚ್ಚೇತ್ ತೋಜುಣು ೫

ಕುದುರೆ ಮೋರೆ ಜನೊಂಕುಳು
ಸಿದ್ಧೆ ಭೂಸುರೆರ್ ಚಾರಣೆರೀ ಪುರಿನಾರಿಳೇ
ಸ್ವರುಗ ಸೂಳೆಳು ಗಾಯನಕಾರೆ ಭೂ-
ನಲಿಪುನೀ ನೆಲಮಾಳಿಗಳೇ ಕೆಲಾ ೬

ಗುಹೆತೊಳ್ಪೆತ್ತ್ ಸುರೆರ್ನ ಸುಗಾಯೊನೇ
ಬಹು ವಿನೋದ ಮೃಗೇಂದ್ರನ ಗಾಜ್ಯನಾ
ಎನ್ ತ್ ಸಿಂಹೊಗಣೊಂಕುಳು ಗರ್ಜೊನೋ
ಗುಹೆಪಿದ್ಯೆತ್ ಸಹಾ ಪ್ರತಿ ಮಂಪುವೋ ೭

ಉಳೆ ಕಡಪುಳೆ ತಂಡೇ ಮಲ್ಲ ಶಾರ್ದೂಲ ಷಂಡೇ
ವನಪಶುಕುಳೆ ಪುಂಡೇ ಸೂನಗಾಳ್ಪಲ್ಪ ಉಂಡೇ
ಪ್ರತಿ ಮರಕುಳೆಡ್ಯೆಟೇ ದೇವತಾ ಕೊಪ್ಪಲಂಟೇ
ನಲಿಪುವಿ ಶಿಖಿಪಕ್ಕೀ ನಿತ್ಯಲಾ ಪುಷ್ಪಕಾಯಿಯಾ ೮

ತುಡೆ ಕುದುರು ಕೆದುಕ್ಕೆ ಸುತ್ತಮುತ್ತತ್ತ್ ಉಪ್ಪಾಳ್
ಸುರಯುವತಿಳು ಮಿಾಪೀ ಸರ್ವ ಸಾಮಾಗ್ರಿಕೆತ್ತ್
ಪರಿಮಳ ತಣುಗಾಳೀ ಬೀಸುವೀ ಭಾಸುರಾಯಿಯಾ
ಗಿರಿತ ಸರಿಸುರೆಕ್ನಾಳದ್ದಿ ಸದ್ಯೊಂಟು ಸತ್ಯೋ

ಆ ಗಿರಿತೊಟ್ಟೆಡ್ ವರುಣನ ತೋಟೋ
ಋತುಮುತ್ತ್ಂದ್ ತ್ ಇತ್ತ್ನ್ ಪೊಂಜೀ
ಅನುದಿನ ಗೊಬ್ಬುಣೊ ಸುರನಾರಿಳೆಗ್
ಮನಸೇ ಉಬ್ಬುಣು ಸೂನಗ ನಂಕ್

ಪೆಲ ಪಲಾಶಲಾ ಬಾಳೆ ತಾಳೆಲಾ
ಪುಳಿ ಪನೋಳಿಲಾ ಗೋಳಿ ಪಾಳಿಲಾ
ಭರಿತ ಪನ್ನರ್ಳೀತ್ತಾವರೇ ಪೂಲಾ
ಮರುಗ ಮಲ್ಲಗೇ ಪಾರಿಜಾತೊಲಾ

ಸೊರಗೆ ಸಂಪಗೇ ಬೇಂಗೊ ಬಾಗೆ ಸಂ-
ದಳಿಗೆ ಕೇದಗೇ ನಾಗಸಂಪಗೇ
ಸಕಲ ದಿಕ್ಕುಳೀಡ್ಕುಖ್ಯ ಕುಕ್ಕುಳೇ
ಕಮುಕುಲೊಂಕುಳೇ ಕಾಮಿತೊಂಕುಳೇ

ಗೋರಟೆ ಸೂರಟೆ ಕಲ್ಲಟೆ ನೆಲ್ಲೀ
ಬಾಂಬಟೆ ಚಾಕಟೆ ನೋಕಟೆ ದೂಲಾ
ಅತ್ತಿದ ಪತ್ತಿದ ಸಡ್ತಿ ಪ್ರದೇಲ್
ಇತ್ತ್ನ್ ಬೆತ್ತ್ಲ ಬಿತ್ತ್ಲದ ಪೊರ್ಲು

ಮುತ್ತುದ ಲಕ್ಕೊನೆ ಕಳಕಳ ಪಣ್ಪೆ
ಪತ್ತ್ಲೆ ಚಿತ್ತ್ರೊನು ಪರಿಪತ್ತಿಂಚೀ
ಸ್ವಚ್ಛಂಬೊತ್ತರೆ ತಾಮರೆ ಪರಿಮಳ
ಕೇರೀ ನೀರ್ದ ಕೆದು ಇತ್ತ್ಯೆಟ್

ಅಂಗಜಪಗಳಿದ ಪುಷ್ಪನೆ ಕೆದುಟು
ಭಂಗಾಂದ್ರೆರ್ಂಗ್ ಡ್ ಶೃಂಗರಿತಿತ್ತ್
ಕಲ್ಲ್ನ್ ಮೋಹಪು ಕಲ್ಹಾರಾಂಡ
ಒಳ್ಪಲ ಸೋಲ್ಪುಪ್ ಉತ್ಪಲ ಕುಮುದೊ

ಅಂಬುಜಸುಭವ ಮುಖ್ಯೆರ್ ತುಂಬಿದ
ಹಂಸೆರ್ ಹಂಸೆರೆ ರೂಪುಡು ರಾಪೊ
ಅಪ್ಸರಿಕುಳು ಸಾರಸ ರೂಪುಡು
ಸೇವಿಪುಣಾಕುಳು ಆ ಕೆದುನಯ್ಟ್

ಗಂಧರ್ವೆರೆ ಮುದೆಲ್ ಸರ್ವೆರ್ ಪಾಪ
ನಾಶೊಂಕೇ ಏಮಿಳೇ ಮುದಳೆ ಮಿಾನುಳೆ ರೂಪುಲಾತ್

ಆ ಪುಣ್ಯತೀರ್ಥೊನ್ ಪರೊಂತು ಬಿನಾತ್
ಶಾಪೊಂತ್ಪಿಮೋಚನೆ ಪಡೇಪೆರ್ ಏಪಳಾಂಡಾ ೧೭

ಕೆದುತ ಬಳಿಟ್ ಭಾರೀ ಪುಷ್ಪಲಾಪೀ ಪುದೇಲ್
ಮೃದುಮ್ಮೃಧುತ ಕೆಲೆಂಜೀ ಮಂಪಿ ಗಾನೊಂತ ಜಾಲ್
ಮಧುರತರ ಫಲೊಂಕ್ಳೆ ಸುತ್ತಮುತ್ತತ್ತ್ ಬೂಳ್ದ್ಯ
ಉದಿಪುವಿ ಸಮಯೊಂಟ್ ಸೂಂಡ ಸಂತೋಷ ಪೊಳ್ತು ೧೮

ಆ ಪರ್ವತೊಂತ ಮಲಿನಾಶ್ರಯಿತೊಂಡುತುಪ್ಪೀ
ಕಾಡಾನೆ ಪುಂಡು ಯಜಮಾನೆ ಮದಾನೆ ಒಂಜಿಂ
ಒಂಜಾನ ಒಂಜಿ ಶಿಖಿಕಾಲೊ ದಿನೊಂಟು ತಾನ್
ಗಿಯೊರ್ಂತು ಪುಂಡುದ ಸಮೇತ ತ್ರಿಷೇಪುಣೇಕ್ ೧೯

ನಾಡೊಂತು ನೀರಬಳಿನೀ ಕೆದುಟೆತ್ತಿ ನೀರ್ದ
ಪುಷ್ಪೊಂಕ್ಳೆ ವಾಸನೆದ ಗಾಳಿನ್ ಮೂಸುತ್ ಕ್ತೆ
ಪೊಣ್ಣಾಣ್ ಕಿನ್ನಿಳೆ ಸಮೇತೊನೆ ಬತ್ತ್ ನೀರ್
ಪರ್ಪೀ ಮನಸ್ಸ್‌ಡ್ ಸರಾನೆ ಸರೋವರೊಂಕೇ ೨೦

ಸರೋವರೊಂಕು ಜತ್ತ್‌ನೇ ಸರಿಕ್ಕೆ ನೀರ್ ಪರ್ಯೊನೇ
ಸರೋಜ ಪುಷ್ಪನೊಟ್ಟುಗೇ ಸಮೊಂಟು ಕಾಡ್ ಮುಟ್ಟೈನೇ ೨೧

ಇಡೀಲ ಚೆಂಡ್ಯಾವೆರೆ ಸುಂಡಿಲೊಂಟು
ನೀಗೇತ್ತ್ ಮಾಸೊಂಡುತು ಮಾಯೊ ಮೆಯ್ಕ್
ಮಾಪೊಯೊ ಸಂಸಾರಿಳೆ ಲಕ್ಕತನ್ಕ್ಳ
ನ್ಯಾನೆಳೆನ್ನಾ ಬಹುಲೂಟೆ ಮಂತೋ ೨೨

ಪೊಣ್ಣಾಣ್ ಕೂಡೊಂಡ್ದ್ ಬಹಾಳ ಗೊಬ್ಯೊ
ಸರೋವರನ್ನಾ ಆಡಿಮೇಲು ಮಂತೋ
ಮಾಯೊಂತು ಗಿರ್ಯೊಂತು ಸರೊಂತು ನೀಡ್
ಬಹಾಳ ಪೊಳ್ತಿತ್ತ್ರ ಮದಾಂಧನಾಕ್ಳ ೨೩

ವರುಣಪ್ರೇರಣೆತ್ತ್ಳು ಬಹು ಕೋಪೊನು ಹೊಂದುತು
ಲೂಟೆ ಜಾನೇಂತ್ ಮಲ್ಲಾನೆ ಕಾರ್ನೀ ಮುದಳೆ ಪತ್ತ್‌ನೇ ೨೪

ದಯ್ವೇಚ್ಛೆತ್ತತಿಸಂಕಷ್ಟೊನ್ಯೊಂದ್ಯನೇ ಗಜನಾಯಕೇ
ಸೊಜೋಯಿ ತನ್ನೊ ಬಲೊನು ಪೂರಾ ಪೂರೆಯ್ಸನದ್ದಿಯೇ ೨೫

ತನ್ನಾಕ್ಳ ಮಂತ ಕೂಡೊಂತು ಬುಡ್ಪೊಪೀ ಯತ್ನೊ ಸೂಯೆರ್
ತೀರಂತೆ ಬುಳ್ತ್ರೊ ಹೊರತ್ ಸಫಲಾನದ್ದಿ ಯತ್ನೊನೇ ೨೬

ಪಿದೇಯಿ ಉಳೇಯಿ ಪೊಯ್ಯೊಣ್ಪೆ ಮದಾನೆ ಮುದಳೆಗ್ಳೆಗ್
ಸರೋವರೊಂಟು ಸತ್ಪೊಂಟು ವರ್ಷ ಸಾವಿರ ಸಂದ್‌ನ್ ೨೭

ನೀರ್‌ಡಿತ್ತೊಂತು ವಯ್ಪಂಚೀ ಮುದಳೆಗ್ಸತ್ವ ಏರ್‌ನ್
ಆನೆಗೇ ಸತ್ವತೊಗ್ಗೊಂತು ಬತ್ತ್ನಾಲೋಚನೆಂತೆನೇ ೨೮

ತನ್ಕ್ ತನ್ನಾಕ್ಳೆಗೇ ಕೂಡಾ ಜಾನೆ ಬುಡ್ಪೋಡ್ಯರಾಪುರೀ
ಉಂದು ಸಂಸಾರ ಬುಡ್ಪೋಪೀ ಪರಮಾತ್ಮನ ಪಾಶೊನೇ ೨೯

ಏನಾಲೆನೇ ಹೊಂದುವೆ ಭಾರಿ ಜೋರುಡೇ ಪಾರ್ಬೆರ್ಪಿ
ಮರಿತ್ತ್ ಪ್ರೊಡಿತಿ
ತನ್ನಾಕ್ಳೆನೇ ಕಾಪುವೆ ಏರ್ ಏರ್‌ನ ಪೋಡಿತ್ತ್ ತಾನೇ
ಬುಡ್ಪುಪೋವು ಮೃತ್ಯುವೇ ೩೦

ಇಂಚ ತುಳುತ ಗಜೇಂದ್ರ ಮೋಕ್ಷೊಂಟು ಎರಡನೇ ಅಧ್ಯಾಯ ಮುಗಿನ್.

ತುಳುವೆರ್ ಆವಶ್ಯ ಪೋದರೆತ್ತಿ ಪುಸ್ತಕಳು.

ಕೃಷ್ಣಸಂಧಾನ	೦	೮	೦	ಬಂಗಾರ್ದಂಗಿದ ಕತೆ	೦	೧	೦
ಮಿತ್ಯನಾರಾಯಣ ಕತೆ	೦	೮	೦	ಕನ್ನಡಕೊ	೦	೦	೬
ಜನಮಲ್	೦	೬	೦	ಕನ್ಯೋಪದೇಶ	೦	೨	೦
ಪತೀಕಮಲ್	೦	೬	೦	ಅಮಲ್ ದೆಪ್ಪಡೆ	೦	೧	೦
ಕಾನಿಗ್	೦	೪	೦	ಪೊರ್ಲಕೆಂಟ್	೦	೧	೦
ಅಳಿಯಸಂತಾನ ಕಟ್ಟ್‌ದ ಗುಟ್ಟು	೦	೪	೦	ಪಂಚವಟಿ	೦	೩	೦
ಮದ್ ಮಾಳತ್ತ್ ಮದ್ ಮಾಯೆ	೦	೨	೦	ತುಳುಪದ್ಯಾವಳಿ	೦	೨	೬
ಪುಗಿರೆದ ಅಮಲ್	೦	೦	೩	ತೊಡಕಿನಾರ್	೦	೨	೦
ಮುಂಡತಪ್ಪಾಯೆ	೦	೨	೦	ತುಳು ಭಗವದ್ಗೀತೆ	೦	೬	೦
ತುಳು ಪದ್ಯಮಾಲಿಕೆ....	೧	೧	೦	ವಿಶ್ವರೂಪದರ್ಶನೊ	೦	೧	೦

ಎಸ್. ಯು. ಪಣಿಯಾಡಿ, ತುಳುವ ಸಾಹಿತ್ಯಮಾಲೆ, ಉಡುಪಿ.

ಕ್ರಮನಿಯಮಗಳ (ರೂಲ್ಸ್ ಸಂಡ್ ರೆಗ್ಯುಲೇಶನ್) ಕಮಿಟಿ, ಅಪೀಲು ಕಮಿಟಿ, ಆರ್ಥಿಕ (ಫೈನಾನ್ಸ್) ಕಮಿಟಿ, ರಸ್ತೆ ಮತ್ತು ನಗರ ರಚನಾಸಮಿತಿ, ಸಾರ್ವಜನಿಕ ಆರೋಗ್ಯ ಮತ್ತು ಬೆಳಕು ವ್ಯವಸ್ಥೆಯ ಸಮಿತಿ, ವಿದ್ಯಾ ಕಮಿಟಿ, ಕಂಟ್ರಾಕ್ಟ್ ಮತ್ತು ಉದ್ಯೋಗ ನೇಮಕ ಸಮಿತಿ, ಜಮ್ಮಾನಾ ಕಮಿಟಿ ಹೀಗೆ ಎಂಟು ಸಮಿತಿಗಳ ರಚನೆಯಾಯಿತು. ಈ ನಡುವೆ 'ಪಂಕವೆಲ್ಲಿ' ಎಂಬ ಇನ್ನೊಂದು ಪ್ರಶ್ನೆಯು ಡಾ| ಆಚಾರ್ಯರಿಂದ ಕೇಳಲ್ಪಟ್ಟು ಮಿಕ್ಕವುಗಳಿಗಿಂತ ಸುಲಭದಲ್ಲಿ ಉತ್ತರವನ್ನು ಸಂಪಾದಿಸಿತು! ವಾದ ವಿವಾದಗಳಿಂದ ಬಳಲಿದವರು ಹಾಯಾಗಿ ಒಂದಿಷ್ಟು ಥಂಡನ್ನು ಅನುಭವಿಸುವಂತಾಯಿತು! ಇಷ್ಟರಲ್ಲೇ ಘಂಟೆ ಏಳೂವರೆ ಆದುದರಿಂದ ತಾ. ೨೬ಕ್ಕೆ ಸಭೆಯನ್ನು ಮುಂದುವರಿಸಲಾಯಿತು; ಮುಂದುವರಿಸುವ ದಿನ ನಿರ್ಣಯವಾದರೂ ಸುಲಭದಲ್ಲಿ ಆಗಲಿಲ್ಲ, ಓಟು ತೆಗೆಯಬೇಕೆಂಬವರೆಗೂ ಎಳೆದಾಟವಾಗಿ, ಓಟಿನ ಫಲಿತಾಂಶವು ಹೇಗಾಗಬಹುದೋ ಹಾಗೆಯೇ ನಿರ್ಣಯವೂ ಆಗಿಹೋಯಿತು. ಈ ಮಧ್ಯೆ, ಜಟ್ಕಾಗಳ ಮತ್ತು ಸೈಕಲುಗಳ ತೆರಿಗೆಯು ಕಡಿಮೆಯಾಗಬೇಕೆಂಬ ಸೂಚನೆಗಳ ಚರ್ಚೆಯಾಗಿ ಸೈಕಲುಗಳ ೬ ತಿಂಗಳ ತೆರಿಗೆಯನ್ನು ರೂ. ಒಂದೂವರೆಯಿಂದ ಒಂದಕ್ಕಿಳಿಸಲಾಯಿತು; ಜಟ್ಕಾವಾಲರ ಮಟ್ಟಿಗೆ ಸರಕಾರಕ್ಕೆ ಬರೆದು ತಿಳಿಯಬೇಕೆಂದಾಯಿತು.

ತಾ. ೨೬—೧೦—೩೬ರ ಸಭೆ

ಮುಂದುವರಿಸಲ್ಪಟ್ಟ ಸಭೆಯು ತಾ. ೨೬ರಲ್ಲಿ ಘಂಟೆ 5-15ಕ್ಕೆ ಸರಿಯಾಗಿ ಪುನಃ ಕೂಡಿತು. ಸಾಧಾರಣ ಚರ್ಚೆಯು ನಡೆದು ಓವರ್ಸಿಯರ್ ಮತ್ತು ಅವರ ಪೇದೆಯ ಕೆಲಸವು 'ಖಾಯಮ್' ಎಂದಾಯಿತು. ಹೆಡ್‌ಕ್ಲಾರ್ಕರು ಆಫೀಸು ಮೆನೇಜರರಾಗಿಯೂ ಅಕೌಂಟಂಟರಾಗಿಯೂ ನೇಮಿಸಲ್ಪಟ್ಟರು. ಆ ಮೇಲೆ 'ನಮ್ಮ ಮುನಿಸಿಪಾಲಿಟಿಗೆ ಕಮಿಶನರರ ಅಗತ್ಯವಿಲ್ಲ' ಎಂಬ ಠರಾವು ಶ್ರೀ ಸುಂದರ ಕಾಮತರಿಂದ ತರಲ್ಪಟ್ಟು ಚರ್ಚೆಗೆ ಬಿತ್ತು. ಚರ್ಚೆಯು ಒಂದಿಷ್ಟು ಬಿಸಿಬಿಸಿಯಾಗಿಯೇ ನಡೆಯಿತು. ಈಗ ಸ್ಪೆಶ್ಯಲ್ ಆಫೀಸರರಾಗಿರುವ ಶ್ರೀ ನಾಯ್ಕರು ಕಮಿಶನರರಾಗಿರುವಾಗ 'ಉಡುಪಿ ಮುನಿಸಿಪಾಲಿಟಿಯು ವ್ಯವಸ್ಥೆಯಿಂದ ನಡೆಯಬೇಕಾದರೆ ಕಮಿಶನರರು ಅಗತ್ಯವೆಂದು ಬರಕೊಂಡಿದ್ದುದು ಬಜೆಟಿನಲ್ಲಿ ಕಂಡುಬಂತು' ಎಂಬ ಮೆಂಬರರು ಅದನ್ನು ವಿರೋಧಿಸಿ, 'ಸದ್ಯಸ್ಥಿತಿಯಲ್ಲಿ ಉಡುಪಿ ಮುನಿಸಿಪಾಲಿಟಿಗೆ ಕಮಿಶನರರು ಅನಗತ್ಯವಾದುದರಿಂದ ಸರಕಾರವು ಅವರನ್ನು ಹಿಂತೆಗೆಯಬೇಕಾಗಿ ಈ ಸಭೆಯು ಕೇಳಿಕೊಳ್ಳುತ್ತದೆ' ಎಂಬ ಠರಾವನ್ನು ಸರ್ವಸಮ್ಮತಿಯಿಂದ ಮಂಜೂರುಮಾಡಿದರು. ಸಭೆಯ ಚರ್ಚೆಗಳೆಲ್ಲಾ ಸರ್ವಸಾಧಾರಣವಾಗಿ ವಿನೋದಪೂರ್ಣವಾಗಿಯೇ ನಡೆದವು. ಇಂಗ್ಲಿಷಿನಲ್ಲಿ ಸರಿಯಾಗಿ ವಾದಿಸಲಾಗದ ನಾಲ್ಕಾರು ಮೆಂಬರರಿರುವರೆಂದು ಹೇಳಬಹುದು; ಕನ್ನಡ ಬಾರದವರಾರೂ ಇಲ್ಲವೆಂದೂ [illegible] ಹಾಕುವವರಿಗೂ ಬೆಚ್ಚಗಿ ಮಾಡಬೇಕು. ಮಿಕ್ಕ ಕೆಲವರು ಯಾವ ವಿಷಯವನ್ನೂ ಬಿಡದೆ, ದೊಡ್ಡದು ಸಣ್ಣದು ಎಂದು ಒಂದಿಷ್ಟು ದಯದಾಕ್ಷಿಣ್ಯ ತೋರಿಸದೆ-ಎಲ್ಲವನ್ನೂ ನುಚ್ಚುಗುಜ್ಜು ಮಾಡುವುದರಲ್ಲಿ ನಿರತರಾಗಿದ್ದರು. ಅಂತೂ ಜವಾಬ್ದಾರಿ ಯುಕ್ತ ಕೆಲಸಮಾಡಿ ಸೋತವರು 'ಬನ್ನಿ! ಮುನಿಸಿಪಲ್ ಸಭೆಗೆ ಹೋಗೋಣ' ಎಂದು ಅರ್ಧಗಂಟೆ ಕುಳಿತು ವಿನೋದಹೊಂದುವ ಉಪಕಾರವಾಗುವಂತಿದೆ, ನಮ್ಮ ನಗರ ಸಭೆಯ ಮೀಟಿಂಗುಗಳಿಂದ ಎಂದೊಂದು ಬಾತ್ಮಿ.

ಮಂಗಳೂರು.

(ನಮ್ಮ ಸ್ವಂತ ಬಾತ್ಮಿದಾರರಿಂದ)

ವಿವಿಧ ಧರ್ಮಗಳ ಪರಿಷತ್ತು.

ಸ್ಥಳೀಯ ಬ್ರಹ್ಮಸಮಾಜದ ಆಶ್ರಯದಲ್ಲಿ ಹಿಂದೆಯೇ ತಿಳಿಸಿದ ಮೇರೆಗೆ ವಿವಿಧ ಧರ್ಮಗಳ ಪರಿಷತ್ತು ಕಳೆದ ತಾ. ೧೯ರಲ್ಲಿ ಜರಗಿತು. ರೆ. ಇ. ಸುಬ್ಬಕೃಷ್ಣಯ್ಯನವರು ಅಗ್ರಾಸನ ವಹಿಸಿದ್ದರು. ಪ್ರೊ| ಎಸ್. ಶ್ರೀನಿವಾಸಾಚಾರ್ಯರು ಹಿಂದೂಧರ್ಮದ ವಿಷಯವನ್ನು ಕುರಿತು ಅಮೋಘ ಭಾಷಣವಿತ್ತರು. ಹಿಂದೂಧರ್ಮವು ಲೋಕದ ಜನರಿಂದ ಅನುಸರಿಸಲ್ಪಡುವುದಕ್ಕೆ ಯೋಗ್ಯವಾದ ಮತವೆಂದೂ, ಇದರಲ್ಲಿ ಮಾನವನು ಜನ್ಮವೆತ್ತಿದಂದಿನಿಂದ ಅಂತ್ಯದ ವರೆಗೂ ಧರ್ಮಮಾರ್ಗದಲ್ಲಿಯೇ ನಡೆಯಲು ಬೋಧಿಸಿರುವುದೆಂದೂ ನಾಸ್ತಿಕನೂ ಕೂಡ ತನ್ನ ತಿಳುವಳಿಕೆಗೆ ಸರಿಯಾಗಿ ನಿರ್ವಂಚನೆಯಿಂದಲೂ ಶ್ರದ್ಧೆಯಿಂದಲೂ ನಡೆದರೆ ಅವನಿಗೆ ಭಗವಂತನು ಸ್ವರ್ಗವನ್ನು ಕರುಣಿಸುವನೆಂದೂ ತಿಳಿಸಿದರು. ಮಿ| ಜಾರ್ಜ್ ಹರ್‌ಬರ್ಟ್ ಸಾಹೇಬರು ಕ್ರಿಸ್ತಧರ್ಮವನ್ನು ಆಧುನಿಕ ದೃಷ್ಟಿಯಿಂದ ವಿವರವಾಗಿ ತಿಳಿಸಿದರು. ಮಿ| ಮುಹಮ್ಮದ್ ಅಬ್ದುಲ್ ಕರೀಮರು ಇಸ್ಲಾಂ ಧರ್ಮದ ವಿಷಯವಾಗಿ ಮಾತಾಡುತ್ತಾ, ಅದು ಪ್ರಪಂಚದಲ್ಲಿ ದೇವರು ಒಬ್ಬನೇ ಎಂದೂ, ಲೋಕದ ಜನರೆಲ್ಲರೂ ಆತನ ಮಕ್ಕಳೆಂದೂ ಬೋಧಿಸಿದೆಯೆಂದೂ, ಮಾನವವರ್ಗದಲ್ಲಿ ಸಮತಾಭಾವವನ್ನು ತಿಳಿಸಿದೆಯೆಂದೂ ಸ್ತ್ರೀಯರಿಗೆ ಸಮಾನಹಕ್ಕು ಕೊಟ್ಟ ಮತವೆಂದರೆ ಮಹಮ್ಮದೀಯ ಮತವೆಂದೂ ಹೇಳಿದರು. ಅನಂತರ ಶ್ರೀ| ಭಂಡಾರ್ಕರರು ಥಿಯಾಸಫಿಯಪರವಾಗಿಯೂ, ಶ್ರೀ| ಮೋಹನಪ್ಪ ತಿಂಗಳಾಯರು ಆರ್ಯಸಮಾಜದ ವಿಷಯವಾಗಿಯೂ ಶ್ರೀ| ಬಿ. ರಾಮಶರ್ಮ ಬಿ. ಎ. ರವರು ಶ್ರೀರಾಮಕೃಷ್ಣ ವಿವೇಕಾನಂದ ಸಂಘದ ವಿಷಯದಲ್ಲಿಯೂ ಭಾಷಣವಿತ್ತರು. ಅಧ್ಯಕ್ಷರು ಭಾಷಣಕರ್ತರುಗಳಿಗೆ ಧನ್ಯವಾದಗಳನ್ನರ್ಪಿಸಿದರು.

ಶ್ರೀ| ದಾಮೋದರ ಕಿಣಿಯವರು ಒಂದು ಸೂಚನೆಯನ್ನು ತಂದು ಅಂದು ಸೇರಿದ ಭಾಷಣಕರ್ತರುಗಳು ಒಂದುಗೂಡಿ ಆಗಾಗ್ಗೆ ಧಾರ್ಮಿಕ ವಿಚಾರಗಳನ್ನು ಚರ್ಚಿಸುವ ಮೂಲಕ ಎಲ್ಲಾ ಧರ್ಮಗಳವರಲ್ಲಿಯೂ, ಒಂದು ತರದ ಭ್ರಾತೃಭಾವವನ್ನುಂಟುಬಿದ್ದ ಪೀಠಾಪುರದ ಮಹಾರಾಜರು ಮಹಿಳಾ ಸೇವಾಶ್ರಮಕ್ಕೆ ರೂ. ೧೦೦ನ್ನು ಮೊಗವೀರರ ಜ್ಞಾನೋದಯ ಸಮಾಜಕ್ಕೆ (ಮದ್ಯಪಾನ ನಿಷೇಧದ ಚಳವಳಕ್ಕಾಗಿ) ರೂ. ೨೦೦ರನ್ನೂ ಕಂಕನಾಡಿಯ ಹಿಂದೂ ಎಲಿಮೆಂಟರಿ ಶಾಲೆಗೆ ರೂ. ೫೦ನ್ನು ಧರ್ಮ ಕೊಡುವುದಾಗಿ ವಾಗ್ದಾನಮಾಡಿರುವರೆಂದು ತಿಳಿದುಬರುತ್ತದೆ.

ನಗರ ಸಭೆ

ಮಂಗಳೂರು ನಗರ ಸಭೆಯ ಮೀಟಿಂಗು ಕಳೆದ ತಾ. ೧೯ರಲ್ಲಿ ಮಾನ್ಯ ಡಾ| ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಪಂ| ಜವಹರಲಾಲ ನೆಹರುಗಳ ಆತ್ಮಕಥೆಯ ಪುಸ್ತಕಗಳನ್ನು ನಗರಸಭೆಯ ಪುಸ್ತಕ ಭಂಡಾರದಲ್ಲಿಡಲು ಜಿಲ್ಲಾ ವಿದ್ಯಾಧಿಕಾರಿಗಳು ಶಿಫಾರಸುಮಾಡಲಿಲ್ಲವೇಬುದರ ಮೇಲೆ ಚರ್ಚೆಯಾಯಿತು. ಸರಕಾರದವರಿಂದ ಒಂದುವರೆ ಲಕ್ಷ ರೂಪಾಯಿ ಸಾಲಪಡೆಯುವುದಕ್ಕೆ ನಿಶ್ಚಯವಾಗಿತ್ತಷ್ಟೆ. ಅದರ ವಿಷಯ ಸಂಪೂರ್ಣ ವಿಚಾರವು ಮತ್ತೊಂದು ಸಭೆಯ ಮುಂದಿಡಬೇಕೆಂದಾಯಿತು.

ಅಸೆಂಬ್ಲಿಗೆ ಹೊಸ ಉಮೇದುವಾರರು.

ಮಂಗಳೂರು, ಕುಂದಾಪುರ, ಪುತ್ತೂರು ಡಿವಿಜನುಗಳಿಂದ ಕ್ರಮವಾಗಿ ಶ್ರೀ| ಗಳಾದ ವೆಂಕಟ್ರಾಯ ಬಾಳಿಗರು, ಎ. ಬಿ. ಶೆಟ್ಟಿ ಯಂ. ಎಲ್. ಸಿ. ಯವರು ಮತ್ತು ಕೆ. ಆರ್. ಕಾರಂತರು ಪ್ರಾಂತಿಕ ಕಾ. ಪಾರ್ಲಿಮೆಂಟರಿ ಸಭೆಯವರಿಂದ ಕಾಂಗ್ರೆಸ್ ಕಡೆಯ ಉಮೇದ್ವಾರರಾಗಿ ಶಿಫಾರಸು ಹೊಂದಿರುವರೆಂದು ಖಾತ್ರಿಯಾದ ಒಂದು ವಾರ್ತೆಯಿದೆ. ಕೌನ್ಸಿಲಿಗೆ ಶ್ರೀ| ವೈಕುಂಠ ಬಾಳಿಗರು ಶಿಫಾರಸು ಹೊಂದಿರುವರಾಗಿಯೂ ತಿಳಿದುಬರುತ್ತದೆ.

ಮಂಗಳೂರು ಡಿವಿಜನಿಗೆ ಕಾರ್ನಾಡು ಸದಾಶಿವ ರಾಯರನ್ನು ಆರಿಸಿದ್ದರೆಂದೂ ಆದರೆ ಅವರನ್ನು ಹಿಂದಕ್ಕೆ ನಿಲ್ಲಿಸಿ ವೆಂಕಟ್ರಾಯ ಬಾಳಿಗರನ್ನು ಆರಿಸುವಂತೆ ಬಹಳ ಯತ್ನಗಳೂ ನಡೆದಿರುತ್ತವೆಂದೂ ಒಂದು ಬಾತ್ಮಿ.

ಕಾಂಗ್ರೆಸ್ ಚುನಾವಣೆ ಕಾರ್ಯ

ಮಂಗಳೂರಿನ ಕಾಂಗ್ರೆಸ್ ಪಕ್ಷದ ಮುಂದಾಳುಗಳಾದ ಶ್ರೀ| ಗಳಾದ ಡಾ| ವಿಟ್ಠಲ ಶೆಟ್ಟಿಯವರೂ, ಕಾರ್ನಾಡು ಸದಾಶಿವರಾಯರೂ, ಕೆ. ಆರ್. ಕಾರಂತರೂ ಪುತ್ತೂರು ತಾಲೂಕಿನಲ್ಲಿ ಪ್ರವಾಸ ಬೆಳೆಸಿ ಕಾಂಗ್ರೆಸಿನ ಧ್ಯೇಯ, ಕಾಂಗ್ರೆಸಿಗೆ ಮಹಾಜನರು ಕೊಡಬೇಕಾದ ಬೆಂಬಲ ಇವುಗಳ ವಿಷಯವಾಗಿ ಭಾಷಣವಿತ್ತರು.. ಬೆಳ್ತಂಗಡಿ, ಬಂಟ್ವಾಳ ಮೊದಲಾದೆಡೆಗಳಲ್ಲಿ ಸಭೆಗಳು ಜರಗಿದುವು.

ಲೇಡಿಸ್ ಕ್ಲಬ್

ಮಂಗಳೂರು ಲೇಡಿಸ್ ಕ್ಲಬ್ಬಿನಲ್ಲಿ ಕಳೆದ ತಾ. ೧೯ರಲ್ಲಿ ಒಂದು ಸತ್ಕಾರಕೂಟವಿತ್ತು. ಅಂದು ನಡೆದ ಆಟಗಳ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಜಿಲ್ಲಾ ಮಡಿ

THE UDIPI BANK, LTD.

ಚಿನ್ನ, ಆಭರಣ, ಸರಕು

ನಾರದನ ತಂ...

ನರ ನಾರಾಯಣ! ಘುಂಯಿ, ಘ... ಬಂತ್ಯೆ ಬೀಸುತ ಬೀಸುತ ಒಬ್ಬ ಶರ್ತ ಚುನಾವಣೆ ಸುಳಿಗ್ಗಾ ಪ್ರತಿನಿಧಿಗಳಿಲದ ನರನಾರಾವೃಗಳಲ್ಲಿ ಏಜಂಟರು ... ಬೇಕಾಗಿದ್ದಾರೆ-

ಹೆಚ್ಚಿನ ವಿವರಕ್ಕೆ ಬರೆಯಿರಿ.

ಮೆನೇಜರ್—'ನವಯುಗ', ಉ...

...ಚಯಲ್ಲಿ ಮಾ...ಮಾನಪತ್ರವೀಯುವ ...ದು ಪ್ರಬಲ ಬಹುಪಕ್ಷದಿಂದ ...ದ್ದು ಹೋಗಿ ಗಾಳಿ ಎತ್ತ ಬೀಸುವುದೆಂಬು ದನ್ನು ವ್ಯಕ್ತಪಡಿಸಿರುವುದು. ಶ್ರೀ. ಪಿ ಟಿ. ರಾಜನರು ಮಾನ್ಯ ಮಂತ್ರಿಗಳಾಗಿ ...

...ಚ ನಾವಣೆಗೆ ಬೀರಬಾರದು. ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯು ಕೇವಲ ಜಿಲ್ಲೆ ಗೆ ಸಂಬಂಧಿಸಿದ ವಿಷಯವಿತ್ತು. ಅದರಲ್ಲಿ ವ್ಯಕ್ತಿ ಜಾತಿಗಳ ಸ್ವಾರ್ಥದಾಟಕ್ಕಾಸ್ಪದ ದೊರೆತಿತ್ತು. ಅದಕ್ಕೂ ಎಸೆಂಬ್ಲಿ ಚುನಾ ವಣೆಗೂ ಯಾವ ಸಂಬಂಧವೂ ಇರಲಾ...

...ಪೂಜೆಯನ್ನು ವಿಜೃಂಭಣೆಯಿಂದ ಜರಗಿಸಿದರು. ಭಜನೆ-ಪೂಜೆಗಳಾದ ಮೇಲೆ ಶ್ರೀ. ಕೊರಡ್ಕಲ್ ಶ್ರೀನಿ ವಾಸರಾಯರು 'ಆಯುಧದ ಮಹತ್ವ'ವನ್ನು ತಿಳಿಸಿ, ಈ ಶಾಲೆಯವರ ಸ್ತುತ್ಯಸಾಹಸಗಳನ್ನು ಕೊಂಡಾಡಿ ದರು.

ಭಾಷಣ.—ಪಶ್ಚಿಮ ಕರಾವಳಿಯ ಇಂಡಿಯನ್ ಕ್ರಿಶ್ಚಿಯನ್ ಕೊನ್‌ಸ್ಟಿಟ್ಯೂಯೆನ್ಸಿಯ ಕೊಂಗ್ರೆಸು ...

ನವಯುಗ

ಉಡುಪಿ, ತಾ ೨೯-೧೦-'೩೬ ಗುರ...

ದಕ್ಷಿಣ ಕನ್ನಡ ಜಿಲ್ಲೆಯ ಜಸ್ಟಿಸ್ ಪಕ್ಷವೂ

ಅಧಿಕಾರದಲ್ಲಿರುವವರ ಬಾಲ ಹಿ... ಹೋಗುವ ಮನೋವೃತ್ತಿಯು ಸಾ... ಧಾರಣ ಸಾಮಾನ್ಯವಾದುದು. ವ್ಯಕ್ತಿ ಅಥವಾ ಪಕ್ಷವು ಎಷ್ಟೊಂದು ... ದು ಬೇಕಾದ್ದಿರಲಿ, ಅದಕ್ಕೆ ಅಧಿ... ಬಲವಿದ್ದರೆ ದೊಗ್ಗು ಸಲಾಮು ಹಾ... ವರು ಬಹಳ. ಎಂದು ಎಂತಹ ಬಲ... ಲಿ, ಎಷ್ಟೊಂದು ಗೌರವವನ್ನು ಬೇಕಾ... ಹೊಂದಲಿ; ಕೆಟ್ಟದು ಕೆಟ್ಟದ್ದೇ; ಆ... ರಿಂದ ಅವಕ್ಕೂ ನಮಗೂ ಯಾವ ಸ್ವ... ಧವೂ ಇರಬಾರದು; ಯಾವ ರೀತಿ ಯೂ ನಾವವರ ಆಶ್ರಯವಪೇಕ್ಷಿಸಲು ಅದಕ್ಕಾವ ಆಶ್ರಯವನ್ನೂ ಕೊಡ... ದೆಂಬ ಮನೋನಿರ್ಧಾರ ಮತ್ತು ... ತಿಕ ಧೈರ್ಯವುಳ್ಳವರು ಬಹಳ ಕ... ಆದುದರಿಂದ ಈಗ ಅಧಿಕಾರದಲ್ಲಿರು... ಸ್ಟಿಸ್ ಪಕ್ಷದ ಪರವಾಗಿ ಚುನಾವ... ಪ್ರಚಾರಕ್ಕಾಗಿ, ಮಂತ್ರಿತ್ವದ ಸಂದರ್ಶ... ನಟನೆಯಿಂದ ದಕ್ಷಿಣಕನ್ನಡಕ್ಕೆ ಬ... ಶ್ರೀ. ಪಿ. ಟಿ. ರಾಜನರನ್ನು ಗೌರವ... ಕೆಲಸಮಂದಿ ಹಾತೊರೆಯುವುದರಲ್ಲಿ ಆಶ್ಚ... ನೇನೂ ಇಲ್ಲ. ಆದರೆ ದಕ್ಷಿಣಕನ... ಲ್ಲಿ ಜಸ್ಟಿಸ್ ಪಕ್ಷಕ್ಕೆ ಎಷ್ಟರ ಮಟ್ಟಿನ ... ಬಲವಿದೆ, ಆನರ ದಕ್ಷಿಣ ಕನ್ನಡ ನಾ... ರೆನಿಸುವವರೇ ಸ್ಪಷ್ಟವಾಗಿ ಅವರ ಪ... ಕೆಲಸಮಾಡಲು ಅದೆಷ್ಟು ಅಂಜುತ್ತಿ... ರೆಂಬುದು ಶ್ರೀ ರಾಜನರಿಗೆ ಖಚಿತವ... ರದು. ಶ್ರೀ. ಪಿ. ಟಿ ರಾಜನರು ತ... ವಿಕೆಗೆ ಮಾನ್ಯ ಮಂತ್ರಿಗಳಾಗಿ ಜಿಲ್ಲೆಂ... ಸಂದರ್ಶಿಸಿದರೂ ಅವರಿಗೆ ಸಾರ್ವ... ವಾದ ಯಾವ ಮನ್ನಣೆಯೂ ದೊ... ಲಿಲ್ಲೆಂದು ಹೇಳಬಹುದು. ಕಾಂಗ್ರೆಸಿ... ಸದೆಬಡಿದು ದಕ್ಷಿಣಕನ್ನಡದಲ್ಲಿ ಜಸ್ಟಿ... ಪಕ್ಷಕ್ಕೊಂದು ದೊಡ್ಡ ಹೆಸರನ್ನು ತಂದವ... ರೆನಿಸುವ ದಿವಾನ್ ಬಹದೂರ ಹೆಗ್ಡೆಯವರು ಪ್ರೆಸಿಡೆಂಟರಾಗಿರುವ ಬೋರ್ಡಿನಲ್ಲಿಯೇ ಜಸ್ಟಿಸ್ ಪಕ್ಷದ ಮಂತ್ರಿಗಳಿಗೆ ಮಾನಪತ್ರ ವೀಯುವ ಪ್ರಸ್ತಾಪವನ್ನು ಕೂಡಾ ಎತ್ತು ವವರಿರಲಿಲ್ಲ. ಮಂಗ್ಳೂರು ಮುನಿಸಿಪಾಲಿಟಿ ಯವರದರ ಗೋಷ್ಟಿಗೇನೇ ಹೋಗಲಿಲ್ಲ. ಅ... ದಾವ ಕರ್ಮ-ಧರ್ಮ ಸಂಯೋಗದಿಂದ ...

ಉಳಿಯಲಿ ಅಳಿಯಲಿ, ಅದರಿಂದ ಜನ ಸಾಮಾನ್ಯರ ಮೇಲೇನೂ ಪರಿಣಾಮವಾ ಗುವ ಹಾಗಿಲ್ಲ.

ದಕ್ಷಿಣ ಕನ್ನಡಿಗರ ಕರ್ತವ್ಯವೇನು?

ಕಳೆದ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ ರ ಚುನಾವಣೆಯ ಕೊಳಕ ಶವವನ್ನು ಇ ನ್ನೂ ಇನ್ನೂ ಯಾರಾದರೂ ತಬ್ಬಿಕೊಂಡು ಆ ವೈಷಮ್ಯದ ವೃಷ್ಟಿಯನ್ನು ಮುಂದಿನ ...

... ರೂಪಾಯಿ ಸಹಾಯಧನವೂ ಸಿಕ್ಕಿತು. ಈ ಬಳ ಯವರು ತಾ. ೨೪ರಲ್ಲಿ ಶ್ರೀ ವೆಂಕಟ್ರಮಣ ದೇವಸ್ಥಾನ ದಲ್ಲಿ ತಮ್ಮ ಪ್ರದರ್ಶನಗಳನ್ನು ಯಶಸ್ವಿಯಾಗಿ ನಡೆ ಸಿದರು. ವಕೀಲ್ ಶ್ರೀ. ಎಮ್ ವಿಟ್ಠಲ್ ಕಾಮತರು ತರುಣರನ್ನು ಶ್ಲಾಘಿಸಿ ಒಂದು ಮಡಲು ಬಹುಮಾನ ವಿತ್ತರು.

ಆಯುಧಪೂಜೆ.—ಶ್ರೀ. ಟಿ. ಸಂಜೀವ ಶ್ಯಾನುಭಾಗರ ವ್ಯವಸ್ಥಾಪಕತ್ವದಲ್ಲಿರುವ ಉಡುಪಿ ವ್ಯಾಯಾಮ ಶಾಲೆಯವರು ಇದೇ ತಾ. 24ರಲ್ಲಿ ತಮ್ಮ ಆಯುಧ ...

ಉಡುಪಿ ಮುನಿಸಿಪಾಲಿಟಿಯ ಸಾಮಾನ್ಯ ಸಭೆಯು ಇದೇ 22-10-'36ನೇ ಶುಕ್ರವಾರ ಸಂಜೆ 5-15ಕ್ಕೆ ಸರಿಯಾಗಿ ಮುನಿಸಿಪಲ್ ಆಫೀಸಿನಲ್ಲಿ ನೆರೆಯಿತು. ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ಅಧ್ಯ ಕ್ಷ ಸ್ಥಾನವನ್ನು ಸ್ವೀಕರಿಸಿ ಸಭಾರಂಭವನ್ನು ಮಾಡಿದ ರೆಂದಾಡೊಡನೆ ಡಾ। ಪಿ. ಜಿ. ಆಚಾರ್ಯರೆದ್ದು 'ಎಜೆಂಡದಲ್ಲಿ ವ್ಯಾಕರಣದೋಷಗಳಿವೆ; ಬಜೆಟ್ ಕೋ ಪಿ ಸಕಾಲದಲ್ಲಿ ಕಳಿಸಿಲ್ಲ. ಆದ್ದರಿಂದ ಸಭೆಯ ಕೆಲಸಗಳನ್ನು ಮುಂದುವರಿಸಬೇಕೆಂಬ ಸೂಚನೆ ತಂ ದರು, ಅಧ್ಯಕ್ಷರೂ ಅದನ್ನು ತಡೆಯಾಡದೆ ನಿಯಮ ...

ಆ ಪುಣ್ಯತೀರ್ಥೊನ್ ಪರೊಂತು ಮಿತ್ತ್
ಶಾಪೊಂತ್ಪಿಮೋಜನೆ ಪಡೇವೆಗ್ ಏಪಳಾಂಡಾ ೧೭

ಕೆದುತ ಬಳಿಟ್ ಭಾರೀ ಪುಷ್ಪಲಾಪಿ ಪುದೇಲ್
ಮೃದುಮೃಧುತ ಕೆಲೆಂಜೀ ಮಂಪಿ ಗಾನೊಂತ ಜಾಲ್
ಮಧುರತರ ಫಲೊಂಕ್ಲೆ ಸುತ್ತಮುತ್ತಲ್ತ್ ಬೂಳ್ತೊ
ಉದಿಪುವಿ ಸಮಯೊಂಟ್ ನೂಂಡ ಸಂತೋಷ ಪೊಳ್ತು ೧೮

ಆ ಪರ್ವತೊಂತ ಮುಲೆನಾಶ್ರಯಿತೊಂಡುತುಪ್ಪೀ
ಕಾಡಾನೆ ಪುಂಡು ಯಜಮಾನೆ ಮದಾನೆ ಒಂಜಿಂ
ಒಂಜಾನ ಒಂಜಿ ಶಿಶಿಕಾಲೊ ದಿನೊಂಟು ತಾನ್
ಗಿರ್ಯೊಂತು ಪುಂಡುದ ಸಮೇತ ತ್ರಿಷೇಪುಣೇಕ್ ೧೯

ನಾಡೊಂತು ನೀರಬಳಿನೀ ಕೆದುಟೆತ್ತಿ ನೀರ್ದೆ
ಪುಷ್ಪೊಂಕ್ಲೆ ವಾಸನೆದ ಗಾಳಿನ್ ಮೂಸುತ್‌ಕ್ಲೆ
ಪೊಣ್ಣಾಣ್ ಕಿನ್ನಿಳೆ ಸಮೇತೊನೆ ಬತ್ತ್ ನೀರ್
ಪರ್ಪೀ ಮನಸ್ಸ್‌ಡ್ ಸರಾನೆ ಸರೋವರೊಂಕೇ ೨೦

ಸರೋವರೊಂಕು ಜತ್ತ್ನೇ ಸರಿಕ್ಕೆ ನೀರ್ ಪರ್ಯೊನೇ
ಸರೋಜ ಪುಷ್ಪನೊಟ್ಟುಗೇ ಸಮೊಂಟು ಕಾಡ್ ಮುಟ್ಯೆನೇ ೨೧

ಇಡೀಲ ಚಂಡ್ಯಾವೆರೆ ಸುಂಡಿಲೊಂಟು
ನೀಗೇತ್ ಮಾಸೊಂಡುತು ಮಿಾಯೊ ಮೆಯ್ಕ್
ಮಿಾಪೊಯೊ ಸಂಸಾರಿಳೆ ಲಕ್ಕತನ್ಕ್
ನ್ಯಾನೆಳೆನ್ನಾ ಬಹುಲೂಟೆ ಮಂತೋ ೨೨

ಪೊಣ್ಣಾಣ್ ಕೂಡೊಂಡ್ತ್ ಬಹಾಳ ಗೊಬ್ಯೊ
ಸರೋವರನ್ನಾ ಆಡಿಮೇಲು ಮಂತೋ
ಮಿಾಯೊಂತು ಗಿರ್ಯೊಂತು ಪರೊಂತು ನೀಡ್
ಬಹಾಳ ಪೊಳ್ತಿತ್ತ ಮದಾಂಧನಾಕ್ಪು ೨೩.

ವರುಣಪ್ರೇರಣೆತ್ತ್ಯಾಳು ಬಹು ಕೋಪೊನು ಹೊಂದುತು
ಲೂಟೆ ಚಾನೇಂತ್ ಮಲ್ಲಾನೆ ಕಾರ್ನೇ ಮುದಳೆ ಪತ್ತ್ನೇ ೨೪

ದಯ್ವೋಚ್ಛಿತ್ತತ್ರಿಸಂಕಷ್ಟೊನ್ನೊಂದ್ಯನೇ ಗಜನಾಯಕೇ
ನೊಜೋಯಿ ತನ್ನೊ ಬಲೊನು ಪೂರಾ ಪೂರೆಯ್ಸ್ನದ್ದಿಯೇ ೨೫

ತನ್ನಾಕ್ಪು ಮಂತ ಕೂಡೊಂತು ಬುಡ್ಪೊಪೀ ಯತ್ನೊ ಸೂಯೆರ್
ತೀರಂತೆ ಬುಳ್ತೊ ಹೊರತ್ ಸಫಲಾನದ್ದಿ ಯತ್ನೊನೇ ೨೬

ಪಿಪೇಯಿ ಉಳೇಯಿ ಪೊಯ್ಯೊಣ್ಪೆ ಮದಾನೆ ಮುದಳೆಗ್ಗೆಗ್
ಸರೋವರೊಂಟು ಸತ್ಪೊಂಟು ವರ್ಷ ಸಾವಿರ ಸಂದ್‌ನ್ ೨೭

ನೀರ್ ದಿತ್ತೊಂತು ವಯ್ಪೆಂಚೀ ಮುದಳೆಗ್ಸತ್ತ ಏರ್‌ನ್
ಆನೆಗೇ ಸತ್ವತೊಗ್ಗೊಂತು ಬತ್ತ್ನಾಲೋಚನೆಂತಿನೇ ೨೮

ತನ್ಕ್ ತನ್ನಾಕ್ಲೆಗೇ ಕೂಡಾ ಜಾನೆ ಬುಡ್ಪೋಡ್ಯರಾಪುರೀ
ಉಂಡು ಸಂಸಾರ ಬುಡ್ಪೋಪೀ ಪರಮಾತ್ಮನ ಪಾಶೊನೇ ೨೯
ಏನಾಲೆನೇ ಹೊಂದುವೆ ಭಾರಿ ಜೋರುಡೇ ಪಾರ್ಬೆರ್ಕಿ
ಮರಿತ್ತ್ ಪೋಡಿತಿ
ತನ್ನಾಕ್ಲೆನೇ ಕಾಪುವೆ ಏರ್ ಏರ್‌ನ ಪೋಡಿತ್ತ್ ತಾನೇ
ಬುಡ್ಪುಪೊಂವು ಮೃತ್ಯುವೇ ೩೦

ಇಂಚ ತುಳುತ ಗಜೇಂದ್ರ ಮೋಕ್ಷೊಂಟು ಎರಡನೇ ಅಧ್ಯಾಯ ಮುಗಿನ್.

ತುಳುವೆರ್ ಆವಶ್ಯ ಪೋದರೆತ್ತಿ ಪುಸ್ತಕಳು.

ಕೃಷ್ಣಸಂಧಾನ	೦	೮	೦	ಬಂಗಾರ್ದೆಂಗಿದ ಕತೆ	೦	೧	೦
ಮಿತ್ಯನಾರಾಯಣ ಕತೆ	೦	೮	೦	ಕನ್ನಡಕೊ	೦	೦	೬
ಜನಮುಲ್	೦	೬	೦	ಕನ್ಯೋಪದೇಶ	೦	೨	೦
ಸತೀಕಮುಲ್	೦	೬	೦	ಅಮುಲ್ ದೆಪ್ಪಡೆ	೦	೧	೦
ಕಾನಿಗೆ	೦	೪	೦	ಪೊರ್ಲ್ ಕೆಂಟ್	೦	೧	೦
ಅಳಿಯಸಂತಾನ ಕಟ್ಟ್‌ದ ಗುಟ್ಟು	೦	೪	೦	ಪಂಚವಟಿ	೦	೩	೦
ಮದ್ ಮಾಳತ್ತ್ ಮದ್ ಮಾಯಿ	೦	೨	೦	ತುಳುಪದ್ಯಾವಳಿ	೦	೨	೬
ಪುಗಿರೆದ ಅಮುಲ್	೦	೦	೩	ತೊಡಕಿನಾರ್	೦	೨	೦
ಮುಂಡತ್ತಾಯಿ	೦	೨	೦	ತುಳು ಭಗವದ್ಗೀತೆ	೦	೬	೦
ತುಳು ಪದ್ಯಮಾಲಿಕೆ	೦	೧	೦	ವಿಶ್ವರೂಪದರ್ಶನೊ	೦	೧	೦

ಎಸ್. ಯು. ಪಣಿಯಾಡಿ, ತುಳುವ ಸಾಹಿತ್ಯಮಾಲೆ, ಉಡುಪಿ.

ವಿರುದ್ಧವೆಂದು ತರ್ಕ ಮಾಡಿದರು. ಆ ಸಭೆಯಲ್ಲಿ 107 ಪ್ರಶ್ನೆಗಳು ಕೇಳಲ್ಪಟ್ಟವು, ಅವುಗಳಿಗೆ ಕೆಲವಕ್ಕೆ ಉತ್ತರದೊರೆಯಿತು, ಕೆಲವು ತಳ್ಳಲ್ಪಟ್ಟವು; ಕೆಲವು ಯೋಚನೆಗೋಸ್ಕರ ನಿಂತವು, ಅಂತೂ ಎಲ್ಲವೂ ಒಂದಕ್ಕೊಂದು ಇತ್ಯರ್ಥವನ್ನು ಹೊಂದಿದವು. ತದನಂತರ ಕಮಿಟಿಗಳ ರಚನೆಯೊಂದಿಗೆ ಕ್ರಮನಿಯಮಗಳ (ರೂಲ್ಸ್ ಎಂಡ ರೆಗ್ಯುಲೇಶನ್) ಕಮಿಟಿ, ಅಪೀಲು ಕಮಿಟಿ, ಆರ್ಥಿಕ (ಫೈನಾನ್ಸ್) ಕಮಿಟಿ, ರಸ್ತೆ ಮತ್ತು ನಗರ ರಚನಾಸಮಿತಿ, ಸಾರ್ವಜನಿಕ ಆರೋಗ್ಯ ಮತ್ತು ಬೆಳಕು ವ್ಯವಸ್ಥೆಯ ಸಮಿತಿ, ವಿದ್ಯಾ ಕಮಿಟಿ, ಕಂಟ್ರ್ಯಾಕ್ಟ್ ಮತ್ತು ಉದ್ಯೋಗ ನೇಮಕ ಸಮಿತಿ, ಜವ್ಳಾನಾ ಕಮಿಟಿ ಹೀಗೆ ಎಂಟು ಸಮಿತಿಗಳ ರಚನೆಯಾಯಿತು. ಈ ನಡುವೆ 'ಪಂಕನೆಲ್ಲಿ' ಎಂಬ ಇನ್ನೊಂದು ಪ್ರಶ್ನೆಯು ಡಾ| ಆಚಾರ್ಯರಿಂದ ಕೇಳಲ್ಪಟ್ಟು ಪಕ್ಷವುಗಳಿಗಿಂತ ಸುಲಭದಲ್ಲಿ ಉತ್ತರವನ್ನು ಸಂಪಾದಿಸಿತು' ವಾದ ವಿವಾದಗಳಿಂದ ಬಳಲಿದವರು ಹಾಯಾಗಿ ಒಂದಿಷ್ಟು ಥಂಡನ್ನು ಅನುಭವಿಸುವಂತಾಯಿತು' ಇಷ್ಟರಲ್ಲೇ ಘಂಟೆ ಏಳೂವರೆ ಆದುದರಿಂದ ತಾ ೨೬ಕ್ಕೆ ಸಭೆಯನ್ನು ಮುಂದುವರಿಸಲಾಯಿತು, ಮುಂದುವರಿಸುವ ದಿನ ನಿರ್ಣಯವಾದರೂ ಸುಲಭದಲ್ಲಿ ಆಗಲಿಲ್ಲ, ಓಟು ತೆಗೆಯಬೇಕೆಂಬವರೆಗೂ ಎಳದಾಟವಾಗಿ, ಓಟಿನ ಫಲಿತಾಂಶವು ಹೇಗಾಗಬಹುದೋ ಹಾಗೆಯೇ ನಿರ್ಣಯವೂ ಆಗಿಹೋಯಿತು. ಈ ಮಧ್ಯೆ, ಜಟ್ಕಾಗಳ ಮತ್ತು ಸೈಕಲುಗಳ ತೆರಿಗೆಯು ಕಡಿಮೆಯಾಗಬೇಕೆಂಬ ಸೂಚನೆಗಳ ಚರ್ಚೆಯಾಗಿ ಸೈಕಲುಗಳ 6 ತಿಂಗಳ ತೆರಿಗೆಯನ್ನು ರೂ ಒಂದೂವರೆಯಿಂದ ಒಂದಕ್ಕಿಳಿಸಲಾಯಿತು, ಜಟ್ಕಾವಾಲರ ವಿಷಯಕ್ಕೆ ಸರಕಾರಕ್ಕೆ ಬರೆದು ತಿಳಿಯಬೇಕೆಂದಾಯಿತು

ತಾ. ೨೬—೧೦—೧೬ರ ಸಭೆ

ಮುಂದುವರಿಸಲ್ಪಟ್ಟ ಸಭೆಯು ತಾ ೨೬ರಲ್ಲಿ ಘಂಟೆ ೬—೧೫ಕ್ಕೆ ಸರಿಯಾಗಿ ಪುನಃ ಕೂಡಿತು ಸಾಧಾರಣ ಚರ್ಚೆಯು ನಡೆದು ಓವರ್ಸಿಯರ್ ಮತ್ತು ಅವರ ಪೇದೆಯ ಕೆಲಸವು 'ಕಾಯಮ್' ಎಂದಾಯಿತು. ಹೆಡ್‌ಕ್ಲಾರ್ಕರು ಆಫೀಸು ಮೆನೇಜರರಾಗಿಯೂ ಅಕೌಂಟೆಂಟರಾಗಿಯೂ ನೇಮಿಸಲ್ಪಟ್ಟರು. ಆ ಮೇಲೆ 'ನಮ್ಮ ಮುನಿಸಿಪಾಲಿಟಿಗೆ ಕಮಿಶನರರ ಅಗತ್ಯವಿಲ್ಲ' ಎಂಬ ಠರಾವು ಶ್ರೀ ಸದಂರ ಕಾಮತರಿಂದ ತರಲ್ಪಟ್ಟು ಚರ್ಚೆಗೆ ಬಿತ್ತು. ಚರ್ಚೆಯು ಒಂದಿಷ್ಟು ಬಿಸಿಬಿಸಿಯಾಗಿಯೇ ನಡೆಯಿತು. ಈಗ ಸ್ಪೆಶಲ್ ಆಫೀಸರರಾಗಿರುವ ಶ್ರೀ ನಾಯ್ಕರು ಕಮಿಶನರರಾಗಿರುವಾಗ 'ಉಡುಪಿ ಮುನಿಸಿಪಾಲಿಟಿಯು ವ್ಯವಸ್ಥೆಯಿಂದ ನಡೆಯಬೇಕಾದರೆ ಕಮಿಶನರರು ಅಗತ್ಯವೆಂದು ಬರಕೊಂಡಿದ್ದುದು ಬಜೆಟಿನಲ್ಲಿ ಕಂಡುಬಂತು. ಮೆಂಬರರು ಅದನ್ನು ವಿರೋಧಿಸಿ, 'ಸದ್ಯಸ್ಥಿತಿಯಲ್ಲಿ ಉಡುಪಿ ಮುನಿಸಿಪಾಲಿಟಿಗೆ ಕಮಿಶನರರು ಅನಗತ್ಯವಾದುದರಿಂದ ಸರಕಾರವು ಅವರನ್ನು ಹಿಂತೆಗೆಯಬೇಕಾಗಿ ಈ ಸಭೆಯು ಕೇಳಿಕೊಳ್ಳುತ್ತದೆ'ಎಂಬ ಠರಾವನ್ನು ಸರ್ವಸಮ್ಮತಿಯಿಂದ ಮಂಜೂರುಮಾಡಿದರು. ಸಭೆಯ ಚರ್ಚೆಗಳಲ್ಲಾ ಸರ್ವಸಾಧಾರಣವಾಗಿ ವಿನೋದಪೂರ್ಣವಾಗಿಯೇ ನಡೆದವು. ಇಂಗ್ಲಿಷಿನಲ್ಲಿ ಸರಿಯಾಗಿ ವಾದಿಸಲಾಗದ ನಾಲ್ಕಾರು ಮೆಂಬರರಿರುವರೆಂದು ಹೇಳಬಹುದು, ಕನ್ನಡ ಬಾರದವರಾರೂ ಇಲ್ಲವೆಂದೂ ಕೇಳಿಬಂದಿತು. ... ... ಹೆಚ್ಚಾಗಿ ... ... ಅಂದರೆ ... ... ನಾಲ್ಕೈದು ಮಂದಿ ... ... ಅರ್ಥವಾಗದ ಕೆಲವರು ... ... ಗಿರಬೇಕಲ್ಲ, ಇತರರೆಲ್ಲ ... ... ಹೂಡು ಹಾಕುವವರಿಗಿಂತ ಹೆಚ್ಚಾಗಿ ... ... ಮಿಕ್ಕ ಕೆಲವರು ಯಾವ ವಿಷಯವನ್ನೂ ಬಿಡದೆ, ದೊಡ್ಡದು ಸಣ್ಣದು ಎಂದು ಒಂದಿಷ್ಟು ದಯಾದಾಕ್ಷಿಣ್ಯ ತೋರಿಸದೆ-ಎಲ್ಲವನ್ನೂ ನಜ್ಜುಗುಜ್ಜು ಮಾಡುವುದರಲ್ಲಿ ನಿರತರಾಗಿದ್ದರು. ಅಂತೂ ಒಮ್ಮೆ ಯುಕ್ತ ಕೆಲಸಮಾಡಿ ಸೋತವರು 'ಬ್ಲ್ಯಾಕ್ ಸ್ಮಿತ್' ಸಭೆಗೆ ಹೋಗೋಣ' ಎಂದು ಅದು ಗಿಂಟ ಕುಳಿತು ವಿನೋದಹೊಂದುವ ಉಪಕಾರವಾಗುವಂತಿದೆ, ನಮ್ಮ ನಗರ ಸಭೆಯು ಮೀಟಿಂಗುಗಳಿಂದ ಎಂದೊಂದು ಬಾತ್ಮಿ

ಮಂಗಳೂರು.

(ನಮ್ಮ ಸ್ವಂತ ಬಾತ್ಮಿದಾರರಿಂದ)

ವಿವಿಧ ಧರ್ಮಗಳ ಪರಿಷತ್ತು.

ಸ್ಥಳೀಯ ಬ್ರಹ್ಮಸಮಾಜದ ಆಶ್ರಯದಲ್ಲಿ ಹಿಂದೆಯೇ ತಿಳಿಸಿದ ಮೇರೆಗೆ ವಿವಿಧ ಧರ್ಮಗಳ ಪರಿಷತ್ತು ಕಳೆದ ತಾ ೧೯ರಲ್ಲಿ ಜರಗಿತು. ರೆ ಇ ಸುಬ್ಬು ಕೃಷ್ಣಯ್ಯನವರು ಅಗ್ರಾಸನ ವಹಿಸಿದ್ದರು. ಪ್ರೋ ಎನ್ ಶ್ರೀನಿವಾಸಾಚಾರ್ಯರು ಹಿಂದೂಧರ್ಮದ ವಿಷಯವನ್ನು ಕುರಿತು ಅಮೋಘ ಭಾಷಣವಿತ್ತರು. ಹಿಂದೂಧರ್ಮವು ಲೋಕದ ಜನರಿಂದ ಅನುಸರಿಸಲ್ಪಡುವುದಕ್ಕೆ ಯೋಗ್ಯವಾದ ಮತವೆಂದೂ, ಇದರಲ್ಲಿ ಮಾನವನು ಜನ್ಮವೆತ್ತಿದಂದಿನಿಂದ ಅಂತ್ಯದ ವರೆಗೂ ಧರ್ಮಮಾರ್ಗದಲ್ಲಿಯೇ ನಡೆಯಲು ಬೋಧಿಸುವುದೆಂದೂ ನಾಸ್ತಿಕನೂ ಕೂಡ ದೇವನ ತಿಳುವಳಿಕೆಗೆ ಸರಿಯಾಗಿ ನಿರ್ವಂಚನೆಯಿಂದಲೂ ಶ್ರದ್ಧೆಯಿಂದಲೂ ನಡೆದರೆ ಅವನಿಗೆ ಭಗವಂತನು ಸ್ವರ್ಗವನ್ನು ಕರುಣಿಸುವನೆಂದೂ ತಿಳಿಸಿದರು. ಮಿ| ಜಾರ್ಜ ಹರ್ಬರ್ಟ್ ಸಾಹೇಬರು ಕ್ರಿಸ್ತಧರ್ಮವನ್ನು ಆಧುನಿಕ ದೃಷ್ಟಿಯಿಂದ ವಿವರವಾಗಿ ತಿಳಿಸಿದರು. ಮಿ| ಮಹಮ್ಮದ್ ಅಬ್ದುಲ್ ಕರೀಮರು ಇಸ್ಲಾಂ ಮತದ ವಿಷಯವಾಗಿ ಮಾತಾಡುತ್ತಾ, ಅದು ಪ್ರಪಂಚದಲ್ಲಿ ದೇವರು ಒಬ್ಬನೇ ಎಂದೂ, ಲೋಕದ ಜನರೆಲ್ಲರೂ ಆತನ ಮಕ್ಕಳೆಂದೂ ಬೋಧಿಸುವದೆಂದೂ, ಮಾನವವರ್ಗದಲ್ಲಿ ಸಮತಾಭಾವವನ್ನು ತಿಳಿಸಿದೆಯೆಂದೂ ಸ್ತ್ರೀಯರಿಗೆ ಸಮಾನಪಕ್ಷ ಕೊಟ್ಟ ಮತವೆಂದರೆ ಮಹಮ್ಮದೀಯ ಮತವೆಂದೂ ಹೇಳಿದರು. ಅನಂತರ ಶ್ರೀ ಬೆಂಗಾರ್ಕರರು ಥಿಯಾಸೊಫಿಯ ಪರವಾಗಿಯೂ, ಶ್ರೀ ಮೋಹನಪ್ಪ ತಿಂಗಳಾಯರು ಆರ್ಯಸಮಾಜದ ವಿಷಯವಾಗಿಯೂ ಶ್ರೀ ಬಿ ರ ಮರ್ಮ ಬಿ ಎ ರವರು ಶ್ರೀರಾಮಕೃಷ್ಣ ವಿವೇಕಾನಂದ ಸಂಘದ ವಿಷಯದಲ್ಲಿಯೂ ಭಾಷಣವಿತ್ತರು. ಅಧ್ಯಕ್ಷರು ಭಾಷಣಕರ್ತರುಗಳಿಗೆ ಧನ್ಯವಾದಗಳನ್ನರ್ಪಿಸಿದರು

ಶ್ರೀ ದಾಮೋದರ ಕಿಣಿಯವರು ಒಂದು ಸೂಚನೆಯನ್ನು ತಂದು ಅಂದು ಸೇರಿದ ಭಾಷಣಕರ್ತರುಗಳು ಒಂದುಗೂಡಿ ಆಗಾಗ್ಗೆ ಧಾರ್ಮಿಕ ವಿಚಾರಗಳನ್ನು ಚರ್ಚಿಸುವ ಮೂಲಕ ಎಲ್ಲಾ ಧರ್ಮಗಳವರಲ್ಲಿಯೂ, ಒಂದು ತರದ ಭ್ರಾತೃಭಾವವನ್ನುಂಟುಮಾಡಲು ಯತ್ನಿಸಬೇಕೆಂದು ಹೇಳಿದರು. ಆ ವಿಷಯದಲ್ಲಿ ಆಲೋಚನೆಯೂ ನಡೆಯುತ್ತಿದೆ

ಮಹಾರಾಜರ ಉದಾರ ದಾನ.

ಪ್ರಜಾಪಕ್ಷದ ಪ್ರಚಾರ ಕಾರ್ಯಕ್ಕೆಂದು ಬಂದಿದ್ದ ಪೀಠಾಪುರದ ಮಹಾರಾಜರು ಮಹಿಳಾ ಸೇವಾಶ್ರಮಕ್ಕೆ ರೂ ೧೦೦ನ್ನು ಮೊಗವೀರರ ಜ್ಞಾನೋದಯ ಸಮಾಜಕ್ಕೆ (ಮಧ್ಯಪಾನ ನಿಷೇಧದ ಚಳವಳಿಕ್ಕಾಗಿ) ರೂ ೨೦೦ರನ್ನೂ ಕೊಡುಗೆಯಾಗಿಯೂ ಹಿಂದೂ ಎಲಿಮೆಂಟರಿ ಶಾಲೆಗೆ ರೂ ೫೦ನ್ನು ಧರ್ಮಕೊಡುವುದಾಗಿ ವಾಗ್ದಾನಮಾಡಿರುವರೆಂದು ತಿಳಿದುಬರುತ್ತದೆ

ನಗರ ಸಭೆ

ಮಂಗಳೂರು ನಗರ ಸಭೆಯ ಮೀಟಿಂಗು ಕಳೆದ ತಾ ೧೯ರಲ್ಲಿ ಮಾನ್ಯ ಡಾ| ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಿ| ಜವಹರಲಾಲ ನೆಹರೂರವರ ಆತ್ಮಕಥೆಯ ಪುಸ್ತಕಗಳನ್ನು ನಗರಸಭೆಯ ಪುಸ್ತಕ ಭಂಡಾರದಲ್ಲಿಡಲು ಜಿಲ್ಲಾ ವಿದ್ಯಾಧಿಕಾರಿಗಳು ಶಿಫಾರಸುಮಾಡಲಿಲ್ಲವೆಂಬುದರ ಮೇಲೆ ಚರ್ಚೆಯಾಯಿತು. ಸರಕಾರದವರಿಂದ ಒಂದುವರೆ ಲಕ್ಷ ರೂಪಾಯಿ ಸಾಲಪಡೆಯುವುದಕ್ಕೆ ನಿಶ್ಚಯವಾಗಿತ್ತಷ್ಟೆ. ಅದರ ವಿಷಯ ಸಂಪೂರ್ಣ ವಿಚಾರವು ಮತ್ತೊಮ್ಮೆ ಸಭೆಯು ಮುಂದಿಡಬೇಕೆಂದಾಯಿತು

ಅಸೆಂಬ್ಲಿಗೆ ಹೊಸ ಉಮೇದುವಾರರು.

ಮಂಗಳೂರು, ಕುಂದಾಪುರ, ಪುತ್ತೂರು ಡಿವಿಜನುಗಳಿಂದ ಕ್ರಮವಾಗಿ ಶ್ರೀ ಗೌಡ ವೆಂಕಟಪ್ಪಯ್ಯ ಬಾಳಿಗರು, ಎ ಬಿ ಶೆಟ್ಟಿ ಎಂ ಎಲ್ ಸಿ ಯವರು ಮತ್ತು ಕೆ ಆರ್ ಕಾರಂತರು ಪ್ರಾಂತಿಕ ಪಾರ್ಲಿಮೆಂಟರಿ ಸಮಿತಿಯವರಿಂದ ಕಾಂಗ್ರೆಸ್ ಕಡೆಯ ಉಮೇದ್ವಾರರಾಗಿ ಶಿಫಾರಸು ಹೊಂದಿರುವರೆಂದು ಖಾತ್ರಿಯಾದ ಒಂದು ವಾರ್ತೆಯಿದೆ. ಕೌನ್ಸಿಲಿಗೆ ಶ್ರೀ ವೈಕುಂಠ ಬಾಳಿಗರು ಶಿಫಾರಸು ಹೊಂದಿರುವರಾಗಿಯೂ ತಿಳಿದುಬರುತ್ತದೆ

ಮಂಗಳೂರು ಡಿವಿಜನಿಗೆ ಕಾರ್ನಾಡು ಸದಾಶಿವರಾಯರನ್ನು ಆರಿಸಿದರೆಂದೂ ಆದರೆ ಅವರನ್ನು ಒಂದಕ್ಕೆ ನಿಲ್ಲಿಸಿ ವೆಂಕಟಪ್ಪಯ್ಯ ಬಾಳಿಗರನ್ನು ಆರಿಸುವಂತೆ ಬಹಳ ಯತ್ನಗಳೂ ನಡೆದಿರುತ್ತವೆಂದೂ ಒಂದು ಬಾತ್ಮಿ

ಕಾಂಗ್ರೆಸ್ ಚುನಾವಣೆ ಕಾರ್ಯ

ಮಂಗಳೂರಿನ ಕಾಂಗ್ರೆಸ್ ಪಕ್ಷದ ಮುಂದಾಳುಗಳಾದ ಶ್ರೀ ಗೌಡ ಡಾ| ವಿಟ್ಠಲ ಶೆಟ್ಟಿಯವರೂ, ಕಾರ್ನಾಡು ಸದಾಶಿವರಾಯರೂ, ಕೆ ಆರ್ ಕಾರಂತರೂ ಪುತ್ತೂರು ತಾಲೂಕಿನಲ್ಲಿ ಪ್ರವಾಸ ಬೆಳೆಸಿ ಕಾಂಗ್ರೆಸಿನ ಧ್ಯೇಯ, ಕಾಂಗ್ರೆಸಿಗೆ ಮತದಾನವನ್ನು ಕೊಡಬೇಕಾದ ಹಿಂಬಲ ಇವುಗಳ ವಿಷಯವಾಗಿ ಭಾಷಣವಿತ್ತರು. ಬೆಳ್ತಂಗಡಿ, ಬಂಟ್ವಾಳ ಮೊದಲಾದೆಡೆಗಳಲ್ಲಿ ಸಭೆಗಳು ಜರಗಿದುವು

ಲೇಡಿಸ್ ಕ್ಲಬ್

ಮಂಗಳೂರು ಲೇಡಿಸ್ ಕ್ಲಬ್ಬಿನಲ್ಲಿ ಕಳೆದ ತಾ ೧೯ರಲ್ಲಿ ಒಂದು ಸತ್ಕಾರಕೂಟವಿತ್ತು. ಅಂದು ನಡೆದ ಆಟಗಳ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಜಿಲ್ಲಾ ಮೆಡಿಕಲ್ ಆಫೀಸರರ ಪತ್ನಿಯವರು ಪಾರಿತೋಷಕಗಳನ್ನು ಹಂಚಿದರು

ಮಂತ್ರಿಗಳು ಸಂದರ್ಶಿಸಿದರು

ವ್ಯಾಪಾರ ಮಂತ್ರಿಗಳಾದ ಶ್ರೀ ಪಿ ಟಿ. ರಾಜನ್‌ರವರು ಮಂಗಳೂರು ಲೇಡಿಸ್ ಕ್ಲಬ್ಬಿಗೆ ಭೆಟ್ಟಿಕೊಟ್ಟು ಅಲ್ಲಿನ ಪುಸ್ತಕ ಭಂಡಾರವನ್ನು ನೋಡಿ ಸಂತೋಷಪಟ್ಟದ್ದಲ್ಲದೆ ಮಂಗಳೂರಿನ ಸ್ತ್ರೀಯರು ವಿದ್ಯೆಯಲ್ಲಿ ಎಷ್ಟು ಮುಂದುವರಿದಿರುವರೆಂಬುದನ್ನು ನೋಡಿ ಸಂತೋಷಪಟ್ಟು ಕ್ಲಬ್ಬಿನವರ ಚಟುವಟಿಕೆಗಳನ್ನು ಪ್ರಶಂಸಿಸಿ ಅದಕ್ಕೆ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸಿದರು.

ಗಣಪತಿ ಹ್ಯಾಸ್ಕೂಲಿನಲ್ಲಿ ದಸರಾ

ಮಂಗಳೂರು ಗಣಪತಿ ಹ್ಯಾಸ್ಕೂಲಿನಲ್ಲಿ ದಸರಾ ಮಹೋತ್ಸವವು ಯಶಸ್ವಿಯಾಗಿ ಮುಕ್ತಾಯವಾಯಿತು. ನಿನ್ನೆ ದಿನ ಸಾಯಂಕಾಲ ಜಿಲ್ಲಾ ಮೆಡಿಕಲ್ ಆಫೀಸರರಾದ ಡಾ| ಸದಾಶಿವರಾಯರ ಅಧ್ಯಕ್ಷತೆಯಲ್ಲಿ ನಾಟಕಾದಿ ಪ್ರದರ್ಶನಗಳು ಜರಗಿ ವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಹಂಚಲ್ಪಟ್ಟವು

ಜಿಲ್ಲಾ ಮೆಡಿಕಲ್ ಕೌನ್ಸಿಲ್

ಜಿಲ್ಲಾ ಮೆಡಿಕಲ್ ಕೌನ್ಸಿಲಿನ ಜನರಲ್ ಮೀಟಿಂಗು ಕಳೆದ ತಾ ೨೬ರಲ್ಲಿ ವೆನ್ಲಾಕ್ ಆಸ್ಪತ್ರೆಯ ವಠಾರದಲ್ಲಿ ನಡೆಯಿತು

ದಸರಾ ಮಹೋತ್ಸವ

ಶ್ರೀ ಮಂಗಳಾದೇವಿ ದೇವಸ್ಥಾನದಲ್ಲಿ ಜರಗುವ ನವರಾತ್ರಿ ವ್ರತವು ನಿನ್ನೆಯದಿನ ಬಹಳ ವಿಜೃಂಭಣೆಯಿಂದ ಜರಗಿತು. ಜನ ಸಂದಣಿಯು ಬಹಳ ವಿಶೇಷವಾಗಿತ್ತು

ವೈಜ್ಞಾನಿಕ ಉಪನ್ಯಾಸ

ಪ್ರಸ್ತುತ ದಸರಾ ಮಹೋತ್ಸವಕ್ಕೆ ಚಿತ್ತೈಸಿದ್ದ ಪ್ರಸಿದ್ಧ ವಿಜ್ಞಾನಿಕ ಉಪನ್ಯಾಸ ಪ್ರಚಾರಕರಾದ ಶ್ರೀ ಮಾನ್ ಬಿ ಎಂ ಶಿವರಾಮಯ್ಯನವರು ಮಿತ್ರಮಂಡಲಿಯ ಆಶ್ರಯದಲ್ಲಿ ನಿನ್ನೆಯ ದಿನ (ತಾ ೨೩ಕ್ಕೆ) ಕೆನರಾ ಹ್ಯಾಸ್ಕೂಲ್ ಭುವನೇಂದ್ರ ಸಭಾಸದನದಲ್ಲಿ 'ಹಿಡಿದಿಟ್ಟ ಓಟ, ಕೂಡಿಟ್ಟ ಮಾತು'' ಎಂಬ ವಿಷಯದಲ್ಲಿ ಭಾಷಣಮಾಡಿದರು. ಇವರು ಕಠಿಣ ತರದ ವಿಷಯಗಳನ್ನು ಸುಲಭ ಭಾಷೆಯಲ್ಲಿ ಅದರಲ್ಲೂ ಕನ್ನಡದಲ್ಲಿ ವಿವರಿಸಿದರು. ವಿಷಯವನ್ನು ಮತ್ತಷ್ಟು ಸುಲಭವಾಗಿ ತಿಳಿಸಲು ಮಾಯಾಲಾಂಧ್ರವನ್ನು ಉಪಯೋಗಿಸಿದರು. ಗ್ರಾಮಫೋನು, ಟೆಲಿಫೋನು, ಚಲಚಿತ್ರ, ಮಾತಾಡುವ ಚಿತ್ರ ಇವುಗಳ ತತ್ವವನ್ನು ಸರಿಯಾಗಿ ಜನರಿಗೆ ತಿಳಿಯುವಂತೆ ಮಾಡಿದರು. ಕನ್ನಡದಲ್ಲಿಯೂ ಕೂಡ ವಿಜ್ಞಾನ ಶಾಸ್ತ್ರವನ್ನು ತಿಳಿಯುವುದು ಕಷ್ಟವಲ್ಲವೆಂಬುದನ್ನು ಶ್ರೀ ಶಿವರಾಮಯ್ಯನವರು ವ್ಯಕ್ತಗೊಳಿಸಿದರು

ಶ್ರೀ ... ಶ್ರೀನಿವಾಸಯ್ಯಂಗಳವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಶ್ರೀ ಶಿವರಾಮಯ್ಯನವರು ಕೈಕೊಂಡ ಕಾರ್ಯವನ್ನು ಪ್ರಶಂಸಿದ್ದಲ್ಲದೆ ಅಂತಹ ಉಪನ್ಯಾಸಗಳಿಂದ ಜನರಿಗೆ ಇಂಗ್ಲೀಷ್ ತಿಳಿಯದ ಜನರಿಗೆ ಎಷ್ಟೊಂದು ಪ್ರಯೋಜನವಾಗಬಹುದೆಂಬುದನ್ನು ಹೇಳಿದರು

THE UDIPI BANK, LTD.

ಚಿನ್ನ, ಆಭರಣ, ಸರಕು
ಇತ್ಯಾದಿಗಳ ಅಡವಿನ ಮೇಲೆ

ಸುಲಭ ಸಾಲಗಳು
ಯಾವಾಗಲೂ ಸಿಗುವವು.

ಎಲ್ಲಾ ತರದ ಬೇಂಕ್ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ.

ದಿ ಉಡಿಪಿ ಬೇಂಕ್ ಲಿಮಿಟೆಡ್
ಉಡುಪಿ

ಕಾನ್ವೆಂಟಿನಲ್ಲಿ ಉಪನ್ಯಾಸ

ಈ ದಿನ 2–30ರಿಂದ 4–30ರ ವರೆಗೆ ಸ್ತ್ರೀಯರ ಕಾಲೇಜಿನಲ್ಲಿ ಶ್ರೀ ಶಿವರಾಮಯ್ಯನವರು ಸನ್ನೆಯ ಶಿಸ ಕೆಸರು ಹೈಸ್ಕೂಲ... ... ವಿಷಯವಾಗಿ ಭಾಷಣಮಾಡಿದರು ಕಾಲೇಜಿನ ಪ್ರೊಫೆಸರುಗಳೂ, ವಿದ್ಯಾರ್ಥಿನಿಯರೂ ತುಂಬಾ ಸಂಖ್ಯೆಯಲ್ಲಿ ನೆರದಿದ್ದರು.

ಕರ್ನಾಟಕ ಸಾಹಿತಿಗಳಿಗೆ ಸತ್ಕಾರ ಕೂಟ

ಪುತ್ತೂರು ದಸರಾ ಮಹೋತ್ಸವಕ್ಕೆ ಚಿತ್ತೈಸಿದ್ದ ಪ್ರಸಿದ್ಧ ಕನ್ನಡ ಸಾಹಿತಿಗಳಾದ ಶ್ರೀ| ಯಂ. ಆಚಾರ್ಯ, ಮುಂಬಯಿ, ಶ್ರೀ| ಅ. ನ. ಕೃಷ್ಣರಾಯರು, ಬೆಂಗಳೂರು, ಶ್ರೀ ವಿ. ಜಿ ಕುಲಕರ್ಣಿ, ಬೆಳಗಾವಿ, ಶ್ರೀ| ಬಿ. ಯಂ. ಶಿವರಾಮಯ್ಯನವರು, ನಂಜನಗೂಡು, ಶ್ರೀ| ಸಿ. ಸೀತಾರಾಮಯ್ಯನವರು, ಬೆಂಗಳೂರು—ಇವರುಗಳು ಮಂಗಳೂರಿಗೆ ಒಂದಿರುವರು ಈ ದಿನ(ತಾ 26) ಸಾಯಂಕಾಲ 5ಘಂಟೆಗೆ ಮಿತ್ರ ಮಂಡಲಿಯವರು ಈ ಮಹನೀಯರಿಗೆ ಒಂದು ಟೀಪಾರ್ಟಿ ಸತ್ಕಾರವನ್ನಿತ್ತರು ಮಿತ್ರ ಮಂಡಲಿಯ ಸದಸ್ಯರೂ ಮಂಗಳೂರಿನ ಅನೇಕ ವಿದ್ವಜ್ಜನರೂ ಭಾಗವಹಿಸಿದ್ದರು

ಅಧ್ಯಕ್ಷರಿಗೂ, ಶ್ರೀ ಶಿವರಾಮಯ್ಯನವರಿಗೂ ಮಂಡಲಿಯ ಪರವಾಗಿ ದನ್ಯವಾದ ಅರ್ಪಣೆಮಾಡಿದ ಬಳಿಕ ಸುಮಾರು 9 ಘಂಟೆಗೆ ಸಭೆಯು ಮುಕ್ತಾಯವಾಯಿತು

ಮಂಗಳೂರು ಮುನ್ಸಿಪಲ್ ಚೇಯರ್ ಮೇನ್:—ಡಾಕ್ಟರ್ ಕೆ ಶಿರಲ ಶೆಟ್ಟಿ ಸಿತಾಪುರದ ಮಹಾರಾಜರನ್ನು ಇದಿರುಗೊಳ್ಳಲು ರೈಲ್ವೇಸ್ಟೇಶನಿಗೆ ಹೋಗಿದ್ದರೆಂದು ನಮ್ಮ ತಾ. ೨೨-೧೦-೩೬ನೇ ಸಂಚಿಕೆಯ ಮಂಗಳೂರು ಸಮಾಚಾರದಲ್ಲಿ ಪ್ರಕಟವಾದುದು ತಪ್ಪೆಂದೂ, ಡಾಕ್ಟರ್ ಶೆಟ್ಟಿ ಮಹಾರಾಜರನ್ನು ಸ್ವಾಗತೀಕರಿಸಲು ಹೋಗಿದ್ದಿಲ್ಲೆಂದೂ, ಪಟ್ಟಣದಲ್ಲಿ ಬರುವ ಒಬ್ಬ ಮಿತ್ರರನ್ನು ಎದುರುಗೊಳ್ಳುವುದಕ್ಕೆ ಮತ್ತು ಮೈಲಿನಲ್ಲಿ ಹೋಗುತ್ತಿದ್ದ ಗಳೆಯರೊಬ್ಬರನ್ನು ಬೀಳ್ಕೊಡುವುದಕ್ಕೆ ಹೋಗಿದ್ದರೆಂದೂ ತಿಳಿದುಬರುತ್ತದೆ

ಲೈಸೆನ್ಸುದಾರರು ತಮ್ಮ ಲೈಸನ್ಸುಗಳನ್ನು ಹೊಸತಾಗಿ ಮಾಡಲು (ರಿನ್ಯೂವಲ್) ಕಲೆಕ್ಟರರ ಆಫೀಸಿಗೆ ಕಳುಹಿಸಿರುವರಷ್ಟೆ, ಅವುಗಳು ಹೊಸತಾಗಿ ಮಾಡಲ್ಪಟ್ಟವೆ ಅವುಗಳು ತಹಶಿಲ್ದಾರಾ ಮ್ಯಾಜಿಸ್ಟ್ರೇಟರ ಮುಖಾಂತರ ಹಿಂದಕ್ಕೆ ಕೊಡಲ್ಪಡುವವು. ಲೈಸನ್ಸುದಾರರು ಅವುಗಳನ್ನು ತಾಲೂಕು ಆಫೀಸಿನಿಂದ ಪಡೆಯಬಹುದು ಎಂದು ಜಿಲ್ಲಾ ಕಲೆಕ್ಟರ್ ದೊರೆಗಳು ತಿಳಿಸುತ್ತಾರೆ

ಜಿಲ್ಲಾ ಟ್ರಸ್ಟಿ ಕೌನ್ಸಿಲಾ ಸಭೆ ಈ ಸಂಘದ ಮುಂದಿನ ಸಭೆಯು ಅಕ್ಟೋಬರ ತಾ ೩೧ನೇ ಶನಿವಾರ 4 ಘಂಟೆಗೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ನಡೆಯುವದು ಸದಸ್ಯರು ಬರಬೇಕಾಗಿ ಪ್ರಾರ್ಥಿಸಲ್ಪಟ್ಟಿದ್ದಾರೆ.

ಮಂಗಳೂರವರೂ, ಮದ್ರಾಸಿನ ಪ್ರಸಿದ್ಧ ವಕೀಲರೂ ಆದ ಮಿ ಎಸ್. ಎ. ಟಿ ಕ್ಯೂಬೋಲರವರು ಮದ್ರಾಸ್ ಮತ್ತು ಇಕ್ಕನ ಜಡ್ಜರಾಗಿ ನೇಮಿಸಲ್ಪಟ್ಟಿರುವುದು ಅಭಿನಂದನೀಯವಿದೆ

ಮಂಗಳೂರು ನಗರಸಭೆ

ಮಂಗಳೂರು ನಗರಸಭೆಯ ವಿಶೇಷ ಮೀಟಿಂಗೊಂದು ನಗರ ಸಭಾಧ್ಯಕ್ಷರಾದ ಮಾನ್ಯ ಡಾ| ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ದಿನ ಸಾಯಂಕಾಲ ಜರಗಿತು ಹಂಪನಕಟ್ಟೆಯಲ್ಲಿ, ಪಾದಚಾರಿಗಳು ಕಾಲುದಾರಿಯಲ್ಲಿಯೇ ನಡೆದುಕೊಂಡು ಹೋಗಬೇಕೆಂಬ ಸೂಚನೆಯನ್ನೊಳಗೊಂಡ ನೋಟೀಸಿನಲ್ಲಿ ಆಕ್ಷೇಪಕರವಾದ (offensive) ವಾಚನವಿದೆಯೆಂದೂ, ನೋಟೀಸಿಗೆ ವಿರೋಧವಾಗಿ ನಡೆದವರನ್ನು ಪ್ರಾಸಿಕ್ಯೂಶನಿಗೆ ಗುರಿಪಡಿಸುವುದಾಗಿ ಸೂಚಿಸಿದುದು ಕಮಿಶನರ ಅಧಿಕಾರಕ್ಕೆ ಮೀರಿದ್ದಾಗಿದೆಯೆಂದೂ, ನಮ್ರತೆಯಿಂದ ಕಾಲುದಾರಿಯನ್ನುಪಯೋಗಿಸುವ ಹಾಗೆ ನೋಟೀಸಿನಲ್ಲಿರುವ ಶಬ್ದಗಳನ್ನು ಪೂರ್ಣಮಾಡಿಸಬೇಕೆಂದೂ, ಶ್ರೀ ಆನಂದ ತಲ್ಲೂರರು ಠರಾವನ್ನು ತಂದರು. ಶ್ರೀ ತಲಚೇರಿಕಾರ್ ರಂಗರಾಯರು ಅದನ್ನು ಅನುಮೋದಿಸಿದರು. ನಗರ ಸಭಾಧ್ಯಕ್ಷರೂ ಇನ್ನೂ ಅನೇಕ ಸದಸ್ಯರೂ ಆ ಶಬ್ದಗಳನ್ನು ಬದಲಾವಣೆಮಾಡಬೇಕೆಂದು ಸೂಚಿಸಿದರು ಠರಾವು ವಿರೋಧವಿಲ್ಲದೆ ಅಂಗೀಕರಿಸಲ್ಪಟ್ಟಿತು. ನಗರದ ಟ್ರಂಕ್ ರೋಡುಗಳ ಸೈಕಿಆರು ಸ್ಟೈಲಿಗೆ ಆಸ್ಫಾಲ್ಟ್ ಹಾಕಿ ದುರಸ್ತಿಪಡಿಸುವ ಬಗ್ಗೆ ರಿಟ್ರೆಂಚ್ಮೆಂಟಿನ ಹಣವು (ರೂ. ೨೦೬೦೦೦) ಆ ಬಗ್ಗೆ ಉಪಯೋಗಿಸಲ್ಪಡಬಹುದೆಂದಾಯಿತು

ಪರ್ಕಳ:—ಈ ಚಿಕ್ಕ ಪೇಟೆಯಲ್ಲಿ ಒಂದು ಪೋಸ್ಟಾಫೀಸುಯಿಲ್ಲದೆ, ಆಗರ್ಭ ಶ್ರೀಮಂತರಿಂದ ಹಿಡಿದು ಅತೀ ಬಡಬಗ್ಗರ ವರೆಗೂ ಬಹಳ ತೊಂದರೆಗಳಿಗೀಡಾಗಿರುವರು ವರ್ತಮಾನ ಪತ್ರಿಕೆಗಳೂ ಪ್ರೈವೇಟ್ ಪತ್ರಗಳೂ ಆಮಂತ್ರಣ ಪತ್ರಿಕೆಗಳೂ ಮನಿಯಾರ್ಡರುಗಳೂ ಯಾವತ್ತೂ ಪೇಟೆಯವರಿಗಾಗಲಿ ಆಸುಪಾಸಿನ ಗ್ರಾಮಸ್ಥರಿಗಾಗಲಿ ಸಕಾಲದಲ್ಲಿ ತಲ್ಪುವ ಏರ್ಪಾಡಿಲ್ಲದೆ, ಬಹಳ ಸಂಕಟಕ್ಕೊಳಗಾಗಿರುವರು. ಸಾಧಾರಣ ಎರಡು ಮೂರು ವರ್ಷಗಳ ಹಿಂದೆ ಇದ್ದ ಪೋಸ್ಟಾಫೀಸನ್ನು ಮಾನ್ಯ ಸರಕಾರದವರು ತಮ್ಮ ಲಾಭನಷ್ಟದಿಂದ ನೋಡಿಯೋ ಯಾ ಇನ್ನಿತರ ಕಾರಣಗಳಿಂದಲೋ ತೆಗೆದು ಹಾಕಿದುದು ತುಂಬಾ ವಿಷಾದಕರ ಇನ್ನಾದರೂ ಪ್ರಜೆಗಳ ಹಿತವನ್ನು ಬಯಸುವ ಮಾನ್ಯ ದಯಾಳು ಸರಕಾರದವರು ನಮ್ಮಿ ಸಂಕಷ್ಟಗಳನ್ನು ದೂರಗೊಳಿಸುವ ಬಗ್ಗೆ ದಯವಿಟ್ಟು ಇತ್ತ ಗಮನಿಸುವರೇ ಯೆಂದೂದು ಬಾತ್ಮಿ

ಇಲ್ಲಿ ಸಾಧಾರಣ ಎರಡು ಮೂರು ತಿಂಗಳುಗಳಿಂದಲೂ ಜುಗಾರಿಯಾಟವು ದಿನ ತಪ್ಪದೆ ಎಂಬಂತೆ ನಡೆಯುವದರಿಂದ ಸಂಬಂಧ ಪಟ್ಟವರು ಇತ್ತ ಗಮನ ಕೊಡುವರೇ?

ಮಾನ್ಯ ದಯಾಳು ಸರಕಾರದವರು ಇಲ್ಲ ಒಂದು ಧರ್ಮದ ಭಾವಿಯನ್ನು ತೋಡಿಸಿದುದರಿಂದ ಇಲ್ಲಿಯ ಬಡಬಗ್ಗರಿಗೆ ಬಹಳ ಪ್ರಯೋಜನವಾಗಿರುವದು.

ನೀಲಾವರ:—ಶ್ರೀ ಮಹಿಷಮರ್ದಿನಿ ಶಾಲೆಯ ವರ್ಧಂತಿಯು ಇದೇ ತಾ ೨೧-೧೦-೩೬ರಲ್ಲಿ ಬಾರ್ಕೂರಿನ ಡಾ| ಕೆ ಆರ್. ವೈಗಳವರ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾ ಬಾಲಕರು ಗಯಚರಿತ್ರೆ ಎಂಬ ನಾಟಕವನ್ನೂ ಕೋಲಾಟ, ಡ್ರಿಲ್ಸ್, ಡ್ರಿಲ್, ಜಡೆ ಹೆಣೆಯುವದೇ ಮೊದಲಾದ ಆಟಗಳನ್ನೂ ಪ್ರದರ್ಶಿಸಿದರು. ಸಭಿಕರ ಭಾಷಣ, ಅಧ್ಯಕ್ಷರ ಭಾಷಣವಾಗಿ ಸ್ವೀಟು ಹಂಚುವದರ ಶಿಬಿರಾಗ್ನಿಯು ನಡೆಯಿತು. ಮಹಿಷಮರ್ದಿನಿ ಶಾಲಾಬಾಲಕರು ಕುಂಜಾಲಿನ ಶಿಶುಸಪ್ತಾಹದ ಸಮಯದಲ್ಲಿಯೂ, ಇತರ ಊರುಗಳಲ್ಲಿಯೂ ತಮ್ಮ ಪ್ರದರ್ಶನಗಳನ್ನು ತೋರಿ ಜನರ ಮೆಚ್ಚುಗೆಗೆ ಪಾತ್ರರಾಗಿರುವರು

ಕಾರ್ಕಳ ಗಾಂಧಿ ಜಯಂತಿ:— ಶ್ರೀ ಪದ್ಮಸಾಲಿ ವೈಶ್ಯ ಸಮಾಜ ಸೇವಾ ಯುವಕ ಸಂಘದಲ್ಲಿ ಶ್ರೀಗಳಾದ ಕೆ. ಮುತ್ತಯ್ಯ ಶೆಟ್ಟಿಗಾರ್, ಸುಬ್ಬಯ್ಯ ಶೆಟ್ಟಿಗಾರ್, ರಾಮ ಶೆಟ್ಟಿಗಾರ್ ಮತ್ತು ಧರ್ಮಾನಂದರ ಕಾಲೋಚಿತ ಭಾಷಣಗಳೊಂದಿಗೆ ಗಾಂಧಿ ಜಯಂತಿಯನ್ನು ಜರಗಿಸಲಾಯ್ತು.

ಹರಿಕೀರ್ತನೆ:—ತಾ ೧೩ನೇ ಮಂಗಳವಾರ ಶ್ರೀ ಧರ್ಮಾನಂದರ ವ್ಯವಸ್ಥಾಪಕತೆಯಿಂದ ಮುಲ್ಕಿಯ ಶ್ರೀ ನಾಮುಖಿಶರವರಿಂದ 'ಸತ್ಯ ಹರಿಶ್ಚಂದ್ರ'ವೆಂಬ ಸತ್ಯಾಖ್ಯಾನವು ಅತ್ಯಂತ ಸುರಸವಾಗಿ ಮೇಲಣ ಸಂಘದ ಆಶ್ರಯದಲ್ಲಿ ಶ್ರೀ ನೀರಭದ್ರ ನಿಲಯದಲ್ಲಿ ಜರಗಿಸಲ್ಪಟ್ಟು ಶ್ರೀ ಬ್ರಹ್ಮಾನಂದರ ದನ್ಯವಾದ ಸಮರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯ್ತು. ಈ ಸಮಾರಂಭವು ಯಶಸ್ವಿಯಾಗಿ ನಡೆವಂತೆ ಸಹಾಯವಿತ್ತು ಪ್ರೋತ್ಸಾಹಿಸಿದ ಶ್ರೀಗಳಾದ ಎಸ್ ರಾಮಕಾಮತ್, ನಾಣೂರು ಸದಾನಂದಕುಡ್ವ ಮತ್ತಿತರ ಸಹಾಯಕರಿಗೆ ವ್ಯವಸ್ಥಾಪಕನ ಹೃತ್ಪೂರ್ವಕ ಅಭಿನಂದನೆಗಳು.

ನವರಾತ್ರಿ ಮಹೋತ್ಸವ:—ಯುವಕ ಸಂಘದ ಮತ್ತು ಬಾಲ ವೃಂದದ ಅಭೂತ ಪೂರ್ವ ಉತ್ಸಾಹದಿಂದ ಶ್ರೀ ನೀರಭದ್ರ ನಿಲಯದಲ್ಲಿ ಕೀರ್ತನೆ, ಭಾಷಣ, ವ್ಯಾಖ್ಯಾನ, ಆರಾಧನಾದಿಗಳಿಂದ ನವರಾತ್ರಿ ಮಹೋತ್ಸವವು ವಿಜೃಂಭಣೆಯಿಂದ ಜರಗುತ್ತಲಿದೆ

ಬರುವ ವಾರದ ಕಥೆ
ಗೋಪಮ್ಮನ
ಗೋವು ಪೂಜೆ.

ಮೈರಪ್ಪಾಡಿ (ಸುರತ್ಕಲ್):— ಇಲ್ಲಿಯ 'ಶ್ರೀ ಭಾರತೀ ವಾಚನಾಲಯ'ದ ೯ನೇ ವಾರ್ಷಿಕ, ವರ್ಧಂತ್ಯೋತ್ಸವವು ಇದೇ ಕಳೆದ ತಾ ೨೨-೧೦-೩೬ನೇ ಗುರುವಾರ ಅಪರಾಹ್ನ ಘಂಟೆ ೩ಕ್ಕೆ, ತೋರಣ ಪತಾಕೆಗಳಿಂದ ಅಂದವಾಗಿ ಅಲಂಕೃತವಾದ ಇಲ್ಲಿಯ ಶಾಲಾಮಂದಿರದಲ್ಲಿ ಮ. ರಾ. ರಾ. ಪಿ. ಶ್ರೀನಿವಾಸರಾವ್ ಅವರ್ಗಳ್ ಬಿ ಎ ಬಿ ಎಲ್ ಅಡ್ವೋಕೇಟ್ ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರಗಿತು ಕ್ರಮವಾಗಿ ಪ್ರಾರ್ಥನೆ, ವರದಿವಾಚನ, ಭಾಷಣ ಮತ್ತು "ಕನಾಕಾಂಕ್ಷೇವ" ಮೊದಲಾದ ಕಾರ್ಯಕ್ರಮಗಳು ಸಾಂಗವಾಗಿ ನಡೆದು ಆ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು

ಮಂಜೇಶ್ವರ:—ಇಲ್ಲಿಯ ದಸರಾ ಮತ್ತು ೧೨ನೆಯ ರಾಷ್ಟ್ರೀಯ ಆರೋಗ್ಯ ಮತ್ತು ಶಿಶುಸಪ್ತಾಹ ಸಮಾರಂಭವು ತಾ ೧೫-೧೦-೧೯೩೬ರಿಂದ ತಾ ೨೩-೧೦-೧೯೩೬ರ ವರೆಗೆ ಇಲ್ಲಿಯ ಶ್ರೀಮತ್ ಅನಂತೇಶ್ವರ ಟೆಂಪಲ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಶಾಲಾ ಹುಡುಗರ ಮತ್ತು ಹುಡುಗಿಯರ ಪಂದ್ಯಾಟಗಳು, ಮಕ್ಕಳ ಮೆರವಣಿಗೆ, ಶಿಶು ಪ್ರದರ್ಶನ ಸಿನೇಮಾ ಪ್ರದರ್ಶನ ಆರೋಗ್ಯ ವಿಷಯಕವಾದ ಭಾಷಣಗಳು ಮತ್ತು ನಾಟಕಗಳು ಇತ್ಯಾದಿ ಕಾರ್ಯಕ್ರಮಗಳಿಂದ ಸಪ್ತಾಹವು ಚಿತ್ತಾಕರ್ಷಕವಾಗಿತ್ತು ಸಪ್ತಾಹದ ಕಡೆಯ ದಿನದಸಾರ್ವಜನಿಕ ಸಭೆಯ ಅಧ್ಯಕ್ಷಸ್ಥಾನವನ್ನು ಮಂಗಳೂರು ಗವರ್ನಮೆಂಟ ಕೋಲೇಜಿನ ಪ್ರಿನ್ಸಿಪಾಲರಾದ ಶ್ರೀಯುತ ಪಿ. ಎನ್. ಗೌಡ M. A. B Sc. (Edin) ರವರು ವಹಿಸಿದ್ದರು.

ಕುಂದಾಪುರ:—ಈ ತಾಲೋಕಿನ ಬೋರ್ಡು ಪ್ರಾಥಮಿಕ ಶಾಲೆಗಳ ಅಧ್ಯಾಪಕರ ಮಹಾಸಭೆಯು ತಾ. ೧೮-೧೦-೩೬ನೇ ಆದಿತ್ಯವಾರ ಸಾಯಂ ಘಂಟೆ 4ಕ್ಕೆ ಒಡೇರ ಹೋಬಳಿ ಬೋರ್ಡು ಎಲಿಮಂಟರಿ ಶಾಲೆಯಲ್ಲಿ ಶ್ರೀಯುತ ಕೆ ವೆಂಕಪ್ಪ ಶೆಟ್ಟಿ ವಕೀಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಶಿವರಾಮ ಶೆಟ್ಟಿ ವಕೀಲ್, ಇವರೇ ಮೊದಲಾದವರು ನೆರೆದಿದ್ದರು. ಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕರಾದ ಹಾಲಿ ಹಮಾಲೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಹಾಗೂ ಗವರ್ನಮೆಂಟಿಗೆ ನಿವೇದಿಸಲಿಕ್ಕೆ ಬಿಸ್ತತವಾದ ಒಂದು ತಾಲೂಕು ಸಂಸ್ಥೆಯು ಏರ್ಪಡಿಸುವ ಆವಶ್ಯಕತೆಯ ಕುರಿತು ಶ್ರೀ ಚಕ್ರಪಾಣಿ ನರಸಿಂಹಯ್ಯನವರು ಸಕಾರಣವಾಗಿ ತಂದ ಸೂಚನೆಯು ಸರ್ವಸಮ್ಮತಿಯಿಂದ ಮಂಜೂರಾಯಿತು. ಆ ಮೇಲೆ 10 ಜನ ಸದಸ್ಯರಿಂದ ಆರಿಸಲ್ಪಟ್ಟ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಮೇಲಿನ ಹತ್ತು ಮೆಂಬರರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ ಇನ್ನೊಬ್ಬರನ್ನು ಕಾರ್ಯದರ್ಶಿಯರನ್ನಾಗಿಯೂ ಚುನಾಯಿಸಲಾಯಿತು ಈ ಸಂಸ್ಥೆಗೆ ಬೋರ್ಡುಎಲಿಮೆಂಟರಿ ಶಾಲೆಯ ಅಧ್ಯಾಪಕರು, ಅಧ್ಯಾಪಕಿಯರೆಲ್ಲರೂ ಸದಸ್ಯರಾಗಿ ಸೇರಬೇಕೆಂತಲೂ ಪ್ರತಿ ಒಬ್ಬರು ವಾರ್ಷಿಕ ವರ್ಗಣಿಯಾಗಿ ,—1—0 ತೆರಬೇಕೆಂತಲೂ ವಸೂಲಾದ ಐವಜು ಸಂಘದ ಅಧ್ಯಕ್ಷರು ಸೇವಿಂಗ್ಸು ಬೇಂಕಿನಲ್ಲಿಡಬೇಕೆಂತಲೂ ವಗೈರೆ ನಿರ್ಣಯಗಳು ಪಾಸಾದ ನಂತರ ಅಧ್ಯಕ್ಷರು ಸಂಘದ ಆವಶ್ಯಕತೆ ಅದರ ಪ್ರಯೋಜನಗಳನ್ನು ವಿವರಿಸಿ ಇಂಥ ತಾಲೋಕು ಸಂಘಗಳು ಜಿಲ್ಲಾ ಸಂಸ್ಥೆಯ ಆಧೀನವಿದ್ದು ಇವೆಲ್ಲಾ ಪ್ರೆಸಿಡೆನ್ಸಿಯ ಬಲವಾದ ಒಂದು ಸಂಸ್ಥೆಯ ನೇತೃತ್ವಕ್ಕೆ ಒಳಪಟ್ಟಿಯಿರುವದರಿಂದ ಅಧ್ಯಾಪಕರ ಇಂಥ ಸಾಮುದಾಯಕ ಬೇಡಿಕೆಗಳು, ಬೋರ್ಡಿನವರ ಹಾಗೂ ಸರಕಾರದ ಗಮನಕ್ಕೆ ಬಂದು ಅಧ್ಯಾಪಕರ ಮತ್ತು ಶಾಲೆಗಳ ಭಾವಿಕಲ್ಯಾಣಕ್ಕೆ ಹೆಚ್ಚಿನ ಫಲಕಾರಿಯಾಗದಿರದೆಂದು ವಿವರಿಸಿ ತಿಳಿಸಿದರು ನಂತರ ಧನ್ಯವಾದವನ್ನಿತ್ತ ತರುವಾಯ ಸಭೆಯು ಚದರಿತು,

ಮೂಲ್ಕಿ—ನಮ್ಮ ಸಂಸ್ಥಾನದ ದೆವಲಪ್ಮೆಂಟ್ ಮಂತ್ರಿಗಳಾದ ಬಹುಮಾನಪಟ್ಟ ಪಿ. ಟಿ. ರಾಜನ್ ಬಾರ್-ಎಟ್-ಲೊ, ರವರು ಇದೇ ತಾ ೧೭-೧೦-೩೬ನೇ ಶನಿವಾರ ಪೂರ್ವಾಹ್ನ ಘಂಟೆ 9-30ಕ್ಕೆ ನಮ್ಮ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ರಾ ದಿ ಬ. ಬಿ. ಮಹಾಬಲ ಹೆಗ್ಡೆ ಬಿ ಎ. ಬಿ ಎಲ್. ರವರ ಜತೆಯಲ್ಲಿ ಇಲ್ಲಿಗೆ ಬಿಜಯಂಗೈದರು ಊರ ಪ್ರಮುಖರು ಬ್ಯಾಂಡ್ ವಾದ್ಯ ಬಿರುದಾವಳಿಗಳಿಂದ ಅವರನ್ನು ಸ್ವಾಗತೀಕರಿಸಿ ಹೈಸ್ಕೂಲ್ ಕಟ್ಟಡಕ್ಕೆ ಕರೆದೊಯ್ದರು. ಹೈಸ್ಕೂಲಾ ಕಮಿಟಿಯ ಹಾಗೂ ಪಂಚಾಯತ ಬೋರ್ಡಿನ ಪರವಾಗಿ ಮಾನಪತ್ರವು ಸಮರ್ಪಿಸಲ್ಪಟ್ಟಿತು ಬಹುಮಾನಪಟ್ಟ ಮಂತ್ರಿಗಳು ಇದಕ್ಕೆ ಪ್ರತ್ಯುತ್ತರವಾಗಿ ಹೈಸ್ಕೂಲಿನ ಮತ್ತು ಪಂಚಾಯತ ಬೋರ್ಡಿನ ಹಿತದೃಷ್ಟಿಯಿಂದ ಅಭಯಪ್ರದವಾದ ಮಾತುಗಳನ್ನಾಡಿದರು. ಹಾಗೆಯೇ ಸದ್ರಿ ಮಹನೀಯರನ್ನು ಉಪಹಾರ ಸತ್ಕಾರಗಳಿಂದ ಬೀಳ್ಕೊಟ್ಟಿತು. ತನ್ಮಧ್ಯೆ ಇಲ್ಲಿಯ ಹೈಸ್ಕೂಲಿನ ನೆರವಾಗಿ ಏರ್ಪಡಿಸಿದ ಲೋಟ್ರಿಯ ಒಂದು ಪುಸ್ತಕವನ್ನು ಮಂತ್ರಿವರ್ಯರು ಕೊಂಡುಕೊಂಡುದಲ್ಲದೆ ಸದ್ರಿ ಪುಸ್ತಕದ ಟಿಕೇಟುಗಳಿಗೆ ಬಹುಮಾನ ದೊರೆತರೆ ಎಲ್ಲಾ ಹಣವನ್ನು ಹೈಸ್ಕೂಲಿಗೇನೇ ಉಪಯೋಗಿಸಿಕೊಳ್ಳಬೇಕಾಗಿ ಸೂಚಿಸಿದುದು ಇವರ ಉದಾರಗುಣವನ್ನು ವ್ಯಕ್ತಪಡಿಸುತ್ತದೆ. ಅದೇ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ್ ಮಹಾಶಯರು ತನಗೂ 2 ಪುಸ್ತಕಗಳನ್ನು ಕಳುಹಿಸಿಕೊಡಬೇಕಾಗಿ ಅಪ್ಪಣೆಕೊಡಿಸಿದರು. ಈ ಮಹನೀಯರಿಬ್ಬರ ಉದಾರ ಬೆಂಬಲದಿಂದ ನಮ್ಮ ಲೋಟ್ರಿ ಯಶಸ್ವಿಯಾಗಬೇಕೆಂದು ಕೋರುತ್ತೇವೆ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂ. 1936 R. I. A. 1936

ಅರ್ಜಿದಾರರು:—ಮುತ್ತಯ್ಯಶೆಟ್ಟಿ ಕೂಡಾ—ವಾದಿರು

ಎದ್ರೀರು:—ಶೇಷಗಿರಿಯಪ್ಪ ಕೂಡಾ—ಪ್ರತಿವಾದಿರು

1ನೇ ಪ್ರತಿವಾದಿ ಶೇಷಗಿರಿಯಪ್ಪನಿಗೆ 2ನೇ ಪ್ರತಿವಾದಿ ನಾರಾಯಣಪ್ಪಯ್ಯಗೆ 3ನೇ ಪ್ರತಿವಾದಿ ರಾಮಪ್ಪಯ್ಯಗೆ, 4ನೇ ಪ್ರತಿವಾದಿ ಮಂಜುನಾಥಯ್ಯಗೆ, 5ನೇ ಪ್ರತಿವಾದಿ ಮ್ಯಾನರ ಪದ್ಮನಾಭಯ್ಯನ ಗಾರ್ಡಿಯನ ತಾಯಿ ಶೇಷಮ್ಮಗೆ ಸಹಾ:—

ಅರ್ಜಿದಾರ ವಾದೀರು:—ಮೇಲ್ಕಂಡ ಕ್ರಮ ನಂ. 1935ನೇ ಸಿಲಿಮಿನೆರಿ ಡಿಕ್ರಿ ರಿಕಾರ್ಡು ಪರಾಂಬರಿಸಿ ತಮಗೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಕೊಟ್ಟಮೇಲೆ ಹೇಳಿದ R. I. A. 526/1936ನೇ ಅರ್ಜಿಯು ತಾ. 9—11—1936ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆಯಿಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪಯಿದ್ದಲ್ಲಿ ಆ ದಿವಸ ಹಗ್ಗಲು 11 ಘಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದೆಂತಲೂ ಈ ಮೂಲಕ ತಿಳಿಸೋಣಾಗಿಯದೆ. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕುಂದಾಪುರ)
ತಾ. 27 10—36.)

K. Vittaldas Shenai,
ಅರ್ಜಿದಾರರು ಕಡೆ ಎಡ್ವೋಕೇಟ್.

ಬೇಕಾಗಿದೆ

ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟು, ಹಿಂದು ದೇಶದಲ್ಲಿ ಪ್ರಚಾರಮಾಡಲ್ಪಟ್ಟಿರುವ, ಇಡೀ ಲೋಕದಲ್ಲೇ ಸುಪ್ರಸಿದ್ಧವಾಗಿ ಇಂಗ್ಲೆಂಡಿನಲ್ಲಿ 116, 179ರ ವರೆಗೆ ವಿಸ್ಮಯಕರ ಟೈರ್ ಮೈಲೇಜ್ ರಿಕಾರ್ಡು ಪಡೆದಿರುವ ಫಸ್ಟ್ ಕ್ಲಾಸ್ ನ್ಯುಮೇಟಿಕ್ ಮೋಟರ್ ಟಾಯರುಗಳನ್ನು ಪ್ರಚರಿಸಲು ಏಜಂಟರು ಬೇಕಾಗಿದೆ. ಅತಿ ದೊಡ್ಡ ಟ್ಯಾಯರುಗಳ ರಾಜನೆನಿಸಿರುವ ಈ ಟಾಯರನ್ನು ಧಾರವಾಡ, ನೈಜಾಮ್ ಹೈದರಾಬಾದ್ ಮತ್ತು ಇಡೀ ಮದ್ರಾಸ್ ಪ್ರಾಂತದಲ್ಲೆಲ್ಲಾ ಪ್ರಚಾರಮಾಡಲು ವಿಶ್ವಾಸನೀಯ ಜನರು ಬೇಕಾಗಿದ್ದಾರೆ. ಆಕರ್ಷಕ ಕಮಿಷನು ಕೊಡಲ್ಪಡುವುದು. ಹೆಚ್ಚಿನ ವಿವರಗಳಿಗೆ, ಪೋಸ್ಟ್ ಬಾಕ್ಸ್ ನಂಬ್ರ 610 ಬೊಂಬಾಯಿ, ಈ ವಿಳಾಸಕ್ಕೆ ಬರೆಯಿರಿ.

ಬಂಟರ ಯಾನೆ ನಾಡವರ ಸಂಘ ಮುಂಬಾಯಿ

ಮೇಲಿನ ಸಂಘದ 8ನೇ ವಾರ್ಷಿಕ ಮಹಾಸಭೆಯು ಇದೇ ತಿಂಗಳ ತಾ ೧೮-೧೦-36ನೇ ಆದಿತ್ಯವಾರ ಮಧ್ಯಾಹ್ನ ಘಂಟೆ ೩ಕ್ಕೆ ಮುಂಬ್ಬಾ ಕೋಟೆಯೊಳ ಗಣ ಆಘಾಖಾನ್ ಬಿಲ್ಡಿಂಗಿನ ೩ನೇ ಮಾಳಿಗೆಯಲ್ಲಿ ಜರಗಿತು. ಮೇಲಿನ ಮಹಾಸಭೆಗೆ ಶ್ರೀ ಡಾಕ್ಟರ್ ಎಮ್. ವೆಂಕಟ್ರಾಯ ಶೆಟ್ಟಿ, ಜಿ ಪಿ. ಯವರನ್ನು ಅಧ್ಯಕ್ಷಸ್ಥಾನಕ್ಕೆ ನಿಶ್ಚೈಸಿದ್ದಾದರೂ ಸಕಾಲಕ್ಕೆ ಬರಲು ಅನಾನುಕೂಲವಾದ್ದರಿಂದ ಶ್ರೀ ಕೆ. ಕಾಂತಪ್ಪ ಶೆಟ್ಟಿ ಸೂಚನೆ ಮತ್ತು ಶ್ರೀ ನಾರಾಯಣ ಶೆಟ್ಟಿ ಅನುಮೋದನೆ ಮೇರೆಗೆ ಶ್ರೀ ಬಡಿಲಗುತ್ತು ದೂಮಪ್ಪ ನಾಯ್ಕರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು.

ಸಂಘದ ಕಾರ್ಯದರ್ಶಿಯವರಿಂದ ತಯಾರಿಸಲ್ಪಟ್ಟ ವರದಿಯನ್ನು ಸಭೆಯು ಸ್ವೀಕರಿಸಿ ಸಂಘದ ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತ್ತು. ಮತ್ತು ಸಂಘದ ಮುಂದಿನ ಆಡಳಿತ ಮಂಡಳಿಯ ಬಗ್ಗೆ ಈ ಕೆಳಗಿನ ಸದಸ್ಯರನ್ನು ಆರಿಸಲಾಯಿತು ಶ್ರೀ ಡಾಕ್ಟರ್ ಎಮ್. ವೆಂಕಟ್ರಾಯ ಶೆಟ್ಟಿ, ಜಿ. ಪಿ. ಯವರು ಅಧ್ಯಕ್ಷರು, ಶ್ರೀ ಬಡಿಲಗುತ್ತು ದೂಮಪ್ಪ ನಾಯ್ಕರು ಉಪಾಧ್ಯಕ್ಷರು ಶ್ರೀ. ಕೆ. ಪಿ. ಕೆ. ಶೆಟ್ಟಿ ಮತ್ತು ಶ್ರೀ ಮೂಲ್ಕಿ ದೊಂಬ ಶೆಟ್ಟಿ ಗೌರವ ಜತೆ ಕಾರ್ಯದರ್ಶಿಯವರು, ಶ್ರೀ ಕೆ. ವಿಟ್ಠಲಶೆಟ್ಟಿ ಕೋಶಾಧಿಕಾರಿ, ಶ್ರೀ ಬಿ ನಾರಾಯಣ ಶೆಟ್ಟಿ ಸಹಾಯಕ ಕೋಶಾಧಿಕಾರಿ, ಉಳಿದ ಆಡಳಿತ ಮೆಂಬರರು ಶ್ರೀ ಕುತ್ತೆತ್ತೂರು ರಾಮಣ್ಣ ಶೆಟ್ಟಿ ಶ್ರೀ ಕೆ. ಕುಂಞಣ್ಣ ಶೆಟ್ಟಿ ಶ್ರೀ ಸುರತಕಲ್ಲು ತ್ಯಾಂಪಣ್ಣ ಶೆಟ್ಟಿ ಶ್ರೀ ಕೆ. ವೆಂಕಪ್ಪ ಹೆಗ್ಗಡೆಯರು, ಶ್ರೀ ಕೆ. ಪುರ್ಷೋತ್ತಮ ಶೆಟ್ಟರು, ಶ್ರೀ ಪಾಂಗಾಳ ಮಹಾಬಲ ಶೆಟ್ಟಿ, ಶ್ರೀ ಎಮ್. ಬಾಬು ಶೆಟ್ಟಿ, ಶ್ರೀ ಸುರತಕಲ್ಲು ತುಕ್ರ ಶೆಟ್ಟಿ, ಶ್ರೀ ಪಡುಪೆರಾರು ನಾರಾಯಣ ಶೆಟ್ಟಿ.

ಮುಂಬಾಯಿ ಅಖಿಲ ಬಂಟರ ಯಾನೆ ನಾಡವರ ಸಂಘದವರು ತಮ್ಮ ಸಂಘವನ್ನು ಸಂಪೂರ್ಣ ಮುಕ್ತಾಯಗೊಳಿಸಿ ಸದ್ರಿ ಸಂಘದ ಕೆಲವು ಮೆಂಬರು ಮತ್ತು ಸಂಘದ ಪ್ರೆಸಿಡೆಂಟ್ ಶ್ರೀ ಕೆ. ಪಿ ಕೆ. ಶೆಟ್ಟಿ ಸಂಘದ ರಿಕಾರ್ಡು ಮತ್ತು ಶಿಲ್ಕು ರೂಪಾಯಿ ೧೯೧—೩—೩ಯನ್ನು ಕೂಡಾ ಹಾಜರು ಪಡಿಸಿದ ಮೇರೆಗೆ ಆ ಸಂಘದ ಮೆಂಬರರನ್ನು ಮುಂಬಾಯಿ ಬಂಟರ ಯಾನೆ ನಾಡವರ ಸಂಘಕ್ಕೆ ಅತೀ ಸಂತೋಷದಿಂದ ಸೇರಿಸಿಕೊಳ್ಳಲಾಯಿತು ಮತ್ತು ಶ್ರೀ ಕೆ. ಪಿ. ಕೆ ಶೆಟ್ಟಿ ಭಾಷಣವು ಐಕ್ಯಮತ್ಯಕ್ಕೂ ಜಾತಿಯ ಏಳಿಗೆಯ ವಿಷಯದಲ್ಲಿಯೂ ಅತಿ ಬೋಧಪರವಿದ್ದು ಸರ್ವ ಸಭಿಕರ ಮನಸ್ಸನ್ನು ಸಂತೋಷಗೊಳಿಸಿತು ಈ ವಿನಾ ಶ್ರೀ. ಕೆ. ಸಂಜೀವ ಶೆಟ್ಟಿ ಮತ್ತು ಎಂ ಶಿವಪ್ಪ ಶೆಟ್ಟಿ ಕೂಡಾ ಸಂಘದ ಏಳಿಗೆಯ ವಿಷಯದಲ್ಲಿ ರಸವತ್ತಾದ ಭಾಷಣವನ್ನಿತ್ತದ್ದಲ್ಲದೆ ಶ್ರೀ. ಡಾಕ್ಟರ್ ಎಮ್. ವೆಂಕಟ್ರಾಯ ಶೆಟ್ಟಿ ತನ್ನ ಧ್ಯ ಮಹಾಸಭೆಗೆ ಚಿತ್ತೈಸಿ ಅಖಿಲ ಬಂಟರ ಯಾನೆ ನಾದವರ ಸಂಘವು ನಮ್ಮ ಸಂಘಕ್ಕೆ ಸೇರಿದ ವಿಷಯದಲ್ಲಿ ತನ್ನ ಆನಂದವನ್ನು ಸಭೆಯ ಮುಂದೆ ವ್ಯಕ್ತಪಡಿಸಿದ್ದು ಅಲ್ಲದೆ ಬಂಟರ ಯಾನೆ ನಾದವರ ಸಂಘದ ಸರ್ವ ಏಳಿಗೆಗೂ ಸಹಾಯಕ್ಕೂ ಬೆಂಬಲವನ್ನು ಸದಾಕಾಲ ಕೊಡಲು ತಾನು ಸಿದ್ಧನಿರುವೆನೆಂದು ತನ್ನ ಉದಾರತನವನ್ನು ಸಭೆಯವರಿಗೆ ತಿಳಿಸಿದ್ದಲ್ಲದೆ ಸಂಘದ ಮೆಂಬರರಿಗೆ ಅನೇಕ ಬುದ್ಧಿವಾದವನ್ನಿತ್ತು ಆನಂದಗೊಳಿಸಿದರು ಮತ್ತು ಸಂಘದ ಸ್ವಯಂ ಸೇವಕರು ಅಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸಭಿಕರಿಗೆ ಆನಂದಗೊಳಿಸಿದ್ದಕ್ಕಾಗಿ ಸಂಘದ ಕಾರ್ಯದರ್ಶಿಯವರಿಂದ ವಂದನೆಗಳನ್ನು ಅರ್ಪಿಸಲಾಯಿತ್ತು. ಅಂದಿನ ಸಭೆಯ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಶ್ರೀಯುತ ಬಡಿಲಗುತ್ತು ದೂಮಪ್ಪ ನಾಯ್ಕರು ತನ್ನ ಮನೋರಂಜಕವಾದ ಭಾಷಣವನ್ನಿತ್ತ ನಂತರ ಸಂಘದ ಕಾರ್ಯದರ್ಶಿಯವರು ಅಧ್ಯಕ್ಷರಿಗೂ ಸಭಿಕರಿಗೂ ವಂದನೆಯನ್ನಿತ್ತು, ಶ್ರೀಯುತ ಕೆ ವಿಟ್ಠಲ ಶೆಟ್ಟಿಂದ ಕೊಡಲ್ಪಟ್ಟ ಚಾ, ಫಲಹಾರಗಳಿಂದ ಸಭೆಯು ಕೊನೆಗೊಂಡಿತು

ಗೌರವ ಜತೆ ಕಾರ್ಯದರ್ಶಿಯರು,
ಕೆ. ಪಿ. ಕೆ. ಶೆಟ್ಟಿ,
ಮೂಲ್ಕಿ ದೊಂಬ ಶೆಟ್ಟಿ

ಯು. ಪಿ. ಮೇಸ್ತ, ಉದ್ಯಾವರ, ದ. ಕ.

(ಬಾಣಂತಿ ರೋಗದ ಸ್ಪೆಶ್ಯಲಿಷ್ಟರು)

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಔಷಧಗಳು ದೊರೆಯುತ್ತವೆ.

U. P. Mesta,
Gold Medalled Physicion,
UDIAWAR, S. K.

ಪುತ್ತೂರು ರೆವಿನ್ಯು ಡಿವಿಜನಲ್ ಆಫೀಸರವರಿಂದ

ನೋಟೀಸು.

ದಕ್ಷಿಣಕನ್ನಡ ಜಿಲ್ಲೆ ಪುತ್ತೂರುತಾಲೂಕು ಸುಬ್ರಹ್ಮಣ್ಯಗ್ರಾಮದ ಕುಲಗುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರ್ಷ 1936ನೇ ಇಸವಿ ನವಂಬರ ತಿಂಗಳು 26ನೇ ತಾರೀಕಿನಿಂದ, ಇದೇ ಇಸವಿ ಡಿಸೆಂಬರ ತಿಂಗಳು 13ನೇ ತಾರೀಕಿನ ವರೆಗೆ ಜರಗುವದು. ಅಂದರೆ ಸಂತೆಯು ಕಾರ್ತಿಕ ಹುಣ್ಣಿಮೆದಿವಸ ಪ್ರಾರಂಭವಾಗಿ, ಕಾರ್ತಿಕ ಅಮಾವಾಸ್ಯೆ ದಿವಸ ಅಂದರೆ ಸುಬ್ರಹ್ಮಣ್ಯ ದೀಪೋತ್ಸವದ ಪರಿಯಂತರ ಜರಗುವದು. ಸಂತೆಗೆ ತಂದ ಪ್ರತಿ ಒಂದು ಜಾನುವಾರಿನಮೇಲೆ ಎರಡಾಣೆ ಫೀಸು ವಸೂಲು ಮಾಡಲಾದೀತು.

(*Sd*) ಕೆ. ಪಿ. ಕೃಷ್ಣನ್ ನಾಯರ್,
ರೆವಿನ್ಯು ಡಿವಿಜನಲ್ ಆಫೀಸರ್

ಸಕಲೇಶಪುರದ

ಟವನ್ ಮುನಿಸಿಪಾಲಿಟಿ

ಈಟವನಿನಲ್ಲಿ ಹೇಮಾವತಿ ನದಿಯ ಪಕ್ಕದ ಮೈದಾನದಲ್ಲಿ ತಾ 12-11-1936 ರಿಂದ 15-11-1936ರ ವರೆಗೆ ದನಗಳ ಜಾತ್ರೆಯು ನಡಿಯುತ್ತದೆ. ರಾಸುಗಳಿಗೆ ಸುಂಕವಿಲ್ಲಾ, ನೀರಿನ ಹುಲ್ಲಿನ ಮತ್ತು ಸ್ಥಳದ ವಸತಿ ಚೆನ್ನಾಗಿರುತ್ತೆ. ಉತ್ತಮ ರಾಸುಗಳಿಗೆ ಬಹುಮಾನವು ಕೊಡಲ್ಪಡುತ್ತೆ. ಈ ಪ್ರದರ್ಶನವು ಕುಲಗುಂದದ ಜಾತ್ರೆಗೆ ಮೊದಲೇ ಆಗುವುದರಿಂದ ಒಳ್ಳೆ ರಾಸುಗಳ ಮಾರಾಟವಾಗುವ ಸಂಭವವಿದೆ.

ಸಕಲೇಶಪುರ } ಅಬ್ದುಲ್ಲಾ ಹುಸೇನ್ ಷರೀಫ್,
ಪ್ರೆಸಿಡೆಂಟ್.

ಬಾಡಿಗೆಗೆ ಇದೆ

ಉಡುಪಿ ಪಟ್ಟಣದ ಪ್ರಾಮುಖ್ಯ ಸ್ಥಳದಲ್ಲಿ ಆಫೀಸಿಗೂ, ಅಂಗಡಿಗೂ ಯೋಗ್ಯವಾದ ವಿಶಾಲವಾದ ಕೋಣೆಯು ಬಾಡಿಗೆಗೆ ದೊರೆಯುತ್ತದೆ; ವ್ಯಾಪಾರದ ವಹಿವಾಟು; ಜನರ ಆಗಮನ ನಿರ್ಗಮನಗಳಿಗೆಲ್ಲಾ ಕೇಂದ್ರ ಸ್ಥಳ. ಹೆಚ್ಚಿನ ಮಾಹಿತಿಯ ಬಗ್ಗೆ ಮುಖತಾಃ ಮಾತನಾಡಬಹುದು. ಇಲ್ಲವೆ ಪತ್ರವ್ಯವಹಾರ ಮಾಡಬಹುದು.

X C/o ನವಯುಗ ಉಡುಪಿ.

ಡ್ರಾಮಾ ಅಪ್-ಟು-ಡೇಟ್

ಸಾಮಾನ್ಯವಾಗಿ ನಾಟಕದ ಕಥಾಭಾಗದ ಸಮಯವು ಕೆಲವು ಯುಗಗಳನ್ನಾಗಲಿ, ಕೆಲವು ಜನ್ಮಗಳನ್ನಾಗಲಿ, ಕೆಲವು ವರ್ಷಗಳನ್ನಾಗಲಿ, ಅಥವಾ ಕೆಲವು ತಿಂಗಳುಗಳನ್ನಾದರೂ ಆಕ್ರಮಿಸಿಕೊಂಡಿರುತ್ತದೆ. ನನ್ನ ತಿಳುವಳಿಕೆಯ ಮಟ್ಟಿಗೆ ಅತ್ಯಂತ ಅಲ್ಪ ಸಮಯದ ಕಥಾನಕವನ್ನೊಳಕೊಂಡ ನಾಟಕವೆಂದರೆ ಮಹಾರಾಷ್ಟ್ರ ಭಾಷೆಯಲ್ಲಿ ಬರೆಯಲ್ಪಟ್ಟು ಬಾಲಗಂಧರ್ವ ನಾಟಕ ಕಂಪನಿಯವರಿಂದ ಅಭಿನಯಿಸಲ್ಪಡುವ "ಸಂಶಯ-ಕಲ್ಲೋಲ"ವೇ.

ಸರ್ವ ಸಾಮಾನ್ಯವಾಗಿ, ಕರ್ನಾಟಕ ಭಾಷೆಯಲ್ಲಿರುವ ನಾಟಕಗಳನ್ನು ಭಾಷಾದೃಷ್ಟಿಯಿಂದ ನಾಲ್ಕು ವಿಭಾಗಗಳಾಗಿ ಮಾಡಬಹುದು.— ೧ ಹಳೆಕನ್ನಡದವು. ೨. ಹೊಸಕನ್ನಡದವು ೩. ಆಯಾ ದೇಶದ ಗ್ರಾಮ್ಯ ಭಾಷೆಯವು. ೪. ಗ್ರಾಮ್ಯ ಮತ್ತು ಗ್ರಂಥಸ್ಥ ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಸಂಮಿಳಿತವಾಗಿ ಬರೆಯಲ್ಪಟ್ಟವು. ಕರ್ನಾಟಕದ ಗ್ರಾಮ್ಯ ಭಾಷೆಯಲ್ಲಿ ಬರೆಯಲ್ಪಟ್ಟ ನಾಟಕಗಳನ್ನು ನೋಡಿದಂದಿನಿಂದ ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿಗನುಗುಣವಾಗಿ, ಕನ್ನಡ, ತುಳು, ಕೊಂಕಣಿ, ಹಿಂದುಸ್ತಾನಿ ಹಾಗೂ ಇಂಗ್ಲಿಷ್ ಭಾಷೆಗಳನ್ನೊಳಕೊಂಡ ನಾಟಕವೊಂದನ್ನು ಬರೆಯಬೇಕೆಂಬುವೇ ಉದ್ದೇಶವಿತ್ತು.

ಈ ತೆರದ ನನ್ನ ವಿವಿಧ ಉದ್ದೇಶಗಳನ್ನೊಳಗೊಂಡ ಹೊಸ ನಾಟಕವನ್ನು (ಅಂದರೆ, ೨೪ ಘಂಟೆಗಳ ಕಾಲದಲ್ಲಿ ಜರಗುವ ಕಥಾ ಸಂನಿವೇಶವನ್ನು ೩½ ಘಂಟೆಗಳಲ್ಲಿಯೇ ಆಡಿತೋರಿಸುವಂತೆ ಬರೆದ ನಾಟಕವನ್ನು) ಅಭಿನಯಿಸಿ ಜನಮನೋರಂಜನೆಯನ್ನು ಮಾಡುವುದೆಷ್ಟು ಕಷ್ಟವೋ, ಅದರ ಅಭಿನಯವನ್ನು ನೋಡಿ ಅದರ ಮರ್ಮವನ್ನು ತಿಳಿಯುವುದಕ್ಕೆ ಅಷ್ಟೇ ಕಷ್ಟವಿದೆ ಮಾತ್ರವಲ್ಲದೆ ವಿಶೇಷವಾದ ತಾಳ್ಮೆಯೂ ಬೇಕಾಗುವುದು. ದುರ್ದೈವವಶಾತ್ ಈ ನಾಟಕವನ್ನು ನವರಾತ್ರಿಯ ಸಂದರ್ಭದಲ್ಲಿ ಆಡುವಾಗ ಅನೇಕ ಕಾರಣಗಳಿಂದ ಪ್ರೇಕ್ಷಕ ವರ್ಗದಲ್ಲಿ ಅಸಹನೆಯುಂಟಾಗಿ ಗಲಾಟೆಗೆ ಕಾರಣವಾಯಿತು. ಆದುದರಿಂದ ನಾಟಕವನ್ನು ನಿಯಮಿತ ವೇಳೆಗಿಂತ ಅರ್ಧಗಂಟೆ ಮುಂಚಿತವಾಗಿ ನಿಲ್ಲಿಸಬೇಕಾಯಿತು. ಈ ನಾಟಕವನ್ನು ಬರೆದು ರಂಗಭೂಮಿಗೆ ತೆಗೆದುಕೊಂಡು ಬರುವುದರಲ್ಲಿ ಯಾವ ವಿಧವಾದ ದುರುದ್ದೇಶವು ನನಗಿಲ್ಲದಿದ್ದರೂ ಕೆಲವು ಜಾತಿಗಳನ್ನು ಹಿಯ್ಯಾಳಿಸುವುದಕ್ಕಾಗಿಯೇ ಈ ನಾಟಕವನ್ನು ರಂಗಭೂಮಿಗೆ ತಂದೆನೆಂಬುದಾಗಿ ಜನರಲ್ಲಿ ತಪ್ಪು ಅಭಿಪ್ರಾಯವು ಹಬ್ಬಿತು. ಹೀಗೆ ಯಾವ ಯಾವ ಸಮಾಜದ ಯಾ ಜಾತಿಯ ಕಾಲ್ಪನಿಕ ವ್ಯಕ್ತಿಗಳನ್ನು ಕಥಾವ್ಯಕ್ತಿಗಳನ್ನು ನಾಟಕದಲ್ಲಿ ರೂಪಿಸಿದೆನೊ ಆಯಾ ಸಮಾಜದ ಕೆಲವು ಜನರಿಗೆ ಈ ನಾಟಕದ ರಚನಾಭಿನಯಗಳಿಂದಾಗಿ ಮನನೊಂದಿತೆಂದು ನನಗೆ ತಿಳಿದುಬಂತು. ಆದುದರಿಂದ ಆಯಾ ಸಮಾಜದ ಜನತೆಯಲ್ಲಿಯೂ ಮುಖಂಡರಲ್ಲಿಯೂ ನನ್ನ ವಿನಂತಿಯೇನೆಂದರೆ, ಮೇಲೆ ನಾನು ವಿವರಿಸಿದಂತೆ ಬೇರೆ ಯಾವ ದುರುದ್ದೇಶದಿಂದಲೂ ಈ ನಾಟಕವು ಬರೆಯಲ್ಪಟ್ಟುದಲ್ಲ. ಕೇವಲ ರಂಗಭೂಮಿಯ ಸುಧಾರಣೆಯ ದೃಷ್ಟಿಯಿಂದ ಬರೆಯಲ್ಪಟ್ಟದ್ದು.

ಆದರೂ ಈ ನಾಟಕದಿಂದ ಅದರಲ್ಲಿ ಕಾಲ್ಪನಿಕ ವ್ಯಕ್ತಿಗಳ ಚಿತ್ರಣದಿಂದ ಹಾಗೂ ದಕ್ಷಿಣಕನ್ನಡದ ನಾನಾಭಾಷೆಗಳನ್ನು ರಂಗಭೂಮಿಗೆ ತಂದುದರಿಂದ ಕೆಲವರ ಮನನೊಂದುದಕ್ಕಾಗಿ ನಾನು ವಿಷಾದಪಡುತ್ತೇನೆ, ಹಾಗೂ ನಾನು ಉದ್ದೇಶಪೂರ್ವಕವಾಗಿ ಅಲ್ಲದಿದ್ದರೂ ಜನರ ಮನನೋಯಿಸಿದ್ದಕ್ಕೆ ಜನರಲ್ಲಿ ಕ್ಷಮಾಯಾಚನೆ ಮಾಡುತ್ತೇನೆ.

ಹೀಗೆ ಕ್ಷಮಾಯಾಚನೆಮಾಡುವುದರಲ್ಲಿ ನನಗೆ ಎಳ್ಳಷ್ಟು ಬೇಸರವಿಲ್ಲ. ಏಕೆಂದರೆ ನಾನು ಜನತೆಯಿಂದ ಬೇರಾದವನಲ್ಲ. ಯಾವಾಗಲೂ ಜನತೆಯ ಮನೋರಂಜನೆಗಾಗಿಯೂ ಸಹಕಾರಕ್ಕಾಗಿಯೂ ಹಾತೊರೆಯುತ್ತ ಬಂದಿದ್ದೇನೆ. ಈ ನಾಟಕವನ್ನು ಬರೆದದ್ದು ಜನಮನೋರಂಜನೆಯಾಗಬೇಕೆಂದೇ. ಅದು ಬೇಸರಕ್ಕೆ ಕಾರಣವಾದಲ್ಲಿ ಕ್ಷಮಾಯಾಚನೆ ಮಾಡುವುದರಲ್ಲ ಅಭ್ಯಂತರವೇನು? ಜನತೆಯು ನನ್ನ ಈ ಕ್ಷಮಾಯಾಚನೆಯನ್ನು ಸ್ವೀಕರಿಸಿ ಎಂದಿನಂತೆ ತನ್ನ ಔದಾರ್ಯವನ್ನು ಪ್ರಕಟಿಸುವುದೆಂದು ನಂಬಿದ್ದೇನೆ.

S. U. Paniady

(ಶ್ರೀ ಪಣಿಯಾಡಿಯವರ, ಮೇಲಿನ ಕ್ಷಮಾಯಾಚನೆಯು ಕಾಲೋಚಿತವಾಗಿದೆ. ಅಪ್-ಟು-ಡೇಟ್ ನಾಟಕದಿಂದ ಜನರ ಮನಸ್ಸಿಗೆ ನೋವಾಯಿತೆಂದು ತಿಳಿದೊಡನೆ, ಕ್ಷಮೆ ಕೇಳಿದುದರಿಂದ ನಾಟಕದ ರಚನೆಯಲ್ಲಿ ಇದ್ದ ಸದುದ್ದೇಶವನ್ನು ಸ್ಪಷ್ಟಗೊಳಿಸಿದಂತಾಯಿತು. ಸಾರ್ವಜನಿಕ ಅಭಿಪ್ರಾಯಕ್ಕೆ ತಲೆಬಾಗುವದು ವ್ಯಕ್ತಿಧರ್ಮ, ಮನನೊಂದವರು ಇದರಿಂದ ಸಮಾಧಾನಗೊಂಡು ಶ್ರೀ ಪಣಿಯಾಡಿಯವರೊಡನೆ ಮೊದಲಿನಂತೆ ಮುಂದೆಯೂ ಸಹಕರಿಸುವರೆಂದು ನಂಬುತ್ತೇವೆ. ಸಂ. ನ.)

ಕಿರಿಯರ ಪ್ರಪಂಚದ ಪುಸ್ತಕಗಳು.

೧. ನಾಡಕಥೆ	೦	೨	೦
೨. ಮುಂದಿನ ದೇವರು	೦	೨	೦
೩. ಸ್ವತಂತ್ರ ಜೀವನೋಪಾಯ	೦	೨	೬
೪. ಕುಶಲವ	೦	೪	೦
೫. ಸಂಶಯ ಪಿಶಾಚಿ	೦	೬	೦
೬. ಕಾವ್ಯಸಾಮ್ರಾಜ್ಯ	೦	೧೨	೦
೭. ಮಧುವನ	೧	೮	೦
೮. ವ್ಯಭಿಚಾರಿಣಿ ಯಾರು	೦	೮	೦

ನಮ್ಮಲ್ಲಿ ಅಖಿಲ ಕರ್ನಾಟಕದ ಆಧುನಿಕ ಕನ್ನಡ ಗ್ರಂಥಗಳು ದೊರೆಯುತ್ತವೆ.

ಕಿರಿಯರ ಪ್ರಪಂಚ, ಉಡುಪಿ, ದ. ಕ.
ಸೋಲ ಏಜೆಂಟರು--
ಸಪ್ಲೈ ಏಜೆನ್ಸಿ ಲಿಮಿಟೆಡ್, ಉಡುಪಿ.

ಕಾನ್ವೆಂಟಿನಲ್ಲಿ ಉಪನ್ಯಾಸ

ಈ ದಿನ 2-30ರಿಂದ 4-30ರ ವರೆಗೆ ಸ್ತ್ರೀಯರ ಕಾಲೇಜಿನಲ್ಲಿ ಶ್ರೀ ಶಿವರಾಮಯ್ಯನವರು ಸನ್ನೆಯ ದಿನ ಕೆಸರು ಹೈಸ್ಕೂಲ್ ... ಸಹಾಯವಾಗಿ ಭಾಷಣಮಾಡಿದರು. ಕಾಲೇಜಿನ ಪ್ರೊಫೆಸರರುಗಳೂ, ವಿದ್ಯಾರ್ಥಿನಿಯರೂ ತುಂಬಾ ಸಂಖ್ಯೆಯಲ್ಲಿ ನೆರೆದಿದ್ದರು.

ಕರ್ನಾಟಕ ಸಾಹಿತಿಗಳಿಗೆ ಸತ್ಕಾರ ಕೂಟ

ಪುತ್ತೂರು ದಸರಾ ಮಹೋತ್ಸವಕ್ಕೆ ಚಿತ್ತೈಸಿದ್ದ ಪ್ರಸಿದ್ಧ ಕನ್ನಡ ಸಾಹಿತಿಗಳಾದ ಶ್ರೀ। ಯಂ. ಆಚಾರ್ಯ, ಮುಂಬಯಿ, ಶ್ರೀ। ಅ. ನ ಕೃಷ್ಣರಾಯರು, ಬೆಂಗಳೂರು, ಶ್ರೀ ವಿ. ಜ ಕುಲಕರ್ಣಿ, ಬೆಳಗಾವಿ, ಶ್ರೀ। ಬಿ ಯಂ. ಶಿವರಾಮಯ್ಯನವರು, ನಂಜನಗೂಡು, ಶ್ರೀ। ವಿ ಸೀತಾರಾಮಯ್ಯನವರು, ಬೆಂಗಳೂರು—ಇವರುಗಳು ಮಂಗಳೂರಿಗೆ ಬಂದಿರುವರು. ಈ ದಿನ (ತಾ. 26) ಸಾಯಂಕಾಲ ೫ಘಂಟೆಗೆ ಮಿತ್ರ ಮಂಡಲಿಯವರು ಈ ಮಹನೀಯರಿಗೆ ಒಂದು ಟೀಪಾರ್ಟಿ ಸತ್ಕಾರವನ್ನಿತ್ತರು ಮಿತ್ರ ಮಂಡಲಿಯ ಸದಸ್ಯರೂ ಮಂಗಳೂರಿನ ಅನೇಕ ವಿದ್ವಾಂಸರುಗಳೂ ಭಾಗವಹಿಸಿದ್ದರು

ಅಧ್ಯಕ್ಷರಿಗೂ, ಶ್ರೀ ಶಿವರಾಮಯ್ಯನವರಿಗೂ ಮಂಡಲಿಯ ಪರವಾಗಿ ಧನ್ಯವಾದ ಅರ್ಪಣೆಮಾಡಿದ ಬಳಿಕ ಸುಮಾರು 9 ಘಂಟೆಗೆ ಸಭೆಯು ಮುಕ್ತಾಯವಾಯಿತು.

ಮಂಗಳೂರು ಮುನ್ಸಿಪಲ್ ಚೇಯರ್ ಮೇನ್:—ಡಾಕ್ಟರ್ ಕೆ ವಿಠಲ ಶೆಟ್ಟಿ ಸಿತಾಪುರದ ಮಹಾರಾಜರನ್ನು ಇದಿರುಗೊಳ್ಳಲು ರೈಲ್ವೇ ಸ್ಟೇಶನಿಗೆ ಹೋಗಿದ್ದರೆಂದು ನಮ್ಮ ತಾ ೨೨-೧೦-೩೬ನೇ ಸಂಚಿಕೆಯ ಮಂಗಳೂರು ಸಮಾಚಾರದಲ್ಲಿ ಪ್ರಕಟವಾದುದು ತಪ್ಪೆಂದೂ, ಡಾಕ್ಟರ್ ಶೆಟ್ರು ಮಹಾರಾಜರನ್ನು ಸ್ವಾಗತೀಕರಿಸಲು ಹೋಗಿದ್ದಿಲ್ಲೆಂದೂ, ರಟ್ಸ್ ಟ್ರೈನಿನಲ್ಲಿ ಬರುವ ಒಬ್ಬ ಮಿತ್ರರನ್ನು ಎದುರುಗೊಳ್ಳುವುದಕ್ಕೆ ಮತ್ತು ಮೈಲಿನಲ್ಲಿ ಹೋಗುತ್ತಿದ್ದ ಗೆಳೆಯರೊಬ್ಬರನ್ನು ಬೀಳ್ಕೊಡುವುದಕ್ಕೆ ಹೋಗಿದ್ದರೆಂದೂ ತಿಳಿದುಬರುತ್ತದೆ

ಲೈಸನ್ಸುದಾರರು ತಮ್ಮ ಲೈಸನ್ಸುಗಳನ್ನು ಹೊಸತಾಗಿ ಮಾಡಲು (ರಿನ್ಯೂ ವಲ್) ಕಲೆಕ್ಟರರ ಆಫೀಸಿಗೆ ಕಳುಹಿಸುವವರಷ್ಟೆ ಅವುಗಳು ಹೊಸತಾಗಿ ಮಾಡಲ್ಪಟ್ಟನೆ ಅವುಗಳು ಡಿವಿಜನಲ್ ಮೆಜಿಸ್ಟ್ರೇಟರ ಮುಖಾಂತರ ಹಿಂದಕ್ಕೆ ಕೊಡಲ್ಪಡುವವು. ಲೈಸನ್ಸುದಾರರು ಅವುಗಳನ್ನು ತಾಲೂಕು ಆಫೀಸಿನಿಂದ ಪಡೆಯಬಹುದು ಎಂದು ಜಿಲ್ಲಾ ಕಲೆಕ್ಟರ ದೊರೆಗಳು ತಿಳಿಸುತ್ತಾರೆ

ಜಿಲ್ಲಾ ಲೆಜಿಸ್ಲೆಟಿವ್ ಕೌನ್ಸಿಲ್ ಸಭೆ ಈ ಸಂಭವ ಮುಂದಿನ ಸಭೆಯು ಅಕ್ಟೋಬರ ತಾ ೩೧ನೇ ಶನಿವಾರ 4 ಘಂಟೆಗೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ನಡೆಯುವದು ಸದಸ್ಯರು ಬರಬೇಕಾಗಿ ಪ್ರಾರ್ಥಿಸಲ್ಪಟ್ಟಿದ್ದಾರೆ.

ಮಂಗಳೂರಿನವರೂ, ಮದ್ರಾಸಿನ ಪ್ರಸಿದ್ಧ ವಕೀಲರೂ ಆದ ಸಿ. ಎಮ್ ಎ ಟಿ. ಕ್ರೊಪೋರರವರು ವಿಕ್ಟೋರಿಯಾ ಮತ್ತು ಅಕ್ಕನ ಪಿಷ್ಟರಾಗಿ ಸೇರಿಸಲ್ಪಟ್ಟಿರುವುದು ಅಭಿನಂದನೀಯವಿದೆ

ಮಂಗಳೂರು ನಗರಸಭೆ

ಮಂಗಳೂರು ನಗರಸಭೆಯ ವಿಶೇಷ ಮೀಟಿಂಗೊಂದು ನಗರ ಸಭಾಧ್ಯಕ್ಷರಾದ ಮಾನ್ಯ ಡಾ। ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ದಿನ ಸಾಯಂಕಾಲ ಜರಗಿತು ಹಂಪನಕಟ್ಟೆಯಲ್ಲಿ, ಸಾರ್ವಜನಿಕ ಕಾಲುದಾರಿಯಲ್ಲಿಯೇ ನಡೆದುಕೊಂಡು ಹೋಗಬೇಕೆಂಬ ಸೂಚನೆಯನ್ನೂ ಒಳಗೊಂಡ ನೋಟೀಸಿನಲ್ಲಿ ಆಕ್ಷೇಪಕರವಾದ (offensive) ವಿಚಾರವಿದೆಯೆಂದೂ, ನೋಟೀಸಿಗೆ ವಿರೋಧವಾಗಿ ನಡೆದವರನ್ನು ಪ್ರಾಸಿಕ್ಯೂಟ್ ಗೊಳಿಸುವುದಾಗಿ ಸೂಚಿಸಿದುದು ಕಮಿಶನರ ಅಧಿಕಾರಕ್ಕೆ ಮೀರಿದ್ದಾಗಿದೆಯೆಂದೂ, 'ನಮ್ರತೆಯಿಂದ ಕಾಲುದಾರಿಯನ್ನು ಉಪಯೋಗಿಸುವ' ಹಾಗೆ ನೋಟೀಸಿನಲ್ಲಿರುವ ಶಬ್ದಗಳನ್ನು ಮಾರ್ಪಡಿಸಬೇಕೆಂದೂ, ಶ್ರೀ ಆನಂದ ತಲ್ಲೂರರು ಠರಾವನ್ನು ತಂದರು. ಶ್ರೀ ತಲಚೇರಿಕಾರಾ ರಂಗರಾಯರು ಅದನ್ನು ಅನುಮೋದಿಸಿದರು. ನಗರ ಸಭಾಧ್ಯಕ್ಷರೂ ಇನ್ನೂ ಅನೇಕ ಸದಸ್ಯರೂ ಆ ಶಬ್ದಗಳನ್ನು ಬದಲಾವಣೆಮಾಡಬೇಕೆಂದು ಸೂಚಿಸಿದರು ಠರಾವು ವಿರೋಧವಿಲ್ಲದೆ ಅಂಗೀಕರಿಸಲ್ಪಟ್ಟಿತು. ನಗರದ ಟ್ರಂಕ್ ರೋಡುಗಳ ಸ್ವಚ್ಛಕ್ಕೆ ಆರು ಮೈಲಿಗೆ ಆಸ್ಫಾಲ್ಟ್ ಹಾಕಿ ದುರಸ್ತಿಪಡಿಸುವ ಬಗ್ಗೆ ರಿಟ್ರೆಂಚ್ಮೆಂಟ್ ಮೊಬಲಿನ ಹಣವು (ರೂ ೨೦,೦೦೦) ಆ ಬಗ್ಗೆ ಉಪಯೋಗಿಸಲ್ಪಡಬಹುದೆಂದಾಯಿತು

ಕಾರ್ಕಳ:—ಈ ಚಿಕ್ಕ ಪೇಟೆಯಲ್ಲಿ ಒಂದು ಪೋಸ್ಟಾಫೀಸು ಇಲ್ಲದೆ, ಆಗರ್ಭ ಶ್ರೀಮಂತರಿಂದ ಹಿಡಿದು ಅತೀ ಬಡಬಗ್ಗರ ವರೆಗೂ ಬಹಳ ತೊಂದರೆಗಳಿಗೀಡಾಗಿರುವರು ವರ್ತಮಾನ ಪತ್ರಿಕೆಗಳೂ ಪ್ರೈವೇಟ್ ಪಟರುಗಳೂ ಆಮಂತ್ರಣ ಪತ್ರಿಕೆಗಳೂ ಮನಿಯಾರ್ಡರುಗಳೂ ಯಾವತ್ತೂ ಪೇಟೆಯವರಿಗಾಗಲಿ ಆಸುಪಾಸಿನ ಗ್ರಾಮಸ್ಥರಿಗಾಗಲಿ ಸಕಾಲದಲ್ಲಿ ತಲ್ಪುವ ಏರ್ಪಾಡಿಲ್ಲದೆ, ಬಹಳ ಸಂಕಟಕ್ಕೊಳಗಾಗಿರುವರು. ಸಾಧಾರಣ ಎರಡು ಮೂರು ವರ್ಷಗಳ ಹಿಂದೆ ಇದ್ದ ಪೋಸ್ಟಾಫೀಸನ್ನು ಮಾನ್ಯ ಸರಕಾರದವರು ತಮ್ಮ ಲಾಭನಷ್ಟದೃಷ್ಟಿಯಿಂದ ನೋಡಿಯೋ ಯಾ ಇನ್ನಿತರ ಕಾರಣಗಳಿಂದಲೋ ತೆಗೆದು ಹಾಕಿದುದು ತುಂಬಾ ವಿಷಾದಕರ ಇನ್ನಾದರೂ ಪ್ರಜೆಗಳ ಹಿತವನ್ನು ಬಯಸುವ ಮಾನ್ಯ ದಯಾಳು ಸರಕಾರದವರು ನಮ್ಮ ಸಂಕಷ್ಟಗಳನ್ನು ದೂರಗೊಳಿಸುವ ಬಗ್ಗೆ ದಯವಿಟ್ಟು ಇತ್ತ ಗಮನಿಸುವರೋ ಯೆಂದೊಂದು ಬಿನ್ನಹ

ಇಲ್ಲಿ ಸಾಧಾರಣ ಎರಡು ಮೂರು ತಿಂಗಳುಗಳಿಂದಾಯ್ತು ಜುಗಾರಿಯಾಟವು ದಿನ ತಪ್ಪದೆ ಎಂಬಂತೆ ನಡೆಯುವದರಿಂದ ಸಂಬಂಧ ಪಟ್ಟವರು ಇತ್ತ ನಿಗಕೊಡುವರೇ?

ಮಾನ್ಯ ದಯಾಳು ಸರಕಾರದವರು ಇಲ್ಲಿ ಒಂದು ಪಿರ್ಕಾದ ಭೂಮಿಯನ್ನು ತೋಟಿಸಿದುದರಿಂದ ಇಲ್ಲಿಯ ಬಡಬಗ್ಗರಿಗೆ ಬಹಳ ಪ್ರಯೋಜನವಾಗಿರುವುದು.

ನೀಲಾವರ:—ಶ್ರೀ ಮಹಿಷಮರ್ದಿನಿ ಹಿರಿಯ ಬಯಲು ನಾಟಕ ಮಂಡಳಿಯು ಇದೇ ತಾ. ೨೦ ೧೦ ೩೬ರಲ್ಲಿ ಬಾರ್ಕೂರಿನ ಡಾ। ಕೆ ಆರ್. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಬಾಲಕರು ಗಯ ಚರಿತ್ರೆ ಎಂಬ ನಾಟಕವನ್ನೂ, ಕೋಲಾಟ, ಲೇಜಿಮ್, ಡ್ರಿಲ್, ಜಡೆ ಹೆಣೆಯುವದೇ ಮೊದಲಾದ ಆಟಗಳ

ನ್ನೂ ಪ್ರದರ್ಶಿಸಿದರು ಸಭಿಕರ ಭಾಷಣ, ಅಧ್ಯಕ್ಷರ ಭಾಷಣವಾಗಿ ಸ್ವಾಗತ ವಾಳದವರ ಶಿಬಿರಾಗ್ನಿಯು ನಡೆಯಿತು. ಮಹಿಷಮರ್ದಿನಿ ಶಾಲಾಬಾಲಕರು ಕುಂಜಾಲಿನ ವಿರುಷಪ್ಪಾಹದ ಸಮಯದಲ್ಲಿಯೂ, ಇತರ ಊರುಗಳಲ್ಲಿಯೂ ತಮ್ಮ ಪ್ರದರ್ಶನಗಳನ್ನು ತೋರಿ ಜನರ ಮೆಚ್ಚಿಗೆಗೆ ಪಾತ್ರರಾಗಿರುವರು

ಕಾರ್ಕಳ ಗಾಂಧಿ ಜಯಂತಿ:—ಶ್ರೀ ಪದ್ಮಸಾಲಿ ವೈಶ್ಯ ಸಮಾಜ ಸೇವಾ ಯುವಕ ಸಂಘದಲ್ಲಿ ಶ್ರೀಗಳಾದ ಕೆ. ಮುತ್ತಯ್ಯ ಶೆಟ್ಟಿಗಾರ್, ಸುಬ್ಬಯ್ಯ ಶೆಟ್ಟಿಗಾರ್, ರಾಮ ಶೆಟ್ಟಿಗಾರ ಮತ್ತು ಧರ್ಮಾನಂದರ ಕಾಲೋಚಿತ ಭಾಷಣಗಳೊಂದಿಗೆ ಗಾಂಧಿ ಜಯಂತಿಯನ್ನು ಜರಗಿಸಲಾಯ್ತು.

ಹರಿಕೀರ್ತನೆ:—ತಾ. ೧೩ನೇ ಮಂಗಳವಾರ ಶ್ರೀ ಧರ್ಮಾನಂದರ ವ್ಯವಸ್ಥಾಪಕತೆಯಿಂದ ಮಲ್ಪೆಯ ಶ್ರೀ ಸಾಮುಯಿರವರಿಂದ 'ಸತ್ಯ ಹರಿಶ್ಚಂದ್ರ'ನೆಂಬ ಸತ್ಯವ್ಯಾಖ್ಯಾನವು ಅತ್ಯಂತ ಸುರಸವಾಗಿ ಮೇಲಿನ ಸಂಘದ ಆಶ್ರಯದಲ್ಲಿ ಶ್ರೀ ವೀರಭದ್ರ ನಿಲಯದಲ್ಲಿ ಜರಗಿಸಲ್ಪಟ್ಟಿತು. ಶ್ರೀ ಬ್ರಹ್ಮಾನಂದರ ಧನ್ಯವಾದ ಸಮರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯ್ತು. ಈ ಸಮಾರಂಭವು ಯಶಸ್ವಿಯಾಗಿ ನಡೆವಂತೆ ಸಹಾಯವಿತ್ತು ಪ್ರೋತ್ಸಾಹಿಸಿದ ಶ್ರೀಗಳಾದ ಎಸ್. ರಾಮಕಾಮತ್, ಸಾಹುಕಾರ ಸದಾನಂದಕುಡ್ವ, ಮತ್ತಿತರ ಸಹಾಯಕರಿಗೆ ವ್ಯವಸ್ಥಾಪಕನ ಹೃತ್ಪೂರ್ವಕ ಅಭಿನಂದನೆಗಳು

ನವರಾತ್ರಿ ಮಹೋತ್ಸವ:—ಯುವಕ ಸಂಘದ ಮತ್ತು ಬಾಲ ವೃಂದದ ಅಭೂತ ಪೂರ್ವ ಉತ್ಸಾಹದಿಂದ ಶ್ರೀ ವೀರಭದ್ರ ನಿಲಯದಲ್ಲಿ ಕೀರ್ತನೆ, ಭಾಷಣ, ವ್ಯಾಖ್ಯಾನ, ಆರಾಧನಾದಿಗಳಿಂದ ನವರಾತ್ರಿ ಮಹೋತ್ಸವವು ವಿಜೃಂಭಣೆಯಿಂದ ಜರಗುತ್ತಲಿದೆ

> **ಬರುವ ವಾರದ ಕಥೆ**
> **ಗೋಪಮ್ಮನ**
> **ಗೋವು ಪೂಜೆ.**

ಮೈಲ್ಬಾಡಿ (ಸುರತ್ಕಲ್):—ಇಲ್ಲಿಯ 'ಶ್ರೀ ಭಾರತೀ ವಾಚನಾಲಯ'ದ ೯ನೇ ವಾರ್ಷಿಕ, ವರ್ಧಂತ್ಯೋತ್ಸವವು ಇದೇ ಕಳೆದ ತಾ. ೨೨-೧೦-೩೬ನೇ ಗುರುವಾರ ಅಪರಾಹ್ನ ಘಂಟೆ ೩ಕ್ಕೆ, ತೋರಣ ಪತಾಕೆಗಳಿಂದ ಅಂದವಾಗಿ ಅಲಂಕೃತವಾದ ಇಲ್ಲಿಯ ವಾಚನಾಮಂದಿರದಲ್ಲಿ ಮ ರಾ. ರಾ. ಪಿ ಶ್ರೀನಿವಾಸರಾವ್ ಅವರ್ಗಳ್ ಬಿ. ಎ. ಬಿ. ಎಲ್. ಅಡ್ವೋಕೇಟ್ ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರಗಿತು ಕ್ರಮವಾಗಿ ಪ್ರಾರ್ಥನೆ ವರದಿವಾಚನ, ಭಾಷಣ ಮತ್ತು "ಕಮಕಾಲಕ್ಷೇಪ" ಮೊದಲಾದ ಕಾರ್ಯಕ್ರಮಗಳು ಸಾಂಗವಾಗಿ ನಡೆದು ಆ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು.

ಮಂಜೇಶ್ವರ:—ಇಲ್ಲಿಯ ದಸರಾ ಮತ್ತು ಆನೆಯ ರಾಷ್ಟ್ರೀಯ ಆರೋಗ್ಯ ಮತ್ತು ಶಿರುಸಪ್ತಾಹ ಸಮಾರಂಭವು ತಾ. ೨೫-೧೦-೧೯೩೬ ರಿಂದ ತಾ. ೨೩-೧೦-೧೯೩೬ರ ವರೆಗೆ ಇಲ್ಲಿಯ ಶ್ರೀಮತ್ ಅನಂತೇಶ್ವರ ಟೆಂಪಲ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಶಾಲಾ ಮಡುಗರ ಮತ್ತು ಹುಡುಗಿಯರ ಪಂದ್ಯಾಟಗಳು, ಮಕ್ಕಳ ಮೆರವಣಿಗೆ, ಶಿರು ಪ್ರದರ್ಶನ ಸಿನೇಮಾ ಪ್ರದರ್ಶನ ಆರೋಗ್ಯ ವಿಷಯಕವಾದ ಭಾಷಣಗಳು ಮತ್ತು ನಾಟಕಗಳು ಇತ್ಯಾದಿ ಕಾರ್ಯಕ್ರಮಗಳಿಂದ ಸಪ್ತಾಹವು ಚಿತ್ತಾಕರ್ಷಕವಾಗಿತ್ತು ಸಪ್ತಾಹದ ಕಡೆಯ ದಿನವಾದ ಬಹುಮಾನ ಸಭೆಯ ಅಧ್ಯಕ್ಷಸ್ಥಾನವನ್ನು ಮಂಗಳೂರು ಗವರ್ನಮೆಂಟ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಯುತ ಪಿ ಎನ್. ಗೌಡ M. A, B Sc. (Edin) ರವರು ವಹಿಸಿದ್ದರು.

ಕುಂದಾಪುರ:—ಈ ತಾಲೋಕಿನ ಬೋರ್ಡು ಪ್ರಾಥಮಿಕ ಶಾಲೆಗಳ ಅಧ್ಯಾಪಕರ ಮಹಾಸಭೆಯು ತಾ. ೧೮-೧೦-೩೬ನೇ ಆದಿತ್ಯವಾರ ಸಾಯಂ ಘಂಟೆ 4ಕ್ಕೆ ಒಡೇರ ಹೋಬಳಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಶ್ರೀಯುತ ಕೆ. ವೆಂಕಪ್ಪ ಶೆಟ್ಟರು ವಕೀಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಶಿವರಾಮ ಶೆಟ್ಟರು ವಕೀಲ್, ಇವರೇ ಮೊದಲಾದವರು ನೆರೆದಿದ್ದರು. ಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕರಾದ ಹಾಲಿ ಹವಾಲೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಹಾಗೂ ಗವರ್ನಮೆಂಟಿಗೆ ಸಮರ್ಪಿಸಲಿಕ್ಕೆ ನಿಶ್ಚಿತವಾದ ಒಂದು ತಾಲೂಕು ಸಂಸ್ಥೆಯು ಏರ್ಪಡಿಸುವ ಆವಶ್ಯಕತೆಯ ಕುರಿತು ಶ್ರೀ ಚಕ್ರಪಾಣಿ ನರಸಿಂಹಯ್ಯನವರು ಸಕಾರಣವಾಗಿ ತಂದ ಸೂಚನೆಯು ಸರ್ವಸಮ್ಮತಿಯಿಂದ ಮಂಜೂರಾಯಿತು. ಆ ಮೇಲೆ 10 ಜನ ಸದಸ್ಯರಿಂದ ಆರಿಸಲ್ಪಟ್ಟ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು ಮೇಲಿನ ಹತ್ತು ಮೆಂಬರರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ ಇಬ್ಬರನ್ನು ಕಾರ್ಯದರ್ಶಿಯರನ್ನಾಗಿಯೂ ಚುನಾಯಿಸಲಾಯಿತು. ಈ ಸಂಸ್ಥೆಗೆ ಬೋರ್ಡು ಎಲಿಮೆಂಟರಿ ಶಾಲೆಯ ಅಧ್ಯಾಪಕರು, ಅಧ್ಯಾಪಕಿಯರೆಲ್ಲರೂ ಸದಸ್ಯರಾಗಿ ಸೇರಬೇಕೆಂತಲೂ ಪ್ರತಿ ಒಬ್ಬರೂ ವಾರ್ಷಿಕ ವರ್ಗಣಿಯಾಗಿ —೨—೦ ತೆರಬೇಕೆಂತಲೂ ವಸೂಲಾದ ಐವಜು ಸಂಘದ ಅಧ್ಯಕ್ಷರ ಸೇವಿಂಗ್ಸು ಬೇಂಕಿನಲ್ಲಿಡಬೇಕೆಂತಲೂ ವಗೈರೆ ನಿರ್ಣಯಗಳು ಪಾಸಾದ ನಂತರ ಅಧ್ಯಕ್ಷರು ಸಂಘದ ಆವಶ್ಯಕತೆ ಅದರ ಪ್ರಯೋಜನಗಳನ್ನು ವಿವರಿಸಿ ಇಂಥ ತಾಲೋಕು ಸಂಘಗಳು ಜಿಲ್ಲಾ ಸಂಸ್ಥೆಯ ಅಧೀನವಿದ್ದು ಇವೆಲ್ಲಾ ಪ್ರಸಿಡೆನ್ಸಿಯ ಬೆಲವಾದ ಒಂದು ಸಂಸ್ಥೆಯ ನೇತೃತ್ವಕ್ಕೆ ಒಳಪಟ್ಟಿಯಿರುವದರಿಂದ ಅಧ್ಯಾಪಕರ ಇಂಥ ಸಾಮುದಾಯಕ ಬೇಡಿಕೆಗಳು ಬೋರ್ಡಿನವರ ಹಾಗೂ ಸರಕಾರದ ಗಮನಕ್ಕೆ ಬಂದು ಅಧ್ಯಾಪಕರ ಮತ್ತು ಶಾಲೆಗಳ ಭಾವಿಕಲ್ಯಾಣಕ್ಕೆ ಹೆಚ್ಚಿನ ಫಲಕಾರಿಯಾಗದಿರದೆಂದು ವಿವರಿಸಿ ತಿಳಿಸಿದರು. ನಂತರ ಧನ್ಯವಾದವನ್ನಿತ್ತ ತರುವಾಯ ಸಭೆಯು ಚದರಿತು.

ಮೂಲ್ಕಿ:—ನಮ್ಮ ಸಂಸ್ಥಾನದ ದೇವಲಸ್ವಾಮಿ ಟ್ ಮಂತ್ರಿಗಳಾದ ಬಹುಮಾನಪಟ್ಟ ಪಿ. ಟಿ. ರಾಜನ್ ಬಾರ್-ಎಟ್-ಲೊ, ರವರು ಇದೇ ತಾ ೧೭-೧೦-೩೬ನೇ ಶನಿವಾರ ಪೂರ್ವಾಹ್ನ ಘಂಟೆ 9-30ಕ್ಕೆ ನಮ್ಮ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ರಾ. ದಿ. ಬ ಬಿ. ಮಹಾಬಲ ಹೆಗ್ಡೆ ಬಿ.ಎ. ಬಿ ಎಲ್. ರವರ ಜತೆಯಲ್ಲಿ ಇಲ್ಲಿಗೆ ಬಿಜಯಂಗೈದರು ಊರ ಪ್ರಮುಖರು ಬ್ಯಾಂಡ್ ವಾದ್ಯ ಬಿರುದಾವಳಿಗಳಿಂದ ಅವರನ್ನು ಸ್ವಾಗತೀಕರಿಸಿ ಹೈಸ್ಕೂಲ್ ಕಟ್ಟಡಕ್ಕೆ ಕರೆದೊಯ್ದರು. ಹೈಸ್ಕೂಲ್ ಕಮಿಟಿಯ ಹಾಗೂ ಪಂಚಾಯತ ಬೋರ್ಡಿನ ಪರವಾಗಿ ಮಾನಪತ್ರವು ಸಮರ್ಪಿಸಲ್ಪಟ್ಟಿತು. ಬಹುಮಾನಪಟ್ಟ ಮಂತ್ರಿಗಳು ಇದಕ್ಕೆ ಪ್ರತ್ಯುತ್ತರವಾಗಿ ಹೈಸ್ಕೂಲಿನ ಮತ್ತು ಪಂಚಾಯತ ಬೋರ್ಡಿನ ಹಿತದೃಷ್ಟಿಯಿಂದ ಅಭಯಪ್ರದವಾದ ಮಾತುಗಳನ್ನಾಡಿದರು. ಹಾಗೆಯೇ ಸದ್ರಿ ಮಹನೀಯರನ್ನು ಉಪಚಾರ ಸತ್ಕಾರಗಳಿಂದ ಬೀಳ್ಕೊಟ್ಟಿತು. ತನ್ಮಧ್ಯೆ ಇಲ್ಲಿಯ ಹೈಸ್ಕೂಲಿನ ಪರವಾಗಿ ಏರ್ಪಡಿಸಿದ ಸೋಟ್ಟಿಯ ಒಂದು ಪುಸ್ತಕವನ್ನು ಮಂತ್ರಿವರ್ಯರು ಕೊಂಡುಕೊಂಡುದಲ್ಲದೆ ಸದ್ರಿ ಪುಸ್ತಕದ ಟಿಕೇಟುಗಳಿಗೆ ಬಹುಮಾನ ದೊರೆತರೆ ಸದ್ರಿ ಹಣವನ್ನು ಹೈಸ್ಕೂಲಿಗೇನೇ ಉಪಯೋಗಿಸಿಕೊಳ್ಳಬೇಕಾಗಿ ಸೂಚಿಸಿದುದು ಇವರ ಉದಾರಗುಣವನ್ನು ವ್ಯಕ್ತಪಡಿಸುತ್ತದೆ. ಅದೇ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ್ ಮಹಾಶಯರು ತನಗೂ 2 ಪುಸ್ತಕಗಳನ್ನು ಕಳುಹಿಸಿಕೊಡಬೇಕಾಗಿ ಅಪ್ಪಣೆಕೊಡಿಸಿದರು. ಈ ಮಹನೀಯರಿಬ್ಬರ ಉದಾರ ಬೆಂಬಲದಿಂದ ನಮ್ಮ ಸೋಟ್ಟಿ ಯಶಸ್ವಿಯಾಗಬೇಕೆಂದು ಕೋರುತ್ತೇವೆ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂ. 1935 R. I. A. 1936

ಅರ್ಜಿದಾರರು:—ಮುತ್ತಯ್ಯಶೆಟ್ಟಿ ಕೂಡಾ—ವಾದಿರು

ಎದುರಿರು:—ಶೇಷಗಿರಿಯಪ್ಪ ಕೂಡಾ—ಪ್ರತಿವಾದಿರು

1ನೇ ಪ್ರತಿವಾದಿ ಶೇಷಗಿರಿಯಪ್ಪನಿಗೆ 2ನೇ ಪ್ರತಿವಾದಿ ನಾರಾಯಣಪ್ಪಯ್ಯಗೆ 3ನೇ ಪ್ರತಿವಾದಿ ರಾಮಪ್ಪಯ್ಯಗೆ, 4ನೇ ಪ್ರತಿವಾದಿ ಮಂಜುನಾಥಯ್ಯಗೆ, 5ನೇ ಪ್ರತಿವಾದಿ ಮ್ಯಾನರ ಪದ್ಮನಾಭಯ್ಯನ ಗಾರ್ಡಿಯನ ತಾಯಿ ಶೇಷಮ್ಮಗೆ ಸಹಾ:—

ಅರ್ಜಿದಾರ ವಾದಿರು:—ಮೇಲ್ಕಂಡ ಕ್ರಮ ನಂ. 1935ನೇ ಪ್ರಿಲಿಮಿನೆರಿ ಡಿಕ್ರಿ ರಿಕಾರ್ಡು ಪರಾಂಬರಿಸಿ ತಮಗೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಕೊಟ್ಟಮೇಲೆ ಹೇಳಿದ R. I. A. 526/1936ನೇ ಅರ್ಜಿಯು ತಾ. 9—11—1936ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆಯಿಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪಯಿದ್ದರೆ ಆ ದಿವಸ ಹಗಲು 11 ಘಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಜ್ಞಾಪಿಸುವಮಾಡಿಕೊಳ್ಳತಕ್ಕದ್ದೆಂತಲೂ ಈ ಮೂಲಕ ತಿಳಿಸೋಣಾಗಿಯದೆ. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕುಂದಾಪುರ)
ತಾ. 27 10 36.)

K. Vittaldas Shenai,
ಅರ್ಜಿದಾರರು ಕಡೆ ಎಡ್ವೊಕೇಟ್.

ಬೇಕಾಗಿದೆ

ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟು, ಹಿಂದು ದೇಶದಲ್ಲಿ ಪ್ರಚಾರಮಾಡಲ್ಪಟ್ಟಿರುವ, ಇಡೀ ಲೋಕದಲ್ಲೇ ಸುಪ್ರಸಿದ್ಧವಾಗಿ ಇಂಗ್ಲೆಂಡಿನಲ್ಲಿ 116, 179ರ ವರೆಗೆ ವಿಸ್ಮಯಕರ ಟ್ಯಾರ್ ಮೈಲೇಜ್ ರಿಕಾರ್ಡು ಪಡೆದಿರುವ ಫಸ್ಟ್ ಕ್ಲಾಸ್ ನ್ಯುಮೇಟಿಕ್ ಮೋಟರ್ ಟಾಯರುಗಳನ್ನು ಪ್ರಚರಿಸಲು ಏಜಂಟರು ಬೇಕಾಗಿದೆ. ಅತಿ ದೊಡ್ಡ ಟ್ಯಾಯರುಗಳ ರಾಜನೆನಿಸಿರುವ ಈ ಟಾಯರನ್ನು ಧಾರವಾಡ, ನೈಜಾಮ್ ಹೈದರಾಬಾದ್ ಮತ್ತು ಇಡೀ ಮದ್ರಾಸ್ ಪ್ರಾಂತದಲ್ಲೆಲ್ಲಾ ಪ್ರಚಾರಮಾಡಲು ವಿಶ್ವಾಸನೀಯ ಜನರು ಬೇಕಾಗಿದ್ದಾರೆ. ಆಕರ್ಷಕ ಕಮಿಷನು ಕೊಡಲ್ಪಡುವುದು. ಹೆಚ್ಚಿನ ವಿವರಗಳಿಗೆ, ಪೋಸ್ಟ್ ಬೋಕ್ಸ್ ನಂಬ್ರ 610 ಬೊಂಬಾಯಿ, ಈ ವಿಳಾಸಕ್ಕೆ ಬರೆಯಿರಿ.

ಬಂಟರ ಯಾನೆ ನಾಡವರ ಸಂಘ ಮುಂಬಾಯಿ

ಮೇಲಿನ ಸಂಘದ ೩ನೇ ವಾರ್ಷಿಕ ಮಹಾಸಭೆಯು ಇದೇ ತಿಂಗಳ ತಾ. ೧೨-೧೦-೩೬ನೇ ಆದಿತ್ಯವಾರ ಮಧ್ಯಾಹ್ನ ಘಂಟೆ ೪ಕ್ಕೆ ಮುಂಬಾಯಿ ಕೋಟೆಯೊಳಗಿನ ಆಘಾಖಾನ್ ಬಿಲ್ಡಿಂಗಿನ ೪ನೇ ಮಾಳಿಗೆಯಲ್ಲಿ ಜರಗಿತು. ಮೇಲಿನ ಮಹಾಸಭೆಗೆ ಶ್ರೀ ಡಾಕ್ಟರ್ ಎಮ್. ವೆಂಕಟ್ರಾಯ ಶೆಟ್ಟಿ, ಜಿ. ಪಿ. ಯವರನ್ನು ಅಧ್ಯಕ್ಷಸ್ಥಾನಕ್ಕೆ ನಿಶ್ಚಿಸಲ್ಪಟ್ಟಿದ್ದರೂ ಸಕಾಲಕ್ಕೆ ಬರಲು ಅನಾನುಕೂಲವಾದ್ದರಿಂದ ಶ್ರೀ ಕೆ. ಶಾಂತಪ್ಪ ಶೆಟ್ಟಿ ಸೂಚನೆ ಮತ್ತು ಶ್ರೀ ನಾರಾಯಣ ಶೆಟ್ಟಿ ಅನುಮೋದನೆ ಮೇರೆಗೆ ಶ್ರೀ ಬಡಿಲಗುತ್ತು ದೂಮಪ್ಪ ನಾಯ್ಕರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು.

ಸಂಘದ ಕಾರ್ಯದರ್ಶಿಯವರಿಂದ ತಯಾರಿಸಲ್ಪಟ್ಟ ವರದಿಯನ್ನು ಸಭೆಯು ಸ್ವೀಕರಿಸಿ ಸಂಘದ ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯ್ತು. ಮತ್ತು ಸಂಘದ ಮುಂದಿನ ಆಡಳಿತ ಮಂಡಳಿಯ ಬಗ್ಗೆ ಈ ಕೆಳಗಿನ ಸದಸ್ಯರನ್ನು ಆರಿಸಲಾಯಿತು. ಶ್ರೀ ಡಾಕ್ಟರ್ ಎಮ್. ವೆಂಕಟ್ರಾಯ ಶೆಟ್ಟಿ, ಜಿ. ಪಿ. ಯವರು ಅಧ್ಯಕ್ಷರು, ಶ್ರೀ ಬಡಿಲಗುತ್ತು ದೂಮಪ್ಪ ನಾಯ್ಕರು ಉಪಾಧ್ಯಕ್ಷರು ಶ್ರೀ. ಕೆ. ಪಿ. ಕೆ. ಶೆಟ್ಟಿ ಮತ್ತು ಶ್ರೀ ಮೂಲ್ಕಿ ದೊಂಬ ಶೆಟ್ಟಿ ಗೌರವ ಜತೆ ಕಾರ್ಯದರ್ಶಿಯರು, ಶ್ರೀ ಕೆ. ವಿಟ್ಠಲಶೆಟ್ಟಿ ಕೋಶಾಧಿಕಾರಿ, ಶ್ರೀ ಬಿ ನಾರಾಯಣ ಶೆಟ್ಟಿ ಸಹಾಯಕ ಕೋಶಾಧಿಕಾರಿ, ಉಳಿದ ಆಡಳಿತೆ ಮೆಂಬರರು ಶ್ರೀ ಕುತ್ತೆತ್ತೂರು ರಾಮಣ್ಣ ಶೆಟ್ಟಿ, ಶ್ರೀ ಕೆ. ಕುಂಞಣ್ಣ ಶೆಟ್ಟಿ ಶ್ರೀ ಸುರತಕಲ್ಲು ತ್ಯಾಂಪಣ್ಣ ಶೆಟ್ಟಿ ಶ್ರೀ ಕೆ. ವೆಂಕಪ್ಪ ಹೆಗ್ಡೆಯರು, ಶ್ರೀ ಕೆ. ಸರ್ವೋತ್ತಮ ಶೆಟ್ಟರು, ಶ್ರೀ ಪಾಂಗಾಳ ಮಹಾಬಲ ಶೆಟ್ಟಿ, ಶ್ರೀ ಎಮ್. ಬಾಬು ಶೆಟ್ಟಿ, ಶ್ರೀ ಸುರತಕಲ್ಲು ತುಕ್ರ ಶೆಟ್ಟಿ, ಶ್ರೀ ಪದುಪಣಂಬೂರು ನಾರಾಯಣ ಶೆಟ್ಟಿ.

ಮುಂಬಾಯಿ ಅಖಿಲ ಬಂಟರ ಯಾನೆ ನಾಡವರ ಸಂಘದವರು ತಮ್ಮ ಸಂಘವನ್ನು ಸಂಪೂರ್ಣ ಮುಕ್ತಾಯಗೊಳಿಸಿ ಸದ್ರಿ ಸಂಘದ ಕೆಲವು ಮೆಂಬರರು ಮತ್ತು ಸಂಘದ ಪ್ರೆಸಿಡೆಂಟ್ ಶ್ರೀ. ಕೆ. ಪಿ. ಕೆ. ಶೆಟ್ಟಿ ಸಂಘದ ರಿಕಾರ್ಡು ಮತ್ತು ಶಿಲ್ಕು ರೂಪಾಯಿ ೧೧೧-೩-೩ಯನ್ನು ಕೂಡಾ ಹಾಜರುಪಡಿಸಿದ ಮೇರೆಗೆ ಆ ಸಂಘದ ಮೆಂಬರರನ್ನು ಮುಂಬಾಯಿ ಬಂಟರ ಯಾನೆ ನಾಡವರ ಸಂಘಕ್ಕೆ ಅತೀ ಸಂತೋಷದಿಂದ ಸೇರಿಸಿಕೊಳ್ಳಲಾಯಿತು. ಮತ್ತು ಶ್ರೀ ಕೆ. ಪಿ. ಕೆ. ಶೆಟ್ಟಿ ಭಾಷಣವು ಐಕ್ಯಮತ್ಯಕ್ಕೂ ಜಾತಿಯ ಏಳಿಗೆಯ ವಿಷಯದಲ್ಲಿಯೂ ಅತಿ ಬೋಧಪರವಿದ್ದು ಸರ್ವ ಸಭಿಕರ ಮನಸ್ಸನ್ನು ಸಂತೋಷಗೊಳಿಸಿತು. ಈ ವಿನಾ ಶ್ರೀ. ಕೆ. ಸಂಜೀವ ಶೆಟ್ಟಿ ಮತ್ತು ಎಂ ಶಿವಪ್ಪ ಶೆಟ್ಟಿ ಕೂಡಾ ಸಂಘದ ಏಳಿಗೆಯ ವಿಷಯದಲ್ಲಿ ರಸವತ್ತಾದ ಭಾಷಣವನ್ನಿತ್ತದ್ದಲ್ಲದೆ ಶ್ರೀ ಡಾಕ್ಟರ್ ಎಮ್. ವೆಂಕಟ್ರಾಯ ಶೆಟ್ಟಿ ತನ್ನ ಧ್ಯೆ ಮಹಾಸಭೆಗೆ ಚಿತ್ತೈಸಿ ಅಖಿಲ ಬಂಟರ ಯಾನೆ ನಾಡವರ ಸಂಘವು ನಮ್ಮ ಸಂಘಕ್ಕೆ ಸೇರಿದ ವಿಷಯದಲ್ಲಿ ತನ್ನ ಆನಂದವನ್ನು ಸಭೆಯ ಮುಂದೆ ವ್ಯಕ್ತಪಡಿಸಿ ಶ್ಲಾಘಿಸಿದ್ದಲ್ಲದೆ ಬಂಟರ ಯಾನೆ ನಾಡವರ ಸಂಘದ ಸರ್ವ ಏಳಿಗೆಗೂ ಸಹಾಯಕ್ಕೂ ಬೆಂಬಲವನ್ನು ಸದಾಕಾಲ ಕೊಡಲು ತಾನು ಸಿದ್ಧನಿರುವನೆಂದು ತನ್ನ ಉದಾರತನವನ್ನು ಸಭೆಯವರಿಗೆ ತಿಳಿಸಿದ್ದಲ್ಲದೆ ಸಂಘದ ಮೆಂಬರರಿಗೆ ಅನೇಕ ಬುದ್ಧಿವಾದವನ್ನಿತ್ತು ಆನಂದಗೊಳಿಸಿದರು. ಮತ್ತು ಸಂಘದ ಸ್ವಯಂ ಸೇವಕರು ಅಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸಭಿಕರಿಗೆ ಆನಂದಗೊಳಿಸಿದ್ದಕ್ಕಾಗಿ ಸಂಘದ ಕಾರ್ಯದರ್ಶಿಯವರಿಂದ ವಂದನೆಗಳನ್ನು ಅರ್ಪಿಸಲಾಯ್ತು. ಅಂದಿನ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಶ್ರೀಯುತ ಬಡಿಲಗುತ್ತು ದೂಮಪ್ಪ ನಾಯ್ಕರು ತನ್ನ ಮನೋರಂಜಕವಾದ ಭಾಷಣವನ್ನಿತ್ತ ನಂತರ ಸಂಘದ ಕಾರ್ಯದರ್ಶಿಯವರು ಅಧ್ಯಕ್ಷರಿಗೂ ಸಭಿಕರಿಗೂ ವಂದನೆಯನ್ನಿತ್ತು, ಶ್ರೀಯುತ ಕೆ. ವಿಟ್ಠಲ ಶೆಟ್ಟರಿಂದ ಕೊಡಲ್ಪಟ್ಟ ಚಾ, ಫಲಹಾರಗಳಿಂದ ಸಭೆಯು ಕೊನೆಗೊಂಡಿತು.

ಗೌರವ ಜತೆ ಕಾರ್ಯದರ್ಶಿಯರು,
ಕೆ. ಪಿ. ಕೆ. ಶೆಟ್ಟಿ,
ಮೂಲ್ಕಿ ದೊಂಬ ಶೆಟ್ಟಿ.

ಯು. ಪಿ. ಮೇಸ್ತ, ಉದ್ಯಾವರ, ದ. ಕ.

(ಬಾಣಂತಿ ರೋಗದ ಸ್ಪೆಶಲಿಸ್ಟರು)

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಔಷಧಗಳು ದೊರೆಯುತ್ತವೆ.

U. P. Mesta,
Gold Medalled Physicion,
UDIAWAR, S. K.

ಪುತ್ತೂರು ರೆವಿನ್ಯು ಡಿವಿಜನಲ್ ಆಫೀಸರವರಿಂದ

ನೋಟೀಸು.

ದಕ್ಷಿಣಕನ್ನಡ ಜಿಲ್ಲಾ ಪುತ್ತೂರುತಾಲೂಕು ಸುಬ್ರಹ್ಮಣ್ಯಗ್ರಾಮದ ಕುಲಗುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರ್ಷ 1936ನೇ ಇಸವಿ ನವಂಬರ ತಿಂಗಳು 28ನೇ ತಾರೀಕಿನಿಂದ, ಇದೇ ಇಸವಿ ದಶಂಬರ ತಿಂಗಳು 13ನೇ ತಾರೀಕಿನ ವರೆಗೆ ಜರಗುವುದು. ಅಂದರೆ ಸಂತೆಯು ಕಾರ್ತಿಕ ಬಹುಳ ಮಿಥುನ ಪ್ರಾರಂಭವಾಗಿ, ಕಾರ್ತಿಕ ಅಮಾವಾಸ್ಯೆ ದಿವಸ ಅಂದರೆ ಸುಬ್ರಹ್ಮಣ್ಯ ದೀಪೋತ್ಸವದ ಪರಿಯಂತರ ಜರಗುವುದು. ಸಂತೆಗೆ ತಂದ ಪ್ರತಿ ಒಂದು ಜಾನುವಾರಿನಮೇಲೆ ಎರಡಾಣೆ ಫೀಸು ವಸೂಲು ಮಾಡಲಾದೀತು.

(*Sd*) ಕೆ. ಪಿ. ಕೃಷ್ಣನ್ ನಾಯರ್,
ರೆವಿನ್ಯು ಡಿವಿಜನಲ್ ಆಫೀಸರ್.

ಸಕಲೇಶಪುರದ

ಟವನ್ ಮುನಿಸಿಪಾಲಿಟಿ

ಊಟವನಿನಲ್ಲಿ ಹೇಮಾವತಿ ನದಿಯ ಪಕ್ಕದ ಮೈದಾನದಲ್ಲಿ ತಾ 12-11-1936 ರಿಂದ 15-11-1936ರ ವರೆಗೆ ದನಗಳ ಜಾತ್ರೆಯು ನಡಿಯುತ್ತದೆ. ರಾಸುಗಳಿಗೆ ಸುಂಕವಿಲ್ಲಾ, ನೀರಿನ ಹುಲ್ಲಿನ ಮತ್ತು ಸ್ಥಳದ ವಸತಿ ಚೆನ್ನಾಗಿರುತ್ತೆ. ಉತ್ತಮ ರಾಸುಗಳಿಗೆ ಬಹುಮಾನವು ಕೊಡಲ್ಪಡುತ್ತೆ. ಈ ಪ್ರದರ್ಶನವು ಕುಲಗುಂದದ ಜಾತ್ರೆಗೆ ಮೊದಲೇ ಆಗುವುದರಿಂದ ಒಳ್ಳೆ ರಾಸುಗಳ ಮಾರಾಟವಾಗುವ ಸಂಭವವಿದೆ.

ಸಕಲೇಶಪುರ } ಅಬ್ದುಲ್ಲಾ ಹುಸೇನ್ ಷರೀಫ್,
ಪ್ರೆಸಿಡೆಂಟ್.

ಬಾಡಿಗೆಗೆ ಇದೆ

ಉಡುಪಿ ಪಟ್ಟಣದ ಪ್ರಾಮುಖ್ಯ ಸ್ಥಳದಲ್ಲಿ ಆಫೀಸಿಗೂ, ಅಂಗಡಿಗೂ ಯೋಗ್ಯವಾದ ವಿಶಾಲವಾದ ಕೋಣೆಯು ಬಾಡಿಗೆಗೆ ದೊರೆಯುತ್ತದೆ; ವ್ಯಾಪಾರದ ವಹಿವಾಟು; ಜನರ ಆಗಮನ ನಿರ್ಗಮನಗಳಿಗೆಲ್ಲಾ ಕೇಂದ್ರ ಸ್ಥಳ. ಹೆಚ್ಚಿನ ಮಾಹಿತಿಯ ಬಗ್ಗೆ ಮುಖತಃ ಮಾತನಾಡಬಹುದು. ಇಲ್ಲವೆ ಪತ್ರವ್ಯವಹಾರ ಮಾಡಬಹುದು.

X *C/o* ನವಯುಗ ಉಡುಪಿ.

ಡ್ರಾಮಾ ಅಪ್-ಟು-ಡೇಟ್

ಸಾಮಾನ್ಯವಾಗಿ ನಾಟಕದ ಕಥಾಭಾಗದ ಸಮಯವು ಕೆಲವು ಯುಗಗಳನ್ನಾಗಲಿ, ಕೆಲವು ಜನ್ಮಗಳನ್ನಾಗಲಿ, ಕೆಲವು ವರ್ಷಗಳನ್ನಾಗಲಿ, ಅಥವಾ ಕೆಲವು ತಿಂಗಳುಗಳನ್ನಾದರೂ ಆಕ್ರಮಿಸಿಕೊಂಡಿರುತ್ತದೆ. ನನ್ನ ತಿಳವಳಿಕೆಯ ಮಟ್ಟಿಗೆ ಅತ್ಯಂತ ಅಲ್ಪ ಸಮಯದ ಕಥಾನಕವನ್ನೊಳಕೊಂಡ ನಾಟಕವೆಂದರೆ ಮಹಾರಾಷ್ಟ್ರ ಭಾಷೆಯಲ್ಲಿ ಬರೆಯಲ್ಪಟ್ಟು ಬಾಲಗಂಧರ್ವ ನಾಟಕ ಕಂಪೆನಿಯವರಿಂದ ಅಭಿನಯಿಸಲ್ಪಡುವ "ಸಂಶಯ-ಕಲ್ಲೋಲ"ವೇ.

ಸರ್ವ ಸಾಮಾನ್ಯವಾಗಿ ಕರ್ನಾಟಕ ಭಾಷೆಯಲ್ಲಿರುವ ನಾಟಕಗಳನ್ನು ಭಾಷಾ ದೃಷ್ಟಿಯಿಂದ ನಾಲ್ಕು ವಿಭಾಗಗಳಾಗಿ ಮಾಡಬಹುದು.— ೧ ಹಳೆಕನ್ನಡದವು. ೨ ಹೊಸಕನ್ನಡದವು ೩. ಆಯಾ ದೇಶದ ಗ್ರಾಮ್ಯ ಭಾಷೆಯವು. ೪. ಗ್ರಾಮ್ಯ ಮತ್ತು ಗ್ರಂಥಸ್ಥ ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಸಂಮಿಳಿತವಾಗಿ ಬರೆಯಲ್ಪಟ್ಟವು. ಕರ್ನಾಟಕದ ಗ್ರಾಮ್ಯ ಭಾಷೆಯಲ್ಲಿ ಬರೆಯಲ್ಪಟ್ಟ ನಾಟಕಗಳನ್ನು ನೋಡಿದಂದಿನಿಂದ ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿಗನುಗುಣವಾಗಿ, ಕನ್ನಡ, ತುಳು, ಕೊಂಕಣಿ, ಹಿಂದುಸ್ತಾನಿ ಹಾಗೂ ಇಂಗ್ಲಿಷ್ ಭಾಷೆಗಳನ್ನೊಳಕೊಂಡ ನಾಟಕವೊಂದನ್ನು ಬರೆಯಬೇಕೆಂಬುದೇ ಉದ್ದೇಶವಿತ್ತು.

ಈ ತೆರದ ನನ್ನ ವಿವಿಧ ಉದ್ದೇಶಗಳನ್ನೊಳಗೊಂಡ ಹೊಸ ನಾಟಕವನ್ನು (ಅಂದರೆ, ೨½ ಘಂಟೆಗಳ ಕಾಲದಲ್ಲಿ ಜರಗುವ ಕಥಾ ಸಂನಿವೇಶವನ್ನು ೨½ ಘಂಟೆಗಳಲ್ಲಿಯೇ ಆಡಿತೋರಿಸುವಂತೆ ಬರೆದ ನಾಟಕವನ್ನು) ಅಭಿನಯಿಸಿ ಜನಮನೋರಂಜನೆಯನ್ನು ಮಾಡುವುದೆಷ್ಟು ಕಷ್ಟವೋ, ಅದರ ಅಭಿನಯವನ್ನು ನೋಡಿ ಅದರ ಮರ್ಮವನ್ನು ತಿಳಿಯುವುದಕ್ಕೆ ಅಷ್ಟೇ ಕಷ್ಟವಿದೆ ಮಾತ್ರವಲ್ಲದೆ ವಿಶೇಷವಾದ ತಾಳ್ಮೆಯೂ ಬೇಕಾಗುವುದು. ದುರ್ದೈವವಶಾತ್ ಈ ನಾಟಕವನ್ನು ನವರಾತ್ರಿಯ ಸಂದರ್ಭದಲ್ಲಿ ಆಡುವಾಗ ಅನೇಕ ಕಾರಣಗಳಿಂದ ಪ್ರೇಕ್ಷಕ ವರ್ಗದಲ್ಲಿ ಅಸಹನೆಯುಂಟಾಗಿ ಗಲಾಟೆಗೆ ಕಾರಣವಾಯಿತು. ಆದುದರಿಂದ ನಾಟಕವನ್ನು ನಿಯಮಿತ ವೇಳೆಗಿಂತ ಅರ್ಧಗಂಟೆ ಮುಂಚಿತವಾಗಿ ನಿಲ್ಲಿಸಬೇಕಾಯಿತು. ಈ ನಾಟಕವನ್ನು ಬರೆದು ರಂಗಭೂಮಿಗೆ ತಗೆದುಕೊಂಡು ಬರುವುದರಲ್ಲಿ ಯಾವ ವಿಧವಾದ ದುರುದ್ದೇಶವು ನನಗಿಲ್ಲದಿದ್ದರೂ ಕೆಲವು ಜಾತಿಗಳನ್ನು ಹಿಯ್ಯಾಳಿಸುವುದಕ್ಕಾಗಿಯೇ ಈ ನಾಟಕವನ್ನು ರಂಗಭೂಮಿಗೆ ತಂದೆನೆಂಬುದಾಗಿ ಜನರಲ್ಲಿ ತಪ್ಪು ಅಭಿಪ್ರಾಯವು ಹಬ್ಬಿತು. ಹೀಗೆ ಯಾವ ಯಾವ ಸಮಾಜದ ಯಾ ಜಾತಿಯ ಕಾಲ್ಪನಿಕ ವ್ಯಕ್ತಿಗಳನ್ನು ಕಥಾವ್ಯಕ್ತಿಗಳನ್ನು ನಾಟಕದಲ್ಲಿ ರೂಪಿಸಿದೆನೊ ಆಯಾ ಸಮಾಜದ ಕೆಲವು ಜನರಿಗೆ ಈ ನಾಟಕದ ರಚನಾಭಿನಯಗಳಿಂದಾಗಿ ಮನನೊಂದಿತೆಂದು ನನಗೆ ತಿಳಿದುಬಂತು. ಆದುದರಿಂದ ಆಯಾ ಸಮಾಜದ ಜನತೆಯಲ್ಲಿಯೂ ಮುಖಂಡರಲ್ಲಿಯೂ ನನ್ನ ವಿನಂತಿಯೇನೆಂದರೆ, ಮೇಲೆ ನಾನು ವಿವರಿಸಿದಂತೆ ಬೇರೆ ಯಾವ ದುರುದ್ದೇಶದಿಂದಲೂ ಈ ನಾಟಕವು ಬರೆಯಲ್ಪಟ್ಟದ್ದಲ್ಲ. ಕೇವಲ ರಂಗಭೂಮಿಯ ಸುಧಾರಣೆಯ ದೃಷ್ಟಿಯಿಂದ ಬರೆಯಲ್ಪಟ್ಟದ್ದು.

ಆದರೂ ಈ ನಾಟಕದಿಂದ ಅದರಲ್ಲಿ ಕಾಲ್ಪನಿಕ ವ್ಯಕ್ತಿಗಳ ಚಿತ್ರಣದಿಂದ ಹಾಗೂ ದಕ್ಷಿಣಕನ್ನಡದ ನಾನಾಭಾಷೆಗಳನ್ನು ರಂಗಭೂಮಿಗೆ ತಂದುದರಿಂದ ಕೆಲವರ ಮನನೊಂದುದಕ್ಕಾಗಿ ನಾನು ವಿಷಾದಪಡುತ್ತೇನೆ, ಹಾಗೂ ನಾನು ಉದ್ದೇಶಪೂರ್ವಕವಾಗಿ ಅಲ್ಲದಿದ್ದರೂ ಜನರ ಮನನೋಯಿಸಿದ್ದಕ್ಕೆ ಜನರಲ್ಲಿ ಕ್ಷಮಾಯಾಚನೆ ಮಾಡುತ್ತೇನೆ.

ಹೀಗೆ ಕ್ಷಮಾಯಾಚನೆಮಾಡುವುದರಲ್ಲಿ ನನಗೆ ಎಳ್ಳಷ್ಟು ಬೇಸರವಿಲ್ಲ. ಏಕೆಂದರೆ ನಾನು ಜನತೆಯಿಂದ ಬೇರಾದವನಲ್ಲ, ಯಾವಾಗಲೂ ಜನತೆಯ ಮನೋರಂಜನೆಗಾಗಿಯೂ ಸಹಕಾರಕ್ಕಾಗಿಯೂ ಹಾತೊರೆಯುತ್ತ ಬಂದಿದ್ದೇನೆ. ಈ ನಾಟಕವನ್ನು ಬರೆದದ್ದು ಜನಮನೋರಂಜನೆಯಾಗಬೇಕೆಂದೇ. ಅದು ಬೇಸರಕ್ಕೆ ಕಾರಣವಾದಲ್ಲಿ ಕ್ಷಮಾಯಾಚನೆ ಮಾಡುವುದರಲ್ಲಿ ಅಭ್ಯಂತರವೇನು? ಜನತೆಯು ನನ್ನ ಈ ಕ್ಷಮಾಯಾಚನೆಯನ್ನು ಸ್ವೀಕರಿಸಿ ಎಂದಿನಂತೆ ತನ್ನ ಔದಾರ್ಯವನ್ನು ಪ್ರಕಟಿಸುವುದೆಂದು ನಂಬಿದ್ದೇನೆ.

S. U. Paniady

(ಶ್ರೀ ಪಣಿಯಾಡಿಯವರ, ಮೇಲಿನಕ್ಷಮಾಯಾಚನೆಯು ಕಾಲೋಚಿತವಾಗಿದೆ ಅಪ್-ಟು-ಡೇಟ್ ನಾಟಕದಿಂದ ಜನರ ಮನಸ್ಸಿಗೆ ನೋವಾಯಿತೆಂದು ತಿಳಿದೊಡನೆ, ಕ್ಷಮೆ ಕೇಳಿದುದರಿಂದ ನಾಟಕದ ರಚನೆಯಲ್ಲಿ ಇದ್ದ ಸದುದ್ದೇಶವನ್ನು ಸ್ಪಷ್ಟಗೊಳಿಸಿದಂತಾಯಿತು. ಸಾರ್ವಜನಿಕ ಅಭಿಪ್ರಾಯಕ್ಕೆ ತಲೆಬಾಗುವದು ವ್ಯಕ್ತಿಧರ್ಮ, ಮನನೊಂದವರು ಇದರಿಂದ ಸಮಾಧಾನಗೊಂಡು ಶ್ರೀ ಪಣಿಯಾಡಿಯವರೊಡನೆ ಮೊದಲಿನಂತೆ ಮುಂದೆಯೂ ಸಹಕರಿಸುವರೆಂದು ನಂಬುತ್ತೇವೆ. ಸಂ. ನ.)

ಕಿರಿಯರ ಪ್ರಪಂಚದ ಪುಸ್ತಕಗಳು.

೧. ನಾಡಕಥೆ	೦	೨	೦
೨. ಮುಂದಿನ ದೇವರು	೦	೨	೦
೩. ಸ್ವತಂತ್ರ ಜೀವನೋಪಾಯ	೦	೨	೬
೪. ಕುಶಲವ	೦	೪	೦
೫. ಸಂಶಯ ಪಿಶಾಚಿ	೦	೬	೦
೬. ಕಾವ್ಯಸಾಮ್ರಾಜ್ಯ	೦	೧೨	೦
೭. ಮಧುವನ	೧	೮	೦
೮. ವ್ಯಭಿಚಾರಿಣಿ ಯಾರು	೦	೮	೦

ನಮ್ಮಲ್ಲಿ ಅಖಿಲ ಕರ್ನಾಟಕದ ಆಧುನಿಕ ಕನ್ನಡ ಗ್ರಂಥಗಳು ದೊರೆಯುತ್ತವೆ.

ಕಿರಿಯರ ಪ್ರಪಂಚ, ಉಡುಪಿ, ದ. ಕ.
ಸೋಲ ಏಜೆಂಟರು—
ಸಪ್ಲೈ ಏಜೆನ್ಸಿ ಲಿಮಿಟೆಡ್, ಉಡುಪಿ.

ಭಾರತೀಯ ಬಾಳು

ಸ್ವರ್ಣಭೂ, ರಜತಾದ್ರಿಗಳ ನೆಲೆ
ಕಣಜಧನ, ಕನಕಾದಿಗಳ ಮನೆ
ಎನ್ನುತತ್ಯಭಿಮಾನದಿಂದಲಿ
ಮೆರೆದು ಹೆಸರಾಂತಾ
ಅನ್ನಪೂರ್ಣೆಯ ಧರ್ಮಜನ ಬಲಿ
ಕರ್ಣ, ಹರಿಚಂದ್ರಾದಿಗಳ ವರ
ದಾನಶೂರರ ನಾಡಿನಾ
ಪರಿಯೊರೆವೆನೇನೆಂದೂ ೧

ಇಲ್ಲಿ ನೋಡಲು ಹೊಟ್ಟೆಗಿಲ್ಲದೆ
ಅಲ್ಲಿ ನೋಡಲು ಬಟ್ಟೆಗಿಲ್ಲದೆ
ಎಲ್ಲಿ ನೋಡಲು ರೋಗರುಜೆಯಿಂ
ತಪಿಸುತಿಹ ಜನರೂ
ಒಲವಿನಿಂದಲಿ ಅವರ ಪಸನವ
ನಲವಿನಿಂದಲಿ ಔಷಧಿಯ ಪರಿ
ಸಲಹೆ ಈಯುವ ದಾತರಿಲ್ಲದ
ಬಡ ಜನರ ಗೋಳೂ ೨

ಇತ್ತ ನೋಡಲು ತ್ರೈಲ ಶಕಟದಿ
ಅತ್ತನೋಡಲು ಚಿತ್ರಸದನದಿ
ಎತ್ತನೋಡಲು ಥಳಕ ಬೆಳಕ
ವಿಲಾಸ ವೈಭವದೀ
ಮತ್ತಮತ್ತ ನೋಡಲು ಪರಕೀಯರ
ವಿತ್ತವನು ಸೆಳೆಯುತ್ತ ಬಹುಪರಿ
ಮತ್ತರಾದ ವಿಲಾಸಮಯ
ಧನಯುತರವರ ಬಾಳೂ ೩

ಇಂದು ಕಾಣುವ ಭೇದ ಭಾವವು
ಮುಂದೆ ಕಾಣದೆ ಒಂದೆ ಭಾವವು
ಎಂದಿಗೆಂದಿಗು ಇಂಬು ಇಲ್ಲದೆ
ಫಲಿಸಿ ನೆಲೆಪಂತೇ
ಚಂದದಿಂದಲಿ ಬಂಧುಭಾವವು
ಅಂದದಿಂದಲಿ ಧರ್ಮಭಾವವು
ಸಂಧಿಸಂತೆಯೆ ಸಾಧಿಸುವ
ನಾವೆಲ್ಲರೊಂದಾಗೀ ೪

ಬ್ರಹ್ಮಾನಂದ.

ಮೊಗವೀರ ಮಹಾಜನ ಸಭಾ, ಮುಂಬಾಯಿ.

ಇದರ ತಾತ್ಕಾಲಿಕ ಕಾರ್ಯಕಾರಿ ಕಮಿಟಿ ಮೀಟಿಂಗು ಈ ಮೊದಲಿನ ನಿರ್ಣಯ ಪ್ರಕಾರ ತಾರೀಕು ೧೮—೧೦—೩೬ನೇ ರವಿವಾರ ಅಪರಾಹ್ನ ಘಂಟೆ ೨ಕ್ಕೆ ಎಪೋಲೊ ಈಸ್ಟ್‌ಎಂಡಾ ವೆಸ್ಟ್ ಕಟ್ಟಡದಲ್ಲಿ ಜರಗಿತ್ತು. ಸದರೀ ಮೀಟಿಂಗಿಗೆ ಮೊಗವೀರ ವ್ಯವಸ್ಥಾಪಕ ಮಂಡಳಿ, ಮೊಗವೀರ ಧರ್ಮೋದ್ಧಾರಕ ಮಂಡಳಿ, ಮತ್ತು ಮೊಗವೀರ ಯುವಕ ಸಂಘ-ಇವುಗಳ ಪ್ರತಿನಿಧಿಗಳು ಆಮಂತ್ರಿಸಲ್ಪಟ್ಟು ಹಾಜರಿದ್ದರು. ಇವರೆಲ್ಲರ ಉಪಕಾರ ಸ್ಮರಣೆಗೈದ ನಂತರ, ಇಲ್ಲಿ ಇರುವ ಮೊಗವೀರ ಸಾರ್ವಜನಿಕ ಪಂಚ ಸಂಸ್ಥೆಗಳನ್ನು ಏಕ ಸಂಸ್ಥೆಯಾಗಿ ನಿರ್ಮಾಣಿಸಿಕೊಳ್ಳುವ ಕುರಿತು ಪ್ರಸ್ತಾಪಿಸಲ್ಪಟ್ಟಾಗ ಆಯಾಯ ಸಂಸ್ಥೆಯ ಪ್ರತಿನಿಧಿಗಳು ಅವರವರ ಅಭಿಪ್ರಾಯವನ್ನಿತ್ತರು. ಈ ಸಂಬಂಧ ಚರ್ಚೆ ವಿಚಾರದ ಮಾತುಕತೆಗಳಾಗಿ ಮುಂಜಾಗ್ರತೆಯಿಂದ ಒಟ್ಟಾಗಿ ವಿಚಾರಗೈದು ಕಡೆಗೆ ಮೊಗವೀರ ಸಾರ್ವಜನಿಕ ಸಂಸ್ಥೆಗಳಾಗಿರುವ ಮೊಗವೀರ ಮಹಾಜನ ಸಭಾ, ಮೊಗವೀರ ವ್ಯವಸ್ಥಾಪಕ ಮಂಡಳಿ, ಮೊಗವೀರ ಧರ್ಮೋದ್ಧಾರಕ ಮಂಡಳಿ, ಮೊಗವೀರ ಯುವಕ ಸಂಘ ಮತ್ತು ಶ್ರೀಮದುದ್ಧಾರಕ ಮಂಡಳಿ— ಈ ಪಂಚ ಸಂಸ್ಥೆಗಳನ್ನು ಸಮ್ಮಿಳನಗೈದು ಏಕಸಂಸ್ಥೆಯಾಗಿ ನಿರ್ಮಾಣಿಸಿಕೊಳ್ಳುವ ನಿರ್ಣಯವು ಆಕ್ಷೇಪ ವಿನಾ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಎಂಬ ಸಂಗತಿಯನ್ನು ತಿಳಿಸುವದೆ ಬಹಳ ಸಂತೋಷಪಡುತ್ತೇವೆ.

ಸಾಯಂಕಾಲ ಘಂಟೆ ೭॥ ಸಮಯ ಧನ್ಯವಾದದೊಡನೆ ಸಭೆ ಮುಗಿಯಿತು.

ತತ್ಕಾಲಿಕ ಕಾರ್ಯಕಾರಿ ಸಭೆಯ ಬಗ್ಗೆ
ಯರ್ಮಾಳ ಕೊರಗಪ್ಪ ಪುತ್ರನ್,
ಮೂಲ್ಕಿ ರಾಮಚಂದ್ರ,
ಮಲ್ಪೆ ಲಕ್ಷ್ಮಣ ಕಂಗನ್,
ಜತೆ ಕಾರ್ಯದರ್ಶಿಗಳು.

ಕರ್ನಾಟಕಪ್ರಾಂತಿಕ ಕಾಂಗ್ರೆಸ್ ಕಮಿಟಿ

(ಪ್ರಕಟನೆ ೧೭)

ಕರ್ನಾಟಕ ಪ್ರಾಂತ್ಯದಲ್ಲಿ ೧೯೩೬ನೇ ಸಪ್ಟೆಂಬರ 30ನೇ ತಾರೀಕಿನೊಳಗಾಗಿ ಆದ

—•— ಕಾಂಗ್ರೆಸ್ ಸಭಾಸದರ ವಿವರವು —•—

ಅನುಕ್ರಮ ನಂಬರ	ಜಿಲ್ಲೆ	ಒಟ್ಟು ಸಂಖ್ಯೆ	ಹಳ್ಳಿಗರು	ಪಟ್ಟಣಿಗರು
೧	ಬೆಳಗಾವಿ ಜಿಲ್ಲೆ	೮,೯೯೪	೬,೨೬೫	೨,೭೨೯
೨	ಮಂಗಳೂರ ಜಿಲ್ಲೆ	೬,೩೫೪	೪,೨೯೭	೨,೦೫೭
೩	ಧಾರವಾಡ ಜಿಲ್ಲೆ	೬,೨೩೦	೪,೩೦೭	೧,೯೦೩
೪	ಮೈಸೂರ ಸಂಸ್ಥಾನ	೫,೯೫೨	೩,೦೭೮	೨,೮೭೪
೫	ಬಳ್ಳಾರಿ ಜಿಲ್ಲೆ	೧,೫೧೦	೬೮೨	೮೨೮
೬	ವಿಜಾಪೂರ ಜಿಲ್ಲೆ	೧,೨೫೨	೮೦೦	೪೫೨
೭	ಕಾರವಾರ ಜಿಲ್ಲೆ	೯೯೦	೮೩೬	೧೫೪
೮	ಕೊಡಗು ಜಿಲ್ಲೆ	೪೬೮	೪೬೮	—
		೩೧,೭೪೮	೨೧,೭೫೩	೧೦,೨೯೫

ಫೈಜಪೂರ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ

(ಪ್ರಕಟನೆ ೧೮/೫)

ಈ ಸಾರಿಯ ಕಾಂಗ್ರೆಸ ಅಧ್ಯಕ್ಷರ ಚುನಾವಣೆಯು ಮುಂದಿನ ರೀತಿಯಿಂದ ಆಗತಕ್ಕದ್ದಿದೆ.—

(೧) ಲಖನೌ ಕಾಂಗ್ರೆಸದ ಕರ್ನಾಟಕದ ಯಾವನೇ ೧೦ ಅಥವಾ ಹೆಚ್ಚು ಪ್ರತಿನಿಧಿಗಳು ಸದ್ಯದ (ಪ್ರಾ. ಕಾಂ. ಕ. ಯ ಸದಸ್ಯರು) ತಮಗೆ ಇಷ್ಟವಾದ ಅಧ್ಯಕ್ಷರ ಹೆಸರುಗಳನ್ನು ಸೂಚಿಸಿ ಆ ನಾಮ ಪತ್ರವನ್ನು ೧೫—೧೧—೩೬ನೇ ದಿನದೊಳಗಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಧಾರವಾಡ ಕಚೇರಿಗೆ ತಲುಪುವಂತೆ ಕಳಿಸಿಕೊಡಬೇಕು. ಮುಂದೆ ಆ ಸೂಚನೆಗಳು ೨೦ನೇ ತಾರೀಕಿನೊಳಗಾಗಿ ಅಖಿಲಭಾರತ ಕಾಂಗ್ರೆಸ್ ಕಮಿಟಿಗೆ ಕಳಿಸಲ್ಪಡುವವು.

(೨) ೨೨-೧೧-೩೬ನೇ ದಿನ ತಮ್ಮ ಕಡೆಗೆ ಬಂದ ಎಲ್ಲ ಹೆಸರುಗಳನ್ನೂ ಎ. ಐ. ಸಿ. ಸಿ. ಕಚೇರಿಯವರು ಪ್ರಕಟಗೊಳಿಸುವರು.

(೩) ಆ ಹೆಸರುಗಳಲ್ಲಿ ಹಿಂದೆಗೆ ತೆಗೆದುಕೊಳ್ಳಲ್ಪಟ್ಟ ಹೆಸರುಗಳನ್ನು ಬಿಟ್ಟು ಉಳಿದವುಗಳನ್ನು ೨-೧೨-೩೬ನೇ ದಿವಸ ಪ್ರಕಟಗೊಳಿಸುವರು.

(೪) ೬-೧೨-೩೬ನೇ ದಿನ ಪ್ರತಿಯೊಂದು ಪ್ರಾಂತದಲ್ಲಿ ಪ್ರಾಂತಿಕ ಕಾಂಗ್ರೆಸ ಕಮಿಟಿಗಳು ಕೂಡಿ ಆ ಸಭೆಯಲ್ಲಿ ಅಧ್ಯಕ್ಷರ ಚುನಾವಣೆಯಾಗುವುದು.

(೫) ಈ ಚುನಾವಣೆಯ ಪರಿಣಾಮವನ್ನು ೧೦-೧೨-೩೬ಕ್ಕೆ ಎ. ಆಯ್. ಸಿ. ಸಿ. ಕಚೇರಿಯವರು ಪ್ರಕಟಗೊಳಿಸುವರು.

ಧಾರವಾಡ
೨೨-೧೦-೩೬

ರಂಗನಾಥ ದಿವಾಕರ,
ಗೌ. ಕಾರ್ಯದರ್ಶಿ

ಅಧ್ಯಕ್ಷರ ಚುನಾವಣೆಗಾಗಿ ಪ್ರತಿನಿಧಿಗಳು ಈ ಕಚೇರಿಗೆ ಕಳಿಸಬೇಕಾಗಿರುವ ನಾಮಪತ್ರದ ನಮೂನೆಯು:—

In accordance with the provisions of Article IX (f) of the Constitution we, the undersigned delegates of the Congress, propose the name of...... ....for election to the Presidentship of the next session of the Congress.

Date: **Signature of delegates.**
(With addresses and names of Prov)

ಶ್ರೀಪತಿ ಪಂಚಾಂಗಂ

ತ್ವರೆಮಾಡಿರಿ! ಬೆಲೆ: 6 ಪೈ ಮಾತ್ರ ತ್ವರೆಮಾಡಿರಿ!!

ಹಲವು ತರದ ವಿಶೇಷ ವಿಷಯಗಳಿಗೂ ಸಂದಿಗ್ಧ ವಿಷಯಗಳ ಶಾಸ್ತ್ರರೀತ್ಯಾ ನಿರ್ಣಯಗಳಿಗೂ ಜನಸಾಮಾನ್ಯಕ್ಕೆ ಅಗತ್ಯವಾಗುವ ಇತರ ಮುಹೂರ್ತಾದಿ ಸಣ್ಣ ಪುಟ್ಟ ವಿಷಯಗಳಿಗೂ ಪ್ರಾಮಾಣಿತ ಗಣಿತಕ್ಕೂ ಅನೇಕ ವರ್ಷಗಳಿಂದ ಅನುಭವಸ್ಥರಾಗಿ, ಪಂಚಾಂಗ ಗಣಿತಜ್ಞರಲ್ಲಿ ಹೆಸರುಗೊಂಡ ಬೇಳೂರು ಗ್ರಾಮದ ಬ್ರಹ್ಮಶ್ರೀ ನರಸಿಂಹ ಅಡಿಗಳಿಂದ ಸೂರ್ಯಸಿದ್ಧಾಂತ ರೀತ್ಯಾ ಗುಣಿಸಿ, ಪರಿಶೋಧಿಸಲ್ಪಟ್ಟ ಶ್ರೀಪತಿ ಪಂಚಾಂಗದ ಹೊರತು ಪ್ರಾಮಾಣಿಕವಾದುದು ಇನ್ನೊಂದಿಲ್ಲ.

ಈಶ್ವರ ಸಂವತ್ಸರದ ಈ ಪಂಚಾಂಗವು ಡೆಮ್ಮಿ ⅛ನೇ (ಅಷ್ಟ) ಸೈಜಿನಲ್ಲಿ ಅತ್ಯುತ್ತಮ ಗ್ಲೇಜ್ ಕಾಗದದ ಮೇಲೆ ಅಂದವಾಗಿ ಮುದ್ರಿಸಲ್ಪಡುತ್ತದೆ. ಪಂಚಾಂಗವು ಒಟ್ಟಿಗೆ ೪೮ ಪೇಜುಗಳುಳ್ಳದ್ದಾಗಿರುತ್ತದೆ. ಮುದ್ರಿಸಲ್ಪಡುವ ಪಂಚಾಂಗದ ಪ್ರತಿಗಳು ಬರೇ ೫,೦೦೦ ಮಾತ್ರ. ಜಾಹಿರಾತು ಕೊಡುವವರಿಗೆ ಸುಸಂದರ್ಭ. ಪಂಚಾಂಗದ ಪ್ರತಿ ಒಂದರ ಬೆಲೆ ೦—೦—೬ ಮಾತ್ರ. ವ್ಯಾಪಾರಸ್ಥರಿಗೂ, ಹತ್ತು ಯಾ ಹೆಚ್ಚು ಪಂಚಾಂಗಗಳನ್ನು ಒಮ್ಮೆಯೇ ತರಿಸುವವರಿಗೂ, ಪ್ರತಿ ೧೦ಕ್ಕೆ ೧ ಪಂಚಾಂಗವನ್ನು ಕಮಿಶನ್ ಕೊಡಲಾಗುವುದು.

ಪಂಚಾಂಗದ ಪ್ರತಿಗಳು ಇದೇ ನವಂಬರ ತಿಂಗಳ ತಾ. ೨೮ರ ನಂತರ ಮಾರಾಟಕ್ಕೆ ಸಿದ್ಧವಾಗುವವು. ಜಾಹಿರಾತಿನ ದರಗಳಿಗೂ, ಪಂಚಾಂಗದ ಪ್ರತಿಗಳಿಗೂ ಈ ಕೆಳಗಿನ ವಿಳಾಸದವರಿಗೆ ಬರೆದು ತಿಳಿಯುವುದು.

ಬಿ. ವಿ. ಕಾರಂತ,
ಪಾತ್ರೆ ವ್ಯಾಪಾರಿ, **ಕುಂದಾಪುರ, ದ. ಕ.**

ಭಾಷಾಂತರಕಾರರು ದೊರೆಯದೆ ಪೇಚಾಡುವಿರೇಕೆ?

ಇನ್ಶ್ಯೂರೆನ್ಸ್ ಮತ್ತು ಬೇಂಕುಗಳ ಪ್ರೋಸ್ಪೆಕ್ಟಸ್, ಮೊದಲಾದುವುಗಳನ್ನೂ ಇತರ ಎಲ್ಲಾ ತರದ ಭಾಷಾಂತರಗಳನ್ನೂ ನಮ್ಮಲ್ಲಿ ಅತ್ಯುತ್ತಮ ರೀತಿಯಿಂದ ಯೋಗ್ಯ ದರದಲ್ಲಿ ಮಾಡಿಕೊಡಲಾಗುವುದು. ಮಾತುಕತೆ ಹಾಗೂ ಪತ್ರವ್ಯವಹಾರವನ್ನು ಈ ಕೆಳಗಿನ ವಿಳಾಸಕ್ಕೆ ಮಾಡಬೇಕು.

ಟ್ರಾನ್ಸ್‌ಲೇಟರ್,
'ಕಿರಿಯರ ಪ್ರಪಂಚ', ಉಡುಪಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್:-ಇದರ ಶಾಖೆಯೊಂದನ್ನು ಇದೇ ತಾ. 24-10-36ಕ್ಕೆ ಕಾಸರಗೋಡಿನಲ್ಲಿ ಸ್ಥಾಪಿಸುವ ಸಲುವಾಗಿ ತೆರೆಯೋಣ ಸಮಾರಂಭವು ಅಲ್ಲಿಯ ಬಿ. ಇ. ಎಮ್. ಸೆಕೆಂಡರಿ ಶಾಲೆಯಲ್ಲಿ ಜರಗಿತು. ಶ್ರೀಯುತ ಅಮ್ಮೆಂಬಳ ಶ್ರೀನಿವಾಸ ಪೈಗಳು ಅಧ್ಯಕ್ಷರಾಗಿದ್ದರು. ಪ್ರಥಮತಃ ಸಿಂಡಿಕೇಟ್ ಬೇಂಕಿನ ಚೆಯರ್‌ಮೇನರಾದ ಡಾ. ಟಿ. ಮಾಧವ ಪೈಗಳು ತನ್ನ ಭಾಷಣದಲ್ಲಿ ಬೇಂಕಿನ ಸರ್ವತೋಮುಖವಾದ ಅಭಿವೃದ್ಧಿಯನ್ನು ವಿವರಿಸಿದರು, ಈ ಬೇಂಕಿನ ಎರಡು ಲಕ್ಷ ರೂಪಾಯಿಗಳ ಭಂಡವಾಳವು ಈ ಮೊದಲೇ ಕಾಸರಗೋಡಿನಲ್ಲಿ ವ್ಯವಹಾರದಲ್ಲಿತ್ತೆಂದೂ, ಇತರ ಎರಡು ಬೇಂಕುಗಳ ಶಾಖೆಗಳು ಕಾಸರಗೋಡಿನಲ್ಲಿದ್ದರೂ, ಇನ್ನೊಂದರ ಆವಶ್ಯಕತೆಯು ಸ್ಪಷ್ಟವಾಗಿ ಕಾಣುತ್ತಿರುವದೆಂದೂ, ತಾನು ಇನ್ನೂ ಇತರ ಬೇಂಕುಗಳು ಇಲ್ಲಿ ಸ್ಥಾಪಿಸಲ್ಪಡಲೆಂದು ಹಾರೈಸುತ್ತೇನೆಂದೂ ತಿಳಿಸಿದರು. ಬೇಂಕುಗಳ ಶಾಖೆಗಳನ್ನು ಬೇರೆ ಬೇರೆ ಕಡೆಗಳಲ್ಲಿ ಸ್ಥಾಪಿಸುವದರಿಂದ ಹಣವಿಲ್ಲದ ಕಡೆಗೆ ಇದ್ದಲ್ಲಿಂದ ಕೊಂಡುಹೋಗಿ ವ್ಯವಹಾರ ಕ್ಷೇತ್ರವನ್ನು ವಿಸ್ತರಿಸಲು ಅನುಕೂಲ ದೊರೆಯುವದು. ಜನರು ಇದನ್ನು ಪ್ರೋತ್ಸಾಹಿಸಬೇಕೆಂದು ಭಾಷಣವಿತ್ತರು. ಶ್ರೀ ದತ್ತಾತ್ರೇಯ ರಾವ್, ಎಮ್. ಎ., ಎಲ್, ಟಿ. ಯವರು, 'ಸಿಂಡಿಕೇಟ್ ಬೇಂಕು' ಬೇರೆ ಬೇರೆ ತರಗತಿ ಮತ್ತು ಅನುಕೂಲತೆಗಳುಳ್ಳವರಿಗೆಲ್ಲಾ, ಅನುಕೂಲವಾಗುವಂಥ ವಿವಿಧ ಯೋಜನೆಗಳುಳ್ಳದಾಗಿರುವದರಿಂದ ಅತ್ಯಂತ ಪ್ರಯೋಜನಕರವಿರುವದೆಂದು ಭಾಷಣವಿತ್ತರು. ಅಧ್ಯಕ್ಷರು ತಾನು ಕೆನರಾ ಬೇಂಕಿನ ಚೆಯರ್‌ಮೆನನಾಗಿದ್ದರೂ ಬೇಂಕುಗಳು ಹೆಚ್ಚಾದಂತೆ ಜನರ ಆರ್ಥಿಕ ಸ್ಥಿತಿಯಲ್ಲಿ ಅಭಿವೃದ್ಧಿಯಾಗಬಹುದಾದುದರಿಂದ ಇಂದಿನ ಸಭಾಧ್ಯಕ್ಷನಾದೆನು; ಎಲ್ಲರೂ ಪ್ರೋತ್ಸಾಹಿಸಬೇಕೆಂದರು. ಡಾ. ಟಿ. ಮಾಧವ ಪೈಗಳು ಧನ್ಯವಾದವನ್ನಿತ್ತರು. ಮರುದಿನ 'ಗ್ರೂಪ್ ಫೋಟೋ' ತೆಗೆಯಲಾಯಿತು.

ದ. ಕ. ಜಿಲ್ಲಾ ಹಿಂದೀ ಪ್ರಚಾರ ಸಂಘ

ಈ ಸಂಘದವರಿಂದ ಪೆರ್ಡೂರು, ಮಂಗಳೂರು, ಮೂಡುಬಿದ್ರೆ, ಮೂಲ್ಕಿ, ಬ್ರಹ್ಮಾವರ ಮೊದಲಾದ ಕಡೆಗಳಲ್ಲಿ ಮಾತ್ರವಲ್ಲದೆ ಇನ್ನೂ ಹಲವು ಸ್ಥಾನಗಳಲ್ಲಿ ಹಿಂದೀ ಕ್ಲಾಸುಗಳು ಪ್ರಾರಂಭವಾಗಿವೆ.

ವಿ. ಸೂ:-ದಕ್ಷಿಣ ಕನ್ನಡ ಜಿಲ್ಲೆಯೊಳಗೆ ಎಲ್ಲಿಯಾದರೂ ಹಿಂದೀ ಕ್ಲಾಸುಗಳ ಆವಶ್ಯಕತೆ ಇದ್ದರೆ ಕ್ಲಾಸುಗಳನ್ನು ತೆರೆಯಲು ತಕ್ಕ ಏರ್ಪಾಡನ್ನು ಮಾಡುವೆವು. ದಯವಿಟ್ಟು ತಿಳಿಸಿರಿ.

ಕೆ. ದೇವಪ್ಪ ಆಳ್ವ,
ಒರ್ಗನೈಜರ್;
ದ. ಕ. ಜಿಲ್ಲಾ ಹಿಂದೀ ಪ್ರಚಾರ ಸಂಘ, ಮಂಗಳೂರು

ನವಯುಗ

ವಾರ್ಷಿಕ ಚಂದಾ 3—4—0
ಸ್ಥಳೀಕ ಚಂದಾ 2—8—0
ಇಂದೇ

ಚಂದಾದಾರರಾಗಿರಿ

ಕಿರಿಯರ ಪ್ರಪಂಚದ ಸಾಹಿತ್ಯೋತ್ಸವ

ಅಧ್ಯಕ್ಷರ ವಿಚಾರಪೂರ್ಣ ಭಾಷಣ! ಕಿರಿಯರ ಪ್ರಪಂಚದ ಶ್ರೇಯಾಕಾಂಕ್ಷೆ! ಜನರ ಪ್ರೋತ್ಸಾಹ!

ತಾ. 24-10-36ನೇ ಶನಿವಾರ ಸಾಯಂಕಾಲ ಘಂಟೆ 5ಕ್ಕೆ ಸರಿಯಾಗಿ ಉಡುಪಿ ಕಿರಿಯರ ಪ್ರಪಂಚದ ಸಾಹಿತ್ಯೋತ್ಸವವು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ನಡೆಯಿತು. ಪ್ರಥಮತಃ ಚಿಕ್ಕ ಬಾಲಿಕೆಯರು ಸ್ವಾಗತ ಹಾಡನ್ನು ಹಾಡಿದರು. 'ಪ್ರಪಂಚ'ದ ಅಧ್ಯಕ್ಷರಾದ ಶ್ರೀ ಕೆ. ಕೆ ಸೆಟ್ಟಿ ಕಾರ್ಕಳದ ವಕೀಲರೂ, ಸ್ವತಂತ್ರ ವಿಚಾರಿಯೂ ಆದ ಶ್ರೀ ಪಿ. ವಾಸುದೇವ ಉಪಾಧ್ಯಾಯರನ್ನು ಸಭಾಧ್ಯಕ್ಷಸ್ಥಾನಕ್ಕೆ ಆಮಂತ್ರಿಸುವಾಗ ಹೀಗೆಂದರು "ಶ್ರೀ ಉಪಾಧ್ಯಾಯರನ್ನು ವಕೀಲರೆಂದು ಈ ಸ್ಥಾನಕ್ಕೆ ಕರೆಯುವದಲ್ಲ; ಪರಿಸ್ಥಿತಿಯನ್ನು ಸ್ವಂತ ವಿಚಾರದಿಂದ ಕಾಣುತ್ತಿರುವರೆಂದೇ ಅವರ ಮೇಲೆ ನಮಗೆ ಗೌರವ. ಉತ್ತಮ ಲೇಖಕರವರು; ಗುಪ್ತ ನಾಮಗಳಿಂದ ಹಲವು ಲೇಖನಗಳನ್ನು ಬರೆದವರು" ಶ್ರೀ ಉಪಾಧ್ಯಾಯರು ಅಧ್ಯಕ್ಷ ಪೀಠವನ್ನು ಸ್ವೀಕರಿಸಿ, ಬಾಲಿಕೆಯೊಬ್ಬಳಿಂದ ಪುಷ್ಪಹಾರವನ್ನು ಪಡೆದು, ತನ್ನ ಪ್ರಾಸ್ತಾವಿಕ ಭಾಷಣದಲ್ಲಿ ಕಿರಿಯರ ಪ್ರಪಂಚಕ್ಕೆ ಕೃತಜ್ಞತೆಯನ್ನು ಸೂಚಿಸಿದರು. 'ಪ್ರಪಂಚ'ದ ಕಾರ್ಯದರ್ಶಿ ಶ್ರೀ ಕೆ. ಹೊನ್ನಯ್ಯ ಸೆಟ್ಟರು, ವರದಿಯನ್ನೋದಿದರು. ಕಳೆದ ಐದು ವರ್ಷಗಳಿಂದ ಕಿರಿಯರ ಪ್ರಪಂಚವು ಮಾಡಿದ ಕಾರ್ಯಕಲಾಪಗಳು, ಇನ್ನು ಮುಂದ ಕೈಕೊಳ್ಳಲಿರುವ ಕೆಲಸಗಳ ರೂಪರೇಖೆಗಳು ಈ ವರದಿಯಲ್ಲಿ ಸೂಕ್ಷ್ಮವಾಗಿ ಅಡಕವಾಗಿದ್ದವು.

ಶ್ರೀ. ಕೆ. ಶ್ರೀನಿವಾಸ ಶೆಣೈಯವರು- 'ಜೀವಿತ ಸಾಹಿತ್ಯ' ಎಂಬ ವಿಷಯವನ್ನೆತ್ತಿ ಬೋಧಪ್ರದವಾಗಿ ಮಾತಾಡಿದರು. "ಸಾಹಿತ್ಯವು ಮಾನವನನ್ನು ಎಚ್ಚರಿಸುವ ಅವನ ಕೆಲಸಕಾರ್ಯಗಳಲ್ಲಿ ಸಂಬಂಧವಿರುವ ಆಪ್ತನಂತಿರಬೇಕು. ಕೇವಲ ಮನೋರಂಜನೆಗಾಗಿ ಸಾಹಿತ್ಯವಲ್ಲ; ಕೆಲಸಗಳ ಪ್ರೇರಣೆಗಾಗಿ ಸಾಹಿತ್ಯ. ಈ ದೃಷ್ಟಿಯಿಂದ ಸಾಹಿತ್ಯದಲ್ಲಿಯೂ ಸುಧಾರಣೆಯಾಗಬೇಕು- ಹಳೆಯ ಲೇಖಕರಲ್ಲಿದ್ದ ಹೊಗಳುಭಟ್ಟ ಅಭಿರುಚಿಯ ಬಾಯಿ ಮೊಂಡಾಗಬೇಕು; ಹೊಸ ಹೊಸ ವಿಚಾರಗಳಿಗೆ ಆಸ್ಪದವಿರಬೇಕು." ಎಂದೇ ಶ್ರೀ. ಶೆಣೈಯವರ ಭಾಷಣಸಾರವಾಗಿತ್ತು.

ಶ್ರೀ. ಎಮ್ ವಿಟ್ಠಲ ಹೆಗ್ಡೆಯವರು "ಸಮತಾ ವಾದದಿಂದ ಸಾಹಿತ್ಯಕ್ಷೇಮ" ಎಂಬ ಕುರಿತು ಭಾಷಣವಿತ್ತರು. 'ಕಲೆಗಾಗಿಯೇ ಕಲೆ' ಎಂದು ಭಾವರಸಗಳನ್ನು ನಿರ್ಮಿಸಿ ನಿಲ್ಲಿಸಿಬಿಡುವದೇ ಸಾಹಿತ್ಯದ ಧ್ಯೇಯವಾಗದು. ಜನಜಾಗ್ರತಿಯ ಕೆಲಸವು ಅವಶ್ಯವಿರಬೇಕು. ಪ್ರಪಂಚದ ಎಲ್ಲಾ ಕ್ರಾಂತಿಗಳಿಗೂ ಸಾಹಿತ್ಯವೇ ಮೂಲ. ರಷ್ಯದ ಕ್ರಾಂತಿಯನ್ನು ಸಾಹಿತ್ಯವೇ ಹಡೆಯಿತು. ಇಂಥ ಸಾಹಿತ್ಯಕ್ಕೂ ಇಲ್ಲಿ ಬಂದಿರುವ ವಿಪತ್ತೆಂದರೆ ಧನ ದೌಲತ್ತಿನ ದಾಸ್ಯ. ಸಾಹಿತ್ಯವು ಇಂದಿನ ಪರಿಸ್ಥಿತಿಯಲ್ಲಿ ಧನಸತ್ತೆಯ ಪೂಜೆ, ಹೊಗಳಿಕೆಯಿಂದಲೇ ತುಂಬಿರುವಂತಿದೆ. ಅದರ ದೃಷ್ಟಿಯನ್ನು ಅಲ್ಲಿಂದ ಕಿತ್ತು ಸಾಮಾನ್ಯರ ಜೀವನದ ಕಡೆಗೆ ಹೊರಳಿಸಬೇಕು. ಅಲ್ಲಿ ಸಾಹಿತ್ಯಕ್ಕೆ ಬೇಕಾದಷ್ಟು ಸಾಮಗ್ರಿಗಳಿವೆ." ಎಂಬರ್ಥವು ಶ್ರೀ ಹೆಗ್ಗಡೆಯರ ಭಾಷಣದಲ್ಲಿತ್ತು.

ಬಳಿಕ ಅಧ್ಯಕ್ಷರು

ತನ್ನ ವಿಚಾರ ಪೂರ್ಣ ಭಾಷಣದಲ್ಲಿ ಕಿರಿಯರ ಪ್ರಪಂಚದವರ ಪ್ರಯತ್ನಗಳನ್ನು ಶ್ಲಾಘಿಸಿದರು. ಸಾಹಿತ್ಯದಲ್ಲಿ ಹೊಸ ಹೊಸ ವಿಚಾರಗಳ ಪುಸ್ತಕಗಳನ್ನು ಪ್ರಕಟಿಸುತ್ತಿರುವದು ಸ್ತುತ್ಯವೆಂದರು. ಜನರು ಕೇವಲ ಆಚಾರಾಂಧತೆಯಿಂದ ಹಾಳಾಗುತ್ತಿರುವರೆಂದೂ; ಪ್ರತಿಯೊಂದು ಕೆಲಸದಲ್ಲಿಯೂ ವಿಚಾರವೇ ಮೊದಲಿನ ಭಾಗವಾಗಿರಬೇಕೆಂದೂ ಒತ್ತಿ ಹೇಳಿದರು.. ಜನರ ಮೂಢ ಕಲ್ಪನೆಗಳಿಂದಾಗಿ ಭೂತ, ಪ್ರೇತ, ಪಿಶಾಚಿಗಳು,ಶಕುನ, ಜ್ಯೋತಿಷ ಮುಂತಾದುವು ಜನಜೀವನದ ಅಧಿಕಾರಿಗಳಾಗಿ ಹೆಚ್ಚಾಗಿವೆ ಎಂದು ನಿದರ್ಶನಕೊಟ್ಟು ಸಾಹಿತ್ಯದಲ್ಲಿಯೂ ವಿಚಾರವೇ ಪ್ರಾಮುಖ್ಯತೆಯನ್ನು ಪಡೆಯಬೇಕು. ಮೊದಲಿನ ಪಂಡಿತರೆಲ್ಲಾ ತಮ್ಮ ಆಶ್ರಯದಾತರ ಮುಖವರ್ಣನೆಯಲ್ಲಿ ಮಗ್ನರಾಗಿದ್ದು ಆ ಚಂದವನ್ನೇ ನಾವು ಕಾಣುವಂತೆ ಮಾಡಿರುವರು. ಹೊಸ ಹೊಸ ವಿಚಾರಗಳು ಹುಟ್ಟುವ ಈ ಕಾಲದಲ್ಲಿ ಸಾಹಿತ್ಯವು ಬಾಳಲಾರದು-ಬಾಳಿ ಜನಜೀವನದೊಡನೆ ಬೆರಕೆಯಾಗಲಾರದು-ಎಂದೇಲ್ಲಾ ಮುಂದಟ್ಟಾಗುವಂತೆ ವರ್ಣಿಸಿದರು.

ಆಮೇಲೆ ಶ್ರೀಮತಿ ನೇತ್ರಾವತಿ ಕೆ. ಸೆಟ್ಟರ ಕರ್ಣಾನಂದಕರ ಗಾಯನವು ನಡೆಯಿತ. ಶ್ರೀಯುತ ಶಂಕರನಾರಾಯಣ ಹೊಳ್ಳರು 'ಓಟು' ಎಂಬ ಪ್ರಹಸನವನ್ನು ಚಾತುರ್ಯಪೂರ್ಣವಾಗಿ ಅಭಿನಯಿಸಿ ವಿನೋದವನ್ನೆಬ್ಬಿಸಿಬಿಟ್ಟರು. ಶ್ರೀ ಕೆ. ಕೆ. ಸೆಟ್ಟರಿಂದ ರಚಿಸಲ್ಪಟ್ಟ "ಹೆಂಡ್ತಿ ಗಂಡ ನಾದರೆ!" ಎಂಬ ಸಾಮಾಜಿಕ ಪ್ರಹಸನದ ಕೆಲವು ದೃಶ್ಯಗಳನ್ನು ಅಭಿನಯಿಸಿ ತೋರಿಸಲಾಯಿತು. ಮನೋಹರ ಮತ್ತು ಅರವಿಂದನ ಪಾತ್ರಗಳನ್ನು ಶ್ರೀ. ಕೆ. ಕೆ. ಸೆಟ್ಟಿ ಮತ್ತು ಶ್ರೀ. ಕೆ. ಎಚ್. ಸೆಟ್ಟರು ವಹಿಸಿ ತೃಪ್ತಿಕರವಾಗಿ ನಟಿಸಿದರು. ಮಂಗಳೂರು ಎಮ್ಮೆಕೆರೆ ಶ್ರೀ. ಕೇದಿಗೆ ರಾಮರಾಯರ ಮನೋರಮೆಯ ಪಾತ್ರವು ಉತ್ತಮವಿತ್ತು; ಶ್ರೀ ಸ್ವಾಭಾವಿಕತೆಗಳಿಂದ ಕೂಡಿದ್ದು ಜನ ಮೆಚ್ಚಿಗೆಗೆ ಪಾತ್ರವಾಗಿತ್ತು. ಅಡಿಗೆ ಭಟ್ಟ ರಂಗನಾಗಿ ಶ್ರೀಯುತ ಶಂಕರನಾರಾಯಣ ಹೊಳ್ಳರು ವಿನೋದ ಪೂರ್ಣವಾಗಿ ಅಭಿನಯಿಸಿ, ಸಭಿಕರನ್ನು ನಗೆಗಡಲಲ್ಲದ್ದಿದರು. ಶ್ರೀ. ಕೆ. ಎಚ್. ಸೆಟ್ಟರು ತಮ್ಮಾ ಸಾಹಿತ್ಯೋತ್ಸವಕ್ಕೆ ನೆರವಾದವರಿಗೆಲ್ಲಾ ಧನ್ಯವಾದಗಳನ್ನಿತ್ತರು. ಮಂಗಳೂರು ಎಮ್ಮೆಕೆರೆಯ ಕಾರ್ಯದರ್ಶಿ ಶ್ರೀ ಐತಪ್ಪ ನೇವಡಿಗಾರರು ಈ ನಾಟಕದ ತರಬೇತಿಯಲ್ಲಿ ಸಹಕರಿಸಿದ್ದರು. ಎಳೆ ಬಾಲಕಿಯರ ಮಂಗಲಗೀತದೊಂದಿಗೆ ಅಂದಿನ ಸಭಾಂತ್ಯವಾಯಿತು.

ಹಿಂದೀ ಪರೀಕ್ಷಾ ಫಲಿತಾಂಶ

ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಭೆಯ ಸಂಚಾಲಕ ಪಂಡಿತ ಸಿದ್ಧನಾಥ ಪಂತರು ಈ ರೀತಿ ಬರೆಯುತ್ತಾರೆ.

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ನಡೆಸಿದ ಸಪ್ಟಂಬರ ತಿಂಗಳ 'ರಾಷ್ಟ್ರಭಾಷಾ'ಪರೀಕ್ಷೆಗೆ ಕರ್ನಾಟಕದಿಂದ ಕೂತಿದ್ದ ೬೮ ಜನ ವಿದ್ಯಾರ್ಥಿಗಳಲ್ಲಿ ೩೯ ಮಂದಿ ಉತ್ತೀರ್ಣರಾಗಿರುತ್ತಾರೆ. ಇವರೆಲ್ಲರೂ ನವಂಬರ ತಿಂಗಳಲ್ಲಿ ಜರಗುವ 'ರಾಷ್ಟ್ರಭಾಷಾ ವಿಶಾರದ-ಚುನಾವ್' ಪರೀಕ್ಷೆಗೆ ಕೂಡಲು ಅರ್ಹರು.

ಉತ್ತೀರ್ಣರಾದವರ ಕ್ರಮ ಸಂಖ್ಯೆ

ಪ್ರಥಮ ಶ್ರೇಣಿ:—107, 137, 140.

ದ್ವಿತೀಯ ಶ್ರೇಣಿ:—90, 92, 93, 94, 95, 96, 97, 98, 99, 103, 104, 106, 108, 110 111, 113, 114, 115, 117, 124, 126, 127, 129. 131, 133, 138, 139, 141, 142, 144, 145, 146, 150, 151, 155, 159. 'ಚುನಾವ್' ಪರೀಕ್ಷೆಯ ಆವೇದನ ಪತ್ರಗಳು ಈ ತಿಂಗಳ ಅಂತ್ಯದೊಳಗೆ ಮದ್ರಾಸಿನ ದಕ್ಷಿಣಭಾರತ ಹಿಂದೀಪ್ರಚಾರ ಸಭೆಯ ಪರೀಕ್ಷಾ ಮಂತ್ರಿಗಳ ಕೈಸೇರತಕ್ಕದ್ದು.

ಉಡುಪಿ ತಾಲೂಕಿನ ಹಾಗೂ ದಕ್ಷಿಣ ಕನ್ನಡಜಿಲ್ಲಾ ರೈತರಿಗೆ ಸೂಚನೆ:—

ಸರಕಾರದಿಂದ ರೈತರುಗಳಿಗೆ ಅವರವರ ಭೂಮಿಗಳಿಗೆ ಸಂಬಂಧಪಟ್ಟ ರಿಸೆಟ್ಲಮೆಂಟು ನಂತರದ ಅಸಲು ಪಟ್ಟಿಗಳು ಬೇಕೆಂದಿದ್ದರೆ ಬರೇ ಎರಡಾಣೆಯ ಕೋರ್ಟುಫೀಸು ಸ್ಟಾಂಪನ್ನು ಅಂಟಿಸಿ ಆಯಾಯ ತಾಲೂಕಿನ ತಹಶಿಲ್ದಾರರಿಗೆ ಅರ್ಜಿಮಾಡಿಕೊಳ್ಳಬಹುದು. ಒಂದೊಂದು ಗ್ರಾಮದ ಆಸ್ತಿಗಳಿಗೆ ಸಂಬಂಧಪಟ್ಟ ಪಟ್ಟಿಗೆ ಒಂದೊಂದು ಅರ್ಜಿಮಾಡಿಕೊಳ್ಳುವುದು ಉತ್ತಮ. ಈ ತರದ ಅನುಕೂಲತೆಗಳು ಇರುವುವು ಎಂಬುವುದು ಈ ಮೂಲಕ ಎಲ್ಲಾ ರೈತರ ಅವಗಾಹನೆಗೆ ತಿಳಿಸಲಾಗಿಯದೆ.

ವಿ. ಸೂ:—ಅರ್ಜಿಗೆ ಅಂಟಿಸುವ ಎರಡಾಣೆ ಸ್ಟಾಂಪು ಹೊರತು ಕೋಪಿಕಾಗದ ವಗೈರೆ ಕಳುಹಿಸುವ ಅಗತ್ಯವಿಲ್ಲ.

UDIPI 25-10-36 } B. Vasudeva Rao, Hon. Secretary,
Udipi Taluk Landholders' Association,

NOTICE

In the Court of the District Judge of S. Kanara,

O. P. No. 138/1936

In the matter of collection of debts due to the Estate of late Dr. B. Ramanna Shetty (*deceased*).

Sheshamma Shedthi &c .... *Petitioners.*

To all concerned

Notice is hereby given that an application has been made to the above Court by Petitioners to grant to 3rd Petitioner Muddanna Shetty the brother of the deceased, a certificate under Part X of the Indian Succession Act of 1925 with respect to the amount due under an Insurance Policy, arrears of pay and other Securities due to late Dr. B Ramanna Shetty, who died on 29—11—1935 at Attavar, Mangalore Town, his permanent place of residence being at Sanoor Guthu Karkal Taluq and that the above petition is posted for hearing on 5—11—1936.

MANGALORE 24—10 1936

M. N. Chouta,
VAKIL FOR PETITIONER

ನವಯುಗದ ಬಿಡಿ ಸಂಚಿಕೆಗಳು

ಈ ಕೆಳಗಿನವರಲ್ಲಿ ದೊರೆಯುತ್ತವೆ.

1 ಯಚ್. ಕೋಟ್ಯಣ್ಣ ಶೆಟ್ಟಿ, ಮರ್ಚಂಟ್, ಕುಂದಾಪುರ
2 ವಿ. ಎಸ್. ಶಿಬ್ರೂರಕರ್, ಸರ್. ಫಿರೋಜ ಮೆಹ್ತ ರೋಡ್, ಫೋರ್ಟ್, ಬೊಂಬಾಯಿ.
3 ದಿ ಕೆನರಾ ನ್ಯೂಸ್ ಏಜನ್ಸಿ, ಬಸ್ ಸ್ಟೇಂಡ್ ಬಳಿ, ಕಾರ್ಕಳ
4 ಸಿ. ಶೀನಪ್ಪ, ಶೆಟ್ಟಿ ಕ್ಲೋತ್ ಮರ್ಚಂಟ್, ತೀರ್ಥಹಳ್ಳಿ.
5 ನಾಟಿವ ನಂದ ಆಫೀಸು, ಬೆಂಗಳೂರು
6 ಕೆ. ಟಿ. ನಾಯಕ್, ಜನರಲ್ ಮರ್ಚಂಟ್, ಅಂಕೋಲ
7 ಬಿ. ಭೋಜರಾವ್, ಮೂಲ್ಕಿ
8 ಯು. ಪಿ. ಮೇಸ್ತ, ಉದ್ಯಾವರ.
9 ಬಿ. ಪದ್ಮನಾಭ ಪೈ, ಮರ್ಚಂಟ್, ಬ್ರಹ್ಮಾವರ
10 ಭಕ್ತಾ ಬ್ರದರ್ಸ್, ಮರ್ಚಂಟ್ಸ್. ಕಾಸರಗೋಡು
11 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು

— ನಾಯಕ್ ಬ್ರದರ್ಸರ —

ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಪಾರಂಪರ್ಯದ ಅನುಭವ ಸಿದ್ಧೌಷಧಗಳು	ಕಟಪಾಡಿ, ದ. ಕನ್ನಡ.	ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು

ವೃದ್ಧಿಕಾಸವ (ಪಿತ್ರ್ಯಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ಸಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಚಂದ್ರಮಸ್ (ವಾಂತಿಭೇದಿಗ ಅನುಭವಸಿದ್ಧ ಔಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕಟಲಾಗಿಗೂ ಈ ಕೆಳಗಿನ ವಿಳಾಸಕ್ಕ ಬರದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ, ದಕ್ಷಿಣ ಕನ್ನಡಾ ಜಿಲ್ಲೆ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ಮಾತ್ರದ ಪಾತ್ರೆಗಳು

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಮಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೇಳು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕಟಲಾಗಿಗೆ ಬರೆಯಿರಿ.

ಕಲ್ಮಂಜೆ ವ್ಯಾಸಾಚಾರ್ಯ,
ಪಾತ್ರೆವ್ಯಾಪಾರಿ, ರಥಬೀದಿ, ಉಡುಪಿ

ಸ್ತ್ರೀ ಮಲಯಾಳದ **ಸ್ತನೋಸ್ತೇಧಃ** ರಹಸ್ಯಗಳು

THE MALAYALA STHANO STHEDAH OUSHADHA CO., Post-CHALAPURAM, MALABAR.

ಇದೀಗ ತಿಳಿಯಬೇಕಾದ ಪುರುಷನಿಷ್ಟವು ಅತ್ಯಂತ ಸಣ್ಣದು, ಸ್ತ್ರೀಯು ಒಬ್ಬ ಸ್ವತಃ ಪುರುಷನೊಬ್ಬನನ್ನು ಪರೀಕ್ಷಿಸಿ ನೋಡಿದ್ದಲ್ಲಿ, ಅವನ ಕಣ್ಣುಗಳು ಸ್ತ್ರೀಯ ನ ಎದೆಯಿಂದ ಕೆಳಗೆ ಬಂದು ಚಲಿಸಿ ಕುಚಗಳು ಉನ್ನತವಾಗಿ, ದುಂಡಾಗಿ ಯೌವನಯುಕ್ತವಾಗಿ ಆಕರ್ಷಕವಾಗಿರುವವೋ ಎಂದು ನೋಡುವವು.

೪೫ ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ. ಇಲ್ಲವಾದರೆ ಹಣ ವಾಪಾಸು



ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ಥದೆ:—ಅನಾರೋಗ್ಯ, ಚಿಂತೆ, ಪ್ರಾಯ ಹೋಗಿದ ನಿಮಿತ್ತ ಸ್ತ್ರೀಯರ ಎದೆಯ ಆಕರ್ಷಕತೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಅಥವಾ ಏರು ತಗ್ಗಾಗಿದ್ದರೆ, ಎಂಗೆ ದುರ್ಬಲವಾಗಿದ್ದ ಕುಚಗಳನ್ನು ಸ್ಥಿರವಾಗಿರಿಸಲಾರವಾದರೆ

ದಿ ಮಲಯಾಳ ಔಷಧ ಕಂಪೆನಿ, ಛಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ವಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವುವ, ಟೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಾಗಿಯೂ ಇರದಲ್ಲದುವ ಸಡಿಲಾಗಿರುವ ಮಾಂಸವು ಸ್ಥಿರವಾಗುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವು. ತಮ್ಮ ಸೌಂದರ್ಯಕ್ಕೆ ಪ್ರಸಿದ್ಧಿಯೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು

ಸ್ತನಸ್ಥೆದ ನಂಬ್ರ ೨೦—ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. ೩ ನಂಬ್ರ ೨೧ ಹೊರಗಣ ಉಪಯೋಗಕ್ಕೆ ರೂ. ೩. ಧರ್ಮಾರ್ಥ ಕಳುಹಿಸಲ್ಪಡುವ ಗೈಡಿಗಾಗಿ ದಯಮಾಡಿ ಬರೆಯಿರಿ

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಛಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಮುಟ್ಟುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ



(ಬಾತ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ)
ಸಂ. ನ

ಮತದಾರರೊಡನೆ

ಮೇಲಿನ ಶಿರೋನಾಮದಿಂದ ಶ್ರೀ. ವಿ. ಎಮ್. ನಾವಡ, ಕುಂದಾಪುರ ಇವರ ಲೇಖನವೊಂದು ನಮ್ಮ ಬಳಿಗೆ ಬಂದಿರುವದು. "ತಾ. 12-9-'36ರ ರಾಷ್ಟ್ರಬಂಧುವಿನಲ್ಲಿ 'ಪರಿಚಿತ'ರೊಬ್ಬರು, ರಾಷ್ಟ್ರಸಭೆಯ ಉಮೇದ್ವಾರಿಗಳಿಗೆ ಅನುಕೂಲವಲ್ಲದ ಲೇಖನ ಬರೆದಿರುವರು. ಅದು ತಪ್ಪು. ರಾಷ್ಟ್ರಸಭೆಯು ಜನಹಿತವನ್ನು ಸಾಧಿಸುವ ದೃಢ ನಿರ್ಧಾರದಿಂದ ನ್ಯಾಯವಿಧಾಯಕ ಸಭೆಗಳನ್ನು ಪ್ರವೇಶಿಸುತ್ತದೆ. ಅದಕ್ಕೆ ಬೆಂಬಲಕೊಡುವದು ಜನರ ಕರ್ತವ್ಯವಾಗಿದೆ. ರಾಷ್ಟ್ರಪತಿ ಜವಾಹಿರಲಾಲರು ಕೊಂಗ್ರೆಸಿಗೆ ಸಹಾಯಮಾಡುವಂತೆ ಪ್ರೇರೇಪಿಸುತ್ತಿದ್ದಾರೆ. ರಾಷ್ಟ್ರಸಭೆಯವರು ಕೌನ್ಸಿಲು ಪ್ರವೇಶಕ್ಕೆ ಅನುಕೂಲವಿಲ್ಲ ಎಂಬುದರಲ್ಲಿ ಅರ್ಥವಿಲ್ಲ. ಬಡವ-ಬಲ್ಲಿದನೆಂಬ ಭೇದವಿಡದೆ ಜನರ ಕ್ಷೇಮವನ್ನೇ ಚಿಂತಿಸುವವರಾಗಬೇಕು, ಆ ಗುಣವು ಕೊಂಗ್ರೆಸಿನವರಲ್ಲಿ ಮಾತ್ರವಿದೆ. ಕಳೆದ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ "ಎಸ್. ಎ." ಅಂಥವರೆಲ್ಲಾ ಹೊರ ಬಿದ್ದು ಪಿಕಿಲಾಟ ವೆಬ್ಬಿಸದಂತೆ 'ಪರಿಚಿತ'ರೂ ಈಗ ಹೊರಟಂತಿದೆ. ಮತದಾರರು ಎಚ್ಚರಿಕೆಯಿಂದಿರಬೇಕು" ಎಂಬುದೇ ಆ ಲೇಖನದ ಸಾರಾಂಶ.

"ಬಂಟರು ಯಾನೆ ನಾಡವರು ನಿದ್ರಿಸುತ್ತಿರುವರೇ?"

ನಮ್ಮ ಜಿಲ್ಲೆಯ ಬಹುಭಾಗದ ಸಾಮಿತವು ಬಂಟರ ಯಾನೆ ನಾಡವರಲ್ಲಿರುವುದು ಮಾತ್ರವಲ್ಲ, ಜಿಲ್ಲೆಯ ಪ್ರಾಮುಖ್ಯ ಜನಾಂಗವೂ, ಪ್ರಧಾನ ಕೃಷಿಕರೂ ವರ್ಗದಾರರೂ ಅವರೇ. ನೂರಾರು ವಕ್ಕಲುಗಳನ್ನು ಅಂಕಿತದಲ್ಲಿಟ್ಟು, ಅಪ್ರತಿರಾಜರಂತೆ ಠೀವಿಯಿಂದ ಮೆರೆಯುತ್ತಿದ್ದವರೆಂದರೆ ನಮ್ಮ ಬಂಟ ಸಮಾಜದವರು. ಹೆಚ್ಚೇಕೆ, ಸರ್ವಾಂಗ ಪ್ರಾಬಲ್ಯ ಪಡೆದ ಬ್ರಿಟಿಷ್ ರಾಜ್ಯಭಾರದ ಈ ಕಾಲದಲ್ಲಿಯೂ ತಮ್ಮ ಸರ್ವಾಧಿಕಾರತ್ವವನ್ನು ತಂತಮ್ಮ ಗ್ರಾಮಗಳಲ್ಲಿ ಚಲಾಯಿಸುತ್ತಿರುವ ಸಾಮರ್ಥ್ಯವುಳ್ಳವರು ಕೆಲವೆಡೆ ಗ್ರಾಮಾಧಿಕಾರಾದಿ ಅಧಿಕಾರ ಬಲವೂ ಸೇರಿ, ಸರ್ವಾಧಿಕಾರ ಸೆರೆಗೊಂಡಹಾಗಿದೆ ಎಂದರೂ ಎನ್ನಬಹುದು. ಹೀಗಾಗಿ ದ. ಕ. ಜಿಲ್ಲೆಯ ಬಹುಭಾಗವು ಬಹುದೇಕೆ ಬಂಟರ ಯಾನೆ ನಾಡವರ ಐಶ್ವರ್ಯ, ದರ್ಪ, ಅಧಿಕಾರಗಳ ನೆಲೆವೀಡು ಎಂದರೂ ಸಲ್ಲುವುದು. ಆದರೆ ಸ್ವಾರ್ಥಪೂರಿತವಾದ ಇವುಗಳಿಂದ ಸಮಾಜಕ್ಕೇನಾದರೂ ಲಾಭವಿದೆಯೇ? 'ದೀವಿಗೆಯಡಿ ಕತ್ತಲೆ' ಯೆಂಬಂತೆ ಈ ಸಮಾಜದಲ್ಲಿರುವ ನಿರಕ್ಷರ ಕುಕ್ಷಿಗಳೆಷ್ಟು? ನಿರುದ್ಯೋಗಿಗಳೆಷ್ಟು? ನೀರುಗಂಜಿಗೂ ಗತಿಯಿಲ್ಲದವರೆಷ್ಟು? ಯೋಚಿಸಿದರೆ ಕಣ್ಣೀರೆಯಾದರೂ ಬರಿಯದಿರದು. ಅಧಿಕಾರ, ಐಶ್ವರ್ಯ, ದರ್ಪ, ಒಣ ಗೌರವಗಳಿಂದ ಮೆರೆವ ಗುತ್ತು, ಬಾಳಿಕೆ, ಬೀಡುಗಳವರು ಈ ಕಡೆಗೆ ಕಣ್ಣೆತ್ತಿ ನೋಡುವುದಿಲ್ಲವೇಕೆ? ಹಿರಿಯರು ಗಳಿಸಿಟ್ಟ ಅಪಾರ ಸಂಪತ್ತಿನ ಸಾಗರದಲ್ಲಿ ತೇಲುತ್ತಿರುವ ಇವರೆಲ್ಲ ಬಡವರ ಕಡುಬಡತನದ ಕಷ್ಟಗಳನ್ನು ಕಾಣದಷ್ಟು ಮದಾಂಧರಾದರೇ? ಆಹಾ! ಈ ಧನಿಕರು ಖರ್ಚುಮಾಡುವರೇ? ಕ್ಷುದ್ರ ಕಾರಣಗಳಿಗೆ ಮಹತ್ತವನ್ನು ಕಲ್ಪಿಸಿ ಕೋರ್ಟು ಕಚೇರಿಗಳು, ವಕೀಲರು, ಗುಮಾಸ್ತರು, ಹೊಟೇಲು ಮಾಲಿಕರು, ಬಸ್ಸು ಕಂಪನಿಗಳ ಹೊಟ್ಟೆ ತುಂಬಿಸುವವರ್ಯಾರು? ಕೋಳಿಜೂಜು, ಕಂಬಳ, ಜೋಡುಕರೆಗಳು ನಡೆಯುವುದಿನ್ನಾವ ಜಾತಿಯವರಿಂದ? ಈ ಅನಾವಶ್ಯಕದ ಹಣವನ್ನು ಸ್ವಜಾತಿಯ ಉದ್ಧಾರಕ್ಕಾಗಿ ಉಪಯೋಗಿಸಿದರಾಗದೇ? ಎಲ್ಲಾ ಜಾತಿ ಜನರೂ ತಮ್ಮ ವಿಚಾರಕ್ಕೆ ಅಸಹ್ಯವೆನಿಸಿದ, ಅಭಿವೃದ್ಧಿಗೆ ಬಾಧಕರುವ ಪದ್ಧತಿಗಳನ್ನೆಲ್ಲಾ ಕಿತ್ತು ಹಾಕಿ ಸಂಘ, ಸಂಸ್ಥೆಗಳನ್ನೇರ್ಪಡಿಸಿ ಜಾತಿಯ ಸರ್ವತೋಮುಖವಾದ ಅಭಿವೃದ್ಧಿಗಾಗಿ ಹೋರಾಡುತ್ತಿರುವಲ್ಲಿ, ಬಂಟರೇಕೆ ಅವುಗಳ ಗೊಡವೆಯಿಲ್ಲದೆ, ಸ್ವಾರ್ಥ, ಮತ್ಸರ, ಕ್ಷುದ್ರ ಅಂತಃಕಲಹಾದಿಗಳಿಂದ ಆವರಿತರಾಗಿ ಹಿಂದೆ ಸರಿಯುತ್ತಿರುವರು?

ಮಾನ್ಯ ಬಂಟ ಸಮಾಜದ ಮುಂದಾಳುಗಳೇ! ಜಿಲ್ಲೆಯಲ್ಲೇ ಸರ್ವಾಂಗ ಆದಿತೀಯವೆನಿಸಿ ಮಕುಟರಹಿತ ರಾಜನಂತೆ ಮೆರೆದ ನಮ್ಮ ಬಂಟ ಸಮಾಜವು ಇಂದು ಮುಂದರಿಯುತ್ತಿರುವುದೇ? ಹಿಂದೆ ಸರಿಯುತ್ತಿರುವುದೇ? ಇತ್ತೀಚೆಗೆ ಎಷ್ಟೊಂದು ದೊಡ್ಡ ಕುಟುಂಬಗಳು ಜಿಲ್ಲೆಯ ಅಂತಃಕಲಹಗಳಿಂದಾಗಿ ಅಧೋಗತಿ ಹೊಂದಿರುವುವು! ಭಾರತೀಯ ಪಾರತಂತ್ರ್ಯಕ್ಕೆ ಅಂದಿನ ಅಂತಃಕಲಹವೇ ಕಾರಣವೆಂದಮೇಗ ನಮ್ಮೀ ಕಲಹದ ಪರಿಣಾಮವೇನು? ಸಮಾಜದ ಪ್ರಸಿದ್ಧ ಮುತ್ಸದ್ದಿಗಳೆನಿಸಿದವರೇ ಕಚ್ಚಾಡುತ್ತಿರೆ, ಮಾಗ ಸಮಾಜದ ಅಭ್ಯುದಯ ಸಾಧಿಸುವವರಾರು? ಹೀಗೆಯೇ ಮುಂದರಿದರೆ ಬಂಟ ಸಮಾಜದ ಪರಿಣಾಮವೇನು?

ನಾವು ನಮ್ಮ ಸುತ್ತಲಿನವರನ್ನು ದೃಷ್ಟಿಸಿನೋಡಿದರೆ ಅಲ್ಪಸಂಖ್ಯಾತರಾಗಿದ್ದರೂ, ತಮ್ಮ ಒಕ್ಕಟ್ಟು ಗಿಸ್ತು, ಸಂಘಸಂಸ್ಥೆಗಳಿಂದ ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿಯೂ, ಹೊಂದುತ್ತಿರುವ ಗೌಡಸಾರಸ್ವತ ವರ್ಗದವರ ಸಾಹಸವು ಅನುಕರಣೀಯವೆಂದು ತೋರದಿರದು. ಅವರ ಪರಸ್ಪರ ಸಹಕಾರ, ಅನುರಾಗಗಳ ಫಲವಾಗಿ ಇಡೀ ಜಿಲ್ಲೆಗೆ ಆದರ್ಶವಾದ ಕೆನರಾ ಹೈಸ್ಕೂಲ್, ಕೆನರಾ ಬೇಂಕ್, ಕೆನರಾ ಬೇಂಕಿಂಗ್ ಕೊಪರೇಟಿವ್, ಸಿಂಡಿಕೇಟ್, ಸಿ. ಪಿ. ಸಿ. ಮೋಟರ್ ಕಂಪನಿ, ಕರ್ನಾಟಕ ಕೆಮಿಕಲ್ ವರ್ಕ್ಸ್, ಭುವನೇಂದ್ರ ಔಷಧಾಲಯ, ಕೆನರಾ ಮ್ಯೂಚುವಲ್ ಇನ್ಸೂರೆನ್ಸ್, ಕಲ್ಯಾಣಪುರ ಸಕ್ಕರೆ ಫ್ಯಾಕ್ಟರಿ, ಸರಸ್ವತಿ, ಶಾರದಾ, ಪ್ರಭಾಕರಾದಿ ಪ್ರೆಸ್ಸುಗಳು, ಸದೇಶಾಭಿಮಾನಿ, ಕಂಠೀರವಾದಿ ಪತ್ರಿಕೆಗಳು ಕಾರ್ಕಳ, ಮೂಲ್ಕಿ, ಮಂಜೇಶ್ವರಾದಿ ದೇವಾಲಯಗಳು, ಉತ್ತಮ ತರದ ಎಷ್ಟೋ ಶಾಲೆಗಳು, ಖಾಸಗಿ ಬೇಂಕುಗಳು, ಇನ್ನವತ್ತು ಎಷ್ಟೊಂದು ಸುಸಂಘಟಿತವಾಗಿ ನಡೆಯುತ್ತಿರುವುವು. ಇಡೀ ಜಿಲ್ಲೆಯ ವ್ಯಾಪಾರವಂತೂ ಅವರ ಹಸ್ತಗತವಾದಂತೆಯೇ ಎಂದರೂ ಸಲ್ಲುವುದು. ಪ್ರಬಲ ಪ್ರತಿಷ್ಠೆಯುಳ್ಳ ಬಂಟ ಸಮಾಜವು ಇಂತಹ ಸಂಘ, ಸಂಸ್ಥೆಗಳನ್ನೆಷ್ಟು ಸ್ಥಾಪಿಸಿರುವುದು? ಹಲವರ ಅವಿಶ್ರಾಂತ ಪರಿಶ್ರಮದಿಂದ ಜನ್ಮವೆತ್ತಿದ ಕೆನರಾ ಪ್ರೆಸ್, ನವಯುಗ, ವಿಜಯ ಬೇಂಕುಗಳು ಕೂಡಾ ನಮ್ಮ ಹೆಗ್ಗಳಿಕೆಯ ನೂರರಲ್ಲೊಂದು ಪಾಲನ್ನೂ ಸೂಚಿಸಲು ಸಮರ್ಥವಾಗದಿರಲು ಕಾರಣವೇನು? ನಮ್ಮಲ್ಲಿ ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ದನ, ಜನದ ಕೊರತೆಯಿದೆಯೇ? ಎಷ್ಟೊಂದು ಜನರು ನಿರುದ್ಯೋಗಿಗಳಾಗಿ ಬೀದಿ ಅಳೆಯುತ್ತಾ, ಬೀಡಿ ಎಳೆಯುತ್ತಾ ಹೊಟೇಲು ಬಳಿ ಸುಳಿಯುತ್ತಾ ಕಾಲಹರಣ ಮಾಡುತ್ತಿರುವರು? ಎಷ್ಟೊಂದು ಜನರು ಕ್ಷಣಿಕ ಸುಖವಿನೋದಗಳಾಗಿ ಸಾವಿರಾರು ರೂಪಾಯಿಗಳನ್ನು ಕಲ್ಲುಹರಳುಗಳಂತೆ ವ್ಯಯಮಾಡುತ್ತಿರುವುದಿಲ್ಲ?

ಆಹಾ! ಬಂಟ ಸಮಾಜವೇ! ನಿನ್ನ ಅಂದಿನ ಚರಿತ್ರಾರ್ಹವಾದ, ತಾನೇ ತಾನಾಗಿ ಮೆರೆದ ಆಹೆಗ್ಗಳಿಕೆಯೆಲ್ಲಿ? ಇಂದೀಗ ಜೀವನ ರಂಗಭೂಮಿಯಿಂದ ಹಿಂದೆ ಸರಿಯುತ್ತಿರುವ ನಿರುತ್ಸಾಹಪೂರಿತ ಪರಿಸ್ಥಿತಿಯಲ್ಲಿ? ಜಗತ್ತೇ ಪ್ರಗತಿಪಥದಲ್ಲಿ ಮುಂದರಿಯುತ್ತಿರುವಾಗ ಸರ್ವ ಸಮಾಜಗಳೂ ತಾನು ಮುಂದೆ ತಾನು ಮುಂದ ಸಾಗಬೇಕೆಂಬ ಸ್ಪರ್ಧೆಯಲ್ಲಿ ತೊಡಗಿರ ಮಾಗ ನಿನಗೇನು ಕುಂಭಕರ್ಣನ ನಿದ್ರೆ ಪ್ರಾಪ್ತವಾಯಿತೆ? ಎಚ್ಚರವಾಗಲಾರೆಯಾ? ನಿನ್ನಲ್ಲಿ ಬೇರೂರಿರುವ ಕುತ್ಸಿತ ಮಾತ್ಸರ್ಯ, ಕ್ರೋಧ, ಅಹಂಭಾವ, ದುರ್ವ್ಯಯ, ಒಣಗೌರವ, ನಿಷ್ಕ್ರಿಯತ್ವ, ಅಂತಃಕಲಹಗಳನ್ನು ಕಿತ್ತೊಗೆಯಲಾರೆಯಾ? ನಿನ್ನಲ್ಲಿರುವ ಬಡಜನರನ್ನು ಉದ್ಧರಿಸಲಾರೆಯಾ? ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲಾರೆಯಾ? ಮುಳುಗುತ್ತಿರುವ ಕೀರ್ತಿನಾವೆಯನ್ನು ಉಳಿಸಿಕೊಳ್ಳಲಾರೆಯಾ?

ಸನ್ಮಾನ್ಯ ಸಮಾಜ ಧುರೀಣರೇ, ಹಿರಿಯರೇ! ಕಿರಿಯರೇ! ನಿಮ್ಮಿಂದ ಸಾಧ್ಯವಿರುವ ಸಮಾಜ ಸುಧಾರಣೆಯ ಕಾರ್ಯಗಳಿಗೆ ಕೊಡಲಿ ಕೈಹಚ್ಚಿ ಸಾಹಸಪಡೆಯಿರೆಂದು ಕೈ ಮುಗಿದು ಬೇಡುವೆನು. ಧೈರ್ಯದಿಂದ ಉತ್ಸಾಹಿತರಾಗಿ ಮುಂದರಿದರೆ ಶ್ರೀ ಪರಮಾತ್ಮನು ಯಶಸ್ಸನ್ನು ಕೊಟ್ಟೇ ಕೊಡುವನು. ನಿಶ್ಚಯವಾಗಿ ಸಮಾಜವು ಸುಖಸಂತೋಷವನ್ನನುಭವಿಸುವಂತಾಗಲಿ.

— ತಥಾಸ್ತು —

"ಸಮಾಜ ಬಂಧು"

ಮಾಬುಕಳ ಹೊಳೆ

ಈ ಕಡವಿನಲ್ಲಿ ಪ್ರತಿದಿನ ಸುಮಾರು 20 ಬಸ್ಸು ಸರ್ವಿಸುಗಳ ಚಲಾವಣೆ ಇದೆ, ನಾಲ್ಕಾರು ಕಾರುಗಳು ಹಾರಾಗುತ್ತಿವೆ. ಇಂತಹ ಹೊಳೆಯು ಆರೇಳು ವರ್ಷಗಳಿಂದ ಒಬ್ಬ ಕೆಂಟ್ರಾಕ್ಟದಾರನ ಸ್ವಾಧೀನವಿರುವದರಿಂದ ಬಡವರಿಗೆ ಕಷ್ಟ—ಬೋರ್ಡಿಗೆ ನಷ್ಟವಾಗುತ್ತಿದೆ. 5 ವರ್ಷ ಕೆಂಟ್ರಾಕ್ಟಿಗೆ ಕೊಡುವ ಪದ್ಧತಿಯಿಂದ ಸಾಮಾನ್ಯ ಜನರಿಗೆ ಹಣದ ಅನಾನುಕೂಲತೆಯಿಂದಾಗಿ ವಹಿಸಿಕೊಳ್ಳಲು ಸಾಧ್ಯವಾಗುವದಿಲ್ಲ. ಇದರಿಂದ ಬೋರ್ಡಿಗೆ ಸುಮಾರು ನಾಲ್ಕೈದು ಸಾವಿರ ರೂಪಾಯಿಗಳಾದರೂ ನಷ್ಟವಾಗಬಹುದು.

ಹೊಳೆಗೆ ದಂಡೆಯು ಒಡ್ಡಿರುವದರಿಂದ ಈಗಿರುವ ಜೋಂಟಿಯು ಆಗತ್ಯವಿಲ್ಲ.

ಈಗ ಈ ಹೊಳೆಯ ಐದು ವರ್ಷದ ಮ್ಯಾದೆಯು ಮುಗಿಯುತ್ತಾ ಬಂದಿರುವದರಿಂದ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷರು ವರ್ಷಂಪ್ರತಿ ಏಲಂಮಾಡುವ ವ್ಯವಸ್ಥೆ ಮಾಡಬೇಕಾಗಿ ಅಪೇಕ್ಷಿಸುತ್ತೇವೆ.

ಮಹಾಬಲ ಸೆಟ್ಟಿ

ಬರುವ ಚುನಾವಣೆಯೂ ಜನತೆಯ ಕರ್ತವ್ಯವೂ

ಮೇಲಿನ ಹೆಸರಿನಿಂದ—'ಸುಧಾರಣೆಗಳನ್ನು ಖಂಡಿಸಿದ್ದ ಕೊಂಗ್ರೆಸ್ಸೇ ಈಗ ಕೌನ್ಸಿಲು ಪ್ರವೇಶಕ್ಕೆ ಹೊರಟಿದೆ. ಕೊಂಗ್ರೆಸಿನ ಹೆಸರಿನಿಂದ ಸ್ವಾರ್ಥಸಾಧಕರ ಮುಂದೆ ಬರುವಂತಾಗಿದೆ. ಶ್ರೀ ಆದೂರರ ಚುನಾವಣೆಯಿಂದ ನಡೆದ ಕೀರ್ತಿಯು ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ನಾಮಾವಶೇಷವಾಯಿತು. ಕೊಂಗ್ರೆಸು ತನ್ನ ನಿಸ್ಸೀಮ ಭಕ್ತರನ್ನೇ ಉಮೇದ್ವಾರಿಗಳಾಗಿ ನಿಲ್ಲಿಸಬೇಕು' ಎಂಬ ಅರ್ಥವುಳ್ಳ ಬಾತ್ಮಿಯೊಂದು ಶ್ರೀ ಕೊಳ್ಕೆಬೈಲ್ ಸೂರಪ್ಪ ಸೆಟ್ಟಿ, ಬಿ. ಎ. ಯವರಿಂದ ಬಂದಿರುವದು. ಸ್ಥಳಾಭಾವದಿಂದ ಪೂರ್ಣವಾಗಿ ಪ್ರಕಟಿಸಲಾಗಲಿಲ್ಲ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

R. E. A 206/1936   R. E. P 250/36   O. S. 513/33

ಪಿ. ಶಂಕರನಾರಾಯಣ ರಾವ್, ನಾರಾಯಣ ರಾಯರ ಮಗ
ಕುಂದಾಪುರ ಕಸಬಾ   ಅರ್ಜಿದಾರ

1	ಶೇಷಗಿರಿಯಪ್ಪ	ಬಗ್ವಾಡಿ ವೆಂಕಪ್ಪಯ್ಯನವರ ಮಗಂದಿರು	ಮೈನರರಾದ 6ನೇ ಪ್ರ ಗಾರ್ಡಿಯನ್ 1ನೇ ಪ್ರ ಎಲ್ಲರೂ ಕುಂದಾಪುರ ತಾಲೂಕು ನೂಜಾಡಿ ಗ್ರಾಮವಾಸಿಗಳು, ಹಾಲಿ ಸಿದ್ದಾಪುರದ ಪ್ರದಕ್ಷಿಣ ತಾಲೂಕು ಕರ್ಕೆಸರಿ ಗ್ರಾಮದಲ್ಲಿರುತ್ತಾರೆ	ಎದ್ರೀರು.
2	ನಾರಣಪ್ಪಯ್ಯ			
3	ರಾಮಪ್ಪಯ್ಯ			
4	ಮಂಜುನಾಥಯ್ಯ			
5	ಪದ್ಮನಾಭಯ್ಯ			
6	ವೆಂಕಪ್ಪಯ್ಯ (1ನೇ ಪ್ರತಿವಾದಿಯ ಮಗ)			

ಸದರಿ ಅಮಲ್‌ಜಾರಿಯಲ್ಲಿ ಸ್ಥಿರ ಆಸ್ತಿ ಏಲಮಿಗೆ ಆಕ್ಷೇಪಿಸಿ ಅರ್ಜಿದಾರರು ಇಸ್ತಿಹಾರು ದಾಖಲು ಮಾಡಿದ್ದಾರೆ. ಅದರ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ತಾ. 6—11—1936ಕ್ಕೆ ತನಿಕೆಗೆ ಇಟ್ಟಿದೆ. ಮತ್ತು ಅರ್ಜಿದಾರನ ಕಡೆಯಿಂದ ಏಲಮಿಗೆ ನಿಲ್ಲುವ ಬಗ್ಗೆ ದಾಖಲು ಮಾಡಿದ ಸದರೀ ಅರ್ಜಿಯನ್ನು ತಾ. 6—11—1936ಕ್ಕೆ ಇಟ್ಟಿದೆ. ಆದುದರಿಂದ ಇವುಗಳ ವಿಷಯವಾಗಿ ಸದರೀ ಪ್ರತಿವಾದಿರು ಆಕ್ಷೇಪಿಸುವಂದಾದ್ದಿದ್ದರೆ ಅದನ್ನು ಮೇಲ್ಕಂಡ ಕೋರ್ಟಿನಲ್ಲಿ ತಕ್ಕ ಸಮಯ ಜಾಹೀರು ಮಾಡಬೇಕಾಗಿ ಈ ಮೂಲಕ ತಿಳುಹಿಸಲ್ಪಡುತ್ತದೆ.

ಕುಂದಾಪುರ 19—10—1936   *H. Ramappaiya*, M.A., B.L. *Advocate for Defendant.*

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂ. 541/1933 R. I. A 560/1936

ಅರ್ಜಿದಾರರು —ವಾದೀರು ನಾಗಯ್ಯ ಸೆಟ್ಟಿ ಕೂಡಾ

ಎದ್ರಿರು ಪ್ರತಿವಾದೀರು ದತ್ತಾತ್ರೇಯರಾವ್ ಕೂಡಾ

1ನೇ ಎದ್ರಿ ಪ್ರತಿವಾದಿ ಶಂಕರರಾಯರಿಗೆ—

ಮೇಲೆ ಹೇಳಿದ ಕ್ರಮ ನಂ. 544/1933ನೇ ಡಿಕ್ರಿಯ ಹಣ ವಸೂಲಿ ಕುರಿತು ಅರ್ಜಿದಾರರು ಎದ್ರಿ ಪ್ರತಿವಾದೀರ ಮೇಲೆ ಜವಾಬ್ದಾರಿ ಡಿಕ್ರಿ ತಮಗೆ ಕೊಡಿಸಬೇಕೆಂತ ಕೊಟ್ಟ ಮೇಲ್ಕಂಡ ಅರ್ಜಿಯು ತಾ 2—11—1936ಕ್ಕೆ ಮೇಲೆ ಹೇಳಿದ ಕೋರ್ಟಿನಲ್ಲಿ ತನಿಕೆಗೆ ಇಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಸಹಾ ತಪ್ಪದೆ ದಿವಸ ಹಗಲು 11 ಘಂಟೆಗೆ ಮಜಕೂರು ಕೋರ್ಟು ಮುಂದೆ ಹಾಜರಾಗಿ, ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆಂದು ಈ ಮೂಲಕ ತಿಳಿಸಲಾಗಿಯದೆ.

ತಾ. 19-10-'36 ಕುಂದಾಪುರ,   K. Vittaldas Shenai ಅರ್ಜಿದಾರರ ಕಡೆ ADVOCATE

ಬಾಲವಾಙ್ಮಯದ ಅವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾಲವಾಙ್ಮಯ

ಬೆಲೆ ೦—೩—೦

ಉಪಾಧ್ಯಾಯರ ಪ್ರಕಟನ ಸಮಿತಿ ಉಡುಪಿ.

ಪ್ರಕಟಣೆ

ಮಂಗ್ಳೂರು ತಾ 16 10- 936

ಮಂಗ್ಳೂರು ತಾಲೂಕು ಕೊಂಪದಲು ಗ್ರಾಮದಲ್ಲಿರ್ವ ಕರಿಕುಡುಂಬಿ ಜಾತಿಯ ಸಾಂತು ಗೌಡರ ವಿಧವೆ ಸಾಂಡ್ಲೆಂಮ ವ ಸದ್ರಿ ಸಾಂತು ಗೌಡರ ಮಗ ಪುತ್ತುಗೌಡಾ—ಕೂಡ 2ಜನರು ಈ ಮೂಲಕ ಸರ್ವ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸುವದೇನೆಂದ್ರೆ:—

ನಾವು ಮಕ್ಕಳ ಕಟ್ಟು ಆಚರಿಸುವ ಕರಿಕುಡುಂಬಿಯ ಜಾತಿಯವರಾಗಿದ್ದು ನಾವು ವ 1ನೇಯವಳ ಮಗಾ ವ 2ನೇಯವನ ತಮ್ಮನಾದ ಬಾಬುಗೌಡ ಕೂಡ ಸಂಪೆ ಅವಿಭಕ್ತ ಕುಟುಂಬದವರಾಗಿದ್ದು ಏಕಗೃಹಕೃತ್ಯದಲ್ಲಿರ್ವ ಸಮಯ ನಮ್ಮ ಕುಟುಂಬದಲ್ಲಿ ಸಾಲ ವಗೈರೆ ಇಲ್ಲದೆಯೂ ವ ಇಷ್ಟನ್ನಾದ್ರೂ ಸಾಲ ವಗೈರೆ ಮಾಡುವ ಅಗತ್ಯ ಕೂಡ ಇಲ್ಲದೆಯೂ ಕುಟುಂಬದ ಯಜಮಾನನಾಗಿರುತ್ತಿದ್ದ ನಮ್ಮ ಪೈಕಿ 1ನೇಯವಳ ಗಂಡಾ ವ 2ನೇಯವಳ ತಂದ ಸಾಂತುಗೌಡರು ಮೃತಪಟ್ಟ ಲಾಗ್ಯಾತು ನಮ್ಮ ಅವಿಭಕ್ತ ಕುಟುಂಬದಲ್ಲಿ ನಮ್ಮ ಪೈಕಿ 2ನೇಯವನು ಆಡಳ್ತೆಯನ್ನು ನಡ್ಸಿಕೊಂಡು ಸದ್ರಿ ಬಾಬು ಗೌಡರ ಜೀವನವನ್ನು ಸರಿಯಾಗಿ ನಡ್ಸಿಕೊಂಡು ಬರುತ್ತಿರುವಲ್ಲಿ ಸದ್ರಿ ಬಾಬಗೌಡನು ಚಿಕ್ಕ ಪ್ರಾಯದ ವ ಕಡಿಮೆ ಬುದ್ಧಿಯವನಾಗಿದ್ದು ಆತನು ನಮ್ಮ ಅವಿಭಕ್ತ ಕುಟುಂಬದಲ್ಲಿ ಜೀವಿಸಿಕೊಂಡು ಬರುತ್ತಿರುವಲ್ಲಿ ಆತನಿಗೆ ಯಾವ ವಿಧದಿಂದ್ಲು ಸಾಲದ ತಗಾದೆಯು ವ ಸಾಲ ಮಾಡುವ ಅಗತ್ಯ ಕೂಡಾ ಇಲ್ಲದೆ ಇರುವಲ್ಲಿ ತನ್ನ ಸ್ವಂತ ಉಪಯೋಗದ ಬಗ್ಗೆ ದುರ್ಲಭ್ಯ ಪಡಿಯುವ ಕೆಟ್ಟ ವಿರಾಧೆಯಿಂದ ಸದ್ರಿ ಬಾಬ ಗೌಡನನ್ನು ದುರ್ಬೋಧಿಸಿ ಪ್ರಸಲ್ಯಾಸಿ ಬೇರೊಂದು ಪ್ರತಿಫಲ ಕೊಡದ ನಮ್ಮ ದ್ವೇಶಿಕರಾಗಿ ಕೆಲವರು ಆಶನಿಂದಾದ ತಮಗೆ ಇಷ್ಟ ಇದ್ದ ರೀತಿಯಲ್ಲಿ ದಸ್ತೈವಜುಗಳು ವಗೈರೆಯನ್ನು ಬರ್ಸಿಕೊಂಡದ್ದಲ್ಲದೆ ಕೆಲವು ಖಾಲಿ ಕಾಗ್ದಗಳಿಗೆ ಆತನಿಂದ ಹೆಬ್ಬೆಟ್ಟುಗಳ ಗುರ್ತುಗಳನ್ನು ಕೂಡಾ ಹಾಕ್ಸಿರುತ್ತಾರೆಂತ ನಾವು ತಿಳಿಯುತ್ತೇವೆ ಹಾಗೆ ಆತನಿಂದ ಯಾರಾದ್ರೂ ನೋಟುಗಳು ದಸ್ತೈವಜುಗಳು ಹೆಬ್ಬೆಟ್ಟಿನ ಮೋಹರುಗಳು ಪಡಕೊಂಡದ್ದು ಇದ್ದಲ್ಲಿ ಅವುಗಳು ಯಾವ ವಿಧದಿಂದ್ಲು ಪ್ರತಿಫಲವಿಲ್ಲದ್ದೆಂತ್ಲು ಅವುಗಳ ಪರಭಾರೆಯನ್ನು ಯಾರಾದ್ರೂ ಪಡಕೊಳ್ಳಕೂಡದ್ದೆಂತ್ಲು ಅವುಗಳು ಸದ್ರಿ ಬಾಬಗೌಡನ ಮೇಲಾಗ್ಲಿ ವ ನಮ್ಮ ಅವಿಭಕ್ತ ಕುಟುಂಬದ ಮೇಲಾಗ್ಲಿ ಬಾಧಿತಕ್ಕದ್ದಲ್ಲವೆಂತ್ಲು ಈ ಮೂಲಕ ಎಲ್ಲಾ ಜನರೀಗೆ ತಿಳ್ಸಿರುತ್ತದೆ.

*** ||| ಈ ಮೂರು ಗೆರೆ ವ ಯಡ ಹೆಬ್ಬೆಟ್ಟಿನ ಗುರ್ತು ಸಾಂಡ್ಲೆಮ್ಮನ ರುಜು.**

*** ||| ಈ ಮೂರು ಗೆರೆ ವ ಯಡ ಹೆಬ್ಬೆಟ್ಟಿನ ಗುರ್ತು ಪುತ್ತುಗೌಡನ ರುಜು.**

. ಈ ಗುರುತು ಇರುವಲ್ಲ ಹೆಬ್ಬೆಟ್ಟು ಗುರುತು ಇದೆ

ಮಂಗಳೂರು

ಶ್ರೀ ಜ್ಞಾನೋದಯ ಸಮಾಜ

ಕಳೆದ ತಾ ೧೭ನೇ ಆದಿತ್ಯವಾರ ಪಿಠಾಪುರದ ಮಹಾರಾಜರು ಪರಿವಾರದೊಂದಿಗೆ ಶ್ರೀ ಜ್ಞಾನೋದಯ ಸಮಾಜವನ್ನು ಸಂದರ್ಶಿಸಿದರು ಶ್ರೀ ಮೋಹನಪ್ಪ ತಿಂಗಳಾಯರು, 'ಮಹಾರಾಜರ ದಾನ ಧರ್ಮಗಳ ಸ್ತುತ್ಯ ಕಾರ್ಯಗಳನ್ನು ಹೊಗಳಿ ಮತ್ಸ್ಯ ವ್ಯವಸಾಯಿಗಳ ಸಂಕಷ್ಟಗಳನ್ನು ಅರಿತು ಮಾನಸತ್ತವನ್ನರ್ಪಿಸಿರು ಮಹಾರಾಜರು ಮತ್ಸ್ಯ ವ್ಯವಸಾಯಿಗಳು ರಾತ್ರಿಹಗಲೆನ್ನದೆ ದುಡಿದು ಸ್ವತಂತ್ರವಾಗಿ ಜೀವನ ನಡೆಸುತ್ತಿರುವದನ್ನು ಕೊಂಡಾಡಿ ಮದ್ಯಪಾನ ತ್ಯಾಗದ ಸಂಕಲ್ಪ ಶ್ಲಾಘನೀಯವೆಂದರು ಯುವರಾಜರೂ ಭಾಷಣವಿತ್ತರು ಸಮಾಜದ ರಜತೋತ್ಸವಕ್ಕೆ ದೂರಿಂದ ಸಹಾಯಮಾಡುವವನಾಗಿ ಪ್ರತಿಜ್ಞೆಯನ್ನಿತ್ತು ಅದನ್ನು ಮದ್ಯಪಾನ ತ್ಯಾಗ ಕೆಲಸಗಳಿಗೆ ಉಪಯೋಗಿಸಬೇಕೆಂದರು

ಶ್ರೀ ಬಿ. ಜಗನ್ನಾಥ ಹೆಗ್ಡೆ ಬಿ ಎ.— ಇವರು ಮಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸಾಯನ್ಸ್ ಇದ್ದ ಶ್ರೀ ಬಿಜೂರು ಸಂಜೀವ ರಾವ್, ಎಮ್ ಎಸ್ಸಿ, ಎಫ್ ಐ ಐ ಎಸ್ಸಿ, ಇವರ ಕೈಕೆಳಗೆ ಬಿಪ್ಲಮೆಟ್ರಿಯ ಬಗ್ಗೆ ಎಣ್ಣೆಯೊಂದನ್ನು ತೆಗೆದು ಅದರ ಜೀವ ದ್ರವ ಪದಾರ್ಥಗಳನ್ನು ಪೃಥಕ್ಕರಿಸಿ ನಡೆಸಿದ ಶೋಧ ಮತ್ತು ಆ ಕುರಿತು ಬರೆದ ನಿಬಂಧಕ್ಕಾಗಿ ಅವರಿಗೆ ಮದ್ರಾಸು ಯುನಿವರ್ಸಿಟಿಯವರು ಎಮ್ ಎಸ್ಸಿ ಡಿಗ್ರಿಯನ್ನಿತ್ತಿರುವರೆಂಬುದು ಅಭಿನಂದನೀಯವಿದೆ ಶ್ರೀ ಹೆಗ್ಡೆಯವರು ಗಾಜು ಕೈಗಾರಿಕೆಯನ್ನು ಕಲಿಯಲು ಮದ್ರಾಸ್ ಸರಕಾರದಿಂದ ಇಂಗ್ಲೆಂಡಿನ ಶೆಫೀಲ್ಡಿಗೆ ಕಳುಹಿಸಲ್ಪಟ್ಟು ಆ ಸಂಬಂಧವಾದ ಪರೀಕ್ಷೆಯೊಂದರಲ್ಲಿ ಉತ್ತೀರ್ಣರಾಗಿರುವರು ಇವರು, ನವಯುಗವು ಉಡುಪಿಯಿಂದ ಪ್ರಕಟವಾಗುವುದೆಂಬುದನ್ನು ತಿಳಿದು ಬಹಳ ಆನಂದಗೊಂಡು ನವಯುಗಕ್ಕೆ ಉತ್ತರೋತ್ತರ ಅಭಿವೃದ್ಧಿ ಬಯಸಿರುವರು

1936ರ ನವರಾತ್ರಿ ಮಹೋತ್ಸವದ

ಜಮಾ ಖರ್ಚು

ಜಮ.

8—	9—	9	1ನೇ ದಿವಸ
11	2	3	2 ,,
89	0	6	3 ,,
50	8	0	4 ,,
2	0	0	5 ,,
0	10	0	6 ,,
24	4	3	7 ,,
13	9	9	8 ,,
199	12	6	ಜುಮ್ಲಾ.

ವ ಹೋತ್ಸವದಲ್ಲಿ ಬಾಗವನ್ನು ವಹಿಸಿದವರಿಗೆ ಸಂದದು	110-11-0
ದೀಪ ಕ್ಲೀನಿಂಗ್, ತೋರಣ ಕೂಲಿ ವ ಇತರ ಚಿಲ್ಲೆ ಖರ್ಚು	57- 9-9
ಗಾಡಿ, ಜಟ್ಟಿ, ಮೋಟರ, ಬೇಂಡ್, ನೋಟೀಸುಗಳ ವಾಬ್ತು ಖರ್ಚು	64 10-6
	232-15-3
ಜುಮ್ಲಾ ನಷ್ಟ	33- 2-9

ಥಿಯೇಟರ್ ಮತ್ತು ಪರ್ಸಿಚರ್‌ಗಳಿಗೆ ಬಾಡಿಗೆ ಇಲ್ಲ

ಕಳೆದ 3 ವರ್ಷಗಳ ಜಮಾ ಖರ್ಚು.

ವರ್ಷ.	ಜಮಾ.	ಖರ್ಚು	ನಷ್ಟ.
1934	210-11-0	300-11-0	90- 0-0
1935	182- 3 6	241- 2-3	58-14-9
1936	190-12-6	232 15-3	33- 2-9

S U PANIADY,
ಕಾರ್ಯದರ್ಶಿ

24 10 '36

ನವಯುಗ ಚಕ್ರಬಂಧ ಸ್ಪರ್ಧೆ. (ಸಂಖ್ಯೆ ೨)

(ಒಗಟುಗಾರ—ಕೆ ಎಸ್ ಶೆಟ್ಟಿ, ಉಡುಪಿ)

ಪ್ರಥಮ ಬಹುಮಾನ:—'ವ್ಯಭಿಚಾರಿಣಿ ಯಾರು' ನಾಟಕ ಪುಸ್ತಕ.

ದ್ವಿತೀಯ ಬಹುಮಾನ:—'ಜೀವನದ ಸೊಗಸು' ಎಂಬ ಕಥೆ ಪುಸ್ತಕ.



ಎಡದಿಂದ ಬಲಕ್ಕೆ:—

1 ವ್ಯಭಿಚಾರಿಣಿಯಾರು ನಾಟಕದ ಒಂದು ಪಾತ್ರ
3 ಒಂದು ಪರ್ವತ
5 ಸರಸ್ವತಿ
6 ಪ ನೋವಾಕ್ಯಾಯ
8 ಕಡಿ
9 ಸಾರ
10 ಒಂದು ಜಾತಿಯ ಮರ
11 ಕತ್ತಲೆ
13 ಹುಟ್ಟು
15 ಒಂದು ಆಳತೆ ಭೇದ
16 ಯಜ್ಞ
18 ಪ್ರಸಿದ್ಧ ಗಾಯಕರಲ್ಲೊಬ್ಬ
20 ಪುಷ್ಪ
22 ಅಘ
23 ನೋವು
24 ಬಲ್ಲವ

ಮೇಲಿಂದ ಕೆಳಗೆ:—

2 ಮಹ
3 ದೇವಾಂಗನೆ
4 ಮೇಣ
5 ಅಂಬು
7 ಕಿರಣ
8 ಆಂಡ
10 ಅಕ್ಕಸಾಲಿಗನ ಒಂದು ಸಾಧನ
12 ಕೂಡುವಿಕೆ
13 .... ..ಯೇ ಜನಾರ್ದನ ಸೇವೆ
14 ಜಲಚರ ಪ್ರಾಣಿ
15 ಮಾನವನು ಕಾಯ್ದುಕೊಳ್ಳಬೇಕಾದುದು
17 ನಸು
18 ಬೇಗೆ
19 ಜಲಾಶಯ
27 ಅಭಿಪ್ರಾಯ

ನಿಯಮಗಳು:

ಪ್ರತಿ ಉತ್ತರದೊದನೆ ಒಂದಾಣೆಯ ಟಪ್ಪಾಲುಚೀಟನ್ನು ಇಡಬೇಕು ಅದನ್ನು ಯಾವ ಕಾರಣದಿಂದಲೂ ತಿರುಗಿ ಕೊಡಲಾಗುವುದಿಲ್ಲ ಅಥವಾ ಬೇರೊಂದು ಸ್ಪರ್ಧೆಗೆ ಜಮೆಹಿಡಿಯುವಂತೆಯೂ ಇಲ್ಲ. ೨ ಒಬ್ಬರೇ ಅನೇಕ ಉತ್ತರಗಳನ್ನು ಕಳುಹಿಸಬಹುದು ನೊದಲನೆಯದನ್ನು ಮೇಲಿನ ಚಕ್ರಬಂಧದಲ್ಲಿಯೂ ಮಿಕ್ಕವುಗಳನ್ನು ಬೇರೆ ಕಾಗದದಲ್ಲಿಯೂ ಬರೆದು ಕಳುಹಿಸಬಹುದು ಸ್ಪರ್ಧೆಯ ಎಲ್ಲ ವಿಷಯಗಳಲ್ಲಿಯೂ ಚಕ್ರಬಂಧ ಸ್ಪರ್ಧೆಯ ಸಂಪಾದಕರ ತೀರ್ಮಾನವೇ ಕೊನೆಯದಾಗಿರುತ್ತದೆ ೪ ಈ ಸ್ಪರ್ಧೆಗೆ ಸಂಬಂಧಪಟ್ಟ ಪತ್ರವ್ಯವಹಾರಗಳನ್ನು ಎಷ್ಟು ಮಾತ್ರವೂ ಮಾಡಲಿಕ್ಕಿಲ್ಲ, ಅದಕ್ಕಾಗಿ ಮಾತುಕಥೆಯೂ ಅನಗತ್ಯವಿದೆ ೫. ನಿಯಮಗಳನ್ನು ಪಾಲಿಸದಿರುವ ಉತ್ತರಗಳು ಅಸ್ವೀಕೃತವಾಗುವವು ೬. ನವಯುಗದ ಸಂಪಾದಕರ ಬಳಿ ಮೊಹರುಮಾಡಿಟ್ಟ ಉತ್ತರಕ್ಕೆ ಹೊಂದಿಕೆಯಾಗುವ ಉತ್ತರವೇ ಸಂಪೂರ್ಣ ಸಮರ್ಪಕ ಉತ್ತರ ಒಂದಕ್ಕಿಂತ ಹೆಚ್ಚು ಸಂಪೂರ್ಣ ಉತ್ತರಗಳು ಬಂದರೆ ಇನಾಮನ್ನು ಸೂಡ್ತಿ ಹಾಕಿ ಕೊಡಲಾಗುವುದು ಆದರೆ ಎಲ್ಲರ ಹೆಸರುಗಳನ್ನು ಪ್ರಕಟಿಸಲಾಗುವುದು ಉತ್ತರವನ್ನು ತಾ ೧೫—೧೧—೩೬ರ ತನಕ ಸ್ವೀಕರಿಸಿ ತಾ 19—11—36ಕ್ಕೆ ಪ್ರಕಟಿಸಲಾಗುವುದು ಉತ್ತರವನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು

ಮೆನೇಜರ್: ನವಯುಗ, ಉಡುಪಿ.

ಪ್ರೇಮ ವಿದ್ಯಾಪೀಠ

ತುಂಗಭದ್ರಾ (ಬಳ್ಳಾರಿ ಜಿಲ್ಲಾ)

ಇದರ ಹೊಸ ವರ್ಷವು ಜೂಲ್ಯಾಯಲ್ಲಿ ಮೊದಲಾಗುತ್ತದೆ. **ಮರ್ಯಾದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್, ಸ್ಕೂಲ್‌ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ. ಪ್ರೊಸ್‌ಪೆಕ್ಟಸ್** ಮಾಹಿತಿಗಾಗಿ ಕೂಡಲೆ ೨ ಆಣೆ ಸ್ಟಾಂಪ್ ಇಟ್ಟು ಬರೆಯಿರಿ.

ಮಹೋಪಾಧ್ಯಾಯ **ಡಾ| ಸುಮತಿಬಾಯಿ,**

ಬಿ ಎ ಎಲ್ ಟಿ, ಎಫ್, ಪಿ ಎಚ್. ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಶ್ರೀ ರಾಮಾರೆಸ್ಟೋರೆಂಟ್

—— ಉಡುಪಿ ——

ಊಟ ಉಪಹಾರಗಳ ರುಚಿ! ಸ್ಥಳ ಆಸನಗಳ ಶುಚಿ !!

ಶಾಲಾ ವಿದ್ಯಾರ್ಥಿಗಳ ಅನುಕೂಲತೆ, ಪ ವಾಸಿಕರಿಗೆ ಅತ್ಯುತ್ತಮ ಸೌಕರ್ಯ ಇವೆಲ್ಲಾ ಇರುವ ಒಂದೇ ಒಂದು ವಿಶ್ರಾಂತಿಗೃಹವೆಂದರೆ ಶ್ರೀ ರಾಮಾರೆಸ್ಟೋರೆಂಟ್! ಸುಲಭ ದರದಲ್ಲಿ ಅತ್ಯುತ್ತಮ ತಿಂಡಿ ಪಾನೀಯಗಳು; ಆತ್ಯಾರೋಗ್ಯಕರ ಊಟ ಇವುಗಳಿಗೆ ನಮ್ಮ ಅನುಭವಪೂರ್ಣ ಮೇಲ್ವಿಚಾರಣೆ. ಹೀಗಾಗಿ ನಿಮಗೆಲ್ಲಾ ಸುಖವೇ ಸುಖ! ಸುತೆಕಟ್ಟೆಯಿಂದ ತೆಂಕ. ಕೋರ್ಟ್‌ರೋಡ್ ಮತ್ತು ಕೋಳದಪೇಟೆ ರೋಡ್ ಮಿಲನದಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಿಸಿರುವ ವಿಶ್ವನಾಥ ಮಂದಿರದಲ್ಲಿರುವ ಶ್ರೀರಾಮಾ ರೆಸ್ಟೋರೆಂಟನ್ನು ಸಂದರ್ಶಿಸಿ ನೋಡಿರಿ.

ಎಚ್. ಗೋಪಾಲ ನಾಯಕ್,
ಪ್ರೊಪ್ರೈಟರ್.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತವ್ಯಾದೆಗೆ ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರ್ಯೈಕ್ಲೀನಿಂಗ್ ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: ಯಮ್. ಯಸ್. ಭಟ್ಕಳ್.

DIAMONDS! DIAMONDS!!

K. Ramachandra Krishna Shet

Near Mission High School, *Mangalore.*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಒಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ಮೆಂಟ್ ಕೋಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹೈಸ್ಕೂಲು ಬಳಿ, ಮಂಗಳೂರು.

ವಿದ್ಯಾ ಸಂಸ್ಥೆಗೆ ಸಹಾಯಮಾಡಿರಿ! ಸತ್ಕಾರ್ಯಕ್ಕೆ ಪ್ರೋತ್ಸಾಹ ಕೊಡಿಸಿರಿ!

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಯೋಗ್ಯ ಕಮ್ಮಿಟಿಯವರಿಂದ ನಡಿಸಲ್ಪಡುವುದು

ಎ. ಬಿ. ಶೆಟ್ಟಿ, ಎಸ್ಕ್ವೈಯರ್, M.L.C. ಪ್ರೆಸಿಡಂಟ್.
ಡಾ! ಎಂ. ಆರ್. ಕಾಮತ್, L.M.P. ವೈಸ್ ಪ್ರೆಸಿಡೆಂಟ್.

ರೂ. 20,000/-ವು 1,789 ಇನಾಮುಗಳಾಗಿ ಹಂಚಲ್ಪಡುವುದು.
ಪ್ರಥಮ ಬಹುಮಾನ ರೂ. 5,000/- ದ್ವಿತೀಯ ಬಹುಮಾನ ರೂ. 2,000/-
ತೃತೀಯ ಬಹುಮಾನ ರೂ. 1,000/-

ಲೆಖ್ಖ ಒಪ್ಪಿಸುವ ತಾರೀಕು 25—1—'37] [ಸೋಡ್ತಿ ತೆಗೆಯುವ ತಾರೀಕು 31—1—'37

ಟಿಕೇಟು ಒಂದರ ಕ್ರಯ ಆಣೆ ನಾಲ್ಕು ಮಾತ್ರ.

20 ಟಿಕೇಟುಗಳಿರುವ ಪುಸ್ತಕಕ್ಕೆ ರೂ. 5 ಮಾತ್ರ. ಟಿಕೇಟು ಪುಸ್ತಕಗಳು ನಗದಿಯಾಗಿ ವಿಕ್ರಯಿಸಲ್ಪಡುವವು. ಟಿಕೇಟು ಮಾರಿ ರೂ. 250/-ಕ್ಕೂ ಹೆಚ್ಚು ಸಂಗ್ರಹಿಸಿಕೊಟ್ಟವರೊಳಗೆ ರೂ. 200/-ರ ಒಂದು, ರೂ. 100/-ರ ಎರಡು ಮತ್ತು ರೂ. 50/-ರ 84 ಇನಾಮುಗಳು ಹಂಚಲ್ಪಡುವವು.

ಟಿಕೇಟು ಮಾರಿ ರೂ. 5000 ಒದಗಿಸಿಕೊಟ್ಟವರು ಹೈಸ್ಕೂಲಿನ ಪೋಷಕರೆಂದು ಪರಿಗಣಿಸಲ್ಪಟ್ಟು ಅವರ ತೈಲಚಿತ್ರವು ಇಡೋಣಾಗುವುದು. ಅಂತೆಯೇ ರೂ. 2000 ಮಾಡಿಕೊಟ್ಟವರು ಆಶ್ರಯದಾತರಾಗಿ ಸದ್ರಿಯವರ ಭಾವಚಿತ್ರವು ಇಡಲ್ಪಡುವುದು. ಮತ್ತು ರೂ. 1000 ಮಾಡಿಕೊಟ್ಟವರ ಹೆಸರು ಚಂದ್ರಕಾಂತ ಶಿಲೆಯಲ್ಲಿ ಕೆತ್ತಲ್ಪಟ್ಟು ಗೋಡೆಯಲ್ಲಿ ಇಡಲ್ಪಡುವುದು.

ಟಿಕೇಟು ವಿಕ್ರಿತದಿಂದ ರೂ. 25/. ಮತ್ತು ಹೆಚ್ಚು ಮಾಡಿಕೊಟ್ಟವರಿಗೆ ಶೇಕಡಾ 6¼ರಂತೆ ಕಮಿಷನ್ ಕೊಡಲಾಗುವುದು.

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಈ ಕೆಳಗಿನವರಿಗೆ ಬರೆದುಕೊಳ್ಳಿರಿ—

ಮೂಲ್ಕಿ, ದ. ಕನ್ನಡ
3—9—1936
ಸೆಕ್ರೆಟರಿ, ದಿ ಮೂಲ್ಕಿ ಗ್ರೇಂಡ್ ರೇಫ್‌ಲ್
(ಹೈಸ್ಕೂಲ್ ಸಹಾಯಾರ್ಥ)

ಉತ್ತಮ ವರ್ಗದ ಶ್ರೇಷ್ಠವಾದ **ಸರಸ್ವತಿ** ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇದು ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಗೊಳಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯು ಹದಿನೈದನೆಯ ಸಂಪುಟವು 1936ನೆಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಆತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ ಪ್ರಕಟನೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

The Commonwealth Assurance Co., Ltd.

(ESTD. 1929)

Chairman, Mr. N. C. Kelkar, Ex- M. L. A.

HEAD OFFICE. **POONA CITY.**

CHIEF AGENCY OFFICE HAMPANKATTA, **MANGALORE.**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ
ಎಲ್ಲಾ ಪೋಲಿಸಿದಾರರಿಗೆ
ಈ ಕಂಪೆನಿಯು 1000ಕ್ಕೆ ರೂ. 10 ಮತ್ತು 12ರಷ್ಟರ
ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಯಿರಿ—

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ತರುಣ ತರುಣಿಯರಿಗೆ
ಅತ್ಯಂತ ಬೋಧಪ್ರದವಾದ
ಅತ್ಯಾಧುನಿಕ ನಾಟಕ

ವ್ಯಭಿಚಾರಿಣಿ ಯಾರು ?

LAXMI BRAND COFFEE POWDER.

Pure & Superior quality, will last long without losing its flavour and colour.

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿ ಪುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Fire Resistance Steel Iron Safes. latest pattern.

ನಮ್ಮಲ್ಲಿ ಕಟ್ಟಿದ ಟ್ರಿಜರಿಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಲೆ ಕಂತುಗಳಿಂದಲೂ ಮಾರುವ ಏರ್ಪಾಡಿದೆ.



For Prices & Particulars Apply to—

K. K. Shanbhag & Sons
Court Road, UDIPI, S. K.

Sold also by Instalments

106 ನಾಟಕರ ಅಪೇಕ್ಷೆಯಂತೆ ಪ್ರಕಟಿಸಿದ
ಈ ನಾಟಕ ಪುಸ್ತಕದಲ್ಲಿ
ಅಂಧ ಸಮಾಜದ ನಿಜರೂಪವನ್ನು
ನ್ಯಾಯವು ಅನ್ಯಾಯವನ್ನು ಗೆದ್ದು ಬರುವುದನ್ನು
ಅಧಿಕಾರ, ಧನಲಾಲಸೆಯಲ್ಲ—
ಪವಿತ್ರ ಪ್ರೇಮವೊಂದೇ ಶಾಂತಿಯಾಯುವುದೆಂಬುದನ್ನು
ಕಾಣಬಹುದು.

ವ್ಯಭಿಚಾರಿಣಿ ಯಾರು

ಸಾಮಾಜಿಕ ಕ್ರಾಂತಿಕಾರಕ ನಾಟಕಗಳನ್ನು ಬರೆಯುವುದರಲ್ಲಿ ಹೆಸರುಗೊಂಡ
ಶ್ರೀ. ಕೆ. ಕಾಂತಪ್ಪ ಶೆಟ್ಟರೇ
ಈ ಗ್ರಂಥದ ಕರ್ತರು.

ಪುಸ್ತಕವು 100 ಪುಟಗಳಿಗೂ ಮಿಕ್ಕಿದೆ. ಹಲವು ಚಿತ್ರಗಳಿಂದ ನಯನಮನೋಹರವಾಗಿದೆ. ಇಷ್ಟಿದ್ದರೂ ಬೆಲೆ ಕೇವಲ ೦—೮—೦
ಟಪ್ಪಾಲು ದ್ವಾರ ೦—೧೦—೦

ಪ್ರತಿಗಳಿಗೂ ಹೆಚ್ಚಿನ ವಿವರಗಳಿಗೂ ಬರೆಯಿರಿ.

ಕಿರಿಯರ ಪ್ರಪಂಚ, ಉಡುಪಿ.

Sole Agents:—Supply Agency Ltd., UDIPI.

Read and advertise in

FINANCIA EXPERTUS

UDIPI



HEAD OFFICE VIEW

ಅಕ್ಟೋಬರ ತಾ. 2
ಮಹಾತ್ಮಜಿಯವರ ಪಾವನ ಜನ್ಮದಿನ.
2-10-1869

ನವಂಬರ ತಾ. 2
ಶ್ರೀ ಭಾರತ ವಸ್ತ್ರಮಂದಿರದ ಸ್ಥಾಪನಾದಿನ.
2-11-1921

ಅಕ್ಟೋಬರ ತಾ. 2
ಸಪ್ಲೈ ಏಜನ್ಸಿ ಲಿಮಿಟೆಡ್, ಇದರ ಸ್ಥಾಪನಾದಿನ
2-10-1933

ಇದೇ 2-10-'36——ರಿಂದ——2-11-'36ರ ವರೆಗೆ
ಮುವ್ವತ್ತೆರಡು ದಿನಗಳ ಸದವಸರದಲ್ಲಿ ≡ **ತಿರುಪೂರು ಖಾದಿಯು** ≡ ತಿರುಪೂರ ದರದಲ್ಲಿ ಮಾರಲ್ಪಡುವುದು!

5 ರೂಪಾಯಿಗಳಿಗಿಂತ ಹೆಚ್ಚಿನ ಇತರ ಸಾಮಾನುಗಳನ್ನು ಕೊಳ್ಳುವವರಿಗೆ ಸೇಕಡಾ 6¼ ರಂತೆ ಕಮಿಶನ್.

Grand Jayanthi Sales for 32 days.

ಶ್ರೀ ಭಾರತ ವಸ್ತ್ರಮಂದಿರ, ಉಡುಪಿ.

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS UDIPI and Published by K. H. SHETTY